# ನಡೆದದ್ದೇ ದಾರಿ

ವೀಣಾ ಶಾಂತೇಶ್ವರ

ವಿಶ್ವಕನ್ನಡ ಸಮ್ಮೇಳನ ಸಾಹಿತ್ಯಮಾಲೆ

# ನಡೆದದ್ದೇ ದಾರಿ....

## (ಸಮಗ್ರ ಕಥನ ಸಾಹಿತ್ಯ)

ವೀಣಾ ಶಾಂತೇಶ್ವರ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು

Collection of Research Books by **NADEDADDE DARI** edited by **Dr. Veena Shanteshwar**, Published by **Sri Manu Baligar**, Director, Department of Kannada and Culture, Kannada Bhavan, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೦

ಪ್ರತಿಗಳು : ೧೦೦೦

ಪುಟಗಳು : XXII + ೫೩೬

ಬೆಲೆ : ರೂ.

ರಕ್ಷಾಪುಟ ವಿನ್ಯಾಸ :

ಮುದ್ರಕರು :

**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**

ನಂ. ೬೯, ಸುಬೇದಾರ್‌ಛತ್ರಂ ರೋಡ್

ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

# ಅರ್ಪಣೆ

ನನ್ನ ಒಡಹುಟ್ಟಿದವರು

ಎಣೆಯಿಲ್ಲದ ಪ್ರೀತಿ ಎರೆದವರು

ಶ್ರೀ ರಾಘವೇಂದ್ರ ಎಲಬುರ್ಗಿ

ಮತ್ತು

ಡಾ. ವಾದೀಂದ್ರ ಎಲಬುರ್ಗಿ

ಇವರಿಗೆ

# ಮುನ್ನುಡಿ

ತಮ್ಮ ಇದುವರೆಗಿನ ಕತೆ–ಕಾದಂಬರಿಗಳ ಸಂಗ್ರಹಕ್ಕೆ ವೀಣಾ ಶಾಂತೇಶ್ವರರು 'ನಡೆದದ್ದೇ ದಾರ' ಎಂದು ಹೆಸರು ಕೊಟ್ಟಿದ್ದಾರೆ. ಮಹಿಳಾ ಸಂದರ್ಭದಲ್ಲಿ ಈ ಆಯ್ಕೆಯನ್ನು ಪ್ರಶ್ನಿಸುವಂತಿಲ್ಲ. ಯಾಕೆಂದರೆ, ಸಂವೇದನೆ, ವಸ್ತು, ಶೈಲಿ, ಆಕೃತಿ–ಇವೆಲ್ಲವುಗಳಲ್ಲಿಯೂ ಅವರು ಹಿಡಿದ ಹಾದಿ ಅವರ ಹಿಂದಿನ ಮಹಿಳಾ ಸಾಹಿತಿಗಳಿಗಿಂತ ಭಿನ್ನವಾಗಿತ್ತು. ಆದರೆ ಕನ್ನಡ ಸಾಹಿತ್ಯದ ಇಡಿಯಾದ ಸಂದರ್ಭವನ್ನು ಗಮನಿಸಿದರೆ. ಈ ಹಾದಿ ಅವರಿಗಿಂತ ಮೊದಲೇ ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ ಹಾಗೂ ಲಂಕೇಶರಂಥವರೂ ತಮಗಾಗಿ ಸೃಷ್ಟಿಸಿಕೊಂಡ ನವ್ಯ ಮಾರ್ಗವೇ ಆಗಿದ್ದಿತು ಎನ್ನುವುದು ಲಕ್ಷಕ್ಕೆ ಬರದಿರಲಾರದು. ಕತೆಗಾರ್ತಿಯಾಗಿ ವೀಣಾ ಬೆಳೆದದ್ದು ಕೂಡ ಶಾಂತಿನಾಥ ದೇಸಾಯಿಯವರ ನೇರ ಪ್ರಭಾವದಲ್ಲಿಯೇ. ದೇಸಾಯಿಯವರ ಕಥನ ಸಾಹಿತ್ಯದ ಲಕ್ಷಣಗಳಾದ ನವ್ಯತೆ, ಲೈಂಗಿಕ ಆಸ್ಥೆಗಳು, ನಗರ ಸಂವೇದನೆ, ಅನುಭವದ ಆದ್ಯತೆ ಇಂಥ ಗುಣಗಳನ್ನು ವೀಣಾರ ಕಥನ ಸಾಹಿತ್ಯದಲ್ಲಿಯೂ ಗುರುತಿಸಬಹುದು. 'ಗಂಡ ಸತ್ತ ಮೇಲೆ', 'ದಿಗ್ಭ್ರಮೆ', 'ಕ್ಷಿತಿಜ'ಗಳಂಥ ಕತೆಗಳಲ್ಲಿ ದೇಸಾಯಿಯವರು ಹೆಣ್ಣಿನ ಅಂತರಂಗವನ್ನು ಅನಾವರಣಗೊಳಿಸುವಲ್ಲಿ ಅನುಸರಿಸಿದ ಮನೋವೈಜ್ಞಾನಿಕ ವಿಧಾನಗಳು ಹಾಗೂ ಅವರಿಗೆ ದೊರೆಯ ಒಳನೋಟಗಳು ವೀಣಾ ಅವರಿಗೆ ಖಂಡಿತವಾಹಿಯೂ ಪ್ರಸ್ತುತವೆನಿಸಿರಬೇಕು. ವೀಣಾರ ಮೊದಲ ಕಥಾ ಸಂಕಲನ ಮುಳ್ಳುಗಳು (೧೯೬೮) ಕೃತಿಯನ್ನು ದೇಸಾಯಿಯವರೇ ಓದುಗರಿಗೆ ಪರಿಷಯಿಸಿದವರು ಎನ್ನುವುದನ್ನು ಇಲ್ಲಿ ನೆನಯಬಹುದು. ಆದರೆ, ಸ್ಪಷ್ಟವಾದ ಸ್ತ್ರೀವಾದೀ ವೈಚಾರಿಕತೆ, ಪುರುಷಕೇಂದ್ರಿತ ಸಮಾಜದಲ್ಲಿ ಸ್ತ್ರೀ ಅನುಭವಿಸುವ ನೋವು–ಯಾತನೆಗಳ ಆಳವಾದ ಅರಿವು. ಅಭಿವ್ಯಕ್ತಿಯ ತೀವ್ರತೆ ಹಾಗೂ ದಿಟ್ಟತನ –ಇಂಥ ಗುಣಗಳಿಂದಾಗ ವೀಣಾ ಪುರುಷ ಸಾಹಿತಿಗಳಿಂದ ಭಿನ್ನರಾಗುತ್ತಾರೆ. 'ಮುಳ್ಳುಗಳು' ಅಂಥ ಕತೆಯನ್ನಾಗಲಿ 'ಗಂಡಸರು' ಇಂಥ ಕಾದಂಬರಿಯನ್ನಾಗಲಿ ಮಹಿಳೆ ಮಾತ್ರ ಬರೆಯಬಲ್ಲಳು.

"ಅನುಭವನಿಷ್ಠ ಸಾಹಿತ್ಯದಲ್ಲಿ ಕತೆಗಾರ ಬೆಳದಂತೆ ಅವನ ಅನುಭವಪ್ರಪಂಚ ಬದಲಾಗುತ್ತದೆಯಷ್ಟೇ ಅಲ್ಲದೆ. ಅದನ್ನು ನೋಡುವ ದೃಷ್ಟಿಕೋನವೂ ಬದಲಾಗುತ್ತದೆ" ಎಂದು ದೇಸಾಯಿಯವರು ತಮ್ಮ ಕತೆಗಳ ಸಂದರ್ಭದಲ್ಲಿ ಹೇಳಿದ ಮಾತು ವೀಣಾರ ಕತೆಗಳ ವಿಷಯದಲ್ಲಿಯೂ ನಿಜವಾಗಿದೆ. ಸಿದ್ಧಾಂತಗಳಿಗೆಯ ಅಂಟಿಕೊಂಡ ಬಹಳಷ್ಟು ಮಹಿಳಾ ಬರೆಹಗಾರರು ಅನುಭವದ ಚಲನಶೀಲತೆಯನ್ನು ಗಮನಿಸಿದೆ ಯಾಂತ್ರಿಕವಾಗಿ ಬರೆಯುತ್ತಿರುವ ಉದಾಹರಣೆಗಳು ನಮ್ಮೆದುರಿಗಿವೆ. ಆದರೆ, ವೀಣಾ ಈ ಅಪಾಯದಿಂದ ಸಂಪೂರ್ಣವಾಗಿ ಪಾರಾಗಿದ್ದಾರೆ.

ಕಾದಂಬರಿಯ ಸ್ವರೂಪವನ್ನು ಕುರಿತು ಬರೆಯುತ್ತ "The novel is the

highest example of inter-relatendess" ಎಂದು ಡಿ.ಎಚ್. ಲಾರೆನ್ಸ್ ಹೇಳಿದ. ಹೆಚ್ಚು ಕಡಿಮೆ ಇದೇ ಮಾತನ್ನು ಶಾಂತಿನಾಥ ದೇಸಾಯಿಯವರೂ ಸಮರ್ಥಿಸಿದರು. "ವೈಯಕ್ತಿಕ ಸಂಬಂಧಗಳ ಮುಖಾಂತರ ಜೀವನವನ್ನು ದೇಸಾಯಿಯವರೂ ಸಮರ್ಥಿಸಿದರು "ವೈಯಕ್ತಿಕ ಸಂಬಂಧಗಳ ಮುಖಾಂತರ ಜೀವನವನ್ನು ಶೋಧಿಸುವುದು, ಅದಕ್ಕೆ ಅರ್ಥ ಕೊಡುವುದು, ಅದಕ್ಕೆ ಅರ್ಥ ತುಂಬುವುದು ನನ್ನ ಧರ್ಮ." ಈ ಸಂಬಂಧಗಳಲ್ಲಿ ದೇಸಾಯಿಯವರಲ್ಲಿದ್ದಂತೆ ವೀಣಾರಲ್ಲಿಯೂ ಗಂಡು–ಹೆಣ್ಣು ಸಂಬಂಧಗಳಿಗೆ ಆದ್ಯತೆಯಿದೆ. ಆದರೆ ಅವರ ದೃಷ್ಟಿಕೋನ. ಒಂದೆರಡು ಚಿಕ್ಕ ಅಪವಾದಗಳನ್ನು ಬಿಟ್ಟರೆ. ಸಂಪೂರ್ಣವಾಗಿ ಹೆಣ್ಣಿನ ದೃಷ್ಟಿಕೋನ. ಗಂಡಿನ ಸ್ವಾರ್ಥ, ಅಧಿಕಾರ ಲಾಲಸೆ, ಕ್ರೌರ್ಯ, ಮೋಸಗಳ ತೀವ್ರ ಅರಿವಿದ್ದೂ ಅವರು ಪುರುಷ ದ್ವೇಷಿಗಳಲ್ಲ. 'ಮುಳ್ಳುಗಳು' ಇಂಥ ಕತೆಗಳಲ್ಲಿ ವ್ಯಕ್ತವಾಗುವ ದ್ವೇಷ, ಪ್ರೀತಿ, ಗೌರವ, ಅರ್ಪಣೆ ಇಂಥ ಮೌಲ್ಯಗಳ ಸಂಪರ್ಕವೇ ಇಲ್ಲದ ಕಾಮುಕತೆಯ ವಿರುದ್ಧದ ದ್ವೇಷವೇ ಹೊರತು ಪುರುಷ ಜಾತಿಯ ದ್ವೇಷವಲ್ಲ.

ವೀಣಾರ ಎಲ್ಲ ಕತೆಗಳನ್ನು ಒಟ್ಟಿಗೆ ನೋಡಿದಾಗ ಅರಿವಿಗೆ ಬರುವ ಒಂದು ಅಂಶವೆಂದರೆ ಅವರ ಪ್ರೀತಿಯ ಹಂಬಲ. ಪ್ರೀತಿಯ ಕ್ಷಣಗಳು ಎಷ್ಟೇ ಕ್ಷಣಿಕವೆನಿಸಿದರೂ, ಹಿನ್ನೋಟದಲ್ಲಿ ಭ್ರಾಮಕವೆನಿಸಿದರೂ ಅವರ ಕತೆಗಳ ನಾಯಕಿಯರು ಜೀವಂತಿಕೆಯನ್ನು ಅನುಭವಿಸುವುದು ಈ ಕ್ಷಣಗಳಲ್ಲಿಯೇ. ಇದೇ ಅವರ ಸೃಜನಶೀಲತೆಯ ಉಗಮವೂ ಆಗಿದೆ. ವೀಣಾ ಬದುಕನ್ನು ಪ್ರೀತಿಸುತ್ತಾರೆ. ಆದರೆ ಅವರು ಪ್ರಮುಖ ನವ್ಯರಂತೆ ಅಸ್ತಿತ್ವವಾದಿಗಳಲ್ಲ. ಅವರ ಕತೆಗಳಲ್ಲಿ ನೆನಪುಗಳಿಗೆ ಎಲ್ಲಿಲ್ಲದ ಮಹತ್ವವಿದೆ. ಅವರ ನಾಯಕಿಯರಲ್ಲಿ ಬಹಳಷ್ಟು ಜನ ಭೂತಪೀಡೆಯಿಂದ ನರಳುವವರೇ. ಸುಖ, ಸಮೃದ್ಧಿಗಳತ್ತ ವರ್ತಮಾನ ಕರೆದರೂ ಅವರ ನೆನಪುಗಳು ಅವರನ್ನು ಭೂತಕ್ಕೆಯೆ ಕಟ್ಟಿ ಹಾಕುತ್ತವೆ. ಕೆಲ ಸುದೈವಿಗಳಿಗೆ ಮಾತ್ರ ಬಿಡುಗಡೆ ದೊರೆಯುತ್ತದೆ. 'ನೆನಪು... ಬರೀ ನೆನಪು' ಕತೆಯ ಪಾವನಾ, 'ಪ್ರಶ್ನೆ'ಯ ಶಶಿ, 'ಮಳೆ ಬಂದಾಗ' ಕತೆಯ ಸಹನಾ, 'ದೆವ್ವ'ದ ನಾಯಕ– ಇವರೆಲ್ಲರೂ ಭೂತದ ಮಾಯೆಯಲ್ಲಿ ತಮ್ಮನ್ನು ಕಳೆದುಕೊಂಡವರೇ. ಆದರೆ ವೀಣಾ ತೀರಾ ನಿರಾಶಾವಾದಿಯಲ್ಲ. 'ಕೊನೆಯ ದಾರಿ'ಯ ಲೀಲಾ, 'ಹೊರಟು ಹೋದವನು' ಕತೆಯ ನಾಯಕಿ, 'ಕವಲು'ವಿನ ಮಿನಿ, 'ಬಿಡುಗಡೆ'ಯ ಸರೂ, ಒಂದಿಲ್ಲೊಂದು ರೀತಿಯ ಮುಕ್ತಿ ಕಂಡುಕೊಳ್ಳುತ್ತಾರೆ. 'ಮರೀಚಿಕೆ'ಯ ಮಿನೀಯಂಥವರಿಗೆ ಮಾತ್ರ ಬಿಡುಗಡೆಯ ಕನಸು ಮರೀಚಿಕೆಯಾಗಿ ಉಳಿಯುತ್ತದೆ. ಈ ಬಿಡುಗಡೆಗಳೆಲ್ಲ ವಾಸ್ತವದ ಅರಿವಿನಿಂದ ಬಂದವುಗಳೇ ವಿನಹ ಆದರ್ಶದ ಸಾಧನೆಗಳಲ್ಲ. ಇಂಥ ಕತೆಗಳಲ್ಲಿ ಎದ್ದು ಕಾಣುವುದು ಎಷ್ಟೋ ಜನ ಸ್ತ್ರೀವಾದೀ ವಿಮರ್ಶಕರಿಗೆ ಬರ್ಷಣವೆನಿಸಿದ ವೀಣಾ ಅವರ ಪ್ರಖರ ವಾಸ್ತವವಾದ. ಯಾವ ರೀತಿಯ ಭ್ರಮೆಯೊಂದಿಗೂ ಅವರು ಒಪ್ಪಂದ ಮಾಡಿಕೊಳ್ಳಲಾರರು.

ವೀಣಾರ ವಾಸ್ತವ ಪ್ರಜ್ಞೆ ಎಷ್ಟು ಪ್ರಖರವಾಗಿದೆಯೆನ್ನುವುದಕ್ಕೆ 'ಅವಳ ಸ್ವಾತಂತ್ರ್ಯ', 'ತಿರುಗಿ ಹೋದಳು', 'ಅನಾಥೆ', 'ಇಲ್ಲಿಂದ ಮುಂದೆಲ್ಲಿ', 'ಸಮಾಧಾನ', 'ಸೋನಿಯಾ' ಇಂಥ ಕತೆಗಳು ಹಾಗೂ 'ಶೋಷಣೆ, ಬಂಡಾಯ ಇತ್ಯಾದಿ....' ಕಾದಂಬರಿ ನಿದರ್ಶನಗಳಾಗಿವೆ. 'ದಾಸ್ಯದ ಸಂಕೋಲೆಯನ್ನು ಹರಿದೊಗೆಯಬೇಕು' ಎಂದು ಸಭೆಯಲ್ಲಿ

ಘೋಷಿಸುವ ವಿಮಲಾ ಶಂಕರ ತನ್ನ ಮನೆಯಲ್ಲಿಯೇ ಗುಲಾಮಳು; ತನ್ನ ಗಂಡನ ದ್ರೋಹ, ಶೋಷಣೆಗಳಿಂದ ನೊಂದರೂ ಅನಿವಾರ್ಯವಾಗಿ ಲಕ್ಷ್ಮಿ ತನ್ನ ಮನೆಗೆ ತಿರುಗಿ ಹೋಗುತ್ತಾಳೆ; ಪ್ರತಿಭಟನೆಯ ಮಾರ್ಗವನ್ನೇ ಕಾಣದ ಅನಾಥೆ ಕೋಮಲಾ ಸಮಾಜ ಕಲ್ಯಾಣ ಶಾಖೆಯ ಅಧಿಕಾರಿ ಶಿವರಾಮ ರೆಡ್ಡಿಯ ಲೈಂಗಿಕ ಆಕ್ರಮಣವನ್ನು ನಿರ್ಲಿಪ್ತಳಾಗಿ ಸಹಿಸಿಕೊಳ್ಳುತ್ತಾಳೆ; ನ್ಯಾಯಾಧೀಶಳಾಗಿ ಒಳ್ಳೆಯ ಹೆಸರು ಗಳಿಸಿದ ಯಶಸ್ವಿನೀ ದೇಸಾಯಿ ತನ್ನ ಕುಟುಂಬಕ್ಕೆಯೇ ಹೊರಗಿನವಳಾಗಿ ಸೋಲು ಅನುಭವಿಸುತ್ತಾಳೆ; ವರ್ಮಾಬಾಯಿ ಒಳ್ಳೆಯ ಶಿಕ್ಷಕಿಯಾದರೂ ರಜನಿಗೆ ಅವಳ ಭ್ರಷ್ಟತೆಯೆದುರು ಸೋಲಬೇಕಾಗುತ್ತದೆ. ಶಾಲೆಯಲ್ಲಿ ಲೀಟರ್ ಎಂದು ಮೆರೆದ ರಜಪೂತ ಹುಡುಗಿ ಸೋನಿಯಾ ತನ್ನ ತಾಯಿತನದಲ್ಲಿಯೇ ಸಮಾಧಾನ ಪಡಬೇಕಾಗುತ್ತದೆ. ಬದುಕಿ ಉಳಿಯುವುದಕ್ಕೆ ಸ್ತ್ರೀ ಹೇಗೆ ತನ್ನ ಸ್ವಾತಂತ್ರ್ಯ, ಸ್ವಾಭಿಮಾನ, ಆಸೆ – ಆಕಾಂಕ್ಷೆಗಳು, ಮರ್ಯಾದೆ, ಯೋಗ್ಯತೆಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎನ್ನುವುದರ ದಾರುಣ ಚಿತ್ರಗಳು ಈ ಕತೆಗಳಲ್ಲಿವೆ. ಪ್ರತಿಭಟನೆಯ ಅನಿವಾರ್ಯತೆಯನ್ನು ಒಪ್ಪಿಕೊಳ್ಳುತ್ತಲೇ ಪ್ರಸ್ತುತ ಸಾಮಾಜಿಕ ಸಂದರ್ಭದಲ್ಲಿ ಅದು ಸಫಲವಾಗಲಾರದು ಎನ್ನುವುದು ವೀಣಾರ ಗ್ರಹಿಕೆ. ಈ ಗ್ರಹಿಕೆಯ ಶ್ರೇಷ್ಠ ಅಭಿವ್ಯಕ್ತಿಯೆಂದರೆ ಅವರ 'ಶೋಷಣೆ, ಬಂಡಾಯ ಇತ್ಯಾದಿ' ಕಾದಂಬರಿ. ಅವರ 'ತಿರುಗಿ ಹೋದಳು' ಕತೆಗೂ ಈ ಕಾದಂಬರಿಗೂ ಬಹಳ ಸಮೀಪದ ಹೋಲಿಕೆಗಳಿವೆ.

ವೀಣಾರ ಕತೆಗಳನ್ನೋದುವಾಗ ಅವುಗಳ ಚಾರಿತ್ರಿಕ ಸಂದರ್ಭವನ್ನು ನೆನಪಿನಲ್ಲಿಡುವುದು ಒಳ್ಳೆಯದು. ಯಾಕೆಂದರೆ, ಬದಲಾದ ಸಾಮಾಜಿಕ ಸಂದರ್ಭದಲ್ಲಿ ಸ್ತ್ರೀಯ ಸ್ಥಾನಮಾನಗಳಲ್ಲಿ, ಕ್ರಿಯಾಶೀಲತೆಯಲ್ಲಿ, ದೃಷ್ಟಿಕೋನಗಳಲ್ಲಿ ಹೇಗೆ ಬದಲಾವಣೆಯಾಗಬಲ್ಲದು ಎನ್ನುವುದನ್ನು, ವೀಣಾರ ನಂತರದ ಕತೆಗಾರರಾದ ನೇಮಿಚಂದ್ರ ಮೊದಲಾದವರ ಕತೆಗಳು ನಮಗೆ ತೋರಿಸಿಕೊಟ್ಟಿವೆ. ಹೊಸ ಸಂದರ್ಭಗಳಲ್ಲಿ ಹೊಸ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆಯಾದರೂ ಸ್ತ್ರೀಯ ವಾಸ್ತವ ಅನುಭವ ಹಾಗೂ ಅವಳ ಆಸೆ. ಆಕಾಂಕ್ಷೆಗಳ ನಡುವಿನ ಅಂತರ ಸ್ವಲ್ಪ ಮಟ್ಟಿಗಾದರೂ ಕಡಿಮೆಯಾಗುತ್ತಿರುವುದು ಸಮಾಜದ ಆರೋಗ್ಯದ ಲಕ್ಷಣವಾಗುದೆ.

ವೈಯಕ್ತಿಕ ಸಂಬಂಧಗಳಾಚೆಗಿನ ಸಮಸ್ಯೆಗಳ ಬಗ್ಗೆ ವೀಣಾ ಬರೆದ ಕತೆಗಳು ಕಡಿಮೆ. ಆದರೂ ಭ್ರಷ್ಟಾಚಾರ ('ಹರಿದು ಬಾ ತಾಯಿ', 'ಮುಂದಾಳುವಿನ ಜನತಾ ಸೇವೆ', 'ಹೊಟೇಲ್ ಬ್ಲೂ'), ಜಾತಿಯ ಪ್ರಶ್ನೆ ('ಹನುಮಾಪುರದಲ್ಲಿ ಹನುಮ ಜಯಂತಿ', 'ದ. ಬ್ರಾ. ಕ್ರಿಷ್ಟಪ್ಪ') ಹಾಗೂ ಪರಿಸರನಾಶ ('ಒಂದು ಗಿಡ ಒಂದು ಬಾವಿ') ಗಳಂಥ ಸಮಸ್ಯೆಗಳಾನ್ನಾಧರಿಸಿದ ಕತೆಗಳನ್ನು ಅವರು ಬರೆದದ್ದುಂಟು. ಇವುಗಳಲ್ಲಿ 'ಒಂದು ಗಿಡ ಒಂದು ಬಾವಿ' ಕಥನ ಶೈಲಿಯಲ್ಲಿಯ ಆಕರ್ಷಕ ಪ್ರಯೋಗದಿಂದಾಗಿ ನಮ್ಮ ಗಮನ ಸೆಳೆಯುತ್ತದೆ. ಮಹಿಳಾ ಸಾಹಿತ್ಯ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿರುವುದರ ನಿದರ್ಶನಗಳೆಂದು ಈ ಕತೆಗಳಿಗೆ ಮಹತ್ತ್ವವಿದೆ.

ನಿಜವಾಗಿ ನೋಡಿದರೆ, ಕನ್ನಡ ಓದುಗರಿಗೆ ಈಗಾಗಲೇ ಸುಪರಿಚಿತರಾದ ವೀಣಾರಿಗೆ ನನ್ನ ಮುನ್ನುಡಿಯ ಅಗತ್ಯವಿರಲಿಲ್ಲ. ಬೇರೆ ಬೇರೆ ಸಂದರ್ಭಗಳಲ್ಲಿ ಅವರ ಕತೆ–ಕಾದಂಬರಿಗಳ ಬಗ್ಗೆ ಈಗಾಗಲೇ ನಾನು ಬರೆದದ್ದಿದೆ. ಆದರೂ ಅವರ

ಬಲವಂತಕ್ಕೆ ಕಟ್ಟುಬಿದ್ದು ನಾಲ್ಕಾರು ಅವಸರದ ಮಾತುಗಳನ್ನು ಇಲ್ಲಿ ಹೇಳಿದ್ದೇನೆ. ಅವು ಓದುಗರಿಗೆ ಉಪಯುಕ್ತವೆನಿಸಿದರೆ ನಾನು ತೃಪ್ತ.

ಧಾರವಾಡ **ಜಿ.ಎಸ್. ಆಮೂರ**

ಫೆಬ್ರುವರಿ ೨೪, ೨೦೦೬

* ಸೂಕ್ಷ್ಮ ವಿಶ್ಲೇಷಣಾತ್ಮಕ ಮುನ್ನುಡಿ ಬರೆದುಕೊಟ್ಟ ಗುರುಗಳಾದ ಡಾ.ಜಿ.ಎಸ್. ಆಮೂರ ಅವರಿಗೆ,

* ಸ್ತ್ರೀವಾದಿ ದೃಷ್ಟಿಕೋನದಿಂದ ಕೃತಿಯನ್ನು ಪರಿಶೀಲಿಸಿರುವ ಡಾ. ಸುಮಿತ್ರಾ ಅವರಿಗೆ,

* ಈ ಕೃತಿಯನ್ನು ಪ್ರಕಟಿಸುತ್ತಿರುವ ಆತ್ಮೀಯ ಸೋದರ ಡಾ. ಶಿವಾನಂದ ಗಾಳಿ ಅವರಿಗೆ ಮತ್ತು ಶ್ರೀಮತಿ ಸಂಪೂರ್ಣಾ ಗಾಳಿ ಇವರಿಗೆ,

* ಅಲ್ಪಾವಧಿಯಲ್ಲಿ ಅಚ್ಚುಕಟ್ಟಾಗಿ ಮುದ್ರಣಕಾರ್ಯ ನಿರ್ವಹಿಸಿದ ........................................

* ಅರ್ಥಪೂರ್ಣ ಮುಖಪುಟದ ವಿನ್ಯಾಸಕಾರ........................ ಅವರಿಗೆ,

* ಹಲವು ಬಗೆಯಿಂದ ಬೆಂಬಲ ನೀಡಿದ ಮಾರ, ಪ್ರವೀಣ, ಜ್ಯೋತಿರ್ಲಿಂಗ ಇವರಿಗೆ.

ಕೃತಜ್ಞತೆಗಳು.

**ವೀಣಾ ಶಾಂತೇಶ್ವರ**

# ಪರಿವಿಡಿ


ಮುನ್ನುಡಿ

ಮುಳ್ಳುಗಳು (೧೯೬೮)

| | | |
|---|---|---|
| ೧. | ಮುಳ್ಳುಗಳು | 7 |
| ೨. | ಅತಿಥಿ | 21 |
| ೩. | ಪ್ರಶ್ನೆ | 38 |
| ೪. | ನೆನಪು.... ಬರಿ ನೆನಪು | 50 |
| ೫. | ನೀನೇ ತಂತಿ | 60 |

ಕೊನೆಯ ದಾರಿ (೧೯೭೨)

| | | |
|---|---|---|
| ೬. | ಕೊನೆಯ ದಾರಿ | 73 |
| ೭. | ಹೆಣ | 83 |
| ೮. | ಮಳೆ ಬಂದಾಗ | 93 |
| ೯. | ನೆರಳು | 108 |
| ೧೦. | ಮುಕ್ತಿ | 118 |
| ೧೧. | ಹೊರಟುಹೋದನು | 130 |

ಕವಲು (೧೯೭೬)

| | | |
|---|---|---|
| ೧೨. | ಕವಲು | 143 |
| ೧೩. | ಒಂದು ರವಿವಾರ | 153 |
| ೧೪. | ಹನುಮಾಪುರದಲ್ಲಿ ಹನುಮಜಯಂತಿ | 165 |
| ೧೫. | ಹೋಟೆಲ್ ಬ್ಲೂ | 173 |
| ೧೬. | ಅವಳ ಸ್ವಾತಂತ್ರ್ಯ | 184 |
| ೧೭. | ಮರ್ಯಾದೆ | 194 |

ಹಸಿವು (೧೯೮೪)

೧೮. ಕಾಯುತ್ತದದ್ದ ಕರಿಯ 207

೧೯. ತಿರುಗಿ ಹೋದಳು 220

ಬಿಡುಗಡೆ (೧೯೯೪)

೨೦. ಬಿಡುಗಡೆ 239

೨೧. ಹೀಗೊಂದು ಕತೆ 250

೨೨. ಅನಾಥೆ 259

೨೩. ನಿರಾಕರಣೆ 268

೨೪. ರಾಧವ್ವ 275

೨೫. ಒಲವೆ ಜೀವನ 283

೨೬. ತಾರಾ ಮ್ಯಾಡಮ್ ಮತ್ತು ತತ್ವಗಳು 293

೨೭. ದ. ಬಾ. ಕ್ರಿಷ್ಟಪ್ಪ 303

೨೮. ಮರೀಚಿಕೆ 309

೨೯ ಧೈರ್ಯದ ಮನುಷ್ಯ321

ಕಿರುಕಾದಂಬರಿಗಳು

೩೦. ಗಂಡಸರು 331

೩೧. ಶೋಷಣೆ, ಬಂದಾಯ ಇತ್ಯಾದಿ.... 385

ಇನ್ನಷ್ಟು ಕತೆಗಳು

೩೨. ದೆವ್ವ 469

೩೩. ಹರಿದು ಬಾ ತಾಯಿ 480

೩೪. ಮುಂದಾಳುವಿನ ಜನತಾ ಸೇವೆ 486

೩೫. ಸೋನಿಯಾ 489

೩೬. ಸಮಾಧಾನ 495

೩೭. ಇದ್ಲಂದ ಮುಂದೆದ್ಲ ? 506

೩೮. ಒಂದು ಗಿಡ, ಒಂದು ಬಾವಿ 516

ವೀಣಾ ಅವರ ಕ-ತಿಗಳ ಬಗ್ಗೆ ಕೆಲವು ಅಭಿಪ್ರಾಯಗಳು 522

ವೀಣಾ ನಡೆದ ದಾರಿ.... 528

# ನಡೆದದ್ದೇ ದಾರಿ

# ಕಥಾಸಂಕಲನಗಳು

೧. ಮುಳ್ಳುಗಳು
೨. ಕೊನೆಯ ದಾರಿ
೩. ಕವಲು
೪. ಹಸಿವು
೫. ಬಿಡುಗಡೆ

# ಮುಳ್ಳುಗಳು (೧೯೬೮)

೧. ಮುಳ್ಳುಗಳು
೨. ಅತಿಥಿ
೩. ಪ್ರಶ್ನೆ
೪. ನೆನಪು.... ಬರಿ ನೆನಪು
೫. ನೀನೇ ತಂತಿ

# ಮುಳ್ಳುಗಳು

ಪೋಸ್ಟಾಫೀಸಿನ ಟಾವರ್‌ಕ್ಲಾಕಿನಲ್ಲಿ ಏಳು ಗಂಟೆ ಹೊಡೆದ ಸದ್ದು, ಕೊನೆಗೂ ಬೆಳಗಾಯಿತು. ಅಯ್ಯೊ, ಎಷ್ಟು ಬೇಸರ ! ಈ ಮಳೆಗಾಲದಲ್ಲಂತೂ ಉದ್ದುದ್ದವಾದ ರಾತ್ರಿಗಳನ್ನು ಕಳೆಯುವುದೆಂದರೆ ಪ್ರಾಣಸಂಕಟ. ನಿದ್ದೆಯಾದರೂ ಎಷ್ಟೆಂದು ಬಂದೀತು ? ನಡುವೆ ಎಚ್ಚರಾದಾಗ ಬೇಸರವೋ ಬೇಸರ. ಕತ್ತಲು.... ಮಚ್ಛರದಾನಿಯಲ್ಲಿ, ಕೋಣೆಯಲ್ಲಿ, ಕೋಣೆಯ ಹೊರಗಡೆ - ಎಲ್ಲಾ ಕಡೆ ಕತ್ತಲೋ ಕತ್ತಲು. ಜಿಟಿ-ಜಿಟಿ ಮಳೆಯ ಸಪ್ಪಳ ಬೇರೆ. ನಿದ್ರೆಗಾಗಿ ಹಾಸಿಗೆಯಲ್ಲಿ ಹೊರಳಾಡಿದಷ್ಟೂ ಕಣ್ಣು ನಿಚ್ಚಳವಾಗುತ್ತವೆ. ಇಲ್ಲದ-ಸಲ್ಲದ ವಿಚಾರ ಬೇರೆ... ಹಾಳು ವಿಚಾರಗಳು... ಹಾಳು ಹಳೇ ವಿಚಾರಗಳು... ಮೆತ್ತನ್ನ ಹಾಸಿಗೆ ಮುಳ್ಳಾಗಿ ಮೈಗೆ ಚುಚ್ಚುತ್ತದೆ. ಇನ್ನು ಎಂದಾದರೂ ಬೆಳಗಾದೀತೋ ಇಲ್ಲವೋ ಎನ್ನಿಸುವಷ್ಟರ ಮಟ್ಟಿಗೆ ಬೇಸರ ಬರುತ್ತದೆ.

ಅಂತೂ ಬೆಳಗಾಯಿತು. ಮಗ್ಗುಲರೂಮಿಗೆ ಹೊಸದಾಗಿ ಪಿ. ಯು. ಸಿ. ಗೆ ಬಂದ ಹುಡುಗಿ ಎತ್ತರದ ಧ್ವನಿಯಲ್ಲಿ ಉದಯರಾಗ ಹಾಡುತ್ತಿದ್ದಾಳೆ. ಯಾವುದೋ ದರಿದ್ರ ಹಿಂದಿ ಫಿಲ್ಮಿನ ರೋಮ್ಯಾಂಟಿಕ್ ಗೀತೆ. ಮೂಲೆಯ ಬಾಥರೂಮಿನ ನಳದಿಂದ ಜೋರಾಗಿ ನೀರು ಸುರಿಯುತ್ತಿರುವ ಸದ್ದು ಕೇಳುತ್ತಿದೆ. ಕಸಗುಡಿಸುವ ಸದ್ದು, ಯಾರ ರೂಮಿನಲ್ಲೋ ಚಹಾ ಮಾಡಲು ಸ್ಟೋವ್ ಹೊತ್ತಿಸಿದ ಸದ್ದು, 'ಹಲೋ, ಗುಡ್ ಮಾರ್ನಿಂಗ್' -ಹಾಸ್ಟೆಲು ಎಚ್ಚತ್ತಿದೆಯೆಂದು ಹೇಳುತ್ತಿವೆ.

ಏಳಲಿಕ್ಕೇ ಬೇಸರ. ರಾತ್ರಿ ಮಲಗಿರಲಿಕ್ಕೆ ಬೇಸರ. ಮುಂಜಾನೆ ಏಳಲಿಕ್ಕೆ ಬೇಸರ.... ಎದ್ದಾದರೂ ಮಾಡುವುದೇನು ಇಷ್ಟು ಬೇಗ ? ಅಭ್ಯಾಸದ ತಲೆನೋವಂತೂ ಇಲ್ಲ. ಅದೂ ಇದ್ದ ಕಾಲವೊಂದಿತ್ತು. ಆಗಲೂ ಬೇಸರವೇ. ಆದರೆ ಆಗ ಮಲಗಿರಲು ಬೇಸರವಿರಲಿಲ್ಲ. ತಲೆದಿಂಬಿಗೆ ತಲೆಯಿಟ್ಟೊಡನೆ ಸಾಕು. ಕಣ್ಣುಗಳು ಮುಚ್ಚಿಬಿಡುತ್ತಿದ್ದವು. ಕಣ್ದೆರೆದಾಗ ಅರ್ಧ ಹಗಲಾಗಿರುತ್ತಿತ್ತು. ಸುಖನಿದ್ರೆ, ಸವಿಗನಸು... ಆಗಿನ ಎಲ್ಲವೂ ಹಾಗೆಯೇ, ಸಿಹಿ-ಸಿಹಿ.

ಹ್ಞಾ, ಈಗೆದ್ದು ಲೆಕ್ಚರು ತಯಾರಿಸಬೇಕು ? ಹೌದು.

ಅದೇನು ಎಷ್ಟೊತ್ತಿನ ಕೆಲಸ ? ತಯಾರು ಮಾಡದೆಯೇ ಹಾಗೇ ಹೋಗಿ ನಿಂತು

ಬಾಯಿಗೆ ಬಂದದ್ದು ಒದರಿದರೂ ನಡೆಯುವುದು. ದೆವ್ವನ ಹಾಗೆ ಪಟ್ಟೆಪಟ್ಟೆಯ ಬಿಗಿ ಉಡುಪು ತೊಟ್ಟು ಬರುವ ಆ ಹುಡುಗರ ಲಕ್ಷ್ಯ ಅಭ್ಯಾಸದ ಕಡೆ ಇರುವುದು ಅಷ್ಟರಲ್ಲೇ ಇದೆ. ತಾನು ಈ ಥಂಡಿಯಲ್ಲಿ ಎದ್ದು ಲೆಕ್ಚರು ತಯಾರು ಮಾಡಿ ಕ್ಲಾಸಿಗೆ ಹೋಗಿ ನಿಂತು ಒದರಬೇಕು. ಆ ಮಕ್ಕಳು ಆರಾಮಾಗಿ ಕಾಲುಚಾಚಿ ಆಕಳಿಸುತ್ತ ಕೂತು ತನ್ನ ಮುಖ ನೋಡುತ್ತಿರಬೇಕು. ಹಲವು ವರ್ಷಗಳ ಅನುಭವ, ಲೆಕ್ಚರು ಅಂದರೆ ವಿದ್ಯಾರ್ಥಿಗಳಿಗೆ ಬೇಸರವಾಗುವುದು ಸಹಜವೆ. ಅವರ ಹದ್ದಿನ ಕಣ್ಣು ತನ್ನ ಮೇಲೆ - ಮುಖ, ಕೊರಳು, ಎದೆ, ಕಾಲು, ಚಪ್ಪಲಿಯ ವರೆಗೂ ಹರಿದಾಡುತ್ತದೆ ಆ ದೃಷ್ಟಿ. ತನಗಾಗ ಮೈಗೆಲ್ಲಾ ಚೂಪಾದ ಮುಳ್ಳು ಚುಚ್ಚುತ್ತಿರುವಂಥ ಅನುಭವ.

ಇದು ದಿನದ್ದೇ. ಹೊಸದೇನಲ್ಲ. ಮುಂಜಾನೆಯ ಹೊತ್ತು ವಿಚಾರಿಸುವಷ್ಟೇನೂ ಮಹತ್ವದ್ದಲ್ಲ.

"ಬಾಗಲಾ ತಗೀರೀ ಬಾಯೀ, ಕಸಾ ತಗೀತೇನು".

-ದರಿದ್ರ ಪ್ಯೂನ್‌ನ ದನಿ. ಎದ್ದೊಡನೆ ಈ ಶನಿಯ ಮುಖದರ್ಶನವಾಗಬೇಕು. ಅದೂ ಕಸಬರಿಗೆಯೊಂದಿಗೆ. ರಜೆಗೆ ಮನೆಗೆ ಹೋದಾಗ ಮಾತಿಗೆ ಮಾತು ಬಂದು ಈ ವಿಷಯ ಕೇಳಿ ಅಕ್ಕ-ತವರಿಗೆ ಹಬ್ಬಕ್ಕೆಂದು ಮಕ್ಕಳೊಂದಿಗೆ ಬಂದವಳು-ನಗುತ್ತ ಅಂದಿದ್ದಳು. 'ಲಗೂ ಲಗ್ನಾ ಮಾಡಿಕೋಬಾರದs ಶಾಂತಿ ? ಆಮ್ಯಾಲ ನಿನ್ನ ಗಂಡನs ಬಂದು ಗದ್ದಾತುಟಿ ಹಿಡಿದು ರಮಿಸಿ ಎಬ್ಬಸ್ತಾನ ದಿನಾ ಮುಂಜಾನೆ.'

ಈ ವಯಸ್ಸಿಗೆ ಇಂಥ ಮಾತು ಕೇಳಿ ನಾಚಬೇಕೆ ? ಆದರೂ ಹೃದಯದಲ್ಲೆಲ್ಲೋ ಏನೋ ಮಿಸುಕಾಡಿದಂತೆ ಭಾಸ. ಹಾಗೆ ಎಬ್ಬಿಸಲು ಬರುವ ಆ 'ಗಂಡ' ಹೇಗಿರಬಹುದು ? ಮೊನ್ನೆ ಇಂಟರ್-ಯೂನಿವರ್ಸಿಟಿ ಕ್ರಿಕೆಟ್ ಮ್ಯಾಚಿನಲ್ಲಿ ಸೆಂಚುರಿ ಹೊಡೆದ ಆ ಕ್ಯಾಪ್ಟನ್ ಸುಧೀರ ಇದ್ದನಲ್ಲ, ಹಾಗೆ ಎತ್ತರ, ಸ್ಮಾರ್ಟ್ ಇರಬಹುದೆ ? ಅಥವಾ ಆ 'ಅವನ' ಹಾಗೆ ? ಥೇಟ್ 'ಅವನ' ಹಾಗೆ ?

ಥೇ, ಮುಂಜಾನೆ ಏಳುತ್ತಲೂ 'ಅವನ' ನೆನಪು ಬಂದದ್ದು ನೆಟ್ಟಗಾಗಲಿಲ್ಲ. ಶಾಂತಿ ಜೋರಾಗಿ ಕಾಲು ಝಾಡಿಸಿ ಹೊದಿಕೆಯನ್ನು ಒದ್ದು ಎದ್ದು ಕುಳಿತಳು. ತಲೆಕೂದಲು ಸರಿಪಡಿಸುವ ನೆವದಲ್ಲಿ ತಲೆಯನ್ನು ಝಾಡಿಸಿ ಮಚ್ಛರದಾನಿಯನ್ನು ಸರಿಸಿ ಎದ್ದು ಬಾಗಿಲು ತೆರೆದಳು.

"ಏಟೋತ್ರೀ ಯವ್ವಾ ?" ಎಂದು ಹಲ್ಲು ಕಿರಿಯುತ್ತ ಒಳಬಂದ ಮಾದನ ಗೂಗೆಗಣ್ಣಿನ ದೃಷ್ಟಿಯ ದಿಕ್ಕನ್ನು ಗಮನಿಸಿದಾಗ ಅವಳಿಗೆ ತನ್ನ ಸೆರಗು ಅಸ್ತವ್ಯಸ್ತವಾಗಿದೆಯೆನ್ನುವುದರ ಅರಿವಾಯಿತು. ಅದೇ ಅವಳಿಗೆ ಚಿರಪರಿಚಿತವಾದ ಮುಳ್ಳಿನ ಮೊನೆ-ಹುಡುಗರ ಕಣ್ಣಲ್ಲೂ ಅದೇ, ಮಾದನ ಕಣ್ಣಲ್ಲೂ ಅದೇ, ಹಾಸ್ಟೆಲಿನ

ಮುಂದೆ ಸದಾ ಬಾಲ ಅಲ್ಲಾಡಿಸುತ್ತ ಬಿದ್ದಿರುವ ಆ ಗಂಡುನಾಯಿಯ ಕಣ್ಣಲ್ಲೂ ಅದೇ. ನಾಯಿಯಾದರೇನು, ಗಂಡಲ್ಲವೆ ?

ಸೆರಗು ಸರಿಪಡಿಸಿಕೊಳ್ಳುವ ಗೋಜಿಗೆ ಹೋಗದೆ ಹಾಗೆಯೇ ಅವಳು ಬಾಥರೂಮಿಗೆ ಹೋದಳು. ಎದುರಿನ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ದೃಷ್ಟಿಸಿದಳು. ಈ ಮುಳ್ಳು ಚುಚ್ಚಿದಂತೆ ಅನಿಸುವದು ಬರೇ ಭ್ರಮೆಯೇ ? ಅದು ನಿಜವೇ ಆಗಿದ್ದರೆ ಮೈಯೆಲ್ಲ ತೂತಾಗಬೇಕಿತ್ತಲ್ಲ !

"...ಗುಡ್ ಮಾರ್ನಿಂಗ್ ಮ್ಯಾಡಂ" —ನಡುವೆಯೇ ಬಂದ ದನಿ ಕೇಳಿ ಶಾಂತಿ ಹೊರಳಿ ನೋಡಿ ಉತ್ತರರೂಪವಾಗಿ ತುಟಿಯಗಲಿಸಿದಳು. ಟೂಥ್‌ಬ್ರಶ್‌ನಿಂದ ಹಲ್ಲುಜ್ಜಿಕೊಳ್ಳುತ್ತಿದ್ದ, ಬಾಯಲ್ಲೆಲ್ಲಾ ಹೇಸಿಗೆ ಬರಿಸುವ ಹಾಗೆ ಕಾಲ್ಗೇಟ್ ಬಿಳಿನೊರೆ ತುಂಬಿದ, ಅರೆಬತ್ತಲೆ ನೈಟ್‌ಡ್ರೆಸ್ಸಿನಲ್ಲಿದ್ದ ಮೇರಿ. ಮುಖ ತೊಳೆದು ರೂಮಿಗೆ ಹಿಂದಿರುಗುತ್ತಿದ್ದಾಗ ಶಾಂತಿಗೆ ಮಜಾ ಅನಿಸಿತು-ಈ ಮೇರಿ ಯಾವಾಗಲೂ ಅರ್ಧ ಮೈ ತೆರೆದುಕೊಂಡೇ ಗಂಡುಹುಡುಗರ ಭುಜಕ್ಕೆ ಭುಜ ತಾಗಿಸುತ್ತ ಕಾಲೇಜಿನಲ್ಲಿ ಅಡ್ಡಾಡುತ್ತಾಳೆ, ಇವಳಿಗೆ ಯಾರ ದೃಷ್ಟಿಯ ಮುಳ್ಳಿನ ಅನುಭವವೂ ಆಗಿರಲಾರದೆ ? ಪ್ರೊಫೆಸರುಗಳ ರೂಮಿಗೂ ಬಂದು ತಾಸುಗಟ್ಟಲೆ ಒಂದೇ ವಾಕ್ಯದ ಅರ್ಥ ಕೇಳುತ್ತ ಫ್ರೀಯಾಗಿ ಕೂತಿರುತ್ತಾಳೆ, ಅದು ಯಾವುದೂ ಒಂದು ದಿವಸವೂ ಅವಳ ಹೃದಯದ ಆಳದ ವರೆಗೆ ಹೋಗಿರಲಾರದೆ ? ಹೃದಯವೆಂಬುದಾದರೂ ಅವಳಿಗಿದೆಯೆ ? ಅಥವಾ ಈ ಹೃದಯವೆಂಬುದು ಯಾರಿಗೂ ಇಲ್ಲವೇ ಇಲ್ಲವೋ ಏನು ಮಣ್ಣೋ !

'ಶಾಂತಿ, ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ' ಎಂದು ಅಂದು ಹಿಂದೆಂದೋ ಅಂದಿದ್ದ 'ಅವನು,' ಮೂರ್ತಿಸಹಿತವಾಗಿ ಹೃದಯವನ್ನೂ ಕಿತ್ತು ಬಿಸಾಡಿಬಿಟ್ಟ ನಂತರ. ಆ ಅಯೋಗ್ಯನ ಕಣ್ಣಲ್ಲೂ ಮುಳ್ಳಿದ್ದವೇ ?

ಸ್ಟೋವಿನ ಮೇಲೆ ಕುದಿಯುತ್ತಿದ್ದ ಎಸರಿಗೆ ಸಕ್ಕರೆ ಹಾಕುತ್ತಿದ್ದಳು ಶಾಂತಿ. ಒಂದು, ಎರಡು, ಮೂರು- 'ಅವನ' ನೆನಪನ್ನು ಹೇಗಾದರೂ ಮಾಡಿ ಓಡಿಸಬೇಕು. ಇದು ನೆನೆಯುತ್ತ ಕೂಡುವ ಹೊತ್ತಲ್ಲ. ಕಾಲೇಜಿಗೆ ತಡವಾಗುತ್ತದೆ. ಇಂಥದರ ಬಗೆಗೆಲ್ಲ ತಲೆ ಕೆಡಿಸಿಕೊಳ್ಳಲು ತಾನೇನು ಹದಿನೈದರ ಹುಡುಗಿಯೆ ? -ಅಯ್ಯೊ, ಎಷ್ಟು ಚಮಚೆ ಸಕ್ಕರೆ ಹಾಕಿದೆ, ಮರೆತೇ ಹೋಯಿತಲ್ಲ !.... ಹೋಗಲಿ, ತಾನು ಮಾಡಿದ ಚಹಾ ಕುಡಿದು ಯಾರು ಶಿಫಾರಸು ಕೊಡಬೇಕಾಗಿದೆ ? ಸ್ವಲ್ಪ ಹೆಚ್ಚೇನು, ಕಡಿಮೆಯೇನು, ನಡೆಯುತ್ತದೆ.

ಹಿಂದೊಮ್ಮೆ ಹಾಸ್ಟೆಲಿಗೆ ಬಂದು ತಾನು ಮಾಡಿಕೊಟ್ಟ ಚಹಾ ಕುಡಿದಾಗ ಪ್ರೊ. ದೇಸಾಯಿ ಹೇಳಿದ್ದ, 'ಮಿಸ್ ಶಾಂತಿ, ನಿಮ್ಮ ಚಹಾ ಅಗದೀ ಉತ್ತಮ ಆಗೇದ.

ನೀವು ಫರ್ಸ್ಟ್‌ಕ್ಲಾಸ್ ಹೌಸ್‌ವೈಫ್ ಆಗತೀರಿ ಬಿಡ್ರಿ.'

ತಾನೇನು ನನ್ನನ್ನು ಲಗ್ನ ಮಾಡಿಕೊಳ್ಳುವವನಿದ್ದನೆ ? – ಛೆ, ದೇಸಾಯಿಯ ಬಗ್ಗೆ ಹೀಗೆಲ್ಲ ವಿಚಾರಿಸಿದರೆ ಉಪಯೋಗವಿಲ್ಲ. ಸಂಭಾವಿತ, ಮಳ್ಳ ಗಂಡಸು ಅದು. ಅವನ ದೃಷ್ಟಿಯಲ್ಲಿ ಯಾಕೋ ಮುಳ್ಳಿದ್ದಂತೆ ಕಾಣುವದಿಲ್ಲ. ತನ್ನ ಮೇಲಂತೂ ಬಹಳ ಪ್ರೀತಿ, ಅಭಿಮಾನ. ಅದಕ್ಕೇ ಅವನೊಂದಿಗೆ ತಾನು ಫ್ರೀಯಾಗಿರುವುದು, ಎಷ್ಟು ವರ್ಷಗಳಿಂದ ನೋಡುತ್ತಿದ್ದೇನೆ, ಒಮ್ಮೆಯೂ ಆತ ತನ್ನೆಡೆ ನೋಡುವ ದೃಷ್ಟಿಯಲ್ಲಿ ಮುಳ್ಳಿನ ಮೊನೆಯಿಲ್ಲ.

ಹೊರಗಡೆ ರಸ್ತೆಯ ಮೇಲೆ ಯಾರೋ ಅಶ್ಲೀಲವಾದ ಹಾಡೊಂದನ್ನು ಗುನುಗುನಿಸುತ್ತ ಹೊರಟಿರುವಂತಿದೆ. ಎದ್ದು ನೋಡಬೇಕು ಕಿಡಕಿಯೊಳಗಿನಿಂದ.... ಛೇ, ಬೇಡ, ತಾನೇನು ಕಾಲೇಜು ಹುಡುಗಿಯೇ ಹೀಗೆಲ್ಲ ಪ್ರಚೋದಿಸಲಿಕ್ಕೆ ? ಆದರೂ ಒಮ್ಮೆ ನೋಡಲಡ್ಡಿಯಿಲ್ಲ - ಆ ಹಾಡುವ ಕತ್ತೆಗೆ ಕಾಣದಂತೆ. ಗೋಡೆಯ ಮರೆಗೆ ಕಾಣದಂತೆ ನಿಂತು, ಕನ್ನಡಿ ಹಿಡಿದು ರಸ್ತೆಯ ಮೇಲಿನ ದೃಶ್ಯ ನೋಡುವುದೇನು ಹಾಸ್ಟೆಲಿನೊಳಗಿರುವವರಿಗೆ ಹೊಸದಲ್ಲ.

ಅರ್ಧ ಕುಡಿದ ಚಹಾದ ಕಪ್ಪನ್ನು ಟೇಬಲ್ಲಿನ ಮೇಲಿಟ್ಟು ಶಾಂತಿ ಕನ್ನಡಿಯಿದ್ದ ಕಡೆ ಬಂದಳು. ಹಾಡುವ ಕತ್ತೆಯ ಬಾಯಿಂದ ಹೇಸಿ ನಗೆಯ ಅಲೆಗಳು ಹೊರಟು ಹಾಸ್ಟೆಲಿನ ಗೋಡೆಗಳನ್ನು ಭೇದಿಸಿ ಮುಳ್ಳಿನಂತೆ ಚುಚ್ಚತೊಡಗಿವೆ. ಥೂ, ಈ ಹೊಲಸು ಕೆಲಸ ಬೇಡ. ಯಾಕೋ ಮತ್ತೆ ಒಮ್ಮೆಲೆ ಎಲ್ಲದರ ಬಗೆಗೂ ಹೇಳತೀರದ ಬೇಸರ ಬರುತ್ತಲಿದೆ....

ಅರ್ಧಕ್ಕೆ ಬಿಟ್ಟ ಚಹಾದಲ್ಲಿ ನೊಣ ಬಿದ್ದು ಒದ್ದಾಡತೊಡಗಿದೆ. ಸಿಹಿ ಚಹಾದ ಆಸೆಗೆ ಬಿದ್ದು ಬಂದಿದ್ದ ನೊಣ.... ಇನ್ನೂ ಜೀವವಿದೆ, ತೆಗೆದು ಹೊರಗೆ ಹಾಕೋಣವೆ ? ಬದುಕಿಕೊಳ್ಳಲಿ ಪಾಪ.

ಶಾಂತಿಯ ಕೈ ಕಪ್ಪಿನೆಡೆ ಹೋಗಿ ತಟ್ಟನೆ ಅಲ್ಲೇ ನಿಂತಿತು. ಈಗ ಅದನ್ನು ಹೊರಗೆ ಹಾಕಿದರಾದರೂ ಉಪಯೋಗವೇನು ? ಅದಕ್ಕೇನೂ ಮೊದಲಿನಂತೆ ಹಾರಲಾಗುವುದಿಲ್ಲ. ಒದ್ದಾಡಿ ಎರಡು ನಿಮಿಷದ ನಂತರ ಸಾಯುವದು ನಿಶ್ಚಿತ. ಬೇಡ. ಕಪ್ಪಿನಲ್ಲಿಯ ನೊಣಸಹಿತ ಚಹಾವನ್ನು ಕಿಡಿಕಿಯಾಚೆ ಚೆಲ್ಲಿದಳು ಆಕೆ – ಇನ್ನು ಲೆಕ್ಚರು ತಯಾರಿಸಬೇಕು. ಡ್ಯೂಟಿ – Do or die.....

ಅವಳಿಗೆ ನಗು ಬಂತು. ಕಿಸಕ್ಕನೆ ನಕ್ಕಳು. ಕ್ಲಾಸಿನಲ್ಲಿ ಕಲಿಸುವುದು, ಅಂದರೆ ಯಾವುದನ್ನು ಆ ನಿರ್ಭಾಗ್ಯ ಹುಡುಗರು ಓದಿ ಮನನ ಮಾಡಿಕೊಳ್ಳಬೇಕೋ, ಯಾವುದರಿಂದ ಅವರ ಉದ್ಧಾರ ಸಾಧ್ಯವೆಂದು ಹಿರಿಯರ ತಿಳುವಳಿಕೆಯೋ ಅದು

ಬರೇ ಬೂಟಾಟಿಕೆ, ನಿಷ್ಪ್ರಯೋಜಕ, ಅರ್ಥಹೀನವಾದುದು, ಎಲ್ಲಾ ಹಿಪಾಕ್ರಸಿ–ಎಂದು ಮೊನ್ನೆ ದೇಸಾಯಿ ಅಂದದ್ದು ನೆನಪಾಯಿತು.

ಇವತ್ತೇಕೋ ಉಪಯೋಗವಿಲ್ಲದ ವಿಚಾರಗಳೇ ಬರತೊಡಗಿವೆ. ಸ್ನಾನದ ಹೊತ್ತಾಯಿತು. ಇನ್ನು ಈ ವಿಚಾರ ಬಿಟ್ಟು ಏಳಬೇಕು. ('Act, act in the living present !' ಎಂದು ನಿನ್ನೆ ಕಲಿಸಿದ್ದು ಮನದಲ್ಲಿ ಮೂಡಿ ಅಣಕಿಸಿ ನಕ್ಕು ಮಟಾಮಾಯ ಆಯಿತಲ್ಲ ಖೋಡಿ !)

ಸ್ನಾನದ್ದೂ ಒಂದು ಮಜ. ಬಡಬಡಾ ಒಂದು ನಿಮಿಷದಲ್ಲಿ ನೀರು ಸುರುವಿಕೊಂಡಾದ ನಂತರ ಬಹಳ ಹೊತ್ತಿನ ವರೆಗೆ ಮೈ ಒರೆಸಿಕೊಳ್ಳುತ್ತ ನಿಲ್ಲಬೇಕೆನಿಸುತ್ತದೆ. ಯಾಕೆ ಹೀಗೆ ? ಕಾರಣ ಕೇಳಿದರೆ ಆ ಮಡಿವಂತ ಸಂಸ್ಕೃತ ಲೆಕ್ಚರರ್ ಮಿಸ್ ಕುಲಕರ್ಣಿ 'ಥೂ, ಹೊಲಸು' ಅಂದಳು. ಇದ್ದುದನ್ನು ಇದ್ದಂತೆ ಹೇಳಿದರೆ ಹೊಲಸಂತೆ ! ಅವಳಿಗೆಂದೂ ಹಾಗನಿಸಿರಲಾರದೇ ? ಮತ್ತೇಕೆ ಇಲ್ಲದ ಆತ್ಮವಂಚನೆ ?

– ಡೈನಿಂಗ್ ಹಾಲಿನಲ್ಲಿ ಗದ್ದಲವೋ ಗದ್ದಲ. ಶಾಂತವಾಗಿ ಊಟ ಮಾಡಲಿಕ್ಕೂ ಬಿಡುವುದಿಲ್ಲ ಹಾಳು ಹುಡುಗಿಯರು. ಅವರ ಟೀಕೆಗೆ, ನಗೆಗೆ, ಕೊಂಕು ನೋಟಕ್ಕೆ ಕೊನೆಯೇ ಇಲ್ಲ–ಕೊನೆಯೇ ಇಲ್ಲ.

ಹಲವೇ ವರ್ಷಗಳ ಹಿಂದೆ ತಾನೂ ಒಬ್ಬಳಾಗಿದ್ದೆ ಇಂಥ ಗುಂಪಿನಲ್ಲಿ. ಯಾರದೋ ಸಂಬಂಧವಿಲ್ಲದವರ ಪ್ರೇಮಪ್ರಕರಣದ ಬಗ್ಗೆ. ಹೊಸದಾಗಿ ಲೆಕ್ಚರರ್ ಆಗಿಬಂದಿರುವ ಸ್ಮಾರ್ಟ್ 'ಹುಡುಗ'ರ ಬಗ್ಗೆ ಗಂಟೆಗಟ್ಟಲೆ ಬೇಸರವಿಲ್ಲದೆ ಚರ್ಚೆ ಮಾಡುತ್ತಿದ್ದೆ. ಈಗೇಕೆ ಈ ಬೇಸರ ? ನಿರ್ಲಿಪ್ತತೆ ? ಶೂನ್ಯತೆ ? ಆ ಭ್ರಮೆ ಒಳ್ಳೆಯದೋ, ಈ ಭ್ರಮೆನಿರಸನ ಒಳ್ಳೆಯದೋ ?

ಎಲ್ಲವೂ ಭ್ರಮೆಯೇ ಹಾಗಾದರೆ ? ದೇಸಾಯಿ ಭ್ರಮೆ, 'ಅವನು' ಭ್ರಮೆ, ನಾಳೆಯೊಮ್ಮೆ ತನಗೆ ಗಂಡನಾಗಿ ಬರಲಿರುವ ಪ್ರಾಣಿ ಭ್ರಮೆ, ಮಾದ ಭ್ರಮೆ, ಹಾಸ್ಟೆಲಿನ ನಾಯಿ ಭ್ರಮೆ, ತಾನು ದಿನಾ ಅನುಭವಿಸುತ್ತಿರುವ ಮುಳ್ಳಿನಂತೆ ಚುಚ್ಚುವ ನೂರು ಮುತ್ತಾಳರ ದೃಷ್ಟಿಯೂ ಭ್ರಮೆ ? ಛೆ, ಅಲ್ಲ. ಈ ಮುಳ್ಳಿನಂಥ ದೃಷ್ಟಿಯೊಂದೇ ಸತ್ಯ. ಉಳಿದುದೆಲ್ಲ ಭ್ರಮೆ, ರಸ್ತೆಯಲ್ಲಿ, ಕಾಲೇಜಿನಲ್ಲಿ, ಬಸ್ಸಿನಲ್ಲಿ, ಟ್ರೇನಿನಲ್ಲಿ, ಮಾರ್ಕೆಟಿನಲ್ಲಿ-ಈ ಇಡೀ ಜಗತ್ತಿನ ತುಂಬ ಸತ್ಯವಾದುದೆಂದರೆ ಅದೊಂದೇ. ಸಣ್ಣ ಹುಡುಗನಿರಲಿ, ತರುಣನಿರಲಿ, ಮುದುಕನಿರಲಿ, ಪ್ರತಿಯೊಂದು ಗಂಡಿನ ಕಣ್ಣಲ್ಲೂ ಅದೇ ಮುಳ್ಳಿನ ಮೊನೆ. ಒಂಟಿ ಹೆಣ್ಣನ್ನು, ಅದರಲ್ಲೂ ಹುಡುಗಿಯನ್ನು, ನೋಡಲಿಕ್ಕೆ ಸ್ವಲ್ಪ ಚೆನ್ನಾಗಿರುವವಳನ್ನು ಕಂಡರೆ ಸಾಕು, ಒಂದೇ ಸಮನೆ ಚುಚ್ಚುತ್ತವೆ ಈ ಮುಳ್ಳುಗಳು....

ಇವುಗಳಿಂದ ಮುಕ್ತಿ ಪಡೆಯಬಹುದೆಂದು ಭ್ರಮಿಸಿ 'ಅವನ' ಜೊತೆ ಗೆಳೆತನ ಬೆಳೆಸಿದ್ದು. ಮುಳ್ಳುಗಳಿಂದ ದೂರ-ದೂರ, ಬರೇ ಹೂವುಗಳಿರುವ ದ್ವೀಪಕ್ಕೆ ತನ್ನನ್ನು ಕರೆದೊಯ್ಯಬಲ್ಲನೆಂದು ಅನಿಸಿತ್ತು. ಅದೂ ಒಂದು ದೊಡ್ಡ ಭ್ರಮೆ. ಅದರ ನಿರಸನವಾದದ್ದು, 'ಅವನ' ಕಣ್ಣನೋಟದಲ್ಲೇ ಹುದುಗಿದ್ದ ಮುಳ್ಳಿನ ಅರಿವು ಮೊದಲ ಬಾರಿ ಆದಾಗ. ಆಘಾತ ! ಹೃದಯ ಬಿರಿದು ಹೋಗುತ್ತಿರುವದೇನೋ ಎಂಬಂಥ ಅನುಭವ ! ಅದೇ ಮೊದಲು, ಅದೇ ಕೊನೆ. ನಂತರ 'ಅವನ' ಮುಖದರ್ಶನವೂ ಬೇಡವೆನಿಸಿತು.

ಕಲಸಿದ್ದ ಅನ್ನ ಗಂಟಲಲ್ಲಿಳಿಯಲೊಲ್ಲದು. ಅದನ್ನಲ್ಲೇ ಬಿಟ್ಟು ಕೈತೊಳೆದು ಎದ್ದು ನಡೆದಳು ಶಾಂತಿ.

ಮೇಕಪ್. ಎರಡು ನಿಮಿಷದ ಕೆಲಸ. ಯಾರನ್ನು ಮೆಚ್ಚಿಸಲೆಂದೋ ! ಮೊನ್ನೆ ತೆಗೆದುಕೊಂಡ ಡ್ರೈಲಾನ್ ಸೀರೆ ಉಟ್ಟರೆ ? 'May I feel your saree ?' ಎಂದು ನಾಚಿಕೆಬಿಟ್ಟು ಕೇಳಿ, ತಾನುತ್ತರಿಸುವ ಮೊದಲೇ ಸೆರಗು ಮುಟ್ಟಿ ನೋಡುತ್ತಾರೆ ತನ್ನ ಸಹೋದ್ಯೋಗಿಗಳು. ಒಮ್ಮೊಮ್ಮೆಯಂತೂ ಆ ಸೆರಗಿನಲ್ಲೇ ಅವರ ಬೆರಳುಗಳ ಮುಳ್ಳಿನ ಕರೆಂಟ್ ಹರಿದಾಡಿದಂತೆ ಮೈ ಜುಮ್ಮೆನ್ನಿಸುತ್ತದೆ.

ಒಟ್ಟು ಈ ಮುಳ್ಳುಗಳಿಂದ ಬಿಡುಗಡೆ ಇದೆಯೆಂದು ಒಮ್ಮೆ ತಿಳಿದದ್ದು ತಪ್ಪಾಗಿ ಹೋಯಿತು. ತಾನು ಮದುವೆಯಾಗುವ ಪ್ರಾಣಿ ಗಂಡು, ಅಂದ ಬಳಿಕ ಅವನ ಕಣ್ಣಲ್ಲೂ ಮುಳ್ಳಿರಲೇಬೇಕಲ್ಲ ?

ಧಡಧಡನೆ ಮೆಟ್ಟಿಲಿಳಿದು ಶಾಂತಿ ಕಾಲೇಜಿಗೆ ನಡೆದಳು. ಹದಿನೈದರ ಎಳೆಯರಿಂದ ಹಿಡಿದು ಇಪ್ಪತ್ತೈದರ ಕೋಣಗಳ ವರೆಗಿನ ಎಲ್ಲ ಗಂಡು ಹೆಣ್ಣು ಗದ್ದಲ ಮಾಡುತ್ತ ಹೊರಟಿವೆ. ಸೈಕಲು ವೀರನೊಬ್ಬ ಸದ್ದಿಲ್ಲದೆ ಹಿಂದಿನಿಂದ ಬಂದು ಭರ್ರನೆ ತನ್ನ ತೀರ ಸಮೀಪದಿಂದ ಹಾಯ್ದು ಹೋಗುತ್ತಾನೆ. ರಸ್ತೆಯಲ್ಲಿ ನಿಂತ ಕೆಂಪುನೀರಿನ ಪ್ರೋಕ್ಷಣೆ ತನ್ನ ಬಿಳಿ ಸೀರೆಗೆ. ಮೊನ್ನೆ ತಾನವನಿಗೆ ಕ್ಲಾಸಿನಲ್ಲಿ ಮಾತಾಡಿದ್ದಕ್ಕಾಗಿ ಬೈದದ್ದರ ನೆನಪಾಯಿತು.

"....ಗುಡ್ ಮಾರ್ನಿಂಗ್ ಮ್ಯಾಡಂ." ಸ್ಕೂಟರು ನಿಲ್ಲಿಸಿ ಒಳ್ಳೇ ಸ್ಟೈಲಿಶ್ ಆಗಿ ವಂದಿಸುತ್ತಿದ್ದಾನೆ ಶಿಷ್ಯೋತ್ತಮ ಶಂಕರ ಶೆಟ್ಟಿ. ಮೂರು ಸಲ ಕೂತರೂ ಬಿ. ಎ. ಪಾಸಾಗಲೊಲ್ಲ. ಅಪ್ಪನ ದುಡ್ಡು ಬಹಳವಿದೆಯೆಂದು ಬರೇ ಊರೆಲ್ಲ ಸುತ್ತುವುದರಲ್ಲೇ ವೇಳೆ ಕಳೆಯುತ್ತಾನೆ. ಕಳೆದ ವರ್ಷ ಒಮ್ಮೆ ತನ್ನನ್ನು ಪಿಕ್ಚರಿಗೆ ಕರೆಯುವ ಸಾಹಸ ಮಾಡಿತ್ತಲ್ಲವೆ ಈ ಕೋತಿ ? ತಾನೆಂದರೆ ಏನೆಂದು ತಿಳಿದಿದ್ದನೋ ! ಆಗಲೇ ಅವನಿಗೊಂದು ಕಪಾಳಿಗೆ ಹೊಡೆಯಬಹುದಿತ್ತು. ಯಾಕೋ ಹಾಗೆ ಮಾಡಲಿಲ್ಲ.

ಯಾಕೆ ಸುಮ್ಮನೆ ದುಷ್ಟರ ಸಹವಾಸ ಎಂದು ಬಿಟ್ಟಿರಬೇಕು. ತಾನವನ ಗುರು. ಈಗ ಗುಡ್-ಮಾರ್ನಿಂಗ್ ಹೇಳುವಾಗ ಒಬ್ಬ ಗರ್ಲ್‌ಫ್ರೆಂಡಿನೊಂದಿಗೆ ಮಾತಾಡುವಾಗ ಇರುವಂಥ ಮುಖಭಾವ. ಹಾಳಾಗಿ ಹೋಗಲಿ. ಇವನಿಗೆ ಪ್ರತಿಯಾಗಿ ಉತ್ತರಿಸಬಾರದು.

ಗಂಟು ಮುಖ ಹಾಕಿ ಹಾಗೇ ಮುಂದೆ ನಡೆದಳು ಶಾಂತಿ.

ಅಲ್ಲಾ, ಅಂದು ಹಾಗೆ 'ಪಿಕ್ಚರಿಗೆ ಬರುವಿರಾ ಮ್ಯಾಡಂ ಪ್ಲೀಜ್ ?' ಎಂದು ಈ ಶೆಟ್ಟಿ ಕೇಳಿದಾಗ ಬರೇ ಸಿಟ್ಟೇ ಬಂದಿತ್ತೇ ತನಗೆ ? ಏನು ಅಭಿಮಾನವೂ ಅನ್ನಿಸಿತ್ತೋ ? ಸ್ವಲ್ಪ-ಸ್ವಲ್ಪ ?

ಛೆ, ಅಂಥ ಗೂಂಡಾ ಕರೆದರೆ ಯಾವ ಹುಡುಗಿಗೆ ಅಭಿಮಾನವೆನ್ನಿಸಲು ಸಾಧ್ಯ. ತನಗಂತೂ ಅವನ ಕಣ್ಣಿನಲ್ಲಿಯ ಜಾಲೀ ಮುಳ್ಳುಗಳ ಬಗೆಗೆ ಎಂದಿನಿಂದಲೂ ಹೇಸಿಗೆ. ತನಗೆ ಹೇಗೆ ಅಭಿಮಾನವೆನಿಸುವುದು ಶಕ್ಯವಿದೆ ?

ಆದರೂ ಶೆಟ್ಟಿ ಹ್ಯಾಂಡ್‌ಸಮ್ ಇದ್ದಾನೆ ... ಸ್ಕೂಟರೂ ಚೆನ್ನಾಗಿದೆ ...

ನೂರಾಐವತ್ತು ಅಜ್ಞಾನಿ-ಅವಿವೇಕಿಗಳ ದೊಡ್ಡ ಗುಂಪು ಪಿ. ಯು. ಸಿ. ಕ್ಲಾಸಿನಲ್ಲಿ. ಇವರಿಗೆ ವ್ಯಾಕರಣ ಕಲಿಸಬೇಕು. ಅಂದರೆ ಭಾಷೆ ಸುಧಾರಿಸುತ್ತದೆ. ತಳಹದಿ ಭದ್ರವಾಗಿದ್ದರೆ ಮನೆ ಗಟ್ಟಿಮುಟ್ಟಾಗುವುದಿಲ್ಲವೆ, ಹಾಗೆ.

ಏನೋ ಅಪಸ್ವರ.... ತನ್ನ ಜೀವನದ ವ್ಯಾಕರಣಪಾಠ ಸರಿಯಾಗಿ ಆಗಲಿಲ್ಲವೇನೋ ! ಈಗ ಮತ್ತೆ ಮೊದಲಿನಿಂದ ತಾನು ವ್ಯಾಕರಣ ಕಲಿಯಲು ಸುರುಮಾಡಬೇಕೆ ಹಾಗಾದರೆ ? ಬಿ. ಎ. ಕ್ಲಾಸಿಗೆ ಬಂದು ಅಂಕಲೆಯ ಒಂದನೇ ಭಾಷಾಂತರ ಓದಿದ ಹಾಗೆ ಆಗುತ್ತದಲ್ಲ !

ಬೋರ್ಡಿನ ಮೇಲೆ ಯಾವನೋ ಪ್ರೇಮವೀರ ದೊಡ್ಡ ಅಕ್ಷರಗಳಲ್ಲಿ "I love you" ಎಂದು ಬರೆದಿದ್ದಾನೆ. ಬಹುಶಃ ಪಂಜಾಬೀ ಡ್ರೆಸ್ಸಿನ ಆ ಚೆಂದ ಹುಡುಗಿಯ ಸಲುವಾಗಿ ಇರಬೇಕು. ಮಧ್ಯಾಹ್ನ ಟೀಗೆ ಹೋದಾಗ ದೇಸಾಯಿಗೆ ಹೇಳಲು ಒಳ್ಳೆ ವಿಷಯ. ರೊಮ್ಯಾಂಟಿಕ್ ಆಗಿ ಗಂಡಸರನ್ನು ಬೈಯಬಹುದು. ಇವರ ಧೈರ್ಯ ಇಷ್ಟೇ. ಎದುರಿಗೆ ಹೋಗಿ ಬೊಗಳುವ ತಾಕತ್ತಿಲ್ಲ. ತೆರೆ ಮರೆಯಲ್ಲಿ ನಿಂತು ವೊವ್ ಅನ್ನುತ್ತಾರೆ. ಮುಂದೆ ಹೋದರೆ ಸ್ತಬ್ಧ. ಜಾಗೃತವಾಗಿ ಉರಿಯುವುದು ಕಣ್ಣಲ್ಲಿನ ಬೆಂಕಿಯೊಂದೇ. ಥತ್– ಅನ್ನಬಹುದು.... ವಾಹ್, ಇಂದು ನಿಜವಾಗಿಯೂ ತಮ್ಮ ಮಾತುಕತೆಗೆ ರಂಗೇರುವುದು.

ಬಹುಶಃ ತಾನು ಹೀಗೆಲ್ಲ ರೊಚ್ಚಿನಿಂದ ಮಾತಾಡುತ್ತಿದ್ದುದರಿಂದಲೇ ಇರಬೇಕು 'ಅವನು' ತನಗೆ ಹೆದರಿದ್ದು, ತನ್ನಿಂದ ದೂರ ಸರಿದಿದ್ದು, ಸಹಜವೆ. ಪಾಪ,

ಕಟ್ಟಿಕೊಂಡ ಹೆಂಡತಿ ತನಗೆ ಪೂರಾ ವಿಧೇಯಳಾಗಿರಬೇಕೆಂದು ಯಾವ ಪೌರುಷಪ್ರಿಯನಾದ ಗಂಡಸು ಬಯಸುವದಿಲ್ಲ ? 'ಅವನ'ದೇನೂ ತಪ್ಪಿಲ್ಲ. ಎರಡೂ ಹೊತ್ತು ಅಡಿಗೆ ಮಾಡಿ ಹಾಕಿ, ರಾತ್ರಿ ಅವನೊಟ್ಟಿಗೆ ಮಲಗಿ, ಹಗಲು ಅವನೇನು ಮಾಡಿದರೂ ಸುಮ್ಮನಿದ್ದು, ಸಾಕಿದ ನಾಯಿಯ ಹಾಗೆ ಬರೇ ಗೋಣು ಹಾಕುವ ಆದರ್ಶ ಹೆಂಡತಿ ಬೇಕಾಗಿದ್ದಳು 'ಅವನಿ'ಗೆ. ಯಾರಿಗೆ ಬೇಡ ? ಹೆಂಡಿರ ಡಿಗ್ರಿ–ಸುಡುಗಾಡು ತೆಗೆದುಕೊಂಡು ಏನು ಮಣ್ಣು ಮಾಡುವುದು ?

ಮೂಲೆಯಲ್ಲಿ ಕುಳಿತ ಆ ಕ್ರಿಶ್ಚನ್ ಹುಡುಗ ಕಿಡಿಕಿಯ ಹೊರಗಡೆ ನೋಡುತ್ತಿದ್ದಾನೆ, ಕಾರಿಡಾರ್‌ನಲ್ಲಿ ಮಾತಾಡುತ್ತ ನಿಂತ ಹುಡುಗಿಯರ ಬೆನ್ನುಗಳ ಕಡೆ. ಸಣ್ಣ ಹುಡುಗ, ಹದಿನೇಳು ದಾಟಿರಲಾರದು. ಆದರೂ ನೋಟದಲ್ಲಿ ಮುಳ್ಳಿನ ಪ್ರಖರತೆಯಿದೆ. ಕ್ಲಾಸಿನ ಕಡೆ ಇವನಿಗೆ ಲಕ್ಷ್ಯವೇ ಇದ್ದಂತಿಲ್ಲ. ಇವನನ್ನೇ ಎದ್ದುನಿಲ್ಲಿಸಿ ಪ್ರಶ್ನೆ ಕೇಳಬೇಕು. –ಕೂಗಿ ನಿಲ್ಲಿಸಿದಾಗ ಹೇಗೆ ಹಲ್ಲು ಕಿರಿಯುತ್ತಾನೆ ಅಯೋಗ್ಯ ! ಕಾಲರು ಹಿಡಿದು ಹೊರಗೆ ನುಗಿಸಿಬಿಡಬೇಕು. ಅದು ಸಾಧ್ಯವಿದ್ದಿದ್ದರೆ...

'Lovely' ವಿಶೇಷಣವನ್ನು ನಿನ್ನ ವಾಕ್ಯದಲ್ಲಿ ಉಪಯೋಗಿಸು ನೋಡೋಣ ಎಂದರೆ, "Madam, you are lovely" ಎನ್ನುತ್ತಾನೆ ಅವನು. ಇವನ ಮಾತು ಪ್ರಾಮಾಣಿಕವಾಗಿರಬಹುದೆ ? ಅವನ ವಯುಸ್ಸಿನ ಎರಡರಷ್ಟು ವಯುಸ್ಸಾಗಲು ಬಂದಿತು ನನಗೆ. ನನ್ನನ್ನೇ ವರ್ಣಿಸಹೊರಟಿದ್ದಾನೆ ಮಗ. ನನ್ನ ಮೇಲೊಂದು ಕವಿತೆ ಬರೆಯುತ್ತಾನೇನೋ ಇನ್ನು ಕಾಲೇಜ ಮಿಸೆಲೆನಿಗೆ ! ಇವನ ಮಾತು ಕೇಳಿ ಉಳಿದ ಮುತ್ಯಾಳರೆಲ್ಲ ಕ್ಲಾಸರೂಮಿನ ಮೇಲಿನ ಛಪ್ಪರ ಹಾರಿಹೋಗುವ ಹಾಗೆ ನಗುತ್ತಿದ್ದಾರಲ್ಲ...

ಒಂದು ಕ್ಷಣ ಅವಳಿಗೆ ಬಹಳ ಸೆಂಟಿಮೆಂಟಲ್ ವಿಚಾರಗಳು ಬಂದವು. ಜಗತ್ತೇ ತನ್ನನ್ನು ಅವಮಾನಿಸುತ್ತಿದೆ. ಇಡೀ ಜಗತ್ತಿನ ವಿರುದ್ಧ ಬಂಡೇಳಬೇಕು. ಒಬ್ಬೊಬ್ಬರನ್ನಾಗಿ ಎಲ್ಲರನ್ನೂ ಜೀವಂತ ಸುಡಬೇಕು. ಕೊನೆಗೆ ತಾನೂ ಅದೇ ಬೆಂಕಿಯಲ್ಲಿ ಬಿದ್ದು ಬೆಂದು ಹೋಗಬೇಕು.... ಹಹ್ಹಹ್ಹ.... ಏ ಹುಡುಗಾ, ನಿನ್ನಂಥವರ ಧೈರ್ಯ ಎಷ್ಟೆಂದು, ಕಿಮ್ಮತ್ತು ಏನೆಂದು ನನಗೆ ಗೊತ್ತಿದೆಯೋ. ಎಂಥ ಗಂಡಸು ನೀನು ! ಬರೇ ನಾನು ನಿನ್ನ ಉತ್ತರ ಕೇಳಿ ಕೆಂಗಣ್ಣು ಮಾಡಿದ್ದಕ್ಕೆ ಪೆದ್ದುಪೆದ್ದಾಗಿ ಕೂತುಬಿಟ್ಟೆ....

ನಿಜವಾದ ಕಷ್ಟಪರಿಹಾರಕನೆಂದರೆ ಕ್ಲಾಸು ಮುಗಿಯಿತೆಂದು ಗಂಟೆ ಹೊಡೆಯುವ ಪ್ಯೂನ್ ಒಬ್ಬನೇ. ಗಂಟೆಯ ಸದ್ದು ಸ್ವರ್ಗದ ಬಾಗಿಲೇ ಎನಿಸುತ್ತದೆ....

"ಹಲೋ ಮಿಸ್ ಶಾಂತಿ, ಟೀಗೆ ಬರ್‍ತೀರೇನು ?"

ಕೇಳಿದವನು ಪ್ರೊ. ದೇಸಾಯಿ. ಮರೆಯುತೊಡಗಿದ ಹಳೆಯ ಕನಸಿನೆಡೆ ಎಳೆಯುತ್ತಿವೆ ಇವನ ಮುಖದ ಮೇಲಿನ ಈ ಮುಗ್ಧತೆ, ನಿಷ್ಕಪಟ ಭಾವ– ಇದು ಬರೇ ಛದ್ಮವೇಷವೆಂದು ತನಗೆ ಗೊತ್ತಿಲ್ಲವೆ ? ಒಬ್ಬ ಗಂಡಸು ಹೀಗಿರಲು ಸಾಧ್ಯವೇ ಇಲ್ಲ. ಆದರೆ ಇವನು ಎಲ್ಲರಿಗಿಂತ ಬೇರೆಯಾಗಿದ್ದಂತೆ ತೋರಿ ನನಗೆ ಮತ್ತೆ ಮುಳ್ಳುಗಳಿಲ್ಲದ, ಹೂವುಗಳಿರುವ ದ್ವೀಪದ ಬಗ್ಗೆ ವಿಚಾರ ಮಾಡಲು ಹಚ್ಚುತ್ತಾನಲ್ಲ ! ಇವನ ಕಣ್ಣಲ್ಲೂ ಮುಳ್ಳುಗಳು ಕಂಡರೆ ಎಷ್ಟು ಒಳ್ಳೆಯದು ! ಮುಳ್ಳುಗಳೆಂದರೆ ಜೀವನದ ಒಂದು ಅನಿವಾರ್ಯ ಭಾಗವೆಂದು ನಂಬಿ ಬಿಡುವದು ಆಗ ಸುಲಭವಾಗುತ್ತಿತ್ತು. ಇವನನ್ನು ನೋಡಿದಾಗ, ಇವನೊಂದಿಗೆ ಇದ್ದಾಗೆಲ್ಲ, ಮುಳ್ಳುಗಳಿಂದ ತಪ್ಪಿಸಿಕೊಳ್ಳುವದು ಸಾಧ್ಯವಾದರೂ ಆದೀತೆಂಬ ಅಸಹಾಯ, ಬಲಹೀನ, ನಿರುಪಯೋಗಿ ಆಸೆಯೊಂದು ಹುಟ್ಟುತ್ತದೆ– ಬೇಡ ಬೇಡವೆಂದರೂ. 'ಆಸೆಯೇ ದುಃಖದ ಮೂಲ'ವೆಂದು ಹೇಳಿದ ಜ್ಞಾನಿಗಳು ಇಂಥದೇ ಆಸೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದರೇನೋ !

"ಟೀಗೆ ಬರಲಿಕ್ಕೂ ಇಷ್ಟ ವಿಚಾರ ಮಾಡಬೇಕಾಗತದೇನ್ರೀ ? ಬರ್ರಿ ಬರ್ರಿ ಹೋಗೋಣ."

ಹೌದು– ವಿಚಾರ ಮಾಡುವದನ್ನು ಇನ್ನು ಬಿಟ್ಟುಬಿಡಬೇಕು. ಬರೇ ಕಾರ್ಯ ಮಾಡಬೇಕು. ಕರ್ಮಯೋಗಿಯಾಗಬೇಕು....

ದೇಸಾಯಿಯ ವ್ಯಕ್ತಿತ್ವದಲ್ಲಿ ನಿಜವಾಗಿಯೂ ಎಂಥದೋ ಜಾದೂ ಇದೆ. ಇಲ್ಲವಾದರೆ ಸುಮ್ಮನೆ ಅವನನ್ನು ಹಿಂಬಾಲಿಸುವ ಮನಸ್ಸು ತನಗೇಕೆ ಆಗುತ್ತಿತ್ತು ?

"ಇವತ್ತ ನಮ್ಮ ಡಿಪಾರ್ಟಮೆಂಟಿನ್ಯಾಗ ಫಿಲ್ಮ ಶೋ ಅದ, ನೋಡ್ಲಿಕ್ಕೆ ಬರ್ತೀರೇನು ಮಿಸ್ ಶಾಂತಿ ?"

–ಚಹಾ ಕುಡಿಯುತ್ತಿದ್ದಾಗ ಕೇಳಿದ ಪ್ರೊ. ದೇಸಾಯಿ.

ಫಿಲ್ಮ ಶೋದಲ್ಲಿ ಏನಿರುತ್ತದೆ ಸುಡುಗಾಡು ? ರಾತ್ರಿ ಏನಾದರೂ ಪ್ರೋಗ್ರ್ಯಾಮ್ಸ್ ಇದ್ದಾಗ, ಅಥವಾ ಪಿಕ್ಚರು ನೋಡಲಿಕ್ಕೆ ಹೋದಾಗ ತಿರುಗಿ ಬರುವಾಗ ಕತ್ತಲಾಗುವದೆಂದು 'ಅವನು' ಹಾಸ್ಟೆಲಿಗೆ ಕಳಿಸಲು ಬರುತ್ತಿದ್ದ. ಪಿಕ್ಚರಿನ ಸೊಗಸು ಹೆಚ್ಚಿನದೋ ? 'ಅವನ' ಜೊತೆಯ ಸೊಗಸು ಹೆಚ್ಚಿನದೋ ? ಎಷ್ಟೋ ಸಲ ಬೇಕಂತಲೇ ರಾತ್ರಿ ಹಾಸ್ಟೆಲಿಗೆ ಹೋಗಲು ತಡಮಾಡಿದ ಪ್ರಸಂಗ ತರಿಸಿಕೊಂಡದ್ದೂ ಉಂಟು. ತನಗೇಕೆ ಆಗ ಒಮ್ಮೆಯೂ 'ಅವನ' ಕಣ್ಣಮುಳ್ಳಿನ ಅರಿವು ಬರಲಿಲ್ಲ ? ಅಷ್ಟೊಂದು ಮಬ್ಬು ಮುಸುಕಿರಬಹುದು. ಅಥವಾ 'ಅವನೇ' ಅದನ್ನು ವ್ಯಕ್ತಗೊಳಿಸಿರಲಿಕ್ಕಿಲ್ಲ. ಏನಾಯಿತೋ, ಅಂತೂ ಆಗ ಆದದ್ದೆಲ್ಲಾ ನೋವಿನ ನೆನಪು....

ಉಳಿದಿದ್ದು ಬರಿ ಕತ್ತಲು....

'ಇಲ್ಲ' ಎಂದು ದೇಸಾಯಿಗೆ ಹೇಳಬೇಕೇನು ?

"ತಿರುಗಿ ಹೊಗಲಿಕ್ಕೆ ಕತ್ತಲಾಗತದ...."

"ಅದಕ್ಯಾಕ ಚಿಂತಿ ? ನಾ ಕಳಿಸಲಿಕ್ಕೆ ಬರ್ತೀನಿ."

ವಾಹ್, ದೇಸಾಯಿ ಎಷ್ಟು ಫಾರ್‌ವರ್ಡ ಆಗಿರುವನಲ್ಲ, ಎಂದು ಅವಳಿಗೆ ನಗೆ ಬಂದಿತು.

ಸಂಜೆಯ ತನಕವೂ ಅವಳು ವಿಚಾರ ಮಾಡುತ್ತಲೇ ಇದ್ದಳು. ಫಿಲ್ಮ ಶೋದಲ್ಲಿ ಎಂದಿಲ್ಲದೇ ಇಂದೇಕೆ ಆಸಕ್ತಿ ಬಂದಿತು ತನಗೆ ? ಯಾಕೆ ಮತ್ತೆ ಸಣ್ಣಹುಡುಗಿಯಾಗಬೇಕು ಅನಿಸುತ್ತದೆ. ತನ್ನನ್ನು ದೇಸಾಯಿಯ ಜೊತೆ ರಾತ್ರಿ ನೋಡಿದ ಯಾರಾದರೂ ವಿದ್ಯಾರ್ಥಿಗಳು ನಾಳೆ ಕಾಲೇಜಿನಲ್ಲಿ ಸುಮ್ಮನೆ ಗದ್ದಲ ಮಾಡಬೇಕು.... ಛೆ, ಇಂಥದರಲ್ಲಿ ಆನಂದಿಸುವ ದಿನಗಳು ಇನ್ನೂ ಕಳೆದುಹೋಗಿಲ್ಲವೆ ? ಈಗ ಈ ಎಲ್ಲದರಿಂದ ದೂರವಾಗುವ ಪ್ರಬಲ (ಪ್ರಾಮಾಣಿಕ ?) ಇಚ್ಛೆಯುಂಟಾಗಿದೆ. ಕಂಡ ಕಂಡ ಮುತ್ಠಾಳರ ಕಣ್ಣುಗಳಲ್ಲಿನ ಮುಳ್ಳುಗಳಿಂದ ಚುಚ್ಚಿಸಿಕೊಂಡು-ಚುಚ್ಚಿಸಿಕೊಂಡು ಹೇಸಿಹೋಗಿದೆ. ಸಾಧ್ಯವಾದಷ್ಟು ಬೇಗ ಇದರಿಂದ ಮುಕ್ತವಾಗಬೇಕು.... ಹೌದು....

ಹಾಗಾದರೆ ದೇಸಾಯಿಗೆ 'ಹ್ಞೂ' ಅಂದದ್ದೇಕೆ ?

ಥೂ, ಇಂಥ ಉಪಯೋಗವಿಲ್ಲದ ವಿಚಾರಗಳಿಂದಲೇ ನನ್ನ ತಲೆ ಅರ್ಧ ಬೆಳ್ಳಗಾದದ್ದು. ಇದನ್ನಿನ್ನು ಬಿಟ್ಟುಬಿಡಬೇಕು.

"ಎಕ್ಸಕ್ಯೂಜ್ ಮಿ ಮಿಸ್ ಶಾಂತಿ, ಬ್ಯಾಡ್ಮಿಂಟನ್ ಆಡಲಿಕ್ಕೆ ಬರ್ತೀರೇನು ?"

–ಹೊಸದಾಗಿ ಲೆಕ್ಚರರ್ ಆಗಿ ಸೇರಿದ, ಪುಣೆಯಿಂದ ಬಂದಿದ್ದ ಹುಡುಗ, ವಡಗಾಂವಕರ. ಇನ್ನೂ ಸಣ್ಣವನಿದ್ದಾನೆ. ಇರಲಿ, ಇಂಥವರ ಗೆಳೆತನ ಕುತ್ತಿಗೆಗೆ ಬರುವುದಿಲ್ಲ.

ಪಟ್-ಪಟ್ ಎಂದು ಒಂದರಮೇಲೊಂದರಂತೆ ಶಾಂತಿ ಶಾಟ್ ಹೊಡೆದಾಗ ಆಟ ನಿಲ್ಲಿಸಿ ಹೇಳಿದ ವಡಗಾಂವಕರ, "ನಿಮ್ಮ ಆಟ ಎಕ್ಸಲೆಂಟ್ ! ನಾಳಿನ ಟೂರ್ನಾಮೆಂಟಿನ್ಯಾಗ ನನ್ನ ಪಾರ್ಟನರ್ ಆಗ್ತೀರೇನು, ಪ್ಲೀಜ್ ?"

–ಟೂರ್ನಾಮೆಂಟ್ಸಿನಲ್ಲಿ ಪಾರ್ಟನರ್ ಆಗಬೇಕಂತೆ. ಟೂರ್ನಾಮೆಂಟ್ಸು ಮುಗಿದ ನಂತರ ? ಅವನ್ಯಾರೋ ತಾನ್ಯಾರೋ ?

"ಟೂರ್ನಾಮೆಂಟ್ಸಿನ್ಯಾಗss ?" ಎಂದಳು ಶಾಂತಿ.

ಪೆಚ್ಚು ಪೆಚ್ಚಾಗಿ ಮುಖ ನೋಡಿದ ಆತ, "ಹ್ಞೂ, ಯಾಕ ? ನೀವು ಈಗಾಗಲೇ

ಬ್ಯಾರೆ ಯಾರ್‍ನರ ಸಿಲೆಕ್ಟ ಮಾಡೀರೇನು ?''

—ಗಂಭೀರವಾಯಿತು ಶಾಂತಿಯ ಧ್ವನಿ, ''ಇಲ್ಲ, ಅಂಥಾ ಯೋಗ್ಯರು ಇನ್ನೂ ಯಾರೂ ಕಣ್ಣಿಗೆ ಬಿದ್ದಿಲ್ಲ.''

''ಹಂಗಾರ ನನ್ನ ಪ್ರಪೋಜಲ್ ಎಕ್ಸೆಪ್ಟ ಆಧಾಂಗs ?'' —ವಡಗಾಂವಕರನ ಧ್ವನಿಯಲ್ಲಿ-ಕಣ್ಣಲ್ಲಿ ಉತ್ಸಾಹವೋ ಮತ್ತೇನೋ ಮಿಂಚುತ್ತಿತ್ತು.

''ನೋಡೋಣ,'' ಎಂದವಳೇ ರ್‍ಯಾಕೇಟನ್ನು ಬೀಸಿ ಒಗೆದು ಹೊರಟುಬಿಟ್ಟಳು. ಯಾಕೋ ಎಲ್ಲರ ಮೇಲೂ ಅಗಾಧ ಸಿಟ್ಟು ಬರತೊಡಗಿದೆ....

ದರಿದ್ರ ಫಿಲ್ಮ ಶೋ. ಯಾಕಾದರೂ ನೋಡಲು ನಿಂತೆನೋ ಎನಿಸುತ್ತದೆ.. ಇದು ಮುಗಿಯುವುದೇ ಇಲ್ಲವೆ ? ಅರ್ಧಕ್ಕೆ ಎದ್ದರೆ ಹೇಗೆ ? ಬೇಡ, ಇನ್ನೂ ಸ್ವಲ್ಪ ಕತ್ತಲಾಗಲಿ....

''ನಿಮಗ ಸುಮ್ನs ತ್ರಾಸು.'' —ಹೊರಡುವಾಗ ದೇಸಾಯಿಗೆ ಹೇಳಿದಳು ಶಾಂತಿ.

''ಛೇ, ತ್ರಾಸೆಲ್ಲೀದು ? ಹತ್ತು ಮಿನಿಟಿನ ದಾರಿ. ಅರ್ಧಾ ಮೈಲೂ ಆಗೊದಿಲ್ಲ ನಿಮ್ಮ ಹಾಸ್ಟೆಲು. ನಿಮ್ಮ ಸಲುವಾಗಿ ಇಷ್ಟ ಮಾಡೂದೇನ ಭಾಳs ?''

—ಇದಕ್ಕೇನೆಂದು ಉತ್ತರಿಸುವುದು ? ಯಾಕೋ ಎದೆ ಹಾರತೊಡಗಿದೆ.

ಕತ್ತಲದಾರಿ. ದೇಸಾಯಿ ಒಳ್ಳೆಯವನು ಖರೆ, ಆದರೂ ಗಂಡಸರನ್ನು ನಂಬಬಾರದು. ದಾರಿಯಲ್ಲಿ ತಪ್ಪಿ ಏನಾದರೂ ಆದರೆ.... ಛೇ, ಅವನಿಗೆಲ್ಲಿ ಅಂತಹ ಧೈರ್ಯವಿದೆ ? ಇದು ತನ್ನದೇ ಭ್ರಮೆ.

('ಎಷ್ಟ ಕಲಿತರೇನು, ಎಷ್ಟೇ ದೊಡ್ಡ ಕೆಲಸ ಇದ್ದರೇನು, ಬೇಕಾದಂಥಾ ಸೋಶಿಯಲ್ ಪೊಜಿಶನ್ ಇದ್ದರೇನು, ಹೆಣ್ಮಕ್ಕಳು ಒಬ್ಬೊಬ್ಬರs ಇರೂದಂದ್ರ ಭಾಳ ಕಠಿಣ ಅದನವಾ ಶಾಂತೂ. ದೂರ ಇರಾಕಿ. ನಿನ್ನ ದೇವರs ಕಾಯಬೇಕು' —ತಾನು ನೌಕರಿಗೆಂದು ಊರು ಬಿಟ್ಟು ಬರುವಾಗ ಅಂದಿದ್ದರು ಅಪ್ಪ. ಹ್ಞ, ಅವರಿಗೇನು ಗೊತ್ತು ಕತ್ತಲಲ್ಲಿಯ ವಾಕಿಂಗಿನ ಮಜಾ....)

''ದಿನಾ ಕಾಲೇಜಿನ್ಯಾಗ ಹಿಂಗ ಫಿಲ್ಮ ಶೋ ಇಟ್ಟರ ಹ್ಯಾಂಗಾದೀತು ?'' —ದೇಸಾಯಿ ಕೇಳುತ್ತಿದ್ದ.

ಅಂದರೆ ದಿನಾ ತನ್ನನ್ನು ಹೀಗೆ ಕಳಿಸಲಿಕ್ಕೆ ಬರುತ್ತಾನಂತೇನು ? ಇವತ್ತು ಇವನಿಗೆ ಏನೋ ಆಗಿದೆ. ಏನೇನೋ ಮಾತಾಡುತ್ತಿದ್ದಾನೆ. ಎಲ್ಲಿಗೆ ಮುಟ್ಟುವನೋ ನೋಡಬೇಕು. ಹೇಗೂ ಹಾಸ್ಟೆಲು ಇನ್ನೂ ದೂರವಿದೆ.

''ಅಂದರ ಇದರ ಮೂಲಕ ನಮ್ಮ ಹುಡುಗರಿಗೆ ಬೌದ್ಧಿಕ ಶಿಕ್ಷಣ

ಕೊಡಬಹುದು. ನಿಮಗ ಏನನಸ್ತದರೀ ಮಿಸ್ ಶಾಂತಿ !"

—ಈತ ಸುಳ್ಳೇ ತನ್ನ ಉದ್ವಿಗ್ನತೆಗೆ ಮುಸುಕು ಹಾಕುತ್ತಿದ್ದಾನೆ. ಆದರೆ ನನಗೆ ಗೊತ್ತಾಗುವದಿಲ್ಲವೇ ಇವನಿಗೆ ಈ ಕತ್ತಲೊಳಗೆ ನಿಶೆ ಏರಿದ್ದು ? ಏರುತ್ತಲೇ ಹೊರಟಿದ್ದು ?

"ನೀವ್ಯಾಕೋ ಸೀರಿಯಸ್ ಕಾಣಸ್ತೀರೆಲಾ, ಕಾರಣಾ ಕೇಳಬಹುದೇನು ?"

—ಬೇಡವೋ ಮಹಾರಾಯ. ನನ್ನ ಮನಸ್ಸಿನಲ್ಲಿ ಈ ಕ್ಷಣದಲ್ಲಿ ನಡೆದಿರುವ ಗೊಂದಲವನ್ನೆಲ್ಲಾ ನಿನಗೆ ಹೇಳಿದರೆ, ಅದನ್ನು ಕೇಳಿ ನಿನಗೆ ಶಾಕ್ ಆಗುವುದು.

'ಛೆ, ಅಸಹ್ಯ' ಅನಿಸುವದು. ನನಗೆ ಗೊತ್ತೋ ದೇಸಾಯಿ —ನೀನೂ ಬೇರೆ ಎಲ್ಲರಂತೆ ಒಬ್ಬ ಸಾಮಾನ್ಯ ಮನುಷ್ಯ. 'ಅ' ಸಾಮಾನ್ಯವಾದುದಕ್ಕೆ ಅಂಜುವ ಮನುಷ್ಯ. ಬೇಡ, ಸುಮ್ಮನೆ ನಡೆ.

ಹತ್ತು ನಿಮಿಷಗಳು ಎಷ್ಟು ಬೇಗ ಕಳೆದು ಹೋದವು ! ತಾನೆಣಿಸಿದಂತೆ ಏನೂ ಅನಾಹುತವಾಗಲಿಲ್ಲ. ದೇಸಾಯಿ ಸುಮ್ಮನೇ ಇದ್ದಾನೆ. ಒಮ್ಮೆ ಸಹ ತನ್ನ ಸಮೀಪ ಕೂಡಾ—ನಡೆಯುವಾಗ ಸಹಜವೆಂಬಂತೆ, 'ಅವನ' ಹಾಗೆ ! —ಬರಲಿಲ್ಲ.

—ಹಾಸ್ಟೆಲಿನ ಗೇಟು ಕಂಡಾಗ ಎಂಥದೋ ಉದ್ವಿಗ್ನತೆ ಹೃದಯದಲ್ಲಿ ತುಂಬಿ ಹರಿಯಿತು.

ಸುರಕ್ಷಿತವಾಗಿ ಬಂದೆನಲ್ಲಾ, ಎಂಬ ಸಮಾಧಾನವೆ ?

—ಇರಬಹುದು. ;

ಏನೂ ಮಜಾ ನಡೆಯಲಿಲ್ಲವಲ್ಲಾ, ಎಂಬ ಅಸಮಾಧಾನವೆ ?

—ಯಾಕಿರಬಾರದು ?

"ಥ್ಯಾಂಕ್ಸ, ಗುಡ್‌ನೈಟ್" ಎಂದು ಒಳಗೋಡಿದಳು ಶಾಂತಿ.

ಎಂಥದೋ ಅನಿರ್ದಿಷ್ಟ, ಅಸ್ಪಷ್ಟ ಮಧುರ ಭಾವ. ದೀಪ ಹಾಕಿದರೆ ಅದೆಲ್ಲಿ ಕಳೆದು ಹೋಗುವದೋ ಎಂದು ಕತ್ತಲಲ್ಲೇ ಆಕೆ ಕಾಟಿನ ಮೇಲೆ ಬಿದ್ದುಕೊಂಡಳು. —ಊಟ ? ಇವತ್ತು ಬೇಡ.

ಗುಯ್ಞ್ ಎಂದು ಹಾರಾಡುತ್ತಿವೆ ಸೊಳ್ಳೆಗಳು. ಪರದೆ ಹಾಕಲು ಬೇಸರ.

'ಬರುತ್ತೀರಾ ಮಿಸ್ ಶಾಂತಿ ನನ್ನ ಜೊತೆ ?'

'ಟೀಗೆ ಬರುತ್ತೀರಾ ಶಾಂತಿ ?'

'ಬ್ಯಾಡ್ಮಿಂಟನ್ ಆಡ್ಲಿಕ್ಕೆ ಬರುತ್ತೀರಾ ಶಾಂತಿ ?'

'ಫಿಲ್ಮ ಶೋ ನೋಡಲಿಕ್ಕೆ ಬರುತ್ತೀರಾ ಶಾಂತಿ ?'

'ಮ್ಯಾಡಂ, ಪಿಕ್ಚರಿಗೆ ಬರುತ್ತೀರಾ ?'

'ಬರುತ್ತೀರಾ ಶಾಂತಿ ?'....'ಬರುತ್ತೀರಾ ಶಾಂತಿ ?'

—ಕಿಟಾರನೆ ಕಿರುಚಬೇಕೆನಿಸಿತು ಅವಳಿಗೆ. ಹತ್ತಾಗಿ-ನೂರಾಗಿ ಕೀಸರಿಟ್ಟಿರುವ ಈ ಅಪರಿಚಿತ ದನಿಗಳು ಎಲ್ಲಿಯವು ? ಯಾರು ಹೀಗೆ ಕರೆಯುವವರು ? ಎಲ್ಲಿದ್ದಾರೆ ? ಹೀಗೆ ಬಹಿರಂಗವಾಗಿ ತನ್ನ ಅವಮಾನ ಮಾಡಲು ಎಷ್ಟು ಧೈರ್ಯ ಈ ಅಯೋಗ್ಯರಿಗೆ ? ಒಬ್ಬೊಬ್ಬರನ್ನಾಗಿ ಒದ್ದು ಕಳಿಸಬೇಕು ಇವರೆಲ್ಲರನ್ನೂ.

ಮುಳ್ಳು ಚುಚ್ಚಿದಂತಾಗುವ ಈ ಸೊಳ್ಳೆಗಳ ಕಡಿತ ಸಹಿಸಲಾಗುವದಿಲ್ಲ ಇನ್ನು. ಎದ್ದು ಸುತ್ತಲೂ ಮಚ್ಛರದಾನಿ ಹಾಕಬೇಕು. ಇಲ್ಲವಾದರೆ ರಾತ್ರಿಯಿಡೀ ಕಣ್ಣಿಗೆ ಕಣ್ಣು ಹತ್ತಲಿಕ್ಕಿಲ್ಲ.

'ಬರುವುದಿಲ್ಲ ಹಾಳಾಗಿ ಹೋಗಿರೋ' ಎಂದುಕೊಂಡು ಶಾಂತಿ ಮಚ್ಛರದಾನಿಯನ್ನು ಇಳಿಬಿಟ್ಟಳು. ತುಂಬ ಹೊದ್ದುಕೊಂಡು ಮಲಗಿದಳು.

ದೇಸಾಯಿಯೊಬ್ಬ ವಿಚಿತ್ರ ಮನುಷ್ಯ. ತಿಳಿದುಕೊಳ್ಳಲು ಪ್ರಯತ್ನಿಸಿದಷ್ಟೂ ಹೆಚ್ಚು ಗೂಢವಾಗುತ್ತ ನಡೆದಿದೆ ಅವನ ವ್ಯಕ್ತಿತ್ವ. ಬಹಳ ಮಜಾ ಇದ್ದಾನೆ....

—ಒಂದು ಸೊಳ್ಳೆ ಹೇಗೋ ತಪ್ಪಿಸಿಕೊಂಡು ಒಳಸೇರಿದೆ. ಗುಯ್ಞ್ ಎಂದು ಒಂದೇ ಸಮನೆ ಕಿರಿಚುತ್ತ ಹಾರತೊಡಗಿದೆ. ಇದರಿಂದೇನೂ ನಿದ್ರೆಗೆ ಬಹಳ ಭಂಗ ಬರಲಾರದು. ಇರಲಿ, ಇಡೀ ದಿನ ಇಷ್ಟು ದಣಿದ ನಂತರ ಯಾರು ಈಗ ಈ ಒಂಟಿ ಸೊಳ್ಳೆಯನ್ನು ಓಡಿಸಲೆಂದು ಎದ್ದು ದೀಪ ಹಾಕುವ ತ್ರಾಸು ತೆಗೆದುಕೊಳ್ಳಬೇಕು ?

—ನಿದ್ರೆಯೇಕೆ ಬರಲೊಲ್ಲದು ? ಇದೂ ನನ್ನ ಜೊತೆ ಆಟ ಆಡತೊಡಗಿದೆ. ಇದಕ್ಕೆ ಸೋಲಬಾರದು. ನಿದ್ರೆ ಬರಿಸಿಕೊಳ್ಳುವ ಸುಲಭ ಸಾಧನ ನನಗೆ ಗೊತ್ತಿದೆ—ಭವಿಷ್ಯದ ಬಗೆಗೆ ನಿಷ್ಫಲ, ಆದರೆ ಸವಿಯಾದ ಕನಸು ಕಾಣುವುದು.... ಹೌದು, ಒಂದೇ ದಾರಿ. ಮುಳ್ಳುಗಳ ನೆನಪಿನಿಂದ ದೂರ ಹೋಗಲು ಇದೊಂದೇ ದಾರಿ....

ಥಟ್ಟನೇ 'ಅವನ' ನೆನಪು. ಈಗ ರಾತ್ರಿ ಹತ್ತು ಗಂಟೆ. 'ಅವನು' ಏನು ಮಾಡುತ್ತಿರಬಹುದು ? ಮಲಗಿಕೊಂಡಿರಬಹುದು.... ತನ್ನ ಹೆಂಡತಿಗೆ, ತನಗೆ ಬಹಳ ವಿಧೇಯಳಾಗಿರುವಳೆಂದುಕೊಂಡು ಆರಿಸಿ ಮದುವೆಯಾದ ಆ ಎರಡು ಸಾರಿ ಮ್ಯಾಟ್ರಿಕ್ ನಾಪಾಸಾದ ಹುಡುಗಿಗೆ ಹೇಳುತ್ತಿರಬಹುದು— 'ಪ್ರಿಯೆ, ನನ್ನ ಹೃದಯದಲ್ಲಿ ನಿನ್ನ ಮೂರ್ತಿ ಭದ್ರವಾಗಿ ನೆಲೆಯೂರಿದೆ.'—ಎಂದು.

ಛೇ, ಈ ವಿಚಾರ ಬೇಡವೇ ಬೇಡ.

ಮತ್ತೇನು ವಿಚಾರಿಸುವುದು ಹಾಗಾದರೆ ?

—ಮುಂಜಾನೆ, ನಾಳೆಯಲ್ಲ, ಮುಂದೊಂದು ದಿನ ಮುಂಜಾನೆ, ತನ್ನನ್ನೆಬ್ಬಿಸಲು

ಬರುವ ಆ ಗಂಡ ಹೇಗಿರಬೇಕು ? ಕ್ರಿಕೆಟಿಯರ್ ಸುಧೀರನ ಹಾಗೆ ಬೇಡ. ಅಂಥವರಿಗೆ ಬಹಳ ಹುಡುಗಿಯರು ಬೆನ್ನು ಹತ್ತುತ್ತಾರೆ. 'ಅವನ' ಹಾಗಂತೂ ಬೇಡವೇ ಬೇಡ. 'ಅವನ' ಕಣ್ಣತುಂಬ ಬರೀ ಚೂಪುಮುಳ್ಳು. ಇನ್ನ್ಯಾರ ಹಾಗೆ ?

ಹಾಳಾದವನು ಹೇಗಾದರೂ ಇರಲೊಲ್ಲನೇಕೆ, ಈಗಂತೂ ಪುಣ್ಯಕ್ಕೆ ನಿದ್ರೆ ಬರತೊಡಗಿದೆ....

ಏ ದೇಸಾಯಿ, ಈ ಹೊತ್ತಿನಲ್ಲಿ ಸುಳ್ಳೇ ನೆನಪಿಗೆ ಬಂದು ಕಾಡಬೇಡ ಹೋಗು, ನಡೆ.

—ಶಾಂತಿ ಗಟ್ಟಿಯಾಗಿ ಮುಸುಕೆಳೆದುಕೊಂಡಳು.

❖ ❖ ❖

# ಅತಿಥಿ

"ಶೀಲಾ ದೇಸಾಯಿ",

"ಪ್ರೆಜೆಂಟ್ ಮ್ಯಾಡಂ".

"ಶಾಂತಾ ಪಾಟೀಲ",

"ಪ್ರೆಜೆಂಟ್ ಮ್ಯಾಡಂ",

"ಸರೋಜಿನಿ ದೇಶಪಾಂಡೆ",

"................"

"ಸರೋಜಿನಿ ದೇಶಪಾಂಡೆ",

"................"

– ಹಾಜರಿ ಪುಸ್ತಕದಿಂದ ತಲೆಯೆತ್ತಿ ಒಮ್ಮೆ ಸುತ್ತಲೂ ದೃಷ್ಟಿ ಹಾಯಿಸಿದಳು ಪ್ರೊ. ಲೀಲಾವತಿ. ಸರೋಜಿನಿ ಕಾಣಲಿಲ್ಲ. ಯಾಕೋ ಅವಳಿಗೆ ಒಮ್ಮೆಲೇ ಎಲ್ಲಾ ಹುಡುಗಿಯರ ಮೇಲೂ ವಿಪರೀತ ಸಿಟ್ಟು ಬಂದಿತು. ಟೇಬಲ್ ಮೇಲೆ ವಿನಾಕಾರಣ ಕೈ ನೋಯುವ ಹಾಗೆ ಒಮ್ಮೆ ಗುದ್ದಿ ಗರ್ಜಿಸಿದಳು, "Where is she ? ಆಕೀಗೇನ ಯಾರೂ ಹೇಳವ್ರು-ಕೇಳವ್ರು ಇದ್ದಾಂಗ ಕಾಣ್ಸೂದಿಲ್ಲ. ನಿನ್ನೇನೂ ತಡಾ ಮಾಡೇ ಬಂದಳು. ಅಟೆಂಡನ್ಸ್ ಹೊತ್ತಿಗೆ ಇಲ್ಲೆ ಇರಬೇಕೆನ್ನೂದು ಗೊತ್ತದನೊ ಇಲ್ಲೋ ? ಹಾಸ್ಟೆಲಿನ್ಯಾಗ ಇದ್ದ ಮ್ಯಾಲ ರೂಲ್ಸು ಅಂದರ ರೂಲ್ಸು. ರಾತ್ರಿ ಎಂಟ ಘಂಟೇದ ತನಕಾ ತಿರಗ್ಯಾಡೂದು ಅಂದ್ರೇನು ? ನೀವೇನಿಲ್ಲೆ ಕಲೀಲಿಕ್ಕೆ ಬಂದೀರೋ ಏನ ಮಜಾ ಮಾಡಲಿಕ್ಕೊ ? ಅಂಥಾ ಅವಶ್ಯ ಕೆಲಸ ಇದ್ದರ ನಾ ದೆವ್ವನ್ಹಾಂಗ ಸೂಪರಿಂಟೆಂಡೆಂಟ ಜೀವಂತ ಇದ್ದೀನಿ. ನನಗ ಹೇಳಿ ಹೋಗಲಿಕ್ಕೆ ಏನಾಗತದ ನಿಮಗ ?"

ಉತ್ತರ ಬರಲಿಲ್ಲ. ದರಿದ್ರ ಹುಡುಗಿಯರು ಒಬ್ಬರನ್ನೊಬ್ಬರು ನೋಡಿ ಕಣ್ಣು ಮಿಟುಕಿಸುತ್ತಿದ್ದಾರೆ. ತಾನು ಎದುರಿಗೆ ನಿಂತಿರಲಿಕ್ಕೇ ಎಷ್ಟು ಧೈರ್ಯ ಇವರಿಗೆ ! ಇಷ್ಟು ಬೈದರೂ ನಾಚಿಕೆಯಿಲ್ಲವಲ್ಲ ! ಆದರೆ ಈ ಸರೋಜಿನಿ ಎಲ್ಲಿಗೆ ಹೋದಳು ? ಮತ್ತೆ ಆ ತನ್ನ ಎತ್ತರ ಬಾಯ್‌ಫ್ರೆಂಡ್ ಜೊತೆ ತಿರುಗಾಡಲು ಹೋಗಿರಬಹುದೇ ? ಛೇ, ಅವಳ ಉದ್ಧಟತನ ಮಿತಿಮೀರುತ್ತಿದೆ. ತಾನಿಷ್ಟು ಬೈದರೂ ಲಕ್ಷ್ಯವಿಲ್ಲವಲ್ಲ ಅವಳಿಗೆ ! ಈ ಹುಡುಗಿಯರೇ ಇಷ್ಟು ; ಯಾರಾದರೂ ಗಂಡುಹುಡುಗರು ನಾಯಿಯ ಹಾಗೆ ಬಾಲ

ಅಲ್ಲಾಡಿಸುತ್ತಾ ತಮ್ಮ ಹಿಂದಿಂದೆ ತಿರುಗಿದರೆ ಸಾಕು, ಎಲ್ಲಾ ಮರೆತುಬಿಡುತ್ತಾರೆ. ಇವರಿಗೆ ಬುದ್ಧೀ ಹೇಳುವದು ವಾರ್ಡನ್ ಆಗಿರುವ ತನ್ನ ಕರ್ತವ್ಯ.

ಎತ್ತರದ ದನಿಯಲ್ಲೇ ಮುಂದುವರಿಸಿದಳು ಪ್ರೊ. ಲೀಲಾವತಿ, "ನಾ ನಿಮಗ ಸ್ಪಷ್ಟ ಹೇಳಿರತೀನಿ. ಇಂಥಾದೆಲ್ಲಾ ಹಾಸ್ಟೆಲಿನೊಳಗ ನಾ ನಡಸಿಗೊಡಲಿಕ್ಕಿಲ್ಲ. ನಾಳಿನಿಂದ ನಿಮಗ ಎಲ್ಲೆರs ಹೋಗೂದಿದ್ರ ನನಗ ಹೇಳಿ ಹೋಗತಕ್ಕದ್ದು. ತಡಾ ಆಗಿ ಬಂದ್ರ ಬಾಗಲಾನೇ ತಗೀಬ್ಯಾಡಂತ ನಾ ಬಸ್ಯಾಗ ಹೇಳಿಬಿಡತೀನಿ. ಒಂದ ಹೋಗಿ ಒಂದ ಆತಂದ್ರ ನಾ ಜವಾಬ್ದಾರ ಆಗಬೇಕಾಗತದ. ನಿಮಗೇನು ? ನೆನಪಿನ್ಯಾಗಿಟಗೊಳ್ರಿ ನಾ ಹೇಳಿದ್ದು. ತಿಳೀತಿಲ್ಲೊ ?"

....ಎಷ್ಟು ಸೊಕ್ಕು ಈ ಹುಡುಗಿಯರಿಗೆ ! ತಾನಿಷ್ಟು ಗಂಟಲು ಹರಿದುಕೊಂಡರೂ ಒಬ್ಬಳೂ 'ಹ್ಞೂ' ಅನ್ನಲಿಲ್ಲ. ಮುಖ ಕೆಳಗೆ ಮಾಡಿ ಹಲ್ಲು ಕಿಸಿಯುತ್ತಿದ್ದಾಳೆ ಆ ಮೂಲೆಯಲ್ಲಿ ನಿಂತವಳು. ಇವರಿಗೆ ಏನಾದರೂ ಶಿಕ್ಷೆ ವಿಧಿಸಬೇಕು. ಅಂದಾಗಲೇ ದಾರಿಗೆ ಬರುತ್ತಾರೆ.

"ಸರೋಜಿನಿ ಬಂದ ಕೂಡ್ಲೇ ನನಗೆ ಭೆಟ್ಟ್ಯಾಗಂತ ಹೇಳ್ರಿ ಆಕೀಗೆ."

–ಹಾಜರಿ ಪುಸ್ತಕವನ್ನು ಟೇಬಲ್ ಮೇಲೇ ಬಿಟ್ಟು ಪ್ರೊ. ಲೀಲಾವತಿ ತನ್ನ ರೂಮಿಗೆ ಬಂದು ದೀಪ ಹಾಕಿ ಉಸ್ಸೆಂದು ಕುರ್ಚಿಯ ಮೇಲೆ ಕುಳಿತಳು.

ಹಲವಾರು ಪತ್ರಗಳು ಟೇಬಲ್ ಮೇಲೆ ; "To ಪ್ರೊ. ಮಿಸ್ ಲೀಲಾಬಾಯಿ ನಾಯಿಕ, ಎಂ. ಎಸ್ಸಿ."

ಥೂ, ಯಾಕೆ ತನ್ನ ಹೆಸರಿಗೆ 'ಬಾಯಿ' ಸೇರಿಸುವರೋ ಪತ್ರ ಬರೆಯುವ ಮುಠ್ಠಾಳರು ? ಅದೇನು ಗೌರವವಾಚಕವೇ ? ಇದ್ದೀತು. ಆದರೆ ತಾನು ನಲವತ್ತೈದು ದಾಟಿರುವೆನೆಂದು ನೆನಪಿಸಿಕೊಡುವ ಈ 'ಬಾಯಿ' ಕಂಡರೆ ತನಗೇಕೋ ಬಹಳ ಸಿಟ್ಟು. ಆ ಪತ್ರ ಓದುವ ಮನಸ್ಸೇ ಆಗುವದಿಲ್ಲ. ಪತ್ರ ಬಂದು ಇಲ್ಲಿ ಬಿದ್ದು ತಾಸಿನ ಮೇಲಾಗಿದೆ. ಆದರೂ ಒಡೆದು ಓದುವ ಆತುರವಿಲ್ಲ. ಮೇಲೆ 'From' ಎಂದಲ್ಲಿ ಯಾವುದೋ ಸ್ಕೂಲಿನ ಸಿಕ್ಕಾ ಇದೆ. ಯಾವುದಾದರೂ ಕಾರ್ಯಕ್ರಮಕ್ಕೆ ಅತಿಥಿಯಾಗಿ ತನ್ನನ್ನು ಆಮಂತ್ರಿಸಿರಬೇಕು. ಅದಕಿಂತ ಹೆಚ್ಚಿನದು ಏನೂ ತನಗೆ ಬರುವ ಯಾವ ಪತ್ರಗಳಲ್ಲೂ ಇರುವುದೇ ಇಲ್ಲ.

ಮುಂಜಾನೆ ಅಭ್ಯಾಸ ಮಾಡುವುದು ಬಿಟ್ಟು, ಅಥವಾ ಎದುರಿಗೆ ಪುಸ್ತಕವಿದ್ದರೂ ರಸ್ತೆಯ ಮೇಲೆ ಕಣ್ಣು ನೆಟ್ಟು, ಹಾಸ್ಟೆಲಿನ ಗೇಟಿನ ಹೊರಗೆ ದೂರ ಆ ಖಾಕಿ ಡ್ರೆಸ್ಸಿನ ಪೋಸ್ಟಮನ್ ಕಾಣಿಸಿದಾಗ ಉಟ್ಟ ಸೀರೆಯ ಪರಿವೆಯೂ ಇಲ್ಲದೆ ಹೊರಬಾಗಿಲ ವರೆಗೆ ಓಡಿ ಹೋಗುತ್ತಾರಲ್ಲ ಈ ಹುಡುಗಿಯರು. ಅವರಿಗೆ ಬರುವ

ಪತ್ರಗಳಲ್ಲಿ ಏನಿರುತ್ತದೆ ? ದಪ್ಪ-ದಪ್ಪಗಿನ ಕವ್ಹರುಗಳನ್ನು ಬಿಗಿಯಾಗಿ ಎದೆಗೊತ್ತಿಕೊಂಡು ಓಡಿ ರೂಮಿಗೆ ಹೋಗಿ ಕಾಟಿನ ಮೇಲೆ ಡಬ್ಬ ಬಿದ್ದು ತಾಸುಗಟ್ಟಲೆ ಓದುತ್ತಾರಲ್ಲ, ಏನಂಥ ಬ್ರಹ್ಮಾಂಡ ಬರೆದಿರುತ್ತದೆ ಆ ಪತ್ರಗಳಲ್ಲಿ ? ಎಲ್ಲಾ ಬರೇ ನಾನ್‌ಸೆನ್ಸ್. ಇಂದು ಸಂಜೆ ಗೇಟಿನಲ್ಲೆ ನಿಂತು ಪತ್ರ ಓದುತ್ತಾ ಸುತ್ತಲಿನ ಯಾರ ಪರಿವೆಯೂ ಇಲ್ಲದೆ ಒಬ್ಬಳೇ ನಗುತ್ತಿದ್ದಳು ಸರೋಜಿನಿ. ಅವಳಂತೂ ವಿಪರೀತ ಸೆಂಟಿಮೆಂಟಲ್. ಒಂದೇ ಊರಲ್ಲಿ ಇದ್ದರೂ ಅವಳ ಆ ಗೆಳೆಯ ದಿನಾ ಪತ್ರ ಬರೆಯುತ್ತಾನೆ. ಅವಳಿಗೆ. ಒಮ್ಮೆ (ಒಮ್ಮೆ ಏಕೆ, ಎರಡು-ಮೂರು ಸಲವಿರಬೇಕು), ಅವಳಿಲ್ಲದಾಗ ಅವಳ ಹೆಸರಿಗೆ ಬಂದ ಪತ್ರವನ್ನು-ಯಾರೂ ನೋಡುತ್ತಿರಲಿಲ್ಲವೆಂದು ಖಾತ್ರಿ ಮಾಡಿಕೊಂಡು–ತಾನು ರೂಮಿಗೆ ತಂದು ಓದಿರಲಿಲ್ಲವೆ ? ಥೇಟ್ ಹಿಂದೀ ಸಿನೇಮಾ ನೋಡಿದಂತಾಗಿತ್ತು ಆ ಪತ್ರ ಓದಿದಾಗ. ದಿನಾ ಸಂಜೆ ಭೆಟ್ಟಿಯಾದಾಗ ಎದುರಾ ಎದುರು ಮಾತಾಡಿದರೂ ಮತ್ತೆ ಮುಂಜಾನೆ ಎದ್ದು ಪತ್ರ ಬರೆಯುತ್ತಾನೆ ಆ ಮೂರ್ಖ, ಗಂಡುಹುಡುಗರ ಹಾಸ್ಟೆಲಿನಿಂದ, ಅದೂ ಬರೇ ರಾತ್ರಿ ತಾನು ಕಂಡ ಹುಚ್ಚುಚ್ಚಾರ ಕನಸುಗಳ ಬಗ್ಗೆ. ಎದೆಯಲ್ಲೇನೋ ವಿಚಿತ್ರ ನೋವು ಉಂಟಾದ ಅನುಭವ ತನಗೆ. ಅಂದು ರಾತ್ರಿ ಬಹಳ ಹೊತ್ತು ನಿದ್ರೆಯೇ ಬರಲಿಲ್ಲ. ತನಗೇಕೋ ಅಂದಿನಿಂದ ಸರೋಜಿನಿಯನ್ನು ಕಂಡರೆ ಸಿಟ್ಟು ಬೆಂಕಿ.

"May I come in Madam ?"

–ಬಾಗಿಲಿನಿಂದ ಮೆತ್ತಗಿನ ಧ್ವನಿ. ಅವಳೇ ಇರಬೇಕು. ಇಷ್ಟು ಹೊತ್ತು ಅವನ ಜೊತೆ ತಿರುಗಿ ಈಗ ಬಂದಿದ್ದಾಳೆ.

ಕೈಯಲ್ಲಿಯ ಪತ್ರವನ್ನು ಬಿಗಿಯಾಗಿ ಹಿಚುಕಿದಳು ಪ್ರೊ. ಲೀಲಾವತಿ, "ಯೆಸ್."

ಅಳುಕುತ್ತ ಒಳಗೆ ಬಂದಳು ಸರೋಜಿನಿ. ಒಂದುಕ್ಷಣ ಬೈಯುವುದನ್ನು ಮರೆತು ಅವಳನ್ನೇ ನೋಡಬೇಕೆನಿಸಿತು : ಕೆಂಪು ಜಾರ್ಜೆಟ್ ಸೀರೆಯಲ್ಲಿ ಅವಳಿಂದು ನಿಜವಾಗಿಯೂ ಚೆಂದ ಕಾಣಿಸುತ್ತಿದ್ದಾಳೆ. ತಲೆಯಲ್ಲೊಂದು ಕೆಂಪುಗುಲಾಬಿ, ಅವನು ಕೊಟ್ಟಿದ್ದು (ಮುಡಿಸಿದ್ದು ?) ಇರಬಹುದೇ ?

ಒಮ್ಮೆಲೆ ಬಿರುಸಾಯಿತು ವಾರ್ಡನ್ ಧ್ವನಿ, "ಎಲ್ಲಿಗೆ ಹೋಗಿದ್ದೆ ?" ನೆಲ ಕೆರೆಯುತ್ತ ತಲೆತಗ್ಗಿಸಿ ನಿಂತಿದ್ದಳು ಸರೋಜಿನಿ. ಎಂಥದೋ ಸವಿ ಅನುಭವದ ನೆನಪು-ನೆರಳು ಇನ್ನೂ ಅವಳ ಕಣ್ಣು-ಕೆನ್ನೆ-ತುಟಿ, ಅಷ್ಟೇ ಏಕೆ, ಇಡೀ ದೇಹದ ತುಂಬ ತುಂಬಿ ಸೂಸುತ್ತಿದೆ. ಮಾತಾಡುವುದು ಅಸಾಧ್ಯ, ಅನಗತ್ಯ ಎಂಬ ಭಾವವಿದೆ ಅವಳಲ್ಲಿ.

"ಸರೋಜಿನಿ, ಕಡೀಸರೆ ನಿನಗ ವಾರ್ನಿಂಗು ಕೊಡ್ತೇನಿ. ಹಾಸ್ಟೆಲಿಗೆ ರಾತ್ರಿ ತಡಾ ಮಾಡಿ ಬಂದ್ರ ಇನ್ನ ನಡಿಯೂ ಹಾಂಗಿಲ್ಲ. ನೀಯೇನ ಅಭ್ಯಾಸಗಿಭ್ಯಾಸ ಎಲ್ಲಾ ಬಿಟ್ಟs

ಬಿಟ್ಟೀ ಅಂತ ಕಾಣಸ್ತದ. ಬರೇ ತಿರಗೂದಃ ಬೇಕಾಗಿತ್ತಂದ್ರ ಕಾಲೇಜ ಬಿಟ್ಟಬಿಡು. ನಿಮ್ಮಪ್ಪನ ರೊಕ್ಕಾ ಯಾಕ ಸುಮ್ನ ಹಾಳ ಮಾಡತೀ ?"

ಸರೋಜಿನಿಯ ಮುಖದ ಕೆಂಪು ಕ್ರಮೇಣ ಬೆಳ್ಳಗಾಗತೊಡಗಿದೆ. ತನಗೇಕೆ ಅದರಿಂದ ಹುರುಪು ಏರುತ್ತಿದೆಯೋ !

"ಆ ನಿನ್ನ ಗೆಳೆಯಾಗೇನ ಉದ್ಯೋಗಿಲ್ಲೇನು ? ಬರೇ ನಿನ್ನ ಜೋಡಿ ಅಡ್ಡಾಡಿದರ ಪರೀಕ್ಷಾ ಹ್ಯಾಂಗ ಪಾಸಾಗತಾನಂತ ? ನಾಳೆ ಅವ್ನೇನು ಬೂಟ್‌ಪಾಲಿಶ್ ಮಾಡಿ ಹೊಟ್ಟೀ ತುಂಬಿಕೋತಾನಂತೇನು ?"

ಸರೋಜಿನಿಯ ಕಣ್ಣು ತುಂಬಿ ಬರತೊಡಗಿವೆ. ಇವಳು ಅತ್ತಾದರೂ ಅಳಲಿ. ಅಂದರೆ ಸಾಯಂಕಾಲದಿಂದಲೂ ವಿಪರೀತವಾದ ಎದೆನೋವು ಸ್ವಲ್ಪವಾದರೂ ಕಡಿಮೆಯಾದೀತು. ರಾತ್ರಿ ಸುಖನಿದ್ರೆ ಬಂದೀತು.

"ಹೋಗ್ಹೋಗು, ಅಭ್ಯಾಸ ಮಾಡು. ನಿನ್ನಂಥಾ ಒಂದಿಬ್ರು ಹುಡಿಗ್ಯಾರು ಕೂಡಿ ಹಾಸ್ಟೆಲಿನ ಹೆಸರು ಕೆಡಿಸಿದ್ರೀರಿ."

ಓಡುತ್ತಲೇ ಹೋದಳು ಆಕೆ. ಹಿಂದಿನಿಂದ ಆಕೆಯ ಬಳುಕುವ ದೇಹ, ಆ ಸಣ್ಣ ನಡು–ನೋಡಿದಾಗ ಮತ್ತೆ ಸಿಟ್ಟು ಬರುತ್ತಿದೆ ತನಗೆ.

ಬರಬರುತ್ತ ತಾನು ದಪ್ಪಗಾಗುತ್ತಿದ್ದೇನೆ. ಎಷ್ಟು ಊಟ ಕಡಿಮೆ ಮಾಡಿದರೂ, ಹಾಲು ಕುಡಿಯುವುದು ಬಿಟ್ಟರೂ ಇತ್ತೀಚೆ ಯಾಕೋ ಮೈ ಸ್ಥೂಲವಾಗತೊಡಗಿದೆ. ಮೊನ್ನೆ ಕಾಲೇಜಿನಲ್ಲಿ ಕ್ಯಾಂಟೀನಿನ ಹತ್ತಿರ ನಿಂತಿದ್ದ ಒಬ್ಬ ಹುಡುಗ ತಾನಲ್ಲಿ ಹಾಯ್ದು ಬರುವಾಗ ಪಿಸುಧ್ವನಿಯಲ್ಲಿ 'ಟುನ್‌ಟುನ್' ಎಂದದ್ದು ತನಗೆ ಕೇಳಿಸದಂತೆ ನಟಿಸಿದರೂ ಕೇಳಿಸಿದ್ದು ಸುಳ್ಳೆ ? ಹುಡುಗರ ಮಾತಿಗೆ ಲಕ್ಷ ಕೊಡಬಾರದು ನಿಜ. ಆದರೂ ಇನ್ನು ತೂಕ ಕಡಿಮೆ ಮಾಡಿಕೊಳ್ಳಲು ಸೀರಿಯಸ್ಸಾಗಿ ಪ್ರಯತ್ನ ಮಾಡಬೇಕು. ಈ ಸರೋಜಿನಿಯ ಸಣ್ಣ ನಡು ನೆನಪಾದರೆ ಈಗ ಮತ್ತೆ ವಿನಾಕಾರಣ ಸಿಟ್ಟು ಬರುತ್ತದೆ. ಅವಳು ಹಾಳಾಗಿ ಹೋಗಲಿ ; ತಾನದನ್ನು ಮರೆಯಬೇಕು. ಅವಳ ನಡುವನ್ನು, ಆ ಕೆಂಪುಗುಲಾಬಿಯನ್ನು, ಅವಳ ಎತ್ತರ (ಹ್ಯಾಂಡ್‌ಸಮ್ ?) ಗೆಳೆಯನನ್ನು, ಆತ ಬರೆಯುವ ಪ್ರೇಮಪತ್ರಗಳನ್ನು ಈಗ ಮರೆಯಲೇಬೇಕು. ಇಲ್ಲವಾದರೆ ನಾಳೆ ಆ ಸ್ಕೂಲಿಗೆ ಅತಿಥಿಯಾಗಿ ಹೋಗಿ ಮಾಡಲಿರುವ ಭಾಷಣದ ಬಗ್ಗೆ ವಿಚಾರಗಳೇ ಬರುವುದಿಲ್ಲ.

ನಾಳೆ ಹುಡುಗಿಯರ ಹೈಸ್ಕೂಲಿನ ವಾರ್ಷಿಕ ಸ್ನೇಹಸಮ್ಮೇಳನದ ಅತಿಥಿ ತಾನು ; ನಾಡದು ಮಹಿಳಾಮಂಡಳದಲ್ಲಿನ ಸಂಗೀತ ಕಾರ್ಯಕ್ರಮದ ಸನ್ಮಾನ್ಯ ಅತಿಥಿ.

ಏನೆಂದು ಭಾಷಣ ಮಾಡುವುದು ನಾಳೆ ? ಹುಡುಗಿಯರ, ಅಂದರೆ ಸ್ತ್ರೀಯರ

ಹೊಣೆಗಾರಿಕೆಯು ಬಗ್ಗೆ ? ಅವರು ಸ್ವತಂತ್ರ ವಿಚಾರದವರಾಗಬೇಕು, ಗಂಡಸರ ದಾಸ್ಯದಲ್ಲಿ ಬಿದ್ದು ಕೊಳೆಯಬಾರದು, ಗಂಡಸರ ದಬ್ಬಾಳಿಕೆಯನ್ನು ಸಹಿಸಬಾರದು. ಗಂಡಸರ ಅಧಿಕಾರವನ್ನು ವಿರೋಧಿಸಬೇಕು. ಎಂದೆ ? ತಾನು ಎಲ್ಲಿ ಅತಿಥಿಯಾಗಿ ಹೋದರೂ ಇದೇ ಬಗೆಯ ಭಾಷಣ ಮಾಡುತ್ತೇನೆಂದು, ಸುಮ್ಮನೆ ಇದರದೊಂದು ಟೇಪ್‌ರಿಕಾರ್ಡು ಮಾಡಿಸಿಬಿಡೆಂದು ಮೊನ್ನೆ ತನ್ನ ಅಣ್ಣ ಚೇಷ್ಟೆ ಮಾಡಿದ್ದನಲ್ಲವೆ ? ಅವನೂ ಅಯೋಗ್ಯ. ಅವನಿಗಾದರೂ ಏನು ತಿಳಿಯುತ್ತದೆ ? ಬುದ್ಧಿಯಿಲ್ಲದೆ ಏನಾದರೊಂದು ಬೊಗಳುತ್ತಾನೆ. ಗಂಡಸಲ್ಲವೆ ಮತ್ತೆ ?

"ಗಂಡಸರ ಮ್ಯಾಲ ಇಷ್ಟ್ಯಾಕ ಕೆಂಡಾ ಕಾರತೀರಿ ನೀವು ?"– ಕಾಲೇಜಿನಲ್ಲಿ ಚರ್ಚಾಕೂಟ ನಡೆದಾಗ ತನ್ನ ಸಹೋದ್ಯೋಗಿಯೊಬ್ಬ ಕೇಳಿದ್ದ ಮೊನ್ನೆ–ಮೊನ್ನೆ. ಯಾಕೋ ! ಗೊತ್ತಿಲ್ಲ. ಒಟ್ಟು ಗಂಡುಪ್ರಾಣಿಯನ್ನು ನೋಡಿದರೆ ತನಗೆ ಹೇಳತೀರದ ಸಿಟ್ಟು ಬರುತ್ತದೆ. ಅವರು ಹೆಂಗಸರ ಮುಗ್ಧತೆಯ ದುರುಪಯೋಗ ತೆಗೆದುಕೊಳ್ಳುತ್ತಾರೆಂದೂ, ಸರ್ವಶಕ್ತಿಯನ್ನು ಪ್ರಯೋಗಿಸಿ ತಾನದನ್ನು ವಿರೋಧಿಸಬೇಕೆಂದೂ ಅನಿಸುತ್ತದೆ. ಈ ಪುರುಷದ್ವೇಷ ಈಗ ಹೆಚ್ಚಾಗತೊಡಗಿದೆಯೆ ? ಅಥವಾ ಮೊದಲಿನಿಂದಲೂ ಇತ್ತೋ ? –ಮೊದಲು ? ತಾನು ಪ್ರೊಫೆಸರ ಆಗುವ ಮೊದಲು ? ವೈಸ್ ಪ್ರಿನ್ಸಿಪಾಲ ಆಗುವ ಮೊದಲು ? ಹಾಸ್ಟೆಲಿನ ವಾರ್ಡನ್ ಆಗುವ ಮೊದಲು ? ಇಪ್ಪತ್ತು ವರ್ಷಗಳ ಮೊದಲು ?.... ತಾನು ಎಂ. ಎಸ್‌ಸಿ. ಗೆ ಓದುತ್ತಿದ್ದಾಗ ?

"ಮಿಸ್ ನಾಯಿಕ, ಈ ಸರೆ ದೀಪಾವಳಿ ಸೂಟಿಯೊಳಗ ಹಂಪಿಗೆ ಟ್ರಿಪ್ ಇಡೋಣಂತ ವಿಚಾರ ಮಾಡೀವಿ. ನೀವು ಬರ್‍ತೀರಲ್ಲಾ ?"

–ಯಾರು ಕೇಳಿದ್ದು ?

"ಮಿಸ್ ಲೀಲಾವತಿ, ಈ ಹಳದೀ ಸೀರಿಯೊಳಗ ನೀವು ವಂಡರಫುಲ್ ಕಾಣಸ್ತೀರಿ."

–ಯಾರು ಹೇಳಿದ್ದು ?

"ಮಿಸ್ ಲೀಲಾ, ಭಾಳ ದಿವಸದಿಂದ ಕೇಳಬೇಕಂದಿದ್ದ ಪ್ರಶ್ನೆ ಇವತ್ತ ಧೈರ್‍ಯಾ ಮಾಡಿ ಕೇಳಲಿಕ್ಹತ್ತೀನಿ. ನೀವು ನನ್ನ ಲೈಫ್-ಪಾರ್ಟನರ್ ಆಗತೀರಾ ?"

–ಓಹ್, ಎಲ್ಲಿಂದ ಬಂದಿತು ಈ ಧ್ವನಿ ?

ಅದು ಬಂದದ್ದು –ಈಗಲ್ಲ, ಇಪ್ಪತ್ತು ವರ್ಷಗಳ ಹಿಂದೆ –ತನ್ನ ಪ್ರ್ಯಾಕ್ಟಿಕಲ್ಸ್‌ದ ಪಾರ್ಟನರ್ ಸದಾನಂದನಿಂದ. ಎಮ್. ಎಸ್‌ಸಿ.ಯಲ್ಲಿ ಪ್ರ್ಯಾಕ್ಟಿಕಲ್ಸ್ ಮಾಡುವಾಗ ತನ್ನ ಟೇಬಲ್‌ಮೇಟ್ ಆಗಿದ್ದ ಆತ.

ಆತನೂ ಗಂಡಸೇ. ತಾನಾತನನ್ನು ದ್ವೇಷಿಸಿದ್ದೆನೇ ?

—ಎದ್ದು ರೂಮಿನ ಬಾಗಿಲು ಮುಚ್ಚಿ ಪ್ರೊ. ಲೀಲಾವತಿ ಅಂದಿನ ಪತ್ರಗಳಿಗೆ ಉತ್ತರ ಬರೆಯಲೆಂದು ಕಾಗದ-ಪೆನ್ನು ಹಿಡಿದು ಕುಳಿತಳು.

ಕಳೆದ ಕೆಲ ತಿಂಗಳುಗಳಿಂದ ಹಲವಾರು ಕಡೆ ಅತಿಥಿಯಾಗಿ ಹೋಗಿ-ಹೋಗಿ ಬೇಸರ ಬಂದಿದೆ. ಇನ್ನು ಕೆಲವು ದಿವಸವಾದರೂ ಯಾವ ಆಮಂತ್ರಣವನ್ನೂ ಸ್ವೀಕರಿಸಬಾರದು. 'ಇಲ್ಲ, ಆಗುವುದಿಲ್ಲ' ಎಂದು ಉತ್ತರಿಸಿಬಿಟ್ಟರೆ ತೀರಿತು. ತೊಂದರೆ ತಪ್ಪಿತು ; ಕಾಟ ಕಳೆಯಿತು.

ಅಂದೊಮ್ಮೆ ಸದಾನಂದನ ಪ್ರಶ್ನೆಗೆ 'ಇಲ್ಲ, ಆಗುವುದಿಲ್ಲ' ಎಂದುತ್ತರಿಸಿದ್ದೆ ತಾನು. ಯಾಕೆ ? ಈ ಇಪ್ಪತ್ತು ವರ್ಷಗಳಲ್ಲಿ ಲೆಕ್ಕವಿಲ್ಲದಷ್ಟು ಸಲ 'ಯಾಕೆ' ? ಎಂದು ತನ್ನನ್ನು ತಾನೇ ಕೇಳಿಕೊಂಡುದುಂಟು. ಯಾಕೆ ? ತಂದೆ ಬೇಡವೆಂದರೆಂದೇ ? ಸ್ವಲ್ಪ ಮಟ್ಟಿಗೆ ಹೌದು ; ತನಗೆ ಮದುವೆಯಾಗದೆ ಒಂಟಿಯಾಗಿದ್ದು ಜೀವನವನ್ನೆದುರಿಸಬೇಕೆಂಬ ಉತ್ಸಾಹವಿತ್ತೆಂದೆ ? ಇತ್ತೇನೋ ! ಈಗಿಲ್ಲ ; ಸದಾನಂದನನ್ನು ತಾನು ಪ್ರೀತಿಸುತ್ತಿರಲಿಲ್ಲವೆಂದೆ ?— ಛೇ, ಇದೇನು ಹುಚ್ಚುಚ್ಚಾರ ವಿಚಾರ ಈ ರಾತ್ರಿ ಹೊತ್ತಿನಲ್ಲಿ ! ಮಾಡಬೇಕಾದ ಕೆಲಸ ಗುಡ್ಡದಷ್ಟಿದೆ. ಎಲ್ಲಾ ಬಿಟ್ಟು ಎಂದೋ ಒಮ್ಮೆ ಆಗಿ ಹೋದ ಏನೋ ಒಂದನ್ನು ನೆನೆಯುತ್ತ ಕೂಡಲು ತಾನೇನು ಈ ತನ್ನ ವಾರ್ಡಗಳ ಪೈಕಿ ಒಬ್ಬಳಾದೆನೇ !

ಭರಾ ಭರಾ ಪತ್ರ ಗೀಚಿ ಮುಗಿಸಿದಳು ಪ್ರೊ. ಲೀಲಾವತಿ. ನಂತರ ಎದ್ದು ಡೈನಿಂಗ್ ಹಾಲಿಗೆ ನಡೆದಳು.

ಇವತ್ತೇಕೋ ಹಸಿವೆಯಾಗಿದೆ. ಈ ಹುಡುಗಿಯರೆಲ್ಲ ಎಷ್ಟು ಮಜವಾಗಿ ಕೂಳು ಬಕ್ಕರಿಸುತ್ತಿದ್ದಾರಲ್ಲ, ಇವರ ಹೊಟ್ಟೆಯಲ್ಲಿ ಬಕಾಸುರನೇ ಇರಬೇಕು. ತನಗೆ ಮಾತ್ರ ಹೊಟ್ಟೆತುಂಬ ತಿನ್ನಲಿಕ್ಕೂ ಸ್ವಾತಂತ್ರ್ಯವಿಲ್ಲ. ಈಗಲೇ ತನ್ನ ತೂಕ ನೂರಾಎಂಬತ್ತು ಪೌಂಡುಗಳಾಗಿ ಹೋಗಿದೆ. ಇನ್ನು ಹೆಚ್ಚಾದರೆ ತೀರ ನಾಚಿಕೆಗೇಡು....

ಆರಾಮಾಗಿ ಕೂತು ಚಪಾತಿ ತಿನ್ನುತ್ತಿದ್ದಾಳೆ ಸರೋಜಿನಿ. ತಾನವಳಿಗೆ ಬೈಯುವುದು ಆಗಲೇ ಮುಗಿದಿದೆ. ಆದರೂ ಅವಳಿಷ್ಟು ನಿಶ್ಚಿಂತೆಯಾಗಿ ಕೂತು ಊಟ ಮಾಡುವದು ನೋಡಿದರೆ ಇನ್ನೊಂದಿಷ್ಟು ಏನಾದರೂ ಅಂದು ಹೋಗಬೇಕೆಂಬ ಆಸೆಯುಂಟಾಗುತ್ತದೆ. ಸ್ವಲ್ಪವೂ ತೂಕದ ಸಮಸ್ಯೆಯಿಲ್ಲವಲ್ಲ ಈ ಹಾಳಾದವಳಿಗೆ !

"ಏನs ಸರೋಜಿನಿ, ರಾತ್ರಿ ನಿದ್ದೀ ಮಾಡತೀಯೋ ಏನು ಬರೇ ಕನಸು ಕಾಣತಿರತೀಯೋ ?"

ಹುಡುಗಿಯರೆಲ್ಲ ನಕ್ಕರು. ತಾನೂ ಅದನ್ನು ನಗುತ್ತಲೇ ಹೇಳಿದ್ದರೂ ಆ

ನಗೆಯು ಕಹಿ ಸರೋಜಿನಿಯು ಗಮನಕ್ಕೆ ಬಂದಿದೆ. ಅವಳ ಮುಖ ಚಿಕ್ಕದಾಗಿದೆ. ಅಡ್ಡಿಯಿಲ್ಲ, ಹಸಿವು ಎಷ್ಟೋ ಕಡಿಮೆಯಾದಹಾಗಾಯಿತು.

ಎರಡು ನಿಮಿಷದ ಕೆಲಸ ಊಟ. ಈ ಹುಡುಗಿಯರು ಎರಡು ತಾಸು ಡೈನಿಂಗ್ ಹಾಲಿನಲ್ಲಿ ಕೂತಿರುತ್ತಾರಲ್ಲ, ಏನು ಕತ್ತೆ ಕಾಯುತ್ತಾರೋ !

ಎರಡು ನಿಮಿಷದ ಆ ಕೆಲಸ ಮುಗಿದಾದ ನಂತರ ಮಲಗುವ ಮೊದಲು ಮಾಡಿ ಮುಗಿಸಬೇಕಾಗಿರುವುದು ಇನ್ನೊಂದು ಮಹತ್ವದ ಕೆಲಸ– ರಾತ್ರಿಯ ರೌಂಡ ಹಾಕಿ ಬರುವುದು ಹಾಸ್ಟೆಲಿನಲ್ಲಿ. ಅಲ್ಲಷ್ಟು-ಇಲ್ಲಷ್ಟು ನಿಂತು, ಅವಳ ಸುದ್ದಿ ಇವಳಿಂದ ಕೇಳಿ, ಇವಳ ಸುದ್ದಿ ಅವಳಿಗೆ ಹೇಳಿ, ಯಾರ್‍ಯಾರಿಗೆ ಬಾಯ್ ಫ್ರೆಂಡ್ಸ್ ಇರುತ್ತಾರೋ ಅವರನ್ನೆಲ್ಲ ಕಾಳಜೀಪೂರ್ವಕವಾಗಿ ಒಂದು ನೆವ ಹುಡುಕಿ ತೃಪ್ತಿಯಾಗುವಂತೆ ಬೈಯ್ದು, ತನ್ನ ರೂಮು ಸೇರುವ ಹೊತ್ತಿಗೆ ರಾತ್ರಿ ಹನ್ನೊಂದು ಗಂಟೆಯಾಗಿರುತ್ತದೆ. ಆಗಲೇ ತನಗೆ ಸುಖನಿದ್ರೆ ಬರುವುದು. ಇದರಲ್ಲೆಂದೂ ಏನೂ ಕಡಿಮೆಯಾಗಕೂಡದು.

ಸಾಲಾಗಿದ್ದ ಬಾಗಿಲುಗಳು– ಕೆಲವು ಮುಚ್ಚಿವೆ, ಕೆಲವು ತೆರೆದಿವೆ, ಕೆಲವು ಅರ್ಧಮರ್ಧ ಮುಚ್ಚಿ ತೆರೆದಿವೆ. ಯಾವಯಾವವೋ ಇಂಗ್ಲಿಷ್, ಹಿಂದಿ, ನಡುನಡುವೆ ಕನ್ನಡ ಸಿನೆಮಾ ಹಾಡಿನ ಧ್ವನಿ ಕೇಳಿಬರುತ್ತವೆ. ಕಾಲಲ್ಲಿಯ ಸ್ಲಿಪರ್ಸ್ ಸದ್ದಾಗದ ಹಾಗೆ, ಒಳಗಿನಿಂದ ಕೇಳಿಬರುವ ಹುಡುಗಿಯರ ಪಿಸುಧ್ವನಿಗಳನ್ನು ಕದ್ದು ಆಲಿಸುತ್ತ, ಆ ಕಾರಿಡಾರ್‌ನೊಳಗಿನಿಂದ ನಡೆದು ಬರುವುದೆಂದರೆ ಪ್ರೊ. ಲೀಲಾವತಿಗೆ ಬಹಳ ಪ್ರೀತಿ. ಸುತ್ತಲೂ ಯಾರೂ ಇಲ್ಲವೆಂದು ಖಚಿತವಾದರೆ ಆಕೆ ಬಳುಕಿ ನಡೆಯುವ ಪ್ರಯತ್ನವನ್ನೂ ಮಾಡುತ್ತಾಳೆ.

ಅಲ್ಲ, ತನಗೇನು ಅಂಥ ಆಗಬಾರದ ವಯಸ್ಸಾಗಿದೆ ? ಮದುವೆಯಾದರೆ, ಹನ್ನೆರಡು ಮಕ್ಕಳಾದರೆ ಮಾತ್ರ ಹೆಂಗಸರು ಸೌಂದರ್ಯವನ್ನು ಕಳೆದುಕೊಂಡು ಮುದುಕಿಯರ ಹಾಗೆ ಕಾಣುವುದು. ತನಗೆ ಆ ಯಾವ ತಾಪತ್ರಯವೂ ಇಲ್ಲ. ತನ್ನ 'ಫಾರ್ಮು' ಕೆಡಲು ಕಾರಣವೇ ಇಲ್ಲ. ತಾನಿನ್ನೂ ಸಣ್ಣ ಹುಡುಗಿಯ ಹಾಗೆ ಕಾಣುವೆನೆಂದು ಮೊನ್ನೆ ಪ್ರಿನ್ಸಿಪಾಲರೇ ಹೇಳಲಿಲ್ಲವೆ ? ಹಾಗೆ ನೋಡಿದರೆ ತಾನೇನು ಅಂಥಾ ಪರಿ ದಪ್ಪಗೂ ಇಲ್ಲ....

ಕುಣಿತದ ನಡಿಗೆಯಲ್ಲಿ ಮುಂದುವರಿದಿದ್ದ ಪ್ರೊ. ಲೀಲಾನನ್ನು ಇಪ್ಪತ್ತನೇ ನಂಬರು ರೂಮಿನಲ್ಲಿಂದ ಕೇಳಿಬಂದ ಮಾತು ಹೊಡೆದು ನಿಲ್ಲಿಸಿದಂತಾಯಿತು.

'ಹಂಗಾರ ನಾಳೆ ಸಂಜೀನ್ಯಾಗ ಪಿಕ್ಚರಿಗೆ ಹೋಗೋದು ಡೆಫಿನಿಟ್ ಹೌದಲ್ಲೊ ? ದಾದೀಮಾ ಅಂತೂ ಲೇಟಾಗಿ ಬರತಾಳ.'

ಯಾರದು ಈ ಧ್ವನಿ ? ಇಂಗ್ಲೀಷ ಬಿ. ಎ. ಮಾಡುತ್ತಿರುವ ಲೂಸಿಯದೆ ?

ಹೌದು, ಇದು ಅವಳದೇ ರೂಮು. ಇದೇನು ನಡೆಸಿದ್ದಾಳೆ ಈ ಶೂರ್ಪನಖಿ ? ನಾಳೆ ತಾನಿಲ್ಲದಾಗ ರಾತ್ರಿ ಪಿಕ್ಚರಿಗೆ ಓಡುವ ಪ್ಲ್ಯಾನೇ ?

ಪ್ರೊ. ಲೀಲಾವತಿ ತಟಸ್ಥಳಾಗಿ ನಿಂತಲ್ಲೇ ನಿಂತಳು. 'ದಾದೀಮಾ' ಅಂತೆ. ಎಷ್ಟು ಸೊಕ್ಕು ಇವಳಿಗೆ ! ತಾನೇನು ಕಡೆತನಕ ಹೀಗೇ ಜ್ಯೂನಿಯರ್ ಬಿ. ಎ. ದಲ್ಲಿದ್ದಾಗಿನ ಹಾಗೆಯೇ ತೆಳುವಾಗಿ ಸ್ಮಾರ್ಟಾಗಿ ಇರುವೆನೆಂದು ತಿಳಿದಿದ್ದಾಳೋ ? ನನ್ನ ವಯಸ್ಸಿಗೆ ಇವಳೂ 'ದಾದೀಮಾ' ಆಗಳೇ ?

'ಲೇಟಾಗಿ ಬರತಾಳs ? ಯಾಕ ? ಆಕಿ ಎಂದರೆ ಲೇಟಾಗಿ ಬರತಾಳೇನು ! ಅಟೆಂಡನ್ಸ್‌ದ ಹೊತ್ತಿನಕಿಂತಾ ತಾಸು ಮೊದಲೇ ಬಂದು ಲೆಖ್ಖಾ ಹಾಕಿಕೋತ ಕೂತಿರತಾಳ-ಯಾರ್‍ನ ಬೈಯ್ಲಿ, ಯಾರ್‍ನ ಬಿಡ್ಲಿ ಅಂತ. ಇಷ್ಟಾಗಿ ಮ್ಯಾಲ ಲೇಟಾಗಿ ಬರಲಿಕ್ಕೆ ಆಕಿ ಹೋಗಬೇಕರs ಎಲ್ಲೆ ಪಾಪ !'' –ಮೊನ್ನೆ ಮೇದಲ್ಲಿಯಷ್ಟೆ ಮದುವೆಯಾಗಿ, ಡಾಕ್ಟರಾದ ಗಂಡನನ್ನು ಒಂದು ವರ್ಷದ ಮಟ್ಟಿಗೆ ಫಾರೆನ್ನಿಗೆ ಕಳಿಸಿ, ತನ್ನ ಬಿ. ಎ. ಮುಗಿಸಲೆಂದು ಬಂದವಳು ಜಯಲಕ್ಷ್ಮಿ. ಮದುವೆಯಾಗದೇ ಉಳಿದು ಜೀವನವನ್ನು ವ್ಯರ್ಥ ಸವೆಸುತ್ತಿರುವ ವಾರ್ಡನ್ ಬಗೆಗೆ ಸಹಾನುಭೂತಿ ಅವಳಿಗೆ. 'ಪಾಪ' ಅಂತೆ. ತಕ್ಷಣ ಒಳಗೆ ಹೋಗಿ ಎರಡು ಬಿಗಿಯಬೇಕೆನಿಸಿತು ಪ್ರೊ. ಲೀಲಾವತಿಗೆ. ಏ ಹುಡುಗಿ, ಮದುವೆ- ಮಕ್ಕಳು-ಸಂಸಾರ ಇವುಗಳನ್ನು ಹೆಣ್ಣುಕತ್ತೆಗಳೂ ಮಾಡುತ್ತವೆ, ವೈಸ್ ಪ್ರಿನ್ಸಿಪಾಲ್ ಆಗಲು, ಹಾಸ್ಟೆಲಿನ ವಾರ್ಡನ್ ಆಗಲು, ನನ್ನ ಹಾಗಿರಲು ಯೋಗ್ಯತೆ ಬೇಕು ಎಂದೆ. ತಿಳಿಯಿತೇನೆ ?

ಜಯಲಕ್ಷ್ಮಿಯು ವಾರ್ಡನ್ ಬಗೆಗೆ ತೋರಿದ ಮರುಕ ರೂಮಿನಲ್ಲಿ ನಗೆಯ ತೆರೆಗಳನ್ನೆಬ್ಬಿಸಿದೆ. ಮತ್ತೆ ಯಾವ್ಯಾವ ಚಾಂಡಾಲಿಯರಿರುವರೋ ಈ ಸಮ್ಮೇಲನದಲ್ಲಿ ? ಎಲ್ಲರೂ ಕೂಡಿ ನಾಳೆ ತನ್ನ ಕಣ್ಣಿಗೆ ಮಣ್ಣೆರಚಬೇಕೆಂದಿದ್ದಾರೆ. ಇವರ ಈ ಸಿನೆಮಾ ಯೋಜನೆಯನ್ನು ಮಣ್ಣುಗೂಡಿಸದಿದ್ದರೆ ತಾನು ಹುಟ್ಟಿದುದು ವ್ಯರ್ಥ.

ಈ ಲೂಸಿಗೆ ಎಲ್ಲಾ ಸುದ್ದಿ ಹೇಗೆ ಪತ್ತೆಯಾಗುವವೋ ಏನು ಮಣ್ಣೋ ! 'ನಾಳೆ ಆಕಿ ಆ ಹುಡಿಗ್ಯಾರ ಹೈಸ್ಕೂಲಿನ ಗ್ಯಾದರಿಂಗಿಗೆ ಚೀಫ್ ಗೆಸ್ಟ್ ಆಗಿ ಹೋಗಾಕಿ ಇದ್ದಾಳ. ಅಲ್ಲೆ ಭಾಷಣಾ-ಗೀಷಣಾ ಮುಗಿಸಿ, ಸ್ಕೂಲಿನ ಕಮೀಟಿ ಚೇರಮನ್‌ರ ಕಾರಿನ್ಯಾಗ ಕೂತು ಈಕಿ ಹಾಸ್ಟೆಲಿಗೆ ಬರಬೇಕಾದರ ರಾತ್ರಿ ಹತ್ತಘಂಟೇಅರ ಆಗತದ. ಅಷ್ಟರಾಗ ನಾವು ಬಂದಬಿಡೂಣಲಾ. ಹ್ಯಾಂಗೂ ಜಾರ್ಜ್ ತನ್ನ ಕಾರು ತರ್‍ತೀನಿ ಅಂತ ಹೇಳ್ಯಾನ. ಒಂಬತ್ತೂವರಿಗೇ ನಾವು ಹಾಸ್ಟೆಲು ಮುಟ್ಟಬಹುದು. ನೀವೇನಂತೀರಿ ?'

'ಜಾರ್ಜ್‌ನ ಕಾರಿನ್ಯಾಗ ನಾವ್ಯಾಕವಾ ಬರೂದು ? ಅವನಿಗೆ ಸಿಟ್ಟಬಂದೀತು.'

'ಛೆ, ಹಾಂಗೆಲ್ಲಾ ಅಂವಾ ಭಾಳ ವಿಶಾಲ ಮನಸ್ಸಿನವಾ ಇದ್ದಾನ.'

–ನೂರು ಹುಡುಗಿಯರ ಸ್ನೇಹವಿದ್ದೂ, ಎಲ್ಲರೊಂದಿಗೂ ಅಷ್ಟೇ 'ವಿಶ್ವಾಸ'ದಿಂದ ವರ್ತಿಸುವ ಈ ಜಾರ್ಜ್ ವಿಶಾಲ ಮನಸ್ಸಿನವನೇ ಹೌದು. ತಾನು ಸ್ಕೂಲ್ ಕಮಿಟಿ ಚೇರ್‌ಮನ್‌ರ ಕಾರಿನಲ್ಲಿ ಬಂದರೆ ತಪ್ಪಲ್ಲ. ಲೂಸಿ ಜಾರ್ಜ್‌ನ ಕಾರಿನಲ್ಲಿ ಬಂದರೆ ? ಅದು ? .... ಹಾಗೆ ನೋಡಿದರೆ ಈ ಹುಡುಗಿಯರದು ಬಹಳ ಸಂಕುಚಿತ ಬುದ್ಧಿ. ಏನೆಲ್ಲ ವಿಚಾರಗಳು ಇವರಿಗೆ....

'ಹಂಗಾರ ನಾಳೆ ದಾದೀಮಾ ಗೆಸ್ಟ್ ಆಗಿ ಹೋಗತಾಳಂತೇನು ? ಹೋಗ್ಲಿ ಬಿಡು. ಬರೇ ದಿನಾ ಒಂದ ಕಡೆ ಹೋಗಿ ಗೆಸ್ಟ್ ಆಗಿ ಭಾಷಣಾ ಮಾಡಿ ಬರೂದರಾಗೇ ಈಕೀ ಜೀವನ ಕಳೀತು. ಒಂದ ಮನೀ ಇಲ್ಲ, ಮಾರಿಲ್ಲ, ಸುಡಗಾಡಸಿದ್ಧರ್ಾಂಗ ಗೆಸ್ಟ್ ಆಗಿ ತಿರಗೂದರಾಗs ಇರ್ತಾಳ.'

–ಪ್ರೊ. ಲೀಲಾವತಿಯ ರಕ್ತ ಕುದಿಯಿತು. ಆದರೆ ಯಾಕೋ ಒಳಗೆ ಹೋಗಿ ಹುಡುಗಿಯರನ್ನು ಬೈಯುವ ಅವಳ ಸಂಕಲ್ಪ ತಕ್ಷಣವೆ ತಣ್ಣಗಾಯಿತು. ಒಮ್ಮೆಲೆ ಸೋತು ಹೋಗುತ್ತಿರುವ ಅನುಭವವಾಗಿ ಪ್ರಯತ್ನಪೂರ್ವಕವಾಗಿ ಆಕೆ ಮುಂದೆ ನಡೆದಳು. ಜಯಲಕ್ಷ್ಮಿಯ ಕೊನೆಯ ಮಾತು ಆಕೆಗೆ ಕೇಳಿಸಿದ್ದು ತೀರಾ ಅಸ್ಪಷ್ಟವಾಗಿ ;

'ಲೂಸೀ, ನೀ ಇವತ್ತ ನನ್ನ ಜೋಡೀನೇ ಮಲಕೋತೀಯಾ ಪ್ಲೀಜ್ ? ನಿನ್ನಿನ ಹಾಂಗ ರಾತ್ರೀ ಕೆಟ್ಟ ಕನಸು ಬಿತ್ತಂದ್ರ ನನಗ ಅಂಜಿಕಿ ಬರತದ.'

–ಧಡಧಡನೆ ಮೆಟ್ಟಲುಗಳನ್ನೇರಿ ತನ್ನ ರೂಮಿಗೆ ಬಂದಳು ಪ್ರೊ. ಲೀಲಾವತಿ. ಇನ್ನೂ ಕೆಲವು ರೂಮುಗಳ ಕಡೆ ಹೋಗುವುದು ಉಳಿದೇಹೋಯಿತು. ಯಾಕೋ ಎದೆಯಲ್ಲಿ ವಿನಾಕಾರಣ ನೋವು ಸುರುವಾಗಿದೆ.

'ಹಾರ್ಟ್ ವೀಕ್ ಆಗಿದೆ, ಟ್ರೀಟ್‌ಮೆಂಟ್ ತಗೋಳ್ರಿ' ಎಂದಿದ್ದರು ಡಾಕ್ಟರು.

'ನನ್ನ ತಂಗಿಗೆ ಹಾರ್ಟೇ ಇಲ್ರೀ ಡಾಕ್ಟರ್, ವೀಕ್ ಆಗೋದೇನು ಬಂತು ?' ಎಂದು ತನ್ನ ಅಣ್ಣ ಡಾಕ್ಟರರ ಎದುರಿಗೇ ಚೇಷ್ಟೆ ಮಾಡಿದ್ದ.

ತಾನೊಬ್ಬ ಹೃದಯಹೀನ ಕಲ್ಲುಮನುಷ್ಯಳಾಗಿ ಕಾಣುತ್ತಿರುವೆನೇ ಜಗತ್ತಿನ ಕಣ್ಣಿಗೆ ? 'ಲೀಲಾ, ನಿನಗೆ ಭಾವನೆಗಳಿಲ್ಲವೆ ? ಹೃದಯವೇ ಇಲ್ಲವೇ ? ಯಾಕೆ ಹೀಗೆ ಕಲ್ಲಾಗಿರುವಿ ?' ಎಂದು ಹಿಂದೆ ಸದಾನಂದ ಹಲುಬಿದಾಗ ತನಗೇನೋ ಅಭಿಮಾನವೆನ್ನಿಸಿತ್ತಲ್ಲವೆ ? ಅವನ ಬೇಡಿಕೆಯನ್ನು ತಿರಸ್ಕರಿಸುವಾಗ ಇದೇ ಅಭಿಮಾನ ತನಗೆ ಪ್ರೇರಕವಾಗಿತ್ತೆ ? .... ಆದರೆ ಈಗ ? ಯಾವುದು ತನಗಿಲ್ಲವೆಂದು ಬೇರೆಯುವರೆಂದಾಗ ಹೆಮ್ಮೆಯೆನಿಸುತ್ತಿತ್ತೋ ಅದು ನಿಜವಾಗಿಯೂ ತನಗಿರಲಿಲ್ಲವೇ ? ಇದ್ದರೂ ಅದರ ಯಾವ ಚಟುವಟಿಕೆಗಳಿಗೂ ಆಸ್ಪದ ಸಿಗದಂತೆ

ಅದರ ಮೇಲೆ ಬಲವಾಗಿ ಎಳೆದು ಮುಚ್ಚಿದ್ದ ಈ ಕಬ್ಬಿಣದ ಪರದೆ ಇತ್ತೀಚೆ ಸ್ವಲ್ಪ-ಸ್ವಲ್ಪವಾಗಿ ಕರಗಿ ಹೋಗುತ್ತಿರುವುದೇಕೆ ? ಈಗೇಕೆ ತನಗೆ ಹೃದಯವಿಲ್ಲವೆಂಬುದೊಂದು ಹೆಚ್ಚಳವಾಗಿ ತೋರಲೊಲ್ಲದು ?

"ಎಕ್ಸ್‌ಕ್ಯೂಜ್ ಮಿ ಮ್ಯಾಡಂ, ಒಳಗ ಬರ್ಲೇನು ?"– ಬಾಗಿಲ ಹೊರಗಿನಿಂದ ಮೃದುವಾದ ಧ್ವನಿ. ಇದೇ ವರ್ಷ ಎಮ್.ಎಸ್‌ಸಿ. ಮುಗಿಸಿ ಕೆಮಿಸ್ಟ್ರಿ ಡಿಪಾರ್ಟಮೆಂಟಿನಲ್ಲಿ ರಿಸರ್ಚ್ ಅಸಿಸ್ಟಂಟ್ ಆಗಿ ಸೇರಿರುವ ಮರಾಠಿ ಹುಡುಗಿ ಊರ್ಮಿಲಾ ಕೇಳಕರ.

ತಲೆಯನ್ನು ಕೊಡಹಿ, ಲೂಸಿ–ಜಯಲಕ್ಷ್ಮಿ-ಸ್ಕೂಲ್ ಕಮೀಟಿ ಚೇರಮನ್-ಎಲ್ಲರನ್ನೂ, ಹಾಳು ಸದಾನಂದನನ್ನೂ ಸಹ ದೂರ ಕಳಿಸಲು ಪ್ರಯತ್ನಿಸುತ್ತ ಪ್ರೊ. ಲೀಲಾವತಿ ಹಾಸಿಗೆಯ ಮೇಲೆಯೇ ಎದ್ದು ಕುಳಿತಳು, "ಓ ಹಲೋ, ಊರ್ಮಿಲಾ ಏನು ? ಬರ್ರಿ ಬರ್ರಿ, ಕೂಡ ಬರ್ರಿ."

ಕುಣಿಯುತ್ತಲೇ ಒಳಬಂದಳು ಊರ್ಮಿಲಾ. ಬಹುಶಃ ಹುಟ್ಟುತ್ತಲೇ ಕುಣಿಯಲು ಸುರುಮಾಡಿದಳೇನೋ ಎನ್ನಿಸುವಂಥ ಹುಡುಗಿ. ಎತ್ತರವಾಗಿ, ಬೆಳ್ಳಗೆ ಚಂದ ಇದ್ದಾಳೆ. ಇವಳು ಬಂದಾಗಿನಿಂದ ಕೆಮಿಸ್ಟ್ರಿ ಡಿಪಾರ್ಟಮೆಂಟಿನ ಎಲ್ಲ ಜ್ಯೂನಿಯರ್ ಲೆಕ್ಚರರುಗಳು, ಡೆಮಾನ್‌ಸ್ಟ್ರೇಟರುಗಳು, ಕೆಲವರು ವಿದ್ಯಾರ್ಥಿಗಳು ಸಹ – ಇವಳಿಗಾಗಿ ಹುಚ್ಚಾಗಿದ್ದಾರೆ. ಅವಳು ತಮ್ಮೊಡನೆ ಕ್ಯಾಂಟೀನಿಗೆ ಬಂದರೆ ತಮ್ಮ ಅಹೋಭಾಗ್ಯ ಎಂದುಕೊಳ್ಳುತ್ತಾರೆ. ನಕ್ಕು ತಮ್ಮನ್ನು ಮಾತಾಡಿಸಿದರೆ ತಾವು ಧನ್ಯ ಎಂದುಕೊಳ್ಳುತ್ತಾರೆ. ಗಂಡಸರ ಜಾತಿಯೇ ನಾಯಿಜಾತಿ. ಎಲ್ಲಾ ಮೂಸಿ ನೋಡಬೇಕು ಎನ್ನುವ ಚಪಲ ಅವರಿಗೆ. ಥೂ....

"ಮತ್ತೇನಿಲ್ಲ ಮ್ಯಾಡಂ, ನಿಮ್ಮ ಕಡೆ ಆ ಪ್ಲ್ಯಾಸ್ಟಿಕ್ ಟ್ರ್ಯಾವ್ಹೆಲಿಂಗ್ ಬ್ಯಾಗು ಅದs ಅಲ್ಲಾ, ಅದು ಸ್ವಲ್ಪ ಬೇಕಾಗಿತ್ತು."

–ನಿಂತೇ ಹೇಳಿದಳು ಊರ್ಮಿಲಾ.

"ಕೊಡತೀನಂತ ಕೂಡ್ರಿ. ಯಾಕ, ನಾಳೆ ರವಿವಾರ ಏನರೆ ಸ್ಪೆಶಲ್ ಪ್ರೋಗ್ರ್ಯಾಮು ಅದs ಏನು ? ಎಲ್ಲಿಗೆ ಸವಾರಿ ?"

"ಇಲ್ಲೇ ಆ ಡ್ಯಾಮ್‌ಸೈಟಿಗೆ ಪಿಕ್‌ನಿಕ್ ಅಂತ ಹೋಗವರಿದ್ದಾರ ನಮ್ಮ ಡಿಪಾರ್ಟಮೆಂಟಿನವರು. ಸಂಜೀನ್ಯಾಗ ತಿರಿಗಿ ಬರ್ತೀವಿ."

–ನಾಳಿನ ತಯಾರಿ, ಅದರ ಪೂರ್ವಗನಸು ಇವುಗಳ ಸಂಭ್ರಮದಲ್ಲಿ ಅವಳಿಗೆ ಈಗ ಕೂಡುವ ಮನಸ್ಸಿದ್ದಂತೆ ತೋರಲಿಲ್ಲ. ಆದರೆ ಯಾಕೋ ಈಗ ಊರ್ಮಿಲಾನನ್ನು ಕಳಿಸಿಬಿಟ್ಟು ತಾನು ಒಂಟಿಯಾಗಿದ್ದರೆ ಮತ್ತೆಲ್ಲಿ ಇಲ್ಲದ

ವಿಚಾರಗಳು ಬಂದು ಕಾಡುವವೋ ಎನ್ನಿಸಿತು ಪ್ರೊ. ಲೀಲಾವತಿಗೆ. ಈ ಚೆಲ್ಲು ಹುಡುಗಿಯ ಕೊನೆಯಿಲ್ಲದ ನಗೆ-ಹರಟೆಯಿಂದಲಾದರೂ ತನ್ನ ಬೇಸರ ಸ್ವಲ್ಪ ಕಡಿಮೆಯಾದೀತು...

"ಕೊಡ್ತೀನಿ ಕೂತರs ಕೂಡ್ರೆಲಾ, ಅಂಥಾದೇನವಸರ ? ಅಂಥಾಂಗ ಎಲ್ಲಾರೂ ಬರತಾರಂತೇನು ನಾಳೆ ?"

ಅನಿವಾರ್ಯವಾಗಿ ಕೂಡಬೇಕಾಯಿತು ಊರ್ಮಿಲಾ. ವಾರ್ಡನ್‌ರ ಪ್ರಶ್ನೆಗೆ, ಅವರೇನು ತಿಳಿದುಕೊಂಡಾರೆಂಬ ಭಯದಿಂದ, 'ಹೌದು' ಎಂದು ಸುಳ್ಳು ಉತ್ತರ ಹೇಳುವಷ್ಟು ಅಂಜುಬುರುಕಿಯಾಗಿರಲಿಲ್ಲ ಆಕೆ ;

'ಛೇ, ಇಲ್ರೀ, ನಾವು ಯಂಗ್ ಗ್ರುಪ್ ಇದ್ದೀವಲಾ, ಬರೇ ಜ್ಯೂನಿಯರ್ಸು ಅಷ್ಟs ಮಂದಿ ಹೋಗವ್ರು. ಆ ಮುದುಕ ಪ್ರೊಫೆಸರ್ಸು ಜೋಡೀ ಇದ್ದರ ಪಿಕ್‌ನಿಕ್ ಎಲ್ಲಾ ಸಪ್ಪಗಾಗತದ."

ಇದ್ದುದನ್ನು ಇದ್ದಂತೆ ಹೇಳಿದ್ದಳು ಆಕೆ. ಆದರೂ ತನಗೇಕೆ ಸಿಟ್ಟು ಬರಬೇಕು ? ಈ ಗಂಡುಹುಡುಗಿಯ ಮೇಲೆ ಸಿಟ್ಟಾಗಿ ನಡೆಯುವುದೂ ಇಲ್ಲ.

"ಹೌದೌದು, ಖರೆ"— ಎಂದು ತಾನೂ ನಗಲು ಪ್ರಯತ್ನಿಸಿದಳು ಪ್ರೊ. ಲೀಲಾವತಿ. ನಾಳೆ ಆ ಹುಡುಗರಂತಿರುವ ಲೆಕ್ಚರರುಗಳೊಂದಿಗೆ ಊರ್ಮಿಲಾ ಪಿಕ್‌ನಿಕ್ಕಿಗೆ ಹೋಗಿ ಎಲ್ಲೆಲ್ಲಿ ತಿರುಗಬಹುದು, ಏನೇನು ಮಾಡಬಹುದು ಎಂದೆಲ್ಲ ಕಲ್ಪಿಸುತ್ತಿರುವಂತೆ ಎದೆನೋವು ಮತ್ತೆ ಜಾಸ್ತಿಯಾದಂತೆನಿಸಿತು ಆಕೆಗೆ.

"ಅಂದ್ಹಾಂಗ ಮ್ಯಾಡಂ, ನೀವು ಇವತ್ತಿನ ತಾಜಾಖಬರ್ ಕೇಳೀರೇನು ? ಆ ನಿಮ್ಮ ಸರೋಜಿನಿಯ ರೋಮಿಯೋನ ಕಥಿ ?"

—ಊರ್ಮಿಲಾನ ಧ್ವನಿಯಲ್ಲಿನ ಉತ್ಸಾಹ ನೋಡಿದರೆ ಇದೇನೋ ಮಹತ್ವದ ಸುದ್ದಿಯೇ ಅನಿಸುತ್ತದೆ ! "ಸರೋಜಿನಿ ದೇಶಪಾಂಡೇನ ಸುದ್ದಿ ಏನು ? ಆಕೀ ರೋಮಿಯೋಗೇನಾತು ? ಮತ್ತೇನ ಎಲ್ಲೆರs ಬ್ಯಾರೇ ಹುಡುಗೀನ್ನ ಲಗ್ನಾ ಮಾಡಿಕೋತಾನಂತೇನು ?"

—ಏನೂ ಗೊತ್ತಿಲ್ಲದೇ ಇದ್ದರೂ ಈ ಪ್ರಶ್ನೆಯೇಕೆ ಬಂತು ತನ್ನಿಂದ ಎಂದು ಒಂದು ಕ್ಷಣ ಅವಳಿಗೇ ಆಶ್ಚರ್ಯವಾಯಿತು. ಇದೇ ಸತ್ಯವಾಗಿದ್ದರೆ— ಎಂಬ ಆಶೆಯೂ ಮಿಂಚಿ ಹೋಯಿತು.

ಊರ್ಮಿಲಾ ಹುರುಪಿನಿಂದ ಹೇಳುತ್ತಿದ್ದಳು, "ಛೇ, ಅಂವಾ ಲಗ್ನಾ-ಗಿಗ್ನಾ ಮಾಡಿಕೊಳ್ಳೋ ಮನಷ್ಯಾನೇ ಅಲ್ಲ ಬಿಡ್ರಿ. ಬರೇ ಹಿಂಗs ಮಜಾ ಮಾಡಿಕೋತ ತಿರಗತಾನ. ಯಾರ್ನ ಯಾಕ ಲಗ್ನಾಗತಾನ ? ಅಂವಾ ಇನ್ನೂ ಸಣ್ಣಾಂವ ಇದ್ದಾಗನs

ಲಗ್ನ ಆಗೇದ. ಹೆಂಡತಿ ಕಲತಾಕಿ ಅಲ್ಲ. ಅದಕ್ಕs ಇವ್ನ್ಗ ಅಷ್ಟ ಸೇರೂದಿಲ್ಲ ಕಾಣಸ್ತದ. ಮಾವನ ದುಡ್ಡಿನಿಂದ ಇಲ್ಲೆ ಈ ಮಗಾ ಕಾಲೇಜ ಕಲೀತಾನ. ಚೈನೀ ಮಾಡತಾನ. ನನಗೂ ಗೊತ್ತಿದ್ದಿಲ್ಲ. ಇವತ್ತ ನನ್ನ ಕಝಿನ್ ಬಂದಿದ್ನಲಾ, ಅಂವಾ ಹೇಳಿದಾ. ಅಂತೂ ಈ ಸರೋಜಿನಿಯ ಗತಿ ಮಾತ್ರ ಕಠಿಣ ಅದs ಅಲ್ರೀ ಮ್ಯಾಡಂ ?''

—ಊರ್ಮಿಲಾನ ಧ್ವನಿಯಲ್ಲಿ ನಿಜವಾಗಿಯೂ ಸಂತಾಪವಿತ್ತು. ತಾನೂ ಈಗ ಸಂತಾಪ ಸೂಚಿಸದಿದ್ದರೆ ಎಂಥ ವಿರೋಧಾಭಾಸವಾಗುವುದೆಂಬುದರ ಕಲ್ಪನೆಯನ್ನೂ ಮಾಡದೆ ಪ್ರೊ. ಲೀಲಾವತಿಯ ಹೃದಯ ಎಂಥದೋ ಸಮಾಧಾನದಿಂದ ಕುಣಿಯಿತು. ಸರಿಯಾಗಿ ಸೆಟೆದು ಕುಳಿತಳು ಆಕೆ, ''ಖರೇನ ಊರ್ಮಿಲಾ ? ಸರೋಜಿನಿಗೆ ಗೊತ್ತಿದ್ಧಾಂಗ ಕಾಣ್ಸೂದಿಲ್ಲಲ್ಲ ?''

''ಇಲ್ರೀ ಪಾಪ, ಆಕಿಗ್ಯಾರು ಹೇಳಬೇಕು ?''

''ಯಾಕ, ನಾ ಹೇಳತೀನಿ. ಇಂಥಾ ಲಫಂಗನ ಜೋಡೀ ತಿರಿಗಿ ಜೀವನಾ ಹಾಳ ಮಾಡಿಕೋಬ್ಯಾಡಾ ಅಂತ ನಾನs ಆಕೀಗೆ ಹೇಳತೀನಿ. ಆಕಿ ಸಣ್ಣಾಕಿ, ತಿಳವಳಿಕಿ ಇಲ್ಲದಾಕಿ. ಮತ್ತ ಮ್ಯಾಲ ನನ್ನ ವಾರ್ಡ್. ಆಕೀಗೆ ಉಪದೇಶ ಕೊಟ್ಟು ನಾ ದಾರೀಗೆ ತರಬೇಕು. It is my duty, ಅಲ್ಲೇನು ?''

—ಹುರುಪು ಏರತೊಡಗಿತ್ತು ಆಕೆಗೆ. ತಾನು ಈ ಸುದ್ದಿ ಹೇಳಿದಾಗ ಸರೋಜಿನಿ ಕಣ್ಣೀರಿನ ಕಾಲುವೆ ಹರಿಸುವ, ಉಪವಾಸ ಬೀಳುವ, ಮೂರ್ಛೆ ಹೋಗುವ, ಹುಚ್ಚಿಯಾಗುವ ಅದ್ಭುತ ಚಿತ್ರಗಳೆಲ್ಲಾ ಕಣ್ಣೆದುರು ಕಟ್ಟಿ ನಿಂತಂತಾಗಿ, ಆಗ ವಾರ್ಡನ್ ಎಂದು—ಸಹೃದಯ ವೈಸ್ ಪ್ರಿನ್ಸಿಪಾಲ ಎಂದು— ತಾನು ಹೇಗೆ ಸಹಾಯ, ಸಮಾಧಾನ ಮಾಡಬೇಕೆಂಬುದರ ಬಗ್ಗೆ ಆಕೆ ಲೆಕ್ಕ ಹಾಕತೊಡಗಿದಳು.

''ಹೌದ್ರೀ ಮ್ಯಾಡಂ, ಹಂಗs ಮಾಡ್ರಿ. ನಾ ಇನ್ನ ಬರ್ತೀನಿ, ಈ ಬ್ಯಾಗು ನಾಳೆ ರಾತ್ರೀ ಕೊಡ್ತೀನಿ ಹಂಗಾರ. ಗುಡ್‌ನೈಟ್''— ಎಂದೆನ್ನುತ್ತ, ಉತ್ತರಕ್ಕಾಗಿ ಕಾಯದೆ ಊರ್ಮಿಲಾ ಕುಣಿಯುತ್ತ ಹೊರಗೋಡಿದಳು.

ಕೆಲಹೊತ್ತಿನ ಮುಂಚೆ ಬೇಸತ್ತು ಮಲಗಿದ್ದ ಪ್ರೊ. ಲೀಲಾವತಿ ಈಗ ಮತ್ತೆ ಚೈತನ್ಯ ತುಂಬಿದಂತಾಗಿ ಅರ್ಧಕ್ಕೆ ಬಿಟ್ಟ ಕೆಲಸ ಮಾಡಲೆಂದು ಎದ್ದು ಕುರ್ಚಿಯ ಮೇಲೆ ಆಸೀನಳಾದಳು.

—ಮುದುಕ ಪ್ರೊಫೆಸರ್ಸ್ ಜೊತೆಗೆ ಬಂದರೆ ಪಿಕ್‌ನಿಕ್ಕು ಸಪ್ಪಗಾಗುವದಂತೆ. ಎಷ್ಟು ಧಿಮಾಕು ಈ ಊರ್ಮಿಲಾಗೆ ! ಅವಳದಾದರೂ ಏನು ತಪ್ಪು ? ಆ ನಾಚಿಗೆಯಿಲ್ಲದ ಗಂಡಸರು ತಮ್ಮ ಮನೆಮಾರನ್ನೆಲ್ಲ ಮರೆತುಬಿಟ್ಟು ಇವಳ ಹಿಂದೆ ತಿರುಗುತ್ತಿದ್ದುದರಿಂದಲೇ ಅಲ್ಲವೆ ಇವಳಿಗಿಷ್ಟು ಸೊಕ್ಕು ಬಂದದ್ದು ?

ಡಿಪಾರ್ಟ್‌ಮೆಂಟಿನಲ್ಲಿ, ಪ್ರ್ಯಾಕ್ಟಿಕಲ್ಸು ನಡೆದಾಗ ಸಹ, ಆ ಪಾಪಿ ಹುಡುಗರನ್ನು ಅವರ ಪಾಡಿಗೆ ಬಿಟ್ಟು ಈ ಸಂಭಾವಿತರೆಲ್ಲ ಕೂತು ಹರಟುತ್ತಿರುವುದನ್ನು, ತನ್ನಂಥ ಸೀನಿಯರ್ (ಮುದುಕ ?) ಪ್ರೊಫೆಸರುಗಳ ದಾದು ಮಾಡದೆ ನಗುತ್ತಿರುವುದನ್ನು ನೋಡಿದಾಗ ಎಷ್ಟೋ ಸಲ ತನಗೆ ಹೊಟ್ಟೆಯುರಿಯುತ್ತದೆ. ತಾನೂ ಅವರಂತೆ ಖಾಲಿ ಹರಟೆ-ನಗೆಯಲ್ಲಿ ಜಗತ್ತನ್ನೆ ಮರೆಯಬೇಕೆಂಬ ಇಚ್ಛೆಯೂ ಆಗುತ್ತದೆ ಒಮ್ಮೊಮ್ಮೆ. ಆದರೆ ತಾನು ಹಾಗೆ ಅವರೊಂದಿಗೆ ಒಬ್ಬಳಾಗಲು ಪ್ರಯತ್ನಿಸುತ್ತ, ಅವರಂತೆಯೇ ಹಹ್ಹಹ್ಹಾ ಎಂದು ನಗಲೆತ್ನಿಸಿದ ಪ್ರತಿ ಸಾರೆಯೂ ಅವರೆಲ್ಲ ಯಾವುದೋ ಎತ್ತರದಲ್ಲಿದ್ದಂತೆ, ಎಷ್ಟು ಜಿಗಿದರೂ ತನ್ನ ಕೈಗದು ನಿಲುಕದಂತೆ ಭಾಸವಾಗಿ, ಅವರೆಲ್ಲರ ಮೇಲೂ ವಿಪರೀತ ಸಿಟ್ಟು ಬರುತ್ತದೆ. ಏನಾದರೊಂದು ನೆವ ತೆಗೆದು, ವೈಸ್ ಪ್ರಿನ್ಸಿಪಾಲಳ ಅಧಿಕಾರದಿಂದ ಅವರನ್ನೆಲ್ಲ ಮನಸ್ವೀ ಬೈಯಬೇಕೆನಿಸುತ್ತದೆ. ಈ ಊರ್ಮಿಲಾ ಹಾಗೆಲ್ಲ ಬೈಯಿಸಿಕೊಳ್ಳುವವಳಲ್ಲ ; ಬೆರಕಿ ಹುಡುಗಿ. ಇತ್ತೀಚೆ ಆ ಪ್ರೊ. ಕುಲಕರ್ಣಿಯೊಡನೆ ಇವಳದೇನೋ ಭಾನಗಡಿ ನಡೆದಿರುವ ಹಾಗೆ ಕಾಣುತ್ತದೆ. ನಡೆಯಲಿ, ನಡೆಯಲಿ, ಎಷ್ಟು ದಿನ ನಡೆದೀತು ? ಹೂವಿನಿಂದ ಹೂವಿಗೆ ಹಾರುವ ಪತಂಗ ಆತ. ಬೇಸಿಗೆ ಸೂಟಿ ಮುಗಿದು ಮತ್ತೆ ಕಾಲೇಜು ಸುರುವಾಗುವ ಹೊತ್ತಿಗೆ ಅವನೆಲ್ಲೋ ಇವಳೆಲ್ಲೋ ! ಬಹಳ ಮಜಾ....

ಈ ಸರೋಜಿನಿಯು ಎತ್ತರದ ಬಾಯ್‌ಫ್ರೆಂಡನ ಬಣ್ಣಬಣ್ಣದ ಕಥೆ ಕೇಳಿದಾಗಿನಿಂದ ಎದೆನೋವು ಎಷ್ಟೋ ಕಡಿಮೆಯಾದಂತೆನಿಸುತ್ತಿದೆ. ಇನ್ಯಾರ ಜೊತೆ ಆಕೆ ವಾಕಿಂಗ್ ಹೋಗುವುದು ? ಇನ್ಯಾರಿಗೆ ಆಕೆ ಪ್ರೇಮಪತ್ರ ಬರೆಯುವುದು ? ಸಂಜೆಯಾದರೆ ಸಾಕು, ಸಿನೆಮಾ ಸ್ಟಾರ್ ಹಾಗೆ ಮೇಕಪ್ ಮಾಡಿಕೊಂಡು ಜಿಗಿಯುತ್ತ ಓಡುತ್ತಿದ್ದ ಸರೋಜಿನಿ ಇನ್ನು ಸಪ್ಪೆ ಮುಖ ಮಾಡಿಕೊಂಡು, ಕೂದಲನ್ನು ಬೆನ್ನಮೇಲೆ ಹರಡಿಕೊಂಡು, ಅಂಚಿಲ್ಲದ ಕರೀ ಸೀರೆ ಉಟ್ಟುಕೊಂಡು, ನೆಪಮಾತ್ರಕ್ಕೆ ಕೈಯಲ್ಲೊಂದು ಟೆಕ್ಸ್ಟುಬುಕ್ ಹಿಡಿದುಕೊಂಡು, ಹಾಸ್ಟೆಲಿನ ಟೆರೇಸಿನ ಮೇಲೆ–ಗೆಳತಿಯರಿಂದ ದೂರ–ಏಕಾಕಿಯಾಗಿ, 'ಮೇರೆ ಘರ್‌ಸೆ ಪ್ಯಾರಕೀ ಪಾಲಕೀ ಚಲೀಗಯಿ' ಎಂದು ಗುನುಗುನಿಸುತ್ತ, ಬೆಳದಿಂಗಳ ರಾತ್ರಿಗಳಲ್ಲಿ ಶತಪಥ ಹಾಕುವ ದೃಶ್ಯ ಕಣ್ಣೆದುರಿಗೆ ಬಂದಾಗ ಎಂಥದೋ ತೃಪ್ತಿ....

–ಯಾರು ಹೇಳುತ್ತಾರೆ ಮುದುಕ ಪ್ರೊಫೆಸರುಗಳಿಗೆ ಭಾವನೆಗಳಿಲ್ಲವೆಂದು ? ಹೃದಯವಿಲ್ಲವೆಂದು ? ಈ ''ಪಾಲಕೀ ಚಲೀಗಯಿ'' ತನ್ನ ಹೃದಯದಲ್ಲೂ ಒಮ್ಮೊಮ್ಮೆ ಮುರಿದುಹೋದ ವೀಣೆಯ ತಂತಿಗಳನ್ನು ಜೋರಿನಿಂದ ಮೀಟಿ ಅಪಸ್ವರ ಹೊರಡಿಸುವುದಿಲ್ಲವೇ ? ಹೋದ ವರ್ಷ ಡಿಸೆಂಬರದಲ್ಲಿ ಹೊಸದಾಗಿ ಸುರುವಾಗಿದ್ದ

ಕಾಲೇಜೊಂದರ ಡಿಬೇಟ್ ಯೂನಿಯನ್ನಿನ ಯಾವುದೋ ಕಾರ್ಯಕ್ರಮಕ್ಕೆ ತಾನು ಅತಿಥಿಯಾಗಿ ಹೋದಾಗ, ಅಲ್ಲೇ ಪ್ರೊಫೆಸರಾಗಿದ್ದ ಸದಾನಂದನನ್ನು—ಈಗ ಆರು ಮಕ್ಕಳ ತಂದೆಯಾಗಿದ್ದ ಸದಾನಂದನನ್ನು— ಕಂಡಾಗ, ಇಂಥದೇ ಅಪಸ್ವರದ ಅನುಭವವಾಗಿರಲಿಲ್ಲವೆ ತನಗೆ ? ಆತ ಅಲ್ಲಿರುವನೆಂದು ಮೊದಲೇ ಗೊತ್ತಿತ್ತು. ಹಳೆಯ ಪರಿಚಿತನೊಬ್ಬನನ್ನು ಸಹಜ ಮಾತಾಡಿಸುವ ಹಾಗೆ ಮಾತಾಡಿಸಿ, ಅದ್ಭುತವಾದ ಅತಿಥಿ ಭಾಷಣ ಮಾಡಿ, ತಾನೆಷ್ಟು ಹೃದಯಹೀನಳೆಂಬುದನ್ನು ಮತ್ತೊಮ್ಮೆ ಅವನ ನೆನಪಿಗೆ ತಂದುಕೊಟ್ಟು, ಆಗ ಅವನ ಕಣ್ಣಲ್ಲಿ ಮೂಡಬಹುದಾದ ಹಳೆಯ ನಿರಾಸೆಯ ಹೊಸ ರೂಪ ಕಂಡು, ಹೊಸ ಹುರುಪು ಪಡೆದು ತಿರುಗಿ ಮತ್ತೆ ದೂರ ಬರುವ ಬೃಹದಾಸೆ ಹೊತ್ತು ಹೋಗಿದ್ದೆ, ಆದರೆ ಆದದ್ದೇನು ? ಬಹಳ ಶೀತಲ ನಿರ್ಲಿಪ್ತತೆಯಿಂದ ಅವನನ್ನು ''ಹಲೋ'' ಎಂದು ಮಾತಾಡಿಸುವದರಲ್ಲಿ ತಾನು ಸಮರ್ಥಳಾಗಿದ್ದೆ ; ತನ್ನ ಭಾಷಣವಂತೂ 'Excellent !' ಎಂದಿದ್ದರು ಎಲ್ಲರೂ ; ತಾನು ಹೃದಯವಿಲ್ಲದವಳೆಂಬುದನ್ನು ಅವನ ಗಮನಕ್ಕೆ ತಂದುಕೊಡುವ ಪ್ರಯತ್ನವೂ ಯಶಸ್ವಿಯಾಗಿತ್ತು ; ಆದರೆ ಕೊನೆಗಳಿಗೆಯಲ್ಲಿ ತನ್ನ ಲೆಕ್ಕ ತಪ್ಪಿತ್ತು. ಅವನ ಕಣ್ಣಲ್ಲಿ ತಾನು ನೋಡಿ ಆನಂದಿಸಬಯಸಿದ್ದ ಆ ಅನಿಸಿಕೆ— ಹಳೆ ನಿರಾಸೆಯ ಹೊಸ ರೂಪವಲ್ಲ ಅದು, ಒಂದು ಬಗೆಯ ವಿಜಯದ ಆನಂದ— ಅದನ್ನು ಕಂಡ ಕ್ಷಣ ಮಾತ್ರ ಸೋತವಳು, ಸೋಲುತ್ತಿದ್ದವಳು ತಾನೇ ಎಂಬ ತೀವ್ರ ಅರಿವು ತನ್ನ ಇಡೀ ವ್ಯಕ್ತಿತ್ವವನ್ನು ಚಿತ್ರಹಿಂಸೆ ಮಾಡಿ ಕೊಲ್ಲಲಾರಂಭಿಸಿತ್ತು. ತಾನಲ್ಲಿಗೆ ಹೋದುದು ಬರೇ ಅತಿಥಿ ಎಂದು ; ಭಾಷಣ ಮಾಡಲು ಎಂದು ; ಭಾಷಣ ಮುಗಿದ ನಂತರ ತನ್ನ ಅಲ್ಲಿನ ಕೆಲಸವೂ ಮುಗಿಯಿತು ; ಅತಿಥಿಯಾಗಿ ಹೋದವಳು ಹಾರ—ತುರಾಯಿಗಳಿಂದ ಸನ್ಮಾನಿಸಲ್ಪಟ್ಟು ಬಂದ ದಾರಿಯಿಂದಲೇ ಮರಳಬೇಕು , ಹಾಗೆ ಮರಳಿ ಬಂದವಳು ತಾನು— ಮತ್ತೆ ಇಲ್ಲಿಗೆ ; ಈ ಹಳೆಯ ಊರಿಗೆ ; ಹಳೆಯ ಜಾಗಕ್ಕೆ ; ಹಳೆಯ ''ಮನೆಗೆ'' ? ಛೇ, ತನಗೆಲ್ಲಿಯ ಮನೆ ? ಮುದುಕ ತಂದೆ ಇದ್ದುದು ತನ್ನ ಅಣ್ಣನ ಮನೆಯಲ್ಲಿ. ಅಲ್ಲಿಯೂ ತಾನು ಅತಿಥಿಯೇ ಸರಿ ಒಂದು ರೀತಿಯಿಂದ. ತಾನು ಗಳಿಸಿ ಕೂಡಿಸಿಟ್ಟ ಹಣದಿಂದ ಕಟ್ಟಿಸಿದ ದೊಡ್ಡ ಬಂಗಲೆ— ತನ್ನ ಸ್ವಂತ ಬಂಗಲೆ— ಒಂದಿದೆ ಊರ ಹೊರಗೆ. ಹೌದು, ಅದು ಬರಿಯ ಬಂಗಲೆ. ಮನೆಯಲ್ಲ.... ಮನೆಯಲ್ಲ....

ಇದೇನು ಈ ವಯಸ್ಸಿನಲ್ಲಿ ಈ ರಾತ್ರಿಯಲ್ಲಿ ಹೀಗೆ ಸೆಂಟಿಮೆಂಟಲ್ ಆಗಿ ವಿಚಾರ ಮಾಡುವುದು, ನಾಚಿಕೆಗೇಡು— ಎಂದುಕೊಂಡು ನಕ್ಕು ಪ್ರೊ. ಲೀಲಾವತಿ ಉಳಿದಿದ್ದ ಪತ್ರಗಳಿಗೆ ಉತ್ತರ ಬರೆಯಲೆಂದು ಪೆನ್ ತೆರೆದಳು.

—ರಾತ್ರಿ ಹನ್ನೊಂದು ಗಂಟೆಯಾಗಿ ಹೋಗಿರಬೇಕು. ಹಾಸ್ಟೆಲು ತಣ್ಣಗಾಗಿದೆ.

ಆಗೊಮ್ಮೆ ಈಗೊಮ್ಮೆ ಬಾಥರೂಮಿನಲ್ಲಿ ನಳ ತಿರುಗಿಸಿದ, ಲ್ಯಾವೆಟ್ರಿಯ ಬಾಗಿಲು ಹಾಕಿದ, ಪಿಸುಧ್ವನಿಯಲ್ಲಿ ಯಾರು ಯಾರಿಗೋ 'ಸ್ವೀಟ್ ಡ್ರೀಮ್ಸ್' ಹೇಳಿದ ಒಂದೆರಡು ಸಪ್ಪಳ-ಧ್ವನಿ ಬಿಟ್ಟರೆ ಬೇರೇನೂ ಕೇಳಿ ಬರುತ್ತಿಲ್ಲ. ಸುತ್ತಲೂ ಕತ್ತಲು, ನೀರವತೆ.

—ತನಗೆ ಯಾರು 'ಸ್ವೀಟ್ ಡ್ರೀಮ್ಸ್' ಹೇಳಬೇಕು ? ತನಗೆ ಕನಸೇ ಬೀಳುವುದಿಲ್ಲವೆಂದು, ಗಾಢ ನಿದ್ರೆ ಬರುವುದೆಂದು, ರಾತ್ರಿ ಎಂದೂ ಅಂಜಿಕೆಯಾಗುವುದಿಲ್ಲವೆಂದು ಎಷ್ಟೋ ಸಲ ಹುಡುಗಿಯರೆದುರಿಗೆ ಕೊಚ್ಚಿಕೊಂಡದ್ದುಂಟು. ಎಷ್ಟರ ಮಟ್ಟಿಗೆ ಪ್ರಾಮಾಣಿಕ ಈ ಜಂಭ ? ತನಗೂ ಒಮ್ಮೊಮ್ಮೆ ಕನಸು ಬೀಳುತ್ತವೆ— ತಮ್ಮ ತಮ್ಮ ಗೆಳೆಯರ ಜೊತೆ ತಿರುಗಾಡಲು ಹೊರಟ ಹಾಸ್ಟೆಲಿನ ಹುಡುಗಿಯರು ಬರುತ್ತಾರೆ ಕನಸಿನಲ್ಲಿ ; ಊರ್ಮಿಲಾ, ಅವಳ ಸಹೋದ್ಯೋಗಿಗಳು, ಜಯಲಕ್ಷ್ಮಿಯನ್ನು ಹಾಸ್ಟೆಲಿಗೆ ಬಿಟ್ಟುಹೋಗಲು ಬಂದಿದ್ದ ಅವಳ ಗಂಡ, ಲೂಸಿಯ ಜಾರ್ಜ, ಕಾಲೇಜಿನ ಪ್ರಿನ್ಸಿಪಾಲರು, ಹುಡುಗಿಯರ ಸ್ಕೂಲಿನ ಕಮಿಟಿ ಚೇರ್‌ಮನ್ ಅವನ ಕಾರುಸಹಿತವಾಗಿ— ಈ ಎಲ್ಲರೂ ಬರುತ್ತಾರೆ ; ಕನಸಿನಲ್ಲಿ ದೆವ್ವಗಳಂತೆ ನರ್ತಿಸುತ್ತಾರೆ ; ಪ್ರಯತ್ನ ಮಾಡಿ ಎಲ್ಲರನ್ನೂ ಹೊರಗೆ ಹಾಕಿ ನಿದ್ರೆ ಬರಿಸಿಕೊಳ್ಳಬೇಕಾಗುತ್ತದೆ. ಹಾಗೆ ನಿದ್ರೆ ಬರಿಸಿಕೊಂಡಾಗ, ಇನ್ನೇನು ಗಾಢನಿದ್ರೆಯಲ್ಲಿ ಮುಳುಗಿರುವೆನೆಂದು ನಂಬಿದಾಗ, ಅರ್ಧ ಕನಸು— ಅರ್ಧ ಎಚ್ಚರ.... ದೂರದಲ್ಲೆಲ್ಲೋ ಅಸ್ಪಷ್ಟವಾಗಿ, ಮಸಕು-ಮಸುಕಾಗಿ ತೇಲಿ ಬರುವದು ಒಂದು ಮುಖ. ಬರಬರುತ್ತಾ ಆ ಮುಖ ಮಾಯವಾಗಿ ಉಳಿಯುವವು ಬರೇ ಎರಡು ಕಣ್ಣುಗಳು. ಶಾಂತವಾದ, ಆದರೆ ಉದ್ವಿಗ್ನವಾದ— ಛೇ, ಅಲ್ಲಿ ಈಗ ಹಳೆಯ ಉದ್ವಿಗ್ನತೆಯಿಲ್ಲ, ಎಂಥದೋ ಸಮಾಧಾನ, ತೃಪ್ತಿ ಇದೆ— ಕಣ್ಣುಗಳು.... ತನ್ನನ್ನು ನೋಡಿ ನಗುತ್ತಿರುವಂತೆ, ಅಣಕಿಸುವಂತೆ ಭಾಸ....

—ಕತ್ತಲಲ್ಲಿ ಅಂಜಿ ಚೀರುವಂತಾಯಿತು ಪ್ರೊ. ಲೀಲಾವತಿಗೆ.... ಎದ್ದು ಆಕೆ ರೂಮಿನ ಕಿಡಿಕಿ ಬಾಗಿಲುಗಳನ್ನೆಲ್ಲಾ ಮುಚ್ಚಿ ಬೋಲ್ಟ್ ಹಾಕಿದಳು.

'ಲೂಸಿ, ಪ್ಲೀಜ್ ಇವತ್ತ ನನ್ನ ಜೋಡೀ ಮಲಕೋ' ಎಂದು ಜಯಲಕ್ಷ್ಮಿ ಕೇಳಿಕೊಂಡದ್ದು ನೆನಪಾಯಿತು. ರಾತ್ರಿ ಬೀಳಬಹುದಾದ ಕೆಟ್ಟ ಕನಸಿನ ಅಂಜಿಕೆಯಿಂದ ದೂರವಿರಲು ಅವಳಿಗೆ ಲೂಸಿಯ ಜೊತೆ ಬೇಕಂತೆ. ಗಂಡನನ್ನು ಫಾರೆನ್ನಿಗೆ ಕಳಿಸಿದಾಗಿನಿಂದ ಇವಳ ಈ ಭಯಪ್ರದರ್ಶನ, ನಟನೆ ಹೆಚ್ಚಾಗಿದೆ. ಎಂಥ ಮಳ್ಳ, ಅಂಜುಬುರುಕ ಹುಡುಗಿಯರು ! ಇವರಿಗೆ ಸದಾ ಒಬ್ಬನ ಆಸರೆ ಬೇಕು, ಸಹಾಯ ಬೇಕು, ಸ್ವತಃದ ದುರ್ಬಲತೆಯಲ್ಲಿ, ಅದನ್ನು ಜಗತ್ತಿನೆದುರಿಗೆ ಬಿಚ್ಚಿಡುವುದರಲ್ಲಿ, ಅದೆಂಥ

ಮೂರ್ಖ ಆನಂದವೋ ಇವರಿಗೆ! ....ಕಿಡಕಿಯ ಹೊರಗೆ ಏನೋ ಸದ್ದಾಗುತ್ತಿದೆ, ಯಾರದೋ ಬೂಟುಗಾಲಿನ ಹೆಜ್ಜೆಯ ಸದ್ದು. ಛೇ, ಇಲ್ಲ್ಯಾರು ಬರಬೇಕು ಬೂಟು ಹಾಕಿಕೊಂಡು ? ಎಲ್ಲೋ ದನ ಇರಬೇಕು. ಸುಮ್ಮನೆ ಅಂಜಿಕೆ ತನಗೆ. ಹೀಗೆ ವ್ಯರ್ಥ ವಿಚಾರ ಮಾಡುವ ಬದಲು ನಾಳೆ ಆ ಸ್ಕೂಲಿನಲ್ಲಿ ಮುಖ್ಯ ಅತಿಥಿಯಾಗಿ ಮಾಡಲಿರುವ ಭಾಷಣದ ತಯಾರಿ ಮಾಡಬೇಕು.

–ಯಾಕೋ ಎದೆನೋವು ಹೆಚ್ಚಾಗತೊಡಗಿದೆ....

"ಒಂದ ಮನೀ ಇಲ್ಲ, ಮಾರಿಲ್ಲ. ಸುಡಗಾಡ ಸಿದ್ಧರಾಂಗ ಬರೆ ಗೆಸ್ಟ್ ಆಗಿ ತಿರಗೋದರಾಗs ಇರ್ತಾಳ...."

–ಪ್ರೊ. ಲೀಲಾವತಿ ಒಂದು ಕೈಯಿಂದ ಎಡಭಾಗದ ಎದೆಯನ್ನು ಗಟ್ಟಿಯಾಗಿ ಒತ್ತಿ ಹಿಡಿದಳು, ಪೆನ್ನು ಟೇಬಲ್ ಮೇಲಿನಿಂದ ಜಾರಿ ಬಿದ್ದಿತು.

ತನಗೆ ಮನೆ-ಮಾರು ಇಲ್ಲವೆ ? ತಾನು ಸುಡಗಾಡುಸಿದ್ಧರ ಹಾಗೆ ನೆಲೆಯೇ ಇಲ್ಲದವಳೇ ? ಬರೇ ಅತಿಥಿಯಾಗಿ ಅಲ್ಲಲ್ಲಿ ತಿರುಗುವುದರೊಳಗೇ ತನ್ನ ಜೀವನ ಸವೆದುಹೋಗುತ್ತಿದೆಯೇ ? ಈ ಕಾರ್ಯಕ್ರಮಗಳಿಗೆ ಮಾತ್ರವಲ್ಲ, ಈ ಜೀವನಕ್ಕೇ ತಾನು ಅತಿಥಿಯೆಂದು ಬಂದವಳೇ ? ದುಡಿದು-ದಣಿದು ಬಂದಾಗ ತನ್ನನ್ನು ಸ್ವಾಗತಿಸುವ, ದಣಿವು ಕಡಿಮೆ ಮಾಡುವ, ಪ್ರೀತಿಸುವ ಯಾವ ಜೀವವೂ ಇಲ್ಲಿಲ್ಲವೇ ? ಯಾರೇಕೆ ಬೇಕು, ಒಬ್ಬಳೇ ಜೀವನವನ್ನೆದುರಿಸುವೆನೆಂಬ ಆ ಧೈರ್ಯ ಈಗ ಎಲ್ಲಿಗೆ ಹೋಯಿತು ? ತಾನು ಎಲ್ಲಿ ಹೋದರೂ, ಬಂದರೂ, ಸತ್ತರೂ, "ಮನೆ"ಯವಳಲ್ಲವೆಂಬ, ಬರೇ "ಅತಿಥಿ"ಯೆಂಬ ಈ ಪ್ರಜ್ಞೆ ಎಷ್ಟೊಂದು ತೀಕ್ಷ್ಣವಾಗಿ ಹೃದಯವನ್ನು ಕೊರೆಯತೊಡಗಿದೆಯಲ್ಲ.... ಏ ಸದಾನಂದ, ಈ ಕಣ್ಣುಮುಚ್ಚಾಲೆಯನ್ನು ಸಾಕುಮಾಡು. ಒಮ್ಮೆ ತಪ್ಪಾಯಿತೆಂದು ಒಪ್ಪಿಕೊಂಡುಬಿಟ್ಟೆ. ಇದೇನು ನಿನ್ನ ಹಟ ? ಯಾಕೆ ಹೀಗೆ ಕಾಡತೊಡಗಿರುವಿ ? ನಿನ್ನ ಮನೆಗೆ ನಾನು ಮನೆಯವಳಾಗಲಿಲ್ಲವೆಂದು, ಈ ಜಗತ್ತೇ ನನ್ನನ್ನು ಅತಿಥಿಯ ಹಾಗೆ ಕಾಣಲೆಂದು ನೀನೇನು ಶಾಪ-ಗೀಪ ಕೊಟ್ಟಿದ್ದೀಯಾ ಹೇಗೆ ? ಈ ಶಾಪವನ್ನು ಹಿಂದಿರುಗಿಸಿಕೊಳ್ಳೋ ಪುಣ್ಯಾತ್ಮ.... ನಿನಗಷ್ಟು ಮನಸ್ಸಿದ್ದರೆ, ನಾನು ಸೋತೆನೆಂದು ನನ್ನಿಂದಲೇ ಹೇಳಿಸಬೇಕೆಂಬ ಇಚ್ಛೆಯಿದ್ದರೆ, ಇದೋ ಹೇಳುತ್ತಿದ್ದೇನೆ. ಬೇಕಾದರೆ ಅತ್ತು ಬಿಡಲೇನು ? ನಿನಗೆ ಸಮಾಧಾನವಾಗುವಂತಿದ್ದರೆ ಅಳಲು ನನ್ನ ಅಡ್ಡಿಯೇನಿಲ್ಲ....

–ಕಣ್ಣೀರು ಜಾರಿ ಪೇಪರಿನ ಮೇಲೆ ಬಿದ್ದು ಟಪ್ ಎಂದು ಸದ್ದಾದಾಗ ಪ್ರೊ. ಲೀಲಾವತಿ ಒಮ್ಮೆಲೆ ಅರಿವಿಗೆ ಬಂದಳು. ತನ್ನ ಈ ರೊಮ್ಯಾಂಟಿಕ್ ಕಲ್ಪನೆಯಿಂದ ಅವಳಿಗೆ ಬಹಳ ಮಜಾ ಅನಿಸಿತು. ಇದೇನು, ನಿಜವಾಗಿಯೂ ಅಳುತ್ತಿದ್ದೇನಲ್ಲ,

ಹುಚ್ಚು – ಎಂದುಕೊಂಡು, ಕಣ್ಣೀರೊರೆಸಿಕೊಳ್ಳುತ್ತ ಆಕೆ ಪಕಪಕನೆ ನಕ್ಕುಬಿಟ್ಟಳು. ನಂತರ ಕೂಡಲೆ ಅವಳಿಗೆ ರೂಮಿನಲ್ಲಿ ತಾನೊಬ್ಬಳೇ ಇರುವದು ನೆನಪಾಗಿ, ತಾನು ನಕ್ಕದ್ದನ್ನು ಯಾರಾದರೂ ಹೊರಗಿನಿಂದ ಕೇಳಿಸಿಕೊಂಡರೆ ಏನೆಂದುಕೊಂಡಾರೆಂಬ ವಿಚಾರ ಬಂದು, ಮತ್ತಷ್ಟು ತಮಾಷೆ ಎನ್ನಿಸಿ, ಇನ್ನೂ ನಕ್ಕಳು.

– ಕೆಳಗೆ ಬಿದ್ದ ಪೆನ್ನನ್ನು ನೋಡಿದಾಗ ಅತಿಥಿ ಭಾಷಣದ ನೆನಪಾಯಿತು ಆಕೆಗೆ. ಬಗ್ಗಿ ಆ ಪೆನ್ನನ್ನೆತ್ತಿಕೊಂಡು, ನಾಳಿನ ಸನ್ಮಾನ್ಯ ಅತಿಥಿಯ ಸ್ಥಾನದಲ್ಲಿ ತನ್ನನ್ನು ಕಲ್ಪಿಸಿಕೊಳ್ಳುತ್ತ, ನಿಜವಾಗಿಯೂ ಎಲ್ಲಾ ಮರೆತೆನೆಂದು ಸೀರಿಯಸ್ಸಾಗಿ ಭಾಷಣವನ್ನು ತಯಾರಿಸುವದರಲ್ಲಿ ಮಗ್ನಳಾದಳು.

❖ ❖ ❖

# ಪ್ರಶ್ನೆ

ಮತ್ತೊಂದು ಭ್ರಮೆ ನಿರಸನವಾಯಿತು ; ಕನಸು ಒಡೆಯಿತು ;

–ಅನಿರೀಕ್ಷಿತವಾಗಿ ಅಲ್ಲ ; ಗೊತ್ತಿದ್ದದ್ದೇ. ಆದರೆ ಇಷ್ಟು ಬೇಗ ಎಂದು ಅನಿಸಿರಲಿಲ್ಲ ಅಷ್ಟೆ. ಇನ್ನು ಸ್ವಲ್ಪ ದಿನ ಈ ಕನಸಿನಲ್ಲೆ ಸುಖಿಸಬಹುದೆಂದು, ಈ ಭ್ರಮೆಯಲ್ಲೆ ಮೈಮರೆತಿರಬಹುದೆಂದು ಆಸೆಯೊಂದಿತ್ತು. ಬರಿಯ ಆಸೆ. ಹಿಂದಿನ ಆಸೆಗಳಂತೆಯೇ ಮಣ್ಣುಗೂಡಿದ–ಮಣ್ಣುಗೂಡಲೆಂದೇ ಮೈದಳೆದಿದ್ದ–ಆಸೆ. ಹ್ಞಾ, ಅಂದಹಾಗೆ ಇದರ ಸರದಿ ಎಷ್ಟನೆಯದು ? ಇದರ ಕ್ರಮಾಂಕ, ಅಂದರೆ ನಂಬರು, ಎಷ್ಟು ? ಸ್ವಲ್ಪ ವಿರಾಮವಾಗಿ ಕೂತು ನೆನಪಿಸಿಕೊಳ್ಳಬೇಕು. ಯಾಕೋ ಇತ್ತೀಚೆ ಎಲ್ಲ ಮರೆಯುತೊಡಗಿತ್ತು. ಭೂತಕಾಲದ ಕರಿನೆರಳುಗಳ ಸತತ ಅಸ್ತಿತ್ವದ ಬಗೆಗೆ, ಅಪರಿಹಾರ್ಯ ಬಾಧೆಯ ಬಗೆಗೆ, ಸ್ವಲ್ಪ-ಸ್ವಲ್ಪ ನಿರ್ಲಕ್ಷ ಬೆಳೆಯತೊಡಗಿತ್ತು. ಅವುಗಳ ಕಪಿಮುಷ್ಟಿಯಿಂದ ಪಾರಾಗುವುದು ಸಾಧ್ಯವಾಗಬಹುದೇನೋ, ಸಾಧ್ಯವಾಗತೊಡಗಿದೆಯೇನೋ ಎಂದು ಅನ್ನಿಸತೊಡಗಿತ್ತು. ಆದರೆ ಇದೆಲ್ಲಾ ಸುಳ್ಳು, ಬರೇ ಭ್ರಮೆ ಎಂಬ ಸತ್ಯ– ಹಿಂದೆ ಅನೇಕ ಸಲ ತಿಳಿದು ಬಂದಂತೆ– ಈಗ ಮತ್ತೆ ತಿಳಿದು ಬಂದಿತು. ಈ ಅನುಭವ ಹಿಂದಿನ ಅನುಭವಗಳಿಗಿಂತ ಬೇರೆಯದು ಎಂದು–ಹಿಂದೆ ಪ್ರತಿಸಲ ಅಂದುಕೊಂಡ ಹಾಗೆ–ಅಂದುಕೊಂಡಿದ್ದು ಮತ್ತೊಂದು ಭ್ರಮೆ. ಇದು ಯಾವ ಬಗೆಯಲ್ಲೂ ಬೇರೆಯದಲ್ಲವೆಂಬುದು ಕಹಿ ಸತ್ಯ ; ಬಹಳ ಕಹಿ, ಆದರೆ ಸತ್ಯ. ಇದೊಂದು ಹೊಸ ಅನುಭವ ಅಷ್ಟೆ.

ನಂಬರು– ಮೂರೆ ? ನಾಲ್ಕೆ ?

ಸರಿಯಾಗಿ ನೆನಪಿಸಿಕೊಳ್ಳಲೆಂದು ಆಕೆ ಮಲಗಿದ್ದಲ್ಲೇ ಅತ್ತಿತ್ತ ಹೊರಳಾಡಿ ಚಡಪಡಿಸಿದಳು. ಯಾಕೋ ಈ ಅನುಭವಕ್ಕೂ ಒಂದು ನಂಬರು ಕೊಟ್ಟು ಬಿಟ್ಟು, ಇದನ್ನೂ ಬರಿಯ 'ನೆನಪು'ಗಳ ಪಟ್ಟಿಯಲ್ಲಿ ಕೊನೆಯದನ್ನಾಗಿ ಸೇರಿಸಿ ದೂರವಾಗಿಸಲು ಆಕೆಗೆ ಮನಸ್ಸು ಬರಲಿಲ್ಲ. ಇದರಲ್ಲಿ ಏನಾದರೂ ಸ್ವಲ್ಪ ಪ್ರತ್ಯೇಕತೆಯನ್ನು, ವಿಶೇಷವನ್ನು ಕಂಡುಕೊಂಡು, ಕಳೆದುಹೋದ ಈ ಭವ್ಯ ಕನಸಿಗಾಗಿ ಕಣ್ಣೀರು ಸುರಿಸಿ ಸಮಾಧಾನ ಹೊಂದಬೇಕೆಂದು ಅವಳಿಗೆ ತೀವ್ರ ಆಸೆಯಾಯಿತು. ಆದರೆ ಯಾಕೋ, ಎಷ್ಟು ಪ್ರಯತ್ನಿಸಿದರೂ ಈ ಅನುಭವದಲ್ಲಿ ಹಿಂದಿನವುಗಳಿಗಿಂತ ಭಿನ್ನವಾದುದು

ಏನೂ ಎದ್ದು ಕಾಣಲಿಲ್ಲ. ಬಹಳ ಬೇಸರವೆನಿಸಿ ಹೊದ್ದುಕೊಂಡಿದ್ದ ರಗ್ಗನ್ನು ಆಕೆ ಜೋರಾಗಿ ಒದ್ದು ದೂರ ಸರಿಸಿದಳು.

ಎಲ್ಲಿಯೋ ಹನ್ನೆರಡು ಗಂಟೆ ಬಡಿದ ಸದ್ದು ಕೇಳಿಸಿತು. ಕಿಡಿಕಿಯಲ್ಲಿಂದ ಹೊರಗೆ ಕತ್ತಲು ತುಂಬಿದ ದೂರದ ಆಕಾಶವನ್ನೆ ದಿಟ್ಟಿಸುತ್ತಿದ್ದಂತೆ ಮತ್ತೆ ಅವಳಿಗೆ ಸಂಜೆ ನಡೆದದ್ದೆಲ್ಲ ನೆನಪಾಗಿ, ಎಂಥದೋ ಘೋರ ಅಪಮಾನವಾದಂತೆನಿಸಿ, ಎದೆ ಕುದಿಯಿತು. ಕಿಡಿಕಿಯ ಕಬ್ಬಿಣದ ಸಲಾಕೆಗಳನ್ನು ಕಿತ್ತಿ, ಹೊರಗಿನ ಗೇಟಿನ ಚಿಲಕ ಮುರಿದು, ರಸ್ತೆಯ ಮೇಲಿಂದ ಈ ಅಪರಾತ್ರಿ ಹಾರಿಹೋಗಿ, ಸೀದಾ ಅವನ ಮುಂದೆ ಧುತ್ತೆಂದು ಇಳಿದು, ಅವನ ಎದೆ ಸೀಳಿ ರಕ್ತ ಕುಡಿಯಬೇಕು ಎನ್ನಿಸಿತು.

ಛೇ, ಇದು ರಾಕ್ಷಸೀವೃತ್ತಿ. ಹುಚ್ಚುತನದ ಪರಮಾವಧಿ. ಹಾಗಾದರೆ ಮತ್ತೇನು ಮಾಡುವುದು ? ಸಂಜೆ ಅಷ್ಟೆಲ್ಲ ಬೊಗಳಿ ಕೆಟ್ಟಮುಖ ಮಾಡಿಕೊಂಡು ಆತ ಹೊರಟುಹೋಗುತ್ತಿದ್ದಾಗ ಹಿಡಿದು ನಿಲ್ಲಿಸಿ ಕಪಾಳಿಗೆರಡು ಕೊಡಬೇಕಾಗಿತ್ತೆ ? ಸುಮ್ಮನೆ ಅವನನ್ನು (ಎಂದಿನ ಹಾಗೆ) ಗಟ್ಟಿಯಾಗಿ ಎದೆಗೊತ್ತಿಕೊಂಡು ತನ್ನೊಳಗೆ ಅಡಗಿಸಿಕೊಳ್ಳುವುದು, ಕರಗಿಸಿಬಿಡುವುದು ಸಾಧ್ಯವಿದ್ದಿದ್ದರೆ....

ಅಲ್ಲ, ತಾನೇಕೆ ಇಲ್ಲದ ದೊಡ್ಡಸ್ತನ ತೋರಿಸಲು ಹೋಗಿ, 'ನಿನ್ನ ಸುಖವೇ ನನ್ನ ಸುಖ, ನನಗೆ ನಿನ್ನ ಮೇಲೆ ಸಿಟ್ಟಿಲ್ಲ' ಎಂದೆಲ್ಲ ಹೇಳಬೇಕಾಗಿತ್ತು ? ಎಷ್ಟರ ಮಟ್ಟಿಗೆ ಪ್ರಾಮಾಣಿಕವಾದುದು ಆ ಮಾತು ? ತಾನು ದುಃಖದ ಮಡುವಿನಲ್ಲಿ ಮುಳುಗೇಳುತ್ತಿದ್ದಾಗಲೂ ಆತ ಮಾತ್ರ ಸುಖಿಯಾಗಿರಲೆಂದು ಬಯಸಲು ತಾನೇನು ಸಿನೆಮಾದಲ್ಲಿನ ಆದರ್ಶ ನಾಯಕಿಯೆ ?

ಅಲ್ಲ ; ತಾನು ಮನುಷ್ಯಳು, ರಕ್ತ-ಮಾಂಸಗಳಿಂದ ತುಂಬಿದ ದೇಹವುಳ್ಳ, ದ್ವೇಷ-ಕ್ರೋಧ-ಅಸೂಯೆ ಎಲ್ಲವನ್ನೊಳಗೊಂಡ ಮನಸ್ಸುಳ್ಳ ಮನುಷ್ಯಳು. ಈಗಲೂ, ಈ ರಾತ್ರಿ ಹನ್ನೆರಡರಲ್ಲಿ, ತನಗೆ ಅನಿಸುತ್ತಿಲ್ಲವೆ ಮನಸ್ಸಿನಲ್ಲಿದ್ದುದನ್ನೆಲ್ಲಾ ಕಿರುಚಿಬಿಡಬೇಕು ಎಂದು ? ಅವನಿಗೆ ಕೇಳಿಸುವುದೇ ? ತಿಳಿಯುವುದೇ ? 'ಶಶೀ, ನಿನ್ನ ಮನಸ್ಸಿನಲ್ಲಿದ್ದುದನ್ನೆಲ್ಲ ನೀನು ಹೇಳದೆಯೆ ನಾನು ತಿಳಿದುಕೊಳ್ಳಬಲ್ಲೆ, ನಿನ್ನ ಕಣ್ಣುಗಳಲ್ಲಿ ಮಿಂಚುವ ಬೆಳಕಿನಲ್ಲಿ ನಿನ್ನ ಹೃದಯವನ್ನು ಕಾಣಬಲ್ಲೆ'— ಎಂದು ಹೇಳಿದ್ದ, ಬರೆದಿದ್ದ, ಕವಿತೆ ಕಟ್ಟಿ ಹಾಡಿದ್ದ, ಕುಣಿದಿದ್ದ, ಮೈಮರೆತಿದ್ದ ; ಸಾಹಿತಿ ಅಲ್ಲವೆ !

ಈಗ ? ಎಲ್ಲಾ ಮರೆತನೆ ? ಅಥವಾ ಬೇಕೆಂದೇ ಹೀಗೆ ಮಾಡುತ್ತಿದ್ದಾನೆಯೇ ? ಸೇಡು ತೀರಿಸಿಕೊಳ್ಳುತ್ತಿದ್ದಾನೆಯೇ ? ಯಾರ ಸೇಡು ಯಾರ ಮೇಲೆ ? ಹಿಂದೊಮ್ಮೆ, ಅವನಿನ್ನೂ 'ಮನುಷ್ಯ'ನಾಗಿದ್ದಾಗ, ಭವಿಷ್ಯದ ಬಗ್ಗೆ ಸವಿಗನಸು ಕಾಣುತ್ತಿದ್ದಾಗ,

ಅವನಲ್ಲಿನ್ನೂ ಹೊಸ ಜೀವಶಕ್ತಿ ತುಂಬಿ ಹರಿಯುತ್ತಿದ್ದಾಗ, ಅವನು ಪ್ರೀತಿಸಿದ ಹುಡುಗಿಯೊಬ್ಬಳು ಬೇಕಾಗಿಯೋ ನಿರುಪಾಯಳಾಗಿಯೋ ಅವನಿಗೆ ಕೈಕೊಟ್ಟು ಹೋದಳೆಂದು, ಮನುಷ್ಯತ್ವ ಕಳೆದುಕೊಂಡು, ಕನಸು ಒಡೆಯಿತೆಂದು, ಜೀವಶಕ್ತಿ ಉರಿದು ಬೂದಿಯಾಯಿತೆಂದು, ಪ್ರೀತಿ ಬರಿ ಹೊಗೆಯಾಯಿತೆಂದು, ಎಲ್ಲದರ ಮೇಲೆ– ಎಲ್ಲರ ಮೇಲೆ ಸಿಟ್ಟಾಗಿ ಈ ರೀತಿಯಲ್ಲಿ ಸೇಡು ತೀರಿಸಿಕೊಳ್ಳಲು ಬಯಸಿದನೆ ?

'ಶಶಿ, ಹಿಂದೆ ಜೀವನದಲ್ಲಿ ನನಗಾದ ಆಘಾತದಿಂದ ನಾನೆಂದೂ ಚೇತರಿಸಿಕೊಳ್ಳಲಾರೆನೇನೋ ಎನಿಸಿದ್ದ ದಿನಗಳಲ್ಲಿ ನಿನ್ನನ್ನು ಕಂಡೆ. ನಿನ್ನಿಂದ ನನ್ನ ಜೀವನಕ್ಕೊಂದು ಅರ್ಥ ಬರುತ್ತಿದೆ. ಜನ್ಮಾಂತರಗಳಿಂದಲೂ ನನ್ನ ಅತೃಪ್ತ ಆತ್ಮ ಅರಸುತ್ತಿದ್ದ ಉತ್ತರ ನಿನ್ನಲ್ಲಿ ಸಿಗತೊಡಗಿದೆ. ಈ ಉತ್ತರವನ್ನು ಪರಿಪೂರ್ಣಗೊಳಿಸಿ, ನನ್ನ ವ್ಯಕ್ತಿತ್ವವನ್ನೇ ಹರಿದುತಿನ್ನುತ್ತಿರುವ ಪ್ರಶ್ನೆಯನ್ನು ಕೊನೆಗೊಳಿಸು, ಇಲ್ಲದಂತಾಗಿಸು'–ಎಂದು ಮೊದಲಲ್ಲಿ ಆತ ಯಾಚಿಸಿದಾಗ ಎಷ್ಟು ಪ್ರಾಮಾಣಿಕನಾಗಿ ತೋರಿದ್ದನೋ ಇಂದು ಬಹಳ ದಿನಗಳ ನಂತರದ ಒಂದು ಸಂಜೆ ತನ್ನ ಸತ್ಯ ಸ್ವರೂಪವನ್ನು ಬಯಲಿಗಿಡುವಾಗಲೂ ಅದೇ, ಅಂಥದೇ ನಿರ್ಲಜ್ಜ ಪ್ರಾಮಾಣಿಕತೆ ಕಾಣುತ್ತಿತ್ತು ಅವನ ಹಿಂಡಿ ಹಿಪ್ಪೆಯಾದಂಥ ಮುಖದಲ್ಲಿ. 'ಕ್ಷಮಿಸು ಶಶಿ, ಇಷ್ಟು ದಿನಗಳ ನಂತರದ ಆತ್ಮಶೋಧನೆಯಿಂದ ನನ್ನ ಪ್ರಶ್ನೆಯ ಉತ್ತರ ನೀನಲ್ಲ–ನೀನಾಗಲಾರೆಯೆಂದು ನನಗೆ ತಿಳಿದು ಬಂದಿದೆ'–ಎಂದನಲ್ಲ, ಇವನ 'ಆತ್ಮಶೋಧನೆ'ಯ ಅರ್ಥವೇನು ? ಇವನ, ಇವನ ಸಾಹಿತ್ಯದ, ಹಣೆಬರಹವೇ ಇಷ್ಟೆಯೇ ? 'ಶೋಧನೆ' ಮಾಡಲು 'ಆತ್ಮ'ವಾದರೂ ಇವನಿಗಿದೆಯೆ ? ಅಥವಾ ಉಳಿದೆಲ್ಲದರ ಹಾಗೆ ಈ ಕಲ್ಪನೆಯೂ ಬರಿ ಭ್ರಮೆಯೋ ? ಒಂದು ಸೂತ್ರವನ್ನೋ ತತ್ವವನ್ನೋ ಕಂಡು ಹಿಡಿಯಲು ನಿರ್ಜೀವ ಅಂಕಿ-ಸಂಖ್ಯೆಗಳ ಮೇಲೆ, ಸಜೀವ ಕ್ರಿಮಿ-ಕೀಟಗಳ ಮೇಲೆ ಪ್ರಯೋಗ ಮಾಡುತ್ತಾರಲ್ಲ, ಹಾಗಿವನು ತನ್ನ ಪ್ರಶ್ನೆಗೆ ಉತ್ತರ ಹುಡುಕಲು ನನ್ನ ಮೇಲೆ ಪ್ರೀತಿಯ ಪ್ರಯೋಗ ಮಾಡಿ ನೋಡಿದನೇ ?

ಬರೇ ಪ್ರಶ್ನೆ. ಇವನ ಸಹವಾಸದಿಂದ ಜೀವನವೇ ಒಂದು ಪ್ರಶ್ನೆಯಾಗತೊಡಗಿದೆ. ಉತ್ತರವಿಲ್ಲದ ಪ್ರಶ್ನೆ ; ಉತ್ತರ ಬೇಕೆಂದು ಕಿರುಚುತ್ತಿರುವ ಪ್ರಶ್ನೆ.

ಮೊನ್ನೆ-ಮೊನ್ನೆ ಮನೆಗೆ ಹೋದಾಗ, ಯಾರೊಂದಿಗೋ ಹರಟುತ್ತಿರುವಾಗ ಜೀವನವೇ ಒಂದು ಪ್ರಶ್ನೆ ಎಂದು ತಾನಂದದ್ದನ್ನು ಕೇಳಿಸಿಕೊಂಡ ತಂದೆ ಹೇಳಿದ್ದರು, 'ಹೆಣ್ಮಕ್ಕಳು ಲಗ್ನಾ ಮಾಡಿಕೊಂಡ ಮ್ಯಾಲೆ ಎಲ್ಲಾ ಪ್ರಶ್ನೀನೂ ಬಗೀಹರೀತಾವ. ನೀ

ಕಲತಾಕಿ. ತಿಳವಳಿಕಿ ಇದ್ದಾಕಿ. ಲಗ್ನಾ ಒಲ್ಲೆ ಅಂದ್ರ ಏನ ಮಾಡಬೇಕು ನಿನ್ನ ಹಡದವ್ರು ?' —ಅದು ಅವಳ ತಂದೆಯ ಪ್ರಶ್ನೆ : ವಿದ್ಯಾವತಿಯಾದ, ವಯಸ್ಕಳಾದ ಪ್ರೀತಿಯ ಮಗಳು ಶಶಿ ಯಾಕೆ ಮದುವೆಗೆ ಒಪ್ಪಲೊಲ್ಲಳು ಎಂದು. ಸೋದರಮಾವನ ಒಬ್ಬನೇ ಮಗ ಅರುಣ, ಅಪ್ಪನ ಲಕ್ಷದ ಆಸ್ತಿಗೆ ಉತ್ತರಾಧಿಕಾರಿ. 'ಛಲೋ ಪಗಾರ' ಇರುವ ಆಫೀಸರು, ಶಶಿಯನ್ನೇ ಲಗ್ನವಾಗುವೆನೆಂದು ಕಾದು ಕುಳಿತವನು. ಒಲ್ಲೆನೆನ್ನುವ ಈ ಹುಡುಗಿಗೆ ತಲೆ ಕೆಟ್ಟಿದೆಯೇನೋ ಎಂಬ ಪ್ರಶ್ನೆ ಅವಳ ತಂದೆಗೆ.

—ಏ ಇವನೇ, ನನ್ನ 'ನೆನಪು'ಗಳ ಪಟ್ಟಿಯಲ್ಲಿ ಕೊನೆಯ ಸ್ಥಾನ ಪಡೆದಿರುವವನೇ, ಸರಿಯಾಗಿ ನೆನಪಾಯಿತು— ನಿನ್ನ ನಂಬರು ನಾಲ್ಕು. ನಿನ್ನನ್ನು ನೆನಸಿಕೊಳ್ಳುವಾಗಲೆಲ್ಲಾ ನನ್ನ ಮನಸ್ಸಿನಲ್ಲಿ ನೀನು "No. IV" ಎಂಬ ರೂಪದಲ್ಲಿ ಕಾಣಿಸಿಕೊಳ್ಳುವಿ. ನಿನ್ನ ನೆನಪು ನನ್ನ ಚಿತ್ತದಲ್ಲಿ ಈ ರೂಪು ತಳೆಯಲಿಕ್ಕಿಲ್ಲವೆಂದು ಬಹಳ ಆಶಿಸಿದ್ದೆ, ತಳೆಯಬಾರದೆಂದು ಬಹಳ ಪ್ರಯತ್ನಿಸಿದೆ. ಆದರೆ ನನ್ನ ಆಶೆ-ಪ್ರಯತ್ನಗಳಿಗೆ ಮೀರಿ ಇಂದು ಸಂಜೆ ನೀನು ನಿನ್ನ ರೂಪವನ್ನು ನಿರ್ಧರಿಸಿಕೊಂಡು ಬಿಟ್ಟಿರುವಿ. ನಿನ್ನ ಪರಿಚಯವಾದಂದಿನಿಂದ ಇಂದಿನ ವರೆಗೂ, ನನ್ನ ಅಂತರಾಳದಲ್ಲಿ ಸದಾ ಮೂಡಿ ಬರುತ್ತಿದ್ದ ನಿನ್ನ ನೆನಪಿಗೆ ಜೀವವಿರುತ್ತಿತ್ತು. ಎಷ್ಟೋ ಸಲ ಈ ಸಜೀವ ನೆನಪಿನ ಆಸರೆಯಲ್ಲಿ ಬೆಚ್ಚಗೆ ಮಲಗಿ ನಾನು 'No. I', 'No. II', 'No. III' ಗಳ ಬಗೆಗೆ ಒಂದು ರೀತಿಯ ನಿರ್ಲಕ್ಷ್ಯದಿಂದ, 'No. i', 'No. ii' ಇತ್ಯಾದಿಗಳ ಬಗೆಗೆ ಒಂದು ರೀತಿಯ ತಾತ್ಸಾರದಿಂದ ವಿಚಾರ ಮಾಡಿದ್ದುಂಟು. ಆದರೆ ಇಂದು ಸಂಜೆ ಅದು ಜೀವ ಕಳೆದುಕೊಂಡು ಬರಿಯ ನೆನಪಾಗಿದೆ ; 'No. IV' ಆಗಿದೆ. ನಾನೂ ಸಹ—ನಿನ್ನ ಹಾಗೆ, 'ಆತ್ಮಶೋಧನೆ' ಮಾಡಿಕೊಂಡಿರುವೆನೆಂಬ ಪ್ರಾಮಾಣಿಕ ಭ್ರಮೆಯಿಂದ—ನಿನಗಿದನ್ನೆಲ್ಲ ಹೇಳಿಬಿಡಬೇಕಾಗಿತ್ತು. ಹಾಗೆ ಹೇಳಲಿಲ್ಲ. 'ನನ್ನಲ್ಲಿ ಅಲ್ಲದಿದ್ದರೆ ಹೋಗಲಿ, ಎಲ್ಲಾದರೂ ಆಗಲಿ, ನಿನ್ನ ಪ್ರಶ್ನೆಗೆ ಉತ್ತರ ಕಂಡುಕೊಂಡು ಸುಖವಾಗಿರು' ಎಂದು ಹರಸಿ ಕಳಿಸಿದೆ, ಇದರರ್ಥ—ಇದ್ದುದನ್ನು ಇದ್ದಂತೆ ಹೇಳಲು ನನಗೆ ಧೈರ್ಯವಿಲ್ಲವೆಂದೇ ?

—'ಶಶೀ, ನಿನಗೆ ಧೈರ್ಯವಿಲ್ಲ. ಶಶೀ, ನೀನು ಹೇಡಿ' ಎಂದು ಯಾರೋ ಕೂಗಿದಂತೆನಿಸಿ ಆಕೆ ಒಮ್ಮೆಲೆ ಬೆಚ್ಚಿಬಿದ್ದಳು. ದೂರ ಸರಿಸಿದ್ದ ಹೊದಿಕೆಯನ್ನೆಳೆದು ಮತ್ತೆ ಹೊದ್ದುಕೊಂಡಳು. ಕಿಡಕಿಯ ಹೊರಗೆ ನೋಡಿದರೆ ಇನ್ನೂ ಅದೇ ಕತ್ತಲು. ಮಧ್ಯರಾತ್ರಿ ಈಗ. ಅಮವಾಸ್ಯೆ ಬೇರೆ. ಕಂಪೌಂಡಿನಲ್ಲಿನ ಗಿಡಗಳು ಮರಮರ ಸಪ್ಪಳ ಮಾಡುತ್ತಿವೆ. ದೂರದಲ್ಲೆಲ್ಲೋ ನಾಯಿಗಳು ಅಳುವ ಸದ್ದು ಕೇಳಿಸುತ್ತಿದೆ. ಕೆಟ್ಟಧ್ವನಿಯಲ್ಲಿ, ಅಂಜಿಕೆ ಬರಿಸುವ ಹಾಗೆ— ಒಂದಲ್ಲ, ಎರಡಲ್ಲ, ಹಲವಾರು

ನಾಯಿಗಳು ಒಮ್ಮೆಲೆ ವಿಕಾರವಾದ ಧ್ವನಿ ತೆಗೆದು ಇಂದೇ ಹೀಗೆ ಅಳಲು ಸುರು ಮಾಡಬೇಕೆ ?

ತಾನು ಅವನನ್ನು – ಛೆ, ತಪ್ಪಿತು, No. IVನನ್ನು – ಹೀಗೆ ಆಕ್ಷೇಪಿಸುವುದು, ನಂತರ ಕೊರಗುವುದು ತಪ್ಪು ಎನ್ನಿಸಿತು ಶಶಿಗೆ. No. II ಹಾಗೂ No. IIIಗಳು ತನ್ನನ್ನು ಇದೇ ಬಗೆಯಾಗಿ ಆಕ್ಷೇಪಿಸಬಾರದೇಕೆ ? ಕೈಕೊಟ್ಟುಹೋದ ಆ ಹುಡುಗಿಯನ್ನು ಪ್ರೀತಿಸುವಾಗ No. IVನ ಮನಸ್ಥಿತಿ ಹೇಗಿತ್ತೋ ಆ ಮನಸ್ಥಿತಿಯಲ್ಲಿ ತಾನಿದ್ದಾಗ, ತನ್ನಲ್ಲೂ ಜೀವಶಕ್ತಿ ತುಂಬಿ ಹರಿಯುತ್ತಿದ್ದಾಗ, ಜಗತ್ತಿನಲ್ಲಿನ ಎಲ್ಲದರ ಬಗೆಗೂ ಮೃದು ಮಧುರ ಪ್ರೀತಿ ಇದ್ದಾಗ, ಬಹಳ ವರ್ಷಗಳ ಹಿಂದೆ, No. Iನ ಪ್ರವೇಶವಾಗಿತ್ತು ತನ್ನ ಜೀವನದಲ್ಲಿ. ಸುದೈವದಿಂದಲೋ ದುರ್ದೈವದಿಂದಲೋ – ಈ ಎರಡು ಶಬ್ದಗಳಲ್ಲಿ ಈಗ ಏನೂ ವ್ಯತ್ಯಾಸವೇ ಉಳಿದಿಲ್ಲವಲ್ಲ ! – No. I ತನ್ನಿಂದ ದೂರವಾದ. ಆಗ ಕಮರಿ ಹೋದ ಉತ್ಸಾಹ, ಬತ್ತಿಹೋದ ಮಧುರತೆ, ಬೂದಿಯಾದ ಆಸೆ – ಎಲ್ಲಾ ಅಲ್ಲಿಗೇ ಕೊನೆಗಂಡಿದ್ದವು. ಅಂತೆಯೇ ಇರಬೇಕು, ನಂತರ ಬಂದ No. IIನ ಜೊತೆ ತನಗೆ ಬೆಕ್ಕು ಇಲಿಯೊಡನೆ ಚಿನ್ನಾಟವಾಡುವಂತೆ ಆಡಿ ಕೊಂದು ಬೀಸಾಕಬೇಕು ಎನ್ನಿಸಿದ್ದು. ಈ ತೃಷ್ಣೆ, ಕೊಲ್ಲಬೇಕು ಎನ್ನುವ ದಾಹ, ಇನ್ನೂ ಇದ್ದಾಗಲೇ ಅಲ್ಲವೆ No. IIIನ್ನು ಕಂಡದ್ದು ? ಆದರೆ ಅಯ್ಯಾ No. III, ನೀನು ಬದುಕಿಕೊಂಡೆ. ನನ್ನ ಒಳಗಿನ ಉರಿಯ ಬಿಸಿ ತಾಗುವಷ್ಟು ನನಗೆ ಸಮೀಪ ಬರದೆ ದೂರದೂರವೇ ಪ್ಲೆಟೋನಿಕ್ ಪ್ರೇಮಿಯಾಗಿದ್ದುಕೊಂಡು ನೀನು ಬದುಕಿದೆ. ನೀನೊಂದು ಬೇರೆ ತರದ ವಿಚಿತ್ರ ವ್ಯಕ್ತಿ. ಪ್ರೀತಿಯನ್ನು ಹೃದಯದಲ್ಲಿ ಬಚ್ಚಿಡುವದರಲ್ಲೇ ತೃಪ್ತಿ ಸಿಗುತ್ತದೆ ಎನ್ನುತ್ತೀ. ಬಚ್ಚಿಡುವ ನಿನ್ನ ಪ್ರಯತ್ನವಂತೂ ವ್ಯರ್ಥವಾಗಿದೆ. ಆದರೆ ನೀನು ನನ್ನನ್ನು ಪ್ರೀತಿಸುವುದು ತಿಳಿದಿದ್ದರೂ, ನಿನ್ನ ಈ ಉದ್ವೇಗರಹಿತವಾದ – ಉಸಿರು ಕಟ್ಟಿಸುವ ಹಾಗೆ ಶಾಂತವಾದ – ಕಣ್ಣು ಕತ್ತಲಗೂಡುವಷ್ಟು ಆಳವಾದ – ಪ್ರೀತಿಯನ್ನು ನಾನು ಒಲ್ಲೆ. ನೀನು ನನ್ನಿಂದ ದೂರವೇ ಇರು.

ಎಷ್ಟು ಬೇಗ ಮೂರುಗಂಟೆಯಾಯಿತಲ್ಲ.... ಈ ಹಾಳಾದವರ ಬಗೆಗೆಲ್ಲಾ ವಿಚಾರ ಮಾಡುವುದು ಬಿಟ್ಟು ಇನ್ನಾದರೂ ಸ್ವಲ್ಪ ನಿದ್ರೆ ಮಾಡಬೇಕೆಂದು ಶಶಿ ಮಗ್ಗುಲಾದಳು. ಯಾಕೋ ಕಿಡಿಕಿಯ ಹೊರಗಿನ ಗಾಢಾಂಧಕಾರವನ್ನು ನೋಡುತ್ತಿರಲು ಅವಳಿಗೆ ಬೇಸರವೆನಿಸಿತು. ಎದ್ದು ದೀಪ ಹಾಕೋಣವೇ ಎಂಬ ವಿಚಾರ ಬಂದು ಕೂಡಲೇ ಮರೆಯಾಯಿತು. ಕಣ್ಣು ಕುಕ್ಕಿಸುವ ಈ ವಿದ್ಯುತ್‌ದೀಪ ಬೇಡ – ಹೀಗೇ ಮಲಗಿ ಕಿಡಿಕಿಯ ಹೊರಗಿನ ಕತ್ತಲನ್ನೇ ನೋಡುತ್ತಿರಬೇಕು, ಯಾವಾಗ ಪೂರಾ

ಬೆಳಗಾಗುತ್ತದೋ ಆಗಲಿ-ಎನ್ನಿಸಿತು.

ಮೂರು ಗಂಟೆ.... ತಮ್ಮಿಬ್ಬರ ಪರಿಚಯವಾದ ಹೊಸದರಲ್ಲಿ ಹೇಳಿದ್ದ No. IV, "ಶಶೀ, ನನಗೆ ನಿನ್ನ ಯೋಚನೆಯಲ್ಲಿ ನಿದ್ರೆಯೇ ಬರುವದಿಲ್ಲ. ದಿನಾ ಮೂರು ಗಂಟೆಗೇ ಎಚ್ಚರವಾಗಿಬಿಡುತ್ತದೆ. ನಾನು ನಿನ್ನ ಬಗ್ಗೆ ಯೋಚಿಸದೇ ಇದ್ದ ಕ್ಷಣವೂ ಇಲ್ಲ.' ಇರಬೇಕು, ಆಗ ಅವನಿಗೆ ಹಾಗನಿಸುತ್ತಿದ್ದಿರಬೇಕು. ಆದರೆ ತಾನೇಕೆ ಅದಕ್ಕಾಗಿ ರಾತ್ರಿ ಮೂರು ಗಂಟೆಗೆ ಕಣ್ಣುಬಿಟ್ಟುಕೊಂಡು ಹೀಗೆ ಕುದಿಯಬೇಕು ? ತನ್ನ ಬಗ್ಗೆ ಸದಾ ಯೋಚಿಸುವೆನೆಂದು ಹೇಳಿದವನು ಇವನೇ ಮೊದಲನೆಯವನೇನಲ್ಲವಲ್ಲ ! ತನ್ನ ನೆನಪಿನಲ್ಲಿ ಈಗ ದೂರದ ಕಿರುನೆರಳಾಗಿ ಮಾತ್ರ ಉಳಿದ No. I, No. II ಇತ್ಯಾದಿ ಅಸಂಖ್ಯರೆಲ್ಲ ಹೀಗೇ ಹೇಳಿದ್ದರು. ಬಿಳಿ ಬೆಡ್‌ಶೀಟ್‌ನ ಮೇಲೆ ಬಂದ ತಗಣೆಯನ್ನು, ಕಲೆಗಳು ಬೆಡ್‌ಶೀಟಿನ ಮೇಲೆ ಉಳಿದಾವೆಂದು ಸಹ ಚಿಂತಿಸದೆ, ಅಲ್ಲೇ ಒರೆದು ಬಿಡುವ ಹಾಗೆ ಅವರನ್ನೆಲ್ಲ ಒರೆದು ಬಿಡಲಿಲ್ಲವೆ ? ಆದರೆ ಈ No. IV ಬರಿಯ ತಗಣೆಯಲ್ಲ. ಹಾಗಾದರೆ ಇವನೇನು ಚೇಳೆ ? ಹಾವೆ ?

–ಮತ್ತೆ ಪ್ರಶ್ನೆ. ಇವನ ಬಗೆಗಿನ ವಿಚಾರಗಳಿಗೆಲ್ಲ ಅನಿವಾರ್ಯವಾದ ಕೊನೆಯ ಹಂತವೆಂದರೆ ಒಂದು ಪ್ರಶ್ನಾರ್ಥಕ ಚಿಹ್ನೆ. ಉತ್ತರ ಹುಡುಕಲು ಪ್ರಯತ್ನ ಮಾಡಿದಂತೆಲ್ಲಾ ಪ್ರಶ್ನೆ ದೊಡ್ಡದು–ದೊಡ್ಡದಾಗುತ್ತ ನಡೆಯುತ್ತಿದೆ. ಸುಮ್ಮನೆ ಸ್ವಸ್ಥ ಮಲಗುವುದು ಒಳ್ಳೆಯದು.

...................

ಸ್ವಸ್ಥ ಮಲಗುವುದೆ ? ಇನ್ನೆಲ್ಲಿಯ ಸ್ವಸ್ಥ ಇಷ್ಟೆಲ್ಲಾ ಆದ ನಂತರ ?

ಏನೆಲ್ಲ ಆಗಿ ಹೋಯಿತು ಇಷ್ಟು ಸ್ವಲ್ಪ ಅವಧಿಯಲ್ಲಿ ! ಬೇಡ–ಬೇಡವೆಂದರೂ ಶಶಿಯ ಕಣ್ಣುಗಳು ಅಕಸ್ಮಾತ್ತಾಗಿ ತುಂಬಿಬಂದವು ಆ ನೆನಪಿನಿಂದ. ತನ್ನ ಸಾಹಿತ್ಯದಂತೆಯೇ ತಾನೂ ಪ್ರಾಮಾಣಿಕನೆಂದು, ಬಿಚ್ಚುಮನಸ್ಸಿನವನೆಂದು, ಇದ್ದುದನ್ನು ಇದ್ದಂತೆ ಹೇಳುವವನೆಂದು, ಒಣ ಜಂಭ ಈ No. IVನಿಗೆ. ಈ ಜಂಭದಲ್ಲಿ–ಮೌಢ್ಯದಲ್ಲಿ ಆತನಿಗೆ ತನ್ನ ಭಾವನೆಗಳ ಪೊಳ್ಳು, ತನ್ನ ವ್ಯಕ್ತಿತ್ವದ ಶೂನ್ಯ ಗಮನಕ್ಕೆ ಬರುವುದೇ ಇಲ್ಲ. ಈತನ ನವ್ಯತೆಗೆ-ಸಾಹಿತ್ಯಕ್ಕೆ ಬೆಂಕಿ ಹಚ್ಚಬೇಕು..... ಎಂಥ ಹುಚ್ಚು ಧೈರ್ಯ ಆತನಿಗೆ ! ಈ ಅನುಭವದಲ್ಲಿ ಹಿಂದೊಮ್ಮೆ ಮಣ್ಣು ಮುಕ್ಕಿದ್ದನ್ನು ಆಗಾಗ ಮರೆತುಬಿಟ್ಟು ಮತ್ತೆ ಅಂಥದೇ ಅನುಭವಗಳ ಜಾಲದಲ್ಲಿ ಸಿಕ್ಕುಬೀಳುವ, ಒದ್ದಾಡುವ ಬಯಕೆ. ಇಲ್ಲವಾದರೆ ಆತನ ಸಾಹಿತ್ಯಕ್ಕೆ ವಾಸ್ತವಿಕತೆ, ವೈವಿಧ್ಯತೆ ಎಲ್ಲಿಂದ ಬರಬೇಕು ? 'ಶಶಿ, ಎಲ್ಲಾ ಬಿಟ್ಟು ದೂರ ಹೋಗೋಣ ಬಾ. ಇಷ್ಟು ದಿನ ನಾವಿಬ್ಬರೂ ಪರಸ್ಪರರಿಗಾಗಿ ಹುಡುಕಾಡುತ್ತಿದ್ದೆವು.

ತಡವಾಗಿ ಏಕಾಗಲೊಲ್ಲದು, ನಮ್ಮ ಭೆಟ್ಟಿಯಾಗಿದೆ. ಎಲ್ಲವನ್ನೂ-ಎಲ್ಲರನ್ನೂ ತೊರೆದು ದೂರವಾಗಿ ನಮ್ಮ ಕನಸಿಗೆ ಬಣ್ಣ ತುಂಬೋಣ ಬಾ' ಎಂದಿದ್ದ ; (ಈಗ ಮಜಾ ಅನಿಸುತ್ತಿದೆ.) 'ನಿನಗೆ ನನ್ನೊಂದಿಗೆ ಬರುವ ಧೈರ್ಯವಿಲ್ಲ, ನೀನು ಹೇಡಿ, ಆದರ್ಶಗಳ ಲಕ್ಷ್ಮಣರೇಖೆಯನ್ನು ದಾಟಿ ಬರಲಾಗದ ದುರ್ಬಲಳು' ಎಂದು ತನ್ನನ್ನೇ ಆಕ್ಷೇಪಿಸಿದ್ದ ; ತನಗಾಗ ಸಿಟ್ಟು ಬಂದರೂ ಸುಮ್ಮನೇಕಿದ್ದೆ ? ಬಹುಶಃ ಆತನ ಆಕ್ಷೇಪಣೆಯಲ್ಲಿ ಸತ್ಯಾಂಶವಿತ್ತೆಂದೆ ? ಆದರೆ ಆತನ ಹುಚ್ಚಿಗೆ ತಾನೂ ಸಾಥ ಕೊಡಲಾರದುದಕ್ಕೆ ತನ್ನಲ್ಲಿ ಧೈರ್ಯವಿಲ್ಲದ್ದೊಂದು ಮಹತ್ವದ ಕಾರಣವಲ್ಲ. ಇನ್ನೊಂದು ಮುಖ್ಯ ಕಾರಣವಿತ್ತು ಅದಕ್ಕೆ. ಅದಾವುದೆಂಬುದು ನಿನ್ನೆ ಸಂಜೆ ಸ್ಪಷ್ಟವಾಯಿತು—ಈ ತಲೆತಿರುಕನಲ್ಲಿ ತನಗೆಂದೂ ಪೂರ್ಣ ವಿಶ್ವಾಸ ಹುಟ್ಟಲಿಲ್ಲ. ಅವನ ತಲೆಗೇರಿದ ಅಮಲು ಇಳಿದುಬಿಟ್ಟ ನಂತರ ತನ್ನ ಜೊತೆ ದೂರ ಬಂದವಳನ್ನು ಮತ್ತೆ ತನ್ನಿಂದ ದೂರ ನೂಕಿಬಿಡುವ ಪ್ರವೃತ್ತಿ ಆತನದು.

ನನಗೆ ಗೊತ್ತಿತ್ತೋ No. IV ! ನಿನ್ನ ಕನಸು, ಅದಕ್ಕೆ ಬಣ್ಣ ತುಂಬುವ ಬಯಕೆ, ಎಲ್ಲ ಬಿಟ್ಟು ಹೋಗುವ ಧೈರ್ಯ—ಇವುಗಳ ಅರ್ಥ ನನಗೆ ಆಗಲೇ ಗೊತ್ತಿತ್ತು ಎಂದೆ. ಒಬ್ಬನೇ ಇದ್ದು ಬೇಸರವಾದಾಗ ಸ್ವಲ್ಪದಿನಗಳ ಮಟ್ಟಿಗೆ ಜೊತೆ ಬೇಕಾಗಿತ್ತು ನಿನಗೆ—ಅಪ್ಪಿ ಮುದ್ದಿಡಲು, ರಕ್ತ—ಮಾಂಸ ತುಂಬಿದ ಜೀವಂತ ಗೊಂಬೆ. ಅಷ್ಟೇ ಅಲ್ಲವೆ ?

ಈಗ ನಿನ್ನ ಅವಶ್ಯಕತೆ ಪೂರೈಸಿದೆ. ಈಗ ನನ್ನ ನೆನಪು ನಿನ್ನ ಸುಟ್ಟುಕರಕಾದ ಹೃದಯದ ಒಂದು ಮೂಲೆಯಲ್ಲಿ ತುಕ್ಕುಹಿಡಿದ ಕಬ್ಬಿಣದ ತುಣುಕಿನಂತೆ ಬಿದ್ದುಕೊಂಡಿದೆ. ಈಗ ಇದನ್ನೆಲ್ಲ ವಸ್ತುನಿಷ್ಠವಾಗಿ, ವಿಮರ್ಶಕನ ದೃಷ್ಟಿಯಿಂದ ನೋಡಬಹುದಾದ ಶಕ್ತಿ ನಿನಗೆ ಬಂದಿದೆ—ಹೀಗೇ ಹೌದಲ್ಲವೆ ನೀನನ್ನುವುದು ? ಸುಟ್ಟಿತು ನಿನ್ನ ವಸ್ತುನಿಷ್ಠತೆ. ನನಗನಿಸುವದು—ಈ ವಸ್ತುನಿಷ್ಠತೆ ನಿನ್ನ ಸಾಹಿತ್ಯದಲ್ಲಿ ಮಾತ್ರ ಕಾಣಸಿಗುವ ಒಂದು ಬರಿಯ ಭ್ರಮೆ. ನಮ್ಮ ಹೃದಯದ ಭಾವನೆಗಳ ತೀವ್ರತೆಯ ಬಿಸಿಗೆ ಈ ಭ್ರಮೆ ಕರಗಿಹೋಗುವುದು. ಕನಸಿನಲ್ಲಿ ಕಂಡ ದುರಂತ ಸಿನೆಮಾದ ಹಾಗಿರುವ ಆ ನೆನಪುಗಳನ್ನು ಹೇಗೆ ವಸ್ತುನಿಷ್ಠವಾಗಿ ನೋಡುವುದು ? —ಅಂದಿನ ದಿನಗಳಲ್ಲಿ ನಾವಿಬ್ಬರು ಕತ್ತಲಲ್ಲಿ ತಿರುಗಿದ್ದು, ಮಳೆಯಲ್ಲಿ ತೋಯಿಸಿಕೊಂಡದ್ದು, ಒಬ್ಬರನ್ನೊಬ್ಬರು ನೋಡುತ್ತ ಗಂಟೆಗಟ್ಟಲೆ ಮೌನವಾಗಿ ಕಳೆದದ್ದು, ಒಬ್ಬರೊಬ್ಬರ ಎದೆಯಲ್ಲಿ ಮುಖ ಹುದುಗಿಸಿ ಕಣ್ಣು ಮುಚ್ಚಿ ಜಗತ್ತನ್ನೆ ಮರೆತದ್ದು (ಮರೆತಿರುವೆವೆಂದು ತಿಳಿದದ್ದು ?) —ಎಲ್ಲಾ ಎಲ್ಲಾ ಎಂದಾದರೂ ಈ ವಸ್ತುನಿಷ್ಠತೆಯ ಬಂಧನಕ್ಕೆ ಒಳಗಾಗುವದು ಸಾಧ್ಯವೆ ? ನನ್ನಿಂದ ನನ್ನ

ಸರ್ವಸ್ವವನ್ನೂ ಕಸಿದುಕೊಂಡು, ನಿನ್ನ ಎದೆಯ ಉರಿಯಲ್ಲಿ ಅದನ್ನು ಸುಟ್ಟು, ಆ ಬೂದಿಯನ್ನು ಹೇಳಹೆಸರಿಲ್ಲದಂತೆ ಗಾಳಿಗೆ ತೂರಿ, ಈಗ ನೀನು ಹೇಳುತ್ತಿರುವಿ– "ಕ್ಷಮಿಸು ಶಶೀ, ನಿನ್ನ ಸಹವಾಸದಿಂದ ನನಗೆ ದೊರೆತಿರುವ ತಣ್ಪನ್ನು ನಾನು ಅಲ್ಲಗಳೆಯುವದಿಲ್ಲ ; ಆದರೆ ಅದಕ್ಕೆ ನನ್ನಲ್ಲಿನ ಭೂತಕಾಲದ ಬೆಂಕಿಯನ್ನು ಆರಿಸುವ ಸಾಮರ್ಥ್ಯವಿಲ್ಲ" ಈ ಬೆಂಕಿ–ಆರಲಾರದ ಬೆಂಕಿ.... ನಿನ್ನಲ್ಲಿ ನಿನ್ನ ಅವಳು ಹೊತ್ತಿಸಿಬಿಟ್ಟು ಹೋದ ಬೆಂಕಿ,.... ನನ್ನನ್ನೇಕೆ ಎಳೆದುತಂದು ಈ ಬೆಂಕಿಯಲ್ಲಿ ಅರ್ಧಮರ್ಧ ಬೇಯಿಸಬೇಕಾಗಿತ್ತು ? ಬಹುಶಃ ನಾನೂ ಇಂಥದೇ ಬೆಂಕಿಯನ್ನು ನಿನ್ನಲ್ಲಿ ಹೊತ್ತಿಸಿ ಅವಳಂತೆ ದೂರವಾಗಿದ್ದರೆ ನಿನ್ನಲ್ಲಿನ ನನ್ನ ನೆನಪಿಗೆ ತುಕ್ಕು ಹಿಡಿಯುತ್ತಿರಲಿಲ್ಲವೇನೋ ! ನಿನಗೆ ತಂಪು ನೀಡಬಯಸಿದ್ದೇ ನನ್ನ ತಪ್ಪೇನು ಹಾಗಾದರೆ ? ಹೀಗೆ ಮಾಡಲು ನನ್ನನ್ನು ಪ್ರೇರೇಪಿಸಿದ ಆ ಅವ್ಯಕ್ತ ದುಷ್ಟ ಶಕ್ತಿ ಯಾವುದು ? ಎಲ್ಲಿದೆ ?

–ಸುತ್ತಲೆಲ್ಲ ಕತ್ತಲೋ ಕತ್ತಲಾಗಿರುವಾಗ ಈ ಪ್ರಶ್ನೆಗೆ ಉತ್ತರ ಸಿಗುವುದು ಬಹಳ ಕಷ್ಟತಮವೆಂದು ತೋರಿತು ಶಶಿಗೆ. ಬೇಗನೆ ಬೆಳಗಾದರೂ ಆಗಬಾರದೇ ಎಂದು ಅವಳಿಗೆ ಕಸಿವಿಸಿಯಾಯಿತು. ಬೆಳಗಾದರೆ ಮಾಡಲು ಕಾದಿರುವ ಕೆಲಸಗಳು ನೂರು. ಮೊದಲು ಮನೆಗೆ ಪತ್ರ ಬರೆಯಬೇಕು. ಅರುಣನ ತಂದೆ ಬಹಳ ಆತುರಪಡಿಸುತ್ತಿದ್ದಾರೆಂದು ಮೊನ್ನೆಯೇ ಊರಿಗೆ ಹೋಗಿದ್ದಾಗ ತಿಳಿದುಬಂದಿತ್ತು. ಅವರಾದರೂ ಎಷ್ಟೆಂದು ಕಾಯಬೇಕು ? ತಾನೀಗ ಒಂದು ನಿರ್ಧಾರ ಮಾಡಲೇಬೇಕು.

–ಬಹಳ ದಿನಗಳ ಹಿಂದೆಯೆ ಮಾಡಬೇಕಾಗಿದ್ದ ನಿರ್ಧಾರ. ಯಾಕೆ ಇಷ್ಟು ತಡವಾಯಿತು............ ?

ಏ No. IV, ನನ್ನ ಬಗೆಗಿನ ನಿನ್ನ ಪ್ರೀತಿ, ನಿನ್ನ ಸಾಹಿತ್ಯದಂತೆ, ಎಷ್ಟೇ ಪ್ರಾಮಾಣಿಕವೆಂದು ನೀನು ತಿಳಿದಿದ್ದರೂ ತಳಬುಡವಿಲ್ಲದ್ದೆಂದು, ಅದರ ಕೊನೆ ಶೂನ್ಯವೆಂದು, ಅದರಿಂದ ನಮ್ಮಿಬ್ಬರಿಗೂ ಹಿತವಿಲ್ಲವೆಂದು ನನಗೆ ಗೊತ್ತಿತ್ತು ; ಗೊತ್ತಿದ್ದರೂ ನಿನ್ನಿಂದ ದೂರ ಹೋಗುವ ನಿರ್ಧಾರ ಕೈಗೊಳ್ಳುವದು ಇಷ್ಟು ದಿನ ನನಗೆ ಸಾಧ್ಯವಾಗಲಿಲ್ಲ. ಅಗಲುವ ಗಳಿಗೆ ಒಮ್ಮಿಲ್ಲೊಮ್ಮೆ ಬರುವುದೆಂದು ಕೂಡುವ ಮೊದಲೇ ಗೊತ್ತಿದ್ದೂ, ಕೂಡಿದ್ದಷ್ಟು ದಿನ ಎಂದೂ ಅಗಲುವದಿಲ್ಲೆಂಬ ಭ್ರಮೆಯೇ ಇತ್ತು. ಆದರೆ ನಿನ್ನೆ ಸಂಜೆಯ ನಿನ್ನ ವರ್ತನೆ ಕೊನೆಗೊಮ್ಮೆ ಆ ಭ್ರಮೆಯನ್ನು ನಿರಸನಗೊಳಿಸಿತು. ನಾನು ಮುಂದೂಡತೊಡಗಿದ್ದ, ಭಯಪಟ್ಟುಕೊಂಡಿದ್ದ, ತಪ್ಪಿಸಿಕೊಳ್ಳಲು ಹವಣಿಸುತ್ತಿದ್ದ ಈ ಗಳಿಗೆ ಈಗ ಭೂತದಂತೆ ಥೈ ಎಂದು ನನ್ನೆದುರು ನಿಂತಿದೆ....

ಇಲ್ಲ.... ಈ ರೀತಿಯಲ್ಲಿ ಇದು ಕೊನೆಗೊಳ್ಳುವುದೆಂದು ಅನಿಸಿರಲಿಲ್ಲ. ಈ ಅಗಲುವ ಗಳಿಗೆಯನ್ನು ನೀನು ನಿರ್ಧರಿಸಿದ್ದರಿಂದಲೋ ಏನೋ ನನಗಿಷ್ಟು ಸಂಕಟವಾಗುತ್ತಿರುವುದು ! ನಾನೇ ಇದನ್ನು ನಿರ್ಧರಿಸಿದ್ದರೆ ಈ ವೇದನೆ ಬಹುಶಃ ಇರುತ್ತಿರಲಿಲ್ಲವೇನೋ ! 'ದೂರ ಹೋಗು' ಎನ್ನಿಸಿಕೊಂಡು ಹೋಗುವುದಕ್ಕೂ, 'ದೂರ ಹೋಗುವೆ' ಎಂದು ಹೇಳಿ ಹೋಗುವುದಕ್ಕೂ ಬಹಳ ವ್ಯತ್ಯಾಸ ಇದೆಯಲ್ಲವೆ ? ಇಲ್ಲಿ ಬಂತು ಮತ್ತೆ – ಪೊಳ್ಳು ಅಭಿಮಾನದ, false prestigeದ ಪ್ರಶ್ನೆ.

ಕಿಡಿಕಿಯ ಹೊರಗೆ ಕಾಣುತ್ತಿರುವ ಆಕಾಶ ಕ್ರಮೇಣ ತಿಳಿಯಾಗತೊಡಗಿದೆ. ಕತ್ತಲು ಕರಗತೊಡಗಿದೆ. ಬೆಳ್ಳಿಚಿಕ್ಕೆ ಕಾಣಬಹುದೇ ಇನ್ನೊಂದು ಸ್ವಲ್ಪ ಹೊತ್ತಿನಲ್ಲಿ ? ಕಾರ್ತೀಕ ಮಾಸದಲ್ಲಿ ಈ ಬೆಳ್ಳಿಚಿಕ್ಕೆ ನೋಡಿ ಸ್ನಾನ ಮಾಡಿದರೆ ಬಹಳ ಪುಣ್ಯವೆಂದು ಅಜ್ಜಿ ಹೇಳುತ್ತಿದ್ದುದು ನೆನಪಾಗಿ ಶಶಿಗೆ ನಗು ಬಂದಿತು. 'ಪಾಪ' 'ಪುಣ್ಯ'ಗಳು, 'ಸರಿ' 'ತಪ್ಪು'ಗಳು ತನ್ನ ಬಾಳಿನಲ್ಲಿ ಅರ್ಥ ಕಳೆದುಕೊಂಡು ಬಹಳ ಕಾಲವಾಯಿತು. ನಿಜವಾಗಿಯೂ ಇವುಗಳಿಗೆ ಅರ್ಥವೊಂದೆಂಬುದಿದೆಯೇ ? ಬೇಕಾದವರು ತಮಗೆ ಬೇಕಾದ ಅರ್ಥವನ್ನು ಅವುಗಳಿಗೆ ಕೊಟ್ಟು ಹದಗೆಡಿಸುತ್ತಾರೆ ಅಷ್ಟೆ – ತಮ್ಮ ವರ್ತನೆಯನ್ನು ಸಮರ್ಥನೆ ಮಾಡಿಕೊಳ್ಳಬೇಕಾದಾಗ, ಉಳಿದವರ ಮಾತಿರಲಿ, ಈ ಯಾವುದಕ್ಕೂ ಪರಿವೆ ಮಾಡದ ಅತೀತ ತಾನೆಂದು ಹೇಳಿಕೊಳ್ಳುವ ಈ No. IVನೇ (ಅವನಿಗಿನ್ನೂ ಈ ನಂಬರು ಸಿಗದೇ ಇದ್ದಾಗ) ಒಮ್ಮೆ ತನಗೆ ಹೇಳಿರಲಿಲ್ಲವೆ – "ಶಶಿ, ನಾನು ಮಾತಾಡುವುದು – ನಾನು ವಿಚಾರ ಮಾಡುವುದು – ನಾನು ಬರೆಯುವುದು ಎಲ್ಲಾ ತಪ್ಪು-ತಪ್ಪು ಎಂದು ಒಮ್ಮೊಮ್ಮೆ ಪ್ರಾಮಾಣಿಕವಾಗಿ ಅನಿಸುವುದು ; ನನ್ನ ವಾಸ್ತವಿಕತೆಯ ಬಗೆಗಿನ ಹುಚ್ಚು-ಪ್ರೀತಿ ಎಲ್ಲಾ ಬರೇ ಕಲ್ಪನೆ-ಭ್ರಮೆ ಅನಿಸುವುದು" – ಎಂದು ? ಅವನಿಗೆ ಸ್ವತಃದ ಬಗೆಗೇ ನಂಬಿಕೆ-ತಿಳುವಳಿಕೆ ಇರಲಿಲ್ಲವೆನ್ನುವುದಕ್ಕೆ ಇಷ್ಟು ಪುರಾವೆ ಸಾಕಾಗಿತ್ತಲ್ಲವೆ ? ..... ಈಗ ತಿಳಿಯುತ್ತಿದೆ ಸ್ವಲ್ಪ-ಸ್ವಲ್ಪವಾಗಿ. ಈ ತಿಳುವಳಿಕೆ – ಈ ಪ್ರಜ್ಞೆ ಮಾತ್ರ ಈ ಚಳಿಗಾಲದ ರಾತ್ರಿಯಲ್ಲೂ ಮೈಯನ್ನೆಲ್ಲ ಬೆಚ್ಚಗೆ ಮಾಡುತ್ತದೆ, ವಿದ್ಯುತ್ ಕರೆಂಟು ಹರಿದಾಡಿದ ಹಾಗೆ, ನರಗಳೆಲ್ಲ ನಿರ್ಜೀವವಾದ ಹಾಗೆ.

ಎಲ್ಲ ಮುಗಿದು ಹೋಯಿತು. ಆದರೂ ಏಕೆ ಅಸಮಾಧಾನ ? ಹೀಗಾಗುವುದೆಂದು, No. IVನೊಂದಿಗಿನ ಸಂಬಂಧ ಒಮ್ಮೆ ಕೊನೆಗೊಳ್ಳುವುದೆಂದು ಮೊದಲೇ ಗೊತ್ತಿದ್ದೂ ಏಕೆ ಈ ಅತೃಪ್ತಿ ? ಈ ಕೊನೆ ನಿರೀಕ್ಷಿತವಾಗಿದ್ದುದೇ. ಆದರೆ ಅದರ means – ತಾನು ಕಲ್ಪಿಸಿದ್ದ ಬಗೆ ಇದಲ್ಲ. ಅದಕ್ಕೆ ಬೇರೆಯದೇ ರೊಮ್ಯಾಂಟಿಕ್ ಸ್ವರೂಪವೊಂದಿತ್ತು. ಅದೀಗ ನಿನ್ನೆ ಸಂಜೆ ಹಾಳಾಯಿತು. ಪರಿಣಾಮ – ಈ ನಿರಾಸೆ,

ದುಃಖ, ಅತೃಪ್ತಿ. ಇದರ ಕೊನೆ ? – ತಿಳಿಯದು. ಈ ಪ್ರಶ್ನೆಗುತ್ತರ ಅರಸುವುದರ ಬದಲು, ಇದೆಲ್ಲಕ್ಕೆ ತಾನು ಕಲ್ಪಿಸಿದ್ದ ಆ ರೊಮ್ಯಾಂಟಿಕ್ ಕೊನೆಯನ್ನು ಸುಮ್ಮನೆ ನೆನಪಿಸಿಕೊಳ್ಳುತ್ತಾ ಬಿದ್ದುಕೊಂಡಿದ್ದರೆ ಪೂರಾ ಬೆಳಗಾಗುವವರೆಗೂ ಹೇಗಾದರೂ ಹೊತ್ತು ಕಳೆಯಬಹುದು....

ನಿನ್ನೆ ಸಂಜೆ.... ಸುಳ್ಳೇ ನನ್ನನ್ನು ವಂಚಿಸಬಾರದೆಂದು, ಪ್ರಾಮಾಣಿಕವಾಗಿ ನಿನ್ನ ಮನಸ್ಸಿನಲ್ಲಿದ್ದುದನ್ನು (ನಿನಗೇ ಅಸ್ಪಷ್ಟವಾದ ಕಲ್ಪನೆಯನ್ನು) ನನಗೆ ಹೇಳಬೇಕೆಂದು ಹೀರೋನ ಉತ್ಸಾಹದಿಂದ ನೀನು ಬಂದೆ ; "ಕ್ಷಮಿಸು ಶಶೀ, ನನ್ನ ಪ್ರಶ್ನೆಯ ಉತ್ತರ ನೀನಲ್ಲ – ನೀನಾಗಲಾರೆ" ಎಂದೆ ; ಆಗ ಒಂದು ಕ್ಷಣ, ಯಾರು ನಿನ್ನ ಪ್ರಶ್ನೆಯ ಉತ್ತರವೆಂದು ನಿನಗೆ ಅನ್ನಿಸುತ್ತಿತ್ತೋ ಮತ್ತು ಯಾರು ಎಂದೂ ಉತ್ತರ ರೂಪದಲ್ಲಿ ನಿನ್ನೆಡೆ ಬರುವುದು ಸಾಧ್ಯವಿಲ್ಲವೋ ಮತ್ತು ಯಾರ ಉತ್ತರಕ್ಕಾಗಿ ಕಾದು-ಕಾದು ಒಂದು ದಿನ ನಿನ್ನ ಪ್ರಶ್ನೆ ಸಹಿತವಾಗಿ ನೀನು ಸಾಯಬೇಕಾಗಿದೆಯೋ, ಆ ನಿನ್ನ ಅವಳ ಬಗ್ಗೆ ನನಗೆ ವಿಪರೀತ ಮತ್ಸರ ಅನ್ನಿಸಿತು – ತಿಳುವಳಿಕೆಯಿಲ್ಲದ ಸಣ್ಣ ಹುಡುಗಿಯ ಹಾಗೆ. ರಕ್ತ ತಕತಕನೆ ಕುದಿಯಿತು.

– ಒಂದು ಕ್ಷಣ, ಅಷ್ಟೇ, ಒಂದೇ ಕ್ಷಣ. ಈಗ ಆತನಿಂದ ದೂರ ಈ ರಾತ್ರಿ ಹಾಸಿಗೆಯ ಮೇಲೆ ಒಬ್ಬಳೇ ಮಲಗಿ, ಆತನ ತಲೆಯೆಣ್ಣೆಯ ವಾಸನೆಯನ್ನು ನೆನೆನೆನೆದು ತಲೆದಿಂಬನ್ನು ಮೂಸಿ ನೋಡುತ್ತ, ಕಿಡಿಕಿಯ ಹೊರಗಿನ ಆಕಾಶದಲ್ಲಿ ನಿಧಾನವಾಗಿ ಮೂಡಿ ಬರುತ್ತಿರುವ ಬೆಳ್ಳಿಚಿಕ್ಕೆಯತ್ತ ನೋಡುತ್ತಿರುವಾಗ ತನ್ನ ಮನಸ್ಸು ತಿಳಿಯಾಗಿದೆ ಎನ್ನಿಸಿತು ಶಶಿಗೆ. ತಾನೆಂದೂ ಕಾಣದ ಆ ಅವಳ ಬಗ್ಗೆಯೇಕೆ ಮತ್ಸರ ? ಒಂದು ರೀತಿಯಿಂದ ಹೀಗಾದುದು ಒಳ್ಳೆಯದೇ ಆಯಿತು. ಇಲ್ಲವಾದರೆ ತಾನು ತಮ್ಮಿಬ್ಬರ ಸಂಬಂಧದ ಕೊನೆಯ ಬಗ್ಗೆ ಕಲ್ಪಿಸಿದ್ದ ಆ ರೊಮ್ಯಾಂಟಿಕ್ ರೀತಿಯಲ್ಲಿ ಎಲ್ಲಾ ನಡೆದುಹೋಗಿದ್ದರೆ.... ಆಗ ತಾನೂ ದ್ರೋಹಿಯಾಗುತ್ತಿರಲಿಲ್ಲವೆ ?

– ನಾನೇನೆಂದು ಕಲ್ಪಿಸಿದ್ದೆ ಗೊತ್ತೇ No. IV ? ಹೇಳಿದರೆ ಸ್ವಾರ್ಥಿ ಅನ್ನುವಿಯೇನೋ ! ಅನ್ನು. ನಿನ್ನೆ ಸಂಜೆ ಹೃದಯದಲ್ಲಿ ಹತ್ತಿಕ್ಕಿಟ್ಟದ್ದನ್ನೆಲ್ಲ ನನ್ನೆದುರು ಪ್ರಾಮಾಣಿಕತೆಯ ಸೋಗಿನಲ್ಲಿ ಕಾರಿಕೊಂಡುಬಿಟ್ಟೆಯಲ್ಲ, ಆಗಲೇ ನಿನಗೆ ಹೇಳೋಣವೆಂದುಕೊಂಡಿದ್ದೆ. ಯಾಕೋ ಬೇಡವೆನ್ನಿಸಿತು. ಈಗ ಸ್ಪಷ್ಟವಾಗಿ ಹೇಳುತ್ತಿರುವೆ : ನನಗಾಗ ಅನ್ನಿಸಿತ್ತು – ನನ್ನ ಬಗೆಗಿನ ನಿನ್ನ ಹುಚ್ಚು-ಸೆಳೆತ ಹೀಗೆಯೇ ಇರಲಿ, ಇಷ್ಟೇ ತೀವ್ರವಾಗಿರಲಿ, ಕುದಿಯುತ್ತಿರಲಿ, ಉರಿಯುತ್ತಿರಲಿ ; ಆಗ ಸದ್ದಿಲ್ಲದೆ ನಿನ್ನ ಹುಚ್ಚಿಗೆ – ತೀವ್ರತೆಗೆ – ಬೆಂಕಿಗೆ ನೀರು ಹಾಕಿ, ಕಲ್ಲು ಹಾಕಿ, ಮಣ್ಣು ಹಾಕಿ, ಗೋರಿ ಕಟ್ಟಿ ನಾನು ಎಲ್ಲಾದರೂ ದೂರ ಹೋಗಬೇಕು ; ಆಗ ಹಾಗಾದ ನಂತರ, ನಿನ್ನಲ್ಲಿ

ಅವಳು ಹೊತ್ತಿಸಿಹೋದ ಸುಪ್ತಜ್ವಾಲೆಯನ್ನು ಈ ಉರಿ ಕೆರಳಿಸಿ ಭುಗಿಲ್ಲೆಂದು ಬೆಂಕಿಯಾಗಿ, ಅದರಲ್ಲೇ ನೀನು ಸ್ವಲ್ಪ–ಸ್ವಲ್ಪವಾಗಿ ಸುಟ್ಟು-ಬೆಂದು ಹೋಗುವುದನ್ನು ದೂರದಿಂದ ನೋಡುತ್ತಿರಬೇಕು ; ನೋಡಿ ಸಮಾಧಾನ ಹೊಂದಬೇಕು....

–ತನ್ನ ಆ ವಿಚಾರದ ಭಯಂಕರ ಕ್ಷುಲ್ಲಕ ನೀಚತನದ ಅರಿವು ಬಂದು ಶಶಿ ಒಂದು ಕ್ಷಣ ನಡುಗಿದಳು. ಕೊನೆಯ ನಂಬರು ಪಡೆದೂ ಸಹ ಬರಿ 'ನೆನಪಾ'ಗಿ ಒಂದೆಡೆ ಸುಮ್ಮನೆ ಬೀಳುವ ಬದಲು ಹೀಗೆ ರಾತ್ರಿ ತನ್ನನ್ನು ನಿದ್ರೆಗೆಡಿಸುವ, ಕಾಡಿಸುವ, ಕೊಲ್ಲುವ No. IVನ ಮೇಲೆ ಅವಳಿಗೆ ಸಿಟ್ಟು ಬಂದಿತು. ಇದೊಂದೇ ರಾತ್ರಿ, ಕೊನೆಯ ಸಲ. ಇನ್ನೆಂದೂ ಮನಸ್ಸಿನಲ್ಲಿ ಇಂಥ ಅನರ್ಥಕಾರಿ ಪ್ರಶ್ನೆಗಳಿಗೆ ಆಸ್ಪದ ಕೊಡಬಾರದು. ....ಹೌದು, ನಾಳೆ ಪೂರಾ ಬೆಳಗಾದೊಡನೆ ಮನೆಗೆ ಪತ್ರ ಬರೆದುಬಿಡಬೇಕು.

–ಎಷ್ಟು ಪ್ರಯತ್ನಿಸಿದರೂ ತನ್ನ ಹಿಡಿತ ಮೀರಿ ಹೊರಬಂದು ರಾಕ್ಷಸಾಕಾರ ತಾಳುತ್ತಿರುವುದು ಇನ್ನೊಂದು ಪ್ರಶ್ನೆ : No. IVನ ಪ್ರಶ್ನೆಗೆ ಎಂದೂ ಉತ್ತರ ಸಿಗುವುದಿಲ್ಲೆಂದು, ಅವನ ಪಾಲಿಗೆ ಅವಳು ಬರಿಯ ಕನಸಾಗಿಯೇ ಉಳಿಯುವಳೆಂದು, ಆ ಪ್ರಶ್ನೆ–ಕನಸು ಸಹಿತವಾಗಿಯೇ ಒಂದು ದಿನ ಆತನ ಜೀವನದ ಅಂತ್ಯವಾಗುವುದೆಂದು ತನಗೇಕೆ ಅನ್ನಿಸಬೇಕು ? 'ನಿನ್ನ ಕನಸು ಕನಸಾಗಿಯೇ ಉಳಿಯುವುದು. ಪ್ರಶ್ನೆ ಪ್ರಶ್ನೆಯಾಗಿಯೇ ಇರುವುದು' ಎಂದು ತಾನಾತನಿಗೆ ಹೇಳಿದ್ದರಲ್ಲಿ ಅದು ಹಾಗೇ ಉಳಿಯಲಿ-ಇರಲಿ ಎಂಬ ಗುಪ್ತ ಬಯಕೆಯೊಂದಿತ್ತೆ ? ಅವನ ಕನಸೊಂದು ದಿನ ನನಸಾಗಿ ಅವನ ಪ್ರಶ್ನೆಗೊಮ್ಮೆ ಉತ್ತರ ಸಿಗಲೂ ಬಹುದಲ್ಲವೆ ? ಅದು ಸಾಧ್ಯವೇ ಇಲ್ಲವೆಂದು ತಾನು ನಂಬಿರುವುದರಲ್ಲಿ ಅದು ಸಾಧ್ಯವಾಗಬಾರದೆಂಬ ಇಚ್ಛೆಯೂ ಇದೆಯೆ ? ಇದೇನು ಅಸೂಯೆಯೇ ಅಜ್ಞಾನವೇ ? ಇದೇ ಬಗೆಯ ಅನಿಸಿಕೆ No. IVನಲ್ಲೂ ಇತ್ತೆಂಬುದು ಅನೇಕ ಸಲ ಆತನ ವರ್ತನೆಯಲ್ಲಿ ಕಂಡಿದ್ದೂ ತಾನದನ್ನು ನಿರ್ಲಕ್ಷಿಸಿದ್ದೇಕೆ ? ಅರುಣನ ಬಗ್ಗೆಯೊಮ್ಮೆ ಹೇಳಿದಾಗ, 'ಮದುವೆಯೊಂದು ನಿನ್ನ ಪ್ರಶ್ನೆಗೆ ರಾಮಬಾಣವೆಂದು ನೀನು ತಿಳಿದಿದ್ದರೆ ಅದು ತಪ್ಪು ಶಶೀ, ಪ್ರಶ್ನೆ ಜೀವನದ ಸಂಗಾತಿ. ಅದರಿಂದ ನಿನಗೆ ಬಿಡುಗಡೆ ದೊರೆಯಲಾರದು'– ಎಂದಿದ್ದನಲ್ಲವೆ ಆತ ? ತನಗಾದಂತೆ ನನಗೂ ಮದುವೆಯಿಂದ ಬಾಳಿನಲ್ಲಿ ಅತೃಪ್ತಿಯು, ಎದೆಗುದಿಯು, ಬಂಧನದಲ್ಲಿ ಸಿಲುಕಿದಂಥ ಚಡಪಡಿಕೆಯು ಅನುಭವವಾಗುವುದೆಂದು ಆತ ತಿಳಿದಿರುವನೆ ? ಹಾಗಾಗಲೆಂದು ಬಯಸಿರುವನೆ ? ಈ ಪ್ರಶ್ನೆಗೆ ಕೊನೆಯೆಲ್ಲಿ ? ಇದನ್ನು ಇದರ ಪಾಲಿಗೇ ಬಿಡುವುದೊಳ್ಳೆಯದು.

–ಹೊದಿಕೆಯನ್ನು ಮುಖದ ತುಂಬ ಹೊದ್ದುಕೊಳ್ಳುತ್ತಿರುವಂತೆ ಶಶಿ ಬೆಳಗಾದೊಡನೆ, ಮದುವೆಗೆ ಒಪ್ಪಿರುವೆನೆಂದು ಅಪ್ಪನಿಗೆ ಪತ್ರ ಬರೆಯುವ ನಿರ್ಧಾರ

ಮಾಡಿದಳು. ಕಿಡಿಕಿಯಾಚೆ ಬೆಳ್ಳಿಚಿಕ್ಕೆ ಸ್ಪಷ್ಟವಾಗಿ ಮೂಡಿತ್ತು. ಇನ್ನೇನು, ಬೆಳಗಾಗಲು ತಡವಿಲ್ಲವೆನಿಸಿ ಅವಳಿಗೆ ಸಮಾಧಾನವೆನಿಸಿತು.

–ಕಣ್ಣುಮುಚ್ಚಿ ಜಿಗಿ ಹೊಡೆಯುತ್ತಿರುವೆ, ಅರುಣ, ನಿನ್ನ ಜೀವನದಲ್ಲಿ. ಇದರ ರಭಸಕ್ಕೆ ಏಳಬಹುದಾದ ತೆರೆಗಳ ಭಯವಿಲ್ಲದಿಲ್ಲ ನನಗೆ. ವರ್ತುಲಾಕಾರವಾಗಿ ಏಳುವ ತೆರೆಗಳು.... ಆದರೆ ಕ್ರಮೇಣ ಶಾಂತವಾಗಿ–ಸ್ತಬ್ಧವಾಗಿ ಹೋಗುವ ತೆರೆಗಳು....

–ಕೊನೆಯ ಪ್ರಶ್ನೆ,

ನಿಜವಾಗಿಯೂ ಶಾಂತವಾಗುವವೆ ? ಶಾಂತಿಯೆಂಬುದಾದರೂ ಅಸ್ತಿತ್ವದಲ್ಲಿದೆಯೆ ?

ನನಗೆ ಗೊತ್ತಿಲ್ಲ ;

ನಿನಗೆ ಗೊತ್ತಿದೆಯೇ No. IV ?

❖ ❖ ❖

# ನೆನಪು . . . . ಬರಿ ನೆನಪು

ಮುಂಜಾನೆ ಗಂಟೆ ಒಂಬತ್ತೇ ಆಗಿದ್ದರೂ ಎಂತಹ ಬಿಸಿಲು ! ಇನ್ನು ಮಧ್ಯಾಹ್ನ ಹೇಗಿರುವದೋ.... ಆ ಕಲ್ಪನೆಯಿಂದಲೇ ತುಂಬ ಸೆಕೆಯೆನಿಸಿ ಪಾವನಾ ತನ್ನ ಕೋಣೆಯಿಂದ ಎದ್ದು ಪಡಸಾಲೆಗೆ ಬಂದಳು.

ಬೇಸಿಗೆಯ ರಜೆ. ಮುಂಜಾನೆ ಅಲಾರಂ ಇಟ್ಟು ಟೈಂಪೀಸನ್ನು ಶಪಿಸುತ್ತ ನಾಲ್ಕಕ್ಕೆ ಏಳಬೇಕಾದ ಪ್ರಮೇಯುವಿರಲಿಲ್ಲ. ಪೂರಾ ಹನ್ನೆರಡು ತಾಸು ನಿದ್ರೆ ಮಾಡಬಹುದು. ಒಂದು ತಾಸಿನ ಹಿಂದೆಯಷ್ಟೇ ಅವಳು ಎದ್ದದ್ದು. ಚಹಾ ಕುಡಿದಾದ ನಂತರ ಕೂಡಲೆ ಸ್ನಾನ ಮಾಡಲು ಮನಸ್ಸು ಬರದೆ Grace Metaliousನ ಕಾದಂಬರಿಯೊಂದನ್ನು ತಿರುವಿಹಾಕುತ್ತ ಕುಳಿತಳಾಕೆ.

—'ಓದಬೇಡ ಅದನ್ನು, ಹೊಲಸು ಪುಸ್ತಕ,' ಮೂರ್ತಿ ಹೇಳಿದ್ದ ಅವಳಿಗೆ ಒಂದು ವರ್ಷದ ಹಿಂದೆ. ಕಾದಂಬರಿ ಎಂತಹದಾದರೇನು, ಬಿಡುವಿನ ವೇಳೆ ಕಳೆಯಲು ಅದು ಆಪ್ಯಾಯಮಾನವೇ ಅಲ್ಲವೆ ? ಮೂರ್ತಿಯದೊಂದು ತಲೆ ಎಂದು ಮನಸ್ಸಿನಲ್ಲಿಯೇ ನಕ್ಕಳು ಪಾವನಾ.

ಮೂರ್ತಿಯ ನೆನಪು ಧಾರವಾಡದ ಆ ಸೆಕೆಯನ್ನು ಕ್ಷಣಕಾಲ ಮರೆಯಿಸಿತು. ಜೂನ್ ಬರಲು ಇನ್ನೂ ಪೂರಾ ಒಂದು ತಿಂಗಳ ಅವಧಿ ಇದೆ. ಅಷ್ಟು ಕಾಲ ಮೂರ್ತಿಯನ್ನು ಕಾಣದೇ ಇರಬೇಕಲ್ಲ ! ಆದರೇನು, ನಂತರ ಜೀವಮಾನವಿಡೀ ಮೂರ್ತಿಯ ಜೊತೆಗೇ ಕಳೆಯುವದಿದೆ.

ಮದುವೆಯ ನೆನಪಿನಿಂದ ಪಾವನಾ ತುಸು ಉಲ್ಲಸಿತಳಾದಳು. ಆದರೆ ಯಾಕೋ ಹೆಚ್ಚುತ್ತಿರುವ ಬಿಸಿಲಿನಿಂದ ಅವಳಿಗೆ ಬಹಳ ಬೇಸರವೆನಿಸಿತು. ಅವ್ಯಕ್ತ ಅಸ್ವಸ್ಥತೆಯಿಂದ ಮನಸ್ಸು ಅತ್ತಿತ್ತ ಪರದಾಡಿತು.

"ಬರ್ರಿ ಒಳಗ" —ಹೊರಗಿನಿಂದ ಅವಳ ತಮ್ಮ ಗೋಪಿಯ ಧ್ವನಿ ಕೇಳಿಸಿತು. ಯಾರೋ ಬಂದಿರಬೇಕು. ಪಾವನಾ ಕತ್ತೆತ್ತಿ ನೋಡಿದಾಗ ಒಳಬಂದ ಗೋಪಿ ಹೇಳಿದ, "ಅಕ್ಕಾ, ಯಾರೋ ಮಿ. ಪಿಂಟೋ ಅಂತ, ಕಾರವಾರದವರು."

ಎದೆಯೊಳಗೆ ಒಮ್ಮೆಲೆ ವಿನಾಕಾರಣ ನೋವಾದಂತೆನಿಸಿ ಅವಳು ತಟ್ಟನೆ ಎದ್ದು ನಿಂತಳು. ಪಿಂಟೋ ? ಎಲಿಸನ್ ಪಿಂಟೋ ? ಈಗೇಕೆ ಬಂದ ? ಎಲ್ಲಿಂದ ? ಹೇಗೆ ?

—ಮೆಟ್ಟಲೇರಿ ಬಾಗಿಲಿಗೆ ಬಂದಿದ್ದ ಎಲಿಸನ್ ಸ್ವಲ್ಪ ಆಶ್ಚರ್ಯದಿಂದ ಎದುರಿಗೆ ನಿಂತಾಕೆಯನ್ನು ನೋಡಿದ.

“ಬರ್ರಿ ಒಳಗ” ಎಂದವಳೇ ಪಾವನಾ ಒಳಗೋಡಿದಳು. ನಡುಮನೆಯಲ್ಲಿ ಗೋಡೆಗೆ ಹಾಕಿದ್ದ ದೊಡ್ಡದಾದ ನಿಲುವುಗನ್ನಡಿಯೆದುರಿನಿಂದ ಹಾಯ್ದು ಹೋಗುವಾಗ ಅವಳಿಗೆ ಒಮ್ಮೆಲೆ ಅನ್ನಿಸಿತು—ಮುಂಜಾನೆ ಎದ್ದು ಸರಿಯಾಗಿ ಮುಖ ಸಹ ತೊಳೆದುಕೊಳ್ಳಲಿಲ್ಲ ತಾನು. ಛೆ, ಕೆದರಿದ ಕೂದಲಿನ ತನ್ನ ಗುರುತು ಎಲಿಸನ್‌ಗೆ ಸಿಕ್ಕಿತೇ ?

ಪಾವನಾಳ ತಾಯಿ ಸೀತಮ್ಮ ನಗುಮುಖದಿಂದ ಹೊರಬಂದು ಬಂದಾತನನ್ನು ಸ್ವಾಗತಿಸಿದರು, “ಇದೇನಪಾ, ಇಷ್ಟದಿನದ ಮ್ಯಾಲ ನಮ್ಮ ನೆನಪು ಬಂತು ?”

“ನೆನಪು ಇದ್ದೇ ಇತ್ತು, ಬರೂದಾಗಿರಲಿಲ್ಲ ಅಷ್ಟs. ನನ್ನ ಮಮ್ಮೀಗೆ ಸ್ವಲ್ಪ ವಯಸ್ಸಾಗಿ ಮೈಯಾಗ ಅರಾಮ ಇಲ್ಲಂತ ನಾ ಈಗ ಕಾರವಾರದಾಗೇ ಇದ್ದೀನಿ. ಡಾಕ್ಟರ್ ಇಲ್ಲೇನು ?” —ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತ ಎಲಿಸನ್ ಕೇಳಿದ.

ಒಳಬಾಗಿಲಲ್ಲಿ ನಿಂತು ಆತನ ಮಾತಿಗೆ ಕಿವಿಗೊಟ್ಟಿದ್ದ ಪಾವನಾ ತನ್ನ ನೆನಪು ಆತನಿಗೆ ಇದೆಯೋ ಇಲ್ಲವೋ ತಿಳಿಯದೆ ಚಡಪಡಿಸಿದಳು.

ಸೀತಮ್ಮ ಉತ್ತರಿಸುತ್ತಿದ್ದರು, “ಅವರು ಬೆಳಗಾವಿಗೆ ನಮ್ಮ ಹಿರೇಮಗನ ಮನೀಗೆ ಹೋಗಿ ಎಂಟ ದಿನಾ ಆತು. ನಿಮ್ಮ ಮನ್ಯಾಗ ಎಲ್ಲಾರೂ ನೆಟ್ಟಗಿದ್ದಾರಿಲ್ಲೊ ? ನಿನ್ನ ಲಗ್ನ ಆತೇನು ?”

ತಾಯಿಯ ಕೊನೆಯ ಪ್ರಶ್ನೆಗೆ ಆತನೇನು ಉತ್ತರಿಸುವನೋ ಎಂದು ಕಿವಿ ನಿಮಿರಿಸಿದ ಪಾವನಾಗೆ ಆತನ ಉತ್ತರದಿಂದ ಯಾಕೋ ಸಮಾಧಾನವಾದಂತೆನಿಸಿತು. “ನನ್ನದಿನ್ನೂ ಲಗ್ನ ಆಗಿಲ್ಲ. ನಾ ಪೂನಾದಾಗ ನಾಕು ವರ್ಷ ಸರಕಾರಿ ಡಾಕ್ಟರಂತ ಕೆಲಸಾ ಮಾಡಿದೆ. ಮಮ್ಮಿಯ ಹತ್ತರ ಯಾರೂ ಇಲ್ಲ ಅಂತ ಕಾರವಾರಕ್ಕ ಬಂದು ಎರಡ ವರ್ಷಾತು. ಗೋಪಿ ಎಷ್ಟ ದೊಡ್ಡಾವಾಗ್ಯಾನ ! ಆಗ ನಾಲ್ಕ ವರ್ಷದ ಹುಡುಗ ಇದ್ದ. ಈಗ ನನಕಿಂತ ಎರಡ ಇಂಚು ಎತ್ತರಾಗ್ಯಾನ. ನನಗ ಗುರುತs ಸಿಗಲಿಲ್ಲ.”

ಹನ್ನೆರಡು ವರ್ಷಗಳ ಹಿಂದೆ ಗೋಪಿ ನಾಲ್ಕು ವರ್ಷದ ಹುಡುಗನಾಗಿದ್ದ ನಿಜ ; ಆದರೆ ಗೋಪಿಗಿಂತಲೂ ಮೂರು ವರ್ಷಕ್ಕೆ ದೊಡ್ಡವಳಾದ ತನ್ನ ನೆನಪು ಎಲಿಸನ್‌ಗೆ ಏಕಿಲ್ಲ ? ಅಥವಾ ತನ್ನ ಬಗ್ಗೆ ಕೇಳಲು ಆತನಿಗೇನು ಸಂಕೋಚವೆ ?

ಸೀತಮ್ಮನೇ ಮಗಳ ಬಗ್ಗೆ ವಿವರವಿತ್ತರು, “ನಮ್ಮ ಪಾವನಾ ಈ ವರ್ಷ ಬಿ.ಎಸ್‌ಸಿ. ಮುಗಿಸಿದಳು.”

“ಹಿಂಗೇನು ?” ಎಂದಷ್ಟೇ ಕೇಳಿ ಸುಮ್ಮನಾದ ಎಲಿಸನ್.

ಸದ್ಯ ತಾಯಿ ತನ್ನ ಮದುವೆಯ ಬಗ್ಗೆ ಹೇಳಲಿಲ್ಲವಲ್ಲ ಎಂದುಕೊಂಡಳು ಪಾವನಾ. ಎಲಿಸನ್‌ಗಾಗಿ ಚಹಾ ಮಾಡೆಂದು ಅಡುಗೆಯವನಿಗೆ ಹೇಳಲೆಂದು ಆಕೆ ಒಳಗೋಡಿದಳು.

ಎಲಿಸನ್ ಪಿಂಟೋ....

ಹನ್ನೆರಡು ವರ್ಷಗಳ ಹಿಂದೆ....

ಎಲಿಸನ್‌ನ ತಾಯಿ ಮಿಸೆಸ್ ಪಿಂಟೋ ಪಾವನಾಳ ತಂದೆ ಡಾ. ರಾಮಚಂದ್ರರ ಸ್ನೇಹಿತೆ. ಹನ್ನೆರಡು ವರ್ಷಗಳ ಹಿಂದೆ ತನ್ನ ಮಗ ಎಲಿಸನ್‌ನನ್ನು ಆಕೆ ಧಾರವಾಡದಲ್ಲಿ ಕಾಲೇಜಿಗೆ ಸೇರಿಸಿದ್ದಳು, First year ಗೆ. ಎಲಿಸನ್ ಆಗ ಹದಿನೇಳು–ಹದಿನೆಂಟರ ಹುಡುಗ.

–ಹೌದು, ಪಾವನಾಗೆ ಸರಿಯಾಗಿ ನೆನಪಿದೆ.

ಆಕೆ ಪ್ರೈಮರಿ ಸ್ಕೂಲಿನಲ್ಲಿ ಕಲಿಯುತ್ತಿದ್ದಾಗ, ಸುಂದರವಾದ ಒಂದು ಮುಂಜಾನೆ ಮನೆಯೆದುರು ತೆಳುನೀಲಿ ಬಣ್ಣದ ಒಂದು ಫೋರ್ಡ್ ಕಾರು ಬಂದು ನಿಂತಿತು.

ಮೊದಲು ಇಳಿದುದು ಸ್ಥೂಲಕಾಯದ ಓರ್ವ ಸ್ತ್ರೀ ; ನಂತರ ಅವಳ ಹಿಂದೆ ಸುಂದರವಾಗಿ ಡ್ರೆಸ್ ಮಾಡಿದ, ನಗುಮುಖದ, ತುಂಟನೆಂದು ತೋರುತ್ತಿದ್ದ ಒಬ್ಬ ಹುಡುಗ. ‘‘ನೀನು ಡಾ. ರಾಮಚಂದ್ರರ ಮಗಳೇನು ಮಗು ?’’ –ಬಂದಾಕೆ ಇಂಗ್ಲೀಷಿನಲ್ಲಿ ಕೇಳಿದರು. ಆಡುತ್ತಿದ್ದ ಆಟದಿಂದ ತಲೆಯೆತ್ತಿ, ಎದೆಸೆಟೆಸಿ ನಿಂತು ಸ್ಟೈಲಿಶ್ ಆಗಿ ‘‘yes’’ ಎಂದು ಪಾವನಾ ಉತ್ತರಿಸಿದ ಬಗೆ ಆ ಹುಡುಗನನ್ನು ಬಹುವಾಗಿ ಸೆಳೆದಿತು. ಆತ ಮುಂದೆ ಬಂದು ಅವಳನ್ನೆತ್ತಿ ಮುದ್ದಿಟ್ಟು, ‘‘ಸ್ವೀಟ್ ಬೇಬಿ’’ ಎಂದು ನಕ್ಕ.

ಅಷ್ಟರಲ್ಲಿ ಹೊರಬಂದ ಪಾವನಾಳ ತಂದೆಯನ್ನು ಕಂಡು, ಬಂದಾಕೆ, ‘ಹಲೋ ಡಾಕ್ಟರ್’ ಎಂದು ಕೈಚಾಚಿದಳು.

‘‘ಹಲೋ ಮಿಸೆಸ್ ಪಿಂಟೋ’’ ಎಂದು ಅವರು ಅವಳ ಕೈ ಕುಲುಕಿ ಇಬ್ಬರಿಗೂ ಸ್ವಾಗತ ಬಯಸಿದರು.

ತಮ್ಮ ಮನೆಯಲ್ಲಿ ಆಕೆ ಇದ್ದುದು ನಾಲ್ಕು ದಿನ. ಆ ಅವಧಿಯಲ್ಲಿ ಪಾವನಾಗೆ ಎಲಿಸನ್ ಬಹಳ ಸಮೀಪದ ಗೆಳೆಯನಾಗಿಬಿಟ್ಟಿದ್ದ. ನಂತರ ಮಿಸೆಸ್ ಪಿಂಟೋ ತನ್ನ ಮಗನನ್ನು ಹಾಸ್ಟೆಲಿಗೆ ಸೇರಿಸಿ ಕಾರವಾರಕ್ಕೆ ಮರಳಿದ್ದರು.

ತನಗಾಗ ಏಳು ವರ್ಷ ಮಾತ್ರ ವಯಸ್ಸೇ ? ತಾನೇಕೆ ಆಗ ಇನ್ನೂ ಸ್ವಲ್ಪ ದೊಡ್ಡವಳಾಗಿರಲಿಲ್ಲ ? ಎಲಿಸನ್‌ಗೂ ತನಗೂ ಹತ್ತು ವರುಷದ ಬೃಹದಂತರ

ಏಕಿತ್ತು ? ....ಏಕೆ ?

ಎಲಿಸನ್ ಧಾರವಾಡದಲ್ಲಿ ಕಳೆದುದು ಎರಡು ವರ್ಷ. ಪ್ರತಿ ರವಿವಾರ ತಪ್ಪದೇ ಆತ ಮನೆಗೆ ಬರುತ್ತಿದ್ದ. ಎಷ್ಟು ಆಸ್ಥೆಯಿಂದ ಆಕೆ ರವಿವಾರದ ದಾರಿ ಕಾಯುತ್ತಿದ್ದಳು ! ವಾರಕ್ಕೊಮ್ಮೆ ಎಲಿಸನ್‌ನ ಸಂಗ ದೊರೆಯುತ್ತಿದ್ದ ಆ ಮೂರು-ನಾಲ್ಕು ತಾಸುಗಳ ನೆನಪೆಂದರೆ ಮೈ ಜುಮ್ಮೆನ್ನುವದು, ಕಣ್ಣುಮುಚ್ಚಾಲೆ, ಪತಂಗ, ಬ್ಯಾಡ್ಮಿಂಟನ್.... ತಾವಿಬ್ಬರೂ ಆಡದ ಆಟಗಳೇ ಉಳಿದಿರಲಿಲ್ಲ.

ಎಡಗೈಯನ್ನು ತನ್ನ ಬೆನ್ನ ಹಿಂದೆ ಆಸರಾಗಿ ಕೊಟ್ಟು, ಬಲಗೈಯಿಂದ ತನ್ನ ಮುಖ ಮೇಲೆತ್ತಿ, ಎಲಿಸನ್ ಎಷ್ಟು ಸುಂದರವಾಗಿ ತನ್ನ ಹಣೆಯನ್ನು ಮುದ್ದಿಸುತ್ತಿದ್ದ ! ಚೇಷ್ಟೆಯಿಂದ ಒಮ್ಮೆ ಸೀತಮ್ಮ ಅಂದಿದ್ದರು, “ಎಲಿಸನ್, ನೀ ನಮ್ಮ ಪಾವನಾನ್ನ ಲಗ್ನಾ ಮಾಡಿಕೊಂಡಬಿಡಪಾ.”

ನಕ್ಕು ಆತ ಸುಮ್ಮನಿದ್ದ. ಆದರೆ ಪಾವನಾ ಕೂಡಲೆ ಆತನ ಕೈಗಳಿಂದ ಕೊಸರಿಕೊಂಡು ದೂರ ಹೋಗಿ ಸಿಡುಕಿನ ಧ್ವನಿಯಲ್ಲಿ ಅಂದಿದ್ದಳು, “ಥೂ, ನೀನು ಕ್ರಿಶ್ಚಿಯನ್.... ನನಗ ಬ್ಯಾಡಪಾ.”

ಎಲಿಸನ್ ಗಟ್ಟಿಯಾಗಿ ನಕ್ಕ ನೆನಪು. ಆ ನಗೆಯಲ್ಲಿ ನೋವು ಅಡಗಿತ್ತೆ ? – ಅದನ್ನು ತಿಳಿದುಕೊಳ್ಳುವಷ್ಟು ಪ್ರಬುದ್ಧಳಾಗಿರಲಿಲ್ಲ ಆಗ ತಾನು.

ಇಂಟರ್ ಸಾಯನ್ಸ್ ಮುಗಿಸಿ ಪೂನಾಕ್ಕೆ ಹೋಗಿ ಮೆಡಿಕಲ್‌ಗೆ ಸೇರಿದ್ದ ಎಲಿಸನ್ ಮತ್ತೆಂದೂ ಧಾರವಾಡಕ್ಕೆ ಬಂದಿರಲಿಲ್ಲ.

ಪಾವನಾ ಆತನನ್ನು ಮರೆತಳೆ ?

‘ಹೌದು’ ಎಂದು ನಂಬಲು ಆಕೆ ವ್ಯರ್ಥ ಪ್ರಯತ್ನ ಮಾಡಿದಳು.

ಎಲಿಸನ್ ತನ್ನ ಬಾಲ್ಯದ ಗೆಳೆಯ. ಆಗ ತನಗಿದ್ದ ಎಲ್ಲಾ ಗೆಳೆಯ – ಗೆಳತಿಯರಲ್ಲೂ ಹೆಚ್ಚು ದೊಡ್ಡವನು. ಸೈಕಲಿನ ಮೇಲೆ ಮುಂದಿನ ಸೀಟಿನಲ್ಲಿ ತನ್ನನ್ನು ಕೂಡಿಸಿಕೊಂಡು ಜೋರಿನಿಂದ ಓಡಿಸಿ ಅದೆಷ್ಟು ಸಲ ಆತ ತನ್ನನ್ನು ಹೆದರಿಸಿರಲಿಲ್ಲ ! ಹಿಂದಿನಿಂದ ಓಡಿ ಬಂದು ಎರಡೂ ಕೈಗಳಿಂದಲೂ ತನ್ನನ್ನು ಮೇಲೆತ್ತಿ ಹಿಡಿದು ಅದೆಷ್ಟು ಸಲ ಆತ ಕೆಳಗೆ ಬೀಳಿಸುವೆನೆಂದು ಬೆದರಿಕೆ ಹಾಕಿರಲಿಲ್ಲ !

ಎರಡು ವರ್ಷಗಳ ದೀರ್ಘ ಅವಧಿಯ ಆ ಗೆಳೆತನದಲ್ಲಿ ಒಮ್ಮೆ ತಾವು ಜಗಳವಾಡಿದ್ದೆವು. ಹದಿನೈದು ದಿನ ಮಾತಾಡಿರಲಿಲ್ಲ. ಎಂಥ ನೋವಿನ ನೆನಪು ಅದು !

ನಿನ್ನೆ ತಾನೇ ನಡೆದು ಹೋದಂತೆ ಆ ಸಂಗತಿ ಇನ್ನೂ ಪಾವನಾಗೆ ನೆನಪಿದೆ. ಪಾವನಾ ಆಗ ಕವಿತೆ ಬರೆಯಲು ಪ್ರಾರಂಭಿಸಿದ್ದಳು. ಆದರೆ ಯಾರಿಗೂ ತೋರಿಸುತ್ತಿರಲಿಲ್ಲ. ಎಂಟು ವರುಷದ ಹುಡುಗಿ ಬರೆಯುವ ಕವಿತೆಗಳಲ್ಲಿ

ಏನಿರಬಹುದಾಗಿತ್ತು ? ಆದರೆ ಒಮ್ಮೆ ಎಲಿಸನ್ ಅವಳ ಗುಟ್ಟನ್ನು ಬಯಲು ಮಾಡಿದ. ಗುಲಾಬಿಯ ಗಿಡದಡಿ ಪಾವನಾ ಕವಿತೆ ಬರೆದ ತನ್ನ ಸ್ಲೇಟನ್ನು ಅಡಗಿಸಿಟ್ಟು ಒಳಗೆ ಹೋದಾಗ, ಎಲಿಸನ್ ಅದನ್ನು ತೆಗೆದುಕೊಂಡು ಓದಿದ್ದಲ್ಲದೆ ಡಾಕ್ಟರರಿಗೂ ಸೀತಮ್ಮನವರಿಗೂ ಓದಿ ತೋರಿಸಿಬಿಟ್ಟಿದ್ದನು. ಅವರೆಲ್ಲ ಸೇರಿ ನಕ್ಕಾಗ ಪಾವನಾಳಿಗಾದುದು ಭಾರಿ ಅವಮಾನ. ಆಕೆ ಎಲಿಸನ್‌ನೊಡನೆ ಮಾತುಬಿಟ್ಟಳು.

ಆಗಲೂ ಆತ ಮನೆಗೆ ಬರುತ್ತಿದ್ದ. ಗೋಪಿಯೊಡನೆ ಆಟವಾಡಿ, ಸೀತಮ್ಮನೊಡನೆ ಮಾತನಾಡಿ ತಿರುಗಿ ಹಾಸ್ಟೆಲಿಗೆ ಹೋಗುತ್ತಿದ್ದ. ಆತನಾಗಿಯೇ ಬಂದು ಮಾತನಾಡಿಸಬಹುದು ಎಂದು ಕಲ್ಪಿಸಿ ಪಾವನಾ ಕಾದಿರುತ್ತಿದ್ದಳು. ಆದರೆ ಆತ ಮಾತಾಡುತ್ತಿರಲೇ ಇಲ್ಲ. ಆತ ಹೋದ ನಂತರ ಅವಳಿಗೆ ಅಳು ಬರುತ್ತಿತ್ತು.

ಆತನ ಪರೀಕ್ಷೆ ಮುಗಿದಿತ್ತು. ಮೊದಲ ವರ್ಷದ ಬೇಸಿಗೆ ರಜೆಗಾಗಿ ಕಾರವಾರಕ್ಕೆ ಹೊರಟಾಗ ಡಾಕ್ಟರರಿಂದ ಬೀಳ್ಕೊಳ್ಳಲು ಆತ ಅವರ ಮನೆಗೆ ಬಂದಿದ್ದ. ಹದಿನೈದು ದಿನ ಸತತವಾಗಿ ತನ್ನ ಪುಟ್ಟ ಗೆಳತಿಯೊಂದಿಗೆ ಮಾತು ಬಿಟ್ಟ ಕಾರಣವಾಗಿ ಆತನಿಗೇನೂ ಕೆಡುಕೆನಿಸಿರಲಿಲ್ಲವೆ ?

"ಎಲಿಸನ್ ಊರಿಗೆ ಹೋಗತಾನ. ಇನ್ನ ಎರಡ ತಿಂಗಳು ಬರೋದಿಲ್ಲ. ಮಾತಾಡೋದಿಲ್ಲೇನು ಪಾವನಾ ?" –ಡಾಕ್ಟರರು ಮಗಳ ಹೆಗಲ ಮೇಲೆ ಕೈಯಿರಿಸಿ ಕೇಳಿದ್ದರು. ಪಾವನಾಳ ಕಣ್ಣು ಒಮ್ಮೆಲೆ ತುಂಬಿಬಂದವು. ಮಗುವಿನೊಂದಿಗೆ ಎಂತಹ ಹಟ ಎನ್ನಿಸಿತೇನೋ, ಎಲಿಸನ್ ನಗುತ್ತ ಮುಂದೆ ಬಂದು ಹೇಳಿದ, "ಬಿಡು ಮಹಾರಾಯಳs, ನಾನs ಸೋಲತೀನಿ ಆತs ?"

ನಂತರ ಆತ ತನ್ನ ವಿಶಿಷ್ಟ ಪದ್ಧತಿಯಂತೆ ಎಡಗೈಯನ್ನು ಅವಳ ಬೆನ್ನ ಹಿಂದಿರಿಸಿ ಬಲಗೈಯಿಂದ ಅವಳ ಮುಖ ಮೇಲೆತ್ತಿ, ಮೃದುವಾಗಿ ಅವಳ ಹಣೆಯನ್ನು ಮುದ್ದಿಸಿದನು.

ಎಲಿಸನ್ ತನ್ನನ್ನು ಮುದ್ದಿಸಿದ್ದು ಅದೇ ಕೊನೆಯ ಸಲ.... ಹೌದು. ಮುಂದಿನ ಸಲ ಆತ ಬಂದಾಗ ಪಾವನಾಗೆ ಆತನೊಡನೆ ಬೆರೆಯಲು ಸಂಕೋಚವಾಗುತ್ತಿತ್ತು. ಎಲಿಸನ್, "ಎಷ್ಟು ದೊಡ್ಡಾಕಿ ಆದೆವಾ ಮೂರೇ ತಿಂಗಳಾಗ !" ಎಂದಾಗ ಆಕೆ ಚಿಗರಿಯಂತೆ ಒಳಗೆ ನೆಗೆದಿದ್ದಳು.

ಈಗಲೂ ಆಕೆ ರವಿವಾರದ ಪ್ರತೀಕ್ಷೆ ಮಾಡುತ್ತಿದ್ದಳು. ಆದರೆ ಈಗಿನ ಪ್ರತೀಕ್ಷೆಯಲ್ಲಿ ಎದೆಯ ಬಡಿತ ಹೊಸದಾಗಿ ಸೇರಿತ್ತು. ಎಲಿಸನ್ ಬೆನ್ನು ಚಪ್ಪರಿಸಿದಾಗ ಆತನಿಗೆ ಅಂಟಿಕೊಳ್ಳುವ ಇಚ್ಛೆಯಾಗದೆ ದೂರ ಓಡಬೇಕು ಎನ್ನಿಸುತ್ತಿತ್ತು. ಆತನೂ ಈ ವರ್ಷ ಬಹಳವಾಗಿ ಓದಬೇಕಾದುದರಿಂದ ಪಾವನಾಳ ಕಡೆ ಅಷ್ಟಾಗಿ

ಗಮನವೀಯುವುದಾಗಿರಲಿಲ್ಲ. ಆ ವರ್ಷದ ಪರೀಕ್ಷೆಯಾದ ನಂತರ ಎಲಿಸನ್ ಹೊರಟುಹೋದ. ಆತನ ಕೊನೆಯ ಭೆಟ್ಟಿ ಹೇಗಾಯಿತೋ ಅವಳಿಗೆ ನೆನಪಿಲ್ಲ. ಅದು ನೆನಪಾದರೆ ಒಂದು ಸುಂದರವಾದ ಕವಿತೆ ರಚಿಸಬಹುದು.... ಆದರೆ ಊಹ್ಞೂ, ಅದು ನೆನಪೇ ಆಗಲೊಲ್ಲದು....

ಮಿಸೆಸ್ ಪಿಂಟೋ ಆಗಾಗ ಡಾ. ರಾಮಚಂದ್ರರಿಗೆ ಪತ್ರ ಬರೆಯುತ್ತಿದ್ದರು. ಕೆಲವು ವರ್ಷಗಳ ನಂತರ ಎಲಿಸನ್ ಮೆಡಿಕಲ್ ಕೋರ್ಸು ಮುಗಿಸಿ ಡಾಕ್ಟರಾದುದೂ ಅವರಿಂದ ತಿಳಿದಿತ್ತು. ಆದರೆ ನಂತರ ವಿಶೇಷವಾದುದೇನೂ ತಿಳಿದಿರಲಿಲ್ಲ. ಆದರೂ ಎಲಿಸನ್‌ನ ನೆನಪು ತನಗೆ ಆಗಾಗ ಬರುತ್ತಿತ್ತು....

—ತನಗೂ ಹಿಂದೆ ಆದರ್ಶಗಳಿದ್ದವು, ಶಾಂತಿನಿಕೇತನಕ್ಕೆ ಹೋಗಿದ್ದುಕೊಂಡು ಕಾವ್ಯಾರಾಧನೆ ಮಾಡಬೇಕು ಎಂದು. ಆದರೆ ಈಗ ಅದಾವುದೂ ಬೇಡವಾಗಿತ್ತು. ಸಾಕಿನ್ನು ಆ ಭೂತಗಾತ್ರದ ಪುಸ್ತಕಗಳ ಒಡನಾಟ. ಭಾವನೆಗಳನ್ನೆಲ್ಲಾ ಹತ್ತಿಕ್ಕಿ, ಆ ಪುಸ್ತಕಗಳಲ್ಲಿ ವ್ಯಕ್ತವಾದ ಹಾಳು ವಿಚಾರಗಳನ್ನು ಒತ್ತಾಯವಾಗಿ ತಲೆಯಲ್ಲಿ ತುಂಬಿಕೊಳ್ಳುವುದು ಅನಿವಾರ್ಯವೆ ? ಕನಸು ಕಾಣುತ್ತ ಹಾಯಾಗಿ ಮಲಗಿಕೊಳ್ಳುವ ಅವಕಾಶವೂ ಇಲ್ಲದೆ ಅಲಾರಂ ಇಟ್ಟು ಮುಂಜಾನೆ ಏಳುವುದು. ತೂಕಡಿಕೆ ಬರುತ್ತಿದ್ದರೂ ಕಣ್ಣಿಗೆ ನೀರು ಹಚ್ಚಿ ಪುಸ್ತಕದಲ್ಲಿ ದೃಷ್ಟಿ ನೆಡುವುದು— ಯಾಕೆ ಅದೆಲ್ಲಾ ವೃಥಾ ಕಷ್ಟ ? ಪರೀಕ್ಷೆಯ ಸಮಯದಲ್ಲಿನ ಪರಿಸ್ಥಿತಿಯಂತೂ ಇದಕ್ಕೂ ಶೋಚನೀಯ. ಕೆಲಸದ ಒತ್ತಡದಿಂದಾಗಿ ಪತ್ರ ಬರೆಯಲು ಮೂರ್ತಿ ಒಂದೆರಡು ದಿನ ತಡ ಮಾಡಿದರೆ ಮುಗಿಯಿತು ತನ್ನ ಅವಸ್ಥೆ.... ಯಾರು ಹೇಳಿದ್ದಾರೆ ಈ ಗೋಳು ? ಯಾವುದೂ ಬೇಡ. ಎಲ್ಲವೂ ಸಾಕು. ಇನ್ನು ತನ್ನ ಬಹಳ ಪ್ರೀತಿಯ "ಸ್ವೀಟ್ ಹಾರ್ಟ್" ಮೂರ್ತಿಯೊಂದಿಗೆ ಮದುವೆಯಾಗಿ ಸುಖವಾಗಿರಬೇಕು ಎಂಬ ನಿರ್ಣಯಕ್ಕೆ ಆಕೆ ಬಂದು ತಲುಪಿದ್ದಳು.

ಬರುವ ತಿಂಗಳು ಅವಳ ಮದುವೆ ಆಗಲಿತ್ತು. ಜೂನ್‌ದ ನಿರೀಕ್ಷೆಯಲ್ಲಿ ಆಕೆ ಸುಖಿಯಾಗಿದ್ದಳು. ಮೊನ್ನೆಯಷ್ಟೆ ಬಂದ ಪತ್ರದಲ್ಲಿ ಮೂರ್ತಿ ಬರೆದಿದ್ದ, "ಹೃದಯರಾಣಿ, ನಮ್ಮ ಒಂದು ವರುಷದ ಕನಸು ಶೀಘ್ರದಲ್ಲೇ ನೆನಸಾಗಲಿದೆ. ಈ ಇಡಿಯ ವರುಷ ನಾವು ಭವಿಷ್ಯದ ಬಗೆಗೆ ಅಸಂಖ್ಯ ಕನಸುಗಳನ್ನು ಕಟ್ಟಿದ್ದೇವೆ. ಅವೆಲ್ಲವನ್ನೂ ನಿಜವಾಗಿಸುವುದು ಯೋಚಿಸಿದಷ್ಟು ಸುಲಭವಲ್ಲವೆಂದು ನಾನು ಬಲ್ಲೆ. ನಿನಗೂ ಅದು ಗೊತ್ತು. ಆದರೆ ನಾವು ನಮ್ಮ ಹೃದಯ— ಬಲದಿಂದ ಜೀವನವನ್ನು ಸುಂದರವಾಗಿಸೋಣ".

—ಮೂರ್ತಿಯದು ದೊಡ್ಡ ಮನಸ್ಸು.... ನಿಜಕ್ಕೂ.

ಆದರೆ.... ಆದರೆ ಹನ್ನೆರಡು ವರುಷಗಳ ನಂತರ ಇಂದು ಬೆಳಗು ಎಲಿಸನ್ ಹೀಗೆ ಬರಬಹುದೆಂದು ತನಗೆ ಕನಸಿನಲ್ಲಾದರೂ ಇತ್ತೆ ?

ಬಾಲ್ಯ ಸ್ನೇಹಿತನ ಭೆಟ್ಟಿಯಿಂದ ಸಂತೋಷವಾಗುವುದರ ಬದಲು ತಾನೇಕೆ ಹೀಗೆ ಕಳವಳಗೊಳ್ಳುತ್ತಿದ್ದೇನೆ ಎಂದು ಆಕೆಗೆ ಆಶ್ಚರ್ಯವಾಯಿತು.

"ಹೋಗಿ ಮಾತಾಡು ಪಾವನಾ" ಎಂದರು ಸೀತಮ್ಮ. ಪಾವನಾ ಹೋಗಲಿಲ್ಲ. ಎಲಿಸನ್ ಕೇಳಿದನೇನು 'ಪಾವನಾ ಎಲ್ಲಿ' ಎಂದು ? ತಾನೇಕೆ ಹೋಗಬೇಕು ? ಚಹಾ ಕುಡಿದು ಎದ್ದು ನಿಂತ ಎಲಿಸನ್. 'ಸಂಜೀನ್ಯಾಗ ತಿರುಗಿ ಹೋಗಬೇಕು ನಾ. ಡಾಕ್ಟರರಿಗೆ ಹೇಳ್ರಿ ನಾ ಬಂದಿದ್ದೆ ಅಂತ."

"ಒಳ್ಳೇದು, ಹೋಗಿ ಬಾರಪಾ" ಎಂದರು ಸೀತಮ್ಮ.

ಪಾವನಾ ಗಡಬಡಿಸಿ ಎದ್ದು ನಿಂತಳು. ಎಲಿಸನ್ ಹೋಗುತ್ತಾನೆ – ಹೋಗಿಯೇ ಬಿಡುತ್ತಾನೆ.... ತಾನಿನ್ನೂ ಆತನೆದುರು ಹೋಗಿಲ್ಲ.

– ತನಗರಿವಾಗದಂತೆಯೋ ಅವಳು ವೇಗವಾಗಿ ಹಿತ್ತಲ ಬಾಗಿಲಿಂದ ಅಂಗಳವನ್ನು ದಾಟಿ ಎದುರಿನ ಬಾಗಿಲಿಗೆ ಬಂದಳು. ಎಲಿಸನ್ ಗೋಪಿಯೊಡನೆ ಗೇಟು ತೆರೆಯುತ್ತಿದ್ದಾತ, ತಿರುಗಿ ನೋಡಿದ. ಆತನ ದೃಷ್ಟಿನ್ನೆದುರಿಸಿ ಪಾವನಾ ಮುಗುಳ್ನಗುವ ಸಾಹಸ ಮಾಡಿದಳು.

"ಏನು ಪಾವನಾ, ಎಲ್ಲಾ ಆರಾಮ ಹೌದಲ್ಲೊ ?" ಮುಗುಳ್ನಕ್ಕು ಆತ ಕೇಳಿದ.

"ಹ್ಞೂ" ಎಂದು ಮುಂದೇನು ಮಾತಾಡಬೇಕೋ ತೋಚದೆ ಆಕೆ ಕೇಳಿದಳು,

"ನೀವು ಪೂನಾದಾಗ ಇದ್ದಿರೆಲ್ಲs ?"

"ಹೌದು, ಆದರ ನಾ ಕಾರವಾರಕ್ಕ ಬಂದು ಭಾಳ ದಿವಸಾತು. ನೀ ಬಾರಲಾ ಒಮ್ಮೆ ಕಾರವಾರಕ್ಕ."

"ಹ್ಞೂ".

"ಒಳ್ಳೇದು ಹಂಗಾರ, ನಾ ಇನ್ನ ಬರ್ತೀನಿ-"

"ಹ್ಞೂ".

ಎಲಿಸನ್ ಕಣ್ಮರೆಯಾದಾಗ ಪಾವನಾ ತನ್ನನ್ನೇ ತಾನು ಬೈದುಕೊಳ್ಳುವಂತಾಯಿತು, ತನ್ನ ಅಸಂಬದ್ಧ 'ಹ್ಞೂ'ಗಳಿಗಾಗಿ. ಕೂಟಿನ ವರೆಗೆ ಎಲಿಸನ್‌ನನ್ನು ಕಳಿಸಿ ಬಂದ ಗೋಪಿಯ ಮೇಲೆ ಅಕಾರಣವಾಗಿ ಆಕೆ ಸಿಟ್ಟಾದಳು. 'ಹುಚ್ಚ ನೀನು. ನಿನಗ ಎಂದ ಮ್ಯಾನರ್ಸ್ ಗೊತ್ತಾಗತಾವೋ ದೇವರs ಬಲ್ಲ. ಊಟಕ್ಕ ಇಲ್ಲೇ ಬರ್ರಿ ಅಂತ ಯಾಕ ಹೇಳಲಿಲ್ಲ ಅವರಿಗೆ ?"

ಕಣ್ಣರಳಿಸಿ ಗೋಪಿ ಕೇಳಿದ, "ಹಾಗಂತ ನೀ ಹೇಳಿದ್ದೇನು ? ನಿನ್ನ

ಮನಸ್ಸಿನ್ಯಾಗಿದ್ದದ್ದು ನೀ ಹೇಳದನs ತಿಳಕೊಳ್ಳಿಕ್ಕೆ ನಿನ್ಹಾಂಗ ಸೈಕಾಲಜಿ ಓದಿಲ್ಲ ನಾನು" –ಅಲ್ಲಿ ನಿಲ್ಲಲಾಗದೆ ಪಾವನಾ ಎದ್ದು ರೂಮು ಸೇರಿದಳು.

ಏನಾಯಿತು ತನಗೆ ? ಎಲಿಸನ್ ಯಾರು, ತಾನು ಯಾರು ? ಜೀವನದಲ್ಲಿ ಒಮ್ಮೆ ಭೆಟ್ಟಿಯಾದ ವ್ಯಕ್ತಿಗಳೆಲ್ಲ ಕೊನೆವರೆಗೂ ಜೊತೆಗಿರುವುದು ಸಾಧ್ಯವೆ ? ತನಗಿಂತ ಹತ್ತು ವರ್ಷಕ್ಕೆ ಹಿರಿಯನಾದ ಎಲಿಸನ್ ತನಗೆ ಸ್ನೇಹಿತನೂ ಆಗಲಾರ. ಹಿರಿಯಣ್ಣ ಅನಂತನ ವಯಸ್ಸು ಆತನಿಗೆ. ಆದರೆ ಇಂತಹದೇ ಎಂದು ನಿರ್ದಿಷ್ಟವಾಗಿ ಹೆಸರಿಸಲಾಗದ ಹೃದಯದಲ್ಲಿನ ಈ ನೋವು ಯಾವುದು ? ಏನು ಕಾರಣ ಇದಕ್ಕೆ ? ಅಯ್ಯೋ ದೇವರೆ....

ಎಲಿಸನ್ ಅಷ್ಟೇನೂ ಬದಲಾಗಿಲ್ಲ. ಕಣ್ಣುಗಳಲ್ಲಿನ ಆ ತುಂಟತನ. ನಡಿಗೆಯಲ್ಲಿನ ಆ ಗತ್ತು, ಹಣೆಯ ಮೇಲಿನ ಆ ಸುರುಳಿ ಕೂದಲು, ಮುಗುಳ್ನಗುವಿನಲ್ಲಿಯ ಆ ಮಾದಕತೆ– ಎಲ್ಲಾ ಇನ್ನೂ ಹಾಗೇ ಇದೆ, ಆದರೂ ಆತನೀಗ ಮುದುಕ. ಹೌದು, ಮೂವತ್ತು ದಾಟಿದ ಮೇಲೆ ಮತ್ತೇನು ? ಮುದುಕನಾಗಿರಲಿಕ್ಕಿಲ್ಲ. ಆದರೆ ಹುಡುಗನಂತೂ ಅಲ್ಲವಲ್ಲ !

ಎಲಿಸನ್ ಇನ್ನು ಜೀವನದಲ್ಲಿ ತನಗೆಂದೂ ಭೆಟ್ಟಿಯಾಗದಿರಬಹುದು. ತನ್ನ ಮದುವೆಗೆ ಆತನನ್ನು ಆಮಂತ್ರಿಸಬಹುದಾದರೂ ಆಗ ಮಾತನಾಡುವ ಅವಕಾಶ ದೊರೆಯದು.

ಎಲಿಸನ್‌ನ ಸ್ನೇಹ ತನ್ನ ಬಾಲ್ಯದ ಸಿಹಿ ನೆನಪುಗಳಲ್ಲೊಂದಾಗಿ ಕೊನೆಯ ವರೆಗೂ ತನ್ನ ಹೃದಯದಲ್ಲುಳಿಯುವಂತಹುದು....

ಸಾಯಂಕಾಲವಾಗಿತ್ತು. ಪಾವನಾ ಎದ್ದು ಮುಖ ತೊಳೆದುಕೊಂಡಳು. ಈ ಮಧ್ಯಾಹ್ನವೆಲ್ಲಾ ಮೂರ್ತಿಯ ನೆನಪೇ ಇಲ್ಲವಲ್ಲ !

ಸುಳ್ಳೋ ನಿಜವೋ ?

–ಎಲಿಸನ್‌ನ ನೆನಪಿನ ಹಿಂಬದಿ ಎಲ್ಲೋ ಮೂರ್ತಿಯ ನೆನಪೂ ಅಡಗಿರುವಂತೆ, ಎರಡೂ ಸೇರಿ ಹೃದಯದಲ್ಲಿ ಒಂದು ಬಗೆಯ ವಿಚಿತ್ರ ನೋವು ಉಂಟುಮಾಡುತ್ತಿರುವಂತೆ ಭಾಸ.... ಬರಿಯ ಭಾಸ.... ?

ಛೇ, ಇಲ್ಲ. ಮೂರ್ತಿಗೂ ಎಲಿಸನ್‌ಗೂ ಎಲ್ಲಿಂದೆಲ್ಲಿಯ ಸಂಬಂಧ ? ಮೂರ್ತಿಯನ್ನು ತಾನು ಮನಸಾ ಪ್ರೀತಿಸುತ್ತಾಳೆ. ಅವನ ಜೊತೆ ಕಳೆಯಲಿರುವ ಬಾಳಿನ ಸವಿಗನಸು ಕಾಣುವದರಲ್ಲಿ ತಾನು ಅಪ್ರಿಯವಾದುದೆಲ್ಲವನ್ನೂ ಮರೆಯಬಲ್ಲಳು.

ಪಾವನಾ ತಾನೇ ಕಾರು ಡ್ರೈವ್ ಮಾಡಿಕೊಂಡು ಒಂದು ರೌಂಡ್‌ಗೆಂದು ಹೊರಟಳು. ಬಾಲ್ಯದಲ್ಲಿ ಅವಳಿಗೆ ಸೈಕಲು ಕಲಿಯುವ ಆಸೆಯಿತ್ತು. ಎಲಿಸನ್‌ನಿಂದ

ಎರಡು ದಿನ ಶಿಕ್ಷಣ ಪಡೆದೂ ಆಗಿತ್ತು. ಆದರೆ ಮೂರನೇ ದಿನ ಆತ ಬರುವಾಗ ಪಾವನಾ ಸೈಕಲನ್ನು ಮೇಲೆ ಕೆಡವಿಕೊಂಡು ಬಿದ್ದು ತಲೆ ಒಡೆದುಕೊಂಡಿದ್ದಳು. ಆತನೇ ಎಂಟು ದಿನ ಅವಳ ಹಾಸಿಗೆಯ ಬದಿಯಿಂದ ಕದಲದೆ ಅವಳ ಶುಶ್ರೂಷೆ ಮಾಡಿದ್ದ. ನಂತರ ಆಕೆ ಸೈಕಲಿನ ಸನಿಹ ಹೋಗಿರಲಿಲ್ಲ.

–ತನಗೆ ಡ್ರೈವ್ಹಿಂಗ್ ಬರುತ್ತಿದ್ದುದು ಎಲಿಸನ್‌ಗೆ ಗೊತ್ತಿಲ್ಲ. ಆತ ಈ ದಿನ ಊಟಕ್ಕೆ ಉಳಿದುಕೊಂಡಿದ್ದರೆ ತೋರಿಸಬಹುದಾಗಿತ್ತು.

ಪಾವನಾ ತಿರುಗಿ ಬಂದಾಗ ಪೂರಾ ಕತ್ತಲಾಗಿತ್ತು. ಕಾರನ್ನು ಶೆಡ್‌ನಲ್ಲಿ ಸೇರಿಸಿ ಆಕೆ ಹೊರಬರುತ್ತಿದ್ದಂತೆ ಗೋಪಿ ಹೇಳಿದ. "ಪಿಂಟೋ ಅವರಿಗೆ ಆ್ಯಕ್ಸಿಡೆಂಟ್ ಆತಂತ ಅಕ್ಕಾ,"

"ಎಲಿಸನ್‌ಗs ? ಎಲ್ಲೆ ? ಹ್ಯಾಂಗ ಯಾವಾಗ ?" –ಪಾವನಾಳ ದನಿ ನಡುಗಿತು. ಗೋಪಿಯ ಹಿಂದಿನಿಂದ ಬಂದ ಎಲಿಸನ್ ನಗುತ್ತ ಉತ್ತರಿಸಿದ, "ಇಷ್ಟ್ಯಾಕ ಘಾಬರ್‍ಯಾಗತೀದಿ ಪಾವನಾ ? ಮಾರ್ಕೆಟಿನ್ಯಾಗ ನಾ ಕೂತಿದ್ದ ಟಾಂಗಾದ ಕುದುರಿ ಬಿತ್ತು. ರಸ್ತೇದಾಗಿನ ಕಲ್ಲು ಬಡದು ಕೈಗೆ ಸ್ವಲ್ಪ ಪೆಟ್ಟಾಗೇದ ಅಷ್ಟs."

'ಓ !' ಪಾವನಾ ಸಮಾಧಾನದ ಉಸಿರು ಬಿಟ್ಟು ನಿಧಾನವಾಗಿ ಮುಗುಳ್ನಕ್ಕಳು. ತನ್ನ ವ್ಯರ್ಥ ಉದ್ವೇಗಕ್ಕಾಗಿ ಅವಳಿಗೆ ನಾಚಿಕೆಯಾಯಿತು.

"ನಾ ರಾತ್ರೀ ಬಸ್ಸಿನಿಂದ ಕಾರವಾರಕ್ಕ ಹೋಗತೀನಿ ಪಾವನಾ, ನಮಸ್ಕಾರ."

"ಆದರ ನಿಮಗ ತ್ರಾಸಾಗಿದ್ದರ ನಾಳೆ ಹೋಗಬಹುದಲ್ಲ ?" –ಸರಳವಾಗಿ ಆಕೆ ಕೇಳಿದಳು.

'ಛೆ, ಇಷ್ಟ ಸಣ್ಣ ಆ್ಯಕ್ಸಿಡೆಂಟ್ಸ್‌ಗೆಲ್ಲಾ ಎಂಥಾ ತ್ರಾಸು ? ನಾ ಇನ್ನ ಬರ್‍ತೀನಿ."
"ನಮಸ್ಕಾರ", ಪಾವನಾ ಹೇಳಿದಳು ಮಾತ್ರ. ಆದರೆ ಕೈ ಜೋಡಿಸುವ ನೆನಪೇ ಇಲ್ಲ ಅವಳಿಗೆ.

ಎಲಿಸನ್ ಹೊರಟುಹೋದ....ಕತ್ತಲೆಯಲ್ಲಿ ಆತ ಪಾವನಾಗೆ ಕಾಣದಷ್ಟು ದೂರ ಹೊರಟುಹೋದ....

–'ಇಷ್ಟು ಸಣ್ಣ ಆ್ಯಕ್ಸಿಡೆಂಟ್ಸ್‌ಗೆ....' ಎಲಿಸನ್‌ನ ಈ ಕೊನೆಯ ಮಾತಿನಲ್ಲಿ ಏನಾದರೂ ವಿಶೇಷ ಅರ್ಥವಿತ್ತೇ ? ನಿಜ ; ಜೀವನದಲ್ಲಿ ಎಂತೆಂತಹವೋ ಅಪಘಾತಗಳು ಸಂಭವಿಸುತ್ತವೆ. ಆ ಟಾಂಗಾದಲ್ಲಿ ಎಲಿಸನ್‌ನೊಡನೆ ಬೇರೆ ಪ್ಯಾಸೆಂಜರರೂ ಇರಬಹುದು. ಎಲಿಸನ್‌ನಂತೆ ಅವರೂ ಜಿಗಿದಿರಬಹುದು. ಅವರಿಗೂ ಪೆಟ್ಟಾಗಿರಬಹುದು....

ಎಲಿಸನ್ ಎಂದಾದರೂ ಮತ್ತೆ ಅದೇ ಪ್ಯಾಸೆಂಜರರೊಡನೆ ಆ ಟಾಂಗಾದಲ್ಲಿ

ಕುಳಿತು ಹೋಗಬಹುದೇ ? ಇಲ್ಲ. ಅವರದು ಒಂದು ಕ್ಷಣದ ಜೊತೆ.

—ತನ್ನ ಹಾಗೂ ಎಲಿಸನ್‌ನ ಸ್ನೇಹ ಒಂದು ಕ್ಷಣದ ಸ್ನೇಹ.

ಅದರ ನೆನಪು ಮಾತ್ರ ಅಮರ....

ರಾತ್ರಿಯ ಊಟದ ನಂತರ ಪಾವನಾಳ ಮನಸ್ಸು ಸ್ವಲ್ಪ ಸ್ತಿಮಿತಕ್ಕೆ ಬಂದಿತು. —ಬಿಡದೆ ಕಾಡುವ ಎಲಿಸನ್‌ನ ನೆನಪಿಗೆ ಒಂದು ಕವಿತೆಯ ರೂಪವನ್ನೇಕೆ ಕೊಡಬಾರದು ?

ಧಾರವಾಡದ ಸೆಕೆ ಇನ್ನೂ ಇತ್ತು. ಮುಂಜಾನೆಯ ಹಾಗೆಯೆ, ತನ್ನ ಅಸ್ತಿತ್ವದ ಅರಿವು ಮಾಡಿಕೊಡಲೆಂದು ಬೆವರು ಹರಿಸುತ್ತ.

ಪಾವನಾ ಬರೆಯುತ್ತಲೇ ಇದ್ದಳು..

—ಜಿಟಿಜಿಟಿ ಉದುರುವ ಮಳೆಹನಿಯಂತಹ ನೆನಪುಗಳು.... ಒಂದಲ್ಲ, ಎರಡಲ್ಲ, ಸಹಸ್ರ—ಸಹಸ್ರ ನೆನಪುಗಳು...

ಬರೆದು ಮುಗಿಸಿದ ಕವಿತೆಯನ್ನು ಓದುವ ಗೋಜಿಗೂ ಹೋಗದೆ ಪಾವನಾ ಅದನ್ನು ಕಪಾಟಿನಲ್ಲಿ ದಪ್ಪ ಪುಸ್ತಕಗಳ ಕೆಳಗಡೆ ಸೇರಿಸಿಬಿಟ್ಟು ದೂರವಾದಳು. ಕೋಣೆಯ ಬಾಗಿಲು ಹಾಕಿ ಹಾಸಿಗೆ ಉರುಳಿಸಿದಾಗ ಅವಳ ಮನಸ್ಸು ಬಹಳ ಹಗುರವಾಗಿತ್ತು. ಮಂಚದ ಮೇಲೆ ಒರಗಿ ಬಳಿಯಲ್ಲಿನ ಬೆಡ್‌ಸ್ವಿಚ್ ಆರಿಸಲೆಂದು ಹೊರಳಿದಾಗ ಟೇಬಲ್ಲಿನ ಕಡೆ ಅವಳ ದೃಷ್ಟಿ ಹೋಯಿತು. ಅಲ್ಲಿದ್ದ ಮೂರ್ತಿಯ ಭಾವಚಿತ್ರವನ್ನೆತ್ತಿ ಮೃದುವಾಗಿ ಮುದ್ದಿಸಿ ಮುಗುಳ್ನಕ್ಕು ಆಕೆ ದೀಪವಾರಿಸಿದಳು.

ಆ ರಾತ್ರಿ ಪಾವನಾಗೆ ಗಾಢ ನಿದ್ರೆ ಬಂದಿತು.

❖ ❖ ❖

# " ನೀನೇ ತಂತಿ "

"ಹರಿ, ಹರಿ, ಹರಿ...."

–ಪಂಜರದಲ್ಲಿನ ಗಿಳಿ ಒಂದೇ ಸಮನೆ ಕಿರುಚುತ್ತಿದೆ. ಈ ಹಾಳು ಗಿಳಿಗೆ ಮಾತಾಡಲು ಬರುತ್ತಿದ್ದುದು ಇದೊಂದೇ ಶಬ್ದ. ಯಾವಾಗ ನೋಡಿದರೂ 'ಹರಿ, ಹರಿ'. ಹಸಿವೆಯಾದಾಗ ರೆಕ್ಕೆಗಳನ್ನು ಫಡಫಡಿಸುತ್ತ ತನ್ನ ಪುಟ್ಟ ಪಂಜರದಲ್ಲಿ ಹಾರಾಡುವ ವಿಫಲ ಯತ್ನ ಮಾಡುತ್ತ ಅದು 'ಹರಿ ಹರಿ' ಅನ್ನುತ್ತದೆ ; ಹೊಟ್ಟೆ ತುಂಬಿದಾಗ ಸುಮ್ಮನೆ ಬಿದ್ದುಕೊಂಡು 'ಹರಿ ಹರಿ' ಅನ್ನುತ್ತದೆ ; ಅದೇನು ಹರೀಶನನ್ನು ತನ್ನ ಬಳಿಗೆ ಬಾ ಎಂದು ಕರೆಯುತ್ತದೆಯೋ ಅಥವಾ ತಾನೇ ಈ ಪಂಜರದಿಂದ ಹೋಗಬಯಸಿ ತನ್ನನ್ನು ಹೋಗಗೊಡು ಎಂದು ಕೂಗುತ್ತದೆಯೋ ಗೊತ್ತಾಗುವುದಿಲ್ಲ. ಹರೀಶ ಅದಕ್ಕೆ ಹಣ್ಣು ತಿನ್ನಿಸುತ್ತ ಮುದ್ದು ಮಾಡುತ್ತಿರುವಾಗ ಸುಮ್ಮನಿರುತ್ತದೆ ; ಸೋತುಹೋದ ಹಾಗೆ ತೆಪ್ಪಗೆ ಬಿದ್ದಿರುತ್ತದೆ. ಆದರೆ ಹರೀಶ ಇಲ್ಲದಾಗ ಮತ್ತೆ 'ಹರಿ ಹರಿ' ಎಂದು ಒದರಲು ಸುರು ಮಾಡುತ್ತದೆ. ಒಂದೊಂದು ಸಲ ಅದರ ಈ ಹರಿನಾಮ-ಜಪ ಕೇಳುವುದು ತೀರ ಅಸಹ್ಯವಾಗಿ ಪಂಜರದ ಬಾಗಿಲು ತೆರೆದು ಅದನ್ನು ಬಿಟ್ಟುಬಿಡಲೇ ಎಂದು ವಿಚಾರ ಬರುತ್ತದೆ. ಆದರೆ ಹರೀಶನ ಪ್ರೀತಿಯ ಗಿಳಿ ಅದು. ಅದನ್ನು ಹಾರಿಬಿಟ್ಟರೆ ಆತ ಬಹಳ ನೊಂದುಕೊಳ್ಳುತ್ತಾನೆ. ಈ ಗಿಳಿಯ ಮೇಲಿನ ಆತನ ಪ್ರೀತಿ ಎಷ್ಟೊಂದು ಕುರುಡಾಗಿದೆಯೆಂದರೆ ತಾನಿಲ್ಲದಾಗ ಈ ಪಂಜರದ ಒಳಗೆ ಈ ಗಿಳಿ ಅನುಭವಿಸುತ್ತಿರಬಹುದಾದ ಮೂಕವ್ಯಥೆಯ ಬಗ್ಗೆ ಆತನಿಗೆ ಕಲ್ಪನೆಯೇ ಬರುವುದಿಲ್ಲ....

ಈ ಗಿಳಿ ತನಗೆ ಸಿಕ್ಕ ಬಗೆಯನ್ನು ಕತೆಯಾಗಿ ಬಣ್ಣಿಸಿ ಹೇಳುವುದರಲ್ಲಿ ಆತನಿಗೆಷ್ಟು ಉತ್ಸಾಹ !

'ನಾ ಹಿಂದಕ ಫೈನಲ್ ಬಿ. ಇ. ಕ್ಲಾಸಿನಲ್ಲಿದ್ದಾಗ ಇಂಡಸ್ಟ್ರಿಯಲ್ ಟೂರಿಗೆ ಅಂತ ದಾಂಡೇಲಿಗೆ ಹೋಗಿದ್ವಿ. ಸಂಜೀನ್ಯಾಗ ಅಡಿವ್ಯಾಗ ತಿರಗ್ಯಾಡಿಕೋತ ಹೋದಾಗ ಈ ಗಿಳೀ ಭೆಟ್ಟಿ ಆತು. ಅದೂ ಎಷ್ಟ ಮಜಾ ಅಂತೀ ಸರೂ, ಗಿಡದ ಕೆಳಗ ಹುಲ್ಲಿನ ಮ್ಯಾಲ ಇದು ಸುಮ್ಮನs ಕೆಟ್ಟ ಧ್ವನಿಯೊಳಗ ಒದರಿಕೋತ ಬಿದ್ದಿತ್ತು. ನಾ ಸಮೀಪ ಹೋದಾಗ ಹಾರೋ ಪ್ರಯತ್ನಾನೂ ಮಾಡಲಿಲ್ಲ. ನನಗ್ಯಾಕೋ ಭಾಳ ಕೆಟ್ಟನಿಸಿ

ಅದನ್ನ ತಗೊಂಡ ಬಂದೆ. ಅದು ಬಂದಾಗಿನಿಂದ ನನಗ ಛಲೋನೇ ಆಗಿಕೋತ ಬಂದದ. ನಾ ಬಿ. ಇ. ಫರ್ಸ್ಟ್‌ಕ್ಲಾಸ್ ಬಂದೆ ; ನೌಕರಿ ಸಿಕ್ಕಿತು , ನಿನ್ನ ಜೋಡೀ ಲಗ್ನ ಆತು. ಅದಕ್ಕs ನನಗ ಇದರ ಮ್ಯಾಲ ಭಾಳ ಪ್ರೀತಿ'.

—ಮದುವೆಯಾದ ನಂತರದ ಮೂರು ವರ್ಷಗಳಲ್ಲಿ ಕನಿಷ್ಠ ಹತ್ತು ಸಲವಾದರೂ ಹರೀಶ ಈ ಕತೆ ಹೇಳಿರಬೇಕು. ಒಮ್ಮೊಮ್ಮೆ ಅದನ್ನು ಕೇಳಲು ಬೇಡವೆನ್ನಿಸಿದರೂ ಪ್ರತಿಸಲವೂ ಅದನ್ನು ಮೊದಲನೆಯ ಸಲವೇ ಕೇಳುವೆನೇನೋ ಎಂಬಷ್ಟು ಉತ್ಸಾಹವನ್ನು ತೋರಿಸುವ ನಟನೆಯಲ್ಲಿ ಸರಯೂ ಯಶಸ್ವಿಯಾಗಿದ್ದಳು. ಮೊದಲಲ್ಲಿ ಅವಳು ಆ ಗಿಳಿಯ ಕಡೆ ಅಷ್ಟಾಗಿ ಲಕ್ಷ ಕೊಟ್ಟಿರಲಿಲ್ಲ. ಆದರೆ ಇತ್ತೀಚೆ ಏಕೋ ಇದನ್ನು ನೋಡಿದಾಗೆಲ್ಲಾ ಅವಳಿಗೆ ಬಹಳ ಸಂಕಟವಾಗುತ್ತದೆ ; ಅದರ 'ಹರಿ ಹರಿ' ಕೇಳಿದಾಗ ಅದರ ದನಿಯಲ್ಲೇನೋ ಅಸಹಾಯಕತೆ ಇದ್ದಂತೆ ಭಾಸವಾಗುತ್ತದೆ ; ಅದು ಹಾಗೆ ಕೂಗುವುದು ಹರೀಶನ ಬಗೆಗಿನ ಪ್ರೀತಿಯಿಂದಲ್ಲವೇನೋ, ಒಂದು ಬಗೆಯ ತೀವ್ರ ತಿರಸ್ಕಾರಮಿಶ್ರಿತ ರೊಚ್ಚಿನಿಂದೇನೋ ಎನಿಸುತ್ತದೆ ; ಸುಮ್ಮನೆ ವಿಪರೀತ ಅಂಜಿಕೆ ಬರುತ್ತದೆ ; ಪಂಜರದ ಬಾಗಿಲು ತೆರೆದು ಅದನ್ನು ಹಾರಿಸಿಬಿಡುವ ಉತ್ಕಟ ಇಚ್ಛೆಯಾಗುತ್ತದೆ ; ಆದರೆ....

'ನನಗ ಒಮ್ಮೊಮ್ಮೆ ಏನನಸ್ತದ ಗೊತ್ತೇನು ಸರೂ ? ಈ ಗಿಳೀಗೂ-ನನಗೂ ಹಿಂದಿನ ಜನ್ಮದ್ದು ಏನರೆ ಸಂಬಂಧ ಇರಬೇಕು. ಇಲ್ಲಿದ್ರ ನಾ ಆ ಅಡವಿಗೆ ಹೋಗಬೇಕ್ಯಾಕ, ಇದು ಇಷ್ಟ ಸರಳ ನನ್ನ ಕೈಗೆ ಸಿಗಬೇಕ್ಯಾಕ, ಅಲ್ಲs ? ಅದರ ಆವಾಗಿನ ಪರಿಸ್ಥಿತಿ ನೋಡಿದರ ಅದು ಥೇಟು ಒಂದು ಭಗ್ನಪ್ರೇಮಿಯೇನೋ ಅನಸತಿತ್ತು.'

—ಬಹಳ ಸೆಂಟಿಮೆಂಟಲ್ ತನ್ನ ಗಂಡ ಎನ್ನುವುದು ಆಕೆಗೆ ಗೊತ್ತಿದೆ. ಈ ಹಿಂದಿನ ಜನ್ಮ, ಋಣಾನುಬಂಧ, ಭಗ್ನಪ್ರೇಮ ಇವೆಲ್ಲಾ ಬರೇ ಹುಚ್ಚು. ಈ ಜನ್ಮದಲ್ಲಿನ ನಿಕಟ ಸಂಬಂಧಗಳಿಗೂ—ಹಿಂದಿನ ಜನ್ಮಕ್ಕೂ ನಿಜವಾಗಿಯೂ ಏನಾದರೂ ಸಂಬಂಧವಿದೆಯೆ ? ಹಾಗಿದ್ದರೆ ಹಿಂದಿನ ಜನ್ಮದ ಆತ್ಮೀಯರು ಈ ಜನ್ಮದಲ್ಲೂ ಆತ್ಮೀಯರಾಗುತ್ತಾರೆಯೆ ?

ಬರೇ ಭ್ರಮೆ. ಕನಸಿನಲ್ಲಿ ಮೈಮರೆತಾಗ, ಸಮೀಪ ಇದ್ದಾಗ ಹಿಂದಿನ ಜನ್ಮ-ಋಣಾನುಬಂಧಗಳನ್ನು ನಂಬಬೇಕೆನಿಸುತ್ತದೆ. ಕನಸು ಒಡೆದಾಗ, ದೂರ ಹೋದಾಗ ಇವೆಲ್ಲಾ ಭ್ರಮೆ ಎನಿಸುತ್ತದೆ. ಯಾವುದು ಖರೆ ? ಯಾವುದು ಸುಳ್ಳು ?

ಹರೀಶನಿಗೊಂದು ಹುಚ್ಚು. ಅವನಿಗೇನು ಗೊತ್ತು ಪಾಪ ! ತಾನು ಹಾಡುತ್ತಿರುವಾಗ, ತನ್ನ (ಹಿಂದೊಮ್ಮೆ ಕೆಲದಿನ ತನ್ನವನಾಗಿದ್ದವನ ?) ಪ್ರೀತಿಯ

ಆ ಹಾಡು ಹಾಡುತ್ತಿರುವಾಗ, ಆ ಹಾಡಿನ ಭಾವವನ್ನು ತನ್ನ ಕಣ್ಣಿನ ಬೆಳಕಿನಲ್ಲಿ ಹುಡುಕಬಯಸುವಷ್ಟು ಹುಚ್ಚು ಕಲ್ಪನಾಜೀವಿ ಹರೀಶ. ಎಷ್ಟೋ ಸಲ ತಾನು ಆ ಹಾಡು ಹಾಡಿ ಮುಗಿಸಿ ಸುಂದಾಗಿ ಕೂತಾಗ, ತನ್ನ ಕಡೆ ಬೆನ್ನು ಮಾಡಿ ನಿಂತು, ದೂರ ಎಲ್ಲೋ ನೋಡುತ್ತ, ನೊಂದ ದನಿಯಲ್ಲಿ ತನಗೆ ಹೇಳಿರಲಿಲ್ಲವೆ ಆತ ? – ''ಸರಯೂ, ನಿನ್ನ ಈ ಹಾಡು ಕೇಳಿದಾಗೆಲ್ಲಾ ನನಗ ಒಂದು ಥರಾ ಅಸಮಾಧಾನ ಅನಸ್ತದ. ಸ್ಪಷ್ಟ ಮಾತಾಡತೀನಿ ಅಂತ ಕೆಟ್ಟನಿಸಿಗೋ ಬ್ಯಾಡ. 'ನಾನೇ ವೀಣೆ, ನೀನೇ ತಂತಿ' ಅಂತ ನೀ ಹಾಡತೀಯಲಾ, ಆವಾಗ ನಾನs ತಂತಿ ಅಂತ ನಂಬಬೇಕು ಅನಸ್ತದ ನನಗ. ಆದರ ನಿನ್ನ ನೋಡಿದರ 'ನೀನೇ ತಂತಿ' ಅಂತ ನೀನು ಬ್ಯಾರೆ ಯಾರಿಗೋ ಹೇಳಲಿಕ್ಹತ್ತೀಯೇನೋ ಅಂತನಸ್ತದ. ಹೀಂಗ್ಯಾಕ ಆಗತದನಬೇಕು ?''

''ನೀ ಹೀಂಗೆಲ್ಲಾ ವಿಚಾರ ಮಾಡಿದರ ನಾ ಏನು ಹೇಳ್ಲಿ ಹರೀಶ ? ನನ್ನ ಸಲುವಾಗಿ ನಿನಗ ಏನೇನರs ಅನಿಸಿದರ ಅದೂ ನಂದೇ ತಪ್ಪೇನು ?''

'ಛೇ, ತಪ್ಪಲ್ಲ ಸರೂ, ಆದರ ನನಗ್ಯಾಕೋ ಈ ನಿನ್ನ ಹಾಡು ಕೇಳಿದಾಗೆಲ್ಲ ಈ ಸಮಸ್ಯಾ ಬರತದ ನೋಡು.''

''ಬಿಡು, ನಾ ಇನ್ನಮ್ಯಾಲ ಹಾಡೋದೇ ಇಲ್ಲ.''

''ನೀ ಅದನ್ನ ಬಾಯಿಬಿಟ್ಟು ಹಾಡದಿದ್ರೇನಾತು, ನನಗ ನಾನs ತಂತಿ ಅಂತ ವಿಶ್ವಾಸ ಹುಟ್ಟೋತನಕಾ ಈ ಸಮಸ್ಯಾ–ಒಗಟು ಬಗೀಹರಿಯೂದಿಲ್ಲ.''

''ನೀ ಬರಬರತ ಭಾಳs ಸೆಂಟಿಮೆಂಟಲ್ ಆಗಲಿಕ್ಹತ್ತೀ ಹರೀಶ, ಸ್ವಲ್ಪ ಭೂಮಿಗೆ ಇಳದ ಬಾ ಇನ್ನ.''

–ಯಾಕೋ ಈ ವಿಷಯುವನ್ನು ಮುಂದುವರೆಸುವುದು ಅವಳಿಗೆ ಇಷ್ಟವಿಲ್ಲ. ಈ 'ತಂತಿ'–'ವಿಶ್ವಾಸ'–'ಸಮಸ್ಯೆಗಳು' ಅವಳನ್ನು ವಾಸ್ತವಿಕತೆಯಿಂದ ದೂರ ಎಳೆದೊಯ್ದು ಆ ಹಿಂದಿನ ಕನಸಿನ ಲೋಕದಲ್ಲಿ ಬೀಸಾಡುತ್ತವೆ. ಪ್ರಯತ್ನ ಪಟ್ಟು ಮರೆಯತೊಡಗಿರುವ ಆ ಹಳೆಯ ದಿನಗಳಿಂದ ಸಾಧ್ಯವಾದಷ್ಟು ದೂರ ದೂರವಾಗಬೇಕೆಂದು ಅವಳಿಗೆ ಆಸೆ. ಹಳೆಯದರಿಂದ ದೂರ.... ಹೊಸದಕ್ಕೆ ಸಮೀಪ....

–ನೀನೇ ತಂತಿಯೆಂಬ ನಂಬಿಗೆಯನ್ನು ಹರೀಶನಲ್ಲಿ ಹುಟ್ಟಿಸುವುದು ಹೇಗೆ ? ಅದಕ್ಕೆ ಮೊದಲು ತಾನು ಹಾಗೆ ನಂಬಬೇಕು, ಹರೀಶನೇ ತಂತಿ ಎಂದು ; ತನ್ನ ವೀಣೆಯ ಗಾನಕ್ಕೆ ಆತನೇ ಸ್ವರ ಎಂದು ; ಆತ ಬರಿ ಕುಂಬಳಕಾಯಿ ಅಲ್ಲವೆಂದು ;

ಮದುವೆಯಾದ ಹೊಸದರಲ್ಲಿ ಹಾಗೆ ನಂಬಲು ತಾನು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದ್ದಳು. ಆ ಪ್ರಯತ್ನದಲ್ಲಿ ಯಶಸ್ಸು ದೊರೆಯತೊಡಗಿದೆಯೆಂದೂ ಅನಿಸಿತ್ತು. ಆದರೆ ಅದೆಲ್ಲ ಭ್ರಮೆಯೆಂಬ ತೀವ್ರ ಅರಿವು ಇತ್ತೀಚೆ ಉಂಟಾಗತೊಡಗಿದೆ.

ಈ ಭ್ರಮೆ ಸತ್ಯವೆನಿಸುವಷ್ಟು ತೀಕ್ಷ್ಣವಾಗಿದ್ದ ಕ್ಷಣಗಳಲ್ಲಿ ಅಕಸ್ಮಾತ್ ಶ್ರುತಿ ತಪ್ಪಿ ಗಾನದಲ್ಲಿ ಅಪಸ್ವರ ಕೇಳಿಬಂದ ಅನುಭವವಾಗುವುದು. ಎಲ್ಲಾ ಬಿಟ್ಟು ದೂರ, ಮತ್ತೆ ಆ ಹಳೆಯ ಜಗತ್ತಿಗೆ ಓಡಿಹೋಗಬೇಕು ಎನಿಸುವುದು. ಹಿಂದೆ ಆದದ್ದೆಲ್ಲಾ ಮತ್ತೊಮ್ಮೆ ಆಗಬೇಕು ಎನಿಸುವುದು. ಎಲ್ಲರಿಂದ ಬೈಯಿಸಿಕೊಳ್ಳುವ ಹಾಗೆ, ದೂರಗೊಳಿಸಲ್ಪಡುವ ಹಾಗೆ, ಎಲ್ಲರೂ ಅತ್ಯಾಶ್ಚರ್ಯಪಡುವ ಹಾಗೆ ಏನಾದರೊಂದನ್ನು ಮಾಡಬೇಕೆನಿಸುವುದು.... ಬರೇ ಅನಿಸುವುದು....

—ಹೇಗೆ ನಂಬುವುದು ಹರೀಶನೇ ತಂತಿ ಎಂದು ?

* * * *

'ಸರೂ, ನಾನs ತಂತಿ ಅಂತ ನೀ ನಂಬೀಯಲಾ, ಇದನ್ನ ಉಳಿಸಿಕೊಂಡು ಹೋಗೋದು ಎಷ್ಟ ಕಠಿಣ ಅನ್ನೂದರ ಕಲ್ಪನಾ ಅದs ಏನು ನಿನಗ ? ಸುಮನ ನಾವು ದೂರದೂರ ಇರೋದೇ ಸರಿ ಅನಸ್ತದ ನನಗ.'

—ಎಂದು ಹೇಳಿದ್ದ ಅವನು ಹಿಂದೆ ; ಅವನು, ತಾನು ತನ್ನ ತಂತಿ ಎಂದು ತಿಳಿದುಕೊಂಡವನು....

ತನ್ನ ತಂತಿ ? ಎಂಥ ತಂತಿ ?

—ಶ್ರುತಿ ಮಾಡಿ ತಂಬೂರಿಗೆ ಜೋಡಿಸಿದ್ದರೆ ಮಧುರ ಗಾನ ಹೊರಡಿಸಬಹುದಾಗಿದ್ದ ತಂತಿ. ಆದರೆ ಹಾಗಾಗದೆ ಯಾಕೋ ಎಂತೋ (ಹಿಂದಿನ ಜನ್ಮದ ಕರ್ಮಕ್ಕಾಗಿ ಇರಬಹುದೆ ?) ಬೀದಿಯಲ್ಲಿನ ಎಲೆಕ್ಟ್ರಿಕ್ ದೀಪದ ಕಂಭಕ್ಕೆ ಬಿಗಿಯಲ್ಪಟ್ಟಿದ್ದ ತಂತಿ.

ಯಾಕೆ ಹಾಗಾಯಿತು ?

ಬಹುಶಃ ತಾವಿಬ್ಬರೂ ಭೆಟ್ಟಿಯಾದದ್ದೇ ತಪ್ಪು ಗಳಿಗೆಯಲ್ಲಿ ; ಪರಸ್ಪರರ ದಾರಿಗಳು ಬೇರೆ-ಬೇರೆ ಎಂದು ನಿರ್ಧಾರವಾಗಿ ಹೋದ ನಂತರ ; ಅರ್ಧದಾರಿಯಿಂದ ತಿರುಗಿ ಬರುವುದು ಆಗದೆ, ಹಾಗೇ ಮುಂದರಿಯಲೂ ಆಗದೆ, ತಿರುತಿರುಗಿ ನೋಡುತ್ತ ಎಡವುತ್ತ ಮುಗ್ಗರಿಸುತ್ತ ಹೊರಟಿದ್ದ ಅವನು. ಹೌದು ; ಅವನ ಪ್ರೀತಿ ಸುಡುವ ಬೆಂಕಿಯಂಥದಲ್ಲ ; ಅದರದು ಶೀತಲ ತೀವ್ರತೆ. ಅದು ಯಾವಾಗಲೂ ಇದೆ, ಇದ್ದೇ ಇರುತ್ತದೆ ಎಂದು ತನಗೆ ಗೊತ್ತಿದ್ದರೂ ಅದೆಂದೂ ಜೀವಂತವಾಗಿದೆ ಎನ್ನಿಸುವದಿಲ್ಲ ; ಸತ್ತು ಹೋಗಿದೆ ಎಂದೂ ಅನ್ನಿಸುವದಿಲ್ಲ ; ಅದು ನಿಶ್ಚೇಷ್ಟಿತವಾಗಿ ಬಿದ್ದುಕೊಂಡಿದೆ ಅನ್ನಿಸುವುದು. ಅಂತೆಯೇ ಅದಕ್ಕೆ 'ಪ್ಲೆಟೋನಿಕ್' ಎಂದು ಶುದ್ಧವಾಗಿ ಮಡಿಯಾಗಿ ಹೆಸರಿಸಿ, ಅದರ ಭಾರ ಹೊರುವದರಿಂದ ತಪ್ಪಿಸಿಕೊಳ್ಳಲು ಹೆಣಗುತ್ತಿದ್ದಿರಬೇಕು ಅವನು.

ದೂರದೂರವಾಗಿರುವುದೇ ಸರಿ ಅನಿಸುವುದಂತೆ. ಅನಿಸದೇ ಏನು ಮಾಡೀತು ? ಅದು ಅವನೊಬ್ಬನ ತಪ್ಪಲ್ಲ. ಅವನ 'ಸರಿ'-'ತಪ್ಪು'ಗಳ ಬಗೆಗಿನ ನಂಬಿಕೆಗೆ ಸಂಪ್ರದಾಯದ ಭದ್ರ ತಳಹದಿಯಿದ್ದಿತಲ್ಲ ! ಆ ನಂಬಿಕೆಯಲ್ಲಿ ನಂಬಿಕೆಯಿಲ್ಲದಿದ್ದರೂ ಅವನದನ್ನು ನಂಬುವ ನಟನೆ ಮಾಡಬೇಕಿತ್ತು. ಆ ನಂಬಿಕೆ ಸ್ವಲ್ಪ ಸಡಿಲಾಯಿತೋ, ಆತ ಬಿದ್ದ. ಬಿದ್ದರೆ ಪೆಟ್ಟಾದೀತೆಂಬ ಅಂಜಿಕೆ ಅವನಿಗೆ. ಕನಿಕರ ಅನಿಸುತ್ತದೆ ಒಮ್ಮೊಮ್ಮೆ ಅವನ ಬಗ್ಗೆ. ಬಿದ್ದ ಪೆಟ್ಟಿಗೆ ಅಂಜುವ ಮನುಷ್ಯನ ಭಾವನೆಗೆ ಬೆಲೆಯೇನು ?

ಎದೆಯಲ್ಲಿ ಸಂಕಟದ ಪರ್ವತವನ್ನು ಹುದುಗಿಟ್ಟುಕೊಂಡು ಎಷ್ಟು ಸೊಗಸಾಗಿ ನಟಿಸುತ್ತಿದ್ದ ಆತ ! ಅದಕ್ಕೇನು 'ಆತ್ಮವಂಚನೆ' ಎಂದು, 'hypocrisy' ಎಂದು ಕರೆದು ಹೊಲಸು ಮಾಡಬಹುದಾಗಿತ್ತೆ ? ಛೇ ಇಲ್ಲ. ಅದರ ಬದಲು ಅದಕ್ಕ 'ಪ್ಲೆಟೋನಿಕ್ ಪ್ರೇಮ' ಎಂದು ಚೆಂದ ಹೆಸರು ಕೊಟ್ಟದ್ದೇ ಒಳ್ಳೆಯದಾಯಿತು. ಅವನು ತನಗೆ ಎಂದೂ ಏನೂ ಹೇಳಲಿಲ್ಲ. ತನ್ನಿಂದ ಏನೂ ಬಯಸಲಿಲ್ಲ, ತನ್ನೊಂದಿಗೆ ಕೇವಲ ಒಳ್ಳೆಯ ವ್ಯಕ್ತಿಯ ಹಾಗೆ ನಡೆದುಕೊಂಡ, ಯಾರೆದುರಿಗೂ ತನ್ನ ಬಗ್ಗೆ ಚಕಾರ ಎತ್ತಲಿಲ್ಲ ; ಆದರೆ ಅವನ ಕಣ್ಣಲ್ಲಿ ಒತ್ತಿ ಹಿಡಿದ ಎಂಥದೋ ಏನೋ ಇತ್ತು. ರಾತ್ರಿ ಆತ ನಿದ್ರೆಗೆಡುತ್ತಿದ್ದ. ಹಗಲು ಕನಸು ಕಾಣುವಂತಿದ್ದ, ಅವನ ಉತ್ಕಟ-ತೀವ್ರ-ಅಸ್ಪಷ್ಟ ಅನಿಸಿಕೆಯನ್ನು ತಡೆಯಲಾರದೆ ಹೇಳಲು ಹೋಗಿ ಒಮ್ಮೆಲೆ ತಡೆಹಿಡಿಯುತ್ತಿದ್ದ ; ಮತ್ತೆ ಯಥಾಪ್ರಕಾರ ಇರುತ್ತಿದ್ದ. ಇದಕ್ಕಲ್ಲದಿದ್ದರೆ ಇನ್ನಾವುದಕ್ಕನ್ನುವುದು ಪ್ಲೆಟೋನಿಕ್ ಪ್ರೇಮವೆಂದು ? ಸಾಯುವ ವರೆಗೂ ಕೊಲ್ಲುತ್ತಿರಬಹುದಾದ ಈ ಪ್ರಜ್ಞೆಗೆ ಮರ್ಯಾದೆಯಾಗಿ 'ಪ್ಲೆಟೋನಿಕ್' ವಿಶೇಷಣವನ್ನು ಹಚ್ಚಿ ಅವನು ಸ್ಥಿತಪ್ರಜ್ಞನಾಗಿದ್ದ ; ಅಥವಾ ಆದಂತೆ ತೋರಿಸಿಕೊಳ್ಳುತ್ತಿದ್ದ. ಆದರೆ ತಾನು? ತನ್ನಲ್ಲಿ ಈ ಪ್ಲೆಟೋನಿಕ್‌ದ ಬೆಂಕಿ ಹತ್ತಿ ಕ್ರಮೇಣ ಉರಿಯಾಗತೊಡಗಿತ್ತು. ಅವನಿಗದರ ಝಳ ತಾಗಿದರೂ ಅವನು ಸುಮ್ಮನಿದ್ದ ; ಅವನ ಮೈ ಅದರಿಂದ ಸುಡತೊಡಗಿದ್ದರೂ ಏನೂ ಆಗದವರಂತಿದ್ದ. ಅದೇನು ತಾಳ್ಮೆಯೇ ಅಥವಾ ಹೇಡಿತನವೇ ?

ಎರಡೂ ಒಂದೇ. ಏನೋ ಅಂತೂ ಒಟ್ಟು ತನ್ನ ಅನಿಸಿಕೆಯೇನೂ ಈ 'ಪ್ಲೆಟೋನಿಕ್' ವಿಶೇಷಣದ ಢೋಂಗೀ ನೈತಿಕ ಬಲ ಪಡೆದು ಜೀವಿಸಿರಬೇಕಾಗಿದ್ದಿಲ್ಲ. ಆಗಿನದು ಹೋಗಲಿ, ಈಗಲೂ ತನಗೆ ಸ್ಪಷ್ಟವಾಗಿ ಅನಿಸುವುದು ; ಅವನಿಂದ ತಾನೇನೂ ಬಯಸುವುದಿಲ್ಲೆಂದು ಸುಳ್ಳೇಕೆ ಹೇಳಬೇಕು ? ಹರೀಶನ, ತನ್ನ ಗಂಡನ, ತೋಳುಗಳಲ್ಲಿ ಮೈಮರೆತಿದ್ದಾಗ ಎಲ್ಲಿಂದಲೋ ಅವನ ಮೈಯ ವಾಸನೆ ಮೂಗಿಗೆ ಹೊಡೆಯುವುದು... ಕಣ್ಣು ಗಟ್ಟಿಯಾಗಿ ಮುಚ್ಚಿ ಹರೀಶನೇ ಅವನು, ತಾನಿರುವದು ಹರೀಶನ ಮನೆಯ ಬೆಡ್‌ರೂಮಲ್ಲ – ಮೂರು ವರ್ಷಗಳ ಹಿಂದಿನ ಅಮಾವಾಸ್ಯೆಯ

ರಾತ್ರಿಗಳಲ್ಲಿ ನಾವಿಬ್ಬರೂ ಕೂಡುತ್ತಿದ್ದ ಆ ಮಾವಿನ ಮರದ ಕೆಳಗಿನ ಹುಲ್ಲುಹಾಸಿಗೆ–ಎಂದೆಲ್ಲ ವಿಚಾರ ಬರುವುದು. ಆದರೆ ಅಷ್ಟರಲ್ಲೇ–

–ಅಷ್ಟರಲ್ಲೇ ಕೇಳಿಸುವದು, 'ಹರಿ ಹರಿ', ಹರೀಶನ ಗಿಳಿಯ ಹಳೇ ಹಾಡು. ಅದರೊಂದಿಗೆ ಹಳೆಯ ತಂತಿ ಕಡಿದು ಬೀಳುತ್ತದೆ. ಮತ್ತೆ ತನ್ನ ಸುತ್ತಲಿನ ಎತ್ತರ ಗೋಡೆಗಳ, ಮುಚ್ಚಿದ ಬಾಗಿಲಿನ ಅರಿವಾಗುತ್ತದೆ. 'ಎಚ್ಚರ'ವಾಗುತ್ತದೆ.

ಅಂದಮೇಲೆ ತನ್ನದು ಪ್ಲೇಟೋನಿಕ್ ಪ್ರೇಮ ಅಲ್ಲವೆಂದಾಯಿತು. ಇದು ಪ್ರೀತಿ-ಪ್ರೀತಿ ಅನ್ನುತ್ತಾರಲ್ಲ, ಅಂಥ ಭಾವನೆ; ನೇರವಾದ, ಮತ್ಯಾರಾದರೂ ಕೇಳಿದರೆ ನೈತಿಕ ಆಘಾತವಾಗುವಂತಹ, ಸೀದಾ-ಸರಳ ಭಾವನೆ. ತಾನಿದನ್ನು ನೀಡುವೆನೆಂದರೆ ಸಾಕು, ನೂರು ಕೈಚಾಚಿ ಅದನ್ನು ಬಳಿದುಕೊಂಡು ಎದೆಯಲ್ಲಿ ಬಚ್ಚಿಡುವ ಆಸೆ ಅವನಿಗೆ. ತನಗೆ ತಿಳಿಯದು ಎಂದುಕೊಂಡಿದ್ದಾನೇನೊ ! ಆದರೆ ಅವನದು ಬರಿಯ ಆಸೆ, ನಿಃಶಬ್ದವಾದ ಆಸೆ, ಮಳೆ ಹನಿಯಂತೆ ಬಿದ್ದಲ್ಲೇ ಸದ್ದಿಲ್ಲದೆ ಇಂಗಿ ಹೋಗುವ ಆಸೆ. ಅವನದನ್ನು ಎಂದಿಗೂ ಕೃತಿಯಲ್ಲಿಳಿಸಲಾರ.

ಯಾಕೆ ?

ಮತ್ತೆ ಈ 'ಸರಿ'–'ತಪ್ಪು'ಗಳ ಪ್ರಶ್ನೆ. ಅವನ ಸುತ್ತ ಅವನೇ–ಬೇಕಾಗಿಯೋ ಬೇಡವಾಗಿಯೇ ನಿರ್ವಾಹವಿಲ್ಲದೆಯೋ–ನಿರ್ಮಿಸಿಕೊಂಡ ಕಲ್ಲಿನ ಕೋಟೆಯಲ್ಲಿ ಅವನು ಬಂದಿ. ಅವನದರ ಅಧಿಪತಿಯಾದರೂ ಅವನಲ್ಲಿ ಬಂದಿ. ಈ ಕೋಟೆಯ ಬಲಿಷ್ಠವಾದ, ಎತ್ತರವಾದ ಗೋಡೆಯ ಮೇಲೆ ನಿಂತು ತನ್ನ ಕಡೆ ಒಂದು ಥರಾ ದೃಷ್ಟಿಯಿಂದ ಆತ ನೋಡುತ್ತಿದ್ದ. ಆಗ ಎಷ್ಟೋ ಸಲ ತನಗನಿಸುತ್ತಿತ್ತು– ಅಲ್ಲಿಂದ ಕೆಳಗೆ ಧುಮುಕುವುದು, ಪಾರಾಗುವುದು ಸಾಧ್ಯವಿದೆಯೋ ಇಲ್ಲವೋ ಎಂದು ಅವನು ವಿಚಾರಿಸುತ್ತಿರಬಹುದೇ ಎಂದು. ಹಾಗೆ ಧುಮುಕಿದರೆ ಒಳಗಿನ ಅವನ ಪ್ರಜೆಗಳ ಗತಿ ಏನಾಗಬೇಡ ! ಅಷ್ಟಲ್ಲದೆ ಬಿದ್ದು ಅವನೇ ಕಾಲು ಮುರಿದುಕೊಂಡರೆ ಅವನ ಗತಿ ? ಅವನನ್ನೆಬ್ಬಿಸಿ ತಾನು ನಡೆಸುವೆನೋ ಇಲ್ಲವೋ ಅದೂ ಸಂಶಯ ಅವನಿಗೆ. ಅಂಥ ಸಂದಿಗ್ಧ ಸಂದರ್ಭದಲ್ಲಿ ಇಲ್ಲದ ಹುಚ್ಚುತನ ಮಾಡಿ ದುಡುಕುವ ಬುದ್ಧಿ ಅವನದಲ್ಲ. ಆಗೊಮ್ಮೆ-ಈಗೊಮ್ಮೆ ಕೋಟೆಯ ಹೆಬ್ಬಾಗಿಲು ತೆರೆದು, ಒಳಗೇ ನಿಂತು, ಹೊರಗೆ ಹಣಿಕಿ ಹಾಕಿ ತನ್ನ ಕ್ಷೇಮ ಸಮಾಚಾರ ವಿಚಾರಿಸುವಷ್ಟರಲ್ಲೇ ತೃಪ್ತಿ ಅವನಿಗೆ. ಈ ಬಾಗಿಲಾದರೂ ಎಷ್ಟು ಹಳೆಯದೋ ! ತೆರೆದರೆ ಕಿರ್ರ್ ಎಂದು ಹೃದಯ ಸೀಳುವ ಸಪ್ಪಳ ಮಾಡುತ್ತಿತ್ತು. ಎಲ್ಲಿ ಉಳಿದವರೆಲ್ಲರ ಲಕ್ಷ್ಯ ಇತ್ತ ಕಡೆ ಹರಿಯುವುದೋ ಎಂದು ಗಾಬರಿಯಾಗಿ, ತುಂಬಿದ ಸಂತೆಯ ಮಧ್ಯೆ ತೊಟ್ಟ ಬಟ್ಟೆ ಕಳಚಿ ಬಿದ್ದಂತೆ ಪೆಚ್ಚುಪೆಚ್ಚಾಗಿ, ಯಾವಾಗ ಈ ಬಾಗಿಲನ್ನು ಮುಚ್ಚಿ ಮತ್ತೆ ಒಳಗಿನ ಉಸಿರುಗಟ್ಟಿಸುವ

ಗೂಡು ಸೇರಿಯೇನೋ ಎನ್ನಿಸಿಬಿಡುತ್ತಿತ್ತು ಅವನಿಗೆ.

ಅವನು ಅವನ ಕೋಟೆಯೊಳಗೇ ಇರಲಿ. 'ಸುಖ'ವಾಗಿರಲಿ. ಹೇಗಾದರೂ ಇರಲಿ, ತನಗೇನು ? ತನ್ನ ದಾರಿ ಬೇರೆ, ಅವನದು ಬೇರೆ. ಆ ಕತ್ತರಿಯಲ್ಲಿ ಒಂದು ಕ್ಷಣ ಸಂಧಿಸಿದಾಗ ತಾವಿಬ್ಬರೂ ಕೈಕುಲುಕಿ ನಕ್ಕು ಆಡಿದ್ದೇ ತಪ್ಪು. ಅವನ ಪ್ಲೇಟೋನಿಕ್ ವಿಚಾರಗಳ ಪ್ರಕಾರ ಇದೆಲ್ಲ ತಪ್ಪಲ್ಲ. ಎಲೆಕ್ಟ್ರಿಕ್ ದೀಪದ ಕಂಭಕ್ಕೆ ಬಿಗಿದ ತಂತಿಯಾದರೇನಾಯಿತು, ಪ್ರೇಮಗೀತೆ ಹಾಡಲು ಸಾಧ್ಯವಾಗದಿದ್ದರೂ ಸ್ಮಶಾನಗೀತೆಯನ್ನಾದರೂ ಸತ್ತ ತುಟಿಗಳಲ್ಲಿ ಗುನುಗುನಿಸಬಹುದು.... ಹೀಗೆಂದುಕೊಂಡೇ ಅವನು ಪ್ಲೆಟೋನಿಕ್‌ದ ಶರಣುಹೋಗಿದ್ದ ; ಒಳಗೆ ಮುಚ್ಚಿಟ್ಟುಕೊಂಡಿದ್ದ ; ಅಳುತ್ತಿದ್ದ ; ಆದರೂ ನಗುತ್ತಿದ್ದ ;

ಮುಂದೆ ? ಮುಂದೇನು ??

* * * *

'ಹರಿ ಹರಿ' ಎನ್ನುತ್ತ ಈ ಗಿಳಿ ಯಾಕೋ ಬಹಳ ಹೊತ್ತಿನಿಂದ ರೆಕ್ಕೆ ಫಡಫಡಿಸತೊಡಗಿದೆ. ನೋವಾಗುವ ಭಯವೂ ಇಲ್ಲದೆ ಪಂಜರದ ಸಲಾಕೆಗಳಿಗೆ, ಬಾಗಿಲಿಗೆ ತನ್ನ ಮೂತಿ-ಕಣ್ಣು-ಚುಂಚುಗಳನ್ನು ಒಂದೇ ಸಮನೆ ಅಪ್ಪಳಿಸತೊಡಗಿದೆ. ಅದಕ್ಕೆ ಯಾವ ವ್ಯಥೆಯೋ ಬಲ್ಲವರು ಯಾರು ? ಬಹುಶಃ ಅದಕ್ಕೆ ಹಿಂದಿನ ನೆನಪಾಗಿರಬಹುದೆ ? ದಾಂಡೇಲಿಯ ಅಡವಿಯ ನೆನಪಾಗಿರಬಹುದೆ ? ಅಲ್ಲಿ ತಾನು ಹಾರಾಡಿದ ಗಿಡಗಳ, ಕುದುಕಿದ ಹಣ್ಣುಗಳ, ಜೊತೆಯ ಗಿಳಿಯ ನೆನಪಾಗಿರಬಹುದೆ ?

ಹರೀಶ ಇನ್ನೂ ಆಫೀಸಿನಿಂದ ಬಂದಿಲ್ಲ. ಅಷ್ಟರಲ್ಲೇ ಪಂಜರದ ಬಾಗಿಲು ತೆರೆದು ಈ ಗಿಳಿಯನ್ನು ಮುಕ್ತಗೊಳಿಸಿದರೆ....

—ತೀವ್ರ ಇಚ್ಛೆಯಿಂದ ಸರಯೂ ಎದ್ದು ನಿಂತಳು. ಆದರೆ ಯಾಕೋ ತಲೆ ತಿರುಗಿದಂತಾಗಿ ನಿಂತಲ್ಲೇ ಕೂತು ಬಿಟ್ಟಳು.

ಇತ್ತೀಚೆ ಈ ವಿಚಿತ್ರ ಜಡ್ಡು ಸುರುವಾಗಿದೆ. ಹರೀಶನ ಪ್ರೀತಿ ಉಸಿರು-ಕಟ್ಟಿಸುವಂತೆನಿಸಿದಾಗ, ಅವನೇ ತಂತಿಯೆಂಬ ನಂಬಿಕೆಯನ್ನು ಅವನಲ್ಲಿ ಹುಟ್ಟಿಸಲು ತಾನು ಅಸಮರ್ಥಳಾದಾಗ, ಆ ಹಿಂದಿನ ಪ್ಲೆಟೋನಿಕ್‌ದ ಕನಸಿಗೇ ಜಿಗಿಯಲು ಮನಸ್ಸು ತೀವ್ರವಾಗಿ ತವಕಿಸಿದಾಗ, ಮತ್ತೊಮ್ಮೆ ಆ ಮಾವಿನ ಮರದ ಕೆಳಗೆ ಹೋಗಿ ಆ ಅವನ ತೋಳುಗಳ ಆಶ್ರಯದಲ್ಲಿ ಮಲಗಿ ಆ ಅದೇ ಹಳೇ ಹಾಡು ಹಾಡಬೇಕೆನಿಸಿದಾಗ, ಛೇ.... ಇದೇನು ಜಡ್ಡು ? ಅಶಕ್ತತೆ ? ಆಲಸ್ಯ ?

ಇದೂ ಸಹ ತನ್ನ ಭ್ರಮೆಯೇ ಇರಬೇಕು ಎನ್ನಿಸಿತು ಸರಯೂಗೆ. ಇದನ್ನು ಕಿತ್ತೊಗೆಯಬೇಕು ; ಎಲ್ಲಾ ಬಂಧನಗಳನ್ನೂ ಕಡಿದೊಗೆಯಬೇಕು ; ಏನಾದರೊಂದನ್ನು

ಭಯಂಕರವಾದುದನ್ನು ಮಾಡಬೇಕು ; ಹರೀಶನಿಂದ ದೂರ ಹೋಗಬೇಕು ; ಅವನ ಕಡೆ ಹಾರಿ ಹೋಗಬೇಕು ; ಅವನ ಕುತ್ತಿಗೆಗೆ ಹಗ್ಗ ಹಾಕಿ ಅವನನ್ನು ಅವನ ಕೋಟೆಗೋಡೆಯ ಮೇಲಿಂದ ಕೆಳಗೆ ಜಗ್ಗಿಕೊಳ್ಳಬೇಕು ; ಇಬ್ಬರೂ ದಾಂಡೇಲಿಯ ಅಟ್ಟಂಬಟ್ಟ ಅರಣ್ಯಕ್ಕೆ ಓಡಿ ಹೋಗಬೇಕು ; ಅಲ್ಲಿಂದ ಜಗತ್ತಿಗೇ ಕೇಳಿಸುವ ಹಾಗೆ 'ನೀನೇ ತಂತಿ' ಎಂದು ಒದರಿ ಹಾಡಬೇಕು....

ಅಲ್ಲಿಗೆ ಈ ಕತೆ ಮುಗಿಯುವುದೆ ?

* * * *

ಸಂಜೆ ಆಫೀಸಿನಿಂದ ಬಂದ ಹರೀಶ ಮೊದಲು ಸೀದಾ ತನ್ನ ಪ್ರೀತಿಯ ಗಿಳಿಯ ಕಡೆ ಹೋಗಿ, ಅದಕ್ಕೆ ಕೆಂಪಾದ ಸೇಬುವಿನ ಹೋಳುಗಳನ್ನು ತಿನ್ನಿಸಿ, ಪಂಜರದ ಸಲಾಕೆಗಳಲ್ಲಿ ತನ್ನ ತುಟಿಗಳನ್ನು ತೂರಿ ಅದರ ಚುಂಚಿನ ಮೇಲೆ ಮುತ್ತಿನ ಮುದ್ರೆಯನ್ನೊತ್ತಿದನು. ಇಷ್ಟೊತ್ತು ಅರಚುತ್ತಲಿದ್ದ ಗಿಳಿ ಅದಾವ ಮಾಯದಿಂದಲೋ ಸುಮ್ಮನಾಯಿತು.

– ಸರಯೂ ನೋಡುತ್ತಲೇ ಇದ್ದಳು.

ಹರೀಶನ ಮುಖ ಯಾಕೋ ಎಂದಿಗಿಂತ ಹೆಚ್ಚಾಗಿ ಅರಳಿತ್ತು. ಹೆಂಡತಿಯನ್ನು ಸಮೀಪಿಸುತ್ತಿದ್ದಂತೆ ಆತ ನಗುತ್ತ ಕೇಳಿದ, "ಸರೂ, ನಿನಗೊಂದು ಸ್ವೀಟ್ ನ್ಯೂಜ್ ಹೇಳಿದರ ಏನು ಕೊಡ್ತೀ ನನಗ ?"

ಅವನ ಉತ್ಸಾಹಕ್ಕೆ ಪ್ರಯತ್ನಪಟ್ಟು ಸಾಥ ಕೊಡುತ್ತ ತುಟಿಯರಳಿಸಿದಳು ಆಕೆ, "ನೀನು ಕೇಳಿದ್ದು."

"ಅ್ಹಾ ? ಖರೇನs ? ಹಂಗಾರ ಕೇಳಿಲ್ಲೆ."

ತನ್ನನ್ನು ಬಳಸುತ್ತಿದ್ದ ಆತನ ತೋಳುಗಳಿಂದ ದೂರವಾಗಬೇಕೆಂಬಾಸೆಯಿಂದ ಆಕೆಯ ಮನಸ್ಸು ಹುಚ್ಚೆದ್ದು ಕುಣಿಯಿತು. ಆದರೆ ಆತ ಹೇಳಲಿರುವ ಆ 'ಸ್ವೀಟ್ ನ್ಯೂಜ್'ನ ಕಲ್ಪನೆ ಯಾಕೋ ಅವಳಿಗೆ ಹೆದರಿಕೆ ತರಿಸಿತು ; ಇಲ್ಲಿಂದ ಹಾರಿಹೋಗಲು ತಾನು ಶತಪ್ರಯತ್ನ ಮಾಡುತ್ತಿದ್ದಾಗ ಯಾರೋ ತನ್ನ ರೆಕ್ಕೆಗಳನ್ನೇ ಕತ್ತರಿಸುತ್ತಿದ್ದಾರೆ ಎನ್ನಿಸಿತು ; ಸೋತು ಹೋಗುತ್ತಿದ್ದೇನೆ, ಬಿದ್ದು ಹೋಗುತ್ತಿದ್ದೇನೆ ಎನ್ನಿಸಿತು ; ಇದೇ ಎಲ್ಲದರ ಕೊನೆಯೇನೋ ಎಂದು ಅಂಜಿಕೆಯಾಗತೊಡಗಿತು.....

'ನಿನ್ನೆ ಸಂಜೀನ್ಯಾಗ ಎಲ್ಲೆ ಹೋಗಿದ್ವಿ ನೆನಪದs ಏನು ಸರೂ ?"

"ಅದೇ ಡಾಕ್ಟರರ ಕಡೆ. ಸುಳ್ಳs ನನಗ ಜಡ್ಡಾಗೇದಂತ ಹೇಳಿ ಅವರ ಕಡೆ ಕರಕೊಂಡು ಹೋದಿ. ನನಗೇನು ಧಾಡೀನೂ ಆಗಿಲ್ಲ. ಅವರರೆ ಏನು ಹೇಳ್ಯಾರು ಪಾಪ."

"ಅವರು ನಿನ್ನೆ ಮುದ್ದಾಂ ಹೇಳಲಿಲ್ಲಂತ. ಇವತ್ತ ನನಗ ಆಫೀಸಿಗೆ ಫೋನ್

ಮಾಡಿದ್ದರು.''

"ಏನಂತ ?''—ಬೇಡವೆನಿಸಿದ ಅವನ ವಿಶಾಲವಾದ ಎದೆಗೆ ಸ್ವಲ್ಪ-ಸ್ವಲ್ಪವಾಗಿ ಸಮೀಪ ಬರುತ್ತ ಎಂಥದೋ ಭಯದಿಂದ ಕೇಳಿದಳು ಸರಯೂ.

"ನಿನಗ ಏನು ಧಾಡಿ ಆಗೇದಂತ.''

"ಛೇ, ನನಗೇನಾಗೇದ ? ಡಾಕ್ಟರು ಏನು ಹೇಳಿದ್ರು ಹರೀಶ ? ನೀ ಹೀಂಗ್ಯಾಕ ನೋಡಲಿಕ್ಹತ್ತೀದಿ ನನ್ನ ?''—ಅವಳಿಗರಿಯದಂತೆಯೇ ದನಿ ನಡುಗಿತು.

ಅವಳ ಕಣ್ಣಲ್ಲಿ ಕಣ್ಣಿಡುತ್ತ ಕೇಳಿದ ಹರೀಶ, "ನಿನಗೇನಾಗೇದನ್ನೂದು ಖರೇನs ನಿನಗ ಗೊತ್ತಿಲ್ಲs ಸರೂ ?''

—ದಾಂಡೇಲಿಯ ಅಡವಿಯ ಕನಸನ್ನು ಕಸಿದುಕೊಳ್ಳಲೆತ್ನಿಸುತ್ತಿದ್ದ ಆ ನೋಟ ವನ್ನೆದುರಿಸುವುದು ಸಾಧ್ಯವಾಗದೆ ಕಣ್ಣುಮುಚ್ಚಿಕೊಂಡು ತಲೆ ಕೊಡಹಿದಳು ಆಕೆ.

"ಹಂಗಾರ ನಾ ಹೇಳ್ತೀನಿ ಕೇಳು. ಇನ್ನೂ ಸಮೀಪ ಬಾ. ನಿನ್ನ ಕಿವಿಯೊಳಗ ಹೇಳತೀನಿ.''

ತನ್ನ ಕಿವಿಗೆ ಆತನ ತುಟಿಗಳ ಬೆಚ್ಚಗಿನ ಸ್ಪರ್ಶವಾಗಿ, ಆತ ಹೊತ್ತು ತಂದ 'ಸ್ವೀಟ್ ನ್ಯೂಜು' ಕಾದ ಪಾದರಸದಂತೆ ಕಿವಿಗುಂಟ ಒಳಗಿಳಿದಾಗ, ಒಂದು ಕ್ಷಣ ಅವಳಿಗೆ ಜಗತ್ತೆಲ್ಲ ಕತ್ತಲಿನಿಂದ ತುಂಬಿದಂತೆನಿಸಿತು. ಮರುಕ್ಷಣ ಆಕೆ ಆತನನ್ನು ಗಟ್ಟಿಯಾಗಿ ತಬ್ಬಿಕೊಂಡಳು.

ಎಷ್ಟೋ ಹೊತ್ತಿನ ವರೆಗೆ ಹರೀಶನ ಕೈ ಹವುರಗೆ ಅವಳ ಬೆನ್ನು-ಮುಖ-ತಲೆಯನ್ನು ಸವರುತ್ತಲೇ ಇತ್ತು.

ಎಂಥದೋ ತೃಪ್ತಿ; ಏನೋ ವೇದನಾಮಯ ಸುಖ, 'ಹರಿ ಹರಿ' ಎಂದು ಕಿರಿಚುವ ಗಿಳಿಯ ದನಿಯಲ್ಲಿ ಸರಯೂಗೆ ಈಗ ಹಿಂದಿನ ರೊಚ್ಚು ಕಾಣುವುದಿಲ್ಲ; ಕಳವಳ ಕಾಣುವುದಿಲ್ಲ; ಅದೂ ಯಾಕೋ ಈಗ ಒದರುವದನ್ನು ಕಡಿಮೆ ಮಾಡಿದೆ, ಆದರೆ ಅದರ ಈ ಮೌನ ಅದರ ಸಮಾಧಾನದ ಲಕ್ಷಣವೋ ಅಥವಾ ಅಸಮಾಧಾನವನ್ನು ಬಚ್ಚಿಡುವ ಪ್ರಯತ್ನವೋ ಅಥವ ಅಸಮಾಧಾನವನ್ನು ಪ್ರಕಟಗೊಳಿಸಲು ಸಾಧ್ಯವಾಗದ ಅಸಹಾಯಕತೆಯೋ ತನಗೆ ತಿಳಿಯುವುದಿಲ್ಲ....

ಇದು ತೃಪ್ತಿ ಎನ್ನಲು, ಸುಖ ಎನ್ನಲು, ಏನು ಆಧಾರ ?

ಹಾಗಾದರೆ ಇದು ಸ್ಥಿತಪ್ರಜ್ಞತೆಯೇ ?

ಇರಬಹುದು.

—ಯಾರಿಗಾಗಿ ? ಯಾರಿಗಾಗಿ ಈ ಸ್ಥಿತಪ್ರಜ್ಞತೆ(ಯ ಭ್ರಮೆ) ?

ಹರೀಶನಿಗಾಗಿ ಅಲ್ಲ ; ಅವನಿಗಾಗಿಯಂತೂ ಅಲ್ಲವೇ ಅಲ್ಲ ; ತನಗಾಗಿಯೂ

ಅಲ್ಲ ; ತನ್ನ ಹೊಟ್ಟೆಯಲ್ಲಿ ಬೆಳೆಯುತ್ತಿರುವ ಹರೀಶನ ಮಗುವಿಗಾಗಿ ?... ಹೌದು, ಅದಕ್ಕಾಗಿ ತಾನು ಸ್ಥಿತಪ್ರಜ್ಞಳಾಗಬೇಕು ; ದಾಂಡೇಲಿಯ ಅಡವಿಯು ಕನಸು ಕಾಣಬಾರದು ; ಹಳೇ ವಾದ್ಯಕ್ಕೆ ಹೊಸ ತಂತಿ ಹಾಕಿ ಹೊಸ ರಾಗ ಸುರು ಮಾಡಬೇಕು ; ಹಿಂದಿನದೆಲ್ಲ ಬರಿ 'ಪ್ಲೆಟೋನಿಕ್' ಎಂದು ಮರೆತು ಬಿಡಬೇಕು ; ಹಳೆಯ ಕತೆ ಎಂದು ದೂರ-ದೂರ ಸರಿಸಿಬಿಡಬೇಕು....

ಆ ರಾತ್ರಿ ಎಂದಿನಂತೆ ಊಟದ ನಂತರ ಮಾಳಿಗೆಯ ಮೇಲೆ ಹರಟುತ್ತ ಕೂತಾಗ ಸರಯೂ ಹರೀಶನಿಂದ ಹೇಳಿಸಿಕೊಳ್ಳದೆಯೇ ತನ್ನ ಪ್ರೀತಿಯ ಆ ಹಾಡು ಹಾಡಿದಳು. ಹಾಡು ಮುಗಿದ ಕೂಡಲೆ ಹರೀಶ ಅವಳನ್ನು ಎದೆಗೊತ್ತಿಕೊಳ್ಳುತ್ತ ಅವಳ ಕಿವಿಯಲ್ಲಿ ಪಿಸುನುಡಿದ, "ಸರೂ, ಇವತ್ತ – ಇವತ್ತ ಮಾತ್ರ ಮಾತ್ರ ನೀ ಹಾಡೋವಾಗ 'ನೀನೇ ತಂತಿ' ಅಂತ ಅಗದೀ ಪ್ರಾಮಾಣಿಕ ಆಗಿ ಹೇಳಲಿಕ್ಹತ್ತೀ ಅಂತ ಅನಿಸಿತು. ಯಾಕೋ ಗೊತ್ತಿಲ್ಲ. ಇನ್ನ ಮ್ಯಾಲ ಮಾತ್ರ ನಾನು ತಂತಿ ಅನ್ನೋ ಈ ನಂಬಿಕೆ ನಾ ಅಂತೂ ಕಳಕೊಳ್ಳೂದಿಲ್ಲ. ಭಾಳ ದಿವಸದ ಮ್ಯಾಲ ಇವತ್ತ ನಾವು ಒಬ್ಬರಿಗೊಬ್ಬರು ಸಮೀಪ - ಅಗದೀ ಸಮೀಪ ಬಂದೀವಿ ಅನಸ್ತದ. ನಾವು ಹೀಂಗs ಇರೋಣ ಸರೂ, ಏನಂತೀ ?"

"ಹ್ಞೂ ಹ್ಞೂ" – ಕಣ್ಣು ಮುಚ್ಚಿದ್ದಳು ಸರಯೂ.

* * * *

ಹರೀಶ ಸುಖವಾಗಿ ನಿದ್ರಿಸುತ್ತಿದ್ದಾನೆ. ಸರಯೂಗೆ ನಿದ್ರೆಯೇ ಬರಲೊಲ್ಲದು. ಬೆಳಗಾಗುತ್ತ ಬಂದಿದೆ. ಆದರೆ ರಾತ್ರಿಯೆಲ್ಲ ವಿಪರೀತ ಮಳೆಯಾಗಿದ್ದರಿಂದ ಇನ್ನೂ ಕತ್ತಲೋ ಕತ್ತಲು. ಹಾಸಿಗೆಯ ಮೇಲೆ ಮಲಗಿರುವುದು ಸಾಧ್ಯವಾಗದೆ ಅವಳು ಸಾವಕಾಶವಾಗಿ ಎದ್ದು ಪಡಸಾಲೆಗೆ ಬಂದಳು. ಮೆಲ್ಲನೆ ನಡೆದು ಕಿಡಿಕಿಯ ಹತ್ತಿರವಿದ್ದ ಗಿಳಿಯ ಪಂಜರದೆದುರಿಗೆ ಹೋಗಿ ನಿಂತಳು. ಕತ್ತಲಲ್ಲಿ ಅದರ ಕಣ್ಣುಗಳು ಪಳಪಳನೆ ಹೊಳೆದವು. ಅದರ ಗಂಟಲಿನಿಂದ 'ಹರಿ ಹರಿ'ಯ ಬದಲು ಎಂಥದೋ ಹತ್ತಿಕ್ಕಿದಂಥ ಗೊಗ್ಗರು ಧ್ವನಿ ಹೊರಡುತ್ತಲಿದೆ. ಏನು ಹೇಳುತ್ತಿದೆ ಈ ಗಿಳಿ ?

ತೆರೆದಿರಿಸಿದ್ದ ಕಿಡಿಕಿಯ ಬಾಗಿಲಿಂದ ಭರ್ರ್ ಎಂದು ತಣ್ಣನೆಯ ಗಾಳಿ ಒಳಗೆ ಬೀಸಿ ಬರುತ್ತಲಿದೆ. ಕಿಡಿಕಿಯ ಸಲಾಕೆಗಳನ್ನು ಬಿಗಿಯಾಗಿ ಅದುಮಿದಳು ಸರಯೂ....

ಏ ಹುಡುಗನೇ, ಅಂದು-ಇಂದು-ಬಹುಶಃ ಮುಂದೂ ಸಹ – ನನ್ನ ವೀಣೆಯ ತಂತಿಯಾದವನೇ, ಕೇಳು. ಹತ್ತು ವರುಷಗಳ ಹಿಂದೆಯೆ, ನನ್ನ-ನಿನ್ನ ಜೀವನದಲ್ಲಿ ಬೇರೆಯವರ ನಿರುಪಯೋಗಿ ಪ್ರವೇಶ ಆಗುವ ಮೊದಲೆ, ಅಂದರೆ ನಾನಿನ್ನೂ ನನ್ನ ವೀಣೆಯನ್ನು ಶ್ರುತಿ ಮಾಡುವ ಹಾಗೂ ನೀನು ಎಲೆಕ್ಟ್ರಿಕ್ ಕಂಭಕ್ಕೆ ಬಿಗಿಯಲ್ಪಡುವ

ಮೊದಲೆ, ವಿಧಿ ನಮ್ಮಿಬ್ಬರ ಭೆಟ್ಟಿ ಮಾಡಿಸಿದ್ದರೆ ಏನಾಗುತ್ತಿತ್ತು ಹೇಳಬಲ್ಲೆಯ ? ಯಾಕೆ ಹಾಗಾಗಲಿಲ್ಲ ?.... ಯಾಕೆ ?

ತಲೆ ಸುತ್ತಿ-ಸುತ್ತಿ ಬರತೊಡಗಿದೆ ಅವಳಿಗೆ. ಒಳಗಿನಿಂದ ಏನೋ ಉಕ್ಕುಕ್ಕಿ ಹೊರಬರಲು ಪ್ರಯತ್ನಿಸುತ್ತಿರುವಂತೆ, ಆದರೆ ಸಾಧ್ಯವಾಗದೆ ಗಂಟಲಿನ ಬಳಿ ತಡೆಹಿಡಿಯಲ್ಪಟ್ಟಂತೆ, ಉಸಿರು ಕಟ್ಟಿಹೋಗುತ್ತಿರುವಂತೆ ಭಾಸ. ತಡೆಹಿಡಿಯುವುದಿನ್ನು ಅಸಾಧ್ಯವಾಗಿ ಎಲ್ಲಾ-ಎಲ್ಲಾ ಹೊರಗೆಡಹುತ್ತಿರುವೆನೆಂದು ಅನ್ನಿಸಿತು ಆಕೆಗೆ. ತಟ್ಟನೆ ಅವಳು ಪಂಜರದ ಬಾಗಿಲನ್ನು ತೆರೆದುಬಿಟ್ಟಳು. ಬಿರುಗಾಳಿಯಂತೆ ಹೊರನುಗ್ಗಿದ ಹರೀಶನ ಪ್ರೀತಿಯ ಗಿಳಿ ಕಿಡಿಕಿಯಿಂದಾಚೆ ಭುರ್ರೆಂದು ಹಾರಿ ಒಂದೇ ಕ್ಷಣದಲ್ಲಿ ಹೊರಗಿನ ಮುಸಗುಗತ್ತಲಲ್ಲಿ ಮರೆಯಾಗಿಹೋಯಿತು. ದೆವ್ವ ಬಡಿದಹಾಗೆ ನಿಶ್ಚಲಳಾಗಿ ಆಕೆ ಅದು ಹಾರಿಹೋಗಿ ಮರೆಯಾದ ಕಡೆ– ಶೂನ್ಯದ ಕಡೆ– ನೋಡುತ್ತ ನಿಂತಳು.... ನಿಂತೇ ಇದ್ದಳು.

❖ ❖ ❖

# ಕೊನೆಯ ದಾರಿ (೧೯೬೨)

೧. ಕೊನೆಯ ದಾರಿ
೨. ಹೆಣ
೩. ಮಳೆ ಬಂದಾಗ
೪. ನೆರಳು
೫. ಮುಕ್ತಿ
೬. ಹೊರಟುಹೋದವನು

# ಕೊನೆಯ ದಾರಿ

೨೪ ಜುಲೈ, ೧೯೫೮

ಇಂದು ಇಡಿಯ ದಿನ ತಿರುಗಾಡಿ ಸಾಕಾಯಿತು. ಅಬ್ಬ, ಎಂತಹ ಹಸಿವು ಆ ಗೋವಿಂದಮೂರ್ತಿಗೆ ! ಎಷ್ಟೆಲ್ಲ ತಿಳಕೊಂಡಿದ್ದಾನೆ ಅವನು ಈ ವಿಷಯದ ಬಗ್ಗೆ ! ಡಾಕ್ಟರ್ ಅಲ್ಲವೆ ? ಥಿ, ಈ ಡಾಕ್ಟರರೆಲ್ಲಾ ಹೊಲಸು ಜನವಪ್ಪ. ಮನುಷ್ಯನ ದೇಹವನ್ನು ಕೊಯ್ದು-ಕೊಯ್ದು ಎಲ್ಲ analyse ಮಾಡಿ ಎಲ್ಲ ನೋಡಿದವರು ಇವರು. ಅದಕ್ಕೇ ಗೋವಿಂದಮೂರ್ತಿಗೆ ಈ ಬಗ್ಗೆ ಏನು ಮಾತಾಡಲಿಕ್ಕೂ ನಾಚಿಕೆಯಿಲ್ಲ. ಇದು ಹೀಗೆ, ಅದು ಹಾಗೆ ಅಂತ ನನಗೇ ವಿವರಿಸಿ ಹೇಳುತ್ತಾನೆ. 'ಲಿಲಿ, you are a perfect woman' – ಅಂದ ನನಗೆ ಇವತ್ತು, ಕೆರೆಯ ಪಕ್ಕದ ದಿನ್ನೆಯ ಆಚೆ ಕೂತಿದ್ದಾಗ, ನನಗೆ ಅಭಿಮಾನ ಅನ್ನಿಸಿತೆ ನನ್ನ ಬಗ್ಗೆ ? ಹೌದು ಅಂತ ಕಾಣುತ್ತದೆ. ಯಾಕನ್ನಿಸಬಾರದು ? ನಿನ್ನ ದೇಹ ರಚನೆ ಚೆನ್ನಾಗಿದೆ, ಪೂರ್ಣವಾಗಿದೆ ಅಂತ ಹೇಳಿದಾಗ ಯಾವ ಹೆಂಗಸಿಗೆ ಅಭಿಮಾನ ಅನ್ನಿಸುವುದಿಲ್ಲ ?

ಆದರೆ ಛೆ, ಗೋವಿಂದಮೂರ್ತಿಯೊಂದಿಗೆ ಇಡೀ ದಿನ ತಿರುಗಿ ಕೂತು ಮಲಗಿ ಏನು ಮಾಡಿದರೂ ಒಮ್ಮೆ ಸಹ ಮೈ ಜುಮ್ ಅನ್ನಲಿಲ್ಲ. ನನಗೆ ಇಂಥವರ ಗೆಳೆತನ ಈಗ ಬೇಡವಾಗಿದೆ. ಇವರಿಂದ ಏನೂ ಉಪಯೋಗವಿಲ್ಲ. ಭಯಂಕರ ಮನುಷ್ಯ ಈ ಗೋವಿಂದಮೂರ್ತಿ. ಎಂದೂ ತೀರದ ದಾಹ ಅವನದು. ಬೇರೆ ಮಾತಿಗೆ ಅವಕಾಶವೇ ಕೊಡುವುದಿಲ್ಲ ಅವನು. 'ಜೀವನ ಇರೋದೇ ಸುಖ ಅನುಭವಿಸೋದಕ್ಕೆ ಲಿಲಿ, ಈಗಲ್ಲದಿದ್ದರೆ ಇನ್ಯಾವಾಗ ನಾವು ಮಜವಾಗಿರುವುದು ? ಮುದುಕರಾದ ಮೇಲೆಯೇ ? ಏನು ? ಪಾಪ ? ಪಾಪ ಬಂದೀತು ಅನ್ನುತ್ತೀಯಾ ?' – ಅಂತ ಅಂದು ಅವನು ಭಯಂಕರವಾಗಿ ನಕ್ಕದ್ದು ಇನ್ನೂ ನೆನಪಿದೆ ನನಗೆ. 'ಇಲ್ಲಿ ಕೇಳು ಲಿಲಿ, ಪಾಪ ಪುಣ್ಯ ಎಲ್ಲಾ ಸುಳ್ಳು, ನನ್ನ ಪಾಲಿಗಂತೂ ಇದೊಂದೇ ಖರೆ– ಇದೊಂದೇ ಖರೆ' ಅನ್ನುತ್ತಾನೆ ಅವನು. ಅವನಂದದ್ದು ಖರೆ ಅಂತ ನನಗೂ ಅನ್ನಿಸಿತಲ್ಲ !

ಈ ಗೋವಿಂದಮೂರ್ತಿಗೂ ಆ ವಿನಯ ಸಾಳಕರಗೂ ಎಲ್ಲಿಂದೆಲ್ಲಿಯ ಹೋಲಿಕೆ ! ಮಾತೆತ್ತಿದರೆ ಪಾಪ-ಪುಣ್ಯ, Morality-ethics ದ ಗಂಟನ್ನೇ ಬಿಚ್ಚುತ್ತಾನೆ ಅವನು. ಕಾಲೇಜಿನಲ್ಲಿ ಹುಡುಗರಿಗೆ ಫಿಲೊಸೊಫಿ ಕಲಿಸಿ-ಕಲಿಸಿ ಅಭ್ಯಾಸ

ಅವನಿಗೆ. ಏನು ಮಾಡಬೇಕು, ಏನು ಮಾಡಬಾರದು ಅಂತ ವಿವೇಚಿಸುವುದರಲ್ಲೇ ಜೀವನ ಸವೆಸುತ್ತಿದ್ದಾನೆ. ವಿನಯ. ಒಮ್ಮೆ ಏನಾದರೂ ಪ್ರಯತ್ನ ಮಾಡಿ ಅವನನ್ನು ದಾರಿಗೆ ಹಚ್ಚಬೇಕು.

ದಾರಿ ? ಡಾ. ಗೋವಿಂದಮೂರ್ತಿಯ ದಾರಿಗೇ ? ಊಹ್ಞೂ. ವಿನಯನ ಕೂಡ ನಿಷ್ಠೆ, ಪಾವಿತ್ರ್ಯ, ಜೀವನದ ಮೌಲ್ಯಗಳು ಇತ್ಯಾದಿ ಬಗ್ಗೆ ತಾಸುಗಟ್ಟಲೆ ಸೀರಿಯಸ್ಸಾಗಿ ಚರ್ಚೆ ಮಾಡುವಾಗ ಸಿಗುವ ಏನೋ ಒಂದು ಬಗೆಯ ಗಾಳಿಯಲ್ಲಿ ತೇಲಿಸಿದಂತಹ ಅನಿಸಿಕೆಯನ್ನು ವ್ಯರ್ಥ ಕಳೆದುಕೊಳ್ಳಲು ಮನಸ್ಸಿಲ್ಲ ನನಗೆ.

ನಿದ್ದೆ ಬರುತ್ತಿದೆ. ಮೈ-ಕೈ ನೋವು....ಛೆ, ಇನ್ನು ಈ ಗೋವಿಂದಮೂರ್ತಿಯ ಜೊತೆಗೆ outing ಗೆ ಹೋಗಬಾರದು. ಅವನ ಸಹವಾಸವೇ ಸಾಕು ಇನ್ನು. ಅವನೆಂದೂ ನನಗೆ ಬೇಕಾದದ್ದು ಕೊಡಲಾರ.

ನಾಳೆ ಬಾಸ್‌ಗೆ ಕಳೆದ ತಿಂಗಳ accounts ಒಪ್ಪಿಸಬೇಕು. ಆಫೀಸ್ ಬಿಟ್ಟ ಮೇಲೆ ಸಂಜೆ ಮನೆಗೆ ಬಾ ಅಂದಿದ್ದರು ನಿನ್ನೆ. ಯಾಕೆ ಬರಲಿಲ್ಲ ಅಂತ ಕೇಳಬಹುದು ನಾಳೆ. ಹೇಳಿಬಿಡುತ್ತೇನೆ ಸ್ಪಷ್ಟವಾಗಿ–ನಿಮ್ಮ ಹೆಂಡತಿ ಊರಿಗೆ ಹೋದಾಗ ಇನ್ನು ನಿಮ್ಮ ಮನೆಗೆ ಬರುವುದಿಲ್ಲ ಎಂದು. ಇವರಿಗೆ ತಮ್ಮ ಆ ಟಿ. ಬಿ. ಹೆಂಡತಿ ಬುರ್ಖಾ ಹಾಕಿಕೊಂಡು ಏಳೂ ಮಕ್ಕಳನ್ನು ಕಟ್ಟಿಕೊಂಡು ತವರಿಗೆ ಹೋದಾಗಲೆಲ್ಲ ಆಫೀಸಿನ ಕೆಲಸಕ್ಕಾಗಿ ನನಗೆ ಮನೆಗೆ ಬಾ ಅಂತ ಹೇಳುವ ಹುಕಿ ಬರುತ್ತದೆ. ಅಯ್ಯೋ, ಅವರ ಆ ಗಡ್ಡ, ಉದ್ದನ್ನ ಟೋಪಿ, ಮಾತಿಗೊಮ್ಮೆ 'ಅಲ್ಲಾಕೆ ಕಸಮ್' ಪಲ್ಲವಿ, ಈ ಯಾವುದೂ ನಾನು like ಮಾಡುವುದಿಲ್ಲ. ಆ ಪುಷ್ಪಾ ಕುಲಕರ್ಣಿ ಹೇಗೆ ಸಹಿಸುತ್ತಾಳೋ ? ಟೈಪ್ ಎಲ್ಲಾ ಅವರ ಮನೆಯಲ್ಲಿಯೇ ಕೂತು ಮಾಡುತ್ತಾಳೆ.

ನನಗೆ ಆಗುವುದಿಲ್ಲ ಎಂದು ಹೇಳಿಬಿಡುತ್ತೇನೆ ನಾಳೆ. ಮೆಮೊ ಕಳಿಸಿದರೆ ಕಳಿಸಲಿ. ಕೆಲಸದಿಂದಲೂ ತೆಗೆದುಬಿಡಲಿ ಬೇಕಾದರೆ. 'ನಿನಗ ಬೇಕು ಅನಿಸಿದಾಗ ಬಂದುಬಿಡು. ನನ್ನ ಎಸ್ಟೇಟು ನೋಡಿಕೊಂಡು ಇದ್ದುಬಿಡು. ನನಗರೆ ಬ್ಯಾರೆ ಯಾರಿದ್ದಾರ ?'–ಅಂದರು ಶಂಕರಗೌಡರು ಮೊನ್ನೆ. ದೇವೂರು ಸಣ್ಣ ಹಳ್ಳಿಯಾದರೂ ಅಡ್ಡಿಯಿಲ್ಲ. ಈ ಬಾಸ್‌ನ 'ಅಲ್ಲಾಕೆ ಕಸಮ್' ನಾನು ತಾಳಲಾರೆ....

೨೮ ಜುಲೈ, ೧೯೫೮

ಬೇಸರ....ಬೇಸರ ಈ ಬಾಸ್ ಬಹಳ ಕಾಡುತ್ತಿದ್ದಾನೆ. ಇವತ್ತು ಸಂಜೆ ಆ ಎಲ್ಲಾ accounts ಬರೆದು ಮುಗಿಸುವ ತನಕ ನನ್ನ ಭುಜದ ಮೇಲಿನ ಕೈ ತೆಗೆಯಲೇ ಇಲ್ಲ. ಮುದುಕನಾದರೂ ಇಷ್ಟು ಚಪಲ ಅವನಿಗೆ. ಚಪಲ-ಹ್ಞಾ, ಬರೇ ಚಪಲ. ಅದಕ್ಕಿಂತ

ಹೆಚ್ಚಿನದು ಏನೂ ಇಲ್ಲ. ನಾನು ವಿರೋಧಿಸುತ್ತೀನಿ ಅಂತ ತಿಳಿದಿದ್ದನೇನೋ. ನಾನು ಏನೂ ವಿರೋಧ ಮಾಡದೇ ಇದ್ದಾಗ ಎಷ್ಟು ಆಶ್ಚರ್ಯ ಅವನಿಗೆ!.... ಗೋವಿಂದಮೂರ್ತಿಯಿಂದ ಸಿಗಲಾರದ್ದು ಇವನಿಂದಲಾದರೂ ಸಿಕ್ಕೀತೆಂದು ಹ್ಞೂ ಅಂದೆ. ಆದರೆ ಛೆ, ಇವನೂ ಹೇಡಿಯೇ 'ಏನಂದಿ ಲಿಲಿ ? ಮಗು ಬೇಕೆ ನಿನಗೆ ? ತೋಬಾ ತೋಬಾ. ನೀನು ಇನ್ನೂ ಮದುವೆಯಾಗದ ಹುಡುಗಿ. ನಮ್ಮಿಂದ ಇಂಥ ಪಾಪದ ಕೆಲ್ಸ ಆಗೋದಿಲ್ಲ.—'ಅಲ್ಲಾಕೆ ಕಸಮ್'—ಅಂತ ತಡವರಿಸಿದ.

ಇವನ ಗಡ್ಡಕ್ಕೆ ಬೆಂಕಿ ಹಚ್ಚಬೇಕು. ಮದುವೆಯಾಗದ ಹುಡುಗಿಯ ಕೂಡ ಮಲಗಲಿಕ್ಕೆ ಬೇಕು ಈ ಸಾಬನಿಗೆ. ಆದರೆ ಅವಳಿಗೆ ಇಷ್ಟೊಂದು ಅವಶ್ಯವಾಗಿರುವ ಒಂದು ಸಣ್ಣ favour ಮಾಡಲಿಕ್ಕೆ ಬೇಡ ಅವನಿಗೆ. ಪಾಪವಂತೆ. ಥೂ....

—ಗೋವಿಂದಮೂರ್ತಿಯಿಂದ ಆಗಬೇಕಿತ್ತು ಈ ಕೆಲಸ. ಅವನೇನೂ ಪಾಪ-ಪುಣ್ಯದ ಬಗ್ಗೆ care ಮಾಡುವುದಿಲ್ಲ. ಆದರೆ ಅವನು ಸದಾ ಜಾಗರೂಕನಾಗಿರುವ ಮನುಷ್ಯ. ನನಗೆ ಬೇಕಾದ್ದನ್ನು ಕರುಣಿಸಿ ಬಂಧನದಲ್ಲಿ ಸಿಲುಕಿಕೊಳ್ಳುವ ಇಚ್ಛೆಯಿಲ್ಲ ಅವನಿಗೆ. ಈ ಬಂಧನದ ಒಂದು ಎಳೆಯನ್ನೂ ಅವನಿಗೆ ಸೋಕಿಸಿಕೊಡುವುದಿಲ್ಲವೆಂದು, ಈಗಿನ ಹಾಗೆಯೇ ನಂತರವೂ ಅವನು free ಆಗಿರಬಹುದೆಂದು ನಾನೆಷ್ಟು ಹೇಳಿದರೂ ಕೇಳುವುದಿಲ್ಲ ಅವನು. 'ಲಿಲಿ, excuse me. ನನ್ನನ್ನ ಅಂಥ ಜಂಜಡದೊಳಗೆ ಸಿಗಿಸಬೇಡ. ನಾನೇನು ಮನುಷ್ಯನಲ್ಲವೆ ? ನೀನು ನನಗೆ ಬಂಧನ ಹಾಕದಿದ್ದರೂ ನನ್ನಿಂದ ನಿನಗೆ ಹುಟ್ಟಿದ ಮಗು ಬಗ್ಗೆ ತಾನಾಗಿಯೇ ನನ್ನಲ್ಲಿ ಪ್ರೀತಿ-ಗೀತಿ ಹುಟ್ಟಿದರೆ ? ಆಗ ? ನನ್ನ ಜೀವನದೊಳಗಿನ ಮಜಾ ಎಲ್ಲಾ ಖಲಾಸ್'—ಅನ್ನುತ್ತಾನೆ.

—ಇವರೆಲ್ಲ ನಿರುಪಯೋಗಿಗಳು....

ವಿನಯ ಸಾಳಕರನನ್ನೇ ಸಾದು ಮಾಡಬೇಕು.

೩೧ ಜುಲೈ, ೧೯೫೮

ಆಫೀಸಿನಿಂದ ಬರುವಾಗ ತಂದಿದ್ದ ಚಾಕಲೇಟನ್ನು ಬಾಗಿಲಲ್ಲಿ ನಿಂತಿದ್ದ ಮುನ್ನಿಗೆ ಕೊಟ್ಟಾಗ ಮುನ್ನಿಯ ಮಮ್ಮಿ ಕೇಳಿದಳು, 'ಮಕ್ಕಳನ್ನ ಇಷ್ಟ ಪ್ರೀತಿ ಮಾಡ್ತೀರಿ, ಲಗೂನ ಲಗ್ನಾ ಆಗಿಬಿಡ್ರೆಲ್ಲ ?'

—ಹ್ಞೂ, ಲಗ್ನ. ಲಗ್ನ ಅಂದಕೂಡಲೆ ನೆನಪಾಗುವುದು ಆ ಕತೆಯೆಲ್ಲ. ಆ ಗದ್ದಲ, ಬಜಂತ್ರಿ, ಅರಿಷಿಣ, ಮತ್ತು ಆ ಮನುಷ್ಯ. ನನ್ನ ಕೈಹಿಡಿದಿದ್ದ ಆ ಪಶು. ಪತಿ'ದೇವ'ರು. ಅವನೊಂದಿಗೇ ನೆನಪಾಗುವುದು ಅವನ ಆ ಅಬ್ಬರ, ಅವನ ಕುಡಿತ, ಅವನ ಸೂಳೆಯರು, ಅವನು ನನಗೆ ಕೊಟ್ಟ ಹಿಂಸೆ....

—ಥೂ, ಕೆಟ್ಟ ಕನಸು. ಎಲ್ಲ ಹರಿದುಕೊಂಡು ಚೆಲ್ಲಿಕೊಟ್ಟು ಬಿಟ್ಟುಬಿಟ್ಟು ಹೇಗೆ ಇಷ್ಟು ದೂರ ಬಂದೆ, ಹೇಗೆ ದಿನ ಕಳೆದೆ, ಹೇಗೆ ಹೊಸ ಮನುಷ್ಯಳಾದೆ— ಈ ಎಲ್ಲ ಎಂದಾದರೂ ಮರೆತೇನೇ ?

ಲಗ್ನವಂತೆ ಲಗ್ನ. ಮತ್ತೊಂದು ಪಶುವಿನ ಕೂಡ. ಛಿ....

'ಎಲ್ಲಾ ಗಂಡಸ್ರೂ ಕೆಟ್ಟವರಿರೋದಿಲ್ಲ ಲೀಲಾ, ನೀ ಸಣ್ಣ ಹುಡುಗಿ, ಒಬ್ಬಾಕೀನೇ ಇರಬಾರದು. ಮತ್ತ ಬ್ಯಾರೆ ಲಗ್ನಾ ಆಗು. ನೀ ಹ್ಞೂ ಅಂದರ ನಾ ಅದರ ವ್ಯವಸ್ಥಾ ಮಾಡ್ತೀನಿ'—ಅನ್ನುತ್ತಾರೆ ಶಂಕರಗೌಡರು.

ಹೌದು. ಶಂಕರಗೌಡರಂಥ ಒಳ್ಳೆಯ ಗಂಡಸರೂ ಇರುತ್ತಾರೆಂದು ನನಗೆ ಗೊತ್ತು. ಎಂತಹ ಮನುಷ್ಯ ! ಮಾಡಿಕೊಂಡ ಹೆಂಡತಿಗೆ ಮದುವೆಯಾಗಿ ಇಪ್ಪತ್ತೈದು ವರ್ಷಗಳಾದರೂ ಮಕ್ಕಳಾಗದೇ ಇದ್ದರೂ, ಸ್ವಲ್ಪವೂ ಬೇಸರಿಸದೆ ನಿಷ್ಠೆಯಿಂದಿರುವ ಮನುಷ್ಯ. ಯಾರು ಏನು ಕೇಳಿದರೂ ಇಲ್ಲ ಅಂದವರಲ್ಲ. ಎಂತಹ ಮನಸ್ಸು ! ಅವರ ಪ್ರೀತಿ-ಅನುಕಂಪ ಎಂದೋ ಸತ್ತುಹೋದ ಅಪ್ಪನ ನೆನಪು ತರುತ್ತದೆ....

ಆದರೆ ಹಾಗೆಂದು ನಾನು ಅವರ ಉಪದೇಶದಂತೆ ಮತ್ತೆ ಮದುವೆಯಾಗಲಿಕ್ಕೆ ಹೇಗೆ ಶಕ್ಯವಿದೆ ? ಒಮ್ಮೆ ಬಿದ್ದು ಎದ್ದ ಬಾವಿಯಲ್ಲೇ ಮತ್ತೆ ಬೀಳಲೊಲ್ಲೆ ನಾನು.

—ಹಾಗಾದರೆ ಮುನ್ನಿ ? ಎಷ್ಟು ಮುದ್ದು ಮಗು. ನನಗೆ ಬೇಕು ಅಂಥ ಒಂದು ಮಗು. ಬರೇ ಮಗು. ಯಾರಿಂದಲಾದರೂ ಸರಿಯೆ. ಹೇಗಾದರೂ ಸರಿಯೆ. ಆದರೆ ಹೇಗೆ ?

ಮಧ್ಯಾಹ್ನ ಆಫೀಸಿನಲ್ಲಿ ಲೆಕ್ಕ ಬರೆಯುತ್ತಾ ಇದನ್ನೇ ಯೋಚಿಸುತ್ತಿದ್ದಾಗ ಎದುರಿನ ಟೇಬಲಿಗೆ ಕೂತಿದ್ದ ವಿಲಿಯಮ್ಸ್ ಕಾಣಿಸಿದ. ಇನ್ನು ವಿಲಿಯಮ್ಸ್‌ನನ್ನು ನೋಡಿ ಉಪಯೋಗವಿಲ್ಲ. ಮೊನ್ನೆ ಸ್ಪಷ್ಟ ಹೇಳಿಬಿಟ್ಟಿದ್ದಾನೆ—ಇನ್ನು ನನ್ನ ಭೆಟ್ಟಿಯಾಗುವುದಿಲ್ಲ ಅಂತ. ಹಾಗೇನಾದರೂ ಭೆಟ್ಟಿಯಾದರೆ ಅವನ ದಪ್ಪ ಹೊಟ್ಟೆಯ ಆಂಟಿ ತನ್ನ ಆಸ್ತಿಯಲ್ಲಿ ಚಿಕ್ಕಾಸೂ ಅವನಿಗೆ ಕೊಡುವುದಿಲ್ಲ ಅಂತ. ಅಷ್ಟೇ ಅಲ್ಲ, ಆ ಆಂಟಿಯ ಮಗಳು ತೆಳು ನಡುವಿನ ಇವನ ಕಸಿನ್ ಇವನೊಂದಿಗಿನ ತನ್ನ engagement ಸಹ break ಮಾಡಿಕೊಳ್ಳುತ್ತಾಳೆ ಅಂತ. ಇಷ್ಟೆಲ್ಲ ಲುಕ್ಸಾನು ಎದುರಿಸಿ ಅವನೇಕೆ ನನ್ನನ್ನು ಪ್ರತಿ ರವಿವಾರ ಪಿಕ್ಚರಿಗೆ ಕರೆದೊಯ್ಯಬೇಕು ? ನನ್ನೊಂದಿಗೆ ರಾತ್ರಿ ಕಳೆಯಬೇಕು ? ಮತ್ತು ಹೇಗೆ ?—"ನಿನ್ನ ಕೂಡ ಕಳೆದ ಸುಖದ ದಿನಗಳನ್ನ ನಾನೆಂದೂ ಮರೆಯೋದಿಲ್ಲ ಲಿಲಿ, ದಿನಾ ನಿನಗಾಗಿ— ನಿನ್ನ ಒಳ್ಳೆಯದಕ್ಕಾಗಿ ನಾನು ಜೀಸಸ್‌ನಲ್ಲಿ ಪ್ರಾರ್ಥನೆ ಮಾಡುವೆ. God bless you"—ಅಂತ ಹೇಳಿ ನನ್ನ ಕೈ ಅದುಮಿ ತುಂಬ ಚಿಂತಾಜನಕ ರೀತಿಯಲ್ಲಿ ತಲೆ ಕೊಡವಿ ಹೊರಟು ಹೋಗಿದ್ದ

ಈ ವಿಲಿಯಮ್ಸ್.... ಇಂದು ತಲೆ ಕೆಳಗೆ ಹಾಕಿ ಕೂತು ಏನೋ ಗ್ರಾಫ್ ತಯಾರಿಸುತ್ತಿದ್ದ. ಅವನ ಹಣೆಯ ಮೇಲೆ ಸುರುಳಿಯಾಗಿ ಬಿದ್ದ ಅಲೆಗೂದಲನ್ನೆ ನೋಡುತ್ತಿದ್ದೆ ಎಷ್ಟೋ ಹೊತ್ತಿನ ತನಕ.

–ವಿಲಿಯಮ್ಸ್‌ನ ಈ ಅಲೆಗೂದಲೇ ಅಲ್ಲವೆ ಅವನು 'ಬಾ' ಅಂದಾಗ ನಾನು 'ಹ್ಞೂ' ಅನ್ನಲು ಕಾರಣವಾದದ್ದು ? ಗೋವಿಂದಮೂರ್ತಿಯ ಹಾಗೆ ಕಾಡು-ಒರಟು ಅಲ್ಲ ವಿಲಿಯಮ್ಸ್. ತೀರ ಮೃದು. ತೀರ gentle. ಹ್ಞಾ, ಎಲ್ಲಾ ವಿಷಯದಲ್ಲೂ. ಅವನ ಹಾಗೇ gentle ಆದ, ನೀಲಿ ಕಣ್ಣಿನ, ಅಲೆಗೂದಲಿನ ಒಂದು ಮಗು ಅವನಿಂದ ನನಗೆ ಆಗೇ ತಿರುವುದೆಂದು ಎಷ್ಟು ಆಸೆ ಹೊತ್ತಿದ್ದೆ. ಮೂರು ತಿಂಗಳ ಶ್ರಮ ವ್ಯರ್ಥವಾಗಿ ಹೋಯಿತು. ವಿಲಿಯಮ್ಸ್‌ನ ಸಹವಾಸ ಫಲಿಸುವ ಮೊದಲೇ ಅವನು ದೂರ ಹೋದ. ಅವನ ಕಸಿನ್, ಅವನ ಆಂಟಿ, ಎಲ್ಲಕ್ಕಿಂತ ಮುಖ್ಯವಾಗಿ ಆ ಆಂಟಿಯ ಆಸ್ತಿ–ಅವನನ್ನ ದೂರ ಒಯ್ಯಿತು....

–ಮುನ್ನಿ. ಮುನ್ನಿಯ ನೆನಪು ನನ್ನನ್ನ ಅಸ್ತವ್ಯಸ್ತ ಮಾಡುತ್ತದೆ....

ವಿನಯ ಸಾಳಕರನೊಂದಿಗೆ appointment, ನಾಳೆ ಸಂಜೆ ಐದು ಗಂಟೆಗೆ ಆಪೇರಾದಲ್ಲಿ.

೪ ಅಗಸ್ಟ್, ೧೯೫೮.

ಶಂಕರಗೌಡರು ಯಾಕೋ ಬಹಳ ಚಿಂತೆಯಲ್ಲಿದ್ದ ಹಾಗಿತ್ತು. ಅರ್ಧ ತಾಸು ಸಹ ನಿಲ್ಲಲಿಲ್ಲ. 'ಹೈಬ್ರೀಡ್ ಬೆಳೆಗೆ ಗೊಬ್ಬರ ಕೊಳ್ಳಲಿಕ್ಕೆ ಬಂದಿದ್ದೆ. ಹಾಗೇ ನಿನ್ನ ನೋಡಿ ಹೋಗೋಣ ಅಂತ ಈ ಕಡೆ ಬಂದೆ. ಹೋಗ್ತೀನವ್ವಾ, ಕತ್ತಲಾಗೂದರಾಗ ದೇವೂರು ಮುಟ್ಟಬೇಕು, ಹ್ಯಾಂಗಿದ್ದೀ ?'

–ಅವರ ಮಾತಿನ ಕಡೆ ಲಕ್ಷ್ಯವಿರಲಿಲ್ಲ ನನಗೆ. ಅವರ ಹೊಸ ಇಂಪಾಲಾ ನೋಡುತ್ತಿದ್ದೆ. ಆರಡಿ ಎತ್ತರದ, ಅಗಲವಾದ ಎದೆಯ, ಗಿರಿಜಾ ಮೀಸೆಯ ಶಂಕರಗೌಡರಿಗೆ ಆ ಮೊದಲಿನ ಫಿಯಾಟ್‌ಗಿಂತ ಇದೇ ಹೆಚ್ಚು ಒಪ್ಪುತ್ತದೆ–ಅಂದುಕೊಳ್ಳುತ್ತಿದ್ದೆ.

–ಕಾಲ, ದುಃಖ, ಬೇಸಿಗೆ ಈ ಯಾವುದೂ ಗುಡ್ಡಗಳನ್ನು-ಗಿಡಗಳನ್ನು ದಾಟಿ ದೇವೂರು ಮುಟ್ಟಿ ಈ ಗೌಡರ ತನಕ ಎಂದೂ ಹೋಗಿಯೇ ಇಲ್ಲವೇನೋ ಅನಿಸುವುದು. ಬಹಳ ಹಿಂದೆ, ನಾನು ಕನ್ನಡ ಶಾಲೆಯಲ್ಲಿದ್ದಾಗ, ಮೊದಲಸಲ ಅಪ್ಪ ಅವರನ್ನು ಮನೆಗೆ ಕರಕೊಂಡು ಬಂದು, 'ಏ ಏನು ನಡೆಸೀಯೇ ?' ಅಂತ ಅವ್ವನನ್ನು ಕೂಗಿ ಕರೆದು, 'ನೋಡು, ಶಂಕರು– ನನ್ನ ಜಾನಿದೋಸ್ತ ಬಂದಾನೆ. ಶ್ಯಾವಿಗೆ

ಹಾಕು.'—ಅಂತ ಹೇಳಿದಾಗ, ನನ್ನನ್ನ ಆ ಆಜಾನುಬಾಹು ಹೆಗಲಮೇಲೆ ಹೊತ್ತು ಮೂರು ಸುತ್ತು ಕುಣಿದಾಗ, ಹೇಗಿದ್ದರೋ ಇನ್ನೂ ಹಾಗೆಯೇ ಇದ್ದಾರೆ. ಅವರ ಜೀವನದಲ್ಲಿ ಎಂದೂ ಏನೂ ಬದಲಾಗಿಲ್ಲ. ಆ ಅರ್ಧಾಂಗವಾಯುವಿನಿಂದ ಹಾಸಿಗೆ ಹಿಡಿದ ಹೆಂಡತಿ, ಮನೆಯಲ್ಲಿ ನಿತ್ಯದಾಸೋಹ, ನೂರಾಎಂಟು ಕಮಿಟಿಗಳ ಮೆಂಬರಶಿಪ್ಪು, ತೋಟಕ್ಕೆ ಹೊಸ ಬಾವಿ, ಹೊಲಕ್ಕೆ ಟ್ರ್ಯಾಕ್ಟರ್, ಆ ಜೋಡುನಳಿಯ ಬಂದೂಕು— ಎಲ್ಲ ಹಾಗೇ ಇವೆ. ಅದರೊಂದಿಗೆ ಈ ಗೌಡರ ಎತ್ತರ, ಅಗಲ, ಮೀಸೆಯ ಹುರಿ ಸಹ— ಹಾಗೇ ಇವೆ.

—'ನಿನ್ನ ಜೀವನ ಸುಖೀ ಆಗಲಿಕ್ಕೆ ನನ್ನ ಜೀವಾ ಕೊಟ್ಟೇನು' ! ಅಂತ ಎಷ್ಟು ಸಲ ಹೇಳಿಲ್ಲ ಈ ಗೌಡರು....

ಅಂಥ ಮನುಷ್ಯನಿಗೆ ಏನು ಚಿಂತೆಯೋ. ಇಂದು ಮೊದಲ ಸಹ ಆ ದೊಡ್ಡ ಹಣೆಯ ಮೇಲೆ ನಿರಿಗೆ ಕಂಡೆ. ಮಾತಾಡದೆ ಆತ ಸುಮ್ಮನೆ ಕೂತಿದ್ದಾಗ ಓಡಿಹೋಗಿ ಅವರ ತಲೆಯನ್ನೆ ನನ್ನ ಎದೆಯೊಳಗೆ ಬಚ್ಚಿಟ್ಟುಕೊಂಡು ಮಗುವನ್ನು ರಮಿಸುವಂತೆ ರಮಿಸಬೇಕು ಅನ್ನಿಸಿತು.

ಧೂಳೆಬ್ಬಿಸುತ್ತ ಆ ಇಂಪಾಲಾ ಕಣ್ಮರೆಯಾದಾಗ ಕೋಣೆಯ ಕಡೆ ತಿರುಗಿ ಬರುತ್ತ ದಾರಿಯೊಳಗೆ ಮತ್ತೆ ಮುನ್ನಿ— 'ಆಂಟಿ, ಚಾಕಲೇಟು ತಂದಿಲ್ಲ ?'

ಈ ಮುನ್ನಿಯನ್ನೇ kidnap ಮಾಡಿಕೊಂಡು ಹೋದರೆ....

೧೪ ಅಗಸ್ಟ್, ೧೯೫೮.

ಎಷ್ಟು ದಿನಗಳ ನಂತರ ಇಂದು ವಿನಯ ಸಾಳಕರನ ಭೆಟ್ಟಿ.... ದುಃಖಾಂತ ಸಿನೇಮದ ಹೀರೋನ ಹಾಗೆ ಗದ್ಗದಿತ ಧ್ವನಿಯಲ್ಲಿ ನನ್ನನ್ನು ಬೈಯ್ದು, ಶಪಿಸಿ ಅವನು ಹೊರಟು ಹೋದ ಮಾತಿಗೆ ಆರು ತಿಂಗಳು ಕಳೆದುಹೋಗಿತ್ತು.

'ನಿನ್ನನ್ನ ದೇವಿಯ ಹಾಗೆ ಪೂಜಿಸಿದ್ದೆ ಲಿಲಿ, ಎಷ್ಟೋ ಜನ್ಮಗಳಿಂದ ನನ್ನ ಅಂತರಾತ್ಮ ಹುಡುಕುತ್ತಿದ್ದ ವ್ಯಕ್ತಿ ನೀನೇ ಅಂತ ನಂಬಿದ್ದೆ. ನಿನ್ನ ಬಿಟ್ಟು ನನಗೆ ಜೀವನವೇ ಇಲ್ಲ ಅಂತ ತಿಳಿದಿದ್ದೆ.'—ವಿನಯ ಕೆಂಪುಕಣ್ಣು ಮಾಡಿಕೊಂಡು ಹೇಳಿದ್ದ, 'ನೀನು ನನ್ನ ಹೃದಯ ಹೊಸಕಿ ಹಾಕಿದಿ. ನನ್ನ ಕನಸುಗಳನ್ನ ಮಣ್ಣು ಮುಕ್ಕಿಸಿದಿ. ನನ್ನ ಜೀವನಕ್ಕೆ ಬೆಂಕಿ ಹಚ್ಚಿದಿ....'

—ನಾನು ಸುಮ್ಮನೇ ಇದ್ದೆ. ವಿನಯ ಹೇಳುತ್ತಿದ್ದುದರಲ್ಲಿ ಸತ್ಯಾಂಶ ಇತ್ತೇನೋ. ಎಷ್ಟು ಸಲ ಅವನು ನನ್ನ ಕಾಲ ಬಳಿ ಕೂತು ನನ್ನ ಪಾದಗಳನ್ನು ಚುಂಬಿಸಿದ್ದುಂಟು. 'ನೀನು ನನ್ನ ಸರ್ವಸ್ವ' ಅಂದಿದ್ದುಂಟು. ಕಾಲೇಜು ಬಿಟ್ಟೊಡನೆ

ದಿನಾ ಮನೆಯಲ್ಲಿ ಎರಡು ಮಕ್ಕಳ ಕೂಡ ದಾರಿ ಕಾಯುವ ಹೆಂಡತಿಯ ಕಡೆ ಹೋಗುವುದು ಬಿಟ್ಟು ಸೀದಾ ನನ್ನ ಕಡೆ ಬರುತ್ತಿದ್ದುದುಂಟು. ಎಲ್ಲ ಸರಿಯಾಗೇ ನಡೆದಿತ್ತು. ಇನ್ನೂ ಸ್ವಲ್ಪ ದಿನ ಹಾಗೇ ನಡೆದಿದ್ದರೆ ಅವನ ಮಡಿವಂತಿಕೆಯ ವಿಚಾರಗಳನ್ನೆಲ್ಲ ಅವನ ಓದಿ-ಓದಿ ಬೊಕ್ಕವಾಗತೊಡಗಿರುವ ಆ ತಲೆಯಿಂದ ಹೊರಗೆ ಹಾಕಿ ಅವನನ್ನು ದಾರಿಗೆ ತರುವುದು ನನಗೆ ಶಕ್ಯವಾಗಲೂ ಬಹುದಿತ್ತು. ಆದರೆ ಅಷ್ಟರಲ್ಲೇ, ವಿನಯನೇ ಹೇಳುವ ಹಾಗೆ, ನಾನು ಅವನ ಹೃದಯ ಹೊಸಕಿ ಹಾಕಿದ್ದೆ.

ಕಾರಣ – ಡಾಕ್ಟರ್ ಗೋವಿಂದಮೂರ್ತಿಯೊಂದಿಗಿನ ನನ್ನ ಸ್ನೇಹದ ಬಗ್ಗೆ ನಾನು ಅವನಿಗೆ ಏನೂ ಹೇಳಿರಲಿಲ್ಲ ಎಂಬುದು.

– ವಿನಯನನ್ನು ಮೋಸಗೊಳಿಸಲು ನಾನೆಂದೂ ಉದ್ದೇಶಿಸಿರಲಿಲ್ಲ. ಆದರೂ ಅವನಿಗೆ ನಾನು ಯಾರ ಬಗ್ಗೆಯೂ ಹೇಳಿರಲಿಲ್ಲವೇಕೆ ?

ವಿನಯ ಅಥೆಲೋನಂತಹ ಕಟ್ಟಾಪ್ರೇಮಿ. ಪ್ರೀತಿ, ಆತ್ಮ, ಜನ್ಮಾಂತರದ ನಂಟು ಇತ್ಯಾದಿ ಬಗ್ಗೆ, ದೇಹಗಳ ನಶ್ವರತೆಯ ಹಾಗೂ ಭಾವನೆಗಳ ಶಾಶ್ವತತೆಯ ಬಗ್ಗೆ ಅವನು ಲೆಕ್ಚರ್ ಕೊಡುವಾಗೆಲ್ಲ ನನಗಿದು ಚೆನ್ನಾಗಿ ಗೊತ್ತಾಗಿತ್ತು. ಮಾತಿನಿಂದ, ಕೇವಲ ಮಾತಿನಿಂದ, ಅದೂ ಸಹಾ ಯಾವಾಗಲೂ ಒಂದೂವರೆ ಫೂಟು ದೂರವೇ ಕೂತು ಆಡುವ ಮಾತಿನಿಂದ ಅವನಿಗೆ ನನ್ನನ್ನು ಮುಗಿಲಲ್ಲಿ ತೇಲಿಸಬಲ್ಲ ಸಾಮರ್ಥ್ಯವಿತ್ತು. ಅಂಥ ವಿನಯುನನ್ನು ಸುಮ್ಮನೆ ಕಳೆದುಕೊಳ್ಳುವುದೆ ? ಅವನಿಗೆ ಗೋವಿಂದಮೂರ್ತಿಯಂಥ 'ಛಿ, materialistic' ಮನುಷ್ಯನ ಬಗ್ಗೆ ಹೇಳುವುದೆ ?

'ಆಯಿತು, ನಾ ಇನ್ನ ಹೋಗ್ತೀನಿ. ಛಲೋ ಪಾಠ ಕಲಿಸಿದಿ. ನಿನ್ನಿಂದ ನನ್ನ ಜೀವನಕ್ಕ ಆದ ಈ ಆಘಾತ ನಾ ಸಾಯೋತನಕಾ ನನ್ನ ಕೊಲ್ಲತಾನೇ ಇರತದ ಅನ್ನೋದು ಮರೀಬ್ಯಾಡ. ನಂದೇ ತಪ್ಪು. ನಾನೇ ಸರ್ವಸ್ವ ಅಂತ ನಂಬಿದ ಹೆಂಡತೀ ಬಿಟ್ಟು ನಿನ್ನ ಬೆನ್ನು ಹತ್ತಿದೆ. ದೇವರು ಛಲೋ ಶಿಕ್ಷಾ ಕೊಟ್ಟ.' – ಇಷ್ಟಂದು ದಾಪುಗಾಲು ಹಾಕುತ್ತ ಹೊರಟು ಹೋಗಿದ್ದ ವಿನಯ – ಅವನೇ ಸರ್ವಸ್ವವೆಂದು ತಿಳಿದಿದ್ದ ಹೆಂಡತಿಯ ಕಡೆ – 'ನೀನೇ ಸರ್ವಸ್ವ'ವೆಂದು ಹೇಳುವಾಗ ಮರೆತಿದ್ದ ಹೆಂಡತಿಯ ಕಡೆ.

ಇಂದು ಎಷ್ಟು ದಿನಗಳ ನಂತರ ಭೆಟ್ಟಿಯಾದ. 'ಲಿಲಿ, ನಿನ್ನ ಮರೆಯೂದು ಆಗಲಿಲ್ಲ ನನಗ. ನಾ ಜೀವನದಾಗ ಒಮ್ಮೆಯೆ ಪ್ರೀತಿ ಮಾಡಿದೆ. ಅದು ನಿನ್ನನ್ನ. ನೀ ಹೇಗೆಯೇ ಇರು - ಅದು ಬದಲಾಗುವುದಿಲ್ಲ' ಅಂದ. 'ಇದೇ ಖರೆ ಪ್ರೀತಿಯ ಲಕ್ಷಣ' – ಅಂತ ವಿವರಣೆ ಸಹ ಕೊಟ್ಟ.

ವಿನಯನಿಂದ ಉಪಯೋಗವಾದೀತು ಅನ್ನಿಸುತ್ತಿದೆ....

೧೬ ಅಗಸ್ಟ್, ೧೯೫೮.

ಮಧ್ಯಾಹ್ನ ಇಂದು ಎಷ್ಟು ಆರಾಮು ನಿದ್ದೆ ಹತ್ತಿತ್ತು. ಎಷ್ಟೋ ದಿನಗಳಿಂದ ಮಧ್ಯಾಹ್ನ ಮಲಗಿರಲಿಲ್ಲ. ಇವತ್ತು ಸತ್ತಂತೆ ನಿದ್ದೆ ಮಾಡಿದೆ. ಆಫೀಸಿನ ಚಿಂತೆಯಿಲ್ಲ. ಅಕೌಂಟಿನ ಚಿಂತೆಯಿಲ್ಲ, ಮತ್ತು ಹ್ಞಾ, ಮುಖ್ಯವಾಗಿ ಆ ಗಡ್ಡದ ಬಾಸ್‌ನ ಚಿಂತೆಯಿಲ್ಲ.

ನಾನು ಕ್ಷಮೆ ಕೇಳುತ್ತೀನಿ, ಅವನು ಹೇಳಿದ ಹಾಗೆ ಕೇಳುತ್ತೀನಿ– ಅಂತ ತಿಳಿದಿದ್ದ ಆ ಸಾಬ. 'ಇಲ್ಲಿ ನೋಡು ಲಿಲಿ, ನಿನ್ನನ್ನ ಕೆಲಸದಿಂದ ಡಿಸ್‌ಮಿಸ್ ಮಾಡಿದ ಆರ್ಡರ್ ಬಂದಿದೆ– ಜನರಲ್ ಮ್ಯಾನೇಜರ್‌ರಿಂದ' –ಅಂದ, ನನ್ನನ್ನೇ ನೋಡುತ್ತ.

ನನಗೆ ಗೊತ್ತಿರಲಿಲ್ಲವೆ ಅದರ ಇತಿಹಾಸ ? ಯಾರು ನನ್ನ ಬೇಜವಾಬ್ದಾರಿಯ ಬಗ್ಗೆ, ನಡತೆಯ ಬಗ್ಗೆ ದೂರು ಕೊಟ್ಟಿದ್ದರೆಂದು, ಯಾಕೆ ಕೊಟ್ಟಿದ್ದರೆಂದು ಎಲ್ಲ ಪುಷ್ಪಾ ಕುಲಕರ್ಣಿ ಹೇಳಿದ್ದಳು. ಈ ಬಾಸ್‌ನ ಪಿ. ಎ. ಅಲ್ಲವೆ ಆಕೆ.

'ವಿಚಾರ ಮಾಡು ಲಿಲಿ, ನಿನ್ನ ಕೆಲಸ ಉಳಿಸಿಕೊಡ್ತೀನಿ ಬೇಕಾದರ. ಅಲ್ಲಾಕೆ ಕಸಮ್' –ನನಗೆ ಬೇಕಾಗಿರಲಿಲ್ಲ. ಈ ಬಾಸ್‌ನ ಟಿ. ಬಿ. ಹೆಂಡತಿ ಊರಿಗೆ ಹೋದಾಗಲೆಲ್ಲ ಅವನ ಹಾಸಿಗೆಯ ಸಂಗಾತಿಯಾಗುವುದು, ಅದೂ ಸಹ ಅದರಿಂದ ಏನೂ ಉಪಯೋಗವಾಗದೇ ಇರುವಾಗ, ಬರೇ ಈ ನೌಕರಿಯ ಸಲುವಾಗಿ ಅವನ ಕುರುಚಲು ಗಡ್ಡ- ಅವನ 'ಅಲ್ಲಾಕೆ ಕಸಮ್' ಸಹಿಸುವುದು ನನಗೆ ಬೇಕಾಗಿರಲಿಲ್ಲ.

ಮನೆಗೆ ಬಂದಾಗ ಮೈ-ಮನಸ್ಸು ಭಾರ-ಭಾರ. ಗಾಢ ನಿದ್ದೆ ಬಂತು....ಕನಸಿನಲ್ಲಿ ಯಾರೋ ನನ್ನನ್ನು ಗಟ್ಟಿಯಾಗಿ ಎದೆಗೊತ್ತಿಕೊಂಡ ಹಾಗೆ ; 'ನಾ ಇದ್ದೀನಿ ನಿನ್ನ ಕೂಡ. ಎಂದೂ ನಿನ್ನ ಕೈಬಿಡೋದಿಲ್ಲ. ನಿನಗೆ ಬೇಕಾದ್ದೆಲ್ಲ ಕೊಡ್ತೀನಿ. ಹ್ಞಾ, ಮಗು ಕೂಡ. ಎಷ್ಟು ಬೇಕು ಹೇಳು ? ಒಂದು ? ನಾಲ್ಕು ?' –ಅಂದ ಹಾಗೆ.

ಯಾರದು ಆ ಬಿಗಿಯಾದ ಅಪ್ಪುಗೆ ? ಆ ಬೀಸಾದ ತೋಳುಗಳು ?

–ಎಷ್ಟೊತ್ತು ಕಂಡೆನೋ ಇದೇ ಕನಸನ್ನ ! ನನ್ನ ಸುತ್ತಲೆಲ್ಲ ಸಣ್ಣ-ಸಣ್ಣ ಮಕ್ಕಳು. ಎಷ್ಟೊಂದು ಮುದ್ದಾಗಿದ್ದ ಮಕ್ಕಳು....ಎಲ್ಲ ನನ್ನವೇ. ಎಲ್ಲ ನನ್ನವೇ. ಅವುಗಳ ಮಧ್ಯೆ ಆ ಮಕ್ಕಳನ್ನು ನನಗೆ ಕೊಟ್ಟ ಆ ಅಗಲ ಎದೆಯ ಗಂಡಸು–

–ಯಾರು ?

ಫಕ್ಕನೆ ಎಚ್ಚರವಾಗಿತ್ತು.

೨೦ ಅಗಸ್ಟ್, ೧೯೫೮.

ಛಿ, ವಿನಯ ಸಾಳಕರ ತೀರ ಹೇಡಿ. ತೀರ ನಿರುಪಯೋಗಿ. ಅವನ ಫಿಲೊಸೊಫಿ, ಅವನ ಪ್ಲೆಟೋನಿಕ್ ಪ್ರೀತಿ, ಅವನ ವಾದ–ಎಲ್ಲ bogus.

ಎಷ್ಟು ಆಸೆಹೊತ್ತು ಹೋಗಿದ್ದೆ ಅವನ ಕಡೆ! ನನ್ನ ಮೇಲಿನ ತನ್ನ ಪ್ರೀತಿಯ ಬಗ್ಗೆ ಇಷ್ಟೆಲ್ಲ ಮಾತಾಡುತ್ತಾನೆ, ನನಗೊಂದು ಸಣ್ಣ ಉಪಕಾರ ಮಾಡಲಿಕ್ಕಾಗಲಿಲ್ಲ ಅವನಿಂದ. ಹೇಗೆ ಬೆಚ್ಚಿಬಿದ್ದ ನನ್ನ ಮಾತು ಕೇಳಿ ಹಾವು ಮೆಟ್ಟಿದವರ ಹಾಗೆ!

'ಛೆ ಲಿಲಿ, ಇಂಥಾ ವಿಚಾರ ಕನಸಿನ್ಯಾಗೂ ತರಬ್ಯಾಡ. ನಂದು-ನಿಂದು ಆತ್ಮದ ಸಂಬಂಧ. ದೈಹಿಕ ಮೋಹಕ್ಕೊಳಗಾಗಿ ನಾವು ನಮ್ಮ ಆತ್ಮದ ಸಂಬಂಧ ಹದಗೆಡಿಸಿಕೋಬಾರದು. ದೇಹದ ವ್ಯಾಮೋಹ ಕ್ಷಣಿಕ. ಆ ಕ್ಷಣಿಕ ವ್ಯಾಮೋಹದ ಸಲುವಾಗಿ ಶಾಶ್ವತವಾದದ್ದನ್ನ ನಾವು ಅಪವಿತ್ರಗೊಳಿಸಬಾರದು....' ಅಂತೆಲ್ಲ ಲೆಕ್ಚರ್ ಕೊಟ್ಟ.

ವಿನಯ ನನ್ನನ್ನೆಂದಿಗೂ ಅರ್ಥಮಾಡಿಕೊಳ್ಳಲಾರ....ಎಂದಿಗೂ ಎಂದಿಗೂ ಶಕ್ಯವಿಲ್ಲ.... 'ದೇವರು ನಮ್ಮಿಬ್ಬರನ್ನ ಈ ಜನ್ಮದಾಗ ಯಾಕೋ ಕೂಡಿಸಲಿಲ್ಲ ಲಿಲಿ, ಬಹುಶಃ ದೂರ ಇದ್ದು, ದುಃಖ ಅನುಭವಿಸಿ, ಇನ್ನೂ ಹೆಚ್ಚು ಗಟ್ಟಿ ಆಗಲಿ ನಮ್ಮ ಪ್ರೀತಿ– ಅಂತ ಅವನ ಉದ್ದೇಶ ಇದ್ದಿರಬೇಕು. ನಾ ಅವನ ಇಚ್ಛಾದ ವಿರುದ್ಧ ಹೋಗೂದಿಲ್ಲ. ನಾ ದೂರನೇ ಇರ್ತೀನಿ. ನಮ್ಮ ಪ್ಲೆಟೋನಿಕ್ ಪ್ರೀತಿ ಹಿಂಗs, ಉಳೀಲಿ. ಬೆಳೀಲಿ. ಮುಂದಿನ ಜನ್ಮದಾಗ ಮಾತ್ರ....'

–ಇವನ ಮುಂದಿನ ಜನ್ಮವನ್ನ, ಇವನ ಪ್ಲೆಟೋನಿಕ್ ಪ್ರೀತಿಯನ್ನ, ಇವನ ಪ್ಲೇಟೋನನ್ನ, ಇವನನ್ನ ಸಾಲಾಗಿ ನಿಲ್ಲಿಸಿ ಶಂಕರಗೌಡರ ಜೋಡುನಳಿಯ ಬಂದೂಕಿನಿಂದ ಶೂಟ್ ಮಾಡಬೇಕು. ಸುಟ್ಟು ಬಿಡಬೇಕು. ಛಿ....

೨೪ ಅಗಸ್ಟ್, ೧೯೫೮.

ಸಂಜೆ ಐದು ಗಂಟೆ.

ಎಲ್ಲ ಸಿದ್ಧವಾಗಿದೆ. ನನ್ನ ಬಟ್ಟೆಗಳು, ಪುಸ್ತಕಗಳನ್ನು ತುಂಬಿಕೊಂಡ ಸೂಟ್‌ಕೇಸ್ ; ಕೋಣೆಯ ಬಾಡಿಗೆ, ಹಾಲಿನವನ ಲೆಕ್ಕ, ಮುನ್ನಿಗೆ ಕೊನೆಯ ಬಾರಿ ಚಾಕ್‌ಲೇಟ್– ಎಲ್ಲ ಕೊಟ್ಟಾಗಿದೆ. ಹೊರಗುಳಿದಿದ್ದು ಈ ಡೈರಿ ಒಂದೇ.

–ಮುಂಜಾನೆ ಬಾಗಿಲಲ್ಲಿ ನಿಂತಿದ್ದಾಗ ಸ್ಪೀಡಿನಿಂದ ಬಂದ ಶಂಕರಗೌಡರ ಇಂಪಾಲಾ ಗಕ್ಕನೆ ನಿಂತಿತ್ತು.

'ಲೀಲಾ....'

–ನಾನು ಸುಮ್ಮನೆ ಇದ್ದೆ.

'ಲೀಲಾ, ನಿನ್ನ ಪತ್ರ ಮುಟ್ಟಿತು.'

ಆಗಲೂ ನಾನು ಸುಮ್ಮನೆ ಇದ್ದೆ.

'ಸ್ವಲ್ಪ ಮಾರ್ಕೆಟಿನೊಳಗ ಕೆಲಸದ ; ಹೋಗಿ ಮುಗಿಸಿಕೊಂಡು ಬರ್ತೀನಿ ಸಂಜೀ ಐದು ಘಂಟೇದ ಸುಮಾರಿಗೆ. ತಯಾರಾಗಿರು, ಹೋಗೋಣಂತ.'

–ಸರಳ.

ಕಾರು ಬಂದಷ್ಟೆ ವೇಗದಿಂದ ತಿರುಗಿ ಹೋಗಿತ್ತು.

–ನನಗೆ ಗೊತ್ತಿತ್ತು,

ಎಂದೂ ಯಾತಕ್ಕೂ ಯಾರಿಗೂ ಇಲ್ಲವೆಂದವರೇ ಅಲ್ಲ ಆತ.

–ನನ್ನ ಮೈ ಗಾಳಿಯಲ್ಲಿ ತೇಲುವಷ್ಟು ಹಗುರ. ಕಣ್ಣತುಂಬ ಮೊನ್ನೆ ಮಧ್ಯಾಹ್ನ ಕಂಡ ಕನಸು.

ಓ, ಹಾರ್ನ್....

❖ ❖ ❖

# ಹೆಣ

ಅಂತೂ –

ಅಂತೂ ಒಮ್ಮೆ ಎಲ್ಲ ಕೆಲಸ ಮುಗಿಸಿ ಎಲ್ಲರನ್ನೂ ಸಾಗಹಾಕಿ ರೂಮಿನ ಬಾಗಿಲು ಹಾಕಿಕೊಂಡು ಟೇಬಲಿನ ಸಮೀಪ ಕುರ್ಚಿ ಸರಿಸಿಕೊಂಡು, ಇಂದು ಬರೆದೇ ಬಿಡಬೇಕು ಒಂದು ಕವನ ಎಂದುಕೊಂಡು, ಪೆನ್ನು ತೆರೆದರೆ ಎದುರಿಗೆ ಧುತ್ತೆಂದು ಬಂದು ನಿಂತಿತು, –ಆ ಹೆಣ.

ಅದು ಹೀಗೆ ಎದುರಿಗೇ ನಿಂತಿರುವಾಗ ಬರೆಯುವುದಾದರೂ ಹೇಗೆ ? ಅದನ್ನು ಅತ್ತ ದೂರ ಕಳಿಸಬೇಕು. ನಂತರ ಬರೆಯಬೇಕು. ಇಷ್ಟು ದಿನ ಕೇವಲ ರಾತ್ರಿ ಮಾತ್ರ ಭೆಟ್ಟಿಯಾಗುತ್ತಿದ್ದ ಈ ಹೆಣ ಇಂದು ಹಗಲುಹೊತ್ತಿನಲ್ಲೇ ಬಂದಿದೆ– ಅದೂ ಕವನ ಬರೆಯಬೇಕೆಂದು ಕೂತಾಗ ; ತನ್ನನ್ನು ನಿರ್ಲಕ್ಷಿಸಿ ಹೇಗೆ ಏನನ್ನು ಬರೆಯುತ್ತೀ ನೋಡೋಣ ಎಂದು ಸವಾಲು ಹಾಕುವಂತೆ. ಇದನ್ನು ನಿರ್ಲಕ್ಷಿಸಿದರೆ ನಾನು ಏನನ್ನೂ ಬರೆಯಲಾರೆನೆ ? ಯಾಕೆ ? ಹೇಳಿಕೇಳಿ ಇದೊಂದು ಹೆಣ. ಬರೆಯಲೇಬೇಕೆಂಬ ನನ್ನ ಸಂಕಲ್ಪಕ್ಕೆ ಅಡ್ಡಿಯಾಗುವಷ್ಟು ಧೈರ್ಯವೇ ಇದಕ್ಕೆ ?

ಏ, ನಡೆಯಾಚೆ. ಇವತ್ತು ನಾನು ಎಂಥದೇ ಆಗಲೊಲ್ಲದು, ಕವನದ ಹಾಗೆ ಕಾಣುವಂಥದನ್ನೇನಾದರೂ ಬರೆದು ನಾಳೆ ಮುಂಜಾನೆ ಆ ಸಂಪಾದಕನಿಗೆ ಪೋಸ್ಟ ಮಾಡಬೇಕು. ನೀನು ರಾತ್ರಿ ಬಾ ಬೇಕಾದರೆ, ಮಾತಾಡೋಣಂತ. ನೀನು ಹೀಗೆ ನಿಂತಿದ್ದರೆ ನನಗೇನು ಮಣ್ಣೂ ಹೊಳೆಯುವುದಿಲ್ಲ ಹೋಗು.

–ಊಹ್ನೂ, ಅದು ಮಿಸುಕಿದರೆ ಆಣೆ.

ಬಿಡಲಿ. ನಿಂತಿರಲಿ. ನನಗೇನು ? ನಾನು ಅತ್ತ ನೋಡುವುದೇ ಇಲ್ಲ.

ನಿನ್ನೆ ಸಂಜೆ ಮತ್ತೆ ಬಂದಿದ್ದ ಆ ಸಂಪಾದಕ, ಅವನು ಕೊಟ್ಟ ತಿಂಗಳಿನ ಅವಧಿ ಮುಗಿದು ವಾರವಾಯಿತೆಂದು ನೆನಪಿಸಲು. ಹಾಳಾಗಿ ಹೋಗೆಂದು ಹೇಳಿಕಳಿಸಬಹುದಿತ್ತು. ಆದರೆ ಗೆಳತಿ ಶಶಿಯ ಗಂಡ ಅವನು. ಹೊಸದೊಂದು ಪತ್ರಿಕೆ ಸುರು ಮಾಡಿದ್ದ. 'ಮೊದಲ ಸಂಚಿಕೆಯಲ್ಲಿ ನಿಮ್ಮದೊಂದು ಕವನ ಬೇಕೇಬೇಕು' –ಎಂದು ಆಗ್ರಹಪೂರ್ವಕ ಕೇಳಿಕೊಂಡಿದ್ದ.

ಕವನ....ಹ್ಹ, ನಾನು ಬರೆಯುವುದನ್ನು ಬಿಟ್ಟು ಯುಗವಾಯಿತೆಂದು ಗೊತ್ತಿರಲಿಲ್ಲ ಅವನಿಗೆ.

'ನೀ ಕಾಲೇಜಿನ್ಯಾಗಿದ್ದಾಗ ಎಷ್ಟ ಛಂದ ಕವಿತಾ ಬರೀತಿದ್ದೆಲ್ಲ ? ಎಲ್ಲಾರೂ ಹುಚ್ಚ ಹುಚ್ಚ ಆಗತಿದ್ರು ನಿನ್ನ ಕವಿತಾ ಓದಿ. ಈಗ್ಯಾಕ ಒಮ್ಮೆಲಿಗೇ ಎಲ್ಲಾ ಬಿಟ್ಟುಬಿಟ್ಟಿ ?' –ಶಶಿ ಕೇಳಿದ್ದಳು.

ದೇಶಾವರಿ ನಗೆ ನಗುತ್ತ ಉತ್ತರಿಸಿದ್ದೆ, 'ಹೆಹ್ಞೆ, ಈಗ ಟೈಮೇ ಸಿಗೂದಿಲ್ಲ.'

'ಆದರ ಇವರ ಪತ್ರಿಕಾಕ್ಕ ನೀ ಒಂದು ಕವಿತಾ ಕೊಡಲಿಕ್ಕೇ ಬೇಕು ನೋಡು. ನಾನs ಇವರಿಗೆ ಪ್ರಾಮಿಜ್ ಮಾಡೀನಿ ನಿನ್ನ ವತಿಯಿಂದ. ಇನ್ನೂ ದಿವಸ ಅವ. ನೀ ಹೊಸಾ ಕವಿತಾ ಬರಿ. ನಿನಗೇನು ಅದು ಅಸಾಧ್ಯ ಅಲ್ಲ. ನಿಂತನಿಂತಲ್ಲೇ ಕವಿತಾ ಬರದ ಬಿಡ್ತಿದ್ದಿ ನೀ ಕಾಲೇಜಿನ್ಯಾಗಿದ್ದಾಗ,' –ಒಲೆಯ ಮೇಲೆ ಎಸರಿಟ್ಟು ಪುಡಿ-ಸಕ್ಕರೆ ಹಾಕಿ ಇಳಿಸಿ ಹಾಲು ಬೆರೆಸಿದೊಡನೆ ತಯಾರಾಗಿಬಿಡುವ ಚಹಾದಷ್ಟೇ ಸರಳ ಇದೂ ಸಹ– ಎಂಬಂತೆ ಮಾತಾಡಿದ್ದಳು ಶಶಿ. ಸಿಟ್ಟು ಬಂದಿತ್ತು. ತಾನೇ ಪ್ರಾಮಿಜ್ ಮಾಡಿದಳಂತೆ ನನ್ನ ವತಿಯಿಂದ. ಯಾರು ಹೇಳಿದ್ದರು ಇವಳಿಗೆ ಇಂಥ ಕಾರಭಾರ ಮಾಡಲು ? ಎಲ್ಲಕ್ಕೂ ಅಸಹ್ಯವೆಂದರೆ ಅವಳ ದನಿಯಲ್ಲಿ ಸ್ಪಷ್ಟ ಕಾಣುತ್ತಿದ್ದ ವಿಶ್ವಾಸ ; ತಾನು ಕೇಳಿದಾಗ ನಾನು ಕೊಡದೇ ಏನು ಎಂಬ ನಿರ್ಲಕ್ಷ್ಯವಾದ ವಿಶ್ವಾಸ.

'ನನಗೆ ಆಗೂದಿಲ್ಲ ಶಶೀ', ಎಂದಾಗ ಅದಕ್ಕೆ ಏನೂ ಕಿಮ್ಮತ್ತು ಕೊಡದೆಯೆ ಮುಂದುವರಿಸಿದ್ದಳಾಕೆ, 'ಛೇ ಛೇ, ಆಗೂದಿಲ್ಲ ಅನ್ನೋ ಮಾತೇ ಸುಳ್ಳು. ಎಷ್ಟು ಜನ ಕೇಳಿದ್ರೂ ಎಲ್ಲಾರಿಗೂ ಕಳಿಸತಿದ್ದಿ. ಎಲ್ಲಾ ಕವಿಸಮ್ಮೇಳನದಾಗೂ ಓದತಿದ್ದಿ. ಎಷ್ಟು ಕಲೆಕ್ಶನ್ಸ ಪಬ್ಲಿಶ್ ಮಾಡಿದ್ದಿ ನೀ ಕಾಲೇಜಿನ್ಯಾಗಿದ್ದಾಗ–' ಅವಳ 'ನೀ ಕಾಲೇಜಿನ್ಯಾಗಿದ್ದಾಗ' ಏನೋ ಒಜ್ಜೆಯಾಗಿ, ಏನೋ ಮುಳ್ಳಿನಂತಾಗಿ, ಏನೋ ವಿಷವಾಯುವಾಗಿ, ತಲೆಯೇರಿ ಚುಚ್ಚಿ ಉಸಿರುಕಟ್ಟಿಸುವಂತಾಗಿ, ಹೇಗಾದರಾಗಲಿ ಪಾರಾಗಬೇಕೆಂದು ಹೇಳಿದ್ದೆ, 'ಆಗಲಿ ನೋಡೋಣ. ಇನ್ನೂ ಒಂದು ತಿಂಗಳ ಅವಧಿ ಇದೆಯಲ್ಲ.'

ಅಂದು ಅವರಿಬ್ಬರೂ ಹೋದನಂತರ ಪುನಃ ಆ 'ನೀ ಕಾಲೇಜಿನ್ಯಾಗಿದ್ದಾಗ' ನೆನಪಾಗಿತ್ತು. ಅಂದಹಾಗೆ ಆಗೆಲ್ಲ ಎಷ್ಟೊಂದು ಬರೆಯುತ್ತಿದ್ದೆ....ಈಗೇಕೆ ಒಮೆಲೆ ಎಲ್ಲ ಬಿಟ್ಟೆ ? ಬರೆಯಬೇಕು. ಮತ್ತೆ ಬರೆಯಲು ಸುರುಮಾಡಬೇಕು.

–ಇತಿಹಾಸಕ್ಕೆ ಗುಡ್ ಬೈ ಹೇಳಿದ್ದೆ ನಿಜ. ಆದರೆ ಈ ಬರೆಯುವುದು ನನ್ನ ಇತಿಹಾಸದ ಅಂಗ ಮಾತ್ರವಾಗಿತ್ತೆ ? ಅದಕ್ಕೂ ಏಕೆ ಗುಡ್ ಬೈ ಹೇಳಿದ್ದೆ ಇಷ್ಟು ದಿನ ? ಇನ್ನು ಬರೆಯಬೇಕು, ಅಂದರಾದರೂ ಈ ನಿರಂತರ ಶೂನ್ಯದ ಅನುಭವ ಇಲ್ಲವಾದೀತು....

'ಯಾಕ, ಭಾಳ ಖುಶೀ ಕಾಣಸ್ತೀಯಲ್ಲ ಇವತ್ತ ?' –ಸಂಜೆ ದವಾಖಾನೆಯಿಂದ ಬಂದ ಶ್ರೀನಿವಾಸ ಕೇಳಿದ್ದ.

ಇನ್ನೂ ಅವನೆದೆಯ ಮೇಲಿದ್ದ ಸ್ಟೆಥೋಸ್ಕೋಪನೊಂದಿಗೆ ಆಟವಾಡುತ್ತ ಉತ್ತರಿಸಿದ್ದೆ, 'ಶ್ರೀ, ಇವತ್ತ ಶಶಿ ಬಂದಿದ್ದಳು. ಆಕೀ ಗಂಡ ತನ್ನ ಪತ್ರಿಕಾಕ್ಕ ನನ್ನದೊಂದು ಕವಿತಾ ಬೇಕೂಂತ ಕೇಳ್ಯಾನ.'

'ಓಹೋ ಹಿಂಗೇನು ? ಕವಿತಾದ ಮೂಡಿನ್ಯಾಗ ಇದ್ದೀ ಅಂಥಾಂಗಾತು. ನನಗೇನ ಇವತ್ತ ಚಹಾಗಿಹಾ ಸಿಗತದೋ ಇಲ್ಲೋ ?'

ಚಹಾ, ಊಟ, ಪೇಶಂಟ್ಸ – ಇಷ್ಟನ್ನು ಬಿಟ್ಟರೆ ಬೇರೇನನ್ನೂ ವಿಚಾರಿಸಲಾಗದ ಅವನ ಬಗ್ಗೆ ಕೋಪ ಬಂದಿತು. ತೀರ materialistic, ತೀರ prosaic ಆಗಿದ್ದಾನೆ ಈ ಗಂಡ – ಅನ್ನಿಸಿ ಜುಗುಪ್ಸೆಯಾಯಿತು.

'ಕವಿತಾ-ಗಿವಿತಾ ಬರಿಯೂದಿದ್ರ ಮಧ್ಯಾಹ್ನದಾಗ ಬರೀ ನೀನು. ನಾನೂ ಡಿಸ್ಪೆನ್ಸರಿಗೆ ಹೋಗಿರ್ತೇನಿ. ನಿನಗ ಡಿಸ್ಟರ್ಬ ಮಾಡ್ಲಿಕ್ಕೆ ಇರೂದಿಲ್ಲ. ನಾ ಮನ್ಯಾಗಿದ್ದಾಗ ಮಾತ್ರ ಅಂಥಾದೆಲ್ಲಾ ಉಸಾಬರಿ ಮಾಡಬ್ಯಾಡ.'

'ಉಸಾಬರಿ'ಯಂತೆ. ಸ್ವಾರ್ಥಿ ಎಂದು ಕೂಗಬೇಕೆನಿಸಿತು. ಅವನ ಅಜ್ಞಾನಕ್ಕಾಗಿ ಕನಿಕರವಾಯಿತು.

ಕವನದ ಬಗೆಗೇ ಯೋಚಿಸುತ್ತಿದ್ದೆ ಅಂದು ಸಂಜೆ-ರಾತ್ರಿಯಿಡೀ. ಮಧ್ಯ ರಾತ್ರಿ ಯಾರೋ ಅಲುಗಾಡಿಸಿ ಎಬ್ಬಿಸಿದಂತಾಯಿತು. ಕಣ್ಣು ತೆರೆಯಲೂ ಆಗದಷ್ಟು ನಿದ್ರೆ. ಆದರೂ, 'ಏಳು-ಏಳು' ಎಂದದ್ದು ಕೇಳಿಸಿ ಎಚ್ಚರಾಯಿತು. ಯಾರು ನಿದ್ರೆ ಕೆಡಿಸಿದವರೆಂದು ಸಿಟ್ಟಾಗಿ ನೋಡಿದ್ದೆ – ಮಂಚದ ಪಕ್ಕದಲ್ಲಿ ಉದ್ದಕ್ಕೆ ನಿಂತಿತ್ತು,

– ಇದೇ ಹೆಣ.

ಎಲ್ಲೋ ಭೆಟ್ಟಿಯಾದ ನೆನಪು. ಏನೋ ಆತ್ಮೀಯಭಾವ ಅನ್ನಿಸಿತು. ಆದರೂ ಯಾಕೋ ಅದರ ಗುರುತು ನನಗೆ ಹತ್ತಿದ್ದು ಅದಕ್ಕೆ ತಿಳಿಯಬಾರದು ಅನ್ನಿಸಿತು. ಮಲಗಿದ್ದ ಹಾಗೆಯೇ ಕೇಳಿದೆ,

'ಯಾರು ನೀನು ?'

'ನಾನು ಹೆಣ.'

– ಹೌದು. ಗೊತ್ತಾಗುತ್ತಿದೆ. ಅದು ಏನು, ಎಂಥದು ಎಂದೆಲ್ಲ ಗೊತ್ತಾಗುತ್ತಿದೆ. ಆದರೆ ಈ ಗೊತ್ತಾಗುವಿಕೆ ತೀವ್ರವಾಗಿ ಬೇಡವಾಗುತ್ತಿದೆ. ಮತ್ತೆ ಕೇಳಿದೆ.

'ಎಲ್ಲಿದ್ದಿ ಇಷ್ಟು ದಿನ ?'

'ಇಲ್ಲೇ ಇದ್ದೆ'

'ಮತ್ತೇಕೆ ಒಮ್ಮೆಯೂ ಕಾಣಲಿಲ್ಲ ?'

'ನನ್ನನ್ನು ನೋಡಿಯೂ ನೋಡಲಾರದಂತಿದ್ದಿ ನೀನು.'

'ಈಗೇಕೆ ಬಂದಿರುವಿ ?'

'ಕವನ ಬರೀಬೇಕು ಅಂತಿದ್ದಿಯಲ್ಲ ?'

'ಅದಕ್ಕೂ-ನಿನಗೂ ಸಂಬಂಧವೇನು ?'

—'ಹಹ್ಹಹ್ಹಾ' ಎಂದು ಗಹಗಹಿಸಿತು ಹೆಣ. ಕಣ್ಣು ಕೆಕ್ಕರಿಸಿ ಸಿಟ್ಟಾಗಿ ನೋಡಿದೆ, 'ನಗುತ್ತೀ ಏಕೆ ?'

'ಸಂಬಂಧ ಕೇಳಿದಿ. ಹಳೆಯ ಸಂಬಂಧ. ಹೋಗಲಿ ಬಿಡು. ನೀ ಕವನ ಬರೆಯಲು ನನ್ನ ಸಹಾಯ ಬೇಕು. ಅದಕ್ಕೇ ಬಂದೆ.'

'ನೀನೇನು ಮಾಡುವ ಹಾಗಿದ್ದೀ ?'

'ನೀ ಕವನ ರಚಿಸುವುದು ಸಾಧ್ಯವಾಗಬೇಕಿದ್ದರೆ ಮೊದಲು ನನ್ನನ್ನು ಬದುಕಿಸು, ನಾನು ಜೀವ ತಳೆದಾಗ ಮಾತ್ರ ನೀನು ಬರೆಯುವುದು ಸಾಧ್ಯ. ನಾನು ಹೆಣವಾಗಿರುವಾಗ ನೀನು ಏನೂ ಬರೆಯಲಾರಿ.'

'ನೀನು ತಪ್ಪು ತಿಳಿದಿರುವಿ. ನಾನು ಯಾರ ಸಹಾಯವಿಲ್ಲದೆಯೇ ಬರೆಯಬಲ್ಲೆ. ನೀನು ಹೆಣವಾಗಿದ್ದರೇನು, ಬದುಕಿದ್ದರೇನು ? ನೀನು ಯಾರೋ ಏನೋ—'

'ನಾನು—'

'ನೀನು ಏನೇ ಆಗಿರು. ನನ್ನ ಸುದ್ದಿಗೆ ಬರಬೇಡ.'

'ಹಾಗಿದ್ದರೆ ನಿನ್ನ ಕವನ—'

'ಅದರ ಚಿಂತೆ ನನಗಿರಲಿ. ನೀನು ಹೊರಡು.'

'ಕವನದ ಚಿಂತೆ ನಿನಗಿದ್ದರೆ ನನ್ನ ಚಿಂತೆಯನ್ನೂ ನೀನು ಮಾಡಬೇಕಾಗುವುದು. ನಾನು ಜೀವಂತವಾಗದ ಹೊರತು ಏನೂ ಬರೆಯಲಾರಿ ನೀನು.'

'ನೀನು ಹೆಣವಾಗಿದ್ದಾಗಲೇ ನಾನು ಕವನ ಬರೆಯುವೆ ನೋಡುತ್ತಿರು.'

'ಕವನದ ಹೆಣ ಬರೆಯಬಹುದು ಅಷ್ಟೆ.'

'ಶಟಪ್, ನನ್ನ ಕವನಗಳೆಂದಾದರೂ ಹೆಣವಾಗಿದ್ದವೆ ? ಹಿಂದೆ ಬರೆದವುಗಳೆಲ್ಲ ಜೀವಂತ ಕವನಗಳಾಗಿರಲಿಲ್ಲವೇ ?'

'ಆಗಿನ ಮಾತು ಬೇರೆ. ನಾನು ಆಗ ಹೆಣವಾಗಿರಲಿಲ್ಲ.'

'ಹ್ಞೂ ? ಹಾಗಿದ್ದರೆ ನಾನು ವಿಚಾರ ಮಾಡುವೆ ಈ ಬಗ್ಗೆ. ನಾಳೆ ಬಂದು ಭೆಟ್ಟಿಯಾಗು'.

ಇಷ್ಟು ದಿನ ಎಲ್ಲಿತ್ತೋ, ಬಹಳ ದಿನಗಳ ನಂತರ ಒಂದು ಕವನ ಬರೆಯಬೇಕೆಂದು ವಿಚಾರ ಮಾಡತೊಡಗಿದಾಗ ಈಗ ಪ್ರತ್ಯಕ್ಷವಾಗಿತ್ತು ಈ ಹೆಣ.

ಶಶಿಯ ಗಂಡ ಕೊಟ್ಟ ಅವಧಿ ಸದ್ದಿಲ್ಲದೆ ಮುಗಿದುಹೋಗಿತ್ತು. ಆದರೂ ಬರೆಯುವುದು ಸಾಧ್ಯವಾಗಿರಲೇ ಇಲ್ಲ. ಈ ಎಲ್ಲ ದಿನಗಳಲ್ಲಿ ರಾತ್ರಿಯಾದೊಡನೆ ಹಾಜರಾಗುತ್ತಿತ್ತು ಈ ಹೆಣ, 'ನನ್ನನ್ನು ಬದುಕಿಸು. ನನ್ನೊಂದಿಗೆ ನಮ್ಮೂರಿಗೆ ಬಾ. ಜೊತೆಯಾಗಿ ಅಲ್ಲಿ ಅಡ್ಡಾಡೋಣ. ಮಜಾ ಮಾಡೋಣ. ಆಗ ಮಾತ್ರ ಕವನ ಬರೆಯಬಲ್ಲಿ ನೀನು'– ಎಂದು ಕಾಡುತ್ತಿತ್ತು.

ಯಾವುದೋ ಅಜ್ಞಾತಶಕ್ತಿ ಎಲ್ಲೋ ದೂರದೂರ ಎಳೆಯುತ್ತಿದ್ದಂತೆ ಭಾಸ. ಒಮ್ಮೆ ಅದರೊಂದಿಗೆ ಹೋಗಿ ನೋಡೋಣವೇ ಎಂದು ಸಹ ಅನ್ನಿಸಿತ್ತು. ಆದರೆ ಒಂದು ಕವನ ರಚಿಸಿಬಿಟ್ಟು ಅದನ್ನು ಶಶಿಯ ಗಂಡನಿಗೆ ಕಳಿಸಿಬಿಟ್ಟು ಅನಂತರ ಇದನ್ನು ನೋಡೋಣ ಎಂದುಕೊಂಡು ದಿನ ತಳ್ಳುತ್ತ ಬಂದಿದ್ದೆ.

–ಬರೆಯುವುದು ಸಾಧ್ಯವಾಗಿರಲಿಲ್ಲ. ನಿನ್ನೆ ಬಂದು ಅವನು, 'ನಮ್ಮ ಪತ್ರಿಕೆಯ ಪ್ರಿಂಟಿಂಗ್ ನಡೆದಿದೆ. ನಾಲ್ಕು ದಿನದಲ್ಲಿ ಎಲ್ಲ ಮುಗಿಯುವುದು. ನಾಡದು ನಿಮ್ಮ ಕವಿತೆ ಕೊಡಲೇಬೇಕು' –ಎಂದು ಹೇಳಿದಾಗ ಬಹಳ ಬೇಸರವಾಯಿತು. ಇಂದು ಸಂಜೆ ಬಂದಿದ್ದ ಸ್ನೇಹಿತರನ್ನೆಲ್ಲ ಏನೇನೋ ನೆವ ಹೇಳಿ ಸಾಗಹಾಕಿ, ಕ್ಲಬ್ಬಿಗೆ ಹೊರಟಿದ್ದ ಶ್ರೀನಿವಾಸನಿಗೆ ರಾತ್ರಿ ಹತ್ತರವರೆಗೂ ಬರಕೂಡದೆಂದು ತಾಕೀತು ಮಾಡಿ, ಬರೆದೇ ಬಿಡಬೇಕೆಂಬ ನಿರ್ಧಾರ ಮಾಡಿ ಕೂತರೆ ಬಂದು ನಿಂತಿತ್ತು,

–ಮತ್ತೆ ಈ ಹೆಣ.

ಇತ್ತೀಚೆ ಇದನ್ನು ನೋಡಿದಾಗಲೆಲ್ಲ ನಾನು ಸೋಲುತ್ತಿರುವೆನೆಂಬ ಅರಿವಾಗಿ ವಿಚಿತ್ರ ಸಂಕಟವಾಗುವುದು. ಇದು ಸದಾ ಹೇಳುತ್ತಿರುವಂತೆ ಇದು ಜೀವಂತವಾಗದ ಹೊರತು ನಾನು ಬರೆಯುವುದೂ ನಿಜವಾಗಿಯೂ ಹೆಣವೇ ಆಗುವುದೇನೋ ಅನ್ನಿಸುವುದು.... ಇಲ್ಲ, ಇಂದು ಇದಕ್ಕೆ ದಾದು ಮಾಡದೆ ಒಂದು ಕವನ ಬರೆದೇ ತೀರಬೇಕು....

'ಬರೀಲಿಕ್ಕೆ ಆಗಲಿಲ್ಲ ಹೌದಲ್ಲೋ ? ಹೊಟ್ಟೀತುಂಬ ಉಂಡು, ಗಂಡನ ಜೋಡಿ ಮಜಾ ಮಾಡಿ, ಆರಾಮಾಗಿ ಡನ್‌ಲಪ್ ಸೋಫಾದ ಮ್ಯಾಲೆ ಕೂತರ ಹ್ಯಾಂಗ ಬಂದೀತು ಅದು ?'

ಸಿಟ್ಟು ಬಂತು ನನಗೆ. ಪೆನ್ನು ಮುಚ್ಚಿಟ್ಟು ಕೇಳಿದೆ, 'ಹಂಗಾರ ಏನು ಮಾಡಬೇಕಂತೀ ?'

'ಬಾ ನನ್ನ ಜೋಡಿಗೆ, ಹೇಳತೀನಿ. ಕವಿತಾ ಬರೀಲಿಕ್ಕೆ ಆರಾಮು ಇರಬಾರದು ನೋಡು. ಕಲ್ಲಾಗ-ಮುಳ್ಳಾಗ ಅಡ್ಡ್ಯಾಡಬೇಕು, ಗುಡ್ಡಾ ಹತ್ತಬೇಕು, ನದೀ ದಾಟಬೇಕು, ಬೆಂಕಿಯೊಳಗ ಬೇಯಬೇಕು, ಸ್ವಲ್‌ಸ್ವಲ್ಪs ಸಾಯಬೇಕು, ಸತ್‌ಸತ್ತು

ಬದುಕಬೇಕು, ಅಂದರ ಬರತದ ಅದು.'

—ಬೇಡ. ಆ ಕಲ್ಲುಮುಳ್ಳಿನ ದಾರಿಯು, ಗುಡ್ಡಬೆಟ್ಟಗಳ, ಹಳ್ಳತಿಟ್ಟುಗಳ, ಆ ಜೀವಂತ ಸಾವಿನ ನೆನಪು ಈಗೇಕೆ ಎಲ್ಲ ಮುಗಿದು ಇಷ್ಟು ವರ್ಷಗಳಾದ ನಂತರ ? ಕಳೆದ ಜನ್ಮದ ಕತೆ ನೆನೆದು ಕತ್ತಲಲ್ಲಿ ಕೂತು ಅಳುವವರ ಪೈಕಿ ಅಲ್ಲ ನಾನು. ಆ ಎಲ್ಲ ನೆನಪನ್ನು, ಆಗಿನ ಕನಸುಗಳನ್ನು ಕೊಂದುಹಾಕಿ ಹೊಸ ಜೀವನ ಸುರುಮಾಡಿಯೇ ಹಳೆಯ ಕಾಲವಾಯಿತು.

'ಆಗ ಎಷ್ಟ ಸಲೀಸಾಗಿ ಬರೀತಿದ್ದಿ ನೆನಪದs ಏನು ?'

ಹೌದು. ಆಗ ಬೆಂಕಿ ಉರಿಯುತ್ತಿತ್ತು ; ಕನಸುಗಳು—ಅನಿಸಿಕೆಗಳು ಜ್ವಲಂತವಾಗಿದ್ದವು. 'ಆಗ ನಾನು ಬದುಕಿದ್ದೆ' —ಮತ್ತೆ ಮಾತನಾಡಿತು ಹೆಣ.

ಈಗೆಲ್ಲ ತಣ್ಣಗಾಗಿದೆ ; ಬೂದಿಯಾಗಿದೆ.

'ನಾ ಹಿಂಗ ಹೆಣಾ ಆದಾಗಿನಿಂದ ಒಂದಕ್ಷರ ಬರಿಯೂದಾಗಿಲ್ಲ ನಿನಗ.'

ಇರಬಹುದು, ಆದರೆ ಮತ್ತೆ ಆ ಅಗ್ನಿಕುಂಡ ಹೊಕ್ಕು ನೋಡದ ಹೊರತು ಈಗ ಬರೆಯುವುದು ಸಾಧ್ಯವಿಲ್ಲವೇ ?

'ಬರ್ತೀಯೇನs ನಮ್ಮೂರಿಗೆ ?'

'ಊಹ್ಞೂ.'

—ಮೊಟಕಾಗಿ ಉತ್ತರಿಸಿ ಪೆನ್ನು-ನೋಟಬುಕ್ಕು ಅಲ್ಲೇ ಒಗೆದು ಎದ್ದು ಹೊರಗೆ ಬಂದು ನಿಂತೆ. ಕ್ಲಬ್ಬಿನಿಂದ ಮರಳಿದ್ದ ಶ್ರೀನಿವಾಸ ಕೆಳಗಡೆ ಕಾರು ನಿಲ್ಲಿಸಿ ಹಾರ್ನ್ ಮಾಡುತ್ತಿದ್ದ. ಗೇಟು ತೆರೆಯಲೆಂದು ಓಡಿದೆ.

'ಕವಿತಾ ಬರದೇನs ?' —ರಾತ್ರಿ ಕೇಳಿದ್ದ ಶ್ರೀ.

'ಇಲ್ಲ ಇನ್ನೂ. ಆದರೆ ಇವತ್ತ ಬರೀತೀನಿ. ನಾಳೆ ಕಳಸ್ಲಿಕ್ಕೇಬೇಕಲ್ಲ'.

'ತಿಂಗಳಾತಲ್ಲ ಬರೀಲಿಕ್ಕೆ ಸುರೂಮಾಡಿ ? ಅದೇನ ಮುಗಿಯೋಹಾಂಗ ಕಾಣೂದಿಲ್ಲ.'

'ಇವತ್ತ ಮುಗಿಸೇಬಿಡಬೇಕಂತ ಮಾಡೀನಿ.'

'ಹಂಗಾದರ ನಿನ್ನ ಮಾತಾಡ್ಸೂದಿಲ್ಲ ಇವತ್ತ' —ಎಂದು ಆತ ಮಗ್ಗುಲಾಗಿದ್ದ.

—ಅವನ ಗೊರಕೆಯ ಸದ್ದು ಕೇಳುತ್ತ ಶೂನ್ಯದತ್ತ ದೃಷ್ಟಿ ನೆಟ್ಟು —ಹೀಗೆ ಕೂತು ಎಷ್ಟೋ ಹೊತ್ತಾಯಿತು....ನಿದ್ರೆ ಬರತೊಡಗಿದೆ....

'ಹಲೋ.'

'ಹಲೋ' ಎಂದು ಕತ್ತೆತ್ತಿ ನೋಡಿದರೆ ಬಾಗಿಲು ಚೌಕಟ್ಟಿಗೆ ಆತು ನಿಂತಿತ್ತು,

— ಆ ಹೆಣ.

'ಏನು ಮಾಡುತ್ತಿದ್ದೀ ?'

ಯಾಕೋ ಆ ಹೆಣದ idle curiosity ಬಗ್ಗೆ ವಿಪರೀತ ಸಿಟ್ಟು ಬಂದಿತು. ಮಲಗಿದ್ದ ಶ್ರೀಗೆ ಎಚ್ಚರವಾದೀತೆಂದು ಹವುರಗೆ ಆದರೂ ಕಟುವಾಗಿ ಕೇಳಿದೆ.

'ನೀ ಹಾಳಾಗಿ ಹೋಗಬಾರದs ? ಯಾಕ ಹಿಂಗ ಕಾಡಲಿಕ್ಹತ್ತೀ ? ಯಾವ ಕೆಲಸಾನೂ ಮಾಡಿಕೊಡವಲ್ಲಿ. ಹೊತ್ತಿಲ್ಲದ ಹೊತ್ತಿನ್ಯಾಗ ಬಂದು ಹಿಂಗ್ಯಾಕ ಡಿಸ್ಟರ್ಬ ಮಾಡಲಿಕ್ಹತ್ತೀ ?'

'ಕವನ ಬರೀಬೇಕು ಅನ್ನುತ್ತಿದ್ದೀ–'

'ನೀ ಅತ್ಲಾಗ ಹಾಳಾಗಿ ಹೋದರ ಬರದೇನು.'

'ಇಲ್ಲ, ನಾ ಇಷ್ಟ ದಿನಾ ಹಾಳಾಗೇ ಹೋಗಿದ್ದೆನಲ್ಲ, ಏನು ಬರೆದಿ ? ನಿನ್ನ ಸುದ್ದಿಗೇ ಬಂದಿದ್ದಿಲ್ಲ ನಾನು. ಆದರ ಈಗ ನೀ ಕವಿತಾ ಬರೀಬೇಕು ಅಂತೀಯಂತ ಬಂದೀನಿ. ನೀ ಬರೀಬೇಕಾದರ ನಾ ಜೀವಂತ ಆಗಬೇಕು.'

–ಹಾಡಿದ್ದೇ ಹಾಡು. ಹೆಣವಾಗಿದ್ದೇ ಇಷ್ಟು ಕಾಡುವ ಇದು ಇನ್ನು ಬದುಕಿದರೆ ನಾನೇ ಹೆಣವಾಗುವಷ್ಟು ಕಾಡೀತು. ಇದರ ಮಾತು ಕೇಳುತ್ತಿದ್ದರೆ ಏನೋ ಸೆಳೆತ, ಏನೋ ಕಾತರ, ಏನೋ ಧುಂಧಿ....

'ಇವತ್ತ ಬಾ ನನ್ನ ಜೊತಿಗೆ. ನಮ್ಮೂರಿಗೆ ಹೋಗೋಣ.'

'....' –ನಾನು ಮೌನವಾಗಿದ್ದೆ.

'ನಡೀ ಹೋಗೋಣ. ಬರ್ತೀಯಲ್ಲ ಹಂಗಾರ....?'

'.............'

'ಏಳು, ಬೆಳಗಾಗೂದರಾಗ ತಿರಿಗಿ ಬಂದಬಿಡೂಣಂತ.' –ಹೆಣ ನನ್ನ ಉತ್ತರಕ್ಕೆ ಕಾಯದೆ ಹೊರಟು ನಿಂತಿತು.

ನಾನು–

–ಸದ್ದಾಗದ ಹಾಗೆ ಹೆಜ್ಜೆಯಿಡುತ್ತ ಹಿಂಬಾಲಿಸಿದೆ....

–ದೂರ ದೂರ.... ಗಾಳಿಯಾಗಿ, ಮಿಂಚಾಗಿ, ಸಿಡಿಲಾಗಿ, ಬೆಳಕಾಗಿ, ಕತ್ತಲೆಯಾಗಿ, ಹೊಗೆಯಾಗಿ, ಹಾಗೇ ದೂರ....

–ದಾರಿಯಲ್ಲೆಲ್ಲ ಎಂಥೆಂಥವೋ ಗಿಡಗಳು, ಬಂಡೆಗಳು, ಮಡುಗಟ್ಟಿದ ಕೊಳಚೆ ನೀರು, ತಾರುಕಂಬಗಳಿಗೆ ಜೋತುಬಿದ್ದಿದ್ದ ತೊಗಲುಬಾವಲಿಗಳು,.... ಎಲ್ಲಾ ಎಲ್ಲೋ ಕಂಡ ನೆನಪು, ಮಸುಮಸುಕಾಗಿ, ಕವನದ ಒಂದೊಂದೇ ಸಾಲು ರೂಪುಗೊಳ್ಳುತ್ತಿರುವ ಹಾಗೆ.... ಮೌನ ಭೇದಿಸಿ ಮಾತನಾಡಿತು ಹೆಣ, 'ಈ ಗುಡ್ಡಾ ನೋಡಿದ ನೆನಪು ಇರಬೇಕಲ್ಲ ನಿನಗ ?'

–ಹ್ಞೂ. ಬಣ್ಣ ಬಣ್ಣದ ನೆನಪು, ಕಾಮನಬಿಲ್ಲಿನಂತೆ ಮೂಡತೊಡಗಿತ್ತು.... ಬೇಡವಾಗಿದ್ದ ನೆನಪು. ಈ ಸತ್ತಂಥ ಬದುಕಿನಿಂದ ದೂರ ಆ ಜೀವಂತ ಸಾವಿನ ದಿನಗಳೆಡೆ ಎಳೆದೊಯ್ಯತೊಡಗಿದ್ದ ನೆನಪು.... ಹೌದು, ಇದೇ ಗುಡ್ಡದ ವಾರೆಗೆ ಆ ಮರದ ನೆರಳಲ್ಲಿ ಆದದ್ದು,

–ಮೊದಲ ಭೆಟ್ಟಿ.

'ನಾ ಇಲ್ಲೇ ಹುಟ್ಟಿದ್ದು' –ಹೆಣ.

ಕಾಲು ಸೋಲುತ್ತಿವೆ. ಇನ್ನಿದನ್ನು ಏರುವುದಾಗದು. ತಿರುಗಿ ಹೋಗಬೇಕು.

....ಆದರೆ ಎಲ್ಲ ಮಂಜಮಂಜಾಗಿದೆ....

'ಈಗ ನಾವು ಗುಡ್ಡದ ತುದೀಗೆ ಬಂದೆವು. ಈ ಜಾಗಾ ನನಗ ಭಾಳ ಸೇರತದ. ನಾ ಬೆಳದದ್ದು, ಕಣ್ಣು ಮುಚ್ಚಣಿಕಿ ಆಟಾ ಆಡಿದ್ದು, ಕುಡಿದು ಕುಣಿದಾಡಿದ್ದು ಎಲ್ಲಾ ಇಲ್ಲೇ. ನಿನಗ ಗುರ್ತು ಸಿಗತದೇನು ?'

–ನನಗೆ ಗುರುತು ಸಿಗದೆ ಏನು ? ನನ್ನ ಜೀವದ ಬಯಕೆಗಳು ಅರಳಿ ಹೂವಾದದ್ದು –

ಇದೇ ಜಾಗ.

ಎತ್ತರವಾಗಿದ್ದ ಜಾಗ. ಮುಗಿಲಿಗೆ-ಮೋಡಗಳಿಗೆ ಎಷ್ಟೊಂದು ಹತ್ತಿರವಿದ್ದ ಜಾಗ !

'ಸಾವಕಾಶ ಇಳಿ. ಕಾಲು ಜಾರೀತು. ಇಲ್ಲಿಂದ ಕೆಳಗೆ ಕಾಣಿಸುವ ಆ ನದೀ ತನಕಾ ಇರೋ ದಾರಿ ಏಕದಂ ಸ್ಲೋಪ್ ಅದ.'

–ಯಾಕಿಷ್ಟು ಕಾಳಜಿ ನನ್ನ ಬಗ್ಗೆ ಈ ಹೆಣಕ್ಕೆ ?....ನಾನರಿಯೆನೇ ಈ ದಾರಿಯನ್ನ ? ನನ್ನ ಕನಸುಗಳು ನನ್ನೆದುರೇ ಹೋಮವಾಗುತ್ತಿರುವುದನ್ನು ನೋಡುತ್ತ, ಪ್ರತಿದಿನ ಪ್ರತಿಕ್ಷಣ ನಿಧಾನವಾಗಿ ಸಾಯುತ್ತ –

–ಸವೆಸಿದ್ದ ದಾರಿ.

ಓಹ್, ಉಸಿರು ಕಟ್ಟುತ್ತಿದೆ. ಓಡಿಹೋಗಬೇಕು ಇಲ್ಲಿಂದ. ದೂರ-ದೂರ ಹೋಗಿ ಆರಾಮವಾಗಿರಬೇಕು. ಕವನ ಬೇಡ, ಏನು ಮಣ್ಣೂ ಬೇಡ, ತಿರುಗಿ ಮನೆ ಮುಟ್ಟಿದರೆ ಸಾಕು....ಶ್ರೀ–

'ನದಿ ಬಂತು ನೋಡು.'

–ಅನಿರೀಕ್ಷಿತವಾಗಿ ಹೆಣದ ದನಿಯಲ್ಲಿ ಮೂಡಿದ ಕಂಪನ ನನ್ನೆದೆಯಲ್ಲಿನ ಎಲುಬುಗಳೊಳಗೆ ಎಂಥದೋ ನಡುಕ ಹುಟ್ಟಿಸಿತು. ಕನಸುಗಳ ಪೂರ್ಣತೆ ಅಸಾಧ್ಯವೆಂಬ ಅರಿವಾದದ್ದು ; ಜನ್ಮಾಂತರಗಳಿಂದ ನನ್ನ ಅತೃಪ್ತ ಆತ್ಮ ಅರಸುತ್ತಿದ್ದ,

ಒಂದು ಕ್ಷಣದ ಮಟ್ಟಿಗೆ ಬದುಕು ಸಾರ್ಥಕವೆನ್ನಿಸುವ ಆ ಗಳಿಗೆ ಕೈಗೆಟುಕಿ-ಎಟುಕಿ ಎಟುಕದೇ ಹೋದದ್ದು ; ಭೂತ-ವರ್ತಮಾನಗಳ ಸಂಬಂಧ ತಟ್ಟೆಂದು ಕಟಗರಿಸಿದ್ದು –

– ಇಲ್ಲೇ. ಇಲ್ಲೇ ಎಲ್ಲ ಮುಗಿದಿದ್ದು.

'ಇಲ್ಲೇ ನೀನು ನನ್ನನ್ನು ಕೊಂದದ್ದು....ನೆನಪಿದೆಯೇ' – ಹೆಣದ ದನಿಯೂ ಸಹ ಹೆಣವಾಗಿಹೋಗಿದೆ....

ಇಲ್ಲ, ನನಗೆ ನೆನಪಿಸಿಕೊಳ್ಳುವುದು ಬೇಕಾಗಿಲ್ಲ. ಅಯ್ಯೋ, ನಾನು ಈಗಿಂದೀಗ ಮನೆಗೆ ಹೋಗಬೇಕು....

'ನೋಡು, ಅಲ್ಲಿದೆ ನನ್ನ ಗೋರಿ, ನನ್ನನ್ನು ಅಲ್ಲೇ ಬಿಟ್ಟು ಮುಂದೆ ಹೋದಿ– ಆಮ್ಯಾಲ ಆದದ್ದಲ್ಲs ನಿನಗ ಆ ಡಾಕ್ಟರನ ಭೆಟ್ಟಿ ? ಹ್ಞೂ, ನಿನ್ನ ಲಗ್ನಕ್ಕ ನನ್ನ ಕರೆಯಲೇ ಇಲ್ಲ ನೀನು–, ಗುಡ್ ಬೈ ಹೇಳಿ ಹೋದಾಕಿ ತಿರುಗಿ ಈ ಕಡೆ ಹಾಯಲೇ ಇಲ್ಲ ನೀನು.'

– ಸ್ಮಶಾನ ಮೌನ.

ಇದ್ದಕ್ಕಿದ್ದಂತೆ ಉದ್ವೇಗದಿಂದ ಮಾತನಾಡಿತು ಹೆಣ. 'ನನ್ನನ್ನು ಬದುಕಿಸು. ನೀನು ಮತ್ತೆ ಟನ್‌ಗಟ್ಟಲೆ ಕವನ ಬರೆಯುವಂತೆ ಮಾಡುವೆ. ಮತ್ತೆ ನಾವು ಈ ಗುಡ್ಡಾ ಹತ್ತೋಣ, ಕುಣಿದಾಡೋಣ, ಹಕ್ಕೀಹಾಂಗ ಹಾರಾಡೋಣ, ಮೀನಿನ್ಹಾಂಗ ಈಸಾಡೋಣ, ಬದುಕೋಣ....'

– 'ಸತ್‌ಸತ್ತು ಬದುಕೋಣ ? ಊಹ್ಞೂ. ನಾ ಒಲ್ಲೆ. ನನಗೆ ಬ್ಯಾಡ. ನಾ ಈಗ ಆರಾಮಿದ್ದೀನಿ. ನಿನ್ನ ಕುಣಿದಾಡೋದು, ಹಾರಾಡೋದು, ಹತ್ತೋದು, ಇಳಿಯೋದು, ಏಳೋದು, ಬೀಳೋದು, ಸಾಯೋದು – ಎಲ್ಲಾ ನಿನಗs ಇರ್‍ಲಿ.'

'ಮತ್ತ ಕವನ ?'

ದೇವರಾಣೆ ನಾ ಇನ್ನ ಕವನಾ ಬರಿಯೋ ಹುಚ್ಚುತನಾ ಮಾಡೋದಿಲ್ಲ. ನನಗ ಯಾವುದೂ ಬ್ಯಾಡ. ನಾ ಹೊರಟೆ.'

'ಖರೇನ ?'

'ಖರೆ, ಖರೆ, ಖರೆ.'

....ಹೆಣ ಶೂನ್ಯದತ್ತ ನೋಡುತ್ತ ಮೌನವಾಗಿ ನಿಂತಿತು. ನಾನೇ ಮತ್ತೆ ಕೇಳಿದೆ, 'ನನ್ನ ಕಳಿಸಲಿಕ್ಕೆ ಬರ್‍ತಿಯೇನು ಅಲ್ಲೀತನಕ ?'

'ಒಲ್ಲೆ. ಕವನಾ-ಗಿವನಾ ಬರಿಯೂದಿಲ್ಲ ಅಂತೀ. ಇನ್ನ ನಂದೇನು ಕೆಲಸದ ಅಲ್ಲೆ? ನಾ ಇಲ್ಲೇ ನನ್ನ ಗೋರಿಯೊಳಗ ಇರ್‍ತೀನಿ. ಹೋಗಿ ಬಾ, ಗುಡ್ ಬೈ.'

'ಹೋಗತೀನಿ. ತಿರಿಗಿ ಬರೂದಿಲ್ಲ. ನೀನೂ ಆ ಕಡೆ ಬರಬ್ಯಾಡ.'

*

*

*

‘ಏ ಏಳs. ಎಷ್ಟೊತ್ತದು ಮಲಗೋದು ? ಕವಿತಾ ಬರದು ಮುಗಿಸಿಯೇ ಬಿಟ್ಟಿಯೇನು ನಿನ್ನೆ ರಾತ್ರಿ ? ಚಹಾದ ಹೊತ್ತಾತು ಏಳಿನ್ನ.’ –ಹೊದಿಕೆಯನ್ನೆಳೆದು ಎಬ್ಬಿಸಲು ಪ್ರಯತ್ನಿಸುತ್ತಿದ್ದ ಶ್ರೀ.

ನಿಧಾನವಾಗಿ ಕಣ್ಣು ಬಿಟ್ಟೆ, ‘ಆ್ಞ ಹ್ಞೂ....ಏನಂದೀ ?’

‘ಕವಿತಾ ಬರದು ಮುಗಿಸಿದೇನು ಅಂದೆ.’

‘ಕವಿತಾ ? ಛೇ. ಇಲ್ಲ. ‘ಆಗೂದಿಲ್ಲ, Excuse me’ –ಅಂತ ಈಗ ಮೊದಲ ಒಂದು ಪತ್ರಾ ಬರೀಬೇಕು ಆ ಸಂಪಾದಕಗ. ನಿನಗ ಚಹಾ ಆಮ್ಯಾಲೆ ಮಾಡ್ತೀನಿ.’

❖ ❖ ❖

# ಮಳೆ ಬಂದಾಗ....

ಜಿಟಿಜಿಟಿ ಮಳೆ....ಹಾಳು ಮಳೆ....ಹಗಲು-ರಾತ್ರಿ ಸದಾ ಮಳೆ....ಅದೂ ಈ ಅಕ್ಟೋಬರದ ಅಕಾಲದಲ್ಲಿ. ಸದ್ದು-ಗದ್ದಲ, ಗಡಿಬಿಡಿ-ಭಾನಗಡಿ ತುಂಬಿದ ಮುಂಬಯಿಯ ಯಾಂತ್ರಿಕ ಜೀವನದಿಂದ ದೂರವಾಗಿ ದೀಪಾವಳಿ ರಜೆಯ ಒಂದು ತಿಂಗಳನ್ನಾದರೂ ಸ್ವಲ್ಪ ಶಾಂತಿಯಿಂದ ಕಳೆಯೋಣವೆಂಬ ಬೃಹದಾಸೆ ಹೊತ್ತು, ನಿರ್ಜನವಾದ ದಾರಿಗಳಗುಂಟ ಏಕಾಕಿಯಾಗಿ ತಿರುಗಾಡಿ ಆನಂದಿಸಬಹುದೆಂಬ ಬಯಕೆಯೊಂದಿಗೆ ಬೆಳಗಾವಿಯಲ್ಲಿ ಗೆಳತಿ ಸರೋಜಳ ಮನೆಗೆ ಬಂದಿದ್ದಾಗಿತ್ತು. ಬಂದು ಎಂಟು ದಿನ ಕಳೆದರೂ ಈ ಮಳೆ ನಿಲ್ಲುವ ಚಿಹ್ನೆಯೇ ಕಾಣಲೊಲ್ಲದು. ಬರುವಾಗ ಇದ್ದ ಉತ್ಸಾಹದ ಒಂದಂಶವೂ ಉಳಿಯಲಿಲ್ಲ. ಹೊರಗಡೆಯ ಮುಗಿಲ ತುಂಬ ಕಪ್ಪುಮೋಡ. ರಸ್ತೆ ತುಂಬ ಕೆಸರು ನೀರು. ಮತ್ತೆ ಎಡಬಿಡದೆ ಸುರಿಯುವ, ಒಮ್ಮೆ ನಿಧಾನವಾಗಿ ಹನಿಯುವ ಮಳೆ. ಹೊರಗೆ ಹೋಗಲಾಗದು. ಒಳಗೆ ಕುಳಿತಿರಲು ಬೇಸರ. ಹೀಗಾಗುವುದೆಂದು ಮೊದಲೇ ಸ್ವಲ್ಪ ಕಲ್ಪನೆಯಾದರೂ ಬಂದಿದ್ದರೆ....ಛೆ....

"ಈಕಿ ನನ್ನ ಹಳೇ ಗೆಳತಿ ಸಹನಾ. ಮುಂಬಯಿಯೊಳಗ ಸ್ಕೂಲ್ ಆಫ್ ಆರ್ಟ್ಸ್ ಅದs ಅಲ್ರಿ, ಅಲ್ಲೆ ಕಡೀ ವರ್ಷದಾಗ ಇದ್ದಾಳ ಈ ಸರೆ" – ಸರೋಜ ತನ್ನ ಗಂಡನಿಗೆ ಪರಿಚಯ ಮಾಡಿಕೊಡುತ್ತ ಹೇಳಿದ್ದಳು.

"ಓಹೋ, ಹಂಗಾರ ನೀವೂ ಒಬ್ಬ ಮಾಡರ್ನ್ ಆರ್ಟಿಸ್ಟ್ ಇರಬೇಕು" – ಎಂದಿದ್ದ ಅವಳ ಗಂಡ ತನ್ನ ಕಡೆ ವಿಚಿತ್ರವಾಗಿ ನೋಡುತ್ತ, 'ಮಾಡರ್ನ್ ಆರ್ಟಿಸ್ಟ್' ಎಂದರೆ ಯಾವುದೋ ಝೂದೊಳಗಿನ ಪ್ರಾಣಿಯೆಂಬಂತೆ.

ಸಹನಾ ಉತ್ತರಿಸುವ ಮೊದಲೇ ಹುರುಪಿನಿಂದ ಹೇಳಿದ್ದಳು ಸರೋಜ, "ಹೌದ್ರೀ, ಸಹನಾನ ಎಲ್ಲ ಪೇಂಟಿಂಗ್ಸೂ ಒಂದೊಂದು ಕ್ರಾಂತಿ ಮಾಡ್ಯಾವ. ಅಲ್ಲಿಯ ಪ್ರೊಫೆಸರುಗಳಿಗೂ ಆಕೆಯ ಪೇಂಟಿಂಗ್ಸ್ ಪೂರ analyse ಮಾಡೋದು ಸಾಧ್ಯಿಲ್ಲಂತ. ಏನಂತ ತಿಳದ್ರಿ ನನ್ನ ಗೆಳತಿ ಅಂದರ!" – ಅಷ್ಟರಿಂದಲೇ ಬೇಸರವಾಗಿತ್ತು ತನಗೆ. ಆಕೆಯ ಗಂಡನ ಮಾತು ಕೇಳಿದಾಗಂತೂ ಸಿಟ್ಟೇ ಬಂದಿತ್ತು.

"ಹೌದಲ್ಲ ಅದೇ ಮತ್ತ ಈ ಮಾಡರ್ನ್ ಆರ್ಟಿನ ಮಜಾ, ಯಾರಿಗೂ ತಿಳೀಲಾರಧಾಂಗ ಏನಾರೆ ಒಂದು ತಗದಬಿಟ್ಟರಾತು, ಅದ್ಭುತ ಮಾಡರ್ನ್ ಪೇಂಟಿಂಗ್

ಅಂತಾರ ಅದಕ್ಕ." ದೊಡ್ಡ ವಿಮರ್ಶಕನ ಧಾಟಿಯಲ್ಲಿ ಹೇಳಿದ್ದ ಆತ.

ಗಂಡನನ್ನು ಬಯಸಿಯೂ ವಿರೋಧಿಸಲಾಗದ ವಿಧೇಯ ಧರ್ಮಪತ್ನಿ ಸರೋಜ ಅವನು ಹೊರಗೆ ಹೋದೊಡನೆ ತನ್ನೆಡೆ ಬಂದು ರಮಿಸುವ ಧ್ವನಿಯಲ್ಲಿ ಅಂದಿದ್ದಳು, ''ಇವರ ಸ್ವಭಾವನೇ ಹಾಂಗ ಸಹನಾ, ನೀಯೇನೂ ಮನಸಿಗೆ ಹಚಿಗೋಬ್ಯಾಡ. ಆರಾಮ ಇರು. ನವ್ಹೆಂಬರದಾಗಿನ ಆಲ್ ಇಂಡಿಯಾ ಆರ್ಟ್ ಎಗ್ಜಿಬಿಶನಿಗೆ ಒಂದು ಚಿತ್ರಾ ತಗೀಬೇಕಾಗೇದ ಅಂದೆಲ್ಲಾ, ಅದನ್ನ ಈ ಸೂಟಿಯೊಳಗ ತಗದು ಮುಗಿಸಿಬಿಡು. ನಿನಗ ಈ ಸ್ಪೆಶಲ್ ರೂಮು ಕೊಟ್ಟಿರತೀನಿ. ಮತ್ತೇನು ಬೇಕೋ ಹೇಳು, ಎಲ್ಲಾ ಅನುಕೂಲ ಮಾಡಿಕೊಡತೀನಿ. ಶಾಂತ ವಾತಾವರಣ ಬೇಕು ಅಂತಿದ್ದಿ ; ಇಲ್ಲೆ ಬೇಕಾದಷ್ಟು ಶಾಂತತಾ ಅದ. ಯಾರೂ ಡಿಸ್ಟರ್ಬ್ ಮಾಡವರಿಲ್ಲ."

"ಥ್ಯಾಂಕ್ಸ್ ಸರೋಜ."

–ಇದಕ್ಕೂ ಹೆಚ್ಚಿಗೆ ಏನು ಹೇಳಬಹುದಾಗಿತ್ತು ತಾನು ? ತನ್ನ ತಲೆ ತುಂಬ, ಮನ ತುಂಬ ತುಂಬಿದ್ದ ವಿಚಾರ ಒಂದೇ–ಮುಂಬರುವ ಅಂತರ್‌ರಾಜ್ಯ ಮಟ್ಟದ ಕಲಾ ಪ್ರದರ್ಶನಕ್ಕೆ ತಾನು ಕಳಿಸಬೇಕಾಗಿರುವ ಚಿತ್ರ ; ತನ್ನ ಭವಿಷ್ಯವನ್ನೇ ಬದಲಿಸಬಹುದಾದ ಕೃತಿ ; ಮನಸ್ಸು ಕೊಟ್ಟು ಮಾಡಬೇಕಾಗಿರುವ ಕೆಲಸ. ಶಾಂತವಾದ ಈ ಜಾಗದಲ್ಲಿ ಒಂದು ತಿಂಗಳು ಪ್ರಯತ್ನ ಮಾಡಿದರೆ ಯಶಸ್ವಿಯಾಗಿ ಮುಗಿಸಬಹುದು. ಆದರೆ ಕಳೆದ ಎಂಟು ದಿನದಿಂದಲೂ ಸತತವಾಗಿ ಹತ್ತಿರುವ ಮಳೆಯಿಂದಾಗಿ ಪೂರಾ ಬೇಸರವಾಗಿಹೋಗಿದೆ. ಕೆಲಸ ಸುರು ಮಾಡಲಿಕ್ಕೇ ಮನಸ್ಸಾಗಲೊಲ್ಲದು. ಕಿಡಿಕಿಯ ಚೌಕಟ್ಟಿನಾಚೆ ಜಿಟಿ ಜಿಟಿ ಹನಿಯುವ ಮಳೆಯ ಕಡೆ ಶೂನ್ಯವಾಗಿ ದೃಷ್ಟಿಸುತ್ತ ಕೂತು ಕೂತು ಸಾಕಾಯಿತು.

"ಏನಽ ಸಹನಾ, ಚಿತ್ರಾ ತಗೀತೀನಿ ಅಂದಾಕಿ ಇನ್ನೂ ಏನೂ ಸುರು ಮಾಡೇ ಇಲ್ಲಲ್ಲಾ, ಸ್ಫೂರ್ತಿ-ಗೀರ್ತಿ ಬರಬೇಕೇನು ಅದಕ್ಕೂ ? ನಿನಗಿನ್ನ ಸ್ಫೂರ್ತಿ ಕೊಡವರನ್ನ ಎಲ್ಲೆ ಹುಡುಕಲೆವಾ ?" –ಕೆಲಸ ಮುಗಿಸಿ ಬಂದ ಸರೋಜ ನಗುತ್ತ ಕೇಳಿದಳು.

ಏನು ಹೇಳಬೇಕು ಅವಳಿಗೆ ?

"ಹೀಂಗಾದರ ಅದು ಮುಗಿಯೋದು ಹ್ಯಾಂಗ ಸಹನಾ ?"

"ನಾನರೆ ಏನು ಮಾಡಲಿ, ಸರೋಜ ? ಈ ಮಳೆಯ ಸಲುವಾಗಿ ನನಗ ಭಾಳ ಬ್ಯಾಸರ ಬಂದದ. ಒಂದ ಸ್ವಲ್ಪರೆ ಬಿಸಲು ಬಿತ್ತಂದ್ರ ಕೆಲಸಾ ಸುರೂ ಮಾಡ್ತೀನಿ. ಮುಗಸೂದೇನು ತಡಾ ?"

"ಅಲ್ಲಽ ಹುಚ್ಚಿ, ಮಳೆಗೂ ನಿನ್ನ ಚಿತ್ರಕ್ಕೂ ಏನು ಸಂಬಂಧ ? ಮಳೆ ಹೊರಗ ಬರತಿರತದ. ನೀ ಒಳಗ ಕೂತು ಚಿತ್ರಾ ತಗೀಲಿಕ್ಕೆ ಏನಡ್ಡಿ ?"

ಇಲ್ಲ, ಸರೋಜಳಿಗೆ ತಿಳಿಯುವುದಿಲ್ಲ. ಎಲ್ಲ ಅವಳಿಗೆ ತಿಳಿಸಿ ಹೇಳಬೇಕಾದ ಅವಶ್ಯಕತೆಯೂ ಇಲ್ಲ. ಹೋಗಲಿ.

"ಹಿಂಗ ಸುಮ್ನ ಕೂತರ ಏನು ಬಂತು, ಸಹನಾ ? ಮುಂಬೈಯ ಸುದ್ದೀನರೆ ಹೇಳಲಾ, ನಿನ್ನ ಕಾಲೇಜಿನ ಸುದ್ದಿ, ನಿಮ್ಮ ಕಾಕಾ ಡಾಕ್ಟರ್ ದೇಶಮುಖರ ಹುಚ್ಚರಾಸ್ಪತ್ರೆಯ ಸುದ್ದಿ –"

ಅವಳನ್ನು ತಡೆದು ಹೇಳಿದಳು ಸಹನಾ, "ಏ, ನಮ್ಮ ಕಾಕಾನದು ಹುಚ್ಚರ ಆಸ್ಪತ್ರೆ ಅಲ್ಲಾ ಅಂತ ಎಷ್ಟು ಸರೆ ಹೇಳೀನಿ ನಿನಗೆ, ಮತ್ತ್ಯಾಕ ಹಾಂಗಂತೀ ? ಅವರು ಹುಚ್ಚರಾಸ್ಪತ್ರೆಯ ಡಾಕ್ಟರ್ ಅಲ್ಲ, ಅವರ ಕಡೆ ಬರವ್ರು ಹುಚ್ಚರಲ್ಲ. ನಮ್ಮ ಕಾಕಾ ಒಬ್ಬರು ಸೈಕಿಯಾಟ್ರಿಸ್ಟ್. ಹಾಂಗಂದ್ರ ಏನು ಅಂತ ಕೇಳತೀಯೇನು ? ಅದರ ಅರ್ಥಾ ಹೇಳೀನಿ ನಿನಗ ; ಮತ್ತ ಕೇಳಬ್ಯಾಡ. ಏನರೆ ಕಾರಣದಿಂದ ತಲೀಗೆ ತ್ರಾಸ ಆದವರು, ಮನಸ್ಸಿನ ಚಿಂತಿ ಇದ್ದವರು ಅವರ ಕಡೆ ಬರ್ತಾರ. ಅವರ ತಲಿಯೊಳಗಿನ ವಿಚಾರ ತಗದು ಅವರಿಗೆ ಸಮಾಧಾನ ಹೇಳೂದು, ಅವರ ಜಡ್ಡು ನೆಟ್ಟಗ ಮಾಡೂದು ನಮ್ಮ ಕಾಕಾನ ಕೆಲಸ. ತಿಳೀತೇನು ?"

"ಮತ್ತ ನಾಯೇನ ಅಂದೆ ? ನನ್ನಂಥಾ ಸಾಮಾನ್ಯ ಮಂದೀ ಪ್ರಕಾರ ಅವರದು ಹುಚ್ಚರಾಸ್ಪತ್ರೇನs ಖರೆ."

ಸರೋಜಳೊಂದಿಗೆ ವಾದಿಸಿ ಫಲವಿಲ್ಲ. ಮಳೆಗೂ ಬಿಸಿಲಿಗೂ ಅಂತರ ಕಾಣದವಳು ಹುಚ್ಚರಿಗೂ ದುಃಖಿಗಳಿಗೂ ಏನು ಅಂತರ ಕಂಡಾಳು ? ಅವಳ ದೃಷ್ಟಿಯಲ್ಲಿ ಎಲ್ಲ ಒಂದೇ.

*

*

*

ಎರಡು ದಿನ ಕಳೆದ ನಂತರ ಇಂದು ಮಳೆ ಸ್ವಲ್ಪ ಕಡಿಮೆಯಾಗಿದೆ. ಬಿಸಿಲು ಬೀಳದಿದ್ದರೂ ಮುಗಿಲು ಸ್ವಚ್ಛವಾಗಿದೆ. ಇಂದಾದರೂ ಚಿತ್ರ ಬರೆಯಲು ಸುರು ಮಾಡಲೇಬೇಕು....

–"ಏನು ಸಹನಾ, ಮಧ್ಯಾಹ್ನದಿಂದ ಕೂತು ಇದೇನು ನಡೆಸೀ ನೀನು ? ಇಷ್ಟೆಲ್ಲಾ ಬಣ್ಣದ ಟ್ಯೂಬ್ಸು, ಬ್ರಷ್, ಕಾಗದಾ ಎಲ್ಲಾ ಹರವಿಕೊಂಡು ಥಣ್ಣಗ ಕೂತೀಯಲ್ಲಾ. ನಿನಗ ಆಗೇದರೆ ಏನು ?" ಸಂಜೆ ರೂಮಿನೊಳಗೆ ಬರುತ್ತ ಕೇಳಿದಳು ಸರೋಜ.

"ಏನೂ ಇಲ್ಲ ಸರೋಜ, ಚಿತ್ರದ ಪ್ಲ್ಯಾನ್ ನಡಿಸೀನಿ."

"ವ್ಹಾ, ಹಿಂಗ ಪ್ಲ್ಯಾನ್ ಮಾಡತಾರೇನು ಯಾರರೆ ? ನಿನ್ನ ನೋಡಿದರ ದೆವ್ವ ಬಡದದೇನೋ ಅನಸ್ತದ. ಅರೆ, ಇದ್ಯಾವ ಚಿತ್ರ ? ಇದನ್ಯಾಕ ಹಿಂಗ ಮುಂದ ಇಟಗೊಂಡು ಕೂತೀದಿ ? ನೋಡೋಣ ತಾ ಇಲ್ಲೆ.... ಅದ್ಭುತ ! ಮಳೆಯೊಳಗ ತೋಯಿಸಿಗೋತ ಹೊರಟಾನಲ್ಲ ಈ ಚಿತ್ರದಾಗಿನ ಮನುಷ್ಯ, ಖರೇನs ಸಹನಾ, ಅಗದೀ ನ್ಯಾಚರಲ್ ಆಗೇದ, ಇದನ್ಯಾವಾಗ ತಗದಿ ?"

"ಒಂದು ವರ್ಷ ಆತು."

"ಖರೇ, ಭಾಳ ಛೆಂದ ಆಗೇದ. ಆದರ ಹಿಂಗ್ಯಾಕ ಮಳೆಯೊಳಗ ಹೊಂಟಾನ ಈತ ? ಯಾರ ಚಿತ್ರ ಇದು ?"

"ಇದು", ನಕ್ಕು ಹೇಳಿದಳು ಸಹನಾ, "ನಿನ್ನ ಪ್ರಕಾರ ಹೇಳಬೇಕಂದರ ಒಬ್ಬ ಹುಚ್ಚನ ಚಿತ್ರ."

"ಅಂದರs ? ತಿಳೀಲಿಲ್ಲ ನನಗ."

"ನೆಟ್ಟಗ ನೋಡು. ಅವನ ಕಣ್ಣೊಳಗ ಏನರೆ ಕಾಣಸ್ತದೇನು ನೋಡು."

–ಸರೋಜ ಚಿತ್ರವನ್ನು ತಿರುಗಿಸಿ ತಿರುಗಿಸಿ ನೋಡುತ್ತಿದ್ದಾಗ ಮಜಾ ಅನಿಸಿತು. ಯಾವುದೋ ಎತ್ತರದಿಂದೆಂಬಂತೆ ಅವಳನ್ನೆ ನೋಡುತ್ತ ಕೂತಳು ಸಹನಾ.

"ನನಗೇನೂ ತಿಳೀವಲ್ಲದು. ಆದರ ಒಟ್ಟಿನ ಮ್ಯಾಲ ಭಾಳ ದುಃಖಿ ಇದ್ದಾನ, ಹಿಂದಿನದೇನೋ ನೆನಿಸಿಗೋತ ಹೊರಟಾನ ಅನಸ್ತದ, ಹೌದೇನು ?"

"ಕರೆಕ್ಟ್. ಅವನ ಸುದ್ದಿ ಎಲ್ಲಾ ಇನ್ನೊಮ್ಮೆ ಹೇಳತೀನಿ. ಈಗ ನನಗ ಚಿತ್ರಾ ತಗೀಬೇಕು ಅನಸಲಿಕ್ಹತ್ತೇದ. ನನಗ ತ್ರಾಸು ಕೊಡಬ್ಯಾಡ. ಹ್ಞಾ, ಇನ್ನಮ್ಯಾಲ ದಿನಾ ಸಂಜೀನ್ಯಾಗ ಒಂದು ತಾಸು ಅಷ್ಟs ನನ್ನ ಮಾತಾಡಸು. ನಾ ಇದನ್ನ ಹಗಲೂ ರಾತ್ರಿ ಕೂತು ಮುಗಸ್ತೀನಿ."

"ತಿಳೀತು. ನಾ ಇನ್ನ ಖಾಲಿ ಮಾತಾಡಿ ನಿನಗ ತ್ರಾಸು ಕೊಡುದಿಲ್ಲ. ಮಾರಾಯಳs ಆದರ ಒಂದು ಮಾತು : ನೀ ಇನ್ನೊಂದು ಚಿತ್ರಾ ತಗಿಯೋ ಬದಲು ಮಳೆಯೊಳಗ ತೊಯ್ಸಿಗೋತ ಹೊಂಟಾನಲಾ ಈ ಮನಷ್ಯಾನ ಚಿತ್ರಾನೇ ಯಾಕ ಕಳಿಸಬಾರದೂ ಅಂತೀನಿ. ನಿನಗ ಖಾತ್ರಿ ಫರ್ಸ್ಟ್ ಪ್ರೈಜ್ ಸಿಗತದ ನೋಡು."

"ಛೇ ಬ್ಯಾಡ, ಸರೋಜ. ಈ ಚಿತ್ರಾ ನಾ ತಗದು ಭಾಳ ದಿವಸಾತು. ಆಗಿನಿಂದಲೂ ನನ್ನ ಮನಸಿಗೆ ಸಮಾಧಾನ ಇಲ್ಲ. ಈಗ ಇದನ್ನ ಅಲ್ಲಲ್ಲೆ ಟಚ್ ಮಾಡಿ ಇದಕ್ಕೊಂದು ಹೊಸಾ ರೂಪ ಕೊಡಬೇಕೆಂತೀನಿ. ನನ್ನ ಮನಸ್ಸಿನ್ಯಾಗ ಈಗ ಕಲ್ಪನಾ ಬಂಧಾಂಗನs ಇದಕ್ಕ ಪ್ರತ್ಯಕ್ಷ ರೂಪ ಕೊಡೋದು ಸಾಧ್ಯ ಆತಂದ್ರ ಇದು ಈಗಿನಕಿಂತಾ ಛೆಂದ ಆಗತದ, ನೀನs ನೋಡೀಯಂತ.'

'ನೋಡು ಸಹನಾ, ಸ್ಪಷ್ಟ ಹೇಳತೀನಂತ ಕೆಟ್ಟನಿಸಿಗೋಬ್ಯಾಡ. ಈ ಚಿತ್ರ ಇದ್ಧಾಂಗನs ಛಲೋ ಅದ. ಇದನ್ನ ಬದಲಿ ಮಾಡಿದರ ಕೆಟ್ಟುಹೋಗಬಹುದೇನೋ ಅನಸತದ.'

"ಅದನ್ನೀಗ ಹೇಳಬ್ಯಾಡ. ಆದಮ್ಯಾಲ ನೋಡಿ ಹೇಳು."

"ನಿನಗ್ಯಾರು ಹೇಳಬೇಕು ? ಬೇಕಾದ್ದು ಮಾಡು. ನನ್ನ ಅಡಿಗೀಗೆ ಹೊತ್ತಾತು."

*

*

*

"ಒಳಗ ಬರ್ಲೇನು, ಸಹನಾ ? ಸಂಜಿ ಆಗೇದ. ಈಗ ಬರಲಿಕ್ಕೆ ಅಡ್ಡಿ ಇಲ್ಲಂತ ಹೇಳಿದ್ದಿ."

"ಓ, ಬಾರs ಬಾ. ನಿನ್ನ ಮನ್ಯಾಗ ನಿನಗ ಪರವಾನಿಗಿ ಬೇಕೇನು ?" –ಬ್ರಷ್ ಕೆಳಗಿಟ್ಟು ಹೇಳಿದಳು ಸಹನಾ.

"ಎಲ್ಲೀಗೆ ಬಂತು ನಿನ್ನ ಚಿತ್ರ ? ಛೇ, ಇದೇನು ಮಾಡಿದಿ ಸಹನಾ ? ನಿನ್ನೆ ನೋಡಿದಾಗ ಈ ಚಿತ್ರದಾಗಿನ ಮನುಷ್ಯ ಪೂರಾ ತೋಯಿಸಿಗೊಂಡಿದ್ದ. ಈಗ ಅವನ ಶರ್ಟು ಒಣಗೇದ, ಇಸ್ತ್ರೀ ಮಾಡಿಧಾಂಗ ಕಾಣಸ್ತದ. ಅಲ್ಲಾ, ನೀ ಏನು ನಡಸೀ ಒಟ್ಟಿನ ಮ್ಯಾಲೆ ?"

'ನಾ ಏನು ನಡಸೀನಿ ಕಾಣವಲ್ಲದೇನು ನಿನಗ ? ಈ ಚಿತ್ರದ ಸೆಟಿಂಗ್ ಎಲ್ಲಾ ಹಿಂಗೇ ಇಟ್ಟು ಮಳೆ ಮಾತ್ರ ತಗದಬಿಡಬೇಕಂತ ಮಾಡೀನಿ. ಮಳೆ ಬಂದದ್ದು ಒಂದೂ ಗುರುತು ಇಲ್ಲಧಾಂಗ ಸಣ್ಣದಾಗಿ ಹೂ ಬಿಸಲು ಬಿದ್ದಾಂಗ ಮಾಡಬೇಕಾಗೇದ ಈ ಚಿತ್ರಾ."

"ಹಾಂಗಾರ ಬ್ಯಾರೇ ಚಿತ್ರ ತಗೀಬೇಕಾಗಿತ್ತು ?"

"ನೋಡು ಸರೋಜ, ಈ ಚಿತ್ರದಾಗಿನ ವ್ಯಕ್ತಿಯ ಮುಖದ ಮ್ಯಾಲೆ ಈ ಭಾವನಾ ಮೂಡಿಸಲಿಕ್ಕೆ ನಾ ಹಿಂದ ಭಾಳ ತ್ರಾಸ ತಗೊಂಡೀನಿ. ಅಂಥಾದು ಮತ್ತೊಮ್ಮೆ ಮಾಡೋದು ಸಾಧ್ಯಿಲ್ಲ ನನಗ. ಅಷ್ಟಲ್ಲದ ಇದರ ಹಿನ್ನೆಲೆ– ಅಂದರ ಬ್ಯಾಕ್‌ಗ್ರೌಂಡು ಭಾಳ ಮಹತ್ವದ್ದದ. ಈ ಒಂಟಿ ಗಿಡಾ, ರಸ್ತೇದಾಗಿನ ಕಲ್ಲು, ದೂರದಾಗಿನ ಗುಡ್ಡ, ಒಂದೊಂದಕ್ಕೂ ಒಂದೊಂದು ತಿಂಗಳು ಕೂತು ಬಣ್ಣಾ ಕೊಟ್ಟೇನಿ. ಅದನ್ನ ಬಿಟ್ಟು ಬ್ಯಾರೇ ಚಿತ್ರ ತಗದರ ಅದು ಇಷ್ಟು ಜೀವಂತ ಕಾಣಿಸಲಾರದು."

"ಏನೋ ಎಂತೋ ನನಗೇನ ತಿಳಿಯೂದಿಲ್ಲ. ಅದೇನರೆ ಇರಲಿ ಸಹನಾ, ಆ ಮನುಷ್ಯಾನ ಸುದ್ದಿ ಹೇಳ್ತೀನಿ ಅಂದಿದ್ದಿ ನಿನ್ನೆ, ಈಗ ಹೇಳಲಾ, ನನಗೂ ಕೆಲಸ ಇಲ್ಲ,

ಇವರು ಆಫೀಸಿನಿಂದ ಬರೂತನಕಾ.'

–ಸಹನಾನ ಬ್ರಷ್ ಚಿತ್ರದ ಮೇಲಾಡುತ್ತಿತ್ತು, ಬಟ್ಟೆ ತೊಯ್ದಿರುವ ಗುರುತನ್ನು ಅಳಿಸಿಹಾಕಲು ಯತ್ನಿಸುತ್ತ. ಯೋಚಿಸಿದಷ್ಟೇನೂ ಕಠಿಣವೆನಿಸಿರಲಿಲ್ಲ ಈ ಕೆಲಸ. ಒಮ್ಮೆ ಬಣ್ಣ ಹಾಕಿದ್ದರ ಮೇಲೆಯೇ ಮತ್ತೊಮ್ಮೆ ಬಣ್ಣ ಹಾಕಿದರೂ, ಹಾಗೆಂದು ನೋಡಿದವರಿಗೆ ತಿಳಿಯುವಂತಿರಲಿಲ್ಲ. ಹೀಗೇ ಮುಂದುವರಿದರೆ ಎಂಟೇ ದಿನಗಳಲ್ಲಿ ಪೂರಾ ಮುಗಿಯಬಹುದು. ಈ ಚಿತ್ರದಲ್ಲಿನ ವ್ಯಕ್ತಿ ಮಳೆಯಲ್ಲಿ ನೆನೆದ ಗುರುತೊಂದೂ ಉಳಿಯದೆ ಎಳೆಬಿಸಿಲಲ್ಲಿ ವಾಕಿಂಗ್ ಹೊರಟಿರುವಂತೆ ಕಾಣಬಹುದು. ತನ್ನ ಪ್ರೊಫೆಸರ್ ಮೆಚ್ಚುವುದು ನಿಶ್ಚಿತ....

"ಯಾರು ಸಹನಾ ಈ ಮನುಷ್ಯ ?"

ಇವನ್ಯಾರೋ ಮಹತ್ವದ ವ್ಯಕ್ತಿಯೆಂದುಕೊಂಡಿರುವಂತಿದೆ ಸರೋಜ. ಒಂದೇ ವರ್ಷದ ಹಿಂದೆ ಮುಂಬಯಿಯ ಜನನಿಬಿಡ ಬೀದಿಗಳಲ್ಲಿ ವ್ಯರ್ಥ ಹಗಲು-ರಾತ್ರಿ ಅಲೆಯುತ್ತಿದ್ದ ಸಾಮಾನ್ಯ ತಲೆತಿರುಕ ಇವನೆಂದು ಅವಳಿಗೆ ತಿಳಿದರೆ, 'ಛೆ, ಇಂಥವನ ಚಿತ್ರ ತೆಗೆಯುವುದೆ ನೀನು ?' ಅನ್ನಬಹುದು ಆಕೆ, ತಾನೇಕೆ ತೆಗೆದೆ ಇಂಥವನ ಚಿತ್ರ?

"ಹೇಳಿದೆನಲ್ಲ ಸರೋಜ, ಅವನೊಬ್ಬ ಹುಚ್ಚ."

"ಈ ಜಗತ್ತಿನ್ಯಾಗ ಒಂದ ರೀತಿಯಿಂದ ಎಲ್ಲಾರೂ ಹುಚ್ಚರೇ ಅಂದಿದ್ದಿ ಮೊನ್ನೆ. ಈತ ಎಂಥಾ ಹುಚ್ಚ ? ನಿನಗೆಲ್ಲೆ ಗಂಟುಬಿದ್ದ ?"

"ನೀ ಸುಳ್ಳೇ ಏನರೆ ಅನಬ್ಯಾಡ. ಹಾಂಗ ಕೇಳಿದರ ಆತ ಹುಚ್ಚನs ಅಲ್ಲ. ನಮ್ಮ ಕಾಕಾನ ಕಡೆ ಬಂದಿದ್ದ ಒಮ್ಮೆ ಹಿಂದಕ. ತನ್ನ ವಿಚಿತ್ರ ಜಡ್ಡಿನ ವಿಷಯ ಹೇಳಿ, ಔಷಧ ಕೊಡ್ರಿ ಅಂದ."

"ಅಂದ್ರ ಖರೇನs ಹುಚ್ಚನ ಚಿತ್ರೇನಿದು ?"

"ಅನ್ನು ಬೇಕಾದರ. ಅವನ ಜಡ್ಡು ಅಂದರ– ಅವನಿಗೆ ಸದಾ ಮಳೆಯೊಳಗ ತೊಯಿಸಿಗೋತ ತಿರುಗಾಡಬೇಕು ಅನಸತಿತ್ತಂತ. ಅದು ತಪ್ಪು, ಅದರಿಂದ ತ್ರಾಸ ಆಗತದಂತ ಗೊತ್ತಿದ್ದರೂ ಮಳೆ ಬಂದ ಕೂಡಲೇ ತನಗs ಗೊತ್ತಾಗಧಾಂಗ ಹೊರಟಬಿಡತಿದ್ದನಂತ. ಒಮ್ಮೊಮ್ಮೆ ಹಿಂಗ ಎರಡೆರಡು ದಿವಸ ತೊಯಿಸಿಗೊಂಡು ಆಮ್ಯಾಲ ಜಡ್ಡು ಬಂದು ಮಲಗತಿದ್ದನಂತ. ಆದರ ಮತ್ತ ಮಳೆ ಸುರು ಆದಾಗ ಎದ್ದು ಹೊರಗ ನಡೀತಿದ್ದನಂತ. ನಮ್ಮ ಕಾಕಾ ಬೇಕಾದಷ್ಟು ಮಾನಸಿಕ ರೋಗಕ್ಕ ಔಷಧ ಕೊಟ್ಟಾರ. ಅದರ ಈ ಕೇಸು ಮಾತ್ರ ಅಗದೀ ವಿಚಿತ್ರ ಇತ್ತು."

"ಮುಂದೇನಾತು ?"

'ನಮ್ಮ ಕಾಕಾ ಅವನಿಗೆ ಆರು ತಿಂಗಳ ಅವಧಿ ಕೊಟ್ಟರು. ದಿನಾ ಸಂಜೀನ್ಯಾಗ

ಎರಡು ತಾಸು ತಮ್ಮ ಭೆಟ್ಟಿಗೆ ಬರಬೇಕಂತ ಹೇಳಿದ್ರು. ಆಮ್ಯಾಲ ಆತ ದಿನಾ ನಮ್ಮನಿಗೆ ಬರಲಿಕ್ಹತ್ತಿದ. ಹಾಂಗ ಖರೇ ಜಂಟಲ್‌ಮನ್ ಇದ್ದ ಆತ. ಗ್ರ್ಯಾಜುಯೇಟ್ ಇದ್ದ. ಛಲೋ ಕೆಲಸನೂ ಇತ್ತು. ಆತಗ ಹುಚ್ಚು ಹಿಡಿದದಂತ ಮಂದಿ ಅಂತಿದ್ರು. ನಮ್ಮ ಕಾಕಾ ಮಾತ್ರ ಅವನ ಜೋಡಿ ಅಗದೀ ಕೇರ್‌ಫುಲ್ ಆಗಿ ಮಾತಾಡತಿದ್ರು ಅವನ ಮನಸಿನ್ಯಾಗ ಸದಾ ಕಾಡುವ ಹಳೇ ನೆನಪು ಕಡಿಮಿ ಮಾಡಲಿಕ್ಕೆ ಪ್ರಯತ್ನ ನಡೆಸಿದ್ರು. ನಾನೂ ಅವರಿಗೆ ಸಹಾಯ ಮಾಡತಿದ್ದೆ.''

''ನೀನು ?''

''ಹ್ಞೂ, ಇಷ್ಟ್ಯಾಕ ಆಶ್ಚರ್ಯ ? ಮೆಂಟಲ್ ಪೇಶಂಟ್ಸ್ ಬಗ್ಗೆ ನನಗ ಆಸ್ಥಾ ಇದ್ದದ್ದು ನಿನಗ ಗೊತ್ತದ. ನನ್ನ ಕಾಲೇಜಿನ ಕೆಲಸಾ ಮುಗಿಸಿ ಉಳಿದ ಹೊತ್ತಿನ್ಯಾಗೆಲ್ಲಾ ನಾ ಕಾಕಾ ಅವರ ಸೈಕಿಯಾಟ್ರಿಕ್ ಕೆಲಸದೊಳಗ ಸಹಾಯ ಮಾಡೋದರಾಗ ಇರ್ತಿನಿ. ಈ ಕೇಸಿನ್ಯಾಗಂತೂ ನನಗ ಮೊದಲಿನಿಂದ್ಲೂ ಇಂಟರೆಸ್ಟ್ ಅನಸತಿತ್ತು. ದಿನಾ ಅವನ ಜೋಡಿ ಮಾತಾಡಿ ಅವನಿಗೆ ಸಮಾಧಾನ ಹೇಳೂದು, ಏನರೆ ಪುಸ್ತಕಾ ಓದ್ಲಿಕ್ಕೆ ಕೊಡೂದು, ಓದಿದ್ದರ ಬಗ್ಗೆ ಚರ್ಚಾ ಮಾಡೂದು– ಇಂಥಾದ್ದೆಲ್ಲಾ ನಾ ಮಾಡತಿದ್ದೆ.''

''ಈ ಚಿತ್ರಾ ಆವಾಗ ತಗದದ್ದೇನು ?''

''ಹ್ಞೂ, ಮೊದಲ್ನೇ ಸರೆ ಆತ ನಮ್ಮ ಮನಿಗೆ ಬಂದಾಗ ಮಳೆಗಾಲ. ಮುಂಬಯಿ ಮಳೆ ನಿನಗ ಗೊತ್ತದs ಅಲ್ಲ, ಧೋ-ಧೋ ಸುರೀತಿತ್ತು. ನಾ ನನ್ನ ರೂಮಿನ್ಯಾಗ ನಿಂತು ಹೊರಗಿನ ರಸ್ತೆ ನೋಡುತಿದ್ದೆ. ಆತ ಬರತಾ ಇದ್ದ.... ಪೂರಾ ಒದ್ದೆಯಾಗಿದ್ರೂ ಏನೂ ಆಗಿಲ್ಲ ಅನ್ನವರ್ಹಾಂಗ ಸಾವಕಾಶ ನಡಕೋತ ಹೊರಟಿದ್ದ. ಅವನನ್ನ ನೋಡಿದರ ಮಳೆಯೊಳಗ ಹೊರಟೇನಿ ಅನ್ನೋ ಜ್ಞಾನನೇ ಇದ್ಹಾಂಗಿರಲಿಲ್ಲ. ಆ ಚಿತ್ರ ಒಮ್ಮೆಲೇ ನನ್ನ ಒಳಗ-ಒಳಗ ಹೋಯ್ತು.''

''ಕಡೀಕೆ ಅವನ ಜಡ್ಡು ನೆಟ್ಟಗಾತೇನು ?''

''ಓ, ಒಂದು ವರ್ಷ ಸತತ ಪ್ರಯತ್ನ ಮಾಡಿದ್ವಿ. ಅದನ್ನ ನಾಳೆ ಹೇಳಿದರ ಆದೀತಲ್ಲ ? ನಿನ್ನ ಯಜಮಾನರು ಬಂಧಾಂಗ ಕಾಣಸ್ತದ ನೋಡು.''

'ಯಜಮಾನರು' ಶಬ್ದವನ್ನುಚ್ಚರಿಸುವಾಗ ತನ್ನ ಧ್ವನಿಯಲ್ಲಿ ವ್ಯಕ್ತವಾದ ವ್ಯಂಗ್ಯವನ್ನು ಸರೋಜ ಗಮನಿಸಲಿಲ್ಲವೆಂಬುದು ಅವಳು ತಟ್ಟನೆ ಎದ್ದು ಓಡಿದ್ದರ ಮೇಲಿಂದಲೇ ತಿಳಿಯಿತು ಸಹನಾಗೆ. ಆಕೆ ನಕ್ಕು ತನ್ನ ಕೆಲಸ ಮುಂದುವರಿಸಿದಳು.

*

*

ಇಂದು ಸಾಕಷ್ಟು ಬಿಸಿಲು ಬಿದ್ದಿದ್ದರಿಂದಲೋ ಏನೋ, ಚಿತ್ರದ ಕೆಲಸದಲ್ಲಿ ಉತ್ಸಾಹವೆನಿಸತೊಡಗಿದೆ. ಇದನ್ನು ನೋಡಿದರೆ ಒಮ್ಮೆ ತೆಗೆದ ಚಿತ್ರವನ್ನೇ ರಿಪೇರಿ ಮಾಡಿದ ಹಾಗೆ ಸ್ವಲ್ಪವೂ ಅನಿಸುವುದಿಲ್ಲ. ಅವನ ಬಟ್ಟೆಯಂತೂ ಒಮ್ಮೆ ತೊಯ್ದಿತ್ತೆಂಬುದರ ಗುರುತೇ ಇಲ್ಲ. ಇದಕ್ಕಾಗಿ ರಾತ್ರಿಯಿಡೀ ಕಣ್ಣಲ್ಲಿ ಕಣ್ಣಿಟ್ಟು ಶ್ರಮಿಸಬೇಕಾಯಿತು. ಈ ಚಿತ್ರವನ್ನು ಹಿಂದೆ ಆಯಿಲ್‌ಪೇಂಟ್ ಮಾಡದೆ ವಾಟರ್‌ಪೇಂಟ್ ಮಾಡಿದ್ದು ಈಗ ಎಷ್ಟು ಅನುಕೂಲವಾಯಿತು ! ಇನ್ನು ಹಿನ್ನೆಲೆಯಲ್ಲಿನ ಗಿಡ-ಗುಡ್ಡ-ರಸ್ತೆಯ ಮೇಲಿನ ಮಳೆಯ ಗುರುತು ಅಳಿಸಿ, ಮುಗಿಲಲ್ಲೊಬ್ಬ ಸೂರ್ಯನನ್ನು ಮೂಡಿಸಿ, ಮತ್ತೆ ಸ್ವಲ್ಪ ನೆರಳು-ಬೆಳಕನ್ನು ಚಿತ್ರಿಸಿದರಾಯಿತು. ಕೊನೆಗೆ ಮುಖ-ತಲೆಯನ್ನು ಸ್ವಲ್ಪ ಟಚ್ ಮಾಡಬಹುದು....

—"ಏನಂತೀರಿ ಆರ್ಟಿಸ್ಟ್ ಬಾಯಿಯವರು, ಊಟಾ ಸುದ್ಧಾ ನೆಟ್ಟಗ ಮಾಡಲಿಲ್ಲ ಇವತ್ತ. ಹಿಂಗಾದರ ನಿನ್ನ ಪ್ರಕೃತಿ ಕೆಟ್ಟೀತು ಅಂತ ಅಂಜಿಕಿ ನನಗ... ಅರೆರೆ, ಎಷ್ಟು ಪ್ರೋಗ್ರೇಸ್ ಆಗೇದಲ್ಲ ಸಹನಾ ನಿನ್ನ ಚಿತ್ರದಾಗ ! ಈ ಮನಷ್ಯಾನ ತಲಿ ಒಂದು ಬಿಟ್ಟು ಉಳದದ್ದೆಲ್ಲಾ ಬದಲಾಗಿ ಬಿಟ್ಟಡಿದ. ಇದೆಂಥಾ ಜಾದೂ ಅದ ನಿನ್ನ ಕೈಯೊಳಗ ! ನಿನ್ನ ಪ್ಲ್ಯಾನು ಕೇಳಿದಾಗ ಇಷ್ಟು ಇದು ನ್ಯಾಚರಲ್ ಆಗಬಹುದು ಅನಿಸಿದ್ದಿಲ್ಲ ನನಗ. ಖರೇನ ಸಹನಾ, ಎಂಥಾದೋ ಹೊಸಾ ಜೀವ ತುಂಬಿಧಾಂಗ ಅನಸ್ತದ ಅವನ ಮೈಯೊಳಗ."

"ನಿನ್ನ ಗಂಡ ನೀ ಸಿಟ್ಟಿಗೆದ್ದಾಗ ನಿನ್ನ ಸುಳ್ಳ ಹೊಗಳೂಹಾಂಗ ನನ್ನ ಹೊಗಳಬ್ಯಾಡ ಸರೋಜ, ನಿ ಹೇಳಿದಷ್ಟು ಇದು ಛಲೋ ಆಗಿತ್ತಂದ್ರ ನನಗ ಈಗ ಒಂದು ಕಪ್ ಕಾಫಿ ಮಾಡಿಕೊಡು ನೋಡೋಣ. ಯಾಕೋ ಕೆಟ್ಟ ತಲೆನೋವು ಬಂದದ."

"ಓ ಯೆಸ್, ಆದರ ಆಮ್ಯಾಲ ನನಗ ನೀನು ಅವತ್ತ ಅರ್ಧಾಕ್ಕ ಬಿಟ್ಟ ಹುಚ್ಚನ ಕಥಿ ಹೇಳಬೇಕು."

"ನೀ ಅವನಿಗೆ ಹುಚ್ಚ ಅಂತ ಹೆಸರೇ ಇಟ್ಟುಬಿಟ್ಟೇನು ? ಒಳ್ಳೇದು, ಹೇಳತೀನಂತ ಹೋಗು."

'ಹುಚ್ಚನ ಕಥೆ' ಅಂದಿದ್ದಳು ಸರೋಜ. ಅವನು ಹುಚ್ಚನೇ ? ಅವನು ಏನು ಎಂತು ಎಂಬುದು ಡಾಕ್ಟರ್ ದೇಶಮುಖರಂಥವರಿಗೂ ಗೊತ್ತಾಗಿರಲಿಲ್ಲ. ಅವನೊಬ್ಬ ಮಾನಸಿಕ ರೋಗಿ ಅಷ್ಟೆ ಅವರ ಪಾಲಿಗೆ.

—ತನ್ನ ಪಾಲಿಗೆ ?

ತನ್ನ ಪಾಲಿಗೂ ಅಷ್ಟೆ. ಏನೋ ಕುತೂಹಲವೆನಿಸಿ ಅವನ ವಿಷಯದಲ್ಲಿ ಆಸಕ್ತಿ

ವಹಿಸಿದ್ದಳು ತಾನು. ಅವನು ಎಷ್ಟು ಸೊಗಸಾಗಿ ಮಾತಾಡುತ್ತಿದ್ದ ! ಅವನ ಕತೆ ಅವನ ಬಾಯಿಂದ ಕೇಳುತ್ತಿದ್ದಾಗ ಮೈ ಜುಮ್ಮೆನ್ನುತ್ತಿತ್ತು. ದೇಶ ವಿಭಜನೆ ಕಾಲದಲ್ಲಿ ಹತ್ತು ವರ್ಷದ ಹುಡುಗನಾಗಿದ್ದ ಆತ ಅನೇಕ ನಿರಾಶ್ರಿತರೊಂದಿಗೆ ಕರಾಚಿಯಿಂದ ಓಡಿ ಬಂದಿದ್ದನಂತೆ. ಚಿಕ್ಕಂದಿನಿಂದಲೂ ಏನೇನೋ ಕಷ್ಟ ಅನುಭವಿಸಿ ಬೆಳೆದಿದ್ದ, ಯಾರ ಪ್ರೀತಿಯನ್ನೂ ಅನುಭವಿಸದೆ ಬದುಕಿದ್ದ, ಪ್ರೀತಿಗಾಗಿ ಹಸಿದಿದ್ದ ಜೀವ–ಎನಿಸಿತ್ತು ಮೊದಲಲ್ಲಿ. ಆದರೆ....ಹ್ಞು, ಯಾರಿಗೆ ಗೊತ್ತಿತ್ತು ಅವನ ರಾಮಾಯಣ !

"ತಗೋ ಕಾಫಿ, ಕುಡಿ. ಹೇಳು ಈಗ."

ದಿನಾ ಸಂಜೆ ಅವನಿಗಾಗಿ ತಾನು ಕಾಯುತ್ತಿದ್ದುದು, ಅವನೊಂದಿಗೆ ಏನೆಲ್ಲ ಹರಟುತ್ತಿದ್ದುದು, ಅವನಿಗಾಗಿ ಸತತ ಒಂದು ವರ್ಷ ಶ್ರಮಿಸಿದ್ದು, ಒದ್ದಾಡಿದ್ದು ನೆನಪಾಯಿತು ಸಹನಾಗೆ.

"ನಿಮ್ಮ ಪ್ರಯತ್ನದಿಂದ ಅವನಲ್ಲಿ ಏನರೆ ಗುಣಾ ಕಾಣಿಸಿತೇನು ? ದಿನಾ ಏನು ಮಾತಾಡತಿದ್ದಿ ಅವನ ಜೋಡಿ ?"

"ಅವನ ಜೋಡಿ ನಾ ಅಂತೂ ಮಾತಾಡಲಾರದ ವಿಷಯನೇ ಉಳೀಲಿಲ್ಲ. ಅವನ ಭೂತಕಾಲ ಭಾಳ ದುಃಖದ್ದಿತ್ತು ಅಂತ ಗೊತ್ತಾದ ಮ್ಯಾಲೆ ಅವನಿಗೆ ಏನು ಔಷಧ ಕೊಡಬೇಕೆನ್ನೂದು ಡಾಕ್ಟರು ಠರಾಯಿಸಿದರು. ಮೂರೇ ತಿಂಗಳದಾಗ ಎಷ್ಟು ಸುಧಾರಿಸಿದಾ ಅಂತೀ. 'ನಾ ಈಗ ಹೊಸಾ ಮನುಷ್ಯ ಆಗೀನಿ. ಇದೆಲ್ಲಾ ನಿಮ್ಮ ಸಹವಾಸದ ಫಲ' ಅಂತಿದ್ದ ನಮಗ. ಅವನ ದೈಹಿಕ-ಮಾನಸಿಕ ಸ್ಥಿತಿ ದಿನಾ ದಿನಾ ಸುಧ ರಸತಾ ಇದ್ದದ್ದು ನೋಡೂದರಾಗ ನನಗಂತೂ ಒಂದು creative pleasure ಅನಸತಿತ್ತು."

"ಅಂಥಾ ಮಹಾದುಃಖ ಅನುಭವಿಸಿದ್ನೇನು ಆತ ?"

"ಹ್ಞೂ, ಅದರಾಗ ಅರ್ಧಾ ವಿಧಿ ತಂದದ್ದು, ಅರ್ಧಾ ಅವನೇ ತಂದುಕೊಂಡದ್ದು ಅನ್ನು. ಅವನ ತಲಿ ಅಂದರ ಡೆವಿಲ್ಸ್ ವರ್ಕ್‌ಶಾಪ್ ನೋಡು. ನೂರಾಎಂಟು ಭಾನಗಡಿ. ವಂಡರ್‌ಫುಲ್ ಕಥೆ ಅವನದು."

"ಮುಂದ ಮಳೆಯೊಳಗ ತೊಯ್ಸಿಗೊಳ್ಳೋದು ಬಿಟ್ಟೇಬಿಟ್ನೇನು ಆತ ?"

"ಹಾಂಗ ಒಮ್ಮೆಲೇ ಎಲ್ಲಾ ಬಿಡಲಿಲ್ಲ. ಮೊದಮೊದ್ಲು ನಾವು ಹೇಳಿದ್ದೆಲ್ಲಾ ಲಕ್ಷಗೊಟ್ಟು ಕೇಳತಿದ್ದ. ನಮ್ಮ ಜೋಡಿ ಛೆಂದಾಗಿ ಹರಟೀ ಹೊಡೀತಿದ್ದ. ನಮ್ಮಲ್ಲೆ ಕೆಲವು ಸರೆ ಊಟಕ್ಕೂ ಬರ್ತಿದ್ದ. ಆದರ ಅಕಸ್ಮಾತ್ ಮಳೆ ಸುರು ಆದರ ಅವನ ಮುಖಾನೇ ಒಂದು ಥರಾ ಆಗಿಬಿಡತಿತ್ತು."

"ಅದು ಹಂಗ್ಯಾಕ ಆಗತಿತ್ತು ಸಹನಾ ? ಮಳೆ ಬಂದಾಗ ಮಣ್ಣಿಗೆ ಒಂದು

ನಮೂನೆ ವಾಸನೆ ಬರ್‍ತದಲ್ಲಾ, ಆದ್ದರಿಂದ ಮನಷ್ಯಾಗ ಹಳೇ ನೆನಪು ಆಗತದಂತ ಒಮ್ಮೆ ನೀ ಹೇಳಿದ್ದಿ ಹೈಸ್ಕೂಲಿನ್ಯಾಗಿದ್ದಾಗ. ಅದಕ್ಕೂ ಇದಕ್ಕೂ ಏನರೆ ಸಂಬಂಧ ಅದs ಏನು ?''

``ನಿನ್ನ ನೆನಪಿನ ಶಕ್ತಿ ಪ್ರಶಂಸನೀಯ ಸರೋಜ. ನಾ ಹೇಳಿದ್ದು ನನ್ನ ಸ್ವತಃದ ಅನುಭವ ಅಲ್ಲ, ಸೈಕಾಲಾಜಿಯ ಒಂದು ಥಿಯರಿ. ಅವನಿಗೆ ಹಾಂಗಾಗಲಿಕ್ಕೆ ಇದೂ ಕಾರಣ ಇರಬಹುದು. ಆದರ ಅವನ ಮಾನಸಿಕ ವಿಕೃತಿಯ ಕಾರಣಕ್ಕಿಂತಾ ನಾನು ಅದರ ಚಿಕಿತ್ಸಾದ ಕಡೆ ಹೆಚ್ಚು ಲಕ್ಷ ಕೊಟ್ಟಿದ್ದೆ.''

``ಅಂದರ ಈ ಕೇಸಿನ್ಯಾಗ ನೀನs ಡಾಕ್ಟರ್ ಆಗಿದ್ದಿ ಅಂಥಾಂಗಾತು.''

``ಒಂದು ರೀತಿಯಿಂದ. ಯಾಕಂದರ ಅವನಿಗೆ ಪೂರಾ ನೆಟ್ಟಗಾಗೋ ತನಕ ಸ್ವಲ್ಪೂ ಸಮಾಧಾನ ಇರ್‍ಲಿಲ್ಲ. ನಾ ನನ್ನ ಕಾಲೇಜಿನ ಕೆಲಸಾ ಸುದ್ಧಾ ಬಿಟ್ಟು ಎಷ್ಟೋ ಸರೆ ಅವನ ಜೋಡಿ ಕೂತು ವ್ಯಾಳ್ಯಾ ಕಳದೀನಿ. ಮುಂದ ಸ್ವಲ್ಪ ದಿವಸಕ್ಕ ಅವನಿಗೆ ಪೂರಾ ನೆಟ್ಟಗಾಗೋ ಲಕ್ಷಣ ಕಾಣಿಸಿದವು. ಮಳೆ ಬಂದಾಗ ಈಗ ಆತ ಶಾಂತನಾಗೇ ಇರ್‍ತಿದ್ದ. ಮೊದಲಿನ್ಹಾಂಗ ಎದ್ದು ಹೊರಗ ಹೋಗತಿರ್‍ಲಿಲ್ಲ. ಕೂತಲ್ಲೇ ಚಡಪಡಿಸ್ತಾನೂ ಇರ್‍ಲಿಲ್ಲ. ಆರಾಮ ಕೂತು ಏನೇನರೆ ಮಾತಾಡತಿದ್ದ.''

``ಮಜಾ ಅದ ಬಿಡು ಅಂತೂ. ಹೊತ್ತಾತು. ನೀ ಅನಕಾತ ನಿನ್ನ ಚಿತ್ರಾ ತಗಿಯೋ ಕೆಲಸಾ ಮಾಡು. ನಾ ಹೋಗಿ ಅನ್ನಕ್ಕ ಎಸರಿಡತೀನಿ.''

*

*

*

ಹದಿನೈದು ದಿನದ ಸತತ ಶ್ರಮದಿಂದಾಗಿ ಈ ಚಿತ್ರ ಇಂದು ಪೂರ್ಣತೆಯ ಹಂತ ಮುಟ್ಟಿದೆ. ಮಳೆ ಹನಿಯ ಗುರುತು ಒಂದೂ ಉಳಿದಿಲ್ಲ. ತೊಯ್ದಂತೆ ಕಾಣುತ್ತಿದ್ದ ಒಂದೇ ಒಂದು ಗಿಡ ಈಗ ಬಿಸಿಲು ಹೊದ್ದು ನಿಂತಿದೆ. ರಸ್ತೆಯಲ್ಲಿನ ಕೆಸರು ನೀರು ಸಹ ಪತ್ತೆಯಿಲ್ಲದಂತಾಗಿದೆ. ಬಣ್ಣ ಸ್ವಲ್ಪ ದಪ್ಪನಾಗಿ ಕಾಣುವುದೇ ? ಆದರೂ ಅಡ್ಡಿಯಿಲ್ಲ. ಗುಡ್ಡದ ಮೇಲೆ ಈ ಬಿಸಿಲಿನ shade ಬಹಳ ಚೆನ್ನಾಗಿ ಬಂದಿದೆ. ಹಳೆಯ ಚಿತ್ರದಲ್ಲೇ ಇಷ್ಟು ಹೊಲಸಾಟ ಮಾಡಿದೆನೆಂದು ಪ್ರೊಫೆಸರಿಗೆ ತಿಳಿದರೆ ನಕ್ಕಾರು. ಎಂದೂ ಯಾರೂ ಮಾಡಲಾರದ ಹುಚ್ಚು ಕೆಲಸ ; ಆದರೂ ಎಷ್ಟು ಯಶಸ್ವಿ ! ಇದನ್ನು ನೋಡಿದರೆ ಯಾರಿಗೂ ಕಲ್ಪನೆ ಬರಲಾರದು. ಇನ್ನು ಈ ತೊಯ್ದು ಹಾಗಿರುವ ಮುಖ-ತಲೆಯನ್ನಿಷ್ಟು ಒಣಗಿದ ಹಾಗೆ, ಕೂದಲು ಗಾಳಿಗೆ ಹಾರಾಡುತ್ತಿರುವ ಹಾಗೆ ಮಾಡಿಬಿಟ್ಟರೆ ತೀರಿತು, ತನಗೇ ಅದರ ಕಲ್ಪನೆ ಬರಲಾರದು....

ಮೊದಲಲ್ಲಿನ ಬೇಸರ ಈಗಿಲ್ಲ. ಎಲ್ಲವೂ, ಇಡೀ ಬೆಳಗಾವಿ-ಸರೋಜಳ ಪೆದ್ದು ಗಂಡ ಸಹ—ಎಷ್ಟು ಚೆನ್ನಾಗಿ ಕಾಣುತ್ತಿದೆ ! ಅಂದ ಹಾಗೆ ಸರೋಜಳನ್ನು ಕರೆದು ಈ ಚಿತ್ರ ತೋರಿಸಬೇಕು. 'ಕೆಟ್ಟು ಹೋದೀತು' ಅಂದಿದ್ದಳಲ್ಲ, ಈಗ ನೋಡಲಿ. ತಾನು ಕೈ ಹಾಕಿದ ಕೆಲಸ ಎಂದಾದರೂ ಕೆಡುವುದುಂಟೆ ?

"ಏ ಸರೋಜ, ಇಲ್ಲೆ ಬಾ."

"ಮುಗೀತೇನು ನಿನ್ನ ಚಿತ್ರ ?....ಅಬಾಬಾಬಾ, ಇದು ಅದೇ ಚಿತ್ರ ಅಂದರ ನಂಬಲಿಕ್ಕೆ ಆಗೂದಿಲ್ಲ ನೋಡು. ಈ ಚಿತ್ರದ ತುಂಬೆಲ್ಲಾ ಇದ್ದ ಮಳೆಹನಿ ಎಲ್ಲೆ ಮಟಾಮಾಯ ಆದವು ? ಈ ಬಿಸಲು ಎಲ್ಲಿಂದ ಬಂತು ? ಪೂರಾ ಹೊಸ ಮನಷ್ಯಾ ಆಗ್ಯಾನಲ್ಲ ಈತ ? ಏ ಸಹನಾ, ನಿನ್ನ ಏನಂತ ವರ್ಣನಾ ಮಾಡಲಿ ?"

"ಏನೂ ಬ್ಯಾಡ. ಇನ್ನೂ ಮುಗಿಯೂದದ ಈ ಚಿತ್ರ. ಆತನ ಕೂದಲೆಲ್ಲಾ ತೊಯ್ದು ಹ್ಯಾಂಗ ಹಣೆಗೆ ಅಂಟಿಕೊಂಡಾವ ನೋಡು. ಅದನ್ನಷ್ಟು ಗಾಳಿಗೆ ಹಾರ್ಯಾಡೋ ಹಾಂಗ ಮಾಡಬೇಕು."

"ಇಷ್ಟೆಲ್ಲಾ ಮಾಡಿದಾಕೀಗೆ ಅದೆಷ್ಟರ ಮಾತು ? ಅಲ್ಲ ಸಹನಾ, ಇಷ್ಟು ತ್ರಾಸ ತಗೋತೀಯಲ್ಲ ಈ ಚಿತ್ರದ ಸಲುವಾಗಿ ! ಆತ ನಿನ್ನ ಮ್ಯಾಲ ಎಂಥಾ ಇಂಪ್ರೆಶನ್ ಹಾಕ್ಯಾನಲಾ ಅಂತೀನಿ. ಅವನ ಹುಚ್ಚು ನೆಟ್ಟಗ ಮಾಡೋದರಾಗ ನಿನಗ ಹುಚ್ಚು ಹಿಡಿಸಿಬಿಟ್ಟನೇನು ?"

"ಛೆ, ಯಾರೋ ಹಾದಿಹೋಕನ ಸಲುವಾಗಿ ಎಂಥಾ ಮಾತು ! ಆತ ನೆಟ್ಟಗಾಗಿ ತಿರುಗಿ ತನಗ ಕೆಲಸವಾದ ಊರಿಗೆ ಹೋಗಿ ಎಷ್ಟೋ ದಿನಾ ಆಗಿಹೋದವು. ಆಮ್ಯಾಲ ಭೆಟ್ಟಿ ಸುದ್ದಾ ಆಗಿಲ್ಲಾ. ಇಂಥವನ ಸಲುವಾಗಿ ಹುಚ್ಚು ಹಿಡಿಸಿಕೊಳ್ಳಲೇನು ನಾನು ?"

"ಈಗೆಲ್ಲಿರತಾನ ಆತ ? ಮುಂದೇನಾತು ಅವನ ಕಥಿ ?"

"ಆಗೂದೇನು ? ಅವನ ಕಥಿ ಅಲ್ಲಿಗೇ ಮುಗೀತು. ಅವನಿಗೆ ಪೂರ್ಣ ಗುಣಾ ಆತು. ಎಷ್ಟು ಹುರುಪಿನ ಮನುಷ್ಯ ಆತ ! ಒಮ್ಮೆ ನಮ್ಮನ್ನ ಟೀ ಪಾರ್ಟಿಗೆ ಕರೆದಿದ್ದ. ನಾನೂ ಹೋಗಿದ್ದೆ ಡಾಕ್ಟರ್ ಜೋಡಿ. ಅವತ್ತ ಮಳೆಬರತಾ ಇತ್ತು. 'ಮಳೆ ನಿಂತಮ್ಯಾಲ ಹೋಗ್ರಿ, ಸುಮ್ನ ತೊಯಿಸಿಗೋತೀರ್ಯಾಕ ?' ಅಂತ ನಮಗs ಹೇಳಿದ. ನಮ್ಮ ಕಾಕಾಗಂತೂ ತಾವು ಹಿಡಿದ ಕೇಸು Successful ಆದರ ಭಾರಿ ಖುಶಿ. 'ನೀವೇ ನನ್ನ ಪಾಲಿನ ದೇವರು' ಅಂದಿದ್ದ ಆತ ಆ ದಿವಸ. ಮುಂದೆ ಅವನಿಗೆ ಟ್ರಾನ್ಸಫರ್ ಆಗಿ ಬ್ಯಾರೆ ಊರಿಗೆ ಹೋದ ಮ್ಯಾಲೂ ಡಾಕ್ಟರರಿಗೆ ಕ್ಷೇಮಸಮಾಚಾರದ ಪತ್ರ ಬರೀತಿದ್ದ. ಈಗೂ ಬರೀತಿರತಾನ ಒಮ್ಮೊಮ್ಮೆ."

"ನೀ ಅವನ ಚಿತ್ರಾ ತಗದು ಅವನನ್ನು ಅಮರ ಮಾಡಿಬಿಟ್ಟೆಯಲ್ಲ, ಅವನs

ಪುಣ್ಯವಂತ ನೋಡು. ಇನ್ನೇನು ಮುಗೀಲಿಕ್ಕೆ ಬಂತಲ್ಲ ನಿನ್ನ ಚಿತ್ರ. ಅಂತೂ ದೊಡ್ಡ ಕೆಲಸ ಮಾಡಿ ಮುಗಿಸಿದಿ ಬಿಡು."

*

*

*

ನಾಲ್ಕು ದಿನ ಕೂತು ಒದ್ದಾಡಿದರೂ ಈ ಚಿತ್ರ ಮುಗಿಯಲೊಲ್ಲದು. ತೊಯ್ದಿರುವ ಹಾಗೆ ಕಾಣುವ ತಲೆ ಏನು ಮಾಡಿದರೂ ಪೂರಾ ಒಣಗಿದ ಹಾಗೆ ಕಾಣಲೊಲ್ಲದು. ಸ್ವಲ್ಪ ಹೆಚ್ಚು ಕಡಿಮೆಯಾದರೂ ಬಣ್ಣ ಮುಖದ ಮೇಲೆಯೆ ಇಳಿದೀತೆಂಬ ಭಯ. ಎಲ್ಲ ಮುಗಿದ ನಂತರ ಕೊನೆಗುಳಿದ ಈ ಸ್ವಲ್ಪ ಭಾಗ ಯಾಕಿಷ್ಟು ಕಾಡಿಸುತ್ತದೆ ? ಛೆ, ಕೊನೆಯ ಪ್ರಯತ್ನ, ಸಾಧ್ಯವಾಗದಿದ್ದರೆ ಬಿಟ್ಟೇ ಬಿಡಬೇಕು.

ಎಲ್ಲಿಯೋ ಏನೋ ತಪ್ಪುತ್ತಿದೆ. ಎಲ್ಲಿ ಏನೆಂದು ಗೊತ್ತಾಗುತ್ತಿಲ್ಲ. ಒಟ್ಟಿಗೆ ನೋಡಿದಾಗ ಇಡಿಯ ಚಿತ್ರ ಒಂದು ಬಗೆಯ ಕೃತ್ರಿಮತೆಯ ಮುಸುಗು ಹೊದ್ದಂತೆ ಕಾಣುತ್ತಿದೆ. ಎಂದೂ ತನ್ನ ಯಾವ ಕೃತಿಯೂ ಹೀಗಾಗಿರಲಿಲ್ಲ. ಇಷ್ಟೊಂದು ಕಷ್ಟಪಟ್ಟು ತೆಗೆದ ಈ ಚಿತ್ರ ಕೃತ್ರಿಮವಾಗಿ ಕಾಣಬೇಕೆ ?.....ಚಿತ್ರದಲ್ಲಿ ಜೀವಕಳೆ ಇಲ್ಲದಿದ್ದರೆ ಹಿಂದು-ಮುಂದು ನೋಡದೆ ಹರಿದು ಹಾಕಬೇಕೆಂದು ಪ್ರೊಫೆಸರು ಹೇಳಿದ್ದು ನೆನಪಿದೆ....

ಅಥವಾ ಈ ಕೃತ್ರಿಮತೆ ತನ್ನ ಭ್ರಮೆಯೇ ಆಗಿರಬಾರದೇಕೆ ? ಇಂದು ಬೆಳಗಿನಿಂದ ಸಣ್ಣದಾಗಿ ಮತ್ತೆ ಹನಿಯತೊಡಗಿರುವ ಮಳೆಯಿಂದಾಗಿ ತುಸು ವ್ಯಗ್ರವಾಗಿರುವ ತನ್ನ ಮನಸ್ಸಿನ ತಪ್ಪು ಕಲ್ಪನೆಯಾಗಿರಬಾರದೇಕೆ ಈ ಕೃತ್ರಿಮತೆ ? ಹಾಗೂ ಇರಬಹುದು. ಇಂಥ ಮನಸ್ಥಿತಿಯಲ್ಲಿದ್ದಾಗ ಕಲಾವಿದ ಎಂದೂ ಕೆಲಸ ಮಾಡಬಾರದು. ಈಗ ಸ್ವಲ್ಪ ವಿಶ್ರಾಂತಿ ತೆಗೆದುಕೊಂಡು ಸಂಜೆ ನೋಡಿದರೆ ಈ ಚಿತ್ರದಲ್ಲಿ ಕೃತ್ರಿಮತೆ ಬಹುಶಃ ಕಾಣಲಿಕ್ಕಿಲ್ಲ...

ಅಂತೂ ಕೊನೆಗೊಮ್ಮೆ-ಕೊನೆಗೊಮ್ಮೆ ಈ ಚಿತ್ರದಿಂದ ಬಿಡುಗಡೆ ದೊರಕಿದಂತಾಯಿತು. ಈ ಚಿತ್ರ ಮೊದಲಲ್ಲಿ ತೆಗೆದಾಗಿನಿಂದ ಮನಸ್ಸನ್ನು ಮುಸುಕಿದ್ದ ಯಾವುದೋ ಅತೃಪ್ತಿ, ಏನೋ ಅಸಮಾಧಾನ ಈಗ ಇಲ್ಲದಂತಾಗಿದೆ. ದೊಡ್ಡ ಭಾರ ಇಳಿದಂತೆ, ಎಂಥದೋ ಮಹತ್ಕಾರ್ಯ ಸಾಧಿಸಿದಂತೆ ಮನಸ್ಸು ಹಗುರಾಗಿದೆ. ಈ ಚಿತ್ರದಲ್ಲಿನ ಮನುಷ್ಯನಿಗೆ ಈಗ ಪೂರ್ಣ ಹೊಸ ರೂಪ ಬಂದಿದೆ. ಸ್ಟ್ಯಾಂಡ್‌ಗೆ ಇದನ್ನು fix ಮಾಡಿ ದೂರ ನಿಂತು ಇದರೆಡೆ ನೋಡುತ್ತಿರುವುದೇ ಒಂದು ಆನಂದ. ಇನ್ನು ಮುಂಬಯಿಗೆ ತಿರುಗಿ ಹೋದ ನಂತರ ಕಾದಿರುವ ಜೊತೆಯವರ ಮೆಚ್ಚುಗೆ. ಬರಲಿರುವ

ಕಲಾಪ್ರದರ್ಶನದಲ್ಲಿ ದೊರೆಯುವ ಬಹುಮಾನ....ಛೆ, ಈ ಚಿತ್ರ ಸಣ್ಣ ಹುಡುಗಿಯ ಹಾಗೆ ವ್ಯರ್ಥ ಕನಸು ಕಾಣಲು ಪ್ರೇರೇಪಿಸುತ್ತಿದೆಯಲ್ಲ ತನ್ನನ್ನು- ಎಂದು ಅವಳಿಗೆ ನಗು ಬಂದಿತು.

ರವಿವಾರವಿತ್ತೆಂದು ಮನೆಯಲ್ಲುಳಿದಿದ್ದ ಸರೋಜಳ ಗಂಡ ಆ ಸಂಜೆ ಚಿತ್ರ ನೋಡಿ ಹೇಳಿದ್ದ, ‘‘ನನಗೇನೂ ನಿಮ್ಮ ಮಾಡರ್ನ್ ಆರ್ಟ್ ತಿಳಿಯೂದಿಲ್ಲ ಮಿಸ್ ಸಹನಾ, ಆದರೂ ಒಂದು ಮಾತು ಹೇಳಬೇಕನಸ್ತದ.’’

‘‘ಹೇಳ್ರಿಲಾ, ಅದರಾಗೇನು’’ –ಅವನ ಅಭಿಪ್ರಾಯಕ್ಕೆ ತಾನೇನೂ ಬೆಲೆಕೊಡುವುದಿಲ್ಲೆಂಬ ಧಾಟಿಯಲ್ಲಿ ಹೇಳಿದಳು ಆಕೆ.

‘‘ನಿಮ್ಮ ಚಿತ್ರ ನೋಡಿದರ ನೀವು ಅದರ ಸಲುವಾಗಿ ಭಾಳ ತ್ರಾಸು ತಗೊಂಡೀರಂಬೋದು ಗೊತ್ತಾಗತದ ಖರೆ ; ಆದರ ಯಾಕೋ ಅದೆಲ್ಲಾ ಆರ್ಟಿಫಿಶಿಯಲ್ ಅನಸತದ.’’

‘‘ಏನಂದ್ರಿ ?’’ ಹೊಡೆದೆಬ್ಬಿಸಿದಂತಾಯಿತು ಅವಳಿಗೆ, ‘‘ಯಾವ ದೃಷ್ಟಿಯಿಂದ ಹೇಳತೀರಿ ಅದು ಆರ್ಟಿಫಿಶಿಯಲ್ ಅಂತ ? ನೀವು ಮಾಡರ್ನ್ ಆರ್ಟ್ ಬಗ್ಗೆ ಇರುವ ಫ್ರೆಂಚ್ ಸಾಹಿತ್ಯ ಓದಬೇಕು. ಆಮ್ಯಾಲೆ ಬೇಕಾದರೆ–’’

–ಅವನ ನಗುವ ಕಣ್ಣುಗಳನ್ನು ನೋಡಿದಾಗ ತನ್ನನ್ನು ತಾನು ಸಮರ್ಥಿಸಿಕೊಳ್ಳುವ ಪ್ರಯತ್ನ ಅಸಫಲವಾಗುತ್ತಿದೆಯೆಂಬ ಅರಿವಾಗಿ ಒಮ್ಮೆಲೆ ಅವಳು ಸುಮ್ಮನಾದಳು. ‘‘ನನ್ನ ಅಭಿಪ್ರಾಯ ತಪ್ಪೂ ಇರಬಹುದು ಸಹನಾ. ಅದನ್ನ ಸೀರಿಯಸ್ಲೀ ತಗೋಬ್ಯಾಡ್ರಿ.’’

–ಹೌದು. ಅವನ ಅಭಿಪ್ರಾಯ ತಪ್ಪಿರಲೇಬೇಕು. ಇಷ್ಟು ಜೀವ ಅರೆದು ತೆಗೆದ ಈ ಚಿತ್ರಕ್ಕೆ ಜೀವಕಳೆ ಇಲ್ಲವೆಂದರೇನು ? ಅವನಿಗೇನು ಮಣ್ಣು ತಿಳಿಯುತ್ತದೆ ?.... ಯಾರಿಗೂ ಏನೂ ತಿಳಿಯುವದಿಲ್ಲ. ತನಗೊಬ್ಬಳಿಗೆ ಮಾತ್ರ ತಿಳಿಯಬಲ್ಲದು. ಚಿತ್ರದಲ್ಲಿಯ ಅವನು ನೆಟ್ಟಗಾಗಿ ತನಗೆ ಕೆಲಸವಾದ ಊರಿಗೆ ಹೋಗುವಾಗ ಅವನ ಕಣ್ಣಲ್ಲಿ ಒಂದು ಕ್ಷಣ ಮಿಂಚಿದ–ಕೃತಜ್ಞತೆಯೋ ಮತ್ತೇನೋ– ಆ ಬೆಳಕು ರಿಪೇರಿ ಮಾಡಿದ ಈ ಚಿತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ. ಜಗತ್ತಿಗೇಕೆ ಕಾಣುತ್ತಿಲ್ಲ ?

–ಜಗತ್ತಿಗೆ ಕಂಡರೆಷ್ಟು, ಬಿಟ್ಟರೆಷ್ಟು ? ಕಾಣುವ ಕಣ್ಣು ತನಗಾದರೂ ಇದೆಯಲ್ಲ, ಇಷ್ಟು ಸಾಕು....

–‘ನಿಮ್ಮ ಕಾಕಾನ ಪತ್ರ ಬಂದದ ನೋಡು ಸಹನಾ.’ ಹೊರಗಿನಿಂದ ಕೂಗಿ ಹೇಳಿದಳು ಸರೋಜ.

‘ನೀನೇ ಓದಿ ಹೇಳು ಏನು ಬರದಾರಂತ.’

–ಈ ಚಿತ್ರದೆದುರು ಕೂತಿದ್ದರೆ– ಎದ್ದು ಹೋಗಲು ಮನಸ್ಸಾಗುವುದಿಲ್ಲ. ಇಂಥ ಕೃತಕೃತ್ಯತೆಯ ಭಾವವನ್ನು-ಸ್ವಲ್ಪ ಸೆಂಟಿಮೆಂಟಲ್ ಅನಿಸಿದರೇನಂತೆ ?–ತನ್ನಲ್ಲಿ ಹುಟ್ಟಿಸಿದ ಈ ಚಿತ್ರ ಆರ್ಟಿಫಿಶಿಯಲ್ ಆಗಿದೆಯೆಂದರೆ ಮೂರ್ಖತನವೇ ಸರಿ....

–'ಮತ್ತೇನಿಲ್ಲ ವಿಶೇಷ. ನೀ ಯಾವಾಗ ಮುಂಬಯಿಗೆ ಬರ್ತೀ ಅಂತ ಕೇಳ್ಯಾರ ನಿಮ್ಮ ಕಾಕಾ. ನಿನ್ನ ಕ್ಲಾಸು ಸುರು ಆಗತಾವಂತ ಮುಂದಿನ ವಾರ. ಮನೆಯೊಳಗ ಎಲ್ಲರೂ ಆರಾಮ ಇದ್ದಾರಂತ.... ಹ್ಞಾ, ಮತ್ತು ಒಂದು ಅಗದೀ ಇಂಟರೆಸ್ಟಿಂಗ್ ನ್ಯೂಜು....'

'ಏನು ಅದು ?' –ಕೂತಲ್ಲಿಂದಲೇ ಕೇಳಿದಳು ಸಹನಾ.

'ಹಹ್ಹಹ್ಹ. ಎಷ್ಟು ಮಜಾ ನೋಡು ಸಹನಾ. ನೀ ಚಿತ್ರಾ ತಗದು ಅಮರ ಮಾಡೀಯಲ್ಲ ಆ ಹುಚ್ಚನ್ನ....'

'ಶಟಪ್, ಅವನಿಗೆ ಹುಚ್ಚ ಅನ್ನಬ್ಯಾಡಂತ ಹೇಳಿಲ್ಲs ? ಆತ ಈಗ ಹೊಸಾ ಮನುಷ್ಯ ಆಗಿಬಿಟ್ಟಾನ.'

'ನೀ ಒಬ್ಬಾಕಿ ದೊಡ್ಡ ಹುಚ್ಚಿ. ನಿಮ್ಮ ಕಾಕಾ ಏನು ಬರದಾರ ಕೇಳಿಲ್ಲೆ : ಮೊನ್ನೆ ಮುಂಬೈದಾಗ ಭಾರಿ ಮಳೆ ಆತಲಾ, ಆವಾಗ ಅಕಸ್ಮಾತ್ ಅವರಿಗೆ ಭೆಟ್ಟಿ ಆತಂತ ಅವನದು. ಕೆಟ್ಟ ಮಳೆಯೊಳಗ ತೊಯ್ಸಿಗೋತ ಸಾವಕಾಶ ಹೊರಟಿದ್ದನಂತ ಚೌಪಾಟೀಕಡೆ. ಕಾರು ನಿಲ್ಲಿಸಿ ಡಾಕ್ಟರರು, 'ಯಾವಾಗ ಬಂದ್ರಿ ? ಇಲ್ಲೇ ಟ್ರಾನ್ಸ್‌ಫರ್ ಆತೇನು ನಿಮಗ ?' ಅಂತ ಕೇಳಿದರ ಅವರ ಗುರುತೇ ಸಿಗಲಾರದ್ಹಾಂಗ ಸುಮ್ಮನs ಮುಂದ ಹೋದನಂತ. ಅವನಿಗೆ ನೆಟ್ಟಗಾಗೇದಂತ ತಿಳದದ್ದು ತಮ್ಮದೇ ತಪ್ಪು ಅಂತ ಅವರಿಗೆ ಅನಿಸಿತಂತ. 'This is an incurable case....' ಅಂತ ಬರದಾರ ನಿಮ್ಮ ಕಾಕಾ. ಹಹ್ಹಹ್ಹ....'

'this is an incurable case'.... 'incurable case....'

*

*

'ಕೆಟ್ಟ ಮಳೆ ಬರಲಿಕ್ಹತ್ತೇದ. ಅಂಗಳದಾಗ ನಿಂತು ಏನು ಮಾಡತೀ ಸಹನಾ, ಒಳಗ ಬಾರಲಾ.'

'............'

'ಅರೆ, ಏ ಹುಚ್ಚಿ, ಪೂರಾ ತೊಯ್ಸಿಗೊಂಡು ಸುಮ್ಮನs ನಿಂತೀಯಲ್ಲ ? ಇಲ್ಲೇನು ನಡಸೀ ನೀನು ? ಮಳೆಯ ಖಬರು ಇಲ್ಲಧಾಂಗ ನಿಂತೀದೆಲ್ಲ ?....ಅರೆ.

ಇದೇನು ಸಹನಾ ? ನಿನಗೇನು ಹುಚ್ಚುಗಿಚ್ಚು ಹಿಡದsದೋ ಏನು ? ಇಷ್ಟು ದಿವಸ ಕೂತು ತೆಗೆದ ಚಿತ್ರಾ ಈ ಮಳೆಯ ನೀರೊಳಗ ನೆನಸತಾ ಇದ್ದೀಯಲ್ಲ ! ಅಯ್ಯೋ ದೇವರs, ಎಲ್ಲಾ ಬಣ್ಣ ನೀರಿಗೆ ಕರಗಿ ಹರಿದು ಹೋಗಲಿಕ್ಹತ್ತೇದಲ್ಲs ಸಹನಾ. ಹಿಂಗ್ಯಾಕ ನಮ್ಮವ್ವಾ ? ತಲೀ ಗಿಲೀ ಕೆಟ್ಟsದೇನು ?'

'ಬಿಡು ನನ್ನ ಸರೋಜ, ನೀ ಒಳಗ ಹೋಗು.'

'ಅಲ್ಲs ಹುಚ್ಚಿ, ನೀ ಬೇಕಾದರ ತೋಯ್ಸಿಗೋ. ಆದರ ಆ ಚಿತ್ರಾ ಯಾಕ ಕೆಡಸತೀ ? ಛೆ, ಇದರಾಗೇನೂ ಉಳೀಲಿಲ್ಲ ಈಗ. ಒಂದ ಸ್ವಲ್ಪ ಕಣ್ಣಿನ ಹೊರತು ಮತ್ತೇನೂ ಕಾಣ್ಸೂದಿಲ್ಲ. ಈ ಮನಷ್ಯಾನ ಮೈ-ಕೈ, ಗಿಡಾ-ಗುಡ್ಡ ಎಲ್ಲಾ ಮಳೆಯ ನೀರೊಳಗ ತೊಯ್ದು ಹೋದವಲ್ಲ ! ಪೂರಾ ಬಿಳೀ ಕಾಗದ ಆಗಿಹೋಯ್ತು. ಹಿಂಗ್ಯಾಕ ಮಾಡಿದೀ ಸಹನಾ ?'

'Incurable.... Incurable....'

– ಮಳೆಯ ನೀರು ಅವಳನ್ನು ಪೂರಾ ತೋಯಿಸಿತ್ತು. ಅವಳ ಮುಖದ ಮೇಲೆ ಹರಿಯುತ್ತಿದ್ದ ನೀರಿನಲ್ಲಿ ಅವಳ ಕಂಬನಿ ಬೆರೆತಿದೆಯೋ ಎಂದು ತಿಳಿದುಕೊಳ್ಳಲು ವ್ಯರ್ಥಪ್ರಯತ್ನ ಮಾಡುತ್ತಿದ್ದಳು ಸರೋಜ.

– ಮಳೆ ಸುರಿಯುತ್ತಲೇ ಇತ್ತು.

❖ ❖ ❖

# ನೆರಳು

"ಮಾಲತೀ...."

"ಓ",

"ಏ ಮಾಲತೀ...."

"ಬಂದೇ, ಸ್ವಲ್ಪ ತಡೀಯವ್ವಾ, ಹಾಲಿಟ್ಟೇನಿ ಸ್ಟೋ ಮ್ಯಾಲೆ."

"ಏ ಮಾಲತೀ...."

"ಬಂದೆ, ಒಂದು ಮಿನಿಟು."

"ಏ ಮಾಲತೀ, ಒಂದsಸವನ ಒದರಿಕೋಳ್ಳಿಕ್ಹತ್ತೀನಿ, ನಿನಗೇನರೆ ಖಬರದ ಏನು ? ಒಂದs ಮಿನಿಟು ಅಂತೀ, ಅಷ್ಟರಾಗ ನಾ ಸತ್ತರೂ ನಿನಗ ದರಕಾರ ಇಲ್ಲ, ನೀನೂ ನಿನ್ನ ಮಕ್ಕಳೂ ನಾ ಸಾಯೋ ಹಾದೀನೇ ಕಾಯ್ಲಿಕ್ಹತ್ತೀರಿ— ಈ ಮುದುಕಿ ಎಂದ ಪ್ರಾಣಾಬಿಟ್ಟೀತೋ ಅಂತ—"

ಹಾಲು ಕಾಯದೇ ಇದ್ದರೂ ಸ್ಟವ್ ಆರಿಸಿ ಮಾಲತಿ ಅವಸರವಸರವಾಗಿ ತಾಯಿಯತ್ತ ನಡೆದಳು, "ಯಾಕ ಸುಮ್ನ ಅಭದ್ರ ಮಾತಾಡ್ತೀಯವಾ ಮುಂಜಾನೆದ್ದು ? ಇಲ್ಲದ್ದ ವಿಚಾರ ಮಾಡಿ ತ್ರಾಸು ಮಾಡಿಕೋಬ್ಯಾಡಾ ಅಂತ ಡಾಕ್ಟರು ಹೇಳಿಲ್ಲೇನು ?"

'ಆ ಡಾಕ್ಟರು ಸುಟ್ಟ ಬರ್ಲಿ. ಅವನಿಗೇನ ನನ್ನ ಜಡ್ಡು ಗುಣಾ ಮಾಡೂದು ಆಗೂದಿಲ್ಲ ಬಿಡು. ಮತ್ತ ನೀನೇ ಅವನಿಗೆ ಹೇಳಿಗೀಳೀಯೋ ಏನೂ ಲಗೂ ಸಾಯೋವಂತಾ ಔಷಧ ಕೊಟ್ಟ ಬಿಡೂ ಅಂತ."

"ಹಿಂಗೆಲ್ಲಾ ಅನಬಾರದವ್ವಾ, ನನ್ನ ಯಾಕ ಕರದಿ ಹೇಳು ಲಗೂನ. ಇನ್ನೂ ಏನೂ ಕೆಲಸಾಗಿಲ್ಲ ನಂದು."

"ನಿನ್ನ ಯಾಕ ಕರದೆ ?" —ಮುದುಕಿ ಕ್ಷಣ ಹೊತ್ತು ವಿಚಾರಿಸಿದಳು. ಅವಳ ಮುಖ ಹುಚ್ಚಾಪಚ್ಚಾ ಆಗಿತ್ತು. ನಂತರ ಹಿಂದೆ ನೋಡುತ್ತ ಒಮ್ಮೆಲೆ ಬೆಚ್ಚಿ ಬಿದ್ದು ಅವಳೆಂದಳು, "ನೋಡು ಮಾಲತೀ, ಈ ಖೋಲಿಯೊಳಗ ಯಾರರೆ ಬಂದಿದ್ರೇನು ?"

"ಇಲ್ಲ್ಯಾರು ಬರ್ತಾರವಾ ? ನೀ ಒಬ್ಬಾಕೀನೇ ಇದ್ದೀಯಲ್ಲ."

"ನಿಮ್ಮಪ್ಪ ಸತ್ತಾಗಿನಿಂದ ನಾ ಒಬ್ಬಾಕೀನೇ ಇದ್ದೀನಿ ಅನ್ನೂದು ಗೊತ್ತದನs,

ಆದರ ನೋಡು ನನ್ನ ಹಿಂದ ಏನೋ-ಯಾರೋ ಇದ್ದಾಂಗ ಅನಿಸ್ತು."

"ಹಿಂದೇನಿರ್ತದ ? ನೆರಳು ಇದ್ದೀತು."

"ಹಾಂಗಂತೀಯಾ ? ಆದರ ಕತ್ತಲಿದ್ದಾಗನೂ ನೆರಳು ಹ್ಯಾಂಗ ಕಾಣಸ್ತದ ?"

"ಅವ್ವಾ, ಅದೆಲ್ಲಾ ನಿನ್ನ ಭ್ರಮಾ. ಇಷ್ಟಕ್ಕs ನನ್ನ ಕರದೇನು ? ನಾ ಇನ್ನೂ ಅಡಗೀ ಮಾಡಬೇಕು. ಹುಡುಗ್ರು ಕಾಲೇಜಿಗೆ ಹೋಗೋ ಹೊತ್ತಾತು."

"ನಿನಗ ನಿನ್ನ ಗಂಡಾ-ನಿನ್ನ ಮಕ್ಕಳು ಇವರದs ಚಿಂತಿ. ಮುದಿಕಿ ತಾಯಿ ಹೆದರಿಕೊಂಡು ಪ್ರಾಣಾ ಬಿಟ್ರೂ ಅಡ್ಡಿಯಿಲ್ಲ. ಹೋಗು ಹೋಗು. ಮುಪ್ಪು ಬರೂ ತನಕಾ ಮನಷ್ಯಾ ಬದಕಿರಬಾರದವಾ ಮಾಲತೀ, ಆದರ ಸಾವು ನನ್ನ ಕೈಯಾಗಿನ ಮಾತs.... ಹಿಂದಕ್ಕೊಮ್ಮೆ ನಾ ಸಾಯಬೇಕಂತ ಮನಸು ಮಾಡಿದ್ದೆ. ಆಗ ಸತ್ತಿದ್ರ ಈ ಜಂಜಾಟ ತಪ್ಪಿತ್ತು. ಆವಾಗ ಏನಾತು ಗೊತ್ತದs ಏನು ನಿನಗ–"

ಮಗಳು ಆಗಲೇ ಅಡಿಗೆ ಮನೆ ಸೇರಿದ್ದು ನೋಡಿ ಮುದುಕಿಗೆ ಸಿಟ್ಟು ಮತ್ತಷ್ಟು ಹೆಚ್ಚಾಯಿತು. ಅವಳ ವಟವಟ ಮತ್ತೂ ಜೋರಾಯಿತು.

ಅವ್ವ ಸಿಟ್ಟಾದದ್ದು ಮಾಲತಿಗೆ ಗೊತ್ತಿದೆ. ಆದರೆ ಹಾಗೆಂದು ಅವಳು ಅವ್ವನ ಮುಂದೇ ಕೂತಿರಲು ಪುರುಸೊತ್ತಿಲ್ಲ. ಇನ್ನೊಂದು ಗಂಟೆಗೆಲ್ಲಾ ಇವರು ಆಫೀಸಿಗೆ ಹೋಗುವ ಗಲಾಟೆ ; 'ಅಮ್ಮಾ, ಇನ್ನೂ ಆಗಿಲ್ಲವೇ ?' ಎಂದು ಕುಣಿಯುವ ಮಗ ರಾಜ ; 'ನಾನು ಹೊರಟೆ ಕಾಲೇಜಿಗೆ' ಎಂದು ಊಟ ಮಾಡದೆಯೇ ಹೊರಟು ಬಿಡುವ ಮಗಳು ಬೀನಾ. ಅವಳಿಗಂತೂ ಸ್ವಲ್ಪವೂ ವಿವೇಕವಿಲ್ಲ. ಮದುವೆಯಾಗಿದ್ದರೆ ಅತ್ತೆಮನೆಯಲ್ಲಿ ಬಾಳಬೇಕಾಗಿದ್ದ ಹುಡುಗಿ. ಸಣ್ಣ ಮಗುವಿನಂತಾಡುತ್ತಾಳೆ. ಅಜ್ಜಿಯೊಂದಿಗಂತೂ ಮಕ್ಕಳಿಗೆ ಒಂದು ಕ್ಷಣ ಬಗೆಹರಿಯುವುದಿಲ್ಲ. ಇವರೆಲ್ಲರನ್ನು ಸಮಾಧಾನ ಮಾಡುವ ಹೊತ್ತಿಗೆ ಜೀವ ಬೇಸರವಾಗುತ್ತದೆ.

"ಏ ಮಾಲತೀ"

ಮುದುಕಿಯ ಕರೆಗೆ ಓಗೊಡುವ ಮನಸ್ಸಾಗಲಿಲ್ಲ ಮಾಲತಿಗೆ. ಅವ್ವನ ಹಿಂದಿನ ಕತೆ ಕೇಳುವ ಇಚ್ಛೆಯೂ ಇಲ್ಲ, ಕೇಳುತ್ತ ಕೂಡಲು ಸಮಯವೂ ಇಲ್ಲ, ಕೇಳಿದ್ದೇ ಕತೆ. ಸಾವಿರ ಸಲ ಹೇಳಿದ್ದನ್ನೇ ಹೇಳುತ್ತ ಕೂಡುತ್ತಾಳೆ ಅವ್ವ. ಕೇಳುವವರು ನಿರುತ್ಸಾಹ ತೋರಿಸಿದರೆ ವಿಪರೀತ ಸಿಟ್ಟು ಬರುತ್ತದೆ ಆಕೆಗೆ. ಅದೇ ಕತೆ– ನಲವತ್ತು ವರ್ಷಗಳ ಹಿಂದೆ ಆಕೆ ಹೆಂಗಸರ್‍ಯಾರೂ ಕಲಿಯದ ಕಾಲದಲ್ಲಿ ಕಲಿತು ಶಾಲೆಯಲ್ಲಿ ಮಾಸ್ತರಿಣಿಯಾದ ಸಾಹಸದ ಕತೆ ; ಬಹಳ ದಿನ ಮದುವೆಯನ್ನು ನಿರಾಕರಿಸಿ ನಂತರ ಸೋದರಮಾವನನ್ನು ಮದುವೆಯಾದ ಕತೆ ; ಮೊದಲ ಹೆರಿಗೆ ಬಹಳ ಕಷ್ಟವಾಗಿ ಮಾಲತಿ ಹುಟ್ಟಿದ ಕತೆ ; ಮತ್ತು–

—ಮತ್ತು ಈ ಎಲ್ಲ ಕತೆಗಳ ನಡುನಡುವೆ ಅಲ್ಲಲ್ಲಿ ಹರಕು ಸೀರೆಗೆ ಹಚ್ಚಿ ಹೊಲಿದ ತೇಪೆಯಂತೆ ಬರುವ ಆ ಶೆಟ್ಟರ ಸದಾಶಿವರಾಯನ ಸುದ್ದಿ.... ಕೇಳಿ ಕೇಳಿ ಮಾಲತಿಗೆ ಸಾಕಾಗಿದೆ. ಹಾಗೆಂದು ಹೇಳಿದರೆ, 'ನನ್ನ ಕಂಡರೆ ನಿಮಗ್ಯಾರಿಗೂ ಲಕ್ಷ್ಯ ಇಲ್ಲ, ನಾ ಸಾಯೋ ಹಾದೀ ಕಾಯ್ತೀರಿ ನೀವೆಲ್ಲಾ' ಎಂದು ಒದರಾಡಲು ಸುರು ಮಾಡುತ್ತಾಳೆ ಮುದುಕಿ. ಯಾಕೆ ಹೀಗಾದಳು ತನ್ನ ಅವ್ವ ?

ಯಾಕೆ ? ಯೋಚಿಸಿ ಯೋಚಿಸಿ ಮಾಲತಿಗೆ ಸುಸ್ತಾಗಿದೆ. 'ಅರವತ್ತು ದಾಟಿದ ಮ್ಯಾಲ ಹೀಂಗ ಅಭ್ರಮಶುಭ್ರಮ ಆಗತದ ಕೆಲವರಿಗೆ. ಗಂಡ ಸತ್ತ ಮ್ಯಾಲ ಸ್ವಲ್ಪ ಜಾಸ್ತಿ ಆಗೇದ ನಿಮ್ಮ ಅವ್ವಗ. ನೀ ಯಾಕ ವಿಚಾರ ಮಾಡತೀ ಬಿಡು' ಎಂದು ಸಮಾಧಾನ ಮಾಡಿದ್ದ ಮಾಲತಿಯ ಗಂಡ. 'ಇದು ಹೀಂಗ ಹೆಚ್ಚಾಗಿಕೋತ ಹೋದರ ಏನು ಮಾಡೋದು ?' ಎಂದು ಅವಳಂದಾಗ. 'ಹೆಚ್ಚಾದರೇನು, ಅಂಥವರಿಗೆಲ್ಲಾ ಸ್ಪೇಶಲ್ ದವಾಖಾನೀನೇ ಅವs ಅಲ್ಲ' ಎಂದು ಹಗುರವಾಗಿ ನಕ್ಕು ಬಿಟ್ಟಿದ್ದ ಆತ.

ನೆನಪಾದರೆ ಇನ್ನೂ ಮೈನಡುಕ ಬರುತ್ತದೆ ಮಾಲತಿಗೆ. ಮಗಳು ತಾನು ಜೀವಿಸಿರುವಾಗ ಮುದುಕಿ ತಾಯಿಯನ್ನು ಹುಚ್ಚರಾಸ್ಪತ್ರೆಗೆ ಹಾಕುವುದೆ ? ತನ್ನ ಅವ್ವನಿಗೆ ನಿಜವಾಗಿಯೂ ಹುಚ್ಚು ಹಿಡಿದಿದೆಯೆ ? ಏನೋ ! ಎಲ್ಲರೂ ಹಾಗೆ ಹೇಳುತ್ತಾರೆ. ತನಗೇಕೋ ಅದನ್ನೊಪ್ಪಲು ವಿಪರೀತ ಸಂಕಟ. ಆದರೆ ಅವ್ವನ ನಡವಳಿಕೆಯಂತೂ ಈಗೀಗ ವಿಚಿತ್ರವಾಗುತ್ತಿದೆ.... ಅಪ್ಪ ಸತ್ತಾಗ ಅವ್ವ ಬಳೆ ತೆಗೆದಿರಲಿಲ್ಲ, ಕುಂಕುಮ ಅಳಿಸಿರಲಿಲ್ಲ. ಯಾರು ಹೇಳಿದರೂ ಅವಳ ಹಟವೇ ಹಟ. 'ನಾ ನನ್ನ ಜೀವನಾ ಎಲ್ಲ ಸಾಲೀ ಹುಡುಗರಿಗೆ ಪಾಠಾ ಕಲಸೂದರಾಗ ಕಳದೀನಿ. ನನಗೇನು ನೀವು ಕಲಿಸಬೇಕಾಗಿಲ್ಲರ್ರ್ಯೋ. ನನ್ನ ಗಂಡ ಸತ್ತೇ ಇಲ್ಲ ಅನಸತದ ನನಗ. ನಾ ಹ್ಯಾಂಗ ನನ್ನ ಕುಂಕಮಾ ಅಳಸಲಿ ?' ಎಂದೆಲ್ಲ ಬಡಬಡಿಸಿದ್ದಳು. ಅವಳೊಂದಿಗೆ ವಾದಿಸಿ ಫಲವಿಲ್ಲೆಂದು ತಿಳಿದಾಗ ಎಲ್ಲರೂ ಸುಮ್ಮನಾಗಿದ್ದರು.

ಆದರೆ ಅದೇ ಅವ್ವ ಇತ್ತೀಚೆ ಯಾರೂ ಹೇಳದೆಯೇ ಕುಂಕುಮ ಹಚ್ಚುವುದು, ತಲೆ ಬಾಚುವುದು ಎಲ್ಲ ಬಿಟ್ಟಿದ್ದಾಳೆ. ಅವಳ ಒದರಾಟ-ಬಡಬಡಿಸುವುದು ದಿನಾ-ದಿನಾ ಹೆಚ್ಚಾಗುತ್ತಿದೆ. ಈ ಮಧ್ಯೆ 'ಏನೋ ಬಂತು, ಯಾರೋ ಬಂಧಾಂಗಾತು' ಎಂದು ಬೇರೆ ಧಾಂಧಲೆ ಹಾಕತೊಡಗಿದ್ದಾಳೆ. ತನ್ನ ನೆರಳಿಗೆ ತಾನೇ ಹೆದರಿ ಕಂಗಾಲಾಗುತ್ತಾಳೆ. ಇತ್ತೀಚೆ, ತೀರ ಇತ್ತೀಚೆ ಆದದ್ದು ಅವಳಲ್ಲಿ ಈ ಪರಿಯ ಬದಲಾವಣೆ. ಒಮ್ಮೊಮ್ಮೆಯಂತೂ ಗಟ್ಟಿಯಾಗಿ ಧ್ವನಿ ತೆಗೆದು ಅತ್ತು ರಂಭಾಟ ಮಾಡಿ ಮಕ್ಕಳಿಗೆ ತುಂಬ ಬೇಸರವುಂಟು ಮಾಡುತ್ತಾಳೆ.

—ಅಂದು ಹೀಗೇ ಆಯಿತಲ್ಲ ! ರಾಜನ ಹುಟ್ಟಿದ ದಿನವೆಂದು ಅವನ

ಸ್ನೇಹಿತರೆಲ್ಲ ಟೀಗೆ ಬಂದಿದ್ದರು. ಅವರೆಲ್ಲ ಡ್ರಾಯಿಂಗ್ ರೂಮಿನಲ್ಲಿ ಕೂತು ಅಂದಿನ ಪೇಪರಿನಲ್ಲಿ ಬಂದಿದ್ದ, ಅವ್ವನ ತವರೂರಿನಿಂದ ಅಸೆಂಬ್ಲಿಯ ಮೆಂಬರಾಗಿ ಆರಿಸಿ ಬಂದಿದ್ದ ಶೆಟ್ಟರ ಸದಾಶಿವರಾಯನ ಆಕಸ್ಮಿಕ ಮರಣದ ಬಗ್ಗೆ ವಿನೋದವಾಗಿ ಚರ್ಚಿಸುತ್ತಿದ್ದರು. 'ಇವನು ಪಕ್ಕಾ ಲಫಂಗ ಇದ್ದಬಿಡು' ಎಂದ ಒಬ್ಬ ಯಾವನೋ. ಕೂಡಲೇ ಒಳಗಿನ ಕೋಣೆಯಿಂದ ಚೀರಾಟ ಕೇಳಿಸಿತು. 'ಯಾವನೋ ಅವನು ಹಾಗಂದವನು ? ನಿನಗೇನು ಗೊತ್ತೋ ಹುಚ್ಚುಂಡೇಗಂಡ ?' – ಎಂದು ಕೂಗಾಡುತ್ತ ಅವ್ವ ಹೊರಬಂದಳು. ರಾಜನ ಗೆಳೆಯರೆಲ್ಲ ಅವಳ ಅವತಾರ ಕಂಡು ಸ್ತಂಭಿತರಾಗಿದ್ದರು. ಅವಳ ಕೂದಲು ಕೆದರಿತ್ತು. ಬಳೆ ಒಡೆದುಕೊಂಡು ಕೈಗೆಲ್ಲ ರಕ್ತ ಬಂದಿತ್ತು. ಹಣೆಯ ಬೆವರಿನಿಂದ ಕುಂಕುಮವೆಲ್ಲ ಕರಗಿ ಹರಿದುಹೋಗಿತ್ತು. ಅವಳನ್ನು ಅಂದು ಸುಮ್ಮನಿರಿಸಬೇಕಾದರೆ ಸಾಕಾಗಿಹೋಗಿತ್ತು ಮಾಲತಿಗೆ.

ಗೆಳೆಯರನ್ನು ಬೀಳ್ಕೊಂಡು ಬಂದ ರಾಜ ಮಾಲತಿಯೆದುರು ಕೂಗಾಡಿದ್ದ ; 'ನೀನೇ ನೋಡಿದೆಲ್ಲ ಮಮ್ಮೀ, ಗೆಳೆಯರ ಮುಂದ ನನಗಾದ ಅಪಮಾನ ? ಈ ಮುದುಕಿ ಸಲುವಾಗಿ ಮನೀಗೆ ಗೆಳೆಯಾರ್ನ ಕರಿಯೋದೂ ಕಠಿಣ ಆಗೇದ. ನಾ ನಿನಗ ಸಾವಿರ ಸರೆ ಹೇಳೀನಿ, ಆಕಿನ್ನ ಮೆಂಟಲ್ ಹಾಸ್ಪಿಟಲಿಗೆ ಸೇರಿಸೋಣೂಂತ. ನೀ ಕೇಳೂದಿಲ್ಲ. ನಮಗೆಲ್ಲಾ ಆಕೀ ಕಾಲಾಗ ಪೂರಾ ತಲೀಕೆಟ್ಟು ನಾವೇ ಮೆಂಟಲ್‌ಹಾಸ್ಪಿಟಲಿಗೆ ಹೋಗ್ತೀವಿ. ನೀನೂ-ನಿಮ್ಮವ್ವ ಆರಾಮಾಗಿರ್ರಿ."

ಒಣಗಿದ ಗಂಟಲಿನಿಂದ ಮಗನನ್ನು ಸಮಾಧಾನ ಮಾಡಲೆತ್ನಿಸಿದ್ದಳು, ಮಾಲತೀ ; 'ಹಾಂಗನಬಾರದಪಾ ರಾಜೂ, ಅಕೀಗೆ ತಲಿಗೆ ತ್ರಾಸಾಗೇದಷ್ಟs. ತಲೀ ಕೆಟ್ಟಿಲ್ಲ. ಇನ್ನಷ್ಟ ದಿವಸ ಸಹನ ಮಾಡಿಕೋಬೇಕು. ಆಕೀಗೂ ವಯಸ್ಸಾತು. ಇನ್ನೆಷ್ಟು ದಿವ್ಸ ಇರ್ತಾಳ ?'

ಅವ್ವ ಹೇಳಿದಂತೆ ಅವ್ವನ ಸಾವಿನ ದಾರಿ ಕಾಯುತ್ತಿರುವೆನೇ ತಾನೂ ಸಹ ? –ನಿಟ್ಟುಸಿರು ಬಿಟ್ಟು ಕೆಲಸ ಮುಂದುವರಿಸಿದಳು ಮಾಲತಿ.

ಅಂದೆಲ್ಲ ಅವ್ವ ಊಟ ಮಾಡಿರಲಿಲ್ಲ. ಮಾಲತಿ ಸೋತು ಸುಮ್ಮನಾಗಿದ್ದಳು. ರಾತ್ರಿ ಮಕ್ಕಳು ಮಲಗಿದ ನಂತರ ಅವ್ವನನ್ನು ಸಮಾಧಾನ ಮಾಡಲೆಂದು ಅವಳ ರೂಮಿಗೆ ಹೋಗಿದ್ದಳು–ಹಗಲಿಡೀ ಒದರಾಡಿದ್ದ ಅವ್ವ ರಾತ್ರಿ ಹಾಸಿಗೆಯ ಮೇಲೆ ಮಲಗಿ ಕಣ್ಣೀರಿಡುತ್ತಿದ್ದಳು. ಮಾಲತಿಯ ಕರುಳು ಚುರ್ರೆಂದಿತು. ''ಏನಾತವಾ ? ಹೇಳು. ನನಗ, ನಿನ್ನ ಮಾಲತಿಗೆ, ಹೇಳೂದಿಲ್ಲೇನು ?' ಎಂದು ಬಹಳ ಹೊತ್ತು ಒತ್ತಾಯಿಸಿದಾಗ, 'ಮಾಲೀ, ನಾ ಇವತ್ತ ವಿಧವಾ ಆದೆ' ಎಂದು ಅತ್ತಿದ್ದಳು ಅವ್ವ.

ಎಂಥ ಮಾತು ! ಬೆಚ್ಚಿದ ಮಾಲತಿ ಮೊದಲು ಸುತ್ತಲೂ ನೋಡಿದ್ದಳು. -

ರಾಜ, ಬೀನಾ ಯಾರಾದರೂ ಕೇಳಿಸಿಕೊಂಡರೇನೋ ಎಂದು. ಯಾರೂ ಇಲ್ಲದ್ದು ಕಂಡು ಸಮಾಧಾನವಾಗಿತ್ತು ಅವಳಿಗೆ. ಅಳುತ್ತಿದ್ದ ಅವ್ವನನ್ನು ರಮಿಸುವ ಮನಸ್ಸಿದ್ದರೂ ಇನ್ನೂ ಅಲ್ಲೇ ಕುಳಿತಿದ್ದರೆ ಏನೇನು ಕೇಳಬೇಕಾಗುವುದೋ ಎಂಬ ಭಯದಿಂದ ಮಾಲತಿ ಎದ್ದು ಬಂದಿದ್ದಳು.

ಹೌದು, ಅವ್ವ ಶೆಟ್ಟರ ಸದಾಶಿವರಾಯನನ್ನು ಚಿಕ್ಕಂದಿನಲ್ಲಿ ಪ್ರೀತಿಸಿದ್ದು ತನಗೆ ಗೊತ್ತಿದ್ದ ವಿಷಯವೇ. ಆ ಬಗ್ಗೆ ಅವ್ವ ತನ್ನೊಂದಿಗೆ ಮಾತ್ರ ಮನಬಿಚ್ಚಿ ಮಾತಾಡಿದ್ದಳು. ಬಹುಶಃ ಅಪ್ಪನಿಗೂ ಈ ವಿಷಯ ಪೂರಾ ಗೊತ್ತಿರಲಾರದು. ಅಕ್ಕನ ಮಗಳೆಂದು ಅವ್ವನನ್ನು ಮದುವೆಯಾಗಿದ್ದ ಅಪ್ಪ. ಅವರಿಬ್ಬರ ದಾಂಪತ್ಯದಲ್ಲಿ ತೊಡಕುಗಳೇನೂ ಇರಲಿಲ್ಲ. ಒಬ್ಬಳೇ ಮಗಳಾದ ತನ್ನನ್ನು ಅವರಿಬ್ಬರೂ ಬಹಳ ಪ್ರೀತಿಯಿಂದ ಬೆಳೆಸಿದ್ದರು. ಮದುವೆ ಮಾಡಿದ್ದರು. ಪೆನ್‌ಶನ್ ಆಗುವ ಹೊತ್ತಿಗೆ ಅವ್ವ ಗರ್ಲ್ಸ್ ಸ್ಕೂಲಿನ ಹೆಡ್‌ಮಿಸ್ಟ್ರೆಸ್ ಆಗಿದ್ದಳು. ಅವಳಿಗೆ ಎಲ್ಲರೂ- ಸ್ವತಃ ಏ.ಓ. ಸಾಹೇಬರೂ ಅಂಜುತ್ತಿದ್ದರು. ಅಂಥ ದರ್ಪದ ಹೆಂಗಸು ತನ್ನ ಅವ್ವ. ಮನೆಯಲ್ಲಿಯೂ ಹಾಗೇ. ಎಲ್ಲ ಅವಳು ಹೇಳಿದ ಹಾಗೇ ನಡೆಯುತ್ತಿತ್ತು. ವಿಧಿಯನ್ನೇ ತನ್ನ ಮನಬಂದ ಹಾಗೆ ತಿರುಗಿಸಿ ನಡೆಯಿಸುವ ಶಕ್ತಿಯುಳ್ಳ ಹೆಣ್ಣು ಆಕೆ. ಗಂಡ-ಮಗಳು-ಅಳಿಯ-ಮೊಮ್ಮಕ್ಕಳು ಎಲ್ಲರ ಮಧ್ಯೆ ನಗುತ್ತ ತುಂಬು ಜೀವನ ಸಾಗಿಸಿದ್ದಾಕೆ.... ಅಂಥವಳಿಗೆ ಈಚೀಚೆ ಹೀಗೆ ಆಗಿದೆ.

'ನಿಮ್ಮವ್ವಗ ದೆವ್ವ ಬಡಿದಿರಬೇಕ್ರೀ ಮಾಲತೀಬಾಯಿ, ಗುಡೀ ಮುಂದಿನ ಗಂಗಪ್ಪ ಶಾಸ್ತ್ರೀ ಕಡೆ ಕರಕೊಂಡು ಹೋಗ್ರಿ' –ಎಂದು ನೆರೆಮನೆಯಾಕೆ ಹೇಳಿದಾಗ ವಿಪರೀತ ಸಿಟ್ಟು ಬಂದಿತ್ತು ತನಗೆ. ದೆವ್ವವಂತೆ ! ಥೆ, ತನಗಂತೂ ಅಂಥದರಲ್ಲೆಲ್ಲ ನಂಬಿಕೆಯಿಲ್ಲ. ಅಂತೂ ಒಟ್ಟು ಅವ್ವ ಪಡುವ ತ್ರಾಸನ್ನು ಈಗೀಗ ನೋಡಲಾಗುತ್ತಿಲ್ಲ ತನಗೆ. ಅವ್ವ ಇಷ್ಟು ವರ್ಷಗಳ ಆಯುಷ್ಯದಲ್ಲೆಲ್ಲಾ ತೋರಿಸಿದ್ದ ದರ್ಪ, ಗಂಡನೊಂದಿಗಿದ್ದಾಗ ಜಗತ್ತಿನಲ್ಲಿ ತನ್ನಷ್ಟು ಸುಖಿಗಳೇ ಇಲ್ಲವೆಂಬ ಧಾಟಿಯಲ್ಲಿ ನಗುತ್ತಿದ್ದ ಬಗೆ, ಮಗಳ ಬಗೆಗಿನ ಅವಳ ಉತ್ಸಾಹ, ಮಾಲತಿ ಗ್ರ್ಯಾಜುಯೇಟ್ ಆದಾಗ ಸ್ಕೂಲಿನ ಮಾಸ್ತರಿಣಿಯರಿಗೆಲ್ಲ ಅವ್ವ ಪಾರ್ಟಿ ಕೊಟ್ಟದ್ದು, ವಿಜೃಂಭಣೆಯೊಂದಿಗೆ ಎಂಜಿನಿಯರನೊಬ್ಬನೊಂದಿಗೆ ಮಾಲತಿಯ ಮದುವೆ ಮಾಡಿದ್ದು, ನಂತರ ಮೊಮ್ಮಕ್ಕಳೊಂದಿಗೆ ಅವ್ವ ತಾನೂ ಮಗುವಾಗಿ ಕುಣಿದದ್ದು –ಎಲ್ಲವೂ ಅವ್ವನ ಸಹಜ ಪ್ರವೃತ್ತಿಯಾಗಿರದೆ ಅವಳೊಳಗಿನ ಯಾವುದೋ ಅಸಹಜವಾದ ಏನೋ ಒಂದನ್ನು ಹತ್ತಿಕ್ಕಿಡುವ ಪ್ರಯತ್ನವಾಗಿತ್ತೇ –ಎಂದನಿಸುವದು ತನಗೆ ಈಗೀಗ ಒಮ್ಮೊಮ್ಮೆ.

ಹ್ಞು, ತನ್ನ ಅವ್ವ ಅವನನ್ನೇಕೆ ಮದುವೆಯಾಗಲಿಲ್ಲ ?

–'ಮಾಲೀ. ನಿನಗ ಗೊತ್ತದs ಏನು ? ನಾ ಸ್ಕೂಲಿನ್ಯಾಗ ಕಲಿಯೋವಾಗ ಸದಾಶಿವ ನನಗ ಇಂಗ್ಲೀಷು ಹೇಳಿಕೊಡತಿದ್ದ. ಅವನ ಲಗ್ನ ಆದದ್ದು ಗೊತ್ತಿದ್ರೂ ನಾ ಅವನನ್ನ ಪ್ರೀತಿ ಮಾಡತಿದ್ದೆ. ಪ್ರೀತಿಗೆ–ಲಗ್ನಕ್ಕ ಏನೂ ಸಂಬಂಧ ಇಲ್ಲಂತ ಅವನs ಹೇಳಿದ್ದ. ಆದರ–'

ಮುಂದಿನ ಕತೆ ಗೊತ್ತಿದೆ ಮಾಲತಿಗೆ. ಅವ್ವನಂತೆಯೇ ಇನ್ನೂ ಬಹಳ ಹುಡುಗಿಯರಿಗೆ ಅವನು ಇಂಗ್ಲೀಷು ಹೇಳಿಕೊಡುತ್ತಿದ್ದುದು, ಅವರೆಲ್ಲರಿಗೂ ಅವನು ಪ್ರೀತಿಗೂ–ಲಗ್ನಕ್ಕೂ ಸಂಬಂಧವಿಲ್ಲವೆಂದು ಹೇಳುತ್ತಿದ್ದುದು.... ಅವ್ವನಿಗೆ ಈ ವಿಷಯ ಗೊತ್ತಾದಾಗ ಅವಳಿಗೆ ಬಹಳ ಶಾಕ್ ಆದದ್ದು, ಮುಂದೆ ಅವನು ಲಾ ಓದಲಿಕ್ಕೆ ಬೇರೆ ಊರಿಗೆ ಹೋದದ್ದು. ಎಲೆಕ್ಶನ್ನು ಸುಡುಗಾಡು ಅಂತ ರಾಜಕಾರಣ ಸೇರಿದ್ದು, ಅನೇಕ ವರ್ಷಗಳ ನಂತರ ಬೇಸರವಾಗಿ ಅಪ್ಪನನ್ನು ಮದುವೆಯಾಗಲು ಒಪ್ಪಿದ್ದು, ಸದಾಶಿವರಾಯನನ್ನು ಮರೆತುಬಿಟ್ಟದ್ದು....

ಹಳೆಯ ಕತೆ. ಅವ್ವನ ಹೃದಯದ ತೀರ ಒಳಗಿನ ಪದರಿನ ಕೆಳಗಿನ ಪಾತಾಳಗವಿಯೊಳಗುಳಿದಿರಬೇಕು ಅದು. ಮೇಲೆ ಮಾತ್ರ ಅವ್ವ ಗಂಭೀರ, ಸ್ಥಿರ. ಎಲ್ಲ ಗೊತ್ತಿದ್ದೂ ಎಲ್ಲವನ್ನೂ ಸಹನೆಯಿಂದ ಎದುರಿಸಿ ಜೀವಿಸಿದ್ದೂ, ಮುಪ್ಪಿನ ದಿನಗಳಲ್ಲೇಕೆ ಹೀಗಾಗತೊಡಗಿದ್ದಾಳೆ ಅವ್ವ ?

"ಏ ಮಾಲತೀ...."

"ಏನವ್ವಾ ?"

"ಯಾರೋ ಬಂದಾರ ನೋಡs "

ಯಾರೇ ಬಂದಿದ್ದರೂ ಬಂದವರ ಹೆಸರು–ಕುಲಗೋತ್ರ ಎಲ್ಲವನ್ನೂ ಒಳಗಡೆ ಕೂತಿರುವ ಅವ್ವನಿಗೆ ಒಯ್ದು ತಿಳಿಸಬೇಕು. ಇಲ್ಲವಾದರೆ ಕೂಗಾಡಲು ಸುರು. ಈಗೀಗ ಅವ್ವ ಎಲ್ಲದರಲ್ಲೂ ಬಾಯಿಹಾಕಿ ಬೇಸರವುಂಟು ಮಾಡುತ್ತಿದ್ದಾಳೆ. ಅವಳಿಗೆ ಎಲ್ಲರ ಬಗೆಗೆ ವಿಪರೀತ ಕುತೂಹಲ.

"ಏ ಮಾಲತೀ."

"ಯಾರೂ ಇಲ್ಲವ್ವಾ, ಸುಮ್ನಿರು."

"ಯಾರೋ ಮಾತಾಡ್ತಾರಲ್ಲs, ಸುಳ್ಳ ಯಾಕ ಹೇಳತೀ ? ನನ್ನ ಮಾತು ಅಂದ್ರ ಎಷ್ಟ ಅಲಕ್ಷ್ಯ ನಿನಗ–"

ಮುಂದೆ ಕೇಳಲಾಗದೆ ಮಾಲತಿ ಎದ್ದು ಅವ್ವನ ಕೋಣೆಗೆ ಹೋಗಿ ಪಿಸುಧ್ವನಿಯಲ್ಲಿ ಹೇಳಿದಳು. "ಅವ್ವಾ, ದಯಮಾಡಿ ಬಾಯಿಮಾಡಬೇಡ. ಬೀನಾನ

ಕ್ಲಾಸ್‌ಮೇಟು– ಆ ಹುಡುಗ ಚಂದು ಬಂದಾನ.''

'ಚಂದೂನs ? ಅವನಿಗೆ ಒಳಗ ಬಂದು ನನ್ನ ಭೆಟ್ಯಾಗಂತ ಹೇಳು. ನಾನs ಕೇಳತೀನಿ ಎಂದ ಲಗ್ನಾ ಮಾಡಿಕೋತಾನಂತ. ನೀ ಬೀನಾನ್ನ ಅವನ ಜೋಡಿ ಸಿನೇಮಾಕ್ಕ– ತಿರಗ್ಯಾಡ್ಲಿಕ್ಕೆ ಕಳಿಸಿ ಥಣ್ಣಗ ಕೂಡತೀ. ನಾಳೆ ಅವಾ ಎಲ್ಲೆರs ಓಡಿ ಹೋದರ ಏನ ಮಾಡತಿ ? ಗಂಡಸರನ್ನ ನಂಬಬಾರದs ಖೋಡೀ. ಬೀನಾಗ ಏನೂ ತಿಳಿಯೂದಿಲ್ಲ. ಕರೀ ಇಬ್ರನ್ನೂ ಇಲ್ಲೆ.... ?''

''ಅವ್ವಾ, ಪ್ಲೀಜ್, ಸ್ವಲ್ಪ ಸುಮ್ನಿರು. ನಾ ಎಲ್ಲಾ ಹೇಳತೀನಿ.''

ಮಾಲತಿಗೆ ಜೀವದ ಸುತ್ತು ಬಂದಿತ್ತು. ಚಂದುವಿಗೆಲ್ಲಿ ಕೇಳಿಸುವುದೋ ಎಂಬ ಭಯ ಅವಳಿಗೆ.

ಬೀನಾ ಬೆಳೆದ ಹುಡುಗಿ, ಚಂದುವನ್ನು ತಾನು ಪ್ರೀತಿಸುವುದಾಗಿಯೂ ಬಿ. ಎ. ಆದ ನಂತರ ತಾವಿಬ್ಬರೂ ಮದುವೆಯಾಗಲು ನಿರ್ಧರಿಸಿರುವುದಾಗಿಯೂ ಹೇಳಿದ್ದಾಳೆ. ಬೇಡವೆಂದರೆ ಅವಳು ಕೇಳಲಿಕ್ಕೂ ಇಲ್ಲ. ಸುಮ್ಮನೆ ಇಲ್ಲದ ಹಗರಣ ಮಾಡುವುದರಲ್ಲಿ ಏನರ್ಥವಿತ್ತು ? ಅವಳು ಚಂದುವಿನೊಂದಿಗೆ ಹೊರಗೆ ಹೋದಾಗಲೆಲ್ಲಾ ತಿರುಗಿ ಬರುವವರೆಗೂ ತನ್ನ ಹೃದಯ ಧಡಧಡಿಸುತ್ತಿರುತ್ತದೆ. ತಾನು ನಿಷ್ಕಾಳಜಿಯಿಂದಿರುವೆನೆಂದು ಅವ್ವನ ಆಕ್ಷೇಪಣೆ. ಯಾರಿಗೆ ಏನೆಂದು ತಿಳಿಸಿ ಹೇಳುವುದು ?

–ಚಂದು ಹೋದೊಡನೆ ಬಿರುಗಾಳಿಯಂತೆ ಒಳನುಗ್ಗಿದಳು. ಬೀನಾ. ''ಓಹ್ ಮಮ್ಮೀ, ಇದು ಮನೀನೇ ಅಲ್ಲ. This is hell...hell, ಅಜ್ಜಿಗೆ ಸುಮ್ನ ಒತ್ತಟ್ಟಿಗೆ ಕೂಡಲಿಕ್ಕಾಗೂದಿಲ್ಲೇನು ? ಯಾಕ ಹಿಂಗ ತ್ರಾಸ ಕೊಡ್ತಾಳ ಎಲ್ಲಾರಿಗೂ ? ಆಕೀಗೆ ಖರೇನs ತಲೀ ಪೂರಾ ಕೆಟ್ಟು ಹೋಗೇದ. ನಾ ಎಂದಿನಿಂದ ನೋಡಲಿಕ್ಹತ್ತೀನಿ, ನನ್ನ ಮ್ಯಾಲಂತೂ ಭಾಳ ಕಣ್ಣು ಈ ಮುದುಕಿಗೆ. ನಾನು ಚಂದು ಇಬ್ಬರೇ ಇದ್ದಾಗೆಲ್ಲಾ ಆಕಿ ಖೋಲೀ ಸುತ್ತಮುತ್ತ ಸುಳದಾಡತಿರತಾಳ. ಕಿಡಕಿಯೊಳಗಿನಿಂದ, ಬಾಗಿಲ ಸಂದಿಯೊಳಗಿನಿಂದ ಹಣಿಕಿ ಹಾಕತಾಳ. ಚಂದೂಗ ಇವತ್ತ ಅದರ ಸಂಶಯ ಬಂತು, and he got so wild– ಇನ್ನೊಮ್ಮೆ ಮನೀಗೆ ಬರೂದಿಲ್ಲಂತ ಹೇಳೇ ಹೋಗ್ಯಾನ ಆತ. ಮಮ್ಮೀ, ನಾ ಏನ್ಮಾಡ್ಲಿ ಹೇಳು ? ಈ ಹುಚ್ಚಿನ್ನ ಮನ್ಯಾಗ ನೀ ಇಟಗೊಂಡಿರೋ ತನಕಾ ನಮಗ್ಯಾರಿಗೂ ಶಾಂತಿ ಇಲ್ಲ. ಆಕಿನ್ನ ಹಾಸ್ಪಿಟಲಿಗೆ ಅಥವಾ ಮುದಕರ ಸಲುವಾಗಿ ಬ್ಯಾರೆ ಆಶ್ರಮ ಇರತಾವಲ್ಲ ಅಲ್ಲೆ ಕಳಿಸಲಿಕ್ಕೆ ನೀ ಅಂತೂ ಒಪ್ಪೂದಿಲ್ಲ. ನಾನs ಈ ಮನೀಬಿಟ್ಟು ಹೋಗಿಬಿಡ್ತೀನಿ. This is too much..."

''ಸಹನ ಮಾಡಿಕೋಬೇಕು ಬೀನಾ, ಅವ್ವಗ ನಮ್ಮನ್ನ ಬಿಟ್ಟರ ಯಾರಿದ್ದಾರ

ಹೇಳು ? ಆಕೀಗೆ ಮೊದಲs ತ್ರಾಸಾಗೇದ. ಇನ್ನ ಅಂಥಾ ಹೋಮ್ಸ್‌ಗೆ ಅಥವಾ ಹಾಸ್ಪಿಟಲಿಗೆ ಕಳಿಸಿದರಂತೂ ಆಕಿ–ಎದಿ ಒಡಕೊಂಡು ಪ್ರಾಣಾನೇ ಬಿಡತಾಳ."

"ಹಾಂಗಾದರ ಛಲೋನೇ ಆತು–"

"ಶಟಪ್ ಬೀನಾ, ಇನ್ನೊಂದು ಹತ್ತು ವರ್ಷಕ್ಕೆ ನಾನೂ ಮುದುಕಿ ಆಗ್ತೀನಿ. ಆವಾಗ ನನ್ನನ್ನೂ ನೀ ಒಯ್ದು ಅಲ್ಲೇ ಹಾಕುವಾಕೆ ಹೌದಲ್ಲೋ"-ಮಾಲತಿಯ ದನಿ ಅಸಹನೆಯಿಂದ ಕಂಪಿಸುತ್ತಿತ್ತು.

"Oh God ! ನಿನ್ನ ಜೋಡೀ ವಾದಾ ಹಾಕೋದು ಕಠಿಣ ಮಮ್ಮೀ. ಆದರ ಒಟ್ಟ ಇಷ್ಟ ಕೇಳು– ನಿನಗ ಇವತ್ತೋ ನಾಳೆಯೋ ಸಾಯುವ ಮುದುಕಿ ಬೇಕೋ ಅಥವಾ ಬಾಳಿ ಬದುಕುವ ನಿನ್ನ ಮಕ್ಕಳು ಗಂಡ ಬೇಕೋ ಅನ್ನೂದನ್ನ ನೀ ಈಗ ನಿರ್ಧಾರ ಮಾಡ್ಲಿಕ್ಕೇ ಬೇಕು" –ಬೀನಾ ಹೆಜ್ಜೆ ಅಪ್ಪಳಿಸುತ್ತ ರೂಮಿಗೆ ಹೋದ ಸದ್ದಿನೊಂದಿಗೆ ಅವಳ 'ಹೆಲ್-ಹೆಲ್' ಕರಗಿಹೋಗುತ್ತಿತ್ತು....

–ಬೀನಾ ಹೇಳಿದಂತೆ ಮನೆ ನಿಜವಾಗಿಯೂ ನರಕವಾಗುತ್ತಿದೆ. ಇಂದೋ ನಾಳೆಯೋ ಸಾಯುವ ಮುದುಕಿ ತನ್ನ ಅವ್ವ ನಿಜ ; ಆದರೆ ಇವರೆಲ್ಲ ಹೇಳುವಂತೆ ಆಕೆ ಖಂಡಿತ ಹುಚ್ಚಿಯಲ್ಲ. ತನ್ನ ಅವ್ವ, ಇಷ್ಟು ವರ್ಷ ಇಷ್ಟೊಂದು ಮೆರೆದಾಡಿದ್ದ ಅವ್ವ, ಹುಚ್ಚಿಯಾಗಲು ಸಾಧ್ಯವೇ ಇಲ್ಲ. ಅವ್ವನ ಕಣ್ಣೊಳಗೆ ಸದಾ ಜ್ವಲಿಸುತ್ತಿರುವ ಆ ಏನೋ ಒಂದು–ಹುಚ್ಚಲ್ಲ ಅದು, ಎಂಥದೋ ವೇದನೆ, ಎಂಥದರಿಂದಲೋ ಪಾರಾಗಬೇಕೆನ್ನುವ ಉತ್ಕಟ ಹವಣಿಕೆ– ತನ್ನ ಗಂಡ, ಬೀನಾ, ರಾಜ ಯಾರಿಗೂ ಅದು ತಿಳಿಯಲಾರದು.

ತನ್ನ ಗಂಡನ ಬಾಸ್‌ಗೆ ವರ್ಗವಾಗಿದ್ದರಿಂದ ಅಂದು ಆಫೀಸಿನ ಜನರೆಲ್ಲ ತಮ್ಮ ಮನೆಗೆ ಡಿನರ್‌ಗೆ ಆಮಂತ್ರಿತರಾಗಿ ಬಂದಿದ್ದರು. ಊಟದ ನಂತರ ಅವರೆಲ್ಲ ಕೋಕಾ-ಕೋಲಾ ಕುಡಿಯುತ್ತ, ಸಿಗರೇಟು ಸೇದುತ್ತ, ಗಟ್ಟಿಯಾಗಿ ನಗುತ್ತ, ಹಾಲ್‌ನಲ್ಲಿ ಯಾವುದೋ ಇಂಗ್ಲಿಷ್ ರಿಕಾರ್ಡ್ಸ್ ಕೇಳುತ್ತ ಕೂತಿದ್ದರು ; ವರ್ಗವಾಗಿ ಹೋಗಲಿದ್ದ ಬಾಸ್ ಬೀನಾಳನ್ನು ಹಾಡು ಹೇಳಲು ಒತ್ತಾಯಿಸುತ್ತಿದ್ದ ; ಫಿಲ್ಮಸ್ಟಾರ್ ಹಾಗೆ ಮೇಕಪ್ ಮಾಡಿಕೊಂಡಿದ್ದ ಅವಳು ಯಾವುದೋ ಹಿಂದಿ ಪಿಕ್ಚರಿನ ವಿರಹಗೀತೆ ಹಾಡಿದಾಗ 'ವಂಡರಫುಲ್' ಎಂದು ಅವಳ ಬೆನ್ನು ಚಪ್ಪರಿಸುತ್ತಿದ್ದ. ಅಡಿಗೆ ಮನೆಯಲ್ಲಿದ್ದರೂ ಹೊರಗೆ ನಡೆದದ್ದೆಲ್ಲ ತಿಳಿಯುತ್ತಿತ್ತು ಮಾಲತಿಗೆ. ಕೆಲಸದ ಗಡಿಬಿಡಿಯಲ್ಲಿ ಅವ್ವನನ್ನು ಮರೆತಿದ್ದಳು ಆಕೆ.

"ಮಮ್ಮೀ, ಮಮ್ಮೀ...." ಹೊರಗಿನಿಂದ ಬೀನಾ ಗಟ್ಟಿಯಾಗಿ ಕೂಗಿದಾಗ ಕೈಯಲ್ಲಿಯ ಕೆಲಸಬಿಟ್ಟು ಓಡಿಬಂದಳು ಮಾಲತಿ. "ಏನು ? ಏನಾತು ಬೀನಾ ?"

ಉತ್ತರದ ಅವಶ್ಯಕತೆಯಿರಲಿಲ್ಲ. ಕೆದರಿದ ಕೂದಲಿನ, ಮಾಸಿದ ಸೀರೆಯ ಅವ್ವ ತನ್ನ ಕೋಲು ಸಹಿತವಾಗಿ ಹೊರಗೆ ಬಂದು ಸೋಫಾದ ಮೇಲೆ ಆಫೀಸರುಗಳ ಮಧ್ಯದಲ್ಲಿ ಕೂತುಬಿಟ್ಟಿದ್ದಳು. ತನ್ನ ಗಂಡನ ಕೆಂಗಣ್ಣಿನ ದೃಷ್ಟಿಯನ್ನೆದುರಿಸುವ ಧೈರ್ಯವಾಗದೆ ಮಾಲತಿ ತಾಯಿಯ ಸಮೀಪ ಬಂದು ರಮಿಸುವ ಧ್ವನಿಯಲ್ಲಿ ಹೇಳಿದಳು, ‘ಒಳಗೆ ನಡೀ ಅವ್ವಾ.’’

‘‘ನಾ ಒಲ್ಲೆವಾ ಒಲ್ಲೆ. ನನಗ ಅಂಜಿಕಿ ಬರ್ತದ, ಯಾರೋ ನನ್ನ ಹಿಂದಿಂದೇ ಇದ್ದಾಂಗ ಅನಸತದ.’’

ಅವ್ವ ನಿಜವಾಗಿಯೂ ಹೆದರಿದ್ದಳು. ಏನು ಮಾಡಲೂ ತೋಚದೆ ಇಲ್ಲದ ನಗೆ ತಂದುಕೊಂಡು ಎಲ್ಲರನ್ನೂ ನೋಡುತ್ತಾ ಪೆಚ್ಚುಧ್ವನಿಯಲ್ಲಿ ಹೇಳಿದಳು ಮಾಲತಿ, ‘‘ನನ್ನ ಮದರ್ ಬಹಳ ಸೋಶಿಯಲ್. ಇಷ್ಟು ವಯಸ್ಸಾದ್ರೂ ಬಹಳ ಹುರುಪು.’’

‘‘ಹೆ ಹ್ಹೆ ಹ್ಹೆ’’ ಎಂದರು ಕೆಲವರು.

ನಂತರ ಬಹಳ ಹೊತ್ತುನಿಲ್ಲದೆ ಬಂದ ಅತಿಥಿಗಳೆಲ್ಲ ಒಬ್ಬೊಬ್ಬರಾಗಿ ಗುಡ್‌ನೈಟ್ ಹೇಳಿ ಹೊರಟುಹೋದರು.

–‘‘ನಾ ಇಷ್ಟದಿವಸ ನಿನ್ನ ಸಲುವಾಗಿ ತಡಕೊಂಡಿದ್ದೆ ಮಾಲತಿ, ಈಗ ನನಗ ಸಾಧ್ಯಿಲ್ಲ. ನಿನಗೆ ನಾ ಬೇಕಾಗಿದ್ರ ನಿನ್ನ ಅವ್ವನ್ನ ಬಿಡಬೇಕಾಗತದ ನೀ. ತಿಳೀತಿಲ್ಲೊ ? ಇಲ್ಲೆ ಹಾಸ್ಪಿಟಲಿನ ಡಾಕ್ಟರು ನನಗ ಗುರುತಿದ್ದಾರ. ಅವರು ಹೊಸದಾಗಿ ಮುದುಕರ ಸಲುವಾಗಿ ಒಂದು ಹೋಮ್ ತೆಗದಾರ. ಅಲ್ಲೆ ಸೇರಸೂಣಂತ ನಿಮ್ಮವ್ವನ್ನ.’’ –ದೃಢವಾದ ಧ್ವನಿಯಲ್ಲಿ ಹೇಳಿದ್ದ ಅವಳ ಗಂಡ....

ಮಾಲತಿಯಲ್ಲಿ ಉತ್ತರಿಸುವ ಶಕ್ತಿ ಇರಲೇ ಇಲ್ಲ.

*

ಎಲ್ಲರ ಒತ್ತಾಯದಂತೆ ಮುದುಕಿಯನ್ನು ಕಳಿಸಿ ಒಂದು ವಾರವಾಯಿತು. ಅವ್ವನ ರೂಮಿನ ಕಡೆ ಹಣಿಕಿಹಾಕಲೂ ಸಾಧ್ಯವಾಗಿರಲಿಲ್ಲ ಮಾಲತಿಗೆ. ಅವಳ ಮನಸ್ಸು ಶೂನ್ಯವಾಗಿದೆ. ‘ಅವ್ವಾ, ನಿಮ್ಮೂರಿಗೆ ಹೋಗೋಣ ನಡಿ, ಬರ್ತೀಯೇನು ?’ ಎಂದು ಕೇಳಿದಾಗ ಮುದುಕಿಯ ಕಣ್ಣಲ್ಲಿ ಎಂಥದೋ ಬೆಳಕು ಮಿಂಚಿತ್ತು. ಆ ಬೆಳಕಿನಲ್ಲಿ ನೂರು ಕತೆಗಳ- ಸಾವಿರ ನೆನಪುಗಳ ಜೀವಂತ ದರ್ಶನವಾಗಿತ್ತು ಮಾಲತಿಗೆ. ಏನೂ ತಕರಾರು ಮಾಡದೆ, ಕೂಗಾಡದೆ, ವಿರೋಧಿಸದೆ ಹೊರಡಲು ತಯಾರಾಗಿದ್ದಳು ಅವ್ವ. ತಲೆಬಾಚಿ ಒಳ್ಳೆಯ ಸೀರೆ ಉಟ್ಟು ‘ನಾನು ರೆಡಿ’ ಅಂದಿದ್ದಳು. ಅಳಿಯನೊಂದಿಗೆ ಟ್ಯಾಕ್ಸಿಯಲ್ಲಿ ಕೂತು ಬಾಗಿಲಲ್ಲಿ ನಿಂತ ಮಗಳ ಕಡೆ ತಿರುಗಿ, ‘ಟಾಟಾ’ ಹೇಳಿದಾಗ ಮಾಲತಿಯ ಕಣ್ಣಿಗೆ ಕತ್ತಲು ಬಂದಂತಾಗಿತ್ತು. ಇನ್ನು ಮುಗಿಯಿತು ಅವ್ವನೊಂದಿಗಿನ ಸಂಬಂಧ. ಇನ್ನು ತಾವೆಲ್ಲ ಸುಖವಾಗಿರಬಹುದು. ಹೌದು.

ಆದರೆ ಅವ್ವ....?

ರಾಜ ದಿನಾ ಸಂಜೆ ಹೋಗಿ ಅಜ್ಜಿಯನ್ನು ನೋಡಿಕೊಂಡು ಬರುತ್ತಿದ್ದ. 'ಆಕಿ ಆರಾಮಿದಾಳ. ನೀ ಚಿಂತೀ ಮಾಡಬ್ಯಾಡ ಮಮ್ಮೀ' ಎಂದು ಹೇಳುತ್ತಿದ್ದ. 'ಆಕೀಗೇನು ಬೇಕಾದರೂ ಒಯ್ದುಕೊಡು ರಾಜೂ' ಎನ್ನುತ್ತಿದ್ದಳು ಮಾಲತಿ. ಅವ್ವನಿಗೆ ಪ್ರಿಯವಾದ ತಿನಿಸು ಕಳಿಸಿದಾಗ ಆಕೆ ಅದನ್ನು ತಿಂದಿರಲಿಲ್ಲವೆಂದು ಕೇಳಿ ರಾತ್ರಿಯಿಡೀ ಅತ್ತಿದ್ದಳು....

ಅಂದು ಸಂಜೆ ಬಂದ ರಾಜ ಹೇಳಿದ್ದ, "ಅಜ್ಜಿ ತನ್ನ ಖೋಲಿಯೊಳಗೆ ತಲೆದಿಂಬಿನ ಕೆಳಗೆ ಡೈರಿ ಇಟ್ಟಾಳಂತ ಮಮ್ಮೀ. ಅದನ್ನ ತಂದುಕೊಡೂಂತ ನಾಲ್ಕು ದಿವಸದಿಂದ ಹೇಳ್ಲಿಕ್ಹತ್ಯಾಳ. ನನಗೆ ನೆನಪs ಆಗಿರ್ಲಿಲ್ಲ."

ಅವನಿಗೇಕೆ ನೆನಪಾಗಬೇಕು ? ಅವನು ಹಾಸ್ಪಿಟಲಿಗೆ ಹೋಗುತ್ತಿದ್ದುದೂ ಮಮ್ಮಿಯ ಸಲುವಾಗಿ. ಅಜ್ಜಿಯ ಬೇಕುಬೇಡಗಳೊಂದಿಗೆ ಅವನದೇನು ಸಂಬಂಧ ? – ತುಂಬ ಕಸಿವಿಸಿಯಾಯಿತು ಮಾಲತಿಗೆ ; 'ನಾ ಈಗ ಸಧ್ಯಾ ಹುಡಿಕಿ ಕೊಡ್ತೀನಿ ರಾಜೂ, ಈಗಿಂದೀಗ ಹೋಗಿ ಅದನ್ನ ಅವ್ವಗ ಕೊಟ್ಟ ಬಾ. ಆಮ್ಯಾಲೆ ಚಹಾ ಕುಡದೀಯಂತ. ಏನು? ಶ್ಯಾಣ್ಯಾ ನನ್ನ ಮರಿ."

– ಅವ್ವನ ರೂಮಿನ ತುಂಬ ಕತ್ತಲು. ತಡವರಿಸುತ್ತ ಒಳಬಂದಳು ಮಾಲತಿ. ತಲೆದಿಂಬಿನ ಕೆಳಗೆ ಹರಿದ ರೇಶಿಮೆ ಸೀರೆಯ ತುಕಡಿಯಲ್ಲಿ ಸುತ್ತಿದ್ದ ಪುಟ್ಟ ಡೈರಿ. ನಡುವೆ ಸವೆದುಹೋಗಿದ್ದ ಪೆನ್ಸಿಲಿನದೊಂದು ತುಣುಕು. ಏನು ಬರೆಯುತ್ತಿದ್ದಳು ಅವ್ವ ಈ ಡೈರಿಯಲ್ಲಿ ?

ಕಣ್ಣು ಕಿರಿದುಗೊಳಿಸಿ ಮಾಲತಿ ಕೊನೆಯ ಪೇಜಿನಲ್ಲಿ ಗೀಟುಗಳ ಹಾಗೆ ಕಾಣುತ್ತಿದ್ದ ಪೆನ್ಸಿಲಿನ ಗುರುತುಗಳ ಮೇಲೆ ದೃಷ್ಟಿಯೋಡಿಸಿದಳು :

ಒಣಗಿದ ಗಿಡದ ಹಾಗೆ ಕಾಣುತ್ತಿದ್ದ ಒಂದು ಚಿತ್ರ, ಎಲೆ, ಹೂ – ಎಲ್ಲ ಮಕ್ಕಳು ಬರೆದ ಹಾಗೆ. ಕೊನೆಯಲ್ಲಿ ಸೊಟ್ಟ ಅಕ್ಷರಗಳಲ್ಲಿ ಎರಡು ಸಾಲು ; 'ಸದಾಶಿವ, ನನ್ನ ಇಡೀ ಜೀವನ ನಿನ್ನ ಮರೀಲಿಕ್ಕೆ ಪ್ರಯತ್ನ ಮಾಡೋದ್ರಾಗ ವ್ಯರ್ಥ ಕಳೆದೆ. ನೀ ನನ್ನ ನೆರಳಾಗಿ ನನಗ ಬೆನ್ನುಹತ್ತಿರುವಿ. ನಿನ್ನ ನೆನಪಿನಿಂದ ನನಗ ಬಿಡುಗಡೀನೇ ಇಲ್ಲ. ಇಗಾ, ನಾನೂ ಬಂದೆ ತಡಿ, ಸದೂ....ಸದ್ಯಾ....'

– ಇನ್ನೇನು ಮಾಲತಿಯ ಕಣ್ಣೀರು ಕೆನ್ನೆಯ ಮೇಲೆ ಉರುಳಬೇಕು. ಬಾಗಿಲಲ್ಲಿ ರಾಜನ ಹೆಜ್ಜೆಯ ಸದ್ದು. ತಟ್ಟನೆ ಕಣ್ಣೊರೆಸಿಕೊಂಡು ಎದ್ದು ನಿಂತಳು ಆಕೆ, "ಇದನ್ನ ತಗೋ ರಾಜೂ, ಅವ್ವಗ ಕೊಟ್ಟ ಬಾ ಹೋಗು."

❖ ❖ ❖

# ಮುಕ್ತಿ

ಪ್ಲ್ಯಾಟ್‌ಫಾರ್ಮ್ ಮೇಲಿನ ಆ ಗದ್ದಲ, ಹೊರಗಡೆ ಆ ಗಿಡದ ಕೆಳಗೆ ಸೇಂಗಾ ಮಾರುವ ಮುದುಕಿ, ಅಲ್ಲೇ ಸ್ವಲ್ಪ ಮುಂದೆ ರಸ್ತೆಯ ಬದಿಗೆ ಎಂದಿನಿಂದಲೂ ತಳವೂರಿದ್ದ ಕುಷ್ಠರೋಗಿ ಭಿಕ್ಷುಕ –ಎಲ್ಲಾ ಎಂದಿನಂತೆಯೇ ಇದೆ. ಏನೂ ಬದಲಾವಣೆಯಿಲ್ಲ. ತಲೆಯ ಮೇಲೆ ಸುಡುವ ಬಿಸಿಲು, ಮೈತುಂಬ ಹರಿಯುವ ಬೆವರು, ಹೊತ್ತಾಗಿಹೋಯಿತಲ್ಲಾ ಎಂಬ ಧಾವತಿ –ಎಲ್ಲ ಎಂದಿನಂತೆಯೆ. ದೂರದಿಂದಲೆ ಕಾಣುವ ಆಫೀಸಿನ ಗೋಪುರದ ಗಡಿಯಾರ, ಗೇಟಿನಲ್ಲಿ ಬೀಡಿ ಸೇದುತ್ತ ನಿಂತಿರುವ ನರೆಗೂದಲಿನ ಪ್ಯೂನ್, ಎರಡೂ ಬದಿಗೂ ಇದ್ದ ಟೇಬಲುಗಳ ನಡುವಿನಿಂದ ಹಾಯ್ದು ಹೋಗುವಾಗ ಹಲವು 'ಗುಡ್ ಮಾರ್ನಿಂಗ್ ಶಂಕರ ಮಾಮಾ', ಆ ತನ್ನ ಹಳೆಯ ಕುರ್ಚಿ, ಬದಿಯ ಚೇಂಬರಿನ ಮುಚ್ಚಿದ ತೂಗಾಡುವ ಬಾಗಿಲಿಗೆ ನೇತುಬಿದ್ದ 'ಮಿ. ಚಂದೂಲಾಲ ಶಹ. ಅಸಿಸ್ಟಂಟ್ ಮ್ಯಾನೇಜರ್' –ಅದೂ ಸಹ ಎಂದಿನಂತೆಯೆ. ಆದರೂ ಇಂದು ಹೊಸ ಹುರುಪು ತನಗೆ. ಯಾಕೋ ಜೀವನ ಒಮ್ಮೆಲೆ ಹೊಸದಾಗಿ ಸುರುವಾದಂತೆ ಅನಿಸುತ್ತಿದೆ. ಹತ್ತು ವರ್ಷ ಸಣ್ಣವನಾದಂತೆ ಅನಿಸುತ್ತಿದೆ. ಎದುರಿನ ಟೇಬಲಿಗೆ ಕುಳಿತ ಸ್ಟೆನೋ ಮಿಸ್ ಪರ್ವತಿಯ ಬಣ್ಣ ಬಳಿದ ಮುಖ ನೋಡಿ ಶಿಳ್ಳು ಹಾಕಬೇಕೆನಿಸುತ್ತಿದೆ. ಇವತ್ತು ನಡುವಿನ ಬಿಡುವಿನಲ್ಲಿ ಎಲ್ಲರಿಗೂ ಸರ್‌ಪ್ರೈಜ್ ಟೀ ಕೊಟ್ಟುಬಿಡಬೇಕು ಅನಿಸುತ್ತಿದೆ. ಯಾಕೆ ಹೀಗೆ ?

"ಗುಡ್ ಮಾರ್ನಿಂಗ್ ಶಂಕರ ಮಾಮಾ, ಯಾಕೋ ಭಾಳ ಖುಷಿ ಕಾಣಸ್ತೀರಲ್ಲ ಇವತ್ತು ? ಮತ್ತೇನು ಪ್ರಮೋಶನ್-ಗಿಮೋಶನ್ ಸಿಕ್ಕಿತೇನು ?" –ಮೂಲೆಯ ಟೇಬಲಿನ ಬೀಟಲು ಕೂದಲಿನ ಕ್ಲಾರ್ಕ್ ಗಿರಿಧರ ಕೇಳಿದ.

ಕೋಟು ಕಳಚಿ ಕುರ್ಚಿಯ ಬೆನ್ನಿಗೆ ಹಾಕುತ್ತ ಹೀರೋನ ಸ್ಟೈಲಿನಲ್ಲಿ ನಕ್ಕು ಉತ್ತರಿಸಿದ ಆತ, "ಛೇ, ಎಲ್ಲೀ ಪ್ರಮೋಶನ್ ? ಪ್ರಮೋಶನ್ ಸಿಕ್ಕೀತು ಅಂತ ಹಾದಿ ಕಾಯೋದರಾಗ ರಿಟಾಯರ್ ಆಗಲಿಕ್ಕೆ ಬಂದೆ. ಹೆಡ್‌ಕ್ಲಾರ್ಕ್ ಆಗೇ ಸಾಯಬೇಕು ಅಂತ ಬರಧಾಂಗ ಕಾಣಸ್ತದ ಹಣೆಯೊಳಗ."

'ಅದ್ಯಾಕ್ರೀ ? ಅಸಿಸ್ಟಂಟ್ ಮ್ಯಾನೇಜರು ನಿಮ್ಮ ಬುಟ್ಟಿಯೊಳಗ ಇರೋತನಕಾ ನಿಮಗ್ಯಾಕ ಚಿಂತಿ ? ನಾಳೆ ಅವರು ಮ್ಯಾನೇಜರ್ ಆದಕೂಡ್ಲೆ ಅವರ ಈಗಿನ ಜಾಗಕ್ಕೆ

ನೀವೇ.''

ಗಿರಿಧರನ ಭವಿಷ್ಯವಾಣಿ ತನ್ನೊಳಗಿನ ಭವ್ಯ ಕನಸಿನೊಂದಿಗೆ ತಾಳ ಹಾಕಿ ಕುಣಿಯುತ್ತಿದೆ. ಅದರಲ್ಲಿ ಏನೂ ಅತಿಶಯೋಕ್ತಿಯಿಲ್ಲ. ಚಂದೂಲಾಲನ ಮೇಲೆ ತನ್ನ ಇಂಪ್ರೆಶನ್ ಒಳ್ಳೆಯದಿರುವ ತನಕ ತಾನು ನಿರಾಶನಾಗಲು ಕಾರಣವೇ ಇಲ್ಲ. ಕನಸುಗಳೆಲ್ಲ ಸಿದ್ಧಿಸುವ ಕಾಲವೂ ಈಗ ಬರುತ್ತಿದೆ.

''ನಮ್ಮನ್ನ ಮಾತ್ರ ಮರೀಬ್ಯಾಡ್ರೆಪಾ. ಭರ್ಜರಿ ಪಾರ್ಟಿ ಕೊಡಬೇಕು ಮತ್ತ,''

''ಓ ಯೆಸ್, ಓ ಯೆಸ್'' – ಅನ್ನುತ್ತ ಕುರ್ಚಿಯಲ್ಲಿ ಕೂತ ಆತ. ಮೈಯೆಲ್ಲ ಬಲೂನಿನಂತೆ ಹಗುರ-ಹಗುರ. ಕಣ್ಣ ತುಂಬ ಎಂಥದೋ ತೃಪ್ತಿಯ ಅಮಲು. ಇಂದು ಮುಂಜಾನೆಯಿಂದಲೂ ಹೀಗೆ.

''ಇವತ್ತ ನಿಮ್ಮ ಕಲಾ ಯಾಕ ಬಂದಿಲ್ರೀ ಶಂಕರ ಮಾಮಾ ?'' – ಹಾಳಾದವಳು ಮಿಸ್ ಪರ್ವತಿ ಕನಸಿನ ಎತ್ತರದಿಂದ ಒಮ್ಮೆಲೆ ಕೆಳಗೆ ತಳ್ಳುತ್ತಾಳೆ ತನ್ನನ್ನು.

''ಆ್ಞ ? ಏನಂದ್ರಿ ? ಕಲಾ ? ಆಕೀಗೆ ಮೈಯಾಗ ನೆಟ್ಟಗಿಲ್ಲ. ಎಂಟು ದಿವಸ ಸಿಕ್ ಲೀವ್ಹ್ ತಗೊಂಡಾಳ ಇವತ್ತಿನಿಂದ.''

ಒಂದು ಕ್ಷಣ ಎಲ್ಲಾ ಕಡೆ ನಿಃಶಬ್ದ. ಯಾರು ಯಾರೋ ಕಣ್ಣು ಮಿಟುಕಿಸಿರಬೇಕು. ಅಸಿ. ಮ್ಯಾನೇಜರ್‌ನ ಚೇಂಬರಿನ ಕಡೆ ದೃಷ್ಟಿ ಹಾಯಿಸಿರಬೇಕು, ಕಲಾನ ಖಾಲಿ ಟೇಬಲಿನ ಕಡೆಗೂ ನೋಡಿರಬೇಕು – ಶಂಕರಮಾಮಾಗೆ ಎಲ್ಲ ಗೊತ್ತಾಗುತ್ತಿದೆ. ಆದರೆ ಯಾಕೋ ಗಂಟಲೊಣಗಿದಂತೆನಿಸುತ್ತಿರುವುದರಿಂದ ಮಾತಾಡುವುದು ಆಗುತ್ತಿಲ್ಲ.

ಸ್ವಲ್ಪ ಹೊತ್ತು ಟೈಪ್‌ರೈಟರುಗಳ ಕಟ್ ಕಟ್, ಫೈಲುಗಳ ಸರ್ ಸರ್ ಬಿಟ್ಟರೆ ಬೇರಾವ ಸಪ್ಪಳವೂ ಇಲ್ಲ.

'ಸಲಾಮ್ ಸರ್' – ಹೊರಗಡೆಯಿಂದ ಕೇಳಿಬಂದ ಪ್ಯೂನ್‌ನ ಗೊಗ್ಗರು ದನಿ. ಒಳಗಿದ್ದವರಿಗೆ ಎಚ್ಚರಿಕೆ. ಅಸಿ. ಮ್ಯಾನೇಜರ್ ಬಂದರು ಎಂದು.

'ಗುಡ್‌ಮಾರ್ನಿಂಗು'ಗಳಿಗೆ ನಸುಬಾಗಿ ಉತ್ತರಿಸುತ್ತ ಖಟ್ ಖಟ್ ಬೂಟಿನ ಸಪ್ಪಳ ಮಾಡುತ್ತ ತೂಗಾಡುವ ಬಾಗಿಲಲ್ಲಿ ತೂರಿದ ಚಂದೂಲಾಲನ ಬೆನ್ನು ಮರೆಯಾದೊಡನೆ ಪಿಸುದನಿಯಲ್ಲಿ ಕೇಳಿದಳು ಮಿಸ್ ಪರ್ವತಿ, ''ಬಾಸ್‌ನ ಮಗಳ ಜೋಡೀ ಇವರ ಎಂಗೇಜ್‌ಮೆಂಟ್ ಆತಂತಲ್ರೀ ಶಂಕರಮಾಮಾ ?''

ತಿರುಗಿ ಹುರುಪೇರಿತು ಶಂಕರ ಮಾಮಾನಿಗೆ, ''ಹೌದು ಹೌದು, ನಾನೇ ಅದಕ್ಕೆ ಮೀಡಿಯೇಟರ್ ಆಗಿದ್ದೆ.''

''ಅದಕ್ಕ ಇವರು ನಿಮ್ಮ ಮ್ಯಾಲೆ ಇಷ್ಟು ಖುಶ್ ಇದ್ದಾರ ಕಾಣಸ್ತದ.''

''ಹಹ್ಹ, ಇರದ ಏನು ? ಎಷ್ಟ ತ್ರಾಸ ತಗೊಂಡೀನಿ ಅದರ ಸಲುವಾಗಿ ಗೊತ್ತದ

ಏನು ? ಕಡೀಕೆ ನನ್ನ ಪ್ರಯತ್ನಕ್ಕ ಫಲ ಸಿಕ್ಕಿತು ಅಂತ ಸಮಾಧಾನ ನನಗ.''

''ನೀವು ಕೈಹಾಕಿದ ಕೆಲಸ ಎಂದೂ ಫೇಲಾಗೋದಿಲ್ಲ ಬಿಡ್ರಿ.''

''ಹಹ್ಹಹ್ಹ..........''

ಪ್ರಿಯವಾಗಿತ್ತು ಆ ಕಾಂಪ್ಲಿಮೆಂಟು, ಯೋಗ್ಯವೂ ಆಗಿತ್ತು. ........ ಹೌದು ಬಹಳ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದ ತಾನು, ಚಂದೂಲಾಲ ತಮ್ಮ ಜನರಲ್ ಮ್ಯಾನೇಜರರ ಮಗಳನ್ನು ಮದುವೆಯಾಗಲು ಒಪ್ಪುವಂತೆ ; ಕಳೆದ ವರ್ಷ ನಡೆದದ್ದೆಲ್ಲ ಆತ ಮರೆತುಬಿಡುವಂತೆ ; ಅದೆಲ್ಲ ಬರಿ ಕನಸು ಎಂದು, ಹುಚ್ಚು ಎಂದು ನಂಬುವಂತೆ ; ತನ್ನ ಪ್ರಯತ್ನ ಸಿದ್ಧಿಸಿದ್ದೇನು ಸಣ್ಣ ಮಾತೆ ? ಕೊನೆಗೊಮ್ಮೆ ತಾನು ನಿರೀಕ್ಷಿಸಿದಂತೆ ಎಲ್ಲ ನಡೆಯತೊಡಗಿತ್ತು.

–'ನಾ ಹಿಂದಿನದೆಲ್ಲಾ ಮರ್‍ತುಬಿಟ್ಟೇನಿ ಶಂಕರಮಾಮಾ, ನೀವು ಹೇಳಿಧಾಂಗ ಬಾಸ್ ಮಗಳನ್ನ ಲಗ್ನಾ ಮಾಡಿಕೊಳ್ಳಿಕ್ಕೆ ತಯಾರಿದ್ದೀನಿ. ಇಷ್ಟ ದಿವಸ ಆದದ್ದೆಲ್ಲಾ ಮನಸಿನ್ಯಾಗಿನಿಂದ ತಗದ ಬಿಟ್ಟು ಹೊಸಾ ಜೀವನ ಸುರು ಮಾಡತೀನಿ' –ಅಂದಿದ್ದ ಚಂದೂಲಾಲ ಅಂದು ಸಂಜೆ ಚೌಪಾಟಿಯಲ್ಲಿ ಅಡ್ಡಾಡುತ್ತಿದ್ದಾಗ, ಬಹಳ ಆತ್ಮೀಯವಾಗಿ.

ತನ್ನ ಗೆಲುವು ಅದು.

ಆ ಗೆಲುವು ಪೂರ್ಣವಾಗಲು ಇನ್ನೂ ಒಂದಿಷ್ಟು ಏನೋ ಆಗಬೇಕಿತ್ತು. ಅದು ಆದದ್ದು ಇಂದು ಮುಂಜಾನೆ.

''ಚಹಾ ತಗೋಬರ್‍ರಿ ಮಾಮಾ'' –ಬಾಗಿಲಲ್ಲಿ ನಿಂತು ಹೇಳಿದ್ದಳು ಕಲಾ.

ತಲೆಯ ಮೇಲೆ ಸ್ನಾನ ಮಾಡಿದ್ದಿರಬೇಕು, ಕೂದಲು ಬೆನ್ನಮೇಲೆ ಹರಡಿದ್ದವು ; ಸಾದಾ ಬಿಳಿಯ ಸೀರೆ ; ಯಾವ ಅಲಂಕಾರವೂ ಇಲ್ಲದೇ ಇದ್ದರೂ ಮಿಂಚುತ್ತಿದ್ದ ಕಣ್ಣುಗಳು.... ಇಪ್ಪತ್ತು ವರ್ಷಗಳ ಹಿಂದೆ ಇವಳ ಅಕ್ಕನನ್ನು ತಾನು ಮದುವೆಯಾದಾಗ ಅವಳೂ ಹೀಗೇ ಕಾಣುತ್ತಿದ್ದಳು. ಈಗ....ಓಹ್, ಕರಿ ಬಿಳಿ ಕೂದಲಿನ ನಿರಿಗೆಗಟ್ಟಿದ ಹಣೆಯ, ಜೋತುಬಿದ್ದ ಎದೆಯ, ದಪ್ಪ ನಿತಂಬದ ಸಿಡುಕಿ ಹೆಂಡತಿಯ ಈಗಿನ ಸ್ವರೂಪ ನೆನೆಯಲೂ ಬೇಸರವಾಯಿತು ಶಂಕರಮಾಮಾನಿಗೆ. ಅದರ ಬದಲು ಇನ್ನೊಮ್ಮೆ ಕಲಾನನ್ನೇ ನೋಡಿದರೆ ಈ ಫೈಲುಗಳಿಂದ ಹಿಡಿದ ತಲೆಚಿಟ್ಟು ಕಡಿಮೆಯಾದೀತು.

–ಕಲಾ ; ತಾಯಿ-ತಂದೆಯಿಲ್ಲದ ತಬ್ಬಲಿಯೆಂದು ತನ್ನ ಹೆಂಡತಿ ಮದುವೆಯಾದಾಗ ತನ್ನೊಂದಿಗೇ ಈ ಪುಟ್ಟ ತಂಗಿಯನ್ನೂ ಕರೆತಂದಿದ್ದಳು ಗಂಡನ ಮನೆಗೆ. ಆಗಿನ್ನೂ ಕಲಾಗೆ ಎಂಟು-ಹತ್ತು ವರ್ಷವಿದ್ದೀತು. ಅವಳನ್ನು ತಾನೂ ತನ್ನ

ಹೆಂಡತಿಯೂ ಬಹಳ ಪ್ರೀತಿಯಿಂದ ನೋಡಿಕೊಂಡೆವು— ಸ್ವಂತದ ಮಗಳ ಹಾಗೆ. ಅವಳಿಗೆ ಮ್ಯಾಟ್ರಿಕ್ ಪರ್ಯಂತ ಶಿಕ್ಷಣ, ಟೈಪಿಂಗ್ ಕ್ಲಾಸಿನ ಫೀಜು, ನಂತರ ಅಸಿ. ಮ್ಯಾನೇಜರ್‌ಗೆ ಹೇಳಿ ತಮ್ಮ ಆಫೀಸಿನಲ್ಲೇ ಟೈಪಿಸ್ಟ್ ಕೆಲಸ— ಈ ಎಲ್ಲ ಮಾಡಿದ್ದು ತಾನೇ ಅಲ್ಲವೇ ?

"ಹಿಂಗ್ಯಾಕ ನೋಡ್ತೀರಿ ಮಾಮಾ ? ಎಂದೂ ನೋಡಿಲ್ಲೇನು ನನ್ನ" —ನಕ್ಕು ಕೇಳಿದ್ದಳು ಕಲಾ.

ಈ ಹುಡುಗಿ ಆಫೀಸು ಸೇರಿದಾಗಿನಿಂದ ಆಫೀಸಿನವರೆಲ್ಲಾ ತನ್ನ ಹೆಸರಿಗೆ 'ಮಾಮಾ' ಸೇರಿಸಿಯೇ ಕೂಗತೊಡಗಿದ್ದಾರೆ. ತನಗೇನೋ 'ಶಂಕರರಾವ್' ಎಂದು ಕರೆಸಿಕೊಳ್ಳಲು ಹೆಚ್ಚು ಇಷ್ಟ. 'ಶಂಕರ ಮಾಮಾ' ತನ್ನ ನಿವೃತ್ತಿಯನ್ನು ನೆನಪಿಸುತ್ತದೆ. ಆದರೆ ಹೇಳುವುದು ಯಾರಿಗೆ ?

"ಭಾಳ ಸ್ಮಾರ್ಟ್ ಕಾಣಿಸ್ತೀ ಕಲಾ ಇವತ್ತ."

ಕಲಾನ ಕೆನ್ನೆಗಳು ಕೆಂಪೇರಲಿಲ್ಲ. "ದಿನಾ ಹೇಳತೀರಿ ಈ ಮಾತು ಇಪ್ಪತ್ತು ವರ್ಷದಿಂದ. ಇದರಾಗ ಹೊಸದೇನು ಬಂತು ?"

ಹೊಸದೇನೂ ಇಲ್ಲ ನಿಜ. ಆದರೆ ಆ ಚಂದೂಲಾಲ ದಿನಾ ಇವಳಿಗೆ ಹೇಳುವುದರಲ್ಲಾದರೂ ಏನು ಹೊಸದಿರುತ್ತದೆ ? ಅವನು ಬರೇ ಇವಳ ಕಡೆ ನೋಡಿದರೆ ಸಾಕು, ನಾಚಿ ಕೆಂಪಗೆ ಗುಲಾಬಿಯಾಗುತ್ತಾಳೆ. ಇರಲಿ, ನೋಡೋಣ.

"ಅಂದ್ಹಾಂಗ ನಿನಗ ಗೊತ್ತದ ಏನು ಕಲಾ ? ನಮ್ಮ ಅಸಿ ಮ್ಯಾನೇಜರ್‌ದು ಎಂಗೇಜ್‌ಮೆಂಟ್ ಆತಲ್ಲ ?"

ಕಣ್ಣ ಕೊನೆಯಿಂದ ದೃಷ್ಟಿಸಿದ್ದ ಆತ ಪರಿಣಾಮವನ್ನು. ತನಗೆ ಏನೂ ಆಗಿಲ್ಲವೆಂದು ತೋರಿಸಿಕೊಳ್ಳಲು ಅವಳು ಮಾಡಿದ ಶತಪ್ರಯತ್ನ ಮೀರಿ ನಡುಗಿತ್ತು ಅವಳ ಧ್ವನಿ ; ಕಣ್ಣ ಬೆಳಕು ಒಮ್ಮೆಲೇ ಜೀವ ಕಳೆದುಕೊಂಡಿತ್ತು ; "ಹಿಂಗೇನು ? ಛಲೋ ಆತು."

—ನಂತರ ಹೆಚ್ಚು ಮಾತನಾಡದೇ ಸರ್‍ರನೆ ಹೊರಳಿ ತನ್ನ ರೂಮು ಸೇರಿದ್ದಳು ಕಲಾ. ಅವಳ ಕಣ್ಣಂಚಿನಲ್ಲಿ ಒಂದು ಕ್ಷಣ ಮಿಂಚಿದ್ದು ನೀರೇ ಅಲ್ಲದೆ ಇನ್ನೇನು ?

—ಅಲ್ಲಿಗೆ ಪೂರ್ಣವಾಗಿತ್ತೇ ತನ್ನ ಗೆಲುವು ?

"ವಾಹ್, ಎಷ್ಟ ಛೆಂದ ಪ್ಲಾನ್ ಮಾಡೀರಿ ಈ ಹೊಸಾ ಬಡ್ಜೆಟ್ಟಿನದು ! ಬಾಸ್ ಏಕ್‌ದಂ ಖುಶ್ ಆಗೋದರಾಗ ಸಂಶಯ ಇಲ್ಲ ಶಂಕರ ಮಾಮಾ. ನಿಮ್ಮದು ಅದ್ಭುತ ಬ್ರೇನ್‌ರೆಪಾ."

—ಸಹೋದ್ಯೋಗಿಗಳೆಲ್ಲ ಸೇರಿ ತನ್ನ ಕೆಲಸದ ಸ್ತುತಿ ಮಾಡಿದ್ದರು

ಮಧ್ಯಾಹ್ನ. ತನ್ನ ಬ್ರೇನ್ ನಿಜಕ್ಕೂ ಅದ್ಭುತ. ಸಾಧ್ಯವಿಲ್ಲವೆಂದುಕೊಂಡಿದ್ದೆಲ್ಲಾ ಸಾಧ್ಯವಾಗಿರಲಿಲ್ಲವೇ ಅದರಿಂದಾಗಿ ?.... ಕಲಾ ಮತ್ತು ಚಂದೂಲಾಲರ ಪ್ರಕರಣ ಹೀಗೆ ಸುರಳೀತವಾಗಿ ಕೊನೆಗೊಳ್ಳುವುದು ಸಾಧ್ಯವೆಂದು ಯಾರಿಗೆ ಅನಿಸಿತ್ತು ? ಸ್ವತಃ ಚಂದೂಲಾಲನಿಗೇ ಈ ಭಾನಗಡಿಯಿಂದ ತಾನು ಮುಕ್ತನಾಗುವುದು ಅಸಾಧ್ಯವೆನಿಸಿತ್ತಂತೆ. ಈಗ–

–'ನಾ ಈಗ ಆ ಹುಚ್ಚಿನಿಂದ ಪೂರ್ಣ ಮುಕ್ತ ಆಗೀನಿ ಶಂಕರ ಮಾಮಾ, ನಾ ಈಗ ಖರೇನ ಆರಾಮ ಇದ್ದೀನಿ' ಅನ್ನುತ್ತಾನೆ.

ಒಂದು ರೀತಿಯಿಂದ ಚಂದೂಲಾಲನಿಗೆ ತಾನು ಒಳ್ಳೆಯದನ್ನೇ ಮಾಡಿದಂತಾಯಿತು. ಕಲಾನನ್ನು ಕಟ್ಟಿಕೊಂಡಿದ್ದರೆ ಇವನಿಗೇನು ಸಿಗುತ್ತಿತ್ತು ? ಈಗ ಶ್ರೀಮಂತ ಮಾವ, ಗ್ರಾಜುಯೇಟ್ ಹೆಂಡತಿ, ಕಾರು, ವರದಕ್ಷಿಣೆ, ಪ್ರಮೋಶನ್ –ಎಲ್ಲ ಸಿಗುತ್ತಿದೆ. ಅವನ ಹಿತಕ್ಕಾಗಿ ತಾನು ಬಹಳ ಶ್ರಮಿಸಿದೆನೆಂದು ಅವನಿಗೆ ತನ್ನ ಬಗ್ಗೆ ಗೌರವ ಸಹಜವೆ.

ಚಂದೂಲಾಲನ ಹಿತದಂತೆ ಕಲಾನ ಹಿತವೂ ತನಗೆ ಬೇಕಾದದ್ದು. ಕಲಾ ತನ್ನ ಕಣ್ಣ ಮುಂದಿನ ಹುಡುಗಿ. ಅವಳ ಜೀವನವನ್ನು ದಾರಿಗೆ ಹಚ್ಚುವುದು ತನ್ನ ಕರ್ತವ್ಯ. ತಂದೆಯಿಲ್ಲದ ಅವಳ ಪಾಲಿಗೇ ತಾನೇ ತಂದೆ ಅಲ್ಲವೆ ? ಅವಳು ತಪ್ಪು ದಾರಿ ಹಿಡಿದಾಗ ಎಚ್ಚರಿಸಿದ್ದು ತಾನು ಮಾಡಲೇಬೇಕಾಗಿದ್ದ ಕೆಲಸ. ಬುದ್ಧಿಯಿಲ್ಲದ ಹುಡುಗಿ. ಅವಳನ್ನು ಹಾಗೇ ಬಿಟ್ಟಿದ್ದರೆ ಹಾಳಾಗಿಹೋಗುತ್ತಿದ್ದಳು. ತಾನು ಅವಳ ಸುಖಕ್ಕಾಗಿ ಶ್ರಮಿಸಿದ್ದೇನು ಸ್ವಲ್ಪವೆ ? ಚಂದೂಲಾಲನ ಹುಚ್ಚು ಅವಳ ತಲೆಯಿಂದ ಇಳಿಯುವುದು ಸುಲಭವಾದ ವಿಷಯವಾಗಿರಲೇ ಇಲ್ಲ. ಎಂಥ ಹುಚ್ಚು ಅವರಿಬ್ಬರಿಗೂ !

ಅದೊಂದು ದಿನ ರವಿವಾರ ಸಂಜೆ ಬಹಳ ಬೇಸರವಾಗಿತ್ತು ತನಗೆ. 'ಜುಹು ಬೀಚಿಗೆ ಹೋಗಿಬರೋಣ ಬರ್ತೀಯೇನೆ ?' ಎಂದು ಕೇಳಿದ್ದ ಹೆಂಡತಿಯನ್ನು. 'ಅಯ್ಯೋ, ನನಗೆಲ್ಲಿ ಸವುಡು ಸಿಗತದ್ರೀ ? ಕೂಸಿಗೆ ಜ್ವರ ಬಂದಾವ. ಕೆಲಸದಾಕಿ ಬಂದೇ ಇಲ್ಲ ಇವತ್ತ. ಹಿರೇ ಹುಡುಗನ ಕಾಲು ಇನ್ನೂ ಪೂರಾ ನೆಟ್ಟಗಾಗಿಲ್ಲ. ಅಡಗೀ ಮಾಡಿ–'

–ಅವಳ ರಗಳೆಯಿಂದ ತಲೆ ಚಿಟ್ಟೆಂದಿತ್ತು. ಕೊನೆಯ ಮಗುವಿನ ಅಳು, ಹಿರಿಯ ಹುಡುಗರ ಧಾಂಧಲೆ, ತೊಳೆಯಲಾರದೇ ಬಿದ್ದ ಪಾತ್ರೆಗಳು, ಎಲ್ಲವುಗಳ ಮಧ್ಯೆ ಕೆದರಿದ ತಲೆಯ ಮಾಸಿದ ಸೀರೆಯ ಅವಳು– ಯಾಕೆ ಹುಟ್ಟಿಸಿದೆ ದೇವರೇ ತನ್ನನ್ನು ಎನ್ನಿಸಿತ್ತು. ಮಂದ ಬೆಳದಿಂಗಳಲ್ಲಿ ಬೆಚ್ಚಗಿನ ದೇಹವೊಂದರ ಸುತ್ತ ಕೈ ಬಳಸಿ ಜುಹು ಬೀಚಿನ ಮರಳ ಮೇಲೆ ಜಗತ್ತನ್ನೆಲ್ಲ ಮರೆತು ತಿರುಗಾಡುವ ಕನಸು ದೂರದಿಂದ ಅಣಕಿಸಿತ್ತು.' 'ಮುದುಕರಾಧಾಂಗೆಲ್ಲಾ ಹರೇದ ಹುಚ್ಚು ತಿರಗಲಿಕ್ಹತ್ತೇದ

ನಿಮಗಂತೂ, ಒಂದಿಷ್ಟು ದವಾಖಾನೀಗರೆ ಹೋಗಿಬರ್ರಿ.'

—ದವಾಖಾನೆಗೆಂದೇ ಹೊರಟಿದ್ದ ತಾನು. ಆದರೆ ಯಾಕೋ ದಾದರಿನಿಂದ ಹಾಗೇ ತಿರುಗಿ ಬರುವ ಮನಸ್ಸಾಗಿರಲಿಲ್ಲ. ಎತ್ತ ಕಡೆಗೋ ಚಿತ್ತ. ಎತ್ತ ಕಡೆಗೋ ಧ್ಯಾನ. ಹೋಗಿದ್ದು ಕೊನೆಗೆ ಜುಹು ಬೀಚಿಗೇ.

ಎಲ್ಲೋ ಏನೋ ತಪ್ಪಿದಂತೆನಿಸುತ್ತಿದೆ ತನ್ನ ಜೀವನದಲ್ಲಿ. ಈ ಸಂಸಾರದ ತಾಪತ್ರಯ, ಹೆಂಡತಿ, ಮಕ್ಕಳು, ಆಫೀಸು, ಕೆಲಸ, ಮುಂಬಯಿಯ ಯಾಂತ್ರಿಕತೆ— ಯಾರಿಗೂ ಬಿಟ್ಟಿದ್ದಲ್ಲ. ಇದರಲ್ಲಿ ಹೊಸದಾಗಿ ಕೆಡುಕೆನಿಸಿಕೊಳ್ಳುವಂಥದೇನೂ ಇಲ್ಲ. ಆದರೂ ಯಾಕೋ ಒಂದು ನಮೂನೆ ಅತೃಪ್ತಿ, ಕಳವಳ.

ಸುಮ್ಮನೆ ಹೊರಟಿದ್ದವನನ್ನು ಹೊಡೆದೆಬ್ಬಿಸಿದಂತಾಗಿತ್ತು ಎದುರಿಗೆ ನೋಡಿದಾಗ— ಮಂದ ಬೆಳದಿಂಗಳಲ್ಲಿ ಹಿಂದಿನಿಂದ ಅಜಂತೆಯ ಶಿಲಾಬಾಲಿಕೆಯ ಹಾಗೆ ಕಾಣುತ್ತಿದ್ದ ಹುಡುಗಿಯೊಬ್ಬಳ ಸೊಂಟವನ್ನು ಬಳಸಿ, ಜಗತ್ತನ್ನೇ ಮರೆತಂತೆ ಹೊರಟಿದ್ದ ಚಂದೂಲಾಲ.

ಹೊಟ್ಟೆಯಲ್ಲಿ ಚಿಟುಗು ಮುಳ್ಳು. ಹುಡುಗಿಯರನ್ನು ಮಳ್ಳು ಮಾಡುವ ಮಾತುಗಾರಿಕೆ, ಒಳ್ಳೆಯ ಪರ್ಸನ್ಯಾಲಿಟಿ, ಒಳ್ಳೆಯ ಕೆಲಸ, ಇನ್ನೂ ಮದುವೆಯಿಲ್ಲ, ಇನ್ನೇನು ಬೇಕು ? ಚೈನೀ ಹೊಡೆಯುತ್ತಿದ್ದಾನೆ ಮಗ....

ತನಗೆ ಶಾಕ್ ಆದದ್ದು ಆ ಹುಡುಗಿಯ ಗುರುತು ಸಿಕ್ಕಾಗ. ಗಾಳಿಯಲ್ಲಿ ತೇಲುತ್ತಿರುವಂತೆ ಅವನ ಭುಜಕ್ಕೆ ತಲೆಯಾನಿಸಿ ಹೊರಟಿದ್ದವಳು— ಕಲಾ, ತಮ್ಮ ಕಲಾ....

ಆಫೀಸಿನಲ್ಲಿ ಅವರಿಬ್ಬರೂ ಪರಸ್ಪರರನ್ನು ನೋಡುತ್ತಿದ್ದ ಬಗೆ, ಇಪ್ಪತ್ತು ಸಲ ಅವಳನ್ನು ಒಳಗೆ ಕರೆ ಕಳಿಸುತ್ತಿದ್ದುದು, ಟೀ ತೆಗೆದುಕೊಳ್ಳುವ ಬಿಡುವಿನಲ್ಲಿ ಅವರಿಬ್ಬರೂ ಒಂದೇ ಟೇಬಲ್ಲಿನಲ್ಲಿ ಕೂಡುತ್ತಿದ್ದುದು, ಆಫೀಸು ಮುಗಿದ ನಂತರ ಎಲ್ಲರನ್ನೂ ತಪ್ಪಿಸಿ ಇಬ್ಬರೇ ಒಟ್ಟಾಗಿ ಹೊರಡುತ್ತಿದ್ದುದು, ಮನೆಗೆ ತಡವಾಗಿ ಬಂದುದಕ್ಕಾಗಿ ಹೊಲಿಗೆ ಕ್ಲಾಸಿನ ನೆವ— ಎಲ್ಲದರ ಅರ್ಥ ಒಮ್ಮೆಲೇ ನೂರು ಬಣ್ಣಗಳಲ್ಲಿ ಹೊಳೆದಿತ್ತು ತನಗೆ ಆ ಕ್ಷಣದಲ್ಲಿ.

* * *

'ನಾ ನಿಮ್ಮ ಕಲಾನ ಖರೇನ ಪ್ರೀತಿ ಮಾಡ್ತೀನಿ ಶಂಕರಮಾಮಾ, ಅಕೀನ್ನ ಲಗ್ನಾ ಮಾಡಿಕೊಳ್ಳಿಕ್ಕೆ ತಯಾರಿದ್ದೀನಿ. ಜಾತಿ ಬ್ಯಾರೇ ಆದರೂ ನೀವು ದೊಡ್ಡ ಮನಸ್ಸಿನಿಂದ ಒಪ್ಪತೀರಿ ಅಂತ ಗೊತ್ತದ ನನಗ' —ಅಂದಿದ್ದ ಚಂದೂಲಾಲ.

'ನಾ ಚಂದೂಲಾಲನ್ನ ಬಿಟ್ಟು ಬದುಕಲಿಕ್ಕೇ ಶಕ್ಯ ಇಲ್ಲ' —ಅಂದಿದ್ದಳು ಕಲಾ.

—ತನ್ನ ಕೆಲಸ ನಿಜವಾಗಿಯೂ ಕಠಿಣವಾದುದಾಗಿತ್ತು.

* * *

ಆದರೆ ದೇವರು ದೊಡ್ಡವನು. ನಿಜಕ್ಕೂ.

ಜನರಲ್ ಮ್ಯಾನೇಜರ್ ಸ್ವತಃ ತನ್ನನ್ನು ಕರೆಸಿ, ತಮ್ಮ ಮಗಳ ವಿಷಯ ಪ್ರಸ್ತಾಪಿಸಿದ್ದರು. ಚಂದೂಲಾಲನನ್ನು ಕೇಳಿ ನೋಡೆಂದು ಕೇಳಿಕೊಂಡಿದ್ದರು. 'ನೀವು ಹಿರೇ ಮನುಷ್ಯಾರು. ನಿಮ್ಮ ಮಾತು ಕೇಳತಾನ ಆತ' —ಎಂದು ಉಬ್ಬಿಸಿದ್ದರು.

ಚಂದೂಲಾಲನಿಗೆ ಒಳ್ಳೆಯದಾಗುವಂತೆ ಮಾಡಬೇಕು. ಲಗ್ನದ ನಂತರ ಹಿಂದಿನದನ್ನು ಮರೆಯುವುದೇನೂ ತ್ರಾಸಾಗುವುದಿಲ್ಲ. ಅವನ ಲಗ್ನವಾದರೆ ಕಲಾನೂ ಅವನನ್ನು ಮರೆಯಬಹುದು.

ಅವರಿಬ್ಬರ ಮನಸ್ಸನ್ನು ಬದಲಿಸಬೇಕಾದುದು ತಾನು ಮಾಡಬೇಕಾದ ಕೆಲಸ ಈಗ. ಉದ್ದೇಶ ಒಳ್ಳೇದಿದ್ದಾಗ ದಾರಿ ಯಾವುದಾದರೇನು ? ಒಂದಿಷ್ಟು ಸುಳ್ಳು-ಪಳ್ಳು ಹೇಳಬೇಕಾಗಿ ಬಂದರೂ ಅಡ್ಡಿಯಿಲ್ಲ.

ಕಲಾ ಅಂತೂ ತನ್ನನ್ನು ನಂಬುತ್ತಾಳೆ ; ಚಂದೂಲಾಲ ಸ್ವಲ್ಪ ಹುಷಾರ ಪೈಕಿ ಮನುಷ್ಯ. ಆದರೂ ಅಡ್ಡಿಯಿಲ್ಲ. ತನಗೆ ಅವನ ದುಪ್ಪಟ್ಟು ಸರ್ವಿಸಾಗಿದೆ....

* * *

'ಚಂದೂಲಾಲನಂಥ ಬೇಜವಾಬ್ದಾರಿ ಮನುಷ್ಯನಿಂದ ನಿನಗ ಎಂದೂ ಸುಖ ಆಗೋದಿಲ್ಲಾ ಕಲಾ. ದಿನಾ ಸಂಜೀನ್ಯಾಗ ಫರಾಸ್ ರೋಡಿನ್ಯಾಗ ಕುಡಿದು ಬಿದ್ದಿರತಾನ ಆ ಮನುಷ್ಯ.''

ಕಲಾನಿಗೆ ಸಹಜವಾಗಿಯೇ ಶಾಕ್ ಆಗಿತ್ತು. 'ಹೌದೇನ್ರೀ ಮಾಮಾ ? ನನಗ ನಂಬಲಿಕ್ಕೆ ಆಗೋದಿಲ್ಲ....'

'ನಾ ಯಾಕ ನಿಂಗೆ ಸುಳ್ಳು ಹೇಳ್ಲೀ ಕಲಾ ? ಹೂವಿನಾಂಗ ಬೆಳೆಸೀವಿ ನಿನ್ನ. ನನ್ನ ಸಂಕಟಾ ನಿನಗೇನು ಗೊತ್ತವ್ವಾ ?' —ನಿಜವಾಗಿಯೂ ಕಳಕಳಿಯಿಂದ ಹೇಳಿದ್ದ ತಾನು. ಚಂದೂಲಾಲ ಪಾರ್ಟಿಗಳಲ್ಲಿ ಕುಡಿಯುತ್ತಿದ್ದುದೇನೂ ಸುಳ್ಳಿರಲಿಲ್ಲವಲ್ಲಾ !

'ಒಬ್ಬ ಭಲೋ ಹುಡುಗನ್ನ ನೋಡಿ ನಿನ್ನ ಲಗ್ನ ಮಾಡಿಕೊಟ್ಟು ನೀ ಸುಖದಿಂದ ಇರೋದು ನೋಡಿದಾಗ ನನಗೆ ಸಮಾಧಾನ. ನಿನ್ನ ಅಕ್ಕನಿಗೂ ಸಮಾಧಾನ. ಚಂದೂಲಾಲ ಪಾತರಗಿತ್ತಿ ಇದ್ಧಾಂಗ. ನೀ ಸಣ್ಣಾಕಿ. ತಿಳಿವಳಿಕೆ ಇಲ್ಲದಾಕಿ. ಮೋಸ ಹೋಗಿ ದುಃಖ ಪಡಬಾರದು ಅಂತ ಹೇಳಲಿಕ್ಹತ್ತೀನಿ. ನೀ ಕಣ್ಣೀರು ಹಾಕೋಹಾಂಗ ಅದರ ನಾವು ಹ್ಯಾಂಗ ಸಹಿಸೋಣವಾ ?'

ಕಲಾನ ಧ್ವನಿ ಗದ್ಗದಿತವಾಯಿತು. 'ಅಳಬ್ಯಾಡ್ರೀ ಮಾವಾ, ನೀವು

ಯಾವಾಗಲೂ ನನಗ ಛಲೋದನ್ನೇ ಹೇಳತೀರಿ ಅಂತ ಗೊತ್ತದ. ನಾ ನೀವು ಹೇಳಿದಾಂಗ ಕೇಳತೀನಿ. ಅವರನ್ನ ಮರೆಯೋ ಪ್ರಯತ್ನ ಮಾಡ್ತೀನಿ.'

* * *

ಇನ್ನು ಚಂದೂಲಾಲನ ಸರದಿ.

ಚಂದೂಲಾಲ ಎಂಥವನಾದರೇನು, ಅವನಿಗೂ ಒಳ್ಳೆಯದಾಗಬೇಕೆಂಬುದೇ ತನ್ನ ಉದ್ದೇಶ. ಅವನೂ ಸುಖವಾಗಿರಲೆಂದೇ ತನ್ನ ಇಚ್ಛೆ.

'ನಾ ಹಿಂಗ ಹೇಳತೀನಂತ ತಪ್ಪು ತಿಳಕೋಬ್ಯಾಡ್ರಿ ಸರ್. ನೀವು ನನ್ನ ತಮ್ಮನ ಸರಿ. ನಿಮ್ಮ ಮುಂದಿನ ಜೀವನ ಸುಖೀ ಆಗಲೀ ಅಂತ ಇಷ್ಟೆಲ್ಲಾ ಹೇಳಿದೆ.'

'ಕಲಾ ಮೊದಲಿನಿಂದಲೂ ಹೀಂಗ ಅಂತೀರ ಶಂಕರ ಮಾಮಾ ? ಆಕಿ ಛಲೋ ಹುಡುಗಿ ಅಂತ ತಿಳಿದಿದ್ದೆ ನಾ. ಆಕೀ ಕ್ಯಾರೆಕ್ಟರ್ ಸ್ವಲ್ಪ ಲೂಜ್ ಅಂತ ನೀವು ಹೇಳಿದ್ದು ನಂಬಲಿಕ್ಕೇ ಆಗೂದಿಲ್ಲ. ಬ್ಯಾರೆ ಯಾರು ಹೇಳಿದ್ರೂ ನಾ ನಂಬತಿರ್ಲಿಲ್ಲ. ಆಕೀ ಮ್ಯಾಲೆ ಭಾಳ ಜನರದು ಮರ್ಜಿ ಅಂತ ಎಷ್ಟು frank ಆಗಿ ಹೇಳಿದೀರಲ್ಲಾ ಅಂತೀನಿ. ನಿಮ್ಮ ಜಾಗಾದಾಗ ಬ್ಯಾರೇ ಯಾರಿದ್ರೂ ಹೀಂಗ ಹೇಳೋ ಧೈರ್ಯ ಮಾಡತಿರ್ಲಿಲ್ಲ.'

'ನನಗೂ ಅದನ್ನ ಹೇಳಲಿಕ್ಕೆ ಕೆಟ್ಟನಸತದ ಸರ್. ಆದರ ನಮ್ಮ ಜವಾಬ್ದಾರಿಕಿಂತಾ ನಿಮ್ಮ ಹಿತ ಮುಖ್ಯ ನನಗ.'

'ಶಂಕರ ಮಾಮಾ, ನೀವು ಎಷ್ಟು ನಿಸ್ವಾರ್ಥಿ ಇದ್ದೀರಿ ! ನನ್ನ ಹಿತದ ಸಲುವಾಗಿ ಎಷ್ಟು ಕಾಳಜಿ ಮಾಡತೀರಿ !'

'.......' –ತಾನು ಸುಮ್ಮನೆ ಇದ್ದಾಗ ನಕ್ಕು ಕಣ್ಣು ಮಿಟುಕಿಸಿ ಕೇಳಿದ್ದ ಚಂದೂಲಾಲ. 'ಕಲಾನ ಮ್ಯಾಲೆ ನಿಮ್ಮದೂ ಮರ್ಜಿ ಅದ ಏನು ಮತ್ತ ?'

ಲುಚ್ಚಾ ಇದ್ದಾನೆ ಈ ಅಸಿ. ಮ್ಯಾನೇಜರ್. ಬಾಯಿಗೆ ಬಂದದ್ದು ಮಾತಾಡುತ್ತಾನೆ.

ಮೌನವೇ ಇವನಿಗೆ ಸರಿಯಾದ ಉತ್ತರ. ಬೇಕಾದದ್ದು ತಿಳಿಯಲಿ.

–ಏನೂ ತಿಳಿದನೋ. 'ಹಹ್ಹಹ್ಹಹ್ಹಹ್ಹಾ' ಎಂದು ಗಹಗಹಿಸಿ 'ಬೆಸ್ಟ್ ಲಕ್ ಶಂಕರ ಮಾಮಾ' ಅಂದ ಚಂದೂಲಾಲ.

ಎರಡು ಕ್ಷಣ ಬಿಟ್ಟು ತಾನಂದಿದ್ದ, 'ನಿಮ್ಮ ಸಲುವಾಗಿ ಬೇಕಾದ್ದು ಮಾಡ್ಲಿಕ್ಕೆ ತಯಾರಿದ್ದೀನಿ ನಾ.'

–ತಾನಂದದ್ದರಲ್ಲಿ ಅಪ್ರಾಮಾಣಿಕತೆಯ ನೆರಳೂ ಇರಲಿಲ್ಲ.

* * *

ಸಂಜೆ ಆಫೀಸಿನಿಂದ ತಿರುಗಿ ಮನೆಗೆ ಹೋದಾಗ ಕೋಣೆಯಲ್ಲಿ ಕಲಾ ಡಬ್ಬು

ಮಲಗಿದ್ದು ಕಾಣಿಸಿತು. ಪಾಪ ಅನಿಸಿತು. ಸದ್ದಾಗದ ಹಾಗೆ ಹೋಗಿ ಅವಳ ಮಂಚದ ಪಕ್ಕದಲ್ಲಿ ನಿಂತ ಆತ. ಅವಳ ನಿಟ್ಟುಸಿರುಗಳಿಗೆ ಕಿವಿಗೊಟ್ಟ. ಮನಸ್ಸು ಕರಗಿತು. ಮೆತ್ತಗೆ ಅವಳ ಕೈ ಅದುಮಿ 'ಕಲಾ' ಅಂದ.

ತಟ್ಟನೆ ಕಣ್ಣು ತೆರೆದ ಆಕೆ ಒರಟಾಗಿ ಕೈ ಕೊಸರಿಕೊಂಡಿದ್ದಳು. ಕಣ್ಣು ಕೆಂಪಾಗಿದ್ದವು. ''ಮನಸಿಗೆ ಹಚ್ಚಿಗೋ ಬ್ಯಾಡ ಕಲಾ. ಮರೆತುಬಿಡು ಅವನನ್ನ. ಅವನ ಅಪ್ಪನಂಥಾ ವರ ಹುಡುಕಿ ಲಗ್ನಾ ಮಾಡ್ತೀನಿ ನಿಂದು.'

'ಲಗ್ನಾ ಬ್ಯಾಡ್ರೀ ಮಾಮಾ ನನಗ, ಎಲ್ಲಾ ಸಾಕಾತು'' –ಭಗ್ನಪ್ರೇಮಿಯ ಭಾರವಾದ ದನಿ.

''ಹಾಂಗಂದ್ರ ಹ್ಯಾಂಗ ಕಲಾ ? ಜೀವನದಾಗ ಇಂಥಾ ಪ್ರಸಂಗ ಬರೋವೇ. ಅವನಂಥಾ ಚಂಚಲ ಮನುಷ್ಯ ನಿನಗ ಯೋಗ್ಯ ಅಲ್ಲವೇ ಅಲ್ಲ. ಬರೇ flirt ಮಾಡಿಕೋತ ತಿರುಗ್ಯಾಡೋ ಸ್ವಭಾವ ಅವನದು.''

–ಇದ್ದಕ್ಕಿದ್ದಂತೆ ಕಲಾ ಆತನ ಕಾಲುಗಳ ಬಳಿ ಕುಸಿದು ಅಳಲಾರಂಭಿಸಿದಳು. ಅವಳ ಬೆನ್ನ ಮೇಲೆ ಕೈಯಿಟ್ಟ ಆತ, ''ಸಮಾಧಾನ ಮಾಡಿಕೊ ಕಲಾ, ನೀ ಒಬ್ಬ ವ್ಯಕ್ತಿ ಸಲುವಾಗಿ ಕೊರಗಲಿಕ್ಕೆ ಆ ವ್ಯಕ್ತಿಗೆ ಯೋಗ್ಯತಾ ಇರಬ್ಯಾಕೋ ಬ್ಯಾಡೋ ?'' ಬಿಕ್ಕುತ್ತಲೇ ಹೇಳಿದಳು ಆಕೆ, ''ನೀವು ಬೇಕಾದ್ದ ಹೇಳ್ರೀ ಮಾಮಾ, ನನಗ ಚಂದೂಲಾಲನ್ನ ಮರೆಯೋದು ಆಗೋದಿಲ್ಲ. ಆತ ಕೆಟ್ಟವನಿರಲಿ, ಮೋಸ ಮಾಡಲಿ, ಖೂನಿ ಮಾಡಲಿ.... ನಾ ಅವನ್ನ ಪ್ರೀತಿ ಮಾಡ್ತೀನಿ ಮಾಮಾ, ಹಿಂಗ ಬದಕಲಿಕ್ಕೆ ಶಕ್ಯನs ಇಲ್ಲ ನನಗ.''

ಎಲಾ ಹುಡುಗಿ ! ನಿನ್ನೆ ಮೊನ್ನೆ ಭೆಟ್ಟಿಯಾದ ಮನುಷ್ಯನ ಬಗ್ಗೆ ಎಷ್ಟು ಇವಳಿಗೆ.....

''ಹಾಂಗೆಲ್ಲ ಅನಬಾರದು ಕಲಾ....''

''ಮಾಮಾ, ನೀವು ಮನಸ್ಸು ಮಾಡಿದರ ಅವನಿಗೆ ತಿಳಿಸಿ ಹೇಳಬಲ್ಲಿರಿ. ಅವನಿಗೆ ಹೇಳ್ರೀ ಮಾಮಾ, ಇಲ್ಲಂದರ ನಿಮ್ಮ ಕಲಾನ ಆಶಾ ಬಿಟ್ಟಬಿಡ್ರಿ....''

''ಛೀ, ಹುಚ್ಚಿ ಏಳು, ಏಳು. ಏನಾದರೂ ಮಾಡೋಣಂತ. ನಿನಗೆ ಅಷ್ಟು ಮನಸ್ಸಿದ್ದರೆ ಏನರೇ ಮಾಡಲಿಕ್ಕೇ ಬೇಕಾತು. ನಾ ವಿಚಾರ ಮಾಡತೀನಿ. ನನ್ನ ಶಕ್ತಿಮೀರಿ ಪ್ರಯತ್ನ ಮಾಡ್ತೀನಿ. ನೀ ಕಾಳಜಿ ಬಿಡು.''

''ಮಾಮಾ–''

''ಹೌದು ಕಲಾ, ನಾ ನಿನ್ನ ಭಾಳ ಪ್ರೀತಿ ಮಾಡತೀನಿ, ನಿನ್ನ ಮನಸ್ಸಿಗೆ ಸಮಾಧಾನ ಆಗೋಹಂಗ ಮಾಡಲಿಕ್ಕೆ ಜೀವಾ ಸುದ್ಧಾ ಕೊಟ್ಟೇನು.''

*

ಅಂದು ರಾತ್ರಿ ಹೆಂಡತಿಯು ಸಮೀಪ ಸರಿದಾಗ ಯಾಕೋ ಕಲಾನ ಶಿಲಾಬಾಲಿಕೆಯು ಮೈಕಟ್ಟು ನೆನಪಿಗೆ ಬಂದು ಅವಳು ಚಂದೂಲಾಲನನ್ನು ಮದುವೆಯಾದರೆ ಅನಿಸಿ, ಎಂಥದೋ ಸಂಕಟ ಅನಿಸಿ, 'ಛೇ, ಕೂಡದು, ಶಕ್ಯವಿಲ್ಲ.' ಎಂದೇನೇನೋ ಅನಿಸಿತು....

—ಮರುದಿನ ಆಫೀಸಿನಲ್ಲಿ ಚಂದೂಲಾಲ ಸಹಜವೆಂಬಂತೆ "ಯಾಕ್ರೀ ಹ್ಯಾಂಗ ಇದ್ದಾಳ ಕಲಾ ?" ಅಂದಾಗ ನೀರು ತುಂಬಿದ ಅವಳ ಕಣ್ಣುಗಳು— 'ಕಲಾನ ಆಶಾ ಬಿಟ್ಟಬಿಡ್ರಿ'— ನೆನಪಾಗಿ, ನಕ್ಕು ಹೇಳಿದ ಆತ, "ಆರಾಮ ಇದ್ದಾಳ ಆಕೀಗೇನು ? ಒಂದು ಛಲೋ ವರ ನೋಡಿ ಲಗ್ನಾ ಮಾಡಬೇಕಂತೀವಿ ಲಗೂನ."

*

ಕಲಾನಿಗೆ ಬುದ್ಧಿಯಿಲ್ಲ. ಪ್ರೇಮಭಂಗವಾದ ಹೊಸದರಲ್ಲಿ ಹೀಗೆಲ್ಲ ಅನಿಸುವುದು ಸಹಜ. ಮುಂದೆ ತಾನೇ ಸರಿಯಾಗುತ್ತಾಳೆ. ಅವಳಿಗೆ ಯಾವುದರಿಂದ ಹೆಚ್ಚು ಒಳ್ಳೆಯದಾಗುವುದೆಂಬುದು ತನಗಲ್ಲವೇ ತಿಳಿಯುವುದು.

"ಅವನ ಮನಸ್ಸು ಬದಲಾಗೋಹಾಂಗ ಕಾಣಸೂದಿಲ್ಲ ಕಲಾ. ಬರೇ ಬಾಸ್ ಮಗಳ ಸುದ್ದೀ ಮಾತಾಡತಾನ. ನಿನ್ನ ಮಾತು ತೆಗಸಿಯೇ ಕೊಡೋದಿಲ್ಲ. ಅರಾಮ ಇದ್ದಾನ ಮಗ. ನೀ ಯಾಕವನ ಸಲುವಾಗಿ ವ್ಯರ್ಥ ಕೊರಗತೀಯೋ ತಿಳೀಲೊಲ್ಲದು. ನೀ ಅವನಕಿಂತ ಆರಾಮ ಇರು. ನಿನಗೇನು ಕಡಿಮ್ಯಾಗೇದ ?"

—ಕಲಾ ಅಳಲಿಲ್ಲ. ಮಾತೂ ಆಡಲಿಲ್ಲ. ಸುಮ್ಮನಾದಳು.

ನಂತರವೂ ಸುಮ್ಮನೆ ಇದ್ದಳು.

ಯಾಕೋ ಚಿಂತೆಗಳೆಲ್ಲಾ ಮುಗಿದಂತೆ ಅನಿಸುತ್ತಿದೆ ಇತ್ತೀಚೆ. ಇನ್ನು ಚಂದೂಲಾಲನ ಲಗ್ನ, ತನಗೆ ಪ್ರಮೋಶನ್....ಮೊದಲು ಅಂಧೇರಿಯಲ್ಲಿಯ ಆ ಕತ್ತಲು ಮನೆ ಬಿಡಬೇಕು. ಒಂದು ಛೆಂದ ಪುಟ್ಟ ಫ್ಲ್ಯಾಟ್ ಹಿಡಿಯಬೇಕು. ಒಂದು ಸಣ್ಣ ತೋಟ.... ಬೇಕಾದರೆ ಒಂದು ಸ್ಕೂಟರ್ ಸಹ ಕೊಳ್ಳಬಹುದು. ತನ್ನ ಕೂದಲೇನೂ ಬೆಳ್ಳಗಾಗಿಲ್ಲ. ಸ್ವಲ್ಪ ಉದುರುತ್ತಿವೆ ಅಷ್ಟೇ. ತನಗೆ ಫಿಟ್‌ಪ್ಯಾಂಟ್ ಚೆಂದ ಕಾಣುತ್ತದೆಂದು ಮೊನ್ನೆ ಕಲಾ ಹೇಳಿದ್ದಳು.... ಒಂದು ಒಳ್ಳೆಯ ಟೆರಿಲಿನ್ ಪೀಸ್ ಕೊಳ್ಳಲಿಕ್ಕೆ ಅಡ್ಡಿಯಿಲ್ಲ. ಮೊದಲು ಪ್ರಮೋಶನ್.

'ಪ್ರಮೋಶನ್ ಸಿಕ್ಕಕೂಡಲೇ ಮೊದಲು ಸತ್ಯನಾರಾಯಣ ಪೂಜೆ ಮಾಡಸಬೇಕ್ರೀ' —ಅನ್ನುತ್ತಿದ್ದಾಳೆ ಹೆಂಡತಿ, ಎಂದಿನಿಂದಲೂ.

ಹ್ಞ, ದೇವರ ನೆನಪಾದರೆ ತನಗೆ ನಗು ಬರುತ್ತದೆ. ಮೊದಲಿನಿಂದಲೂ ಹಾಗೆಯೇ.

ಒಂದು ದಿನ ಗುಡಿಗೆ ಹೋದ ನೆನಪಿಲ್ಲ. ಕೈ ಮುಗಿದ ನೆನಪಿಲ್ಲ. ದೇವರು.... ಮನುಷ್ಯನ ದೌರ್ಬಲ್ಯ, ಮೂರ್ಖತನ, ಅಯೋಗ್ಯತನಗಳ ಸಾಕಾರ ಕಲ್ಪನೆ. ಥೂ, disgusting....

*

"ನಾಳಿನಿಂದ ಕಲಾ ಮತ್ತೆ ಕೆಲಸಕ್ಕೆ ಹಾಜರ ಆಗತಾಳೇನ್ರೀ ಶಂಕರ ಮಾಮಾ ? ಆಕಿ ರಜಾ ಮುಗೀತಲ್ಲ ?" – ಮಿಸ್ ಪರ್ವತಿ.

"ಓ ಯಸ್, ಬರದ ಎಲ್ಲಿಗೆ ಹೋಗತಾಳ ?" – ಫೈಲುಗಳನ್ನು ಕಟ್ಟಿಡುತ್ತಾ ಉತ್ತರಿಸಿದ ಶಂಕರಮಾಮಾ. ಮನೆಗೆ ಹೋಗಿ ರಾತ್ರಿ ಊಟಕ್ಕೆ ಕಾಯಬೇಡವೆಂದು ಹೆಂಡತಿಗೆ ಹೇಳಿ ಬಾಂದ್ರಾದಲ್ಲಿರುವ ಚಂದೂಲಾಲನ ಕಡೆ ಹೋಗಬೇಕು. ಅವನ ಅಡಿಗೆಯವನು ಚಿಕನ್‌ಕರಿ ಬಹಳ ಛಲೋ ಮಾಡತಾನೆ. ಚಂದೂಲಾಲನ ಪಾರ್ಟಿ ಅಂದರೆ ಮೂರು ದಿನ ಅಮಲು ಇಳಿಯುವುದಿಲ್ಲ.

"ಆಪ್‌ಕಾ ಫೋನ್ ಹೈ ಸಾಬ್" – ಶಂಕರಮಾಮಾನ ಅಮಲು ಏರುತ್ತಿದ್ದುದು ಅಲ್ಲಿಗೇ ನಿಂತಿತು. ಯಾರಪ್ಪ ಎಂದು ಗೊಣಗಿಕೊಂಡೇ ಎದ್ದ ಆತ.

– ಒಂದು ಕ್ಷಣ ಕಾಲು ನಡುಕ ; ಅಸಿ ಮ್ಯಾನೇಜರ್ ಬೋರ್ಡ್ಸ್, ಮಿಸ್ ಪರ್ವತಿ, ಟೈಪ್‌ರೈಟರ್, ಟೇಬಲು, ಕುರ್ಚಿಗಳು, ಉಳಿದವರು – ಎಲ್ಲ ತಲೆಕೆಳಗೆ, ಕಾಲು ಮೇಲೆ, ಆಫೀಸು ಗಿಮಿಗಿಮಿ ತಿರುಗುತ್ತಿದೆ.... ಸಮುದ್ರ ಭೋರೆಂದು ಉಕ್ಕಿ ಉಕ್ಕಿ ಕುತ್ತಿಗೆಗೆ ಬರುತ್ತಿದೆ....

– ನೆರೆಮನೆಯ ಸಿಂಗ್‌ನ ಧ್ವನಿ ಆಚೆಯಿಂದ, 'ಕಲಾ ಆತ್ಮಹತ್ಯೆ ಮಾಡಿಕೊಂಡಳು....

ಹ್ಞಾ, ಹೌದು, ರೂಮಿನ ತೊಲೆಗೆ ಸೀರೆಯಿಂದ ನೇಣು ಹಾಕಿಕೊಂಡು.... ನನ್ನ ಹೆಂಡತಿ ನಿಮ್ಮ ಮನೆಯವರ ಜೋಡಿ ಇದ್ದಾಳ.... ಹ್ಞಾ ಹ್ಞಾ, ಪೋಲೀಸರಿಗೆ ತಿಳಿಸಿಲ್ಲ.....ಲಗೂ ಲಗೂ ಬರ್ರಿ'.

– ಬೀಳಲಿದ್ದ ಶಂಕರಮಾಮಾನನ್ನು ಆಧರಿಸಿ ಹಿಡಿದರು ಯಾರೋ.

*

ಪ್ಲ್ಯಾಟ್‌ಫಾರ್ಮ್ ಮೇಲಿನ ಗದ್ದಲ, ಸೇಂಗಾ ಮಾರುವ ಮುದುಕಿ, ಕುಷ್ಠರೋಗಿ ಭಿಕ್ಷುಕ – ಎಂದಿನಂತೆಯೇ. ಸುಡುವ ಬಿಸಿಲು-ಹೊರಗೆ, ಒಳಗೆ- ಎಂದಿನಂತೆಯೇ- ಏನೂ ಬದಲಾವಣೆಯಿಲ್ಲ.

ಕಲಾ ಸತ್ತು ಎಂಟು ದಿನ. ಇಂದು ತಾನು ಹೊರಬಿದ್ದದ್ದು.

ಎಲ್ಲೋ ದೂರ ವರ್ಗ ಮಾಡಿಸಿಕೊಂಡು ಹೊರಟಿದ್ದಾನೆ ಚಂದೂಲಾಲ.

ಅವನೂ ಮುಕ್ತನಾಗುತ್ತಾನೆ ಲಫಂಗ....

ಕಲಾ.... ತಿರುತಿರುಗಿ ಅವಳ ಹೊರಬಿದ್ದ ಕಣ್ಣುಗುಡ್ಡೆಗಳೇ ನೆನಪಾಗುತ್ತಿವೆ. ಜಂತಿಗೆ ತೂಗಾಡುತ್ತಿದ್ದ ವಿಕೃತವಾದ ದೇಹ–ಶಿಲಾಬಾಲಿಕೆಯ ಮಾದಕತೆ ಇರಲಿಲ್ಲ. ಭಯಂಕರವಾಗಿ ಅಂಜಿಕೆ ಬರುವಂತಿತ್ತು ಕಲಾನ ಹೆಣ.

ಏನೆಂದುಕೊಂಡಳೋ ಸಾಯುವಾಗ.... ಏನು ವಿಚಾರಿಸಿದ್ದಾಳು ? ನೋವಾಗಿರಬಹುದೇ ? ಹೇಗೆ ಸಹಿಸಿದ್ದಾಳು.... ಹೀಗೆ ಮುಕ್ತಿ ಪಡೆಯಬಯಸುವಷ್ಟು ಅಸಹನೀಯವಾಗಿತ್ತೇ ಬದುಕು ಅವಳಿಗೆ ?.....'ಕಲಾನ ಆಶಾ ಬಿಟ್ಟಬಿಡ್ರಿ'.....

ತಾನು ಹೇಗೆ ಮುಕ್ತನಾಗುವುದು ಇದರಿಂದ ? ತಾನು.... ಎಲ್ಲರಿಗೂ ಹಿತ ಮಾಡುತ್ತ ಬಂದಿರುವ ತಾನು.... ಸುಳ್ಳಾದರೂ ಹೇಳಿ ಪರಹಿತ ಮಾಡುವ ತಾನು....? ತಾನು ಪಾಪಿಯೇ ? ಮುಕ್ತಿಯಿಲ್ಲವೇ ತನಗೆ ?

–ಛೇ, ಹೀಗೆಲ್ಲ ಅನಿಸಬಾರದು. ಅನಿಸಿಸಿಕೊಳ್ಳಬಾರದು....

ಶಂಕರಮಾಮಾನ ಕಾಲು ಅಪ್ರಯತ್ನವಾಗಿ ರಸ್ತೆಯ ಬದಿಗೆ ಹೊರಳುತ್ತವೆ.... ಸೋತು ಹೋಗಿದ್ದ ಕಾಲುಗಳು, ಹೈರಾಣಾಗಿದ್ದ ಮೈ-ಮನಸ್ಸು..... ಹಳೆಯ ಗುಡಿ, ಇಷ್ಟು ವರ್ಷಗಳಿಂದಲೂ ಇಲ್ಲೇ ಇತ್ತೇ ಈ ಗುಡಿ ? ತನಗೇಕೆ ಕಂಡಿರಲಿಲ್ಲ ಒಮ್ಮೆಯೂ ?

–ದೊಡ್ಡ ಕಂಬಗಳು, ಜೀರ್ಣವಾಗಿದ್ದ ಚಪ್ಪರ, ಮಂದ ಬೆಳಕು, ಉಳಿದದ್ದೆಲ್ಲ ಕತ್ತಲು.... ಈ ಕಲ್ಲು ದೇವರು ಕೊಡುತ್ತಾನೆಯೇ ತನಗೆ ಶಾಂತಿ ? ತನ್ನೊಳಗೆ ಒಂದೇ ಸಮನೆ ಉರಿಯುತ್ತಿರುವ ಬೆಂಕಿ ಆರಿಸುವನೇ ಇವನು ? ಸುತ್ತೆಲ್ಲ ಕಡೆಯಿಂದ ಭೋರ್ಗರೆಯುತ್ತ ತನ್ನನ್ನು ಪೂರ್ಣ ಮುಳುಗಿಸಲೆಂದು ಬರುತ್ತಿರುವ ಈ ರಾಕ್ಷಸ ಅಲೆಗಳನ್ನು ತಡೆಯುವನೇ ? ತನ್ನ ಮೈತುಂಬ ಸುಡುತ್ತ ಹರಿದಾಡುತ್ತಿರುವ ಈ ವಿಷವನ್ನು ತಣ್ಣಗಾಗಿಸುವನೇ ? ಕೊಡುವನೇ ಈ ನಾಲಾಯಕ ತನಗೆ ಮುಕ್ತಿಯನ್ನು ??

–ಶಂಕರ ಮಾಮಾ ಪೂರಾ ಸೋತು ಕುಸಿದು ಕಲ್ಲು ಕಂಬಕ್ಕೆ ತಲೆಯೊರಗಿಸಿ ಬಿಕ್ಕಿ ಬಿಕ್ಕಿ ಅತ್ತನು.

❖ ❖ ❖

# ಹೊರಟು ಹೋದವನು

ರಾತ್ರಿ ಹನ್ನೆರಡು ಗಂಟೆ ಈಗ.

ಮೇಲ್ ಟ್ರೇನ್ ಪೂನಾ ಸ್ಟೇಷನ್ ಬಿಟ್ಟು ಪೂರಾ ಒಂದು ತಾಸು ಕಳೆಯಿತು. ಇನ್ನೂ ಲೋಂಡಾ ಬರಲು ಬಹಳಷ್ಟು ಹೊತ್ತು ಕಳೆಯಬೇಕು. ಏನು ಮಾಡುವುದು ಅಲ್ಲಿಯ ತನಕ ರಾತ್ರಿಯೆಲ್ಲ ?

'ರಾತ್ರಿ ಖಿಡಕೀಬಾಗಲಾ ಹಾಕ್ಕೊಂಡು ನಿನ್ನ ಬರ್ಥ್‌ಮ್ಯಾಲ ಮಲಗಿಬಿಡು. ಇಲ್ಲಂದರ ಗಾಳಿ ಬಡಿದು ತಂಪಾದೀತು. ಮುಂಜಾನೆ ಮಿರಜ್ ಸ್ಟೇಷನ್‌ದಾಗ ಚಹಾ ತಗೋ. ಆಮ್ಯಾಲೆ ಲೋಂಡಾದೊಳಗ ಊಟ....'–

ಸ್ಟೇಷನ್ನಿಗೆ ಕಳಿಸಲು ಬಂದಿದ್ದ ಸತೀಶ ಹೇಳಿದ್ದ. ಪ್ರತಿಸಲ ತಾನು ಹುಬ್ಬಳ್ಳಿಗೆ ಹೊರಡುವಾಗ ಹೇಳುವ ಹಾಗೆ. ಬಹಳ ಕಾಳಜೀ ಮಾಡುವ ರಿಪಿರಿಪಿ ಗಂಡ ಅವನು.

'ಹ್ಞೂ ಹ್ಞೂ' ಅಂದಿದ್ದಳು ತಾನು, ಪ್ರತಿಸಲ ಅನ್ನುವ ಹಾಗೆ. ಟ್ರೇನು ಹೊರಟ ನಂತರ ಕಿಡಕಿ ತೆರೆದು ಭರ್‍ರನೆ ಬೀಸುತ್ತಿರುವ ಗಾಳಿಗೆ ಮುಖಕೊಟ್ಟು ಕೂತಿದ್ದಳು, ಪ್ರತಿಸಲ ಕೂಡುವ ಹಾಗೆ.

'ನಾಲ್ಕು ದಿವಸದಾಗ ತಿರುಗಿ ಬರ್‍ತೀಯಲ್ಲ ? ಟೆಲಿಗ್ರ್ಯಾಮು ಕೊಡ್ಲಿಕ್ಕೆ ಮರೀಬ್ಯಾಡ. ನಾ ಸ್ಟೇಷನ್ನಿಗೆ ಬಂದಿರ್‍ತೀನಿ' –ಅಂದಿದ್ದ ಅವನು. ಇದೂ ಪ್ರತಿಸಲ ಅನ್ನುವ ಹಾಗೆ.

'ಹುಬ್ಬಳ್ಳಿಯೊಳಗ ಏನದ ಅಂತ ವರ್ಷಕ್ಕ ಎರಡುಮೂರು ಸರೆ ತಪ್ಪದS ಹೋಗ್ತೀಯೋ ಏನೋ ! ತಂದೀತಾಯೀ ಇದ್ದಾಗ ಬ್ಯಾರೇ ಇತ್ತು. ಈಗೇನದ ಅಲ್ಲೆ ? ಸುಮ್ಮನ ಆಯಾಸ ಮಾಡಕೋತೀ' ಅಂದಿದ್ದ ಕೊನೆಗೆ, ಟ್ರೇನು ಹೊರಡುವ ಸಮಯಕ್ಕೆ, ಇದೂ ಪ್ರತಿಸಲ ಅನ್ನುತ್ತಿದ್ದ ಹಾಗೆಯೇ ; ತಮ್ಮಿಬ್ಬರ ಲಗ್ನವಾದ ನಂತರ ಕಳೆದ ಹನ್ನೆರಡು ವರ್ಷಗಳಲ್ಲಿ ಪ್ರತಿಸಲ ತಾನು ಹುಬ್ಬಳ್ಳಿಗೆ ಹೊರಡುವಾಗಲೂ ಅನ್ನುತ್ತಿದ್ದ ಹಾಗೆ. ಅವನ ಎಲ್ಲ ಮಾತಿಗೂ ಪ್ರೀತಿಯ ಎಚ್ಚರಿಕೆಗೂ ತನ್ನ ಪ್ರತಿಸಲದ ಉತ್ತರ ಬರೇ ಹ್ಞೂ ಹ್ಞೂ.

ನೀರಾ, ವಾಠಾರ, ಸಾತಾರೆ– ಕತ್ತಲಲ್ಲಿ ಒಂದೊಂದೇ ಸ್ಟೇಷನ್ನುಗಳು ಸದ್ದಿಲ್ಲದೆ ಸರಿದು ಹೋಗುತ್ತಿವೆ. ತನಗೆ ಚಿರಪರಿಚಿತವಾಗಿರುವ ದಾರಿ ಇದು.

ವರ್ಷದಲ್ಲಿ ಎರಡು-ಮೂರು ಸರೆ ತಪ್ಪದೆ ಹನ್ನೆರಡು ವರ್ಷಗಳಿಂದಲೂ ಹೋಗಿ ಬರುತ್ತಲಿರುವ ದಾರಿ– 'ಯಾಕ ಸುಮ್ಮನ ಆಯಾಸ ಮಾಡಿಕೋತೀ....' ಯಾಕೆ ಹೋಗುತ್ತಿದ್ದೆ ?

–ಮೊದಲು ಅವ್ವ-ಅಪ್ಪ ಇದ್ದರು ಹುಬ್ಬಳ್ಳಿಯಲ್ಲಿ. ತನ್ನ ಲಗ್ನವಾದ ವರ್ಷವೆ ಅವ್ವನಿಗೆ ಸೀರಿಯಸ್ ಬ್ಲಡ್‌ಪ್ರೆಶರ್ ಆಯಿತು. ಒಂದೇ ಸವನೆ ಕೆಮ್ಮು ಹತ್ತಿ ಶ್ವಾಸ ಸಿಕ್ಕಿಹಾಕಿಕೊಂಡು, ಈಗಲೇ ಸತ್ತೇಬಿಡುವಳೇನೋ ಎಂದು ಆಸೆ ಹುಟ್ಟಿಸಿ, ಮತ್ತೆ ನೆಟ್ಟಗಾಗಿ, ಮತ್ತೆ ಹೀಗೇ ಆಗಿ, ನಾಲ್ಕು ತಿಂಗಳು ಒದ್ದಾಡಿ ಕಡೆಗೆ ಸತ್ತಳು ಅವ್ವ. ಅವ್ವನ ಹೆಣದ ಮೇಲೆ ಬಿದ್ದು ಅತ್ತರು ತಮ್ಮ-ತಂಗಿ-ಅಕ್ಕ ಎಲ್ಲರೂ. ಸುಮ್ಮನೇ ಕೂತಿದ್ದ ತನ್ನನ್ನು ನೋಡಿ ಕೂಡಿದ ಆಪ್ತರಲ್ಲಿನ ಇಬ್ಬರು ಮುದುಕಿಯರು ಗುಸುಗುಸು ಪಿಸುಪಿಸು ನಡೆಸಿದಾಗ ಎಂದಿನಂತೆ ಕೇಳದೆಯೇ ನೆರವಿಗೆ ಬಂದಿದ್ದ ಸತೀಶ, 'ಈಕೀಗೆ ಭಾಳ ಶಾಕ್ ಆಗೇದ್ರೀ ರಮಾಬಾಯರs, ಅದಕ್ಕs ಕಣ್ಣಾಗ ನೀರು ಬರವೊಲ್ಲವು. ಅವ್ವನ ಮ್ಯಾಲೆ ಭಾಳ ಜೀವ ಈಕೀಗೆ.' ಸತೀಶನ ಲಾಜಿಕ್ ಎಂದಿನಂತೆ ಆಗಲೂ ತಪ್ಪಾಗಿತ್ತು.

ಅವ್ವ ಇದ್ದಾಗ ಅವಳ ಮೇಲೆ, ಮಕ್ಕಳ ಮೇಲೆ, ಜಗತ್ತಿನ ಮೇಲೆಲ್ಲ ಜೋರು ಮಾಡುತ್ತಿದ್ದ ಆ ಮುದುಕ, ಅಪ್ಪ, ಅವ್ವ ಸತ್ತ ಕೂಡಲೆ ಮೆತ್ತಗಾದದ್ದು ನೋಡಿ ಮಜಾ ಅನಿಸಿತ್ತು. ತಾನು ಅಲ್ಲಿರುವ ತನಕ ದಿನವೂ ಅಪ್ಪನಿಗೆ ಗೊತ್ತಾಗದ ಹಾಗೆ ಅವನ ಕೋಲು ಬಚ್ಚಿಡುವುದು, ಸಂಧ್ಯಾವಂದನೆಗೆಂದು ಇಟ್ಟ ಮಡಿನೀರನ್ನು ಮುಟ್ಟಲು ಅಕ್ಕನ ಮಗಳಿಗೆ ಹುರುಪು ಕೊಡುವುದು, ಅಪ್ಪನಿಗೆ ಸೇರದ ಖಾರವನ್ನು ಅಡಿಗೆಗೆ ಹೆಚ್ಚಾಗಿ ಹಾಕುವುದು, ಅವನ ಪ್ರೀತಿಯ ಭಗವದ್ಗೀತೆಯ ಮೇಲೆ ನಾಯಿ ಬಿಟ್ಟು ಹೊಲಸು ಮಾಡಿಸುವುದು –ಹೀಗೆಲ್ಲ ಮಾಡಿದ್ದು ನೆನಪಾಗಿ ತುಟಿಗಳು ಅಗಲವಾದವು.

ಅಪ್ಪ ಮುಂದೆ ಮೂರೇ ತಿಂಗಳಲ್ಲಿ ಹಾಸಿಗೆ ಹಿಡಿದಿದ್ದ. ಅವನ ದೇಹ ಆ ಹಾಸಿಗೆಯೊಂದಿಗೇ ಒಂದಾದಷ್ಟು ಬಡಕಲಾಗಿದ್ದರೂ ಧ್ವನಿ ಮಾತ್ರ ಇನ್ನೂ ದೊಡ್ಡದಿತ್ತು. ''ನೀವೆಲ್ಲಾ ನಾ ಗೊಟಕ್ ಅನ್ನೋ ದಾರೀ ಕಾಯುತೀರೋ ಸೂಳೇಮಕ್ಕಳಿರಾ, ನಾ ನಿಮಗ ಭಾರ ಆಗೀನ್ರೋ' ಎಂದೆಲ್ಲ ಅವನು ಕಿರಿಚುತ್ತಿದ್ದಾಗ ಅವನ ಅಪರೋಕ್ಷ ಜ್ಞಾನದ ಅಗಾಧತೆಯ ಬಗ್ಗೆ ಮೆಚ್ಚುಗೆ ಅನಿಸುತ್ತಿತ್ತು.

ಮುಂದೆ ಒಂದು ದಿನ ಮುಂಜಾನೆ ಅಪ್ಪ ಎದ್ದಿರಲೇ ಇಲ್ಲ. 'ಅಪ್ಪಾ, ಅಪ್ಪಾ, ಕಣ್ಣು ತಗೀಯಪ್ಪಾ' ಎಂದು ಬೊಬ್ಬಿರಿದಿದ್ದ ತಮ್ಮ. ಅಪ್ಪ ನಿದ್ದೆಯಲ್ಲೇ ಸತ್ತು ಪುಣ್ಯವಂತನಾಗಿದ್ದ. ತಮ್ಮ ಸುಳ್ಳೇ ಡಾಕ್ಟರನ್ನು ಕರೆಯಲು ಓಡಿದ್ದ.

'ಸ್ಲೀಪಿಂಗ್ ಪಿಲ್ಸ್ ಓವ್ಹರ್ ಡೋಜಾಗಿದೆ' –ಅಂದಿದ್ದರು ಫ್ಯಾಮಿಲಿ ಡಾಕ್ಟರು.

'ನಿನ್ನೆ ರಾತ್ರಿ ಯಾರು ಅವರಿಗೆ ಔಷಧ ಕೊಟ್ಟಿದ್ದು ?'

'ನಾನು' ಎಂದಿದ್ದೆ ತಾನು ದೃಢವಾಗಿ, 'ನೀವು ಹೇಳಿದ್ದ ಮಿಕ್ಸಚರ್ ಮತ್ತ ದಿನಾ ಕೊಡುಹಾಂಗ ಒಂದು ಗುಳಿಗಿ ಕೊಟ್ಟೇನಿ....'

–ಹೆಂಡತಿ ಅಗಲಿದ ದುಃಖದಿಂದಲೋ ಜಡ್ಡಿನ ಬಾಧೆ ತಾಳದಂತಾಗಿಯೋ ಅಪ್ಪ ಬೇಕೆಂತಲೇ ಸ್ಲೀಪಿಂಗ್ ಪಿಲ್ಸ್ ತೆಗೆದುಕೊಂಡು ಸತ್ತಿರಬೇಕೆಂಬ ಘೋರ ತಾಪದಾಯಕ ಅರಿವಿನಿಂದಾಗಿ ಎಲ್ಲರೂ ಬಹಳ ಅತ್ತರು.

–ಸುಮ್ಮನೆ ಕೂತಿದ್ದ ನನ್ನನ್ನೇ ನೋಡಿ ಗಾಬರಿಯಿಂದ ಹತ್ತಿರ ಬಂದು ಬೆನ್ನು ತಟ್ಟಿದ್ದ ಸತೀಶ, 'ನಿನಗ ಭಾಳ ದುಃಖ ಆಗೇದಂತ ನನಗ ಗೊತ್ತದ. ಆದರೇನು ಮಾಡೂದು ? ಜೀವನದಾಗ ಇವೆಲ್ಲ ಬರೂವs. ಸಮಾಧಾನ ಮಾಡಿಕೋ. ಧೈರ್ಯಾ ತಂದುಕೋ.' ಈ ಮನುಷ್ಯ ತನ್ನನ್ನು ತಪ್ಪು ತಿಳಿಯುವುದಕ್ಕೂ ಒಂದು ಮಿತಿ ಬೇಡವೇ ಎನಿಸಿ, ಕೆಟ್ಟೆನಿಸಿ, ಆಗ ಅಳು ಬಂದಿತ್ತು.

ಆದರೆ ಅಂದಿನ ರಾತ್ರಿ ಅಪ್ಪನಿಗೆ ಒಂದೇ ಗುಳಿಗೆ ಕೊಟ್ಟಿದ್ದೆನೋ ಅಥವಾ ಕೈತಪ್ಪಿ ಇಲ್ಲವೆ ಮರವೆಯಿಂದ ಇಲ್ಲವೆ ಗೊತ್ತಾಗದೆ ಇಲ್ಲವೆ ಏನೋ ಆಗಿ ಹೆಚ್ಚು ಕೊಟ್ಟಿದ್ದೆನೋ ತನಗೆ ಈಗಲೂ ನೆನಪಾಗಿಲ್ಲ....

ಈಗ ರಾತ್ರಿ ಎರಡು ಗಂಟೆ.

ದಟ್ಟಕತ್ತಲು ಹೊರಗೆ. ಈಗಲೇ ಮಲಗಿ ಸ್ವಲ್ಪ ನಿದ್ದೆ ಮಾಡಬೇಕು. ಇಲ್ಲವಾದರೆ ಹಗಲಾದಾಗ ನಿದ್ದೆ ಹತ್ತಿ ಲೋಂಡಾ ಬಂದಾಗ ಎಚ್ಚರಾಗದೇ ಹೋದೀತು.

ಛೆ, ಸುಳ್ಳೆ ಹೆದರಿಕೆ ತನಗೆ. ಎಷ್ಟೋ ಸಲ ಪೂನಾದಿಂದ ಹುಬ್ಬಳ್ಳಿಗೆ, ಹುಬ್ಬಳ್ಳಿಯಿಂದ ಪೂನಾಕ್ಕೆ ಪ್ರವಾಸ ಮಾಡುವಾಗ ಪೂರಾ ಹದಿನಾಲ್ಕು ತಾಸು ತಾನು ನಿದ್ರಿಸಿದ್ದುಂಟು. ಆದರೂ ಲೋಂಡಾ ಬಂದಾಗ ಮಾತ್ರ ತಾನಾಗಿ ಎಚ್ಚರಾಗುವುದು. ಪ್ರತಿ ಸಲ ಹಾಗೆಯೆ. ಪೂನಾದಲ್ಲಿ ಮನೆಯೊಳಗೆ ಎಷ್ಟೋ ಸಲ ಮಕ್ಕಳ ಪರೀಕ್ಷೆ ಇದ್ದಾಗ, ಸತೀಶನಿಗೆ ಆಫೀಸಿನಲ್ಲಿ ಕೆಲಸ ಜಾಸ್ತಿ ಇದ್ದಾಗ, ಎಲ್ಲಾ ಹಾಗೇ ಚೆಲ್ಲಿಬಿಟ್ಟು ತಾನು ಹುಬ್ಬಳ್ಳಿಗೆ ಬರುತ್ತಿದ್ದುದುಂಟು. ಬಂದರೆ ಎಂದೂ ಎರಡು ದಿನಕ್ಕಿಂತ ಹೆಚ್ಚಿಗೆ ಇರಲಿಕ್ಕೆ ಆಗಿಲ್ಲ ತನಗೆ. ಇಲ್ಲಿಗೆ ಬಂದಾಗ ಯಾಕೆ ಬಂದೆನೋ ಅನಿಸುವುದು. ಬರಿದಾದ ಮನಸ್ಸು, ಬರಿದಾದ ತಲೆ ಹೊತ್ತು ಬಂದಷ್ಟೇ ಗಡಿಬಿಡಿ– ಅಸಮಾಧಾನದಿಂದ ತಿರುಗಿ ಹೊರಡುತ್ತಿದ್ದೆ. ಆದರೆ ಈ ಬರಿದೋ ಬರಿದನ್ನು ಏನೋ ತುಂಬಿದಂತೆ ಅನಿಸುವುದು,

ಈ ಕೊನೆ ಮೊದಲಿಲ್ಲದ ಅತೃಪ್ತಿ-ಅಶಾಂತಿ ಇಲ್ಲದಂತಾಗುವುದು– ನಡುವೆ ಎಲ್ಲೋ ಒಂದು ಇಪ್ಪತ್ತು ನಿಮಿಷ....

–'ಬಾಯಿಸಾಬ್‌ಕೊ ಖಾನಾ ಲಾವ್ನಾ ?'

ಇದೇನು ಲೋಂಡಾ ಬಂದೇ ಬಿಟ್ಟಿತೇ ಎಂದು ತಟ್ಟನೆ ಎದ್ದಳು ಆಕೆ. ಇಲ್ಲ, ಇನ್ನೂ ಮಧ್ಯ ರಾತ್ರಿ. ಲೋಂಡಾ ಬರುವುದು ಮಧ್ಯಾಹ್ನ. ಹಾಗಾದರೆ ಈ ಧ್ವನಿ ?

ಹನ್ನೆರಡು ವರ್ಷಗಳಿಂದ ಪರಿಚಿತವಾಗಿದ್ದ ಧ್ವನಿ, ತಾನು ಹುಬ್ಬಳ್ಳಿಗೆ ಪ್ರತಿಸಲ ಹೋಗುವಾಗೊಮ್ಮೆ ತಿರುಗಿ ಬರುವಾಗೊಮ್ಮೆ ತಪ್ಪದೆ ಕೇಳಿಬರುತ್ತಿದ್ದ ಧ್ವನಿ.

–ಅವನೊಬ್ಬ ಮಿಠಾಯಿ ಮಾರುವ ಮನುಷ್ಯ. ಲೋಂಡಾ ಸ್ಟೇಷನ್ ಮೇಲೆ ಪ್ರತಿ ಟ್ರೇನು ಬಂದಾಗ ಪ್ಲ್ಯಾಟ್‌ಫಾರ್ಮಿನ ಈ ಕೊನೆಯಿಂದ ಆ ಕೊನೆಯ ವರೆಗೆ ಮಿಠಾಯಿಯ ಗಾಡಿಯನ್ನು ನೂಕಿಕೊಂಡು ಹೋಗಿ ಮಾರುವ ಮನುಷ್ಯ. ಊಟದ ಹೋಟೆಲಿನಿಂದ ಊಟ ತಂದುಕೊಡುವುದೇನೂ ಅವನ ಕೆಲಸವಲ್ಲ. ಆದರೂ ಪ್ರತಿಸಲ ಈ ದಾರಿಯಲ್ಲಿ ಬಂದಾಗ ಅವನು ಬಂದು ಹಾಜರಾಗುತ್ತಾನೆ ; ಹೋಟೆಲಿನಿಂದ ಊಟ ತಂದು ಕೊಡುತ್ತಾನೆ ; ಒಳ್ಳೆಯ ಮಿಠಾಯಿ ಕೊಡುತ್ತಾನೆ ; ತಾನು ಊಟ ಮಾಡುತ್ತಿರುವಷ್ಟು ಸಮಯವೂ ವಿನಯದಿಂದ ಪಕ್ಕದಲ್ಲಿ ನಿಂತಿರುತ್ತಾನೆ ; ಬಿಲ್ಲು ಕೊಟ್ಟಾಗ ಬಾಗಿ ಸ್ವೀಕರಿಸಿ ಸಲಾಮ್ ಮಾಡುತ್ತಾನೆ ; ಟ್ರೇನು ಹೊರಟಾಗ ಪ್ಲಾಟ್‌ಫಾರ್ಮಿನ ಕೊನೆಗೆ ನಿಂತು ಮರೆಯಾಗುವ ವರೆಗೂ ಕೈ ಬೀಸುತ್ತಾನೆ.....

ತನ್ನ ಜೊತೆ ಮಕ್ಕಳು ಯಾರಾದರೂ ಬಂದಿದ್ದರೆ ಅವರೂ ಹುರುಪಿನಿಂದ ಕಿಡಕಿಯೊಳಗೆ ಮುಖ ಹಾಕಿ ಅವನು ಕಾಣುತ್ತಿರುವ ವರೆಗೂ ತಿರುಗಿ ಕೈ ಬೀಸುತ್ತಾರೆ.

'ಈ ಮಿಠಾಯಿವಾಲಾ ನೋಡು ಸ್ವಲ್ಪೂ ಬದಲಾಗಿಲ್ಲ. ನಮ್ಮ ಲಗ್ನಾದ ಹೊಸದಾಗಿ ಹ್ಯಾಂಗಿದ್ನೋ ಈಗೂ ಹಾಂಗS ಕಾಣಸ್ತಾನ ಅಲ್ಲS ?' ಅಂದಿದ್ದ ಒಮ್ಮೆ ಸತೀಶ.

ಹೌದು. ತನ್ನ ಲಗ್ನವಾದ ನಂತರ ಮೊದಲ ಸಲ ಸತೀಶನೊಂದಿಗೆ ಹುಬ್ಬಳ್ಳಿಯಿಂದ ಪೂನಾಕ್ಕೆ ಹೊರಟಾಗ, ಹನ್ನೆರಡು ವರ್ಷಗಳ ಹಿಂದೆ, ಲೋಂಡಾ ಸ್ಟೇಷನ್ ಮೇಲೆ ಇವನನ್ನು ಮೊದಲು ನೋಡಿದ್ದು. ಟ್ರೇನಿನಲ್ಲಿ ಫಸ್ಟ್‌ಕ್ಲಾಸ್ ಕಂಪಾರ್ಟಮೆಂಟನಲ್ಲಿ ತನ್ನನ್ನು ಒತ್ತರಿಸಿ ಕೂತಿದ್ದ ಸತೀಶನ ಕೈ-ಬಾಯಿ ಎರಡಕ್ಕೂ ಪುರಸೊತ್ತಿರಲಿಲ್ಲ. ತನಗೋ ಒಂದು ಬಗೆಯ ಮಂಪರು. ಸಾವಿನಷ್ಟು ಶೀತಲವಾದ ನಿರ್ಲಿಪ್ತ ಮಂಪರು. ದಣಿದು ಮಲಗಿ ಗಾಢ ನಿದ್ರೆಯಲ್ಲಿದ್ದಾಗ ಮೈ ಜುಮ್ಮೆನ್ನಿಸುವ, ಅಂಜಿಕೆ ಬರಿಸುವ ಕನಸು ಕಂಡು ಬೆಚ್ಚಿ ಎಚ್ಚತ್ತಂತಾಗಿತ್ತು ಲೋಂಡಾ ಸ್ಟೇಷನ್ ಮೇಲೆ ಈ ಮಿಠಾಯಿವಾಲಾನನ್ನು ನೋಡಿದಾಗ.

ಹೊಸ ಹೆಂಡತಿಗಾಗಿ ಹಲವಾರು ಮಿಠಾಯಿ ವ್ಯಾಪಾರ ಮಾಡುವುದರಲ್ಲಿ ತೊಡಗಿದ್ದ ಸತೀಶ, ಅವನೊಂದಿಗೆ. ತಾನು ಸಭ್ಯತೆ ಮರೆತು ಅವನನ್ನು ನೋಡುತ್ತಿದ್ದೆ.... ಅಪರಿಚಿತನಾದ ಈ ಮಿಠಾಯಿವಾಲಾನ ಕಣ್ಣಲ್ಲಿ ತನಗೆ ಹಿಂದೊಮ್ಮೆ ಪರಿಚಿತವಾಗಿದ್ದ ಬೆಳಕು. ತಾನು ಪ್ರಯತ್ನಪಟ್ಟು ಮರೆತಿದ್ದ, ಅವ್ವ-ಅಪ್ಪ-ಜಗತ್ತು ಸೇರಿ ಜುಲುಮೆಯಿಂದ ಮರೆಸಿದ್ದ ಬೆಳಕು.....

ಟ್ರೇನು ನಿಧಾನವಾಗಿ ಹೊರಟು ನಂತರ ಒಮ್ಮೆಲೆ ವೇಗ ಹೆಚ್ಚಿಸಿತ್ತು. 'ಏನಷ್ಟು ವಿಚಾರ ಮಾಡತೀ ? ನನಗ ಹೇಳು. ನಿನ್ನ ಎಲ್ಲಾ ಚಿಂತಿ – ದುಃಖ ನನಗ ಕೊಡು. ನನ್ನ ಸುಖಾ ನೀ ತಗೋ.' – ಅಂದಿದ್ದ ಸತೀಶ. ಯಾವ ಪುಸ್ತಕದಲ್ಲಿ ಓದಿದ್ದನೋ. ಅವನ ಎರವಲು ಜ್ಞಾನದ ಬಗೆಗೆ ಜುಗುಪ್ಸೆ ಅನಿಸಿದ್ದರೂ ಅವನ ಎದೆಯು ಆಸರೆ ಹಿತವೆನ್ನಿಸಿತ್ತು. 'ನೀ ಯಾತರ ಸಲುವಾಗಿ ಇಷ್ಟು ಚಿಂತೆ ಮಾಡತೀ ನನಗ ಹೇಳು. ನಿನ್ನ ಹಿಂದಿನ ಜೀವನದಾಗ ಏನರೆ ಆಗಿತ್ತೇನು ? ಹಾಂಗೇನರೆ ಇದ್ದರ ನನಗ ಹೇಳು. ನಾ ನಿನ್ನನ್ನ ತಪ್ಪು ತಿಳಿಯೂದಿಲ್ಲ. ನಾ ನಿನ್ನ ಕ್ಷಮಾ ಮಾಡತೀನಿ.' – ಅಂದಿದ್ದ ಹೊಸದಾಗಿ ಮದುವೆಯಾಗಿದ್ದ ಗಂಡ ಸತೀಶ. ಅವನ ದನಿಯಲ್ಲಿ ಹೆಂಡತಿಯ ದುಃಖ ಅರಿತು ಪಾಲುಗೊಳ್ಳುವ ಕಳಕಳಿಗಿಂತಲೂ ಅವಳ ತಪ್ಪು ಕ್ಷಮಿಸಿ ಉದಾರತೆ ತೋರಿಸುವ ಕ್ಷುಲ್ಲಕ ಆತುರವೇ ಹೆಚ್ಚಾಗಿ ಕಂಡು ಬೇಸರಬಂದಿತ್ತು ತನಗೆ.

– ಈಗ ಬೆಳಗಿನ ಐದು ಗಂಟೆ.

ಇನ್ನಾದರೂ ಸ್ವಲ್ಪ ಮಲಗಬೇಕು, ಒಂದು ತಾಸಿನ ಮಟ್ಟಿಗಾದರೂ. ಮಿರಜ ಬಂದಾಗ ಎದ್ದು ಚಹಾ ತಗೊಳ್ಳಬಹುದು.

ಸತೀಶ ಯಾವಾಗಲೂ ಹಾಗೆಯೆ. ಕ್ಷಮಿಸುವ, ಉದಾರತೆ ತೋರಿಸುವ, ಸಮಾಧಾನ ಪಡಿಸುವ, ರಕ್ಷಿಸುವ, ತಪ್ಪು ಕಡೆಗಣಿಸುವ, ಅಸಹ್ಯ ಮನುಷ್ಯ. ಹಿಂದೆ ತಮ್ಮ ಲಗ್ನವಾದ ಹೊಸದರಲ್ಲಿ ಒಮ್ಮೆ ಯಾರೋ ಹುಬ್ಬಳ್ಳಿಯಿಂದ ತನ್ನ ಇತಿಹಾಸದ ಬಗ್ಗೆ ವರ್ಣರಂಜಿತವಾದ ಅನಾಮಧೇಯ ಪತ್ರ ಬರೆದಾಗ ಅದನ್ನು ತನ್ನೆದುರಿಗೇ ಓದಿ ಹರಿದು ಹಾಕಿ ನಕ್ಕುಬಿಟ್ಟಿದ್ದ ಆತ, 'ಕಾಲೇಜಿನ್ಯಾಗಿದ್ದಾಗ ಏನೇನರೆ ಆಗಿರ್ತಾವ. ನಾ ನಿನ್ನ ಹಿಂದಿನ ತಪ್ಪೆಲ್ಲಾ ಕ್ಷಮಾ ಮಾಡಿಬಿಟ್ಟೀನಿ. ನಿನ್ನ ಮ್ಯಾಲೆ ನನಗ ಪೂರಾ ವಿಶ್ವಾಸ ಅದ. ಇನ್ನ ಮುಂದ ನೀ ನನಗ loyal ಇದ್ದರ ಮುಗೀತು.' ಅವನ ಈ ಮನೋಭಾವ, ಹೆಂಡತಿಯ ದೋಷಗಳನ್ನು ಮನ್ನಿಸಿ ಹೊಟ್ಟೆಯಲ್ಲಿ ಹಾಕಿಕೊಳ್ಳುವ ಈ protective instinct – ತನ್ನೊಳಗೆ ಬೆಂಕಿ ಹೊತ್ತಿಸುತ್ತದೆ. ನನಗೆ ಬೇಡ ನಿನ್ನ ಕ್ಷಮೆ, ನನಗೆ ಬೇಡ ನಿನ್ನ ದಯೆ, ನನಗೆ ಬೇಡ ನಿನ್ನ ಸಹಾನುಭೂತಿ – ಎಂದೆಲ್ಲ ಒದರಬೇಕೆನಿಸುತ್ತದೆ.....

ಎಷ್ಟೋ ಸಲ ತಾನು ಕ್ಲಬ್ಬಿಗೆ ಹೋಗಿ ರಾತ್ರಿ ತಡವಾಗಿ ಮನೆಗೆ ಬಂದರೂ

ಅವನಿಗೆ ಸಿಟ್ಟು ಬರುವುದಿಲ್ಲ. ಅವನ ಗೆಳೆಯರೊಂದಿಗೆ ತಿರುಗಿದರೂ ಅವನು ಏನೂ ಅನ್ನುವುದಿಲ್ಲ. ಆ ಗೆಳೆಯರ ಹೆಂಡಂದಿರಿಗೆಲ್ಲ ಮಾತ್ರ ತನ್ನ ಮೇಲೆ ವಿಪರೀತ ಸಿಟ್ಟು-ಅಸೂಯೆ. ಅವರೆಲ್ಲ ಕೂಡಿದಾಗ ಮರೆಯದೆ ಚರ್ಚಿಸುವ, ದೂಷಿಸುವ ವಸ್ತು ತಾನು. ಹ್ಞ ; ಗಂಡಂದಿರ ಮೇಲೆ ನಂಬಿಕೆಯಿರದ ದುರ್ದೈವೀ ಹೆಂಡಂದಿರು ಸುಂದರಿಯರಾದ ಇತರ ಹೆಂಗಸರನ್ನು ದೂಷಿಸುವುದರಿಂದಲ್ಲದೆ ಹೋದರೆ ಇನ್ನಾವುದರಿಂದ ತೃಪ್ತಿ ಹೊಂದಬೇಕು ?

ಎಲ್ಲ ಕೇಳಿ, ಎಲ್ಲ ನೋಡಿ, 'ನಿನ್ನ ಮೇಲೆ ವಿಶ್ವಾಸವಿದೆ' ಅನ್ನುವ ಸತೀಶನನ್ನು ಎತ್ತಿ ಅವನ ಫ್ಯಾಕ್ಟರಿಯೊಳಗಿನ ಬೆಂಕಿಯುಗುಳುವ ಬಂಬಿನಲ್ಲಿ ಹಾಕಬೇಕು ಅನ್ನಿಸುವುದು....

—ಆದರೆ ಬಹುಶಃ ಇದರಲ್ಲಿ ಅವನ ತಪ್ಪಿಲ್ಲ, ಅವನಿಗೆ ತನ್ನ ಹೆಂಡತಿಯ ಬಗೆಗಿನ ಸತ್ಯವನ್ನು ಅರಿತು ಎದುರಿಸುವ ಧೈರ್ಯವಿರಲಾರದು ; ಅಂತೆಯೆ ಅವಳ ತಪ್ಪನ್ನು ತಾನು ಕ್ಷಮಿಸಿದ್ದೇನೆಂದುಕೊಂಡು. ಇಷ್ಟೆಲ್ಲ ಆದರೂ ಅವಳನ್ನು ಬಿಡದೆ ಪ್ರೀತಿಸುತ್ತಿರುವೆನೆಂದುಕೊಂಡು, ಅವಳಿಗಾಗಿಯೇ ಅವಳೊಂದಿಗಿದ್ದು ಅವಳನ್ನು ಜಗತ್ತಿನ ಎಲ್ಲ ದುಃಖ-ಕಷ್ಟಗಳಿಂದ ಕಾಯುತ್ತಿರುವೆನೆಂದುಕೊಂಡು, ಅವಳಿಗಾಗಿ ತ್ಯಾಗ ಮಾಡುತ್ತಿರುವೆನೆಂದುಕೊಂಡು ಸಮಾಧಾನದಿಂದಿದ್ದಾನೆ ಅವನು.

ಹ್ಞ—ತ್ಯಾಗ. ಪ್ರೀತಿಸುವ ವ್ಯಕ್ತಿಯಲ್ಲಿ ನಂಬಿಕೆಯಿದ್ದಾಗ ಮಾಡುವ ತ್ಯಾಗಕ್ಕಿಂತಲೂ, ನಂಬಿಕೆಯಿಲ್ಲದೇ ಬರೇ ಪ್ರೀತಿಗಾಗಿ ಮಾಡುವ ತ್ಯಾಗ ದೊಡ್ಡದೆಂದು ಹಿಂದೆಂದೋ ಕೇಳಿದ ನೆನಪು. ಸತೀಶನಿಗೆ ತನ್ನಲ್ಲಿ ನಂಬಿಕೆಯಿಲ್ಲವೆಂದು ತನಗೆ ಗೊತ್ತಿದೆ. ಹಾಗಾದರೆ ಪ್ರೀತಿಯಿರಬಹುದೇ ?

ಯಾಕೋ ಇಷ್ಟು ವರ್ಷಗಳ ನಂತರ ಒಮ್ಮೆಲೆ ಅವನ ಬಗ್ಗೆ 'ಪಾಪ !' ಅನಿಸುತ್ತಲಿದೆ.... ಬೆಳಗು. ಮಿರಜ ಸ್ಟೇಶನ್ ಬಂತು. ಚಹಾ-ಕಾಫಿ-ವಡೆಗಳ ಧಾಂದಲೆ....

—'ಅಷ್ಟದೂರದಿಂದ ಇಷ್ಟೆಲ್ಲಾ ತ್ರಾಸು ಸಹನ ಮಾಡಿಕೊಂಡು ನೀ ಒಬ್ಬಾಕಿ ನೋಡವಾ ಇಲ್ಲೀ ತನಕಾ ಬಂದು ನಮ್ಮನ್ನ ನೋಡೂವಾಕಿ. ಉಳಿದ ಅಕ್ಕಾ-ತಂಗೇರು ಲಗ್ನಾದಕೂಡಲೆ ತವರಮನಿ ಮರತಬಿಟ್ಟಾರ. ನೀ ಮಾತ್ರ ಸ್ವಲ್ಪೂ ಬದಲಾಗಿಲ್ಲ. ಅವ್ವಾ-ಅಪ್ಪಾ ತೀರಿಕೊಂಡ ಮ್ಯಾಲೂ ನಿನಗ ತವರಮನೀ ಮ್ಯಾಲಿನ ಪ್ರೀತಿ ಹಾಂಗs ಅದ. ತಪ್ಪದ ಬಂದು ಭೆಟ್ಟಿ ಆಗತೀ.' —ಅನ್ನುತ್ತಾನೆ ಹುಬ್ಬಳ್ಳಿಯಲ್ಲಿಯ ತಮ್ಮ, ತಾನು ಅಲ್ಲಿಗೆ ಹೋದ ಪ್ರತಿಸಲ. ಅವನ ಹೆಂಡತಿ ಮನೆತುಂಬ ಓಡಾಡಿ ಸಿಹಿತಿಂಡಿ ಮಾಡುತ್ತಾಳೆ. ಮಧ್ಯಾಹ್ನ ಊಟ ಮುಗಿಸಿ ಅಡ್ಡಾದಾಗ ಮೆಲ್ಲನೆ ಹೇಳುತ್ತಾಳೆ, 'ನಮ್ಮ ಸುಶೀಗೆ ಪರಕಾರ ಹರದುಹೋಗ್ಯಾವ ನೋಡಿದ್ರೆಲಾ ವೈನ್ಸ, ಹ್ಯಾಂಗೂ

ಬಂದೀರಿ, ಒಂದು ಜೋಡು ಹೊಲಿಸಿ ಬಿಡ್ರಿ. ನೀವು ಕೊಟ್ಟ ಅರಿವಿ ಹಾಕ್ಕೊಂಡs ಬೆಳೆದಾವ ನನ್ನ ಮಕ್ಕಳು.' ಸಂಜೆ ವಾಕಿಂಗ್ ಮುಗಿಸಿ ಬಂದ ತಮ್ಮ ಹೇಳುತ್ತಾನೆ, 'ಹಿತ್ತಲ ಕಡೆಯ ಮಾಳಗಿ ಬೀಳಲಿಕ್ಕಾಗೇದ ಅಕ್ಕಾ, ರಿಪೇರಿ ಮಾಡಸದಿದ್ರ ಮಳೆಗಾಲ ಕಳೆಯೋದು ಕಠಿಣ ಅದ. ಈ ತುಟ್ಟೀ ಕಾಲದಾಗ ಎಲ್ಲಾ ನಿಭಾಯಿಸೋದು ಅಂದ್ರ–'

–ಹೀಗೇ ಕೊನೆಯಿಲ್ಲದ ಗೋಳಿನ ಕತೆ. ದೇವರೇ ಯಾಕೆ ಬಂದೆ ಇಲ್ಲಿಗೆ ಎನ್ನಿಸಿ ಬಿಡುತ್ತದೆ. ಹೇಗೋ ಎರಡು ದಿನ ಕಳೆದು ತಿರುಗಿ ಊರಿಗೆ ಹೊರಡುತ್ತಾಳೆ ತಾನು, ಸ್ವಲ್ಪ ಹಣ ತಮ್ಮನ ಕೈಯಲ್ಲಿಟ್ಟು, 'ಮತ್ತೆ ಊರಿಗೆ ಹೋಗಿ ಕಳಿಸುತ್ತೇನೆ'ಂದು ಆಶ್ವಾಸನೆ ಕೊಟ್ಟು, ತುಂಬಿದ ಬೇಸರದಿಂದ ಟ್ರೇನು ಹತ್ತುತ್ತಾಳೆ. ಲೋಂಡಾ ಬಂದೀತೇ ಎಂದು ಕಾಯುತ್ತಾಳೆ. 'ಬಾಯಿ ಸಾಬ್‌ಕೊ ಖಾನಾ ಲಾವ್ಞೂ ?' ಎಂದು ಕೇಳುತ್ತಾನೆ ಕಿಡಿಕಿಯಾಚೆಯಿಂದ ಆ ಮಿಠಾಯಿವಾಲಾ. ಅಷ್ಟೇ ಅವನು ಮಾತಾಡುವುದು. ತಾನು "ಹ್ಞೂ" ಅಂದ ಕೂಡಲೇ ಮಿಠಾಯಿಯ ಗಾಡಿ ಅಲ್ಲೇ ಬಿಟ್ಟು ಓಡುತ್ತಾನೆ.... ತಿರುಗಿ ತನ್ನ ಟ್ರೇನು ಹೊರಟಾಗ ಪ್ಲ್ಯಾಟ್‌ಫಾರ್ಮಿನ ತುದಿಗೆ ನಿಂತು ಕೈ ಬೀಸುತ್ತಾನೆ.

"ನಿಂದೂ ತವರಮನೀ ಸಲುವಾಗಿ ಭಾಳ ಅಂತಃಕರಣ. ಇಷ್ಟು attachment ಇರವ್ರು ಅಗದೀ ಕಡಿಮಿ" –ಅನ್ನುತ್ತಾನೆ ಗಂಡ.

–ಹತ್ತು ಗಂಟೆ.

ಬಿಸಿಲು ಏರತೊಡಗಿದೆ. ಕಿಡಿಕಿಗುಂಟ ಒಳಗೆ ಇಳಿದುಬಂದಿದೆ. ಕಿಡಿಕಿ ಮುಚ್ಚಲು ಮನಸ್ಸಿಲ್ಲ.

"ಬಿಸಿಲು ನಿಮಗೆ ಒಳ್ಳೇದಲ್ಲ" –ಮೊನ್ನೆ ಹೇಳಿದ್ದರು ಡಾಕ್ಟರು ತನಗೆ. ಬಹಳ ಆತ್ಮವಿಶ್ವಾಸದ ಮನುಷ್ಯ ಆ ಡಾಕ್ಟರು. ಸತೀಶನ ಆಪ್ತ ಗೆಳೆಯನಂತೆ. ಹಹ್ಹಹ್ಹ, ಹೇಗೆ ಗೋಳುಗುಟ್ಟಿಸಿದ್ದೆ ಅವನನ್ನು ತಾನು ಹತ್ತು ವರ್ಷಗಳ ಹಿಂದೊಮ್ಮೆ !

ಹತ್ತು ವರ್ಷಗಳ ಹಿಂದೆ ಮೊದಲ ಸಲ ತಾನು ಬಸಿರಿಯಾದಾಗ ಸತೀಶನಿಗಿಂತ ಹೆಚ್ಚು ಸಂಭ್ರಮಪಟ್ಟಿದ್ದ ಅವನು. "ನಮ್ಮ ಸತೀಶಗ ಮಕ್ಕಳ ಮ್ಯಾಲೆ ಭಾಳ ಪ್ರೀತಿ ಭಾಭಿ. ನೀವು ನಿಮ್ಮ ಸಲುವಾಗಿ ಭಾsಳ ಕಾಳಜಿ ತಗೋಬೇಕು." ದಿನಾ ತಪ್ಪದೆ ಬಂದು ಯೋಗಕ್ಷೇಮ ವಿಚಾರಿಸುತ್ತಿದ್ದ ಅವನು. "ಎಲ್ಲಾ ನಿನ್ನ ಜವಾಬ್ದಾರಿ ನೋಡಪಾ" ಎನ್ನುತ್ತಿದ್ದ ಸತೀಶ.

ಮುಂದೆ ನಾಲ್ಕು ತಿಂಗಳ ನಂತರ ಒಂದು ದಿನ ಆಕಸ್ಮಿಕವಾಗಿ ಗರ್ಭಪಾತವಾದಾಗ ಸತೀಶ ಕಂಗೆಟ್ಟು ತಲೆಮೇಲೆ ಕೈಹೊತ್ತು ನಿರ್ಜೀವನಂತೆ ಕೂತಿದ್ದ. 'ಏನಾದರೂ ಅಪಥ್ಯ ಮಾಡಿದಿರಾ ಭಾಭಿ ?' ಎಂದು ಉತ್ಕಂಠೆಯಿಂದ ಕೇಳಿದ್ದ ಈ ಡಾಕ್ಟರು. 'ಇಲ್ಲವಲ್ಲ' –ಎಂದಿದ್ದೆ, ವಿಜಯದ ಆನಂದದಿಂದ. ಆ ಆಘಾತದಿಂದ

ಮುಂದೆ ತಿಂಗಳುಗಳವರೆಗೆ ಸತೀಶ ಮಂಕಾಗಿದ್ದ. ಆ ಡಾಕ್ಟರನ ಪೆಚ್ಚು ಮುಖ ನೋಡಿದಾಗೆಲ್ಲ ಹಾಯೆನಿಸುತ್ತಿತ್ತು.

ಅವನು ವರ್ಜ್ಯವೆಂದು ಹೇಳಿದ್ದ ಪಪ್ಪಾಯಿಹಣ್ಣನ್ನು – ದೊಡ್ಡದೊಂದು ಪಪ್ಪಾಯಿ ಹಣ್ಣನ್ನು – ಯಾರಿಗೂ ಗೊತ್ತಾಗದ ಹಾಗೆ ಅಟ್ಟದ ಮೇಲೆ ಕೂತು ತಾನು ತಿಂದದ್ದು ಕಡೆಗೂ ಯಾರಿಗೂ ಗೊತ್ತಾಗಿರಲೇ ಇಲ್ಲ. ಹಹ್ಹಹ್ಹ....

ಇರುವ ಸುಖ ಸಾಲದೆಂದು ಮಕ್ಕಳೊಂದು ಕೇಡು. ಈ ಮಕ್ಕಳು ತನ್ನವೆಂದು ತನಗೆಂದೂ ಅನಿಸಿಲ್ಲ. ಮುಂದೆ ಪಾಪು ಹುಟ್ಟಿದಾಗ ಸತೀಶನಿಗೆಷ್ಟು ಖುಶಿ – ಎಂದೂ ಯಾರೂ ಮಾಡಲಾರದ್ದೇನನ್ನೋ ತಾನು ಮಾಡಿದ ಹಾಗೆ. ಆ ಮಗು ಸುಮ್ಮನೆ ಬಾಯಿ ಕಿಸಿದಾಗ, ಕೈಕಾಲು ಬಡಿದಾಗ, ಅರ್ಥವಾಗದ ಧ್ವನಿ ಹೊರಡಿಸಿದಾಗ ಇವನಿಗೆಷ್ಟು ಹೆಮ್ಮೆ – 'ನಮ್ಮ ಪಾಪು ಬಹಾಳ ಮಿಶ್ಚಿವ್ಹಸ್, ಬಹಾಳ ಶಾಣೆ, ಬಹಾಳ –'' ಜಗತ್ತಿನಲ್ಲಿಯ ಎಲ್ಲಾ ಹಡೆದವರಿಗೂ ಹೀಗೇ ಅನಿಸುತ್ತದೆ ಕಣೋ ಸತೀಶ – ಎಂದು ಹೇಳಿದ್ದರೆ....

ಹನ್ನೆರಡು ಗಂಟೆ.

ಬಿಸಿಲು ಹೆಚ್ಚಾಗುತ್ತಲೇ ಇದೆ. ಯಾವುದೋ ರೋಡ್‌ಸ್ಟೇಷನ್ ಮೇಲೆ ಗೂಡ್ಸ್ ಗಾಡಿ ಹಳಿ ತಪ್ಪಿದ್ದರಿಂದ ಒಂದು ತಾಸು ಸುಮ್ಮನೆ ತಡವಾಗಿ ಹೋಯಿತು. ಇಡೀ ರಾತ್ರಿ ನಿದ್ರೆ ಮಾಡದ್ದರಿಂದ ಕಣ್ಣು ಭಾರ, ತಲೆ ಭಾರ. ಈ ಸಲ ಹುಬ್ಬಳ್ಳಿಯಲ್ಲಿ ಹೆಚ್ಚು ದಿನ ನಿಲ್ಲಬಾರದು. ಕಂಪಾರ್ಟಮೆಂಟಿನಲ್ಲಿ ವಿಪರೀತ ಸೆಕೆ. ಫ್ಯಾನಿನ ಗಾಳಿಯೆಲ್ಲ ಉಗಿಯಾಗುತ್ತಿದೆ. ಹುಶ್, ಲೋಂಡಾ ಬರಬಾರದೆ....

ಅರ್ಧ ನಿದ್ದೆ, ಅರ್ಧ ಎಚ್ಚರ. ಟ್ರೇನು ನಿಂತಿದೆ. ಲೋಂಡಾ ಸ್ಟೇಷನ್. ಮಧ್ಯಾಹ್ನ ಎರಡು ಗಂಟೆಯಾಗಿರಬೇಕು. ಕಣ್ಣು ತೆರೆಯಲು ಮನಸ್ಸಿಲ್ಲ. ''ಬಾಯಿಸಾಬ್‌ಕೋ ಖಾನಾ ಲಾವ್ಹೂ ?' ನಿರೀಕ್ಷಿಸುತ್ತ ಹಾಗೇ ಕಣ್ಣು ಮುಚ್ಚಿ ಮಲಗಿದ್ದಳು ಆಕೆ.

ಜನರು ಹತ್ತುವ, ಇಳಿಯುವ ಗಡಿಬಿಡಿ. ಪೋರ್ಟರುಗಳ ಕೂಗಾಟ. ಚಹಾ – ಕಾಫಿ ಮಾರುವ ಹುಡುಗರ ಚೀರುದನಿ. ಯಾರದೋ ಮಗು ಅಳುವ ಸ್ವರ. ಯಾರೋ ಗಟ್ಟಿಯಾಗಿ ನಕ್ಕ ಹಾಗೆ. ಒಟ್ಟು ಗದ್ದಲೋ ಗದ್ದಲ....

ಆದರೆ ಊಹ್ಞೂ, ಮಿಠಾಯಿವಾಲಾ ಬಂದೇ ಇಲ್ಲ. ಆಕೆ ತಟ್ಟನೆ ಎದ್ದು ಕಿಡಿಕಿಯಿಂದ ಹೊರಗೆ ಹಣಿಕಿದಳು – ಪ್ಲ್ಯಾಟಫಾರ್ಮಿನ ಈ ಕೊನೆಯಿಂದ ಆ ಕೊನೆಯವರೆಗೂ, ಗದ್ದಲವೇನೋ ಬಹಳಷ್ಟಿತ್ತು. ಆದರೂ ಅವನು ಇದ್ದಿದ್ದರೆ ಇದ್ದಲ್ಲಿಂದಲೇ ತನ್ನ ಗಾಡಿ ಸಹಿತವಾಗಿ ಕಾಣಿಸುತ್ತಿದ್ದ. ಎಲ್ಲಿ ಅವನು ? ಮೈಯಲ್ಲಿ

ನೆಟ್ಟಗಿಲ್ಲವೇ ? ಊರಿಗೆ ಹೋಗಿದ್ದಾನೆಯೇ ? ಈ ಕೆಲಸ ಬಿಟ್ಟುಬಿಟ್ಟನೇ ?

ಛೇ, ಈ ಯಾವುದನ್ನು ಒಪ್ಪಲು ಆಗುವುದಿಲ್ಲ. ಅವನು ಇಲ್ಲೆಲ್ಲಾದರೂ ಇರಲೇಬೇಕು. ಅವಳು ಟ್ರೇನು ಇಳಿದು ಪ್ಲ್ಯಾಟ್‌ಫಾರ್ಮ ಮೇಲೆಲ್ಲ ಅಡ್ಡಾಡಿದಳು. ಊಟದ ಮನೆಯು ಒಳಗೆ ಹೊಕ್ಕು ನೋಡಿದಳು. ಪ್ಲ್ಯಾಟಫಾರ್ಮುಗಳಾಚೆ ದೂರದಗುಂಟ ಕಣ್ಣು ಹರಿಸಿದಳು. ಅವನು ಎಲ್ಲೂ ಇಲ್ಲ.

ಎದುರಿಗೊಬ್ಬ ಸಣ್ಣ ಹುಡುಗ—ನೀರು ಹೊರುವ ಹುಡುಗ. ಹಲವಾರು ಸಲ ಮಿಠಾಯಿವಾಲಾನೊಂದಿಗೆ ಕಂಡ ನೆನಪು—ಬರುತ್ತಿದ್ದಾನೆ.

"ಏ ಹುಡುಗಾ, ಸ್ವಲ್ಪ ಬಾಪ್ಪಾ."

ಏನೆಂದು ವಿಚಾರಿಸುವುದು ಇವನನ್ನು ? ಮಿಠಾಯಿವಾಲಾ ಎಲ್ಲಿ ಎಂದೆ ? ನಿಮಗೇಕೆ ಬೇಕೆಂದು ಅವನು ಕೇಳಿದರೆ ?

"ಇಲ್ಲಿ ಒಬ್ಬಾತ ಗಾಡಿಯಲ್ಲಿ ಮಿಠಾಯಿ ಇಟ್ಕೊಂಡು ಮಾರುತ್ತಿದ್ದನಲ್ಲ...."

"ಓ, ಶಶಿದಾದಾನೇ ?" —ಆ ಹುಡುಗ ಹಲ್ಕಿರಿದು ಹೇಳಿದ. "ಅವನು ಹೋಗಿ ಬಿಟ್ಟನಲ್ಲ ಬಾಯೀಸಾಬ್ ?"

"ಅಂದರs ?" —ಎದೆಯಲ್ಲೇನೋ ನೋವು.

"ಹಳ್ಳಿಯೊಳಗ ಅವನ ಅಪ್ಪಾ ಸತ್ಹೋದ್ರು. ಮನೆ ನೋಡ್ಕೊಳ್ಲಿಕ್ಕೆ ಅಂತ ಶಶಿದಾದಾ ಹೋಗಿಬಿಟ್ಟ. ನಿಮಗ ಮಿಠಾಯಿ ಬೇಕೇನ್ರಿ ಬಾಯೀ ? ಬೇರೆ ಛಲೋ ತಂದ್ಕೊಡ್ತೀನಿ."

"ಬ್ಯಾಡಪ್ಪ ಬ್ಯಾಡ. ನಿನ್ನ ಶಶಿದಾದಾ ತಿರುಗಿ ಬರೋದಿಲ್ಲೇನು ಹಂಗಾರ ?"

"ಇನ್ಯಾಕ ಬರ್ತಾನ್ರಿ ಬಾಯೀ ?"

—ಮಿಠಾಯಿವಾಲಾ ಇನ್ನು ಬರುವುದಿಲ್ಲ. ತಾನೀಗ ಹುಬ್ಬಳ್ಳಿಗೆ ಹೋದರೂ ತಿರುಗಿ ಬರುವಾಗ ಅವನು ಬರುವುದಿಲ್ಲ. ಮುಂದೆ ಎಂದಾದರೂ ತಾನು ಮತ್ತೆ ಈ ದಾರಿಯಿಂದ ಬಂದರೆ ಅವನು ಬರುವುದಿಲ್ಲ. ಅವನಿನ್ನು ಎಂದೂ ಬರುವುದಿಲ್ಲ. ಇನ್ನೆಂದೂ ಅವನ ಕಣ್ಣುಗಳಲ್ಲಿಯ ತನಗೆ ಪ್ರಿಯವಾದ ಆ ಬೆಳಕನ್ನು ತಾನು ನೋಡುವಂತಿಲ್ಲ....

ಆ ಬೆಳಕು-ಹಿಂದೆ, ಬಹಳ ಹಿಂದೆ, ತಾನು ಕಾಲೇಜಿನಲ್ಲಿದ್ದಾಗ ತನಗೆ ಶೆಲಿ ಕಲಿಸುತ್ತಿದ್ದ ಪ್ರೊಫೆಸರನ ಕಣ್ಣಲ್ಲಿ ಇದ್ದಂತಹದೇ ಬೆಳಕು....ಶೆಲಿ ಕಲಿಸಿದವನು ತನ್ನ ಪಾಲಿಗೆ ಸತ್ತು ಹಾಳಾಗಿ ಹೋದ ನಂತರದ ವರ್ಷಗಳ ತುಂಬ ಕವಿದಿದ್ದ ಕತ್ತಲನ್ನು ಹರಿಸಿದ್ದ ಬೆಳಕು— ಈ ಮಿಠಾಯಿವಾಲಾನ ಕಣ್ಣಲ್ಲಿ.

ಜಗತ್ತು ತನಗೆ ಬಹಳ ಅನ್ಯಾಯ ಮಾಡಿತ್ತು. ತನ್ನ ಬೆಳಕನ್ನು ಕಸಿದುಕೊಂಡಿತ್ತು.

ತನ್ನನ್ನು ಕೊನೆಯಿಲ್ಲದ ಕತ್ತಲಕೂಪದಲ್ಲಿ ನೂಕಿತ್ತು– ಅಂದಿನಿಂದ ಸುರುವಾಗಿತ್ತು ತನ್ನಲ್ಲಿ ಈ ದಾಹ....ಸೇಡು–ಎಲ್ಲರ ಮೇಲೆ ಸೇಡು....ಅವ್ವ-ಅಪ್ಪ-ಮಕ್ಕಳು-ಸತೀಶ-ಡಾಕ್ಟರು ಎಲ್ಲರೂ ವಿಲಿ ವಿಲಿ ಒದ್ದಾಡಬೇಕು....ಒಂದು ಕ್ಷಣದ ಶಾಂತಿ ಸಹ ಇವರ ಪಾಲಿಗೆ ಇಲ್ಲದಂತಾಗಬೇಕು.

ಆದರೆ ಈಗ–

ಬಹಳ ಕಾಲದಿಂದ ಬೆನ್ನಮೇಲಿದ್ದುದೊಂದು ಭಾರ ತಟ್ಟನೆ ಕಳಚಿಬಿದ್ದು ಬೆನ್ನು ನೇರವಾದಾಗ ಒಂದು ಕ್ಷಣ ನಡೆಯಲಾಗದೆ ಮುಗ್ಗರಿಸಿದಂಥ ಅನುಭವ. ಶೆಲಿ ಕಲಿಸಿದ ಪ್ರೊಫೆಸರು ಮತ್ತೊಮ್ಮೆ ಸತ್ತುಹೋದ ಅನುಭವ....?

ಹ್ಞ, ಸರಿ.

ಎದುರಿಗೆ ಪೂನಾಕ್ಕೆ ಹೊರಡಲು ಜನತಾ ಎಕ್ಸ್‌ಪ್ರೆಸ್ ಸಿದ್ಧವಾಗಿ ನಿಂತಿತ್ತು. ಮೇಲ್‌ನಿಂದ ಸೂಟ್‌ಕೇಸ್ ಇಳಿಸಿಕೊಂಡು ಆಕೆ ನಿಃಶಬ್ದವಾಗಿ ಎಕ್ಸ್‌ಪ್ರೆಸ್ ಹತ್ತಿದಳು.

*

ನಸುಕಿನ ಆರೂವರೆಗೆ ಮನೆಗೆ ಬಂದಿಳಿದ ಹೆಂಡತಿಯನ್ನು ನೋಡಿ ಆಶ್ಚರ್ಯವಾಯಿತು ಸತೀಶನಿಗೆ, ''ಅರೆ, ಇದೇನಿದು ? ಹುಬ್ಬಳ್ಳಿ ಮುಟ್ಟದೆ ಅರ್ಧಾಹಾದಿಗೇ ತಿರುಗಿ ಬಂದ್ಯೇನು ?''

''ಹ್ಞೂ'' ಎಂದಳು ಆಕೆ, ''ಇನ್ನೇನು ನಾ ಹುಬ್ಬಳ್ಳಿಗೆ ಹೋಗೋದಿಲ್ಲ.''

ಯಾಕೆ, ಏನು ಎಂದೆಲ್ಲ ಕೇಳುವ ಮನುಷ್ಯನೇ ಅಲ್ಲ ಸತೀಶ. ''ಛಲೋ ಆತು ಬಿಡು'' ಎಂದ ಆತ ಅವಳ ಕೈಯಿಂದ ಸೂಟ್‌ಕೇಸು ಇಸಿದುಕೊಳ್ಳುತ್ತ.

❖ ❖ ❖

# ಕವಲು (೧೯೭೬)


1. ಕವಲು
2. ಒಂದು ರವಿವಾರ
3. ಹನುಮಾಪುರದಲ್ಲಿ ಹನುಮಜಯಂತಿ
4. ಹೋಟೆಲ್ ಬ್ಲೂ
5. ಅವಳ ಸ್ವಾತಂತ್ರ್ಯ
6. ಮರ್ಯಾದೆ

# ಕವಲು

ಒಂದು ತಿಂಗಳ ನಂತರ ಮೊನ್ನೆ ಆತ ಬಂದಾಗ ಬಹಳ ಉತ್ಸಾಹದಲ್ಲಿದ್ದ. ಇಪ್ಪತ್ತು ವರ್ಷಗಳಿಂದಲೂ ತಾವು ಭೆಟ್ಟಿಯಾಗುತ್ತಿದ್ದರೂ ಅದೇ ಮೊದಲನೆಯ ಸಲ ಭೆಟ್ಟಿಯಾದ ಹಾಗೆ ಇತಿಹಾಸ -ಭೂಗೋಲ ಕುರಿತು ಮಾತಾಡಿದ. ಸ್ವತಃ ಐವತ್ತರ ಗಡಿ ದಾಟಿ ಎರಡು ವರ್ಷವಾಗಿದ್ದರೂ ಇನ್ನು ಮುಂದೆಯೇ ನಿಜವಾದ ಜೀವನ ಸುರುಮಾಡಲಿರುವ ಹಾಗೆ ಕಾಣಿಸಿದ. ಆಗಿಹೋದದ್ದೆಲ್ಲ ತೀರ insignificant, ಸುಲಭವಾಗಿ ಮರೆತು ಹೋಗಬಲ್ಲದ್ದು, ಭವಿಷ್ಯವೊಂದು ಸುಂದರ ಕನಸು –ಎಂದು ತನ್ನನ್ನು ನಂಬಿಸಲು ಹೆಣಗಿದ. ನಿಜವಾಗಿ ಆತ ಇಪ್ಪತ್ತು ವರ್ಷ ಚಿಕ್ಕವನಾಗಿ ತೋರಿದ.

–ಅಸ್ವಸ್ಥ ಮನಸ್ಸಿನಿಂದ ಆಕೆ ಮಲಗಿದ್ದಂತೆಯೇ ಪಕ್ಕಕ್ಕೆ ಹೊರಳಿ ಗೋಡೆಗೆ ಹಾಕಿದ್ದ ನಿಲುಗನ್ನಡಿಯ ಕಡೆ ನೋಡಿದಳು. ಅಲ್ಲಲ್ಲಿ ನರೆತ ಕೂದಲು, ಕಣ್ಣ ಕೆಳಗೆ ಕಪ್ಪಗಿನ ಗೆರೆ, ಹಣೆಯ ಮೇಲೆರಡು ನಿರಿಗೆ.... ಇದೇನು, ಇಪ್ಪತ್ತು ವರ್ಷಗಳಲ್ಲಿ ಒಮ್ಮೆಯೂ ತಾನು ಕನ್ನಡಿ ನೋಡಲಿಲ್ಲವೆ ? ಈ ಪರಿಯ ಬದಲಾವಣೆ ಅದು ಹೇಗೆ ತನ್ನ ಲಕ್ಷ್ಯಕ್ಕೆ ಬಂದಿಲ್ಲ ? ಇಂದೇ ಏಕೆ ತನಗೆ ನಲವತ್ತಾಯಿತೆಂದು ಅನಿಸುತ್ತಿದೆ ?

–ವಯಸ್ಸು ತನಗೊಬ್ಬಳಿಗೇ ಆಗಬೇಕೆ ? ಮೊನ್ನೆ ಅಷ್ಟೆಲ್ಲ ಮಾತಾಡಿ ಕೊನೆಗೆ ತೀರ ಮೃದು ಧ್ವನಿಯಲ್ಲಿ, ಆ ಕೊನೆಯ ಪ್ರಶ್ನೆ ಕೇಳುವಾಗಲಂತೂ ಆತ ನಿಜವಾಗಿ ಇಪ್ಪತ್ತು ವರ್ಷಗಳ ಹಿಂದೆ ಇದ್ದಂತೆಯೇ ಕಾಣಿಸಿದನಲ್ಲ, ಅದು ಹೇಗೆ ?

ಖರೇನೇ ಆತನ ಜೀವನೋತ್ಸಾಹ ಅಸೂಯೆ ಪಡುವಂಥದ್ದು : 'ಈ ಅಂಬಾಸಡರ್ ಕೊಟ್ಬಿಡಬೇಕೂಂತ ಮಾಡೀನಿ ಚುನೂಭಾಯಿ ಸೇಠಗ. ಹ್ಯಾಂಗೂ ಹಳೇದಾಗೇದ. ನನಗ-ನಿನಗ ಒಂದು ಬೇಬಿ ಆಸ್ಟಿನ್ ಸಾಕು. ಹೋಗ್ಬಿಡೋಣ ಅದರಾಗ ಕೂತು– ದುನಿಯಾ ಕೆ ಉಸ್ ಪಾರ.... ಈಗೇನು, ಯಾರಪ್ಪನ ಭಿಡೇನೂ ಇಲ್ಲ ನನಗ. I am a brave man. ಏನಂತೀ ಮಿನಿ ?'

–'ಅಲ್ಲ ಮಿನಿ, ಹ್ಯಾಂಗೂ ರಿಟ್ಯಾರ್ ಆಗೋ ದಿವ್ಸ ಬಂದುವಲ್ಲ, ಇನ್ನ ಈ ಪುಣೆ ಬಿಟ್ಟು ನಮ್ಮ ಶಿರಸೀ ಕಡೇನೇ ಒಂದ ಎಸ್ಟೇಟ್ ತಗೊಂಡು ಅಲ್ಲೇ ಮನಿ ಕಟ್ಟೋದು ಛಲೋ ಅಲ್ಲs ? ನೀ ಹಗಲೆಲ್ಲಾ ಹೇಳತಿದ್ದಿಲ್ಲs–ಅಡಿವ್ಯಾಗ ಗುಡಿಸಲಾ ಕಟಿಗೊಂಡು ಇರಬೇಕು ಅನಿಸ್ತದ ಅಂತ ? ಸುತ್ತಲೆಲ್ಲಾ ತೆಂಗಿನ ಗಿಡಾ,

ಮಾವಿನ ಗಿಡಾ, ನಿನ್ನ ಪ್ರೀತೀ ಮಲ್ಲಿಗೀನೂ ಇರ್ಲಿ. ನಡುವ ಒಂದು ಹಳ್ಳ ಇರಬೇಕ ಹ್ಞಾ ಮತ್ತ, ನನಗ ಬೇಕಲ್ಲ ಮೀನಾ ಹಿಡೀಲಿಕ್ಕೆ. ಅದರ ದಂಡೀಮ್ಯಾಲ ನಮ್ಮ ಗುಡಸಲಾ. ಅದರಾಗ ನಾನು–ನೀನು–The old boy and his fairy queen.... ನಿನ್ನ ಎಲ್ಲಾ ಸ್ವಪ್ನನೂ ಸಾಕಾರ. ಹ್ಯಾಂಗದ idea ?'

–ಬಹುಶಃ ತನ್ನ ಕಣ್ಣಲ್ಲಿನ ದಣಿವು– ಸೋತು ಹೋದಂಥ ದಣಿವು– ಆತನ ಗಮನಕ್ಕೆ ಬಂದಿರಬೇಕು. ಮಾತು ಅಷ್ಟಕ್ಕೇ ಬಿಟ್ಟು ಆತ ಸೀರಿಯಸ್ಸಾಗಿ ಕೇಳಿದ್ದ :

'–ಯಾಕ ಮಿನಿ ? ಇನ್ನೂ ಯಾಕ ಸಪ್ಪಗದ ಮಾರಿ ? ಇಷ್ಟೆಲ್ಲಾ ಸುಖಾ ಖರೇನೇ ಹೌದೋ ಅಲ್ಲೋ ಅಂತ ಸಂಶೇ ಬಂದದೇನು ? ನಾ ಎಂದರೆ ಸುಳ್ಳ ಹೇಳಿದ್ನೇನು ನಿನಗ ?.... ಹಾಂಗ ನೋಡಿದರ ದುಃಖಾ ನನಗ ಇರಬೇಕು. ಎಷ್ಟ ಕಳಕೊಂಡೆ ಜೀವನದಾಗ ! ಹದಿನಾಕನೇ ವರ್ಷಕ್ಕೆ ನನ್ನ ಅಗ್ನಿಸಾಕ್ಷಿ ಆಗಿ ಲಗ್ನ ಮಾಡಿಕೊಂಡು ನನ್ನ ಮನೀಗೆ ಬಂದು, ಮೂವತ್ತೈದು ವರ್ಷ ನನ್ನ ಜೋಡೀ ಸಂಸಾರ ಮಾಡಿ, ಬಂಗಾರದಂಥಾ ಎರಡ ಮಕ್ಕಳನ್ನ ಹಡದು, ನನ್ನ ಸುಖಾ-ದುಃಖದಾಗ ಭಾಗೀ ಆಗಿ, ನನಗ ತನ್ನ ಸರ್ವಸ್ವ ಕೊಟ್ಟು, ಕಡೀಕೆ ನನ್ನ ಒಬ್ಬನ್ನs ಬಿಟ್ಟು ಶಾಂತಾ ಹೋಗಿಬಿಟ್ಟಳು.... ಹೋಗಿ ಎರಡು ತಿಂಗಳಾತು. ಎಷ್ಟ ನೆನಪ ಬಿಟ್ಟ ಹೋಗ್ಯಾಳ ನನ್ನ ಪಾಲಿಗೆ ! ಇನ್ನೂ ಆಕಿ ಇದ್ದಾಳಂತs ಭ್ರಮಾ ನನಗ.... ಆದರ ಇಲ್ಲ ಮಿನಿ, ನಾ ನನ್ನ ದುಃಖದಾಗs ಮುಳುಗಿ ನಿನಗ ಇನ್ನ ಅನ್ಯಾಯ ಮಾಡೂದಿಲ್ಲ. ನನ್ನ ಉಳದ ಜೀವನ ಾ ಎಲ್ಲಾ ನಿನ್ನ ಸುಖದ ಸಲುವಾಗಿ devote ಮಾಡತೀನಿ. ಇಲ್ಲಂದರ ದೇವರು ಮೆಚ್ಚೋದಿಲ್ಲ....' –ಆತನ ಕಣ್ಣು ಖರೇ ತುಂಬಿ ಬಂದಿದ್ದವು. ತಾನು ಮುಂದೆ ಸರಿದು ತೊಡೆಯಬೇಕು ಆ ಕಣ್ಣೀರನ್ನು. ಆದರೆ ಯಾಕೋ ಕೈಗಳು ನಿರ್ಜೀವವಾದಂತೆನಿಸಿ ಆಕೆ ಸುಮ್ಮನೆ ಇದ್ದಳು.

–ನಂತರ ಎರಡೇ ನಿಮಿಷದಲ್ಲಿ ಆತನ ಮಾತಿಗೆ ಮತ್ತೆ ರಂಗೇರಿತ್ತು : 'ನಿನಗ ನೆನಪದ ಏನು ಮಿನಿ ? ಮೊದಮೊದ್ಲ ನೀ ಹಗಲೆಲ್ಲ ಹೇಳತಿದ್ದಿ– ನೀ ಸಣ್ಣಾಕಿದ್ದಾಗಿನಿಂದ ಕನ್ಯಾಕುಮಾರಿ ಸಲುವಾಗಿ ಏನೋ ಒಂದ ವಿಚಿತ್ರ ರೀತಿಯ fascination ಅನಸ್ತದ, ಅಲ್ಲೆ ನನ್ನ ಜೋಡಿ ಒಮ್ಮೆ ಹೋಗಬೇಕನಸ್ತದ ಅಂತ. ಆದರ ನಾವು ಅಲ್ಲೆ ಹೋಗಬೇಕಂತ ಎರಡ ಮೂರ ಸರೆ ಪ್ಲ್ಯಾನ್ ಮಾಡಿದಾಗೂ ಏನರೆ ವಿಘ್ನ ಬಂದು ರದ್ದು ಮಾಡಿದ್ವಿ. ಮುಂದಿನ ತಿಂಗಳು ನಾ ಪೂರಾ ಎರಡ ವಾರ ರಜಾ ತಗೋತೀನಿ. ಕನ್ಯಾಕುಮಾರಿಗೆ ಹೋಗಿ ಬೆಳತನಕಾ ಸಮುದ್ರ ದಂಡೀಮ್ಯಾಲ ಉಸುಕಿನ್ಯಾಗ ತಿರಗ್ಯಾಡೂಣಂತ. ನೀ ಸಾಕು ಅನ್ನೂತನಕಾ....'

–'ಅಲ್ಲ ಮಿನಿ, ವಿಧಿ ಆಟ ಎಷ್ಟು ವಿಚಿತ್ರ ಅದ ನೋಡು. ನೀ ದೊಡ್ಡ ಪಗಾರದ

ನೌಕರೀ ಸಿಕ್ಕಿತೂ ಅಂತ ಮುಂದಿನ ವಾರ ಕೆನಡಾಕ್ಕ ಹೋಗ್ಲಿಕ್ಕೆ ತಯಾರಾಗೀದಿ. ಆರು ತಿಂಗಳಿಂದ ಅದರ ಸಲುವಾಗಿ ಖಟಿಪಿಟಿ ನಡಿಸೀದಿ. ನಿನ್ನ ಪಾಸ್‌ಪೋರ್ಟ್ ಸುದ್ದಾ ಬಂತು.... ಆದರ ಈಗ ಎಲ್ಲಾ ಕ್ಯಾನ್ಸಲ್ ಮಾಡಬೇಕಾತು ನೋಡು. ನಿನಗೇನ ಇನ್ನ ದೂರ ಹೋಗೋ ಅವಶ್ಯಕತಾ ಉಳೀಲಿಲ್ಲ. ನಾ ನಿನ್ನ ಬಿಟ್ಟರ ಹೌದಲ್ಲೋ ? ಇನ್ನ ಮ್ಯಾಲ ನಿನ್ನ ಎಲ್ಲಿಯೂ ಒಬ್ಬಾಕಿನ್ನೇ ಬಿಡೂದಿಲ್ಲ ನಾನು. ಎಲ್ಲೇ ಹೋದ್ರೂ ರಾಜಾರಾಣಿ ಜೋಡೀ ಜೋಡೀ....'

–'ನಾ ಅಂತೀನಿ ಮಿನಿ, ನೀ ಇನ್ನ ನೌಕರೀ ಬಿಟ್ಟs ಬಿಡೋದು ಛಲೋ. ನಾ ರಿಟ್ಯಾರ್ ಆದ ಮ್ಯಾಲಂತೂ ಇಬ್ರೂ ಹೋಗಿ ನಮ್ಮ ಎಸ್ಟೇಟಿನ್ಯಾಗs ಥಣ್ಣಗ ಇದ್ದ ಬಿಡೋಣ. ನನಗರೆ ಏನ ಜವಾಬ್ದಾರಿ ಉಳದದ ? ನಮ್ಮ ರಾಜೂಂದಂತೂ ನೌಕರಿ ಆತು, ಲಗ್ನಾತು. ಅವನಷ್ಟಕ್ಕ ಅವಾ ಅರಾಮಿದ್ದಾನ. ಗಿರಿಜಾಂದೂ ನಿಶ್ಚೇ ಆಗೇದ. ಈ ತಿಂಗಳ ಆಖೇರಕ್ಕ ಆಕೀದೊಂದ ಲಗ್ನಾ ಮುಗದ ಹೋಗತದ-ಪಾಪ, ಶಾಂತಾ ಇದೊಂದ ನೋಡಿ ಹೋಗ್ಬೇಕಾಗಿತ್ತಲ್ಲ ಮಿನಿ ? –ಆಮ್ಯಾಲ ನಾ ಅಂತೂ free bird, ನಿನ್ನ ಹಿಂದಿಂದೇ ಹಾರಲಿಕ್ಕೆ !'

–ನಂತರ ಒಮ್ಮೆಲೆ ತನ್ನ ತೀರ ಸಮೀಪ ಸರಿದು ಕಿವಿಯಲ್ಲಿ ಪಿಸುಗುಡುವಷ್ಟು ಹಗುರವಾದ ಧ್ವನಿಯಲ್ಲಿ ಆತ ಕೇಳಿದ್ದ :

'ಅಂದ್ಹಾಂಗ ನಾವು ಎಂದ ಸಬ್ ರಜಿಸ್ಟ್ರಾರ್ ಆಫೀಸಿಗೆ ಹೋಗೋಣ ಮಿನಿ ?' –ಒಂದು ಕ್ಷಣ ತಡೆದು ಉಗುಳು ನುಂಗಿ ಮತ್ತೆ : 'ಅಂದರ ಜಾತೀ ಪ್ರಶ್ನೆ ಒಂದ ಅದs ಅಲ್ಲ, ಯಾರಾದ್ರೂ ಆಗದವ್ರು ಅಡ್ಡಗಾಲು ಹಾಕ್ಯಾರೂ ಅಂತ. ರಜಿಸ್ಟ್ರೇಶನ್ ಮಾಡಿಸಿಬಿಡೂದು ಛಲೋ. ಹಾಂಗ ನಿನಗ ಬೇಕಾದ್ರ ಆಮ್ಯಾಲ ಯಾವ್ದರೆ ಗುಡೀಗೆ ಹೋಗಿ....'

–'ನಾನು ನಾಳೆ ಸ್ವಲ್ಪ ಊರಿನ ಕಡೆ ಹೋಗಿ ಆ ಪ್ಲಾಟಿನ ಖರೀದಿಪತ್ರ ಮುಗಿಸಿಕೊಂಡ ಬರ್ತೀನಿ. ನಿನಗ ಗೊತ್ತದs ಏನು ಮಿನಿ, ಪ್ಲಾಟಿನ ಖರೀದಿ ನಿನ್ನ ಹೆಸರ್ಲೇ ಆಗೂದದ. ನಾಲ್ಕಾರು ದಿನಾ ಆದೀತು. ಅಷ್ಟರಾಗ ನೀ ಉಳದದ್ದು ತಯಾರಿ ಮಾಡಿಕೊಂಡಿರು ಆ್ಞ ?'

–ಆತನ ಉತ್ಸಾಹ ನೆನೆಯುತ್ತಿದ್ದಂತೆ ಎದುರಿನ ಕನ್ನಡಿಯಲ್ಲಿನ ತನ್ನ ಪ್ರತಿಬಿಂಬ ಆಕೆಗೆ ಒಮ್ಮೆಲೆ ಕಾಣದಂತಾಯಿತು. ಬಹುಶಃ ಕಿಟಕಿಯಲ್ಲಿಂದ ಮಳೆನೀರು ಕನ್ನಡಿಗೆ ಸಿಡಿದು ಗಾಜು ಮಸುಕಾಗಿದೆ.

ಆತನ ಪ್ರಶ್ನೆಗೆ ಸರಳವಾಗಿ ಉತ್ತರ ಹೇಳಲಾಗಿರಲಿಲ್ಲ ಆಕೆಗೆ. ಆತ ಮಾತ್ರ ಎಷ್ಟು ಸರಳವಾಗಿ ಕೇಳಿದ್ದ ! ಆತ ಯಾವಾಗಲೂ ಹಾಗೆಯೇ. ಜೀವನದ ಕ್ಲಿಷ್ಟತಮ

ಪ್ರಶ್ನೆಗಳಿಗೆ ಸರಳರೂಪ ಕೊಟ್ಟು ಬಿಡಿಸಿಬಿಡುತ್ತಿದ್ದ. ಆತನ ಈ ಸುಲಭೀಕರಣದ ಸಾಮರ್ಥ್ಯ ಹೊಸದೇನಲ್ಲ. ಇಪ್ಪತ್ತು ವರ್ಷಗಳಿಂದಲೂ ತನಗೆ ಪರಿಚಿತವಾಗಿದ್ದುದೇ. ತನಗೆ ಕಠಿಣವಾಗಿ ತೋರಿದ ಪ್ರಸಂಗಗಳಲ್ಲೆಲ್ಲ ಈ ಹಿಂದೆ ಆಕೆ ಕಣ್ಣುಮುಚ್ಚಿ ಆತ ತೋರಿದ ದಾರಿ ಗುಂಟ ಸಾಗಿದ್ದುಂಟು. ಈಗಲೂ ಹಾಗೆಯೇ ಮಾಡಿಬಿಟ್ಟರೆ, ಎಲ್ಲ ಸುರಳೀತವಾಗುವುದರಲ್ಲಿ ಸಂಶಯವಿಲ್ಲ. ಹಿಂದೆಲ್ಲ ಆತ ಅಂದದ್ದಕ್ಕೆಲ್ಲ ವಿಚಾರ ಮಾಡದೆ ಹ್ಞೂ ಅಂದದ್ದಿಲ್ಲವೆ ?

–'ನೀ ಯಾಕಿಷ್ಟು ವಿಚಾರ ಮಾಡ್ತೀ ಮಿನಿ ? ನಾನು-ನೀನು ಹೀಂಗ ಒಂದ ದಿನಾ ಕೂಡಬೇಕಂತ ವಿಧೀ ಸಂಕಲ್ಪ ಇತ್ತು. ತಡಾ ಆಗಿ ಕೂಡಿದೆವು ಅನ್ನೋದೇನೋ ಖರೆ. ಆದರ ಇದರಿಂದ ನಮ್ಮ ಪ್ರೀತಿಯೊಳಗ ಕಡಿಮೆ ಆದೀತಂತ ನನಗನ್ನೂದಿಲ್ಲ. ಮಂದೀ ಕಣ್ಣಾಗ ಇದು ತಪ್ಪು, ಪಾಪ, ಖರೆ. ಆದರ ನಾ ಒಪ್ಪೂದಿಲ್ಲ ಇದು ಪಾಪ ಅಂತ. ಮಿನಿ, ನಾ ನಿನ್ನ ಎಷ್ಟ-ಎಷ್ಟ ಪ್ರೀತಿ ಮಾಡತೀನಿ, ನೀ ಹೇಳು-ಇದಕ್ಕ ಪಾಪ ಅನಬೇಕೇನು ? ತಪ್ಪು ಅನಬೇಕೇನು ?'– ಆತನ ಧ್ವನಿಯಲ್ಲಿ ಕಣ್ಣೀರಿತ್ತು. ಅದೆಷ್ಟು ಶಕ್ತಿಯುತವಾಗಿತ್ತೆಂದರೆ ಆತನನ್ನು ಅಲ್ಲಗಳೆಯುವುದು ಆಕೆಗೆ ಸಾಧ್ಯವೇ ಇರಲಿಲ್ಲ.

'ಮಂದೀನ್ನ ತಗೊಂಡು ಏನ್ಮಾಡೋದು ಮಿನಿ ? ಮಂದೀ ಗರಜು ನನಗ ಎಂದೂ ಇಲ್ಲ. ಮಂದೀದು ಬಿಡು, ಸ್ವಥಾ ನನ್ನ ಹೆಂಡತೀದೂ ನಾ ಈ ವಿಷಯದಾಗ ಕೇಳೂದಿಲ್ಲ. ಎಂದರೆ ಒಂದಿನಾ ಆಕೀಗೆ ಇದೆಲ್ಲಾ ಗೊತ್ತಾತೂ ಅಂತ ತಿಳಿ. ಆಗ ನಾ ಆಕೀಗೆ ಸ್ಪಷ್ಟ ಹೇಳ್ತೀನಿ– ಹೌದು, ನಾ ಮೀನಾಕ್ಷೀನ್ನ ಪ್ರೀತಿ ಮಾಡ್ತೀನಿ ಅಂತೀನಿ. ಮೀನಾಕ್ಷಿ ಅಗ್ನಿಸಾಕ್ಷಿ ಆಗಿ ನನ್ನ ಕೈ ಹಿಡೀದಿದ್ರೇನಾತು, ನಮ್ಮಿಬ್ಬರ ಲಗ್ನಾ ದೇವರ ಸಾಕ್ಷಿ ಆಗಿ ಆಗೇದ ಅಂತೀನಿ. ನಾ ನಿನ್ನ ಕೈಬಿಡೂದಿಲ್ಲ ಮಿನಿ, ನಾ ಯಾರಿಗೂ ಅಂಜೂದಿಲ್ಲ. ನನ್ನ ನಂಬತೀಯಲ್ಲs....?' –ಎದೆ ಸೆಟೆಸಿ ನಿಂತ ಭವ್ಯವಾದ ಆತನ ಆಕೃತಿ, ಉದ್ವೇಗದಿಂದ ಬೆವರಿದ್ದ ಹಣೆ, ಧ್ವನಿಯಲ್ಲಿ ಅಚಲ ವಿಶ್ವಾಸ.... ಆಕೆ ನಂಬದಿರುವುದು ಹೇಗೆ ಸಾಧ್ಯವಿತ್ತು ?

–'ನಾ ನಿನ್ನ ಯಾಕ ಪ್ರೀತಿ ಮಾಡ್ಲಿಕ್ಕೆ ಸುರೂ ಮಾಡಿದೆ ಅಂತ ಕೇಳ್ತೀಯಲ್ಲ ಮಿನಿ, ಏನ ಹೇಳ್ಲಿ ? ಯಾವದರೆ ಕಾರಣದ ಸಲುವಾಗಿ ಮಾಡಿದರ ಅದು ಖರೇ ಪ್ರೀತಿ ಹ್ಯಾಂಗಾದೀತು ? ಪ್ರೀತಿ ಅಂದರ– it just happens.... ಅದಕ್ಕ ಕಾರಣ– ಪರಿಣಾಮದ ಸಂಬಂಧ ಇಲ್ಲ.'– ಆತನ logic ಆಕೆಗೆ ಎಂದೂ ತಪ್ಪಾಗಿ ತೋರಿಲ್ಲ.

ಆತ ನಿಜವಾಗಿ ಧೈರ್ಯವಂತ ಅಂತ ಅನ್ನಿಸಿದ ದಿನಗಳೂ ತನ್ನ ಜೀವನದಲ್ಲಿ ಇಲ್ಲದಿಲ್ಲ.

–'ಜೋಗಕ್ಕ ಹೋಗ್ಬೇಕು ಅಂತ ಮೊನ್ನೆ ನೀ ಅಂದಾಗಿನಿಂದ್ಲೂ ಅದನ್ನs

ವಿಚಾರ ಮಾಡ್ತಿದ್ದೆ. ಮಿನಿ, ಕಡೀಕೆ ಆದದ್ದಾಗ್ಲಿ ಅಂತ ಗಟ್ಟಿ ಧೈರ್ಯ ಮಾಡಿ ರಜಾ ಹಾಕಿದೆ. ಆಫೀಸಿನ ಕೆಲಸದ ಸಲುವಾಗಿ ಮುಂಬೈಗೆ ಹೋಗ್ಬೇಕಾಗೇದ ಅಂತ ಶಾಂತಾಗ ಹೇಳಿಬಿಟ್ಟೆ. ಈಗ ಈ ಜಲಪಾತದ ಕೆಳಗ ನಿನ್ನ ಜೋಡೀ ನಿಂತು ಕಿವಿ ಗಡಚಿಕ್ಕೋ ಸಪ್ಪಳಾ ಕೇಳಕೋತ ಮೈಯೆಲ್ಲಾ ತೋಯಿಸಿಕೊಳ್ಳೋವಾಗ ಅನಸ್ತದ– ಅಷ್ಟ ತ್ರಾಸ ತಗೊಂಡಿದ್ದೂ ಸಾರ್ಥಕ ಆತು ಅಂತ.'– ಜೋಗದಡಿಯಲ್ಲಿ ಕಿಸೆಯಿಂದ ಸಣ್ಣದೊಂದು ಕಾಗದದ ಚೂರು ತೆಗೆದು ಅದರ ಮೇಲೆ ಪೆನ್ಸಿಲಿನಿಂದ ಆತ ಬರೆದು ಕೊಟ್ಟ ಈ ಸಾಲುಗಳು ಇನ್ನೂ ಆಕೆಯ ಗೋದ್ರೇಜ್ ಕಪಾಟಿನಲ್ಲಿ ರೇಶ್ಮೆ ಸೀರೆಯೊಂದರ ನಡುವೆ ಭದ್ರವಾಗಿವೆ.

–'ಓ, ಯಾಕ ಮಿನಿ, ಅಂಜಿದೇನು ? ರಾತ್ರಿ ಹನ್ನೆರಡಾಗೇದಲ್ಲ ಈಗ ? ಎಲ್ಲಾರೂ ಮಲಗಿ ನಿದ್ದಿ ಮಾಡೋ ಹೊತ್ತು. ಥಟ್ಟನ ನಿನ್ನ ನೆನಪಾತು. ಈ ಥಂಡಿಯೊಳಗ ಬೆಚ್ಚಗ ನಿನ್ನ ಅಪಿಗೊಂಡು ಮಲಗಬೇಕು ಅನಿಸ್ತು. ಎದ್ದು ಸೀದಾ ಬಂದಬಿಟ್ಟೆ.... ನನಗ ಗೊತ್ತಿತ್ತು– ಹಿಂಗ ಮಳೀ, ಕತ್ತಲು, ಥಂಡಿ ಇದ್ದಾಗ ನೀ ನನ್ನ ನೆನಸತಿರ್ತೀ ಅಂತ. ನೋಡು, ನಾ ಹುಚ್ಚ ಆಗಿಬಿಟ್ಟೇನಿ ನಿನ್ನ ಸಲುವಾಗಿ....' –ಆತ ಒಳಗೆ ಬರುವವರೆಗೂ ವ್ಯವಧಾನವಿಲ್ಲದೆ ಬಾಗಿಲಲ್ಲೇ ಆತನನ್ನು ಬಿಗಿದಪ್ಪಿದ ಆಕೆಗೆ ಆತನ ಹುಚ್ಚಿನ ಬಗ್ಗೆ ಸಂಶಯವಿರಲೇ ಇಲ್ಲ.

–'ನಿದ್ದಿ ಹತ್ತಿತೇನು ಮಿನಿ ? ಎಲ್ಲೆ, ನನ್ನ ಕಡೆ ತಿರುಗು ಹಿಂಗ.... ಮಿನಿ, ನನಗ ಒಂದ ವಿಷಯದ ಸಲುವಾಗಿ ಯಾವಾಗ್ಲೂ ಆಶ್ಚರ್ಯ ಆಗತದ. ಅದೇನು ಅಂದರ ನಿನ್ನ ಸಹವಾಸದಾಗ ನನಗೇನ ಒಂದ ವಿಚಿತ್ರ ರೀತೀ ಸುಖಾ ಸಿಗತದ– ಪರಮಾನಂದ, ಸಚ್ಚಿದಾನಂದ, ಬ್ರಹ್ಮಾನಂದ ಅಂತಾರಲ್ಲ, ಇದೇ ಇರಬೇಕು– ಅದು ನನ್ನ ಹೆಂಡತೀ ಸಹವಾಸದಾಗ ಎಂದೂ ಸಿಕ್ಕಿಲ್ಲ. ನನಗನಸ್ತದ– ನಾ ಆಕಿನ್ನ ಎಂದೂ ಖರೇ ಅರ್ಥದಾಗ ಪ್ರೀತೀನೇ ಮಾಡಿಲ್ಲ. ಆಕೀ ಸಲುವಾಗಿ ನನಗಿರೋದು ಬರೇ sense of duty. ಆಕಿ ಎಂದರೆ ನಿನ್ನ ಬಗ್ಗೆ ಕೇಳಿದರ ಹಿಂಗ ಸ್ಪಷ್ಟ ಹೇಳಿ ಬಿಡ್ತೀನಿ....'– ಆತನ ಸ್ಪಷ್ಟತೆ ಆಕೆಗೇ ಯಾವಾಗಲೂ ಆತನಿಗಿಂತಲೂ ಹೆಚ್ಚು ಸ್ಪಷ್ಟವಿರುತ್ತಿತ್ತು.

–'ಶಾಂತಾ ಅಂದರ ನನ್ನ ಪಾಲಿಗೆ ಬರಿಯ means- ಅಂದರ ಜೀವನಾ ನಡಸೋ means. ನೀ ಹಾಂಗಲ್ಲ. ನನ್ನ ಪಾಲಿಗೆ You are an end ! ನನ್ನ ಜೀವನದ ಅಂತಿಮ ಲಕ್ಷ್ಯ....'

–'ನೋಡು ಮಿನಿ, ನಿನಗ ದೂರದ ಊರಿಗೆ ಟ್ರಾನ್ಸ್‌ಫರ್ ಆದಾಗ ಇನ್ನ ಹಗಲೆಲ್ಲಾ ಕೂಡೋದು ಆಗಲಿಕ್ಕಿಲ್ಲಾ ಅಂತ ಸುಳ್ಳs ಚಿಂತಿ ಮಾಡತಿದ್ದಿ. ನೀ ಜಗತ್ತಿನ ಆ ತುದೀಗೆ ಹೋದ್ರೂ ನಾ ನಿನ್ನ ಕಡೆ ಬರೋಹಾಂಗ ಬಂದs ಬರ್ತೀನಿ ಅಂತ ಈಗರೆ

ವಿಶ್ವಾಸ ಆತಿಲ್ಲೋ ? ಈ ದೂರದ ಹಾದಿ, ರಜಾದ ಪ್ರಶ್ನಿ, ಮನ್ಯಾಗ ಏನು ತಿಳದಾರೋ ಅನ್ನೂ ಅಂಜಿಕಿ– nothing can come in my way' –ನೂರಾರು ಮೈಲುಗಳಾಚೆಯಿಂದ ಕೇವಲ ತನ್ನನ್ನು ಕಾಣಲೆಂದೇ ಬರುತ್ತಿದ್ದ ಆತನ ದಣಿದ ಮುಖ ನೋಡಿದಾಗ ಆಕೆಗೆ ಜೀವನದಲ್ಲಿ ಸಾರ್ಥಕ್ಯವೆಂದರೆ ಇದೇ ಇರಬೇಕು ಅನಿಸುತ್ತಿತ್ತು.

–'ಒಮ್ಮೊಮ್ಮೆ ನನಗೇನನಸ್ತದ ಗೊತ್ತೇನು ಮಿನಿ ? ನಾವು ಹಿಂಗ ಕಳ್ಳತನದಿಂದ ಭೆಟ್ಟಿಯಾಗೋ ಬದಲು ನಾ ಒಮ್ಮೆ ಎಲ್ಲಾರ ಮುಂದ ನಮ್ಮ ಸಂಬಂಧ announce ಮಾಡಿಬಿಡ್ತೇನಿ. ಅದು ಕಾಯ್ದೇಶೀರ ಆಗೋದಿಲ್ಲ ಖರೆ, ಆದರ ಪ್ರೀತಿಗೆ ಯಾವ ಸೂಳೇಮಗಾ ಕಾಯ್ದೆ ಲಾಗೂ ಮಾಡ್ತಾನ ? ನಾವು ಒಂದ ಮನೀ ಮಾಡೋಣು, ಮಕ್ಕಳ್ನ ಹಡಿಯೋಣು.... ನಮ್ಮಿಬ್ಬರ ಮಗಾ ನನ್ಹಾಂಗ brave ಆಗತಾನ, ಮತ್ತ ಅವಗ ನಿನ್ಹಾಂಗ ಛೆಂದ ದೊಡ್ಡ ಕಣ್ಣು ಇರತಾವ.... ರಾಜಾರೋಷಾಗಿ ಸಂಸಾರ ಮಾಡೋಣು. ನೀ ಯಾಕ ಹೆದರತೀ ? ನಾಯೇನ ನನ್ನ ಹೆಂಡತೀ ಮಕ್ಕಳಿಗೆ ಅನ್ಯಾಯ ಮಾಡಿಧಾಂಗಾಗೂದಿಲ್ಲ ಇದರಿಂದ. ಐವತ್ತು ಸಾವಿರದ ಇನ್ಶೂರನ್ಸ್ ಪಾಲಿಸಿ ಅದ ಅವರ ಹೆಸರಿಗೆ. ಮನಿ ಅದ, ಹೊಲಾ ಅವ, ಕ್ಯಾಶ್ ಅದ. ನಾ ಹಾಂಗ ಪೂರಾ ಬಿಡೂದಿಲ್ಲ ಅವರನ್ನ. ನಿನ್ನಿಂದ ಸವುಡು ಸಿಕ್ಕಾಗೆಲ್ಲಾ ಹೋಗಿ ಭೆಟ್ಟಿ-ಗಿಟ್ಟಿ ಆಗಿ ಬರ್ತೇನಿ.... ಏನಂತಿ ?' –ಆ ಮಾತಿನಲ್ಲಿಯ ಗಟ್ಟಿ ವಿಶ್ವಾಸದಿಂದ ಆಕೆಗೆ ಎಷ್ಟೊಂದು ಕೃತಕೃತ್ಯತೆಯೆನಿಸಿತ್ತೆಂದರೆ ಅದನ್ನು ಪರೀಕ್ಷೆ ಮಾಡುವ ಅವಶ್ಯಕತೆ ಆಕೆಗೆ ಎಂದೂ ತೋರಿರಲಿಲ್ಲ.

ಮೊನ್ನೆ ಆತ ಕೇಳಿದ್ದು ಮಹತ್ವದ ಪ್ರಶ್ನೆ ಖರೆ, ಆದರೆ ಅನಿರೀಕ್ಷಿತವಾದದ್ದಲ್ಲ. ಅನಪೇಕ್ಷಿತವೂ ಅಲ್ಲ. ಈ ಪ್ರಶ್ನೆಗಾಗಿ ಇಪ್ಪತ್ತು ವರ್ಷಗಳಿಂದಲೂ ದಾರಿ ಕಾಯುತ್ತಿಲ್ಲವೆ ತಾನು ? ಹಾಗೆ ನೋಡಿದರೆ ಈ ಪ್ರಶ್ನೆಗೆ ತಾನು ಉತ್ತರ ಹೇಳಲೇಬೇಕೆಂಬುದೇನೂ ಕಡ್ಡಾಯವಿಲ್ಲ. ಹೊಸದಾಗಿ ಯೋಚಿಸುವುದು ಏನಿದೆ ಇದರಲ್ಲಿ ? ಈ ಪ್ರಶ್ನೆ, ಇದಕ್ಕುತ್ತರವಾಗಿ ತನ್ನ ಹೃದಯ ಗರಿಗೆದರಿ ಮುಗಿಲಿಗೆ ಹಾರುವುದು, ಹಾರುತ್ತಲೇ ಹೋಗುವುದು– ಎಷ್ಟು ಸಾವಿರ ಸಲ ಇದರ ರಿಹರ್ಸಲ್ ನಡೆದಿಲ್ಲ ತನ್ನ ಮನಸ್ಸಿನಲ್ಲಿ ? ತಾನು ಉತ್ತರಿಸುವ ತೊಂದರೆ ತೆಗೆದುಕೊಳ್ಳುವುದೇ ಬೇಕಿಲ್ಲ. ಆತನಿಗೆ ಎಲ್ಲ ಪ್ರಶ್ನೆಗಳ ಉತ್ತರ ಗೊತ್ತು. ಹಾಗೆ ನೋಡಿದರೆ ಆತನ ಪ್ರಶ್ನೆಗಳೇ ಉತ್ತರಗಳೂ ಆಗಿರುತ್ತವೆ. ಆತನೆಂದೂ ಯಾವ ಪ್ರಶ್ನೆಯನ್ನೂ ತನ್ನೆದುರು ಇಟ್ಟಿಲ್ಲ. ಆತನೇ ಉತ್ತರವನ್ನೂ ಹೇಳಿ ತನ್ನ ಕೆಲಸ ಹಗುರ ಮಾಡಿಬಿಡುತ್ತಾನೆ....

–'ನೋಡ ಮಿನಿ, ನಾ ಈಗ ಸ್ವಲ್ಪ ತ್ರಾಸದಾಗಿದ್ದೇನಿ. ನಂದೂ-ನಿಂದೂ ಕಥೀ ಎಲ್ಲಾ ಗೊತ್ತಾದಾಗಿನಿಂದ ಶಾಂತಾ ರಾಕ್ಷಸಿ ಆಗ್ಯಾಳ. ಬಂದವ್ರು-ಹೋದವ್ರು-

ಹುಡುಗ್ರು ಎಲ್ಲಾರ ಮುಂದ ಅತ್ತೂ ಕರೆದು ರಂಭಾಟ ಮಾಡ್ತಾಳ. ನಾಲ್ಕ ಮಂದೀಯೊಳಗ ನನ್ನ ಮರ್ಯಾದಿ ಹೋಗೋ ಪ್ರಸಂಗ. ಮೊದಲ ಏನರೆ ಮಾಡಿ ಆಕೀನ್ನ ಸಮಾಧಾನ ಮಾಡಬೇಕಾಗೇದ. ಯಾಕಂದ್ರ ಪಾಪ, ಆಕೀದೇನ ತಪ್ಪಿಲ್ಲ ನೋಡು ಇದರಾಗ. ಅದಕ್ಕs ಆಕೀ ಸಲುವಾಗಿ ಕೆಟ್ಟನಸತದ ನನಗ.... ಆದರ I am a brave man. ನಾ ನಿನ್ನ ಕಡೆ ಬರೂದೇನೂ ಬಿಡಾಂಗಿಲ್ಲಾ. ಇಷ್ಟs, ಮೊದಲಿನ್ಹಾಂಗ ಮ್ಯಾಲಿಂದಮ್ಯಾಲೆ ಬರಲಿಕ್ಕೆ ಆಗ್ಲಿಕ್ಕಿಲ್ಲ. ಬರದಿದ್ರೇನಾತು, ನೀ ಕೆಟ್ಟನಿಸಿಕೋಬಾರದು. ಯಾಕಂದರ ಅದರಿಂದ ನನ್ನ ಪ್ರೀತಿ ಕಡಿಮಿ ಆಧಾಂಗ ಆಗಲಿಲ್ಲ ನೋಡು. ಹೌದಲ್ಲೋ ?'– ಅದು ಆತನ ಪ್ರಶ್ನೆ+ಉತ್ತರ. ಆಕೆಗುಳಿದಿದ್ದು ಬರಿ ಗೋಣು ಹಾಕುವ ಕೆಲಸ.

–'ಶಾಂತಾ ಪಾಪ, ನಾನs ದೇವರಂತ ತಿಳದಾಳ. ನಾ ನಿನ್ನ ಬಿಡದಿದ್ದರ ಸತ್ತುಹೋಗತೀನಿ ಅಂತಾಳ. ಸತ್ತರೂ ಸಾಯೋ ಪೈಕೀನೇ ಆಕಿ. ಭಾಳ ಖಟ್ಟಾಜೀವ. ಹೀಂಗ ವ್ಯರ್ಥ ಜೀವ ಹತ್ಯಾ ಮಾಡೋದು ಛಲೋ ಅಲ್ಲಲ್ಲs ಮಿನಿ ? ನಿನಗಂತೂ ಅದು ಸುತರಾಂ ಒಪ್ಪಿಗಿಲ್ಲ ಅಂತ ಗೊತ್ತದ ನನಗ. ಸಣ್ಣ ಸಣ್ಣ ಎರಡೂ ಮಕ್ಕಳ್ನ ಬಿಟ್ಟು ಎಲ್ಲೆರ ಬಾವಿ-ಗೀವಿ ಹಾರ್‍ಯಾಳು ಅಂತ ಅಂಜಿಕಿ ನನಗ. ಹಾಂಗಾಗಬಾರದಲ್ಲs ? ಆದರ ನೀ ಮಾತ್ರ ಕಾಳಜಿ ಮಾಡಬ್ಯಾಡ. ನಾ ಯಾವಾಗ್ಲೂ ನಿನ್ನ ಪ್ರೀತಿ ಮಾಡತಾನs ಇರ್‍ತೀನಿ. ಇನ್ನೇನು, ನಿನ್ನ ಕಡೆ ಬರೋದು- ನಿನ್ನ ಕೂಡ ಇರೋದು ವಗೈರೆ ಸ್ವಲ್ಪ ಕಾಳಜೀಯಿಂದ, ಅವರಿವರ ಕಣ್ಣಿಗೆ ಬೀಳಧಾಂಗ ಮಾಡಬೇಕಾಗ್ತದ ಅಷ್ಟs. ನಾ ಎಲ್ಲಾ ಬರೋಬ್ಬರಿ ಮಾಡ್ತೀನಿ. ನೀ ಚಿಂತೀ ಬಿಡು.'

–ಆಕೆ ಚಿಂತೆ ಬಿಟ್ಟುಬಿಟ್ಟಿದ್ದಳು.

–'ಮಿನಿ, ಶಾಂತಾ ಸಾಯಬಾರದು ಅಂತ ಒಂದs ನನ್ನ ಇಚ್ಛಾ. ನನಗ ಆಕೀ ಅವಶ್ಯಕತಾ ಎಷ್ಟ ಅದs ಅನ್ನೋದು ಈಗೀಗ ಗೊತ್ತಾಗ್ಲಿಕ್ಹತ್ತೇದ. ಇಷ್ಟ ವರ್ಷ ಎಂದೂ ನಾ ಅದರ ಬಗ್ಗೆ ವಿಚಾರನs ಮಾಡಿದ್ದಿಲ್ಲ ನೋಡು. ನನ್ನ ಮಕ್ಕಳನ್ನ ಹಡದಾಕಿ, ಬೆಳಸಿದಾಕಿ, ಆಕಿ ಸತ್ತರ ಮಕ್ಕಳ ಗತಿ ಏನು ? ಆಕೀ ಮನಸ್ಸಿಗೆ ಸಮಾಧಾನ ಆಗೋಹಾಂಗ ಮಾಡಬೇಕಾದದ್ದು ನನ್ನ ಕರ್ತವ್ಯ. ಆದರ ನೀ ಏನೂ ವಿಚಾರ ಮಾಡಬ್ಯಾಡ ಮಿನಿ, ವಿಚಾರ ಮಾಡೂದರೆ ಏನದ ? ನಿನಗ ಹ್ಯಾಂಗೂ ನೌಕರಿ ಅದ. ಏನೂ ಜವಾಬ್ದಾರೀನೂ ಇಲ್ಲ. ಇಷ್ಟರಮ್ಯಾಲ ಏನರೆ ಆಪತ್ತು ಬಂದರ ನಾ ಇದ್ದೀನಲ್ಲ. ನಾ ನಿನಗ ಎಂದೋ ಹೇಳೀನಿ– ಏನಾದ್ರೂ ನಿನ್ನ ಕೈ ಬಿಡೋದಿಲ್ಲಂತ. ಶಾಂತಾ ಅಂತಾಳ– ಇದು ಪಾಪ ಅಂತ, ಇದು ತಪ್ಪು ಅಂತ. ತಪ್ಪು ಮಾಡೀನಿ, ಪಾಪ ಮಾಡೀನಿ. ಆದರ ಹೇಳಿದ ಮಾತು ತಪ್ಪಿಸೋ ಜಾತಿ ಅಲ್ಲ ನಂದು. ನಾ ಬಂದs ಬರ್‍ತೀನಿ

ನಿನ್ನ ಕಡೆ ಅನುಕೂಲ ಆದಾಗೆಲ್ಲಾ. ಮಿನಿ, ನನ್ನ ಕಡೆ ನೋಡು, ನನ್ನ ಕಣ್ಣಾಗ ಕಣ್ಣಿಡು. ಈಗ ಹೇಳು– ನಿನಗ ನನ್ನ ಮ್ಯಾಲೆ ಸಂಶೇ ಅನಸ್ತದೇನು ?'–

–ಇಲ್ಲ, ಆಕೆಗೆ ಎಂದೂ ಸಂಶಯ ಅನಿಸಲಿಲ್ಲ.

ಅಸಂಖ್ಯ ರಾತ್ರಿಗಳು– ಮಳೆ ಸುರಿಯುತ್ತಿತ್ತು ; ಬೆಳದಿಂಗಳು ಬೀಳುತ್ತಿತ್ತು ; ದಟ್ಟ ಕತ್ತಲು ಕವಿಯುತ್ತಿತ್ತು ; ಮೈ ಕೊರೆಯುವ ಚಳಿ ಬಿಡುತ್ತಿತ್ತು ; ತನ್ನ ಚಿಕ್ಕ ಮನೆಯ ಅಂಗಳದಲ್ಲಿ ಸುಮ್ಮನೆ ದೆವ್ವ ಬಡಿದವರ ಹಾಗೆ ಮಧ್ಯ ರಾತ್ರಿಯವರೆಗೂ ನಿಂತು ಆಕೆ ತಿರುಗಿ ಒಳಗೆ ಬರುತ್ತಿದ್ದಳು.

ಆಫೀಸಿನ ಕೆಲಸಕ್ಕಾಗಿ ಕೆಲವು ಸಲ ಆಕೆ ಬೇರೆ ಊರುಗಳಿಗೆ ಹೋಗಬೇಕಾಗುತ್ತಿತ್ತು– ಆಫೀಸಿನ ವ್ಯಾನು, ಅದರಲ್ಲಿ ಹಲ್ಲು ಕಿರಿಯುವ ಒಂದಿಬ್ಬರು ಗಂಡು ಸಹೋದ್ಯೋಗಿಗಳು ; ಹೊಟೇಲುಗಳಲ್ಲಿ ಕಪ್ಪು ಕನ್ನಡಕದೊಳಗಿಂದ ಓರೆಯಾಗಿ ನೋಡುವ ಮ್ಯಾನೇಜರುಗಳು ; ರಸ್ತೆಗಳಲ್ಲಿ ಕಣ್ಣುಬಾಯಿ ತೆರೆದು ನೋಡುವ ಜನಗಳ ಮಧ್ಯೆ ಓಡಾಟ ; ಬಸ್ಸುಗಳಲ್ಲಿ ಪ್ರವಾಸ ಮಾಡಬೇಕಾದಾಗ ಯಾವಾಗಲೂ ಯಾರು ಪಕ್ಕಕ್ಕೆ ಬಂದು ಕೂಡುತ್ತಾರೋ, ಅವರಿಗೆ ಬಸ್ಸಿನಲ್ಲಿ ತಪ್ಪದೆ ತೂಕಡಿಕೆ ಬಂದಾಗ ಯಾವ ಕಡೆ ಜೋಲಿ ಹೋಗುತ್ತಾರೋ ಎಂಬ ಕಳವಳ ; ತಿರುಗಿ ಮನೆಗೆ ಬಂದಾಗ ಆಕೆ ಎರಡು ದಿನ ಮುಸುಗು ಹಾಕಿ ಮಲಗಿಬಿಡುತ್ತಿದ್ದಳು. ಸಮಯ ಕಳೆಯುವುದು ಒಮ್ಮೊಮ್ಮೆ ತೀರ ಕಷ್ಟವೆನಿಸಿದಾಗ ಮಗ್ಗಲು ಮನೆಗಳ ಮಕ್ಕಳಂತೂ ಇದ್ದೇ ಇರುತ್ತಿದ್ದರಲ್ಲ– ಪುಟ್ಟುವಿಗೆ ಕ್ಯಾಡಬರೀಸ್ ಕ್ರಿಸ್ಪ್ ಬಹಳ ಪ್ರೀತಿ ; ಆಶಾ, ಲತಾಗೋ ಡ್ರಾಯಿಂಗ್ ರೂಮಿನಲ್ಲಿ ಶೋಕೇಸ್‌ನಲ್ಲಿಟ್ಟಿರುವ ಗೊಂಬೆಗಳ ಮೇಲೇ ಕಣ್ಣು ; ಪಾಪಣ್ಣಿಗೆ ಆಕೆಯ ಬೆನ್ನ ಮೇಲೆ ಕುದುರೆ ಸವಾರಿ ಮಾಡಲು ಬಹಳ ಹುರುಪು, ಕತ್ತಲಾದ ನಂತರ ಮಕ್ಕಳನ್ನು ಅವರವರ ಮನೆಗಳಿಗೆ ಕಳಿಸಿಬಂದು ಊಟಮಾಡದೆ ಬಿದ್ದುಕೊಂಡಾಗ ಇವರಲ್ಲಿ ಯಾರ‍್ಯಾರು ಮುಂದೆ ಶೂರರಾಗಬಹುದು, ಯಾರ‍್ಯಾರ ಕಣ್ಣುಗಳು ದೊಡ್ಡವಾಗಿವೆ– ಇತ್ಯಾದಿ ವಿಚಾರಗಳಲ್ಲಿ ಆಕೆಗೆ ಬೆಳಗಾದುದೇ ತಿಳಿಯುತ್ತಿರಲಿಲ್ಲ.

–ಆತನಿಗೆ ಗೊತ್ತಾಗುತ್ತಿರಲಿಲ್ಲವೆಂದಲ್ಲ. ಹಾಗೆ ಆತ ಬಹಳ ಹುಷಾರು. ಎಂದಾದರೊಮ್ಮೆ ಬರುತ್ತಿದ್ದರೂ ಆತನಿಗೆ ಎಲ್ಲ ಗೊತ್ತಾಗುತ್ತಿತ್ತು. 'ಮಿನಿ, ಹಾಂಗ ನೋಡಿದರ ನಿನ್ನ ತ್ಯಾಗ ಭಾಳ ದೊಡ್ಡದು. ಹದಿನೈದು ವರ‍್ಸಾಗಿ ಹೋತು ನಾನೂ ನೀನೂ ಕೂಡಿ. ಅರ್ಧಾ ಆಯುಷ್ಯ ಕಳೀತು ಇಬ್ಬರದೂ. ನೀ ನನ್ನ ಸಲುವಾಗಿ ಭಾಳ ಸಹನ ಮಾಡೀದಿ. ಒಂದು ದಿನಾ ಬಂದೀತು– ನಿನ್ನ ತ್ಯಾಗದ ಋಣಾ ಬಡ್ಡೀಸಹಿತ ತೀರಿಸೋ ಅವಕಾಶ ನನಗೂ ಸಿಕ್ಕೀತು....' ಎದೆಗೊತ್ತಿಕೊಂಡು ಆಕೆಯ ತಲೆಗೂದಲಲ್ಲಿ

ಬೆರಳಾಡಿಸುತ್ತ, ಸ್ವಲ್ಪ ಭಾರವಾದ ಧ್ವನಿಯಲ್ಲಿ ಆತ ಹೇಳುತ್ತಿದ್ದಾಗ ಆಕೆಗೆ ತ್ಯಾಗ–ಋಣ–ಸಹನೆ– ಬಡ್ಡಿ ಎಲ್ಲ ಮರೆತೇ ಹೋಗಿರುತ್ತಿತ್ತು.

–'ನನಗ ಗೊತ್ತಾಗತದ ಮಿನಿ. ಎಲ್ಲಾ ಹೆಣ್ಮಕ್ಕಳ ಹಾಂಗ ಗಂಡಾ-ಮಕ್ಕಳ್ನ ಕಟಿಗೊಂಡು ಯಾರ ಹೆದರಿಕೀನೂ ಇಲ್ಲದ ಆರಾಮಾಗಿರಬೇಕು ಅಂತ ನಿನಗೂ ಆಶಾ ಅದ. ನಂದೂ-ನಿಂದೂ ಪ್ರೀತಿ ಖರೇ ಇದ್ದರ ಇದೂ ಸಾಧ್ಯ ಆಗೋ ದಿನಾ ಬಂದs ಬರ್‍ತದಂತ ನನಗ ನಂಬಿಕಿ ಅದ. ನೀ ಅಂತೂ ಆ ನಂಬಿಕೀ ಮ್ಯಾಲs ಬದುಕೀ. ಆ ನಂಬಿಕಿ ಖರೇ ಆದೀತು ಒಂದಿನಾ. ಯಾರ ಕಂಡಾರ ಭವಿಷ್ಯ ?'

–'Sorry ಮಿನಿ. ಈ ಸರೆ ಎರಡ ತಿಂಗಳತನಕಾ ನಿನ್ನ ಕಡೇ ಬರ್‍ಲಿಕ್ಕಾಗ್ಲಿಲ್ಲ – ನೀ ಹಾದೀ ಕಾಯ್ತಿರತೀ ಅಂತ ಗೊತ್ತಿದ್ದೂ. ರಾಜೂನ್ನ ಕಾಲೇಜಿಗೆ ಹೆಸರ ಹಚ್ಚಿಸೋ ಗಡಿಬಿಡಿ ; ಶಾಂತಾಗ ಬ್ಯಾರೆ ಇತ್ತಿತ್ಲಾಗ ಬ್ಲಡ್‌ಪ್ರೆಶರ್‌ದ ತ್ರಾಸು ಸುರುವಾಗೇದ ; ಮನೀ ಕಟ್ಟಿಸೋ ಕೆಲಸ ನಡದsದ. ಇಷ್ಟೆಲ್ಲಾ ಇದ್ರೂ ಏನೇನೋ ನೆವಾ ಹೇಳಿ ಹ್ಯಾಂಗ ತಪ್ಪಿಸಿಕೊಂಡ ಬಂದೀನಿ ನೋಡು. ನನಗ ಗೊತ್ತಿತ್ತು ನೀ ಕಣ್ಣಾಗ ಜೀವಾ ಇಟಗೊಂಡು ಕಾಯ್ತಿರತೀ ಅಂತ. ಅದಕ್ಕs ಓಡಿ ಬಂದೆ. ನನಗ ಯಾತರದೂ ಅಂಜಿಕಿಲ್ಲ ನಿನ್ನ ಕಡೆ ಬರಲಿಕ್ಕೆ.... I am a brave man.'

–'ಮಿನಿ, ನೀ ಸಿಟ್ಟಾಗದಿದ್ದರ ಒಂದ ಮಾತ ಹೇಳ್ತೀನಿ. ನಾಳಿನ ರವಿವಾರ ನಮ್ಮ ಮಹಾಬಳೇಶ್ವರದ ಪ್ರೋಗ್ರಾಂ ಇತ್ತಲ್ಲ, ಅದನ್ನ postpone ಮಾಡೂಣು. ಶಾಂತಾ ಏನೋ ನಮ್ಮ ಕುಲದೇವರಿಗೆ ಹರಕೀ ಹೊತ್ತಾಳಂತ ನನ್ನ ಪ್ರಮೋಶನ್ ಸಲುವಾಗಿ. ಅದನ್ನ ಮುಟ್ಟಸಬೇಕಾಗೇದ. ನೀ ಸಿಟ್ಟಾಗೂದಿಲ್ಲಲ್ಲ ? ನನಗ ಗೊತ್ತದ–ನಿನಗ ಭಾಳ understanding ಅದ. ಇಷ್ಟ understanding, ಇಷ್ಟ co-operation ನಾ ಶಾಂತಾನಿಂದ expect ಮಾಡ್ಲಿಕ್ಕೇ ಶಕ್ಯ ಇಲ್ಲ.... ಯಾಕ, ಕೆಟ್ಟನಿಸಿತೇನು ? ನಿನಗ ಮಹಾಬಳೇಶ್ವರದ ಬಗ್ಗೆ ಭಾಳ ಉತ್ಸಾಹ ಇತ್ತಲ್ಲs ? ಭಾಳ ತಯಾರೀನೂ ಮಾಡೀದಿ. ನಿನಗ ಕೆಟ್ಟನಸೋದು ನನಗ ಗೊತ್ತಾಗತದ. ಮಿನಿ, ನಾ ಕಲ್ಲು ಅಲ್ಲ ನೋಡು....'

–ಆತನಿಗೆ ಖರೇ ಸಹಾನುಭೂತಿ ಇತ್ತು ಅನುಕಂಪ ಇತ್ತು ; ಆತ ಕಲ್ಲೆಂದು ಆಕೆಗೆ ಒಮ್ಮೆಯೂ ಅನಿಸಲಿಲ್ಲ.

ಆಕೆಗೆ ನಡುಮಧ್ಯಾಹ್ನದಲ್ಲೇ ಕಣ್ಣು ಮುಚ್ಚತೊಡಗಿದವು. ಕಣ್ಣು ಭಾರ, ತಲೆಭಾರ, ಮೈಭಾರ. ಎದುರಿಗೆಲ್ಲ ಕತ್ತಲು.... ಯಾವ ಯಾವುವೋ ಆಕೃತಿಗಳು ಮಿಂಚಿಮಾಯವಾಗುತ್ತಿವೆ –ವಿಧ ವಿಧದ ಜನರು. ತಾನು ಒಬ್ಬಳೇ ಹೋಗುವಾಗ ದಾರಿಯಲ್ಲಿ ತನ್ನನ್ನು ಕಂಡು ನಕ್ಕವರು ; ಆತನ ಜೊತೆ ಹೋಗುವಾಗ ಮರೆಯಲ್ಲಿ

ಪಿಸುಮಾತನಾಡಿದವರು ; ತನ್ನಿಂದ ಚಾಕಲೇಟು ಪಡೆದು ಓಡಿಹೋಗಿ ತಮ್ಮ ತಾಯಂದಿರ ಸೆರಗಲ್ಲಿ ಮರೆಯಾಗುವ ಮಂದಿಯು ಮಕ್ಕಳು ; ಅವರೆಲ್ಲರ ನಡುವೆ ದೊಡ್ಡ ಕಣ್ಣುಗಳ ಭವ್ಯ ನಿಲುವಿನ ವೀರ ಯೋಧನೊಬ್ಬ....

ಯಾರೋ ಚೀರುಧ್ವನಿಯಲ್ಲಿ ಅಳುತ್ತಿದ್ದಾರೆ.

–ಎಂದೋ ದೂರವಾದ ತನ್ನ ಅಪ್ಪನ ಪ್ರೇತವೇ ?

ಯಾರೋ ಗಟ್ಟಿಯಾಗಿ ನಗುತ್ತಿದ್ದಾರೆ.

–ಹಣೆತುಂಬ ಕುಂಕುಮ, ತಲೆತುಂಬ ಹೂ, ಹೊಸ ಸೀರೆಗಳಿಂದ ಅಲಂಕೃತವಾಗಿ ಚಟ್ಟಕ್ಕೆ ಬಿಗಿದಿದ್ದ, 'ಪುಣ್ಯವಂತೆ' ಅಂತ ಎಲ್ಲರಿಂದ ಅನ್ನಿಸಿಕೊಂಡ, ಶಾಂತಾನ ಹೆಣವೇ ?

–ಶಾಂತಾ, ನೀನು ಖರೇನೇ ಪುಣ್ಯವಂತೆ ಕಣೆ. ನಿನ್ನ ಗಂಡ ನಿನ್ನನ್ನು ಬಹಳ ಪ್ರೀತಿಸುತ್ತಿದ್ದ. ಆದರೆ ಅದು ಅವನಿಗೆ ಹೇಗೆ ಗೊತ್ತಾಯಿತೆಂದು ನಿನಗೆ ಗೊತ್ತೇ ? –ನನ್ನಿಂದ ಕಣೆ, ನನ್ನಿಂದ. I was the means. ಮಜಾ ಅಲ್ಲವೆ. ಹಹ್ಹ....

ಅಂದಹಾಗೆ ಒಂದು ವೇಳೆ ಬ್ಲಡ್‌ಪ್ರೆಶರಿನಿಂದ ನೀನು ಗೊಟಕ್ ಅಂದಿರದಿದ್ದರೆ– ಅಂದಿರದಿದ್ದರೆ– ಅಲ್ಲ, ನಮ್ಮ ಕೈಯಲ್ಲಿ ಏನಿದೆ ? ಎಲ್ಲ ದೇವರ ಇಚ್ಛೆ. ನೀನು ಸತ್ತದ್ದೂ ದೇವರ ಇಚ್ಛೆ. ನಿನ್ನ ಸಾವು ಒಂದು ಸಾಮಾನ್ಯ ಘಟನೆ. ಅದರ ಪರಿಣಾಮ– ಅಂದ ಹಾಗೆ ಅದಕ್ಕೊಂದು ಪರಿಣಾಮವಿದೆಯೆಂದ ಬಳಿಕ ಅದು ಬರಿ ಘಟನೆ ಹೇಗಾದೀತು ? ಅದೊಂದು ಕಾರಣ. ಅದರ ಪರಿಣಾಮ–

–'ಅಂದ್ವಾಂಗ ನಾವು ಎಂದ ಸಬ್‌ರಜಿಸ್ಟ್ರಾರ ಆಫೀಸಿಗೆ ಹೋಗೋಣ ಮಿನಿ ?'

ಆಕೆ ಧಡಕ್ಕನೆ ಎದ್ದಳು. ದೃಢವಾದ ಹೆಜ್ಜೆಗಳಿಂದ ಟೇಬಲ್ ಸಮೀಪ ಹೋಗಿ ಕೂತಳು. ಡ್ರಾಯರಿನಿಂದ ಬಿಳಿ ಕಾಗದ ತೆಗೆದು ರಜಾಚೀಟಿ ಬರೆದಷ್ಟೆ ನಿಶ್ಚಲತೆಯಿಂದ ಅದರ ಮೇಲೆ ಬರೆದಳು : 'ನನ್ನನ್ನು ಕ್ಷಮಿಸು. ಕೆನಡಾಕ್ಕೆ ಹೋಗುವುದನ್ನು ಕ್ಯಾನ್ಸಲ್ ಮಾಡುವುದು ಈಗ ಸಾಧ್ಯವಿಲ್ಲ. ಬಹಳ ತಡವಾಯಿತು. ನಾಳೆಯೇ ನಾನು ಅದರ ಪೂರ್ವ ತಯಾರಿಗಾಗಿ ಮುಂಬೈಗೆ ಹೋಗುತ್ತೇನೆ. ನೀನು ಹಿಂದಿರುಗಿ ಬಂದಾಗ ನಾನಿರುವುದಿಲ್ಲ. ನಮ್ಮ ದಾರಿ ಕವಲೊಡೆದಿದೆ.

ಗಿರಿಜಾನ ಲಗ್ನ ಚೆನ್ನಾಗಿ ಮಾಡು. ಅವಳಿಗೆ ನನ್ನ ಆಶೀರ್ವಾದಗಳು. ನಿನಗೆ ಹೆಚ್ಚಿಗೆ ಹೇಳುವ ಅವಶ್ಯಕತೆಯಿಲ್ಲ– You are a brave man.'

–ಪತ್ರವನ್ನು ಆಳಿನೊಂದಿಗೆ ಕೂಡಲೇ ಅಂಚೆಗೆ ಕಳಿಸಿ ಮರುದಿನದ ಟ್ರೇನಿಗೆ ರಿಝರ್ವೇಶನ್ ಮಾಡಿಸಲೆಂದು ಆಕೆ ಸ್ವತಃ ಸ್ಟೇಶನ್ನಿಗೆ ನಡೆದಳು.

❖ ❖ ❖

# ಒಂದು ರವಿವಾರ

**ಮುಂಜಾನೆ :**

ಇಕ್ಕಟ್ಟಾದ ಓಣಿ. ರಸ್ತೆಯ ಎರಡೂ ಬದಿಗೂ ಸಾಲಾಗಿ ಮನೆಗಳು, ಚರಂಡಿಗಳು. ಗಟಾರದ ಗುಂಟ ಆ ಕಡೆ ಬೆನ್ನುಮಾಡಿ ಮಣ್ಣಲ್ಲಿ ಬೆರಳಿನಿಂದ ಚಿತ್ರ ತೆಗೆಯುತ್ತ ಕೂತ ಮಕ್ಕಳು. ರಾತ್ರಿಯಿಡೀ ಸುರಿದ ಮಳೆಯಿಂದಾಗಿ ಕಿಚಿಕಿಚಿಯಾದ ದಾರಿ. ನಳ ಸುರಿಯುವ, ಭಾಂಡಿ ಎತ್ತಿಕ್ಕುವ ಸಪ್ಪಳ. ಹಾಲಿನವರ ಸೈಕಲುಗಳ ಸರ್‌ಸರ್. ಬೆಳಗಾವಿಯಲ್ಲಿ ಬೆಳಗಾಗಿದೆ.

ರಸ್ತೆಯ ತಿರುವಿನ ಕೊನೇ ಮನೆಯ ಅಟ್ಟದ ಮೇಲಿನ ಮುಂದಿನ ಮೂರು ಕೋಣೆಗಳು. ಮನೆಯ ಮಾಲಿಕತಿ ಗಿರಿಜಾ ಹಿರೇಮಠ, ಅವಳ ಜೊತೆಗೆ ಇನ್ನಿಬ್ಬರು ಹುಡುಗಿಯರು, ಕಡಿಮೆ ಬಾಡಿಗೆಗೆ ಇದ್ದವರು, ಒಂಟಿಯಾಗಿದ್ದ ಮಾಲಿಕತಿಗೆ ಜೊತೆಯೂ ಆದ ಹಾಗೆ : ಕಾರ್ಪೋರೇಶನ್ನಿನಲ್ಲಿ ಟೈಪಿಸ್ಟ್ ಆಗಿದ್ದ ರೇಖಾ ಆಪ್ಟೆ, ಮೆಡಿಕಲ್ ಕಾಲೇಜಿನಲ್ಲಿ ಓದುತ್ತಿದ್ದ ಶಾಂತಾ ಚಿಟ್ನೀಸ.

“ಏ ಏಳs ಮಾರಾಯಳs, ಎಂಟ ಹೊಡೀಲಿಕ್ಕೆ ಬಂತು”– ಮಲಗಿದ್ದವಳ ಹೊದಿಕೆ ಎಳೆಯುತ್ತಾಳೆ ರೇಖಾ.

ಹೊದಿಕೆಯನ್ನು ಇನ್ನೂ ಬಿಗಿಯಾಗಿ ಮೈಗೆ ಸುತ್ತಿಕೊಂಡು ಹಾಸಿಗೆಯಲ್ಲಿ ಗುಬ್ಬಚ್ಚಿಯಂತೆ ಹುದುಗುತ್ತ ಸ್ವಲ್ಪ ಸಿಟ್ಟಿನಿಂದಲೇ ಉತ್ತರಿಸುತ್ತಾಳೆ ಶಾಂತಾ, “ನನ್ಯಾಕ ಕಾಡತೀ ? ಹೋಗು ಹೋಗು. ಗಿರಿಜಾನ ಜೋಡಿ ಏನರೆ ಲಿಟರೇಚರ್ ಓದು ಹೋಗು.”

“ಗಿರಿಜಾಗೂ ಆಕೀ ಲಿಟರೇಚರ್‌ಗೂ ಕೂಡೇ ಬೆಂಕಿ ಹಚ್ಚು. ರವಿವಾರ ಸುದ್ಧಾ ನಮಗ ಮಲಗಗೊಡೂದಿಲ್ಲ. ಯಾವಾಗ ನಸಿಕಿನ್ಯಾಗ ಐದಕ್ಕ ಎದ್ದಾಳ ಪುಣ್ಯವಂತಿ, ದೀಪಾ ಹಚಿಗೊಂಡು ಕೂತುಬಿಟ್ಟಾಳ ಪುಸ್ತಕಾ ಹಿಡಕೊಂಡು. ಯಾವಾಗ ಬ್ಯಾರೇ ಕಡೆ ರೂಮು ಸಿಕ್ಕೀತು ಅಂತೀನಿ ನಾ ಅಂತೂ.”

ಮೂಲೆಯ ಟೇಬಲಿನ ಹತ್ತಿರ ಓದುತ್ತ ಕೂತ ಗಿರಿಜಾಗೆ ಸಿಟ್ಟು ಮೂಗಿನ ಮೇಲೆಯೆ : “ಮಿಸ್ ರೇಖಾ ಆಪ್ಟೆ, ನಿನಗ ಗೊತ್ತಿರಬೇಕು ಈ ರೂಮು ನಂದು ಅಂತ. ಏನೋ ಪಾಪ, ಬ್ಯಾರೇ ಊರಿಂದ ಬಂದೀ ಅಂತ, ರಸ್ತೇದ ಮ್ಯಾಲ ಮಲಗೋ ಹಾಂಗ

ಆಗಬಾರದು ಅಂತ ಜಾಗಾ ಕೊಟ್ಟೇನಿ ನಿನಗ. ಬಗೀಹರೀದಿದ್ರ ಹೋಗಿಬಿಡು. ಯಾರ ಬ್ಯಾಡಂತಾರ ? ಏನs ಶಾಂತಾ ?''

"ಓಹೋ, ಸಿಟ್ಟಾಗಬ್ಯಾಡ ಗಿರಿಜಾ, ಮುಂಜಾನೆದ್ದ ಕೂಡಲೇ ಜಗಳಾ ಸುರೂ ಮಾಡಿದೆಲ್ಲ ?''

"ಯಾರು ಜಗಳಾ ಸುರೂ ಮಾಡಿದವ್ರು ? ನಾ ನನ್ನಷ್ಟಕ್ಕ ಓದಿಕೋತ ಕೂತೀನಿ. ನೀನs ಅಲ್ಲೇನು ನನಗ ಬೆಂಕೀ ಹಚ್ಚಲಿಕ್ಕೆ ಹೊರಟಾಕಿ ?'' —ಚೀರು ದನಿಯನ್ನು ಎತ್ತರಿಸುತ್ತ ಗಿರಿಜಾ ಮಾತಾಡುತ್ತಾಳೆ, "ನನಗ ಯಾರೂ ಇಲ್ಲ ಅಂತ ಹಿಂಗ ಹಗರ ಮಾತು ಬರ್‍ತಾವ ಹೌದಲ್ಲೊ ನಿನ್ನ ಬಾಯಿಂದ ? ಇಷ್ಟ ತಿಳಕೋ ರೇಖಾ, ಕೆಳಗಿನ ಮನ್ಯಾಗೇ ಇದ್ದೂ ಸಹಿತ ನಮ್ಮ ಅಣ್ಣಾ-ಅತ್ತಿಗಿ ನನ್ನ ಮುಖಾ ನೋಡೂದಿಲ್ಲ ಖರೆ, ಆದರ ನಮ್ಮಪ್ಪಾ ಸಾಯೋವಾಗ ನನಗ ಈ ಮ್ಯಾಲಿನ ಮನಿ, ಭತ್ತದ ಗದ್ದಿ, ತೆಂಗಿನ ತೋಟ, ಅಲ್ಲದs ಕ್ಯಾಶ್ ಕಂಡಾಪಟಿ ರೊಕ್ಕಾ ಕೊಟ್ಟ ಹೋಗ್ಯಾನ. ನಾಯೇನು ತಿಂಗಳಾ ನೂರಾಐವತ್ತು ಪಗಾರದ ಟೈಪಿಸ್ಟಕೀ ಮಾಡೋ ಭಿಕಾರಿ ಅಲ್ಲ.''

—ಗಿರಿಜಾನ ಮಾತು ಹೆಚ್ಚಾಯಿತು ಅನಿಸಿತು ಶಾಂತಾಗೆ. ಇನ್ನು ಅವಳನ್ನು ತಡೆಯದಿದ್ದರೆ ರೇಖಾನ ಟೈಪಿಸ್ಟ್ ಕೆಲಸವಷ್ಟೆ ಅಲ್ಲದೆ ಅವಳ ಕುಲಗೋತ್ರವೆಲ್ಲ ಉದ್ಧಾರವಾಗುವುದೆಂದೂ ಗೊತ್ತು. ಆಕೆಯ ನಿದ್ದೆಯಂತೂ ಪೂರಾ ಹಾರಿಹೋಗಿತ್ತು. ಎದ್ದು ಹಾಸಿಗೆ ಕೊಡವುತ್ತ ಆಕೆ ಮಾತು ಬದಲಿಸಿದಳು, "ಅಂದ್ಹಾಂಗ ರೇಖಾ, ನಿಂದೇನು ಇವತ್ತು ಔಟಿಂಗ್ ಇಲ್ಲೇನು ಎಲ್ಲ್ಯೂ ?''

ಮುಖದ ತುಂಬ ನಗು ತಂದುಕೊಂಡು ಗೋಣು ಓರೆಮಾಡಿ ಕಣ್ಣು ಕಿರಿದುಮಾಡಿ ರೇಖಾ ಉತ್ತರಿಸಿದಳು, "ಓ, ಔಟಿಂಗ್ ಇಲ್ಲದೇ ಸಂಡೇ ಎಂಥಾದ್ದು ? ನನ್ನ ರವಿವಾರದ ಪ್ರೋಗ್ರ್ಯಾಮೆಲ್ಲಾ ಅಗಾವು ಫಿಕ್ಸ್ ಆಗಿರ್‍ತಾವ.''

"ಎಲ್ಲಿ ಹೋಗಾಕಿ ಹಂಗಾರ ಇವತ್ತ ?'' ಗಿರಿಜಾನ ಧ್ವನಿಯಲ್ಲಿ ಅವಳ ಅಂಕೆ ಮೀರಿದ ಕುತೂಹಲ, "ರಾಮತೀರ್ಥಕ್ಕs ?''

"ಛೆ, ಹೋದ ರವಿವಾರ ನಮ್ಮ ಬಾಸ್ ಸೇಠೀ ಜೋಡೀ ರಾಮತೀರ್ಥಕ್ಕ ಹೋಗಿದ್ನೆಲ್ಲಾ. ಮತ್ತ-ಮತ್ತ ಒಬ್ಬರ ಜೋಡೀನs ಒಂದs ಕಡೆಗs ಹೋಗೋದ್ರಾಗ charm ಇರೂದಿಲ್ಲ. ಇವತ್ತ ನಮ್ಮ ಆಫೀಸ್ ಸ್ಯೂಪರಿಂಟೆಂಡೆಂಟ್ ಜಗನ್ನಾಥನ್ ಇದ್ದಾನಲ್ಲಾ, ಅವನ ಇನ್ವಿಟೇಶನ್ ಅದ. ಆತ ಹೊಸದಾಗಿ ಸ್ಕೂಟರ್ ತಗೊಂಡಾನ. ಹಂಗ ಕೂತು ಹೋಗ್ತಾ ಇರೋದು—ಪೂನಾ ರೋಡಿನ ಗುಂಟ. ಸಂಜೀನ್ಯಾಗ ಆ ಕಡೆ ಭಾಳ fine ಇರ್‍ತದ. ಸ್ವಲ್ಪ ಮುಂದ— ಅಂದರ ಒಂದ ೮-೧೦ ಮೈಲು ಹೋದ ಮ್ಯಾಲ ಘಾಟ ಏರಿಯಾ ಬರ್‍ತದಂತ.... ಅಂದರ ಬರೇ ಜಂಗಲ್—''

"ಗೊತ್ತಾತ ಬಿಡು ರೇಖಾ, ಹೆಚ್ಚಿನ explanation ಬ್ಯಾಡ ನಮಗ. ಒಟ್ಟಿನ ಮ್ಯಾಲ ನೀ ಮುಂಜಾನೆ–ಮಧ್ಯಾಹ್ನ ಫ್ರೀ ಇದ್ದೀ ಅಂಥಾಂಗಾತು. ಹತ್ತ ಘಂಟೇಕ್ಕ ರೆಕ್ಸ್‌ಗೆ 'Gone with the wind' ಅದ. ಹೋಗೋಣೇನು ? ಏನಂತೀ ಗಿರಿಜಾ ?"

"ಆ್ಞ ?" ಗಿರಿಜಾನ ಮನಸ್ಸು ಗಾಳಿಗುಂಟ ಹೋಗಿತ್ತು– ರೇಖಾ ಹೇಳಿದ ಘಾಟ ಏರಿಯಾದತ್ತ. ಶಾಂತಾನ ಮಾತಿಗೆ ಒಮ್ಮೆಲೆ ಉತ್ತರಿಸಲು ತಿಳಿಯಲಿಲ್ಲ ಆಕೆಗೆ, "ಏನು ? Gone with the wind ? ಹೌದೌದು."

ಪಕಪಕನೆ ನಕ್ಕಳು ರೇಖಾ, "ಎಲ್ಲಿಗೆ ಹೋಗೀರಿ ಬಾಯಿಸಾಬ್ ? ಯಾರ ಕನಸು ಕಾಣಲಿಕ್ಹತ್ತೀರಿ ?"

"ಸುಮ್ನಿರು ರೇಖಾ," –ಗಿರಿಜಾನ ಧ್ವನಿಯಲ್ಲಿ ಮತ್ತೆ ಸಿಡಿಸಿಡಿ,

"ಅಂಥಾ ಕನಸ-ಗಿನಸ ಕಾಣೂದು ಎಲ್ಲಾ ನಿನಗs ಇರ್ಲಿ. ನನಗ ನನ್ನ ಪುಸ್ತಕದ್ದು. ನನ್ನ ಕೆಲಸದ್ದು ಕನಸು."

"ಕೆಲಸದ್ದೇನು ಕನಸು ? ಪಿಎಚ್.ಡಿ. ಆತು, ಪ್ರಮೋಶನ್ ಸಿಕ್ಕಿತು, ಇನ್‌ಕ್ರಿಮೆಂಟ್ ಸಿಕ್ಕವು. ಇನ್ನ ಸ್ವಲ್ಪ ಲಗ್ನ-ಗಿಗ್ನದ ವಿಚಾರ ಮಾಡ್ರೆಲಾ."

"ಛೀ ಛೀ", ಮೈಮೇಲಿನ ಹುಳ ಕೊಡವಿದ ಹಾಗೆ ಕಹಿ ಮುಖ ಮಾಡಿದಳು ಗಿರಿಜಾ, "ಯಾಕ ಎಲ್ಲಾ ಹೆಂಗಸ್ರೂ ಲಗ್ನ-ಲಗ್ನ ಅಂತ ಬಡಕೋತಾರೋ ಅಂತೀನಿ. ಏನದ ಅದರಾಗ ? ಒಬ್ಬ ಹುಂಬ ಗಂಡಸಿನ ಆಳಾಗಿ ಇರೋದು. ಅವರಿಗೆ ಹೆಂಗ್ಸರ ಮನಸು understand ಆಗೋದಿಲ್ಲ, ಬಿಡೋದಿಲ್ಲ. ಇವ್ರು ಬರೇ ಮಕ್ಕಳ್ನ ಹಡಕೋತ ಸಾಯೋದು. Disgusting ! ನನಗಂತೂ ಅವರನ್ನ ಕಂಡರ ಆಗೂದಿಲ್ಲ. ನಾ ಹಿಂಗs ಇರಬೇಕು ಅಂತ decide ಮಾಡಿಬಿಟ್ಟೇನಿ."

"ಇಂಥಾ ಸಣ್ಣ ವಯಸ್ಸಿನ್ಯಾಗ ಇಷ್ಟ ವೈರಾಗ್ಯ ಅಂದ್ರ ಅದ್ಭುತ." –ಬಾಥ್‌ರೂಮಿಗೆ ಹೋಗುತ್ತ ಶಾಂತಾ ಅಂದಳು. ಅವಳು 'ಸಣ್ಣ' ಅನ್ನುವಾಗ ಕಣ್ಣು ಮಿಟುಕಿಸಿದ್ದು ನೋಡಿದ ರೇಖಾಗೆ ನಗು ಬಂತು.

ಶಾಂತಾ ಹೋದ ದಿಸೆಯನ್ನೆ ನೋಡುತ್ತಿದ್ದ ಗಿರಿಜಾ ಆಕೆ ಕಣ್ಣು ಮರೆಯಾದೊಡನೆ ಧ್ವನಿ ತಗ್ಗಿಸಿ ಹೇಳಿದಳು, "ನಿನಗ ಗೊತ್ತಿಲ್ಲ ರೇಖಾ, ಈ ಶಾಂತಾ ಭಾಳ ಬೆರಿಕಿ ಹೆಣ್ಣು. ಒಂದ ಸ್ವಲ್ಪ ಛಲೋ ಫಿಗರ್ ಅದ ಅಂತ ಮಹಾಸೊಕ್ಕು. ತಾ ಭಾಳ ಶ್ಯಾಣ್ಯಾಕಿ ಅಂತ boast ಮಾಡ್ತಿರತಾಳ. ಆದರ ಈಕಿ first class ಬಂದದ್ದು, ಈಕೀಗೆ scholarship ಸಿಕ್ಕದ್ದು ಎಲ್ಲಾ ವಶೀಲಿ ಮ್ಯಾಲೆ. ನನಗ ಗೊತ್ತದ ಆ ಕಥಿ."

"ಹೌದೇನು ಗಿರಿಜಾ ? ಯಾರು ಹೇಳಿದ್ರು ?"

"ಹಿಂಗೇ ಬಂತು ಸುದ್ದಿ. ಈಕೀದೇನು ಶ್ಯಾಣೇತನಾ ಸುಟ್ಟಿತು, ಘೋಕ ಹಾಕಿದರ

ಎಲ್ಲಾರೂ first class ಬರ್‍ತಾರ. ಅದರಾಗೇನದ ?''

"ಆದರ ಶಾಂತಾ ಖರೇನs ಹುಷಾರ ಇದ್ದಾಳಂತ ಮೊನ್ನೆ ಆಕೀ ಪ್ರೊಫೆಸರs ಹೇಳ್ಲಿಲ್ಲs ಮುಂದಿನ ಮನೀಗೆ ಹೊಸದಾಗಿ ಬಂದ ಡಾ. ಶಾಸ್ತ್ರಿ ?''

"ಅಯ್ಯ ಬಿಡs, ಈಕೀಗೆ ಕಣ್ಣು-ಮೂಗು ತಿರುವಿ ಮಂದೀನ್ನ ಬುಟ್ಟೀಗೆ ಹಾಕ್ಕೊಳ್ಳೋ ಕಲಾ ಅದ. ಅದಕ್ಕ ಮಳ್ಳಾಗಿ ಎಲ್ಲಾರೂ ಹೊಗಳ್ತಾರ ಆಕಿನ್ನ. ನೋಡಿದಿಲ್ಲೋ ಆ ದಿವ್ಸ ಅಕೀ ಕಾಲೇಜ ಗ್ಯಾದರಿಂಗಿಗೆ ಹೋದಾಗ ಎಷ್ಟ ಮಂದಿ ಅಕೀ ಹಿಂದಿಂದ 'ಮಿಸ್ ಚಿಟ್ನೀಸ್, ಮಿಸ್ ಚಿಟ್ನೀಸ್' ಅನಕೋತ ತಿರಗತಿದ್ರು ! ನನಗಂತೂ ಚೂರೂ ಪಸಂದಿಲ್ಲ ಆಕೀ ಚಾಲು.''

"ಛೆಂದ ಹುಡಿಗ್ಯಾರ ಬಗ್ಗೆ ಎಲ್ಲಾರಿಗೂ ಆಸ್ಥಾ ಇರೋದು ಸಹಜ.''

"ಅದೇನು ಮಹಾ ಛೆಂದ ಈಕೀದು ? ಬಿಳೀ ತೊಗಲು, ಹಿಂದ-ಮುಂದ ದಪ್ಪ-ದಪ್ಪ....''

"ಅದು ಹೋಗ್ಲಿ ಗಿರಿಜಾ, ಸಿನೆಮಾಕ್ಕಂತೂ ಹೋಗೋಣಲ್ಲಾ ?''

"ಓ ಯೆಸ್.''

*

ರೇಖಾ ಸ್ನಾನಕ್ಕೆ ಹೋದಾಗ, ಕಿರುದನಿಯಲ್ಲಿ ಹಾಡುತ್ತ ಸೀರೆ ಸುತ್ತಿಕೊಳ್ಳುತ್ತಿದ್ದ ಶಾಂತಾಳ ಸಮೀಪ ಬಂದಳು ಗಿರಿಜಾ, "ಶಾಂತಾ, ಭಾಳ ದಿವ್ಸದಿಂದ ನಿನಗೊಂದು ಸುದ್ದಿ ಹೇಳಬೇಕಂತೀನಿ.''

"ಅದೇ, ನಿಮ್ಮ ಡಿಪಾರ್ಟಮೆಂಟಿನ ಹೆಡ್ ರಿಟೈರ್ ಆಗೋ ಸುದ್ದಿ ಹೌದಲ್ಲೋ ?''

"ಅಲ್ಲ, ರೇಖಾನ ಸುದ್ದಿ. ಇತ್ತೀತ್ಲಾಗ ಅಕೀ ಹಾರ್‍ಯಾಟ ಭಾಳ ಆಗೇದ. ಆಫೀಸಿಗೆ ಹೋಗೋವಾಗ ಹ್ಯಾಂಗ ಡ್ರೆಸ್ ಮಾಡತಾಳ ನೋಡಿದೇನು ? ಎಷ್ಟ ಬಿಗಿ-ಬಿಗಿ ಅರಿವೆ ಹಾಕ್ಕೋತಾಳ, ಶಿವಶಿವ, ನನಗ ಅಸಹ್ಯ ಅನಸ್ತದ. ನಿನಗ ಗೊತ್ತದs ಏನು, ಮೊನ್ನೆ ನಮ್ಮ ಡಿಪಾರ್ಟಮೆಂಟಿನ್ಯಾಗ ಪ್ರೊಫೆಸರ್ ಜೋಶಿ ಹೇಳ್ತಿದ್ರು, ಅವರ ತಮ್ಮ ಈಕೀ ಆಫೀಸಿನ್ಯಾಗೇ ಇದ್ದಾನಲ್ಲ, ಈಕೀನ್ನ ಒಬ್ಬರೂ ಬಿಟ್ಟಿಲ್ಲಂತ.''

"ನಿಮ್ಮ ಪ್ರೊ. ಜೋಶಿಯ ತಂಗಿ ನನ್ನ ಕ್ಲಾಸ್‌ಮೇಟ್. ಆಕೇನು ರೇಖಾನ ಸಲುವಾಗಿ ಹಾಂಗ ಹೇಳಿದ್ದು ನಾ ಕೇಳಿಲ್ಲ. ನಿಮ್ಮ ಜೋಶಿ ಸುಳ್ಳ ಹೇಳ್ತಿರಬೇಕು. ಇಲ್ಲಂದರ–''

"ಇಲ್ಲಂದರ ನಾ ಸುಳ್ಳ ಹೇಳ್ತಿರಬೇಕು ಅಂತೀಯೇನು ? ನನಗ್ಯಾಕಬೇಕು ಇಲ್ಲದ ಕಾರಭಾರ ? ಹಾಂಗ ಕೇಳಿದ್ರ ನನಗ ಮಂದೀ ಸುದ್ದಿ ಮಾತಾಡೂದs ಸೇರೂದಿಲ್ಲ.

ಅದೂ ಒಬ್ಬರ ಬೆನ್ನಹಿಂದ ಟೀಕಾ ಮಾಡೂದಂದ್ರ ಎಷ್ಟ mean ! ಛೆ, ನನಗ ಬಿಲ್-ಕುಲ್ ಸೇರೂದಿಲ್ಲ. ರೇಖಾಗ ಮಾತ್ರ ಈ ಚಟಾ ಭಾಳ. ನೀ ಇಲ್ಲದಾಗ ನಿನ್ನ ಬೈಕೋತ ಇರ್ತಾಳ."

"ಬೈಯಿಸಿಕೊಂಡವರ ಆಯುಷ್ಯ ಹೆಚ್ಚಾಗತದಂತ. ಹೋಗ್ಲಿಬಿಡು. ಪಿಕ್ಚರಿಗೆ ಹೋಗೋಣ ಹೌದಲ್ಲೊ ಹತ್ತಕ್ಕ ?"

"Gone with the wind ಅಂದರ ರೋಮ್ಯಾಂಟಿಕ್ ಪಿಕ್ಚರು. ನಿಮ್ಮಂಥ ಹುಡುಗ್ಯಾರಿಗೆ ಛಲೋ. ನನಗ ಅದೆಲ್ಲಾ ಭಾಳ silly ಅನಸ್ತದ. ಆ ಕಿಸಿಂಗ್ ಸೀನ್ಸು, ಬೀಳೂದು, ಉರುಳ್ಯಾಡೂದು .....ಛಿ ಛಿ, ಅದರ ಬದಲಿಗೆ ಸುಮ್ಮ ಲೈಬ್ರೆರಿಗೆ ಹೋಗಿ ಓದೋದು ಛಲೋ."

"ಮುಂಜಾನೆ ಪಿಕ್ಚರ್ ನೋಡೋಣ. ಲೈಬ್ರೆರಿಗೆ ಸಂಜೀನ್ಯಾಗ ಹೋಗೀಯಂತ. ನಾನೂ ಥಿಯೋಸೊಫಿಕಲ್ ಸೊಸ್ಯಾಟಿಗೆ ಹೋಗ್ತೀನಿ ೬ ಘಂಟೇಕ್ಕ. ಇವತ್ತ ಚಿನ್ಮಯಾನಂದಜಿ ಅವರ ಲೆಕ್ಚರ್ ಅದ. ಗೀತಾದೊಳಗಿನ ಧ್ಯಾನಯೋಗ explain ಮಾಡತಾರ. ನನಗಂತೂ ಇತ್ತಿತ್ಲಾಗ ಅವರ ಭಾಷಣ ಇಷ್ಟ ಸೇರತಾವಂತೀ....."

"ಈಗೀಗ ಪ್ರತಿ ರವಿವಾರ ಸಂಜೀನ್ಯಾಗ ಅಲ್ಲೇ ಹೋಗ್ತಿರ್ತಿಯೇನು ? ರಾತ್ರಿ ತಡಾ ಆಗಿ ಬರ್ತೀಯಲ್ಲ ?"

"ಹೌದು. ಹೊತ್ತು ಕಳದದ್ದೇ ಗೊತ್ತಾಗೂದಿಲ್ಲ ಅವರ ಉಪನ್ಯಾಸ ಕೇಳ್ತಿದ್ದಾಗ. ಮೆಡಿಕಲ್ ಕಾಲೇಜಿನ ಹುಡಿಗ್ಯಾರೆಲ್ಲಾ ಸಂಜೀನ್ಯಾಗ ಅಲ್ಲೆ-ಇಲ್ಲೆ ತಿರಿಗಿ ವ್ಯಾಳ್ಯಾ ಕಳೀತಾರ. ನನಗ ಅದೆಲ್ಲಾ ಸೇರೂದಿಲ್ಲ, ಈ ಥಿಯೋಸೊಫಿಕಲ್ ಸೊಸ್ಯಾಟಿಗೆ ಮತ್ತ ಆ ರಾಮಕೃಷ್ಣ ಮಿಶನ್ನಿಗೆ ಹೋದರ ಇಷ್ಟ peace of mind ಸಿಗತದಂತೀ –"

*

**ಮಧ್ಯಾಹ್ನ :**

– ಮೂರು ಗಂಟೆ. ಅವರು ಮೂವರೂ ಹಾಸಿಗೆಯ ಮೇಲೆ ಬಿದ್ದುಕೊಂಡು ಅರ್ಧ ಎಚ್ಚರ-ಅರ್ಧ ನಿದ್ರೆಯಲ್ಲಿದ್ದಾರೆ.

"ಹ್ಯಾಂಗಿತ್ತು ಪಿಕ್ಚರು ? ನನಗಂತೂ ಭಾಳ ಸೇರಿತು. ನಾ ಸಂಜೀನ್ಯಾಗ ಜಗನ್ನಾಥನ್ ಕೂಡ ಹೋದಾಗ ಅದರ ಕಥೀ ಹೇಳ್ತೀನಿ ಅವನಿಗೆ." – ರೇಖಾ ಕಣ್ಣು ತೆರೆಯದೆ ಹೇಳಿದಳು.

"ಛಿ, ಬರೇ ಸೆಂಟಿಮೆಂಟಲ್. ಯಾವ ಗಂಡ್ಸಿಗೂ ಯಾವ ಹೆಂಗಸಿನ ಸಲುವಾಗಿನೂ ಹಿಂಗ ಖರೇ attachment ಇರೂದಿಲ್ಲ. ಅವರದೆಲ್ಲಾ ಪ್ರೀತಿ ಬರೇ ತಮ್ಮ ಹಸಿವು ಹಿಂಗಿಸಿಕೊಳ್ಳೋದರ ಪೂರ್ತೆ ಇರ್ತದ. ಖರೇ ಅಂದರ ಗಂಡಸರ್ನ ಲಗ್ನಾ

ಮಾಡಿಕೊಳ್ಳೋ ಹೆಂಗಸರೇ ಮೂರ್ಖರು” –ಗಿರಿಜಾ.

ಶಾಂತಾ ಮುಸುಕಿನೊಳಗಿಂದ : “ಲಗ್ನಾ ಮಾಡಿಕೊಳ್ಳೋದು ಮೂರ್ಖತನ ಅನ್ನೂದಿಲ್ಲ ನನಗ. ಲಗ್ನ ಅಂದರ ಪವಿತ್ರ ಬಂಧನ. ಆದರ ಲಗ್ನ ಇಲ್ಲದ ಸಿಕ್ಕವರ ಕೂಡ ಸಂಬಂಧ ಬೆಳಸತಾರಲ್ಲ ಈ ಇಂಗ್ಲಿಶ್ ಪಿಕ್ಚರಿನ್ಯಾಗ. ಅದು ಮಾತ್ರ ತೀರ ಹೊಲಸು ಅನಸ್ತದ ನನಗ. ಎಷ್ಟ ಪಾಪದ ಕೆಲಸಲ್ಲs ಅದು ? ಹಾಂಗೆಲ್ಲಾ ಮಾಡಿದರ ಗಂಡಾ-ಹೆಂಡ್ತಿ ಸಂಬಂಧದ sacredness ಕ್ಕ ಏನ ಕಿಮ್ಮತ್ತು ಉಳಧಾಂಗಾತು ?”

‘ಎಲ್ಲೀ sacredness ಪುರಾಣ ತಗದೀ ಶಾಂತಾ ? enjoy ಮಾಡೋ opportunity ಇದ್ದಾಗ enjoy ಮಾಡ್ಬೇಕು. ಎಂದರೆ ಒಮ್ಮೆ ಯಾರ ಜೋಡಿ ಅರೆ ಕತ್ತಲ್ಯಾಗ ದೂರ ಹೋಗು, ಅಂದರ ಗೊತ್ತಾಗತದ ಅದರ ಸುಖಾ” –ರೇಖಾ ಹೇಳಿದಳು, “ನನಗ ಈ ಗೊಡ್ಡು ವೇದಾಂತ ಸೇರೂದಿಲ್ಲ ನೋಡು. ಈಗs ನಾವು ಆರಾಮಾಗಿರೋ ದಿವಸ. ಮುದುಕರಾದ ಮ್ಯಾಲೆ ಅಥವಾ ಲಗ್ನಾ ಮಾಡಿಕೊಂಡ ಮ್ಯಾಲೆ ಹಿಂಗ ಇರ್ಲಿಕ್ಕೆ ಆದೀತೇನು ? ಅದಕ್ಕs ನನಗ ಎಷ್ಟ ವರಾ ಬಂದ್ರೂ ನಾ ಎಲ್ಲಾರ್ನೂ reject ಮಾಡೀನಿ.”

“ಛಿ ಛಿ, ಹಿಂದೂ ಹೆಂಗ್ಸಾಗಿ ಎಂಥಾ ಮಾತಾಡ್ತೀ ರೇಖಾ ? ಹಿಂಗೆಲ್ಲಾ ಅನ್ಬಾರ್ದು, ನೀಯೇನಂತೀ ಗಿರಿಜಾ ?”

“ಲಗ್ನದ ಮಾತು ನನಗ ಕೇಳಬ್ಯಾಡ್ರೆವಾ. ಇಂಥಾ ಚಿಲ್ಲರೆ ವಿಷಯ ಮಾತಾಡಿ ಟೈಮು ಹಾಳು ಮಾಡೋ ಮನಸ್ಸಿಲ್ಲ ನನಗ. ಸಂಜೀನ್ಯಾಗ ನಮ್ಮ ಹೆಡ್ ಬಾ ಅಂತ ಹೇಳಿದ್ರು. ಅವರ ಕಡೆ ಯಾವಾಗ ಹೋಗ್ಲಿ, ಲೈಬ್ರರಿಗೆ ಯಾವಾಗ ಹೋಗ್ಲಿ ಅಂತ ವಿಚಾರ ಮಾಡಲಿಕ್ಹತ್ತೀನಿ ನಾ.”

“ಬೇಕಾದಾಗ ಹೋಗು, ರಾತ್ರಿ ಊಟಕ್ಕ ಮಾತ್ರ ನನ್ನ ದಾರೀ ಕಾಯಬ್ಯಾಡ. ನಾ ಜಗನ್ನಾಥನ್ ಜೋಡಿ ಔಟಿಂಗ್‌ಗೆ ಹೋಗಿ ಬಂದಮ್ಯಾಲ ಶ್ರೀಧರ ಕುಲಕರ್ಣಿಯ ಕಡೆ ಡಿನರ್‌ಗೆ ಹೋಗಬೇಕು, ಬರ್ಲಿಕ್ಕೆ ತಡಾ ಆದೀತು.”

“ಹ್ಞಾ, ನಂದೂ ದಾರಿ ಕಾಯಬ್ಯಾಡ ಗಿರಿಜಾ, ಚಿನ್ಮಯಾನಂದಜಿ ಲೆಕ್ಚರು ಮುಗದ ಮ್ಯಾಲ ಅಲ್ಲಿ discussion ಅದ. ಮೊನ್ನಿನ ರವಿವಾರ ಅವರು ಆತ್ಮ-ಪರಮಾತ್ಮನ ಸಂಬಂಧ ಅರ್ಧಾ ಹೇಳಿ ನಿಲ್ಲಿಸಿದ್ರು. ಇವತ್ತು ಪೂರಾ ಕೇಳಬೇಕು.”

“ನನಗರೆ ಎಲ್ಲೆ ಲಗೂ ಬರೂದಾಗ್ತದ ? ನಮ್ಮ ಹೆಡ್ ಅವರ ಮನೀಗೆ ಹೋದರ ಅವರ ಹೆಂಡ್ತಿ ಬಿಡೂದs ಇಲ್ಲ. ಊಟಕ್ಕ ಹಾಕೇ ಕಳಸ್ತಾಳ.”

“ಯಾಕೋ ಮೈ-ಕೈ ನೋವು” –ರೇಖಾ ಎದ್ದು ಕುಳಿತು ಹೇಳಿದಳು.

ಗಿರಿಜಾ ಪಟಕ್ಕನೆ ಮಾತಾಡಿದಳು. “ನೀ ಇತ್ತಿತ್ತಾಗ ಯಾಕೋ ಸೊರಗಲಿಕ್ಹತ್ತೀ

ರೇಖಾ, ಡಾಕ್ಟರಿಗೆ ತೋರ್‍ಸು. ಏನರೆ ಕೆಟ್ಟ ಜಡ್ಡು ಒಮ್ಮೆಲೇ ಬಂದಗಿಂದೀತು. ನನಗ ನೋಡು, ಎಂದೂ ಏನು ಧಾಡೀನೂ ಆಗೂದಿಲ್ಲ. ಸುಮ್ನs ಫ್ಯಾಮಿಲಿ ಡಾಕ್ಟರರ ಜುಲುಮಿಗೆ ಏನರೆ ಔಷಧ ತಗೋತಿರ್‍ತೀನಿ. ಭಾಳ ಗಟ್ಟಿ ನನ್ನ ಪ್ರಕೃತಿ. ನಿನ್ನ ಸಲುವಾಗಿ ಮಾತ್ರ ಖರೇನೇ ಕಾಳಜಿ ಅನಸ್ತದ ನನಗ."

"ನನ್ನ ಜಾತಕದಾಗ ನನಗ ಎಂಬತ್ತು ವರ್ಷ ಆಯುಷ್ಯ ಅಂತದ. ಏನೂ ಕಾಳಜಿ ಮಾಡಬ್ಯಾಡ."

"ಈ ಜಾತಕಾ-ಗೀತಕದಾಗ ನನಗ ಏಷ್ಟೂ ನಂಬಿಕಿಲ್ಲ ನೋಡು. ಈ ಜ್ಯೋತಿಷಿಗಳೆಲ್ಲಾ ಮಹಾ ಮೋಸಗಾರರು. ನೀ ಇಷ್ಟ ಕಲ್ತು ಇನ್ನೂ ಅಂಥಾದೆಲ್ಲಾ ನಂಬ್ತೀಯಾ ? ನಾ–"

–ಗಿರಿಜಾನ ಮಾತನ್ನು ಅರ್ಧಕ್ಕೇ ತಡೆದು ಹಾಸಿಗೆಯಿಂದ ಟಣ್ಣನೆ ಜಿಗಿದಳು ರೇಖಾ, "ಓ, ನಾಲ್ಕ ಗಂಟೆ. ನಾ ಲಗೂ ತಯಾರಾಗಬೇಕು. ಒಂದs ದಿವ್ಸ ಇಬ್ಬಿಬ್ಬರ ಕೂಡ engagement ಇದ್ದರ ಭಾಳ ಫಜೀತಿ. ಜಗನ್ನಾಥನ್ ನಾ ಸಲ್ವಾರ-ಕಮೀಜ ಹಾಕ್ಕೋಬೇಕು ಅಂತ ಹೇಳ್ಯಾನ. ಸ್ಕೂಟರ್ ಮ್ಯಾಲ ಕೂಡ್ಲಿಕ್ಕೆ ಅನುಕೂಲ. ಆದರ ಶ್ರೀಧರಗ ಸೀರಿ ಸೇರ್‍ತದ. ಏನ್ಮಾಡ್ಲಿ ಶಾಂತಾ ?" –ಮೊಂಡು ಕೂದಲನ್ನು ಬಾಚಿಕೊಳ್ಳುತ್ತ ಕೇಳಿದಳು ರೇಖಾ. ನಂತರ ತನ್ನ ಸಮಸ್ಯೆಗೆ ತಾನೇ ಪರಿಹಾರ ಹುಡುಕಿದಳು, "ಹೋಗುವಾಗ ಸಲ್ವಾರ-ಕಮೀಜ ಹಾಕ್ಕೊಂಡು ಹೋಗ್ತೀನಿ. ಸೀರೀ ತಗೊಂಡು ಹೋಗಿರ್‍ತೀನಿ ಬ್ಯಾಗಿನೊಳಗ. ಶ್ರೀಧರನ ಕಡೆ ಹೋಗೋವಾಗ ಚೇಂಜ್ ಮಾಡಿದರಾತು."

–ಅರ್ಧ ಗಂಟೆಯ ನಂತರ ಮುಖದ ತುಂಬ ಬಣ್ಣ ಬಳಿದುಕೊಂಡು ಬಿಗಿಬಿಗಿ ಸಲ್ವಾರ-ಕಮೀಜ ತೊಟ್ಟು 'ಬಾಯ್' ಎಂದು ಕೈ ಕುಣಿಸಿ, ಮೈ ಮಣಿಸಿ ರೇಖಾ ಆಪ್ಟೆ ಹೊರಟುಹೋದ ನಂತರ ಉಸ್ಸೆಂದು ಉಸಿರುಬಿಟ್ಟಳು ಗಿರಿಜಾ.

"ಅಲ್ಲ ಶಾಂತಾ, ಜೋಶಿ ಹೇಳ್ತಿದ್ರು–"

"ಏನಂತ ? ರೇಖಾನ ಬಾಯ್‌ಫ್ರೆಂಡ್ಸ್ ಸುದ್ದಿ ಹೌದಲ್ರೋ ? ಅವ್ರು ಹೇಳಿದ್ರ ನೀ ಯಾಕ ಕೇಳಬೇಕು ?"

"ನಾ ಯಾಕ ಕೇಳ್ಲಿ ಮಾರಾಯಳs ? ಅವರು ತಾವs ಹೇಳತಾರ. ನನಗೇನ ಮಂದೀ ಸುದ್ದೀ ಮಾತಾಡೂದ್ರಾಗ interest ಇಲ್ಲಂತ ಗೊತ್ತಿಲ್ಲs ನಿನಗ ?"

"ನೀ ಎಂದರೆ ರೇಖಾನ್ನ ಯಾವನ ಜೋಡೀಅರೆ ನೋಡೀಯೇನು ?"

"ನಾ ನೋಡದಿದ್ರೇನಾತು ಶಾಂತಾ ? ನೋಡಿದವ್ರು ಹೇಳತಾರಲ್ಲ. ನನಗೆಲ್ಲಾ ಗೊತ್ತಾಗ್ತದ ಯಾರ ನೆಲಿ ಎಷ್ಟು ಅಂತ.... ಅರೆ ನೀ ಇಷ್ಟ್ಯಾಕ ತಯಾರಾಗಲಿಕ್ಹತ್ತೀ ?"

"ನಾಯೇನು ತಯಾರಾಗೀನಿ ? ಬರೇ ಒಂದ ಸಾದಾ ನೂಲಿನ ಸೀರಿ ಉಟ್ಟೀನಿ. ನಿನ್ಹಾಂಗ ಕರೀ ಕನ್ನಡಕ, ಲಿಪ್‌ಸ್ಟಿಕ್ಕು, ಥೋಡ್ಡ ವ್ಯಾನಿಟಿ ಬ್ಯಾಗು–ಏನೂ ಇಲ್ಲ....ನನಗೂ ಹೊತ್ತಾತು. ನಾ ಇನ್ನ ಬರಲ್ಯಾ ? ಬಾಯ್–"

*

**ಸಂಜೆ :**

ಖಾಲಿ ರೂಮು ತನ್ನನ್ನೇ ತಿನ್ನುವಂತೆ ಅನಿಸುತ್ತಿದೆ ಗಿರಿಜಾಗೆ. ಆಕೆ ಎದ್ದು ಕನ್ನಡಿಯ ಮುಂದೆ ನಿಂತಳು. ಉದುರಿಹೋಗುತ್ತಿರುವ ಕರಿಬಿಳಿ ಕೂದಲು ; ಮುಖದ ತುಂಬ ವಿವಿಧ ಆಕಾರದ ಕಲೆಗಳು ; ಬೇಡವಾದಲ್ಲಿ ತುಂಬಿ ಬೇಕಾದಲ್ಲಿ ಬಡವಾಗಿದ್ದ ದೇಹ ; ಅವಳಿಗೆ ಬೇಸರ ಅನಿಸಿತು. ಶಾಂತಾಳ ಟ್ರಿಮ್ ಫಿಗರ್ ನೆನಪಾಗಿ ಇನ್ನೂ ಬೇಸರ ಅನಿಸಿತು. ಶಾಂತಳನ್ನು 'ಬ್ರಿಲಿಯಂಟ್' ಎಂದು ಹೊಗಳಿದ ಅವಳ ಪ್ರೊಫೆಸರರ ಮೇಲೆ ವಿಪರೀತ ಸಿಟ್ಟು ಬಂತು. ಎಷ್ಟು ಹುಡುಗರು ಅವಳ ಹಿಂದಿಂದೆ –ಎಂದು ನೆನಪಾಗಿ ಇನ್ನೂ ಸಿಟ್ಟು ಬಂತು.

–ತನಗೆ ನಲವತ್ತು ಸಮೀಪಿಸುತ್ತಿದೆಯೆಂದು ಸಾರಿ ಹೇಳುವ ಕನ್ನಡಿಯಿಂದ ದೂರವಾಗಿ ಆಕೆ ಬಾಥ್‌ರೂಮಿಗೆ ಹೋಗಿ ಮುಖಕ್ಕೆ–ಮೈಗೆ ಬಡಬಡ ತಣ್ಣೀರು ಹುಯ್ದುಕೊಂಡಳು. ಥಣ್ಣಗೆ ಅನ್ನಿಸಿತು. ತಣ್ಣಗಿನ ನೀರಿನಿಂದ ಒಳಗಿನ ಬೆಂಕಿಯಾದರೂ ಕರಗೀತೆಂದು ಇನ್ನಷ್ಟು ನೀರು ಹುಯ್ದುಕೊಂಡಳು.

ಬೆಂಕಿ. ಎಂತಹ ಬೆಂಕಿ ಇದು ! ತಾನು ಪುಸ್ತಕ ಓದುವಾಗ, ಕಾಲೇಜಿನಲ್ಲಿ ಕಲಿಸುವಾಗ, ಲೈಬ್ರೆರಿಯಲ್ಲಿ reference ಗಾಗಿ ಹುಡುಕಾಡುವಾಗ– ಸದಾ ಸುಡುವ ಬೆಂಕಿ. ರೇಖಾ ತನ್ನ ಗೆಳೆಯರ ಸುದ್ದಿ ಹೇಳುವಾಗ, ಶಾಂತಾಳ ಹಿಂದೆ ನಾಯಿಗಳ ಹಾಗೆ ಬೆನ್ನಟ್ಟುವ ಗಂಡಸರ ಗುಂಪು ನೋಡುವಾಗ, ಜೋಶಿಯ ಕೂಡ ಮಾತಾಡುವಾಗ, ಕೆಳಗಿನ ಮನೆಯ ಕಿಡಿಕಿಯಿಂದ ಅಣ್ಣ-ಅತ್ತಿಗೆಯರ ಜೋಡುಮಂಚ ಕದ್ದು ನೋಡುವಾಗ– ಭುಗಿಲ್ಲೆನ್ನುವ ಬೆಂಕಿ. ಇದರಿಂದ ತನಗೆ ಬಿಡುಗಡೆಯೇ ಇಲ್ಲವೆ ?

ಓ, ಇಂದು ಸಂಜೆ ಎರಡು ಮಹತ್ವದ ಕೆಲಸ : ಡಾಕ್ಟರರನ್ನು ಕಾಣುವುದು ಮತ್ತು ಭಡಕಲಗಲ್ಲಿಯ ರಾಮಭಟ್ಟನನ್ನು ಕಾಣುವುದು.....

ಹತ್ತು ವರ್ಷದ ಹಿಂದೆ ಹೇಳಿದ್ದರು ತನ್ನ ತಂದೆಯ ಹಳೆಯ ಪರಿಚಯದ ಆ ಡಾಕ್ಟರು– "ಚಿಂತೀ ಮಾಡಬ್ಯಾಡ ಗಿರಿಜಾ, ಟೀಬೀ ಈಗೇನೂ ನೆಟ್ಟಗಾಗದ ಜಡ್ಡಲ್ಲ. Regularly ಔಷಧ ತಗೋ. ಇಂಜೆಕ್ಶನ್ ತಗೋ. ತಾನs ಗುಣಾ ಆಗತದ...."

ಅಂದಿನಿಂದ ಅವರ ಟ್ರೀಟ್‌ಮೆಂಟ್ ನಡೆದೇ ಇದೆ. ತನಗೆ ಗುಣವಾಗುತ್ತಲೇ ಇದೆ. ಯಾಕೋ, ಈಗೀಗ ಯಾರನ್ನು ನೋಡಿದರೂ ಅವರಿಗೆ ಟೀಬೀ ಆಗಿರಬೇಕು

ಅನಿಸುತ್ತದೆ ತನಗೆ. ಈ ಜಡ್ಡೇ ಅಂತಹದು, ಹೆಚ್ಚಾಗುವ ತನಕ ಗೊತ್ತೇ ಆಗುವುದಿಲ್ಲ. ರೇಖಾಗೆ ಇದ್ದರೂ ಇದ್ದೀತು. ಯಾರಿಗೆ ಗೊತ್ತು ?

—ತಯಾರಾಗಿ ಕೋಣೆಗೆ ಬೀಗ ತಗುಲಿಸಿ ಹೊರಬಿದ್ದಾಗ ಮತ್ತೆ ಮನಸ್ಸಿಗೆ ಒಂದು ಥರಾ ಮುಜುಗರ. ಶಾಂತಾ ಯಾಕೆ ಅಷ್ಟು ಫ್ಯಾಶನೇಬಲ್ ಕಾಣುತ್ತಾಳೆ ಸಾದಾ ಸೀರೆಯಲ್ಲಿ ? ಮೊಂಡ ಮೂಗಿನ ಗುಳ್ಳೆಗಣ್ಣಿನ ರೇಖಾಗೆ ಯಾಕೆ ಅಷ್ಟೊಂದು ಗಂಡಸರು ಮರುಳಾಗುವುದು ? ಈ ಗಂಡಸರು ಹೆಂಗಸಿನಲ್ಲಿ ಏನು ಬಯಸುತ್ತಾರೆ ಅನ್ನುವುದೇ ತನಗಿನ್ನೂ ತಿಳಿಯದಾಗಿದೆಯಲ್ಲ.... ಒಮ್ಮೆ Youth Festival ಗೆ ಧಾರವಾಡಕ್ಕೆ ಹೋದಾಗ ಪ್ರೊ. ಜೋಶಿ ಎಷ್ಟು ಸಮೀಪ ಬಂದಿದ್ದ ತನಗೆ.... ತಾನೇ ಅವನ ಹೋಟೆಲ್ ಬಿಲ್ಲು, ಕಾಫಿ ಬಿಲ್ಲು, ಸಿನೆಮಾಗೆ— ಎಲ್ಲಾ ಕೊಟ್ಟೆ. ಅವನ ಶಾಪಿಂಗಿಗೆ ಕೂಡ— ಎರಡು ಟೆರಿಲಿನ್ ಶರ್ಟು, ಅವನ ಹೆಂಡತಿಗೆ ಸೀರೆ ಇತ್ಯಾದಿ— ಹಣ ಕೊಟ್ಟೆ.... ಆದರೆ ಕೊನೆ ಗಳಿಗೆಯಲ್ಲಿ ಯಾಕೋ ದೂರ ಸರಿದ. ಟೀಬೀ ಕೆಟ್ಟ ಜಡ್ಡು ಎಂದೇ ? ಅವನು ಮೂರ್ಖ. ಅದು ಸಾಂಸರ್ಗಿಕ ಅಲ್ಲ ಅಂತ ಬೇಕಾದರೆ ಸಿದ್ಧಮಾಡಬಲ್ಲೆ. ಬೆಟ್ !

—ಆತ ಒಮ್ಮೆ ಹ್ಞೂ ಅಂದಿದ್ದರೆ....

ಸಂಜೆ ತಂಪಾಗಿದೆ. ದಿನಾ-ದಿನಾ ಲೈಬ್ರರಿಗೆ ಹೋಗಲು ಬೇಸರ. ತನ್ನ ಹೆಡ್ ಬಾ ಅಂತ ಹೇಳಿಲ್ಲ ಖರೆ, ಆದರೂ ಒಮ್ಮೆ ಹೋದರೆ.... ಯಾಕೋ ಅವರ ಹೆಂಡತಿಗೆ ತನ್ನನ್ನು ಕಂಡರೆ ಆಗುವುದಿಲ್ಲ. ಒಮ್ಮೆ ತಾನಿನ್ನೂ ಅವರ ಗೇಟು ದಾಟಿ ಹೊರ ಬರುವ ಮೊದಲೇ ತನಗೆ ಕೇಳಿಸುವ ಹಾಗೆಯೇ ಅಂದಿರಲಿಲ್ಲವೇ— 'ಯಾಕಿವಳು ಬಂದು ಹೊತ್ತಲ್ಲದ ಹೊತ್ತಿನ್ಯಾಗ ತ್ರಾಸ ಕೊಡ್ತಾಳೆ' —ಅಂತ ? ಅಲ್ಲಿಗೆ ಬೇಡ. ಅದರ ಬದಲು ಭಡಕಲಗಲ್ಲಿಗೆ ಹೋಗಿ ರಾಮಭಟ್ಟನನ್ನು ಕಾಣುವುದು ಒಳ್ಳೆಯದು.

—ಇಡೀ ಜಗತ್ತಿನಲ್ಲಿ ಈ ರಾಮಭಟ್ಟ ಜ್ಯೋತಿಷಿಯೊಬ್ಬನೇ sensible ಮನುಷ್ಯ ಅನಿಸುತ್ತದೆ. ಪ್ರತಿಸಲ ಹೋದಾಗ ತನ್ನ ಕೈ ನೋಡುತ್ತಾನೆ. ಕಾಗದದ ಮೇಲೆ ಏನೇನೊ ಗೆರೆ ಎಳೆಯುತ್ತಾನೆ. 'ರಾಹು-ಕೇತು-ಮಂಗಲ-ಶನಿ' ಅಂತ ಮಣಮಣ ಅನ್ನುತ್ತಾನೆ. ಕವಡೆ ಎಸೆಯುತ್ತಾನೆ. ಕಣ್ಣು ಮುಚ್ಚಿ ಎರಡು ನಿಮಿಷ ಧ್ಯಾನಸ್ಥನಾಗುತ್ತಾನೆ. ಅವನು ಅಷ್ಟೆಲ್ಲ ಮಾಡುತ್ತಿರುವಾಗ ತನ್ನ ಎದೆ ಮಧುರ ಆತುರದಿಂದ ಹೊಡಕೊಳ್ಳುತ್ತಿರುತ್ತದೆ. ನಂತರ ಅವನು ಒಮ್ಮೆಲೆ ಕಣ್ಣು ತೆರೆದು ಹೂಂಕರಿಸುತ್ತಾನೆ : "ಚಿಂತೀ ಬಿಟ್ಟಬಿಡ್ರಿ ಹಿರೇಮಠಬಾಯೀ, ನಾಳಿನ ವೈಶಾಖದಾಗ-ತಪ್ಪಿದರ ಮುಂದಿನ ಮಾಘದಾಗ ನಿಮ್ಮ ಕಲ್ಯಾಣ ಆಗ್ಲಿಕ್ಕೇ ಬೇಕು. ಹೂವಿನ ಸರಾ ಎತ್ತಿಧಾಂಗ ಸರಳ ಆಗತದ. ಉತ್ತಮ ವರಾ ಸಿಗತಾನ. ಈ ಸರೆ ಆತಂತs ತಿಳೀರಿ."

ನಂತರ ತಾನು ಕೊಡುವ ಐದೋ ಹತ್ತೋ ರೂಪಾಯಿಯ ನೋಟನ್ನು ತೀರ ನಿರ್ಲಿಪ್ತ ಮುದ್ರೆಯಿಂದ ಸ್ವೀಕರಿಸಿ, ಪಟಕ್ಕನೆ ಪೆಟ್ಟಿಗೆಯಲ್ಲಿ ಹಾಕಿ, ತನ್ನ ಬೃಹದಾಕಾರದ ಹೊಟ್ಟೆಯ ಮೇಲೆ ಕೈಯಾಡಿಸಿಕೊಳ್ಳುತ್ತ 'ಹರೇ ರಾಮ ಹರೇ ರಾಮ' ಅನ್ನುತ್ತಾನೆ.

ಹಲವು ವರ್ಷಗಳಿಂದ ನಡೆದುಬಂದಿದೆ ಇದು. ಆದರೂ ಪ್ರತಿ ರವಿವಾರ ಸಂಜೆ ಅಲ್ಲಿಗೆ ಬಂದಾಗ ತನಗೆ ಹೊಸ ಹುರುಪು ಬರುತ್ತದೆ. ನಡುನಡುವೆ ಅವನು ತನಗಾಗಿ ನವಗ್ರಹ ಪೂಜೆ, ಮಹಾಕಾಲಿ ಪೂಜೆ ಇತ್ಯಾದಿ ಮಾಡಿ, ಹೆಚ್ಚಿನ ದಕ್ಷಿಣೆ ಪಡೆದು, ಪ್ರಸಾದ ಕೊಟ್ಟು, 'ಶೀಘ್ರ ಸುಮಂಗಲೀ ಭವ' ಅಂತ ಹರಸಿದಾಗಲಂತೂ ಕೃತಕೃತ್ಯಳಾದಂತಹ ಅನುಭವ....

ಅವನ ಕಡೆಗೇ ಮೊದಲು ಹೋಗುವುದು. ಅಲ್ಲಿಂದ ತಿರುಗಿ ಬರುವಾಗ ಬೇಕಾದರೆ ಜೋಶಿಯ ಮನೆಗೆ ಹೋಗಿ ತಾನೆಂದೂ ಕಾಣದ ರೇಖಾನ ಗೆಳೆಯರ ಬಗ್ಗೆ, ಶಾಂತಾನ ಸೊಕ್ಕಿನ ಬಗ್ಗೆ, ಮತ್ತೆ ಅವರಿವರ ಚಾಲು ಕೆಟ್ಟ ಇದ್ದ ಬಗ್ಗೆ ಮಾತಾಡಿ (ಜೋಶಿಗೆ ಅದೆಲ್ಲಾ ಸೇರುವುದಿಲ್ಲ. ಆದರೂ ಒಮ್ಮೊಮ್ಮೆ ಕೇಳುತ್ತಾನೆ ಸಮಾಧಾನದಿಂದ–) ರಾತ್ರಿ ೯ ರ ಸುಮಾರಿಗೆ ಮನೆಗೆ ಹೋದರಾದೀತು.

–ಗಿರಿಜಾ ಧಪಧಪ ಹೆಜ್ಜೆ ಹಾಕಿದಳು.

*

ರೇಖಾ ರೂಮು ಬಿಟ್ಟು ಎರಡು ತಾಸು ಕಳೆದಿದೆ. ಟಿಳಕವಾಡಿಯಲ್ಲಿಯ ತನ್ನ ಮಾಂಸಿಯ ಮನೆಯ ಹತ್ತಿರವಿರುವ ಡಾಕ್ಟರ್‌ರ ಮಕ್ಕಳಿಗೆ ಟ್ಯೂಶನ್ ಹೇಳಿ ಮುಗಿದಿದೆ. ಇನ್ನು ಆಚೆ ಓಣಿಗೆ ಇನ್ನೊಂದು ಟ್ಯೂಶನ್ ಹೇಳಲು ಹೋಗಬೇಕು. ಹಳ್ಳಿಯಲ್ಲಿರುವ ಮುದುಕಿ ತಾಯಿಗೆ ರೈತರು ಇರುವ ಚೂರು ಹೊಲದ ಉತ್ಪನ್ನ ಏನೂ ಕೊಡುವುದಿಲ್ಲ. ತಮ್ಮಂದಿರು ಉಢಾಳರಾಗಿ ತಿರುಗುತ್ತಿದ್ದಾರೆ. ತಂಗಿಯ ಲಗ್ನ ಆಗಬೇಕು. ಹಣದ ಅಡಚಣೆ ಈಗೀಗ ಬಹಳವಾದುದರಿಂದ ಆಫೀಸಿಗೆ ರಜೆ ಇರುವ ರವಿವಾರ ಸಂಜೆ ಆಕೆ ಎರಡು ಟ್ಯೂಶನ್ ಹೇಳತೊಡಗಿದ್ದಾಳೆ. ಮಾಂಸಿಯ ಸಹಾಯದಿಂದ ಸಿಕ್ಕದ್ದು ಈ ಟ್ಯೂಶನ್. ತಂಗಿಗೆ ವರ ನೋಡಲು ಹೇಳಬೇಕು ಮಾಂಸಿಗೆ. ತಂಗಿಯ ಲಗ್ನವಾದರೂ ಆಗಲಿ. ತನ್ನನ್ನು ಯಾರೂ ಪಾಸು ಮಾಡಲಿಲ್ಲೆಂದು ಅವಳೂ ಏಕೆ ಲಗ್ನವಿಲ್ಲದೆ ಕೂಡಬೇಕು ?

ದಣಿವು. ಬಸ್ಸಿಗೆ ಯಾಕೆ ಮೂವತ್ತು ಪೈಸೆ ದಂಡವೆಂದು ಇಷ್ಟು ದೂರ ನಡೆದೇ ಬಂದದ್ದರಿಂದ ಕಾಲು ನೋಯುತ್ತಿವೆ. ಬ್ಯಾಗಿನಲ್ಲಿಯ ಸೀರೆಯ ಭಾರ ಬೇರೆ.... ಸೀರೆಯ ಜೊತೆಗೇ ನೆನಪಾಗುತ್ತದೆ ಶ್ರೀಧರ ಕುಲಕರ್ಣಿಯ ಹ್ಯಾಂಡಸಮ್

ಪರ್ಸನ್ಯಾಲಿಟಿ. ಆಫೀಸಿನಲ್ಲಿ ಕೆಲಸ ಮಾಡುವ ಎಲ್ಲರಿಗಿಂತ ಎತ್ತರ, ಗೋದಿಬಣ್ಣದ, ನಗುವ ಕಣ್ಣುಗಳ, ಮಿಂಚುಗೂದಲಿನ ತರುಣ. ಅವನು ನಸುಬಾಗಿ 'ಹಲೋ' ಅನ್ನುವ ಸೊಗಸೇ ಸೊಗಸು. ಉಳಿದವರ ಹಾಗೆ ಚೆಲ್ಲು-ಚೆಲ್ಲು ಅಲ್ಲ ಆತ. ಯಾರೊಂದಿಗೂ, ಎಲ್ಲರಿಗಿಂತ ಚೆಂದ ಇರುವ ವಸುಧಾ ದಾಶರಥಿಯು ಕೂಡ ಸಹ, ಆತ ಮಾತನಾಡುವುದಿಲ್ಲ. ಅವನಾಯಿತು, ಅವನ ಕೆಲಸವಾಯಿತು. ತನಗಂತೂ ಅವನನ್ನು ನೋಡಿದರೆ ಎದೆಯಲ್ಲಿ ಏನೋ ಲಾಗಹಾಕಿ, ಗಂಟಲಿಗೆ ಬಂದು ಕೂತು, ಉಸಿರು ಕಟ್ಟಿಸಿದ ಹಾಗೆ ಅನಿಸುತ್ತದೆ. ಅವನೋ, ತಾನಾಗಿ ಹೋಗಿ ಮಾತಾಡಿಸುವ ಪ್ರಯತ್ನ ಮಾಡಿದರೂ ಒಮ್ಮೆ ಸಹ ಮಾತಾಡಿಲ್ಲ ತನ್ನ ಕೂಡ....

ಇನ್ನು ಆ ಜಗನ್ನಾಥನ್. ಶ್ರೀಮಂತ ಅಂತ ಗರ್ವ ಅವನಿಗೆ. ಅವನ ಔಟಿಂಗ್‌ಗಳ ಕಥೆ ಆಫೀಸಿಗೆಲ್ಲ ಚಿರಪರಿಚಿತ. ಅವನ speciality ಅಂದರೆ ಪ್ರತಿ ವಾರ ಒಬ್ಬ ಹೊಸ ಹುಡುಗಿಯನ್ನು ಕರೆದೊಯ್ಯುವುದು, ಮತ್ತು ಆ ಹುಡುಗಿ ಕಳೆದ ವಾರದ ಹುಡುಗಿಗಿಂತ ಹೆಚ್ಚು ಸುಂದರಿಯಾಗಿರುವುದು. ನೋಡಲು ಸಾದಾ ಇದ್ದ ಹುಡುಗಿಯರು ಅವನ ಕಣ್ಣಲ್ಲೇ ಕಾಣುವುದಿಲ್ಲ..... ಬಹಳ ರಸಿಕನಿದ್ದಿರಬೇಕು ಆತ. ಒಮ್ಮೆ ಅವನೊಂದಿಗೆ ಹೋಗಿ ಬಂದ ವಸುಧಾ ಏನೆಲ್ಲ ಹೇಳಿದ್ದಳಲ್ಲ-ಪೂನಾ ರೋಡಿನ ಗುಂಟ ಇರುವ ಅಡವಿ, ಎತ್ತರ ಬೆಳೆದ ಕಂಟಿಗಳು, ನಡುವೆ ಹುಲ್ಲು ಹಾಸಿಗೆ, ಜಗನ್ನಾಥನ್‌ನ ಪ್ರಾವೀಣ್ಯ- ಛೀ ಛೀ, ನಾಚಿಕೆಯಿಲ್ಲ ಆ ಹಾಳಾದವಳಿಗೆ. ಎಲ್ಲಾ ಹೇಳಿದಳು-ತಾನೇನೋ ಮಹಾ ಜಗತ್ತೇ ಗೆದ್ದು ಬಂದ ಹಾಗೆ.

ಜಗನ್ನಾಥನ್ ತನ್ನ ಕಡೆ ತಪ್ಪಿ ಸಹ ನೋಡುವುದಿಲ್ಲ. ಅವನೇ ಏಕೆ, ಆಫೀಸಿನಲ್ಲಿ ಯಾರೂ ನೋಡುವುದಿಲ್ಲ.

–ತುಂಬ ಬೇಸರದಿಂದ ರೇಖಾ ತನ್ನ ಕಪ್ಪು ಡೊಳ್ಳು ಮೈ, ಮೊಂಡ ಮೂಗು, ಉಬ್ಬಿದ ಹಲ್ಲು ಸವರಿಕೊಂಡಳು.

ಟ್ಯೂಶನ್‌ಗೆ ಹೊತ್ತಾಯಿತು. ಅದು ಮುಗಿಸಿ ಮಾಂಸಿಯ ಮನೆಗೆ ಹೋಗಿ ತಂಗಿಯ ವರದ ವಿಷಯ ಹೇಳಿ, ಆಕೆ ಊಟ ಮಾಡು ಅಂದರೆ ಅಲ್ಲೇ ಊಟ ಮಾಡಿ, ತಿರುಗಿ ರೂಮಿಗೆ ಹೋಗುವಾಗ ೩೦ ಪೈಸೆ ಹೋದರೂ ಅಡ್ಡಿಯಿಲ್ಲ, ಬಸ್ಸಿನಿಂದ ಹೋಗಬೇಕು.

*

ಹೋಟೆಲ್ ಗ್ರೀನ್ಸ್‌ಗೆ ಬಂದ ಶಾಂತಾ ಲೌಂಜ್‌ನಲ್ಲಿ ನಿಂತು ಅತ್ತಿತ್ತ ನೋಡಿದಳು. ಗಂಟೆ ಏಳು. ಅವಳಿಗಿಂತ ಅರ್ಧ ತಾಸು ಮೊದಲೇ ಬಂದಿರಬೇಕಾದ ಡಾ. ಪ್ರಭಾಕರ ಇನ್ನೂ ಪತ್ತೆಯಿಲ್ಲ. ನಿನ್ನೆ ವಾರ್ಡಿನಿಂದ ತಾನು ಹೊರಗೆ ಬಂದಾಗ

ತನ್ನ ಹಿಂದೆಯೇ ಬಂದು ಪಿಸುಧ್ವನಿಯಲ್ಲಿ ಆದರೂ ಸ್ಪಷ್ಟವಾಗಿ ಹೇಳಿದ್ದ ಆತ, "ಹೋಟೆಲ್ ಗ್ರೀನ್ಸ್, ಆರೂವರೆ. ಹೊರಗೇ ಕೂತಿರ್‍ತೀನಿ. ಸ್ವಲ್ಪ ಕತ್ತಲಾದ ಮ್ಯಾಲ ಬಾ."

ಡಾ. ಪ್ರಭಾಕರ ಬಹಳ prompt. ಹಾಗೆಲ್ಲ ಉಳಿದವರ ಹಾಗೆ ಒಬ್ಬರಿಗೆ appointment ಕೊಟ್ಟು ಬೇರೊಬ್ಬರ ಜೊತೆ ಹೋಗುವ ಮನುಷ್ಯ ಅಲ್ಲ ಆತ. ಡಾಕ್ಟರಾದವರಿಗೆ ಇಂಥ punctuality ಬೇಕು. ಇಂಥ sincerity ಬೇಕು.

ಆದರೆ ಇವತ್ತೇನಾಯಿತು ಅವನಿಗೆ ?

"ಮೇಮ್‌ಸಾಬ್ ಅಂದರ್ ಬೈಠ್ ಸಕತೇ ಹೈ" – ಯೂನಿಫಾರ್ಮಿನ ಅಟೆಂಡಂಟ್ ಮೃದು ಸ್ವರದಲ್ಲಿ ಹೇಳುತ್ತಾನೆ. ಇನ್ನೇನು ಮಾಡುವುದು, ಈ ಪ್ರಭಾಕರನ ಸಲುವಾಗಿ ಡಾ. ಪಾಟೀಲ್‌ಗೂ ಆಗುವುದಿಲ್ಲ ಅಂತ ಹೇಳಿದೆನಲ್ಲ. ಸಂಜೇ ಎಲ್ಲ ವ್ಯರ್ಥ – ಎಂದು ಶಾಂತಾ ಪೇಚಾಡುತ್ತಿದ್ದಾಗ ಮೂಲೆಯ ಟೇಬಲಿನಿಂದ ಬಂತು ಒಂದು ಧ್ವನಿ, "ಹಲೊ ಮಿಸ್. ಚಿಟ್ನೀಸ್."

– ಶಾಂತಾ ತಿರುಗಿ ನೋಡಿದಳು. ಗದ್ದಲದಿಂದ ದೂರ ಒಬ್ಬನೇ ಬಿಅರ್ ಕುಡಿಯುತ್ತ ಕೂತಿದ್ದ ಆತ, ಹೊಸದಾಗಿ ಬಂದಿದ್ದ ಅಸಿಸ್ಟಂಟ್ ಕಮೀಶನರ್, ಒಮ್ಮೆ ಪೇಶಂಟಾಗಿ ಬಂದಿದ್ದ ತಮ್ಮ ಕಾಲೇಜಿನ ಹಾಸ್ಪಿಟಲಿಗೆ. ಹೆಸರೇನೋ ಎಂಥದೋ ವರ್ಮಾ. ಉತ್ತರದವನಿರಬೇಕು. ಇನ್ನೂ ಪ್ರೊಬೇಶನರಿ. ಲಗ್ನವಾಗಿಲ್ಲ. ಕಟ್ಟುಮಸ್ತಾಗಿ ಮಿಲಿಟರಿಯವನ ಹಾಗಿದ್ದಾನೆ. ಸಂಜೆ ಇವನೊಂದಿಗೆ ಕಳೆಯುವುದಾದರೆ ಎಷ್ಟು ಸುಂದರವಾದೀತು....

– ಮುಂದೆ ಹತ್ತು ನಿಮಿಷದ ನಂತರ ಶಾಂತಾ ವರ್ಮಾನೊಂದಿಗೆ ಅವನ ಕಾರಿನಲ್ಲಿ.

ವೇಗವಾಗಿ ಓಡುತ್ತಿದ್ದ ಕಾರು ನಡುವೆಲ್ಲೋ ಗಕ್ಕನೆ ನಿಂತಾಗ, ಇದೇನು, ಬಂದೇಬಿಟ್ಟಿತೇ ಇವನ ಮನೆ– ಅಂದುಕೊಂಡು ಹೊರಳಿ ನೋಡಿದ ಶಾಂತಾ ವರ್ಮಾ ಕಾರಿನಿಂದಿಳಿದು ಬದಿಯಲ್ಲಿನ ಮೆಡಿಕಲ್ ಶಾಪ್ ಹೊಕ್ಕದ್ದು ನೋಡಿ 'ಓ' ಅಂದು ಪುನಃ ಸೀಟಿಗೊರಗಿದಳು.

"ಅಂದಹಾಗೆ ನಿಮ್ಮ first name ಏನು ವರ್ಮಾಜೀ ?"

ಬಲಗೈಯಿಂದ ಡ್ರೈವ್ ಮಾಡುತ್ತ ಎಡಗೈಯನ್ನು ಫ್ರೀಯಾಗಿ ಅವಳ ಮೇಲೆ ಹರಿಬಿಟ್ಟು ಉತ್ತರಿಸಿದ ಆತ, "ಚಿನ್ಮಯ".

ಚಿನ್ಮಯಾನಂದಜೀಯ ಭಾಷಣದ ನೆನಪಾಗಿ ಶಾಂತಾ ಕಿಸಕ್ಕನೆ ನಕ್ಕಳು.

ಕಾರು ಓಡುತ್ತಿತ್ತು.

# ಹನುಮಾಪುರದಲ್ಲಿ ಹನುಮಜಯಂತಿ

೧

ಹನುಮಜಯಂತಿಯು ದಿನ ಮುಂಜಾನೆ ಹನುಮಾಪುರದ ಚಾವಡಿಯಲ್ಲಿ ಸಾಧಾರಣ ದೊಡ್ಡದೇ ಅನ್ನಬಹುದಾದ ಜನರ ಗುಂಪೊಂದು ಸೇರಿತ್ತು. ಕೆಲವರ ಮುಖಗಳಲ್ಲಿ ಹೇಳತೀರದ ರೋಷ ; ಇನ್ನು ಕೆಲವರಲ್ಲಿ ಅಷ್ಟೇ ತೀವ್ರವಾದ ಹಟ ; ಉಳಿದ ಬಹಳ ಜನರಲ್ಲಿ ಕುತೂಹಲ. ಸೇರಿದ ಜನರಲ್ಲಿ ರಾಮಗೌಡರು, ಗೋಪಾಲಾಚಾರ್ಯರು, ಸರಪಂಚ ಶಂಕರಶೆಟ್ಟರು ಮುಂತಾದ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲ ಬಿಸಿರಕ್ತದವರೇ. ಗಂಟೆ ಇನ್ನೂ ಎಂಟೇ ಆಗಿದ್ದರೂ ಬೇಸಿಗೆಯ ಉರಿಬಿಸಿಲು ಮೈ-ನೆತ್ತಿ ಸುಡುತ್ತಿತ್ತು. ಬರಿಯ ಪಂಚೆ ಅಥವಾ ಧೋತ್ರ ಮಾತ್ರ ಉಟ್ಟಿದ್ದ ಆ ಜನಗಳ ಕರಿಯ ಬಣ್ಣ ಬಿಸಿಲಿಗೆ ಮಿಂಚುತ್ತಿತ್ತು. ಆದರೆ ಯಾರಿಗೂ ಬಿಸಿಲಿನ ಪರಿವೆ ಇದ್ದಂತಿರಲಿಲ್ಲ. ಕಾರಣ– ಮೊದಲನೆಯದಾಗಿ, ಅವರೆಲ್ಲ ಹನುಮಾಪುರದಲ್ಲೇ ಹುಟ್ಟಿ ಬೆಳೆದವರು. ಅಲ್ಲಿಯ ಕರಿಮಣ್ಣಿಗೆ ಉರಿಬಿಸಿಲಿಗೆ ಹೊಂದಿಕೊಂಡು ಜೀವನ ನಡೆಸುತ್ತಿದ್ದವರು. ಎರಡನೆಯದಾಗಿ, ಇಂದು ಮುಂಜಾನೆ ಅವರು ಯಾರೂ ಬಿಸಿಲಿನ ಪರಿವೆ ಮಾಡುವ ಮನಸ್ಥಿತಿಯಲ್ಲಿರಲಿಲ್ಲ. ಅವರೆಲ್ಲ ಇಲ್ಲಿ ಸೇರಿದ್ದು ಕಳೆದ ವರ್ಷವಿಡೀ ಊರಲ್ಲಿ, ಊರ ಜನದ ಮನದಲ್ಲಿ ಹೊಗೆಯಾಡುತ್ತಲಿದ್ದು ಇಂದು ಒಮ್ಮೆಲೇ ಭುಗಿಲ್ಲೆಂದ ಸಮಸ್ಯೆಯೊಂದರ ಸೋಕ್ಷಮೋಕ್ಷವನ್ನು ಇತ್ಯರ್ಥ ಮಾಡಲೆಂದು. ಹನ್ನೆರಡು ಗಂಟೆಗೆಲ್ಲ ಊರಿನ ಹನುಮಂತ ದೇವರ ತೇರು ಹೊರಡಬೇಕು. ಅಷ್ಟರೊಳಗಾಗಿ ಸಮಸ್ಯೆ ಬಗೆಹರಿಯಬೇಕು. ಅಂತೆಯೇ ಜನರೆಲ್ಲ ಪಂಚರ ಸಮೇತವಾಗಿ ಚಾವಡಿಯಲ್ಲಿ ಸೇರಿದ್ದರು.

ಜಗಳಕ್ಕೆ ಕಾರಣ ಗುಡಿಯಲ್ಲಿ ಕಲ್ಲಾಗಿ ನಿಂತ ಹನುಮಂತದೇವರು. ಹನುಮಾಪುರದ ಹನುಮಂತ ಸುತ್ತಲೆಲ್ಲ ಬಹಳ ಪ್ರಸಿದ್ಧಿ ಪಡೆದ, ಜಾಗೃತವೆನ್ನಿಸಿದ ದೇವರು. ಸಾಕ್ಷಾತ್ ಶ್ರೀರಾಮದೇವರು ಅವತಾರ ಸಮಾಪ್ತಿ ಮಾಡುವ ಮುನ್ನ ತಮ್ಮ ಭಕ್ತಾಗ್ರೇಸರನಾದ ಹನುಮಂತನನ್ನು ಕರೆದು ಆತ ಕಲಿಯುಗದಲ್ಲಿ ಪಾಪೀ ಜನರ ಕಲ್ಯಾಣಾರ್ಥವಾಗಿ ಹನುಮಾಪುರದಲ್ಲಿ ನೆಲೆಸಬೇಕೆಂದು ಅಪ್ಪಣೆ

ಕೊಡಿಸಿದರೆಂದೂ ಸ್ವಾಮಿಯ ಆಜ್ಞಾಪಾಲನೆಗಾಗಿ ಹನುಮಂತ ರಾಮಾಯಣ ಕಾಲದಿಂದಲೇ ಇಲ್ಲಿ ನೆಲೆನಿಂತನೆಂದೂ ಸ್ಥಳಪುರಾಣ. ಆ ಹಳ್ಳಿಗೆ ಆ ಹೆಸರು ಬಂದಿದ್ದೂ ಈ ದೇವರಿಂದಲೇ. ಊರಿನ ಜನರ ಜೀವನದಲ್ಲಿ ಹನುಮಂತ ಒಂದಾಗಿ ಹೋಗಿದ್ದಾನೆ. ಆತನ ಅಪ್ಪಣೆ ಇಲ್ಲದೆ ಊರಲ್ಲಿ ಯಾರೂ ಏನೂ ಮಾಡುವುದಿಲ್ಲ. ಮಗಳ ಲಗ್ನ ನಿಶ್ಚಯ ಮಾಡಬೇಕಾದರೆ, ಹೊಲ ಮಾರಬೇಕಾದರೆ, ದಾಯಾದಿಯ ಸೊಕ್ಕು ಮುರಿಯಬೇಕಾದರೆ, ಮಳೆಯಾಗದಿದ್ದರೆ, ಎಮ್ಮೆ ಕಳೆದರೆ– ಎಲ್ಲಕ್ಕೂ ಹನುಮಂತನ ಪ್ರಸಾದ ಅವರಿಗೆ ಬೇಕು.

ಊರಿನ ಜನಸಂಖ್ಯೆ ಮೂರುನೂರಕ್ಕೂ ಕಡಿಮೆ. ಅವರಲ್ಲಿ ಒಂದು ಕಾಲುಭಾಗಕ್ಕಿಂತ ಕಡಿಮೆ ಬ್ರಾಹ್ಮಣರು ; ಇನ್ನೊಂದು ಕಾಲುಭಾಗಕ್ಕಿಂತ ತುಸು ಹೆಚ್ಚು ಲಿಂಗಾಯತರು ; ಉಳಿದವರು ಒಕ್ಕಲಿಗರು, ಹೊಲೆಯರು. ಬ್ರಾಹ್ಮಣರ ಮಣ್ಣಿನ ಮನೆಗಳೆಲ್ಲ ಗುಡಿಯ ಸುತ್ತಲಿನ, ಅಗಸೀ ಬಾಗಿಲ ಒಳಗಡೆಯ ಆವರಣದಲ್ಲಿ ; ಬಾಗಿಲಾಚೆ ಲಿಂಗಾಯತರ ಹಂಚಿನ ಮನೆಗಳು ; ಇದು ಬಿಟ್ಟು ಅರ್ಧ ಫರ್ಲಾಂಗಿನಾಚೆ ಕೆಳಜಾತಿಯವರೆನ್ನಿಸಿದವರ ಹಟ್ಟಿಗಳು.

ದೇವರ ಪೂಜಾರರು ಎಂದಿನಿಂದಲೂ ಶೆಟ್ಟರ ಮನೆತನದವರು. ಮುಂಜಾನೆ ಊರ ಬ್ರಾಹ್ಮಣರು ಊರಾಚೆಯ ನದಿಯಲ್ಲಿ ಸ್ನಾನ-ಅಹ್ನಿಕ ಮುಗಿಸಿ ಗುಡಿಗೆ ಬಂದು ಅಭಿಷೇಕ ಮಾಡಿ ಹೊರಗೆ ಬಂದ ನಂತರವೇ ಪೂಜಾರಿಯಾದ ಶೆಟ್ಟಿ ಹೊಳೆಗೆ ಹೋಗಿ ಜಳಕ ಮಾಡಿ ಒದ್ದೆಯಲ್ಲೇ ಗುಡಿಗೆ ಬಂದು ಪೂಜೆ ಮಾಡುವನು. ನಂತರದ ಆರತಿಗೆ ಎಲ್ಲರೂ ಸೇರುವರು. ವರ್ಷಕ್ಕೊಮ್ಮೆ ಬರುವ ಹನುಮ ಜಯಂತಿ ಆ ಊರಿಗೆ ದೊಡ್ಡ ಹಬ್ಬ. ಅಂದು ಬ್ರಾಹ್ಮಣರು ದೇವರಿಗೆ ವಿಶೇಷ ಪಂಚಾಮೃತ ಅಭಿಷೇಕ, ಪವಮಾನಹೋಮ ಮಾಡುವರು. ನಂತರ ನೂರಾರು ವರ್ಷಗಳ ಹಿಂದಿನ ಹಳೆಯ ಕಟ್ಟಿಗೆಯ ತೇರು ವಾದ್ಯವೈಭವಗಳೊಂದಿಗೆ ಅಗಸಿಯಿಂದ ಹೊರಟು, ಊರಲ್ಲಿ ಒಂದು ಸುತ್ತು ಹಾಕಿ, ಗುಡಿಯ ಎದುರಿಗೆ ಬಂದು ನಿಲ್ಲುವುದು. ತೇರಿನಿಂದ ಉತ್ಸವಮೂರ್ತಿಯನ್ನು ಕೆಳಗಿಳಿಸಿದ ನಂತರ ಗುಡಿಯೊಳಗೆ ತರುವ ಮುನ್ನ ಮೊದಲು ಊರಿನ ಹಿರಿಯ ಗೋಪಾಲಾಚಾರ್ಯರು ತೆಂಗಿನಕಾಯಿ ಒಡೆದು ಮಂಗಳಾರತಿ ಮಾಡುವರು. ನಂತರ ಇನ್ನೊಬ್ಬ ಹಿರಿಯ ರಾಮಗೌಡರು ಎರಡನೇ ಕಾಯಿ ಒಡೆಯುವರು. ಅವರ ಮನೆಯ ಹೆಂಗಸರು ಆರತಿ ಬೆಳಗುವರು. ಇದು ಪುರಾತನ ಕಾಲದಿಂದಲೂ ನಡೆದುಬಂದ ಸಂಪ್ರದಾಯ.

ಇಂದಿನ ಜಗಳಕ್ಕೆ ಕಾರಣವೂ ಇದೇ. ಪಟ್ಟಣದಿಂದ ಅಲ್ಪಸ್ವಲ್ಪ ವಿದ್ಯೆ ಕಲಿತು ಬಂದ ರಾಮಗೌಡರ ಕಿರಿಯ ಮಗ ವೀರಭದ್ರಗೌಡ ಹಾಗೂ ಆತನ ಚಮಚಾಗಳಾದ

ಹಳ್ಳಿಯಲ್ಲಿನ ಇತರ ಕೆಲ ಅನ್ಯ ಜಾತಿಯ ತರುಣರು ಒಂದು ವರ್ಷದಿಂದಲೂ ನ್ಯಾಯವೆಬ್ಬಿಸಿದ್ದರು –ಉತ್ಸವ ಮೂರ್ತಿಗೆ ಮೊದಲ ಕಾಯನ್ನು ಯಾವಾಗಲೂ ಬ್ರಾಹ್ಮಣರೇ ಏಕೆ ಒಡೆಯಬೇಕು ? ದೇವರ ಪೂಜೆ ಮಾಡುವವರು ಶೆಟ್ಟರು ; ದೇವಾಲಯದ ಟ್ರಸ್ಟಿನ ಚೇರ್‌ಮನ್‌ರು ಗೌಡರು ; ಹಬ್ಬ-ಹುಣ್ಣಿಮೆ-ಉತ್ಸವಗಳಂದು ಗುಡಿಯ ಪೌಳಿಯಲ್ಲಿ ಮಂಟಪ-ದೀಪ ಹಾಕುವವರು, ಅಲಂಕಾರ ಮಾಡುವವರು, ಎಲ್ಲ ವೆಚ್ಚ ಹೊರುವವರು, ಅಯ್ಯನವರು ; ದಿನಾ ಗುಡಿಯ ಕಸ ಬಳಿಯುವ ದೇವದಾಸಿಯರು, ಶನಿವಾರಕ್ಕೊಮ್ಮೆ ಪಾಲಕಿಯ ನಂತರ ಸಂಗೀತ ಸೇವೆ ಸಲ್ಲಿಸುವವರು, ಹೊಲೆಯರು. ಹೀಗಿದ್ದಾಗ ದೇವರೊಂದಿಗೆ ಏನೂ ಸಂಬಂಧವಿಲ್ಲದ ಈ ಬ್ರಾಹ್ಮಣರಿಗೇಕೆ ಮೊದಲು ಕಾಯಿ ಒಡೆಯುವ ಹಕ್ಕು ? ಇಷ್ಟು ವರ್ಷ ಊರಿನ ಬ್ರಾಹ್ಮಣರು ಅಲ್ಪ ಶ್ರಮದಿಂದ ಅತಿ ಲಾಭ ಅನುಭವಿಸಿದ್ದು ಸಾಕು. ಲಿಂಗಾಯತರೇಕೆ ಕಡಿಮೆ ? ರಾಮಗೌಡರೇಕೆ ಮೊದಲು ಕಾಯಿ ಒಡೆಯಬಾರದು ? ಈಗ ಕಾಲ ಬದಲಾಗಿದೆ. ಮೊದಲಿನ ಹಾಗೆ ಬ್ರಾಹ್ಮಣರು ತಾವೇ ಶ್ರೇಷ್ಠರೆಂದು ಸಾಧಿಸುವ ಹಾಗಿಲ್ಲ. ಹಾಗೆನ್ನುವವರನ್ನು ಗುಂಡಿಕ್ಕಿ ಕೊಲ್ಲಬೇಕು. ನಮ್ಮ ಹಕ್ಕುಗಳಿಗಾಗಿ ನಾವು ಹೋರಾಡಬೇಕು. ಇಷ್ಟು ದಿನ ನಮಗೆ ಅನ್ಯಾಯವಾಗಿದೆ. ಇನ್ನು ನಾವು ಸುಮ್ಮನಿರುವುದಿಲ್ಲ. ಈ ಸಲ ರಾಮಗೌಡರಿಂದಲೇ ಮೊದಲು ಕಾಯಿ ಒಡೆಸತಕ್ಕದ್ದು. ಇದು ವೀರಭದ್ರಗೌಡ ಹಾಗೂ ಸಂಗಡಿಗರ ಹಟ.

ಗೋಪಾಲಾಚಾರ್ಯರ ಏಕಮೇವ ಪುತ್ರ ಕೇಶವಾಚಾರಿಗೆ ಹಾಗೂ ಉಳಿದ ಬ್ರಾಹ್ಮಣರಿಗೆ ಇದು ದೊಡ್ಡ ಅವಮಾನ. ಪ್ರಾಣದೇವರು ಅಂದರೇನು, ಈ ಶೂದ್ರರು ಪ್ರಾಣದೇವರೊಂದಿಗೆ ತಮ್ಮ ಸಂಬಂಧ ಜೋಡಿಸುತ್ತಾರೆಂದರೇನು– ಎಂದು ಅವರು ಕುದಿಯುತ್ತಿದ್ದಾರೆ. ತಲೆತಲಾಂತರದಿಂದ ತಮಗೆ ಸಲ್ಲುತ್ತ ಬಂದ ಈ ಗೌರವ ಕಸಿಯಲು ಈ ಮಕ್ಕಳು ಎಷ್ಟರವರು ? ಇವರ ಯೋಗ್ಯತೆಯೇನು ? ಸ್ತೋತ್ರವಿಲ್ಲದೆ, ಮಂತ್ರವಿಲ್ಲದೆ, ಮಂಗಲಾಷ್ಟಕವಿಲ್ಲದೆ, ಮೊಹರಮ್‌ದಲ್ಲಿ ಮುಸಲರು ಅಲ್ಲಾ ದೇವರ ಮುಂದೆ ಹಾರೆಯಿಂದ ತೆಂಗಿನಕಾಯಿ ಒಡೆಯುವ ಹಾಗೆ ಇವರು ಕಾಯಿ ಒಡೆದರೆ ಪ್ರಾಣ ದೇವರು ಸ್ವೀಕರಿಸಿಯಾರೆ ? ಇಂಥ ಅನ್ಯಾಯವನ್ನೆಂದಿಗೂ ಆಗಗೊಡಬಾರದು. ಇದು ಬ್ರಹ್ಮಮತ.

ಹೊತ್ತು ಏರುತ್ತ ಬಂದಿತ್ತು. ಗುಂಪು ಬಿಟ್ಟು ತುಸು ದೂರ ಕುಳಿತ ಮುದುಕ ರಾಮಗೌಡರ ಮುಖದಲ್ಲಿ ಏನೋ ಕಳವಳ. ಎಲ್ಲ ನೋಡುತ್ತ ಸುಮ್ಮನೆ ಕೂತ ಗೋಪಾಲಾಚಾರ್ಯರಿಗೂ ಎಲ್ಲೋ ಏನೋ ತಪ್ಪುತ್ತಿದೆ ಎಂಬ ಅನಿಸಿಕೆ.

'ನಾವೇನ ಕೇಳಾಕಿಲ್ಲ ಬಿಡ್ರಿ ಈ ಸರೆ. ಕಾಯಿ ನಾವs ಒಡೆಯಾವ್ರು. ಯಾ ಮಗಾ

ಅಡ್ಡ ಬರತಾನೋ ನೋಡ್ತೀವಿ.' –ಬಿಸಿಲು ಏರಿದಂತೆ ವೀರಭದ್ರಗೌಡನ ಧ್ವನಿ ಏರುತ್ತಿತ್ತು.

'ಅಧ್ಯಾಂಗ ಒಡೀತೀರಿ ? ಶಾಸ್ತ್ರಸಮ್ಮತ ಆಗೂದಿಲ್ಲ ಅದು. ಪ್ರಾಣದೇವರು ಒಪ್ಪೂದಿಲ್ಲ ಅದ್ನ' ಕೇಶವಾಚಾರಿಯ ವಾದ.

'ಆಹಾಹಾ ಆಚಾರೀ, ರಾಮನವಮೀ ದಿನಾ ಊರ ಪ್ರಸ್ತ ಆದಾಗ ಹಿತ್ತಲಬಾಗಿಲಿಂದ ಮರಾ ತುಂಬಾ ಉಂಡೀ ಕಳವು ಮಾಡಿಕೊಂಡ ಹೋಗತೀಯಲ್ಲ. ಒಪ್ಪತಾನೇನು ದೇವರು ಅದನ್ನ ?'

'ನನ್ನ ತಪ್ಪ ತಗೀತೀಯಾ ಅಯೋಗ್ಯ ? ನಿನ್ಹಾಂಗ ಎಲ್ಲಾರ ಹೊಲಾ ಒತ್ತೀ ಇಟಗೊಂಡ, ಎರಡು ದುಡ್ಡ ಸಾಲಕ್ಕ ನಾಕು ದುಡ್ಡು ಬಡ್ಡೀ ಹಾಕಿ ಮಂದೀ ರಕ್ತಾ ಹೀರೂದಿಲ್ಲ ನಾನು.'

'ಬಿಡಬಿಡಲೇ, ಗೊತ್ತೈತ ನೀವು ಆಚಾರೆಪ್ಪಗೋಳು ಮಡೀಯಿಂದ ತೀರಥಾ ತಗೊಂಡು ಬಂದು ಹೊತ್ತ ಮುಳುಗಿದ ಮ್ಯಾಲೆ ಹುಸೇನಿಸಾಬೀ ಹಟ್ಟಿಗೆ ಹೋಗಿ ಕಂಟ್ರೀ ಡೀಪೋ ಕುಡಿಯೂದು.'

'ಮಗನs, ನೀವೆಲ್ಲಾ ಶಿವಪೂಜಾ ಮಾಡಿ ಬಂದು ಅದೇ ಹಟ್ಯಾಗ ಕೋಳೀ ಹೊಡೀತೀರಲ್ಲ, ಕಂಡಿಲ್ಲೇನು ನಾವು ?'

ಸುಮ್ಮನಿರುವುದು ಇನ್ನು ಸಾಕು ಎನಿಸಿತು ಶಂಕರಶೆಟ್ಟರಿಗೆ : ''ತಮ್ಮಗೋಳ್ಯಾ, ಇದು ರೀತಿ ಅಲ್ರೆಪಾ. ನಾವು ಎದಕ್ಕ ಇಲ್ಲಿ ಕೂಡೇವಿ ಅದನ್ನ ಮದ್ಲ ನಿಶ್ಚೇ ಮಾಡೂಣು. ಏಟೊತ್ತಾತು, ತೇರು ಹೊಂಡಬೇಕು ಇನಾ.' ಗೋಪಾಲಾಚಾರ್ಯರೂ ದನಿಗೂಡಿಸಿದರು : 'ಹೌದು, ರಥೋತ್ಸವದ ವ್ಯಾಳ್ಯಾ ಮೀರಬಾರದು. ಹೀಂಗ ನೀವು ಬಡಿದಾಡೂದು ಬಿಟ್ಟು ಹಿರೇರಿಗೆ ಬಿಡ್ರಿ ಎಲ್ಲಾ, ಪಂಚರು ಹೇಳಿಧಾಂಗ ನಡಕೋಳ್ರಿ. ಕಲ್ಯಾಣ ಆಗತದ. ಹಾಂಗ ನೋಡಿದ್ರ ಪ್ರಾಣದೇವರಿಗೇ ಕೇಳಬೇಕಿತ್ತು ಈ ಪ್ರಶ್ನೆ. ನೀವು ಹಟಾ ಹಿಡಿದೀರಂತ ಪಂಚರು ಕೂಡ್ಯಾರ.'

ವೀರಭದ್ರಗೌಡ, ಕೇಶವಾಚಾರಿ ಸುಮ್ಮನಾದರೂ ಗುಂಪಿನಲ್ಲಿ ಗದ್ದಲ ನಡೆದೇ ಇತ್ತು. ಪಂಚರು ಸಮಾಲೋಚನೆಗೆ ಕೂತಾಗ ಅವರ ಮಾತು ಕೇಳಿಸದಷ್ಟು ಗದ್ದಲ. ತಮ್ಮ ತಮ್ಮ ಪಕ್ಷಗಳಿಗೆ ಜಯ ದೊರಕಿಸಲು ಎರಡು ಗುಂಪುಗಳವರಿಗೂ ಪೈಪೋಟಿ. ಪರಸ್ಪರರ ಮೇಲಿನ ಆರೋಪಗಳಿಗಂತೂ ಕೊನೆಯೇ ಇಲ್ಲ.

ಅರ್ಧ ತಾಸಿನ ನಂತರ, ಇನ್ನು ನಂತರ ಉತ್ಸವ ಮೂರ್ತಿಯ ಎದುರಿಗೆ ಒಂದು ಕಡೆ ಗೋಪಾಲಾಚಾರ್ಯರ ಕಡೆಯುವರೂ ಇನ್ನೊಂದು ಕಡೆ ರಾಮಗೌಡರ ಕಡೆಯವರೂ ಕೂಡಿಯೇ ಏಕ ಕಾಲಕ್ಕೆ ಕಾಯಿ ಒಡೆಯಬೇಕೆಂದು ಪಂಚರು ತೀರ್ಪಿತ್ತಾಗ

ಗದ್ದಲ ಒಮ್ಮೆಲೇ ಜೋರಾಯಿತು. 'ಇಲ್ಲ, ಶಕ್ಯ ಇಲ್ಲ, ನಾವs ಮೊದಲ', 'ಅದ್ಯಾಕಾದೀತು ? ಇಷ್ಟ ದಿನಾ ಅವರ್ದಾತು, ಇನ್ನ ನಾವು ಮೊದ್ಲ ಒಡೆಯಾವ್ರು', 'ಶಿವಶಿವಾ', 'ಹರಿಹರೀ' -ಗಳ ಮಧ್ಯೆ ಯಾರ ಮಾತೂ ಯಾರಿಗೂ ಕೇಳಿಸದಂತಾಯಿತು.

೨

ಮಧ್ಯಾಹ್ನ ಹನ್ನೆರಡೂವರೆ. ದೇವರ ತೇರು ಸಾಲಂಕೃತವಾಗಿ ತುತ್ತೂರಿ-ಶಹನಾಯಿಗಳೊಂದಿಗೆ ಊರಿನ ಎಲ್ಲ ಜನರ ನಡುವಿನಿಂದ ಹಾಯ್ದು ಗಂಭೀರವಾಗಿ ಗುಡಿಯ ಮುಂದೆ ಬಂದು ನಿಂತಿತು. ಏನಾಗುವುದೋ ಎಂದು ಎಲ್ಲರ ಎದೆಗಳಲ್ಲಿ ಧಡಧಡಿಕೆ. ಹೆಂಗಸರಿಗಂತೂ ವಿಪರೀತ ಕುತೂಹಲ. ಹನ್ನೆರಡು ವರ್ಷಗಳಿಂದ ಹಾಸಿಗೆ ಹಿಡಿದಿದ್ದ, ತೊಂಬತ್ತು ದಾಟಿದ ರಂಗಜ್ಜಿ ಸಹ ಕುತೂಹಲ ತಾಳದೆ ಮೊಮ್ಮಗಳ ಸಹಾಯದಿಂದ ಬಾಗಿಲಿಗೆ ಬಂದು ಕೂತಿದೆ. ಎಂದೂ ಮಂದಿಯಲ್ಲಿ ಬಂದು ಮುಖತೋರದ, ಹದಿನೆಂಟರಲ್ಲೇ ಬೋಳಮ್ಮನಾಗಿ ಕೂತ ಸುಶೀಲಾ, ವೇದಮೂರ್ತಿ ಶ್ರೀನಿವಾಸಾಚಾರ್ಯರ ಕಿರಿಮಗಳು, ಇಂದು ಹೊರಬಂದು ಅಶ್ವತ್ಥಕಟ್ಟೆಯ ಮರೆಗೆ ನಿಂತು ನೆರೆದವರನ್ನು ನೋಡುತ್ತಿದ್ದಾಳೆ. ಸದಾ ಲಿಂಗಪೂಜೆಯಲ್ಲಿ ಹೊತ್ತುಗಳೆಯುವ ರಾಮಗೌಡರ ಹೆಂಡತಿ ಹಿರಿಯ ಗೌಡಶಾನಿ ತನ್ನ ಮಡಿ ಮರೆತು ಹೊಲತಿ ಕಾಳಿಯ ಪಕ್ಕದಲ್ಲೇ ನಿಂತಿದ್ದಾಳೆ. ತೇರಿನ ಎದುರಿಗೆ ಎಡಗಡೆ ರಾಮಗೌಡ, ಅವರ ಹಿಂದೆ ಅವರ ಮಕ್ಕಳು, ಉಳಿದ ಲಿಂಗಾಯತರು, ಒಕ್ಕಲಿಗರು, ಬಲಗಡೆ ಗೋಪಾಲಾಚಾರ್ಯರು ಹಾಗೂ ಉಳಿದ ಬ್ರಾಹ್ಮಣವೃಂದ.

'ಪಟ್ಟಣಕ್ಕೆ ಹೋಗಿ ಛಲೋ ರಾಜಕೀಯ ಕಲ್ತು ಬಂದಾನ ವೀರಭದ್ರ. ಮೂರೂ ಹೊತ್ತು ಬಡದಾಡಿ ಸಾಯತಿದ್ದ ಈ ಒಕ್ಕಲಿಗ್ಯಾರ ಜೋಡೀ. ಈಗ ನಮ್ಮನ್ನ ಮೆಟ್ಟಿ ಹಾಕಲಿಕ್ಕೆ ಹ್ಯಾಂಗ ಇವರ್ನೆಲ್ಲಾ ಕೂಡಿಸಿಕೊಂಡಾನ ನೋಡ್ರಿ.' —ಕೇಶವಾಚಾರಿ ತಡೆಯದೇ ಅಂದ. ವೀರಭದ್ರನ ಉತ್ತರ ಬಾಣದಂತೆ ಹಾರಿ ಬಂತು, 'ಈ ರಾಜಕೀಯಾ ಕಲ್ಯಾಕ ಎಲ್ಲ್ಯೂ ಹೋಗಬೇಕಾಗಿಲ್ಲ. ಇವೆಲ್ಲಾ ಇದ್ಯಾ ಕಲಿಸಾಕ ಅದೀರೆಲಾ ನೀವು ಹಾರೂರ ಮಂದಿ.' ಕೇಶವಾಚಾರಿ ಏನೋ ಅನ್ನಬೇಕು, ಆದರೆ ಅಷ್ಟರಲ್ಲಿ ಉತ್ಸವ ಮೂರ್ತಿಯನ್ನು ಕೆಳಗಿಳಿಸಲಾಯಿತು. 'ಹ್ಞ, ಗೌಡ್ರು, ಮುಂದಾಗ್ರಿ', 'ಆಚಾರs, ನಡೀರಿ ಮುಂದ'-ಗಳ ಮಧ್ಯೆ ಕೈಯಲ್ಲಿ ಕಾಯಿ ಹಿಡಿದ ರಾಮಗೌಡರು ಗೋಪಾಲಾಚಾರ್ಯರ ಕಡೆ ನೋಡಿದರು. ಒಮ್ಮೆಲೆ ಅವರಿಗೆ ಬಹಳ ವರ್ಷಗಳ ಹಿಂದೆ ತಾವಿಬ್ಬರೂ ಹುಡುಗರಾಗಿದ್ದಾಗ, ಒಮ್ಮೆ ಕೆರೆಯ ದಂಡೆಯ ಮಾವಿನ ತೋಪಿನಲ್ಲಿ ಹೀಚುಗಾಯೊಂದನ್ನು ಗುಬ್ಬಿ ಎಂಜಲು ಮಾಡಿ ತಿಂದದ್ದು ನೆನಪಾಯಿತು.

ಗೋಪಾಲಾಚಾರ್ಯರ ಕೈಯಲ್ಲಿನ ಕಾಯಿ ಕೈಯಲ್ಲೇ ಇತ್ತು. ಕಣ್ಣು ರಾಮಗೌಡರ ಕಣ್ಣಲ್ಲಿ. ಎರಡೂ ಗುಂಪುಗಳ ಜನಕ್ಕೆ ಈ ಮೌನ ಅಸಹ್ಯವಾಗಿ ಒಮ್ಮೆಲೇ ನೂಕುನುಗ್ಗಲು ಪ್ರಾರಂಭವಾಯಿತು. ಹೋ ಎಂಬ ಅರಚಾಟದಲ್ಲಿ ರಾಮಗೌಡರ ಹಿಂದಿನಿಂದ ಮುಂದೆ ನುಗ್ಗಿದ ಒಬ್ಬಾತ ಅವರ ಕೈಯಲ್ಲಿನ ಕಾಯಿ ಕಸಿದು ಒಡೆದ. ಕಾಯಿ ಒಡೆಯಿತೋ ಇಲ್ಲವೋ ಮುಗಿಲುಮುಟ್ಟುವಂತೆ ಕಿರುಚಿತು ಆಚಾರ್ಯರ ಹಿಂದಿನ ಜನ. ಗದ್ದಲದಲ್ಲಿ ಆಚಾರ್ಯರ ಕೈಯಲ್ಲಿನ ಕಾಯಿ ಎಲ್ಲಿ ಬಿತ್ತೋ, ಮುಂದೆ ನುಗ್ಗಿದ ಕೇಶವಾಚಾರಿಯ ಗುದ್ದು ಯಾರ ಬೆನ್ನ ಮೇಲೆ ಬಿತ್ತೋ, ವೀರಭದ್ರನ ಕೈಯಲ್ಲಿಯ ಲಾಠಿ ಯಾರ ಕಾಲು ಮುರಿಯಿತೋ, ಯಾರು ಯಾರ ತಲೆ ಒಡೆದರೋ, ಯಾರು ಬ್ರಾಹ್ಮಣರೋ, ಯಾರು ಶೂದ್ರರೋ, ಒಟ್ಟು ಗುಡಿಯ ಆವಾರವೆಲ್ಲ ರಣರಂಗ.

–ಎಲ್ಲದಕ್ಕೆ ಮೂಕಪ್ರೇಕ್ಷಕನಾಗಿ ನಿಂತಿದ್ದ ಗುಡಿಯಲ್ಲಿನ ಆಂಜನೇಯ.

೩

ಅಂದು ಸಂಜೆ ಹೊಲದಿಂದ ಸೀದಾ ಮನೆಗೆ ಬಂದ ವೀರಭದ್ರ ಗೌಡ. ದಿನಾ ದಾರಿಯಲ್ಲಿನ ಬಸಪ್ಪನ ಚಾದಂಗಡಿಯಲ್ಲಿ ಬೆಂಚಿನ ಮೇಲೆ ಕುಕ್ಕುರುಗಾಲು ಹಾಕಿ ಕೂತು ಚಹಾ ಕುಡಿಯುತ್ತ ಸಂಜೆ ತಾಸೆರಡು ತಾಸು ಕಳೆಯುವುದು ಅವನ ವಾಡಿಕೆ. ಆಗ ಊರಿನ ಇತರ ಲಿಂಗಾಯತ ಹುಡುಗರೂ ಅಲ್ಲಿ ನೆರೆಯುವರು. ಅವರಿಗೆಲ್ಲ ಆತ ಇತ್ತೀಚೆಗೆ ಹನುಮಾಪುರದ ಹೊರಗೆ ಜಗತ್ತಿನಲ್ಲಿ ಹೇಗೆ ಅನ್ಯ ಜಾತಿಯ ಜನ ಮುಂದೆ ಬರುತ್ತಿದ್ದಾರೆ, ಹೇಗೆ ಈ ಹೊಸ ಜಗತ್ತಿನಲ್ಲಿ ಮೊದಲಿನ ಹಾಗೆ ಎಲ್ಲದಕ್ಕೂ ಬ್ರಾಹ್ಮಣರ ಕಡೆ ನೋಡಬೇಕಾದ ಪ್ರಸಂಗ ಇಲ್ಲವೇ ಇಲ್ಲ, ಹೇಗೆ ಹೊಸ ಕ್ರಾಂತಿಯೊಂದು ಸುರುವಾಗಿದೆ, ಹೇಗೆ ಈ ಬ್ರಾಹ್ಮಣರನ್ನು ಎಲ್ಲ ರೀತಿಯಿಂದ ದೂರವಿರಿಸಿದಾಗ ಮಾತ್ರ ತಮ್ಮ ಉದ್ಧಾರ ಸಾಧ್ಯ– ಇತ್ಯಾದಿ ಬಗ್ಗೆ ಆವೇಶದಿಂದ ಹೇಳುತ್ತಿದ್ದ. ಈಗೀಗ ಈ ಸಭೆಗೆ ಒಕ್ಕಲಿಗರೂ ಬಂದು ಸೇರುತ್ತಿದ್ದರು. ಆದರೆ ಇಂದು ಮಧ್ಯಾಹ್ನದ ಗದ್ದಲದಿಂದ ಆತನ ಮನಸ್ಸು ವ್ಯಗ್ರವಾಗಿತ್ತು. ಅಂತೆಯೇ ಆತ ಸೀದಾ ಮನೆಗೆ ನಡೆದುಬಂದ. ಕಟ್ಟೆಯ ಮೇಲೆ ಹುಕ್ಕಾ ಸೇದುತ್ತ ಕೂತ ಅಪ್ಪನ ಕಡೆ ನೋಡದೆ, ಒಳಗಡೆ ಜಗುಲಿಯ ಮೇಲಿನ ಒಂದು ಮೂಲೆಯಲ್ಲಿ ಎಂದಿನಂತೆ ನರಳುತ್ತ ಬಿದ್ದುಕೊಂಡಿದ್ದ ಸದಾರೋಗಿ ಹೆಂಡತಿಯನ್ನು ಮಾತಾಡಿಸದೆ, ಸೀದಾ ಒಳಗೆ ಹೋದ. ಅಡಿಗೆ ಮನೆಯನ್ನು ತೊಳೆಯುತ್ತಿದ್ದ ತಾಯಿಯನ್ನು ನೋಡಿದಾಗ ಇಂದೇಕೋ ಸಂಜೆಯ ಹೊತ್ತಿನಲ್ಲಿ ಇಡೀ ಮನೆಯನ್ನು ತೊಳೆದಿದ್ದು ಆತನ ಲಕ್ಷ್ಯಕ್ಕೆ ಬಂತು.

ಮೂಲೆಯಲ್ಲಿನ ಬಚ್ಚಲಲ್ಲಿ ಕಾಲು ತೊಳೆಯುತ್ತಿದ್ದಂತೆ ಆತ ಕೇಳಿದ, 'ಇದೇನಬೇ ಯವ್ವ, ಚೆಂಜೀ ಹೊತ್ತಿನ್ಯಾಗ ಮನೀ ತೊಳ್ಯಾಕ ನಿಂತೀದಿ ?'

ಸರ್ರನೆ ಮಗನ ಕಡೆ ತಿರುಗಿದಳು ಗೌಡಶಾನಿ, 'ನೀ ಬಂದ್ಯಾ ಯಪ್ಪಾ ? ಮದ್ಯಾನದಾಗ ನಿನ್ನ ಕರ್‍ಯಾಕ ಹಚಗೊಡಬೇಕು ಅಂತಿದ್ನಿ. ಯೇನ ಹೇಳ್ಲೀ, ನಿನ್ನ ಹೆಣ್ತಿ ಒಮ್ಮಿಕಿಲೇ ಕಣ್ಣ ಬೆಳ್ಳಗ ಮಾಡಿದ್ಲು, ಈ ಸುಡುಗಾಡ ಊರಾಗ ಒಬ್ಬ ದಾಗದಾರನs ಮಣ್ಣs ? ತಿರಗಾಮುರಗೀ ಆ ಗೋಪಾಲಾಚಾರೀ ಔಸೂದ್ದೇನs ಗತಿ, ಇವತ್ತ ಅಕಿನ್ನ ನೋಡಾಕ ಆ ಆಚಾರಿ ಒಳತನಾ ಬಂದಾ. ಏನ ಮಣ್ಣs ಕೊಟ್ಟಾ. ಜರಾ ಕಮ್ಮ ಆತು. ಈಗ ಮನಿಗ್ಯಾಳು. ಗಾಬರಾಸಿಬಿಟ್ಟೇವು ಎಲ್ಲಾರೂ. ಈ ವಾರಾ ಗಾಡೀ ಕಟ್ಟಿಸಿಗೊಂಡಕ್ಯಾಸಿ ಶಾರಕ್ಕ ಹೋಗಿ ಛಲೋ ದಾಗದಾರನ್ನ ಕರಕೊಂಡ ಬಾ. ಇಂಜೇಶನ್ನರ ಕೊಡ್ಲಿ. ಈ ಗೋಪಾಲಾಚಾರಿ ಮನೀಗೆ ಬರೂದೂ ಸಾಕು, ಮನೀ ಎಲ್ಲಾ ಈ ಹಾರೂರ ಮುದುವನಿಂದ ಮುಡಚೆಟ್ಟಾಗಿ ನಾ ಸತಗೋತ ತೊಳ್ಯೂದೂ ಸಾಕು.'

*

ಗೌಡರ ಸೊಸೆಗೆ ಚಿಕಿತ್ಸೆ ಮಾಡಿ ತಮ್ಮ ಬೇರು-ನಾರುಗಳ ಚಿಕ್ಕ ಪೆಟ್ಟಿಗೆಯನ್ನು ಹೊತ್ತು ಮನೆಗೆ ಹಿಂದಿರುಗಿದ ಗೋಪಾಲಾಚಾರ್ಯರು ಬಾಗಿಲಲ್ಲೇ ನಿಂತು ಹೆಂಡತಿಯನ್ನು ಕೂಗಿದರು, 'ಏ, ಈ ಪೆಟಿಗೀ ಒಳಗ ಒಯ್ದಿಡs ; ನಾ ಹೀಂಗ ಒಂದಿಷ್ಟ ಶ್ರೀನಿವಾಸಾಚಾರ್ಯರ ಕಡೆ ಹೋಗಿ ತುಳಸೀ ತಗೊಂಡ ಬರ್ತೀನಿ.'

ಹೊರಗೆ ನಿಂತು, ಬಾಗಿಲಿಗೆ ಬಂದ ಹೆಂಡತಿಗೆ ಪೆಟ್ಟಿಗೆ ಕೊಟ್ಟು ಹಾಗೆಯೇ ತಮ್ಮ ಅಂಗವಸ್ತ್ರದಲ್ಲಿ ಕಟ್ಟಿಕೊಂಡು ಬಂದಿದ್ದ ತಾಜಾ ರಾಜಗಿರಿ ಸೊಪ್ಪಿನ ಎರಡು ದೊಡ್ಡ ಸೂಡುಗಳನ್ನೂ ಅವಳಿಗೆ ಕೊಡುತ್ತಾ ಆಚಾರ್ಯರೆಂದರು, 'ಇಕಾ, ಹಿಡಿ. ನಾಳೆ ಪ್ರಾಣದೇವರ ನೇವೇದ್ಯಕ್ಕೆ ಪಲ್ಯಾ ಇಲ್ಲಾ- ಪಲ್ಯಾ ಇಲ್ಲಾ ಅಂತ ಜೀವಾ ತಿಂತಿದ್ದಿ. ಬಂತಿಲ್ಲೋ ಪಲ್ಯಾ ? ರಾಮಗೌಡಾ ಪಾಪ ಕೇಳದನs ಕೊಟ್ಟಾ.'

ತಟ್ಟನೆ ಪಲ್ಯದ ಸೂಡುಗಳನ್ನು ಬದಿಯ ಕಟ್ಟೆಯ ಮೇಲೆ ಚೆಲ್ಲಿ ಮುಖ ಸಿಂಡರಿಸಿ ಆಕೆ ಅಂದಳು, 'ಅಯ್ಯ ಸುಡ್ಲಿ, ಮೊದಲs ಹೇಳಬಾರ್ದ ? ನೀರ ಹಾಕಿ ಒಳಗ ತಗೋತಿದ್ದೆ. ನಿಮಗ ಹಜಾರ ಬ್ಯಾರೆ ಹೇಳೀನಿ. ಹಿಂಗ ಮೈಲಿಗೀ ಮಾಡಬ್ಯಾಡ್ರೀ ಅಂತ. ಸುಮ್ಮನ ರೊಕ್ಕಾ ಕೊಡೂ ಅನ್ರಿ ಅವ್ರಿಗೆ ಔಷಧ ಕೊಟ್ಟದ್ದಕ್ಕ. ಇಲ್ದಿದ್ರ ಔಷಧಾನs ಕೊಡಬ್ಯಾಡ್ರಿ. ಸಾಯ್ಲಿ ಸೂಳೇಮಕ್ಳು.'

ಬದಿಯಲ್ಲೇ ನಿಂತಿದ್ದ ಕೇಶವಾಚಾರಿ : 'ಹಾಂಗ ನೋಡಿದರ ಅವರ ರೊಕ್ಕಾನೂ ನಮಗ ಮೈಲಿಗೀನs, ಅಪ್ಪಾ ಶೂದ್ರರ ಮನೀಗೆ ಹೋಗೂದs ನನಗ ಸೇರೂದಿಲ್ಲ.

೪

ಅಂದು ರಾತ್ರಿ ಹನ್ನೆರಡು ಗಂಟೆ. ಹುಣ್ಣಿಮೆಯಾದರೂ ಯಾಕೋ ಒಮ್ಮೆಲೇ ಮಳೆ ಹನಿಯತೊಡಗಿದ್ದರಿಂದ ಅಮಾವಾಸ್ಯೆಯ ಹಾಗೆ ದಟ್ಟ ಕತ್ತಲು ಕವಿದಿತ್ತು. ಸುತ್ತಲಿನ ನಾಲ್ಕು ಮಾರುಗಳಾಚೆ ಏನೂ ಕಾಣಿಸದಷ್ಟು ಕತ್ತಲು. ಇಡಿಯ ಹಳ್ಳಿ–ಗುಡಿಯಲ್ಲಿನ ಹನುಮಂತ ಸಹ –ನಿದ್ರಿಸಿದಂತೆ ಕಾಣುತ್ತಿತ್ತು.

ಊರಾಚೆಯ ಕೆರೆಯ ದಂಡೆಯ ಮೇಲಿನ ಮಾವಿನ ತೋಪಿನಲ್ಲಿ ಈಶಾನ್ಯದ ಮೂಲೆಯ ಕಡೆ ದಾಪುಗಾಲು ಹಾಕುತ್ತ ನಡೆದಿದ್ದ ಕೇಶವಾಚಾರಿ. ನಡೆಯುತ್ತ ನಡೆಯುತ್ತ, ನಿಂತು ನಿಂತು ನೋಡುತ್ತ, ಮತ್ತೆ ಮುಂದೆ ನಡೆದಂತೆ ಆತನಿಗೇಕೋ ಇಂದು ತಾನು ದಾರಿ ತಪ್ಪಿದೆನೇ ಅನಿಸತೊಡಗಿತು. ತಾನು ಎಲ್ಲಿದ್ದೇನೆಂದು ಖಚಿತಪಡಿಸಿಕೊಳ್ಳಲು ಆತ ಒಂದು ನಿಮಿಷ ನಿಂತಲ್ಲೇ ನಿಂತು ಸುತ್ತ ನೋಡಿದ. ಹೆಜ್ಜೆಯ ಸಪ್ಪಳು. ಅದರೊಂದಿಗೇ ತುಂಬಿದ ತೋಳುಗಳೆರಡು ಹಿಂದಿನಿಂದ ಆತನನ್ನು ಬಳಸಿದವು : ‘ಇದೇನು ಆಚಾರೆಪ್ನೋರು ಇಂದ ದಾರೀನs ತೆಪ್ಪೀರಿ ? ದಿನದ ಜಾಗೇದಾಗ ಕುಂತ ಕುಂತ ಸಾಕಾಗಿ ಹುಡಿಕ್ಯಾಡಿಕೊಂತ ಬಂದೆ ನಾ. ಇಲ್ಲೆ ಬ್ಯಾಡ ನಡೀರಿ, ನಮ್ಮ ಜಾಗೇಕ್ಕ ಹೋಗೂಣು. ಏನ ಮರೆವs ನಂ ದೇವ್ರಿಗೆ–’ ಮಾತು ಮುಗಿಸಲು ಕೊಡದೆ ಹೊಲತಿ ಕಾಳಿಯನ್ನು ಬಿಗಿದಪ್ಪಿ ನೆಲದ ಮೇಲುರುಳಿದ ಕೇಶವಾಚಾರಿಗೆ ನಿಜವಾಗಿ ಎಲ್ಲ ಮರೆವಾಯಿತು.

ಒಮ್ಮೆಲೆ ಬೆಳದಿಂಗಳು ಮೂಡಿ ಬೆಳಕಾದುದರಿಂದ ಸಾವರಿಸಿಕೊಂಡು ಎದ್ದಳು ಕಾಳಿ- ‘ನಾ ಹೇಳ್ನಿಲ್ಲs ಈ ಆರೀದ ಜಾಗೇ ಬ್ಯಾಡ ಅಂತ ? ಏನs ಸಪ್ಪಳಾಕ್ಕೇತಿ ಆ ಕಂಟ್ಯಾಗ’ -ಎನ್ನುತ್ತ. ಹಾವು-ಗೀವು ಇದ್ದೀತೆಂದು ಅತ್ತ ತಿರುಗಿ ನೋಡಿದ ಕೇಶವಾಚಾರಿ ಆಕೆ ತೋರಿದ ದಿಕ್ಕಿನತ್ತ- ನೋಡುತ್ತಲೇ ಇದ್ದುಬಿಟ್ಟ : ಕಂಟಿಯೊಳಗಿನಿಂದ ಝಾಡಿಸಿಕೊಂಡು ಎದ್ದ ಮನುಷ್ಯಾಕೃತಿಗಳೆರಡು ಕೈಯಲ್ಲಿ ಕೈ ಸೇರಿಸಿ ಊರ ಕಡೆ ಮುಖಮಾಡಿ ಹೊರಟಿದ್ದವು. ಒಂದು ಗಂಡು ಮತ್ತು ಒಂದು ಹೆಣ್ಣು. ಹೌದು, ವೀರಭದ್ರಗೌಡ ಮತ್ತು-ಮತ್ತು ವೇದವಿದ್ಯಾ ಪಾರಂಗತ ಶ್ರೀನಿವಾಸಾಚಾರ್ಯರ ನಾಚುಬುರುಕ ಮುಗ್ಧ ಮಗಳು, ವಿಧವೆ ಸುಶೀಲಾ.

❖ ❖ ❖

# ಹೋಟೆಲ್ ಬ್ಲೂ

'ಗುಡ್ ಮೋರ್ನಿಂಗ್ ಅಂಕಲ್' – ಹಾಡಿದಂತೆ ಹೇಳುತ್ತ ಮಹಡಿಯ ಮೆಟ್ಟಲಿಳಿದು ಬಂದಳು ರೀಟಾ.

ಕೌಂಟರಿನಲ್ಲಿ ಕೂತಿದ್ದ ಜೋಸಫ್ ಕಣ್ಣು ಕಿರಿದುಗೊಳಿಸಿ ಆಕೆಯತ್ತ ನೋಡಿದ. ಉದ್ದಕ್ಕೂ ಹರವಿಕೊಂಡ ಅಲೆಗೂದಲು, ಇನ್ನೂ ನಿದ್ದೆಯ ಮಂಪರಿನಲ್ಲಿರುವ ನೀಲಿ ಕಣ್ಣುಗಳು, ಸುಕ್ಕಾಗಿದ್ದ ಫ್ರಾಕು, ಮುಖದಲ್ಲಿ ತೃಪ್ತಿಯ ನಗು.

'ಗುಡ್ ಮೋರ್ನಿಂಗ್ ರೀಟಾ, ಏನು, ನಿನ್ನೆಯ ಶೇಠಜೀ ಕೃಪಾ ಜೋರಿತ್ತಂತ ಕಾಣತೈತಿ ?'

'ಓಹ್, ಅದೊಂದು ಮುದಿಗೂಬೆ. ಬರೇ ಚಪಲ ಅದಕ್ಕ. ಬಾಸ್‌ನ ಫ್ರೆಂಡ್ ಅಂತ ಸುಮ್ಮ ಇದ್ದೆ ನಾನೂ. ಅಲ್ಲ, ಇವತ್ತ ಸಂಡೇ ಚರ್ಚ್ ಇಲ್ಲೇನು ನಿಮಗ ? ಇಷ್ಟ ಲಗೂ ಡ್ಯೂಟೀ ಸುರೂ ಮಾಡೀರಿ ?'

'ಚರ್ಚ್ ಮುಗಿಸಿಕೊಂಡs ಬಂದೀನಿ. ಇವತ್ತೊಂದು ಭಾರೀ ಪಾರ್ಟಿ ಆರ್ಡರ್ ಬರೂದೈತಿ ಆ ಅಯ್ಯಂಗಾರೀ ಕಡಿಂದ. ಮುಂಜಾನೆ ಲಗೂನ ಬಂದು ಡೀಟೇಲ್ಸ್ ಕೊಡ್ತೀನಿ ಅಂದಿದ್ದಂತ ಲಗೂ ಬಂದ ಕುಂತೀನಿ' – ತಿರುಗು ಕುರ್ಚಿಯಲ್ಲಿ ಮೆಲ್ಲಗೆ ತಿರುಗುತ್ತ ಉತ್ತರಿಸಿದ ಜೋಸಫ್.

'ಓ, ಆ ನ್ಯೂಸ್‌ಪೇಪರ್ ಎಡಿಟರನs ? ಉಫ್ ಅಂತ ಊದಿದರ ಗಾಳ್ಯಾಗ ಹಾರಿ ಹೋಗಾಂಗ ಅದಾನಲ್ಲಾ ?'

'ಶ್ ಸುಮ್ನಿರು. ಬಂದಗಿಂದಾನು. ನೋಡಾಕ ಹಾಂಗ ಕಂಡ್ರೂ ಭಾರೀ ಕುಳಾ ಈಗ ಅಂವಾ ಈ ಇಡೀ ಊರಾಗ. ಮನಸ್ಸು ಮಾಡಿದ್ರ ನಮ್ಮ ಬಾಸ್‌ನ ಈ ಹೋಟೇಲನs ಖರೀದಿ ಮಾಡ್ಯಾನು. ಎಮ್ಮೆಲ್ಲೆಗೋಳ್ನ ಬಿಡು, ಇವತ್ತ ಈ ಊರಿಗೆ ಬರೋ ಮಿನಿಸ್ಟರ ಸುದ್ಧಾ ಅಂಜತಾರ ಅಂವಗ.'

'ಅಂಥಾಂಗ ಗವ್ರ್ನರ್ನಮೆಂಟ್ ಗೆಸ್ಟ್‌ಹೌಸಿನಿಂದ ನಿನ್ನೆ ಸ್ನಾಕ್‌ಗೆ ಆರ್ಡರ್ ಬಂದಿತ್ತಲ್ಲ, ಸ್ನಾಕ್ ಮಾಡಿದ್ದೆಲ್ಲಾ ಹೊತ್ತ ಕಳಿಸಿದ್ರು ಬಾಸ್, ಈ ಮಿನಿಸ್ಟರ್ ಪಾರ್ಟಿಗೇ ಏನು ?'

'ನೀ ಇತ್ತಿತ್ಲಾಗ ಭಾಳ ಕಾರಭಾರ ಮಾಡಾಕ್ಹತ್ತೀ ರೀಟಾ, ಹೋಗಿ ಫ್ರೆಶ್ ಆಗಿ

ಬಾ. ಹೋಟೇಲಿಗೆ ರಶ್ ಇರ್ತತಿ. ಕೌಂಟರಿನ್ಯಾಗ ನೀನೂ ಬೇಕು.'

ಶಿಳ್ಳಿನಲ್ಲಿ ಇಂಗ್ಲಿಶ್ ಹಾಡು ಗುನುಗುನಿಸುತ್ತ ರೀಟಾ ಕುಣಿಯುತ್ತ ಒಳಗಡೆ ಮರೆಯಾಗುವುದನ್ನೇ ನೋಡುತ್ತಿದ್ದ ಜೋಸಫ್. ಆತನಿಗೆ ಒಂದು ಥರಾ ಅನ್ನಿಸಿತು. ತನ್ನ ಹಾಗೇ ದಾರಿ ತಪ್ಪಿದ ಬಾಳು ಈ ಹುಡುಗಿಯದು– ಅನ್ನಿಸಿತು. ಕಾರಣವಿಲ್ಲದೆ ಹಿಂದಿನದು ನೆನಪಾಗಿ ಕೆಟ್ಟೆನಿಸಿತು. ಬ್ರಿಟಿಶ್ ಕಾಲದಲ್ಲಿ ಫಿಲೊಸೊಫಿ ಎಮ್. ಎ. ಮಾಡಿದ್ದ ತಾನು ಈ ಹೊತ್ತಿಗೆ ಯಾವುದೋ ಯೂನಿವ್ಹರ್ಸಿಟಿಯಲ್ಲಿ ಪ್ರೊಫೆಸರಾಗಿದ್ದುಕೊಂಡು ಕನ್ನಡಕ ಹಾಕಿಕೊಂಡು ಕಾರಲ್ಲಿ ಕೂತುಕೊಂಡು ಪುಸ್ತಕ ಓದುತ್ತಾ ಹಾಯಾಗಿ ಓಡಾಡಿರಬಹುದಾಗಿತ್ತು. ಎಲ್ಲ ಬಿಟ್ಟು ಈ ಹೋಟೇಲ್ ಮ್ಯಾನೇಜರ್ ಕೆಲಸಕ್ಕೆ ಇಳಿದದ್ದು ಏಕೆ ? ಅದಕ್ಕೆ ಉತ್ತರವಿಲ್ಲ. ಹಾಗೆಯೇ ಈ ರೀಟಾ–ಎಲ್ಲ ಹೆಂಗಸರಂತೆ ಯಾರನ್ನೋ ಮದುವೆಯಾಗಿ ಮಕ್ಕಳನ್ನು ಆಡಿಸುತ್ತ ಇರುವುದು ಬಿಟ್ಟು ಈ ಹೋಟೇಲಲ್ಲಿ ಕ್ಯಾಬರೆ, ಮತ್ತೇನೇನೋ, ಮಾಡುತ್ತಿದ್ದಾಳೇಕೆ– ಅನ್ನುವುದಕ್ಕೂ ಉತ್ತರವಿಲ್ಲ. ಜೀವನದಲ್ಲಿ ಬಹಳ ಪ್ರಶ್ನೆಗಳಿಗೆ ಉತ್ತರವಿಲ್ಲ.

'ಹಲೋ ಮಿ. ಜೋಸಫ್',– ಅಂತ ಕೂಗಿಕೊಂಡು ಒಳಬಂದ ವೆಂಕಟೇಶ್ ಅಯ್ಯಂಗಾರ್, 'ಕಿಡಿ' ಪತ್ರಿಕೆಯ ಸಂಪಾದಕ– ಶುದ್ಧ ಖಾದೀ ಬಟ್ಟೆಯಲ್ಲಿ. ಆತನೊಂದಿಗೆ ಹಲವು ಪರಿಚಿತ ಮುಖಗಳು– ದಿನಾ ಇಲ್ಲಿಗೆ ಬರುತ್ತಿದ್ದವರೇ– ಡೊಳ್ಳು ಹೊಟ್ಟೆಯ ಸೋಶಿಯಲ್ ವರ್ಕರ್ ಕೇಸಕರ್ ; ಕೆದರಿದ ಕೂದಲ, ಗುರು ಶರ್ಟ್-ಬೆಲ್‌ಬಾಟಮ್ ಪ್ಯಾಂಟಿನ, ಕವಿ ಶಿವನಾಥ ಶೆಟ್ಟರ ; ಮತ್ತು ಹನ್ನೆರಡು ತಿಂಗಳಲ್ಲೂ ಫುಲ್‌ಸೂಟ್ ಹಾಕುವ ಪೊಲಿಟಿಕಲ್ ಸಾಯನ್ಸ್ ಪ್ರೊಫೆಸರು ಶಂಕರಪ್ಪ.

'ಹಲೋ ಹಲೋ, ಬರ್ರಿ ಸರ್, ಬರ್ರಿ ಬರ್ರಿ' ಅಂತ ಬಹಳ ಆರ್ಜವತೆಯಿಂದ ಸ್ವಾಗತಿಸಿದ ಜೋಸಫ್. ಅಯ್ಯಂಗಾರ್ ಕೌಂಟರಿನ ಬಳಿಯೇ ನಿಂತ. ಉಳಿದವರು ತಮ್ಮ ಠರಾವಿಕ ಜಾಗೆಯಾದ ಎಂದಿನ ಮೂಲೆಯ ಟೇಬಲಿಗೆ ಹೋಗಿ ಸುತ್ತುವರಿದು ಕೂತರು. ಅವರೆಲ್ಲ ಸೀರಿಯಸ್ಸಾಗಿ ಎಂಥದೋ ಚರ್ಚೆ ಮಾಡುತ್ತಿದ್ದ ಹಾಗಿತ್ತು.

'ಮಿ. ಜೋಸಫ್, ಇವೊತ್ತು ರಾತ್ರಿ ಒಂಬತ್ತು ಗಂಟೆಗೆ ನಮ್ಮ ಪಾರ್ಟಿ. ಜ್ಞಾಪಕಾ ಇದೆ ಅಲ್ವಾ ? ಒಟ್ಟು ಎಂಟು ಜನ. ಹೊರ್ಗಡೆ ಗಾರ್ಡನ್‌ನಲ್ಲೇ ಅರೇಂಜ್ ಮಾಡಿ.'

'ಹೊರಗಡೆ–' ಅನುಮಾನಿಸಿದ ಜೋಸಫ್.

'ಓ, ನೀವು ಭಯಪಟ್ಕೋಬೇಕಿಲ್ಲ. ಅವ್ರೆಲ್ಲ ತುಂಬ ಡೀಸೆಂಟ್ ಜನ. ಗಲಾಟೆ-ಗಿಲಾಟೆ ಮಾಡೋಲ್ಲ. ನಾನಿರ್ತೀನಲ್ಲ....'

'ಒಳ್ಳೇದು ಸರ್.'

'ನೋಡಿ, ಎಲ್ಲ ಜನ ಖುಶ್ ಆಗಿರ್ಬೇಕು.'

'ಅದೆಲ್ಲಾ ನನ್ನ ಜವಾಬ್ದಾರಿ ಬಿಡ್ರಿ. ಅಂಥಾಂಗ ಏನು ವಿಶೇಷ ಇವತ್ತ ?'

'ಮಿನಿಸ್ಟರ್ ಬರ್‍ತಾ ಇದಾರಲ್ಲಪ್ಪ–ಸಂಜೆ ನೆಹರೂ ಗ್ರೌಂಡ್ನಲ್ಲಿ ಸ್ಪೀಚ್ ಕೊಡೋಕೆ. ಊರೆಲ್ಲಾ ಪ್ರಿಪೇರ್ ಆಗ್ತಾ ಇದೆ. ನಾವು ನಮ್ಮ ಯುವಕ ಸಂಘದ ಪರವಾಗಿ ಕಪ್ಪು ಬಾವುಟಾ ತೋರಿಸಬೇಕು ಅಂತಿದೀವಿ ಅವ್ರಿಗೆ.'

'ಅಂದ್ರ ಭಾಷಣಾ ಮಾಡಿಸಿಕೊಡಾಂಗಿಲ್ರೀ ನೀವು ಅವ್ರಿಗೆ ?'

'ಅವ್ರ ಭಾಷಣಕ್ಕೆ ಬೆಂಕಿ ಬಿತ್ತು. ಈ ಮಿನಿಸ್ಟರ್ ಬಡ್ಡೀ ಮಕ್ಳು ಬರೀ ಭಾಷಣ ಬಿಗೀತಾ ತಿರಗ್ತಾ ಇರ್‍ತಾರೆ. ಹಾಗ್ಮಾಡ್ತೀವಿ, ಹೀಗ್ಮಾಡ್ತೀವಿ ಅಂತ ಆಶ್ವಾಸನೆ ಕೊಡ್ತಾನೇ ಇರ್‍ತಾರೆ. ಮಾಡೋದು ಮಾತ್ರ ಬರೀ ಭಾಷಣ. ನಮ್ಮ ದೇಶದ ಪರಿಸ್ಥಿತಿ ಕೆಟ್ಹೋಯ್ತು. ಇವ್ರನ್ನ ಹೀಗೇ ಬಿಟ್ರೆ ನಾವು ಪೂರಾ ಹಾಳಾಗ್ತೀವಿ. ಇವ್ರು ಮಾಡೋ ಅನ್ಯಾಯಾನ ಜನ ಕಣ್ತೆರೆದು ನೋಡ್ಲೀ ಅಂತ ನಮ್ಮ ಪ್ರಯತ್ನ.'

'ಒಳ್ಳೆ ಕೆಲ್ಸ ಸರ್ ನಿಮ್ದು'– ಅಂದ ಜೋಸಫ್, ಬೇರರ್ ತಂದು ಕೊಟ್ಟ ಯಾರದೋ ಬಿಲ್ಲಿನ ಹಣವನ್ನು ಪೆಟ್ಟಿಗೆಯೊಳಗೆ ತೂರುತ್ತ. ಮೂಲೆಯ ಟೇಬಲಿಂದ ಜೋರಾಗಿ 'ಶಟಪ್' ಅಂತ ಕೇಳಿಬಂತು. ಅಯ್ಯಂಗಾರ್‌ನ ಲಕ್ಷ್ಯ ಆ ಕಡೆ ಹೋಯಿತು. ಇವನಿಲ್ಲಿಂದ ತೊಲಗಬಾರದೆ ಅಂದುಕೊಂಡ ಜೋಸಫ್.

'ಏನ್ರೀ ಅಯ್ಯಂಗಾರ್, ಸ್ವಲ್ಪ ಬರ್‍ರಿಲ್ಲೆ. ಇವ್ರನ್ನೋದು ಕೇಳೆರs ಕೇಳ್ರಿ ಒಂದಿಷ್ಟು'– ಕಾಫಿಯ ಕಪ್ಪು ಒಂದು ಕೈಯಲ್ಲಿ ಹಿಡಿದುಕೊಂಡಿದ್ದಂತೆ ಇನ್ನೊಂದು ಕೈಯನ್ನು ಟೇಬಲಿಗೆ ಬಡಿಯುತ್ತ ಕೂಗಿದ ಕೇಸಕರ್. ಅಯ್ಯಂಗಾರ್ ದಾಪುಗಾಲು ಹಾಕುತ್ತ ಆ ಕಡೆ ಹೊರಟಾಗ ಅವನ ಬೆನ್ನು ನೋಡುತ್ತ ಜೋಸಫ್ ಅಂದುಕೊಂಡ : ಈ ಜನ ಯಾವಾಗಲೂ ಮಾತಾಡುತ್ತ-ಆಡುತ್ತ ಎಷ್ಟು ಸಿಟ್ಟಾಗುತ್ತಾರೆ, ಎಷ್ಟು ನಗುತ್ತಾರೆ, ಎಷ್ಟು ಜಗಳಾಡುತ್ತಾರೆ, ಎಷ್ಟು ಗಂಭೀರವಾಗುತ್ತಾರೆ– ಬರಿ ಮಾತುಗಳ ಬಗ್ಗೆ ಇವರಿಗೆ ಎಷ್ಟು ಪ್ರೀತಿ– ಎಲ್ಲ ಮರೆಯುವಷ್ಟು ಪ್ರೀತಿ.... ಇವರೆಷ್ಟು ಸುಖಿಗಳು....

ರವಿವಾರವಾದುದರಿಂದ ಹೋಟೇಲಲ್ಲಿ ಮುಂಜಾನೆಯ ಹೊತ್ತು ಗದ್ದಲವಿರಲಿಲ್ಲ. ಹಿಂದಿನ ದಿನದ ಲೆಕ್ಕದ ಪುಸ್ತಕ ತಪಾಸಿಸುತ್ತಿದ್ದಂತೆ ಜೋಸಫ್ ಅಪ್ರಯತ್ನವಾಗಿ ಮೂಲೆಯ ಟೇಬಲಿಗೆ ಕಿವಿಗೊಟ್ಟ.

'ಅಲ್ರೀ ಅಯ್ಯಂಗಾರ್, ಶಂಕರಪ್ಪ ಅಂತಾರ– ನಾವು ಸಂಜೀನ್ಯಾಗ ಮಿನಿಸ್ಟರ್‌ಗ ಕಪ್ಪು ಬಾವುಟಾ ತೋರಸೋದಕ್ಕಿಂತಾ ಮೊದಲ ನೆಹರೂ ಗ್ರೌಂಡಿನ ಮುಂದಿನ

ಚೌಕಿನ್ಯಾಗ ಸಭಾ ಕೂಡಿಸಿ ಭಾಷಣಾ ಮಾಡೋದು ಅಂತ ಠರಾವು ಮಾಡೀವಲ್ಲ, ಅದಕ್ಕ ಮಂದಿ ಕೂಡತಾರೋ ಇಲ್ಲೋ ಅಂತ.'

ನಕ್ಕು ನುಡಿದ ಅಯ್ಯಂಗಾರ್, 'ಅದ್ರ ಯೋಚ್ನೇನೇ ಬಿಡಿ ನೀವು. ಈವೊತ್ತಿನ ''ಕಿಡಿ'' ನೋಡಿದೀರೋ ಇಲ್ವೋ ? ಫ್ರಂಟ್ ಪೇಜ್ನಲ್ಲೇ ಹಾಕ್ಬಿಟ್ಟಿದೀನಿ– ''ಪ್ರಾಮಾಣಿಕ ಪತ್ರಿಕೆಯ ಪ್ರಾಮಾಣಿಕ ನಿವೇದನೆ'' –ಅಂತ ಟ್ರಿಮ್ಮಾಗಿ ಟೈಟಲ್ ಕೊಟ್ಟಿಟ್ಟು. ಈ ಮಿನಿಸ್ಟರ್‌ನ ಅಪ್ರಾಮಾಣಿಕತೆಯ ಎಲ್ಲಾ ಕತೆಗಳೂ ನಂಗೊತ್ತು. ಇವನ ಮೋಸಗಾರಿಕೆ-ಸುಳ್ಳು-ವಂಚನೆಯ ಎಲ್ಲಾ ಪ್ರಕರಣಗಳ ಮೇಲೂ ಪ್ರಾಮಾಣಿಕವಾಗಿ ನೋಟ್ ಬರ್ದಿದೀನಿ. ಪ್ರಾಮಾಣಿಕ ಜನಗಳಿಗೆಲ್ಲಾ ಈ ಕರೆ ತಟ್ಟದೇ ಇರುತ್ತೆಯೇ ? 'ಕಿಡಿ'ಯ ಬಿಸಿ ತಟ್ಟಿದವರು ನಮ್ಮ ಸಭೆಗೆ ಬರದೇ ಇರ್ತಾರೆಯೇ ಶಂಕರಪ್ಪ ? ನಂ ಜನಗಳ ಕಣ್ಣು ಈಗೀಗ ತೆರೀತಾ ಇರೋದಕ್ಕೆ ನಂ ಪತ್ರಿಕೆ ಏನು ಕಡ್ಮೆ ಕಷ್ಟಾ ಪಟ್ಟಿದೆಯೇ ?'

'ನಂಗ್ಯಾಕೋ ಅನುಮಾನವಪ್ಪ. ನಂ ಜನಗಳಿಗೆ ಮುಖ್ಯವಾಗಿ ಧೈರ್ಯವಿಲ್ಲ. ಅನ್ಯಾಯ ಆಗ್ತಾ ಇದೆ, ಅಂತ ಮಾತಾಡ್ತಾ ಇರ್ತಾರೆ. ಅನ್ಯಾಯಾನ ಪ್ರತಿಭಟಿಸೋ ಪ್ರಶ್ನೆ ಬಂದಾಗ ಒಬ್ನೂ ಮುಂದಕ್ಕೆ ಬರೋದಿಲ್ಲ. ಬರೀ ಮಾತ್ನಲ್ಲೇ ಜೀವನ ಕಳೀತಾರೇ ವಿನಃ ಧೈರ್ಯವಾಗಿ ಒಂದ್ಕೆಲ್ಸಾನೂ ಮಾಡೋಲ್ಲ'– ಟೈ ಸರಿಪಡಿಸಿಕೊಳ್ಳುತ್ತ ಅಂದ ಶಂಕರಪ್ಪ.

'ನೀವು ನಿಮ್ಮ ಕಾಲೇಜಿನ ಹುಡುಗೂರ್ನ ಕರ್ಕೊಂಡ ಬರ್ರಿಲಾ ನಮ್ಮ ಮತಪ್ರದರ್ಶನ ಸಪೋರ್ಟ್ ಮಾಡ್ಲಿಕ್ಕೆ'–ಕೇಸಕರ್.

'ಕಾಲೇಜ ಹುಡುಗ್ರು ಬಂದಾರು. ಆದ್ರೆ ನಿಮಗೆ ಗೊತ್ತಿಲ್ಲ ಈಗಿನ ಹುಡುಗರ ವಿಷಯ. ಬರೀ ಹುಡುಗೀರ್ನ ಚುಡಾಯ್ಸೋದು, ಅವ್ರ ಬಗ್ಗೆ ಅಶ್ಲೀಲ ಮಾತಾಡೋದು, ಅವ್ರ ಹಿಂದೆ ತಿರಗ್ತಾ ಇರೋದು– ಇದ್ರಲ್ಲೇ ಅವ್ರಿಗೆ ಖುಶಿ. ಇದೇ ಅವ್ರ ಹೀರೋಯಿಜಮ್. ಧೈರ್ಯದ ಕೆಲ್ಸಕ್ಕೆ ಬಾ ಅಂದ್ರೆ ಹಿಂದೇಟು ಹಾಕ್ತಾರೆ'–ಶಂಕರಪ್ಪ.

'ಹಾಗೇನಿಲ್ಲ ಶಂಕ್ರಪ್ಪ, ನಿಮ್ದು ರಾಂಗ್ ಅಸೆಸ್‌ಮೆಂಟ್. ನಮ್ಮ ''ಕಿಡಿ'' ಶುರು ಆದಾಗಿನಿಂದ ನಮ್ಮ ಎಲ್ಲಾ ಸಭೆಗಳಲ್ಲೂ ಕಾಲೇಜು ಹುಡುಗರದೇ ಮುಖ್ಯ ಪಾತ್ರ ಆಗ್ತಾ ಇಲ್ವೆ ? ನಮ್ಮ ಹೊಸ ಪೀಳಿಗೆ ಈಗ ಜಾಗೃತವಾಗ್ತಾ ಇದೆ. ಹುಡುಗ್ರು ಅಂದ್ರೆ ನಿಜವಾಗಿ ಪ್ರಾಮಾಣಿಕರು. ಅವರಿಗೆ ಪ್ರಾಮಾಣಿಕವಾದ ಎಲ್ಲವೂ ಅಪೀಲ್ ಆಗಿಯೇ ಆಗತ್ತೆ' –ಅಯ್ಯಂಗಾರ್.

ಎರಡನೆಯ ಕಪ್ಪು ಕಾಫಿ ಮುಗಿಸಿದ ಶಿವನಾಥ ಶೆಟ್ಟರ ಈಗ ಮಾತಾಡಿದ : 'ಹೊತ್ತು ಮೀರಾಕ ಬಂತು. ಸಂಜೀನ್ಯಾಗಿನ ಪ್ರೋಗ್ರ್ಯಾಂ ಫಿಕ್ಸ್ ಮಾಡೂದು ಬಿಟ್ಟು

ಖಾಲೀ ಮಾತಾಡಾಕ ಹತ್ತೀರಿ. ಸಭಾ ಅಂದಮ್ಯಾಲ, ಭಾಷಣಾ ಅಂದಮ್ಯಾಲ ಜನಾ ಬಂದs ಬರ್ತಾರು. ಹ್ಯಾಂಡ್‌ಬಿಲ್ಲಿನ್ಯಾಗ ನಮ್ಮೆಲ್ಲಾರ ಹೆಸರು ನೋಡಿ ಬರದs ಇದ್ದಾರs ? ಮೊನ್ನೆ ಕಾಲೇಜಿನ್ಯಾಗ ಫಂಕ್ಶನ್ ಮಾಡಿದ್ವೆಲ್ಲ, ನಾ ಜಾತೀಯತಾ ಬಗ್ಗೆ ಮಾತಾಡಿದ್ನೆಲ್ಲ, ನೋಡಿದ್ರಿಲ್ಲೋ ಹ್ಯಾಂಗ ಕೂಡಿತ್ತು ಮಂದಿ ?'

'ಹೌದು ಶೆಟ್ಟರ, ಇವತ್ತು ನೀವು ಜಾತೀಯತೆಯ ಬಗ್ಗೇನೇ ಮಾತಾಡಿ. ನಮ್ಮ ದೇಶದ ಜನರಲ್ಲಿ ತುಂಬ ಆಳವಾಗಿ ಬೇರು ಬಿಟ್ಟಿರೋ ಭೂತ ಅಂದ್ರೆ ಈ ಜಾತೀಯತೆ. ಈ ಜಾತೀಯತೆಯಿಂದಾಗೋ ಅನಾಹುತಗಳು, ಜಾತ್ಯಾತೀತ ರಾಷ್ಟ್ರ ನಿರ್ಮಾಣ ಮಾಡೋ ಯೋಜನೆಗಳು ಇತ್ಯಾದಿ ಬಗ್ಗೆ ನಿಮ್ಮ ಕವಿವಾಣಿ ಕೇಳ್ತಾ ಇದ್ರೆ ಯಾವ ಪ್ರಾಮಾಣಿಕ ಮನಸ್ಸಾದ್ರೂ ಜಾತೀ ವಿರುದ್ಧ ಬಂಡೇಳತ್ತೆ'– ಅಯ್ಯಂಗಾರ್.

'ಉಚ್ಚಜಾತಿ– ಕನಿಷ್ಠ ಜಾತಿ ಅಂತ ಭೇದ ಮಾಡೋರ ನಡುವs ಬೆಳದು ಅದರ ಕಷ್ಟಾ ಉಂಡೀನಿ ನಾನು. ಅದಕ್ಕs ಜಾತಿ ಅಂದ್ರ ಸಂತಾಪ ಬರ್ತತಿ ನನಗ. ಎಲ್ಲಾ ಜಾತೀನೂ ನಿರ್ಮೂಲ ಮಾಡಿದಾಗs ನಮ್ಮ ದೇಶ ಉದ್ಧಾರವಾಗೂದು. ಇಂವಾ ಬ್ರಾಹ್ಮಣಾ, ಇಂವಾ ಲಿಂಗಾಯತಾ, ಇಂವಾ ಹೊಲೆಯಾ– ಅನ್ನವರನ್ನ ಕಂಡ್ರ ಮೈ ಉರೀತತಿ ನಂದು' –ಶಿವನಾಥ ಶೆಟ್ಟರ.

'ನಿಮ್ದು ಹದಿನಾರಾಣೆ ಸಾತ್ವಿಕ ಸಂತಾಪ ಶೆಟ್ರೆ, ನೀವು ಜಾತೀ ಬಗೆಗೇ ಮಾತಾಡಿ. ಕೇಸಕರ್ ಸಾಹೇಬ್ರು ಭ್ರಷ್ಟಾಚಾರ ಬಗ್ಗೆ ಮಾತಾಡ್ಲಿ. ಈ ಆಡಳಿತ ಪಕ್ಷಾನ ಉರುಳಿಸಬೇಕಾದ್ರೆ ಅದು ಹ್ಯಾಗೆ ದೇಶದಲ್ಲಿ ಬೆಲೆ ಏರಿಕೆಗೆ, ಭ್ರಷ್ಟಾಚಾರಕ್ಕೆ ಕಾರಣ ಆಗಿದೆ ಅನ್ನೋದನ್ನು ನಂ ಜನಗಳಿಗೆ ತಿಳಿಸಿ ಹೇಳ್ಬೇಕು. ಈ ಕೆಲ್ಸಾನ ಕೇಸಕರ್ ಹಾಗೆ ಬೇರೆ ಯಾರೂ ಮಾಡೋಕಾಗೊಲ್ಲ.' –ಶಂಕರಪ್ಪ.

'ಹೌದು. ನಾನು ಸೋಶಿಯಲ್ ವರ್ಕರ್ ಆಗಿರೋದ್ರಿಂದ ನನಗ ಮಂದೀ ಕಾಂಟ್ಯಾಕ್ಟ್ ಭಾಳ ಬರ್ತದ. ಅದಕ್ಕ ಎಲ್ಲಾ ರೀತೀ ಭ್ರಷ್ಟಾಚಾರದ ಅನುಭವಾನೂ ನನಗ ಅವ. ಭ್ರಷ್ಟಾಚಾರದ ವಿರುದ್ಧ ಹೋರಾಡೋದ್ರಾಗs ಅರ್ಧಾ ಆಯುಷ್ಯ ಕಳೀತು ನಂದು.' –ಕೇಸಕರ್.

ಮೂರನೆಯ ಸಲ ಅವರು ಕಾಫಿಗೆ ಹೇಳುತ್ತಿದ್ದಾಗ ಜೋಸೆಫ್ ಯೋಚಿಸಿದ : ಈ ಭ್ರಷ್ಟಾಚಾರ ಅಂದರೆ ಏನು ? ಗೋವೆಯಿಂದ ಬಾಸ್ ಪರದೇಶೀ ಮದ್ಯ ತರಿಸುವುದೆ ? ವಿಶೇಷ ಅತಿಥಿಗಳೊಂದಿಗೆ ರೀಟಾ ರಾತ್ರಿ ಕಳೆಯುವುದೆ ? ಮಿನಿಸ್ಟರ್ ಪಾರ್ಟಿಗಾಗಿ ಸರ್ಕಾರಿ ಗೆಸ್ಟ್ ಹೌಸಿನವರು ಸ್ಕಾಚ್ ಒಯ್ದುದ್ದೆ ?

'ಇವತ್ತಿನ ಭಾಷಣದಾಗ ನನ್ನ ಮುಖ್ಯ ಟಾರ್ಗೆಟ್ ಎರಡು : ಮೊದಲ್ನೇದ್ದು ಬ್ಲ್ಯಾಕ್ ಮಾರ್ಕೆಟ್ ಮಾಡೋ ಮರ್ಚಂಟ್ಸು ಮತ್ತು ಅವರ ಏಜಂಟ್ಸು. ಎರಡನೇದ್ದು

ಒಟ್ಟ ನಮ್ಮ ಇಡೀ ಸಮಾಜದ ಗಂಡಸ್ರು– ಅವ್ರು ಹೆಣ್ಮಕ್ಕಳ ಮ್ಯಾಲೆ ಮಾಡೋ ಅನ್ಯಾಯ, ಅತ್ಯಾಚಾರ. ಪಾಪಾ ಮಾಡಿದವ್ರು ಹಿಂದುಸ್ತಾನದಾಗ ಹೆಂಗಸರಾಗಿ ಹುಟ್ತಾರೇನೋ ಅನಸ್ತದ ನನಗ ಒಮ್ಮೊಮ್ಮೆ. ಎಷ್ಟ ರೀತಿಯಿಂದ ಹೆಂಗಸರ ಮ್ಯಾಲ ದಬ್ಬಾಳಿಕೆ ನಡೀತದ ನಮ್ಮ ಸಮಾಜದಾಗ ! ಹೆಂಗ್ಸರ ಮಾನಾ, ಮರ್ಯಾದಿ ಗೌರವಾ ಕಾಯೋದು ನಮ್ಮ ಕರ್ತವ್ಯ. ಹೆಂಗಸರು–'

–ಕೇಸಕರನನ್ನು ತಡೆದು ಮಾತಾಡಿದ ಅಯ್ಯಂಗಾರ್, 'ಹಾಗಿದ್ರೆ ಈವೊತ್ತಿನ ಪ್ರೋಗ್ರ್ಯಾಂ ಫಿಕ್ಸ್ ಆಯ್ತು. ಮೊದ್ಲಿಗೆ ನಾನು ಇಂಟ್ರೊಡಕ್ಟರಿ ಸ್ಪೀಚ್ ಕೊಡ್ತೀನಿ. ಈಗಿನ ಸರ್ಕಾರದ ಅಪ್ರಾಮಾಣಿಕ ವ್ಯವಹಾರಾನ ಸಿನ್ಸಿಯರ್ ಆಗಿ ವಿವರಿಸ್ತೀನಿ. ಇದನ್ನ ಎದುರಿಸೋದ್ರಲ್ಲಿ "ಕಿಡಿ'''ಯ ಪಾತ್ರ ಎಂಥಾದ್ದು ಅಂತ ಬೆಳಕಿಗೆ ತರ್ತೀನಿ. ಜಾತ್ಯಾತೀತ ಪತ್ರಿಕೆಯಾದ ನಮ್ಮ "ಕಿಡಿ" ಹೇಗೆ ವಂಚನೆ, ಭ್ರಷ್ಟಾಚಾರ, ಬೆಲೆ ಏರಿಕೆ ಇತ್ಯಾದೀನ ವಿರೋಧಿಸ್ತಾ ಇದೆ, ಹೇಗೆ ಈ ಪ್ರಾಮಾಣಿಕ ಪ್ರಯತ್ನಕ್ಕೆ ಜನಗಳ ಸಹಾಯ ಬೇಕು ಅನ್ನೋದನ್ನು ಹೇಳ್ತೀನಿ. ಆಮೇಲೆ ಶೆಟ್ಟರ್ ಜಾತೀಯತೆ ನಿರ್ಮೂಲನ ಬಗ್ಗೆ ಮಾತಾಡ್ಲಿ. ಆಮೇಲೆ ಕೇಸಕರ್ ಭ್ರಷ್ಟಾಚಾರ ನಿರ್ಮೂಲನ ಬಗ್ಗೆ ಮಾತಾಡ್ಲಿ. ಆಮೇಲೆ ಯುವಕ ಸಂಘದ ಬೇರೆ ಯಾರಾದ್ರೂ ಮಾತಾಡೋರಿದ್ರೆ ಐದೈದು ನಿಮಿಷ ಅವಕಾಶ ಕೊಡೋಣ. ಕೊನೆಗೆ ಶಂಕರಪ್ಪ ಸಮ್‌ಅಪ್ ಮಾಡ್ಲಿ– ನಂ ಜನಾ ಹೇಗೆ ಬರೀ ಕೆಲಸಕ್ಕೆ ಬಾರದ ಹೊಲಸು ಮಾತಲ್ಲೇ ಕಾಲ ಕಳೀತಾರೆ, ಅವ್ರಿಗೆ ಧೈರ್ಯ ಬೇಕು ಅನ್ನೋದನ್ನ ಶಂಕ್ರಪ್ಪ ಚೆನ್ನಾಗಿ ಹೇಳ್ತಾರೆ. ಈ ಸಭೆ ಮುಗಿಸಿ ಅಲ್ಲಿಂದ್ಲೇ ಕಪ್ಪು ಬಾವುಟ ತಗೊಂಡು ಮಿನಿಸ್ಟರ್ ಬರೋ ದಾರೀಲಿ ಹೋಗಿ ನಿಲ್ಲೋಣ. ಪೋಲೀಸ್ರು ಬರ್ಲಿ. ನಮ್ಮನ್ನ ಅರೆಸ್ಟ್ ಮಾಡ್ಲಿ. ಲಾಕಪ್ನಲ್ಲಿ ಹಾಕ್ಲಿ. ಗಲಾಟೆ ಆಗತ್ತೆ. ಜನಗಳ ಕಣ್ಣು ತೆರೆಯುತ್ತೆ....'

ಬೇಸರದಿಂದ ಜೋಸಫ್ ನಿನ್ನೆ ಅರ್ಧಕ್ಕೆ ಬಿಟ್ಟಿದ್ದ ಕಾದಂಬರಿಯೊಂದನ್ನು ತೆರೆದು ಓದಲಾರಂಭಿಸಿದ.

*

ರಾತ್ರಿ ಹತ್ತು ಗಂಟೆ. ಅಯ್ಯಂಗಾರನ ಪಾರ್ಟಿ ಭರ್ಜರಿಯಾಗಿ ನಡೆದಿತ್ತು. ಮೂರನೇ ರೌಂಡ್‌ಗೆ ಸರ್ವ್ ಮಾಡಿದ ಬ್ಲ್ಯಾಕ್‌ನೈಟ್ adulterated ಅಂತ ಶಂಕರಪ್ಪ ಕೂಗಾಡಲು ಸುರು ಮಾಡಿದಾಗ ಜೋಸಫ್ ಎದ್ದು ಹೊರಗಡೆ ಲಾನ್ ಮೇಲೆ ಅವರುಗಳು ಕುಳಿತಿದ್ದಲ್ಲಿಗೆ ಹೋಗಬೇಕಾಯಿತು. ಈ ಕಾಲೇಜು ಪ್ರೊಫೆಸರುಗಳ ಹಣೆಬರಹವೆ ಹೀಗೆ. ಹೆಚ್ಚು ದಕ್ಕಿಸಿಕೊಳ್ಳಲು ತಾಕತ್ತಿಲ್ಲ. ಬಿಟ್ಟಿ ಸಿಕ್ಕಾಗ ಸ್ವಲ್ಪದರಲ್ಲಿ ತೃಪ್ತಿಯಿಲ್ಲ. ಈ ಶಂಕರಪ್ಪನಿಗೆ ಯಾವಾಗಲೂ ಎರಡನೆಯ ಪೆಗ್‌ಗೆ

ತಲೆಯ ತಾಳ ತಪ್ಪುತ್ತದೆ. ಆದರೂ ಅಯ್ಯಂಗಾರಿ ಜೊತೆಗಿದ್ದಾಗ ಐದಾರು ಪೆಗ್‌ಗೆ ಕಡಿಮೆ ಈತ ಎಂದೂ ಏಳುವುದಿಲ್ಲ. ಯಾಕಾದರೂ ಇಷ್ಟು ಲೋಭವೋ-ಅಂದುಕೊಳ್ಳುತ್ತ ಆತನನ್ನು ಹೇಗೋ ಸಮಾಧಾನ ಮಾಡಿ ಜೋಸಫ್ ತಿರುಗಿ ಕೌಂಟರಿಗೆ ಹೋಗದೆ ಅಲ್ಲೇ ಸುತ್ತಾಡತೊಡಗಿದ.

'ಅಲ್ಲ ಶಂಕ್ರಪ್ಪ, ನ್ಯಾಯವಾಗಿ ಇವೊತ್ತಿನ ಮತಪ್ರದರ್ಶನದಲ್ಲಿ ಬಾವುಟ ಹಿಡ್ಕೊಂಡು ನೀವು ಮುಂದಿನ ಸಾಲಲ್ಲಿ ನಿಂತ್ಕೋ ಬೇಕಿತ್ತು. ಯಾಕ್ರೀ ಹಿಂದೆ ಉಳ್ಕೊಂಡ್ಬಿಟ್ರಿ ?' –ಅಯ್ಯಂಗಾರ್.

'ನಂಬ್ತಿದ್ರೆ ನಿಜಾ ಹೇಳ್ತೀನಿ ಸಂಪಾದಕರೆ, ನೀವೇನೇ ಅನ್ನಿ– ನಮ್ಮ moral standard ಕೆಟ್ಹೋಗ್ತಾ ಇದೆ. ನೀವು ಯುವಕ ಸಂಘಕ್ಕೆ ಹೊಸ್ದಾಗಿ ಮಹಿಳಾ ಪ್ರತಿನಿಧಿ ಆರ್ಸಿದೀರಲ್ಲ– ಆ ಮಿಸ್ ಪಂಕಜಾ– ಎಂಥಾ ಹೆಣ್ಣುರೀ ಆಕೆ. ತಾನು ಬಂದಿರೋದ್ಯಾತಕ್ಕೆ ಅನ್ನೋ ಜ್ಞಾನ ಕೊಂಚನಾದ್ರೂ ಬೇಡ್ವೆ ? ಅವಳ ಡ್ರೆಸ್ಸೇನು, ಒನಪೇನು, ಮೇಕಪ್ಪೇನು– ತುಂಬ ಕೋಪ ಬಂದ್ಬಿಡ್ತು ನನಗೆ. ಅವ್ಳನ್ನ ಕೆಕ್ಕರಿಸಿ ನೋಡ್ತಾ ನಿಂತ್ಬಿಟ್ಟೆ ಅಲ್ಲೇ.'

ಉಳಿದವರು ಜೋರಾಗಿ ನಕ್ಕರು. ಜೋಸಫ್‌ಗೂ ನಗು ಬಂತು.

'ಯಾಕ್ರೀ ಕವಿ, ಸಪ್ಪಗಾಗಿದೀರಿ ?'

ತುಂಬ ಅರ್ಜವತೆಯಿಂದ ಅಯ್ಯಂಗಾರ್‌ನ ಕೈ ಒತ್ತಿ ಮಾತಾಡಿದ ಶಿವನಾಥ ಶೆಟ್ಟರ, 'ನನಗ್ಯಾಕೋ ಇವೊತ್ತ ಮೂಡs ಬರಾಬ್ಬರಿ ಇಲ್ಲ. ಸಂಜೀನ್ಯಾಗಿನ ಪ್ರೋಗ್ರ್ಯಾಮಿನ್ಯಾಗೂ ಮನಸ್ಸಿರ್ಲಿಲ್ಲ. ಏನೋ ಮಾತಕೊಟ್ಟಿದ್ದೆ ಅಂತ ಬಂದ ಮಾತಾಡಿದೆ. ಅಯ್ಯಂಗಾರ್ರ, ನಿಮ್ಮ "ಕಿಡಿ" ಜಾತ್ಯಾತೀತ ಪತ್ರಿಕೆ ಅಲ್ಲs ? ಅನ್ಯಾಯ ಪ್ರತಿಭಟಿಸತೈತಿ ಅಲ್ಲs ? ನೀವು ನನಗಾದ ಅನ್ಯಾಯದ ಸಲುವಾಗಿ ಅದರಾಗ ಒಂದು ಅಗ್ರಲೇಖ ಹಾಕಾಕಬೇಕು.'

'ನಿಮಗೇನು ಯಾರು ಅನ್ಯಾಯ ಮಾಡಿದರ್ರೆಪಾ ?' –ಹೊಟ್ಟೆಯ ಮೇಲೆ ಕೈಯಾಡಿಸಿಕೊಳ್ಳುತ್ತ ಕೇಳಿದ ಕೇಸಕರ್.

ನಾಲ್ಕನೆಯ ಪೆಗ್ ಮುಗಿಸಿದ್ದ ಶೆಟ್ಟರನ ಧ್ವನಿ ಆವೇಶದಿಂದ ಕೂಡಿತ್ತು– 'ಅವರೇ, ಸಾಹಿತ್ಯ ಅಕ್ಯಾಡೆಮಿಯವ್ರು. ನನ್ನ ಪುಸ್ತಕಕ್ಕ ಬರಬೇಕಾಗಿದ್ದ ಫಸ್ಟ್ ಪ್ರೈಜ್ ಬ್ಯಾರೇ ಯಾವ್ನೋ ಸೂಳೀಮಗ್ಗ ಕೊಟ್ಟಾರ. ಇಂದ ಮಧ್ಯಾಹ್ನದಾಗ ಸುದ್ದಿ ತಿಳದಾಗಿನಿಂದs ತಲೀನ ಗರಮಾಗೈತಿ ನಂದು. ನೀವೇನs ಅನ್ರಿ, ಈಗೀನ ಕಾಲದಾಗ ಗುಣಕ್ಕ ಬೆಲೀ ಇಲ್ಲ. ಕಮೀಟಿಯೊಳಗ ಇದ್ದಾಂವಾ ಹಾರೂರವಾ. ಪ್ರೈಜು ಸಿಕ್ಕದ್ದೂ ಹಾರೂರವಗ. ಎಲ್ಲಾ ಅವರದs ಆಗೇತಿ. ಈ ಹಾರೂರಿಗೇನು ಬರಿಯಾಕ ಬರತೈತs ?

ಬರದದ್ದು ಜಜ್ ಮಾಡಾಕ ಬರತೈತs ? ಆ ಜಾತೀನೇ ಕಿತಾಪತಿ ಜಾತಿ. ಅವರ್ನ ಬಗ್ಗ ಬಡಿಯಾಕಬೇಕು. ನನಗ ಅನ್ಯಾಯ ಆಗೇತಿ. ನಾ ಸುಮ್ನಿರಾಕಿಲ್ಲ. ನಾ protest ಮಾಡಾವನs. ಅಯಂಗಾರ್ರ, ನೀವು ಖರೇವಂದ್ರೂ ಪ್ರಾಮಾಣಿಕರದೀರಿ. ನನಗ ಹೆಲ್ಪ್ ಮಾಡ್ರಿ.'

—ವಾತಾವರಣ ಗಂಭೀರವಾದಂತೆನಿಸಿತು. ಅಯ್ಯಂಗಾರ್ ಸುಮ್ಮನಿದ್ದ. ಆದರೆ ಶೆಟ್ಟರಗೆ ಸುಮ್ಮನಿರುವುದು ಸಾಧ್ಯವಾಗಲಿಲ್ಲ. ಕುರ್ಚಿಯಲ್ಲಿ ಇನ್ನೂ ಮುಂದೆ ಸರಿದು ಸೆಟೆದು ಕೂತು ಆತ ಉದ್ವೇಗದಿಂದ ಮುಂದುವರಿಸಿದ, 'ಅಯ್ಯಂಗಾರ್ರ, ಜಾತೀ ಸಲವಾಗಿ ನಿಮಗ ದುರಭಿಮಾನ ಇಲ್ಲಾ ಅಂತ ನಿಮಗ ಒಳಗಿನ ಮಾತ ಹೇಳಾಕ್ಹತ್ತೀನಿ. ಈ ಪ್ರೈಜ್ ಸಿಕ್ಕಾಂವಾ ಇದ್ದಾನಲ್ಲಾ, ಅವನ ಹಿಸ್ಟರೀ ಎಲ್ಲಾ ಗೊತ್ತೈತಿ ನನಗ. ಆಳ ಏನೂ ಇಲ್ಲ ಅವಗ. ಬರೇ ಪಂಟ ಬಡೀತಾನ. ಅದು ಆ ಜಾತೀ ಗುಣಾನs ಅನ್ರಿ. ಬರೇ ಮಂದೀನ್ನ ಹಿಂದ ಆಡಿಕೊಳ್ಳೂದ ಅವನ ಕಸಬು. ಅಂವಗ ಪ್ರೈಜ್ ಕೊಟ್ಟಾರ, ನನ್ನ ಬಿಟ್ಟು. ಆ ಬಡ್ಡೀಮಗನ್ನ ಹಿಡದು—'

—ಶೆಟ್ಟರಗೆ ತೂಕ ತಪ್ಪುತ್ತಿತ್ತೆಂದು ತಿಳಿದ ಅಯ್ಯಂಗಾರ್ ಮೊದಲು ಬೇರರ್‌ಗೆ ಅವನ ಗ್ಲಾಸು ತುಂಬಲು ಸನ್ನೆ ಮಾಡಿ ನಂತರ ಮಾತಾಡಿದ, 'ಅಂದಹಾಗೆ ಕೇಸಕರ್, ನೀವು ತುಂಬ ಚೆನ್ನಾಗಿ ಮಾತಾಡಿದಿರಪ್ಪ, ಸಭೆಯಲ್ಲಿರೋ ಹೆಂಗಸರಿಗಂತೂ ನೀವು ಅವರ್ನ ಉದ್ಧಾರ ಮಾಡೋದಕ್ಕೋಸ್ಕರ ಬಂದಿರೋ ಅವತಾರ ಪುರುಷನ ಹಾಗೆ ಕಾಣ್ಸಿದಿರಿ.'

'ಹೆಹ್ಹೆ' ಅಂದ ಕೇಸಕರ್.

ಕುರ್ಚಿಯಲ್ಲಿ ಮುಂದೆ ಸರಿದು ಸೆಟೆದು ಕೂತಿದ್ದ ಶೆಟ್ಟರ ಹಿಂದೆ ವಾಲಿದ್ದ. ಗಬಗಬನೆ ಊಟ ಮಾಡುತ್ತಲಿದ್ದ ಶಂಕರಪ್ಪ ತನ್ನಷ್ಟಕ್ಕೆ ತಾನೆ ಮಾತಾಡುತ್ತಿದ್ದ,

'ಆ ಪಂಕಜಾನ್ನ ಅಲ್ಲೇ ಹಿಚುಕಿ ಮುದ್ದೆ ಮಾಡಿ ಬಿಡ್ಬೇಕಿತ್ತು, ಹಲ್ಕಾ ಮುಂಡೆ.'

ಶಂಕರಪ್ಪನ ವಾಣಿಮುತ್ತುಗಳು ಜೋಸಫ್‌ಗೆ ಹೊಸದಲ್ಲ. ಮೂರು ಪೆಗ್ ಹೊಟ್ಟೆಗೆ ಸೇರಿದೊಡನೆ ಆತ ಮಾತಾಡಲು ಸುರು ಮಾಡುತ್ತಾನೆ. ಊರಲ್ಲಿನ ಹೆಂಗಸರ ಬಗೆಗೆಲ್ಲ ಇಂಥ ಅಭಿದಾನಗಳಿಂದೊಡಗೂಡಿದ ಆತನ ಒಟ್ಟು ಮಾತಿನ ತಾತ್ಪರ್ಯ ಯಾವಾಗಲೂ ಇಷ್ಟೇ : ಹಾಗೆ ಮಾಡಬೇಕಿತ್ತು, ಆಗಲಿಲ್ಲ ; ಹೀಗೆ ಮಾಡಬೇಕಿತ್ತು, ಆಗಲಿಲ್ಲ ; ಏನೇನೋ ಮಾಡಬೇಕಿತ್ತು ; ಏನೂ ಆಗ್ಲಿಲ್ಲ. ಉಳಿದವರದಿನ್ನೂ ಊಟ ನಡೆದಿರುವಾಗಲೇ ಆತ ಎದ್ದು ಬಿಟ್ಟಿರುತ್ತಾನೆ, ಎದುರಿಗೆ ಇಲ್ಲದ ಯಾರ್‍ಯಾರನ್ನೋ ಬೈದುಕೊಳ್ಳುತ್ತ. ನಂತರ ಕೌಂಟರಿಗೆ ಬಂದು ನಾಲ್ಕು ಸಿಗರೇಟು ಸೇದಿ, ಅಲ್ಲೇ ಇದ್ದ ಸಿಂಕ್‌ನಲ್ಲಿ ಬಾಯಿ ತೊಳಕೊಂಡು ಮನೆಗೆ ಹೋಗುತ್ತಾನೆ— ಹೆಂಡತಿಗೆ ಸಿಗರೇಟ

ವಾಸನೆ ಆಗುವುದಿಲ್ಲ ಅಂತ.

ಇಂದೂ ಹಾಗೆಯೇ. ಹನ್ನೊಂದೂವರೆ ಆದಾಗ ಶಂಕರಪ್ಪ ಕೌಂಟರಿನ ಕಡೆ ನಡೆದ. ಜೋಸಫ್ ಮೊದಲೇ ಹೋಗಿ ಕೂತಿದ್ದವನು ನಾಲ್ಕು ಬರ್ಕಲೀ ನೀಡಿದ. ಸೇದುತ್ತಿದ್ದಂತೆ ಶಂಕರಪ್ಪ ಹೇಳಿದ :

'ನಿಮಗೆ ಗೊತ್ತಿಲ್ಲ ಜೋಸಫ್, ಪಂಕಜಾನಂಥಾ ಹುಡುಗೀರಿಂದ್ಲೇ ಹುಡುಗ್ರು ಕೆಟ್ಹೋಗೋದು.'

ಜೋಸಫ್ ಮುಗುಳುನಕ್ಕ.

ಬಾಯಿ ತೊಳಕೊಂಡು ಶಂಕರಪ್ಪ ಹೋಟೇಲಿನ ಬಾಗಿಲು ದಾಟುತ್ತಿದ್ದಂತೆ ಅಯ್ಯಂಗಾರ್ ಕೂಗಿ ಹೇಳಿದ ಆತನಿಗೆ– 'ಶಂಕ್ರಪ್ಪ, ಪ್ಲೀಜ್, ಈ ಶೆಟ್ರನ್ನ ಒಂದು ಆಟೋದಲ್ಲಿ ಕೂಡಿಸ್ಬಿಟ್ಟು ಹೋಗಿ.'

'ಕಾಸಿನ ಕಿಮ್ಮತ್ತಿಲ್ಲದ ಈ ಹಾರೂರಗ ಎಷ್ಟು ಸೊಕ್ಕು ಅಂತೀನಿ' –ಅನ್ನುತ್ತಲಿದ್ದ ಶೆಟ್ಟರನ ಭುಜದ ಮೇಲೆ ಕೈಹಾಕಿ ಶಂಕರಪ್ಪ ಜೋಲಿಯಾಡುತ್ತ ಹೊರಗೆ ನಡೆದ.

ಹೋಟೇಲು ಹೆಚ್ಚು ಕಡಿಮೆ ನಿಃಶಬ್ದವಾಗಿತ್ತು. ಒಳಗೆ ಯಾರೂ ಗಿರಾಕಿಗಳಿರಲಿಲ್ಲ. ಹೊರಗಡೆ ಅಯ್ಯಂಗಾರ್ ಮತ್ತು ಕೇಸಕರ್ ಮಾತ್ರ.

ಅಯ್ಯಂಗಾರನ ಧ್ವನಿ ಏರಿತ್ತು : 'ನೀವೇನೇ ಅನ್ನಿ ಕೇಸ್ಕರ್, ನಾನು ಈ ಶೆಟ್ಟರನ ಮಾತು ಲೆಕ್ಕಕ್ಕೆ ಹಿಡಿಯೋಲ್ಲ. ಶೂದ್ರ ಸೂಳೇಮಗ. ಕವಡೆಯ ಬುದ್ಧಿಯಿಲ್ಲ. ತಾನು ಬೃಹಸ್ಪತಿ ಅಂತ ಭ್ರಮೆ ಬೇರೆ. ತಂಗೆ ಪ್ರೈಜ್ ಸಿಕ್ಕಿಲ್ಲಾ ಅಂತ ಹೊಟ್ಟೇಕಿಚ್ಚು ಅವ್ನಿಗೆ. ತನ್ನ ಯೋಗ್ಯತೆ ಎಷ್ಟು ಅಂತ ನೋಡಿದಾನಾ ಎಂದಾದ್ರೂ ? ನನ್ನ ಪತ್ರಿಕೇಲಿ ಬರೀಬೇಕಂತೆ ಇವ್ನಿಗೆ ಅನ್ಯಾಯ ಆಗಿದೇ ಅಂತ. ನನ್ನ ಪತ್ರಿಕೆ ಇರೋದು ಇಂಥಾ ಜುಜುಬಿ purpose ಗಾ ?'

ಜೋಸಫ್ ಕೌಂಟರನಲ್ಲಿ ಕೂತೇ ಇದ್ದವನು ಕೇಸಕರ್ ತನ್ನ ಕಡೆ ಬರುತ್ತಿದ್ದುದನ್ನು ಕಂಡು ಮುಗುಳ್ನಕ್ಕ. ತೀರ ಸಮೀಪ ಬಂದು ಕೇಸಕರ್ ಆಚೀಚೆ ನೋಡಿ ತೀರ ಕೆಳಗಿನ ದನಿಯಲ್ಲಿ ಜೋಸಫ್‌ನ ಕಿವಿಯಲ್ಲೇನೋ ಎಂಬಂತೆ ಹೇಳಿದ, 'ನಿಮ್ಮ ಬಾಸ್‌ಗ ಹೇಳ್ರಿ ಜೋಸಫ್, ಹೋಟೇಲ್ ಬ್ಲೂ ಅಂದ್ರು ಒಂದು ಕಾಲದಾಗ ಎಂಥಾ glamour ಇತ್ತು ! ಈಗ ಭಾಳ dull ಆಗೇದ. ನೀವು ಸುಧಾರಿಸ್ಲಿಕ್ಕೆ ಬೇಕು. ನಾನು ನಿಮ್ಮ well-wisher ಅಂತ ಹೇಳ್ತೀನಿ' –ನಂತರ ಇನ್ನೂ ಧ್ವನಿ ತಗ್ಗಿಸಿ ಆತನೆಂದ, 'ಗೋವಾದ ಕಡಿಂದ ಎರಡ ಅಗದೀ ಹೊಸಾ ಕೋರಾ ಚಮಚಮೀತ ಹಕ್ಕಿ ಬಂದಾವ ಮೊನ್ನೆ. ಸದ್ಯಕ್ಕ ನನ್ನ ಕಸ್ಟಡೀಯೊಳಗs ಅವ. ನಿಮ್ಮ ಬಾಸ್‌ಗೆ ಬಂದ

ನೋಡ್ಕೊಳ್ಳಿ ಹೇಳ್ರಿ. ಮಾಲು ಪಸಂದ ಬಿದ್ದರ ಉಳದದ್ದು a matter of business – ಹ್ಯಾಂಗರ ಬಗೀಹರಿಸಿದ್ರಾತು. ಏನಂತೀರಿ ? ರೀಟಾ ಈಗ ಮುದುಕಿ ಆಗ್ಯಾಳ– ಉಪಯೋಗಿಲ್ಲ....ನಾ ನಿಮ್ಮ well-wisher ಅಂತ ಹೇಳ್ತೀನಿ– ಏನಂತೀರಿ ?'

'ಹೌದು ಸರ್, ನೀವನ್ನೋದು ಖರೆ,' ಜೋಸಫ್ ನಮ್ರನಾಗಿ ಹೇಳಿದ.

'ಬರ್ತೀನಿ ಹಂಗಾರ, ಗುಡ್‌ನೈಟ್' ಅಂತ ಕೇಸಕರ ಹೊರಟ. ಎರಡು ನಿಮಿಷಗಳಲ್ಲಿ ಆತನ ಅಂಬಾಸಡರ್ ಸ್ಟಾರ್ಟ್ ಆದ ಸದ್ದು ಕೇಳಿಸಿತು– ಹೊರಟಿದ್ದೂ, ಹೋದದ್ದೂ.

ಗಂಟೆ ಹನ್ನೆರಡೂ ಕಾಲು. ಕೌಂಟರಿನಲ್ಲಿ ಕೂತಲ್ಲಿಂದಲೇ ಜೋಸಫ್ ಅಯ್ಯಂಗಾರಿಯ ಕಡೆ ನೋಡಿದ.

ಬಾರ್ ಮುಚ್ಚುವ ಸಮಯ ಮೀರಿದೆ– ಅಂತ ಹೇಳೋಣವೇ ಅಂದುಕೊಂಡ. ಬೇರರ್ ಅಂತ ಕೂಗಬೇಕು ಅನ್ನುವಷ್ಟರಲ್ಲಿ ಅಯ್ಯಂಗಾರನೇ 'ಬೇರರ್' ಅಂತ ಕೂಗಿದ. ಮತ್ತೆ ವ್ಹಿಸ್ಕಿಗೆ ಆರ್ಡರ್ ಮಾಡಿದ.

ವಿಧಿಯಿಲ್ಲದೆ ಜೋಸಫ್ ತಾನೇ ಎದ್ದು ಬಂದ ಆತ ಕೂತಿದ್ದಲ್ಲಿಗೆ. 'ಹಲೋ ಜೋಸಫ್, how about joining me ?' ಅಂತ ಕೇಳಿದ ಅಯ್ಯಂಗಾರ್‌ಗೆ ನಮ್ರತೆಯಿಂದಲೇ ನಕಾರ ಸೂಚಿಸಿ, ತಗ್ಗಿದ ದನಿಯಲ್ಲಿ ಹೇಳಿದ, 'ಸರ್ ಟೈಮ್–'

'ಓ, don't remind me of time ಜೋಸಫ್....ನಾನು ಎಲ್ಲ ಮರೀಬೇಕಾಗಿದೆ –ಎಲ್ಲ–ಎಲ್ಲ–'

ನಿಂತೇ ಹೇಳಿದ ಜೋಸಫ್– 'ಸರ್, ಹಾಗಾದರೆ–'

'ಹೌದು, ನಂಗೆ ರೂಂ ಬೇಕು ಇವೊತ್ತು. ಮಹಡೀ ಮೇಲ್ಗಡೆ ಕೊನೇಲಿರೋದು ಕೊಡಿ. ಗಾಳಿ ಚೆನ್ನಾಗಿ ಬರತ್ತೆ.'

'ಮತ್ತೆ–'

'ಮತ್ತೇನು ? ರೀಟಾ ಬೇಡ. ಹೋದ ವಾರ ಯಾರ್‍ನೋ ಕಳಿಸಿದೆಲ್ಲಪ್ಪ– ಅವ್ಳನ್ನ ಕಳ್ಸು.'

'ಚಂದ್ರಿಕಾ ?'

'ಯಾವ್ಳೋ ಹಾಳಾದವ್ಳು. ಎಷ್ಟು ಹೆಸರೂಂತ ನೆನಪಿಡೋಕಾಗತ್ತೆ ?'

ಬಿಲ್ ಸಲ್ಲಿಸಿ ಮಹಡಿಯ ಮೇಲಕ್ಕೆ ಜೋಲಿ ಹೊಡೆಯುತ್ತ ನಡೆದ ಅಯ್ಯಂಗಾರನನ್ನು ಹಿಂದಿನಿಂದ ನೋಡುತ್ತಿದ್ದಂತೆ ಯಾಕೋ ಜೋಸಫ್‌ಗೆ ಈ ಪ್ರಾಮಾಣಿಕ ಮನುಷ್ಯನ ಹೆಂಡತಿ ಹೇಗಿರಬೇಕು ಅಂತ ವಿಚಾರ ಬಂತು.

ಅಕೌಂಟಿನ ಪುಸ್ತಕ ಒಳಗಿಟ್ಟು ಟ್ರೆಝರಿಗೆ ಕೀಲಿ ಹಾಕುತ್ತಿದ್ದಾಗ ಆತನ ತಲೆ

ತುಂಬ ಬೆಳಿಗ್ಗೆ ಚರ್ಚಿನಲ್ಲಿ ಕೇಳಿದ್ದ ಪಾದ್ರಿಯ ಮಾತುಗಳು ದೆವ್ವಗುಣಿತ ನಡೆಸಿದ್ದವು : ಏಸು ಹೇಳುತ್ತಾನೆ– ಪ್ರಾಮಾಣಿಕನಾಗಿರು, ನುಡಿದಂತೆ ನಡೆ, ಭ್ರಷ್ಟನಾಗಬೇಡ, ಹೇಡಿಯಾಗಬೇಡ, ಪ್ರಾಮಾಣಿಕನಾಗಿರು–ನಿನ್ನವರಿಗೆ, ಪರರಿಗೆ, ನೆರೆಯವರಿಗೆ, ಎಲ್ಲರಿಗೆ....

❖ ❖ ❖

# ಅವಳ ಸ್ವಾತಂತ್ರ್ಯ

ಶನಿವಾರ. ಮಧ್ಯಾಹ್ನದಿಂದಲೂ ಮೈ-ಮನಸ್ಸು ಭಾರವಾಗಿದ್ದ ಆಕೆ ಆಫೀಸಿನ ಗೋಡೆಗೆ ತೂಗು ಹಾಕಿದ್ದ ಗಡಿಯಾರವನ್ನೇ ಬಾರಿ ಬಾರಿಗೂ ನೋಡುತ್ತಿದ್ದಳು. ಐದೂವರೆಯಾಗುತ್ತಲೂ ಉಶ್ ಎಂದು ಉಸಿರು ಬಿಟ್ಟು ವ್ಯಾನಿಟಿ ಬ್ಯಾಗು, ಪುಟ್ಟ ಛತ್ರಿ ಹಾಗೂ ಊಟದ ಡಬ್ಬಿಯನ್ನು ಗಡಿಬಿಡಿಯಿಂದ ಎತ್ತಿಕೊಂಡು ಕೌಂಟರಿನಿಂದ ಹೊರಬಂದಳು. ಬಾಗಿಲ ಬಳಿ ಹಾಕಿದ್ದ ಕನ್ನಡಿಯ ಕಡೆ ಒಮ್ಮೆ ಹಾಗೆಯೆ ನೋಡಿ ತಲೆಗೂದಲನ್ನು ಸರಿಪಡಿಸಿಕೊಳ್ಳುತ್ತ, ನಿತ್ಯದಂತೆ ಜೊತೆಯ ಯಾರಿಗೂ ಕಾಯದೆ, ಸೀದಾ ಮೆಟ್ಟಲಿಳಿದು ರಸ್ತೆ ಸೇರಿದಳು. ಆರು ಗಂಟೆಯ ಲೋಕಲ್ ಸಿಕ್ಕುತ್ತದೋ ಇಲ್ಲವೋ ಅಂತ ಕೈಗಡಿಯಾರವನ್ನೊಮ್ಮೆ ನೋಡಿ ಚಡಪಡಿಸಿ ನಡಿಗೆಯ ವೇಗವನ್ನು ಹೆಚ್ಚಿಸಿದಳು. ಆಕೆ ಆಫೀಸು ದಾಟಿ ಮೇನ್ ರೋಡಿಗೆ ಬರುತ್ತಿರುವಂತೆಯೆ ಸ್ಟೇಶನ್ನಿಗೆ ಹೋಗುವ ಬಸ್ಸು ಎದುರಿಗೇ ಬಂದು ನಿಂತಿತು. ಬಸ್ ಹತ್ತುವ ಇಚ್ಛೆಯೂ ಸಹಜವಾಗಿಯೇ ಆಯಿತು. ಆದರೆ ಮರುಕ್ಷಣ– ಬೇಡ, ಅದೇ ಮೂವತ್ತು ಪೈಸೆಗೆ ಒಂದು ಕಂತೆ ಸೊಪ್ಪು ರಾತ್ರಿ ಪಲ್ಯಕ್ಕೆ ಒಯ್ದರಾದೀತು– ಅನಿಸಿತು. ಹೇಗಿದ್ದರೂ ಸ್ಟೇಶನ್ನಿಗೆ ಒಂದು ಮೈಲೂ ಪೂರ್ತಿ ಆಗುವುದಿಲ್ಲ, ಹದಿನೈದು ನಿಮಿಷದಲ್ಲಿ ಹೋಗಬಹುದು–ಅನಿಸಿತು. ಶನಿವಾರವಾದ್ದರಿಂದ ರಾತ್ರಿ ಶಂಕರ ಊರಿಂದ ಬರುತ್ತಾನೆ, ಅವನಿಗೆ ಸೊಪ್ಪಿನ ಪಲ್ಯ ಇಷ್ಟ, ಅಂತ ನೆನಪಾಗಿ ಸಮಾಧಾನವೂ ಅನಿಸಿತು.

–ಸ್ಟೇಶನ್ ತಲುಪಲು ಇನ್ನರ್ಧ ಫರ್ಲಾಂಗು ಇದ್ದಾಗ ಆಕೆಗೆ ಹಿಂದಿನಿಂದ ಯಾರೋ ತನ್ನನ್ನು ಕೂಗುತ್ತಿರುವಂತೆನಿಸಿತು. ತಿರುಗಿ ನೋಡಿ ಕೂಗುತ್ತಿರುವುದು ತನ್ನನ್ನೇ ಹೌದೋ ಅಲ್ಲವೋ ಖಾತ್ರಿ ಮಾಡಿಕೊಳ್ಳಲು ನಿಂತರೆ ಆರರ ಟ್ರೇನು ತಪ್ಪೀತೆಂದು ಆಕೆ ಹಾಗೆಯೆ ಮುಂದೆ ನಡೆದಳು. ಆದರೆ ಮತ್ತೆ ಆ ಧ್ವನಿ ಕೇಳಿಸಿತು– ಈ ಸಲ ಇನ್ನೂ ಗಟ್ಟಿಯಾಗಿ, ಸ್ಪಷ್ಟವಾಗಿ, ಸಮೀಪದಿಂದಲೆ– "ವಿಮಲಾ, ಏ ವಿಮಲಾ".

ಆಕೆ ತಿರುಗಿ ನೋಡಿದಳು. ನಿಂತಳು. ಕೂಗಿದಾಕೆ ಗೆಳತಿ ಶಶಿ ಕುಲಕರ್ಣಿ– ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜಿನಲ್ಲಿ ಅಧ್ಯಾಪಕಿ. ಅವಳ ಜೊತೆ ಇನ್ನೂ ಮೂವರು ಹೆಂಗಸರು. ಅವರೆಲ್ಲ ಬಿಳಿ ಖಾದಿ ಉಟ್ಟಿದ್ದು ನೋಡಿದರೆ, ಅವರು ಶಶಿ ಹೊಸದಾಗಿ

ಸುರು ಮಾಡಿದ ಭಗಿನೀ ಸೇವಾ ಸದನದ ಸದಸ್ಯೆಯರಿರಬೇಕು ಅನಿಸಿತು ಆಕೆಗೆ.

"ಏನs ವಿಮಲಾ, ಎಷ್ಟ ಭಡಾಭಡಾ ನಡೀತೀ ಮಾರಾಯಳs, ನೀ ಹಿಂಗ ಹೊಂಟರ ಹುಬ್ಬಳ್ಳಿಯಿಂದ ಧಾರವಾಡಕ್ಕ ಹೋಗಲಿಕ್ಕೆ ನಿನಗ ಗಾಡೀ ಯಾಕ ಬೇಕು ? ನಡಕೋತ ಹೋಗಿ ಹತ್ತ ಮಿನಿಟಿನ್ಯಾಗ ಮಾಳಮಡ್ಡಿಯೊಳಗಿನ ನಿಮ್ಮನೀ ಮುಟ್ಟಿಬಿಡತೀ ನೋಡು."

ತುಸುವೆ ದಣಿದ ನಗು ನಕ್ಕು ಆಕೆ ಕೇಳಿದಳು, "ಅದಿರ್ಲಿ ಶಶಿ, ನೀ ಯಾಕ ಹಿಂಗ ನನ್ನ ಬೆನ್ಹತ್ತಿ ತೇಕಿಕೋತ ಬಂದೀ ? ನೋಡು, ಏನರೆ ಕೆಲಸ ಇದ್ರ ಝಟ್‌ಪಟ್ ಹೇಳಿಬಿಡು. ನನ್ನ ಗಾಡೀ ತಪ್ಪಿತಂದ್ರ ಫಜೀತಿ ಆಗ್ತದ."

"ನಿನ್ನ ಗಾಡೀ ತಪ್ಪಿಸಿ ನಿನ್ನ ಗಂಡಾ-ಮಕ್ಕಳ ಶಾಪಾ ನಾ ಯಾಕ ಕಟಿಗೊಳ್ಲಿ ? ನಿನ್ನ ಆಫೀಸಿನ್ಯಾಗೇ ಭೆಟ್ಟ್ಯಾಗಿ ಅಲ್ಲೇ ಮಾತೂಕತಿ ಮುಗಿಸಬೇಕಂತ ಆಫೀಸು ಬಿಡೂ ಟೈಮಿಗೇ ಅಲ್ಲಿ ಬಂದಿದ್ವಿ. ಆದರ ನೀ ಅಷ್ಟರಾಗs ಹೊಂಟಬಿಟ್ಟಿದ್ದಿ. ಅದಕ್ಕs ನಿನ್ನ ಹಿಂದ ಓಡಿಕೋತ ಬಂದ್ವಿ. ಕೆಲಸ ಏನವಾ ಅಂದ್ರ– ನಾಳೆ ನಮ್ಮ ಭಗಿನೀ ಸೇವಾಸದನದ್ದು ವಾರ್ಷಿಕ ಸಮ್ಮೇಳನ ಅದ–"

"Sorry ಶಶಿ, ಸಂಡೇ ನನಗ ಮನೀಬಿಟ್ಟು ಬರ್ಲಿಕ್ಕೆ ಆಗೂದಿಲ್ಲಂತ ನಿನಗ ಗೊತ್ತಿಲ್ಲೇನು ?"

"ಗೊತ್ತದನs, ಆದರ ಇದು ಅಂಥಿಂಥಾ ordinary ಕಾರ್ಯಕ್ರಮ ಅಲ್ಲ. ಇದು ಅಂತರ್‌ರಾಷ್ಟ್ರೀಯ ಮಹಿಳಾವರ್ಷ ಅಂತ ಈ ಕಾರ್ಯಕ್ರಮ ಅಗದೀ grand ಆಗಿ, ಅಗದೀ meaningful ಆಗಿ ಮಾಡಬೇಕೂಂತ ನನ್ನ ವಿಚಾರ ಅದ. ಸ್ವಥಾ ಕಲೆಕ್ಟರೇ preside ಮಾಡ್ಲಿಕ್ಕೆ ಒಪ್ಪಿಕೊಂಡಾರ. ನೀನು– you will be one of the guests. ಅಂದರ ಹದಿನೈದು ಮಿನಿಟು ಭಾಷಣಾ ಮಾಡಬೇಕು–"

"Sorry ಶಶಿ, ಭಾಷಣಾ-ಗೀಷಣಾ ಎಲ್ಲಾ ಬಿಟ್ಟು ಹಳೇ ಮಾತಾತು. ನನಗ ಈಗ ಇಂಟರೆಸ್ಟೂ ಇಲ್ಲ, ಟೈಮೂ ಇಲ್ಲ."

"ವಿಮಲಾ !" ವ್ಯಥೆಯಿಂದ, ಆಶ್ಚರ್ಯದಿಂದ ಶಶಿ ಅಂದಳು, "ನೀ ಹಿಂಗ ಹೇಳಿದರ ನನಗ ಭಾಳ ವಿಚಿತ್ರ ಅನಸ್ತದ, ಕೆಟ್ಟ ಅನಸ್ತದ. ಹೆಣ್ಮಕ್ಕಳ ಒಳ್ಳೇದರ ಸಲುವಾಗಿ, ಅವರ ಉದ್ಧಾರದ ಸಲುವಾಗಿ, ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ದೊರಕಿಸಿಕೊಡೋದರ ಸಲುವಾಗಿ, ಜೀವನಾ ಮೀಸಲಾಗಿಡ್ತೀನಿ ಅಂತ ಕಾಲೇಜಿನ್ಯಾಗಿದ್ದಾಗ ಹೇಳ್ತಿದ್ದಾಕಿ ನೀನs ಏನು ಅಂತ ಸಂಶೇ ಬರ್ತದ ನನಗ. ನೋಡು ವಿಮಲಾ, ನಮ್ಮದು ಬರೇ propaganda ಸಲುವಾಗಿ, show ಸಲುವಾಗಿ, ಒಂದೇನೋ fashion ಅಂತ ಮಾಡೋ ಪ್ರೋಗ್ರ್ಯಾಂ ಅಲ್ಲ. ಹೆಣ್ಮಕ್ಕಳಿಗೆ, ಅದರಾಗೂ

middle class ಹೆಣ್ಮಕ್ಕಳಿಗೆ, ಅಂದರ ನಮ್ಮ-ನಿಮ್ಮಂಥವರಿಗೆ ಒಂದ ಸಾವಿರ problems ಇರ್ತಾವ. ಆದರ ಮಜಾ ಅಂದ್ರ ಅದರಾಗ ನೂರಕ್ಕ ಎಂಬತ್ತು ಮಂದಿ ಹೆಂಗಸರಿಗೆ, –ನಮ್ಮ ದೇಶದಾಗ ಹ್ಞಾ ಮತ್ತ–ತಮ್ಮ problems ಏನು, ತಮಗಾಗೋ ಅನ್ಯಾಯ ಏನು, ಅನ್ನೂದರ ಖಬರೇ ಇರೂದಿಲ್ಲ. ಅದನ್ನ ಅವರಿಗೆ ಗೊತ್ತಮಾಡಿಕೊಡೂದು ನಮ್ಮ ಉದ್ದೇಶ. ಈ ವಿಷಯದ ಮ್ಯಾಲೆ ನಿನ್ಹಾಂಗ ಖಡಾಖಂಡಿತ ಭಾಷಣಾ ಕೊಡೋ ಹೆಂಗಸರು ಈ ಇಡೀ ಹುಬ್ಬಳ್ಳಿ-ಧಾರವಾಡದಾಗ ಮತ್ತೊಬ್ಬರು ಯಾರೂ ಇಲ್ಲಂತ ನಿನ್ನ ಕೇಳಿಕೋಳ್ಳಿಕ್ಹತ್ತೀವಿ."

"ಪ್ಲೀಜ್ ಶಶಿ, ನನಗ ಜುಲುಮಿ ಮಾಡಬ್ಯಾಡ." –ಆಕೆಯ ಧ್ವನಿಯಲ್ಲಿ ಯಾಕೋ ಎಲ್ಲಿಲ್ಲದ ಅಸಹಾಯಕತೆ ಇಣುಕಿತು.

"ನಾ ಅದೆಲ್ಲಾ ಕೇಳಾಕೆಲ್ಲ ನೋಡು. ನೀ ಬರ್ಲಿಕ್ಕೇ ಬೇಕು. ನಾಳೆ ಸಂಜೀನ್ಯಾಗ ಟೌನ್‌ಹಾಲಿನೊಳಗ ಪ್ರೋಗ್ರ್ಯಾಂ ಅದ. ನೀ ಆರ ಗಂಟೇಕ್ಕ ಬಂದ್ರೂ ಆದೀತು."

"ಶಶೀ, ನಿನಗ ಗೊತ್ತದ, ನಮ್ಮನೀಯವ್ರಿಗೆ ಈಗ ಬೆಳಗಾವಿಗೆ ಟ್ರಾನ್ಸ್‌ಫರ್ ಆಗೇದ. ಅವ್ರು ಶನಿವಾರ, ರವಿವಾರ ಎರಡೇ ದಿನಾ ಮನೀಗೆ ಬಂದಿರ್ತಾರ. ಅಂಥಾದರಾಗ–"

"ಅಲ್ಲs ವಿಮಲಾ, ಲಗ್ನಾಗಿ ಹತ್ತ ವರ್ಷಾಗಿ, ಮೂರು ಮಕ್ಕಳಾದ್ರೂ ಇನ್ನೂ ಒಂದು ಸಂಡೇ evening ಗಂಡನ್ನ ಬಿಡೂದಾಗೂದಿಲ್ಲs ನಿನಗ ? ನಿನ್ನಂಥಾ ಹೆಂಗಸರಿಂದs ನಮ್ಮ ದೇಶದಾಗಿನ ಗಂಡಸ್ರು ಇಷ್ಟ ಸೊಕ್ಕಿಗೇರಿದ್ದು. ಅದೆಲ್ಲಾ ನನಗ ಹೇಳಬ್ಯಾಡ. ನೀ ಬರ್ಲಿಕ್ಕೇಬೇಕನೋಡು."

ಶಶಿಯ ಜೊತೆ ಬಂದಿದ್ದ ಹೆಂಗಸರೂ ದನಿಗೂಡಿಸಿದಾಗ ಲೋಕಲ್ ಟ್ರೇನಿನ ವ್ಹಿಸಲ್ ಕೇಳಿಸಿತು. ಆಕೆ ಏನೊಂದನ್ನೂ ಹೇಳದೆ ಓಡುತ್ತಲೇ ಪ್ಲ್ಯಾಟ್‌ಫಾರ್ಮು ಸೇರಿ, ಹೊರಟಿದ್ದ ಗಾಡಿಯ ಒಂದು ಬೋಗಿಯನ್ನೇರಿ ಧೊಪ್ಪೆಂದು ಕುಸಿದು ಕುಳಿತಳು.

*

ಮನೆ ಸೇರಿ, ಸೀರೆ ಬದಲಿಸಿ, ಕೈಕಾಲು-ಮುಖ ತೊಳೆದುಕೊಂಡು, ಸ್ಟವ್ ಹೊತ್ತಿಸಿ ಆಕೆ ಚಹಾಕ್ಕೆ ಎಸರಿಡುತ್ತಿದ್ದಂತೆ ಪಡಸಾಲೆಯಿಂದ ಪಾಪು ಅಳತೊಡಗಿದ್ದು ಕೇಳಿಸಿತು. ಜೊತೆಗೆ ರಾಜೂನ ಏರುಧ್ವನಿ– "ನಾ ಕೊಡೂದಿಲ್ಲಾ ಅಂದ್ರ ಕೊಡೂದಿಲ್ಲಾ. ಈ ಬಾಲ್ ಅಮ್ಮಾ ನನಗ ತಂದಾಳ." ಪಾಪುವಿನ ಅಳು ಜೋರಾದಂತೆ ರಾಜುವಿನ ಧ್ವನಿಯೂ ಏರಿತು. ಆದರೆ ದಣಿದ ಮೈಗೆ ಆ ಮಕ್ಕಳನ್ನು ಸಮಾಧಾನಗೊಳಿಸುವುದಕ್ಕಿಂತ ಒಂದು ಕಪ್ಪು ಚಹಾನೇ ಹೆಚ್ಚು ಆವಶ್ಯಕ ಅನಿಸಿ ಆಕೆ ಅಡಿಗೆಮನೆಯಿಂದ ಕದಲಲಿಲ್ಲ. ನಡುಮನೆಯಲ್ಲಿ 'ಹರೇಕೃಷ್ಣ ಹರೇಕೃಷ್ಣ ಕೃಷ್ಣಕೃಷ್ಣ

ಹರೇಹರೇ' ಅನ್ನುತ್ತ ಮಂಚಕ್ಕೊರಗಿದ್ದ ಮಾವನವರು ಎದ್ದು ಹೋಗಿ ಮಕ್ಕಳನ್ನು ರಮಿಸಿಯಾರೆಂದು ಆಕೆ ಚಹಾ ಸೋಸತೊಡಗಿದಳು. ಪಾಪುವಿನ ಧ್ವನಿ ಈಗ ತಾರಕಕ್ಕೇರಿತು. ಯಾಕೋ ಇದ್ದಕ್ಕಿದ್ದಂತೆ ಅವಳಿಗೆ ಎಲ್ಲರಮೇಲೂ ವಿಪರೀತ ಸಿಟ್ಟು ಬಂದು ರಾಜು-ನೀಲು-ಪಾಪು ಮೂವರಿಗೂ ಒಂದೊಂದು ಇಕ್ಕರಿಸೋಣವೆಂದು ರಭಸದಿಂದ ಹೊರಗೆ ಬಂದಳು.

ಅಷ್ಟರಲ್ಲೇ ಮೆಟ್ಟಲೇರಿ ಬಾಗಿಲಿಗೆ ಬಂದಿದ್ದ ಶಂಕರನನ್ನು ಕಂಡು ಆಕೆ ಒಂದು ನಿಮಿಷ ಗಪ್ಪನೆ ಅಲ್ಲೇ ನಿಂತಳು. ಅಪ್ಪನನ್ನು ಕಂಡೊಡನೆ ಮಕ್ಕಳ ಚೀರಾಟ ನಿಂತಿತು. ಗಂಡನನ್ನು ಸ್ವಾಗತಿಸಲು ನಗಲೆತ್ನಿಸುತ್ತ ಆತನ ಕೈಯಲ್ಲಿನ ಬ್ರೀಫ್‌ಕೇಸು ಇಸಿದುಕೊಳ್ಳಲು ಆಕೆ ಬಾಗಿದಾಗ ತುಸು ಅಸಹನೆಯಿಂದಲೆ ನುಡಿದ ಆತ,

"ಇದೇನು ಗದ್ದಲ ವಿಮಲಾ ? ಈ ಹುಡುಗರ ಧಾಂಧಲೇ ರಸ್ತೇಕ್ಕ ಕೇಳಸ್ತಿತ್ತು. ಹೆಂಡತಿ ಗ್ರ್ಯಾಜ್ಯುಯೇಟ್ ಇದ್ದರ ಮಕ್ಕಳ್ನ ಛಲೋತ್ನ್ಯಾಗಿ ಬೆಳಸ್ತಾಳಂತ ಕಡಿಮೀ ವರದಕ್ಷಿಣಿ ತಗೊಂಡು ನಿನ್ನ ಲಗ್ನಾದೆ. ನೀ ಹುಡುಗರಿಗೆ ಸ್ವಲ್ಪೂ discipline ಕಲಿಸಿಲ್ಲ ನೋಡು."

ಮಾತನಾಡದೆ ಆಕೆ ಬ್ರೀಫ್‌ಕೇಸನ್ನೂ ಪಾಪುವನ್ನೂ ಎತ್ತಿಕೊಂಡು ಒಳನಡೆದಳು.

ಮಕ್ಕಳಿಗೆ ತಿಂಡಿಕೊಟ್ಟು ಹೊರಗೆ ಕಳಿಸಿ, ಗಂಡನಿಗೂ ಮಾವನಿಗೂ ನಡುಮನೆಯಲ್ಲೇ ತಿಂಡಿ ಚಹ ಕೊಟ್ಟು, ಮತ್ತೆ ಆಕೆ ಅಡಿಗೆಮನೆ ಸೇರುವಾಗ ಗಂಟೆ ಎಂಟರ ಸಮೀಪ ಬಂದಿತ್ತು. ಚಪಾತಿಗೆ ಹಿಟ್ಟು ಕಲಸಿಟ್ಟು ಸೊಪ್ಪು ಬಿಡಿಸುತ್ತ ಕೂತಾಗ ಆಕೆಗೆ ಫಕ್ಕನೆ ನೆನಪಾಯಿತು. L.I.C. ಯಿಂದ ಮೂರು ಮೆಮೋ ಬಂದಿದ್ದವು. ರಾಜೂನ ಹೆಸರಿನ ಪಾಲಿಸಿಗೆ ಹಣ ಕಟ್ಟುವುದಿತ್ತು. ಮುಂಜಾನೆ ಹತ್ತಕ್ಕೆ ಗಡಬಡಿಸಿ ಮನೆಬಿಟ್ಟು ಹೊರಟು ಸಂಜೆ ಏಳಕ್ಕೆ ಮನೆ ಸೇರುವ ತನಗೆ ಆ ಕೆಲಸ ಮಾಡಲಾಗಿರಲೇ ಇಲ್ಲ. ಅದೊಂದು ಕೆಲಸ ಮಾಡಿ ಹೋಗಲು ಶಂಕರನಿಗೆ ಹೇಳಬೇಕು. ಹಾಗೆಯೇ ನಾಳೆ ಮರೆಯದೇ ಪಾಪುವನ್ನು ಡಾಕ್ಟರ ಕಡೆ ಕರೆದೊಯ್ದು ತೋರಿಸಲು ಹೇಳಬೇಕು. ಇತ್ತೀಚೆ ಸದಾ ನೆಗಡಿ-ಕೆಮ್ಮು-ಜ್ವರ ಆತನಿಗೆ. ಮೂರು ವರ್ಷದ ಮಗು ಪಾಪು, ದಿನವಿಡೀ ಒಂಟಿಯಾಗಿ ಮುದುಕ ಅಜ್ಜನೊಡನೆ ಹೇಗೆ ಕಾಲ ಕಳೆಯುತ್ತದೋ.... ನೆನೆಸಿದರೆ ಸಂಕಟವಾಗುತ್ತದೆ. ಹಾಗೆಯೇ ಬರುತ್ತಾ ನೀಲೂಗೆ ಯೂನಿಫಾರ್ಮಿನ ಬಟ್ಟೆ ತಂದರಾಯಿತು. ಇಷ್ಟೆಲ್ಲ ಸಂಜೆಗಾಯಿತು. ಮುಂಜಾನೆ ಶಂಕರ ಹೇಗೂ ಫ್ರೀ ಇರುತ್ತಾನಲ್ಲ, ರೇಲ್ವೆ ಹಳಿಯ ಆಚೆಗಿರುವ ಅಡ್ಡೆಗೆ ಹೋಗಿ ನಾಲ್ಕಾರು ಮಣ ಕಟ್ಟಿಗೆ ತರಲು ಹೇಳಬೇಕು. ಚಿಮಣೀ ಎಣ್ಣೆ ಸಿಗುವುದು ತೀರ ತಾಪತ್ರಯವಾಗಿ ಹೋಗಿದೆ. ಮಳೆಗಾಲ ಬೇರೆ ಸುರು ಇನ್ನು.

–ನಡುಮನೆಯಿಂದ ಮಾವನವರ ಸಣ್ಣಗಿನ ನರಳುವಿಕೆ ಕೇಳಿಸಿತು. ಜೊತೆಗೇ– "ವಿಮಲಾಬಾಯಿ, ಸ್ವಲ್ಪ ನೀರು ಕೊಡವಾ." ಅವರಿಗೆ ನೀರು ಕೊಟ್ಟು ಬಂದಾಗ ಆಕೆಗೆ ಮೊನ್ನೆ ಮಾವನವರನ್ನು ನೋಡಲು ಬಂದಿದ್ದ ಆಚೆಮನೆಯ ಡಾಕ್ಟರ್ ಹೇಳಿದ್ದು ಥಟ್ಟನೆ ನೆನಪಾಯಿತು : "ಇವರಿಗೆ ಹಿಂಗ ಹಗಲೆಲ್ಲ ಹೊಟ್ಟೆನೋವು ಬರತದ ಅಂತೀರಲ್ಲಾ, ಅಪೆಂಡಿಸೈಟಿಸ್ ಆಧಾಂಗ ಅವs ಲಕ್ಷಣ. ಡಿಸ್ಪೆನ್ಸರಿಗೆ ಕರಕೊಂಡು ಬಾ ಅಂತ ಹೇಳ್ರಿ ನಿಮ್ಮ ಯಜಮಾನ್ರು ಬಂದಾಗ. ಪೂರಾ ಚೆಕ್‌ಅಪ್ ಮಾಡಬೇಕು. ಬಹುತೇಕ ಆಪರೇಶನ್ ಮಾಡ್ಬೇಕಾದೀತು." ಹ್ಞಾ, ಇದನ್ನಂತೂ ಮರೆಯದೆ ಮಾಡಲು ಹೇಳಬೇಕು ಶಂಕರನಿಗೆ.

ನಸುಗತ್ತಲು. ಅಡಿಗೆಮನೆಯ ಬಲ್ಬು ತೀರ ಮಂದ. ಹಿಂದಿನಿಂದ ಕೈಗಳೆರಡು ಆಕೆಯನ್ನು ಬಳಸಿದಾಗ ಬೆಚ್ಚಿ ಒಮ್ಮೆಲೆ ತಲೆಯೆತ್ತಿ ತಿರುಗಿ ನೋಡಿ ಆಕೆ ಅಂದಳು, "ಛೀ, ಇದೇನು ಹುಡುಗಾಟ ನಿಮ್ಮದು ? ಹುಡುಗೂರು ಬಂದಗಿಂದಾರು."

ಶಂಕರನ ಬಿಗಿತ ಮತ್ತೂ ಬಿಗಿಯಾದಾಗ ಹೌದೋ ಅಲ್ಲವೋ ಅನ್ನುವಂತೆ ಒಮ್ಮೆ ಮೈ ಜುಮ್ಮೆಂದರೂ ಆಕೆ ಬಿಡಿಸಿಕೊಳ್ಳುತ್ತ ಅಂದಳು : "ಅಡಿಗಿ ಆಗಬೇಕು ಇನಾ, ಮಾವನವರಿಗೆ ಊಟ ತಡಾ ಆದರ ತ್ರಾಸಾಗತದ."

ಅವಳನ್ನು ಬಿಟ್ಟು ಎದ್ದು ನಿಂತ ಆತ ಆಕ್ಷೇಪಣೆಯ ಧ್ವನಿಯಲ್ಲಿ ಅಂದ : "ಯಾವಾಗ ನೋಡಿದ್ರೂ ಹುಡುಗೂರು, ಮಾವನವರು, ಅಡಿಗೀ, ಕೆಲಸಾ. ನಿನ್ನ ಗಂಡಗೂ ಏನರೆ ಒಂದಿಷ್ಟು ಜಾಗಾ ಅದs ಏನು ನಿನ್ನ ಮನಸಿನ್ಯಾಗ ? ನಿನ್ನ ಜೀವನದಾಗ ?"

ಈ ಹುಡುಗರು, ಈ ಮಾವನವರು, ಈ ಅಡಿಗೆ, ಈ ಕೆಲಸ– ಇವೆಲ್ಲ ಯಾರವು, ಯಾರಿಗಾಗಿ –ಅಂತ ಕೇಳಬೇಕೆನಿಸಿದರೂ ಆಕೆ ಸುಮ್ಮನೆ ಚಪಾತಿ ಲಟ್ಟಿಸತೊಡಗಿದಳು.

–ಊಟ ಮುಗಿಸಿದ ಹುಡುಗರು ಹಾಸಿಗೆಗಾಗಿ ಗಲಾಟೆ ಮಾಡುತ್ತಿದ್ದಾಗ ಆಕೆ ಕೈಲಿದ್ದ ಕೆಲಸ ಬಿಟ್ಟು ಬರುತ್ತಿದ್ದಂತೆಯೇ, ಕುರ್ಚಿಯಲ್ಲಿ ಪೇಪರು ಹಿಡಿದುಕೊಂಡು ಸಿಗರೇಟು ಸೇದುತ್ತ ಆರಾಮಾಗಿ ಕೂತ ಶಂಕರ ಅಂದ : "ಇವ್ರಿಗೆಲ್ಲಾ ಲಗೂ ಹಾಸಿಗೀ ಹಾಸಿ ಕೊಟ್ಟು ಮಲಗಸಬಾರದs ಮಾರಾಯಳs, ತಲೀ ಚಿಟ್ಟ ಹಿಡಸತಾವ."

ಹುಡುಗರನ್ನು ಮಲಗಿಸಿ ತಲೆಬಾಗಿಲನ್ನು ಹಾಕಿ, ನಡುಮನೆಯಲ್ಲಿ ಮಾವನವರಿಗೂ ಹಾಸಿಕೊಟ್ಟು, ಉಳಿದಿದ್ದ ಕೆಲಸ ಮುಗಿಸಲೆಂದು ಆಕೆ ಮತ್ತೆ ಅಡಿಗೆಮನೆ ಸೇರಿದಾಗ, ಅವಳ ಹಿಂದೆಯೇ ಬಂದ ಶಂಕರ ಆಕಳಿಸುತ್ತ ಅಂದ : "ಇನ್ನ ಭಾಂಡೀ ತಿಕ್ಕಿಕೋತ ಎರಡ ತಾಸ ಕೂಡಬ್ಯಾಡ ಮಾರಾಯಳs, ಇವ್ನೆಲ್ಲಾ ಎತ್ತಿ ಬಚ್ಚಲದಾಗ ಇಟ್ಟಬಿಡೂ ಲಗೂನ. ನನಗ ನಿದ್ದಿ ಬಂದದ." ಅಷ್ಟೆಂದು ಆತ

ತುಂಟತನದಿಂದ ಕಣ್ಣು ಮಿಟುಕಿಸಿದ್ದು ಕಂಡರೂ ಕಾಣದಂತೆ ಆಕೆ ಕೆಲಸ ಮುಂದುವರಿಸಿದಳು.

ಮೂರೇ ಕೋಣೆಗಳ ಆ ಸಂಸಾರದಲ್ಲಿ ಗಂಡ ಬಂದಾಗ ಅವರಿಬ್ಬರೂ ಅಡುಗೇಮನೆಯಲ್ಲೇ ಮಲಗುವುದು ಅನಿವಾರ್ಯವಾಗಿತ್ತು. ಶಂಕರನಿಗೆ ಧಾರವಾಡದಲ್ಲೇ ಕೆಲಸವಿದ್ದಾಗ ಅವನ ಡಿಪಾರ್ಟ್‌ಮೆಂಟಿನ ಕ್ವಾರ್ಟರು ಇತ್ತು ಅವರಿಗೆ. ತೀರ ದೊಡ್ಡದಲ್ಲವಾದರೂ ನಾಲ್ಕೈದು ಕೋಣೆಗಳ ಮನೆ. ಎಷ್ಟೋ ಅನುಕೂಲವಾಗಿತ್ತು. ಅಡಿಗೆಮನೆಯಲ್ಲಿ ಇಲಿಗಳ ಉಪದ್ರವ ಸಹಿಸಿಕೊಳ್ಳುತ್ತ ರಾತ್ರಿ ಕಳೆಯಬೇಕಾಗಿರಲಿಲ್ಲ. ಇಲ್ಲಿನಂತೆ ನಸುಕಿನಲ್ಲಿ ನಾಲ್ಕಕ್ಕೇ ಎದ್ದು ನೀರು ತುಂಬಬೇಕಾಗಿರಲಿಲ್ಲ. ಆದರೆ ಎರಡು ವರ್ಷಗಳಿಂದೀಚೆ– ಶಂಕರನಿಗೆ ಬೆಳಗಾವಿಗೆ ಟ್ರಾನ್ಸ್‌ಫರ್ ಆದಾಗಿನಿಂದ– ಈ ನೂರು ತಾಪತ್ರಯಗಳು ಸುರುವಾಗಿವೆ. ಪಿ.ಡಬ್ಲ್ಯೂ.ಡಿ.ಯಲ್ಲಿ ಸ್ಯೂಪರ್‌ವಾಯಿಜರ್ ಆಗಿರುವ ಆತನ ಪಗಾರ ಸಂಸಾರಕ್ಕೆ ಸಾಕಾಗುವುದಿಲ್ಲ – ಮಾವನವರ ಅನಾರೋಗ್ಯ, ಬೆಳೆಯುತ್ತಿರುವ ಮಕ್ಕಳು, ಮನೆ ಕಟ್ಟಿಸಲೆಂದು – ಈಗಲ್ಲ, ಮುಂದೆಂದೋ ಅನುಕೂಲವಾದಾಗ ಕಟ್ಟಿಸಲೆಂದು – ಪ್ಲಾಟು ಕೊಳ್ಳುವಾಗ ಮಾಡಿದ್ದ ಸಾಲ, ಬೇಗನೇ ಮಾಡಬೇಕಾಗಿದ್ದ ಶಂಕರನ ತಂಗಿಯ ಮದುವೆ.... ಹೀಗೇ ನೂರೆಂಟು ಚಿಂತೆಗಳು. ಹೀಗಾಗಿ ಹುಬ್ಬಳ್ಳಿಯ ಬ್ಯಾಂಕೊಂದರಲ್ಲಿನ ಕ್ಲಾರ್ಕ್ ಕೆಲಸ, ಸಣ್ಣದೇ ಆಗಿದ್ದರೂ, ಅದನ್ನಾಕೆ ಬಿಡುವಂತಿಲ್ಲ. ಕೆಲಸ ಮಾಡುವ ಗಂಡ-ಹೆಂಡಿರನ್ನು ಒಂದೇ ಊರಲ್ಲಿಡಬೇಕೆಂಬ ಕಾನೂನೇನೋ ಇದೆ. ತಿರುಗಿ ಧಾರವಾಡಕ್ಕೇ ವರ್ಗ ಮಾಡಿಸಿಕೊಳ್ಳಲು ಶಂಕರ ಪ್ರಯತ್ನಪಡುತ್ತಲೂ ಇದ್ದಾನೆ. ....ಅಥವಾ ಮರೆತಿರುವನೇನೋ! ಬಹಳ ಮರೆಗುಳಿ ಮನುಷ್ಯ ಆತ. ವಾರವಾರವೂ ಆತ ಬಂದಾಗ ಅದನ್ನೇ ನೆನಪಿಸಿದರೂ ಮತ್ತೆ ಮರೆಯುವ ಮನುಷ್ಯ. ಇಂದು ಮತ್ತೆ ನೆನಪಿಸಬೇಕು....

– ಹೌದು, ಆತನ ಅಗಲವಾದ ಎದೆಯಲ್ಲಿ ಮುಖ ಹುದುಗಿಸಿ ಹೇಳಬೇಕು – ಶಂಕರ, ನೀನಿಲ್ಲದೆ ಈ ಭಾರ ನಾನು ಒಬ್ಬಳೇ ಹೊರಲಾರೆ. ಇತ್ತೀಚೆಗಂತೂ ನಾನು ಕುಸಿದುಹೋಗುತ್ತಿದ್ದೇನೆ, ದೈಹಿಕವಾಗಿ, ಮಾನಸಿಕವಾಗಿ. ನೀನು ಇಲ್ಲಿಗೇ ಬಾ. ಲಗೂ ಬಾ. ನನಗೆ ಸಾಕಾಗಿ ಹೋಗಿದೆ.... ಇಷ್ಟು ಹೇಳಿದರೆ ಕೊನೆಗೆ ತನಗೆ ಅಳು ಬರುವುದು ಖಂಡಿತ. ಆತನಿಗೆ ಬೇಸರವಾಗುತ್ತದೇನೋ– ಆದರೂ ಅಡ್ಡಿಯಿಲ್ಲ.

– ಆದರೆ ಎಲ್ಲ ಕೆಲಸ ಮುಗಿಸಿ ದೀಪವಾರಿಸಿ ಹನ್ನೊಂದೂವರೆ ಗಂಟೆಗೆ ಆಕೆ ಹಾಸಿಗೆ ಸೇರಿದಾಗ ಯಾವ ಮಾತಿಗೂ ಅವಕಾಶ ಕೊಡದೆ ಶಂಕರ ಆಕೆಯನ್ನು ಬಿಗಿದಪ್ಪಿದ.

....ಮತ್ತೆ ಉಸಿರಾಡುವುದು ಸಾಧ್ಯವಾದಾಗ ಆಕೆ ಸೋತಧ್ವನಿಯಲ್ಲಿ ಮಾತನಾಡಿದಳು, "ಶಂಕರ...."

"ಇನ್ನ ನಿನ್ನ ಪುರಾಣ ಸುರೂ ಮಾಡಬ್ಯಾಡ ಮಾರಾಯಳS– ಎಂದ ಟಾನ್ಸಫರ್ ಮಾಡಿಸಿಗೋತೀ ಅಂತ."

ಯಾಕೋ ಆಕೆಗೆ ಒಮ್ಮೆಲೆ ಅನಿಸಿತು- ಟ್ರಾನ್ಸಫರ್ ಮಾಡಿಸಿಕೊಳ್ಳಲು ಬಹುಶಃ ಈತ ಸೀರಿಯಸ್ಸಾಗಿ ಪ್ರಯತ್ನ ಮಾಡುತ್ತಲೇ ಇಲ್ಲ, ಟ್ರಾನ್ಸಫರ್ ಮಾಡಿಸಿಕೊಂಡು ಇಲ್ಲೇ ಬಂದು ಈ ಎಲ್ಲ ಜಂಜಾಟದಲ್ಲಿ ಮತ್ತೆ ಸಿಕ್ಕಿಕೊಳ್ಳಲು ಈತನಿಗೆ ಮನಸ್ಸಿಲ್ಲ, ಈತ ಬಹುಶಃ ಇನ್ನೆಂದೂ ಇಲ್ಲಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವುದೇ ಇಲ್ಲ....

ಉದ್ವಿಗ್ನಳಾಗಿ ಆಕೆ ಆತನತ್ತ ತಿರುಗಿ ಆತನ ಭುಜಗಳನ್ನು ಹಿಡಿದು ಮತ್ತೆ ಕರೆದಳು, "ಶಂಕರ...."

"ವಿಮಲಾ, ಪ್ಲೀಜ್, ನನಗ ಭಯಂಕರ ನಿದ್ದಿ ಬಂದದ. ನಿನಗ ಏನು ಹೇಳೂದಿದ್ರೂ ಮುಂಜಾನೆ ಎದ್ದ ಮ್ಯಾಲೆ ಹೇಳು. ಎಲ್ಲಾ ಕೇಳ್ತೀನಿ. ಈಗ ನನಗ ಸುಮ್ನS ತ್ರಾಸ ಕೊಡಬ್ಯಾಡ."

ಆಕೆ ಸುಮ್ಮನಾದಳು. ಮುಂದೆ ಎರಡೇ ಕ್ಷಣದಲ್ಲಿ ಆತನ ಗೊರಕೆ ಸುರುವಾಯಿತು. ಆತನ ಗೊರಕೆಯನ್ನೂ ನಡುಮನೆಯಿಂದ ಆಗೀಗ ಬರುತ್ತಿದ್ದ ಮಾವನವರ ನರಳಿಕೆಯನ್ನೂ ಡಬ್ಬಿಗಳ ಸಂದುಗಳಲ್ಲಿ ಓಡಾಡುತ್ತಿದ್ದ ಇಲಿಗಳ ಚಿಂವ್‌ಗುಡುವಿಕೆಯನ್ನೂ ಸುಂಯ್ಯೆಂದು ಬೀಸುತ್ತಿರುವ ಹೊರಗಿನ ಗಾಳಿಯ ಸದ್ದನ್ನೂ ಕೇಳುತ್ತ ನಿದ್ರಿಸಲು ಆಕೆ ವ್ಯರ್ಥ ಪ್ರಯತ್ನ ಮಾಡಿದಳು.

ದೂರದಲ್ಲೆಲ್ಲೋ ಕಚೇರಿಯ ಗಡಿಯಾರ ಎರಡು ಗಂಟೆ ಬಾರಿಸಿದ್ದು ಕೇಳಿಸಿತು. ಆಯಿತು, ಇನ್ನೇನು, ಇನ್ನೆರಡು ಗಂಟೆಗೆಲ್ಲ ನಳ ಬರುತ್ತದೆ. ಎದ್ದು ನೀರು ತುಂಬಬೇಕು. ಇತ್ತೀಚೆಗೆ ಹಾಳಾದ್ದು ನಳ ನಸುಕಿನ ನಾಲ್ಕಕ್ಕೇ ಬಂದು ಆರು ಗಂಟೆಯ ಒಳಗೇ ಹೋಗಿ ಬಿಡುತ್ತದೆ. ಆರಕ್ಕೆ ಸರಿಯಾಗಿ ಪಾಪು ಏಳುತ್ತಾನೆ. ಆಮೇಲೆಲ್ಲಿಯ ನಿದ್ರೆ ? ಮಾವನವರಿಗೆ ಆರೂವರೆಗೆ ಸರಿಯಾಗಿ ಚಹಾ ಬೇಕು.

ಒಮ್ಮೆ ಮಗ್ಗುಲಾಗಿ ಆ ನಸುಬೆಳಕಿನಲ್ಲಿ ಆಕೆ ಗಂಡನನ್ನು ನೋಡಿದಳು. ಉದ್ದಕ್ಕೂ ಮಲಗಿದ್ದಾನೆ. ಸುಖ ಉಂಡು ತೃಪ್ತಿಗೊಂಡು ಮಲಗಿದ್ದಾನೆ. ಎಡಗಡೆ ಕಿವಿಯ ಹತ್ತರ ತುಸು ಬೆಳ್ಳಗಾಗಿದೆ ಕೂದಲು. ಅದು ಬಿಟ್ಟರೆ ಆತನಿನ್ನೂ ತರುಣನ ಹಾಗೆಯೇ ಕಾಣುತ್ತಾನೆ. ಆತನ ಜೀವನೋತ್ಸಾಹ ಒಂದಿಷ್ಟೂ ಕಡಿಮೆಯಾಗಿಲ್ಲ. ತನಗಿಂತ ಆರು ವರ್ಷಕ್ಕೆ ದೊಡ್ಡವನು. ತಾನೇಕೆ ಮುದುಕಿಯಾಗುತ್ತಿದ್ದೇನೆ ? ಈ ಎರಡು ವರ್ಷದಲ್ಲಂತೂ ಮನೆಯ ಕೆಲಸ, ಆಫೀಸಿನ ಕೆಲಸ, ಮಕ್ಕಳನ್ನು

ಸುಧಾರಿಸುವುದು, ಹುಬ್ಬಳ್ಳಿ-ಧಾರವಾಡ ನಡುವೆ ಓಡಾಟ– ಸಾಕಾಗಿ ಹೋಗಿದೆ. ಕನ್ನಡಿ ತನಗೆ ಹೇಳುತ್ತದೆ– ತಾನೀಗ ಮೊದಲಿನ ವಿಮಲಾ ಅಲ್ಲ. ಹಣೆಯ ಮೇಲಿನ ನಿರಿಗೆ, ಅರ್ಧದಷ್ಟು ಬೆಳ್ಳಗಾದ ತಲೆಕೂದಲು, ಬತ್ತಿ ಹೋದ ದೇಹ, ಉತ್ಸಾಹವೇ ಇಲ್ಲದ ಮನಸ್ಸು.... ತನ್ನ ಚೈತನ್ಯವೆಲ್ಲ ಸೋರಿ ಹೋಗುತ್ತಿದೆಯೇ ? ಅಥವಾ ಈ ಗಂಡ ಅದನ್ನೆಲ್ಲ ಬಾಚಿ ಹೆಕ್ಕಿಕೊಂಡಿದ್ದಾನೋ ?

–ನಸುಕಿನಲ್ಲೆದ್ದು ಆಕೆ ನೀರು ತುಂಬುವ ಪಾತ್ರೆ ತೊಳೆಯುತ್ತಿದ್ದಾಗ ಆ ಸದ್ದಿಗೆ ಎಚ್ಚತ್ತ ಶಂಕರ : ‘‘ನಡರಾತ್ರ್ಯಾಗ ದೀಪಾ ಹಚ್ಚಿಗೊಂಡು ಇದೇನು ಧಾಂಧಲೇ ನಡಸೀದಿ ?’’

‘‘ನೀರು ಲಗೂ ಹೋಗ್ತಾವ್ರಿ’’ ಅಂದಳು ಆಕೆ. ಮದುವೆಯಾದ ಹೊಸತರಲ್ಲಿ ಅತ್ತೆ-ಮಾವ ಇದ್ದ ಹಳ್ಳಿಗೆ ಹೋದಾಗ ಆಕೆ ಬಾವಿಯಿಂದ ನೀರು ಸೇದಲೆಂದು ಹಿತ್ತಿಲಿಗೆ ಹೋದಾಗ, ತಾಯಿಯ ಕಣ್ಣು ತಪ್ಪಿಸಿ ಹಿತ್ತಿಲಿಗೆ ಬಂದ ಶಂಕರ ನೀರು ಸೇದಿ ಕೊಡುತ್ತಿದ್ದುದು ನೆನಪಾಯಿತು ಆಕೆಗೆ. ನಗು ಬಂತು. ‘‘ಥತ್, ನಿದ್ದೀನೂ ಮಾಡಿಸಿಕೊಡಾಂಗಿಲ್ಲ ನೀನು’’ –ಅಂತನ್ನುತ್ತ ದಿಗ್ಗನೆದ್ದು ಆತ ಪಡಸಾಲೆಗೆ ಹೋಗಿ ರಾಜುವಿನ ಪಕ್ಕದಲ್ಲಿ ಮಲಗಿದ.

–ಎಲ್ಲರ ಚಹಾ-ತಿಂಡಿ ಮುಗಿದ ನಂತರ ಎಂಟೂವರೆಗೆ ಆರಾಮಾಗಿ ಎದ್ದು ಬಂದ ಶಂಕರನಿಗೆ ಚಹಾ ಕೊಡುತ್ತ ಆಕೆ ಅಂದಳು, ‘‘ಲಗೂ ಸ್ನಾನಾ ಮಾಡಿ ಒಂದಿಷ್ಟ ಕಟಿಗೀ ಅಡ್ಡೇದ ಕಡೆ ಹೋಗಿ ಬರ್ರಿ. ಮಳೆಗಾಲ ಸುರೂ ಆಗೂದ್ರಾಗ ಕಟಿಗೀ ತಗೊಂಡು ಇಟಗೊಳ್ಳೂದು ಛಲೋ. ಬಂದ ಮ್ಯಾಲ ಮಾವನವರ್ನ ಕರಕೊಂಡು ಅಠವಲೇ ಡಾಕ್ಟರ ಕಡೆ ಹೋಗಿ ಬರ್ರಿ. ಹೊಟ್ಟೆ ನೋವು -ಹೊಟ್ಟೆ ನೋವು ಅಂತ ಭಾಳ ಒದ್ದ್ಯಾಡತಾರ ಪಾಪ.’’

‘‘ಇಲ್ಲೇ ಮಗ್ಗಲದಾಗ ಇದ್ದಾರ ಡಾಕ್ಟರು. ನೀನs ಸವುಡು ಮಾಡಿಕೊಂಡು ಅಪ್ಪನ್ನ ಕರಕೊಂಡು ಹೋಗಬಾರದs ಒಮ್ಮೆ ? ಕೆಲವು ಹೆಂಗಸರು ಎಷ್ಟ efficient ಇರ್ತಾರ ಏನ ಕಥೀ, ನೀ ನೋಡು ಅಳುಬುರುಕಿ, ಒಂದೂ ಕೆಲಸ ಆಗಾಂಗಿಲ್ಲ.’’

‘‘ನಾ ಯಾವದಂತ ಮಾಡ್ಲಿ ?’’ ತಡೆಯಲಾರದೆ ಆಕೆ ಅಂದಳು, ‘‘ಇನ್ಶೂರನ್ಸ್‌ದ್ದು ರೊಕ್ಕಾ ತುಂಬೂದದ, ಹುಡುಗೂರಿಗೆ ಅರಿವೀ ತರೂದದ, ಪಾಪೂಗ ಮೈಯಾಗ ನೆಟ್ಟಗಿಲ್ಲ, ಆಫೀಸಿಂದು ಅಕೌಂಟ್ ಬರಿಯೂದದ–’’

‘‘ಸಾಕುಸಾಕು ಮಾರಾಯಳs, ವಾರಕ್ಕ ಎರಡ ದಿನಾ ಮನೀಗೆ ಬರ್ತೀನಿ. ಬಂದಾಗೊಮ್ಮೆ ಇದs ಹಾಡs. ಮನೀಗೆ ಬಂದ್ರೂ ಸುಖಾ-ಶಾಂತೀ-ಸಮಾಧಾನ ಸಿಗೂದು ಬರದಿಲ್ಲ ನಮ್ಮ ಹಣ್ಯಾಗ. ಇದಕ್ಕಿಂತ ಬೆಳಗಾವ್ಯಾಗಿನ ಆ ಗಣೇಶ್ ಲಾಜಿನ್ಯಾಗಿನ ರೂಮೇ ಸುಖಾ’’ –ಚಹದ ಕಪ್ಪನ್ನು ಕುಕ್ಕಿ ಆತ ಎದ್ದು ಹೋದ.

ನಡುಮನೆಯಿಂದ ಮಾವನವರ ಧ್ವನಿ ಕೇಳಿಸಿತು, ಮೆತ್ತಗೆ– “ಹಂಗ್ಯಾಕ ಸಿಡಿಪಿಡಿ ಮಾಡತೀಯೋ ಶಂಕರೂ ? ಆಕೀನೂ ಪಾಪ ಒಬ್ಬಾಕಿ, ಒಳಗೂ-ಹೊರಗೂ ದುಡೀಬೇಕು. ನೀ ದೂರ ಒಬ್ಬನs ಆರಾಮು ಇರ್ತಿ. ಬಂದಾಗರೆ ಸ್ವಲ್ಪ ಸಹಾಯ ಮಾಡಲಾ. ನಿನ್ನ ಪಿ. ಡಬ್ಲ್ಯೂ. ಡಿ. ಆಫೀಸೇನು, ನಾಳೆ ಸೋಮವಾರ ಒಂದಿಷ್ಟ ತಡಾ ಆಗಿ ಮಧ್ಯಾಹ್ನ ಹೋದ್ರೂ ನಡೀತದ. ಮುಂಜಾನೆ ಅದೇನೋ ಇನ್ಶ್ಯೂರನ್ಸ್ ಕೆಲಸಾ ಅಂತಾಳಲಾ, ಅದನ್ನ ಮಾಡಿ ಹೋಗು.”

ಶಂಕರ ಏನೂ ಮಾತಾಡಲಿಲ್ಲ.

ಮುಂದೆ ಒಂದು ತಾಸಿನಲ್ಲೇ ಪ್ರತ್ಯಕ್ಷನಾದ ಶಂಕರನ ಇಲ್ಲಿಯ ಗೆಳೆಯ ಪಾಟೀಲ್. “ವಿಮಲಾ, ಚಹಾ ಮಾಡು” ಅಂತ ಪಡಸಾಲೆಯಿಂದಲೇ ಕೂಗಿ ಹೇಳಿದ ಶಂಕರ. ಆಕೆ ಚಹಾ ಒಯ್ದು ಗೆಳೆಯರಿಬ್ಬರಿಗೂ ಕೊಡುವಾಗ ಪಾಟೀಲ್ ನಮ್ರ ಧ್ವನಿಯಲ್ಲಿ ಹೇಳಿದ, “ವೈನೀ, ಇವತ್ತ ಶಂಕರನ್ನ ಎರಡ ತಾಸು ದಯಮಾಡಿ ನಮ್ಮ ಕೂಡ ಕಳಿಸಿಬಿಡ್ರಿ. ಛಲೋ ಇಂಗ್ಲಿಶ್ ಪಿಕ್ಚರ್ ಅದs ಹತ್ತ ಘಂಟೇಕ್ಕ. ಭಾಳ ದಿನಾ ಆತು ನಾವಿಬ್ರೂ ಕೂಡಿ ಸಿನೇಮಾ ನೋಡದೇ. ಪ್ಲೀಜ್, ಏನಂತೀರಿ ?”

ಹುಚ್ಚುನಗೆ ನಕ್ಕು ಆಕೆ ಅಂದಳು, “ಓಹೋ, ಕರಕೊಂಡು ಹೋಗ್ರೆಲಾ, ನಾಯಾಕ ಬ್ಯಾಡ ಅನ್ಲಿ ?”

ಮಾವನವರ-ಹುಡುಗರ ಊಟ ಮುಗಿಸಿ ಶಂಕರನಿಗಾಗಿ ಕಾಯುತ್ತ ಕೂತಳು ಆಕೆ. ಶಶಿ ಕುಲಕರ್ಣಿಯ ಭಾಷಣದ ಆಮಂತ್ರಣ ನೆನಪಾಯಿತು. ಬೇಡ, ಸಂಜೆ ಕೆಲವಾದರೂ ಮಹತ್ವದ ಕೆಲಸ ಮುಗಿಸಬೇಕು. ಹೇಗೂ ಸಂಜೆಯೆಲ್ಲ ಶಂಕರ ಫ್ರೀ ಇರುತ್ತಾನೆ, ಎಲ್ಲ ಮುಗಿದ ನಂತರ ಇನ್ನೂ ಟೈಮು ಉಳಿದರೆ ಹಾಗೇ ಮಕ್ಕಳನ್ನು ಕರಕೊಂಡು ಯೂನಿವರ್ಸಿಟಿಯ ಕಡೆ ತಿರುಗಾಡಲು ಹೋದರಾದೀತು– ಅನಿಸಿತು.

ಒಂದು ಗಂಟೆಯ ಹೊತ್ತಿಗೆ ಬಂದ ಶಂಕರ ತುಂಬ ಗಡಿಬಿಡಿಯಲ್ಲಿದ್ದ : “ಲಗೂ ಊಟಕ್ಕ ಬಡಸು ವಿಮಲಾ, ಎರಡ ಘಂಟೇಕ್ಕ ನಮ್ಮ ಜೇ. ಈ. ಸಾಹೇಬರ ಕಾರು ಬೆಳಗಾವಕ್ಕ ಹೋಗೂದದ. ಅದರಾಗs ಹೋಗಿಬಿಡ್ತೀನಿ.”

ಆಕೆ ನಿಂತಲ್ಲೇ ಸ್ತಬ್ಧಳಾದಳು ಒಂದು ಕ್ಷಣ.

“ಇಷ್ಟ ಲಗೂ ಯಾಕ ಹೊಂಟ್ಯೋ ? ಮುಂಜಾನೆ ಹೋಗಿದ್ದರ ಆಗತಿತ್ತಲಾ” ಅಂದರು ಮಾವನವರು.

“ಇಲ್ಲ ಅಪ್ಪಾ, ಈಗ ಬಸ್ಸಿಗೆ ಭಾಳ ಗದ್ದಲ ಇರತದ. ಎರಡೆರಡ ತಾಸ ಕ್ಯೂದಾಗ ನಿಂದರಬೇಕಾಗತದ. ಅನಾಯಾಸ ಕಾರು ಹೊಂಟದ. ಹೋಗಿಬಿಡ್ತೀನಿ.”

ಮಾತನಾಡದೆ ಗಬಗಬ ಊಟ ಮುಗಿಸಿದ ಆತ. ಹಾಗೆಯೇ ತನ್ನ ಬ್ರೀಫ್‌ಕೇಸು

ಎತ್ತಿಕೊಂಡು "ಬರ್ತೀನಿ ಅಪ್ಪಾ" ಅಂತ ಹೇಳಿ ಪಡಸಾಲೆಗೆ ಬಂದ. ಆತನ ಹಿಂದೆಯೆ ಬಂದ ಆಕೆ ತಡೆಯದೆ ಕೇಳಿದಳು, "ಮುಂದಿನ ಶನಿವಾರ ನಿಮಗೆ ಸೂಟೀ, ಸೆಕೆಂಡ್ ಸ್ಯಾಟರ್ಡೇ ಅದ. ಶುಕ್ರವಾರನs ಬರ್ತೀರಲಾ ?"

ನಿರ್ಲಕ್ಷ್ಯದಿಂದ ಆತನೆಂದ, "ನೋಡ್ತೇನಿ. ಸೂಟೀ ಇದ್ರೂ ಕೆಲಸ ಇದ್ದs ಇರ್ತಾವ." ನಂತರ ಒಮ್ಮೆ ತುಂಟನಗು ನಕ್ಕು ಅವಳೆಡೆ ನೋಡಿ ಮತ್ತೆ ಸೇರಿಸಿದ, "ಹಗಲೆಲ್ಲ ಬಂದು ಮಾಡೂದರೆ ಏನದ ? ನಿನಗೂ ಮೊದಲಿನ ಹುರುಪs ಇಲ್ಲ ಈಗ."

ಮಕ್ಕಳಿಗೆ ಟಾಟಾ ಹೇಳಿ ಬೀದಿಯ ತಿರುವಿನಲ್ಲಿ ಆತ ಮರೆಯಾಗುವ ವರೆಗೂ ನಿಂತು ನೋಡುತ್ತಿದ್ದಳು ಆಕೆ.

*

ಗಂಡ ದೂರವಾಗುತ್ತಿದ್ದಂತೆ ಮುಂಜಾನೆ ಮಾವನವರು ಅಂದಿದ್ದು ನೆನಪಾಯಿತು : 'ದೂರ ಒಬ್ಬನs ಇರ್ತೀ....' ದೂರ-ಬೆಳಗಾವಿ– ಗಣೇಶ್ ಲಾಜ್– ಯಾರಿಗೆ ಗೊತ್ತು, ಅಲ್ಲಿ ಆತ ಹೇಗಿರುತ್ತಾನೋ, ಏನು ಮಾಡುತ್ತಾನೋ.... ಇನ್ಶ್ಯೂರನ್ಸ್‌ಗೆ ಹಣ ತುಂಬುವುದು, ಮಳೆಗಾಲ, ಕಟ್ಟಿಗೆ, ಪಾಪುವಿನ ಜ್ವರ, ಮಾವನವರ ಹೊಟ್ಟೆ ನೋವು, ಅಡಿಗೆ, ಆಫೀಸು, ಲೋಕಲ್ ಟ್ರೇನು.... ಯಾಕೋ ಕಣ್ಣಿಗೆ ಕತ್ತಲು ಬಂದಂತೆನಿಸಿ ಆಕೆ ಬಾಗಿಲಲ್ಲೇ ಕುಸಿದು ಕೂತಳು.

*

"ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕು ಕಾಲು ಶತಮಾನ ಕಳೆದು ಹೋದರೂ ನಮ್ಮ ಹೆಂಗಸರು ಮಾತ್ರ ಇನ್ನೂ ಗುಲಾಮಗಿರಿಯಲ್ಲೇ ಇದ್ದಾರೆ. ಇದಕ್ಕೆ ಕಾರಣ ೨೫% ಸಂಪ್ರದಾಯ, ಇನ್ನು ೨೫% ಪರಿಸ್ಥಿತಿ, ಇನ್ನು ೫೦% ಗಂಡಸರು (ಚಪ್ಪಾಳೆ). ಇದು ಅಂತರ್‌ರಾಷ್ಟ್ರೀಯ ಮಹಿಳಾ ವರ್ಷ. ಮಹಿಳೆಯರಿಗೆ ಸ್ವತಃದ ಬಗ್ಗೆ ಜಾಗೃತಿಯನ್ನುಂಟು ಮಾಡಿಕೊಡುವ ವರ್ಷ. ನಾವಿನ್ನು ಎಚ್ಚೆತ್ತುಕೊಳ್ಳಬೇಕು. ದಾಸ್ಯದ ಸಂಕೋಲೆಯನ್ನು ಹರಿದೊಗೆಯಬೇಕು. ನಮಗಾಗುತ್ತಿರುವ ಅನ್ಯಾಯವನ್ನು ಎಲ್ಲ ವಿಧದಲ್ಲೂ ಪ್ರತಿಭಟಿಸಬೇಕು. ಯಾವ ಕಾರಣಕ್ಕಾಗಿಯೂ ಯಾರೆದುರಿಗೂ ಬಗ್ಗಬಾರದು. ಅಂದಾಗ ಮಾತ್ರ–"

–ರವಿವಾರ ಸಂಜೆ ಹುಬ್ಬಳ್ಳಿಯ ಟೌನ್ ಹಾಲಿನಲ್ಲಿ ನೆರೆದಿದ್ದ ಅಪಾರ ಮಹಿಳಾ ವೃಂದ ಕಿವಿ-ಕಣ್ಣು-ಬಾಯಿ ಎಲ್ಲ ತೆರೆದುಕೊಂಡು ಪ್ರಶಂಸೆ ಬೆರೆತ ಕೌತುಕದಿಂದ ಶ್ರೀಮತಿ ವಿಮಲಾ ಶಂಕರ್ ಅವರ ಭಾಷಣ ಕೇಳುತ್ತಿತ್ತು.

❖ ❖ ❖

# ಮರ್ಯಾದೆ

ಕಾರು ಆ ದೊಡ್ಡ ಮನೆಯ ದೊಡ್ಡದಾದ ಕಂಪೌಂಡಿನಲ್ಲಿ ಪ್ರವೇಶಿಸಿ ಒಂದು ಟರ್ನ್ ತೆಗೆದುಕೊಂಡು ಪೋರ್ಟಿಕೋದಲ್ಲಿ ನಿಲ್ಲುತ್ತಿದ್ದಂತೆಯೆ, ಡ್ರೈವ್ಹರ್ ಇಳಿದು ಬಂದು ಹಿಂದಿನ ಬಾಗಿಲು ತೆರೆಯುವುದನ್ನು ಕಾಯದೆ ಆಕೆ ತಾನಾಗಿ ಇಳಿದಳು. ಆಕೆ ಎಣಿಸಿದಂತೆಯೆ ಆಕೆ ಮೆಟ್ಟಲುಗಳನ್ನೇರುವ ಮೊದಲೇ 'ಕಮಲಕ್ಕ ಬಂದ್ಳು', 'ಕಮಲಾ ವೈನ್ಸ ಬಂದ್ರು', 'ಓ ಕಮಲಕ್ಕ' ಅಂತ ಕೂಗಿಕೊಂಡು ಒಳಗಿನವರೆಲ್ಲ ಅವಳನ್ನು ಸ್ವಾಗತಿಸಲು, ಇದ್ದ ಕೆಲಸ ಇದ್ದಂತೆಯೆ ಚೆಲ್ಲಿಕೊಟ್ಟು ಓಡಿಬಂದರು. ಬಹಳ ದಿನಗಳ ನಂತರ ತವರಿಗೆ ಬರುತ್ತಿದ್ದ ಆಕೆಯನ್ನು ನೋಡುತ್ತ ಮುಗುಳ್ನಗುತ್ತ ನಿಂತುಕೊಂಡರು. ಅವಳ ಚಿಕ್ಕ ಸೂಟ್‌ಕೇಸನ್ನು ಹೊತ್ತುತಂದ ಡ್ರೈವ್ಹರ್‌ಗೆ ಕೂಗಿ ಹೇಳಿದ ಅವಳ ಹಿರಿಯ ತಮ್ಮ : ''ತಗೊಂಡ್ಹೋಗಿ ಅಟ್ಟದ ಮ್ಯಾಲಿನ ನಮ್ಮ ರೂಮಿನ್ಯಾಗ ಇಟ್ಬಿಡು.'' ಒಡನೆಯೇ ನಡುವಿನ ತಮ್ಮನ ಹೆಂಡತಿ ಅಂದಳು– ''ಇಲ್ಲೇ ಕೆಳಗ ನಮ್ಮ ರೂಮಿನ್ಯಾಗs ವ್ಯವಸ್ಥಾ ಮಾಡೀನಿ ವೈನ್ಸ ಅವರಿಗೆ, ಅಲ್ಲೇ ಇಟ್ಬಿಡು.'' ಏನು ಮಾಡುವುದೆಂದು ತಿಳಿಯದೆ ಡ್ರೈವ್ಹರ್ ನಿಂತಲ್ಲೆ ನಿಂತಿದ್ದಾಗ ಮುಂದೆ ಬಂದ ಆಕೆಯ ಕಿರಿಯ ತಂಗಿ ಸೂಟ್‌ಕೇಸನ್ನು ಎಳೆದುಕೊಂಡೇ ಇಸಿದುಕೊಳ್ಳುತ್ತ ಅಂದಳು– ''ಅದ್ಯಾಕ, ಇಲ್ಲೇ ಹಾಲಿನ್ಯಾಗ ನಾವೆಲ್ಲಾ ಅಕ್ಕಾ-ತಂಗಿ ಸಾಮಾನ ಇಟ್ಟೇವಿ. ಕಮಲಕ್ಕನೂ ಇಲ್ಲೇ ಇರ್ಲಿ. ಮಾತಾಡ್ಲಿಕ್ಕೆ ಛಲೋ ಆಗ್ತದ.''

''ಎಲ್ಲೆರ ಇಡ್ರಿ. ಒಂದ ದಿವ್ಸದ ಪ್ರಶ್ನಿ, ಎಲ್ಲಿದ್ರೇನು ?'' ಅನ್ನುತ್ತ ಒಳಬಂದ ಕಮಲಕ್ಕನನ್ನು ಅವರೆಲ್ಲ ಹಿಂಬಾಲಿಸಿದರು. ಹಾಲ್‌ಗೆ ಬಂದು ದೊಡ್ಡದಾದ ಸೋಫಾದ ಮೇಲೆ ಆಕೆ ಧೊಪ್ಪೆಂದು ಕೂತಾಗ ಅವರೆಲ್ಲ ಅಲ್ಲೇ ಅವಳ ಸುತ್ತ-ಮುತ್ತ ನಿಂತರು. ''ಏ ಸುಷಮಾ, ಏನ ನೋಡಿಕೋತ ನಿಂತೀ. ಹೋಗಿ ಫಸ್ಟ್‌ಕ್ಲಾಸ್ ಕಾಫೀ ಮಾಡಿಕೊಂಡು ಬಾ ಅಕ್ಕಗ'' –ಅಂತ ಆಜ್ಞಾಪಿಸಿದ ಕಿರಿಯ ತಮ್ಮ. ಒಡನೆಯೇ ಆತನ ಹೆಂಡತಿ ಚಿಗರೆ ಮರಿಯಂತೆ ಒಳಕ್ಕೆ ಹಾರಿದಳು.

ಇಡೀ ರಾತ್ರಿಯ ಪ್ರಯಾಣದಿಂದ ತುಂಬ ದಣಿದಿದ್ದರೂ ಆಕೆ ನಗುತ್ತ ಎಲ್ಲರನ್ನು ಮಾತಾಡಿಸಿದಳು. ''ಓಹೋ, ಇದೇನು, Family Reunion ಆಧಾಂಗ ಆಗೇದಲಾ - ನಿಮಗೆಲ್ಲಾ ರಜಾ ಹ್ಯಾಂಗ ಸಿಕ್ಕಿತು ಒಂದೇ ಟೈಮಿಗೆ ?''

“ರಜಾ ತಗೊಂಡ್ವಿ. ಮತ್ತ ಪ್ರಸಂಗನೇ ಹಾಂಗ ಬಂದsದಲಾ ?” -ನಡುವಿನ ತಮ್ಮನ ಧ್ವನಿ ಒಮ್ಮೆಲೆ ಸೀರಿಯಸ್ಸಾಯಿತು.

ಹಿರಿಯ ತಮ್ಮ ಸತೀಶ ಅಷ್ಟೇ ಸೀರಿಯಸ್ಸಾಗಿ ವಿವರಿಸಿದ : “ಪರಿಸ್ಥಿತಿ ತಿಳಿಸಿ ನಾನs ಪತ್ರಾ ಬರದ ಕರಿಸಿಕೊಂಡೆ ಸುರೇಶ- ರಮೇಶ ಇಬ್ರನ್ನೂ. ವಿಮಲಾ ಅಂತೂ ಡೆಲಿವ್ಹರಿಗೆ ಬಂದಾಕಿ ಇನ್ನೂ ಹೋಗಿಲ್ಲ. ಇದೆಲ್ಲಾ ಏನನ್ನೂದು ಒಮ್ಮೆ ಬಗೀಹರಿಸೇ ಹೋದ್ರಾತು ಅಂತ ನಿಂತಾಳ. ಸರಲಾನ್ನ-ಆಕೀ ಗಂಡನ್ನ ನಾನs ಮುದ್ದಾಂ ಕರಿಸಿದೆ. ನಮಗೂ ಆದಷ್ಟು moral support ಬೇಕಲಾ.”

ನಗಲೆತ್ನಿಸುತ್ತ ಆಕೆ ಅಂದಳು : “ಸತೀಶ, ನಿನ್ನದೆಲ್ಲಾ ಖಟಿಪಿಟಿ ನೋಡಿದ್ರ ಏನೋ ದೇಶಕ್ಕs ದೊಡ್ಡ ಗಂಡಾಂತರ ಬಂಧಾಂಗ ಅನಸ್ತದ.”

“ಗಂಡಾಂತರ ಬಂದದ್ದಂತೂ ಖರೆ. ಅದರಿಂದ ಪಾರಾಗೋ ಬಗೀ ಹ್ಯಾಂಗ ಅಂತ discuss ಮಾಡ್ಲಿಕ್ಕೇ ಎಲ್ಲಾರ್ನೂ ಕೂಡಿಸಿದೆ. ಆದರ ಮೂರ ದಿನದಿಂದ ನಾವೆಷ್ಟs ಗುದ್ದ್ಯಾಡಿದ್ರೂ ಏನೂ ಉಪಯೋಗ ಆಗ್ಲಿಲ್ಲ. ಅದಕ್ಕs ಕಡೀ ಉಪಾಯ ಅಂತ ನಿನಗ ಟ್ರಂಕ್‌ಕಾಲ್ ಮಾಡಿದ್ವಿ ಮೊನ್ನೆ.” – ಸತೀಶ.

“ಮೈಸೂರಿನಿಂದ ಸೊಲ್ಲಾಪೂರಕ್ಕ ಏಕಾಏಕಿ ಬರೂದಂದ್ರ ಸಣ್ಣ ಮಾತಲ್ಲ. ನೀನೂ ಭಾಳ ಬಿಝೀ ಹೆಣ್ಮಗಳು. ನಿನ್ನ ಯಜಮಾನ್ರಿಗಂತೂ ನೀ ಒಂದ ಕ್ಷಣಾ ಇಲ್ದಿದ್ರ ಆಗೂದಿಲ್ಲ. ನಿನಗ ತ್ರಾಸ ಕೊಡಬಾರದಂತs ಮಾಡಿದ್ವಿ ಮೊದ್ಲ. ಆದರ.... ಅನಿವಾರ್ಯ ಆತು.” – ಸುರೇಶ.

ಸೋಫಾದಲ್ಲಿ ಆರಾಮಾಗಿ ಒರಗುತ್ತ, ನಾದಿನಿ ತಂದಿತ್ತ ಕಾಫೀ ಗುಟುಕರಿಸುತ್ತ ಆಕೆ ಅಂದಳು, “ನನಗೇನ ತ್ರಾಸಾಗಿಲ್ಲ ಬಿಡು. ಅರ್ಜೆಂಟ್ ಅಂದ್ರಿ ಅಂತ ಕಾರು ತಗೊಂಡೇ ಹೋಗು ಅಂದ್ರು ಇವರು. ಸ್ವಲ್ಪ ಮೈ-ಕೈ ನೋವು ಅಷ್ಟs. ವಯಸ್ಸಾತಲಾ.” – ತುಸು ನಕ್ಕು ಆಕೆ ಮತ್ತೆ ಅಂದಳು, “ಇಷ್ಟಾಗಿ ನಾ ಬಂದದ್ದಕ್ಕೂ ನಿಮಗೇನರೆ ಸಹಾಯ ಆದರ ಬಂದದ್ದು ಸಾರ್ಥಕ ಆತು ಅನ್ನು.”

ಸತೀಶನ ಧ್ವನಿಯಲ್ಲಿ ಒಮ್ಮೆಲೆ ಎಲ್ಲಿಲ್ಲದ ಆರ್ಜವತೆ : “ಸಾರ್ಥಕ ಆಗೂಹಾಂಗ ಮಾಡೂದು ನಿನ್ನ ಕೈಯಾಗೇ ಅದ ಕಮಲಕ್ಕ, ನಾವೆಲ್ಲ ನಿನ್ನ ಮ್ಯಾಲs ಭರೋಸ ಇಟ್ಟೇವಿ. ನೀ ಏನರೆ ಮಾಡಿ ಈ ಅನಾಹುತ ತಪ್ಪಿಸಬೇಕು. ನಾವಂತೂ ಎಲ್ಲಾ ರೀತೀ ಪ್ರಯತ್ನ ಮಾಡಿ ಶಸ್ತ್ರಾ ಇಟ್ಟಬಿಟ್ಟೇವಿ.”

ಮಗುವಿಗೆ ಮೊಲೆಯೂಡಿಸುತ್ತಿದ್ದ ತಂಗಿ ವಿಮಲಾ ಕೆಳಗಿನ ದನಿಯಲ್ಲಿ ಅಂದಳು : “ಎಂಥಾ ಮನೆತನ ನಮ್ಮದೂ ಏನ ಕಥೀ. ಅವ್ವ ಇದ್ದಾಗ ಸ್ವರ್ಗ ಅಂತಿದ್ರು ಮಂದಿ ನಮ್ಮನೀಗೆ. ಈಗ ಮರ್ಯಾದಿ ಹೋಗೂ ಪ್ರಸಂಗ.”

ಯಾವಾಗಲೂ ದುಡುಕು-ಸಿಟ್ಟಿನ ಸ್ವಭಾವದ ರಮೇಶ ಈಗ ಮಾತಾಡಿದ : “ನೀ ಮಾಡೂ ಪ್ರಯತ್ನ ಮಾಡು ಕಮಲಕ್ಕಾ, ನೀ ಹೇಳಿದ ಮಾತು ಅವ್ರು ನಡಸೇ ನಡಸ್ತಾರ. ಇಷ್ಟೂ ಮೀರಿ ಆಗ್ಲಿಲ್ಲಂದ್ರ ನಾನೂ ನೋಡೇ ಬಿಡ್ತೀನಿ ಒಂದ ಕೈ. ಆ ರಂಡೀ ತಲೀಬೋಳಿಸಿ–”

“ಛೀ ರಮೇಶ, ಸುಮ್ನಿರು” –ಅಂದಳಾಕೆ ಒಮ್ಮೆಲೆ. ನಂತರ ತನ್ನ ಧ್ವನಿಯಲ್ಲಿ ಅವಶ್ಯಕತೆಗಿಂತ ಹೆಚ್ಚಿನ ಕಾಠಿಣ್ಯವಿದ್ದುದು ಗಮನಕ್ಕೆ ಬಂದು, ಮೃದುವಾಗಿ ಅಂದಳು : “ಯಾವದಕ್ಕೂ ದುಡುಕಬಾರದಪಾ ತಮ್ಮಾ. ವಿಚಾರ ಮಾಡಿ ಕೆಲಸಾ ಮಾಡಬೇಕು.”

ರಮೇಶನ ಧ್ವನಿಯೂ ಇಳಿಯಿತು : “ನೀನs ವಿಚಾರ ಮಾಡಿ ನೋಡು ಕಮಲಕ್ಕಾ, ಒಟ್ಟ ಏನಾರೆ ಮಾಡಿ ನಾಲ್ಕ ಮಂದ್ಯಾಗ ನಾವು ಮೊದಲಿನ್ಹಾಂಗs ತಲೀ ಎತ್ತಿ ತಿರಗೋ ಹಾಂಗ ಮಾಡು. ನಿನ್ನ ಮ್ಯಾಲ ನಮಗ ವಿಶ್ವಾಸ ಅದ.”

“ವಿಶ್ವಾಸ ಇದ್ರ ಬಗೀಹರೀತು. ನೀವೆಲ್ಲಾ ನಿಶ್ಚಿಂತಿ ಆಗಿರ್ರಿ.” ಅನ್ನುತ್ತ ಆಕೆ ಸ್ನಾನ ಮಾಡಲೆಂದು ಎದ್ದಳು.

“ನೀ ಸ್ನಾನಾ-ಊಟಾ ಮಾಡಿ ಮೊದ್ಲ ರೆಸ್ಟ್ ತಗೋ ಕಮಲಕ್ಕ, ಸಂಜೀನ್ಯಾಗ ಆರಾಮು ಕೂತು ಎಲ್ಲಾ discuss ಮಾಡಿ ಏನನ್ನೂದು ನಿರ್ಧಾರ ಮಾಡೂಣು.” ಅನ್ನುತ್ತ ಸತೀಶ ತನ್ನ ಹೆಂಡತಿಗೆ ಹೇಳಿದ, “ರಮಾ, ಅಕ್ಕನ ಕಾಳಜೀ ತಗೋ ಹ್ಞಾ.”

“ಬರ್ರಿ ವೈನ್ಸ” ಅನ್ನುತ್ತ ರಮಾ ಮುಂದಾದಳು. ಅವಳನ್ನು ಹಿಂಬಾಲಿಸುತ್ತಿದ್ದಂತೆ ತಟ್ಟನೆ ನಿಂತು ಕೇಳಿದಳು ಕಮಲಾ, “ಅಂಥಾಂಗ ಅಪ್ಪ ಇಷ್ಟ ಲಗೂ ಹೋಗ್ಯಾರೇನು ಫ್ಯಾಕ್ಟರಿಗೆ ?”

ಒಂದು ಕ್ಷಣ ಒಮ್ಮೆಲೆ ಮೌನ. ನಂತರ ತಡೆದು ಹೇಳಿದ ಸುರೇಶ, “ಹ್ಞೂ.”

ಆತನ ಧ್ವನಿಯಲ್ಲಿನ ಅಸಹನೆ ಗಮನಿಸಿದ ಕಮಲಾ ಇನ್ನೇನೂ ಕೇಳದೆ ಒಳನಡೆದಳು. ಹಾಲ್‌ನಿಂದ ಮನೆಯ ಒಳಗಿನ ಭಾಗಕ್ಕೆ ಸೇರಿದ ಹಾಗಿರುವ ಜಾಗದಲ್ಲಿ ಹಾಕಿದ್ದ ದೊಡ್ಡದಾದ ಕಟ್‌ಗ್ಲಾಸ್‌ನ ಪಾರ್ಟಿಶನ್ ದಾಟುತ್ತಿದ್ದಂತೆ ಅಭ್ಯಾಸಬಲದಿಂದಲೋ ಎಂಬಂತೆ ಆಕೆಯ ಕಣ್ಣು ಮೇಲೆ ಹೊರಳಿದವು. ಅಲ್ಲಿತ್ತು– ಗೋಡೆಯ ಮೇಲಿನ ದೊಡ್ಡದಾದ ನಕ್ಷೀ ಕೆಲಸ ಮಾಡಿದ ಫ್ರೇಮಿನಲ್ಲಿ– ತನ್ನ ಎಂದಿನ ಜಾಗೆಯಲ್ಲೇ– ಹತ್ತು ವರ್ಷಗಳಿಂದ ಇದ್ದ ಜಾಗೆಯಲ್ಲೇ– ಅವಳ, ಅವರೆಲ್ಲರ, ತಾಯಿಯ ದೊಡ್ಡ ತೈಲವರ್ಣದ ಚಿತ್ರ. ಆ ಚಿತ್ರಕ್ಕೆ ಹಾಕಿದ ದೊಡ್ಡ ಹೂಗಳ ಹಾರ, ಹಚ್ಚಿದ ಕುಂಕುಮ, ಬೆಳ್ಳಿ ನೀಲಾಂಜನದಲ್ಲಿ ಹಾಕಿಟ್ಟ ತುಪ್ಪದ ದೀಪ, ಊದಿನಕಡ್ಡಿ - ಮಾತ್ರ ಹೊಸ ದೃಶ್ಯ. ಈ ಮನೆಯ ಸೊಸೆಯರಿಗೂ ಮಕ್ಕಳಿಗೂ ಆ ಚಿತ್ರದ ಮೇಲೆ ಹೀಗೆ ಒಮ್ಮೆಲೆ ಉಕ್ಕಿ ಬಂದ ಭಕ್ತಿಗೆ ಕಾರಣವೇನೋ ಅಂದುಕೊಳ್ಳುತ್ತ

ಕಮಲಾ ಒಳನಡೆದಳು.

*

*

*

ಊಟ ಮುಗಿಸಿ ಹಾಸಿಗೆಯ ಮೇಲೆ ಅಡ್ಡಾದಾಗ ಕಮಲಾಗೆ ಕಣ್ಣು ತುಂಬ ನಿದ್ರೆ ಬಂದಿತ್ತು. ಇಡೀ ರಾತ್ರಿ ಪ್ರವಾಸದಲ್ಲಿ ನಿದ್ರೆಗೆಟ್ಟದ್ದರಿಂದ ಮೈ-ಕೈ ನೋವು. ಅರ್ಧ ಗಂಟೆಯಾದರೂ ಮಲಗಿ ಎದ್ದರೆ ಮೈ ಹಗುರಾದೀತೆಂದು ಆಕೆ ಮಗ್ಗುಲಾದಳು. ತಾಯಿ ಇದ್ದಾಗ ಉಪಯೋಗಿಸುತ್ತಿದ್ದ ದೊಡ್ಡ ಕರೀ ಮರದ ಮಂಚ. ಎಲ್ಲ ರೂಮುಗಳಿಗೂ ಹೊಸ ಸನ್‌ಮೇಕಾ ಮಂಚಗಳು ಬಂದ ನಂತರ ಇದನ್ನು ನಡುಮನೆಯಲ್ಲಿನ ಮೂಲೆಗೆ ಹಾಕಿದ್ದರು ಉಳಿದ ಹೆಚ್ಚಿನ ಸಾಮಾನುಗಳ ಜೊತೆ. ಅವಳಿಗೆ ಈ ಮಂಚದ ಮೇಲೆ ವಿಶೇಷ ಮೋಹ. ಹಿರಿಯ ಮಗಳ ಜೊತೆ ಹೆಚ್ಚಿನ ಸಲುಗೆಯಿಂದಿದ್ದ ತಾಯಿ ಆಕೆಗೊಮ್ಮೆ ನಾಚುತ್ತ ಹೇಳಿದ್ದರು, 'ಇದನ್ನ ನಾವು ಹೊಸದಾಗಿ ಸೊಲ್ಲಾಪೂರದಾಗ ಸಂಸಾರ ಹೂಡಿದ ಮ್ಯಾಲ ನಿಮ್ಮಪ್ಪ ಮಾಡಿಸಿತಂದ್ರು ಕಮಲಾ'. ತಾಯ ಮಡಿಲಲ್ಲಿ ಮಲಗಿದ ಅನುಭವ ಆಕೆಗೆ. ಆದರೆ ಯಾಕೋ ನಿದ್ರೆ ಹತ್ತುವ ಹಾಗೆ ತೋರಲಿಲ್ಲ. ಮಗ್ಗುಲು ಬದಲಿಸುತ್ತ ಆಕೆ ಒಮ್ಮೆ ಬಲವಾಗಿ ಕಣ್ಣುಮುಚ್ಚಿ ಎರಡೂ ಕೈಗಳಿಂದಲೂ ಸಿಡಿಯುತ್ತಿದ್ದ ತಲೆಯನ್ನು ಗಟ್ಟಿಯಾಗಿ ಒತ್ತಿಹಿಡಿದಳು.

ಹಾಲ್‌ನಲ್ಲಿ ಸೇರಿದ್ದ ಎಲ್ಲರೂ ತಾವು ಪಿಸುಧ್ವನಿಯಲ್ಲೇ ಮಾತಾಡುತ್ತಿದ್ದೇವೆಂದು ತಿಳಿದಿದ್ದರೂ ನಡುಮನೆಯಲ್ಲಿ ಮಲಗಿದ್ದ ಕಮಲಾಗೆ ಎಲ್ಲ ಕೇಳಿಸುತ್ತಿತ್ತು – ಅದೇ ವಿಷಯ, ಅದೇ ಚರ್ಚೆ, ಅದೇ ಅಸಹನೆ, ಅದೇ ಆತಂಕ, ಅದೇ, ಅದೇ....

"ಖರೇ ಅಂದ್ರ ನನಗನಸ್ತದ - ಅವ್ವ ಸತ್ತ ಮ್ಯಾಲ ನಾವು ಕೆಲಸಕ್ಕಂತ ಆಕಿನ್ನ ಮನೀಯೊಳಗ ಸೇರಿಸಿದ್ದೇ ತಪ್ಪಾತು. ದೊಡ್ಡ ವೈನೀ ಎಲ್ಲಾ ನೋಡಿಕೊಂಡು ಹೋಗ್ಬೇಕಾಗಿತ್ತು. ಅಂಥಾದ್ದೇನು ಮಹಾ ಕೆಲಸ ಇರ್ತದ ಮನ್ಯಾಗ ? ಅವ್ವ ಎಲ್ಲಾ ಸಂಭಾಳಿಸಿಕೊಂಡು ಹೋಗ್ತಿದ್ದಿಲ್ಲೇನು ?" – ವಿಮಲಾ.

ಹಿರಿಯ ಸೊಸೆ ರಮಾಗೆ ಈ ಅಪವಾದ ಹಿಡಿಸಲಿಲ್ಲ : "ಒಂದ ನೂರ ಮಂದಿ ಬಂಧು-ಬಳಗ, ಗೆಸ್ಟ್ಸ್-ಬರೋ ಮನೀಗೆ ಸರ್ವಂಟ್ ಬ್ಯಾಡಾ ಅಂದರ ಹ್ಯಾಂಗ ? ಅಲ್ಲಾ, ನನಗರೆ ಹಿಂಗಾಗತದಂತ ಕಲ್ಪನಾ ಹ್ಯಾಂಗ ಬರ್ಬೇಕು ? ಯಾರರೇ ಮನೀ ಯಜಮಾನ್ರು ಕೆಲಸದ ಹೆಂಗಸಿನ್ನ ಲಗ್ನಾಗ್ತೀನಿ ಅಂತಾರೇನು ? ಅಸಹ್ಯ."

"ವಿಮಲಾ ಅನ್ನೂದು ಒಂದ ರೀತೀ ಖರೇ." – ಸುರೇಶ ಗಂಭೀರವಾಗಿ

ಅಂದ– "ಈ ಹೆಂಗಸಿನ ಮ್ಯಾಲ ನಾವು ಮೊದ್ಲಿನಿಂದs ಒಂದು ಕಣ್ಣು ಇಡ್ಬೇಕಾಗಿತ್ತು. ಆಕಿನ್ನ ನೋಡಿದರ ಕೆಲಸದಾಕಿ ಅಂತ ಯಾರಂತಾರ ? ಆಕೀ ಸೀರೇನು, ಕುಬಸೇನು, ಪೌಡರೇನು, ಡೌಲೇನು ! ನಮ್ಮಪ್ಪನಂಥಾ ಮಳ್ಳ ಗಂಡಸಿನ್ನ ಬಲ್ಯಾಗ ಹಾಕ್ಕೊಳ್ಳೂದು ಆಕೀಗೆ ಅಗದೀ ಸಸಾರ ಸಾಧಿಸಿರಬೇಕು."

"ಇಷ್ಟ ಧೊಡ್ಡ-ಧೊಡ್ಡ ಗಂಡಸ ಮಕ್ಕಳು, ಸೊಸೆಂದಿರು, ಹೆಣ್ಮಕ್ಕಳು, ಅಳಿಯಂದಿರು, ಇಷ್ಟ ಮೊಮ್ಮಕ್ಕಳು– ಎಲ್ಲಾ ಇದ್ದಾಗ, ಅರವತ್ತ ವರ್ಷದ ಶಾಂತೀ ಸುದ್ಧಾ ಮಾಡಿಸಿಕೊಂಡು ನಾಲ್ಕ ವರ್ಷ ಆಗಿ ಹೋದ ಮ್ಯಾಲ, ಈಗ ಮಾವನವರಿಗೆ ಹಿಂಗ ಹರೇ ತಿರಿಗೀತು ಅಂತ ಹ್ಯಾಂಗ ಗೊತ್ತಾಗ್ಬೇಕ್ರೆವಾ ನಮಗ ?" –ಸುರೇಶನ ಹೆಂಡತಿ ಶೀಲಾಳ ಧ್ವನಿಯಲ್ಲಿ ವಿಪರೀತ ಕಾಳಜಿ.

"ಒಟ್ಟ ಎಲ್ಲಾ ಮೂರಾಬಟ್ಟಿ ಆಗೂಹಾಂಗ ಕಾಣಸ್ತದ. ನಮ್ಮ ಅವ್ವಾ ಎಂಥಾ ದೇವತಾಸ್ತ್ರೀ ! ಲಕ್ಷ್ಮೀದೇವಿ ಇದ್ಧಾಂಗ ಇದ್ಲು. ಆಕೀ ಆತ್ಮಕ್ಕ ಎಷ್ಟ ತಳಮಳ ಆಗ್ತಿರಬೇಕು ಈಗ." –ಸರಲಾಗೆ ಅಳು ತಡೆಯಲು ಆಗುವುದೇ ಇಲ್ಲ.

ಸತೀಶ ಮನೆಯ ಹಿರಿಯ ಮಗನ ಜವಾಬ್ದಾರಿಯುತವಾದ ಗದರಿಸುವ ಧ್ವನಿಯಲ್ಲಿ ಅಂದ– "ಶ್ ಸುಮ್ನಿರು ಸರಲಾ, ಅಳ್ಳಿಕ್ಕೇನಾತು ಈಗ ? ನಮಗೇನು ದುಃಖ ಆಗಿಲ್ಲೇನು ? ಅಂಥಾ ಸತೀಸಾವಿತ್ರಿ ನಮ್ಮವ್ವನ ಜಾಗಾದಾಗ ಈಗ ಹತ್ತ ವರ್ಷದ ಮ್ಯಾಲ ಈ ಅಡಿಗೀ ಸರಸವ್ವನ್ನ ನೆನಿಸಿದರ ನಮಗೂ ಹೊಟ್ಟಿ ಉರೀತದ. ಕಮಲಕ್ಕ ಬಂದಾಳಲಾ ಈಗ, ಆಕಿ ಏನರೆ ಮಾಡಿ ಎಲ್ಲಾ ಬರೋಬ್ಬರಿ ಮಾಡ್ತಾಳ ಸುಮ್ನಿರ್ರಿ ನೀವೆಲ್ಲಾ. ಅಪ್ಪಾ ಆಕೀ ಮಾತು ಎಂದೂ ತಗದು ಹಾಕವರಲ್ಲಾ."

"ಪಾಪ, ಕಮಲಾವೈನ್ಸ ದಣದ ಬಂದಾರ. ಊಟಾನ ನೆಟ್ಟಗ ಮಾಡ್ಲಿಲ್ಲ. ಮಧ್ಯಾಹ್ನ ಒಂದಿಷ್ಟ ಸಿರಾ ಮಾಡೂಣs ರಮಕ್ಕ ?" –ಸುಷಮಾನ ಕಳಕಳಿ.

"ಹ್ಞಾ ಹ್ಞಾ. ಅವ್ರು ಬರ್ತಾರಂತ ಬಟಾಟೀ ಚೂಡಾನೂ ಮಾಡಿಟ್ಟೆ ನಾ ನಿನ್ನೆ- ಕಮಲಾವೈನ್ಸಗ ಭಾಳ ಸೇರ್ತದ ಅಂತ." –ರಮಾನ ಮುಂಧೋರಣೆ.

"ನನಗನಸ್ತದ ಸತೀಶಣ್ಣ, ನಾವೇನ ಇನ್ನ ಕಾಳಜೀ ಮಾಡೋ ಜರೂರಿಲ್ಲ. ಮೊನ್ನೆ ನಾವೆಲ್ಲಾ ಕೂಡಿ ಅಪ್ಪನ್ನ oppose ಮಾಡಿದಾಗ ಅಪ್ಪ ಹೇಳೇ ಬಿಟ್ಟರಲ್ಲ – 'ಕಮಲಾ ಬರ್ಲಿ, ಆಕಿ ಏನಂತಾಳೋ ಹಾಂಗ ನಡೀಲಿಕ್ಕೆ ತಯಾರಿದ್ದೀನಿ ನಾನು. ನನಗೂ ಮಕ್ಕಳ ಮನಸ್ಸು ನೋಯಿಸೋ ಮನಸಿಲ್ಲ' –ಅಂತ ? ಕಮಲಕ್ಕ ಬಂದದ್ದು ದೊಡ್ಡ ಭಾರ ಇಳಧಾಂಗಾತು ನಮಗ. ಅಲ್ಲs ?" –ಸುರೇಶ.

"ಹಾಂಗೆಲ್ಲಾ ನೀ ಆಶಾ ಹಿಡೀಬ್ಯಾಡ. ನಮ್ಮಪ್ಪಾ ಭಾಳ diplomatic ಇದ್ದಾನ. ಇಷ್ಟ ವರ್ಷ ರಾಜಕೀಯದಾಗ, ಬಿಝಿನಿಸ್‌ನ್ಯಾಗ ಪಳಗಿದ ಆಸಾಮಿ. ಅಷ್ಟ

ಹಗರದಾಗ ಇಟ್ಟ ಹೆಜ್ಜೀ ಹಿಂದ ತಕ್ಕೊಳ್ಳೋ ಜಾತೀನs ಅಲ್ಲ ಅದು." –ರಮೇಶ.

'ಒಟ್ಟ ಈಗ ಮನೀ ಮರ್ಯಾದೀ ಪ್ರಶ್ನಿ ಬಂದದ ಅಂತ ನನಗೂ ಇಷ್ಟ ಹೌಹಾರಿಧಾಂಗ ಆಗೇದ. ಇಷ್ಟ ಥೊಡ್ಡ ಮನೆತನಾ! ಇಂಥಾ ಥೊಡ್ಡ ಬಿಝಿನೆಸ್ ನಮ್ದು! ನಮ್ಮ ಕಾರು ಹೊಂಟರ ರಸ್ತೇದಾಗಿನ ಮಂದಿ ಮಗ್ಗಲ ಸರದ ನಿಂತು ನಮಸ್ಕಾರ ಮಾಡ್ತಾರ. ಮುನಿಸಿಪಲ್ ಕೌನ್ಸಿಲರ ಆಗಿದ್ರು ಅಪ್ಪ, ಎಮ್.ಎಲ್.ಎ. ಆಗಿದ್ರು, ನಾಳಿನ ಇಲೆಕ್ಶನ್‌ದಾಗ ಮಿನಿಸ್ಟರ್‌ನೂ ಆದಾರು.... ಅಂಥಾ ಮನಶ್ಯಾ ಆ ಅಡಿಗೀ ಸರಸವ್ವನ್ನ ಲಗ್ನಾಗತಾರ ಅಂದರ– ಛೀ ಛೀ, ನನಗ ನೆನಸಿದರ ಮೈಮ್ಯಾಲ ಮುಳ್ಳ ಬರ್ತಾವ." –ಸತೀಶ.

"ನೀ ಸುಮ್ನ ಮನಸಿಗೆ ಹಚಿಗೋಬ್ಯಾಡ ಅಣ್ಣ. ಈಗ ಕಮಲಕ್ಕ ಬಂದಾಳಲಾ ಅದಕ್ಕs. ಆಕಿ ಹೇಳಿದ್ರ ಅಪ್ಪಾ ಕೇಳ್ಯಾರು ಅಂತ ಖಾತ್ರಿ ಅದ ನಮಗ. ಮುಪ್ಪಿನ ಕಾಲದಾಗ ಈ ಮರ್ಯಾದಿಗೇಡಿ ಕೆಲಸಾ ಮಾಡಬ್ಯಾಡ್ರೀ ಅಂತ ಕಮಲಕ್ಕ ಸ್ಪಷ್ಟ ಹೇಳ್ತಾಳ ಅಪ್ರಿಗೆ. ಆಕೀ ಹಾಂಗ ನಿರ್ಭಿಡೆಯಿಂದ ಮಾತಾಡ್ಲಿಕ್ಕೆ ಬರೂದಿಲ್ಲ ನಮಗ್ಯಾರಿಗೂ–" ಸರಲಾ.

"ಹೌದೌದು–"

–ಸತೀಶನ ಮಾತು ಅಲ್ಲಿಗೇ ನಿಂತಿತು. ಒಮ್ಮೆಲೆ ಹಾಲ್‌ನಲ್ಲಿ ನಿಃಶಬ್ದತೆ. ಏನಾಯಿತೆಂದು ಕಮಲಾ ಅಚ್ಚರಿಪಡುತ್ತಿದ್ದಂತೆ ಹೊರಗೆ ಕಾರು ನಿಂತ ಶಬ್ದ ಕೇಳಿಸಿತು. ಹ್ಞಾ, ಅಪ್ಪ ಬಂದರೆಂದು ಕಾಣುತ್ತದೆ. ಕಾಣುವುದೇನು, ಅವರ ಬೂಟ್ಸಿನ ಖಟ್ ಖಟ್; ಜೊತೆಗೇ, 'ಏ ನಿಂಗ್ಯಾ, ಕಾರಿನ್ಯಾಗಿನ ಹಣ್ಣಿನ ಬುಟ್ಟಿ ಒಳಗಿಡೋ'; 'ರಂಗಪ್ಪ, ಇನ್ನ ಇಪ್ಪತ್ತ ಮಿನಿಟಿನ್ಯಾಗ ಮತ್ತ ಹೋಗ್ಬೇಕು ಫ್ಯಾಕ್ಟರಿಗೆ, ಕಾರು ಗರಾಜಕ್ಕ ಒಯ್ಯಬ್ಯಾಡ'– ಗೊಗ್ಗರು ದನಿಯಲ್ಲಿ ಆದೇಶ, ಅಪ್ಪಣೆ. ಹಾಲ್‌ನಲ್ಲಿ ಸೇರಿದ್ದ ಸಭೆ ಸದ್ದಿಲ್ಲದೆ ಕರಗಿತ್ತು. ಎಲ್ಲರೂ ತಮ್ಮ-ತಮ್ಮ ಕೋಣೆಗಳಿಗೆ ಎದ್ದು ಹೋಗಿದ್ದರು. ಅಪ್ಪನ ಹೆಜ್ಜೆಯ ಸದ್ದು ಹತ್ತಿರವಾಗುತ್ತಿದ್ದಂತೆ, ನಡುಮನೆಯ ಮಂಚದ ಮೇಲೆ ಎಚ್ಚರವಾಗಿಯೇ ಮಲಗಿದ್ದ ಕಮಲಾಗೆ ಒಮ್ಮೆಲೆ ಎದ್ದು ಅವರನ್ನು ಸ್ವಾಗತಿಸಿ ಅಚ್ಚರಿಗೊಳಿಸಬೇಕು ಅನಿಸಿತು. ಆದರೆ ಆಕೆ ನಿದ್ರೆ ಹತ್ತಿದಂತೆ ಹಾಗೇ ಸದ್ದಿಲ್ಲದೆ ಮಲಗಿದಳು. ನಡುಮನೆಯಲ್ಲಿನ ಕತ್ತಲೆಯಿಂದಾಗಿ ಆಕೆಯನ್ನು ಕಾಣದೆ ಸೀದಾ ಒಳಗಿನ ತಮ್ಮ ರೂಮಿಗೆ ಹೋದರು ಅಪ್ಪ. ಹಿಂದಿನಿಂದ ಆ ನೇರವಾದ ಆಕೃತಿ–ಅಗಲವಾದ ಬೆನ್ನು ನೋಡುತ್ತಿದ್ದಂತೆ ಆಕೆಗೆ ಒಮ್ಮೆಲೆ ಬಾಲ್ಯದಲ್ಲಿ ತಾವೆಲ್ಲ ಆ ಬೆನ್ನ ಮೇಲೆ ಸವಾರಿ ಮಾಡುತ್ತಿದ್ದುದು ನೆನಪಾಗಿ ಒಂದು ಥರಾ ಅನಿಸಿತು. ಅಪ್ಪನ ವಿರುದ್ಧ ತಾವೆಲ್ಲ ಎಂಥದೋ ಷಡ್ಯಂತ್ರ ನಡೆಸಿದಂತೆ, ಮುಗ್ಧ, ಅಸಹಾಯ, ತಬ್ಬಲಿ

ಮಗುವಿನ ಹಾಗೆ ಅಪ್ಪ ಒಬ್ಬರೇ ಎಲ್ಲಿಗೋ ನಡೆದಂತೆ, ಏನೋ ಕಸಿವಿಸಿ....

ಅಡಿಗೆಮನೆಯಲ್ಲಿ ಪಿಸುಧ್ವನಿ ಕೇಳಿಸಿದಾಗ ಆಕೆಗೆ ಒಮ್ಮೆಲೆ ನೆನಪಾಯಿತು– ತಾವು ಊಟಕ್ಕೆ ಕೂತಿದ್ದಾಗ ಸರಸವ್ವ ಎದುರಿಗೆ ಬಂದಿರಲಿಲ್ಲ. ರಮಾನೇ ಬಡಿಸಿದ್ದಳು ಎಲ್ಲರಿಗೂ. ಅಪ್ಪ ಈ ವಯಸ್ಸಿನಲ್ಲಿ ಇಷ್ಟೊಂದು ಕೆಲಸ ಮಾಡುತ್ತಾರಲ್ಲ, ಅವರು ಮಧ್ಯಾಹ್ನ ದಣಿದು ಊಟಕ್ಕೆ ಬಂದಾಗ ಡೈನಿಂಗ್ ಹಾಲ್ ಎಲ್ಲ ಖಾಲಿ. ಅಷ್ಟು ದೊಡ್ಡ ಟೇಬಲಿಗೆ ಅವರೊಬ್ಬರೇ ಕೂತು ಏನು ಉಣ್ಣುತ್ತಾರೋ....

“ಇನ್ನಿಷ್ಟು ಅನ್ನಾ ಹಾಕ್ಲೇನ್ರಿ ಸಾಹೇಬರ ? ನೀವೇನೂ ಉಣ್ಣಽವಲ್ರೆಲಾ” ಸರಸವ್ವನ ಮೆತ್ತಗಿನ ಧ್ವನಿ.

“ಸಾಕ ಸರಸ್ವತಿ, ಇವತ್ತ ಫ್ಯಾಕ್ಟರಿಯೊಳಗ ಕೆಲಸ ಭಾಳ ಅದ. ಭಾಳ ಉಂಡೆ ಅಂದ್ರ ಕೆಲಸಾ ಹ್ಯಾಂಗ ಮಾಡ್ಲಿ ?” –ಗಡಿಬಿಡಿಯಿಂದ ಉಣ್ಣುತ್ತಿದ್ದ ಅಪ್ಪನ ಧ್ವನಿ.

“ಹೊಟ್ಟೀಕಿಂತಾ ಕೆಲಸ ಹೆಚ್ಚಿನದಲ್ಲ. ಸಾವಕಾಶ ಊಟಾ ಮಾಡ್ರಿ.”

“ಸಾಕ ಸಾಕು, ನಂದು ಆಗೇ ಹೋತು.”

ಸಿಂಕ್‌ನಲ್ಲಿ ನಳ ತಿರುಗಿಸಿದ ಸಪ್ಪಳ ; ಜೊತೆಗೇ ಅಪ್ಪನ ದೊಡ್ಡ ತೇಗು ; ನಂತರ, “ಅಡಿಕೀ ತಗೋಳ್ರಿ.”

“ಅಂಧಾಂಗ ಸರಸ್ವತಿ, ಇವತ್ತ ನಮ್ಮ ಎಲ್ಲಾ ಕಾಟನ್ ಮಿಲ್ಸ್‌ನ ಮ್ಯಾನೇಜರ್ಸು ಬರ್‍ತಾರ ಆಫೀಸಿಗೆ. ಮೀಟಿಂಗ್ ಅದ. ನಾ ಬರ್‍ಲಿಕ್ಕೆ ತಡಾ ಆಗ್ತದ.”

“ಆದಷ್ಟು ಲಗೂ ಬರ್‍ರಿ. ಕಮಲಕ್ಕ ಬಂದಾರ.”

“ಆ್ಞ ? ಕಮಲಾ ಬಂದಾಳಽ ? ಎಲ್ಲೆ ? ಯಾವಾಗ ?” ಆ ಧ್ವನಿಯಲ್ಲಿನ ಪ್ರೀತಿ ತುಂಬಿದ ಆತುರತೆ ಗಮನಿಸಿದ ಕಮಲಾಗೆ ಇನ್ನೇನು ಅವರಿಲ್ಲಿ ಬಂದೇ ಬಿಟ್ಟರು ಅನಿಸಿ, ಯಾಕೋ ಅಪ್ಪನ ಮುಖ ನೋಡಲು ಆತಂಕ ಅನಿಸಿ, ಇನ್ನೇನು ಮಾಡುವುದು ಅನಿಸಿ, ತುಂಬ restless ಅನಿಸಿತು. ಆದರೆ ಮರುಕ್ಷಣ ಸರಸವ್ವ ಹೇಳಿದ್ದು ಕೇಳಿ ಹಾಯೆನಿಸಿತು : “ಅವ್ರು ರಾತ್ರೀ ಎಲ್ಲಾ ಪ್ರವಾಸ ಮಾಡಿ ದಣದು ಬಂದಾರ. ಸ್ವಲ್ಪ ವಿಶ್ರಾಂತಿ ತಗೋಳ್ಲಿ ಬಿಡ್ರಿ. ಸಂಜೀನ್ಯಾಗ ಭೆಟ್ಟಿ ಆಗೀರಂತ.”

“ಅದೂ ಖರೇನಽ, ನಾ ಇನ್ನ ಬರ್‍ತೀನಿ ಹಂಗಾರ” ಅನ್ನುತ್ತಲೇ ಆತ ಹೊರಟರು. ಆತನ ಬೂಟ್ಸಿನ ಟಪ್-ಟಪ್, ಕಾರು ಸ್ಟಾರ್ಟ್ ಆಗಿ ಹೊರಟ ಸದ್ದು ಕೇಳಿಸದಂತಾಗುತ್ತಿದ್ದಂತೆ ಕಮಲಾಗೆ ಜೊಂಪು ಹತ್ತತೊಡಗಿತು.

ಜೊತೆಗೇ ಜಿಟಿಜಿಟಿ ಮಳೆಹನಿಯಂತಹ ಸಾವಿರ-ಸಾವಿರ ನೆನಪುಗಳು.... ಮೈತುಂಬ ಬಂಗಾರದೊಡವೆ ಧರಿಸಿ ಮುಗುಳ್ನಗುತ್ತಿದ್ದ ಅವ್ವ, ಅವಳನ್ನು ಕ್ಷಣಕಾಲವೂ ಬಿಟ್ಟಿರದೆ - ಲಗ್ನವಾಗಿ ಮೂವತ್ತೈದು ವರ್ಷಗಳ ನಂತರವೂ– ಅವಳ

ಹಿಂದಿಂದೆ ಸುತ್ತುತ್ತಿದ್ದ ಅಪ್ಪ, 'ಅಗದೀ ರೋಮ್ಯಾಂಟಿಕ್ ಜೋಡಿ ನೋಡು ನಿಮ್ಮಪ್ಪ-ಅವ್ವಂದು' ಅಂತ ಚೇಷ್ಟೆ ಮಾಡುತ್ತಿದ್ದಿಲ್ಲವೇ ಇವರು ? ಅವ್ವ ಸತ್ತಾಗ ಹುಚ್ಚು ಹಿಡಿದಂತಾಗಿತ್ತು ಮನೆಯಲ್ಲಿನ ಎಲ್ಲರಿಗೂ.... ಆದರೆ ಕಾಲ ಯಾರಿಗಾಗಿ ನಿಂತೀತು ? ದಿನಗಳು ಹಾಗೆ ಕಳೆದಿದ್ದವು.... ಅಪ್ಪ ಮತ್ತೆ ತಮ್ಮ ಫ್ಯಾಕ್ಟರಿ-ಮಿಲ್ಲುಗಳ, ರಾಜಕಾರಣದ, ಸಾಮಾಜಿಕ ಸಂಸ್ಥೆಗಳ, ನೂರು ಭಾನಗಡಿಯ ವ್ಯವಹಾರಗಳ ಹೊರೆ ಹೊತ್ತಿದ್ದರು. ಸತೀಶ ಎಂದಿನಂತೆ ತನಗಾಗಿ ತಂದೆ ಬೇರೆಯೇ ತೆಗೆದುಕೊಟ್ಟಿದ್ದ ವ್ಯವಹಾರದಲ್ಲಿ ತೊಡಗಿದ್ದ. ಸುರೇಶ-ರಮೇಶರು ತಮ್ಮ ತಮ್ಮ ಸಂಸಾರಗಳೊಡನೆ ಮುಂಬೈಯಲ್ಲಿನ ನೌಕರಿಗಳಿಗೆ ತೆರಳಿದ್ದರು. ಎಲ್ಲ ಎಂದಿನಂತೆಯೆ ನಡೆದಿತ್ತು. ಆದ ಬದಲಾವಣೆಗಳೆಂದರೆ– ಅಡಿಗೆಗಾಗಿ ಸರಸವ್ವನೆಂಬ ವಿಧವೆಯೊಬ್ಬಳು ಬಂದು ಸೇರಿದ್ದಳು. ಮತ್ತು ಬಹುಶಃ ಯಾರಿಗೂ ಅರಿವಿಲ್ಲದಂತೆಯೇ ಎಲ್ಲರೂ ಕಮಲಾನನ್ನು ಹೆಚ್ಚು ಆದರಿಸತೊಡಗಿದ್ದರು. ಅವ್ವ ಇದ್ದಾಗ ಎಲ್ಲ ಅವಳೆಂದಂತೆ ನಡೆಯುತ್ತಿತ್ತು. ಅವ್ವನ ಬಹಳ ಪ್ರೀತಿಯ ಹಿರಿಯ ಮಗಳೆಂದೋ ಏನೋ, ಈಗ ಮನೆತನದ ಎಲ್ಲ ವ್ಯವಹಾರಗಳಿಗೆ –ಸೊಸೆಯರನ್ನು ತವರಿಗೆ ಕಳಿಸುವುದು ಹಾಗೂ ಹೆಣ್ಣು ಮಕ್ಕಳನ್ನು ಅತ್ತೆ ಮನೆಯಿಂದ ಬರಮಾಡಿಕೊಳ್ಳುವುದು ಮೊದಲುಗೊಂಡು ಫ್ಯಾಕ್ಟರಿಗೆ ಬೇಕಾದ ಹೊಸ ಸಲಕರಣೆಗಳನ್ನು ಕೊಳ್ಳುವುದರ ತನಕ ಎಲ್ಲಕ್ಕೂ ಅವಳ ಸಲಹೆ, ಒಪ್ಪಿಗೆ ಅವಶ್ಯವಾಗಿತ್ತು.

ಅಂತೆಯೇ ಸತೀಶ ಅಷ್ಟು ಉದ್ವಿಗ್ನನಾಗಿ ಟ್ರಂಕ್ ಕಾಲ್ ಮಾಡಿದ್ದ ಆಕೆಗೆ ಎರಡು ದಿನಗಳ ಹಿಂದೆ. 'ಅಪ್ಪ ಸರಸವ್ವನ್ನ ಲಗ್ನಾಗತಾರಂತ, ಖರೇ, ಮುಂದಿನ ಶುಕ್ರವಾರನs, ಇಲ್ಲೇ, ಹ್ಞಾ ಹ್ಞಾ, ಅವರs ಹೇಳಿದ್ರು, ಹ್ಞಾ, ನನಗs ಹೇಳಿದ್ರು. ಇದನ್ನ ಹ್ಯಾಂಗರೆ ತಪ್ಪಸಬೇಕು ನೀ ಬಂದು. ಹ್ಞಾ, ಈಗಿಂದೀಗ ಹೊರಡು. ಮನೀ ಮರ್ಯಾದಿ ಪ್ರಶ್ನಿ, ಉಳದದ್ದು ಸಮಕ್ಷಮ. ಹಂಗಾರ ಬರ್ತೀಯಲಾ ? ಮಾಮಾ ಇದ್ದಾರs ? ಇಲ್ಲಿಲ್ಲ, ಅವರ ಜೋಡೀ ಏನೂ ಮಾತಾಡೂದಿಲ್ಲ. ನಮಸ್ಕಾರ ತಿಳ್ಸು. ಹ್ಞಾ, ಹಾದೀ ಕಾಯ್ತಿರ್ತೀವಿ. ಒಳ್ಳೇದು ಹಂಗಾರ.'

–ಇಲ್ಲಿ ಬಂದು ನೋಡಿದರೆ ಎಲ್ಲರ ಮುಖದ ಮೇಲೆ ಭೂತಕಳೆ. 'ಮರ್ಯಾದೀ ಪ್ರಶ್ನಿ !' ಹೌದೇನೋ. ಆದರೆ ಬರೇ ಮರ್ಯಾದೆಯ ಪ್ರಶ್ನೆಯೇ ? ಅಥವಾ....

–ಸರಸವ್ವ ಇನ್ನೂ ಚಿಕ್ಕವಳು. ಅಪ್ಪನಿಗೆ ಅರವತ್ತುನಾಲ್ಕಾದರೂ ಇನ್ನೂ ಎಷ್ಟು ಚಟುವಟಿಕೆಯಾಗಿದ್ದಾರೆ.... youthful ಕಾಣುತ್ತಾರೆ.... ಸರಸವ್ವನಿಗೆ ಮಕ್ಕಳಾದರೆ–

ನಾಲ್ಕು ಕಾಟನ್ ಮಿಲ್ಸ್, ಮೂರು ಎಲೆಕ್ಟ್ರಿಕ್ ಗುಡ್ಸ್ ಮ್ಯಾನ್ಯು ಫ್ಯಾಕ್ಚರಿಂಗ್

ಫ್ಯಾಕ್ಟರಿಗಳು, ಎರಡು ನೂರು ಎಕರೆ ತೋಟ, ಐದು ದೊಡ್ಡ ಮನೆಗಳು, ಬ್ಯಾಂಕಿನಲ್ಲಿನ ಹಣವೆಷ್ಟೋ, ಬಂಗಾರದ ಲೆಕ್ಕವಂತೂ ಯಾರಿಗೂ ಇಲ್ಲ....

—ಅಸ್ವಸ್ಥಳಾಗಿ ಕಮಲಾ ಮತ್ತೆ ಮಗ್ಗುಲು ಬದಲಿಸಿ ನಿದ್ರಿಸಲು ನಿಜವಾದ ಪ್ರಯತ್ನ ಮಾಡಿದಳು.

ಪ್ರತಿದಿನ ಮಧ್ಯಾಹ್ನ. ದೊಡ್ಡ ಡೈನಿಂಗ್ ಹಾಲ್, ಹನ್ನೆರಡು ಕುರ್ಚಿಗಳುಳ್ಳ ದೊಡ್ಡ ಟೇಬಲ್, ಮಧ್ಯಾಹ್ನ ಗಂಟೆ ಎರಡೋ ಮೂರೋ. ಎಲ್ಲರ ಊಟವಾಗಿ ತಮ್ಮ-ತಮ್ಮ ರೂಮುಗಳಲ್ಲಿದ್ದಾರೆ. ಅಪ್ಪ ಒಬ್ಬರೇ ಊಟಕ್ಕೆ ಕೂತಿದ್ದಾರೆ. ಬಡಿಸುತ್ತಿದ್ದವಳು ಸರಸವ್ವ.

ರಜಾದಿನದ ಸಂಜೆಗಳು. ಎಲ್ಲ ಸಿನೆಮಾಕ್ಕೋ ಪಾರ್ಟಿಗೋ ಶಾಪಿಂಗ್‌ಗೋ ಹೋಗಿದ್ದಾರೆ. ವ್ಹರಾಂಡಾದಲ್ಲಿನ ಬೆತ್ತದ ಕುರ್ಚಿಯ ಮೇಲೆ ಅಪ್ಪ ಒಬ್ಬರೇ ಪೈಪ್ ಸೇದುತ್ತ ಕೂತಿದ್ದಾರೆ. ಅವರ ಕಣ್ಣುಗಳು ಹೊರಗಿನ ಮುಗಿಲನ್ನೋ ಶೂನ್ಯವನ್ನೋ ದಿಟ್ಟಿಸುತ್ತಿವೆ. ಕೆಲಸ ಮುಗಿಸಿ ಒಳಗಿನಿಂದ ಬಂದ ಸರಸವ್ವ ಮೃದುವಾಗಿ ಆ-ಈ ಮಾತು ಆಡುತ್ತ, ಅಕ್ಕಿ ಆರಿಸುತ್ತ ಅಲ್ಲೇ ಕೆಳಗೆ ಜಮಖಾನೆ ಮೇಲೆ ಕೂಡುತ್ತಾಳೆ.

ರಾತ್ರಿಗಳು. ಎಲ್ಲರ ಊಟವಾಗಿ ಹೊರಟು ಹೋಗಿದ್ದಾರೆ. ವಾಚ್‌ಮನ್ ನೈಟ್‌ಡ್ಯೂಟಿಗೆ ಬಂದವನು ಕಂಪೌಂಡಿನಲ್ಲಿ ಬೀಡಿ ಸೇದುತ್ತ ಸುತ್ತುತ್ತಿದ್ದಾನೆ. ಹಾಲ್‌ನಲ್ಲಿ ಏನೋ ಕಾಗದ ಪತ್ರ ನೋಡುತ್ತ ಕೂತಿದ್ದಾರೆ ಅಪ್ಪ. ಅವರಿಗೆ ಕೆಮ್ಮು ಬರುತ್ತದೆ ಆಗಾಗ. ಸರಸವ್ವ ವ್ಹಿಕ್ಸ್ ಗುಳಿಗೆ ತಂದುಕೊಡುತ್ತಾಳೆ. ನೀರು ಕೊಡುತ್ತಾಳೆ. 'ಇನ್ನ ಮಲಕೋಳ್ರಿ ಸಾಹೇಬರs, ರಾತ್ರಿ ಭಾಳಾತು' ಅಂತ ಮೆತ್ತಗೆ ಹೇಳುತ್ತಾಳೆ.

ದಿನಾ ನಸುಕಿನ ನಾಲ್ಕು-ನಾಲ್ಕೂವರೆ ಗಂಟೆಯ ಹೊತ್ತು. ಮನೆಯಲ್ಲಿನ ಎಲ್ಲರಿಗೂ - ಆಳುಗಳಿಗೆ ಸಹ ಗಾಢ ನಿದ್ರೆ. ಅಪ್ಪ ಎದ್ದು ಮುಖ ತೊಳೆದು ತಮ್ಮ ಆಫೀಸ್ ರೂಮಿನಲ್ಲಿ ಕಾರ್ಯಮಗ್ನರಾಗಿರುತ್ತಾರೆ. ಸರಸವ್ವ ಚಹಾ ತಂದುಕೊಡುತ್ತಾಳೆ. 'ಇನ್ನೊಂದು ಕಪ್ಪು ಈಗs ಕೊಡ್ಲೇನ್ರಿ ? ಆವ್ಯಾಲ ತಗೋತೀರಾ ?' ಅಂತಲೋ, 'ಯಾಕೋ ಥಂಡಿ ಬಿಟ್ಟದ, ಸ್ವೆಟರ್ ಹಾಕ್ಕೋಳ್ರಿ' ಅಂತಲೋ ಹೇಳುತ್ತಾಳೆ.

ಅಪರೂಪಕ್ಕೊಮ್ಮೆ ಉಕ್ಕಿನಂಥ ದೇಹದ ಅಪ್ಪನಿಗೂ ಜಡ್ಡು ಬರುವುದುಂಟು. 'ಹೇಗಿದ್ದೀರಿ ?', 'ಔಷಧ ತಗೊಂಡ್ರೇನು ?' 'ರೆಸ್ಟ್ ತಗೋಳ್ರಿ' ಅಂತ ಮುಂಜಾನೆಯೋ ಸಂಜೆಗೋ ಅಂತೂ ತಮಗೆ ಬಿಡುವಾದಾಗ ಒಮ್ಮೆ ಹಣಿಕಿಹಾಕಿ, ಇಷ್ಟನ್ನು ಹೇಳಿ ಬಿಟ್ಟು ಮಾಯವಾಗುತ್ತಾರೆ— ಮಕ್ಕಳು, ಸೊಸೆಯರು, ಹಗಲು-ರಾತ್ರಿ ಅವರಿಗೆ ಔಷಧಿ ಕೊಡುತ್ತ, ಡಾಕ್ಟರನ್ನು ಕರೆಸುತ್ತ, ಪಥ್ಯ ತಯಾರಿಸುತ್ತ, ಬಿಸಿನೀರು ಕೊಡುತ್ತ, ಅದೂ

ಇದೂ ಮಾಡುತ್ತ, ಊಟ-ನಿದ್ರೆಯಿಲ್ಲದೆ ದಿನ ಕಳೆಯುತ್ತಾಳೆ ಸರಸವ್ವ.

*

*

*

ಮುಂಜಾನೆ ಎದ್ದೊಡನೆ ಸ್ನಾನ ಮುಗಿಸಿ ಡ್ರೈವ್ಹರ್‌ಗೆ ಕಾರು ರೆಡಿಯಾಗಿಡಲು ತಿಳಿಸಿ ಕಮಲಾ ಅಪ್ಪನ ರೂಮಿಗೆ ಬಂದಳು. ಆರಾಮ ಕುರ್ಚಿಯಲ್ಲಿ ಪೇಪರೋದುತ್ತ ಕೂತಿದ್ದರು ಆತ. ಹೆಜ್ಜೆ ಸಪ್ಪಳ ಕೇಳಿ ತಿರುಗಿ ನೋಡಿದವರೇ, ''ಓಹೋ ಕಮಲಾ, ಬಾ, ಬಾ, ನಿನ್ನೆ ರಾತ್ರಿ ನಾ ಬರ್ಲಿಕ್ಕೆ ಭಾಳ ಲೇಟಾತವಾ, ನೀವೆಲ್ಲಾ ಮಲಗಿಬಿಟ್ಟಿದ್ರಿ, ಬಾ ಕೂಡು,'' ಅಂದು, ಆಕೆ ಸಮೀಪಿಸುತ್ತಿದ್ದಂತೆ ಮತ್ತೆ, ''ಯಾಕ ಕಮಲಾ, ಸೊರಗೀಯೇನವಾ ? ಅರಾಮಿದ್ದೀಯಿಲ್ಲೋ ?'' –ಅಂದರು.

ನೂರಾಮೂವತ್ತು ಪೌಂಡು ಭಾರದ, ಐದೂವರೆ ಅಡಿ ಎತ್ತರದ ಮಗಳು ಸೊರಗಿದ ಹಾಗೆ ಕಾಣುವುದು ತಂದೆ-ತಾಯಿಗಲ್ಲದೆ ಬೇರಾರಿಗೆ ಸಾಧ್ಯ- ಅಂದುಕೊಳ್ಳುತ್ತ ನಕ್ಕಳು ಕಮಲಾ. ಆತನ ಪ್ರಶ್ನೆಗೆ ನೇರವಾಗಿ ಉತ್ತರಿಸದೆ ಇನ್ನೂ ಸಮೀಪ ಹೋಗಿ, ಎದುರಿಗಿನ ಮೋಢಾದ ಮೇಲೆ ಆತನಿಗೆ ತೀರ ಹತ್ತಿರ ಕೂತು, ಆತನ ಎರಡೂ ಕೈಗಳನ್ನು ತನ್ನ ಕೈಗಳಲ್ಲಿ ಹಿಡಿದುಕೊಂಡು, ಆತನ ಕಣ್ಣುಗಳನ್ನು ಸಂಧಿಸಿದಳು. ಆಕೆಗೆ ತಟ್ಟನೆ ತನ್ನ ನಾಲ್ಕು ವರ್ಷದ ಮಗನ ನೆನಪಾಯಿತು.

ತುಂಬ ಗಲಿಬಿಲಿಗೊಂಡಿದ್ದ ಅಪ್ಪ ಮಾತಾಡುವ ಮೊದಲೇ ದೃಢಸ್ವರದಲ್ಲಿ ಆಕೆ ಮಾತಾಡಿದಳು– ''ಅಪ್ಪ, ನೀವು ಬರೋ ಶುಕ್ರವಾರ ಲಗ್ನಾ ಮಾಡಿಕೋತೀರಲ್ಲ, ಮಾಡಿಕೊಳ್ರಿ. ಆದರ ಇಲ್ಲೆ ಬ್ಯಾಡ. ತುಳಜಾಪುರಕ್ಕ ಹೋಗಿ ಮಾಡಿಕೊಂಡ ಬರ್ರಿ. ನನಗ ಬಹುಶಃ ಬರ್ಲಿಕ್ಕಾಗ್ಲಿಕ್ಕಿಲ್ಲ. ಆದ್ರೂ ಪ್ರಯತ್ನ ಮಾಡ್ತೀನಿ. ಬರದಿದ್ರು ಕೆಟ್ಟನಿಸಿಕೋಬ್ಯಾಡ್ರಿ ಹ್ಞಾ. ಉಳದವರದು ಯಾವ್ದೂ ಏನೂ ಮನಸಿಗೆ ಹಚಿಗೋಬ್ಯಾಡ್ರಿ. ನಾ ಇನ್ನ ಬರ್ತೀನಿ– ಮನೀ ಎಲ್ಲಾ ಹಾಂಗs ಬಿಟ್ಟ ಬಂದೀನಿ. ನಾ ಬರಲ್ಯಾ ? I wish you the best of luck."

–ಮಾತಾಡುತ್ತಿದ್ದಂತೆ ಆಕೆ ಎದ್ದುನಿಂತಳು. ಆತನೂ. ಆತನ ಕಣ್ಣುಗಳಲ್ಲಿ ಒಂದು ಕ್ಷಣ ಎಲ್ಲಿಲ್ಲದ ಆಶ್ಚರ್ಯ. ಮರುಕ್ಷಣ ಶಾಂತ ಸಮಾಧಾನ. ಕೃತಜ್ಞತೆ. ಹೌದೋ ಅಲ್ಲವೋ ಅನ್ನುವಂತೆ ಕಣ್ಣೀರು ಸಹ. ಎಂದಿಗೂ ಮಿತಭಾಷಿಯಾದ ಆತ ಸ್ನೇಹದಿಂದ ಮಗಳ ಭುಜದ ಮೇಲೆ ಕೈಯಿರಿಸಿ ಹಾಗೇ ತಲೆಬಾಗಿಲ ವರೆಗೂ ಬಂದರು. ''ಹೋಗಿ ಬಾ ಕಮಲಾ,'' ಅಂದರು.

ಹಿರಿಯಕ್ಕನಿಗಾಗಿ ಬಹಳ ಆಸೆಯಿಂದ ಕಾಯ್ದು ಅವಳಲ್ಲಿ ವಿಶೇಷ

ಭರವಸೆಯಿಟ್ಟುಕೊಂಡಿದ್ದ ಉಳಿದವರೆಲ್ಲ ನಿನ್ನೆ ರಾತ್ರಿಯೇ ಅವಳ ನಿರ್ಣಯ ಕೇಳಿ ದಂಗಾಗಿ, ಪೆಚ್ಚಾಗಿ, ನಿರಾಶರಾಗಿ, ಸಿಟ್ಟಿನಿಂದ ಅಸಹನೆಯಿಂದ ಅಸಹಾಯಕತೆಯಿಂದ ರೂಮು ಸೇರಿದವರು ತಿರುಗಿ ಅವಳಿಗೆ ಮುಖ ತೋರಿರಲಿಲ್ಲ. ಅವಳ ಕಾರು ಹೊರಟಾಗ ಬಾಗಿಲಲ್ಲಿ ಏಕಾಕಿಯಾಗಿ ನಿಂತಿದ್ದ ಅಪ್ಪ ಮುಗುಳ್ನಕ್ಕು ಕೈ ಬೀಸಿದರು. ಕಾರು ಗೇಟು ದಾಟುತ್ತಿದ್ದಾಗ ಹೊರನೋಡಿದ ಆಕೆಗೆ ಅಪ್ಪನ ಹಿಂದೆ ಸರಸವ್ವನೂ ನಿಂತು ಕೈ ಬೀಸುತ್ತಿದ್ದುದು ಕಂಡು ಆಕೆ ಹಗುರವಾಗಿ ಮುಗುಳ್ನಕ್ಕಳು.

❖ ❖ ❖

# ಹಸಿವು (೧೯೮೪)

೧. ಕಾಯುತ್ತಲಿದ್ದ ಕರಿಯ
೨. ತಿರುಗಿ ಹೋದಳು

# ಕಾಯುತ್ತಲಿದ್ದ ಕರಿಯ.....

ತಿಮ್ಮಾಪುರ ಒಂದು ತೀರ ಚಿಕ್ಕದಾದ, ನಾಗರಿಕತೆಯ ಇನಿತು ಸೋಂಕೂ ಇಲ್ಲದ, ದಟ್ಟದರಿದ್ರ ಹಳ್ಳಿ. ಅತ್ಯಂತ ಸಮೀಪದ ನಗರವಾದ ವಿಜಾಪುರದಿಂದ ಮೂವತ್ತು ಮೈಲಿ ದೂರ. ದೇಶಕ್ಕೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಒಂದು ಸಲ ಊರಿನ ಗೌಡರ ಜೊತೆಗೆ ಅಲ್ಲಿಗೆ ಆಗಮಿಸಿದ್ದ ಜಿಲ್ಲೆಯ ಶಾಸಕರು ಹಲವಾರು ಆಶ್ವಾಸನೆಗಳನ್ನಿತ್ತಿದ್ದರು. ಊರಿಗೆ ರಸ್ತೆ ಮಾಡಿಸುತ್ತೇವೆ, ಕೊಳವೆ ಬಾವಿ ತೋಡಿಸುತ್ತೇವೆ, ವಿದ್ಯುತ್‌ದೀಪ ಹಾಕಿಸುತ್ತೇವೆ, ರೈತರಿಗೆ ಕಡಿಮೆ ಬಡ್ಡಿಯ ಮೇಲೆ ಸಾಲ ಕೊಡಿಸುತ್ತೇವೆ, ಇತ್ಯಾದಿ, ಇತ್ಯಾದಿ. ಅವರ ಭಾಷಣಕ್ಕಿಂತಲೂ ಹೆಚ್ಚು ಜನರ ಗಮನ ಸೆಳೆದಿದ್ದು ತಿಮ್ಮಾಪುರಕ್ಕೆ ಮೊದಲ ಬಾರಿ ಬಂದಿದ್ದ ಆ ಜೀಪು. ಮುಂದೆ ಅನೇಕ ವರ್ಷಕಾಲ ಆ ಕಡೆ ಯಾವುದೇ ವಾಹನಗಳು ಬಂದಿರಲಿಲ್ಲ. ಭಾಷಣಕಾರರೂ ಹಾಯ್ದಿರಲಿಲ್ಲ. ಖಾದೀಧಾರಿಯಾಗಿದ್ದ ಆ ಮನುಷ್ಯ ಕೊಟ್ಟುಹೋಗಿದ್ದ ಆಶ್ವಾಸನೆಗಳೆಲ್ಲ ತಿಮ್ಮಾಪುರದ ಉರಿಬಿಸಿಲಿನಲ್ಲಿ ಕಪ್ಪುಧೂಳಿನಲ್ಲಿ ಕರಗಿ ಮರೆಯಾಗಿ ಹೋಗಿದ್ದವು. ಊರಿನ ಬಹುಸಂಖ್ಯಾತ ಕೆಳಜಾತಿಯ ಬಡಜನರಿಗೆ ತಮಗೆ ಅನ್ಯಾಯವಾಗಿದೆಯೆಂದಾಗಲೀ ತಾವು ಹಿಂದುಳಿದಿದ್ದೇವೆಂದಾಗಲೀ ಅರಿವಾಗುವ ಸಂಭವವೇ ಇರಲಿಲ್ಲ. ಊರಿನ ಬಹುಪಾಲು ಹೊಲಗದ್ದೆಗಳು ಎಂದಿನಿಂದಲೂ ಗೌಡರ ಹಾಗೂ ಶಾನುಭೋಗರ ಒಡೆತನದಲ್ಲಿದ್ದವು. ಉಳಿದವರೆಲ್ಲ ಆ ಹೊಲಗಳಲ್ಲಿ ಕೂಲಿ ಮಾಡಿಯೋ ಜೀತಮಾಡಿಯೋ ದಿನಗಳೆಯುವುದೇ ತಮ್ಮ ಜೀವನ ಸರ್ವಸ್ವವೆಂದು ನಂಬಿ ಒಂದು ರೀತಿ ನೆಮ್ಮದಿಯಾಗಿದ್ದರು.

ತಿಮ್ಮಾಪುರಕ್ಕೆ ನಾಯಕರು ಜೀಪಿನಲ್ಲಿ ಬಂದು ಭಾಷಣ ಮಾಡಿದ ಕಾಲಕ್ಕೆ ಚಿಗುರು ಮೀಸೆಯ ಹುಡುಗನಾಗಿದ್ದ ಕರಿಯ. ಕರಿಯ ಹುಟ್ಟಾ ಅನಾಥ. ಊರಿಗೆ ಹಿರಿಯರಾಗಿದ್ದ ಸಂಗನಗೌಡರಲ್ಲಿ ಆತ ತನಗೆ ತಿಳಿವಳಿಕೆ ಬಂದಾಗಿನಿಂದಲೂ ಜೀತದಾಳು. ಹಗಲು-ರಾತ್ರಿ ಅವರು ಹೇಳಿದ ಎಲ್ಲ ಕೆಲಸ ಮಾಡುತ್ತ, ಹಿರಿಯ ಗೌಡತಿ ಎರಡು ಹೊತ್ತು ಎತ್ತರದ ಜಗಲಿಯ ಮೇಲೆ ನಿಂತು ಪಾತ್ರೆ ಎತ್ತಿ ತನ್ನ ಸಿಲಾವರದ ತಟ್ಟೆಯಲ್ಲಿ ಸುರಿಯುತ್ತಿದ್ದುದನ್ನು ತುಟಿಪಿಟ್ಟೆನ್ನದೆ ತಿಂದು, ಬದುಕುತ್ತಿದ್ದ ಕರಿಯ. ಯಾರೂ ಎಂದೂ ಅವನನ್ನು ಮಾತನಾಡಿಸಿದುದಿಲ್ಲ. ಕ್ಷೇಮ ವಿಚಾರಿಸಿದುದಿಲ್ಲ.

ಮಳೆ-ಚಳಿ ಬಿಸಿಲೆನ್ನದೆ ಎಲ್ಲ ಋತುಗಳಲ್ಲೂ ಬರಿ ಲಂಗೋಟಿಯುಟ್ಟು ಮನೆ-ಹಟ್ಟಿ-ಹೊಲ-ಗುಡ್ಡ ಎಲ್ಲೆಂದರಲ್ಲಿ ಬೇಕಾದ ಕೆಲಸ ಮಾಡುತ್ತಿದ್ದ ಕರಿಯನನ್ನು ಕಂಡರೆ ಗೌಡರಿಗೆ ಏನೋ ಕರುಣೆ, ಅನುಕಂಪ, ಜೀತದಾಳಾಗಿದ್ದರೂ ತನ್ನ ಕಷ್ಟಸಹಿಷ್ಣುತೆ-ಪ್ರಾಮಾಣಿಕತೆಯಿಂದಾಗಿ ಗೌಡರ ಆಪ್ತನಾಗಿದ್ದ ಕರಿಯ. ಈ ಕರಿಯನಿಗೆ ಸುಮಾರು ಇಪ್ಪತ್ತೇಳು-ಇಪ್ಪತ್ತೆಂಟರ ಪ್ರಾಯವಾದಾಗ ಹತ್ತಿರ-ಹತ್ತಿರ ಆರಡಿ ಎತ್ತರವಾಗಿ ಬೆಳೆದು ಬಿರುಸಾಗಿ, ಹುರಿಯಾಗಿ ಕಾಣುತ್ತಿದ್ದ, ಕಪ್ಪಾಗಿ ಮಿರಿಮಿರಿ ಮಿಂಚುತ್ತಿದ್ದ ಶಿಲಾವಿಗ್ರಹದಂತಹ ಆತನ ಮೈಕಟ್ಟು, ಕಾಠೇವಾಡದ ಕುದುರೆಯಂತಹ ಆತನ ಚಾಕಚಕ್ಯತೆ, ನೋಡಿದವರ ದೃಷ್ಟಿತಾಗುವಂತಾದವು. ಇಷ್ಟು ವರ್ಷ ಆತನ ಇರುವಿಕೆಯನ್ನೇ ಗಮನಿಸದ ಜಾತಿಬಾಂಧವರು ಗೌಡರ ಕೃಪಾಛತ್ರದಲ್ಲಿರುವ ಈ ದಷ್ಟಪುಷ್ಟ ತರುಣನಿಗೆ ಹೆಣ್ಣು ಕೊಡುವ ಯೋಚನೆ ಮಾಡತೊಡಗಿದರು. ಆದರೆ ಈ ಮಧ್ಯೆ ಕರಿಯನ ಬಾಳಿನ ಬೇರನ್ನೇ ಅಳ್ಳಾಡಿಸುವ ಘಟನೆಯೊಂದು ನಡೆದು ಅದರಿಂದಾಗಿ ಕರಿಯ ಮದುವೆಯ ಯೋಚನೆಯನ್ನೇ ಮರೆತುಬಿಡುವಂತಾಯಿತು.

ಆ ವರ್ಷದ ಸುಗ್ಗಿ ಮುಗಿದು ಕರಿಯ ಕೊಂಚ ಬಿಡುವಾಗಿದ್ದ ಕಾಲವದು. ಒಂದು ಮಧ್ಯಾಹ್ನದ ರಣಗುಡುವ ಬಿಸಿಲಲ್ಲಿ ಹಟ್ಟಿಯನ್ನು ತೊಳೆಯುತ್ತಿದ್ದ ಕರಿಯ ಬೀದಿಯಲ್ಲಿ ಗಲಾಟೆ ಕೇಳಿ ಅದೇನೆಂದು ನೋಡಲು ಹೊರಬಂದವನು ಅತ್ಯಾಶ್ಚರ್ಯದಿಂದ ಕಣ್ಣು-ಬಾಯಿ ಎರಡೂ ತೆರೆದು ನೋಡುತ್ತ ನಿಂತುಬಿಟ್ಟ. ಗೌಡರ ವಾಡೆಯೆದುರು ದೊಡ್ಡದೊಂದು ಕಾರುಗಾಡಿ ಬಂದಿತ್ತು. ಹಳ್ಳಿಯ ಜನರೆಲ್ಲ ಅದರ ಸುತ್ತ ನೆರೆದಿದ್ದರು. ಬಂದವರು ಗೌಡರ ಸೋದರ ಸಂಬಂಧಿ ರಾಮನಗೌಡರು. ಆತ ಚಿಕ್ಕಂದಿನಲ್ಲೇ ಊರುಬಿಟ್ಟು ಹೋಗಿ ಕಾಲೇಜು ಕಲಿತು ಪುಣೆಯಲ್ಲಿ ದೊಡ್ಡ ಸಾಹೇಬರಾಗಿದ್ದ ಬಗ್ಗೆ ಕರಿಯ ಹಲವಾರು ಬಾರಿ ಕೇಳಿದ್ದ. ಅನೇಕ ವರ್ಷಗಳ ನಂತರ ಆತ ಬೆಡಗಿಯಾದ ಹೆಂಡತಿಯೊಂದಿಗೆ, ಬಹು ಸುಂದರಿಯಾದ ಮಗಳೊಂದಿಗೆ, ಸಂಗನಗೌಡರನ್ನು ಕಾಣಲು ತಿಮ್ಮಾಪುರಕ್ಕೆ ಬಂದಿದ್ದರು. ಗೌಡರ ಮನೆಯಲ್ಲಿ ಸಂಭ್ರಮವೋ ಸಂಭ್ರಮ. ಅವರಿರುವ ತನಕ ಇಡೀ ಹಳ್ಳಿಯಲ್ಲಿ ಹಬ್ಬದ ವಾತಾವರಣ. ಕರಿಯನಿಗಂತೂ ನಿಮಿಷವೂ ಬಿಡುವಿಲ್ಲದ ಹಾಗೆ ಕೆಲಸ. ಹಾಗೆ ಆ ಅಪರೂಪದ ಅತಿಥಿಗಳು ತಿಮ್ಮಾಪುರದಲ್ಲಿ ಎಂಟುದಿನ ಕಳೆದಿದ್ದರು.

ಅವರು ಹೊರಡುವ ಹಿಂದಿನ ದಿನ ಸಂಜೆ ಎಂದಿನಂತೆ ಕರಿಯ ದನಗಳನ್ನು ಮೇಯಿಸಿಕೊಂಡು ಬಂದು ಕೊಟ್ಟಿಗೆಯಲ್ಲಿ ಕಟ್ಟುತ್ತಿದ್ದಾಗ ಫಕ್ಕನೆ ಕಾಳಿಹಸು ಇಲ್ಲದ್ದು ಅರಿವಾಯಿತು. ಅಯ್ಯೊ ಮರವೆ, ಅದು ಹೇಗೆ ಹಸು ಅಲ್ಲೇ ಉಳಕೊಂಡಿತೋ, ಎಂದೂ ಹೀಗಾದದ್ದಿಲ್ಲವಲ್ಲ ಸಿವನೇ ಅಂದುಕೊಳ್ಳುತ್ತ ಗೌಡತಿಗೆ ಹೇಳಿ ಆತ ತಿರುಗಿ ಗುಡ್ಡದ

ಕಡೆಗೆ ಓಡುತ್ತಲೇ ಹೊರಟ. ಆಗಲೆ ಮಬ್ಬುಗತ್ತಲಾಗಿತ್ತು. ತುಂಬ ಚಿಂತೆಯಿಂದ ಕರಿಯ ಹಸುವನ್ನರಸುತ್ತ ಹೊರಟಾಗ 'ಕರಿಯಾ–' ಅಂತ ಮೆಲುದನಿಯ ಕೂಗು ಕೇಳಿಸಿತು. ಒಂದು ಕ್ಷಣ, ದೆವ್ವವಿದ್ದೀತೇ ಅಂತ ಯೋಚಿಸಿ ಕರಿಯ ವಿಚಲಿತನಾದ. ಆದರೆ ಸ್ವಭಾವತಃ ಧೈರ್ಯಶಾಲಿಯಾಗಿದ್ದ ಆತ ಮರುಕ್ಷಣ ಅಳುಕದೆ ಹೊರಳಿ ನೋಡಿದಾಗ ಆಕೆ ಕಾಣಿಸಿದಳು. ಗೌಡರ ಸೋದರ ಸಂಬಂಧಿ ಪುಣೆಯ ಸಾಹೇಬರ ಮಗಳು-ಕತ್ತಲಲ್ಲಿ ಕರಿಯನ ತೀರ ಸಮೀಪ ಬಂದು ನಿಂತು ಮುಗುಳ್ನಗುತ್ತಿದ್ದ ಅಪ್ಸರೆ. ಆ ಕೆಂಪು, ಅಂಥ ಮೃದುತೆ, ಆ ದಿವ್ಯವಾದ ಚೆಲುವು-ಕರಿಯನಿಗೆ ಎಚ್ಚರ ತಪ್ಪಿದಂತಾಗಿ ಆತ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡ. ಏನು ನಡೆಯುತ್ತಿದೆ ಅನ್ನುವುದರ ಅರಿವೇ ಆಗದಷ್ಟು ಭ್ರಾಂತನಾಗಿ ಹೋಗಿದ್ದ ಬಡ ಕರಿಯ. ಅತ್ಯಂತ ಅನಿರೀಕ್ಷಿತವಾಗಿದ್ದ ಆ ಆಘಾತಕ್ಕೆ ಆತನ ಎದೆಬಡಿತ ನಿಂತು ಹೋಗದುದೇ ಒಂದು ಆಶ್ಚರ್ಯ. ಹತ್ತಿಪ್ಪತ್ತು ನಿಮಿಷಗಳ ನಂತರ ಅಪ್ಸರೆ ಸೆರಗು ಕೊಡವಿಕೊಂಡು ಎದ್ದುಹೋದ ನಂತರವೂ ಬಹಳಷ್ಟು ಹೊತ್ತು ಅರೆಎಚ್ಚರದ ಸ್ಥಿತಿಯಲ್ಲೇ ಇದ್ದ ಕರಿಯ. ರಾತ್ರಿಯನ್ನೆಲ್ಲ ಆತ ಅಲ್ಲೇ ಅಡವಿಯಲ್ಲೇ ಕಳೆದಿದ್ದ. ಮರುದಿನ ಸುಮಾರು ಹೊತ್ತು ಏರಿದ ನಂತರ ಅಳುಕುತ್ತ ಆತ ಹಳ್ಳಿಗೆ ಹಿಂದಿರುಗಿದಾಗ ಗೌಡರ ಅತಿಥಿಗಳು ಹೊರಟು ಹೋಗಿಯಾಗಿತ್ತು. ಉಸ್ಸೆಂದು ಉಸಿರುಬಿಟ್ಟು ಹಿತ್ತಲಲ್ಲಿ ಕುಸಿದ ಕರಿಯನನ್ನು ಕಂಡು, 'ಅದೇನಲಾ ಕರಿಯ, ಆಕಳಾ ಹುಡಕಾಕಂತ ಹೋದಾಂವ ಅತ್ಲಾಗ ಸತ್ತೆಲ್ಲೋ ?' ಅಂತ ಗೌಡತಿ ಗದರಿಸಿದಳು. ಆ ಕ್ಷಣಕ್ಕೆ ತಾನು ನಿಜವಾಗಿ ಸತ್ತೇ ಹೋಗಿದ್ದೆನಲ್ಲ ಅನ್ನಿಸಿತು ಕರಿಯನಿಗೆ.

ಆ ಘಟನೆಯ ನಂತರ ಅನೇಕ ದಿನ ಕರಿಯನಿಗೆ ಒಂದು ಥರಾ ಮಂಕು ಕವಿದಂತಾಗಿತ್ತು. ಕನಸಿನಲ್ಲೂ ಒಂದೊಂದು ಸಲ ಆ ಅಪ್ಸರೆ ಬಿಗಿದಪ್ಪಿದಂತಾಗಿ ಆತ ಬೆಚ್ಚಿ ಎಚ್ಚರಾಗುತ್ತಿದ್ದ. ಆತನ ನೆಮ್ಮದಿ ಹಾಳಾಗಿ ಹೋಯಿತು. ಆತನ ನಿದ್ರೆ ಒಡೆದ ಕನ್ನಡಿಯಾಯಿತು. ಆತ ದಿನೇದಿನೇ ಸೊರಗುತ್ತ ನಡೆದ.

ಹೀಗಿರುತ್ತಿರಲು ಆರೇಳು ತಿಂಗಳುಗಳು ಕಳೆದ ನಂತರ ಒಂದು ದಿನ ಮತ್ತೆ ತಿಮ್ಮಾಪುರದ ಸಂಗನಗೌಡರ ಮನೆಗೆ ಪುಣೆಯ ಕಾರು ಬಂತು. ಈ ಸಲ ರಾಮನಗೌಡರ ಜೊತೆ ಅಪ್ಸರೆಯೊಬ್ಬಳೇ ಬಂದಿದ್ದಳು, ಆದರೆ ಯಾಕೋ ಎಲ್ಲರ ಮುಖದ ಮೇಲೂ ಒಂದು ನಮೂನೆ ಮಂಕು ಕವಿದಿತ್ತು. ಅಪ್ಸರೆಯಂತೂ ಬಂದೊಡನೆ ಅಟ್ಟದ ಮೇಲಿನ ಮೂಲೆಯ ಕೋಣೆ ಸೇರಿದವಳು ತಿರುಗಿ ಯಾರ ಕಣ್ಣಿಗೂ ಬೀಳಲಿಲ್ಲ. ಗೌಡರಿಬ್ಬರೂ ಬಹಳ ಹೊತ್ತು ಗುಸುಗುಸು ಮಾತಾಡಿದರು. ಮರುದಿನ ರಾತ್ರಿಯಾದ ನಂತರ ರಾಮನಗೌಡರೊಬ್ಬರೇ ತಿರುಗಿ ಊರಿಗೆ ಹೋಗಿಬಿಟ್ಟರು. ದೂರದಿಂದ ಎಲ್ಲ

ಗಮನಿಸುತ್ತಿದ್ದ ಕರಿಯು ಇದೆಲ್ಲದರ ಅರ್ಥವೇನಿದ್ದೀತೆಂದು ಆಶ್ಚರ್ಯ-ಕಳವಳಪಡುತ್ತಿದ್ದಾಗ ಗೌಡರು ಆತನನ್ನು ಕರೆದು ಗುಟ್ಟಾಗಿ ಹೇಳಿದರು : ರಾಮನಗೌಡರ ಮಗಳಿಗೆ ಏನೋ ಕಾಯಿಲೆ. ಎರಡು ತಿಂಗಳು ಇಲ್ಲೇ ಇರುತ್ತಾಳೆ. ಆದರೆ ಅವಳಿರುವ ವಿಷಯ ಯಾರಿಗೂ ಹೇಳಬಾರದು.

ಕರಿಯ ತಲೆದೂಗಿದ. ಗೌಡರ ಆಜ್ಞೆಯನ್ನು ಆತನೆಂದೂ ಮೀರಿದುದಿರಲಿಲ್ಲ. ಆದರೆ ಆ ಬಂಗಾರದಂಥ ಹೆಣ್ಣಿಗೆ ಅದೆಂಥ ಕಾಯಿಲೆಯಿದ್ದೀತು ? ಅಂತ ಆತ ಹಗಲಿರುಳೂ ಚಿಂತಿಸಿದ.

ಮುಂದೊಮ್ಮೆ ಒಂದು ಅಮವಾಸ್ಯೆಯ ದಿನ ಗೌಡರು ಕರಿಯನನ್ನು ಕರಕೊಂಡು ವಿಜಾಪುರಕ್ಕೆ ಹೋಗಿ ಬಾಡಿಗೆಯ ಕಾರೊಂದನ್ನು ತೆಗೆದುಕೊಂಡು ತಿಮ್ಮಾಪುರಕ್ಕೆ ಬಂದು ಅದೇ ರಾತ್ರಿ ಆ ಕಾರಿನಲ್ಲಿ ರಾಮನಗೌಡರ ಮಗಳನ್ನೂ, ಮನೆಯಲ್ಲಿರುವ ದೂರದ ಬಳಗದ ಒಂದು ಅಜ್ಜಿಯನ್ನೂ ಕರಕೊಂಡು ತಿರುಗಿ ವಿಜಾಪುರಕ್ಕೆ ಹೋದರು. ಊರಿನ ಆಚೆ ದೂರದಲ್ಲಿರುವ ಒಂದು ಖಾಸಗಿ ದವಾಖಾನೆಯೊಳಗೆ ರಾಮನಗೌಡರ ಮಗಳೂ ಅಜ್ಜಿಯೂ ಡಾಕ್ಟರಮ್ಮನೊಂದಿಗೆ ಮಾಯವಾದ ನಂತರ ಸಂಗನಗೌಡರು ಬೆಪ್ಪಾಗಿದ್ದ ಕರಿಯನ ತೀರಾ ಹತ್ತಿರ ಬಂದು ವ್ಯಥಿತ ಧ್ವನಿಯಲ್ಲಿ ಹೇಳಿದರು : ರಾಮನಗೌಡರ ಮಗಳು ಅರಿಯದ ಹುಡುಗಿ. ಪಾಪ ! ಇನ್ನೂ ಮದುವೆಯಿಲ್ಲ. ಯಾರಿಗೋ ಬಸಿರಾಗಿಬಿಟ್ಟಿದ್ದಾಳೆ. ಪುಣೆಯಲ್ಲಿ ಅವರಿಗೆ ಮರ್ಯಾದೆಯ ಪ್ರಶ್ನೆ. ಹಾಗಂತ ಯಾರಿಗೂ ತಿಳಿಯದಂತೆ ಹೆರಿಗೆಯಾಗುವ ತನಕ ಅವರು ತಮ್ಮ ಹತ್ತಿರ ಅವಳನ್ನು ಬಿಟ್ಟು ಹೋದದ್ದು. ನಾಳೆ ದೊಡ್ಡ ಮನೆಗೆ ಮದುವೆಯಾಗಿ ಹೋಗಲಿರುವ ಹುಡುಗಿ. ಅವಳ ಭವಿಷ್ಯ ಹಾಳಾಗಬಾರದಲ್ಲ....

ಕರಿಯನ ಮಬ್ಬುತಲೆಯಲ್ಲಿ ಮಿಂಚೊಂದು ಮಿಂಚಿತು. ಆತ ಮೂಕನಾಗಿ ನಿಂತ. ಆತನ ಗಂಟಲು ಉಬ್ಬುಬ್ಬಿ ಬರತೊಡಗಿತು. ಹಲವಾರು ತಿಂಗಳ ಹಿಂದೆ ಮಬ್ಬುಗತ್ತಲಲ್ಲಿ ಊರ ಗುಡ್ಡದ ವಾರೆಯಲ್ಲಿ ಕನಸೋ ಎಂಬಂತೆ ನಡೆದುಹೋದ ಘಟನೆ ಮರಳಿ ಮರಳಿ ಕಣ್ಣೆದುರು ಕಟ್ಟಿ, ಕೈಕಾಲಲ್ಲಿನ ಶಕ್ತಿ ಉಡುಗಿಹೋದಂತಾಗಿ ಆತ ಅಲ್ಲೇ ಬೆಂಚಿನ ಕೆಳಗೆ ಕುಸಿದುಕೂತ.

ಆ ರಾತ್ರಿ ಬಹಳ ಹೊತ್ತಿನ ನಂತರ ಆಕೆಗೆ ಹೆರಿಗೆಯಾಯಿತು. ಕರಿಯು ದೂರದಿಂದ ಮಗುವನ್ನು ನೋಡಿದ. ಹೊಳೆಯುವ ಕಣ್ಣುಗಳ, ಮಿಂಚುವ ಕೂದಲಿನ, ಬೆಳ್ಳಗಿನ ದಂತದ ಗೊಂಬೆಯ ಹಾಗಿರುವ, ತಾಯಿಗಿಂತಲೂ ಚೆಲುವಾದ ಹೆಣ್ಣುಮಗು.

ನಂತರ ಎರಡು ಮೂರು ದಿನಗಳಿಗೆ ಕಾರುಸಹಿತ ಬಂದ ರಾಮನಗೌಡರು ಸಂಗನಗೌಡರೊಂದಿಗೆ ಮಾತನಾಡಿ ಮಗಳೊಬ್ಬಳನ್ನೇ ಕರಕೊಂಡು ಪುಣೆಗೆ

ಹೋಗಿಬಿಟ್ಟರು. ಹೋಗುವಾಗ ಒಂದೇ ಒಂದು ಸಲ ಆ ಅಪ್ಸರೆ ಕರಿಯನ ಕಡೆ ನೋಡಿ ಸ್ವರ್ಗೀಯವಾದುದೊಂದು ಮುಗುಳ್ನಗೆಯನ್ನು ಬೀರಿದಳು, ಅಥವಾ ಕರಿಯನಿಗೇ ಹಾಗೆನಿಸಿತೋ. ಆ ಕ್ಷಣ ಆತನಿಗೆ ಆ ನಗೆಯಲ್ಲಿ ನೂರು ಅರ್ಥ ಕಾಣಿಸಿದಂತಾಯಿತು. ಈ ಮಗು ನಿನ್ನದೇ, ಇದನ್ನ ನೀನೇ ನೋಡಿಕೋ, ಅಂತ ಹೇಳಿದಳೇ ಆಕೆ ? ಹಾಗೆಂದು ಯೋಚಿಸಿ ಆತ ನಿರ್ವಿಣ್ಣನಾದ. ಆದರೆ ಮಗುವನ್ನು ಅನಾಥಾಶ್ರಮಕ್ಕೆ ಕೊಡುವುದೆಂದು ಗೌಡರು ನಿರ್ಧರಿಸಿದಾಗ ಮಾತ್ರ ಕರಿಯನಿಗೆ ತಡೆಯಲಾಗಲಿಲ್ಲ. ಆ ಮಗು ತನ್ನದೇ ಅಂತ ನಂಬಲು ಆತನಲ್ಲೇನೂ ಬಲವಾದ ಸಾಕ್ಷ್ಯಾಧಾರಗಳಿರಲಿಲ್ಲ. ಅದು ತನ್ನದೇ ಯಾಕಾಗಿರಬಾರದು ? ಎಂದೂ ಗೌಡರೆದುರು ತಲೆಯೆತ್ತಿ ಏನೂ ಕೇಳಲಾರದ ಕರಿಯ ಆ ದಿನ ಅವರೆದುರು ನಿಂತು ಕಣ್ಣೀರು ತುಂಬಿ ಕೇಳಿಕೊಂಡ : 'ಯಪ್ಪಾ, ನಾ ಬಡವ. ದಿಕ್ಕಿಲ್ಲದಾಂವ. ನನಗ ಭಿಕ್ಸಾ ಕೊಡ್ರಿ. ಮಗೀನ್ನ ನಾ ಸಾಕಿಕೊಂತೀನಿ. ಒಲ್ಲೆನಬ್ಯಾಡ್ರಿಯಪ್ಪಾ, ನಿಂ ಪಾದಕ್ಕ ಬೀಳ್ತೀನಿ.'

ಗೌಡರು ಮೂಕವಿಸ್ಮಿತರಾದರು. ಮತ್ತೆ ಯೋಚಿಸಿದರು. ಬಳಗದ ಮಗು. ತಮ್ಮ ಕಣ್ಣ ಮುಂದೆ ಬೆಳೆದರೂ ಆದೀತು ಅನ್ನಿಸಿತೇನೋ. ಕರಿಯನ ವಿನಂತಿಯನ್ನು ಮನ್ನಿಸಿದರು.

ಕರಿಯನ ಮಂಕು-ಚಿಂತೆ-ವಿಭ್ರಮೆ ಎಲ್ಲ ಒಂದು ಕ್ಷಣದಲ್ಲಿ ಮಾಯವಾಗಿ ಆತ ಜಿಂಕೆಯಂತಾದ. ಗೌಡರ ಧೋತರದಲ್ಲಿ ಮಗುವನ್ನು ಜೋಪಾನವಾಗಿ ಸುತ್ತಿ ಎದೆಗವಚಿಕೊಂಡು ಆತ ತಾನೇ ಮುಂದಾಗಿ ಹೋಗಿ ಟ್ಯಾಕ್ಸಿಯಲ್ಲಿ ಕೂತ. ''ನನ ಬಾಗ್ಯದ ಲಚ್ಚುಮೀ' ಅಂತ ಅಲ್ಲೇ ಪ್ರೀತಿಯಿಂದ ಮಗುವಿಗೆ ನಾಮಕರಣವನ್ನೂ ಮಾಡಿದ. ಟ್ಯಾಕ್ಸಿ ಧೂಳೆಬ್ಬಿಸುತ್ತ ತಿಮ್ಮಾಪುರದ ಕಡೆ ಹೊರಟಾಗ ಆತನಿಗೆ ಗಾಳಿಯಲ್ಲಿ ಮೋಡಗಳ ಮೇಲೆ ತೇಲುತ್ತಿರುವ ಅನುಭವ.

* * *

ಭಾಗ್ಯದ ಲಕ್ಷ್ಮಿ ಮಗಳಾಗಿ ಕರಿಯನ ಮನೆ ತುಂಬಿದಂದಿನಿಂದ ಆತನ ದಿನಚರಿ ಪೂರ್ಣ ಬದಲಾಯಿತು. ಗೌಡರ ಹಿತ್ತಿಲಾಚೆ ತುಸು ದೂರದಲ್ಲಿದ್ದ ಆತನ ಗುಡಿಸಲೀಗ ಒಳಗೂ-ಹೊರಗೂ ಥಳಥಳಿಸತೊಡಗಿತು. ಮೊದಮೊದಲು ಊರವರ ಅಚ್ಚರಿಯ ಹಾಸ್ಯದ ವಸ್ತುವಾದ 'ಕರಿಯನ ಬಿಳಿಮಗಳು' ಬರಬರುತ್ತ ಎಲ್ಲರಿಂದ ಅನುಕಂಪ-ಪ್ರೀತಿ ಪಡೆಯುತ್ತ ಬೆಳೆಯತೊಡಗಿದಳು. ಮಕ್ಕಳಾಗದೇ ಇದ್ದ ಹಿರೀ ಗೌಡತಿ ಕರಿಯನ ಮಗಳಿಗಾಗಿ ತಪ್ಪದೇ ಅಕ್ಕಿಯನ್ನೂ ಒಂದಷ್ಟು ಹಾಲನ್ನೂ ಕೊಡುತ್ತಿದ್ದಳು. ಒಬ್ಬ ಮಗ-ಒಬ್ಬ ಮಗಳನ್ನು ಹಡೆದಿದ್ದ ಸಣ್ಣ ಗೌಡತಿ ಕರಿಯನ ಮಗಳಿಗೆ ತನ್ನ ಮಕ್ಕಳ ಹಳೆ ಬಟ್ಟೆ ಆಟಿಕೆ ಇತ್ಯಾದಿ ಅಲ್ಲದೆ ಆಗೀಗ ಮಾಡಿದ ವಿಶೇಷ ತಿಂಡಿತಿನಸುಗಳನ್ನೂ

ಕೊಡುತ್ತಿದ್ದಳು. ಮಗಳ ಸ್ನಾನ, ಊಟ, ಆಟಪಾಠ ಎಲ್ಲದರ ಬಗೆಗೂ ತುಂಬ ಗಮನಕೊಟ್ಟು ಅತ್ಯಂತ ಕಾಳಜಿವಹಿಸುತ್ತಿದ್ದ ಕರಿಯನನ್ನು ಕಂಡು ಒಂದೊಂದು ಸಲ ಗೌಡರೂ ಹಾಸ್ಯ ಮಾಡುತ್ತಿದ್ದರು. ದಿನಗಳೆದಂತೆ ಇನ್ನೂ ಕೆಂಪಗಾಗಿ, ದುಂಡಗಾಗಿ, ಚೆಲುವಾಗಿ ಬೆಳೆಯುತ್ತಿದ್ದ ಮಗಳನ್ನು ಎತ್ತಿಕೊಂಡಾಗೆಲ್ಲ ಕರಿಯನಿಗೆ ತನ್ನ ಬಗ್ಗೆ ತನಗೇ ಕೀಳರಿಮೆ ಬರುವುದು. ಆತನೀಗ ದಿನವೂ ಹಲ್ಲುಜ್ಜಿ ಮೈತಿಕ್ಕಿಕೊಂಡು ಜಳಕ ಮಾಡುವನು. ಗೌಡರಿಂದ ಕೇಳಿ ಪಡೆದ ಹಳೇ ಧೋತ್ರವನ್ನುಟ್ಟು ಬನೀನು ತೊಡುವನು. ತನ್ನೆಲ್ಲಾ ಕೆಲಸವನ್ನೂ ಬೇಗ ಬೇಗನೆ ಮಾಡಿ ಮುಗಿಸಿ ಸಂಜೆಯ ಹೊತ್ತು ಮಗಳನ್ನು ಊರಾಚೆ ತಿರುಗಾಡಲು ಕರೆದೊಯ್ಯುವನು. ಗೌಡರ ಮಗಳ ಹಳೇ ಫ್ರಾಕು ತೊಟ್ಟು ಗಾಳಿಯಲ್ಲಿ ಮಗಳು ಕುಣಿದು ಕುಪ್ಪಳಿಸುತ್ತ ಓಡುವುದನ್ನು ನೋಡುತ್ತ, ವಿಚಿತ್ರ ಧನ್ಯತೆಯನ್ನನುಭವಿಸುತ್ತ ನಿಲ್ಲುವನು. 'ಇದೆಲ್ಲಿಯ ಮಗಳನ್ನ ಗಂಟು ಹಾಕಿಕೊಂಡೆಯೋ ಕರಿಯಾ, ನಿನ್ನ ಜಾತಿಯ ಒಳ್ಳೇ ಹೆಣ್ಣನ್ನ ಲಗ್ನವಾಗಿ ಸುಖವಾಗಿರಬಾರದೇ, ಇದೇನು ಗ್ರಹಚಾರ ?' ಅಂತ ಹಿರಿಯರ್ಯಾರಾದರೂ ಹಿತವಾದ ಹೇಳಿದರೆ ಅದೊಂದೂ ಕರಿಯನ ಮನಸ್ಸು ತಟ್ಟುತ್ತಿರಲಿಲ್ಲ. ಪ್ರಾಯಕ್ಕೆ ಸಹಜವಾದ ದೈಹಿಕ ಬಯಕೆಗಳು ಈ ಮಗಳು ಮನೆಗೆ ಬಂದಾಗಿನಿಂದ ಆತನನ್ನೆಂದೂ ಕಾಡಲಿಲ್ಲ. ಈ ಮಗಳ ಭವಿಷ್ಯವನ್ನು ಸುಂದರಗೊಳಿಸುವುದೊಂದೇ ಕರಿಯನ ಕನಸಾಗಿ ಬಿಟ್ಟಿತು.

ಆದ್ದರಿಂದ, ಮಕ್ಕಳ ಶಾಲೆಗಾಗಿ ವಿಜಾಪುರದಲ್ಲಿ ಮನೆ ಮಾಡಲು ಹೊರಟ ಗೌಡರು ನೀನೂ ಬರುತ್ತೀಯಾ ಅಂತ ಕೇಳಿದಾಗ ಕರಿಯ ಹುರುಪಿನಿಂದ ಹೊರಟುಬಿಟ್ಟ. ವಿಜಾಪುರದಲ್ಲಿ ಒಳ್ಳೆಯದೊಂದು ಮನೆ ಕೊಂಡುಕೊಂಡ ಗೌಡರು ಅಲ್ಲಿ ಸಣ್ಣ ಗೌಡತಿಯನ್ನೂ, ಮಕ್ಕಳನ್ನೂ, ಒಳಗೆಲಸಕ್ಕಾಗಿ ಒಬ್ಬ ಹೆಣ್ಣಾಳನ್ನೂ, ಹೊರಗೆಲಸಕ್ಕಾಗಿ ಕರಿಯನನ್ನೂ ಇಟ್ಟು, ಅಲ್ಲೇ ಹಿತ್ತಿಲ ಕಡೆ ಆತನಿಗಾಗಿ ತಗಡು ಹೊದಿಸಿದ ಒಂದು ಕೋಣೆಯ ವ್ಯವಸ್ಥೆ ಮಾಡಿದಾಗ ಕರಿಯನಿಗೆ ಬೇರೆಯದೇ ಜಗತ್ತಿನ ಬಾಗಿಲು ತೆರೆದಂತಾಗಿತ್ತು. 'ಲಚ್ಚುಮಿಯನ್ನೂ ಸಾಲಿಗೆ ಸೇರಸ್ತೀನಿಯಪ್ಪಾ' ಅಂತ ಅವನು ಆಸೆಪಟ್ಟಾಗ ಗೌಡರು ದೊಡ್ಡ ಮನಸ್ಸು ಮಾಡಿ ಸಹಕರಿಸಿದಾಗ ಕರಿಯನಿಗೆ ಸ್ವರ್ಗವೇ ಸಿಕ್ಕಂತಾಗಿತ್ತು.

ಹಾಗೆ ಲಕ್ಷ್ಮಿ ಗೌಡರ ಮಕ್ಕಳೊಡನೆ ಶಾಲೆಗೆ ಹೋಗತೊಡಗಿದ್ದಳು. ಏಳೆಂಟು ವರ್ಷದ ಹುಡುಗಿ ನೋಡಿದವರನ್ನು ಮರುಳುಗೊಳಿಸುವಷ್ಟು ರೂಪವತಿಯಾಗಿದ್ದಳು. ತಿಮ್ಮಾಪುರದಲ್ಲಿರುವ ವರೆಗೂ ಅಪ್ಪನಿಗೆ ಸದಾ ಅಂಟಿಕೊಂಡೇ ಬೆಳೆದ ಹುಡುಗಿ ಅವಳು. ಆದರೆ ವಿಜಾಪುರಕ್ಕೆ ಬಂದನಂತರ, ಆಕೆ ಶಾಲೆಗೆ ಹೋಗತೊಡಗಿದ ನಂತರ, ಅಪ್ಪನೊಂದಿಗಿನ ಮಗಳ ಬೆಸುಗೆ ಕ್ರಮೇಣವಾಗಿ

ಅಗೋಚರವಾಗಿ ಸಡಿಲಾಗತೊಡಗಿತು. ಶಾಲೆಗೆ ಹೋಗಿ ಅತ್ತಿತ್ತ ತಿರುಗಾಡಿ ಸಂಜೆ ಮನೆಗೆ ಬಂದಾಗ ಆಕೆಗೆ ಏನೋ ಮುಜುಗರವೆನಿಸುತ್ತಿತ್ತು. ಗೌಡರ ಮನೆಕೆಲಸವನ್ನು ಮಾಡುವ, ಅವರು ಹಾಕಿದ ಕೂಳು ತಿನ್ನುವ, ಕುರುಚಲು ಗಡ್ಡದ ಮುಖದ ಅಪ್ಪನನ್ನು ಕಂಡರೆ ಅವಳಿಗೆ ತಾತ್ಸಾರವೆನ್ನಿಸತೊಡಗಿತು. ಗೌಡರ ಮಕ್ಕಳೊಂದಿಗೆ, ಶಾಲೆಯಲ್ಲಿ ಇತರರೊಂದಿಗೆ ಒಡನಾಡುವಾಗ ಇರುತ್ತಿದ್ದ ನೆಮ್ಮದಿ ಮನೆಗೆ ಬಂದೊಡನೆ ಇಲ್ಲವಾಗಿ ಇಡೀ ವಾತಾವರಣದ ಬಗ್ಗೆ ಅಸಹನೆಯೆನಿಸತೊಡಗಿತು.

ಆದರೆ ಓದಿನಲ್ಲಿ ಲಕ್ಷ್ಮಿ ತುಂಬ ಚುರುಕು. ಯಾವಾಗಲೂ ಕ್ಲಾಸಿಗೆ ಮೊದಲನೆಯವಳಾಗಿರುತ್ತಿದ್ದ ಅವಳ ಬಗ್ಗೆ ಮಾಸ್ತರುಗಳಿಗೆಲ್ಲ ಪ್ರೀತಿ. ದಿನವೂ ಅವಳನ್ನು ಕರೆತರಲು ಸ್ಕೂಲಿಗೆ ಹೋಗುತ್ತಿದ್ದ ಕರಿಯನನ್ನು ಆಗಾಗ ಮಾತಾಡಿಸಿ ಅವಳ ವರ್ಗದ ಶಿಕ್ಷಕರು ಅನ್ನುತ್ತಿದ್ದುದುಂಟು : 'ನಿನ್ಮಗಳು ಭಾರೀ ಶಾಣ್ಯಾಕಿ ಅದಾಳ ಕರಿಯಪ್ಪಾ, ಆಕಿನ್ನ ಡಾಕ್ಟರ್ ಮಾಡ್ಬೇಕು ನೋಡು ನೀನು'. ಹಾಗಂದದ್ದು ಕೇಳಿದಾಗ ಕರಿಯ ಪುಳಕಿತನಾಗಿ ಹೊಸ ಹೊಸ ಕನಸು ಕಾಣುತ್ತಿದ್ದ. ಯಾಕಾಗಬಾರದು ? ಲಕ್ಷ್ಮಿಗೆ ಜನ್ಮ ಕೊಟ್ಟಾಕೆ ಯಾರೋ ಡಾಕ್ಟರನ್ನು ಲಗ್ನವಾಗಿ ದಿಲ್ಲಿಯಲ್ಲಿದ್ದಾಳೆಂದು ಗೌಡರ ಮನೆಯಲ್ಲಿ ಮಾತಾಡಿದ್ದು ಆತ ಕೇಳಿದ್ದ. ತನಗೆ ದೇವರು ಕೊಟ್ಟ ಈ ಅಪರೂಪದ ಮಗಳು ತಾಯಿಯೊಂದಿಗಿದ್ದರೆ ಡಾಕ್ಟರಾಗುತ್ತಿರಲಿಲ್ಲವೇ ? ತಾಯಿಯಿಲ್ಲದಿದ್ದರೇನಂತೆ, ತಂದೆಯಾದ ಗಂಡಸು ತಾನಿಲ್ಲವೆ ? ತನ್ನ ಜೀವ ಒತ್ತೆ ಇಟ್ಟಾದರೂ ಈ ಮಗುವನ್ನು ಚೆನ್ನಾಗಿ ಓದಿಸಿ ಮುಂದೆ ತರಬೇಕು.

ಆ ಕನಸನ್ನು ಪೂರೈಸಲು ಕರಿಯ ಹೆಚ್ಚು ಹೆಚ್ಚಾಗಿ ದುಡಿಯಲಾರಂಭಿಸಿದ. ಗೌಡರಿಗೆ ತಿಳಿಯದ ಹಾಗೆ ಸಾಯಂಕಾಲದ ಹೊತ್ತು ಎರಡು ತಾಸು ಬಸ್‌ಸ್ಟ್ಯಾಂಡಿಗೆ ಹೋಗಿ ಕೂಲಿ ಮಾಡಲಾರಂಭಿಸಿದ. ಸಂತೆಯ ದಿನವಂತೂ ರಾತ್ರಿ ಹತ್ತರವರೆಗೆ ಹಮಾಲಿ ಮಾಡತೊಡಗಿದ. ಆಗೀಗ ಗೌಡರು ಕೊಡುತ್ತಿದ್ದ ಅಷ್ಟಿಷ್ಟು ಹಣವನ್ನೂ ಜತನದಿಂದ ಕಾಯ್ದಿಡುತ್ತಿದ್ದ. ತೀರಾ ನಸುಕಿನಲ್ಲೆದ್ದು ತಾಸೆರಡು ತಾಸು ಹಿತ್ತಲಲ್ಲಿ ಕಾಯಿಪಲ್ಲೆ ಗಿಡ ಬೆಳೆಸುವ ಕೆಲಸ ಮಾಡುತ್ತಿದ್ದ. ಗೌಡರ ಮನೆಗಷ್ಟು ಕೊಟ್ಟು ಉಳಿದುದೆಲ್ಲವನ್ನೂ ಬುಟ್ಟಿಗಳಲ್ಲಿ ತುಂಬಿ ಬಾಗವಾನರಿಗೆ ಗುತ್ತಿಗೆ ಕೊಟ್ಟು ಬರುತ್ತಿದ್ದ. ಮಗಳಿಗೆ ಇಷ್ಟವಾಗುವುದಿಲ್ಲೆಂದು ಅರಿತು ಗೌಡರ ಮನೆಯಿಂದ ನುಚ್ಚು ರೊಟ್ಟಿ ತರುವುದನ್ನು ನಿಲ್ಲಿಸಿ ಮನೆಯಲ್ಲಿ ಮುಂಜಾನೆ ಬಿಸಿ ಅನ್ನ ಮಾಡತೊಡಗಿದ. ಮಗಳಿಗೆ ಹೊಟ್ಟೆತುಂಬಾ ಉಣಬಡಿಸಿ ಅವಳು ಶಾಲೆಗೆ ಹೋದ ನಂತರ ತಾನು ರಾಗಿ ಮುದ್ದೆಯನ್ನೋ, ಜೋಳದ ಹಿಟ್ಟಿನ ಮುದ್ದೆಯನ್ನೋ, ಅದೂ ಒಂದು ಹೊತ್ತು ಮಾತ್ರ, ತಿನ್ನುತ್ತಿದ್ದ.

ಆದರೆ ಏನೇ ಕಷ್ಟಪಟ್ಟರೂ ಅರೆಹೊಟ್ಟೆ ಉಂಡರೂ ಉಪವಾಸ ಮಾಡಿದರೂ ದಿನಾ ದಿನಾ ಬೆಳೆಯುತ್ತಲೇ ಹೊರಟ ಮಗಳ ಬೇಡಿಕೆಗಳನ್ನು ಪೂರೈಸುವುದು ಕರಿಯನಿಗೆ ತುಂಬ ಕಷ್ಟವಾಗುತ್ತಿತ್ತು. ಹೈಸ್ಕೂಲಿಗೆ ಹೋಗಲಾರಂಭಿಸಿದ ಮಗಳು ಬ್ಯಾಡ್ಮಿಂಟನ್ ರ್‍ಯಾಕೆಟು ಕೇಳಿದಾಗ ಗೌಡರನ್ನು ಕಾಡಿ ಬೇಡಿ ಸಂಬಳದ ಹಣ ಮುಂಗಡ ಪಡೆದು ತಂದುಕೊಟ್ಟಿದ್ದ ಆತ. ಮುಂದೆ ಸ್ಕೂಲಿನವರೊಂದಿಗೆ ದಕ್ಷಿಣ ಭಾರತದ ಪ್ರವಾಸಕ್ಕೆ ಹೋಗಲೇಬೇಕೆಂದು ಲಕ್ಷ್ಮಿ ಹಟ ಹಿಡಿದಾಗ, ತನ್ನ ಏಕಮಾತ್ರ ಆಸ್ತಿಯಾಗಿದ್ದ, ಗೌಡರು ತಮ್ಮ ಎರಡನೇ ಲಗ್ನದಲ್ಲಿ ಆತನಿಗೆ ಪ್ರೀತಿಯಿಂದ ಬಕ್ಷೀಸಾಗಿ ಕೊಟ್ಟಿದ್ದ ಕಿವಿಯಲ್ಲಿನ ಮುರವುಗಳನ್ನು ಒಲ್ಲದ ಮನಸ್ಸಿನಿಂದ ಮಾರಿ ಮಗಳ ಆಸೆ ಪೂರೈಸಿದ್ದ ಕರಿಯ.

ಮನೆಯಲ್ಲಿರುತ್ತಿದ್ದ ಅಲ್ಪಸ್ವಲ್ಪ ಹೊತ್ತು ಲಕ್ಷ್ಮಿ 'ಛೀ, ಹೊಲಸು', 'ಥೂ, ಅಸಹ್ಯ' ಅಂತ ಪ್ರತಿಯೊಂದಕ್ಕೂ ಮುಖ ಸಿಂಡರಿಸಿ ಓಡಾಡುವುದು ದಿನದಿಂದ ದಿನಕ್ಕೆ ಹೆಚ್ಚಾಗುತ್ತ ನಡೆದಾಗ ಮಾತ್ರ ಕರಿಯ ನಿಜವಾಗಿ ಕಳವಳಗೊಂಡ. ಅನೇಕ ಸಲ ಲಕ್ಷ್ಮಿಯ ಕಣ್ಣುಗಳನ್ನೆದುರಿಸಿದಾಗ ಒಂದು ತರದ ದೂರತ್ವದ, ಅಪರಿಚಿತತೆಯ ಭಾವ ಕಂಡಂತಾಗಿ ಆತ ಸಂಕಟಪಡುತ್ತಿದ್ದ. ಒಂದೊಂದು ಸಲ, ಬಹುಶಃ ಆಕೆಗೆ ತಾನು ಆಕೆಯ ತಂದೆಯಾಗಿರಲಿಕ್ಕಿಲ್ಲ ಎಂಬ ಭಾವನೆ-ಸಂಶಯ ಉಂಟಾಗಿದೆಯೇನೋ ಅನಿಸಿ, ಆತ ತೀವ್ರ ಅಸ್ವಸ್ಥತೆ ಅನುಭವಿಸುತ್ತಿದ್ದ. ತನ್ನ ಜನ್ಮಾಂತರಗಳ ಪುಣ್ಯವಿಶೇಷದಿಂದ ದೇವರು ತನಗೆ ಕರುಣಿಸಿರುವನೆಂದು ತಾನು ಭಾವಿಸಿರುವ ಈ ಅನರ್ಘ್ಯರತ್ನ ತನ್ನ ಕೈಜಾರಿ ಹೋಗುತ್ತಿದೆಯೇನೋ ಅನಿಸಿ ಆತ ವಿಚಲಿತನಾಗುತ್ತಿದ್ದ. ಲಕ್ಷ್ಮಿ ಮಾನಸಿಕವಾಗಿ ಆತನಿಂದ ದೂರವಾದಷ್ಟೂ ಆತ ಹೆಚ್ಚೆಚ್ಚು ಅಸಹಾಯಕನಾಗಿ ವಿಷಣ್ಣನಾಗಿ ಎದೆಯೊಡೆದವನಾಗಿ ಅವಳತ್ತ ಸೆಳೆಯಲ್ಪಡತೊಡಗಿದ.

–ಲಕ್ಷ್ಮಿ ಬೆಳೆದಂತೆ ಕರಿಯ ದುಃಖಿಯಾಗತೊಡಗಿದ.

* * *

ಲಕ್ಷ್ಮಿ ಕಾಲೇಜು ಸೇರಿ ರ್‍ಯಾಂಕು ಪಡೆದು ಪಾಸಾಗಿ ಅವಳಿಚ್ಛೆಯಂತೆ ಅವಳಿಗೆ ಮುಂಬಯಿಯ ಮೆಡಿಕಲ್ ಕಾಲೇಜಿನಲ್ಲಿ ಸೀಟು ಸಿಕ್ಕಾಗ ಕರಿಯನ ಹಲವಾರು ವರ್ಷಗಳ ಕನಸು ನನಸಾದಂತೆನಿಸಿ ಆತ ಸಾರ್ಥಕ್ಯಭಾವ ಅನುಭವಿಸಿದರೂ ಆತನ ಮನಸ್ಸಿನಾಳದಲ್ಲಿ ಅವ್ಯಕ್ತವಾದ ಹೊಸ ನೋವೊಂದು ಶುರುವಾಯಿತು. ಲಕ್ಷ್ಮಿಗಿಂತ ಎರಡು ವರ್ಷ ದೊಡ್ಡವಳಾಗಿದ್ದು ಲಕ್ಷ್ಮಿಯ ಕ್ಲಾಸಿನಲ್ಲೇ ಇದ್ದ ಗೌಡರ ಮಗಳು ಸುಜಾತಾಗೆ ಲಕ್ಷ್ಮಿಯಷ್ಟು ಗುಣಗಳು ಸಿಕ್ಕಿರಲಿಲ್ಲವಾದರೂ ಗೌಡರು ಅಪಾರ ಹಣವನ್ನು ಡೊನೇಶನ್ನಾಗಿ ಸುರಿದು ಅವಳಿಗೂ ಮೆಡಿಕಲ್‌ಗೆ ಸೀಟು ದೊರಕಿಸಿದ್ದರು.

ಇಬ್ಬರು ಹುಡುಗಿಯರಿಗೂ ಬಟ್ಟೆಬರೆ, ಪುಸ್ತಕ, ಮತ್ತಿತರ ಆವಶ್ಯಕ ಸಾಮಾನುಗಳನ್ನೆಲ್ಲಾ ಗೌಡರೇ ಕೊಡಿಸಿದರು. ಹೊರಡುವವರೆಗೂ ಎಲ್ಲಿಲ್ಲದ ಸಂಭ್ರಮ, ಗಡಿಬಿಡಿ ಇಬ್ಬರಿಗೂ. ಎಲ್ಲ ಗೆಳತಿಯರನ್ನು, ಪ್ರೊಫೆಸರುಗಳನ್ನು, ಪರಿಚಿತರನ್ನು ಭೆಟ್ಟಿಯಾಗಿ ಬರುವುದು, ಆ-ಈ ಸರ್ಟಿಫಿಕೇಟು-ಮಾರ್ಕ್ಸ್‌ಕಾರ್ಡುಗಳನ್ನು ಹೊಂದಿಸಿಕೊಳ್ಳುವುದು, ಸೀರೆಗಳಿಗೆ ಇಸ್ತ್ರಿ ತೀಡುವುದು, ಒಂದೇ ಎರಡೇ, ನೂರೆಂಟು ಕೆಲಸಗಳು. ಸಾಕಷ್ಟು ವಯಸ್ಸಾಗಿದ್ದ ಗೌಡರು ದೊಡ್ಡ ಮನಸ್ಸಿನಿಂದ ಲಕ್ಷ್ಮಿಯನ್ನೂ ಮಗಳಂತೆಯೇ ಭಾವಿಸಿ ಸ್ವತಃ ಅವಳ ಬೇಡಿಕೆಗಳನ್ನು ಪೂರೈಸಿದರು. ತಾನೇ ಹೋಗಿ ಮೂವರಿಗೂ ಟ್ರೇನಿನಲ್ಲಿ ಸೀಟು ರಿಝರ್ವೇಶನ್ ಮಾಡಿಸಿಕೊಂಡು ಬಂದರು. ಉಂಡಿ-ಅವಲಕ್ಕಿಗಳ ಡಬ್ಬಿಗಳು, ಚಟ್ನಿಪುಡಿ-ಉಪ್ಪಿನಕಾಯಿಯ ಬಾಟ್ಲಿಗಳು ತಯಾರಾದವು.

ಕರಿಯ ಎಲ್ಲದಕ್ಕೂ ಮೂಕಪ್ರೇಕ್ಷಕನಾಗಿದ್ದ. ಈಗೀಗ ಮಗಳು ಆತನೊಡನೆ ಮುಖಕೊಟ್ಟು ಮಾತನಾಡುವುದನ್ನೇ ನಿಲ್ಲಿಸಿದ್ದಳು. ಹೊರಡುವ ದಿನ ಆತನೂ ಕಂಬಳಿ ಹೊದ್ದು ಸ್ಟೇಶನ್ನಿನ ವರೆಗೆ ಹೊರಡಲು ತಯಾರಾದಾಗ ಮಾತ್ರ, 'ಬ್ಯಾಡ ಅಪ್ಪ, ಹ್ಯಾಂಗೂ ಕಾಕಾ ಅವ್ರು (ಆಕೆ ಗೌಡರನ್ನು ಹಾಗೆ ಸಂಬೋಧಿಸುತ್ತಿದ್ದಳು) ಮುಂಬೈ ತನಕಾ ಬರ್ತಾರಲ್ಲ, ನೀಯೇನು ಸ್ಟೇಶನ್ನಿಗೆ ಬರಬ್ಯಾಡ,' ಅಂತ ಖಂಡಿತವಾಗಿ ಹೇಳಿದಳು. ಹೌದಲ್ಲ, ಸ್ಟೇಶನ್ನಿಗೆ ಅವಳ ಸ್ನೇಹಿತರು ಯಾರ್ಯಾರು ಬರುವವರಿದ್ದಾರೋ, ತಾನು ಹೋಗುವುದು ಸರಿಯಾಗಲಿಕ್ಕಿಲ್ಲ, ಮಗಳು ಹೇಳಿದ್ದು ಬರಾಬ್ಬರಿ, ಅಂತಂದುಕೊಂಡ. 'ಓಗಿ ಬಾ ಮಗಾ, ಚೆಂದಾಗಿ ಓದಿ ದಾಗ್ದರಾಗು, ಬಗವಂತ ನಿನ್ನ ಕಾಪಾಡ್ಲಿ,' ಅಂತ ಅವಳನ್ನು ಹರಸಿದ. 'ಮುಂಬಯಿಯೇನು ದೂರಲ್ಲ ಕರಿಯಾ, ಹ್ಯಾಂಗೂ ನಮ್ಮ ಮಗಾ ರಮೇಶ ಅಲ್ಲೇ ಅದಾನಲ್ಲಾ, ಸುಜಾತಾನೂ ಜೋಡೀ ಅದಾಳು. ನಿನ್ಮಗಳು ಆರಾಮ ಇರ್ತಾಳು. ನೀಯೇನೂ ಚಿಂತೀ ಮಾಡಬ್ಯಾಡ', ಅಂತ ಗೌಡರು ಸಂತಯಿಸಿದರು.

ಮಗಳನ್ನು ಹೊತ್ತ ಕಾರು ಕಣ್ಮರೆಯಾಗುವವರೆಗೂ ನೋಡುತ್ತಿದ್ದ ಕರಿಯ ಕಾರಿನ ಧೂಳೂ ಕಾಣಿಸದಂತಾದಾಗ ಶೂನ್ಯವಾಗಿ ತನ್ನ ಮನೆಗೆ ಬಂದ. ನಾಲ್ಕೂ ಗೋಡೆಗಳು ಕಿತ್ತು ತಿನ್ನುವಂತೆನಿಸಿ ಗಟ್ಟಿಯಾಗಿ ಕಣ್ಣುಮುಚ್ಚಿಕೊಂಡ. ಒಳಗೆ-ಹೊರಗೆ ಎಲ್ಲ ಬರಿದೋ ಬರಿದೆನಿಸಿ ತಡೆಯಲಾಗದೆ ಬಿಕ್ಕಿ ಬಿಕ್ಕಿ ಅತ್ತುಬಿಟ್ಟ.

* * *

ಹಾಗೆ ಹೋದ ಕರಿಯನ ಮಗಳು ಮೊದಲ ವರ್ಷದ ಪರೀಕ್ಷೆ ಮುಗಿಯುವ ವರೆಗೂ ವಿಜಾಪುರಕ್ಕೆ ಬರಲೇ ಇಲ್ಲ. ಅವಳಿಗೆ ಸ್ಕಾಲರ್‌ಶಿಪ್ಪು-ಫ್ರೀಶಿಪ್ಪು ಇತ್ಯಾದಿ

ಎಲ್ಲ ಸಿಕ್ಕಿತ್ತು. ಆದರೂ ಕರಿಯ ಶ್ರಮಪಟ್ಟು ಹಗಲು ರಾತ್ರಿ ದುಡಿದು ಅರೆಹೊಟ್ಟೆ ಉಂಡು ಸಾಧ್ಯವಾದಷ್ಟು ಹಣವುಳಿಸಿ ತಿಂಗಳು ತಿಂಗಳೂ ಅವಳಿಗೆ ಕಳಿಸುತ್ತಿದ್ದ. ಎರಡೂ ಹೊತ್ತೂ ಪೋಸ್ಟ್‌ಮನ್ ಬರುವ ದಾರಿಯಲ್ಲಿ ಕಣ್ಣುನೆಟ್ಟು ಕಾಯುತ್ತಿದ್ದ. ಲಕ್ಷ್ಮಿ ಆತನಿಗೆ ವಿಶೇಷವಾಗಿ ಪತ್ರ ಬರೆಯುತ್ತಲೇ ಇರಲಿಲ್ಲ. ಅಕಸ್ಮಾತ್ ಹಣ ಕಳಿಸಲು ತಡವಾದಾಗ ಮಾತ್ರ ಆಕೆಯ ಪತ್ರ ಬರುತ್ತಿತ್ತು. ಆಗೆಲ್ಲ ಖುಶಿಯಿಂದ ಎರಡು ಕೈಯಿಂದಲೂ ಪತ್ರವನ್ನು ಎದೆಗವಚಿಕೊಂಡು ಆತ ಗೌಡರ ಮನೆಗೆ ಓಡುತ್ತಿದ್ದ. ಗೌಡರೋ ಗೌಡತಿಯೋ ಕೆಲಸದಿಂದ ಪುರಸೊತ್ತು ಮಾಡಿಕೊಂಡು ಹೊರಬರುವ ವರೆಗೂ ಆತ ಪತ್ರವನ್ನು ಎದೆಗವಚಿಕೊಂಡೇ ಇರುತ್ತಿದ್ದ. 'ಬರೇ ರೊಕ್ಕಾ ಕಳ್ಸು ಅಂತ ಬರದಾಳಲ್ಲೋ ನಿನ್ಮಗಳು, ಮತ್ತೇನೂ ಬರದೇ ಇಲ್ಲ' ಅಂತ ಅವರಂದಾಗ ಕರಿಯನ ಕಪ್ಪುಮುಖ ಇನ್ನೂ ಕಪ್ಪಾಗುತ್ತಿತ್ತು. ಆಗ ಅವರೇ ಮತ್ತೆ, 'ಆಕಿ ಭಾಳ ಓದ್ತಾಳಂತೋ ಕರಿಯಾ, ಟೈಮೇ ಸಿಗಾಂಗಿಲ್ಲಂತ. ಅದಕ್ಕs ಬರ್ದಿರಾಕಿಲ್ಲ. ಎಲ್ಲಾ ಪರೀಕ್ಷೆದಾಗೂ ಆಕೀದೇ ಫೈಲಾ ನಂಬರಂತ. ನಮ್ಮ ಸುಜಾತಾ ಬರದಾಳು' – ಅಂತ ಸಮಜಾಯಿಸಿದಾಗ ಕರಿಯ ಮತ್ತೆ ಗೆಲುವಾಗುತ್ತಿದ್ದ. ಮಗಳು ಕೈಯಾರೆ ಬರೆದ ಆ ಕಾಗದವನ್ನು ತನ್ನ ಹರಕು ಬನೀನಿನ ಒಳಕಿಸೆಯಲ್ಲಿ ಹೃದಯಕ್ಕೆ ತೀರಾ ಹತ್ತಿರವಾಗಿಟ್ಟುಕೊಂಡೇ ಇಡೀ ದಿನ ಕೆಲಸ ಮಾಡುತ್ತಿದ್ದ. ಆ ರಾತ್ರಿ ಅದನ್ನು ಮಣಕುದಿಂಬಿನ ಮೇಲೆ ತನ್ನ ಒರಟು ಕೆನ್ನೆಗಾನಿಸಿಕೊಂಡು ಇಟ್ಟುಕೊಳ್ಳುತ್ತಿದ್ದ. ಮರುದಿನ ಅದನ್ನು ಜೋಪಾನವಾಗಿ ತನ್ನಲ್ಲಿದ್ದ ಒಂದೇ ಒಂದು ಮುರುಕು ಕಬ್ಬಿಣದ ಪೆಟ್ಟಿಗೆಯಲ್ಲಿ ತೆಗೆದಿಡುತ್ತಿದ್ದ. ಅನೇಕ ದಿನ ಇಂಥ ಸಾದಾ ಪತ್ರವೂ ಬರದಿದ್ದಾಗ, ಗೌಡರ ಮನೆಗೆ ಹೋಗಿ ಅವರ ಮಗಳಿಂದ ಬಂದ ಪತ್ರವನ್ನು ಅವರು ಓದುತ್ತಿದ್ದಾಗ ಅದನ್ನು ಕೇಳುತ್ತ ನಿಲ್ಲುತ್ತಿದ್ದ. ಅದರಲ್ಲೇನಾದರೂ ಲಕ್ಷ್ಮಿಯ ಉಲ್ಲೇಖವಿದ್ದರೆ ಪುಳಕಿತನಾಗಿ ಧನ್ಯತೆ ಅನುಭವಿಸುತ್ತಿದ್ದ.

ವರ್ಷದ ಕೊನೆಗೆ ಮಗಳು ಬರಲಿರುವುದು ತಿಳಿದಾಗ ಕರಿಯ ಮತ್ತೆ ತುಂಬ ಹುರುಪಾದ. ಅವಳ ಅನಾದರ– ಔದಾಸೀನ್ಯ– ಅಲಕ್ಷ್ಯವೆಲ್ಲ ಆತನಿಗೆ ಮರೆತುಹೋಗಿ ಮಗಳ ಚೆಲುವಾದ ಮುಖವೊಂದೇ ಕಣ್ಮುಂದೆ ಕಟ್ಟಿ ತನ್ನ ಚಿಕ್ಕ ಮನೆಯನ್ನು ಶಕ್ತಿಮೀರಿ ಒಪ್ಪಗೊಳಿಸಿದ. ಅವಳಿಗಾಗಿ ವರ್ತನೆಯ ಹಾಲು ಗೊತ್ತುಮಾಡಿದ. ಒಳ್ಳೆಯ ಸಣ್ಣಕ್ಕಿಯನ್ನೂ, ತುಪ್ಪವನ್ನೂ ಗೌಡತಿಯಿಂದ ಕೇಳಿ ಪಡೆದು ತಂದಿಟ್ಟುಕೊಂಡ. ಒಂದು ಹೊಸ ಹೊರಸನ್ನೂ ಅವಳಿಗೆಂದು ತಾನೇ ಕೂತು ಹೆಣೆದು ತಯಾರು ಮಾಡಿದ. ಮೇಲೆ ಹಾಸಲು ತಾನೇ ರಾತ್ರಿಯೆಲ್ಲ ಕೂತು ಮೆತ್ತನ್ನ ಕೌದಿ ಹೊಲಿದ. ಮರೆಯದೆ ಒಂದು ಊದಿನಕಡ್ಡಿ ಪ್ಯಾಕೆಟನ್ನೂ ತಂದಿಟ್ಟ.

ಆದರೆ ಲಕ್ಷ್ಮಿ ಸುಜಾತಳೊಂದಿಗೆ ಬಂದವಳು ನೇರ ಗೌಡರ ಮನೆಗೇ ಹೋಗಿ ಅಲ್ಲೇ ಚಹಾ-ತಿಂಡಿ ಬಗೆಹರಿಸಿದಳು. ಮಗಳನ್ನು ಮೆಡಿಕಲ್ ಕಾಲೇಜಿಗೆ ಮುಂಬಯಿಗೆ ಕಳಿಸಿದ್ದ ಗೌಡರ ಮನೆಯವರೀಗ ಸಾಕಷ್ಟು ಆಧುನಿಕ ಮನೋಭಾವದವರಾಗಿದ್ದು ಅಷ್ಟಾಗಿ ಮಡಿಮೈಲಿಗೆ ಆಚರಿಸುತ್ತಿರಲಿಲ್ಲವಾದ್ದರಿಂದ ಲಕ್ಷ್ಮಿ ಸುಜಾತಳ ಜೊತೆ ಅವರ ದೊಡ್ಡ ಮನೆಯ ಹೊರಕೊಠಡಿಯಲ್ಲೇ ರಾತ್ರಿಯೂ ಉಳಿದಳು. ಅವಳ ಊಟವೂ ಅಲ್ಲೇ ಆಯಿತು. ನೆಪಕ್ಕೆ ಒಂದಷ್ಟು ಹೊತ್ತು ಮನೆಗೆ ಬಂದ ಅವಳು ಅತಿಥಿಯ ಹಾಗೆ ಒಂದಷ್ಟು ಹೊತ್ತು ಕೂತಿದ್ದಳು. 'ಛೀ, ಧೋತ್ರಾ ಸ್ವಚ್ಛ ಒಗದು ಉಟ್ಕೋಬಾರದ ? ಎಷ್ಟ ಹೊಲಸಾಗೇದ !' ಅಂದಳು. 'ಇದೇನು, ಕುಡಿಯೋ ನೀರು ಗಡಿಗ್ಯಾಗ ತುಂಬಿಡೋದು ಇನ್ನೂ ಬಿಟ್ಟಿಲ್ಲ ? ಅಸಹ್ಯ !' ಅಂದಳು. 'ಇದೆಂಥಾ ಖೋಲೀಯೊಳಗ ಇಷ್ಟ ದಿನಾ ಆದ್ರೂ ಹಂಗs ಇದ್ದೀ, ಒಳ್ಳೆ ಡಂಜನ್ ಇದ್ದಾಂಗದ. ಗಾಳಿಲ್ಲ, ಬೆಳಕಿಲ್ಲ, ಉಸಿರು ಕಟ್ಟಿಧಾಂಗ ಆಗತದ,' ಅಂದಳು. ಅಂದವಳು ಎದ್ದೇ ಬಿಟ್ಟಳು. 'ಸೂಟ್ಯಾಗ ಮುಂದಿನ ಅಭ್ಯಾಸ ಮಾಡೂದದ. ನಾಳೀ ಹೋಗ್ಬೇಕು,' ಅಂದಳು. ಅಂದವಳು ಮರುದಿನ ತಿರುಗಿ ಹೋಗೇಬಿಟ್ಟಳು.

ಒಂದೂವರೆ ವರ್ಷ ಬಿಟ್ಟು ಊರಿಗೆ ಬಂದಿದ್ದ ಮಗಳು 'ಹೇಗಿದ್ದೀ ಅಪ್ಪಾ ?' ಅಂತ ಕೇಳುವುದಂತೂ ದೂರವೇ ಉಳಿಯಿತು. ಒಂದು ಸಲವೂ ಬಾಯಿತುಂಬ ತನ್ನನ್ನು 'ಅಪ್ಪಾ' ಅಂತಲೂ ಕರೆಯಲಿಲ್ಲವಲ್ಲ ಅಂತ ಕರಿಯನ ಮನಸ್ಸು ಮುದುಡಿತು.

ಮಂಕಾಗಿ ಸುಂದಾಗಿ ಹೊದೆದು ಮಲಗಿದ ಕರಿಯ ಎರಡು ದಿನ ಯಾತಕ್ಕೂ ಮೇಲೇಳಲೇ ಇಲ್ಲ.

* * *

ಮುಂದಿನ ನಾಲ್ಕಾರು ವರ್ಷಗಳು ಕರಿಯನ ಪಾಲಿಗೆ ಬಹು ಕಹಿಯಾಗಿ ಭಾರವಾಗಿ ಕಳೆದವು. ಆ ದಿನಗಳನ್ನು ಆತ ಒಂದು ತರದ ನಿರಾಶೆಯಲ್ಲಿ, ನಿರೀಕ್ಷೆಯಲ್ಲಿ, ಮಾತುಬಾರದ ಉದ್ವೇಗದಲ್ಲಿ, ಮೂಕವಾದ ಸಂಕಟದಲ್ಲಿ ಕಳೆದ. ಮಗಳು ಕೊನೆಗೊಮ್ಮೆ ಡಾಕ್ಟರಾದದ್ದು ತಿಳಿದಾಗ ಆತನಿಗೇ ವಿಚಿತ್ರವೆನ್ನಿಸುವಂತೆ ಆತನಿಗೆ ಅಷ್ಟೊಂದು ಸಂತೋಷವೇನೂ ಆಗಲಿಲ್ಲ. ಬದಲಿಗೆ, ಬರಲಿರುವ ಇನ್ನೆಂಥ ಆಘಾತಕ್ಕೆ ಇದು ಸೂಚನೆಯೋ ಅನಿಸಿ ಆತನ ಪಿತೃಹೃದಯ ವಿಹ್ವಲವಾಯಿತು.

ಆತ ಕಾತರದಿಂದ ನಿರೀಕ್ಷಿಸಿದ್ದಂತೆ ಅಂಥದೊಂದು ಅಂತಿಮ ಆಘಾತದ ದಿನವೂ ಬಂದಿತು. ಬಹಳ ಗಡಿಬಿಡಿಯಿಂದ ಮುಂಬಯಿಯಿಂದ ಬಂದಿಳಿದ ಲಕ್ಷ್ಮಿ ತಂದೆಯ ಎದೆಯೊಡೆಯುವ ಸುದ್ದಿಯನ್ನೆ ಹೇಳಿದಳು ; ಹೆಚ್ಚಿನ ಶಿಕ್ಷಣಕ್ಕಾಗಿ ಆಕೆ ಇಂಗ್ಲಂಡಿಗೆ ಹೋಗಲಿದ್ದಳು. ಎಲ್ಲ ವ್ಯವಸ್ಥೆಯೂ ಆಗಿತ್ತು. ತಿರುಗಿ ಬರುವುದು ? ಅದು ನಿಶ್ಚಿತವಿರಲಿಲ್ಲ.

ಗೌಡರು ಸಂಭ್ರಮಪಟ್ಟರು. ಅವಳ ಹಳೆಯ ಸ್ನೇಹಿತರು - ಪ್ರೊಫೆಸರುಗಳು ಅಭಿನಂದಿಸಿದರು. ಅವಳಿಗೆ ದಿನವೂ ಬೀಳ್ಕೊಡಿಗೆಯ ಔತಣಗಳನ್ನು ಏರ್ಪಡಿಸಿದರು.

ಕರಿಯನ ಯೋಚನಾಶಕ್ತಿ ಹಾಗೂ ವಾಕ್‌ಶಕ್ತಿಗಳೆರಡೂ ಒಮ್ಮೆಲೇ ಲೋಪವಾಗಿದ್ದವು. ಮಗಳನ್ನು ಕಣ್ತುಂಬ ನೋಡುವ ಆತನ ಆಸೆಯೂ ಪೂರೈಸಲಿಲ್ಲ. ಯಾಕೆಂದರೆ ಅವಳು ತುಂಬ ಅವಸರದಲ್ಲಿದ್ದಳು. ಸದ್ಯದಲ್ಲೇ ಅವಳ ವಿಮಾನ ಮುಂಬಯಿಯಿಂದ ಹೊರಡುವುದಿತ್ತು. ಬಂದಷ್ಟೇ ಗಡಿಬಿಡಿಯಿಂದ ನಾಲ್ಕಾರು ದಿನಗಳಲ್ಲಿ ಅವಳು ತಿರುಗಿ ಹೋಗಿಬಿಟ್ಟಳು. 'ಹೋಗ್ತೀನಿ,' ಅಂದಿದ್ದಳು ಹೋಗುವಾಗ. 'ಹೋಗಿ ಬರ್ತೀನಿ ಅಪ್ಪಾ,' ಅನ್ನಲಿಲ್ಲ.

ಕರಿಯನ ಜೀವನ ಒಮ್ಮೆಲೆ ಶೂನ್ಯವಾಯಿತು. ತನ್ನ ಮುದ್ದು ಮಗಳು ದೊಡ್ಡ ಡಾಕ್ಟರಾಗುತ್ತಾಳೆ. ತಮ್ಮೂರಿನಲ್ಲೇ ದವಾಖಾನೆ ತೆರೆಯುತ್ತಾಳೆ. ಬಡವರ ಸೇವೆ ಮಾಡುತ್ತಾಳೆ. ಎಲ್ಲರೂ ಆಕೆಯನ್ನು ಹಾಡಿ ಹರಸುತ್ತಾರೆ. ಅವಳಿಗೊಂದು ಲಗ್ನಮಾಡಿ ಅವಳ ಮಕ್ಕಳನ್ನು ಆಡಿಸುತ್ತ ಮುಪ್ಪಿನ ಕಾಲವನ್ನು ತಾನು ಆರಾಮವಾಗಿ ಕಳೆಯಬಹುದು. ....ಹೌದು, ಹಾಗೆಂದು ಕರಿಯ ಕನಸು ಕಂಡಿದ್ದ. ಆ ಕನಸುಗಳು ನನಸಾಗುವ ಯಾವ ಸಾಧ್ಯತೆಯೂ ಈಗ ಉಳಿದಿರಲಿಲ್ಲ. ಇನ್ನು ವಿಜಾಪುರದಲ್ಲಿರುವುದರಲ್ಲಿ ಆತನಿಗೇನೂ ಸೊಗಸಿರಲಿಲ್ಲ. ಅರ್ಥವಿರಲಿಲ್ಲ. ತಾನು ಹುಟ್ಟಿ ಬೆಳೆದ ಹಳ್ಳಿಗೇ ಹೋಗಿ ಅಲ್ಲಿದ್ದು ಸಾಯೋಣವೆಂದುಕೊಂಡು ಕರಿಯ ತಿಮ್ಮಾಪುರಕ್ಕೆ ಮರಳಿದ. ಲಕ್ಷ್ಮಿ ಆತನಿಗೆಂದೂ ಪತ್ರ ಬರೆಯಲಿಲ್ಲ. ಆಗೀಗ ಒಂದಷ್ಟು ಹಣ ಕಳುಹಿಸುತ್ತಿದ್ದಳಷ್ಟೆ. ಆದರೆ ಕರಿಯನಿಗೀಗ ಹಣದ ಆವಶ್ಯಕತೆ ಇರಲಿಲ್ಲ. ಯಾಕೆಂದರೆ ಆತನ ಬಾಳಿನಲ್ಲೀಗ ಬೇಕುಗಳೇ ಇರಲಿಲ್ಲ. ಪ್ರತಿ ಬೆಳಗೂ ಆತನ ಪಾಲಿಗೆ ಮತ್ತೊಂದು ಕತ್ತಲೆಯ ರಾತ್ರಿಯ ಪ್ರಾರಂಭವಾಗಿತ್ತು. ಹಗಲು-ರಾತ್ರಿ, ಊಟ-ಉಪವಾಸ, ಮಾತು-ಮೌನ, ಸುಖ-ದುಃಖ ಈ ಎಲ್ಲದರಲ್ಲಿ ಯಾವ ಅಂತರವೂ ಆತನಿಗೀಗ ಕಾಣುತ್ತಿರಲಿಲ್ಲ.

ಹಾಗೆ ಒಂದೆರಡು ವರ್ಷ ಕಳೆದಾಗ ಒಂದು ಸಲ ವಿಜಾಪುರದಿಂದ ಬಂದ ಗೌಡರು ಆತನನ್ನು ಕರೆಸಿ ಹೇಳಿದರು, 'ಕರಿಯಾ, ಮೊನ್ನೆ ನಿನ್ಮಗಳು ವಿಲಾಯ್ತಿಯಿಂದ ಬಂದಿದ್ಳು. ಕೆಲಸ ಭಾಳ ಇತ್ತಂತ ಎರಡೇ ದಿನ ಇದ್ಳು. ತಿಮ್ಮಾಪುರಕ್ಕ ಬರ್ಲಿಕ್ಕಾಗ್ಲಿಲ್ಲ. ಅರಾಮದಾಳು. ನೀಯೇನ ಚಿಂತೀ ಮಾಡಬ್ಯಾಡ.'

ಕರಿಯ ಇಷ್ಟುದಿನ ಭಾವಿಸಿದ್ದಂತೆ ಆತನ ಒಳಗು ಸತ್ತಿರಲಿಲ್ಲ. ಯಾಕೆಂದರೆ ಗೌಡರು ಹೇಳಿದ್ದು ಕೇಳಿದಾಗ ಆತನಿಗೆ ವಿಪರೀತ ದುಃಖವಾಯಿತು. ಆತನ ಅಂಕೆ ಮೀರಿ ಕಣ್ಣುಗಳು ತುಂಬಿಬಂದವು. ಗೌಡರು ಸಂತಯಿಸುವ ಧ್ವನಿಯಲ್ಲಿ ಹೇಳಿದರು,

'ಮುಂದಿನ ವರ್ಷ, ಇಲ್ಲಂದ್ರ ಅದರ ಮುಂದಿನ ವರ್ಷ, ಮತ್ತ ಬರತಾಳಂತ ಕರಿಯಾ, ನಮ್ಮಪ್ಪಗ ಹೇಳ್ರಿ ಅಂದ್ಳು. ವಿಲಾಯ್ತೀ ಕಾರು ತಗೊಂಡು ಜುಮ್ ಅಂತ ಇಲ್ಲೇ ತಿಮ್ಮಾಪುರಕ್ಕೆ ನಿನ್ನ ಹಟ್ಟೀ ಬಾಗಿಲಿಗೇ ಬರತಾಳು, ನೋಡೀವಂತಿ.'

'ಹೌದರ್‍ಯಾ ಯಪ್ಪಾ ? ನಮ್ಮಪ್ಪಗ ಹೇಳ್ರಿ ಅಂತ ನನ್ಮಗಳು ಹೇಳಿದಳರ್‍ಯಾ ಯಪ್ಪಾ? ಅಕೀ ನನ್ನ ಮರತಿಲ್ಲ ಅಂದಾಂಗಾತು. ನನ್ನ ಲಚ್ಚುಮಿ ಕರೇವಂದ್ರೂ ಕಾರಗಾಡಿ ತಗೊಂಡು ನನ್ಮನೀಗೆ ಬರ್‍ತಾಳ ಅಂದಾಂಗಾತು !' ಅಂತ ಕರಿಯ ಖುಶಿಪಟ್ಟ.

* * *

ಇತ್ತೀಚಿನ ದಿನಗಳಲ್ಲಿ ಕರಿಯ ತೀರ ಮುಪ್ಪಾಗಿದ್ದಾನೆ. ಕಣ್ಣುಮಂಜಾಗಿ ಬೆನ್ನುಬಾಗಿ ಕೈಕಾಲಲ್ಲಿನ ಶಕ್ತಿ ಸೋರಿ ಹೋಗಿದೆ. ಇಡೀ ಹಗಲನ್ನೂ ರಾತ್ರಿಯ ಬಹುಪಾಲನ್ನೂ ಆತ ಊರ ಅಗಸಿಯ ಬಳಿಯ ಕರೆವ್ವನ ಗುಡಿಯ ಮುಂಭಾಗದಲ್ಲಿರುವ ಬೇವಿನಮರದ ಕಟ್ಟೆಯ ಮೇಲೆ ಕಳೆಯುತ್ತಾನೆ. ಯಾರಾದರೂ ಏನಾದರೂ ಕೊಟ್ಟರೆ ತಿನ್ನುತ್ತಾನೆ ; ಇಲ್ಲದಿದ್ದರೆ ಇಲ್ಲ. ಯಾರಾದರೂ ಮಾತಾಡಿಸಿದರೆ ಹೆಚ್ಚಾಗಿ ಸುಮ್ಮನೇ ಇರುತ್ತಾನೆ ; ಒಮ್ಮೊಮ್ಮೆ ಏನೋ ಉತ್ತರಿಸುತ್ತಾನೆ. ರಣಗುಡುವ ಬಿಸಿಲಾಗಲೀ, ಕೊರೆಯುವ ಚಳಿಯಾಗಲೀ, ಧೋಧೋ ಸುರಿಯುವ ಮಳೆಯಾಗಲೀ ಆತನ ಮೇಲೆ ಪರಿಣಾಮ ಮಾಡುವುದಿಲ್ಲ. ಶೂನ್ಯದತ್ತ ನೋಡುತ್ತ ಸದಾ ಸುಮ್ಮನೇ ಕೂತಿರುತ್ತಾನೆ. ಆದರೆ ಎಂದಾದರೊಮ್ಮೆ ಊರಿಗೆ ಹೊಸದಾಗಿ ಮಾಡಿಸಿದ ಡಾಂಬರು ರಸ್ತೆಗುಂಟ ಯಾವುದಾದರೂ ಕಾರು ಬಂದರೆ ಆತ ಓಡಿಯೋಡಿ ಅಗಸಿಗೆ ಬರುತ್ತಾನೆ. ಆಸೆಯಿಂದ ಹಣಿಕಿ ನೋಡುತ್ತಾನೆ. ಯಾರಾದರೂ, 'ಕರಿಯಜ್ಜಾ, ನಿನ್ಮಗಳು ಬಂದಿಲ್ಲಪೋ, ಮುಂದಿನ ಕಾರಿನ್ಯಾಗ ಬರ್‍ತಾಳಂತ' -ಅಂದರೆ, ಇರಬಹುದು ಅಂದುಕೊಂಡು ಮತ್ತೆ ತಿರುಗಿ ಬೇವಿನಕಟ್ಟೆಗೆ ಹೋಗುತ್ತಾನೆ.... ಮತ್ತೆ ಮುಂದಿನ ಕಾರು ಯಾವಾಗ ಬಂದೀತೆಂದು ಕಾಯುತ್ತಾನೆ.... ಮತ್ತೆ....

❖ ❖ ❖

# ತಿರುಗಿ ಹೋದಳು

ಲಕ್ಷ್ಮಿಗೆ ತೀರ ಚಿಕ್ಕವಳಾಗಿದ್ದಾಗಿನ ದಿನಗಳಿಂದಲೇ ಇಮಾಮ್‌ಬೀಯ ನೆನಪು ಹಸಿರಾಗಿದೆ. ಲಕ್ಷ್ಮಿ ಹುಟ್ಟುವ ಮೊದಲೇ, ಅವಳ ಅಮ್ಮ ಮದುವೆಯಾಗಿ ಈ ಮನೆಗೆ ಬಂದಾಗಿನಿಂದಲೂ, ಇಮಾಮ್‌ಬೀ ಈ ಮನೆಯಲ್ಲಿ ಕಸ-ಮುಸುರೆ-ಬಟ್ಟೆ ಒಗೆಯುವುದು-ಕಾಳುಕಡ್ಡಿ ಹಸನು ಮಾಡುವುದು ಇತ್ಯಾದಿ ಎಲ್ಲ ಮೇಲ್ಗೆಲಸ ಮಾಡುತ್ತ, ಈ ಮನೆಯಲ್ಲಿ ಕೆಲಸದವಳಾಗಿರದೆ ಮನೆಯವಳೇ ಆಗಿ ಎಲ್ಲರಿಗೂ ಆಪ್ತಳಾಗಿದ್ದಾಳೆ. ಲಕ್ಷ್ಮಿ ನರ್ಸರಿ ಸ್ಕೂಲಿಗೆ ಹೋಗುತ್ತಿದ್ದಾಗ ದಿನಾ ಅವಳನ್ನು ಎತ್ತಿಕೊಂಡು ಸ್ಕೂಲಿಗೆ ಒಯ್ಯುವುದು- ತಿರುಗಿ ಕರೆತರುವುದು ಇಮಾಮ್‌ಬೀಯ ಕೆಲಸವೇ ಆಗಿತ್ತು. ಎಷ್ಟೋ ಸಲ ಅಪ್ಪ-ಅಮ್ಮ ಜಗಳವಾಡಿದಾಗ ಅಪ್ಪ ಹೊರಗೆ ಹೋದನಂತರ ಅಮ್ಮ ದೂರು ಹೇಳಿಕೊಂಡು ಅತ್ತು ಸಮಾಧಾನ ಹೊಂದುತ್ತಿದ್ದುದು ಇಮಾಮ್‌ಬೀಯ ಎದುರಿಗೇ. ಅಮ್ಮನಿಗೆ ಮೂರನೆಯ ಹೆರಿಗೆಯಾದಾಗ ಮಲೇರಿಯಾ ಜ್ವರ ಬಂದು ಅವಳ ಪರಿಸ್ಥಿತಿ ತೀರ ಗಂಭೀರವಿದ್ದಾಗ ಹಗಲು-ರಾತ್ರಿ ಅವಳ ಹಾಸಿಗೆಯ ಬದಿ ಕೂತು ಶುಶ್ರೂಷೆ ಮಾಡಿದಾಕೆ ಇಮಾಮ್‌ಬೀಯೇ. ಹೊಲ ಮಾರಿದ ದುಡ್ಡಿನಲ್ಲಿ ಅಪ್ಪ ಅತ್ಯುತ್ಸಾಹದಿಂದ ನಗರದಲ್ಲಿ ಹೊಸ ಮನೆ ಕಟ್ಟಿಸುವಾಗ ತಿಂಗಳುಗಟ್ಟಲೆ ಕಬ್ಬಿಣ-ಸಿಮೆಂಟು-ಕಲ್ಲು ಕಾಯ್ದು, ಆಳುಗಳ ಉಸ್ತುವಾರಿ ಮಾಡಿ, ಥಾವಣಿಗೆ ನೀರು ಹೊಡೆದದ್ದು ಕೂಡ ಈ ಇಮಾಮ್‌ಬೀ. ಹೀಗೆಲ್ಲ ಆಗಿ ಆ ಮನೆಯ ಹಿರಿಯರು-ಕಿರಿಯರು ಎಲ್ಲರ ಜೀವನದ ಅವಿಭಾಜ್ಯ ಅಂಗವಾಗಿ ಬಿಟ್ಟಿದ್ದವು ಇಮಾಮ್‌ಬೀಯ ಜೀವನ, ಆಕೆಯ ಸುಖ-ದುಃಖಗಳು.

ಹಾಗಾಗಿ ಆ ಮನೆಯವರಿಗೆಲ್ಲ ಇಮಾಮ್‌ಬೀಯ ಬಗ್ಗೆ ತುಂಬ ಅನುಕಂಪ. ತೊಟ್ಟಿಲಿಗೇ ಬಾಸಿಂಗ ಕಟ್ಟಿಸಿಕೊಂಡಿದ್ದ ಇಮಾಮ್‌ಬೀ ದೊಡ್ಡವಳಾಗಿ ಗಂಡನ ಮನೆಗೆ ಬಾಳುವೆ ಮಾಡಲು ಬಂದಾಗ ಅವಳಿಗೆ ಹದಿನಾಲ್ಕು ವರ್ಷವಂತೆ. ೧೫ ನೇ ವರ್ಷಕ್ಕೆ ಅವಳಿಗೊಬ್ಬ ಮಗಳು ಹುಟ್ಟಿದಳಂತೆ. ಅದೇ ವರ್ಷವೇ ನಾಡನ್ನೆಲ್ಲಾ ನಡುಗಿಸಿದ ಪ್ಲೇಗಿಗೆ ತುತ್ತಾಗಿ ಅವಳ ಗಂಡ-ಅತ್ತೆ-ಮಾವ ಎಲ್ಲ ಸತ್ತು ಹೋದರಂತೆ. ಅವರಿವರ ಮನೆ ಕೂಲಿ-ನಾಲಿ ಮಾಡಿ ಮಗಳನ್ನು ಬೆಳೆಸಿ ಸೋದರಿಕೆಯಲ್ಲೇ ಮದುವೆ ಮಾಡಿಕೊಟ್ಟಳು ಇಮಾಮ್‌ಬೀ. ಆ ಮಗಳು ಹದಿನಾರು-ಹದಿನೇಳು ವರ್ಷಕ್ಕೆ ಒಂದು

ಹೆಣ್ಣು ಹೆತ್ತು ಬಾಣಂತಿಜ್ವರ ಬಂದು ಕಣ್ಣುಮುಚ್ಚಿಬಿಟ್ಟಳು. ಈಕೆಯಲ್ಲದೆ ಇನ್ನೂ ಇಬ್ಬರು ಹೆಂಡಿರು-ನಾಲ್ಕಾರು ಮಕ್ಕಳಿದ್ದ ಆ ಅಳಿಯನ ಮನೆಯಲ್ಲಿ ಅದೇ ಹುಟ್ಟಿದ ಕೂಸನ್ನು ಬಿಡಲಾಗದೆ ಇಮಾಮ್‌ಬೀ ಆ ಮಗುವನ್ನು ಕರೆತಂದು ತಾನೇ ಜೋಪಾನ ಮಾಡಿದಳು. ಹೀಗೆ ಉಳಿದು ಬೆಳೆದ ಅವಳ ಮೊಮ್ಮಗಳು ಹಮೀದಾಬಾನು ತುಂಬ ಚಂದದ ಹುಡುಗಿ. ಹಬ್ಬ ಹರಿದಿನಗಳಲ್ಲಿ ಅಜ್ಜಿಯೊಡನೆ ಆಕೆ ಮನೆಗೆ ಬಂದಾಗ ಲಕ್ಷ್ಮಿ ಕೌತುಕದಿಂದ ಆಕೆಯನ್ನು ನೋಡುತ್ತಿದ್ದಳು. ಹಮೀದಾಬಾನುವಿನ ಬಿಲ್ಲಿನಂತಹ ಹುಬ್ಬುಗಳು, ಅಗಲವಾದ ಕಪ್ಪು ಕಣ್ಣುಗಳು, ನೇರವಾದ ಮೂಗು, ಸುಂದರ ಮೈಕಟ್ಟು, ಗೌರವರ್ಣ —ಎಲ್ಲವೂ ಸೇರಿ ಲಕ್ಷ್ಮಿಗೆ ಆಕೆ ಇತಿಹಾಸ ಪುಸ್ತಕದಲ್ಲಿನ ಚಿತ್ತೂರು ಪದ್ಮಿನಿಯ ಹಾಗೆ ಕಾಣುತ್ತಿದ್ದಳು. ಈ ಮುದ್ದು ಮೊಮ್ಮಗಳ ಬಾಳನ್ನು ಹಸನಾಗಿಸುವುದೊಂದೇ ಈಗ ಮುದುಕಿ ಇಮಾಮ್‌ಬೀಗೆ ಉಳಿದಿರುವ ಗುರಿ, ಆಸೆ.

ಹಲವಾರು ಸಲ ಆಕೆ ಅಮ್ಮನಲ್ಲಿ ಹೇಳಿದ್ದನ್ನು ಲಕ್ಷ್ಮಿ ಕೇಳಿದ್ದಳು. 'ನೋಡಾಕ ಪಸಂದ ಖೂಬಸೂರತ ಅದಾಳು ನನ್ನ ಬೇಟೀ. ಸಾಲೀ ಕಲಿತ ಛಲೂ ಹುಡುಗನ್ನ ನೋಡಿ ಲಗ್ನಾ ಮಾಡ್ರಿ ಅಮ್ಮಾ, ಒಬ್ಬ ಹೆಣ್ತೀನ್ನ ನೆಚ್ಚಿಕೊಂಡು ಇರುವಂಥಾ ಹುಡುಗನ್ನ ನೋಡ್ರಿ ಅಮ್ಮಾ, ಸಾಹೇಬ್ರಿಗೆ ಹೇಳ್ರಿ, ನಿಮ್ಮ ಕಾಲು ಮುಗೀತನು.' ಈ ವಿಷಯದಲ್ಲಿ ಸಹಾಯ ಮಾಡುವೆನೆಂದು ಲಕ್ಷ್ಮಿಯ ಅಮ್ಮನೂ ಮಾತು ಕೊಟ್ಟಿದ್ದರು.

ಆದರೆ ಹಮೀದಾಬಾನುವಿನ ದೈವ ಬೇರೆಯೇ ಇತ್ತು. ಒಂದು ಸಲ ಇಮಾಮ್‌ಬೀಯ ತಮ್ಮನ ಮನೆಯಲ್ಲಿ ಆತನ ಮೊಮ್ಮಕ್ಕಳ ಮದುವೆಯಿತ್ತೆಂದು ಹಮೀದಾಬಾನು ಹದಿನೈದು ದಿನ ಮುಂಚೆಯೇ ಬೆಳಗಾವಿಗೆ ಹೋದಳು. ಮದುವೆಯ ಹೊತ್ತಿಗೆ ಹೋದರಾಯಿತೆಂದು ಇಮಾಮ್‌ಬೀ ಹಿಂದೆ ಉಳಿದಳು. ಆದರೆ ಆ ಮದುವೆಗೆ ಇನ್ನೂ ಎರಡುದಿನ ಇರುವಾಗ ಇಮಾಮ್‌ಬೀ ಒಗೆಯುವ ಕಲ್ಲಿನ ಹತ್ತಿರ ಬಿದ್ದು ಎಡಗಾಲಿನ ಮೂಳೆ ಮುರಿದು ಹೋಯಿತು. ಆ ದಿನಗಳಲ್ಲಿ ಆಕೆಗೆ ವಯಸ್ಸಾಗಿದ್ದರಿಂದ ಲಕ್ಷ್ಮಿಯ ಮನೆಗೆಲಸಕ್ಕೆ ಬೇರೊಬ್ಬಳು ಬರುತ್ತಿದ್ದಳು. ಆದರೂ ಇಮಾಮ್‌ಬೀಯ ಕಾಲು ಮುರಿದ ಸುದ್ದಿ ಕೇಳಿ ಲಕ್ಷ್ಮಿಯ ಅಪ್ಪ ಅವಳ ಮನೆಗೆ ಹೋಗಿ ಅವಳನ್ನು ದವಾಖಾನೆಗೆ ಕರೆದೊಯ್ದು ಪ್ಲಾಸ್ಟರು ಹಾಕಿಸಿ, ಅವಳ ಔಷಧೋಪಚಾರದ ಖರ್ಚೆಲ್ಲ ನೋಡಿಕೊಂಡರು. ಗಟ್ಟಿಜೀವವಾಗಿದ್ದ ಮುದುಕಿ ತಿಂಗಳೊಪ್ಪತ್ತಿನಲ್ಲಿ ಚೇತರಿಸಿಕೊಂಡು ಕುಂಟುತ್ತ ಓಡಿಯಾಡುವಂತಾದಳು. ಎಂದೂ ಮೊಮ್ಮಗಳನ್ನು ಅಷ್ಟು ದಿನ ಅಗಲಿರಲಾರದ ಇಮಾಮ್‌ಬೀ ತನಗೆ ತುಸು ನೆಟ್ಟಗಾದೊಡನೆ ಮೊದಲು ಮೊಮ್ಮಗಳನ್ನು ಕರೆತರಲು ಬೆಳಗಾವಿಗೆ ಓಡಿದಳು. ಹೋಗುವಾಗ ಆಕೆ ಅಮ್ಮನಿಂದ ಬಸ್ಸು ಚಾರ್ಜಿಗಾಗಿ ಹಣ ಪಡೆದದ್ದೂ ಲಕ್ಷ್ಮಿಗೆ ನೆನಪಿದೆ. ಎರಡು ದಿನಗಳ ನಂತರ

ಎದೆಎದೆ ಬಡಿದುಕೊಳ್ಳುತ್ತ ಇಮಾಮ್‌ಬೀ ತಿರುಗಿ ಬಂದಾಗಿನ ಸನ್ನಿವೇಶವನ್ನಂತೂ ಲಕ್ಷ್ಮಿಗೆ ಎಂದೂ ಮರೆಯಲಾಗಿಲ್ಲ. ಆಕೆಯ ಅವಾಂತರ ಕೇಳಿ ಏನಾಯಿತೋ ಅಂತ ಗಾಬರಿಯಿಂದ ಹೊರಬಂದ ಮನೆಮಂದಿಗೆಲ್ಲಾ ಆಕೆ ಅಲ್ಲಾನ ಹೆಸರಿನಲ್ಲಿ ಯಾರಿಗೋ ಶಾಪ ಹಾಕುತ್ತ, ಗಟ್ಟಿಯಾಗಿ ಅಳುತ್ತ ಹೇಳಿದ ಕತೆಯಲ್ಲಿ ಅರ್ಥವಾದದ್ದು ; ಆಕೆಯ ತಮ್ಮ ಹುಸೇನಸಾಬನ ಮೊಮ್ಮಕ್ಕಳ ಮದುವೆಗೆ ಎಲ್ಲೆಲ್ಲಿಂದಲೋ ಬಹಳಷ್ಟು ನೆಂಟರು ಬಂದಿದ್ದರು ; ಅವರಲ್ಲೊಬ್ಬಾತ ಲಖನೌದಲ್ಲಿ ಬಟ್ಟೆ ವ್ಯಾಪಾರಿಯಾಗಿದ್ದ ಮಹಮ್ಮದ ಗೌಸನೆಂಬ ನಡುವಯಸ್ಸು ಮೀರತೊಡಗಿದ್ದ ಶೋಕೀಲಾಲ ; ಬೆಳಗಾವಿಯಲ್ಲಿ ಬಟ್ಟೆ ವ್ಯಾಪಾರಿಯೇ ಆಗಿದ್ದ ಇಮಾಮ್‌ಬೀಯ ತಮ್ಮನಿಗೂ ಮಹಮ್ಮದ ಗೌಸನಿಗೂ ದೂರದ ನೆಂಟಸ್ತಿಕೆಯಲ್ಲದೆ ವ್ಯಾಪಾರಿ ಸ್ನೇಹ ಬೇರೆ , ಮದುವೆ ಮನೆಯಲ್ಲಿ ಎಲ್ಲರ ಕಣ್ಣುಕುಕ್ಕುವಂತೆ ಓಡಾಡುತ್ತಿದ್ದ ಹಮೀದಾಬಾನುವಿನ ಮೇಲೆ ಮಹಮ್ಮದಗೌಸನ ಕಣ್ಣು ಬಿತ್ತು ; ಲೋಭಿಯಾಗಿದ್ದ ಮುದುಕ ಗೆಳೆಯ ಹುಸೇನ್‌ಸಾಬನ ಕೂಡ ವ್ಯಾಪಾರ ಕುದುರಿಸುವುದು ಚಾಣಾಕ್ಷನಾಗಿದ್ದ ಗೌಸನಿಗೆ ತಡವಾಗಲಿಲ್ಲ ; ಐದಾರು ನೂರು ರೂಪಾಯಿ ಕೈ ಬದಲಾಯಿಸಿದವು ; ಸರಿ, ಅದೇ ಮುಹೂರ್ತದಲ್ಲೇ ಮಹಮ್ಮದಗೌಸನ ಕೂಡ ಹಮೀದಾಬಾನುವಿನ ನಿಕಾಹ ಆಗಿ ಹೋಯಿತು. ಇಮಾಮ್‌ಬೀ, ಮುದುಕಿ ಪಾಪ, ಈ ಮೊಮ್ಮಗಳ ಲಗ್ನ ಮಾಡುವುದು ಅವಳಿಗೆ ಆಗುತ್ತಿರಲಿಲ್ಲ, ಹುಸೇನ್‌ಸಾಬ ಪುಣ್ಯ ಕಟ್ಟಿಕೊಂಡ, ಅಲ್ಲಾ ಮೆಚ್ಚುವ ಕೆಲಸ ಮಾಡಿದ, ಅಂದರು ಎಲ್ಲರೂ. ಇನ್ನೂ ಹದಿನೆಂಟು ದಾಟಿರದ ಚೆಲುವೆ ಹಮೀದಾ ಐವತ್ತರ ಅಂಚಿನಲ್ಲಿದ್ದ ಗೌಸನ ಬೀಬಿಯಾದಳು. ಕೂಡಿದ ಜನ ಎಲ್ಲರೆದುರು ಅತ್ತು ರಂಪ ಮಾಡಿದಳು ಇಮಾಮ್‌ಬೀ. ಮೋಸ ಮಾಡಿದನೆಂದು ತಮ್ಮನಿಗೆ ಶಾಪ ಹಾಕಿದಳು. ಇನ್ನೇನು ನಿನ್ನ ಮೊಮ್ಮಗಳಿಗೆ ಆಫೀಸರ್ ಗಂಡ ಸಿಕ್ಕುತ್ತಿದ್ದನೇ ? ಉಣ್ಣಲು ಉಡಲು ಸಾಕಷ್ಟು ಇದೆ ಗೌಸ್‌ಸಾಹೇಬನಿಗೆ. ಲಖನೌದಲ್ಲಿ ಎರಡು ಅಂಗಡಿ ಇವೆ. ವ್ಯಾಪಾರಕ್ಕಾಗಿ ಇಡೀ ಹಿಂದುಸ್ತಾನ ತಿರುಗುತ್ತಾನೆ. ಲಗ್ನಕ್ಕೆ ಎರಡು ರೇಶಿಮೆ ಸೀರೆ ತಂದಿದ್ದಾನೆ. ಅರ್ಧತೊಲೆ ಬಂಗಾರದ ತಾಳಿ ಹಾಕಿದ್ದಾನೆ. ಎಲ್ಲ ಖರ್ಚು ತಾನೇ ನೋಡಿಕೊಂಡಿದ್ದಾನೆ. ಇಮಾಮ್‌ಬೀಗೆ ಹಾಗೂ ಹುಸೇನಸಾಬನ ಹೆಂಡತಿಗೆ ಕೂಡ ಒಂದೊಂದು ಇಳಕಲ್ ಸೀರೆ ಆಹೇರು ಮಾಡಿದ್ದಾನೆ. ಇನ್ನೇನು ಬೇಕು ? —ಹಾಗೆಂದು ನೆಂಟರೆಲ್ಲ ಇಮಾಮ್‌ಬೀಯ ರಂಪಾಟಕ್ಕೆ ಮೂಗು ಮುರಿದರು. ನಿಕಾಹ ಆದ ಮೇಲೆ ಇನ್ನೇನು ಮಾಡುವುದಿದೆ ? ಇಮಾಮ್‌ಬೀ ಸಂಕಟ ತಡೆಯಲಾರದೆ ಮೊಮ್ಮಗಳ ಮೇಲೆ ಕೆಂಡ ಕಾರಿದಳು : 'ರಂಡೆ, ನಿನಗೇನು ಧಾಡಿ ಆಗಿತ್ತು ? ಅಜ್ಜಿ ಬರುವ ತನಕ ಲಗ್ನಕ್ಕೆ ಒಪ್ಪುವುದಿಲ್ಲ ಅನ್ನಲು ಬರುತ್ತಿರಲಿಲ್ಲವೆ ? ಇದಕ್ಕೆ ನಿನ್ನನ್ನ ಇಷ್ಟು ವರ್ಷ

ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ಕಾಯ್ದೆನೆ ? ಅಯ್ಯೋ, ಗಿಳಿ ಸಾಕಿ ಗಿಡುಗನಿಗೆ ಕೊಟ್ಟಂತಾಯಿತಲ್ಲ....' ಪಾಪ, ಲಗ್ನವಾಗಿ ನಂತರದ ಹದಿನೈದಿಪ್ಪತ್ತು ದಿನಗಳಲ್ಲಿ ಹುಂಬ ಗಂಡನ ಕೈಯಲ್ಲಿ ಪೂರಾ ನಲುಗಿ ಹೋಗಿದ್ದ ಹಮೀದಾ ಅಳುತ್ತಳುತ್ತ ಹೇಳಿದಳು, 'ನನಗೇನೂ ತಿಳೀಲಿಲ್ಲ ಅಮ್ಮೀಜಾನ್, ಆಪಾಜಾನ್ ಎಳಕೊಂಡು ಬಂದು ಕೂಡಿಸಿದ್ರು. ಹ್ಞೂ ಅನ್ನು ಅಂದ್ರು. ಅಮ್ಮೀಜಾನ್ ಬರ್ಲಿ ಅಂದೆ. ಅಮ್ಮೀಜಾನ್‌ನೇ ಹೇಳಿಕಳಿಸಿದ್ದು, ಹ್ಞೂ ಅನ್ನು ಅಂದ್ರು. ಅಂದೆ. ನನಗಿಷ್ಟು ಜಹರ ತಂದು ಕೊಟ್ಟುಬಿಡು ಅಮ್ಮೀಜಾನ್, ನಾ ಸತ್ಹೋಗ್ತೀನಿ...' ಮುದುಕಿಯ ಎದೆ ಕರಗಿತು. ಮೊಮ್ಮಗಳನ್ನು ತಬ್ಬಿಕೊಂಡು 'ಅಲ್ಲಾ ನಮ್ಮಿಬ್ರಿಗೂ ಧಗಾ ಮಾಡಿದ್ನಲ್ಲೇ' ಅಂತ ಗೊಳೋ ಎಂದು ಅತ್ತಳು. ಅತ್ತು ಸುಮ್ಮನಾದಳು. ಇನ್ನೇನು ಮಾಡುವುದು ? ಆದರೆ ಅವಳ ಸಿಟ್ಟು ಆರಿರಲಿಲ್ಲ. ಮೊಮ್ಮಗಳನ್ನು ಗಂಡನ ಕೂಡ ಕಳಿಸುವುದಿಲ್ಲ, ಅಂತ ತಿರುಗಿ ಹುಬ್ಬಳ್ಳಿಗೇ ಕರಕೊಂಡು ಬಂದು ಬಿಟ್ಟಿದ್ದಳು.

ಲಕ್ಷ್ಮಿಯ ಅಮ್ಮ-ಅಪ್ಪ ಅಯ್ಯೋ ಪಾಪ ಅಂದರು, ಹೀಗಾಗಬಾರದಿತ್ತು ಅಂದರು. ಆದರೆ ಆಗಿ ಹೋದ ಮೇಲೆ ಏನು ಮಾಡುವುದು, ಗಂಡನ ಮನೆಗೆ ಅವಳನ್ನು ಕಳಿಸುವುದೇ ಯೋಗ್ಯ ಅಂದರು. ನೆರೆಹೊರೆಯ ಹಿತೈಷಿಗಳೂ ಅದನ್ನೇ ಅಂದರು. ಇಷ್ಟೊತ್ತಿಗೆ ಇಮಾಮ್‌ಬೀಯ ಸಿಟ್ಟು ಇಳಿದು ವಿವೇಕೋದಯವಾಗಿದ್ದರಿಂದ ಆಕೆ ಗೌಸನನ್ನು ಕಳಿಸಿಕೊಡುವಂತೆ ಹುಸೇನಸಾಬನಿಗೆ ಕಾಗದ ಬರೆಸಿ ಹಾಕಿದಳು. ಮೊಮ್ಮಗಳನ್ನು ಲಖನೌಗೆ ಕಳಿಸಲು ತಯಾರಿ ನಡೆಸಿದಳು. ಇನ್ನೂ ಬೆಳಗಾವಿಯಲ್ಲೇ ಇದ್ದ ಗೌಸ ಕಾಗದ ಸಿಕ್ಕೊಡನೆ ಓಡಿ ಬಂದ. ಹೊಸ ಹೆಂಡತಿಯ ಕೂಡ ತಿಂಗಳೊಪ್ಪತ್ತು ಅತ್ತೆಯ ಮನೆಯಲ್ಲಿದ್ದು ಮಜಾ ಮಾಡಿದ. ಮುಂದೆ ವ್ಯಾಪಾರಕ್ಕಾಗಿ ಮುಂಬೈ-ಪುಣೆ ಕಡೆಗೆ ಹೋಗಬೇಕೆಂದೂ, ನಂತರ ಲಖನೌಗೆ ಹೋಗಿ ಎಲ್ಲ ವ್ಯವಸ್ಥೆ ಮಾಡಿ ತಿರುಗಿ ಬಂದು ಹೆಂಡತಿಯನ್ನು ಕರೆದೊಯ್ಯುವೆನೆಂದೂ ಹೇಳಿ ಒಂದು ದಿನ ಸೂಟ್‌ಕೇಸ್ ಹೊತ್ತು ನಡೆದುಬಿಟ್ಟ.

ಮುಂದೆ ಆರು ತಿಂಗಳಾದರೂ ಅವನ ಸುದ್ದಿಯೇ ಇಲ್ಲ. ಇಮಾಮ್‌ಬೀ ಕಂಗಾಲಾಗಿ ಬೆಳಗಾವಿಗೆ ಹೋಗಿ ಹುಸೇನಸಾಬನನ್ನು ತರಾಟೆಗೆ ತೆಗೆದುಕೊಂಡಳು. ಗೌಸ ತನ್ನ ಬಹಳ ವರ್ಷಗಳ ಮಿತ್ರ, ಲಖನೌದಲ್ಲಿದ್ದುದು ನಿಜ, ಆದರೆ ಆತನ ವಿಳಾಸ ತನಗೂ ಗೊತ್ತಿಲ್ಲ, ಆದರೆ ಗಾಬರಿಯಾಗುವ ಕಾರಣವಿಲ್ಲ, ಆತ ಇವತ್ತಲ್ಲ ನಾಳೆ ತಿರುಗಿ ಬಂದೇ ಬರುತ್ತಾನೆ, ಎಂದೆಲ್ಲ ಅಕ್ಕನನ್ನು ಸಂತೈಸಿದ ಹುಸೇನಸಾಬ. ಇಮಾಮ್‌ಬೀ ಸಪ್ಪೆ ಮುಖ ಹಾಕಿಕೊಂಡು ಹುಬ್ಬಳ್ಳಿಗೆ ತಿರುಗಿ ಬಂದಳು.

ಹೇಳಿದಂತೆ ಮಹಮ್ಮದಗೌಸ ತಿರುಗಿ ಬಂದೇ ಬಂದ. ಆದರೆ ಅದು ಮತ್ತೆ

ಆರು ತಿಂಗಳು, ಅಂದರೆ ಆತ ಮದುವೆಯಾಗಿ ಹೋಗಿ ಒಂದು ವರ್ಷ ಕಳೆದ ನಂತರ. ಆ ಹೊತ್ತಿಗೆ ಹಮೀದಾಬಾನು ಮೂರುತಿಂಗಳ ಹೆಣ್ಣು ಮಗುವಿನ ತಾಯಿಯಾಗಿದ್ದಳು. ಗೌಸ ಹೆಂಡತಿ-ಮಗುವಿಗೆ ಸೀರೆ-ಬಟ್ಟೆ, ಸಿಹಿತಿಂಡಿ ತಂದ. ಇಮಾಮ್‌ಬೀಗೆ ಒಂದು ಹೊದೆಯುವ ಕಂಬಳಿ ತಂದ. ಮತ್ತೆ ಒಂದು ತಿಂಗಳು ಮಜವಾಗಿದ್ದ. ನಂತರ ನಾಲ್ಕೇ ದಿನಗಳಲ್ಲಿ ಬೆಳಗಾವಿಗೆ ಹೋಗಿ ತಿರುಗಿ ಬರುವೆನೆಂದೂ ಆಗ ಹೆಂಡತಿ ಮಗುವನ್ನು ಕರೆದೊಯ್ಯುವೆನೆಂದೂ ಹೇಳಿ ಮುದುಕಿಯ ಕೈಯಲ್ಲಿ ಐವತ್ತು ರೂಪಾಯಿ ಹಾಕಿ ಮತ್ತೆ ಹೋಗಿಬಿಟ್ಟ.

ಮುದುಕಿ-ಮೊಮ್ಮಗಳು ಕಾಯ್ದುಕೂತರು. ಮಗು ಬೆಳೆಯುತ್ತಿತ್ತು. ವಯಸ್ಸಾಯಿತೆಂದು ಕೆಲಸ ನಿಲ್ಲಿಸಿದ್ದ ಇಮಾಮ್‌ಬೀ ಉದರ ನಿರ್ವಹಣೆಗಾಗಿ ಮತ್ತೆ ಕೆಲಸ ಹುಡುಕಿಕೊಂಡು ಹೋಗಬೇಕಾಯಿತು. ಪ್ಯಾಸೆಂಜರ ಟ್ರೇನುಗಳಲ್ಲಿ ಸಮೀಪದ ಕಾಡುಗಳಿದ್ದ ಊರುಗಳಿಗೆ ಹೋಗಿ ಕಳವಿನಿಂದ ಕಟ್ಟಿಗೆಯ ಹೊರೆ ತಂದು ಮಾರುವುದು ಅವಳ ನಿತ್ಯ ಕಸುಬಾಯಿತು. ಇಡೀ ದಿನ ದುಡಿದದ್ದಕ್ಕೆ ಸಿಗುವ ಪ್ರತಿಫಲ ಒಂದೂವರೆ-ಎರಡು ರೂಪಾಯಿ, ಬಹಳವೆಂದರೆ ಮೂರು ರೂಪಾಯಿ. ಅಷ್ಟರಲ್ಲಿ ಹಿಟ್ಟು ಬೇಯಿಸಿ ಅಜ್ಜಿ ಮೊಮ್ಮಗಳಿಬ್ಬರೂ ಅರೆಹೊಟ್ಟೆ ಉಂಡು ಲಖನೌದ ಕಡೆಗೆ ಕಣ್ಣುನೆಟ್ಟು ಹೇಗೋ ದಿನ ನೂಕುತ್ತಿದ್ದರು.

ಮರುವರ್ಷ ಸುಮಾರು ಅದೇ ಸೀಝನ್ನಿಗೆ ಗೌಸ ಮತ್ತೆ ಬಂದ. ಆಗಲೆ ಹುಟ್ಟಿ ಮೂರು ತಿಂಗಳಾಗಿದ್ದ ಎರಡನೆಯ ಮಗುವನ್ನು ಮುದ್ದಿಸಿ ತಾನು ತಂದಿದ್ದ ಜರಿಯ ಅಂಗಿ ತೊಡಿಸಿದ. ಮತ್ತೆ ತಿಂಗಳೊಪ್ಪತ್ತು ಮಜವಾಗಿದ್ದ. ಸಾಲಸೋಲ ಮಾಡಿ ಅಳಿಯನಿಗೆ ಚಪಾತಿ, ಸಿಹಿಸಜ್ಜಿಗೆ, ಬಿರಿಯಾನಿ, ಮೀನಿನಸಾರು ಎಲ್ಲ ಮಾಡಿದಳು ಇಮಾಮ್‌ಬೀ. ಆದರೆ ಆತ ಹೊರಟು ನಿಂತಾಗ ಮಾತ್ರ ಖಟ್ಟಿಗೆ ಹಚ್ಚಿ ಕೇಳಿದಳು, ಹೆಂಡತಿಯನ್ನೇಕೆ ಕರೆದೊಯ್ಯುತ್ತಿಲ್ಲ ಅಂತ. ಮೊದಲು ಹಾರಿಕೆಯ ಉತ್ತರ ಕೊಟ್ಟು ತಪ್ಪಿಸಿಕೊಳ್ಳಲು ನೋಡಿದ ಗೌಸ ಕೊನೆಗೆ ನಿರ್ವಾಹವಿಲ್ಲದೆ ಸತ್ಯ ಹೇಳಿದ : ಲಖನೌದಲ್ಲಿ ಆತನ ಮೊದಲ ಹೆಂಡತಿ, ಆಕೆಯ ಒಂಬತ್ತು ಮಕ್ಕಳು ಇದ್ದಾರೆ. ಎರಡನೆಯ ಹೆಂಡತಿಯನ್ನು ಆ ಮನೆಗೆ ಕರೆತಂದರೆ ಆತನನ್ನೂ ಆ ಹೆಂಡತಿಯನ್ನೂ ಕೂಡಿಯೇ ಕಡಿದು ಹಾಕುವೆವೆಂದು ಆಕೆಯ ಅಣ್ಣಂದಿರು ಹೇಳಿದ್ದಾರೆ. ಅಂತೆಯೇ ಅನಕಾ ಹಮೀದಾ ಇಲ್ಲೇ ಇರಲಿ. ತಾನೇ ಬಂದು ಹೋಗಿ ಮಾಡುತ್ತೇನೆ. ಮುಂದೆ ಎಲ್ಲ ಪರಿಸ್ಥಿತಿ ಶಾಂತವಾಗಿ ಅನುಕೂಲವಾದಾಗ ಕರೆದೊಯ್ಯುತ್ತೇನೆ. ಖರ್ಚಿಗೆ ಹಣ ಬೇಕಲ್ಲವೆ, ಆಗಲಿ, ಕೊಟ್ಟು ಕಳಿಸುತ್ತೇನೆ.

ಇಮಾಮ್‌ಬೀ ಮತ್ತೆ ರಂಪ ಮಾಡಿದಳು. ಆತನ ಕುಲಕೋಟಿ ಉದ್ಧಾರ

ಮಾಡಿದಳು. ಆದರೆ ಈ ಎರಡೇ ವರ್ಷದಲ್ಲಿ ತೀರ ಪ್ರಬುದ್ಧಳಾದಂತೆ ತೋರುತ್ತಿದ್ದ ಹಮೀದಾ ಅಜ್ಜಿಯನ್ನು ಸಂತೈಸಿದಳು, 'ಸುಮ್ಮನಿರು ಅಮ್ಮೀಜಾನ್, ನನ್ನ ನಸೀಬದಾಗೆ ಅಲ್ಲಾ ಇದನ್ನೇ ಬರೆದಾಗ ಇನ್ನೇನು ಮಾಡೋದು ?' –ಇನ್ನೇನು ಮಾಡುವುದೂ ಆ ಅಸಹಾಯ ಅಜ್ಜಿ-ಮೊಮ್ಮಗಳಿಗೆ ಸಾಧ್ಯವಿರಲಿಲ್ಲ.

ಅಲ್ಲಿಂದೀಚೆ ಆ ಮನೆಯ ಜೀವನ ಒಂದೇ ತೆರನಾಗಿ ಸಾಗಿಬಂದದ್ದು ಲಕ್ಷ್ಮಿ ಕಂಡಿದ್ದಾಳೆ. ಪ್ರತಿವರ್ಷ ಲಕ್ಷ್ಮಿಯ ಕಾಲೇಜಿಗೆ ಬೇಸಿಗೆಯ ರಜವಿದ್ದಾಗ ಹಮೀದಾಬಾನುವಿನ ಗಂಡ ಊರಿಗೆ ಬರುತ್ತಾನೆ. ಆಗ ಅವಳಿಗೆ ಮೂರು ತಿಂಗಳ ಮಗುವಿರುತ್ತದೆ. ಆತ ಇಲ್ಲಿರುವ ೧೫-೨೦ ದಿನಗಳಲ್ಲಿ ಮುದುಕಿ-ಮೊಮ್ಮಗಳು ಇಬ್ಬರೂ ಅವರಿವರಿಂದ ಕಡ ತಂದಾದರೂ ಆತನಿಗೆ ಅಡಿಗೆ ಮಾಡಿಹಾಕಿ ತಾವು ಉಪವಾಸವಿರುತ್ತಾರೆ. ಆತ ಆರಾಮಾಗಿ ಉಂಡು ಬೀಡಿ ಸೇದಿ, ತಂಬಾಕು ತಿಂದು ಚರ್‌ಚರ್ ಅಂತ ಕಾಲ್ಮರಿಯ ಸದ್ದು ಮಾಡುತ್ತ ಊರೆಲ್ಲ ಸುತ್ತುತ್ತಾನೆ. ಹಿಂದಿ ಪಿಕ್ಚರು ನೋಡುತ್ತಾನೆ. ಕಂಟ್ರಿ ಸರಾಯಿ ಕುಡಿಯುತ್ತಾನೆ. ಲಕ್ಷ್ಮಿಯ ಮನೆಗೂ ಬಂದು ಆಕೆಯ ಅಪ್ಪ-ಅಮ್ಮನಿಗೆ ಸಲಾಮ್ ಹೇಳಿ ತಿರುಗಿ ಊರಿಗೆ ಹೋಗುತ್ತಾನೆ. ಅಷ್ಟರಲ್ಲಿ ಹಮೀದಾಬಾನು ಮತ್ತೆ ಬಸಿರಾಗಿರುತ್ತಾಳೆ.

ಇತ್ತೀಚೆ ಮಕ್ಕಳು ಹೆಚ್ಚಾದಂತೆ ಹಮೀದಾಬಾನುವೂ ತಮ್ಮ ಜನದ ಸಾಹೇಬರುಗಳ ಮನೆಗೆ ಅಡಿಗೆ ಕೆಲಸಕ್ಕಾಗಿ ಹೋಗುತ್ತಿದ್ದಾಳೆ. ಆರು ವರ್ಷದ ಹಿರಿಯ ಮಗಳನ್ನು ತಮ್ಮ ಜನವೇ ಆದ ಡಾಕ್ಟರೊಬ್ಬರ ಮನೆಯಲ್ಲಿ ಮೇಲ್ಗೆಲಸಕ್ಕಾಗಿ ಇಟ್ಟಿದ್ದಾಳೆ. ಆಕೆಯ ಗಂಡ ಈಗೀಗ ವರ್ಷಕ್ಕೊಮ್ಮೆ ಬರುವಾಗ ಬರಿಗೈಯಲ್ಲೇ ಬರುತ್ತಾನೆ. ಹೋಗುವಾಗ ಹಣವನ್ನೂ ಕೊಡುವುದಿಲ್ಲ. ಆದರೆ ಪ್ರತಿವರ್ಷ ಬಂದು ಕೆಲದಿನ ಇದ್ದು ತನ್ನ ಗಂಡಸುತನ ಸಾಬೀತು ಮಾಡಿ ಹೋಗುವುದರಲ್ಲಿ ಆತ ಎಂದೂ ಹಿಂದೆ ಬಿದ್ದಿಲ್ಲ.

ಲಕ್ಷ್ಮಿಗೆ ಈಗ ಇದೆಲ್ಲಾ ಅರ್ಥವಾಗುವ ವಯಸ್ಸು. ಕಾಲೇಜಿನ ಚರ್ಚಾಕೂಟಗಳಲ್ಲಿ ಸ್ತ್ರೀಸಮಾನತೆ– ಸ್ವಾತಂತ್ರ್ಯದ ಬಗ್ಗೆ ಭಾಷಣ ಮಾಡಿ ಬಹುಮಾನ ಪಡೆಯುವ ಆಕೆಗೆ ಈ ಇಮಾಮ್‌ಬೀಯ ಮೊಮ್ಮಗಳ ಬಾಳು ನೋಡಿ ಪಿತ್ತ ಕೆರಳುತ್ತದೆ : 'ನೀನ್ಯಾಕೆ ಆತನನ್ನು ಸೇರಿಸಿಕೊಳ್ಳುತ್ತೀ ಹಮೀದಾ ? ಹೆಂಡತಿ ಮಕ್ಕಳ ಬಗ್ಗೆ ತನ್ನ ಕರ್ತವ್ಯ ತಿಳಿಯದ ಗಂಡನನ್ನು ಬೆಂಕಿಹಾಕಿ ಸುಡಬಾರದೆ ? ಆತ ಬಂದಾಗ ಒದ್ದು ಕಳಿಸಬಾರದೇ ? ಅವನಿಂದ ನಿನಗೇನೂ ಸಹಾಯವಿಲ್ಲ, ಲಾಭವಿಲ್ಲ. ಮತ್ತೇಕೆ ಅವನು ಬಂದಾಗ ಇಷ್ಟು ಸಡಗರ ಪಡುವುದು ? ಮುಖಕ್ಕೆ ಉಗಿದು ಆಚೆ ನೂಕಬಾರದೆ ಅವನನ್ನ ?'

–ಲಕ್ಷ್ಮಿ ಪ್ರತಿಸಲ ಹಾಗನ್ನುತ್ತಾಳೆ. ಪ್ರತಿಸಲ ಅದನ್ನು ಕೇಳಿ ಹಮೀದಾಬಾನು ತಲೆತಗ್ಗಿಸಿ ನಿಲ್ಲುತ್ತಾಳೆ. ಆಕೆಯ ಮುಖದಲ್ಲಿ ನೋವಿನ ಗೆರೆಗಳು ಮೂಡುತ್ತವೆ. ಯಾರೂ ಏನೇ ಅಂದರೂ ಈ ಪಾಪದ ಹೆಂಗಸಿಗೆ ಆ ನೀಚ ಗಂಡನನ್ನು ದೂರ ಮಾಡುವುದು ಶಕ್ಯವಿಲ್ಲವೆಂದು ಇತ್ತೀಚೆಗೆ ಲಕ್ಷ್ಮಿಗೂ ಚೆನ್ನಾಗಿ ಗೊತ್ತಾಗಿದೆ. ಆದರೂ ಆಕೆ ಮತ್ತೆ ಹಮೀದಾಬಾನು ಜೋಲು ಮುಖ ಹಾಕಿಕೊಂಡು ಲಕ್ಷ್ಮಿಯ ಅಮ್ಮನ ಹಳೆಯ ಸೀರೆಯನ್ನೋ, ಮಕ್ಕಳ ಹಳೆಯ ಬಟ್ಟೆಯನ್ನೋ, ಲಕ್ಷ್ಮಿಯ ಅಜ್ಜಿ ಬಸಿರಿಯರಿಗೆ ಮಾಡಿ ಕೊಡುವ ಕಷಾಯವನ್ನೋ ಕೇಳಲೆಂದು ಬಂದಾಗ ಲಕ್ಷ್ಮಿ ಅಂದೇ ಅನ್ನುತ್ತಾಳೆ, –'ನೀನ್ಯಾಕೆ ಆತನನ್ನು ಒದ್ದು ಕಳಿಸುವುದಿಲ್ಲ ಹಮೀದಾ ?' –ಹಮೀದಾ ಸುಮ್ಮನೆ ತಲೆತಗ್ಗಿಸುತ್ತಾಳೆ. ಆಕೆಯ ಮುಖದಲ್ಲಿನ ನೋವಿನ ಗೆರೆಗಳು ಆಳವಾಗುತ್ತವೆ.

* * *

ಲಕ್ಷ್ಮಿಗೆ ಎಮ್. ಕಾಮ್. ಪರೀಕ್ಷೆಯಲ್ಲಿ ಫಸ್ಟ್‌ಕ್ಲಾಸ್ ಬಂದ ಕೆಲವೇ ದಿನಗಳಲ್ಲಿ ಮುಂಬಯಿಯ ಸ್ಟೇಟ್ ಬ್ಯಾಂಕಿನ ಮುಖ್ಯ ಕಚೇರಿಯಲ್ಲಿ ಪ್ರೊಬೇಶನರಿ ಆಫೀಸರ್ ಅಂತ ಕೆಲಸ ಸಿಕ್ಕಿತು. ಅಷ್ಟು ದೂರ ಮಗಳನ್ನು ಕಳುಹಿಸಲು ಆಕೆಯ ಅಮ್ಮನಿಗೆ ಇಷ್ಟವಿರಲಿಲ್ಲ. ಆದರೆ ಹೇಗೂ ಅಲ್ಲಿ ಚಿಕ್ಕಪ್ಪನ ಮನೆಯಿದೆ, ಹೋಗುತ್ತೇನೆ, ಈಗಿನ ದಿನಗಳಲ್ಲಿ ಸಿಕ್ಕ ಒಳ್ಳೆಯ ಕೆಲಸ ಬಿಡಬಾರದು– ಅಂದಳು ಲಕ್ಷ್ಮಿ. ಅಪ್ಪ ಅನುಮೋದಿಸಿದರು. ಬೆಳೆದ ಮಗಳನ್ನು ಮದುವೆ ಮಾಡದೆ ಬೇರೆ ಊರಿಗೆ ಕಳಿಸುವುದು ಚೆಂದವಲ್ಲ ಅಂತ ಅಮ್ಮ ಗೊಣಗಿದರು. ಅವಳ ನಶೀಬ ಚೆನ್ನಾಗಿದ್ದರೆ ಅಲ್ಲೇ ಒಳ್ಳೆಯ ಗಂಡು ಸಿಕ್ಕೀತು ಅಂತ ಅಪ್ಪ ಸಮಾಧಾನ ಪಡಿಸಿದರು.

ಅದು ಆದದ್ದೂ ಹಾಗೆಯೆ. ಬ್ಯಾಂಕಿನ ಕೆಲಸಕ್ಕೆ ಸೇರಿದ ಒಂದೇ ವರ್ಷದಲ್ಲಿ ಲಕ್ಷ್ಮಿಗೆ ಆಕೆಯ ಸಹೋದ್ಯೋಗಿಯೇ ಆಗಿದ್ದ ಸುರೇಶ ಕುಲಕರ್ಣಿಯೊಂದಿಗೆ ಪರಿಚಯವಾಗಿ, ಗೆಳೆತನವಾಗಿ, ಪ್ರೀತಿಯಾಗಿ, ಮದುವೆಯೂ ಆಗಿಬಿಟ್ಟಿತು. ಎತ್ತರ ನಿಲುವಿನ ಸ್ಮಾರ್ಟ್ ಆಗಿದ್ದ ಲಕ್ಷ್ಮಿಯ ಗಂಡನನ್ನು ನೋಡಿ ನೆಟಿಕೆ ಮುರಿದು ಇಮಾಮ್‌ಬೀ 'ಅಲ್ಲಾ ನಿನ್ನನ್ನ ಸುಖವಾಗಿಡ್ಲಿ ಬೇಟೀ' ಅಂದಳು. ಆತ್ಮವಿಶ್ವಾಸ ತುಂಬಿದ ಧ್ವನಿಯಲ್ಲಿ ಲಕ್ಷ್ಮಿ ಅಂದಿದ್ದಳು, 'ನಮ್ಮ ಸುಖಾ ನಮ್ಮ ಕೈಯಾಗಿರ್ತದ ಇಮಾಮಜ್ಜೀ, ನಮ್ಮ ತಪ್ಪಿನಿಂದ– ಮೂರ್ಖತನದಿಂದ ನಮ್ಮ ಕಾಲಮ್ಯಾಲ ನಾವೇ ಕಲ್ಲು ಹಾಕ್ಕೊಂಡು ಅಲ್ಲಾನ ಬೈದರ ಅಲ್ಲಾ ಏನ್ಮಾಡಿಯಾನು ?' ಆ ಮಾತಿನ ಒಳಗಿನ ಅರ್ಥ ಸೂಕ್ಷ್ಮಮತಿಯಾದ ಮುದುಕಿಗೆ ತಿಳಿದಿತ್ತು. ಎಂದಿನಂತೆ ಆಕೆ ಮೊಮ್ಮಗಳನ್ನು ಅಸಹಾಯಕತೆ-ದುಃಖದಿಂದ ಟೀಕಿಸಿದಳು : 'ಹಮೀದಾಗೆ ಎಷ್ಟು ಹೇಳಿದರೂ ಆ

ಲೋಫರ್ ನನ್ಮಗನಿಗೆ ಬರಬ್ಯಾಡ ಅಂತನ್ನೋದು ಆಕೆಯ ಕೈಲಾಗೋದಿಲ್ಲ. ಬಾಳ ಮೆತ್ತಗಿನ ಹೆಂಗಸು. ಸುಮ್ಮನೆ ಕಣ್ಣೀರು ನುಂಗಿ ಒಳಗೊಳಗೆ ನವೀತಾಳು, ಏನ್ಮಾಡೋದು ?' ಎಂದಿನ ರೋಷದಿಂದ ಲಕ್ಷ್ಮಿ ಅಂದಳು, 'ಆತನನ್ಯಾಕೆ ಒದ್ದು ಕಳಿಸೋದಿಲ್ಲ ಹಮೀದಾ ?' ಹಮೀದಾ ಎಂದಿನಂತೆ ತಲೆತಗ್ಗಿಸಿ ನಿಂತಿದ್ದಳು.

* * *

ಮುಂಬಯಿಯಲ್ಲಿ ಗಂಡನೊಂದಿಗೆ ಸಂಸಾರ ಹೂಡಿದ ಮೊದಲ ತಿಂಗಳು ಸಂಬಳದ ಹಣ ಬಂದೊಡನೆ ಆತ ಪೂರಾ ಪಗಾರ ತನ್ನ ಕೈಯಲ್ಲಿಡುತ್ತಾನೆ, ಅದರಲ್ಲಿ ಮನೆಯ ಖರ್ಚಿಗೆ ಎಷ್ಟು ಬೇಕಾಗಬಹುದು, ಉಳಿದದ್ದನ್ನು ಯಾವ ಯಾವ ಠೇವಣಿಗಳಲ್ಲಿ ತೊಡಗಿಸುವುದು ಅಂತ ಜಾಣೆಯಾದ ಲಕ್ಷ್ಮಿ ಲೆಕ್ಕ ಹಾಕುತ್ತಿದ್ದಳು. ಆದರೆ ಅವಳೆಣಿಸಿದಂತೆ ಸುರೇಶ ತನ್ನ ಸಂಬಳದ ಹಣವನ್ನು ಅವಳಿಗೆ ಕೊಡಲೇ ಇಲ್ಲ. 'ಏನು, ಎಲ್ಲಾ ಸ್ಯಾಲರಿ ಬ್ಯಾಂಕಿನಲ್ಲೇ ಇಟ್ಟಿರಾ ?' ಅಂತ ಲಕ್ಷ್ಮಿ ಕೇಳಿದಾಗ ಅನುಮಾನಿಸಿ ಹೇಳಿದ್ದ : ಇಲ್ಲೇ ವರ್ಲಿಯಲ್ಲಿ ಆತನ ಅಕ್ಕನ ಮನೆಯಿದೆ. ಅಕ್ಕ ವಿಧವೆ. ಆಕೆಗೆ ಐದು ಮಕ್ಕಳು. ಆಕೆಗೆ ತುಂಬ ಬಡತನ. ಆಕೆಯ ಮನೆಯ ಬಾಡಿಗೆ-ಮಕ್ಕಳ ಸ್ಕೂಲು ಫೀಜು ಇತ್ಯಾದಿ ಕೊಡುವುದಿತ್ತು. ವಿಧವೆ ಅಕ್ಕನ ಸಂಸಾರಕ್ಕೆ ಆಗೀಗ ಒಂದಿಷ್ಟು ಸಹಾಯ ಮಾಡುವುದು ತಮ್ಮನ ಕರ್ತವ್ಯ. ಈ ಮನೆಯ ಖರ್ಚಿಗೆ ಹೇಗೂ ಲಕ್ಷ್ಮಿಯ ಸಂಬಳವಿದೆಯಲ್ಲ.

ಈ ವಿಧವೆ ಅಕ್ಕ ಹಾಗೂ ಆಕೆಯ ಸಂಸಾರದ ಬಗ್ಗೆ ಸುರೇಶ ಮದುವೆಗೆ ಮೊದಲೇ ಲಕ್ಷ್ಮಿಗೆ ಹೇಳಿದ್ದ. ಆಕೆ ಸುರೇಶನ ಮದುವೆಗೆ ಹುಬ್ಬಳ್ಳಿಗೆ ಬಂದಿರಲಿಲ್ಲ. ಇಲ್ಲಿ ಹೊಸ ಸಂಸಾರ ಪ್ರಾರಂಭವಾದ ನಂತರ ಒಂದು ಸಲ ಇಲ್ಲಿನ ಮನೆಗೆ ಮಕ್ಕಳೊಂದಿಗೆ ಬಂದಿದ್ದಳು. ಆಕೆಯ ಅಹಂಕಾರದ ನಡೆನುಡಿ, ಮಕ್ಕಳ ಹುಂಬ ವರ್ತನೆ, ಎಲ್ಲಕ್ಕಿಂತ ಮೇಲಾಗಿ ಕೊಬ್ಬಿದ ಎಮ್ಮೆಯಂತೆ ಕಾಣುತ್ತಿದ್ದ ಆಕೆಯ ಹಿರಿಮಗಳ ಹಾಲ್‌ಚಾಲು-ಯಾಕೋ ಲಕ್ಷ್ಮಿಗೆ ಹಿಡಿಸಿರಲಿಲ್ಲ. ವಿಧವೆ ಅಕ್ಕನ ಸಂಸಾರಕ್ಕೆ ಗಂಡ ಸಹಾಯ ಮಾಡಿದರೆ ಅದರಲ್ಲೇನೂ ತಪ್ಪು ಕಂಡಿರಲಿಲ್ಲ ಲಕ್ಷ್ಮಿಗೆ. ಆದರೆ ಪ್ರತಿ ತಿಂಗಳು ಸಂಬಳದ ಬಹುಪಾಲನ್ನು ಆತ ಆ ಮನೆಗಾಗಿಯೇ ಖರ್ಚು ಮಾಡುವುದು, ಪ್ರತಿ ರವಿವಾರ ಅಕ್ಕನ ಸಂಸಾರದ ಯೋಗಕ್ಷೇಮ ವಿಚಾರಿಸಲು ಆ ಮನೆಗೇ ಹೋಗುವುದು, ಅನೇಕ ಸಲ ರಾತ್ರಿ ಕೂಡ ಅಲ್ಲೇ ಕಳೆಯುವುದು, ಎಲ್ಲದಕ್ಕೂ ಏನಾದರೊಂದು ನೆಪ ಹೇಳಿ ಆ ವಿಷಯದ ಬಗೆಗಿನ ಮಾತನ್ನು ಅಲ್ಲೇ ಬಿಟ್ಟು ಎದ್ದು ಹೊರಗೆ ಹೋಗಿ ಬಿಡುವುದು, ಇಂಥವೆಲ್ಲ ಲಕ್ಷ್ಮಿಗೆ ಬರಬರುತ್ತ ನುಂಗಲಾರದ ತುತ್ತಾಗತೊಡಗಿದವು.

ಈ ಮಧ್ಯೆ ಲಕ್ಷ್ಮಿಯ ತಮ್ಮನ ಮದುವೆ ನಿಶ್ಚಯವಾಗಿದ್ದರಿಂದ ಲಕ್ಷ್ಮಿ

ಹದಿನೈದು ದಿನದ ರಜೆ ಹಾಕಿ ತವರಿಗೆ ಬಂದಳು. ಒಬ್ಬಳೇ ಏಕೆ ಬಂದೆ ಅಂತ ಕೇಳಿದವರಿಗೆ ಗಂಡ ಮದುವೆಗೆ ಬರುತ್ತಾನೆಂದು ಹೇಳಿದಳು. ಆತನೀಗ ಅಸಿಸ್ಟಂಟ್ ಮ್ಯಾನೇಜರ್, ತುಂಬ ಕೆಲಸ, ಹಾಗೆಲ್ಲ ರಜೆ ಸಿಗುವುದಿಲ್ಲ, ಅಂತ ಸತ್ಯವನ್ನೇ ಹೇಳಿದಳು. ಬರುವಾಗ ತಮ್ಮನಿಗಾಗಿ ಏನಾದರೂ ಒಳ್ಳೆಯ ಪ್ರಜೆಂಟೇಶನ್ ತಗೊಂಡು ಬರ್ರಿ ಅಂತ ಗಂಡನಿಗೆ ಹೇಳಿ ಬಂದಿದ್ದಳು.

ಕಣ್ಣು ಸರಿಯಾಗಿ ಕಾಣಿಸುತ್ತಿರದಿದ್ದರೂ ಮುಂಬಯಿಯಿಂದ ಬಂದ ಲಕ್ಷ್ಮಿಯನ್ನು ನೋಡಲೆಂದು ಇಮಾಮ್‌ಬಿ ಕೋಲೂರಿಕೊಂಡು ಬಂದಳು. 'ಎಷ್ಟ ದುಬಲೀಪತಲೀ ಆಗೀದಿ ಬೇಟೀ' ಅಂದಳು. ನೆಟಿಕೆ ಮುರಿದಳು. ಹತ್ತನೆಯ ಸಲ ಬಸಿರಾಗಿದ್ದ ಹಮೀದಾಬಾನು ರಕ್ತಹೀನತೆಯಿಂದ ಬಿಳಿಚಿಕೊಂಡು ಜೀವಂತ ಶವದ ಹಾಗೆ ಕಾಣುತ್ತಿದ್ದಳು. ಇನ್ನು ಮತ್ತೆ ಹೆರಿಗೆಯಾದರೆ ಆಕೆಯ ಜೀವಕ್ಕೆ ಅಪಾಯವೆಂದು ಕಳೆದ ಸಲವೇ ಡಾಕ್ಟರು ಹೇಳಿದ್ದರಂತೆ. ಹಾಗೆಂದು ಆಕೆಯ ಒಂಬತ್ತನೇ ಮಗು ಹುಟ್ಟಿದ ನಂತರ ಬಂದಿದ್ದ ಆಕೆಯ ಗಂಡನಿಗೆ ಇಮಾಮ್‌ಬೀ ಹೇಳಿದಾಗ ಆತ- 'ಜೀವ ಕೊಡುವಾತ- ಉಳಿಸುವಾತ- ತೆಗೆದುಕೊಂಡು ಹೋಗುವಾತ ಅಲ್ಲಾ, ನಮ್ಮ ಕೈಯಲ್ಲೇನಿದೆ ?' ಅಂತ ಕೈಯಾಡಿಸಿಬಿಟ್ಟಿದ್ದ. ಯಥಾಪ್ರಕಾರ ಆತ ತಿರುಗಿ ಹೋಗುವಾಗ ಅಲ್ಲಾನ ಕೃಪೆಯನ್ನು ಸಾಬೀತು ಮಾಡಿಯೇ ಹೋಗಿದ್ದ. ಆ ಭಡವನನ್ನು ಮನೆಯ ಹೊಸ್ತಿಲು ತುಳಿಸಗೊಡಬಾರದೆಂದು ಈಗೀಗ ದೊಡ್ಡವರಾಗತೊಡಗಿರುವ ಮಕ್ಕಳೂ ಹೇಳುತ್ತಿವೆ. ಈ ಒಂಬತ್ತು ಮಕ್ಕಳಲ್ಲಿ ಹಿರಿಯ ಮೂವರೂ ಯಾರ್‍ಯಾರ ಮನೆಯಲ್ಲೋ ಕೆಲಸಕ್ಕಿದ್ದಾರೆ. ಉಳಿದ ಆರು ಮಕ್ಕಳು ತಾಯಿ ಅಜ್ಜಿಯೊಡನೆ ಅರೆಹೊಟ್ಟೆ ಉಂಡು ಕಟ್ಟಿಗೆಯಂಥ ಕೈಕಾಲು-ಡೊಳ್ಳು ಹೊಟ್ಟೆ ಬಿಟ್ಟುಕೊಂಡು ಜೀವವಿಲ್ಲದ ಕಣ್ಣುಗಳಿಂದ ಜಗತ್ತನ್ನು ನೋಡುತ್ತ ಹೇಗೋ ಬದುಕಿಕೊಂಡಿವೆ. ಈ ಪೀಳಿಗೆಗೆ ಶೀಘ್ರವೇ ಮತ್ತೊಂದು ದುರ್ದೈವೀ ಹೊಸ ಜೀವ ಸೇರಲಿದೆ. ಈಗಲಾದರೂ ಹಮೀದಾಬಾನು ಬುದ್ಧಿ ಕಲಿಯಬಾರದೆ ? ಆಕೆಯ ಹಾಗೂ ಈ ಮಕ್ಕಳ ಅನುವು-ಆಪತ್ತು, ಜಡ್ಡು-ಜಾಪತ್ತು. ಹೊಟ್ಟೆ-ಬಟ್ಟೆ ಯಾವುದರ ಖಬರೂ ಇಲ್ಲದೆ ವರ್ಷಕ್ಕೊಂದು ಸಲ ಬಂದು ಕೆಲದಿನ ಇದ್ದು ಮಜಾಮಾಡಿ ಹೋಗುವ ಸುವ್ವರ್‌ನನ್ನು ಹಮೀದಾಬಾನು ಯಾಕೆ ಹತ್ತಿರ ಸೇರಿಸಬೇಕು ? ಯಾವ ಸುಖಕ್ಕಾಗಿ ? -ಇದು ಮುದುಕಿ ಇಮಾಮ್‌ಬೀಯ ವ್ಯಥೆ.

ಹಮೀದಾಬಾನು ನಿರೀಕ್ಷಿಸಿಯೇ ಇದ್ದಂತೆ ಲಕ್ಷ್ಮಿ ಕೋಪದಿಂದ ಕೇಳಿದಳು, 'ನೀನ್ಯಾಕೆ ಆತನನ್ನು ಒದ್ದು ಓಡಿಸುವುದಿಲ್ಲ ಹಮೀದಾ ? ಇಂಥ ಗಂಡನನ್ನು ಕಟ್ಟಿಕೊಂಡೇನು ಉಣ್ಣುವುದಿದೆ ? ಈತನೂ ಒಬ್ಬ ಗಂಡಸೇ ?'

ಹಮೀದಾಬಾನು ಎಂದಿನಂತೆ ಸಣ್ಣಮುಖ ಮಾಡಿ ಏನೂ ಮಾತಾಡದೆ ತಲೆ ತಗ್ಗಿಸಿದಳು.

* * *

ಮುಂಬಯಿಗೆ ತಿರುಗಿ ಬಂದಾಗ ಗಂಡನ ಬಗೆಗಿನ ಅಸಮಾಧಾನ ಲಕ್ಷ್ಮಿಯಲ್ಲಿ ಭುಗಿಲ್ಲೆಂದಿತ್ತು. ಆತ ಹುಬ್ಬಳ್ಳಿಗೆ ಆಕೆಯ ತಮ್ಮನ ಮದುವೆಗೆ ಬರೀಕೈಯಲ್ಲಿ ಬಂದಿದ್ದ. ಇದೇಕೆ ಹೀಗೆಂದು ಏಕಾಂತದಲ್ಲಿ ಲಕ್ಷ್ಮಿ ಕೇಳಿದಾಗ 'ಏನು ಮಾಡುವುದು, ಹಣದ ಅಡಚಣೆ ಇತ್ತು,' ಅಂದ. 'ಇಷ್ಟಕ್ಕೂ ನೀನು ಹೇಗೂ ಏನಾದರೊಂದು ಕೊಂಡು ಕೊಡುತ್ತೀಯಲ್ಲ, ನಾನು-ನೀನು ಬೇರೆಯೇ ?' ಅಂದ. ತುಟಿ ಮುಚ್ಚಿಕೊಂಡು ಲಕ್ಷ್ಮಿ ತಾನೇ ಮಾರ್ಕೆಟಿಗೆ ಹೋಗಿ ಅಮ್ಮನಿಗೊಂದು ರೇಶಿಮೆ ಸೀರೆ, ಅಪ್ಪನಿಗೆ ಶಲ್ಯೆ, ತಮ್ಮನಿಗೆರಡು ತೊಲದ ಚೈನು ತಂದಳು. 'ಎಲ್ಲಾ ನನ್ನ ಯಜಮಾನರು ಮುಂಬಯಿಯಿಂದ ತಂದದ್ದು' ಅಂತ ಹೇಳಿ ನೆಂಟರಿಷ್ಟರಿಂದ 'ಎಷ್ಟು ಉದಾರಿ ಲಕ್ಷ್ಮಿಯ ಗಂಡ !' ಅನ್ನಿಸಿಕೊಂಡು ಗರ್ವಪಟ್ಟಳು.

ಮುಂಬಯಿಗೆ ಬಂದ ಒಂದು ವಾರದಲ್ಲಿ ಗಂಡನ ಉದಾರತೆಯ ಪೂರ್ಣ ಪರಿಚಯವಾಯಿತು ಅವಳಿಗೆ. ಒಂದು ದಿನ ಸಂಜೆ ಆಕೆ ಬ್ಯಾಂಕಿನಿಂದ ಮನೆಗೆ ಬಂದಳು. ಸುರೇಶ ಟೂರ್‌ಗೆ ಅಂತ ದಿಲ್ಲಿಗೆ ಹೋಗಿದ್ದ. ಆಗ 'ಸುರೇಶಮಾಮಾ ದಿಲ್ಲಿಯಿಂದ ತಿರುಗಿ ಬಂದ್ರೇನು ಕೇಳ್ಕೊಂಡು ಬಾ ಅಂದಳು ರೇಖಕ್ಕ' ಅಂತ ಕೇಳಿಕೊಂಡು ಬಂದಿದ್ದ ಸುರೇಶನ ಅಕ್ಕನ ಮಗ ರವಿ. ರೇಖಾ ಆ ಅಕ್ಕನ ಹಿರಿಯಮಗಳು. ಸುರೇಶನ ಶಿಫಾರಸ್ಸಿನಿಂದಲೇ ಆಕೆಗೆ ಇತ್ತೀಚೆ ಟೈಪಿಸ್ಟ್ ಕೆಲಸ ಸಿಕ್ಕಿತ್ತು ಯಾವುದೋ ಆಫೀಸಿನಲ್ಲಿ. ಮೂವತ್ತರ ಆ ಹುಡುಗಿಗೆ ಇನ್ನೂ ಮದುವೆ ಏಕಾಗಿಲ್ಲವೆಂದು ಲಕ್ಷ್ಮಿ ಕೇಳಿದಾಗ ಸುರೇಶ 'ಅವಳಿನ್ನೂ ಚಿಕ್ಕ ಹುಡುಗಿ, ಅವಳಿಗೇನು ವಯಸ್ಸಾಗಿದೆ ?' ಅನ್ನುತ್ತಿದ್ದ. ಆಕೆಗೇನು ಅಂಥ ಅರ್ಜೆಂಟು ಕೆಲಸವೋ ಸುರೇಶಮಾಮಾನ ಕಡೆಗೆ ? ಆತನಿನ್ನೂ ಬಂದಿಲ್ಲವೆಂದು ಲಕ್ಷ್ಮಿ ಹುಬ್ಬುಗಂಟಿಕ್ಕಿಯೇ ಉತ್ತರಿಸಿದಳು. ರವಿ ಉತ್ಸಾಹದಿಂದ ಹೇಳಿದ್ದ, 'ಮಾಮೀ, ನನ್ನ ಹೊಸಾ ಸುವೇಗ ನೋಡಿದ್ರೇನು ? ಮೊನ್ನೆ ಸುರೇಶ ಮಾಮಾ ಕೊಡಿಸಿದ್ರು. ಮೂರೂವರೆ ಸಾವಿರ ಕೊಟ್ರಂತ. ಬರ್ರಿ, ಹೊರಗಿಟ್ಟೇನಿ, ನೋಡಬರ್ರಿ. ವಂಡರ್ ಫುಲ್ ಅದ.' ಲಕ್ಷ್ಮಿಗೆ ತನಗಾದ ಆಘಾತವನ್ನು ತೋರಿಸಿಕೊಳ್ಳದಿರಲು ನಿಜವಾಗಿಯೂ ಕಠಿಣವೆನಿಸಿತು.

ದಿಲ್ಲಿಯಿಂದ ಮರಳಿ ಬಂದ ಸುರೇಶ ಒಳ್ಳೆಯ ಮೂಡ್‌ನಲ್ಲಿದ್ದ. ಹೆಂಡತಿಯನ್ನು ಅಪ್ಪಿ ರಮಿಸಿ 'ನಿನ್ನ ಬಿಟ್ಟಿರೋದು ಭಾಳ ತ್ರಾಸು ಲಕ್ಷ್ಮೀ' ಅಂದ. ಲಕ್ಷ್ಮಿ ಕರಗಿದಳು. ಆತ ಬೇಕಾದವರಿಗೆ ಬೇಕಾದಷ್ಟು ಖರ್ಚು ಮಾಡಲಿ, ತನ್ನನ್ನು ಮಾತ್ರ

ಪ್ರೀತಿಸಿದರೆ ಸಾಕು, ತನಗೇನು ತನ್ನದೇ ಹಣವಿಲ್ಲವೇ ಖರ್ಚು ಮಾಡಲು, ಅನ್ನಿಸಿತು. ತಾನೇನು ಉಳಿದ ಹೆಂಗಸರಂತೆ ಆರ್ಥಿಕವಾಗಿ ಗಂಡನನ್ನು ಅವಲಂಬಿಸಬೇಕಾಗಿಲ್ಲ. ತನಗೆ ಏನು ಬೇಕಾದರೂ ತನ್ನ ಹಣದಿಂದ ಕೊಳ್ಳಬಹುದು. ಗಂಡನ ಹಣ ತನಗೆ ಬೇಡ. ಆತನ ಪ್ರೀತಿಯೊಂದು ತನ್ನ ಪಾಲಿಗಿದ್ದರೆ ಸಾಕು, ಅನ್ನಿಸಿತು. ತುಂಬುಮನಸ್ಸಿನಿಂದ ಆಕೆ ಗಂಡನ ಪ್ರೀತಿಗೆ ಮನತೆರೆದು ಸ್ಪಂದಿಸಿದಳು.

ಆದರೆ ಎಷ್ಟೋ ಸಲ ಆಕೆಗೆ ಮತ್ತೆ ಆಸೆಯಾಗುತ್ತಿತ್ತು. ಗಂಡ ತನಗಾಗಿ ಏನಾದರೂ ತರಬೇಕು, ತಾನದನ್ನು ಪಡೆದು ಕಣ್ಣರಳಿಸಿದ್ದು ನೋಡಿ ಆತನ ಕಣ್ಣು ಅರಳಬೇಕು. ಹೀಗೆ ಎಲ್ಲ ಸಾಧಾರಣ ಹೆಂಗಸಿಗಿರುವ ಆಸೆ. ಆದರೆ ಬಾಯಿಬಿಟ್ಟು ಕೇಳುವ ಮಟ್ಟಕ್ಕೆ ಇಳಿಯಲಾರಳು. ಆಸೆಯನ್ನೂ ಹತ್ತಿಕ್ಕಲಾರಳು. ಹಾಗೊಮ್ಮೆ ಅವರ ಲಗ್ನದ ಮೊದಲನೆಯ ವಾರ್ಷಿಕೋತ್ಸವ ಬಂದಾಗ ತುಂಬ ಸಡಗರ ಪಟ್ಟು ಮಧ್ಯಾಹ್ನ ಅರ್ಧರಜೆ ಹಾಕಿ ಆತನಿಗಿಂತ ಮೊದಲೇ ಮನೆಗೆ ಬಂದು ಸಿಹಿ ತಯಾರಿಸಿ, ಮನೆ ಸಿಂಗರಿಸಿ, ಆಭರಣ ತೊಟ್ಟು, ಹೊಸ ಸೀರೆಯುಟ್ಟು ಸಿಂಗಾರವಾಗಿ ಕಾತರದಿಂದ ಆತನಿಗಾಗಿ ಕಾಯ್ದಳು. ಆತ ತನಗಾಗಿ ಏನಾದರೂ ತರಬಹುದು ಅಂದುಕೊಂಡಳು. ಆತ ಏನೂ ತರದಿದ್ದಾಗ, ತನ್ನ ಅಲಂಕಾರವನ್ನು ಗಮನಿಸದಿದ್ದಾಗ ಸಹಜವಾಗಿಯೇ ನೊಂದುಕೊಂಡಳು. ಕೊನೆಗೆ ಸೋತು 'ಇವತ್ತು ನಮ್ಮ ಲಗ್ನದ ಆ್ಯನಿವ್ಹರ್ಸರಿ ಅಲ್ಲವೇನ್ರಿ ?' ಅಂತ ಜ್ಞಾಪಿಸಿದಳು. 'ಹೌದಲ್ಲ, ಮರೆತೇ ಬಿಟ್ಟಿದ್ದೆ. ನಿನಗೆ ನನ್ನ ಸ್ವಭಾವ ಗೊತ್ತಲ್ಲ ಲಕ್ಷ್ಮಿ. ನಾನು ತಾರೀಖುಗಳಿಗೆ ಮಹತ್ವ ಕೊಡುವುದಿಲ್ಲ.' ಅಂದ ಸುರೇಶ. ಹೌದು, ಅವಳಿಗೆ ಗೊತ್ತಿತ್ತು. ಆದರೆ ಅವಳಲ್ಲಿನ್ನೂ ಆಸೆ ಉಸಿರಾಡುತ್ತಿತ್ತು. 'ಮಾರ್ಕೆಟ್ ಕಡೆ ಹೋಗಿ ಬರೋಣವೇ ?' ಅಂದಳು. ಆತ ಸ್ಕೂಟರ್ ಸುರು ಮಾಡಿದ. ಆಕೆ ಇಚ್ಛಿಸಿದಂತೆ ದೇವಾಲಯಕ್ಕೆ ಕರೆದುಕೊಂಡು ಹೋದ. ಕಾಯಿಪಲ್ಲೆ, ಹಣ್ಣುಹಂಪಲು ಇತ್ಯಾದಿ ಕೊಂಡರು. ಇನ್ನೂ ಸ್ಪಷ್ಟವಾಗಲೆತ್ನಿಸುತ್ತ ಕೊನೆಯ ಪ್ರಯತ್ನವೆಂದು ಲಕ್ಷ್ಮಿ ಅಂದಳು. 'ಆ ಶೋಕೇಸ್‌ನೊಳಗಿರೋ ಸೀರೆ ಬ್ಯೂಟಿಫುಲ್ ಅದ ಅಲ್ರೀ'. ಆದರೆ ಆತನ ಬರಡು 'ಹ್ಞೂ' ಕೇಳಿ ಆಕೆಯ ಉತ್ಸಾಹ ಜರ್‍ರನೆ ಇಳಿದುಹೋಯಿತು. ಮುಂದೆ ಆಕೆ ಮಾತಾಡಲಿಲ್ಲ. ಹೌದು, ಸುರೇಶ್‌ನ ಸ್ವಭಾವವೇ ಹಾಗೆ. ಇಂಥ ತಾರೀಖು ನೆನಪಿಡುವುದು, ಉಡುಗೊರೆ ತರುವುದು, ಶುಭಾಶಯ ಹೇಳುವುದು ಇತ್ಯಾದಿಯೆಲ್ಲ ಆತನ ಮಟ್ಟಿಗೆ ತೀರಾ ಔಪಚಾರಿಕ, ಚೈಲ್ಡಿಶ್. ತಾನು ಅರ್ಥಮಾಡಿಕೊಳ್ಳಬೇಕು. ಜಗಳವಾಡಲು, ಕಾಡಿ ಬೇಡಲು ತಾನೇನು ಅಶಿಕ್ಷಿತ ಅನಾಗರಿಕ ಹೆಂಗಸೆ ? ಆ ರಾತ್ರಿ 'ನಮ್ಮ ಪಾಲಿಗೆ ಪ್ರತಿ ರಾತ್ರಿಯೂ ಮೊದಲ ರಾತ್ರಿನೇ ಅಲ್ಲವೇ ಲಕ್ಷ್ಮಿ ?' ಅಂತ ಆತ ಬಳಿಗೆಳೆದುಕೊಂಡಾಗ ಆಕೆಯೂ ತಾರೀಖು-ಉಡುಗೊರೆ ಇತ್ಯಾದಿಗಳನ್ನು ಮರೆತುಬಿಟ್ಟಳು.

ಮರುವಾರ ಒಂದು ದಿನ ಆತ ಆಫೀಸಿನಿಂದ ಬಂದೊಡನೆ ಅವಳಿಗೆ ರೆಡಿಯಾಗಲು ಹೇಳಿ ಚಹಾ ಕೂಡ ಕುಡಿಯದೆ ಅವಳನ್ನು ಕರಕೊಂಡು ಹೊರಟ. ಟ್ಯಾಕ್ಸಿ ವರ್ಲಿಯ ದಾರಿ ಹಿಡಿದಾಗಲೇ ಲಕ್ಷ್ಮಿಗೆ ತಿಳಿದದ್ದು ಹೊರಟದ್ದು ಆತನ ಅಕ್ಕನ ಮನೆಗೆ ಅಂತ. ಮನಸ್ಸಿನಲ್ಲಿನ ಅಸಮಾಧಾನ ಹೊರಗೆಡವದೆ ಶಿಷ್ಟಾಚಾರಕ್ಕಾಗಿ ಆಕೆ ನಗುಮುಖದಿಂದಲೇ ಎಲ್ಲರೊಂದಿಗೆ ಮಾತಾಡಿದಳು. ಚಹಾ-ತಿಂಡಿ ನಡೆದಾಗ 'ಇದೇನಿವತ್ತು ವಿಶೇಷ ?' ಅಂತ ಕೇಳಿದಳು. ಮಿರಿಮಿರಿ ಮಿಂಚುವ ಹೊಸ ಸೀರೆಯುಟ್ಟು ಅತ್ತಿಂದಿತ್ತ ಬಳಕುತ್ತ ಓಡಾಡುತ್ತಿದ್ದ ರೇಖಾ ವೈಯಾರವಾಗಿ "ಇದೇನು ಮಾಮಿ, ಹಿಂಗ ಕೇಳತೀರಿ, ಸುರೇಶಮಾಮಾ ನಿಮಗ ಹೇಳಿಲ್ಲೇನು ? ಇವತ್ತ ನನ್ನ ಬರ್ಥಡೇ. ನಿನ್ನೇನೇ ನನ್ನ ಕರಕೊಂಡ್ಹೋಗಿ ಈ ಸೀರೆ ಕೊಡಿಸಿದ್ರು ಸುರೇಶಮಾಮಾ. ಹ್ಯಾಂಗದ, ನಿಮಗ ಲೈಕ್ ಆತೋ ಇಲ್ಲೋ ಈ ಸೀರಿ ?" ಜೊತೆಗೆ ಆಕೆಯ ತಾಯಿಯ ಶಿಫಾರಸ್ಸು : 'ನಮ್ಮ ಸುರೇಶ ಇಂಥಾವೆಲ್ಲಾ ಎಂದೂ ಮರಿಯೋದಿಲ್ಲ. ಭಾಳ ಅಂತಃಕರಣಿ ಹುಡುಗ.' ಮುಂದೆಲ್ಲ ಏನೇನು ಮಾತುಕತೆಯಾಯಿತೋ ಯಾವಾಗ ಅಲ್ಲಿಂದ ಎದ್ದು ಬಂದದ್ದೋ ಲಕ್ಷ್ಮಿಗೆ ನೆನಪಿಲ್ಲ.

ಲಕ್ಷ್ಮಿಯ ಮನಸ್ಸು ಕಹಿಯಾದದ್ದು ನಿಜ. ಆ ದಿನಗಳಲ್ಲಿ ಅವಳು ಬಸಿರಿ ಬೇರೆ. ಅವಳಿಗೆ ಸದಾ ಸುರೇಶ ತನ್ನ ಕೂಡ ಇರಬೇಕು ಅನಿಸುತ್ತಿತ್ತು. ಅದು ಸಾಧ್ಯವಾಗದಾಗ ಅವಳಿಗೆ ದುಃಖವಾಗುತ್ತಿತ್ತು. ಎಷ್ಟೋ ಸಲ ಆಕೆ ಆತನಿಗಾಗಿ ರಾತ್ರಿ ಕಾಯ್ದು-ಕಾಯ್ದು ಊಟ ಮಾಡದೆ ಹಾಗೇ ಮಲಗಿದಾಗ ಆತ ತಡವಾಗಿ ತೂರಾಡುತ್ತ ಬರುತ್ತಿದ್ದ. ಅವಳಿಗಾಗಿ ಅನುತಾಪ-ಅನುಕಂಪ ಇತ್ಯಾದಿ ತೋರದೆ ನೇರವಾಗಿ ಹಾಸಿಗೆ ಸೇರುತ್ತಿದ್ದ. ಎಷ್ಟೋ ಸಲ ಅವಳ ಇಚ್ಛೆಗೆ ವಿರುದ್ಧವಾಗಿ ಸಂಭೋಗಿಸುತ್ತಿದ್ದ. ಅವಳು ಪ್ರತಿಭಟಿಸಿದಾಗ ಬಲಾತ್ಕರಿಸುತ್ತಿದ್ದ. ಅಥವಾ ಸಿಟ್ಟಾಗಿ ಎರಡೆರಡು ದಿನ ಮನೆಗೇ ಬರುತ್ತಿರಲಿಲ್ಲ. ಟೂರ್‌ಗೆ ಹೋಗಿದ್ದೆ ಅಂತ ಹೇಳುತ್ತಿದ್ದ. ಇತ್ತೀಚೆಗೆ ಆತನಿಗೆ ಬೇರೆ ಶಾಖೆಗೆ ವರ್ಗವಾಗಿದ್ದರಿಂದ ಆತನ ಟೂರ್ ಪ್ರೋಗ್ರಾಮುಗಳು ಆಕೆಗೆ ತಿಳಿದಿರುತ್ತಿರಲಿಲ್ಲ. ಆಕೆ ಬೇಕೆಂದರೆ ಆತನ ಶಾಖೆಗೆ ಫೋನ್ ಮಾಡಿ ಆತ ನಿಜವಾಗಿಯೂ ಟೂರ್‌ಗೆ ಹೋಗಿದ್ದನೇ ಕೇಳಿ ತಿಳಿಯಬಹುದಿತ್ತು. ಆಕೆ ಹಾಗೆಂದೂ ಮಾಡಲಿಲ್ಲ. ಅಕಸ್ಮಾತ್ ಆತ ಟೂರ್‌ಗೆ ಹೋಗಿರಲಿಲ್ಲವೆಂದು ತಿಳಿದು ಬಂದರೆ ಆತ ರಾತ್ರಿ ಎಲ್ಲಿ ಕಳೆದಿರಬಹುದು ಅಂತ ಯೋಚಿಸಬೇಕಾಗುತ್ತಿತ್ತು. ಆ ಪ್ರಶ್ನೆ ಎದುರಿಸುವ ಸ್ಥೈರ್ಯ ಅವಳಲ್ಲಿರಲಿಲ್ಲ. ಅನೇಕ ಸಲ ರಾತ್ರಿಗಳನ್ನು ಅಕ್ಕನ ಮನೆಯಲ್ಲಿ ಕಳೆದಿರಾ ಅಂತ ಆತನಿಗೆ ಕೇಳುವ ಮನಸ್ಸಾಗುತ್ತಿತ್ತು ಲಕ್ಷ್ಮಿಗೆ. ಆಕೆ ಹಾಗೆಂದೂ ಕೇಳಲಿಲ್ಲ. ಆತ 'ಹೌದು' ಅಂದಿದ್ದರೆ ? ಆ ಉತ್ತರ ಎದುರಿಸುವ ಧೈರ್ಯ ಅವಳಲ್ಲಿರಲಿಲ್ಲ. ಆದರೂ

ಹಲವಾರು ಸಲ ಆಕೆ ಗಂಡನೊಂದಿಗೆ ಜಗಳವಾಡಿದಳು. ತನ್ನ ಹಕ್ಕು, ಆತನ ಕರ್ತವ್ಯ ಇತ್ಯಾದಿ ಬಗ್ಗೆ ಸೂತ್ರಗಳನ್ನು ಪಠಿಸಿದಳು. ಆತ ಆಕೆಯನ್ನು ಸೊಕ್ಕಿನ ಹೆಣ್ಣೆಂದು ಜರೆದ. ಇಬ್ಬರೂ ಬೇಜಾರುಪಟ್ಟರು.

ಅದೆಲ್ಲ ಏನೇ ಆದರೂ ಲಕ್ಷ್ಮಿ ಹೆರಿಗೆಗಾಗಿ ತವರಿಗೆ ಹೋಗುವ ಹದಿನೈದು ದಿನ ಮೊದಲಿನಿಂದ ಹಗಲುರಾತ್ರಿ ಆತನಿಗೆ ದುಂಬಾಲು ಬಿದ್ದಳು –'ನನಗ್ಯಾಕೋ ಹೆದರಿಕೆ. ಹೆರಿಗೆಯ ಡೇಟ್ ಕೊಟ್ಟಿದ್ದಾರಲ್ಲ ಡಾಕ್ಟರು, ಆ ಸುಮಾರಿಗೆ ೧೦-೧೨ ದಿನ ರಜೆ ತಗೊಂಡು ನೀವು ಬರ್‍ರಿ, ನೀವು ಹತ್ತಿರ ಇದ್ದರೇನೇ ನನಗೆ ಧೈರ್ಯ. ನಾನೆಂದೂ ನಿಮಗೆ ಏನೂ ಕೇಳಿಲ್ಲ. ಇದೊಂದಕ್ಕೆ ಇಲ್ಲ ಅನ್ನಬಾರದು. ಪ್ಲೀಸ್, ಬರಲಿಕ್ಕೇ ಬೇಕು. ಪ್ಲೀಸ್.' ಆತ ಹ್ಞೂ ಅಂದ....

* * *

ಲಕ್ಷ್ಮಿ ಹುಬ್ಬಳ್ಳಿಗೆ ಹೆರಿಗೆಗೆಂದು ಬಂದಾಗ ಅವಳ ತಾಯಿಯಷ್ಟೇ ಸಂಭ್ರಮಪಟ್ಟವರು ಇಮಾಮ್‌ಬೀ, ಹಮೀದಾಬಾನು. ತಾನೇ ಮುಂದಾಗಿ ಹಮೀದಾಬಾನು ಲಕ್ಷ್ಮಿಯ ಹುಟ್ಟಲಿರುವ ಮಗುವಿಗೆ ಎಣ್ಣೆನೀರು ಹಾಕುವ ಕೆಲಸ ಮುಂಗಡವಾಗಿ ವಹಿಸಿಕೊಂಡಳು. 'ಏನಂತಾನ ಗೌಸಸಾಹೇಬ ?' ಅಂತ ಲಕ್ಷ್ಮಿ ನಗುತ್ತ ಕೇಳಿದಾಗ ಮಾತ್ರ ಅಜ್ಜಿ-ಮೊಮ್ಮಗಳಿಬ್ಬರ ಮುಖಗಳೂ ಬಾಡಿದವು. ಎರಡು ತಿಂಗಳ ಹಿಂದೆ ಹಮೀದಾಬಾನುವಿನ ಕೊನೆಯ ಇಬ್ಬರು ಮಕ್ಕಳಿಗೆ ಸೀರಿಯಸ್ ಟೈಫಾಯಿಡ್ ಜ್ವರ ಬಂದಿತ್ತು. ಅದೇ ಸಮಯದಲ್ಲಿ ವಾರ್ಷಿಕ ಭೇಟಿಗೆ ಬಂದಿದ್ದ ಗೌಸಸಾಹೇಬ ಮಕ್ಕಳ ಗಂಭೀರ ಸ್ಥಿತಿಯನ್ನೂ ಕಡೆಗಣಿಸಿ, ಎಂಟೇ ದಿನ ಊರಲ್ಲಿದ್ದು ತನ್ನ ವಾರ್ಷಿಕ ಕಾರ್ಯಕ್ರಮ ಮುಗಿಸಿ ತಿರುಗಿ ಹೋಗಿ ಬಿಟ್ಟಿದ್ದ. ಮುಂದೆ ಎಂಟು ದಿನಗಳಲ್ಲಿ ಎರಡೂ ಮಕ್ಕಳು ತೀರಿಹೋಗಿದ್ದವು. 'ವೊ ಆದಮೀ ನಹೀ, ಸೈತಾನ್ ಹೈ' –ಅಂತ ಇಮಾಮ್‌ಬೀ ಶಪಿಸುತ್ತಿದ್ದಾಗ, 'ಇನ್ನಾದರೂ ಬುದ್ಧಿಕಲಿ ಹಮೀದಾ. ಇನ್ನೊಮ್ಮೆ ಬಂದರ ಕುತ್ತಿಗೀ ಹಿಡಿದು ಅತ್ಲಾಗ ನೂಕಿ ಒದ್ದು ಕಳಿಸಿಬಿಡು ಆ ಮಗನ್ನ' ಅಂತ ಲಕ್ಷ್ಮಿ ಸಿಟ್ಟು ಮಾಡುತ್ತಿದ್ದಾಗ, ಹಮೀದಾಬಾನುವಿನ ಕಣ್ಣುಗಳು ಮೌನವಾಗಿ ತುಂಬಿಕೊಂಡವು.

ಲಕ್ಷ್ಮಿಗೆ ಮಾತು ಕೊಟ್ಟಿದ್ದಂತೆ ಆಕೆಯ ಗಂಡ ಹೆರಿಗೆಯ ಸಮಯದಲ್ಲಿ ಬರಲಿಲ್ಲ. 'ಅವರಿಗೆ ಎಷ್ಟು ಕೆಲಸವೋ ಏನೋ. ನಾವೆಲ್ಲ ಇದ್ದೇವಲ್ಲ,' ಅಂದರು ಲಕ್ಷ್ಮಿಯ ತಾಯಿ, ತಂದೆ, ತಮ್ಮ. ಆದರೂ ಲಕ್ಷ್ಮಿಗೆ ಗಂಡನ ಅಲಕ್ಷ್ಯದಿಂದ ಹೇಳತೀರದ ಬೇಸರವಾಯಿತು. ಗಂಡುಮಗು ಹುಟ್ಟಿದ ಸಂತೋಷದಲ್ಲಿ ಬೇಸರ ಸಾಕಷ್ಟು ಮರೆತೂ ಹೋಯಿತು. ಮುಂದೆ ತಿಂಗಳ ನಂತರ ಆತ ಬಂದಾಗ ಹೆರಿಗೆಯ ಹೊತ್ತಿನಲ್ಲಿ

ಬರಲಾಗದಿದ್ದುದಕ್ಕೆ ಆತ ಕಾರಣವನ್ನೂ ಕೊಟ್ಟ. ರೇಖಾಗೆ ರಸ್ತೆ ಅಪಘಾತದಲ್ಲಿ ಕಾಲು ಉಳುಕಿತ್ತು. ಪ್ಲಾಸ್ಟರ್ ಹಾಕಿಸುವುದು, ಔಷಧಿ ಕೊಡಿಸುವುದು, ಮೂಳೆತಜ್ಞರ ಕಡೆ ಹೋಗುವುದು, ಹೀಗಾಗಿ ಕೆಲಸ ಇತ್ತು. ಪುಣ್ಯಕ್ಕೆ ಕಾಲು ಮತ್ತೆ ಮೊದಲಿನಂತಾಯಿತು. ಈಗೇನೂ ಕಾಳಜಿ ಮಾಡಬೇಕಾಗಿಲ್ಲ.

ನಗುತ್ತಿರುವ ಎಳೆಮಗುವಿನ ಕಡೆ ನೋಡುತ್ತಿದ್ದಂತೆ ಲಕ್ಷ್ಮಿಯ ಬಿಗಿದಿದ್ದ ಹುಬ್ಬುಗಳು ಸಡಿಲವಾಗಿದ್ದವು.

* * *

ಯಾಕೋ ಎಂಥದೋ ಅನುಮಾನ-ಅಸಹನೆ-ಅಸಮಾಧಾನ ಅನಿಸತೊಡಗಿದ್ದರಿಂದ, ಅದನ್ನೆಲ್ಲ ತಾಳುವುದೇ ಆಗದ್ದರಿಂದ ಲಕ್ಷ್ಮಿ ಮೂರು ತಿಂಗಳಾಗುವುದಕ್ಕೆ ಮೊದಲೇ ಮುಂಬಯಿಗೆ ಹೊರಟು ಬಂದಳು. ಧೂಳು ಹಿಡಿದಿದ್ದ ಮನೆಯನ್ನು ಸ್ವತಃ ಝಾಡಿಸಿ ಸ್ವಚ್ಛ ಮಾಡಿದಳು. ಮಗುವನ್ನು ನೋಡಲೆಂದು ಜೊತೆಯಲ್ಲಿ ಕರೆತಂದಿದ್ದ ಹಮೀದಾಬಾನುವಿನ ಎರಡನೆಯ ಮಗಳಿಗೆ ನಗುನಗುತ್ತ ತನ್ನ ಮನೆಯ, ಸುತ್ತಲಿನ ಅಂಗಡಿ- ಹಾಲಿನ ಡೇರಿ- ಕಾಯಿಪಲ್ಲೆ ಮಾರ್ಕೆಟು ಇತ್ಯಾದಿಗಳ ಪರಿಚಯ ಮಾಡಿಕೊಟ್ಟಳು. ಹಲವಾರು ತರದ ಅಡುಗೆ ಮಾಡಿ 'ನಿಮಗೆ ಹೋಟಲ್ ಊಟ ಬ್ಯಾಸರಾಗಿರಬೇಕಲ್ಲ ?' ಅಂತ ಗಂಡನಿಗೆ ಉಪಚರಿಸುತ್ತ ಬಡಿಸಿದಳು. ಆತ 'ನಾಯೆಲ್ಲೆ ದಿನಾ ಹೋಟಲಿನ್ಯಾಗ ಉಣ್ತಿದ್ದೆ ? ಅಕ್ಕನ ಮನೀ ಇತ್ತಲ್ಲ ಬ್ಯಾಸರಾದಾಗ ?' ಅಂದಾಗ ಪೆಚ್ಚಾದಳು. ಆದರೂ ಸುಧಾರಿಸಿಕೊಂಡು ರಾತ್ರಿ ಮಲ್ಲಿಗೆ ಮುಡಿದು ಇಂಪೋರ್ಟೆಡ್ ಪರ್‌ಫ್ಯೂಮು ಬಳಸಿ ಮಾದಕವಾಗಿ ನಕ್ಕು ಆತನ ಹತ್ತಿರ ಹೋಗಿ ಕುಳಿತಳು. ಆತ 'ಹೊತ್ತಾಯ್ತು ಮಲಗಿಕೋ ಹೋಗು ಲಕ್ಷ್ಮೀ, ಮತ್ತ ಕೂಸು ಎದ್ದರ ನಿನಗ ನಿದ್ದಿ ಆಗೂದಿಲ್ಲ,' ಅಂತಂದು ಮುಸುಕೆಳೆದುಕೊಂಡು ಆಚೆ ಮಗ್ಗುಲಾದಾಗ ಮತ್ತೆ ಪೆಚ್ಚಾಗಿ ಮಗುವಿನ ಪಕ್ಕ ಹೋಗಿ ಮಲಗಿದಳು.

ಒಂದು ತಿಂಗಳು, ಎರಡು ತಿಂಗಳು. ತಾನು ಮುಂಬಯಿಗೆ ಬಂದು ನಾಲ್ಕು ತಿಂಗಳಾದರೂ ಪ್ರತಿ ರಾತ್ರಿ ಇದೇ ಕಥೆಯಾದಾಗ ಲಕ್ಷ್ಮಿ ನಿಜವಾಗಿ ಅಸ್ವಸ್ಥಳಾದಳು. ಸಾಲದ್ದಕ್ಕೆ ಪಕ್ಕದ ಮನೆಯಾಕೆ ಬೇರೆ 'ನೀವು ತವರಿಗೆ ಹೋಗಿದ್ದಾಗ ನಿಮ್ಮವರ ಅಕ್ಕನ ಮಕ್ಕಳು ಆಗಾಗ ಬರುತ್ತಿದ್ದರಪ್ಪ' ಅಂತ ವ್ಯಂಗ್ಯವಾಡಿದ್ದಳು. ಏನು ಮಾಡಲೂ ತೋಚದೆ, ಗಂಡ ವಿಪರೀತವಾಗಿ ಕುಡಿದು ತಡವಾಗಿ ಮನೆಗೆ ಬಂದ ಒಂದು ರಾತ್ರಿ ಲಕ್ಷ್ಮಿ ತಾನಾಗಿ ಆತನೆಡೆ ಹೋದಳು. ಆ ರಾತ್ರಿಯ ಆತನ ವರ್ತನೆಯಲ್ಲಿ ಒಂದಿನಿತೂ ಮಾರ್ದವವಾಗಲೀ, ಪ್ರೀತಿಯಾಗಲೀ ಇರಲಿಲ್ಲ. ಲಕ್ಷ್ಮಿಗೆ ಮೈಯೆಲ್ಲಾ ಮೈಲಿಗೆಯಾದಂತೆನಿಸಿ ತೀರ ಅವಮಾನವೆನಿಸಿ ವಿಪರೀತ ಹೇಸಿಕೆಯೆನಿಸಿತು.

ಹಾಗೆ ಮತ್ತೆ ಹಲವು ತಿಂಗಳುಗಳು ಕಳೆದಿದ್ದವು. ಮದುವೆಗೆ ಮೊದಲು ಅದೆಷ್ಟೋ ಪ್ರೇಮದ ಮಾತನಾಡಿದ್ದ. ನೂರಾರು ಆಶ್ವಾಸನೆಗಳನಿತ್ತ, ಬದುಕೊಂದು ಸುಂದರ ಕನಸೆಂಬ ನಂಬಿಕೆ ಮೂಡಿಸಿದ್ದ, ತೀರ ರೊಮ್ಯಾಂಟಿಕ್ –ತೀರ ಜಂಟಲ್ ಆಗಿದ್ದ ಮನುಷ್ಯ ಈತನೆಯೇ ಅಂತ ಸಂಶಯ ಬರುತ್ತಿತ್ತು ಲಕ್ಷ್ಮಿಗೆ. ಇಷ್ಟು ಚಿಕ್ಕ ವಯಸ್ಸಿನಲ್ಲೇ ತನಗೆ ಜೀವನದ ಬಗ್ಗೆ ವೈರಾಗ್ಯ ಹುಟ್ಟುವ ಹಾಗೆ, ಯಾತರಲ್ಲೂ ಆಸಕ್ತಿ ಉಳಿಯದ ಹಾಗೆ, ಯಾತರ ಬಗೆಗೂ ಉತ್ಸಾಹವಿರದ ಹಾಗೆ ಮಾಡಿದನಲ್ಲ ಈ ಮನುಷ್ಯ- ಅಂತ ಅವಳಿಗೆ ಈಗೀಗ ಸಿಟ್ಟು ಬರತೊಡಗಿತ್ತು. ತಾನೇಕೆ ಇಷ್ಟೆಲ್ಲ ಅಲಕ್ಷ್ಯ-ನೋವು-ಅಪಮಾನ ತಾಳಿಕೊಳ್ಳುತ್ತಿದ್ದೇನೆ, ಅಂತ ತನ್ನ ಬಗೆಗೇ ಜಿಗುಪ್ಸೆಯಾಗತೊಡಗಿತ್ತು.

ಹಾಗಿದ್ದಾಗೊಂದು ಸಲ ಸತತ ಒಂದು ವಾರ ಸುರೇಶ ಮನೆಗೇ ಬರಲಿಲ್ಲ. ಲಕ್ಷ್ಮಿ ಕಾಯ್ದು-ಕಾಯ್ದು ಸುಸ್ತಾಗಿ ಕೊನೆಗೆ ಗಾಬರಿಯಾಗಿ ಆತನ ಬ್ಯಾಂಕಿಗೆ ಫೋನ್ ಮಾಡಿದಳು. 'ಯಾರು ಮಾತನಾಡೋದು ?' ಅಂತ ಆಚೆಕಡೆಯಿಂದ ಧ್ವನಿ ಬಂದಾಗ ನಾಲಿಗೆ ತಡವರಿಸಿತು. ಹೆಂಡತಿಗೆ ಹೇಳದೆ ಗಂಡ ನಾಪತ್ತೆಯಾಗಬೇಕೆಂದರೆ ! 'ನಾನು ಅವರ ಫ್ರೆಂಡ್' ಅಂದಳು. ಹಾಗೆ ತಾನು ಹೇಳಬೇಕಾದ ಪ್ರಸಂಗ ತಂದುದಕ್ಕಾಗಿ ಎದುರಿಗಿಲ್ಲದ ಗಂಡನನ್ನು ಶಪಿಸಿದಳು. ಆತ ಹತ್ತು ದಿನ ರಜೆ ಹಾಕಿದ್ದಾನೆಂದು ತಿಳಿದಾಗ ನಿಜವಾಗಿ ಕಂಗಾಲಾದಳು. ಆತನ ಅಕ್ಕನ ಮನೆಗೆ ಹೋಗಿ ವಿಚಾರಿಸಲು ಮನಸ್ಸು ಬರಲಿಲ್ಲ. ಹಾಗೇ ಹಗಲು ಊಟ ಬಿಟ್ಟು ರಾತ್ರಿ ನಿದ್ದೆಗೆಟ್ಟು ಚಿಂತಿಸಿ ಚಿಂತಿಸಿ ಹೈರಾಣಾದಳು.

ಒಂದು ವಾರದ ನಂತರ ಆತ ಬಂದ. ಗಡ್ಡ ಬೆಳೆದಿತ್ತು. ಕೂದಲು ಕೆದರಿತ್ತು. ಕಣ್ಣು ಕೆಂಪಾಗಿತ್ತು. ಬಟ್ಟೆಯೆಲ್ಲ ಸುಕ್ಕು-ಸುಕ್ಕು. -ಲಕ್ಷ್ಮಿ ತನ್ನೆಲ್ಲ ಕೋಪ-ಅಸಮಾಧಾನ -ಚಿಂತೆ ಮರೆತು ನಿಜವಾದ ಕಳಕಳಿಯಿಂದ ಆತನ ಕೊರಳ ಸುತ್ತ ಕೈಹಾಕಿ ಕೇಳಿದಳು, 'ಏನಿದು, ಯಾಕೆ ಹೀಗೆ ? ಎಲ್ಲಿದ್ದಿರಿ ? ಏನು ಮಾಡುತ್ತಿದ್ದಿರಿ ?' ಆತ ಸಹಜವಾಗಿಯೇ ಉತ್ತರಿಸಿದ : 'ರೇಖಾಗೆ ಬಹಳ ಕೆಟ್ಟದಾದ ಮಲೇರಿಯಾ ಬಂದಿತ್ತು. ದವಾಖಾನೆಗೆ ಹಾಕಬೇಕಾಯಿತು. ರಾತ್ರಿ ಅವಳೊಂದಿಗಿರಲು ಯಾರಾದರೂ ಬೇಕಲ್ಲ. ಬಹಳ ಸೀರಿಯಸ್ ಆಗಿತ್ತು. ಇವತ್ತೇ ಜ್ವರ ಬಿಟ್ಟದ್ದು. ಹೇಳಿ ಹೋಗಲು ಬಂದೆ. ಸ್ವಲ್ಪ ಹಣವೂ ಬೇಕಾಗಿತ್ತು.'

ತಾಳ್ಮೆಗೆಟ್ಟು ಚೀರುವ ಧ್ವನಿಯಲ್ಲಿ ಕೇಳಿದಳು ಲಕ್ಷ್ಮಿ, 'ನೀನು ನನ್ನ ಲಗ್ನಾಗೋ ಬದ್ಲು, ಹೀಂಗ ನನ್ನನ್ನ ದಿನಾ ಕೊಲ್ಲೋ ಬದ್ಲು, ಆ ರೇಖಾನ್ನೇ ಯಾಕ ಲಗ್ನಾಗ್ಲಿಲ್ಲ ?'

'ಶಟ್‌ಅಪ್' ಅಂತ ಕೂಗಿ ಆತ ಬಲವಾಗಿ ಕೈಬೀಸಿ ಆಕೆಯ ಕೆನ್ನೆಯ ಮೇಲೆ

ರಪ್ಪೆಂದು ಬಾರಿಸಿದ. ಕಣ್ಣು ಕತ್ತಲೆ ಬಂದು ಆಕೆ ಅಲ್ಲೇ ಕುಸಿದು ಕೂತಳು.

ಮುಂದಿನದು ದುಃಖದ ಕತೆಯೇ. ಆಕೆ ಆತನನ್ನು ಹಳಿದಳು. ಬದಲಾಗಿ ಆತ ರೇಖಾ ತನ್ನ ತಂಗಿಯ ಸಮಾನ ಅಂದ. ಹೀಗೆಲ್ಲ ಹೊಲಸು ವಿಚಾರ ನಿನ್ನ ತಲೆಯಲ್ಲಿ ಯಾಕೆ ಬಂತು ಅಂದ. ಅಷ್ಟಕ್ಕೆ ಸುಮ್ಮನಾಗದೆ, ನಿನ್ನ ಇತಿಹಾಸವೇ ಹೊಲಸಾಗಿರಬೇಕು, ಅದಕ್ಕೇ ಬೇರೆಯವರ ಬಗ್ಗೆ ಹೀಗೆಲ್ಲ ಹೊಲಸು ವಿಚಾರ ಮಾಡುತ್ತೀ, ಅಂದುಬಿಟ್ಟ.

ಮರುದಿನ ಮುಂಜಾನೆ ಲಕ್ಷ್ಮಿ ಬ್ಯಾಂಕಿಗೆ ಹೋಗಿ ಸಿಕ್‌ಲೀವ್ ಹಾಕಿ ಮಗುವನ್ನು ಕರೆದುಕೊಂಡು ಗಂಡನ ಮನೆ ಬಿಟ್ಟು ಹೊರಟು ಹೋಗಿಬಿಟ್ಟಳು.

* * *

'ಬಂದಿಯಾ ಲಕ್ಷ್ಮಿ ? ಬಾ. ಕೂಸಿನ ಮೊದಲ್ನೇ ಹುಟ್ಟಿದ ಹಬ್ಬ ಬಂತು. ಇಲ್ಲೇ ಮಾಡೋಣ, ಬಾ-ಅಂತ ನಾನೇ ಪತ್ರಾ ಬರಿಯಾಕಿ ಇದ್ದೆ. ನೀನೇ ಬಂದಿ. ಛಲೋ ಆತು.' ಅಂದರು ಲಕ್ಷ್ಮಿಯ ತಾಯಿ.

ಲಕ್ಷ್ಮಿಯ ಪಾಲಿಗೆ ತುಂಬ ನೋವಿನ ದಿನಗಳು ಅವು. ಎರಡು ತಿಂಗಳ ರಜೆ ಹಾಕಿ ಬಂದಿದ್ದಳು. ಆದರೆ ಮುಂದೆ ? ಆ ಗಂಡನ ಕೂಡ ಆ ಮನೆಯಲ್ಲಿರುವುದು ಹೇಗೆ ? ಗಂಡ ಅಲ್ಲಿರುವಾಗ ಅದೇ ಊರಲ್ಲೇ ಬೇರೆ ಮನೆಯಲ್ಲಿರುವುದಾದರೂ ಹೇಗೆ ? ಬೇರೆ ಕಡೆ ಟ್ರಾನ್ಸ್‌ಫರ್ ಕೇಳುವುದಾದರೂ ಹೇಗೆ ? ನೌಕರಿಯನ್ನೇ ಬಿಟ್ಟರೆ ? ಮುಂದೆ ಬದುಕುವ ದಾರಿಯೇನು ? ತಮ್ಮ ವೈಮನಸ್ಯ ತಾಯಿ ತಂದೆಗೆ ತಿಳಿದರೆ ಮುಪ್ಪಿನ ಕಾಲದಲ್ಲಿ ಅವರಿಗೆಂಥ ಶಾಕ್ ಆದೀತು ? ಎಲ್ಲಿಗೆ ಹೋಗಲಿ ? ಏನು ಮಾಡಲಿ?

ನೂರು ಪ್ರಶ್ನೆಗಳು. ಯಾವೊಂದಕ್ಕೂ ಉತ್ತರವಿಲ್ಲ. ತಾಯಿಯ ಮನೆಯಲ್ಲಿ ಆರಾಮವಿದೆ. ಸಂಜೆ ಯಾರಿಗಾಗಿಯೂ ಕಾಯಬೇಕಿಲ್ಲ. ಯಾಕೆ ತಡವಾಗಿ ಬಂದಿ ಅಂತ ಕೇಳಿ ಜಗಳವಾಡುವ ಹಾಗಿಲ್ಲ. ಯಾಕೆ ಬರಲಿಲ್ಲ, ಎಲ್ಲಿ ಹೋಗಿರಬಹುದು, ಎಂದೆಲ್ಲ ಚಿಂತಿಸಬೇಕಾಗಿಲ್ಲ. ಆದರೆ-ಆದರೆ ತನಗೆ ಗಂಡ ಬೇಡವೆ ? ಈಗಷ್ಟೇ 'ಅಪ್ಪಾ' ಅನ್ನಲು ಕಲಿತಿರುವ ತನ್ನ ಮಗನಿಗೆ ಅಪ್ಪ ಬೇಡವೆ ?

ಲಕ್ಷ್ಮಿ ಯೋಚಿಸಿ ಸುಸ್ತಾದಳು.

'ಏನು ವಿಚಾರ ಮಾಡ್ತೀ ಲಕ್ಷ್ಮೀ ? ಯಾಕೋ ಒಂಥರಾ ಕಾಣಿಸ್ತೀಯಲ್ಲ ?' ಅಂತ ಕೇಳಿದ ತಾಯಿಯನ್ನೇ ಒಂದು ಕ್ಷಣ ದಿಟ್ಟಿಸಿದಳು ಲಕ್ಷ್ಮಿ. ತನ್ನ ಗಂಡ-ಮಕ್ಕಳು-ಸಂಸಾರಕ್ಕಾಗಿ ಜೀವ ತೇಯ್ದು ಹಣ್ಣಾಗಿದ್ದಳು ಆ ತಾಯಿ. ಆಕೆಯ ಕಣ್ಣಲ್ಲಿ, ಮುಖದಲ್ಲಿ, ಇಡೀ ವ್ಯಕ್ತಿತ್ವದಲ್ಲಿ ಒಂದು ಬಗೆಯ ಸಾರ್ಥಕ ಭಾವ. ನೋಡುತ್ತಿದ್ದಂತೆ ಓಲಾಡುತ್ತಿದ್ದ ಲಕ್ಷ್ಮಿಯ ಮನಸ್ಸು ಗಟ್ಟಿಯಾಯಿತು. ಸೋತು ಹೋದ, ಆದರೂ

ನಿರ್ಧಾರ ತುಂಬಿದ ಧ್ವನಿಯಲ್ಲಿ ಆಕೆ ಅಂದಳು, 'ಏನಿಲ್ಲ ಅಮ್ಮ, ನಾ ಬಂದು ಭಾಳ ದಿವಸಾತು. ನಾಳಿನ ಶನಿವಾರ ಮುಂಬೈಗೆ ಹೋಗ್ಬಿಡ್ತೀನಿ. ರಿಝರ್ವೇಶನ್ ಮಾಡ್ಸು ಅಂತ ತಮ್ಮಗ ಹೇಳ್ಬಿಡು.' ತಾಯಿ ನಕ್ಕು 'ಆಗ್ಲಿ' ಅಂದರು.

ಲಕ್ಷ್ಮಿ ಊರಿಗೆ ಹೋಗುವಳೆಂದು ಕೇಳಿ ಮುದುಕಿ ಹಾಗೂ ಮೊಮ್ಮಗಳು ಅವಳನ್ನು ನೋಡಲು ಬಂದರು. ಲಕ್ಷ್ಮಿ ಅವರಿಗೆ ಧಾರಾಳವಾಗಿ ತನ್ನ ಒಳ್ಳೆಯದೇ ಆದ ಹಳೆಯ ಸೀರೆಗಳು, ಮಗುವಿನ ಬಟ್ಟೆಗಳು ಇತ್ಯಾದಿ ಕೊಟ್ಟಳು. ಗೌಸಸಾಹೇಬನ ಹೊಸ ವರ್ಷದ ಸಾಹಸದ ಕತೆ ಕೇಳಿದಳು. ಎಂದಿನಂತೆ ಇಮಾಮ್‌ಬೀ ಆತನನ್ನೂ ಆತನ ವಂಶವನ್ನೂ ಶಪಿಸಿದಾಗ ಸುಮ್ಮನೆ ಕೂತು ಕಿವಿಗೊಟ್ಟಳು. ಈಗೀಗ ಆತ ಸಂಸಾರಕ್ಕಾಗಿ ಏನೂ ಹಣ ಕೊಡುವುದಿಲ್ಲ ಮಕ್ಕಳು ಸತ್ತರೂ ಕೆಟ್ಟರೂ ಕೇಳುವುದಿಲ್ಲ ಅಂತ ಇಮಾಮ್‌ಬೀ ದೂಷಿಸಿದಾಗ, ಆಕೆ ಬೇಡವೆಂದರೂ ಕೇಳದೆ ಒತ್ತಾಯದಿಂದ ನೂರು ರೂಪಾಯಿ ಕೊಟ್ಟಳು. ಕೊನೆಗೆ 'ನಾ ಎರಡ ದಿನದಾಗ ಊರಿಗೆ ಹೋಗ್ತೀನಿ ಹಮೀದಾ, ನಿಮ್ಮಜ್ಜೀಗೆ ಪಾಪ ವಯಸ್ಸಾತು, ಕಾಳಜೀ ತಗೋ' ಅಂತ ಹೇಳಿ ಅವರಿಬ್ಬರನ್ನೂ ಬೀಳ್ಕೊಟ್ಟಳು. ತಿರುಗಿ ಹೊರಟಾಗ, ಇದೇನು ಈ ಸಲ ಈ ಅಮ್ಮಾ ಅವರು 'ನೀನ್ಯಾಕೆ ಆತನನ್ನು ಒದ್ದು ಓಡಿಸುವುದಿಲ್ಲ ಹಮೀದಾ ?' ಅಂತ ಅನ್ನಲೇ ಇಲ್ಲವಲ್ಲ, ಅಂತ ಹಮೀದಾಬಾನುವಿಗೆ ಆಶ್ಚರ್ಯವೋ ಆಶ್ಚರ್ಯ.

★

# ಬಿಡುಗಡೆ (೧೯೬೪)

೧. ಬಿಡುಗಡೆ

೨. ಹೀಗೊಂದು ಕತೆ

೩. ಅನಾಥೆ

೪. ನಿರಾಕರಣೆ

೫. ರಾಧವ್ವ

೬. ಒಲವೆ ಜೀವನ

೭. ತಾರಾ ಮ್ಯಾಡಮ್ ಮತ್ತು ತತ್ವಗಳು

೮. ದ. ಬಾ. ಕ್ರಿಷ್ಟಪ್ಪ

೯. ಮರೀಚಿಕೆ

೧೦. ಧೈರ್ಯದ ಮನುಷ್ಯ

# ಬಿಡುಗಡೆ

“ಸರೂ, ಏ ಸರೂ....ಏಳಲ್ಲ, ಬೆಳಗಾಗಿ ಹೋಗಿ ಎಷ್ಟೊತ್ತಾತು....” ಪ್ರೀತಿ ತುಂಬಿದ ಮೃದುವಾದ ದನಿಯಲ್ಲಿ ಆತ ಹೆಂಡತಿಯನ್ನು ಎಬ್ಬಿಸುತ್ತಿದ್ದ.

“ಊ್ಹ ಊ್ಹ” – ಬೆಳಗಿನ ಸವಿನಿದ್ದೆಯ ಮಂಪರಿನಿಂದ ಹೊರಬರಲು ಇಚ್ಛಿಸದ ಸರೋಜಾ ಮುಸುಕನ್ನು ಇನ್ನಷ್ಟು ಬಿಗಿಯಾಗಿ ಎಳೆದುಕೊಂಡಳು. ಆತ ಆಕೆಯ ಮುಸುಕು ಸರಿಸಿ ಹಣೆಯ ಮೇಲೆ ಹೂಮುತ್ತನ್ನೊತ್ತಿ ಮತ್ತೆ ಹೇಳಿದ, “ಜಾಣಮರಿ, ಏಳು, ಇವತ್ತು ಸೋಮವಾರ, ಇಬ್ರೂ ಡ್ಯೂಟಿಗೆ ಹೋಗಬೇಕಲ್ಲ ?”

ಹಾಗೆ ಹತ್ತಾರು ನಿಮಿಷ ಮುದ್ದುಗರೆದರೂ ಆಕೆ ಏಳದಿದ್ದಾಗ ಎದ್ದು ಹೊರಡುತ್ತ ಆತನೆಂದ, “ನಿನ್ನೆ ರಾತ್ರಿ ಭಾಳೊತ್ತನಕ ಅಕೌಂಟ್ಸ್ ಬರಕೋತ ಕೂತಿದ್ದೆಲ್ಲs, ಅದಕ್ಕs ನಿನ್ನ ನಿದ್ದಿ ಮುಗೀವಲ್ದು. ಅಡ್ಡಿಯಿಲ್ಲ, ಮಲಕೋ. ನಾನs ಒಂದಿಷ್ಟು ಬ್ರೇಕ್‌ಫಾಸ್ಟ್ ರೆಡೀ ಮಾಡ್ತೇನಿ. ಆಮ್ಯಾಲ ಎದ್ದೀಯಂತ.”

ಸರೋಜಾಗೆ ಅಂತಹ ಗಾಢ ನಿದ್ದೆಯೇನೂ ಹತ್ತಿರಲಿಲ್ಲ. ಆಕೆ ಮಂಚದ ಮೇಲೆ ಸುಖವಾಗಿ ಮಲಗಿದ್ದಂತೆಯೇ ಅಡಿಗೆಮನೆಯಿಂದ ಕೇಳಿಬರುತ್ತಿದ್ದ ಸದ್ದುಗಳಿಗೆ ಕಿವಿಗೊಟ್ಟಳು. ಹಾಲು ಕಾಯಿಸುತ್ತಿದ್ದಾನೆ.... ರವೆ ಹುರಿಯುತ್ತಿದ್ದಾನೆ.... ಉಪ್ಪಿಟ್ಟಿಗೆ ಒಗ್ಗರಣೆ ಹಾಕುತ್ತಿದ್ದಾನೆ.... ಚಹಾಕ್ಕೆ ಎಸರು ಇಡುತ್ತಿದ್ದಾನೆ.... ಡಬ್ಬಿಗಳನ್ನು ತಡಕಾಡುತ್ತಿದ್ದಾನೆ, ಬಹುಶಃ ಸಕ್ಕರೆ ಸಿಕ್ಕಿಲ್ಲ, ತೆಗೆದಿರಿಸಿದ್ದು ಮುಗಿದಿರಬೇಕು, ದೊಡ್ಡ ಡಬ್ಬಿಯೊಂದು ಕಪಾಟಿನಲ್ಲಿದೆ, ‘ಸರೂ, ಸಕ್ಕರಿ ಎಲ್ಲೆದs ?’ ಅಂತ ಬಹುಶಃ ಕೂಗುತ್ತಾನೆ.... ಇಲ್ಲ, ಹುಡುಕಾಟ ಮುಂದುವರಿಸಿದ್ದಾನೆ, ಮಲಗಿರುವ ಹೆಂಡತಿಗೆ ಡಿಸ್ಟರ್ಬ್ ಮಾಡಬಾರದೆಂದು ತಾನೇ ಹುಡುಕುತ್ತಿದ್ದಾನೆ....ಸಿಕ್ಕಿರಬೇಕು. ಸಿಗದೆ ಏನು ? ಎಲ್ಲಾ ಸಾಮಾನುಗಳೂ ಅಡಿಗೆಮನೆಯಲ್ಲೇ ಒಂದಿಲ್ಲೊಂದು ಡಬ್ಬಿಯಲ್ಲೋ ಬಾಟಲಿಯಲ್ಲೋ ಇದ್ದೇ ಇರುತ್ತವಲ್ಲ.... ಹುಡುಕಿಕೊಳ್ಳುವಷ್ಟು ವ್ಯವಧಾನ ಇರಬೇಕಷ್ಟೆ.

“ಸರೂ ಡಾರ್ಲಿಂಗ್, ಚಹಾ-ತಿಂಡಿ ರೆಡಿ. ಈಗರೆ ಏಳು ಮಹಾರಾಯ್ತಿ” – ಆತ ಒಳಗಿನಿಂದ ಕೂಗಿದ. ಹೌದು, ಈಗ ಏಳಲೇಬೇಕು. ಇಲ್ಲವಾದರೆ ತನ್ನ ಬ್ಯಾಂಕಿಗೆ ಆಮೇಲೆ ಅವನ ಆಫೀಸಿಗೆ ಹೊತ್ತಾಗಿ ಬಿಡುತ್ತದೆ....

“ಹಾಯ್ ಸರೂ, ನೀ ಬ್ಯಾಂಕಿನಿಂದ ಬಂದು ಭಾಳೊತ್ತಾತೇನು ? ಸಾರಿ, ನನಗ ಲಗೂ ಬರ್ಲಿಕ್ಕೆ ಆಗ್ಲಿಲ್ಲ. ಇವತ್ತ ಪಗಾರದ ದಿವಸ. ಆಫೀಸಿನ್ಯಾಗ ಗದ್ದಲೋಗದ್ದಲ. ಎಲ್ಲಾರೂ ಪಗಾರದ ಸಲುವಾಗಿ ಕಾಯ್ಕೊಂಡು ಕೂತಿರ್ತಾರ. ಎಲ್ಲರಿಗೂ ಕೊಟ್ಟು ಬರೂದ್ರಾಗ ತಡಾ ಆತು. ಇವತ್ತ ಶನಿವಾರ, ಹಾಫ್ ಡೇ. ಅದಕ್ಕ ಮಧ್ಯಾಹ್ನ ಲಗೂನೇ ಬಂದು ನಿನ್ನ ವ್ಯಾಟಿನಿ ಶೋಕ್ಕ ಕರ್ಕೊಂಡು ಹೋಗ್ತೀನೀಂತ ಪ್ರಾಮಿಜ್ ಮಾಡಿದ್ದೆನಲ್ಲ, ವ್ಹೆರಿ ವ್ಹೆರಿ ಸಾರಿ” –ತನ್ನದಲ್ಲದ ತಪ್ಪಿಗಾಗಿಯೂ ಆತ ಕ್ಷಮೆ ಕೇಳುತ್ತಿದ್ದ. ಹೆಂಡತಿ ತನಗಾಗಿ ಕಾಯುವಂತೆ ಮಾಡಿದ್ದು, ಆಕೆಯ ಮನಸ್ಸಿಗೆ ಬೇಸರವಾಗಿರಬಹುದಾಗಿದ್ದು, ಸರಿಯಲ್ಲ ಅಂತ ಆತನಿಗೆ ಅನಿಸುತ್ತಿತ್ತು.

ತಾನು ತಪ್ಪು ಮಾಡಿದಾಗ ತಕ್ಷಣ ಅದಕ್ಕೆ ಪರಿಮಾರ್ಜನೆ ಮಾಡುವುದು ಆತನ ಸ್ವಭಾವ. “ಹೋಗಲಿ, ನೀ ಬ್ಯಾಸರ ಮಾಡಿಕೋಬ್ಯಾಡ. ಈಗ ಊಟಾ ಮಾಡಿ ರೆಸ್ಟ್ ತಗೊಳ್ಳೋಣ. ಸಂಜೀನ್ಯಾಗ ಹೋಗೋಣಂತ ಸಿನೆಮಾಕ್ಕ, ಯಾವುದದು, ನಿನ್ನ ಪೆಟ್ ಹೀರೋ ಶಮ್ಮಿಕಪೂರ ಇದ್ದಾನಲ್ಲ ? ರಾತ್ರೀ ಅಡಗಿ-ಪಡಿಗಿ ಏನೂ ಮಾಡಬ್ಯಾಡ. ಕಾಮತ್ ಹೋಟೆಲ್‌ನ್ಯಾಗ ಊಟಾ ಮಾಡೇ ಮನಿಗೆ ಬರೂಣಂತ. ನಿನಗ ಅಲ್ಲಿಯ ಚೈನೀಜ್ ಡಿಶ್ ಸೇರ್ತಾವಲ್ಲ ?”

ಸಿನೇಮಾಗೆ ಅಥವಾ ಹೊರಗೆಲ್ಲಾದರೂ ಹೋಗಿ ತಡವಾಗಿ ಮನೆಗೆ ಬಂದ ನಂತರ ಅಡಿಗೆ ಮಾಡುವುದು ಬೇಸರದ ಕೆಲಸವೆಂದು ಆತನಿಗೆ ಗೊತ್ತು. ಬೇಸರ ಬಂದರೂ ತೊಂದರೆಯಾದರೂ ದಣಿವಾಗಿದ್ದರೂ ಹಾಗಂತ ಹೇಳದೆ ಸಾಮಾನ್ಯವಾಗಿ ಎಲ್ಲ ಹೆಂಗಸರು ಅಡಿಗೆ ಮಾಡಿಯೇ ಮಾಡುತ್ತಾರಲ್ಲ, ತನ್ನ ಹೆಂಡತಿಗೆ ಆ ತಾಪತ್ರಯ ಬೇಡವೆಂದು ಆತನ ಇಚ್ಛೆ.

ಹಾಗೆಯೇ ಆಕೆಗೆ ಏನೆಲ್ಲ ಬೇಕು ಅನ್ನುವುದನ್ನೂ ಆತ ಎಷ್ಟು ಚೆನ್ನಾಗಿ ಸ್ಟಡೀ ಮಾಡಿ ಅಬ್ಝರ್ವ್ ಮಾಡಿ ತಿಳಿದುಕೊಂಡಿದ್ದಾನೆ– ಆಕೆಗೆ ಚೈನೀಜ್ ಡಿಶ್ ಸೇರುತ್ತವೆ. ಅಖ್ತರ್ ಬೇಗಮ್‌ನ ಗಜಲ್ ಸೇರುತ್ತವೆ. ಬಿಳಿ ಹಾಗೂ ತಿಳಿಗುಲಾಬಿ ಬಣ್ಣ ಸೇರುತ್ತವೆ. ಬೆಳದಿಂಗಳಲ್ಲಿ ತಿರುಗಾಡುವುದು ಸೇರುತ್ತದೆ. ಹೊರಗೆ ಮಳೆ ಬರುತ್ತಿದ್ದಾಗ ಒಳಗೆ ಬೆಚ್ಚಗೆ ಕೂತು ಬಿಸಿ ಚಹಾದೊಡನೆ ಕಾಂದಾಭಜಿ ತಿನ್ನಲು ಸೇರುತ್ತದೆ. ಹಗುರವಾದ ಕಾಟನ್ ಸೀರೆಗಳು ಸೇರುತ್ತವೆ. ರಾತ್ರಿ ಆತನ ಎದೆಯಲ್ಲಿ ಮುಖ ಹುದುಗಿಸಿ ಮಲಗಲು ಸೇರುತ್ತದೆ– ಇದೆಲ್ಲಾ ಆತನಿಗೆ ಗೊತ್ತಿದೆ. ಆಕೆಯ ಈ ಆಸೆಗಳನ್ನು, ಎಂತಹ ಸಿಂಪಲ್ ಆಸೆಗಳು ! ಪೂರೈಸಲು ಆತ ಯಾವಾಗಲೂ ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದಾನೆ.

“ಅಂಥಾಂಗ ಮಹಾರಾಯ್ತಿ, ಮೊದಲ ನನ್ನ ಕಿಸೇದಾಗಿನ ಸ್ಯಾಲರೀ ಅಮೌಂಟು

ತಗದಿಡು. ಬೋನಸ್-ಗೀನಸ್ ಅಂತ ಈ ಸರೆ ಭಾಳ ಬಂದದ ನೋಡು, ಹತ್ತು ಸಾವಿರದ ಮ್ಯಾಲೆ ಇರಬೇಕು. ನನ್ನ ಸ್ಕೂಟರಿನ ಪೆಟ್ರೋಲ್ ಖರ್ಚಿಗಷ್ಟು ನೀ ಕೊಟ್ಟರ ಸಾಕು. ಉಳದದ್ದೆಲ್ಲಾ ನಿಂದೇ. ನಿನಗ ಹ್ಯಾಂಗ ಬೇಕೋ ಹಾಂಗ ಖರ್ಚು ಮಾಡು.''

ಮೊದಲು ಆತ ಪ್ರೊಬೇಶನರಿ ಆಫೀಸರ್ ಆಗಿದ್ದ. ಆಗ ಬರುತ್ತಿದ್ದ ಸಂಬಳ ಕಡಿಮೆಯಿತ್ತು. ಆಗಲೂ ಆತ ಹೀಗೆಯೇ ಎಲ್ಲವನ್ನೂ ತಂದು ಆಕೆಯ ಕೈಯಲ್ಲಿಡುತ್ತಿದ್ದ. ಈಗ ಆತ ತನ್ನ ಡಿಪಾರ್ಟ್‌ಮೆಂಟಿನ ಅತ್ಯಂತ ಹಿರಿಯ ಅಧಿಕಾರಿ. ದೊಡ್ಡ ಸಂಬಳ ಬರುತ್ತದೆ. ಈಗಲೂ ಎಲ್ಲಾ ತಂದು ಆಕೆಯ ಕೈಗೆ ಹಾಕುತ್ತಾನೆ. ತನ್ನ ಸಂಬಳದೊಂದಿಗೆ ಆತನದನ್ನೂ ಆಕೆ ಬ್ಯಾಂಕಿನಲ್ಲಿ ಜಾಯಿಂಟ್ ಅಕೌಂಟಿನಲ್ಲಿಡುತ್ತಾಳೆ. ಹೆಂಡತಿಗೆ ಬರುವ ಹಣವೆಷ್ಟು, ಎಲ್ಲಿದೆ, ಹೇಗೆ ಖರ್ಚು ಮಾಡುತ್ತಾಳೆ, ಅದೆಲ್ಲ ಆತ ಕೇಳಿದವನೇ ಅಲ್ಲ.

* * *

''ಸರೂ, ನೀ ಕೂಸಿಗೆ ಹಾಲು ಕುಡಿಸಿ ನನ್ನ ಕಡೆ ಕೊಟ್ಟುಬಿಡು, ನಾ ನೋಡಿಕೋತೀನಿ. ನೀ ಬ್ಯಾರೆ ರೂಮಿನೊಳಗ ಹೋಗಿ ಅರಾಮ ಮಲಕೋ. ಎರಡು ತಿಂಗಳ ಹಸಿ ಬಾಣಂತಿ. ಈ ನಮ್ಮ ರಾಜಕುಮಾರ ಹಗಲೆಲ್ಲಾ ಮಲಗಿ ರಾತ್ರಿಯೆಲ್ಲಾ ಎಚ್ಚರಿರ್‍ತಾನ. ಅವನ ಜೋಡಿ ನೀನೂ ಜಾಗರಣೆ ಮಾಡಿದರ ನಿನಗ ತ್ರಾಸಾಗ್ತದ. ಇಂವಾ ದೊಡ್ಡಾಂವ ಆಗೂತನಕಾ ರಾತ್ರಿಯೆಲ್ಲಾ ಇವನ್ನ ನೋಡಿಕೊಳ್ಳೋ ಡ್ಯೂಟಿ ನಾ ಮಾಡ್ತೀನಿ. ನಿನ್ನ ಆರೋಗ್ಯ ಮುಖ್ಯ.'' –ಆತನದು ಬಹಳ ನಿಷ್ಪಕ್ಷಪಾತ ದೃಷ್ಟಿ. ಮಗುವನ್ನು ನೋಡಿಕೊಳ್ಳುವ ಮತ್ತು ಬೆಳೆಸುವ ಜವಾಬ್ದಾರಿ ಕೇವಲ ತಾಯಿಯದು ಅಂತ ಆತ ಒಪ್ಪುತ್ತಿರಲಿಲ್ಲ. ಗಂಡ-ಹೆಂಡತಿ ಇಬ್ಬರೂ ಕೂಡಿ ಮಕ್ಕಳನ್ನು ಹಡೆದಿರುತ್ತಾರೆಂದ ಮೇಲೆ, ಅದರಲ್ಲೂ ಇಬ್ಬರೂ ಉದ್ಯೋಗಸ್ಥರಾಗಿರುತ್ತಾರೆಂದ ಮೇಲೆ, ಮಕ್ಕಳ ಜವಾಬ್ದಾರಿ ಇಬ್ಬರಿಗೂ ಸೇರಬೇಕು ಅಂತ ಆತನ ವಾದ. ಅದಕ್ಕೇ ಆತ ಯಾವಾಗಲೂ ಹೇಳುತ್ತಿದ್ದ, 'ಮಹಿಳಾ ಮತ್ತು ಶಿಶು ಕಲ್ಯಾಣ ಇಲಾಖೆ' ಅನ್ನುವ ಪದಪ್ರಯೋಗವೇ ತಪ್ಪು. ಅದನ್ನು 'ತಂದೆ-ತಾಯಿ ಮತ್ತು ಶಿಶು ಕಲ್ಯಾಣ ಇಲಾಖೆ' ಅಂತ ಬದಲಾಯಿಸಬೇಕು.

''ಸರೂ, ನೀ ತಿಂಡಿ ರೆಡೀ ಮಾಡೂದ್ರಾಗ ನಾನು ರಾಜೂಗ ಸ್ನಾನ ಮಾಡಿಸಿ ಡ್ರೆಸ್ ಹಾಕಿ ಸ್ಕೂಲ್‌ಬ್ಯಾಗ್ ತಯಾರು ಮಾಡಿರ್‍ತೀನಿ. ಅಥವಾ ನೀ ಅವನನ್ನ ತಯಾರು ಮಾಡತಿದ್ದರ ಮಾಡು, ನಾ ಅವನ ಟಿಫಿನ್ ರೆಡಿ ಮಾಡ್ತೀನಿ. The choice is yours.''

''ಸರೂ, ಬ್ಯಾಂಕಿನಿಂದ ದಣದು ಬಂದೀದಿ. ಈಗ ರಾತ್ರಿ ಅಡಿಗೀನೂ ನೀನs

ಮಾಡೂದು, ಹುಡುಗರಿಗೆ ಹೋಮ್‌ವರ್ಕ್‌ನೂ ನೀನ ಮಾಡಸೂದು, ಹಿಂಗ ಬ್ಯಾಡಾ. ನಾವು ಈ ಎರಡೂ ಕೆಲಸಾ ಹಂಚಿಗೊಳ್ಳೋಣ– ನೀ ಅಡಿಗಿ ಮಾಡಿದ ದಿವ್ಸ ನಾ ಹೋಮ್‌ವರ್ಕ್ ಮಾಡಸ್ತೀನಿ. ನೀ ಹೋಮ್‌ವರ್ಕ್ ಮಾಡ್ಸಿದ ದಿವ್ಸ ಅಡಿಗಿ ನಂದು.''

* * *

''ಸರೂ, ಏ ಸರೂ, ಸ್ವಲ್ಪ ಟೆರೇಸ್ ಮ್ಯಾಲೆ ಬಂದು ಕೂಡ ಬಾ.... ಇಲ್ಲೆ ಬಾ, ನಿನಗ ಆರಾಮ ಖುರ್ಚಿ ಹಾಕಿ ದಿಂಬು ಇಟ್ಟೇನಿ ನೋಡು. ಇವತ್ತ ಹುಣ್ಣಿವಿ. ಬೆಳದಿಂಗಳು ಎಷ್ಟ ಛೆಂದ ಅದ. ಎಲ್ಲಾ ಚಿಂತೀ ಮರತು ಸ್ವಲ್ಪ ಹೊತ್ತು ಕೂಡೋಣ ....ಹಿಂಗ ನಾವಿಬ್ಬರs ಬೆಳದಿಂಗಳದಾಗ ಕೂತರ ಹಿಂದಿನದೆಲ್ಲಾ ನೆನಪಾಗ್ತದ ಅಲ್ಲ ? ಲಗ್ನಾದ ಹೊಸದಾಗಿ ಬೆಳದಿಂಗಳ ರಾತ್ರಿ ಮಾಳಿಗೀ ಮ್ಯಾಲ ಹಾಸಿಕೊಂಡು ಮಲಗತಿದ್ದೆವಲ್ಲ....'' ಬಹಳ ರಸಿಕ ಗಂಡ ಆತ ; ರಸಿಕತೆಯನ್ನು ಕೊನೆವರೆಗೆ ಉಳಿಸಿಗೊಂಡು ಬಂದಿರುವ ಗಂಡ.

''ಇಷ್ಟ ವರ್ಷಾದ್ರೂ ನಮ್ಮ ಭಾವನಾ ಇನ್ನೂ ಹಂಗs ಫ್ರೆಶ್ ಉಳಿದಾವಲ್ಲ – ನಿನ್ನ ಕಣ್ಣಾಗಿನ ಮಿಂಚಿನ್ಹಾಂಗ....''

ಲಗ್ನವಾಗಿ ಹಲವಾರು ವರ್ಷಗಳು ಕಳೆದು ಹೋದ ನಂತರ ಯಾರ ಭಾವನೆಗಳೂ ಫ್ರೆಶ್ ಆಗಿ ಉಳಿದಿರುವುದಿಲ್ಲ, ಯಾವ ಹೆಂಡತಿಯ ಕಣ್ಣಮಿಂಚೂ ಉಳಿದಿರುವುದಿಲ್ಲ.... ಆದರೂ ಅವು ಉಳಿದಿವೆ ಅಂತ ಗಂಡನಿಗೆ ಅನ್ನಿಸಬೇಕಾದರೆ ಆತ ನಿಜವಾಗಿ ದಿಲ್‌ದಾರ್ ಗಂಡನಾಗಿರಬೇಕು....

* * *

''ಸರೂ, ನನ್ನ ಜೀವನದಾಗ ನನಗ ಎಲ್ಲಾ ರೀತಿಯ ಸುಖಾ-ಸಂಪತ್ತು, ಕೀರ್ತಿ-ಅಂತಸ್ತು, ಮಾನ-ಮರ್ಯಾದೆ ಏನೇನು ಬೇಕೋ ಎಲ್ಲಾ ವೈಭವಾನೂ ಸಿಕ್ಕಿತು. ಅದರ ಈ ಎಲ್ಲಕ್ಕಿಂತಾ ನನಗ ನೀನು ಬಹಳ ಅಮೌಲ್ಯವಾದ ಆಸ್ತಿ ನೋಡು. ನನ್ನ ಜೀವನಕ್ಕ ಅರ್ಥಾ ಕೊಟ್ಟಾಕಿ ನೀನು. ನಿನ್ನಂಥಾ ಹೆಂಡತಿ ಸಿಕ್ಕದ್ದು ನನ್ನ ಪುಣ್ಯದ ಫಲ. ಯಾಕಂದರ ನೀ ನನಗ ಈ ಬದುಕಿನ ಸುಖದ ಸಾರಾಮೃತವನ್ನs ಕುಡಿಸೀದಿ.''

ಗಂಡನಿಂದ ಈ ಬಗೆಯ ಕೃತಜ್ಞತೆಯ ಸಂತೃಪ್ತಿಯ ವಿಶ್ವಾಸದ ಮಾತು ಕೇಳುವ ಅವಕಾಶ ಅದೆಷ್ಟು ಹೆಂಡಿರಿಗೆ ಒದಗಿ ಬಂದೀತು ?

* * *

ಸರೋಜಾಗೆ ಅರ್ಧ ಎಚ್ಚರ, ಅರ್ಧ ನಿದ್ದೆ. ರೂಮಿನಲ್ಲಿ ವಿಶಾಲವಾದ ಮಂಚದ ಮೇಲೆ ಆಕೆ ಒಬ್ಬಳೇ ಮಲಗಿದ್ದಾಳೆ. ಆಕೆಗೆ ನಿದ್ದೆ ಹತ್ತಿದೆಯೆಂದು, ತೊಂದರೆ ಮಾಡಬಾರದೆಂದು, ಉಳಿದವರೆಲ್ಲ ಹೊರಗೆ ಸೇರಿದ್ದಾರೆ. ಮೆಲುದನಿಯಲ್ಲಿ

ಮಾತಾಡುತ್ತಿದ್ದಾರೆ. ಯಾರು-ಯಾರೋ ಬಂದಿದ್ದಾರೆ. ದೊಡ್ಡ ಮಗ ರಾಜ, ಅವನ ಹೆಂಡತಿ, ಕಿರಿಯುವನು, ಮಗಳು ಮತ್ತು ಅಳಿಯ, ನೆರೆಮನೆಯವರು, ಬ್ಯಾಂಕಿನ ಸಹೋದ್ಯೋಗಿಗಳು, ಆತನ ಆಫೀಸಿನಲ್ಲಿ ಕೆಲಸ ಮಾಡುವವರು, ಇನ್ನೂ ಯಾರು-ಯಾರೋ.... ನೂರಾರು ಜನ ಸೇರಿದ್ದಾರೆ. ಆದರೂ ಗದ್ದಲ ಮಾಡದೆ ಪಿಸುಮಾತಿನಲ್ಲೇ ಎಲ್ಲ ವ್ಯವಹಾರ ನಡೆಸಿದ್ದಾರೆ.

“ರಾಜೂ, ನೀ ದೊಡ್ಡಾಂವಪಾ, ಇನ್ನ ಎಲ್ಲಾ ಜವಾಬ್ದಾರಿ ನಿಂದೇ. ನಿಮ್ಮ ತಾಯಿನ್ನ ಕಾಳಜಿಯಿಂದ ನೋಡಿಕೋಬೇಕಪಾ. ಅವ್ರಿಗೆ ಈ ಶಾಕ್ ತಡಿಯೋದು ಆಗ್ಲಿಕ್ಕಿಲ್ಲ.” –ಯಾರೋ ಹಿರಿಯ ಮನುಷ್ಯರ ಕಳಕಳಿ.

“ಹೌದ್ರೀ ಕಾಕಾ, ಅದಕ್ಕS ಡಾಕ್ಟರು ಮಮ್ಮೀಗೆ ನಿದ್ದೀ ಇಂಜೆಕ್ಶನ್ ಕೊಟ್ಟಾರ. ಆಕಿ ಇನ್ನೂ ಮಂಪರಿನ್ಯಾಗೇ ಇದ್ದಾಳ” ಕೆಳದನಿಯಲ್ಲಿ ರಾಜೂನ ವಿವರಣೆ.

“ಎಂಥಾ ದೊಡ್ಡಮನಿಶ್ಯಾ ಏನ ಕಥಿ! ಎಷ್ಟ ಮಂದಿಗೆ ಎಷ್ಟ ಉಪಕಾರ ಮಾಡಿದ್ರು! ಯಾರು ಏನು ಕೇಳಿದ್ರೂ ಇಲ್ಲ ಅಂದವರಲ್ಲ, ಎಷ್ಟ ಶಾಂತ-ಸಮಾಧಾನದ ಸ್ವಭಾವ! ಎಂದೂ ಸಿಟ್ಟಾದವರಲ್ಲ, ಕೆಟ್ಟಮಾತು ಆಡಿದವರಲ್ಲ, ಒಬ್ಬರಿಗೆ ಅನ್ಯಾಯ ಮಾಡಿದವರಲ್ಲ. ಸತ್ಯ ಹರಿಶ್ಚಂದ್ರನಂಥಾ ಮನಿಶ್ಯಾ ನೋಡ್ರಿ.” ಇನ್ನೊಬ್ಬರಿಂದ ಆತನ ಗುಣಗಾನ.

ಸರೋಜಾಗೆ ಈಗ, ಪೂರಾ ಎಚ್ಚರಾಯಿತು. ಹೊರಗೆ ಜನ ಸೇರಿದ್ದಾರೆ. ಆತನನ್ನು ಹೊಗಳುತ್ತಿದ್ದಾರೆ. ಅನುಕಂಪ ಸೂಚಿಸುತ್ತಿದ್ದಾರೆ.

ಹೌದು. ಆತ ಈಗಿಲ್ಲ. ನಿನ್ನೆ ರಾತ್ರಿ ಹತ್ತು ಗಂಟೆಗೆ ಆತ ಹೃದಯಾಘಾತವಾಗಿ ಸತ್ತು ಹೋದ.

ಈಗ ಬೆಳಗಿನ ಒಂಬತ್ತು ದಾಟಿದೆ. ಈ ಕಳೆದ ಸುಮಾರು ಹನ್ನೆರಡು ಗಂಟೆಯ ಕಾಲ ತಾನೇನು ಮಾಡುತ್ತಿದ್ದೆ ?

ಸರೋಜಾ ನೆನಪಿಸಿಕೊಳ್ಳಲು ಪ್ರಯತ್ನಿಸಿದಳು. ಸರಿಯಾಗಿ ಹತ್ತಕ್ಕೆ ಎರಡು ನಿಮಿಷಗಳಿದ್ದಾಗ ಆತನ ಜೀವ ಹೋಯಿತು. ಡಾಕ್ಟರು ಬಳಿಯಲ್ಲೇ ಇದ್ದರು. "I am sorry madam", ಅಂದರು, ಮಗ ರಾಜುವನ್ನು ಕರೆದರು. ಮಗಳೂ ಓಡಿ ಬಂದಳು. ಅವರೆಲ್ಲ ಅಪ್ಪನಿಗೆ ಸೀರಿಯಸ್ ಅಂತ ತಿಳಿದು ಕಳೆದ ವಾರವೇ ಬಂದಿದ್ದರು. ಹಗಲು-ರಾತ್ರಿ ಅಪ್ಪನ ಸೇವೆ ಮಾಡಿದರು. ಅಪ್ಪ ಇನ್ನಿಲ್ಲ ಅಂತ ತಿಳಿದೊಡನೆ ಕರುಣಾಜನಕವಾಗಿ ಅತ್ತರು. ಇಷ್ಟೆಲ್ಲ ಆಗುವಾಗ ಮಧ್ಯರಾತ್ರಿ ಸಮೀಪಿಸಿತ್ತು. ತಾನೇನು ಮಾಡುತ್ತಿದ್ದೆ ?

“ಮಮ್ಮೀಗೆ ಶಾಕ್ ಆಗೇದ. ಅದಕ್ಕS ಆಕಿ ಅಳತಾ ಇಲ್ಲ, ಮಾತಾಡತಾ ಇಲ್ಲ”,

"ಹೌದೌದು, ಅವ್ರಿಗೆ ಸೆಡೇಶನ್ ಕೊಡೋದು ಛಲೋ", "ಅಯ್ಯೋ ಅಮ್ಮಾ...." ಸರೋಜಾಗೆ ಇದೆಲ್ಲ ಕೇಳಿದ ನೆನಪಿದೆ. ಮುಂದೆ-

ಮುಂದೆ ಆಕೆ ನಿಧಾನವಾಗಿ ಕನಸಿನ ಲೋಕ ಸೇರಿದಳು.

ಕನಸಿನ ಲೋಕವೆ ?

ಹೌದು.

ಅಂದರೆ ಇಷ್ಟು ಹೊತ್ತು ನಡೆದದ್ದೆಲ್ಲ ಕನಸೆ ?

ಹೌದು.

ಆಕೆ ಮಲಗಿದ್ದಾಗ ಆತ ಚಹಾ ಮಾಡಿದ್ದು ? ಸಂಬಳದ ಹಣವನ್ನೆಲ್ಲ ಆತ ಆಕೆಯ ಕೈಯಲ್ಲಿರಿಸಿದ್ದು ? ಮಗುವನ್ನು ತಾನೇ ರಾತ್ರಿಯೆಲ್ಲ ನೋಡಿಕೊಳ್ಳುವೆನೆಂದು ಆತ ಹೇಳಿದ್ದು ? ಸಿನೆಮಾಗೆ-ಕಾಮತ್ ಹೋಟೆಲ್‌ಗೆ ಹೋಗೋಣವೆಂದು ಆತ ಹೇಳಿದ್ದು ? ಕೆಲಸವನ್ನು ಹಂಚಿಕೊಳ್ಳೋಣ ಅಂತ ರಮಿಸಿದ್ದು ? ಬೆಳದಿಂಗಳಲ್ಲಿ ಪ್ರೀತಿಯ ಮಾತುಗಳನ್ನಾಡಿದ್ದು ? ಜೀವನ ಸಾರ್ಥಕವಾಯಿತೆಂದು ಹೇಳಿದ್ದು ?

ಇದೆಲ್ಲ ಕನಸೆ ?

ಹೌದು.

ಎಂತಹ ಸುಂದರ ಕನಸುಗಳು ! ಆಕೆ ಹುಡುಗಿಯಾಗಿದ್ದಾಗಿನಿಂದ ಕಂಡಿದ್ದ ಕನಸುಗಳು ! ಇವೆಲ್ಲಾ ಬರಿ ಕನಸುಗಳೇ ಆಗಿದ್ದರೆ ಈ ಕನಸುಗಳಿಂದ ಎಚ್ಚರಾಗುವುದು ಯಾರಿಗೆ ಬೇಕಿತ್ತು ?

....ಹಾಗಿದ್ದರೆ ತನಗೀಗ ಎಚ್ಚರಾಗಿದೆ. ಕನಸು ಬೇರೆ, ವಾಸ್ತವ ಬೇರೆ ಅಂತ ಗೊತ್ತಾಗುತ್ತಿದೆ. ಇಷ್ಟು ಹೊತ್ತು, ಅದೆಷ್ಟೋ ಹೊತ್ತು, ಕಂಡಿದ್ದು-ಅನುಭವಿಸಿದ್ದು ಎಲ್ಲಾ ಬರೀ ಕನಸುಗಳೆಂದು ತಿಳಿಯುತ್ತಿದೆ.

ಬರೀ ಕನಸುಗಳು....

* * *

ಆತ ಸತ್ತು ಹೋಗಿದ್ದಾನೆ. ತನ್ನನ್ನು ಲಗ್ನವಾದಾತ, ಮೂರು ಮಕ್ಕಳನ್ನು ಹುಟ್ಟಿಸಿದಾತ, ಜೊತೆಗೆ ಮೂವತ್ತೈದು ವರ್ಷ ಬಾಳಿದಾತ, ಮೂವತ್ತೈದು ವರ್ಷಗಳ ಕಾಲ ತನ್ನ ಕನಸುಗಳನ್ನೆಲ್ಲ ಕನಸುಗಳಾಗಿಯೇ ಉಳಿಸಿದಾತ, ಈಗ ಸತ್ತಿದ್ದಾನೆ ; ಇದು ವಾಸ್ತವ.

ಇದಷ್ಟೇ ವಾಸ್ತವವೆ ?

ಅಲ್ಲ.

ವಾಸ್ತವದ ವ್ಯಾಪ್ತಿ ಕನಸುಗಳ ವ್ಯಾಪ್ತಿಗಿಂತ ಅದೆಷ್ಟೋ ಪಾಲು ಹೆಚ್ಚಿನದು ;

ಅದೆಷ್ಟೋ ಪಾಲು ಕಹಿಯಾದದ್ದು, ಅಸಹ್ಯವಾದದ್ದು, ಕ್ರೂರವಾದದ್ದು.

ಸರೋಜಾಗೆ ಬಾಯಾರಿದಂತೆನಿಸಿತು. ಒಂದು ಕಪ್ಪು ಬಿಸಿ ಚಹಾ ಬೇಕೆನಿಸಿತು. ತಾನಾಗಿ ಹೇಗೆ ಯಾರಿಗೆ ಕೇಳುವುದು ? ಗಂಡನ ಹೆಣ ಇನ್ನೂ ಪಡಸಾಲೆಯಲ್ಲಿ ಇದೆ. ಅವನ ಸುತ್ತಲೂ ಯಾರು ಯಾರೋ ಕೂತು ಅಳುತ್ತಿದ್ದಾರೆ. ಎಷ್ಟು ರಾಗಬದ್ಧವಾಗಿ ಅಳುತ್ತಿದ್ದಾರೆ.

ನ್ಯಾಯವಾಗಿ ತಾನೂ ಈಗ ಅಳಬೇಕಾದ ಸಮಯ– ಎಲ್ಲರಿಗಿಂತ ಹೆಚ್ಚಿನ ದುಃಖ ತನಗೇ ಆಗಬೇಕಲ್ಲ ?

ಆದರೆ ನ್ಯಾಯ ಅನ್ನುವುದು ಈ ದೇಶದಲ್ಲಿ, ಈ ಸಮಾಜದಲ್ಲಿ, ಅದೂ ಹೆಂಗಸಿನ ಪಾಲಿಗೆ, ಇದೆಯೆ ? –ಅನೇಕ ವೇದಿಕೆಗಳ ಮೇಲಿಂದ ಭಾಷಣ ಮಾಡುತ್ತ ಸರೋಜಾ ಈ ಪ್ರಶ್ನೆ ಕೇಳಿದ್ದಾಳೆ, ಉತ್ತರ ಗೊತ್ತಿದ್ದೂ....

ಅರೆತೆರೆದ ಬಾಗಿಲ ಸಂದಿಯಿಂದ ಆಕೆಗೆ ಹೊರಗೆ ಮಲಗಿಸಿದ ಆತನ ಹೆಣ ಕಾಣುತ್ತಿದೆ. ಸ್ನಾನ ಮಾಡಿಸಿದ್ದಾರೆ. ಮೂಗಿನಲ್ಲಿ ಹತ್ತಿ ತುರುಕಿದ್ದಾರೆ. ಉದ್ದಕ್ಕೂ ಮಲಗಿದ್ದಾನೆ, ಈಗ ಎದ್ದು ಬರುತ್ತಾನೇನೋ ಅನ್ನಿಸುವಂತೆ, ಎದ್ದು ಬಂದು ಮತ್ತೆ ಕರ್ಕಶವಾದ ದನಿಯಲ್ಲಿ ಕೂಗಾಡುತ್ತಾನೇನೋ ಅನ್ನಿಸುವಂತೆ....

* * *

“ಏ ಸರೋಜಾ, ಇಲ್ಲೆ ಬಾ....ಏನು, ಕರೆದ ಕೂಡಲೇ ಬರ್ಲಿಕ್ಕೆ ಆಗೂದಿಲ್ಲ ನಿನಗ ? ಗ್ಯಾಸ್ ಮ್ಯಾಲ ಹಾಲು ಇಟ್ಟಿದ್ರೇನಾತು ? ನಾ ಬಾ ಅಂದ ಕೂಡ್ಲೆ ಗ್ಯಾಸ್ ಬಂದ್ ಮಾಡಿ ಬರಬೇಕು ತಿಳೀತs ?....ಪಗಾರ ಬಂತಲ್ಲ ನಿನ್ನೆ ? ಪಗಾರ ಬಂದ ಕೂಡ್ಲೆ ರೊಕ್ಕಾ ತಂದು ನನ್ನ ಕೈಯಾಗ ಕೊಡು ಅಂತ ಹೇಳಿಲ್ಲs ನಿನಗ ?....ಹೌದು, ನಾ ಕುಡೀತೀನಿ, ಜೂಜು ಆಡ್ತೀನಿ, ಬೇಕಾದ್ದು ಮಾಡ್ತೀನಿ, ನೀ ಯಾರು ಕೇಳಾಕಿ ? ನನ್ನ ವ್ಯವಹಾರದಾಗ ನೀ ಕೈಹಾಕಬ್ಯಾಡ. ರೊಕ್ಕಾ ತಂದು ನನ್ನ ಕೈಯಾಗಿಟ್ಟು ಬಾಯಿ ಮುಚಿಗೊಂಡು ಸುಮ್ನಿರು.”

“ಅಲ್ಲ ಸರೋಜಿ, ನೀ ಬ್ಯಾಂಕಿನ್ಯಾಗ ಆಫೀಸರ್ ಇದ್ದೀ ಖರೆ, ಅದರರ್ಥ ನಿನಗ ಬೇಕಾದವರ ಜೋಡಿ ಖಿಖಿ ಮಾಡಿಕೋತ ಚಕ್ಕಂದ ಆಡ್ಲಿಕ್ಕೆ ಲೈಸೆನ್ಸ್ ಅದ ಅಂತ ಅಲ್ಲ.... ಅಂವಾ ನಿನ್ನ ಕೊಲೀಗ್ ಇರಬಹುದು. ಕೊಲೀಗ್ ಇದ್ದರ ಕೆಲಸದ ಪೂರ್ತೆ ಎಷ್ಟೋ ಅಷ್ಟs ಮಾತಾಡ್ಬೇಕು. ನಗೂದು-ಹಲ್ಲು ಕಿರಿಯೂದು ಯಾಕ ?....ನಾನs ತಪ್ಪ ಮಾಡಿದೆ. ಡಬಲ್ ಡಿಗ್ರಿ ತಗೊಂಡು ನೌಕರಿ ಮಾಡೋ ಹೆಂಗಸ್ರಿಗೆ ಕೊಬ್ಬು ಜಾಸ್ತಿ. ನಿನ್ನಂಥಾಕಿನ್ನ ನಾ ಲಗ್ನಾನs ಮಾಡಿಕೋಬಾರದಿತ್ತು. ನಾ ಗಂಡ ಜೀವಂತ ಇದ್ದಾಗನs ಬ್ಯಾರೆ ಗಂಡಸರ ಜೋಡಿ ನಕ್ಕೋತ ಮಾತಾಡುವಾಕಿ ಲಗ್ನದಕಿಂತಾ

ಮೊದಲ ಏನೇನ ಮಾಡೀಯೋ ಯಾರಿಗ್ಗೊತ್ತು.... ಇಕಾ ನೋಡು, ನಾ ಹೇಳಿದ್ದು ನೆನಪಿಟಗೋ, ಹೊರಗಿನ ಗಂಡಸರ ಜೋಡಿ ಖಾಲಿಫುಕಟ ನಕ್ಕೋತ ಮಾತಾಡಿದರ ನಿನ್ನ ಹಲ್ಲs ಮುರೀತೀನಿ...."

"ಏನು, ಹೊಟೇಲಿಗೆ ಹೋಗಬೇಕs ? ಯಾಕ ? ಮಕ್ಕಳು ಹೋಗೋಣಂತಾರ ? ಅವ್ರಿಗೆ ಸ್ಪಷ್ಟ ಹೇಳು. ಹೊಟೇಲಿನ ತಿಂಡಿ ಆರೋಗ್ಯಕ್ಕ ಛಲೋ ಅಲ್ಲ. ದುಡ್ಡೂ ಹಾಳು, ಆರೋಗ್ಯನೂ ಹಾಳು. ಮನ್ಯಾಗ ಏನು ಬೇಕಾದ್ದು ತಿನ್ಲಿ. ....ಏನು, ನಿನಗ ಅಡಿಗಿ ಮಾಡ್ಲಿಕ್ಕೆ ಇವತ್ತ ಬೇಜಾರs ? ನಿನಗ ಬೇಜಾರಾದ್ರ ಮಕ್ಕಳಿಗೆ ಮಾಡ್ಲಿಕ್ಕೆ ಹಚ್ಚು. ಅವ್ರೂ ಕಲೀಲಿ. ಬರೇ ಅನ್ನಾ ಮಾಡ್ರಿ, ಚಟ್ನಿಪುಡಿ ಉಪ್ಪಿನಕಾಯಿ ಹಚಿಗೊಂಡು ತಿನ್ರಿ. ಸಿಂಪಲ್ ಊಟಾ ಮಾಡಬೇಕು— ಗಾಂಧೀಜಿ ಹೇಳ್ಯಾರ —ಬಾಗಲಾ ಹಾಕ್ಕೋ, ಇವತ್ತ ಕ್ಲಬ್‌ನ್ಯಾಗ ಡಿನ್ನರ್ ಅದ, ನಾ ರಾತ್ರಿ ತಡಾ ಆಗಿ ಬರ್ತೀನಿ."

"ಏ ಸರೋಜಿ, ಎಲ್ಲೆ ಸತ್ತೀಯೆ ? ಈ ಹುಡುಗರು ಅಳೂದು— ಜಗಳಾಡೂದು ಅಂತ ಧಾಂಧಲೆ ನಡಸ್ಯಾರ ನಿನಗ ಕಿವಿ ಕೇಳಸೂದಿಲ್ಲs ? ಇವರ್‍ನ ಅತ್ಲಾಗ ಎಳಕೊಂಡು ಹೋಗು. ಶನಿವಾರ ಒಂದಿನ ಮಧ್ಯಾಹ್ನ ಒಂದಿಷ್ಟು ಉಂಡು ಮಲಕೊಂಡೀನಿ, ಒಂದs ಸವನ ಡಿಸ್ಟರ್ಬ್ ಮಾಡ್ಲಿಕ್ಹತ್ಯಾವ ಶನಿಗಳು.... ಏನು, ಹಟಾ ಬಂದದ ? ಕಪಾಳಿಗೆ ಒಂದೊಂದು ರಪ್ ಅಂತ ಏಟಾ ಕೊಟ್ಟು ಕತ್ತಲಿ ಖೋಲ್ಯಾಗ ಹಾಕಿ ಬಾಗಲಾ ಹಾಕು. ಎರಡ ದಿನಾ ಉಪಾಸ ಹಾಕು. ತಾವs ದಾರಿಗೆ ಬರ್‍ತಾರ.... ಮಕ್ಕಳ್ನ ಉಪಾಸ ಹಾಕಿ ನೀ ಹ್ಯಾಂಗ ಉಣ್ಣೂದು ಅಂತೀಯಾ ? ಅವರ ಜೋಡಿ ನೀನೂ ಉಪಾಸ ಮಾಡು. ನಿಂದೂ ಆರೋಗ್ಯ ಛಲೋ ಆಗ್ತದ. ಈಗೀಗ ಭಾಳ ದಪ್ಪ ಆಗೀದಿ...."

"ಏ ಸರೋಜೀ, ಇವತ್ತೇನು ರಾತ್ರಿ ಅಡಿಗೀ ಮಾಡೋ ವಿಚಾರ ಇಲ್ಲೇನು ? ಎಷ್ಟೊತ್ತಾತು ಟೆರೇಸ್ ಮ್ಯಾಲ ಹೋಗಿ ಸುಮ್ನ ದೆವ್ವನ್ಹಾಂಗ ಕೂತು ಬಿಟ್ಟೀಯಲ್ಲ ? ....ಬೆಳದಿಂಗಳು ಅದsನs ? ಇದ್ರೇನಾತು ? ನಿನಗೊಂದು ಈ ಬೆಳದಿಂಗಳ ಹುಚ್ಚು. ಹುಣ್ಣಿವಿ ಬಂದಾಗೊಮ್ಮೆ ನಿನ್ನ ಮೈಯಾಗೇನರೆ ದೆವ್ವ-ಗಿವ್ವ ಬರ್‍ತದೋ ಏನೋ. ಅದಕ್ಕs ಹಿಂಗ ಕಣ್ಣು ಮುಚಿಗೊಂಡು ಸುಮ್ಮ ಕೂತುಬಿಡ್ತೀ....ಯಾರಿಗರೆ ದೆವ್ವಾ ಬಿಡಸವ್ರಿಗೆ ಕೇಳಬೇಕು...."

"ನೀ ಹೀಂಗ ಬರ್ಥಡೇ ಬಂತು— ಅದು ಬಂತು ಅಂತ ಹೊಸಾ ಸೀರಿ ತಗೊಳ್ಳೂದು, ಸ್ವೀಟ್ಸ್ ಮಾಡೂದು, ಮಂದಿನ್ನ ಕರದು ಪಾರ್ಟಿ ಕೊಡೂದು ವಗೈರೆ ಎಲ್ಲಾ ಹುಚ್ಚುಚ್ಚಾರ ಬಿಟ್ಟುಬಿಡು. ಮನ್ಯಾಗ ರಗಡ ಸೀರಿ ಅವ. ಸುಮ್ಸುಮ್ನ ಖರ್ಚು ಮಾಡಬಾರದು.... ಮನ್ಯಾಗ ಎರಡು ಸೀರಿ-ಹೊರಗ ಹೋಗ್ಲಿಕ್ಕೆ ಎರಡು ಸೀರಿ, ಒಟ್ಟು ನಾಲ್ಕು ಸೀರಿ ಇದ್ದರ ಸಾಕು. ಎಂಥಾ ಸೀರಿ ಉಟ್ಟರೇನು, ಬರಬರತ ಹರೇದಾಕಿ

ಆಗ್ತೀಯೇನು ? ಕನ್ನಡ್ಯಾಗ ಮಾರಿ ನೋಡಿಕೋ– ಕಣ್ಣು ಗಲ್ಲ ಎಲ್ಲಾ ಹ್ಯಾಂಗ ಒಳಸೇರ್ಯಾವ ಗೊತ್ತಾಗ್ತದ....ಏನು, ನನ್ನ ಸಿಗರೇಟು-ಬಿಯರ್ ಖರ್ಚಿನ ಸಲುವಾಗಿ ಮಾತಾಡ್ತೀಯಾ ? ನಾ ಗಂಡಸು. ನಾ ಬೇಕಾದ್ದು ಮಾಡ್ತೇನಿ. ನಾ ಇಡೀ ದಿನಾ ದುಡದು ದಣದಿರ್ತೇನಿ, ನನ್ನ ರಿಕ್ರಿಯೇಶನ್ ಸಲುವಾಗಿ ಏನಾದ್ರೂ ಮಾಡ್ತೇನಿ, ನೀ ನನ್ನ ಸುದ್ದಿಗೆ ಬರಬ್ಯಾಡ.''

''ಏನು, ರಾಜೂನ ಫೀಜಿಗೆ ರೊಕ್ಕ ಬೇಕs ? ನಿನ್ನ ಪಗಾರ ಬರ್ತದಲ್ಲ, ಅದರಾಗಿಂದ ಕೊಡು. ಮಕ್ಕಳ ಸ್ಕೂಲಿನ ಫೀಜು-ಪುಸ್ತಕ ಡ್ರೆಸ್ಸು ಅಂತ ನನ್ನ ತಲಿ ತಿನ್ನಬ್ಯಾಡ. ಅದನ್ನೆಲ್ಲಾ ನೀನೇ ಮ್ಯಾನೇಜ್ ಮಾಡ್ಬೇಕು. ಏನು, ಈ ತಿಂಗಳು ಗೆಸ್ಟ್ಸ ಬಂದರಂತ ಹಾಲಿನ ಬಿಲ್ಲು ಜಾಸ್ತಿ ಆತs ? ಯಾರು ಬಂದ್ರೇನು, ನೀ ಯಾಕ ಹಾಲು ಹೆಚ್ಚಿಗಿ ಹಾಕಿಸಿಕೋಬೇಕು ? ಇನ್ನ ಮ್ಯಾಲ ಹಾಲಿನ ಖರ್ಚು ಅರ್ಧಾ ಮಾಡಿ ಬಿಡು. ನನ್ನ ಪೂರ್ತೆ ಒಂದು ಲೋಟಾ ಕುಡೀಲಿಕ್ಕೆ ಆದರ ಸಾಕು. ಬೇಕಾರ ರಾಜೂಗ ಅರ್ಧಾ ಲೋಟಾ ಕೊಡು. ಮಗಳಿಗೆ ಹಾಲು ಕೊಡೋ ಜರೂರಿಲ್ಲ. ದಪ್ಪ ಆಗಿ ಕೂತರ ಲಗ್ನಾ ಯಾರು ಮಾಡಿಕೊಳ್ಳವು ? ನೀ ಅಂತೂ ಹಾಲು ಕುಡೀಲೇಬಾರದು. ಮೂವತ್ತು ವರ್ಷ ದಾಟಿದ ಮ್ಯಾಲೆ ಹೆಂಗಸ್ರು ಹಾಲು ಕುಡದರ ಡಯಾಬಿಟಿಸ್ ಬರತದ. ತಿಳೀತೇನು ?''

''ನೀ ಏನs ಅನ್ನು ಸರೋಜಿ, ನೀವು ಕಲಿತ ಹೆಂಗಸರು ಭಾಳ ನಾಜೂಕು ನೋಡು, ಏನೂ ಉಪಯೋಗಿಲ್ಲ. ಏನೋ ಒಂದಿಷ್ಟು ಫ್ಲ್ಯು ಆಗಿ ಎಂಟ್ಹತ್ತು ದಿನಾ ಜ್ವರಾ ಬಂದವು ಅಂತ ಮಲಗೇ ಬಿಟ್ಟೀಯಲ್ಲ ? ನಿಮ್ಮ ನಖರಾನೇ ಭಾಳ. ಹಳ್ಳಿಯೊಳಗಿನ ಹೆಂಗಸರನ್ನ ನೋಡು, ಹ್ಯಾಂಗ ಹೊಲದಾಗ ಕೆಲಸಾ ಮಾಡತಾರ, ಜ್ವರಾ-ಗಿರಾ ಬಂದರ ಕೇರ್ ಮಾಡೂದೇ ಇಲ್ಲ ಅವ್ರು. ನೀ ಹಿಂಗ ವೀಕ್‌ನೆಸ್ ಅಂತ ಮಲಗೇ ಇದ್ದರ ನಿನಗೆ ನೆಟ್ಟಗs ಆಗೂದಿಲ್ಲ. ಎದ್ದು ಅಡಿಗಿ-ಪಡಿಗಿ ಮಾಡ್ಲಿಕ್ಕೆ ಸುರು ಮಾಡು. ನನ್ನವು ಒಂದ್ನಾಲ್ಕು ಶರ್ಟು-ಪ್ಯಾಂಟು ಇಟ್ಟೇನಿ ನೋಡು, ಒಗದು ಇಸ್ತ್ರೀ ಮಾಡು. ಗುಳಗಿ-ಔಷಧ ಅಂತೆಲ್ಲಾ ತಗೋಬ್ಯಾಡ. ಅದರಿಂದ ಕೆಟ್ಟ ಸೈಡ್ ಇಫೆಕ್ಟ್ ಆಗ್ತಾವ. ನಾ ಒಂದಿಷ್ಟು ನನ್ನ ಫ್ರೆಂಡ್ಸ್ ಕೂಡ ನಾಲ್ಕದಿನಾ ಜೋಗ-ಮುರಡೇಶ್ವರ-ಗೋಕರ್ಣ ಕಡೆ ಟ್ರಿಪ್ ಹೋಗಿ ಬರ್ತೇನಿ. ಮನೀಕಡೆ ಜೋಪಾನ.''

''ಏ ಸರೋಜಿ, ಎಲ್ಲೆ ಹೊಂಟೀದಿ ? ನಿನ್ನ ಬ್ಯಾಂಕಿಗೆ ಇವತ್ತ ಲೀವ್ಹ ಹಾಕಿ ಮನ್ಯಾಗಿರು ಅಂತ ಹೇಳ್ಲಿಲ್ಲs ? ಅದೇನು ಅರ್ಜೆಂಟ್ ಅಕೌಂಟ್ಸ್ ಸಬ್‌ಮಿಟ್ ಮಾಡೋದಿದ್ರೂ ಇರ್ಲಿ, ನೀ ಇವತ್ತು ಹೋಗಬ್ಯಾಡ. ನನಗ ಯಾಕೋ ಅರಾಮಿಲ್ಲ ಅಂತ ಹೇಳಿದೆನಲ್ಲ, ಮೊದಲ ಹೋಗಿ ಡಾಕ್ಟರನ್ನ ಕರಕೊಂಡ ಬಾ. ಜ್ವರಾನs ?

ಇನ್ನೂ ಬಂದಿಲ್ಲ. ಆದರ ಬರೋ ಹಾಂಗ ಕಾಣಸ್ತದ, ನಾಳೆ ಬರಬಹುದು. ಅದಕ್ಕ ಮೊದಲ ಡಾಕ್ಟರನ್ನ ಕರೆಸಿ ಗುಳಿಗಿ-ಔಷಧ ತಗೊಳ್ಳೂದು ಛಲೋ. ಸ್ವಲ್ಪ ನನ್ನ ಕಾಲು ಒತ್ತು. ಹಣೆಗೆ ಒಂದಿಷ್ಟು ವ್ಹಿಕ್ಸ್ ವ್ಹೆಪೊರಬ್ ಹಚ್ಚಿ ತಿಕ್ಕು. ಒಂದಿಷ್ಟು ರವಾದ ಪಾಯಸಾ ಮಾಡಿಕೊಡು. ಬಿಸಿನೀರು ಕಾಯಿಸಿಕೊಂಡು ಬಾ. ಲೀವ್ಹ್ ಲೆಟರ್ ಕಳಸು ನಿನ್ನ ಸುಡುಗಾಡು ಬ್ಯಾಂಕಿಗೆ.... ಆಹ್ ! ಓಹ್ ! ಅಮ್ಮಾ ! ಅದೇನು ಥರ್ಮಾಮೀಟರ್ ಹಚ್ಚಿ ನೋಡತೀ, ನಾರ್ಮಲ್ ಅದನs ? ನಿನ್ನ ತಲಿ. ನನಗ ಜ್ವರಾ ಬರತಾವ ಅನಸ್ಲಿಕ್ಹತ್ತೇದ ಅಂತ ಹೇಳ್ತೀನಲ್ಲs ? ಹೋಗು ಮೊದಲ ಡಾಕ್ಟರನ್ನ ಕರಕೊಂಡ ಬಾ...."

"ಅಲ್ಲs ಸರೋಜಿ, ಯಾವಾಗ್ಲೂ ಸಣ್ಣಮುಖಾ ಮಾಡಿಕೊಂಡು ಕೂಡ್ಲಿಕ್ಕೆ ಏನ ಧಾಡಿ ಆಗೇದ ನಿನಗ ? ನನ್ನಂಥಾ ದೊಡ್ಡ ಅಧಿಕಾರದಾಗಿರೋ ಗಂಡ ಇದ್ದಾನ, ಮಕ್ಕಳು ಸೆಟಲ್ ಆಗ್ಯಾರ. ದೊಡ್ಡ ಮನಿ, ಕಾರು, ವಸ್ತ್ರಾ-ವಡಿವಿ ಎಲ್ಲಾ ಅವ. ನನ್ನಂಥಾ ಗಂಡ ಸಿಗ್ಲಿಕ್ಕೆ ನೀ ಪುಣ್ಯಾ ಮಾಡೀದಿ. ನನ್ನಿಂದ ನಿನಗ ಎಷ್ಟ ಉಪಕಾರ ಆಗೇದ, ಉಪಯೋಗ ಆಗೇದ, ಎಂದರೆ ತಿಳಕೋತೀಯೇನು ?"

* * *

"ಮಮ್ಮೀ ಇನ್ನೂ ನಿದ್ದೀ ಮಂಪರಿನ್ಯಾಗ ಇದ್ದಾಂಗ ಕಾಣಸ್ತದ", ಹೊರಗಿನಿಂದ ಮಗಳ ದನಿ.

"ಆದರ ಇನ್ನೂ ಎಷ್ಟೊತ್ತು ಅಂತ dead body ಇಟಗೊಂಡು ಕೂಡೋದು ? ಮುಂದಿನ ಕೆಲಸ ಆಗಬೇಕಲ್ಲ ? ರಾಜೂ, ನೀ ಹೋಗಿ ಸಾವಕಾಶ ನಿನ್ನ ತಾಯಿಯವರನ್ನ ಹೊರಗ ಕರಕೊಂಡು ಬಾ. ನಿನ್ನ ತಂದಿಯವರ ದೇಹದ ಹತ್ತಿರ ಐದ ಮಿನಿಟು ಕೂಡಿಸು. ಎಲ್ಲಾ ಶಾಸ್ತ್ರ ಆಗಬೇಕಲ್ಲ. ಆದಷ್ಟು ಸಂಕ್ಷಿಪ್ತ ಮಾಡಿದ್ರಾತು." – ಹಿರಿಯರೊಬ್ಬರ ಅನುಕಂಪಪೂರಿತ ಸೂಚನೆ.

"ಅಯ್ಯೋ ದೇವರೆ, ಮಮ್ಮೀ ಇದನ್ನೆಲ್ಲಾ ಹ್ಯಾಂಗ ತಡಕೋಬೇಕು !" ಮಕ್ಕಳ ಅಳಲು.

"ಏನು ಮಾಡೋದರೆಪಾ, ಆ ಪುಣ್ಯಾತ್ಮನ ಆಯುಷ್ಯ ಮುಗೀತು. ದೇವರ ಪಾದಾ ಸೇರಿದ್ರು. ಹೊರಗಿನ ಮಂದೀಗೇ ಇದು ತುಂಬಿಬಾರದ ಹಾನಿ ಅನಸ್ತದ. ಅಂಥಾದ್ರಾಗ ನಿಮ್ಮ ತಾಯಿಗೆ ಹ್ಯಾಂಗನಸ್ತಿರಬೇಕು, ಪಾಪ, ಗಂಡ ಅಂದರ ದೇವರು ಅಂತ ತಿಳಿಕೊಂಡ ಹೆಣ್ಮಗಳು."

"ಅಣ್ಣಾ, ನೀನs ಹೋಗಿ ಗಟ್ಟಿ ಮನಸ್ಸು ಮಾಡಿ ಮಮ್ಮೀನ್ನ ಎಬ್ಬಿಸಿ ಕರಕೊಂಡ ಬಾ" – ಮಗಳ ಅಳುದನಿ.

ಸರೋಜಾಗೆ ಯಾರೂ ಎಬ್ಬಿಸಬೇಕಾಗಿರಲಿಲ್ಲ. ಆಕೆಗೆ ಎಚ್ಚರವಾಗಿತ್ತು. ಕನಸುಗಳ ಲೋಕದಿಂದ ಆಕೆ ಹೊರಬಂದಿದ್ದಳು. ವಾಸ್ತವದ ಲೋಕದಲ್ಲಿ ಆಕೆ ಎಚ್ಚರವಾಗಿದ್ದಳು.

ಮೈ-ಮನಸ್ಸು ಹಗುರವಾದಂತಹ ಭಾವ. ಅದೆಂಥದೋ ಬಿಡುಗಡೆಯ ಸುಖದ ಭಾವ. ಎಲ್ಲ ನೋವುಗಳಿಂದ, ಅಪಮಾನಗಳಿಂದ, ಹಿಂಸೆಯಿಂದ, ನಿರಾಶೆಯಿಂದ, ಅನ್ಯಾಯದಿಂದ, ದಬ್ಬಾಳಿಕೆಯಿಂದ ಕಳಚಿಕೊಂಡಂತಹ ಭಾವ. ತನಗೆ ದುಃಖವಾಗುತ್ತಿಲ್ಲ ಎಂದು ಆಕೆಗೆ ತಿಳಿಯುತ್ತಿದೆ. ದುಃಖವೇಕೆ ಆಗುತ್ತಿಲ್ಲವೆಂದು ಕಸಿವಿಸಿಯೂ ಆಗುತ್ತಿಲ್ಲ. ದುಃಖವಾಗುತ್ತಿದ್ದರೆ - ಕಸಿವಿಸಿಯಾಗುತ್ತಿದ್ದರೆ - ಸಂತಾಪವಾಗುತ್ತಿದ್ದರೆ ಅದು ಈ ಗಂಡ ಸತ್ತು ಹೋದದ್ದಕ್ಕಾಗಿ ಅಲ್ಲ, ಆತ ಸಾಯಿಸಿದ ತನ್ನ ಅಸಂಖ್ಯ ಕನಸುಗಳಿಗಾಗಿ....

ತಲೆ ಕೊಡವಿಕೊಂಡು ಸರೋಜಾ ಎದ್ದಳು. ಕೂದಲನ್ನು ಸೀರೆಯನ್ನು ಸರಿಪಡಿಸಿಕೊಂಡಳು. ಒಳಗಿನ ಬಾಗಿಲಿಂದ ಒಬ್ಬಳೇ ಅಡಿಗೆ ಮನೆಗೆ ಹೋಗಿ ಕಾಯಿಸಿಟ್ಟಿದ್ದ ಹಾಲನ್ನು ಗ್ಲಾಸಿಗೆ ಬಗ್ಗಿಸಿಕೊಂಡು ಸಕ್ಕರೆ ಬೆರೆಸಿ ಗಟಗಟ ಕುಡಿದಳು. ನಂತರ, ಮಗ ತನ್ನನ್ನು ಕರೆಯಲು ಬರುವ ಮೊದಲೇ, ಹಗುರವಾದ ದಿಟ್ಟವಾದ ಹೆಜ್ಜೆಗಳನ್ನಿಡುತ್ತ ಪಡಸಾಲೆಗೆ ಬಂದಳು.

(೧೯೯೪)

❖ ❖ ❖

# ಹೀಗೊಂದು ಕತೆ

ಹತ್ತು ವರುಷಗಳ ಹಿಂದೆ ಇಂತಹುದೇ ಒಂದು ಸಂಜೆ : ಮಳೆಗಾಲದ ಪ್ರಾರಂಭದ ದಿನಗಳು. ಇಡಿಯ ದಿನ ಬಿಸಿಲಿನ ಬೇಗೆಯಲ್ಲಿ ಅಕ್ಷರಶಃ ಉರಿದು ಧಗಧಗಿಸುತ್ತಿದ್ದ ಮುಂಬಯಿ ನಗರ ಸಂಜೆಯ ತುಂತುರು ಮಳೆಯಿಂದ ತಂಪಾಗಿ ಆಪ್ಯಾಯಮಾನವಾಗಿತ್ತು. ಆಫೀಸು ಬಿಡುತ್ತಲೇ ಎಂದಿನಂತೆ ಎಲ್ಲರೊಂದಿಗೆ ಲೋಕಲ್ ಟ್ರೇನಿಗೋ ಬಸ್ಸಿಗೋ ಧಾವಂತಪಟ್ಟು ಓಡುತ್ತೋಡುತ್ತ ಹೋಗುವ ಬದಲು ಆಕೆ ಹನಿಮಳೆಯಲ್ಲಿ ನಿಧಾನವಾಗಿ ಬೇಕೆಂತಲೇ ನೆನೆಯುತ್ತ ತಂಪಾಗುತ್ತ ಕಾಲುದಾರಿಗುಂಟ ಸಾಗಿದ್ದಳು. ಮಲೆನಾಡಿನಿಂದ ಬಂದವಳು ಆಕೆ. ನೌಕರಿಗಾಗಿ ಮುಂಬಯಿ ಸೇರಿ ಹಲವಾರು ವರುಷಗಳೇ ಕಳೆದಿದ್ದರೂ ಇನ್ನೂ ಇಲ್ಲಿಯ ಬಿಸಿಲು ಆಕೆಗೆ ಸಹನವಾಗುತ್ತಿರಲಿಲ್ಲ. ಪ್ರತಿಸಲ ಮಳೆಗಾಲದ ದಾರಿ ಕಾಯ್ದು ಮಳೆ ಬಂದಾಗ ಯಥಾಶಕ್ತಿ ನೆನೆದು ಸಂತೋಷಪಡುತ್ತಿದ್ದಳು. ಆದರೂ ಮಳೆಗಾಲ ಮುಗಿದುಹೋದ ನಂತರ ಏನೋ ಒಂದು ತರದ ಅತೃಪ್ತಿ ಹಾಗೆಯೇ ಉಳಿದುಬಿಡುತ್ತಿತ್ತು. ಛೆ, ಈ ಸಲ ಸಾಕಷ್ಟು ಮಳೆ ಆಗಲೇ ಇಲ್ಲ, ತೋಯಿಸಿಕೊಂಡದ್ದು ಸಮಾಧಾನವಾಗಲೇ ಇಲ್ಲ, ಅಂತ ಪ್ರತಿಸಲವೂ ಅನ್ನಿಸುತ್ತಿತ್ತು. ನಂತರ ಆಕೆ ಮತ್ತೆ ಮಳೆಗಾಲದ ದಾರಿ ಕಾಯುತ್ತ ಇಡೀ ವರ್ಷ ಕಳೆಯುತ್ತಿದ್ದಳು.

"ಹಲೋ ಮ್ಯಾಡಮ್...." –ಗಕ್ಕನೆ ಹಿಂದಿನಿಂದ ಬಂದ ಸ್ಕೂಟರು ಆಕೆಯ ಪಕ್ಕದಲ್ಲೇ ನಿಂತಾಗ ಆಕೆ ತಿರುಗಿ ನೋಡಿದ್ದಳು.

ಆತ, ಒಂದು ತಿಂಗಳ ಹಿಂದೆ ದಿಲ್ಲಿಯ ಹೆಡ್‌ಆಫೀಸಿನಿಂದ ಟ್ರೇನಿಂಗಿಗಾಗಿ ಬಂದಿದ್ದ ಪ್ರೊಬೇಶನರಿ ಅಧಿಕಾರಿ ; ಸದಾ ಗಂಭೀರನಾಗಿದ್ದು ತನ್ನನ್ನು ಸೆಳೆದಿದ್ದ ಮನುಷ್ಯ ; ಶ್ರೀಯುತ–

"ಹಲೋ" ಅಂದಿದ್ದಳು ಆಕೆ ಪ್ರತಿಯಾಗಿ ನಸುನಕ್ಕು. "ಮಳೆಯಲ್ಲಿ ನೆನೆಯುವುದು ನಿಮಗೆ ಇಷ್ಟವೆ ಮ್ಯಾಡಮ್ ?" ಇಂಗ್ಲೀಶಿನಲ್ಲಿ ಕೇಳಿದ್ದ ಆತ. ಅದೇ ಮೊದಲ ಸಲ ಮಾತನಾಡಿದ್ದರೂ ಏನೊಂದು ಪೀಠಿಕೆಯೂ ಇಲ್ಲದೆ ಬಹಳ ದಿನಗಳ ಪರಿಚಯವಿರುವಂತೆ ನೇರವಾಗಿ ಕೇಳಿದ್ದ ಆತ.

"ಹೌದು. ಬಹಳ ಇಷ್ಟ." ಆಕೆಯೂ ಸಂಕೋಚವಿಲ್ಲದೆ ಒಪ್ಪಿಕೊಂಡಿದ್ದಳು.

"ಹಾಗಿದ್ದರೆ ನನ್ನ ಕೂಡ ಬರ್ರಿ. ಹೀಗೆ ಸದ್ದುಗದ್ದಲ ತುಂಬಿದ ರಸ್ತೆಗಿಂತ ಶಾಂತವಾಗಿರುವ ಸಮುದ್ರತೀರ ಒಳ್ಳೇ ಜಾಗ ನೆನೆಯೋದಕ್ಕೆ. ನಾನೂ ನಿಮ್ಮ ಕೂಡ ಮಳೆಯಲ್ಲಿ ನೆನೆಯುತ್ತೇನೆ. ಬರುತ್ತೀರಾ ?"

—ಒತ್ತಾಯವಿಲ್ಲ, ಆದರೆ ಅನುನಯವಿದೆ ಪ್ರಶ್ನೆಯಲ್ಲಿ.

ಒಂದು ಕ್ಷಣ ಆಕೆ ಆತನನ್ನು ದಿಟ್ಟಿಸಿದಳು. ಮರುಕ್ಷಣ ಆತನ ಸ್ಕೂಟರನ್ನೇರಿ ಹಿಂದಿನ ಸೀಟಿನಲ್ಲಿ ಕುಳಿತಳು.

* * *

ಹಲವಾರು ಸಂದರ್ಭಗಳಲ್ಲಿ ಹಲವಾರು ಗಂಡಸರು ಈ ಹಿಂದೆಯೂ ಆಕೆಯನ್ನು ಕೇಳಿದ್ದಿತ್ತು, 'ಬರುತ್ತೀರಾ ?' ಎಂದು —ಆಕೆ ಆಫೀಸಿಗೆ ಹೊಸದಾಗಿ ಕ್ಲಾರ್ಕ್ ಆಗಿ ಸೇರಿದ್ದಾಗ ; ನಂತರ ಹಲವಾರು ಪರೀಕ್ಷೆಗಳನ್ನು ಪಾಸುಮಾಡಿ ಆಕೆ ಆಫೀಸರ್ ಆದಾಗ, ಜೊತೆಯಲ್ಲಿ ಕೆಲಸ ಮಾಡುವವರು, ಮೇಲಿನವರು, ಬಂದು ಹೋಗುವವರು ; ಆಫೀಸಿನಲ್ಲಿ, ದಾರಿಯಲ್ಲಿ, ಪಾರ್ಟಿಗಳಲ್ಲಿ ; ಆಕೆಗೆ ಎಂದೂ ಯಾರೊಂದಿಗೂ ಹೋಗಬೇಕು ಅನ್ನಿಸಿರಲೇ ಇಲ್ಲ. ವಿಶಾಲ ಮುಂಬಯಿಯಲ್ಲಿ ಆಕೆ ಎಲ್ಲ ರೀತಿಯಿಂದಲೂ ಒಂಟಿಯಾಗಿಯೇ ಈ ಎಲ್ಲ ವರ್ಷ ಕಳೆದಿದ್ದಳು.

ಆಗ ಬಂದಿದ್ದ ಆತ ಆಕೆಯ ಜೀವನದಲ್ಲಿ. ನಂತರ ಈ ಹತ್ತು ವರ್ಷಗಳಲ್ಲಿ ಆಕೆಯೆಂದೂ ಒಂಟಿಯಾಗಿರಲೇ ಇಲ್ಲ. ಆತ ಯಾವಾಗಲೂ ಆಕೆಯ ಜೊತೆಗಿರುತ್ತಿದ್ದ. ರೂಮಿನಲ್ಲಿ, ದಾರಿಯಲ್ಲಿ, ಪೇಟೆಯಲ್ಲಿ, ಸಿನಿಮಾಗಳಲ್ಲಿ, ಹೋಟೆಲುಗಳಲ್ಲಿ, ಸಮುದ್ರತೀರದಲ್ಲಿ, ಮೀಟಿಂಗುಗಳಲ್ಲಿ, ಆಫೀಸ್ ಟೂರುಗಳಲ್ಲಿ, ಅಲ್ಲಿ-ಇಲ್ಲಿ-ಎಲ್ಲೆಲ್ಲೂ ಆತ-ಆಕೆ ಜೊತೆ-ಜೊತೆಯಾಗಿ ದಿನಗಳನ್ನು ವರ್ಷಗಳನ್ನು ಕಳೆದಿದ್ದರು.

ಆತನ ಟ್ರೇನಿಂಗಿನ ಅವಧಿ ಒಂದು ವರ್ಷದ್ದಾಗಿತ್ತು. ನಂತರ ಆಕೆಗಾಗಿಯೇ ಆತ ಮುಂಬಯಿಯ ಬ್ರ್ಯಾಂಚ್ ಆಫೀಸಿಗೇ ಕಷ್ಟಪಟ್ಟು ವರ್ಗಮಾಡಿಸಿಕೊಂಡಿದ್ದ. ನಂತರ ಅವರ ಸಹಜೀವನ ಕ್ರಮಬದ್ಧವಾಗಿ ಸಾಗಿಬಂದಿತ್ತು. ಮೊದಮೊದಲು ವರ್ಷಕ್ಕೊಮ್ಮೆಯೋ ಎರಡು ಬಾರಿಯೋ ಆತ ತನ್ನ ಬಂಧುಗಳನ್ನು ಕಾಣಲು ದಿಲ್ಲಿಗೆ ನಾಲ್ಕಾರು ದಿನಗಳ ಮಟ್ಟಿಗೆ ಹೋಗಿ ಬರುತ್ತಿದ್ದ. ಆಗ ಆಕೆಯೂ ತನ್ನೂರಿಗೆ ಹೋಗಿ ಯಥಾಪ್ರಕಾರ ಬಂಧು ಬಾಂಧವರಿಂದ ಈ ಬಗೆಯ ಜೀವನಕ್ಕಾಗಿ ಬೈಯಿಸಿಕೊಂಡು ಉಪದೇಶ ಹೇಳಿಸಿಕೊಂಡು ಬೇಸತ್ತು ತಿರುಗಿ ಬರುತ್ತಿದ್ದಳು. ಮುಂದೆ ಹಾಗೆ ಹೋಗುವುದನ್ನು ಇಬ್ಬರೂ ಬಿಟ್ಟುಬಿಟ್ಟರು. ಅದರ ಬದಲು ರಜೆ ಪಡೆದು ವಿಶ್ರಾಂತಿ ಧಾಮಗಳಿಗೆ ವಿಹಾರ ಸ್ಥಳಗಳಿಗೆ ಹೋಗುವ ಪರಿಪಾಠ ಹಾಕಿಕೊಂಡರು. ಪರಸ್ಪರರ ಸಹವಾಸದಲ್ಲಿ ಸಂಪೂರ್ಣ ಸಂತೃಪ್ತಿ-ಸಮಾಧಾನ ಹೊಂದಿದ್ದ ಅವರಿಬ್ಬರಿಗೂ

ಏನೇನೂ ಬಂಧನವಿಲ್ಲದ ಈ ಮುಕ್ತ ಜೀವನ ತುಂಬ ಒಗ್ಗಿಬಿಟ್ಟಿತ್ತು. ಅವರಿಬ್ಬರ ಸಂಬಂಧದಲ್ಲಿ ಯಾವುದೇ ರೀತಿಯ ಬೇಡಿಕೆಗಳಿರಲಿಲ್ಲ. ನಿರಾಕರಣೆಯೂ ಇರಲಿಲ್ಲ ; ಅವಶ್ಯಕತೆಯಿರಲಿಲ್ಲ, ಕೊರತೆಯೂ ಇರಲಿಲ್ಲ ; ನಿರೀಕ್ಷೆಯಿರಲಿಲ್ಲ, ನಿರಾಶೆಯೂ ಇರಲಿಲ್ಲ.

ಒಬ್ಬರಿನ್ನೊಬ್ಬರಿಗಾಗಿ ಹೇಳಿ ಮಾಡಿಸಿದ ಜೋಡಿಯಾಗಿದ್ದರು ಆತ-ಆಕೆ.

ಸಹಜವಾಗಿಯೆ ಜನ ಮಾತಾಡಿದರು. ಆದರೆ ಎಷ್ಟು ದಿನ ಮಾತಾಡುತ್ತಾರೆ ? ಕೊನೆಗೆ ಸುಮ್ಮನಾಗಿಬಿಟ್ಟರು. ಜನರ ಮಾತುಗಳನ್ನು ಅವರಿಬ್ಬರೂ ಎಂದೂ ತಲೆಯಲ್ಲಿ ಹಾಕಿಕೊಂಡವರಲ್ಲ, ಮನಸ್ಸಿನಲ್ಲಿ ಹಚ್ಚಿಕೊಂಡವರಲ್ಲ.

* * *

ಹೀಗೆ ಹತ್ತು ವರ್ಷಗಳು ಜೊತೆಯಾಗಿ ಚಿಂತೆಯಿಲ್ಲದೆ ಒಂದು ರೀತಿ ಸುಖವಾಗಿ ಕಳೆದ ನಂತರ ಈಗ ಕೆಲ ದಿನಗಳ ಹಿಂದೆ ಆಕೆಗೆ ಅಸ್ವಾಸ್ಥ್ಯವಾಯಿತು. ಸುಸ್ತು, ಸಂಕಟ. ಹಲವಾರು ಬಾರಿ ಗುರುತಿನ ಲೇಡಿ ಡಾಕ್ಟರರ ಕಡೆ ಆಕೆ ಎಡತಾಕಬೇಕಾಯಿತು. ಆಮೇಲೊಮ್ಮೆ ಡಾಕ್ಟರು ಆಕೆಗೆ ಮೆಲುದನಿಯಲ್ಲಿ ಹೇಳಿದರು, "ನೀವು ಬಸಿರಿ, ಎರಡು ತಿಂಗಳಾಗಿ ಹೋಗಿದೆ."

"ಹೌದೆ ?" ಎಂದಷ್ಟೆ ಅಂದ ಆಕೆ ಮುಂದೆ ಮಾತಾಡಲಾರದೆ ಹೋದಳು. ದಿಗ್ಭ್ರಮೆ, ಆಶ್ಚರ್ಯ, ಒಂದು ತರದ ಭಯ, ಎಲ್ಲಕ್ಕೂ ಮಿಗಿಲಾಗಿ ಏನೋ ಸಂಭ್ರಮ. ಯಾವ ಸಾಮಾನ್ಯ ಭಾವನೆಗಳು ತನ್ನಲ್ಲಿ ಇಲ್ಲವೆಂದು ಈವರೆಗೂ ನಂಬಿದ್ದಳೋ ಅಂಥ ಎಲ್ಲ ವಿವಿಧ ನಮೂನೆಯ ಅನಿಸಿಕೆಗಳು.

ಸಂದರ್ಭದ ಅರಿವಿದ್ದ ಲೇಡಿಡಾಕ್ಟರು "ಮತ್ತೊಮ್ಮೆ ನಿಧಾನವಾಗಿ ಯೋಚಿಸಿ ಬನ್ನಿರಿ, ನೋಡುವಾ" ಅಂತ ಬೆನ್ನು ತಟ್ಟಿ ಬೀಳ್ಕೊಟ್ಟಿದ್ದರು.

ಆಕೆ ಮನೆಗೆ ಬಂದಳು. ಹತ್ತು ವರ್ಷಗಳ ಜೊತೆಬಾಳ್ವೆಯಲ್ಲಿ ಮೊದಲಸಲ ಆಕೆಗೆ ತಾನು ಆತ ಮನೆಗೆ ಹಿಂತಿರುಗುವ ದಾರಿ ಕಾಯುತ್ತಿದ್ದುದು ಗಮನಕ್ಕೆ ಬಂದಿತು. ವಿಧಿವತ್ತಾಗಿ ಲಗ್ನವಾದ ಹೆಂಡತಿ ಮೊದಲ ಸಲ ಬಸುರಿಯಾದಾಗ ಅವಳ ಭಾವನೆಗಳೇನಿರಬಹುದು, ನಾಚುತ್ತ ಅವಳು ಸುದ್ದಿ ತಿಳಿಸಿದಾಗ ಅವಳ ಗಂಡನ ಪ್ರತಿಕ್ರಿಯೆ ಹೇಗಿರಬಹುದು, ಮುಂದೆ ಇಬ್ಬರೂ ಸೇರಿ ಹುಟ್ಟಲಿರುವ ಮಗುವಿನ ಬಗೆಗೆ ಏನೇನು ಮಾತಾಡಿಕೊಳ್ಳಬಹುದು, ಅಂತ ಕಲ್ಪಿಸಲು ಆಕೆ ವ್ಯರ್ಥ ಹೆಣಗಾಡಿದಳು. ಛಿ, ಇದೇನು ಸೆಂಟಿಮೆಂಟಲ್, ಅಂದುಕೊಂಡು ಎಂದಿನಂತೆ ನಿರ್ಭಾವ ಸ್ಥಿತಿಯಲ್ಲಿರಲು ಪ್ರಯತ್ನಿಸಿದಳು.

ಅಂದು ರಾತ್ರಿ ಆತ ತಡವಾಗಿ ಮನೆಗೆ ಬಂದ. "ದಿಲ್ಲಿಯಿಂದ ಟ್ರಂಕ್‌ಕಾಲ್

ಬಂದಿತ್ತು. ನನ್ನ ತಾಯಿಗೆ ಸೀರಿಯಸ್ ಅಂತೆ'' ಅಂದ. ಇಬ್ಬರೂ ಊಟ ಮಾಡಿದರು. ಊಟದ ಟೇಬಲ್ ಸ್ವಚ್ಛ ಮಾಡಿದರು. ಒಂದೆರಡು ಡಿಶ್‌ಗಳನ್ನು ತೊಳೆದಿಟ್ಟರು. ಎಲ್ಲ ಎಂದಿನಂತೆ ಜೊತೆಯಾಗಿಯೆ ಮಾಡಿದರು. ಈ ಎಲ್ಲ ಕ್ರಿಯೆ ನಡೆದಾಗ ಆಕೆಯ ಮನಸ್ಸು ತುಡಿದುಕೊಳ್ಳುತ್ತಿತ್ತು. ಹತ್ತಿಕ್ಕಲು ಪ್ರಯತ್ನಿಸಿದಷ್ಟೂ ಹೆಚ್ಚು ಜೋರಾಗಿ ಡವಡವಿಸುತ್ತಿತ್ತು. ದೀರ್ಘಕಾಲದ ಜೊತೆಗಾರ ಅದನ್ನು ಗಮನಿಸಲಿಲ್ಲವೆಂದು ಆಕೆಗೆ ಸಿಟ್ಟೂ ಬಂದಿತು. ಮರುಕ್ಷಣ ತಾನು ಆತನಿಂದ ಹಾಗೆಲ್ಲ ನಿರೀಕ್ಷಿಸಿದ್ದಕ್ಕಾಗಿ, ನಿರೀಕ್ಷಿಸಿದ್ದು ದೊರೆಯದೆ ಸಿಟ್ಟುಕೊಂಡದ್ದಕ್ಕಾಗಿ ಆಕೆಗೆ ನಾಚಿಕೆಯಾಯಿತು. ಇಂದೇನು ಇಷ್ಟು ಬಾಲಿಶಳಾಗುತ್ತಿದ್ದೇನಲ್ಲ, ತಪ್ಪಲ್ಲವೆ, ಅನಿಸಿತು.

ಹಾಸಿಗೆ ಸೇರಿದಾಗ ಮಾತ್ರ ಆತ ಅವಳನ್ನು ಒಂದು ಕ್ಷಣ ಗಮನಿಸಿ ಕೇಳಿದ, ''ಏನು, ಬಹಳ ಆಯಾಸವೆ ?''

''ಇಲ್ಲ, ಹಾಗೇನಿಲ್ಲ'' ಅಂದಳು ಆಕೆ.

ಮುಂದಿನದು ರೂಢಿಗತ ಕ್ರಿಯೆ. ಎಂದಿನಂತೆಯೆ.

ನಂತರ ಮಲಗಲೆಂದು ಆತ ಹೊದಿಕೆ ಎಳೆದುಕೊಂಡಾಗ ಆಕೆ ನಿಧಾನವಾಗಿ ಹೇಳಿದಳು, ''ಇವತ್ತು ಡಾಕ್ಟರು ಹೇಳಿದರು, ನಾನು ತಾಯಿಯಾಗಲಿದ್ದೇನೆ ಅಂತ.''

'ನೀನು ತಂದೆಯಾಗಲಿದ್ದೀ' ಅನ್ನಲಿಲ್ಲ ಆಕೆ.

''ಏನು, ಏನಾಗಲಿದ್ದೀಯಂತೆ ?'' ನಂಬದವನಂತೆ ಕೇಳಿದ ಆತ. ಆತನಿಗೆ ಆಶ್ಚರ್ಯವಾದುದು ಸಹಜ. 'ಗಂಡ', 'ಹೆಂಡತಿ', 'ತಾಯಿ', 'ತಂದೆ', 'ಮಕ್ಕಳು' ಈ ತರದ ನಿರರ್ಥಕ ಸಂಬಂಧಸೂಚಕ ಶಬ್ದಗಳನ್ನು ಅವರಿಬ್ಬರೂ ಎಂದೂ ಬಳಸಿರಲಿಲ್ಲ. ತಿದ್ದಿಕೊಳ್ಳುತ್ತ ಆಕೆ ಅಂದಳು, ''ನಾನು ಬಸಿರಿಯಂತೆ.''

''ಓಹ್'' ಅಂದ ಆತ. ಎಂದಿನ ನಿರ್ಭಾವ ಧ್ವನಿ. ಆತನ ಮನಸ್ಥಿತಿ ಹೇಗಿರಬಹುದೆಂದು ಊಹಿಸುವ ಗೊಡವೆಗೆ ಹೋಗದೆ ಆಕೆ ತನಗೇ ಅರಿವಾಗದ ಹಾಗೆ ತನ್ನಲ್ಲಿ ಮೂಡುತ್ತಲಿದ್ದ ಏನೇನೋ ಭಾವಗಳನ್ನು ಮೌನವಾಗಿ ಆಸ್ವಾದಿಸುತ್ತಲೆಂಬಂತೆ ಮಲಗಿದ್ದಳು.

ಮಲಗುವ ಮುನ್ನ ಆತ ಒಂದು ಮಾತು ಹೇಳಿದ, ''ನಾನು ನಾಳೆ ದಿಲ್ಲಿಗೆ ಹೋಗಬೇಕಲ್ಲ.''

''ಹೋಗಲ್ಲ'' ಅಂದಳಾಕೆ ಸ್ವಸ್ಥವಾಗಿ.

ಆಕೆಯ ಕರ್ತೃತ್ವ ಶಕ್ತಿಯಲ್ಲಿ ಪೂರ್ಣ ನಂಬಿಕೆಯಿದ್ದ ಆತ ನಿಶ್ಚಿಂತೆಯಿಂದ ನಿದ್ರಿಸಿದ. ಅಷ್ಟೇ ನಿಶ್ಚಿಂತೆಯಿಂದ ಮರುದಿನ ದಿಲ್ಲಿಗೂ ಹೊರಟು ಹೋದ. ಹದಿನೈದು ದಿನಗಳ ನಂತರ ತಿರುಗಿ ಬಂದು ''ಎಲ್ಲ ಸರಿ ಆಯಿತೆ ?'' ಅಂತ ಕೇಳಿದ. ಆಕೆ

ಸುಮ್ಮನಿದ್ದಳು. ಆಗ ಮೊದಲ ಬಾರಿಗೆ ಆತನ ನಿಶ್ಚಿಂತೆ ಹಾರಿ ಕಳವಳ ಮೂಡಿತು : “ಏನಿದು ? ಯಾಕೆ ಡಾಕ್ಟರ ಕಡೆ ಹೋಗಿ ಕ್ಲಿಯರ್ ಮಾಡಿಸಿಕೊಂಡು ಬರಲಿಲ್ಲ ?”

“ಹಾಗೆ ಮಾಡಬೇಕು ಅನ್ನಿಸಲಿಲ್ಲ, ಅದಕ್ಕೆ.”

ಒಂದು ಕ್ಷಣ ದಿಗ್ಭ್ರಮೆಗೊಂಡರೂ ಮರುಕ್ಷಣ ಸಾವರಿಸಿಕೊಂಡು ನಗುತ್ತ ಆತನೆಂದ, “ಓಹೋ, ನಾನು ಬರಲಿ ಅಂತ ಕಾಯ್ದಿದ್ದೆಯಾ ? ಸರಿ. ಇವತ್ತು ಸಂಜೆ ಹೋಗೋಣ.” –ಆಕೆ ಸುಮ್ಮನಿದ್ದಳು. ಸಂಜೆಯಾದಾಗ ಆತನೊಂದಿಗೆ ಡಾಕ್ಟರಲ್ಲಿಗೆ ಹೋಗಿ ಖಾಲಿಯಾಗಿಬರಲು ಒಲ್ಲೆ ಅಂದಳು. ಅಲ್ಲಿಂದ ಸುರುವಾಯಿತು ಭಿನ್ನಾಭಿಪ್ರಾಯ ; ವಾದ ; ಚರ್ಚೆ ; ವೈಮನಸ್ಯ ; ಮನಸ್ತಾಪ.

“ಇದೆಂತಹ ಹುಚ್ಚು ನಿನಗೆ ? ಮಗು ಹಡೆಯುತ್ತೀಯಾ ? ಏನು ಮಾಡುವುದು ಮಗು ತೆಗೆದುಕೊಂಡು ? ನಮ್ಮ ಎಲ್ಲ ಸ್ವಾತಂತ್ರ್ಯವೇ ಖಲಾಸ್ ಆಗುವುದಿಲ್ಲವೆ ? ಇಷ್ಟಕ್ಕೂ.... ಇಷ್ಟಕ್ಕೂ....” ಆತ ಅನುಮಾನಿಸಿದ.

“ಏನು ಇಷ್ಟಕ್ಕೂ ?” ಆಕೆ ಬಿರುಸಾಗಿ ಕೇಳಿದಳು.

“ಮಗು ಹೆರಲು ನಮಗೆ ಅಧಿಕಾರವಿಲ್ಲ. ಕಾನೂನು ಪ್ರಕಾರ ನಾವು ಗಂಡ ಹೆಂಡತಿ ಅಲ್ಲವಲ್ಲ. ನಿನಗಿಷ್ಟೂ ತಿಳಿಯಬಾರದೆ ?” ಇಷ್ಟು ಹೇಳಲು ಆತನಿಗೆ ತುಂಬ ಮುಜುಗರವಾಯಿತು.

ಆಕೆ ನಕ್ಕಳು. “ನೀನೂ ಸಹ ಕಾನೂನಿನ ಬಗ್ಗೆ ಮಾತಾಡುತ್ತೀಯಲ್ಲ ಸಾಮಾನ್ಯ ಮಂದಿಯ ಹಾಗೆ ! ಮಗು ಹೆರುವುದು ಹೆಂಗಸಿನ ಜನ್ಮಸಿದ್ಧ ಹಕ್ಕು. ಇದು ನನ್ನ ಮರ್ಜಿ. ನಿನ್ನ ಸಲಹೆ ಅನವಶ್ಯ”.

“ಅಂದರೆ ನಾನು ನಿನ್ನನ್ನ ಮದುವೆಯಾಗಬೇಕು ಅಂತ ಒತ್ತಾಯಿಸುವ ರೀತಿಯೋ ಇದು ?” ಕಂಗೆಟ್ಟು ಕೇಳಿದ ಆತ.

“ಛೀ....” ಆಕೆಗೀಗ ನಿಜವಾಗಿ ಸಿಟ್ಟು ಬರತೊಡಗಿತ್ತು. ಎಂತಹ ಆಪಾದನೆ ಮಾಡುತ್ತಿದ್ದಾನೆ. ಕಷ್ಟಗಳು ಬಂದಾಗ ಮನುಷ್ಯನಿಗೆ ಈ ಪರಿ ಬುದ್ಧಿ ವಿಕಲ್ಪವಾಗುವುದುಂಟೇ ? ತನ್ನ ಬಗೆಗೆ ಈತ ತಪ್ಪು ತಿಳಿದುಕೊಳ್ಳುವುದಕ್ಕೂ ಒಂದು ಮಿತಿ ಬೇಡವೆ ? ತನ್ನನ್ನು ನಿಯಂತ್ರಿಸಿಕೊಳ್ಳುತ್ತ ಶಾಂತವಾಗಿಯೆ ಆಕೆ ಹೇಳಿದಳು,

“ಇಲ್ಲ, ನಾನೆಂದೂ ನಿನ್ನನ್ನು ಯಾತಕ್ಕಾಗಿಯೂ ಒತ್ತಾಯಿಸಿಲ್ಲ. ಈಗಲೂ ಮುಂದೆಯೂ ಎಂದಿಗೂ ಒತ್ತಾಯಿಸುವುದಿಲ್ಲ.”

“ಮತ್ತೆ ? ಏನು ನಿನ್ನ ಈ ಪರಿಯ ಅರ್ಥ ?”

“ಏನಿಲ್ಲ, ಬಹಳ ಸಿಂಪಲ್. ನನ್ನ ಹೊಟ್ಟೆಯಲ್ಲೊಂದು ಮಗು ರೂಪ ತಳೆಯುತ್ತಿದೆ. ನನಗದು ಜೀವಸಹಿತವಾಗಿಬೇಕು. ಇಷ್ಟೆ.”

‘‘ಮಗುವಿನ ತಾಯಿಯಾಗಬೇಕಾದರೆ ಮೊದಲು ನೀನು ಮದುವೆಯಾಗಬೇಕಿಲ್ಲವೆ ?’’

‘‘ಛೆ, ಅದಕ್ಕೂ-ಇದಕ್ಕೂ ಏನು ಸಂಬಂಧ ?’’

‘‘ಅಂದರೆ.... ಅಂದರೆ ನೀನು ಅವಿವಾಹಿತ ತಾಯಿ ಆಗಬೇಕೆನ್ನುವಿಯಾ ?’’.... ಆತನ ಧ್ವನಿಯಲ್ಲೀಗ ಕ್ಷೋಭೆಯಿತ್ತು. ಚೀತ್ಕಾರವಿತ್ತು.

ಹತ್ತು ವರ್ಷ ಜೊತೆಯಲ್ಲಿ ಕಳೆದ ಮನುಷ್ಯ. ಎಲ್ಲ ಸಾಮಾನ್ಯರಿಗಿಂತ ಬೇರೆಯಾಗಿ ತೋರಿ ತನ್ನನ್ನು ಆಕರ್ಷಿಸಿದ್ದ ಮನುಷ್ಯ. ಎಲ್ಲ ಲಕ್ಷ್ಮಣರೇಖೆಗಳಾಚೆ, ಎಲ್ಲ ರೀತಿ ರಿವಾಜುಗಳಾಚೆ, ಎಲ್ಲ ಬಂಧನ-ನಿಯಮಗಳಾಚೆ ಬಂದು ತನ್ನೊಂದಿಗೆ ಬದುಕು ಸವೆಸಿದ್ದ ಮನುಷ್ಯ. ಇವನು ಇಷ್ಟು ಸಾಮಾನ್ಯ ಸ್ತರದಲ್ಲಿ ಯೋಚಿಸಬಹುದೆಂದು ಯಾರಿಗೆ ಗೊತ್ತಿತ್ತು ?

ವಾದ-ವಿವಾದದಿಂದ ಬೇಸತ್ತಿದ್ದ ಆಕೆ ನಿರ್ಧಾರದ ಧ್ವನಿಯಲ್ಲಿ ಹೇಳಿದಳು, ‘‘ನೋಡು, ನಾನು ತಾಯಿಯಾಗಬೇಕು ಅಂದುಕೊಂಡಿದ್ದೇನೆ. ಆಗಬಹುದೇ ಅಂತ ನಿನ್ನನ್ನು ಕೇಳುತ್ತಿಲ್ಲ. ಆದ್ದರಿಂದ ನೀನು ಏನೂ ಉಪದೇಶ - ಮಾರ್ಗದರ್ಶನ - ಸಲಹೆ ಕೊಡಬೇಡ. ನಾನು ಬರೀ ‘ತಾಯಿ’ಯಾಗಬೇಕು ಅನ್ನುತ್ತಿದ್ದೇನೆ. ಇದಕ್ಕೆ ಯಾವ ವಿಶೇಷಣವನ್ನೂ ಹಚ್ಚಬೇಡ,’’

‘‘ಏನು ಹಾಗಂದರೆ ? ಜನರು-ಜನರು ಏನಂದಾರು ?’’

‘‘ಜನರು ?’’ —ಆಕೆಗೆ ಮೊದಲ ಬಾರಿಗೆ ಆತನ ಬಗ್ಗೆ ತೀವ್ರ ತಿರಸ್ಕಾರ ಉಂಟಾಯಿತು.

ಆತನಿಗೂ ತನ್ನ ತಪ್ಪಿನ ಅರಿವಾಗಿರಬೇಕು. ಬೇರೆ ಯಾವಳಾದರೂ ಆಗಿದ್ದರೆ ಹತ್ತೆಂಟು ಪ್ರಶ್ನೆ ಕೇಳುತ್ತಿದ್ದಳೇನೋ —ಇಷ್ಟು ದಿನ ‘ಜನರು’ ಇರಲಿಲ್ಲವೆ ? ಈಗ ಎಲ್ಲಿಂದ ಬಂದರು ‘ಜನರು’ ? —ಇತ್ಯಾದಿ. ಆದರೆ ಆಕೆ ಸುಮ್ಮನಿದ್ದಳು. ಹೀಗಾಗಿ ಆಕೆಯೆದುರು ತಾನು ಸಣ್ಣವನಾದೆ ಅನ್ನಿಸಿತು ಆತನಿಗೆ. ಸಮಜಾಯಿಷಿ ಕೊಡುವ ಧ್ವನಿಯಲ್ಲಿ ಆತ ಮಾತನಾಡಿದ : ‘‘ನೋಡು, ಜನರಿಗೆ ನಾನು ಅಂಜುತ್ತೇನೆ ಅಂತಲ್ಲ. ಆದರೆ ಎಲ್ಲಕ್ಕೂ ಒಂದು ಮಿತಿ ಇರಬೇಕು—ನಿರ್ಭಯತೆಗೂ. ಈಗಿರುವ ಹಾಗೆ ನಾವು ಸುಖವಾಗಿದ್ದೇವೆ. ಯಾಕೆ ಸುಮ್ಮನೆ ಈ ಇಲ್ಲದ ಜಂಜಡ ? ತಲೆನೋವು ?’’

‘‘ನಾನು ಹೇಳಿದೆನಲ್ಲ, ನೀನು ಈ ತಲೆನೋವು ಹಚ್ಚಿಕೊಳ್ಳಬೇಕಾಗಿಲ್ಲ. ನೋವು-ನಲಿವು ಏನಿದ್ದರೂ ಪೂರ್ಣವಾಗಿ ಇದು ನನ್ನದೇ. ನೀನು ನಿರಂಬಳವಾಗಿರು.’’

‘‘ಆದರೆ ಹಗಲು-ರಾತ್ರಿ ನಿನ್ನ ಕೂಡ ಇದ್ದು ಒಂದೇ ಆಫೀಸಿನಲ್ಲಿ ಕೆಲಸ ಮಾಡುತ್ತ ನಾನು ನಿರಂಬಳವಾಗಿರಲು, indifferent ಆಗಿರಲು ಹೇಗೆ ಸಾಧ್ಯ ?

ನಾನೂ ಮನುಷ್ಯನಲ್ಲವೆ ?''

''ಹೌದೆ ? ಹಾಗಾದರೆ ನನ್ನ ಹತ್ತಿರ ಇರಬೇಡ. ತಿರುಗಿ ದಿಲ್ಲಿಗೇ ವರ್ಗ ಮಾಡಿಸಿಕೋ. ಹೇಗೂ ನಿನ್ನ ತಾಯಿಯ ಕೊನೆಗಾಲದಲ್ಲಿ ಹತ್ತಿರ ಇದ್ದಂತಾಗುತ್ತದೆ. ನನ್ನ ಚಿಂತೆ ನಿನಗೆ ಬೇಡ.''

''ಎಷ್ಟು ಸುಲಭವಾಗಿ ಹೇಳುತ್ತೀಯಲ್ಲ ! ನನ್ನ ಸಲುವಾಗಿ ನಿನಗೆ ಏನೂ ಅನ್ನಿಸುವುದೇ ಇಲ್ಲವೆ ? ....ಹಾಗಿದ್ದರೆ ಸರಿ. ನಿನ್ನ ತಲೆಯಲ್ಲಿ ಹೊಕ್ಕಿರುವ ಈ ಮಗುವಿನ ಹುಚ್ಚು ನನಗೆ ವಿಪರೀತವಾಗಿ ಕಾಣುತ್ತದೆ. ಲಗ್ನವಾಗದೆ ತಾಯಿಯಾಗಬೇಕೆನ್ನುವ ನಿನ್ನ ನಿರ್ಧಾರಕ್ಕೆ ಏನನ್ನಬೇಕೋ ತಿಳಿಯದು. ನನಗೆ ಮಾತ್ರ ಇದು ಅತಿಯಾಯಿತು. ನಾನು ನಿಜವಾಗಿಯೂ ಹೊರಟುಹೋದರೆ ನನ್ನನ್ನು ದೂಷಿಸಬೇಡ.''

''ಖಂಡಿತ ಇಲ್ಲ'' –ಆಕೆ ಪ್ರಾಮಾಣಿಕವಾಗಿಯೆ ಹೇಳಿದಳು. ನಿಜ ಹೇಳಬೇಕೆಂದರೆ ಆತನ ನಡತೆಯ ಸರಿತಪ್ಪುಗಳ ಬಗ್ಗೆ ವಿಚಾರಿಸುವ ವ್ಯವಧಾನವೇ ಆಕೆಗೆ ಉಳಿದಿರಲಿಲ್ಲ. ಆಕೆಯ ಮನಸ್ಸನ್ನೆಲ್ಲಾ ಆವರಿಸಿದ್ದ ವಿಚಾರವೇ ಬೇರೆಯಾಗಿತ್ತು. ಆ ವಿಚಾರದಿಂದ ಆಕೆಗೊಂದು ಬಗೆಯ ಅಮಲೇರಿದಂತಾಗಿತ್ತು.

ಹಾಗೆ ಆತ ಹೊರಟು ಹೋಗಿದ್ದ.

* * *

ಆತ ಹೊರಟುಹೋದ ಮೊದಲಲ್ಲಿ ಆಕೆಗೆ ನಿಜವಾಗಿಯೂ ಆತನ ಅನುಪಸ್ಥಿತಿ ಭಾರವೆನಿಸುತ್ತಿತ್ತು. ಊಟ ಮಾಡುವಾಗ, ಆಫೀಸಿಗೆ ಹೊರಡುವಾಗ, ತಿರುಗಾಡಲು ಹೊರಟಾಗ, ಮಲಗುವಾಗಲಂತೂ ಸರಿಯೆ, ತುಂಬ ಬೇಸರವೆನಿಸುತ್ತಿತ್ತು. ಆದರೆ ದಿನಗಳೆದ ಹಾಗೆ ಈ ಎಲ್ಲ ಚಿಲ್ಲರೆ ಚಿಂತೆಗಳನ್ನು ಮರೆಸಿಬಿಡುವಂತಹ ಅಪೂರ್ವ ಅನುಭೂತಿಯೊಂದು ಅವಳಲ್ಲಿ ಉತ್ಪನ್ನವಾಗತೊಡಗಿತು. ಪೂರ್ಣವಾಗಿ ತನ್ನದೇ ಆದ ಜೀವವೊಂದು ಹೊಟ್ಟೆಯಲ್ಲಿ ಮೈದಳೆಯುತ್ತಿರುವಾಗ, ಅದು ಮಿಸುಕಾಡುತ್ತಿರುವಾಗ, ಇದೆಂತಹ ಆಶ್ಚರ್ಯಕಾರಕ ಸಂವೇದನೆ ! ಇಷ್ಟು ವರ್ಷ ತಾನು ಒಬ್ಬಳೇ ಇದ್ದೆ ; ಹೌದು, ಆತ ಜೊತೆಗೇ ಇದ್ದಾಗಲೂ ತಾನು ಒಬ್ಬಳೇ ಇದ್ದೆ. ಆದರೆ ಈಗ ಹಾಗಲ್ಲ. ತನ್ನೊಂದಿಗೆ ನಿಜವಾದ ಅರ್ಥದಲ್ಲಿ ತನ್ನದೇ ಆದ ಮನುಷ್ಯ ಜೀವವೊಂದಿದೆ. ನಾಳೆ ಅದು ಹುಟ್ಟಿದಾಗ ತನ್ನನ್ನೇ ಪೂರ್ಣವಾಗಿ ಅವಲಂಬಿಸುತ್ತದೆ. 'ಅಮ್ಮಾ' ಅಂತ ತನ್ನನ್ನು ಕರೆಯುತ್ತದೆ. ಓಡಿ ಬಂದು ಕೊರಳಿಗೆ ನೇತು ಬೀಳುತ್ತದೆ. ನಿಷ್ಕಲ್ಮಷ ಮನಸ್ಸಿನಿಂದ, ಪ್ರತಿಫಲಾಪೇಕ್ಷೆಯಿಲ್ಲದೆ, ಪರಿಪೂರ್ಣ ಸಮರ್ಪಣಾಭಾವದಿಂದ ತನ್ನನ್ನು ಪ್ರೀತಿಸುತ್ತದೆ.... ಪ್ರೀತಿಸುತ್ತದೆ !!

ಪ್ರೀತಿಯ ಕಲ್ಪನಾ ಮಾತ್ರದಿಂದ ಆಕೆಯ ಕಣ್ಣುಗಳು ಬಹಳ ವರ್ಷಗಳ ನಂತರ ಮೊದಲ ಬಾರಿಗೆ ಒಮ್ಮೆಲೆ ತುಂಬಿ ಬಂದವು.

ತಾಯಿಯಾಗುತ್ತಿರುವಾಗ ಪ್ರತಿಯೊಬ್ಬ ಹೆಂಗಸಿಗೂ ಹೀಗೆಯೇ ಅನ್ನಿಸುತ್ತದೆಯೇ ? ತಾಯಿ-ಮಗುವಿನ ಪ್ರೀತಿಯೇ ನಿಜವಾದ ಪ್ರೀತಿ, ಈ ಸಂಬಂಧವೊಂದೇ ನಿಜವಾದ ಸಂಬಂಧ, ಉಳಿದದ್ದೆಲ್ಲಾ ಸುಳ್ಳು– ಎಲ್ಲಾ ಪೊಳ್ಳು –ವ್ಯರ್ಥ –ಹೀಗೆನಿಸುತ್ತದೆಯೆ ? ಇಷ್ಟೊಂದು ಸಂತೃಪ್ತಿಯ ಭಾವವನ್ನು ತನ್ನಲ್ಲಿ ಉಂಟು ಮಾಡುತ್ತಿರುವ ಈ ಮಗುವಿನ ಹುಟ್ಟು ತಪ್ಪು ಹೇಗಾದೀತು ? ಅಗ್ರಾಹ್ಯ ಹೇಗಾದೀತು ? ಪಾಪ ಹೇಗಾದೀತು ? –ಎಂದಿಗೂ ಹಾಗಾಗಲು ಶಕ್ಯವಿಲ್ಲ. ಜೀವನದಲ್ಲಿ ಮೊದಲ ಬಾರಿಗೆ ಸತ್ಯ-ಶಿವ-ಸೌಂದರ್ಯದ ಅನುಭವವನ್ನು ತನ್ನಲ್ಲಿ ಉಂಟು ಮಾಡುತ್ತಿರುವ ಈ ಇನ್ನೂ ಹುಟ್ಟಲಾರದ ಮಗು ತನಗೆ ಬೇಕೇಬೇಕು. ಯಾವ ಕಾರಣಕ್ಕಾಗಿಯೂ ತಾನಿದನ್ನು ಕಳೆದುಕೊಳ್ಳಲಾರೆ. ಮಗುವನ್ನು ಪಡೆಯುವ-ಹೊಂದುವ-ಅನುಭವಿಸುವ ಪರಿಕಲ್ಪನೆಯೇ ಎಷ್ಟು ಸುಂದರವಾಗಿದೆ. ತನಗೆ ಈ ಜೀವನದಲ್ಲಿ ನಿಜವಾಗಿಯೂ ಇನ್ನು ಏನೂ-ಏನೂ ಬೇಡ.

–ಏನೂ ಬೇಡ ? ಅಂದರೆ ಆತನೂ ಬೇಡ ? ಚಳಿಯಿದ್ದಾಗ ಬೆಚ್ಚಗಾಗಿಸಿದವನು, ಧಗೆಯಿದ್ದಾಗ ತಂಪೆರೆದವನು, ಜನನಿಬಿಡ ಬೀದಿಗಳಲ್ಲಿ ಕೈಹಿಡಿದು ದಾಟಿಸಿದವನು, ಬಾಯಾರಿದಾಗ ಜೀವರಸ ಸುರಿಸಿದವನು, ಹತ್ತು ವರ್ಷಗಳ ಕಾಲ ಎಡೆಬಿಡದೆ ಸಂಗಾತಿಯಾದವನು.... ?

ನಿಯಮಿತವಾಗಿ ಆತ ಪತ್ರ ಬರೆಯುತ್ತಿದ್ದ : ದಿನ ಬಿಟ್ಟು ದಿನ ತಪ್ಪದೆ ಫೋನ್‌ಕಾಲ್ ಮಾಡುತ್ತಿದ್ದ : ಆಕೆಯನ್ನು ಬಿಟ್ಟಿರುವುದು ತುಂಬ ಕಷ್ಟವಾಗಿದೆ. ತಾಯಿ ಮರಣಶಯ್ಯೆಯಲ್ಲಿದ್ದಾಳೆ. ಸೋದರಮಾವನ ಮಗಳನ್ನು ಮದುವೆಯಾಗಲು ಒತ್ತಾಯಿಸುತ್ತಿದ್ದಾಳೆ. ಜಾತಿ ಬೇರೆ, ಭಾಷೆ ಬೇರೆ, ರೀತಿ-ನೀತಿ ಬೇರೆ, ಅಂಥ ಹುಡುಗಿಯ ನಾದ ಬೇಡ-ಅನ್ನುತ್ತಿದ್ದಾಳೆ. ಮುಂಬಯಿ ಮರೆತು ಬಿಡು-ಅನ್ನುತ್ತಿದ್ದಾಳೆ. ಆದರೆ ಹೇಗೆ ಮರೆಯುವುದು ? –ಇತ್ಯಾದಿ.

* * *

ಮಗು ಹುಟ್ಟಿದಾಗ ಆಕೆ ತುಂಬ ಬಳಲಿದ್ದಳು. ಆದರೂ ಕಣ್ಣು ತೆರೆದು ತನ್ನ ಮಗುವನ್ನು- ತನ್ನ ಸರ್ವಸ್ವವನ್ನು ನೋಡಿದಳು. ಮುದ್ದುಮುದ್ದಾಗಿದ್ದ ಹೆಣ್ಣುಮಗು. ಅದರ ಕಣ್ಣಲ್ಲಿ ವಿಶ್ವರೂಪದರ್ಶನ. ಜೀವನದ ಸಾರ್ಥಕ್ಯವೆಂದರೆ ಇದೇ....

ಮುಂದೊಂದು ವಾರದಲ್ಲಿ ಮತ್ತೆ ಆತನ ಫೋನ್ ಟ್ರಿಣ್‌ಗುಟ್ಟಿತು. ತುಂಬ ಉತ್ಸಾಹದ ದನಿಯಲ್ಲಿ ಆತ ಮಾತನಾಡಿದ : ಆಕೆಗೆ ಸಂತೋಷದ ಸುದ್ದಿ. ಕೊನೆಗೂ

ತಾಯಿ ಆಕೆಯನ್ನು ಲಗ್ನವಾಗಲು ಒಪ್ಪಿಗೆ ಕೊಟ್ಟಿದ್ದಾಳೆ. ಆಕೆಯನ್ನು ಅಗಲಿರುವುದು ತನಗೆ ಅಸಾಧ್ಯ. ಲಗ್ನವಾಗಿಯೇ ಬಿಡೋಣ. ಅಂದರೆ ಮಗುವಿಗೆ ಸಮಾಜದಲ್ಲೊಂದು ಸ್ಥಾನ–

–ಆತನ ಮಾತನ್ನು ಮಧ್ಯದಲ್ಲೇ ತಡೆದು ಕಟ್ಟಿಗೆ ತುಂಡರಿಸಿದಂತೆ ಆಕೆ ನಿಖರವಾಗಿ ಹೇಳಿದಳು : Sorry, ನನಗೀಗ ಯಾರ ಅವಶ್ಯಕತೆಯೂ ಇಲ್ಲ. ಯಾತರ ಅವಶ್ಯಕತೆಯೂ ಇಲ್ಲ. ನನಗೆ ಬೇಕಾದುದೆಲ್ಲಾ ನನಗೆ ಸಿಕ್ಕಿದೆ. ನಿನ್ನ ದಾರಿ ನೀನು ನೋಡಿಕೋ....

(೧೯೮೯)

❖ ❖ ❖

# ಅನಾಥೆ

ಅಂದು ಭಗಿನೀ ಸೇವಾ ಸಮಾಜದ ವಾರ್ಷಿಕೋತ್ಸವ. ಅಂತೆಯೇ ಎಲ್ಲ ಕಡೆ ಹಬ್ಬದ ವಾತಾವರಣ. ಒಂದೇ ಕಾಂಪೌಂಡಿನಲ್ಲಿರುವ ಸಮಾಜದ ಆಫೀಸು, ಹುಡುಗಿಯರ ವಸತಿಯ ಕೋಣೆಗಳು. ಸಣ್ಣದೊಂದು ಹಾಯ್‌ಸ್ಕೂಲು, ಶಿಶುವಿಹಾರ, ಹೊಸದಾಗಿ ಕಟ್ಟಿಸಿದ ಪುಟ್ಟ ಅತಿಥಿಗೃಹ– ಎಲ್ಲ ಕಡೆ ತಳಿರು ತೋರಣ. ಹಾಯ್ ಸ್ಕೂಲಿನ ಹೆಡ್‌ಮಾಸ್ತರ ಶಿವರಾಮರೆಡ್ಡಿ ತನ್ನ ಪೂರ್ಣ ಬೆಳ್ಳಗಾದ ತಲೆಗೆ ಈ ಉತ್ಸವದ ಪ್ರಸಂಗಕ್ಕಾಗಿ ಡಾಯ್ ಮಾಡಿಸಿಕೊಂಡು, ಮಲ್ಲಿನ ಜುಬ್ಬಾ-ಖಾದೀ ಧೋತರ ಉಟ್ಟು ಲವಲವಿಕೆಯಿಂದ ಓಡಾಡುತ್ತಿದ್ದಾನೆ. ಅವನ ಸಹಕಾರಿಯೂ ಸೇವಾ ಸಮಾಜದ ಅನಾಥಾಲಯದ ಮೇಲ್ವಿಚಾರಕಿಯೂ ಆದ ಕಮಲಮ್ಮ ದೇಸಾಯಿ ಹೊಸ ಸಿಲ್ಕ್‌ಸೀರೆ ಉಟ್ಟು, ಅಪ್ಪಣೆಗಳನ್ನು ರವಾನಿಸುತ್ತ ತುಂಬ ಬಿಝಿಯಾಗಿರುವಂತೆ ತೋರುತ್ತಿದ್ದಾಳೆ. ವರ್ಷದಲ್ಲಿ ಒಂದೆರಡು ಬಾರಿ ಮಾತ್ರ ಆಚರಿಸಲ್ಪಡುವ ಇಂಥ ವಿಶೇಷ ಸಂದರ್ಭಗಳಲ್ಲಿ ಮಾತ್ರ ಸಮಾಜಕ್ಕೆ ದರ್ಶನ ಕೊಡುವ ಪರಿಪಾಠವುಳ್ಳ ಭಗಿನೀ ಸೇವಾ ಸಮಾಜದ ಮುಖ್ಯ ಕಾರ್ಯದರ್ಶಿನಿ ಶ್ರೀಮತಿ ಅಂಬುಜಮ್ಮ ಸರದೇಶಪಾಂಡೆ ಇಂದು ಹೊತ್ತಾರೆಯೇ ಎದ್ದು ತನ್ನಷ್ಟೇ ವಿಶಾಲವಾದ ಮರ್ಸಿಡಿಸ್ ಕಾರಿನಲ್ಲಿ ಸಮಾಜಕ್ಕೆ ಆಗಮಿಸಿ ಸೊಂಟದ ಮೇಲೆ ಕೈಯಿಟ್ಟುಕೊಂಡು ಚೌಕಾಗಿ ನಿಂತು ಎಲ್ಲ ವ್ಯವಸ್ಥೆಗಳನ್ನು ಪರಿಶೀಲಿಸುತ್ತಿದ್ದಾಳೆ.

ಮಧ್ಯದ ಹಾಲ್‌ನ ಗೋಡೆಯ ಮೇಲೆ ತೂಗುಹಾಕಿದ ಧೋಂಡೂಬಾಯಿ ಪಂತ ಅವರ ದೊಡ್ಡ ಭಾವಚಿತ್ರದ ಮೇಲೆ ಇವತ್ತು ಧೂಳಿಲ್ಲ. ಬ್ರಿಟಿಷರ ಕಾಲದಲ್ಲಿ ಸಾಂಗಲಿಯ ಶ್ರೀಮಂತ ಕುಟುಂಬವೊಂದರಲ್ಲಿ ಹುಟ್ಟಿ, ಅಭಾಗಿನಿ ಹೆಣ್ಣುಮಕ್ಕಳ ಉದ್ಧಾರಕ್ಕಾಗಿ ಹಲವು ರೀತಿಯಿಂದ ಶ್ರಮಿಸಿ, ಅದರಲ್ಲೇ ಜನ್ಮ ಸವೆಸಿದ ಆ ತಾಯಿ ಸಾಯುವ ಕೆಲ ವರ್ಷಗಳ ಮುಂಚೆ ತನ್ನ ಅಪಾರ ಆಸ್ತಿಯನ್ನೆಲ್ಲ ವಿಕ್ರಯಿಸಿ ಬಂದ ಹಣದಿಂದ ಆಗಿನ ಮುಂಬಯಿ ಕರ್ನಾಟಕದ ಹಲವು ಪಟ್ಟಣಗಳಲ್ಲಿ ಹಲವು ಬಗೆಯ ಸಂಸ್ಥೆಗಳನ್ನು, ಶಾಲೆಗಳನ್ನು, ಅನಾಥಾಲಯಗಳನ್ನು ಸ್ಥಾಪಿಸಿದಳು. ಹಾಗೆ ಅಲ್ಪ ಬಂಡವಾಳದೊಂದಿಗೆ ಬೆಳಗಾವಿಯಲ್ಲಿ ಸುರುವಾಗಿತ್ತು ಈ ಭಗಿನೀ ಸೇವಾ ಸಮಾಜ. ತನ್ನ ಕೊನೆಗಾಲದಲ್ಲಿ ಬೆಳಗಾವಿಯಲ್ಲೇ ಇದ್ದ ಧೋಂಡೂಬಾಯಿ ತಾನಿರುವವರೆಗೂ

ಈ ಸಂಸ್ಥೆಯನ್ನು ತಾಯಿಯಂತೆ ನೋಡಿಕೊಂಡಳು. ಹಲವು ಕಾರಣಗಳಿಂದ ಅನಾಥರಾದ ಹೆಣ್ಣುಮಕ್ಕಳಿಗೆ ಸಮಾಜದಲ್ಲಿ ಆಶ್ರಯವಿತ್ತಳು. ಅವರ ಹೊಟ್ಟೆ-ಬಟ್ಟೆ, ಶಿಕ್ಷಣ ಇತ್ಯಾದಿಗೆ ಅನುವು ಮಾಡಿಕೊಟ್ಟಳು. ಸೇವಾ ಮನೋಭಾವದ, ವಯಸ್ಕರಾದ, ತ್ಯಾಗಬುದ್ಧಿಯ ಹಲವು ಹೆಂಗಸರನ್ನು ಆಯ್ದು ತಂದು ಸಮಾಜದ ಕೆಲಸ ನೋಡಿಕೊಳ್ಳಲು ನಿಯಮಿಸಿದಳು. ಮುಂದೆ ಅದಕ್ಕೆ ಸರಕಾರದಿಂದ ಗ್ರ್ಯಾಂಟೂ ದೊರೆಯಿತು. ಹಾಗೆ ಬೆಳೆಯುತ್ತಾ ಹೋಯಿತು ಸಂಸ್ಥೆ, ಕಾಲಕ್ಕೆ ತಕ್ಕ ಹಲವು ಹತ್ತು ಬದಲಾವಣೆಗಳೊಂದಿಗೆ.

ಸೇವಾ ಸಮಾಜದಲ್ಲೀಗ ಒಂದು ನೂರಕ್ಕೂ ಮೇಲ್ಪಟ್ಟು ಅನಾಥ ಹುಡುಗಿಯರಿದ್ದಾರೆ. ಇಪ್ಪತ್ತೈದು ವಿಶಾಲವಾದ ವಸತಿ ಕೋಣೆಗಳಿವೆ. ಚಿಕ್ಕ ಹುಡುಗಿಯರಿಗೆ ಮ್ಯಾಟ್ರಿಕ್‌ವರೆಗೆ ಪುಕ್ಕಟೆ ಶಿಕ್ಷಣದ ವ್ಯವಸ್ಥೆಯಿದೆ. ತುಸು ದೊಡ್ಡವರಾದ ಹೆಂಗಳೆಯರಿಗೆ ಹೊಲಿಗೆ, ಕಸೂತಿ, ಟೈಪಿಂಗ್-ಶಾರ್ಟ್‌ಹ್ಯಾಂಡ್ ಕಲಿಸುವ ವ್ಯವಸ್ಥೆಯೂ ಇದೆ. ಎಲ್ಲ ವೆಚ್ಚ ನಿಭಾಯಿಸಿಕೊಂಡು ಹೋಗಲು ಧೋಂಡೂಬಾಯಿ ಇಟ್ಟು ಹೋದ ಮೂಲ ಧನದಿಂದ ಬರುವ ಬಡ್ಡಿಯಲ್ಲದೇ ಸರಕಾರದಿಂದ ದೊರೆವ ಹಣವೂ ಇದೆ. ಅಲ್ಲದೇ ಹುಡುಗಿಯರ ಮಧ್ಯಾಹ್ನದ ಉಪಹಾರಕ್ಕಾಗಿಯೆಂದೋ ಹೊಸ ಯೂನಿಫಾರ್ಮಿಗೆಂದೋ ಆಗಾಗ ನಗರದ ರೋಟರಿ-ಲಾಯನ್ಸ್‌ನವರು, ಒಮ್ಮೊಮ್ಮೆ ರೆಡ್‌ಕ್ರಾಸ್‌ನವರು, ಅಮೇರಿಕೆಯಿಂದ ಬರುವ ಪೀಸ್‌ಕೋಡ್‌ನವರು ಇತ್ಯಾದಿ ಮೇಲಿಂದ ಮೇಲೆ ಕೊಡುವ ಹೆಚ್ಚಿನ ಹಣ, ಬಟ್ಟೆ, ಗೋಧಿ, ಹಾಲಿನ ಟಿನ್‌ಗಳು ಬೇರೆ. ಇವೆಲ್ಲ ಹುಡುಗಿಯರಿಗೆ ಕಾಣ ಸಿಗುವುದೂ ಇವತ್ತಿನಂಥ ಅಪರೂಪದ ಸಂದರ್ಭಗಳಲ್ಲಿಯೇ.

ಅಂತೆಯೇ ಇಂದು ಸಮಾಜದ ಹುಡುಗಿಯರಿಗೆಲ್ಲ ತುಂಬ ಸಂತಸ. ಚಿಕ್ಕ ಹುಡುಗಿಯರಿಗೆ ದೊಡ್ಡ ಹುಡುಗಿಯರು ಹೇನು ತೆಗೆದು, ಇಂಥ ಸಂದರ್ಭಗಳಲ್ಲಿ ಮಾತ್ರ ಕಮಲಮ್ಮ ಕೊಡುತ್ತಿದ್ದ ಕೊಬ್ಬರಿಎಣ್ಣೆ ಹಚ್ಚಿ ತಲೆ ಬಾಚಿದ್ದಾರೆ. ಹಿಂದಿನ ದಿನವೇ ಸಿಕ್ಕ ಹೊಸ ಯೂನಿಫಾರ್ಮ್– ನೀಲಿ ಪರಕಾರ, ಬಿಳಿ ಪೋಲಕಾ ತೊಟ್ಟಿದ್ದಾರೆ ಎಲ್ಲರೂ. ರೋಟರಿ ಕ್ಲಬ್‌ನವರು ಕೊಟ್ಟಿದ್ದ ಮುನ್ನೂರು ಮೀಟರಿಗೂ ಮಿಕ್ಕಿದ್ದ ಯೂನಿಫಾರ್ಮಿನ ಬಟ್ಟೆ ಸಾಕಷ್ಟು ನಯವಾಗಿದ್ದರೂ, ಅದು ಕಮಲಮ್ಮನ ಸ್ಪೆಶಲ್ ದರ್ಜಿಯಿಂದ ಹೊಲಿದು ಬರುವುದರಲ್ಲಿ ಹೇಗೋ ಒರಟಾಗಿ ರೂಪಾಂತರ ಹೊಂದಿದ್ದು ಬಹಳ ಹುಡುಗಿಯರ ಗಮನಕ್ಕೆ ಬಂದೇ ಇಲ್ಲ. ಬೆಳಗಿನ ಉಪಹಾರಕ್ಕೆ ಬಂದವರಿಗೆ ಸಿಕ್ಕಿದ್ದು ಕರಿದವಲಕ್ಕಿ ಹಾಗೂ ಒಂದೊಂದು ಮೈಸೂರುಪಾಕು. ದಿನದ ಹಸಿ ಬಿಸಿ ಜೋಳದ ಹಿಟ್ಟಿನ ಮುದ್ದೆ ಹಾಗೂ ಉಪ್ಪು ನೀರಿನ ಎಸರಿನಿಂದ ಬಾಯಿ

ಕೆಟ್ಟಿದ್ದ ಮಕ್ಕಳಿಗೆ ಇಂದು ತುಂಬ ಖುಷಿ. ಮಧ್ಯಾಹ್ನದ ಊಟಕ್ಕೂ ಇಂದು ಎಂದಿನಂತೆ ದಪ್ಪ ರೊಟ್ಟಿ- ಬೇಳೆಯ ಸಾರಿನ ಬದಲು ಅನ್ನ ಹಾಗೂ ಏನಾದರೂ ಸಿಹಿ ಸಿಗುತ್ತದೆಂದು ಅವರಿಗೆ ಮೊದಲೇ ಗೊತ್ತಿದ್ದುದರಿಂದ ಅವರೆಲ್ಲ ತುಂಬ ಹುರುಪಿನಿಂದಿದ್ದಾರೆ. ಮತ್ತೊಂದು ವಿಶೇಷವೆಂದರೆ ಅವರಿಗೆ ಇಂದು ಸ್ಕೂಲಿಲ್ಲ. ಅರ್ಥಾತ್ ಹೆಡ್ಮಾಸ್ತರರಿಂದ ಬಡಿಗೆ ಏಟು, ಕಿವಿ ಹಿಂಡಿಸಿಕೊಳ್ಳುವುದು. ಒಂಟಿಗಾಲಲ್ಲಿ ಸ್ಕೂಲು ಸುತ್ತು ಹಾಕುವುದು, ಇದ್ಯಾವುದೂ ಇಲ್ಲ. ದೊಡ್ಡ ಹುಡುಗಿಯರಿಗೆ ತುಸು ಹೆಚ್ಚಿನ ಸಮಾಧಾನ. ಅಕಾರಣವಾಗಿ ಕ್ಲಾಸಿನಲ್ಲಿ ಈ ಹೆಡ್ಮಾಸ್ತರು ಅವರ ಮೈಗೆ-ಎದೆಗೆ ಕೈ ತಾಗಿಸುವುದು, ಗಲ್ಲ ತಿವಿಯುವುದು, ನಿಂದೆಯ ಮಾತಾಡುವುದು ಇತ್ಯಾದಿಗಳಿಂದ ಒಂದು ದಿನ ಅವರಿಗೆ ಬಿಡುಗಡೆ. ಅದೂ ಅಲ್ಲದೆ ಇಂಥ ವಿಶೇಷ ಕಾರ್ಯಕ್ರಮಗಳಿದ್ದಾಗ ಹೊರಗಿನಿಂದ ಯಾರಾದರೂ ಆಮಂತ್ರಿತ ಗಣ್ಯ ಅತಿಥಿಗಳು ಬರುವುದರಿಂದ ಅವರ ಆದರ ಸತ್ಕಾರದಲ್ಲೇ ಹಗಲು-ರಾತ್ರಿ ಎಲ್ಲ ಕಳೆಯುತ್ತಾಳೆ ಕಮಲಮ್ಮ. ಆದ್ದರಿಂದ ಆಕೆ ಹುಡುಗಿಯರ ಕೋಣೆಗಳಿಗೆ ರಾತ್ರಿಯ ರೌಂಡ್ಸಿಗೆ ಬರುವ ಭಯವಿಲ್ಲ. ಇಂದು ಆಕೆ ಯಾವ ಹುಡುಗಿಯನ್ನು ಹಠಾತ್ತಾಗಿ ಆಕ್ರಮಿಸಿ, ಹೆದರಿಸಿ ತನ್ನ ಕೋಣೆಗೆ ಎಳೆದುಕೊಂಡು ಹೋಗಿ ತನ್ನ ಮಂಚದಲ್ಲಿ ತನ್ನೊಂದಿಗೆ ರಾತ್ರಿ ಕಳೆಯಲು ಒತ್ತಾಯಿಸುತ್ತಾಳೋ ಎಂಬ ಎದೆಗುದಿಯಿಲ್ಲ. ಇದು ಕಮಲಮ್ಮನಿಗೆ ಇತ್ತೀಚೆ ಬಂದಿರುವ ರೋಗ. ಹುಡುಗಿಯರ ಭಾಷೆಯಲ್ಲಿ ''ರಾತ್ರಿ ದೆವ್ವ''. ವಯಸ್ಕಳಾದ ಯಾವುದಾದರೊಬ್ಬ ಹುಡುಗಿಯನ್ನು ಎಳೆದುಕೊಂಡು ಹೋಗಿ 'ಏನೋ' ಮಾಡುತ್ತಾಳಂತೆ– ಅಂತ ಎಲ್ಲರ ಬಾಯಲ್ಲಿ ಪಿಸುಮಾತು. ಏನೋ ಅಂದರೆ ಏನೆಂದು ತಿಳಿದುಕೊಳ್ಳುವ ಕುತೂಹಲ ಹಲವರಿಗೆ, ಏನು ಅಂತ ಆ ಅನುಭವವಾದ ಹುಡುಗಿಯರಿಗೆ ಕೇಳಿದರೆ ಸಿಗುವ ಉತ್ತರ ಕಿಸಿ ಕಿಸಿ ನಗು, ಒಮ್ಮೊಮ್ಮೆ 'ಛೀ ನಾಚಿಕೆಗೇಡು'. ಅಂತೂ ಕಮಲಮ್ಮನ ರಾತ್ರಿಯ ರೌಂಡ್ ಅವರಿಗೆಲ್ಲ ಹೆದರಿಕೆಯ ವಿಚಿತ್ರ ಕಾತರದ ನಿರೀಕ್ಷಣೆ. ಇಂದು ಅದಿಲ್ಲವೆಂದು ಅವರಿಗೆ ಸಮಾಧಾನ.

ಎಲ್ಲ ಹುಡುಗಿಯರೂ ಗುಂಪು ಗುಂಪಾಗಿ ಆಡುತ್ತ, ಹಾಡುತ್ತ, ನಗುತ್ತ ಹೊರಗೆ ಮರಗಳ ಕೆಳಗಡೆ ಇದ್ದಾರೆ. ಆದರೆ ಮಹಡಿಯ ಮೇಲಿನ ಕೊನೆಯ ರೂಮಿನಲ್ಲಿ ಕೋಮಲಾ ಒಬ್ಬಳೇ ಕೂತಿದ್ದಾಳೆ. ಅವಳ ಪಾಲಿಗೆ ಏಕೋ ಈ ಉತ್ಸಾಹ, ಸಂಭ್ರಮ ಸಂತಸ ಇಂದು ಇಲ್ಲವಾಗಿದೆ. ಯಾವಾಗಲೂ ತುಂಟಾಟದಲ್ಲಿ, ಅಭ್ಯಾಸದಲ್ಲಿ ಎಲ್ಲ ಚಟುವಟಿಕೆಗಳಲ್ಲಿ ಉಳಿದವರಿಗಿಂತ ಮುಂದಿರುತ್ತಿದ್ದ ಹುಡುಗಿಗೆ ಇಂದೇನೋ ದಿಗ್ಭ್ರಮೆ. ಮುಂಜಾನೆ ಎದ್ದಾಗ ಅವಳೂ ಎಲ್ಲರಂತೆ ಆನಂದದಲ್ಲಿದ್ದಳು. ಬೆಳಗಿನ ನಾಲ್ಕು ಗಂಟೆಗೇ ಅರೆನಿದ್ರೆಯಲ್ಲೇ ಏಳಬೇಕಾಗಿದ್ದರೂ ಎಂದಿನಂತೆ ಇಂದು

ಎಬ್ಬಿಸಲು ಬಂದ ಕೆಲಸದ ದುರುಗವ್ವನ ಮೇಲೆ ಸಿಟ್ಟು ಬಂದಿರಲಿಲ್ಲ. ಯಾಕೆಂದರೆ ಇಂದು ಕಡ್ಡಾಯವಾಗಿ ಕೊರೆಯುವ ಚಳಿಯಲ್ಲಿ ತಣ್ಣೀರಿನ ಸ್ನಾನ ಮಾಡಬೇಕಿರಲಿಲ್ಲ. ಅಡಿಗೆಯ ಗೌರಮ್ಮ ಅಷ್ಟೊತ್ತಿಗೇ ಎದ್ದು ಹಂಡೆಗಳಲ್ಲಿ ಬಿಸಿ ನೀರು ಕಾಯಿಸಿದ್ದಳು. ಇವತ್ತು ಕೋಮಲಾನ ಪಾಲಿಗೆ ಬಂದ ಡ್ಯೂಟಿ ಪುಣ್ಯಕ್ಕೆ ಕಕ್ಕಸ ಸ್ವಚ್ಛಗೊಳಿಸುವದಾಗಿರದೆ ಅಂಗಳ ಗುಡಿಸುವದಾದ್ದರಿಂದ ಆಕೆ ಮುಂಜಾನೆ ಗೆಲುವಾಗಿಯೇ ಇದ್ದಳು. ಸರಿಯಾಗಿ ಕಕ್ಕಸ ಹಸನು ಮಾಡಲಿಲ್ಲವೆಂದು ಅಂದಿನ ಕಕ್ಕಸ ಡ್ಯೂಟಿಯ ಚಿಕ್ಕ ಹುಡುಗಿಯರಾದ ಲತಾ-ಉಷಾರ ಮೇಲೆ ಸಿಟ್ಟಾದ ಕಮಲಮ್ಮ ಅವರಿಗೆ ಶಿಕ್ಷೆಯೆಂದು ಅವರಿಗೆ ಬೆಳಗಿನ ಉಪಹಾರ ಕೊಡದೆ ಇಬ್ಬರನ್ನೂ ಮಧ್ಯಾಹ್ನದವರೆಗೆ ಕಕ್ಕಸದಲ್ಲಿಯೇ ಕೂಡಿಹಾಕಿದಾಗ ಕೋಮಲೆಗೆ ಅಯ್ಯೋ ಪಾಪ ! ಅನಿಸಿತ್ತಾದರೂ, ತನಗೆ ಬರಲಿಲ್ಲವಲ್ಲ ಸದ್ಯ ಈ ಪಾಳಿ ಅಂತ ಸಮಾಧಾನವೆನಿಸಿತ್ತು. ಹಿಂದಿನ ರಾತ್ರಿ ಹೆಡ್ಮಾಸ್ತರರ ಕಾಲು ಒತ್ತುವ ಡ್ಯೂಟಿಗೆ ಹೋಗಿದ್ದ ಸುಮಿತ್ರಾ ಏಕೋ ಅಳುತ್ತ ತಿರುಗಿ ಬಂದಿದ್ದಳು. ಆಕೆ ಕೋಮಲಾನೊಂದಿಗೆ ಒಂದೇ ಕೋಣೆಯಲ್ಲಿರುತ್ತಿದ್ದರಿಂದ ರಾತ್ರಿಯೆಲ್ಲಾ ಆಕೆ ನಿದ್ರೆ ಮಾಡದೆ ಅಳುತ್ತಲೇ ಕಳೆದಿದ್ದನ್ನು ಗಮನಿಸಿದ ಕೋಮಲಾಗೆ ತನಗಿನ್ನೂ ಆ ಕರೀ ಮುಸುಡಿಯ ಬಿಳಿ ಕೂದಲಿನ ಮುದುಕನ ಕಾಲು ಒತ್ತುವ ಡ್ಯೂಟಿ ಬಂದಿಲ್ಲವಲ್ಲ, ತಾನೇ ಪುಣ್ಯವಂತೆ ಅನಿಸಿತ್ತು. ತಲೆ ಬಾಚಿ ಬಿಸಿ ನೀರು ಸ್ನಾನ ಮಾಡಿ ಉತ್ಸವದಲ್ಲಿ ಪಾಲುಗೊಳ್ಳಲು ಉತ್ಸಾಹದಿಂದಲೇ ಸಿದ್ಧಳಾಗಿದ್ದಳು ಆಕೆ.

ಆದರೆ ಪ್ರಾರ್ಥನೆಯ ನಂತರ ಅಂಬುಜಮ್ಮ ತನ್ನ ಗುಜ್ಜಾನೆ ಮರಿಯಂಥ ದೇಹ ಹೊತ್ತು ಕೋಮಲಾ ನಿಂತಿದ್ದಲ್ಲಿಗೆ ನಡೆದು ಬಂದು ಅವಳನ್ನು ಪಕ್ಕಕ್ಕೆ ಕರೆದು ಪಿಸುಧ್ವನಿಯಲ್ಲಿ ಆಣತಿಯಿತ್ತಿದ್ದಳು– ''ಇವತ್ತು ರಾತ್ರಿ ನಿನಗೆ ಗೆಸ್ಟ್‌ರೂಮ್ ಡ್ಯೂಟಿ'' ಅಂತ. ಕೋಮಲೆಯ ಎದೆಯೊಡೆದು ನೀರಾಯಿತು. ಉತ್ಸವದ ಉತ್ಸಾಹವೆಲ್ಲ ಕ್ಷಣದಲ್ಲಿ ಮಾಯ. ಅಂಬುಜಮ್ಮನಿಗೆ ಎದುರಾಡುವ ಧೈರ್ಯ ಸಮಾಜದಲ್ಲಿ ಯಾವ ಪಿಳ್ಳೆಗೂ ಇರಲಿಲ್ಲ. ಹಿಂದೊಮ್ಮೆ ಸಮಾಜದ ಹುಡುಗಿಯರಿಗೆಂದು ಅಮೇರಿಕನ್ ಸಹಕಾರೀ ಸಂಸ್ಥೆಯೊಂದು ನೂರು ಹಣ್ಣಿನ ಟಿನ್‌ಗಳನ್ನು ಕಳಿಸಿದ್ದು ಅಂಬುಜಮ್ಮನ ಮರ್ಸಿಡಿಸ್‌ನಲ್ಲಿ ಅವೆಲ್ಲ ರಾತ್ರೋರಾತ್ರಿ ಮಾಯವಾದದ್ದನ್ನು ಪ್ರಶ್ನಿಸಿದ್ದ ರೇಖಾ ಅನ್ನುವ ತಿಳಿಗೇಡಿ ಹುಡುಗಿಗೆ ''ಉದ್ಧಟತನದ ಅಪರಾಧ''ಕ್ಕಾಗಿ ಕಾಸಿದ ಛಡಿಯ ಬರೆ ಎಳೆದು ಅವಳ ಬಲಗೈ ಕೊನೆವರೆಗೂ ನಿರುಪಯೋಗಿಯಾದದ್ದನ್ನು ಸಮಾಜದ ಯಾವ ಹುಡುಗಿಯೂ ಮರೆತಿರಲಿಲ್ಲ. ಪಿಳಿಪಿಳಿ ಕಣ್ಣು ಬಿಡುತ್ತ ನಿಂತೇ ಇದ್ದಳು ಕೋಮಲಾ. ನಂತರ ಹೇಗೋ

ಬಂದು ರೂಮು ಸೇರಿ ಹಾಸಿದ್ದ ಕಂಬಳಿಯ ಮೇಲೆ ಕುಸಿದು ಕೂತಳು. ಕೈಕಾಲಲ್ಲಿನ ಶಕ್ತಿ ಉಡುಗಿ ಹೋಗಿತ್ತು. ಹೊರಗಿನ ಗದ್ದಲ, ಸಂಭ್ರಮ, ತುತ್ತೂರಿ ಎಲ್ಲದಕ್ಕೂ ಕಿವುಡಾಗಿದ್ದಳು ಆಕೆ. ತಿರುತಿರುಗಿ ಅಂಬುಜಮ್ಮನ ಗಡಸು ಧ್ವನಿ ಅವಳಿಗೆ ವಿಕಾರವಾಗಿ ಕೇಳಿಸುತ್ತಿತ್ತು. "ಗೆಸ್ಟ್ ರೂಮಿನ ಡ್ಯೂಟಿ.... ಇವತ್ತು ರಾತ್ರಿ".... ಈ 'ಗೆಸ್ಟ್ ರೂಮಿನ ಡ್ಯೂಟಿ' ಬಹಳ ಹುಡುಗಿಯರಿಗೆ ಅರ್ಥವಾಗಿರದ ರಹಸ್ಯ. ವಿಶೇಷ ಪ್ರಸಂಗಗಳಲ್ಲಿ ಸಮಾಜಕ್ಕೆ ಆಮಂತ್ರಿತರಾಗಿ ದಯಮಾಡಿಸುವ ಗಣ್ಯ ಅತಿಥಿಗಳು ಸಮಾಜದ ಅತಿಥಿಗೃಹದಲ್ಲಿ ರಾತ್ರಿ ತಂಗಿದಾಗ ಅವರ ಸೇವೆಗಾಗಿ ಒಬ್ಬ ಹುಡುಗಿ ಅಲ್ಲೇ ಹೋಗಿ ರಾತ್ರಿಯೆಲ್ಲ ಇದ್ದು ಮುಂಜಾನೆ ತಿರುಗಿ ಬರುವುದು. ಅಲ್ಲಿ ಏನೇನಾಗುತ್ತದೆಂದು ಹಾಗೆ ಹೋಗಿ ಬಂದ ಯಾವಳೂ ಎಂದೂ ಯಾರಿಗೂ ಹೇಳುವುದಿಲ್ಲ. ಗೆಸ್ಟ್ ರೂಮಿನ ಡ್ಯೂಟಿ ಅಂದರೆ ಅವರಿಗೆಲ್ಲ ಏನೋ ಆತಂಕ.

ಕೋಮಲೆಗೆ ಮಾತ್ರ ವಿಪರೀತ ಹೆದರಿಕೆಯಾಗಿದೆ. ಗೆಸ್ಟ್ ರೂಮಿನ ಡ್ಯೂಟಿ ಮಾಡಿದ್ದ ಮಂಗಳಾಗೆ ಹೊಸ ಸೀರೆ–ಗಿಲೀಟಿನ ಒಡವೆ ಸಿಕ್ಕಿದ್ದು ಆಕೆ ನೋಡಿದ್ದಾಳೆ. ಇನ್ನೊಂದು ಸಂದರ್ಭದಲ್ಲಿ ಆ ಡ್ಯೂಟಿ ಮಾಡಿದ ಶಾಂತಾ ಅಂತೂ ಮುಂದೆ ಎರಡು ತಿಂಗಳಲ್ಲಿ ಯಾರಿಗೂ ಹೇಳದೆ ಸಮಾಜದಿಂದ ಪರಾರಿಯಾಗಿದ್ದಳು. ಮುಂದೆ ಅವಳ ಲಗ್ನದ ಆಮಂತ್ರಣ ಪತ್ರಿಕೆ ಬಂದಿತು ಸಮಾಜಕ್ಕೆ. ಒಮ್ಮೆ ಸಮಾಜದ ಹುಡುಗಿಯರನ್ನೆಲ್ಲ ಕರೆದುಕೊಂಡು ಕಮಲಮ್ಮ ಯಾವುದೋ ಟಾಕೀಜಿನಲ್ಲಿ ಪ್ರದರ್ಶಿಸಲ್ಪಡುತ್ತಿದ್ದ ಚ್ಯಾರಿಟಿ ಶೋಗೆ ಹೋದಾಗ, ಅಲ್ಲೇ ಬಾಲ್ಕನಿಯಲ್ಲಿ ಕೂತಿದ್ದ ಶಾಂತಾನನ್ನು ಕೋಮಲಾ ನೋಡಿದ್ದಳು. ಹಸಿರು ಬಳೆ, ಮಂಗಳಸೂತ್ರ, ಜರೀ ಸೀರೆಯಿಂದಲಂಕೃತಳಾಗಿ ಹೆಮ್ಮೆಯಿಂದ ಗಂಡನೊಂದಿಗೆ ಕೂತಿದ್ದ ಶಾಂತಾನನ್ನು ನೋಡಿದಾಗ ಸಹಜವಾಗಿಯೆ ಕೆಲವು ಹುಡುಗಿಯರಿಗೆ ಗೆಸ್ಟ್‌ರೂಮ್ ಡ್ಯೂಟಿಯ ಬಗ್ಗೆ ಆಸಕ್ತಿ ಹುಟ್ಟಿತ್ತು. ಆದರೂ ಕೋಮಲಾ ಹೆದರಲು ಕಾರಣ– ಆಕೆಗೆ ತಿರುತಿರುಗಿ ನೆನಪಿಗೆ ಬರುತ್ತಿದ್ದ, ಬಹಳ ವರ್ಷಗಳ ಹಿಂದೆ ನಡೆದಿದ್ದ ಒಂದು ಮೈನವಿರೇಳಿಸುವ ಘಟನೆ. ಕೋಮಲಾಗೆ ಆಗ ಆರೇಳು ವರ್ಷವಿರಬಹುದು. ದಕ್ಷಿಣದ ಒಂದು ಅನಾಥಾಶ್ರಮದಿಂದ ಈ ಸೇವಾ ಸಮಾಜಕ್ಕೆ ಆಕೆ ಹೊಸದಾಗಿ ರಿಕ್ರೂಟ್ ಆಗಿ ಬಂದಿದ್ದಳು. ಅವಳ ಮೃದುವಾದ ಮುದ್ದು ಮುಖ ನೋಡಿ ಅಂಬುಜಮ್ಮನೇ ಅವಳಿಗೆ 'ಕೋಮಲಾ' ಅಂತ ಹೊಸ ಹೆಸರು ಕೊಟ್ಟಿದ್ದು. ಆಗಿನ್ನೂ ಈ ಬೆಡಗಿನ ಅತಿಥಿಗೃಹ ಇರಲಿಲ್ಲ. ಆಫೀಸು ಕೋಣೆಯ ಪಕ್ಕದ ಹಾಲಿನಲ್ಲೇ ಅತಿಥಿಗಳ ವಸತಿಯ ವ್ಯವಸ್ಥೆ ಇತ್ತು. 'ಗೆಸ್ಟ್ ರೂಮ್ ಡ್ಯೂಟಿ' ಅಂತ ಅಂಬುಜಮ್ಮ ಆಗಷ್ಟೇ ಹೊಸದಾಗಿ ಪ್ರಾರಂಭಿಸಿದ್ದಳು ಈ ಪದ್ಧತಿಯನ್ನು. ಅವಳ ಮುಂಧೋರಣೆಯಿಂದ ಪ್ರಾರಂಭಿಸಿದ

ಈ ಹೊಸ ಸುಧಾರಣಾ ವಿಧಿಯಿಂದ ಸಮಾಜಕ್ಕೆ ಸಾಕಷ್ಟು ಗ್ರ್ಯಾಂಟು, ಊರಿನ ಗೌರವಾನ್ವಿತ ನಾಗರಿಕರಿಂದ ಸಹಾಯಧನ ಇತ್ಯಾದಿ ಸಿಗಲಾರಂಭಿಸಿತ್ತು. ಆಗ ಒಂದು ಸಲ ಹೀಗೆಯೇ ಮಂತ್ರಿಗಳೊಬ್ಬರು ಬಂದು, ಅಬಲೆಯರ ಉದ್ಧಾರದ ಬಗ್ಗೆ ಸುದೀರ್ಘ ಭಾಷಣ ಮಾಡಿ, ರಾತ್ರಿ ಅಂಬುಜಮ್ಮನ ಮನೆಯ ಸ್ಪೆಶಲ್ ಅಡಿಗೆಯವನಿಂದ ತಯಾರಾಗಿ ಬಂದ ಭರ್ಜರಿ ಚಿಕನ್ ತಿಂದು ಹೆಡ್ಮಾಸ್ತರ್ ಒದಗಿಸಿದ ವಿದೇಶೀ ವ್ಹಿಸ್ಕಿ ಸವಿದು, ಗೂಳಿಯಂತೆ ಗುಟುರು ಹಾಕುತ್ತ ಕೋಣೆ ಸೇರಿದ್ದರು. ಅಂದು ಗೆಸ್ಟ್ ರೂಮಿನ ಡ್ಯೂಟಿಗೆ ಹೋಗಿದ್ದ ಹುಡುಗಿ ಮರುದಿನ ಮುಂಜಾನೆ ಸಮಾಜದ ಕಂಪೌಂಡಿನಲ್ಲಿನ ಹಳೆಯ ಬೇವಿನ ಮರಕ್ಕೆ ನೇಣು ಹಾಕಿಕೊಂಡು ತೂಗು ಬಿದ್ದಿದ್ದಳು. ಆ ವಿಕಾರ ದೃಶ್ಯವನ್ನು ಮುಂಜಾನೆ ಎದ್ದೊಡನೆ ಮೊಟ್ಟ ಮೊದಲು ನೋಡಿದ್ದ ಕೋಮಲಾ ಚಿಟ್ಟನೆ ಚೀರಿ ಮೂರ್ಛೆ ಹೋಗಿದ್ದಳು. ಪೋಲೀಸರು ಬಂದಿದ್ದರು. ಮಂತ್ರಿಗಳನ್ನು ಕಂಡು ಸೆಲ್ಯೂಟ್ ಹೊಡೆದರು. ಮಂತ್ರಿಗಳ ಸಮಕ್ಷಮ ವಿಚಾರಣೆ ನಡೆದು ಆಶ್ರಮದ ಬಡ ಮಾಲಿಯನ್ನು ಅರೆಸ್ಟ್ ಮಾಡಿ ಎಳಕೊಂಡು ಹೋದರು. ಮಾನ್ಯ ಮಂತ್ರಿಗಳು ಅಂಬುಜಮ್ಮನ ಕಾರಿನಲ್ಲಿ ಆರಾಮಾಗಿ ಏರೋಡ್ರೋಮಿಗೆ ಹೋದರು. ಮುಂದೆ ಯಾರೂ ಆ ಹುಡುಗಿಯ ಬಗೆಗೆ ಚಕಾರ ಎತ್ತಲಿಲ್ಲ.

ಆದರೆ ಯಾಕೋ ಕೋಮಲಾಗೆ ಅದನ್ನು ಮರೆಯುವುದು ಸಾಧ್ಯವಾಗಿರಲಿಲ್ಲ. ಇಂದು 'ಗೆಸ್ಟ್ ರೂಮ್ ಡ್ಯೂಟಿ' ಅಂದೊಡನೆ ಧುತ್ತೆಂದು ಅವಳೆದುರು ಆ ಘಟನೆ ಬಂದು ನಿಂತಿತು. ಅಂತೆಯೇ ಆಕೆ ಕಂಗಾಲಾಗಿದ್ದಳು.

* * *

ಸಂಜೆಯ ಸಭೆಗೆ ಮುಖ್ಯ ಅತಿಥಿಗಳಾಗಿ ಬಂದವರು ರಾಜ್ಯ ಸಮಾಜ ಕಲ್ಯಾಣ ಶಾಖೆಯ ಮುಖ್ಯ ಅಧಿಕಾರಿಯೊಬ್ಬರು. ಶುದ್ಧ ಖಾದಿಧಾರಿ, ಚೆಲುವಾದ ನಗು ಮುಖ. ವಯಸ್ಸಿನ್ನೂ ಚಿಕ್ಕದು. ಅವರ ಭಾಷಣವಂತೂ ಎಲ್ಲರ ಮನ ತಟ್ಟಿತು. ಭಾರತದಲ್ಲಿ ಹೆಣ್ಣುಮಕ್ಕಳಿಗೆ ಮನುವಿನ ಕಾಲದಿಂದಲೂ ಆಗುತ್ತಿರುವ ಅನ್ಯಾಯ, ಸ್ವತಂತ್ರ ಭಾರತದಲ್ಲಿ ಮಹಿಳೆಯರಿಗಿರುವ ವಿಶೇಷ ಸೌಲಭ್ಯಗಳು, ಇವುಗಳ ಲಾಭವನ್ನು ಅವರು ಪಡೆಯಬೇಕಾದ ಬಗೆ, ಅನ್ಯಾಯ–ಅತ್ಯಾಚಾರಗಳನ್ನು ಎದುರಿಸಲು ಬೇಕಾದ ಧೈರ್ಯ, ಕುರಿತು ಅವರು ಉತ್ಸಾಹದಿಂದ ಮಾತಾಡಿದರು. ಹೆಣ್ಣು ಎಂದಿಗೂ ಅನಾಥೆಯಲ್ಲ. ಆಕೆ ಮಾತೆ, ಶಕ್ತಿಸ್ವರೂಪಿಣಿ, ಸ್ಫೂರ್ತಿದಾಯಿನಿ ಅಂದರು. ಕುಸಿದು ಹೋಗುತ್ತಿರುವ ನಮ್ಮ ದೇಶದ ನೈತಿಕ ಬಲ ಮಹಿಳೆಯರಿಂದಲೇ ಉಳಿಯಬೇಕು ಅಂದರು. ರಾಜಾರಾಮಮೋಹನರಾಯ-ಸಾವರಕರ-ಕರ್ವೆಯವರ ಹಾಗೆ ಮಹಿಳಾ ಉದ್ಧಾರವನ್ನೇ ತಾನೂ ಜೀವನದ ಗುರಿಯಾಗಿಟ್ಟುಕೊಂಡಿರುವೆನೆಂದು

ಘೋಷಿಸಿದರು. ಭಗಿನೀ ಸೇವಾ ಸಮಾಜಕ್ಕಾಗಿ ಸಭಾಗೃಹವೊಂದನ್ನು ಕಟ್ಟಿಸಲೆಂದು ಅಂಬುಜಮ್ಮ ತುಂಬ ಕಷ್ಟಪಟ್ಟು ಸಂಗ್ರಹಿಸುತ್ತಿರುವ ನಿಧಿಗೆ ತಮ್ಮ ವೈಯಕ್ತಿಕ ಕಾಣಿಕೆಯೆಂದು ಆಗಲೇ ಒಂದು ಸಾವಿರ ರೂಪಾಯಿಯ ವಾಗ್ದಾನ ಮಾಡಿದರು.

ಭಾಷಣ ಮುಗಿಸಿ ನೀರು ಕುಡಿದು ಆತ ಕೂತಾಗ ಜನ ತುಂಬ ಹೊತ್ತು ಚಪ್ಪಾಳೆ ಬಾರಿಸಿದರು. ಅಂದಿನ ಸಭೆಗೆ ಊರಿನ ಗಣ್ಯ ನಾಗರಿಕರು, ಸರಕಾರಿ ಅಧಿಕಾರಿಗಳು ವಿಶೇಷ ಸಂಖ್ಯೆಯಲ್ಲಿ ಬಂದಿದ್ದು ಸಭೆಗೆ ಶೋಭೆಯನ್ನು ತಂದಿದ್ದರಿಂದ ಅಂಬುಜಮ್ಮನಿಗೆ ತುಂಬ ಉತ್ಸಾಹ ಉಕ್ಕಿ ಬಂದಿತ್ತು. ಅತಿಥಿಗಳ ಭಾಷಣದ ನಂತರ ಅಧ್ಯಕ್ಷೆಯಾಗಿದ್ದ ಆಕೆ ಎದ್ದು ನಿಂತು ನೆರೆದ ಮಹಾಜನಗಳೆದುರು ಭಗಿನೀ ಸೇವಾ ಸಮಾಜದ ಹಕ್ಕಿ ನೋಟವನ್ನು ಪ್ರಸ್ತುತಪಡಿಸಿದಳು. ತನಗೆ ಅಧಿಕಾರ ಬಂದ ನಂತರ ಸಮಾಜದ ಒಳ್ಳೆಯದಕ್ಕಾಗಿ ತಾನು ಕೈಕೊಂಡ ಹೊಸ ಹೊಸ ಸುಧಾರಣೆಗಳು, ಹುಡುಗಿಯರ ಬಗೆಗೆ ತನಗೂ ಇತರ ಆಡಳಿತ ವರ್ಗದ ಸಿಬ್ಬಂದಿಗೂ ಇರುವ ಅಪರಿಮಿತ ಪ್ರೇಮ. ಈ ಸಮಾಜವನ್ನು ಅತ್ಯಂತ ಆದರ್ಶ ಸಂಸ್ಥೆಯನ್ನಾಗಿ ಮಾರ್ಪಡಿಸಬೇಕೆನ್ನುವ ತನ್ನ ಕನಸು ಕುರಿತು ವಿವರಿಸಿದಳು. ಹುಡುಗಿಯರಿಗೆ ಪ್ರತಿದಿನ ಮುಂಜಾನೆ ಸಿರಾ-ಹಾಲು, ಮಧ್ಯಾಹ್ನ ಚಪಾತಿ ಪಲ್ಯ ಅನ್ನ, ಸಂಜೆ ಹಣ್ಣು, ರಾತ್ರಿ ಅನ್ನ-ಸಾರು, ಹಬ್ಬಗಳಲ್ಲಿ ಸಿಹಿ ತಿಂಡಿ ನೀಡುತ್ತಿರುವದನ್ನು ತಿಳಿಸಿ ಅವರಿಗೆ ಹೊಸ ಉಡುಗೆ, ಪುಕ್ಕಟೆ ಅತ್ಯುತ್ತಮ ಶಿಕ್ಷಣ, ಅವರ ವ್ಯಕ್ತಿತ್ವದ ಸರ್ವಾಂಗೀಣ ವಿಕಾಸಕ್ಕೆ ಎಲ್ಲ ಬಗೆಯ ಸಹಾಯ ಮಾಡುತ್ತಿರುವದನ್ನು ಕುರಿತು ಮಾತನಾಡಿದರು. ಕೆಲವು ತಾಯಿ-ತಂದೆಗಳಿಗಂತೂ ತಮ್ಮ ಮಕ್ಕಳನ್ನೂ ಇಲ್ಲೇ ತಂದು ಬಿಡಬಾರದೇಕೆ ಅನಿಸಿದ್ದರೂ ಅನಿಸಿದ್ದೀತು.

ಕೊನೆಯಲ್ಲಿ ಶಿವರಾಮ ರೆಡ್ಡಿಯಿಂದ ಆಭಾರ ಮನ್ನಣೆ. ಎಲ್ಲ ಹೆಣ್ಣುಮಕ್ಕಳು ಲಕ್ಷ್ಮಿಯ ಸ್ವರೂಪ, ತಾಯಿಯ ಸಮಾನ ಅಂತ ತನ್ನ ನಂಬಿಗೆ ; ಅನಾಥ ಹೆಣ್ಣುಮಕ್ಕಳಿಗೆ ವಿದ್ಯೆ ಕಲಿಸುವ ಅಪೂರ್ವ ಪುಣ್ಯಯೋಗ ತನಗೆ ಒದಗಿ ಬಂದದ್ದಕ್ಕಾಗಿ ದೇವರಿಗೆ ತಾನು ಕೃತಜ್ಞ ; ಈ ಪವಿತ್ರ ಕರ್ತವ್ಯವನ್ನು ಜೀವವಿರುವವರೆಗೂ ಲೋಪ ಬಾರದಂತೆ ನಡೆಸಿಕೊಂಡು ಹೋಗಬೇಕೆನ್ನುವುದು ತನ್ನ ಬಾಳಿನ ಏಕಮೇವ ಧ್ಯೇಯ.

ಚಪ್ಪಾಳೆಗಳ ಮೇಲೆ ಚಪ್ಪಾಳೆ, ಎಲ್ಲರ ಬಾಯಲ್ಲೂ ಭಗಿನೀ ಸೇವಾ ಸಮಾಜದ ಬಗ್ಗೆ ಪ್ರಶಂಸೆಯ ಮಾತು. ಸಭೆಯ ನಂತರ ರೋಟರಿಯವರು ಬಿಸ್ಕಿಟ್ ಪ್ಯಾಕೆಟ್ ಹಂಚಿದಾಗ ಹುಡುಗಿಯರಿಗೆ ಖುಷಿಯೋ ಖುಷಿ. ಹಂಚಲೆಂದು ಅವುಗಳನ್ನು ಅಂಬುಜಮ್ಮನ ವಶಕ್ಕೆ ಕೊಡದೆ ನೇರವಾಗಿ ನೆರೆದ ಹುಡುಗಿಯರಿಗೇ ತಲುಪಿಸಿದಾಗ ಹುಡುಗಿಯರು ಕುಣಿದು ಕುಪ್ಪಳಿಸಿದರು.

ಕೋಣೆಯ ಕಿಟಕಿಯ ಸರಳುಗಳನ್ನು ಬಿಗಿಯಾಗಿ ಹಿಡಿದುಕೊಂಡು ಕತ್ತಲಲ್ಲಿ ಕೋಮಲಾ ಒಬ್ಬಳೇ ನಿಂತಿದ್ದಳು. ಓಡಿ ಹೋದರೆ ಹೇಗೆ ಎಂಬ ವಿಚಾರವೂ ಬಂದಿತು. ಆದರೆ ಸಮಾಜದ ಸುತ್ತಲಿನ ಏಳುಪೂಟು ಎತ್ತರದ, ಗಾಜಿನ ಚೂರುಗಳನ್ನು ಚುಚ್ಚಿದ ಗೋಡೆ, ಗೇಟಿನಲ್ಲಿ ಚಾಕು ಸಿಗಿಸಿಕೊಂಡು ನಿಂತ ಗೂರ್ಖಾನ ವಿಕಾರ ಸ್ವರೂಪ ನೆನೆದಾಗ ಹದಿನಾಲ್ಕು ವರ್ಷದ ಅವಳ ಎಳೆಯ ಮನಸ್ಸು ಹೆದರಿಕೊಂಡಿತು.

* * *

ರಾತ್ರಿ ಹನ್ನೊಂದೂವರೆ. ಅತಿಥಿಗೃಹದ ಹೊರಗೆ ಬೆಳದಿಂಗಳಲ್ಲಿ ಕಟ್ಟೆಯ ಮೇಲೆ ಕಮಲಮ್ಮನೊಂದಿಗೆ ಮಜವಾಗಿ ಹರಟುತ್ತ ಬೀಡಿ ಸೇದುತ್ತ ಕೂತಿದ್ದ ಹೆಡ್ಮಾಸ್ತರು ಯಾಕೋ ಬಾಗಿಲ ಸಪ್ಪಳ ಕೇಳಿ ತಿರುಗಿ ನೋಡಿದರು. ಮಾನ್ಯ ಅತಿಥಿಗಳು ನೈಟ್‌ಗೌನಿನಲ್ಲಿ ಹೊರಬಂದಿದ್ದರು. ಎದ್ದು ಅವರೆಡೆ ಧಾವಿಸಿದ ಶಿವರಾಮ ರೆಡ್ಡಿ, "ಏನಾಯಿತು ಮಹಾಸ್ವಾಮಿ ? ಮಾಲು ಮನಸ್ಸಿಗೆ ಬರಲಿಲ್ಲವೇ ? ಏನು ತೊಂದರೆ ನನಗೆ ಹೇಳಿರಿ."

ಅನುಮಾನಿಸುತ್ತ ಕೆಳದನಿಯಲ್ಲಿ ಮಾತಾಡಿದ ಅತಿಥಿ ; "ರೆಡ್ಡಿಯವರs, ನಿಮಗೆ ಮೊದಲs ಹೇಳಿದೆ, ನಮಗಿದೆಲ್ಲಾ ಬ್ಯಾಡ ಅಂತ. ನೀವು ಒತ್ತಾಯ ಮಾಡಿದ್ರಿ ಅಂತ ಹೂಂ ಅಂದೆ. ಈಗ ನೋಡಿದರೆ ಯಾರೋ ಅಡ್ನಾಡಿ ಹುಡುಗೀನ್ನ ಕಳಿಸೀರಿ. ಅತ್ತು ಕರೆದು ರಂಭಾಟ ಮಾಡ್ಲಿಕ್ಹತ್ಯಾಳ. ನನ್ನ ಸಮೀಪ ಬರಬ್ಯಾಡ್ರಿ, ಮುಟ್ಟಬ್ಯಾಡ್ರಿ, ನೀವs ದೇವ್ರು, ತಾಯಿ-ತಂದೆ ಅಂತ ಪ್ರಲಾಪ ಮಾಡ್ಲಿಕ್ಹತ್ಯಾಳ. ನನಗ-ನೀವೇನs ಅನ್ರಿ, ನನಗ-ಹೆಣ್ಮಕ್ಕಳ ಮನಸ್ಸು ನೋಯ್ಸೂದಾಗೂದಿಲ್ಲ.... ಅಂದರ ಅವರ ಒಪ್ಪಿಗಿ ಇಲ್ಲದಾಗ" —ಉಗುಳು ನುಂಗಿದ. ಶಿವರಾಮ ರೆಡ್ಡಿ ಅನುಭವಿಕ, ಪ್ರಸಂಗಾವಧಾನ ತಂದುಕೊಂಡು ಒಮ್ಮೆಲೆ ಆರ್ಜವತೆಯಿಂದ ಹೇಳಿದ, "ಮಹಾಸ್ವಾಮಿಯವರು ಸಿಟ್ಟಾಗಬಾರದು. ಐದು ನಿಮಿಷ ಈ ಹಾಲ್‌ನಲ್ಲಿ ಕೂತು ಒಂದು ಸಿಗರೇಟ್ ಸೇದಿರಿ-ಇಂಪೋರ್ಟೆಡ್. ಅಷ್ಟರಲ್ಲಿ ನಾನು ಎಲ್ಲ ಸರಿ ಮಾಡುವೆ."

* * *

ಹದಿನೈದು ನಿಮಿಷಗಳ ನಂತರ ಕಚ್ಚೆ ಬಿಗಿದುಕೊಳ್ಳುತ್ತ ಹೊರಬಂದ ಶಿವರಾಮ ರೆಡ್ಡಿ ಮಾನ್ಯ ಅತಿಥಿಗಳನ್ನು ಪುನಃ ಆದರಪೂರ್ವಕವಾಗಿ ಒಳಗೆ ಕಳಿಸಿದಾಗ ಅವರಿಗೆ ಮಧುರ ಆಶ್ಚರ್ಯ ಕಾದಿತ್ತು. ಅಷ್ಟೊಂದು ವಿರೋಧ ಮಾಡಿ, ಆಣೆ, ಭಾಷೆ ಹಾಕಿ, ಅತ್ತು ಕರೆದಿದ್ದ ಹುಡುಗಿ ಈಗ ದೊಡ್ಡ ಮಂಚದ ಮೇಲೆ ಸುಮ್ಮನೇ ಮಲಗಿಕೊಂಡಿದ್ದಳು. ಆತ ಬಳಿ ಸಾರಿದಾಗ ಪ್ರತಿಕ್ರಿಯೆ ತೋರಲಿಲ್ಲ. ಇಷ್ಟೇ ಅಲ್ಲ, ಅವಳ ಅರಿವೆ ಸೆಳೆದಾಗಲೂ ಸುಮ್ಮನೇ ಬಿದ್ದುಕೊಂಡಿದ್ದಳು- ಶೂನ್ಯವನ್ನು

ದೃಷ್ಟಿಸುತ್ತ. ಈ ಪರಿವರ್ತನೆಯ ರಹಸ್ಯವೇನೆಂದು ಆತ ಅಚ್ಚರಿಪಡುತ್ತಿದ್ದಾಗ ಕಿಡಿಕಿಯಾಚೆ ಹೆಡ್ಮಾಸ್ತರು ಕೊಚ್ಚಿಕೊಳ್ಳುತ್ತಿದ್ದುದು ಕೇಳಿಸಿತು. "ಕಮಲೀ, ಇನ್ನು ಮೇಲೆ ಈ ಹುಡುಗಿಯರನ್ನು ಒಂದು ದಂ ಮೊದಲು ನಾನು ಟೆಸ್ಟ್ ಮಾಡಿ, ಸಾದು ಮಾಡಿ ನಂತರವೇ ಗೆಸ್ಟ್‌ರೂಮ್ ಡ್ಯೂಟಿಗೆ ಕಳಿಸಬೇಕು ನೋಡು, ಇಲ್ಲವಾದರೆ ಇವರು ಸಮಾಜದ ಮರ್ಯಾದೆ ತೆಗೆದಾರು."

ಕಮಲಮ್ಮನ ನಗು, ಗಂಡಸಿನ ನಗುವಿನಂತೆ ಕೇಳಿಸಿತು.

(೧೯೭೫)

❖ ❖ ❖

# ನಿರಾಕರಣೆ

ಹೌದೆ? ಇದು ನಿಜವೆ ? ಆರ್ಯಪುತ್ರನು ನಿಜವಾಗಿಯೂ ನಾನಿದ್ದಲ್ಲಿಗೆ ಬಂದಿರುವನೆ? ನನ್ನನ್ನು ಕಾಣಲೆಂದು, ತನ್ನೊಂದಿಗೆ ಕರೆದೊಯ್ಯಲೆಂದು ಬಂದಿರುವನೆ? ಬಂದಿರುವವನು ನಿಜವಾಗಿಯೂ ಮಹಾರಾಜ ದುಷ್ಯಂತನೆ? ಅಥವಾ–

–ಅಥವಾ ಹಲವು ವರ್ಷಗಳಿಂದ ರಾತ್ರಿ-ಹಗಲೆನ್ನದೆ ಅವಮಾನದ ಅಗ್ನಿಯಲ್ಲಿ ಬೇಯುತ್ತಿರುವ, ನಿರೀಕ್ಷೆಯ ನೋವಿನಲ್ಲಿ ನಲುಗುತ್ತಿರುವ, ತನ್ನದೇ ತಪ್ತ ಮನಸ್ಸಿನ ಹಳವಂಡವೇ ಇದು ? –ಇದ್ದರೂ ಇದ್ದೀತು. ಅಂದು ರಾಜಸಭೆಯಲ್ಲಿ ಎಲ್ಲರೆದುರು ದುಷ್ಯಂತನಿಂದ ತಿರಸ್ಕೃತಳಾಗಿ ಹೊರಟು ಬಂದಂದಿನಿಂದ ಇಲ್ಲಿಯವರೆಗೆ ತಾನು ಅನುಭವಿಸಿದ ಯಾತನೆಗೆ ಎಣೆಯುಂಟೆ ? ಅನೇಕ ಸಲ 'ಇಲ್ಲ, ಇನ್ನಿದನ್ನು ಸಹಿಸುವುದು ಅಸಾಧ್ಯ' ಅನ್ನಿಸಿ ಮನಸ್ಸು ಕೆಟ್ಟ ಯೋಚನೆಗಳನ್ನು ಮಾಡಿದ್ದಿದೆ. ಮನಸ್ಸಿನ ನೋವು ಹಾಗೆ ತಾಳಿಕೊಳ್ಳುವುದು ಅಶಕ್ಯವೆನಿಸಿದ ಪ್ರತಿಸಾರೆಯೂ ತಾನು ಇದೇ ಕ್ಷಣವನ್ನು ನೆನೆದು, ನಿರೀಕ್ಷಿಸಿ, ಕಲ್ಪಿಸಿ, ಅತಿ ಪ್ರಯಾಸದಿಂದ ತನ್ನನ್ನು ತಾನೇ ನಿಗ್ರಹಿಸಿದ್ದುಂಟು. ಈ ಕ್ಷಣ– 'ಆರ್ಯಪುತ್ರ ಬಂದಿದ್ದಾನೆ' ಎಂದು ಕೇಳಿಸಿಕೊಳ್ಳಲು ಕಾತರಿಸಿದ ಕ್ಷಣ– ಅದೆಷ್ಟು ಸಲ ತಾನು ಈ ಕ್ಷಣವನ್ನು ಕಲ್ಪಿಸಿಕೊಂಡು ನಿರೀಕ್ಷೆಯ ನೋವನ್ನು ಸಹಿಸುವ ಶಕ್ತಿ ಪಡೆದದ್ದಿಲ್ಲ ? ಈಗಲೂ ಸಹ ಇದು ಬರಿ ಕಲ್ಪನೆಯಾಗಿರಬಹುದೆ ? ಎರಡು ಕ್ಷಣಗಳಲ್ಲಿ ಮರಳಿ ತನ್ನನ್ನು ಆರ್ಯಪುತ್ರ ಬಂದಿಲ್ಲವೆಂಬ ಕ್ರೂರ ವಾಸ್ತವಕ್ಕೆ ತಂದೆಸೆಯುವ ಕಲ್ಪನೆಯೇ ಆಗಿದೆಯೆ ಇದು ?

''ದೇವಿ, ಇದೇನು ಹೀಗೆ ಸ್ತಬ್ಧಳಾಗಿ ಕೂತಿರುವೆ ? ಕುಮಾರ ಭರತನ ಮುಂಗೈಯಲ್ಲಿಯ ರಕ್ಷಾಕರಂಡಕವು ಕೆಳಗೆ ಬಿದ್ದಿತು. ಅದನ್ನು ಆಶ್ರಮಕ್ಕೆ ಬಂದ ಆಗಂತುಕನು ಎತ್ತಿಕೊಂಡರೂ ಏನೂ ಆಗಲಿಲ್ಲ. ನಾನು ಹೇಳುತ್ತಿರುವುದು ಕೇಳುತ್ತಿದೆ ತಾನೇ ದೇವಿ ?'' –ಸುವ್ರತೆ ಮತ್ತೆ ಕೇಳಿದಳು.

ಹೌದು. ತನಗೆ ಎಲ್ಲವೂ ಕೇಳುತ್ತಿದೆ. ಮಗುವಿನ ಜಾತಕರ್ಮ ಸಮಯದಲ್ಲಿ ಪೂಜ್ಯರಾದ ಮಾರೀಚರು ಕಟ್ಟಿದ ಅಪರಾಜಿತಾ ಬಳ್ಳಿ ಅದು. ತಾಯಿ-ತಂದೆಯ ವಿನಃ ಬೇರೆ ಯಾರಾದರೂ ಮುಟ್ಟಿದರೆ ಹಾವಾಗಿ ಕಚ್ಚುತ್ತದೆ. ಹಾಗಾಗಿಲ್ಲವೆಂದರೆ– ಸಂಶಯವೇ ಇಲ್ಲ.

"ಕುಮಾರ ಭರತನಿಗೂ ಆ ಆಗಂತುಕ ಮಹಾಪುರುಷನಿಗೂ ಆಶ್ಚರ್ಯವೆನಿಸುವಷ್ಟು ಹೋಲಿಕೆ ಇದೆ ದೇವಿ, ನಿಜವಾಗಿಯೂ ಆತ ಮಹಾರಾಜ ದುಷ್ಯಂತನೇ ಇರಬೇಕು. ನೀನೇಕೆ ಹೀಗೆ ಅಲ್ಲಾಡದೆ ಕೂತಿರುವೆ ದೇವಿ ? ಬೇಗ ಎದ್ದು ಬರಬಾರದೇ ?" –ಸುವ್ರತೆಗೆ ಆತುರ, ಆತಂಕ.

ಮಹಾರಾಜ ದುಷ್ಯಂತ ! ಕಾಡಿನಲ್ಲಿಯ ಮೊಗ್ಗಾಗಿದ್ದ ತನ್ನ ಮುಗ್ಧ ಜೀವನದಲ್ಲಿ ಪ್ರವೇಶಿಸಿ ಪ್ರೀತಿಯ ಮೊದಲ ಪಾಠ ಕಲಿಸಿದ ಪುರುಷ. ತನಗೇ ಅರಿವಿಲ್ಲದಂತೆ ತನ್ನಲ್ಲಿ ಸುಪ್ತವಾಗಿದ್ದ ಹೆಣ್ತನದ ಅಪಾರ ಆಸೆ ಆಕಾಂಕ್ಷೆಗಳನ್ನು ಪ್ರಚೋದಿಸಿ ಅರಳಿಸಿದಾತ. ತನ್ನ ಬಿಸಿಯಪ್ಪುಗೆಯಲ್ಲಿ ಜಗವನ್ನೆ ಮರೆಸಿದಾತ. 'ಜೀವನ ಒಂದು ಸುಂದರ ಕನಸು' ಎಂದು ನಂಬಿಸಿದಾತ. ಕ್ಷಣದಲ್ಲಿ ತನ್ನ ಸರ್ವಸ್ವವನ್ನೂ ಆತನ ಪದತಲದಲ್ಲಿ ಅರ್ಪಿಸುವ ಹಾಗೆ ಮೋಡಿ ಮಾಡಿದಾತ. ನಂತರ....ನಂತರ ಒಡಲಲ್ಲಿ ಆತನ ವಂಶದ ಕುಡಿಹೊತ್ತು ತುಂಬು ಸಂಕೋಚ-ಕಾತರ-ನಂಬಿಕೆಗಳಿಂದ ಆತನೆಡೆ ಹೋದಾಗ 'ಈಕೆ ಯಾರೋ ಗೊತ್ತಿಲ್ಲ' ಎಂದು ಕೈಝಾಡಿಸಿಬಿಟ್ಟ ಪುರುಷೋತ್ತಮ– ಮಹಾರಾಜ ದುಷ್ಯಂತ !

–ಮುಂದಿನದು ಬರಿ ನೋವಿನ ನೆನಪು. ಮಳೆ ಸುರಿಯುತ್ತಿರುವ ಅದೆಷ್ಟು ರಾತ್ರಿಗಳನ್ನು ತಾನು ಆತನ ನೆನಪಿನಲ್ಲಿ ಕಣ್ಣೀರು ಸುರಿಸುತ್ತ ಕಳೆದೆ....ಹೂಗಳು ಅರಳಿ ಪರಿಮಳ ಬೀರುತ್ತಿರುವಾಗ, ಕೋಗಿಲೆಗಳು ಮಾವಿನೆಲೆಗಳ ಹಿಂದೆ ಅಡಗಿ ಹಾಡುತ್ತಿರುವಾಗ, ನವಿಲುಗಳು ಗರಿಬಿಚ್ಚಿ ಕುಣಿಯುವಾಗ, ಅದೆಷ್ಟು ಸಂಜೆ-ಮುಂಜಾವುಗಳನ್ನು ತಾನು ಆತನ ವ್ಯರ್ಥ ನಿರೀಕ್ಷೆಯಲ್ಲಿ ಸಂಕಟಪಡುತ್ತ ಕಳೆದೆ.... ಇಡಿಯ ಜೀವನವೇ ಆತನಿಗಾಗಿ ಕಾಯುವಿಕೆಯಾಗಿಹೋಯಿತು....

"ಏಳು ದೇವಿ ಶಕುಂತಲಾ, ಹೀಗೆ ದಿಗ್ಭ್ರಮೆಗೊಂಡು ಕೂತುಬಿಡಬೇಡ. ನಿನ್ನ ತಪಸ್ಸು ಸಾರ್ಥಕವಾಯಿತು. ಕೊನೆಗೂ ಮಹಾರಾಜ ದುಷ್ಯಂತನು ನಿನ್ನ ಕಡೆ ಬಂದೇ ಬಿಟ್ಟನು. ತ್ವರೆ ಮಾಡು, ಏಳು...." –ಸುವ್ರತೆ ಮತ್ತು ಸಾನುಮತಿಯರು ಶಕುಂತಲೆಯನ್ನು ಅರ್ಧ ಎಳೆದುಕೊಂಡೇ ಹೊರನಡೆದರು.

ಓಹ್ ! ನಾರಿಯ ಮನೋವ್ಯಾಪಾರವು ನಿಜವಾಗಿ ವಿಚಿತ್ರವಾದುದು. ಯಾವ ಪುರುಷನಿಗಾಗಿ ಹಲವಾರು ವರ್ಷ ಹಗಲಿಡೀ ಕಾಯ್ದು-ಕಾಯ್ದು, ಯಾರಿಗಾಗಿ ಜೀವನವನ್ನೇ ಒಂದು ತಪಸ್ಸನ್ನಾಗಿಸಿದೆನೋ ಆತನು ನಿಜವಾಗಿಯೂ ಬಂದಿರುವಾಗ ಮನಸ್ಸಿನಲ್ಲಿ ಇದೆಂತಹ ನಿರ್ಲಿಪ್ತತೆ ? ಇದೆಂತಹ ತಾಟಸ್ಥ್ಯ ? ಅದೇಕೆ ತನ್ನ ಮನಸ್ಸು ಹೂವಾಗಿ ಅರಳಲೊಲ್ಲದು ? ಗರಿಬಿಚ್ಚಿ ಹಾರಲೊಲ್ಲದು ? ಇಷ್ಟು ವರ್ಷಗಳಿಂದ ನಿರೀಕ್ಷಿಸಿದ್ದ ಈ ಸಮಯ ಇಂದು ನಿಜವಾಗಿ ಒದಗಿ ಬಂದಾಗ ಇದೇನು, ತನ್ನ

ಮನಸ್ಸಿನಲ್ಲಿ ಈ ಬಗೆಯ ವಿಚಿತ್ರ ಕಾಠಿಣ್ಯ ?

ಅಂದು ಅರಮನೆಯಲ್ಲಿ ಅಷ್ಟೊಂದು ನಿಷ್ಠುರವಾಗಿ ತನ್ನನ್ನು ಹೊರಗಟ್ಟಿದ ಈ ಮನುಷ್ಯ ಇಂದು ತನ್ನೆದುರು ವಿನೀತನಾಗಿ ಮೊಳಕಾಲೂರಿದ್ದಾನೆ. 'ನಾನಂದು ಯಾವುದೋ ಬುದ್ಧಿಮಾಂದ್ಯಕ್ಕೊಳಗಾಗಿ ನಿನ್ನನ್ನು ತಿರಸ್ಕರಿಸಿದೆ. ನನ್ನನ್ನು ಕ್ಷಮಿಸು' – ಎಂದು ಬೇಡಿಕೊಳ್ಳುತ್ತಿದ್ದಾನೆ. 'ನನ್ನದು ಮಹಾಪರಾಧವಾಯಿತು. ನಾನು ಪಶ್ಚಾತ್ತಾಪದ ಬೆಂಕಿಯಲ್ಲಿ ಬೆಂದಿರುವೆ. ಈಗ ನೀನು ನನ್ನನ್ನು ಸ್ವೀಕರಿಸುವ ಗಳಿಗೆ ಬಂದಿದೆ' – ಎಂದು ಅಲ್ಪರಿಯುತ್ತಿದ್ದಾನೆ.

ಹ್ಞ ! ಅಪರಾಧ-ಕ್ಷಮೆ-ಪಶ್ಚಾತ್ತಾಪ ಈ ಶಬ್ದಗಳಿಗೀಗ ನನ್ನ ದೃಷ್ಟಿಯಲ್ಲಿ ಯಾವ ಅರ್ಥವೂ ಉಳಿದಿಲ್ಲ. ನೂರು ಆಸೆ ಹೊತ್ತು ನಿನ್ನೆಡೆ ಬಂದಿದ್ದ ನನ್ನನ್ನು ನೀನು ಎಂದು ತಿರಸ್ಕರಿಸಿದೆಯೋ, ಜೀವನದ ಬಹುಪಾಲು ಮಧುರ ಭಾವನೆಗಳೆಲ್ಲಾ ಆ ದಿನವೇ ಸತ್ತು ಹೋದವು. ಅಂದಿನಿಂದ ಇಂದಿನವರೆಗೂ ನಿರಂತರವಾಗಿ ಈ ಶಕುಂತಲೆಯ ಬದುಕು ಒಂದು ಅಗ್ನಿಕುಂಡವಾಗಿದೆ.... ಬೆಂಗಾಡಾಗಿದೆ.... ದಾವಾನಲವಾಗಿದೆ....ಬತ್ತಿ ಹೋದ ಸಮುದ್ರವೂ ಆಗಿದೆ.. – ಇಂತಹ ತಾನು ಈತನನ್ನು ಸ್ವೀಕರಿಸಬೇಕಂತೆ ! ಏನಿದು ವಿಧಿಯ ಕ್ರೂರ ಅಪಹಾಸ್ಯ !

"ದೇವಿ, ಕುಮಾರನನ್ನು ಎತ್ತಿಕೋ. ನಿನ್ನೊಡಗೂಡಿಯೇ ಪೂಜ್ಯ ಮಾರೀಚರ ದರ್ಶನ ಪಡೆಯಬಯಸುವೆ."

ಆಹಾ ! ಎಂತಹ ಕೋಮಲತೆ ಆತನ ದನಿಯಲ್ಲಿ ! ಯಾವ ನಾರಿಯನ್ನಾದರೂ ಮೋಹದಿಂದ ಪರವಶಗೊಳಿಸಬಲ್ಲ ಮೋಡಿ ಆತನ ದನಿಯಲ್ಲಿ, ಆತನ ಇಡೀ ವ್ಯಕ್ತಿತ್ವದಲ್ಲಿ. ಅಂತೆಯೇ ತಾನು ಪರವಶಳಾದದ್ದು, ಮೈಮರೆತದ್ದು, ಸರ್ವಸ್ವ ಧಾರೆಯೆರೆದದ್ದು, ಎಲ್ಲ ಕಳಕೊಂಡದ್ದು....ಕೊನೆಗೆ ಈ ಅವಮಾನದ-ನಿರೀಕ್ಷೆಯ-ಕಾತರದ-ಅಪಾರ ನೋವಿನ ನಿರಂತರ ಅನುಭವಕ್ಕೊಳಗಾದದ್ದು....

– ಈಗ ಈತ ಬಂದನೆಂದು ಸಂತೋಷಿಸಲೆ ? ಓಡಿಹೋಗಿ ಈತನ ತೆರೆದ ತೋಳುಗಳಲ್ಲಿ ಸೇರಿಕೊಂಡು ಇಷ್ಟು ದಿನ ಅನುಭವಿಸಿದ್ದನ್ನೆಲ್ಲಾ ಮರೆತುಬಿಡಲೆ ? ಇಷ್ಟು ದಿನಗಳು ಆಚರಿಸಿದ ವ್ರತಗಳು, ಗೈದ ತಪಸ್ಸು, ಮಾಡಿದ ಪೂಜೆ – ಎಲ್ಲಾ ಸಫಲವಾಯಿತೆಂದು ಧನ್ಯಳಾಗಲೇ ?

"ಇಲ್ಲ, ಸಾಧ್ಯವಿಲ್ಲ...." ಶಕುಂತಲೆಗೆ ಅರಿವಾಗದಂತೆ ಅವಳಿಂದ ಹೊರಬಿದ್ದ ಮಾತಿಗೆ ಬೇರೆಯೇ ಅರ್ಥ ಕಲ್ಪಿಸಿದ ದುಷ್ಯಂತ : "ಅದೇಕೆ ? ನಾಚಿಕೆಯೆ ? ನಮಗಿದು ಅಭ್ಯುದಯ ಕಾಲ. ಮಹಾ ಸುದಿನ. ಗುರುಗಳನ್ನು ನಾವಿಬ್ಬರೂ ಒಟ್ಟಾಗಿಯೇ ನೋಡೋಣ."

ತಾನು ಗುರುಗಳೆದುರಿಗೆ ಪತಿ ಹಾಗೂ ಪುತ್ರರೊಡಗೂಡಿ ಹೋಗಲು ಲಜ್ಜೆ ಪಡುತ್ತಿರುವೆನೆಂದು ಭಾವಿಸಿದ್ದಾನೆ ಈತ. ಹೌದು. ಈತನ ಜೊತೆ ಹೋಗಲು ತಾನು ಒಲ್ಲೆನೆಂದು, ಈತನನ್ನು ಸ್ವೀಕರಿಸಲು ತನ್ನ ಅಂತರಾತ್ಮ ಒಪ್ಪುತ್ತಿಲ್ಲವೆಂದು, ಈತ ಎಂದಿಗೂ ಕಲ್ಪನೆ ಕೂಡ ಮಾಡಲಾರ. ಆರ್ಯ ಸ್ತ್ರೀ ಅಲ್ಲವೆ ತಾನು ? ಪತಿ ಎಂತಹವನೇ ಇರಲಿ, ಆತನನ್ನು ತಿರಸ್ಕರಿಸುವ ಹೀನ ವಿಚಾರ ಆರ್ಯ ಸ್ತ್ರೀಗೆ ಬರಬಾರದಲ್ಲ !

–ಅಂದರೆ ತಾನು ನಿಜವಾಗಿ ಮಹಾರಾಜ ದುಷ್ಯಂತನನ್ನು ತಿರಸ್ಕರಿಸುತ್ತಿದ್ದೇನೆಯೆ ? ಯಾವನ ಬರವಿಗಾಗಿ ಇಷ್ಟು ದಿನ ಕಾಯ್ದೆನೋ ಆತ ಕೊನೆಗೊಮ್ಮೆ ಬಂದಿದ್ದಾನೆ. ಜೊತೆಗೆ, ಪುನರ್ಮಿಲನದ ಈ ಗಳಿಗೆಯಲ್ಲಿ, ನಿರೀಕ್ಷೆ ಸಫಲವಾದ ಈ ಕ್ಷಣದಲ್ಲಿ, ಇಷ್ಟು ದಿನ ನನ್ನ ಅಂತರಾಳದಲ್ಲಿ ಸುಪ್ತವಾಗಿದ್ದುದೊಂದು ತೀವ್ರ ಪ್ರಜ್ಞೆಯನ್ನು ಬಡಿದೆಬ್ಬಿಸಿದ್ದಾನೆ. ಈ ಪ್ರಜ್ಞೆ, ನನ್ನ ಸ್ತ್ರೀತ್ವವು ಅಪಮಾನಿತವಾಗಿದೆ ಎಂಬ ತೀವ್ರವಾದ ಈ ಅರಿವು, ನಾನು ಕಾಯುತ್ತಿರುವಾಗ, ನೋಯುತ್ತಿರುವಾಗ ನನ್ನ ಆಳದಲ್ಲೆಲ್ಲೋ ಅಡಗಿಕೊಂಡಿತ್ತು. ಕಾಯುವುದು-ನೋಯುವುದು ಎಲ್ಲ ಮುಗಿಯಿತೆಂಬ ಈ ಕ್ಷಣದಲ್ಲಿ ನನ್ನೊಳಗೆ ಮೌನವಾಗಿ ಹೂತುಕೊಂಡಿದ್ದ ಈ ಬೇರೆಯದೇ ಒಂದು ಉತ್ಕಟ ಸಂವೇದನೆ ಒಮ್ಮೆಲೆ ಪುಟಿದೆದ್ದಿದೆ....ಧಿಕ್ಕಾರ ! ನಾರಿಯ ಮಧುರ ಭಾವನೆಗಳನ್ನು ಎಗ್ಗಿಲ್ಲದೆ ಹೊಸಕಿ ಹಾಕುವ, ನಂತರ ಬಂದು ಕ್ಷಮೆ ಕೇಳುವ, ಆಕೆ ಕ್ಷಮಿಸಿಯೇ ಕ್ಷಮಿಸುತ್ತಾಳೆಂಬ ಖಚಿತ ನಂಬಿಕೆ ಹೊಂದಿರುವ, ಇಂತಹ ಗಂಡಸಿಗೆ ಧಿಕ್ಕಾರ !

"ಅಮ್ಮಾ, ಈತ ನಿಜವಾಗಿಯೂ ಮಹಾರಾಜ ದುಷ್ಯಂತನೇ ! ಈತನೇ ನನ್ನ ತಂದೆಯೆ ?" –ಕಣ್ಣುಗಳಲ್ಲಿ ಮುಗ್ಧ ಕುತೂಹಲ ತುಂಬಿಕೊಂಡು ಕೇಳುತ್ತಿದ್ದಾನೆ ಕುಮಾರ ಭರತ. ತನ್ನ ಪ್ರೀತಿಯ ಮಗ. ದುಷ್ಯಂತನ ವಂಶೋದ್ಧಾರಕ. ಪುರುವಂಶದ ಉತ್ತರಾಧಿಕಾರಿ !....ತನ್ನ ಪ್ರೀತಿಯ ಮಗ ದುಷ್ಯಂತನ ಉತ್ತರಾಧಿಕಾರಿ ಅಂದ ಮೇಲೆ ತಾನು ಮಹಾರಾಜನನ್ನು ಹೇಗೆ ಧಿಕ್ಕರಿಸಬಲ್ಲೆ ? ತಾನು ಕೇವಲ ಹಿಂದೆ ತಿರಸ್ಕೃತಳಾದ, ಈಗ ಜಾಗೃತಳಾದ ಹೆಣ್ಣು ಮಾತ್ರವಲ್ಲ. ತಾನೀಗ ಒಬ್ಬ ಮಗನ ತಾಯಿ. ಈ ಮಗನ ಪೂರ್ವೋತ್ತರ ಅಭಿವೃದ್ಧಿಯೇ ತನ್ನ ಕರ್ತವ್ಯ. ಈ ಮಗನಿಗೆ ಆತನ ಅಧಿಕಾರವನ್ನು ನಾನು ದೊರಕಿಸಿಕೊಡಲೇಬೇಕು. ನನ್ನ ತಾಯಿಯಾದ ಮೇನಕೆ ಮಗುವನ್ನು ತ್ಯಜಿಸಿಹೋದದ್ದು ಕ್ಷಮಿಸಲನರ್ಹವಾದ ಕರ್ತವ್ಯಲೋಪವೆಂದು ನನಗೆ ಯಾವಾಗಲೂ ಅನ್ನಿಸಿದ್ದಿದೆ. ನಾನು ತಾಯಿಯ ಕರ್ತವ್ಯ ನಿರ್ವಹಿಸಲೇಬೇಕು. ನನ್ನ ಮಗ ಪುರುವಂಶದ ಯುವರಾಜನಾಗಲೇಬೇಕು. ಮತ್ತು ಅದಕ್ಕಾಗಿ–

‘‘ನಡೆ ದೇವಿ ಶಕುಂತಲೆ, ಪೂಜ್ಯರು ನಮ್ಮ ನಿರೀಕ್ಷೆಯಲ್ಲಿದ್ದಾರೆ.’’ –ಅತ್ಯುತ್ಸಾಹದಿಂದ ಹೇಳಿದ ದುಷ್ಯಂತನನ್ನು ಆಕೆ ಮೌನವಾಗಿ ಹಿಂಬಾಲಿಸಿದಳು.

* * *

ಮಹಾರಾಜ ದುಷ್ಯಂತನ ಅರಮನೆಯಲ್ಲಿ ಸಂಭ್ರಮವೋ ಸಂಭ್ರಮ. ಮುನಿ ಕನ್ಯೆಯನ್ನು ತಿರಸ್ಕರಿಸಿದ ನಂತರ ಮಂಕುಕವಿದಂತಿದ್ದ ಮಹಾರಾಜನೀಗ ಕಳೆದುಕೊಂಡಿದ್ದ ಪತ್ನಿಯನ್ನೂ ವಂಶೋದ್ಧಾರಕನನ್ನೂ ಇಂದು ಮರಳಿ ಅರಮನೆಗೆ ಕರೆತಂದಿದ್ದಾನೆ. ನಗರವಾಸಿಗಳೆಲ್ಲಾ ಯುವರಾಜನನ್ನು ಪಡೆದ ವಿಜಯೋತ್ಸಾಹದಲ್ಲಿದ್ದಾರೆ. ಇಡಿಯ ದಿನ ಮನೆ-ಮನೆಗಳಲ್ಲಿ ಸಂತೋಷ, ಸಂಭ್ರಮ, ಹಬ್ಬದ ವಾತಾವರಣ. ದೇವಾಲಯುಗಳಲ್ಲಿ ವಿಶೇಷ ಪೂಜೆ. ಬ್ರಾಹ್ಮಣ-ಮುತ್ತೈದೆಯರಿಗೆ ವಿಶೇಷ ದಕ್ಷಿಣೆ-ಬಾಗಿನಗಳು. ಅರಮನೆಯ ದಾಸ-ದಾಸಿಯರಿಗೆಲ್ಲ ಉಡುಗೊರೆಗಳು. ಕುಲಪುರೋಹಿತರಿಂದ ಮಹಾ ಅರ್ಚನೆ, ಮಂಗಳಘೋಷ, ಹೋಮ-ಹವನ, ಆಶೀರ್ವಾದ ಇತ್ಯಾದಿ. ಹಿರಿಯ ರಾಣಿ ವಸುಮತಿ ತಾನೇ ಎಲ್ಲದರ ಉಸ್ತುವಾರಿ ವಹಿಸಿದ್ದಾಳೆ. ಸ್ವತಃ ಶಕುಂತಲೆಯ ಅಂತಃಪುರವನ್ನು ಗಮನವಿಟ್ಟು ಶೃಂಗರಿಸಿದ್ದಾಳೆ. ಇಂದು ಈ ಅರಮನೆಯಲ್ಲಿ ಶಕುಂತಲೆ ಮಹಾರಾಜನೊಡನೆ ಕಳೆಯಲಿರುವ ಪ್ರಥಮ ರಾತ್ರಿಯಲ್ಲವೆ ?

* * *

ನವವಧು ಪ್ರಥಮ ರಾತ್ರಿಯಂದು ಪತಿಯನ್ನು ಎದುರು ನೋಡುತ್ತಿರುವಾಗ ಅನುಭವಿಸುವಷ್ಟೇ ತೀವ್ರ ಉತ್ಕಂಠೆಯನ್ನು ಶಕುಂತಲೆ ಅನುಭವಿಸುತ್ತಿದ್ದಾಳೆ. ಉತ್ಸವದ ಗದ್ದಲ ಮುಗಿದಿದೆ. ಮಹಾರಾಜನೀಗ ಯಾವ ಕ್ಷಣದಲ್ಲಾದರೂ ಬರಬಹುದು. ಅದಕ್ಕೆ ಮೊದಲೇ ಅವಳೊಂದು ಮಹತ್ವದ ನಿರ್ಧಾರ ಮಾಡಬೇಕಾಗಿದೆ. ಅವಳ ಮನಸ್ಸಿನಲ್ಲೊಂದು ಮಹಾವಿಪ್ಲವ ನಡೆಯುತ್ತಿದೆ. ಅವಳೀಗ ಅದಕ್ಕೆ ಕೊನೆ ತೋರಿಸಬೇಕಾಗಿದೆ. ಅವಳ ಆತ್ಮಸಮ್ಮಾನ ಜಾಗೃತವಾಗಿದೆ. ಗೊಡ್ಡು ಸಂಪ್ರದಾಯಗಳ, ರೀತಿ-ನೀತಿಗಳ, ಎಲ್ಲ ಬಗೆಯ ಸಂಕೋಲೆಗಳನ್ನು ಕಿತ್ತೊಗೆದು ತನ್ನ ಆತ್ಮಸಾಕ್ಷಿಗೆ ಮಾತ್ರ ನಿಷ್ಠಳಾಗಿ ಆಕೆಯೀಗ ನಡೆದುಕೊಳ್ಳಬೇಕಾಗಿದೆ.

ದಾಸಿ ಮಂಗಳವಾದ್ಯ ಮೊಳಗಿಸಿ ಮಹಾರಾಜನ ಆಗಮನವನ್ನು ಸಾರುವುದಕ್ಕೂ ಶಕುಂತಲೆಯ ಮನಸ್ಸು ಒಮ್ಮೆಲೆ ಸ್ಥಿಮಿತಕ್ಕೆ ಬಂದು ನಿಶ್ಚಿತ ನಿರ್ಧಾರ ಕೈಗೊಳ್ಳುವುದಕ್ಕೂ ಸರಿಹೋಯಿತು.

ಓಹ್ ! ಈ ಮಹಾರಾಜ ದುಷ್ಯಂತ.... ಹಲವು ವರ್ಷಗಳ ಹಿಂದೆ ಕಣ್ವ ಮುನಿಗಳ ಆಶ್ರಮದಲ್ಲಿ ಮೊದಲ ಬಾರಿ ಈತ ತನ್ನನ್ನು ಅನುನಯಿಸಿದಾಗ

ಹೇಗಿದ್ದನೋ ಇನ್ನೂ ಹೆಚ್ಚೂ ಕಡಿಮೆ ಹಾಗೆಯೇ ಇದ್ದಾನೆ. ಅದೇ ಉದ್ರೇಕಿತ ಮುಖ, ಹಣೆಯ ಮೇಲೆ ಬೆವರಹನಿ ಸಾಲು, ಸಣ್ಣಗೆ ಕಂಪಿಸುವ ಬಾಹುಗಳು.... ಧ್ವನಿಯೋ ಅಮೃತಮಯ.

"ದೇವಿ, ನಾನಿಂದು ಪರಮಸುಖಿ !"

"......"

"ಏನು ? ಏಕಾಂತದಲ್ಲೂ ನಾಚಿಕೆಯೆ ? ನನ್ನ ಹತ್ತಿರ ಬರುವುದಿಲ್ಲವೆ ? ವರ್ಷಗಳ ಕಾಲ ನಿನಗಾಗಿ ತಪಿಸಿರುವ ನನ್ನ ಮೈ-ಮನಸ್ಸುಗಳನ್ನು ಶಾಂತಗೊಳಿಸುವುದಿಲ್ಲವೆ ?"

.....ಇಲ್ಲ ಮಹಾರಾಜ, ವರ್ಷಗಳ ಕಾಲ ತಪಿಸಿರುವ ನಿನ್ನ ಮೈ-ಮನಸ್ಸುಗಳು ಒಂದು ಅಪ್ಪುಗೆಯಿಂದ ಶಾಂತವಾಗಬಹುದು. ಹಳೆಯದನ್ನೆಲ್ಲಾ ಮರೆತು ನೀನು ಮತ್ತೆ ತುಂಬು ಉತ್ಸಾಹದಿಂದ ಹೊಸ ಜೀವನ ಸುರು ಮಾಡಬಹುದು. ಆದರೆ ನೀನು ಗಾಸಿಗೊಳಿಸಿದ ನನ್ನ ಒಳಗು ಮತ್ತೆ ಚೇತರಿಸಲಾರದು. ನೀನು ಹೊಸಕಿ ಹಾಕಿದ ನನ್ನ ಭಾವನೆಗಳು ಮತ್ತೆ ಜೀವ ತಳೆಯಲಾರವು. ಈ ಶಕುಂತಲೆಯ ಆತ್ಮಸಮ್ಮಾನಕ್ಕೆ ಮಾಯಲಾರದ ಗಾಯವಾಗಿದೆ. ಆಕೆಯಿನ್ನೆಂದೂ ಮೊದಲಿನಂತಾಗಲಾರಳು....

"ಇನ್ನೂ ಏನು ಯೋಚಿಸುತ್ತಿರುವೆ ದೇವಿ ? ನಾನಿನ್ನು ಈ ಅಂತರ ಸಹಿಸಲಾರೆ...."

"ನಿಲ್ಲು ಮಹಾರಾಜ !" —ಶಕುಂತಲೆಯ ಧ್ವನಿ ಕಂಚಿನಂತೆ ಮೊಳಗಿತು. ಮಹಾರಾಜನ ಮುಖದ ಮೇಲೆ ಒಮ್ಮೆಲೆ ಮೂಡಿದ ದಿಗ್ಭ್ರಮೆ ಕಂಡು ಶಕುಂತಲೆಗೆ ತನ್ನ ಧ್ವನಿ ಅವಶ್ಯಕತೆಗಿಂತ ಹೆಚ್ಚು ಕಠಿಣವಾಗಿದೆಯೆಂದು ಅನ್ನಿಸಿತು. ಧ್ವನಿಯನ್ನು ಸ್ಥಿಮಿತಕ್ಕೆ ತರಲು ಯತ್ನಿಸಿದಳು.

"ಮಹಾರಾಜ, ನಾನು ಈ ಅರಮನೆಗೆ ಬಂದಿರುವುದು ಕುಮಾರ ಭರತನ ಶ್ರೇಯಸ್ಸಿಗಾಗಿ ಮಾತ್ರ. ಆತನ ವಿದ್ಯಾಭ್ಯಾಸ, ತರಬೇತಿ ಸರಿಯಾಗಿ ನಡೆಯಬೇಕು ಎಂಬ ಹಂಬಲದಿಂದ ಮಾತ್ರ ನಾನು ಬಂದಿರುವೆ. ನಿನ್ನ ನಂತರ ಅವನು ಈ ಸಾಮ್ರಾಜ್ಯದ ಕೀರ್ತಿಯನ್ನು ಎಲ್ಲ ಕಡೆ ಹರಡುವಂತೆ ನೋಡಿಕೊಳ್ಳಬೇಕಲ್ಲ. ಅವನನ್ನು ಹಾಗೆ ಬೆಳೆಸುವ ಜವಾಬ್ದಾರಿ ನಮ್ಮಿಬ್ಬರದೂ ಅಲ್ಲವೆ ? ಈ ಏಕಮಾತ್ರ ಕಾರಣದಿಂದ ನಾನು ಇಲ್ಲಿ ಇರುವೆ. ಇದೊಂದು ಬಿಟ್ಟರೆ ನಮ್ಮಿಬ್ಬರ ಮಧ್ಯೆ ಇನ್ನಾವ ಸಂಬಂಧವೂ ಇನ್ನು ಸಾಧ್ಯವಿಲ್ಲ."

"ದೇವಿ ! ಇದೇನು ?" —ದುಷ್ಯಂತನಿಗೆ ಆಘಾತ— "ನೀನಿನ್ನೂ ನನ್ನನ್ನು ಕ್ಷಮಿಸಲಿಲ್ಲವೆ ?"

‘‘ಒಬ್ಬರನ್ನೊಬ್ಬರು ಒಪ್ಪಿಕೊಳ್ಳುವ ಸಂದರ್ಭದಲ್ಲಿ ಮಾತ್ರ ಕ್ಷಮೆಗೆ ಅರ್ಥವಿದೆ ಮಹಾರಾಜ. ಆದರೂ ನಿನ್ನ ಮನಸ್ಸಿಗೆ ಸಮಾಧಾನವಾಗುವಂತಿದ್ದರೆ ಇದೋ, ನಿನ್ನನ್ನು ಕ್ಷಮಿಸಿದ್ದೇನೆ.’’

‘‘ಅಂದರೆ ದೇವಿ, ನೀನೇನು ನನ್ನ ತಪ್ಪಿಗಾಗಿ ಶಿಕ್ಷೆ ಕೊಡಲೆಂದು ಹೀಗೆ ಮಾಡುತ್ತಿದ್ದೀಯಾ ? ಅಥವಾ ಇದು ಪ್ರತಿರೋಧವೋ?’’

ಶಕುಂತಲೆಯ ದನಿಯಲ್ಲಿ ನೋವು ಇಣುಕಿತು, ‘‘ಇಲ್ಲ ಮಹಾರಾಜ, ನಾನು ಶಿಕ್ಷೆ ಕೊಡುವಷ್ಟು ಕಠಿಣ ಮನಸ್ಸಿನವಳಾಗಲೀ ಪ್ರತಿರೋಧ ಮಾಡುವಷ್ಟು ಸಣ್ಣ ಮನಸ್ಸಿನವಳಾಗಲೀ ಇಲ್ಲ. ದಯವಿಟ್ಟು ವಿವರಣೆ ಕೇಳಬೇಡ. ಶಕುಂತಲೆಯ ಜೀವನದಲ್ಲಿ ಲೌಕಿಕ ಪ್ರೇಮದ ಅಧ್ಯಾಯ ಮುಗಿದುಹೋಯಿತು.’’

‘‘ದೇವಿ,’’ –ದುಷ್ಯಂತನ ಧ್ವನಿ ಈಗ ಸ್ಪಷ್ಟವಾಗಿ ಕಂಪಿಸುತ್ತಿತ್ತು– ‘‘ನಾನು ನಿನ್ನೊಂದಿಗೆ ಕಠಿಣವಾಗಿ ವರ್ತಿಸಿದೆ ನಿಜ, ಆದರೆ ಅದು ನನ್ನ ತಪ್ಪಲ್ಲ. ದೂರ್ವಾಸ ಮುನಿಗಳ ಶಾಪದಿಂದ ಉಂಗುರವು ಕಳೆದುಹೋಗಿ ನನ್ನ ಬುದ್ಧಿಗೆ ಮಾಂದ್ಯವುಂಟಾಗಿ ಇಷ್ಟೆಲ್ಲ ಅನಾಹುತವಾಯಿತೆಂದು ಪೂಜ್ಯರಾದ ಮಾರೀಚರು ಹೇಳಲಿಲ್ಲವೆ?’’

ಶಕುಂತಲೆಯ ಬಾಡಿದ ಮುಖದ ಮೇಲೆ ವಿಷಾದದ ಮುಗುಳ್ನಗು ಮೂಡಿತು : ‘‘ತಾನು ಮಾಡಿದ ತಪ್ಪಿನಿಂದ ಸುಲಭವಾಗಿ ಪಾರಾಗಲು ಪುರುಷನಿಗೆ ನೂರು ದಾರಿಗಳಿವೆ. ತನ್ನ ಅನುಚಿತ ವರ್ತನೆಯಿಂದ ಬೇರೆಯವರಿಗೆ ಆಗುವ ನೋವಿನ ಹೊಣೆಯಿಂದ ತಪ್ಪಿಸಿಕೊಳ್ಳಲೂ ಆತನಿಗೆ ಹಲವು ಮಾರ್ಗಗಳಿವೆ. ಪುರುಷ ತಪ್ಪು ಮಾಡಿದನೆಂದರೆ ನಮ್ಮ ಸಮಾಜ ಗಂಭೀರವಾಗಿ ಪರಿಗಣಿಸುವುದೂ ಇಲ್ಲ, ಆದ್ದರಿಂದ ಆತನೂ ಲಜ್ಜಿತನಾಗುವುದಿಲ್ಲ.... ಮತ್ತು ಇದನ್ನೆಲ್ಲ ನಾನೀಗ ಚರ್ಚೆ ಮಾಡ ಬಯಸುವುದೂ ಇಲ್ಲ.’’ –ಮಾತು ಆಡುತ್ತಿದ್ದಂತೆ ಶಕುಂತಲೆ ಗಂಭೀರಳಾದಳು, ‘‘ನಾನು ಹೇಳುವುದಿಷ್ಟೆ : ಮುನಿಗಳ ಶಾಪದಂತಹ ಬಾಹ್ಯ ಕಾರಣಗಳಿಂದ, ಉಂಗುರವು ಕಳೆದುಹೋಯಿತೆಂಬ ಕ್ಷುಲ್ಲಕ ನೆಪದಿಂದ, ಒಬ್ಬ ಗಂಡಸು ತಾನು ಪ್ರೀತಿಸಿದ, ಕೂಡಿದ, ಫಲಿಸಿದ ಹೆಣ್ಣನ್ನು ದೂರ ಮಾಡುವುದಾದರೆ ಆ ಪ್ರೀತಿಗೆ ಅರ್ಥವಿಲ್ಲ. ಅಂಥವನನ್ನು ಕೂಡಲು ನನ್ನ ಆತ್ಮಸಮ್ಮಾನ ಒಪ್ಪುವುದಿಲ್ಲ. ಹೆಣ್ಣಾಗಿ ನಾನು ಆತ್ಮಸಾಕ್ಷಿಗೆ ವಿರುದ್ಧವಾಗಿ ವರ್ತಿಸಲಾರೆ. ಪ್ರಾಜ್ಞನಾದ ನಿನಗೆ ಹೆಚ್ಚಿಗೆ ಹೇಳಲಾರೆ....’’

–ಹೊರಗಡೆ ನಿಧಾನವಾಗಿ ಕತ್ತಲು ಪಸರಿಸುತ್ತಿತ್ತು. ಭಾರವಾದ ಕಾಲುಗಳನ್ನೆತ್ತಿ ಅಸ್ಥಿರ ಹೆಜ್ಜೆಗಳನ್ನಿಡುತ್ತ ಪುರುವಂಶದ ಚಕ್ರವರ್ತಿ ಧೀರೋದಾತ್ತ ಪುರುಷಶ್ರೇಷ್ಠ ದುಷ್ಯಂತನು ನಿಧಾನವಾಗಿ ಶಕುಂತಲೆಯ ಅಂತಃಪುರದಿಂದ ಹೊರಗೆ ನಡೆದನು.

(೧೯೯೧)

# ರಾಧವ್ವ

ಸುಮಾರಾಗಿ ಮರೆತೇ ಹೋಗಿರುವ ನನ್ನ ಬಾಲ್ಯದ ದಿನಗಳ ಪೈಕಿ ಇನ್ನೂ ಆಗಾಗ ನೆನಪಿಗೆ ಬರುತ್ತಿರುವ ಕೆಲವೇ ಘಟನೆಗಳಲ್ಲಿ ಒಂದು— ನಾವು ಮನೆಯವರೆಲ್ಲ ಕೂಡಿಕೊಂಡು ನಮ್ಮ ನಗರದಿಂದ ಸುಮಾರು ಐವತ್ತು ಕಿಲೋಮೀಟರು ದೂರವಿರುವ ಹನುಮಾಪುರವೆಂಬ ಹಳ್ಳಿಯ ಹನಮಂತದೇವರ ದರ್ಶನಕ್ಕೆ ತಪ್ಪದೆ ಹೋಗುತ್ತಿದ್ದುದು. ಬಹು ಜಾಗೃತ ಪ್ರಾಣದೇವರೆಂಬ ಖ್ಯಾತಿಯ ಆ ದೇವರ ದರ್ಶನಕ್ಕಾಗಿ ಹಳೆಯ ಮುಂಬಯಿ ಪ್ರಾಂತದ ಹಾಗೂ ಈಗಿನ ಉತ್ತರ ಕರ್ನಾಟಕದ ಎಲ್ಲೆಡೆಯಿಂದ ಜನ ಬರುತ್ತಿದ್ದರು. ಪ್ರತಿ ವರ್ಷ ವೈಶಾಖ ಶುದ್ಧ ಪ್ರತಿಪದೆಯಿಂದ ವ್ಯಾಸಪೂರ್ಣಿಮೆಯವರೆಗೆ ಹದಿನೈದು ದಿನ ಅಲ್ಲಿ ತುಂಬಾ ವಿಜೃಂಭಣೆಯಿಂದ ಜರುಗುವ ಉತ್ಸವದ ಖರ್ಚನ್ನು ಒಂದೊಂದು ದಿನ ಒಬ್ಬೊಬ್ಬ ಗಣ್ಯ ಶ್ರೀಮಂತ ಭಕ್ತರು ನಿರ್ವಹಿಸುತ್ತಿದ್ದರು. ಆ ಉತ್ಸವದಲ್ಲಿ ಅತಿ ಹೆಚ್ಚಿನ ಸಂಖ್ಯೆಯ ಜನ ಸೇರುವ ರಾಮನವಮಿಯ ದಿನದ ಖರ್ಚು ನನ್ನ ತಂದೆಯವರ ಪಾಲಿನದಾಗಿತ್ತು. ನನ್ನ ತಂದೆ-ತಾಯಿ ಇಬ್ಬರೂ ತುಂಬ ಶ್ರದ್ಧೆ-ನಂಬಿಕೆ-ಭಕ್ತಿಯಿಂದ ಆ ಉತ್ಸವವನ್ನು ಮಾಡಿಸುತ್ತಿದ್ದರು. ಸೇರಿದ ಸಾವಿರಾರು ಜನರಿಗೆ ಆ ದಿನ ಜಿಲೇಬಿ-ಬೂಂದಿ ಲಾಡು-ಬೇಸನ್ ಲಾಡು-ಹಯಗ್ರೀವ ಇತ್ಯಾದಿಗಳ ಸಮಾರಾಧನೆಯಾಗುತ್ತಿತ್ತು. ಉಳಿದ ದಿನಗಳಲ್ಲೆಲ್ಲ ಬರಿ ಬ್ರಾಹ್ಮಣರಿಗೆ ಮಾತ್ರ ಸೀಮಿತವಾಗಿರುತ್ತಿದ್ದ ಸಮಾರಾಧನೆ ರಾಮನವಮಿಯ ದಿನ ಮಾತ್ರ ಎಲ್ಲ ಜಾತಿಯವರಿಗೂ ತಲುಪುತ್ತಿತ್ತು. ನನ್ನ ತಾಯಿ ಸ್ವತಃ ಸೆರಗು ಕಟ್ಟಿ ನಿಂತು ದೇವಸ್ಥಾನದ ಊಳಿಗದವರಿಗೆ ಹಾಗೂ ಊರಲ್ಲಿನ ಎಲ್ಲ ಶೂದ್ರರಿಗೆ ಒತ್ತಾಯ ಮಾಡಿ ಉಣಬಡಿಸುತ್ತಿದ್ದುದು ನನಗಿನ್ನೂ ನೆನಪಿದೆ. ಅಷ್ಟೇ ಅಲ್ಲ, ಊಟದ ನಂತರ ಆಕೆ ಅವರೆಲ್ಲರೊಂದಿಗೆ ಕೂತು ಅವರ ಸುಖ-ದುಃಖ ವಿಚಾರಿಸಿ, ಅವರಿಗೆ ಬಟ್ಟೆ ಬರೆ ದಾನಮಾಡಿ, ಔಷಧೋಪಚಾರದ ವ್ಯವಸ್ಥೆಯನ್ನು ಮಾಡಿ, ಸಾಕಷ್ಟು ಧನ ಸಹಾಯವನ್ನೂ ಮಾಡುತ್ತಿದ್ದರು. ಈ ಪರಂಪರೆ ರಾಮನವಮಿಯ ದಿನ ಮಾತ್ರವಲ್ಲ, ಕಾರ್ತಿಕ ಮಾಸದಲ್ಲೊಮ್ಮೆ, ಚೈತ್ರ ಮಾಸದಲ್ಲೊಮ್ಮೆ, ನಡುನಡುವೆ ಮಹತ್ವದ ಅಮಾವಾಸ್ಯೆಗಳು ಬಂದಾಗ, ಹಾಗೂ ನಗರದ ನಮ್ಮ ಮನೆಯಲ್ಲಿ ಏನಾದರೂ ಸಮಾರಂಭ ನಡೆದ ನಂತರ, ಹೀಗೆ

ವರ್ಷದಲ್ಲಿ ಆರೇಳು ಸಲ ನನ್ನ ತಾಯಿ ಹನುಮಾಪುರಕ್ಕೆ ಹೋಗಿ ಅಲ್ಲಿನ ಬಡಬಗ್ಗರಿಗೆ, ವಿಶೇಷತಃ ಶೂದ್ರರಿಗೆ, ಅನ್ನ-ವಸ್ತ್ರ-ಔಷಧ ಹಾಗೂ ಹಣ ದಾನ ಮಾಡುವ ಕಾರ್ಯಕ್ರಮ ಅನೂಚಾನವಾಗಿ ನಡೆದುಕೊಂಡು ಬಂದಿತ್ತು. ಹೀಗಾಗಿ ಆ ಗ್ರಾಮದ ಬಹುಸಂಖ್ಯಾತರಾದ ಬಡಜನ ನನ್ನ ತಾಯಿ ಅಂದರೆ ಪ್ರತ್ಯಕ್ಷ ದೇವತೆ ಅಂತನ್ನುತ್ತಿದ್ದುದರಲ್ಲಿ ವಿಶೇಷವೇನಿಲ್ಲ. ನಮ್ಮ ಕಾರು ಆ ಊರಿನ ಅಗಸಿಯ ಬಳಿ ನಿಲ್ಲುತ್ತಿದ್ದುದೇ ತಡ, ಹಲವಾರು ಹರಕು ಬಟ್ಟೆಯ ದೀನಮುಖದ ಹುಡುಗರು-ದೊಡ್ಡವರು ಅದನ್ನು ಸುತ್ತುವರಿಯುತ್ತಿದ್ದ ದೃಶ್ಯ ನನಗೆ ಕಣ್ಣಮುಂದೆ ಕಟ್ಟಿದಂತಿದೆ. 'ಬಂದ್ಯಾ ಯವ್ವಾ, ಬೇಶಿ ಅದೀಯಾ ?' ಅಂತ ಕೇಳಿ ನಂತರ, 'ಯಾಡ್ಡದಿನಾ ಇರ್ತೀಯಲ್ಲವಾ ಯವ್ವ ?' ಅಂತ ಆಕೆಯ ವಾಸ್ತವ್ಯದ ಬಗ್ಗೆ ಖಾತರಿ ಮಾಡಿಕೊಂಡೇ ಅವರೆಲ್ಲ ಅಲ್ಲಿಂದ ಚದರುತ್ತಿದ್ದರು. ಬಂದ ತಕ್ಷಣ ತಮ್ಮ ಕಷ್ಟ-ಸುಖ ಹೇಳಿ ಆಕೆಗೆ ತ್ರಾಸು ಕೊಡಬಾರದು, ಆಕೆ ದೇವರ ದರ್ಶನ-ಸ್ನಾನ-ನೈವೇದ್ಯ-ಪ್ರಸಾದ-ವಿಶ್ರಾಂತಿ ಎಲ್ಲ ಮುಗಿಸುವ ತನಕ ಡಿಸ್ಟರ್ಬ್ ಮಾಡಬಾರದು, ಅನ್ನುವ ತಿಳಿವಳಿಕೆಯಿರುತ್ತಿತ್ತು ಅವರಿಗೆ. ಅಂತಲೇ ಸಾಯಂಕಾಲದ ತನಕ ಅವರ್‍ಯಾರೂ ಮಡಿ-ಮಡಿ ಅನ್ನುವ ಬ್ರಾಹ್ಮಣರ ಸರ್ಕಲ್ ಕಡೆ ಸುಳಿಯುತ್ತಿರಲಿಲ್ಲ. ಹೊತ್ತು ಮುಳುಗುತ್ತಿದ್ದಂತೆ ಹೊಲಗೆಲಸಗಳಿಂದ ಮರಳಿದ ಅವರೆಲ್ಲ ಯಥಾಪ್ರಕಾರ ನನ್ನ ತಾಯಿಯನ್ನು ಸುತ್ತುವರಿಯುತ್ತಿದ್ದರು.

ಆದರೆ ಈ ವಾಡಿಕೆಯ ನಿಯಮಗಳಿಗೆ ವಿರುದ್ಧವಾಗಿ ವರ್ತಿಸುವ ವ್ಯಕ್ತಿಯೊಂದಿತ್ತು, ಹನುಮಾಪುರದ ಹೊಲೆಯರ ಕೇರಿಯಲ್ಲಿ. ನಾನೀಗ ಇಷ್ಟು ವರ್ಷಗಳ ನಂತರವೂ ಮರೆಯಲಾಗದೆ ನೋವು ತುಂಬಿದ ಕೃತಜ್ಞತೆಯೊಂದಿಗೆ ಸ್ಮರಿಸುತ್ತಿರುವುದು ಅದೇ ವ್ಯಕ್ತಿಯನ್ನು. ಆಕೆ ರಾಘವ್ವ, ಹನುಮಾಪುರದ ಹೊರವಲಯದಲ್ಲಿ ಅವಳ ಪುಟ್ಟ ಗುಡಿಸಲು, ದೊಡ್ಡ ಸಂಸಾರ, ದೇವಸ್ಥಾನದ ಪೌಳಿಯ ಕಸವನ್ನು ದಿನಕ್ಕೆರಡು ಬಾರಿ ಬಳಿಯುವುದು ಅವಳ ಕಸುಬು. ದೇವಸ್ಥಾನದವರು ಉಂಬಳಿ ಹಾಕಿಕೊಟ್ಟ ಒಂದೆಕರೆ ಹೊಲವೇ ಅವಳ ಹೊಟ್ಟೆಗೆ ಆಧಾರ. ಅವಳ ಮನೆಯ ಗಂಡಸರೆಲ್ಲ ಸೋಮಾರಿಗಳಾದುದರಿಂದ ಆ ಹೊಲದ ಉತ್ಪನ್ನ ಸಂಸಾರಕ್ಕೆ ಏನೂ ಸಾಲದೆ ಮಕ್ಕಳು ಮರಿಗಳೆಲ್ಲ ವರ್ಷದಲ್ಲಿ ಆರು ತಿಂಗಳು ಹೆಚ್ಚೂಕಡಿಮೆ ಉಪವಾಸವೇ ಇರಬೇಕಾದ ಪರಿಸ್ಥಿತಿ. ಬಡತನ-ಉಪವಾಸ-ರೋಗರುಜಿನ ಇವೆಲ್ಲ ಜೀವನದ ಅವಿಭಾಜ್ಯ ಅಂಗಗಳೇ ಆಗಿದ್ದ ಹನುಮಾಪುರದ ಬಹುಪಾಲು ಜನರಂತೆ ರಾಘವ್ವನೂ ಅವಕ್ಕೆಲ್ಲ ಒಂದು ರೀತಿಯಿಂದ ಒಗ್ಗಿಕೊಂಡಿದ್ದಳು. ಆದರೆ ಉಳಿದವರಂತೆ ಅವಳೆಂದೂ ಕಷ್ಟಕಾರ್ಪಣ್ಯಗಳ ಬಗೆಗೆ

ಬಾಯಿಬಿಟ್ಟು ಆಡುವವಳಲ್ಲ, ದೇವರನ್ನು ದೂಷಿಸುವವಳಲ್ಲ. ಯಾರನ್ನೂ ಬೇಡುವವಳಲ್ಲ, ಆ ಬಗೆಯ ಬಾಳಿಗೆ ಎಂದೂ ಬೇಸರಿಸುವವಳಲ್ಲ. ನನ್ನ ತಾಯಿಯ ಬಗ್ಗೆ ಆಕೆಗೆ ಅದೆಂತಹದೋ ವಿಶಿಷ್ಟ ವಿಚಿತ್ರ ಭಕ್ತಿ. ಪ್ರತಿಸಲ ನನ್ನ ತಾಯಿ ಹನುಮಾಪುರಕ್ಕೆ ಕಾಲಿಟ್ಟ ಕ್ಷಣದಿಂದ ತಿರುಗಿ ಹೊರಡುವವರೆಗೂ ರಾಧವ್ವ ಆಕೆಯ ಬೆಂಬಿಡದ ಸಂಗಾತಿಯಾಗುತ್ತಿದ್ದಳು. ಮಡಿಯ ಬ್ರಾಹ್ಮಣರು ಊಟಕ್ಕೆ ಕೂಡ್ರುವಾಗ 'ಕೃಷ್ಣಾರ್ಪಣ' ಹೇಳಲು ಮಾತ್ರ ನನ್ನ ತಾಯಿ ಒಬ್ಬರೇ ಉಗ್ರಾಣದೊಳಕ್ಕೆ ಹೋಗುತ್ತಿದ್ದರು. ಉಳಿದ ಸಮಯವೆಲ್ಲಾ ರಾಧವ್ವ ಅವರ ಜತೆಗೇ ಇರುತ್ತಿದ್ದಳು. ನನ್ನ ತಾಯಿ ಅನೇಕ ಸಲ ಹೇಳುತ್ತಿದ್ದ ಹಾಗೆ ಅವರಿಬ್ಬರಿಗೂ ಅದೇನೋ ಪೂರ್ವಜನ್ಮದ ಸಂಬಂಧವೇ ಇದ್ದಿರಬೇಕು. ತೀರ ಚಿಕ್ಕವಳಾಗಿದ್ದ ನನ್ನನ್ನು ಎತ್ತಿಕೊಂಡೇ ರಾಧವ್ವ ನನ್ನ ತಾಯಿಯನ್ನು ಹಿಂಬಾಲಿಸುತ್ತಿದ್ದಳು. ನನ್ನ ತಾಯಿ ಬೀದಿಯಲ್ಲಿ ನಡೆಯುತ್ತಿದ್ದರೆ ಆಕೆ ಮುಂದಾಗಿ ನಡೆದು ದಾರಿಯಲ್ಲಿನ ಚಿಕ್ಕಪುಟ್ಟ ಕಲ್ಲುಗಳನ್ನು ಎತ್ತಿ ಆಚೆಗೆ ಎಸೆಯುತ್ತಿದ್ದಳು. ಇವರು ಕೂಡ್ರಬೇಕಾದರೆ ನೆಲದ ಧೂಳು ಹೊಡೆದು ಜಮಖಾನೆ ಹಾಸಿ ದಿಂಬು ಇಡುತ್ತಿದ್ದಳು. ಸ್ವಚ್ಛವಾಗಿ ಕೈತೊಳೆದು ಬಂದೇ ಇವರ ಕಾಲು ಮುಟ್ಟಿ ನಮಸ್ಕರಿಸುತ್ತಿದ್ದಳು. ಮಧ್ಯಾಹ್ನ ಇವರಿಗೆ ಅಲ್ಲೇ ಜೊಂಪು ಹತ್ತಿದರೆ ಬೀಸಣಿಕೆಯಿಂದ ಗಾಳಿ ಬೀಸುತ್ತ ಪಕ್ಕದಲ್ಲೇ ಕೂತಿರುತ್ತಿದ್ದಳು. ಇವರಿರುವಷ್ಟು ದಿನ ತನ್ನ ದಿನನಿತ್ಯದ ಯಾವ ಕೆಲಸವನ್ನೂ ಮಾಡದೆ, ಮನೆಯ ಕಡೆಗೂ ಹೋಗದೆ, ಇವರೊಂದಿಗೇ ಇದ್ದು ಬಿಡುತ್ತಿದ್ದಳು. ಹೊಲೆಯರಲ್ಲಿ ಅಪರೂಪವಾದ 'ರಾಧವ್ವ' ಅನ್ನುವ ಹೆಸರನ್ನು ಆಕೆಗೆ ಇಡುವಾಗ ಆಕೆಯ ತಾಯಿ-ತಂದೆ ಆ ಬಗ್ಗೆ ಯೋಚಿಸಿದ್ದರೋ ಇಲ್ಲವೋ, ಆದರೆ ರಾಧಾ ಅನ್ನುವ ಹೆಸರೇ ಸೂಚಿಸುವಂತೆ ಆಕೆಯ ವ್ಯಕ್ತಿತ್ವದ ಕಣಕಣವೂ ನಿಷ್ಕಲ್ಮಷ ಪ್ರೇಮಮಯವಾಗಿತ್ತು. ಆಕೆ ಆಗಾಗ ನನ್ನನ್ನು ಎತ್ತಿಕೊಂಡು ತನ್ನ ಹಟ್ಟಿಗೆ ಕರೆದೊಯ್ದು ಕೊಡುವ ನೊರೆ ಹಾಲಿನ ರುಚಿ, ಊರಾಚೆಯ ಆಕೆಯ ಹೊಲದ ಜೋಳದ ಬೆಳಸಿಯ ಸವಿ, ಆಕೆಯ ಮನೆಯ ಒಳಭಾಗದಿಂದ ಬರುತ್ತಿದ್ದ ಬಳ್ಳೊಳ್ಳಿ-ಕೆಂಪುಮೆಣಸಿನಕಾಯಿ ಚಟ್ನಿಯ ಕಂಪು -ಇವೆಲ್ಲ ಆಗ ನಾನು ಬಹಳ ಪ್ರೀತಿಸುತ್ತಿದ್ದ ವಿಷಯಗಳು. ಹನುಮಾಪುರ ಅಂದರೆ ಹನುಮಂತದೇವರು. ಅಂದರೆ ನೊರೆಹಾಲು-ಕೆನೆಮೊಸರು. ಅಂದರೆ ರಾಧವ್ವ. ಅಂದರೆ ಕೊನೆಮೊದಲಿಲ್ಲದ ತುಂಬಿಹರಿಯುವ ಕೃಷ್ಣೆಯ ಪ್ರವಾಹದಂತಹ ಪ್ರೀತಿ. ಅಂತಲೇ ನನ್ನ ಭಾವನೆಯಾಗಿತ್ತು ಆಗ. ಅಂತೆಯೇ ಪರೀಕ್ಷೆಗಳು ಮುಗಿದು ಬೇಸಿಗೆಯ ರಜ ಬರುತ್ತಲೇ ನಾವೆಲ್ಲ ಹುಡುಗರು ಉತ್ಸಾಹದಿಂದ ತಾಯಿ-ತಂದೆಯೊಂದಿಗೆ ಹನುಮಾಪುರಕ್ಕೆ ಹೋಗುತ್ತಿದ್ದೆವು. 'ನಮ್ಮ ಹಡೆದವ್ವ ಬಂದಳ್ರೆಪೋ' ಅಂತ ಕೂಗಿಕೊಂಡು ಧಾವಿಸಿ ಬರುವ ರಾಧವ್ವನನ್ನು ಕಂಡು

ಖುಷಿಗೊಳ್ಳುತ್ತಿದ್ದೆವು. ಅಲ್ಲಿರುವತನಕವೂ ಅವಳ ಪ್ರೀತಿಯ ಅಮೃತವನ್ನು ಸವಿದು ಧನ್ಯತೆ ಅನುಭವಿಸುತ್ತಿದ್ದೆವು. ನಮ್ಮ ತಾಯಿಯ ಸಂಗದಿಂದ-ಸೇವೆಯಿಂದ ರಾಧವ್ವನಿಗೆ ಹೆಚ್ಚು ತೃಪ್ತಿಯಾಗುತ್ತಿತ್ತೋ, ರಾಧವ್ವನ ಸಂಗತಿಯಿಂದ ನಮಗೆಲ್ಲ ಹೆಚ್ಚು ತೃಪ್ತಿಯಾಗುತ್ತಿತ್ತೋ ಹೇಳಲು ಸಾಧ್ಯವಿರಲಿಲ್ಲ.

* * *

ಹನುಮಾಪುರದೊಂದಿಗೆ ಅದೆಂತಹ ಋಣಾನುಬಂಧವೋ, ನನ್ನ ತಾಯಿ ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬಯಸಿದರು. ನಗರದ ಹಲವರು ತಜ್ಞ ಡಾಕ್ಟರುಗಳು ಪರೀಕ್ಷಿಸಿ ಔಷಧೋಪಚಾರ ಮಾಡಿ, ಏನೂ ತಿಳಿಯದೆ ಕೈಬಿಟ್ಟ ನಂತರ, 'ನನ್ನನ್ನು ಹನುಮಾಪುರಕ್ಕೆ ಕರಕೊಂಡು ಹೋಗಿರಿ, ಪ್ರಾಣದೇವರ ಸನ್ನಿಧಿಯಲ್ಲೇ ನನ್ನ ಪ್ರಾಣ ಹೋಗಲಿ' ಅಂತ ಆಕೆ ಪಟ್ಟು ಹಿಡಿದಾಗ ಆಕೆಯ ಅಪೇಕ್ಷೆಯಂತೆ ಆಳು-ಕಾಳು ಸಮೇತ ತಂದೆಯವರೂ ಹಿರಿಯ ಮಗಳಾದ ನಾನೂ ಆಕೆಯನ್ನು ಅಲ್ಲಿಗೇ ಕರೆದೊಯ್ದು ಠಿಕಾಣಿ ಹೂಡಿದೆವು. ಅಲ್ಲಿ ಆಕೆ ಸುಮಾರು ಒಂದು ತಿಂಗಳಕಾಲ ಬದುಕಿದ್ದರು. ಹಾಸಿಗೆಯ ಮೇಲೆ ಮಲಗಿದ್ದಲ್ಲಿಂದಲೇ ಆಕೆಯ ದಾನ-ಧರ್ಮ ಕಾರ್ಯಕ್ರಮಗಳು ನಡೆಯುತ್ತಿದ್ದವು. ತೀರ ಕೊನೆಗೆ ಮಾತ್ರ ಆಕೆ ಅಂತರ್ಮುಖಿಯಾಗಿದ್ದು ಆ ದಿನಗಳಲ್ಲಿ ಆಕೆಯ ಎಡೆಬಿಡದ ಸಂಗಾತಿಯಾಗಿ ಹಗಲು-ರಾತ್ರಿ ರಾಧವ್ವ ಮಾಡಿದ ಸೇವೆಯ ಪರಿ ನಿಜಕ್ಕೂ ಶಬ್ದಗಳ ಅಳವಿಗೆ ಸಿಗುವಂಥದಲ್ಲ. ಹಗಲು ಊಟ ಮಾಡದೆ ರಾತ್ರಿ ನಿದ್ದೆ ಮಾಡದೆ ಗಂಭೀರವದನದಿಂದ ರಾಧವ್ವ ನನ್ನ ತಾಯಿಯ ಬಳಿ ಕುಳಿತಿರುತ್ತಿದ್ದಳು. ಅತಿ ಮೆಲುದನಿಯಲ್ಲಿ ಆಕೆಯ ಬೇಕು-ಬೇಡಗಳನ್ನು ವಿಚಾರಿಸುತ್ತಿದ್ದಳು. ಆಕೆಯ ಮಲ-ಮೂತ್ರಾದಿಗಳು ಸಹ ಪ್ರಸಾದವೋ ಎಂಬಷ್ಟು ಭಕ್ತಿಯಿಂದ ಕೈಯಿಂದಲೇ ತೆಗೆದು ಸ್ವಚ್ಛ ಮಾಡುತ್ತಿದ್ದಳು. ನಡುರಾತ್ರಿ ಸರಿದಾಗ ಒಬ್ಬಳೇ ಹೋಗಿ ಭವ್ಯವಾದ ಹನುಮಂತ ದೇವರ ಮೂರ್ತಿಯೆದುರು ಕೂತು, 'ನಮ್ಮ ಹಡದವ್ವನ್ನ ಬದುಕಿಸಿಕೊಡು. ಇಲ್ಲಾಂದರ ನಾ ನಿನ್ನ ಮಕಾ ನೋಡಾಕಿಲ್ಲ, ನಿನ್ನಾಣೆ' ಅಂತ ಕಣ್ಣೀರುಗರೆಯುತ್ತಿದ್ದಳು. ಶೀಘ್ರವೇ ಬಂದೆರಗಲಿರುವ ಸಾವನ್ನೆದುರಿಸಲು ಮಾನಸಿಕ ಸಿದ್ಧತೆ ಮಾಡಿಕೊಳ್ಳುತ್ತಲಿದ್ದ ನಾವು ರಾಧವ್ವನ ಮೌನ ತಪಸ್ಸನ್ನು ಅಚ್ಚರಿಯಿಂದ ನೋಡುತ್ತಿದ್ದೆವು. ಆ ಅಶಿಕ್ಷಿತ ಹಳ್ಳಿಗಾಡಿನ ಹೆಂಗಸಲ್ಲಿ ಅದೆಂತಹ ಅಪೂರ್ವ ಸಂಸ್ಕೃತಿ, ಅದೆಂತಹ ತತ್ವಜ್ಞಾನ-ದಾರ್ಶನಿಕತೆ ಇದ್ದವು ! ಅದ್ಯಾವ ಕಾರಣಗಳಿಂದ ಆಕೆ ನನ್ನ ತಾಯಿಯ ಬಗ್ಗೆ ಅಂತಹ ವರ್ಣನಾತೀತ ಪ್ರೀತಿ-ಭಕ್ತಿ-ಶ್ರದ್ಧೆಗಳನ್ನಿರಿಸಿಕೊಂಡಿದ್ದಳು ! ಅದು ಹೇಗೆ ಅಂತಹ ಕಲುಷಿತ ಪರಿಸರದಲ್ಲಿ ಆಕೆಯ

ವ್ಯಕ್ತಿತ್ವ ಅಂತಹ ಔನ್ನತ್ಯವನ್ನು ದೈವತ್ವವನ್ನು ಪಡೆದಿತ್ತು ! —ಬಹಳ ಕಾಲ ಈ ಬಗ್ಗೆ ನಾನು ವಿಚಾರ ಮಾಡುತ್ತಲೇ ಇದ್ದೆ.

ನನ್ನ ತಾಯಿ ಕೊನೆಯುಸಿರೆಳೆದಾಗ ಅವಳ ಹತ್ತಿರವಿದ್ದ ನನ್ನ ತಂದೆ, ನಾನು ಹಾಗೂ ರಾಧವ್ವ ಕೆಲವು ಕ್ಷಣ ನಿಶ್ಚಲರಾಗಿ ಸುಮ್ಮನೇ ಕೂತಿದ್ದೆವು. ಅವರಿವರು ಬಂದು ಹೋ ಅಂತ ಅಳಲುಪಕ್ರಮಿಸಿದಾಗಲೇ ನಾವು ಎಚ್ಚರಗೊಂಡದ್ದು, ತಟ್ಟನೇ ಎದ್ದು ಶವದ ಕಾಲು ಮುಟ್ಟಿ ನಮಸ್ಕರಿಸಿದ ರಾಧವ್ವ ಊರಿನಿಂದ ಒಂದು ಮೈಲಿಯಾಚೆ ಹರಿಯುತ್ತಿದ್ದ ಕೃಷ್ಣಾ ನದಿಯಲ್ಲಿ ಮುಳುಗುಹಾಕಿ ತನ್ನ ಹಟ್ಟಿಗೆ ಹೋಗಿ ಮಲಗಿದವಳು ಮುಂದೆ ಮೂರು ದಿನ ಏಳಲೇ ಇಲ್ಲವಂತೆ.

ನನ್ನ ತಾಯಿ ಕಾಲವಾದ ನಂತರವೂ ನಾವು ವರ್ಷದಲ್ಲಿ ಐದಾರುಸಲ ಯಥಾ ಪ್ರಕಾರ ಹನುಮಾಪುರಕ್ಕೆ ಹೋಗುತ್ತಲೇ ಇದ್ದೆವು. ಪ್ರತಿಸಲ ಅಲ್ಲಿಗೆ ಹೋದಾಗ ನಾವು ಅಲ್ಲಿರುವಷ್ಟು ಕಾಲವೂ ತಂದೆಯವರ ಹಿಂದೆ-ಮುಂದೆ ಸುಳಿದಾಡಿ ನಮ್ಮ ತಾಯಿಯ ಗುಣಗಾನ ಮಾಡಿ ಕಣ್ಣೀರು ಸುರಿಸಿ ತಂದೆಯವರ ಮನದಲ್ಲಿ ಅನುಕಂಪದ ಅಲೆಗಳನ್ನು ಹುಟ್ಟಿಸಿ ಅವರಿಂದ ಧನಸಹಾಯ ಪಡೆದು ಕೃತಾರ್ಥರಾಗುತ್ತಿದ್ದವರೇ ಬಹಳ. ಅದೆಲ್ಲ ಈಗ ನಮಗೆ ಬೇಸರ ತರಿಸುತ್ತಿತ್ತು. ನಿಜವಾದ ಭಾವನೆಗಳುಳ್ಳವಳು ರಾಧವ್ವ ಒಬ್ಬಳೇ ಅಂತ ನಮಗೆ ಚೆನ್ನಾಗಿ ಗೊತ್ತಿತ್ತು. ಈಗಲೂ ಆಕೆ ನಾವು ಹೋದ ತಕ್ಷಣ ಬರುತ್ತಿದ್ದಳು. ನನ್ನ ಅಣ್ಣ-ತಮ್ಮಂದಿರ ಮದುವೆಗಳಾದಾಗ, ಅಕ್ಕ-ತಂಗಿಯರಿಗೆ ಮಕ್ಕಳು ಹುಟ್ಟಿದಾಗ, 'ನನ್ನ ಅವ್ವನ ಬಳಗ ಹಿಂಗ ದೊಡ್ಡದಾಗ್ಲಿ' ಅಂತ ಹರಸುತ್ತಿದ್ದಳು. 'ನೀ ಥೇಟು ನಮ್ಮವ್ವನ್ಹಾಂಗ' ಅಂತ ನನಗೆ ನೆಟಿಕೆ ಮುರಿಯುತ್ತಿದ್ದಳು. ನಮಗೇ ತಿಳಿದಿರದ, ನಮ್ಮ ತಾಯಿಯ ದೊಡ್ಡ ಗುಣಗಳನ್ನು ತೋರಿಸುವ, ಅನೇಕ ಪ್ರಸಂಗಗಳನ್ನು ಹರಿಕಥೆ ಹೇಳುವಷ್ಟೇ ಶ್ರದ್ಧಾಭಕ್ತಿಗಳಿಂದ ಹೇಳುತ್ತಿದ್ದಳು. ನಮ್ಮೆಲ್ಲರ ಸೇವೆಯನ್ನು ಮಾಡುತ್ತಿದ್ದಳು. ಕಣ್ಣು ಕಾಣುವುದು ಕಡಿಮೆಯಾದರೂ ಮೈಯಲ್ಲಿನ ಶಕ್ತಿ ಸೋರಿಹೋಗಿದ್ದರೂ ಕೋಲೂರಿಕೊಂಡು ಬಂದು, 'ಬಂದ್ಯಾ ಯವ್ವಾ ? ನಿನ್ನ ನೋಡಿ ಸಂಕಟ ಕಮ್ಮಿ ಆತು. ಬೇಶ್ಯಾಗಿ ಇರು ಮಗಳs' ಅಂತ ನನ್ನನ್ನು ಆಶೀರ್ವದಿಸುತ್ತಿದ್ದಳು. ಗತಿಸಿದ ನನ್ನ ತಾಯಿಯನ್ನು ನೆನೆದು ಮೌನವಾಗಿ ಕಣ್ಣೀರು ಕರೆಯುತ್ತಿದ್ದಳು. ನಾನು ಅಂತರ್ಜಾತೀಯ ಲಗ್ನ ಮಾಡಿಕೊಂಡಾಗ, 'ಅದೆಂತಹ ಪುಣ್ಯಾತ್ಮ ಧರ್ಮಿಷ್ಠರ ಮಗಳು ಹೀಗೆ ಕುಲಗೆಟ್ಟು ಹೋಗುವುದೇ' ಅಂತ ಹನುಮಾಪುರದ ಬ್ರಾಹ್ಮಣರೆಲ್ಲ ಶಪಿಸಿದಾಗ, ರಾಧವ್ವ ಒಬ್ಬಳೇ, 'ಯಾವ ಜಾತಿಯವನರೇ ಯಾಕಿರ್ಲಿ, ಮನುಷ್ಯಾ ಒಳ್ಳೇವನಾಗಿದ್ದರ ಸಾಕು' ಅಂದಿದ್ದಳಂತೆ.

* * *

ದೂರದೂರಿಗೆ ಬಂದು ನೆಲೆಸಿದ ನಾನು ಬಹಳ ಕಾಲ ಮತ್ತೆ ಹನುಮಾಪುರಕ್ಕೆ ಹೋಗಲಾಗಿರಲಿಲ್ಲ. ಹಾಗಿರುವಾಗೊಮ್ಮೆ ಅಲ್ಲಿಂದ ಬಂದಿದ್ದ ಯಾರೋ ಹೇಳಿದರು- ರಾಧವ್ವನಿಗೆ ಕ್ಯಾನ್ಸರ್ ಅಂತೆ. ತುಂಬ ಸೋತುಹೋಗಿದ್ದಾಳಂತೆ. ಅವಳ ಮಕ್ಕಳು-ಮರಿ ಯಾರೂ ಅವಳನ್ನು ವಿಚಾರಿಸಿಕೊಳ್ಳುತ್ತಿಲ್ಲವಂತೆ, ಇತ್ಯಾದಿ. ನನ್ನ ತಂದೆಯವರಿಗೆ ವಯಸ್ಸಾಗಿತ್ತು. ಅಣ್ಣ-ತಮ್ಮಂದಿರು, ಅಕ್ಕ-ತಂಗಿಯರು ಅವರವರ ಸಂಸಾರಗಳಲ್ಲಿ ಮಗ್ನರಾಗಿದ್ದರು. ಇತ್ತೀಚಿನ ವರ್ಷಗಳಲ್ಲಿ ತಂದೆಯವರು ರಾಮನವಮಿಗೆ ಮಾತ್ರ ಹನುಮಾಪುರಕ್ಕೆ ಹೋಗುತ್ತಿದ್ದರು. ಅದೂ ಬೆಳಿಗ್ಗೆ ಹೋಗಿ ಸಮಾರಾಧನೆ ಮುಗಿಸಿ ರಾತ್ರಿಯೇ ಅಲ್ಲಿಂದ ಹೊರಟು ಬಂದುಬಿಡುತ್ತಿದ್ದರು. ರಾಧವ್ವನಿಗೆ ಹುಷಾರಿಲ್ಲದ ಸುದ್ದಿ ಕೇಳಿ ಅಯ್ಯೋ ಪಾಪ ಅಂತಂದು ಒಂದಿಷ್ಟು ಹಣ ಕೊಟ್ಟು ಬಂದಿದ್ದರು. 'ಒಳ್ಳೆ ಹೆಣ್ಮಗಳು, ಹೀಗಾಗಬಾರದಿತ್ತು' ಅಂದಿದ್ದರು. ಇನ್ನೇನು ಮಾಡಲು ಸಾಧ್ಯ– ಅಂದುಕೊಂಡಿದ್ದರು.

ವಿಷಯ ತಿಳಿದು ದೂರದ ಊರಿನಲ್ಲಿದ್ದ ನಾನು ಸಹಜವಾಗಿಯೇ ತ್ರಸ್ತಳಾಗಿದ್ದೆ. ನಮ್ಮ ಮನೆತನದ ಜೀವವಾಗಿದ್ದ -ಬೆಳಕಾಗಿದ್ದ ನಮ್ಮ ತಾಯಿಯವರನ್ನು ಹತ್ತಿಪ್ಪತ್ತು ವರ್ಷಗಳ ಕಾಲ ನಿರ್ವಂಚನೆಯಿಂದ ನಿರ್ವ್ಯಾಜಪ್ರೀತಿಯಿಂದ ಸೇವಿಸಿದ್ದ ಆ ಹೆಣ್ಮಗಳು ಕ್ಯಾನ್ಸರ್‌ನಂಥ ಭೀಕರ ಕಾಯಿಲೆಗೆ ತುತ್ತಾಗಿ, ಅಸಹಾಯಕಳಾಗಿ ಬಳಲುತ್ತಿರುವಾಗ, ಅವಳಿಂದ ಅಷ್ಟೊಂದನ್ನು ಪಡೆದುಕೊಂಡಿದ್ದ ನಾವು ಅವಳಿಗಾಗಿ ಏನೂ ಮಾಡುವುದು ನಿಜವಾಗಿಯೂ ಸಾಧ್ಯವಿರಲಿಲ್ಲವೇ ಅಂತ ನನ್ನ ಮನಸ್ಸಿನಲ್ಲಿ ತುಮುಲ ಶುರುವಾಯಿತು. ಅವಳನ್ನು ನಗರಕ್ಕೆ ಕರೆತಂದು ದವಾಖಾನೆಗೆ ಸೇರಿಸಿ ಹೊತ್ತು ಹೊತ್ತಿಗೆ ಆಹಾರ-ಪಾನೀಯ-ಪಥ್ಯ ಒದಗಿಸಿ ಸರಿಯಾದ ಆರೈಕೆ ಮಾಡುವುದು ನಮ್ಮೆಲ್ಲರ ಕರ್ತವ್ಯವಾಗಿರಲಿಲ್ಲವೇ ಅಂತ ನನಗೆ ಅನಿಸತೊಡಗಿತು. ಆದರೇನು ? ತಂದೆಯವರಿಗೆ ನಿಶ್ಶಕ್ತಿ, ಪರಾಧೀನತೆ. ಅಣ್ಣ-ತಮ್ಮಂದಿರಿಗೆ ಅವರವರ ನೌಕರಿ-ಬಿಝಿನೆಸ್ಸು, ಅವರವರ ಹೆಂಡಂದಿರಿಗೆ ಸಹಜ ಅನಾಸಕ್ತಿ. ಅಕ್ಕತಂಗಿಯರು ಅತ್ತೆಮನೆಗಳಲ್ಲಿರುವವರು. ಇನ್ನುಳಿದುದು ಸರ್ವತಂತ್ರ ಸ್ವತಂತ್ರಳಾಗಿದ್ದ ನಾನೇ. ನಾನೇ ರಾಧವ್ವನನ್ನು ಕರೆತಂದು ಕ್ಯಾನ್ಸರ್ ಹಾಸ್ಪಿಟಲ್‌ಗೆ ಸೇರಿಸುವುದು ಯೋಗ್ಯ ಹಾಗೂ ಅವಶ್ಯ. ಈ ಬಗ್ಗೆ ಎರಡು ಮಾತಿಲ್ಲ ಅಂದುಕೊಂಡೆ. ನಿರ್ಧರಿಸಿದೆ.

–ಆದರೆ ಸಮಸ್ಯೆಗಳಿದ್ದವು. ನನ್ನ ಮಕ್ಕಳು ಚಿಕ್ಕವು. ಗಂಡನಿಗೆ ವಿಪರೀತ ಜವಾಬ್ದಾರಿಯ ನೌಕರಿ. ನಾನು ರೋಗಿಯ ಸೇವೆಗಾಗಿ ದವಾಖಾನೆಯಲ್ಲುಳಿದರೆ ಸಂಸಾರವನ್ನು ನೋಡುವವರ್‍ಯಾರು ? ಅದೂ ಅಲ್ಲದೆ ದವಾಖಾನೆಯಲ್ಲಿರುವ ಒಂದು

ಥರಾ ಉಗ್ರ ವಾಸನೆಯಿಂದ ನನಗೆ ಯಾವಾಗಲೂ ತಲೆ ತಿರುಗಿ ವಾಂತಿಯೇ ಬಂದು ಬಿಡುವದಲ್ಲ –

* * *

ಆ ವರ್ಷದ ರಾಮನವಮಿಯಂದು ನನ್ನ ತಮ್ಮನ ಮಗನ ಉಪನಯನವನ್ನು ಹನುಮಾಪುರದಲ್ಲೇ ಮಾಡುವುದೆಂದು (ನಮ್ಮ ಗತಿಸಿದ ತಾಯಿಯ ಬಯಕೆಯಂತೆ) ನಿರ್ಧರಿಸಿದ್ದರಿಂದ ನನ್ನ ತಮ್ಮನಿಂದ ನನಗೊಂದು ಒತ್ತಾಯಪೂರ್ವಕ ಕಾಗದ ಬಂದಿತು– ಈಗ ಹನುಮಾಪುರದಲ್ಲಿ ಜಾತಿ-ಗೀತಿ ಅನ್ನುವ, ಮಡಿ-ಮೈಲಿಗೆ ಅನ್ನುವ, ಹಳೆಯ ಪೀಳಿಗೆಯ ಕರ್ಮಠ ಬ್ರಾಹ್ಮಣರ್‍ಯಾರೂ ಉಳಿದಿಲ್ಲ. ಉಳಿದವರು ಸಾಕಷ್ಟು ಆಧುನಿಕರಾಗಿದ್ದಾರೆ. ನೀನು ಏನೂ ಯೋಚನೆ ಮಾಡದೆ ಬಾ–ಅಂತ. ಸರಿ, ನಾನು ಮಕ್ಕಳ ಜವಾಬ್ದಾರಿಯನ್ನು ಗಂಡನಿಗೆ ವಹಿಸಿ ಹೊರಟೆ. ರಾಮನವಮಿಗಾಗಿ ಹಿಂದಿಗಿಂತಲೂ ಹೆಚ್ಚು ಜನ ಸಾವಿರಾರು ಸಂಖ್ಯೆಯಲ್ಲಿ ಸೇರಿದ್ದರು. ಶ್ರೀರಾಮನನ್ನು ತೊಟ್ಟಿಲಲ್ಲಿಟ್ಟು ತೂಗಿ ತಂದೆಯವರು ಸ್ವತಃ ಪೂಜೆ ಮಾಡಿ ಎಲ್ಲರಿಗೂ ಧಾರಾಳವಾಗಿ ದಕ್ಷಿಣೆ ನೀಡಿದರು. ಭರ್ಜರಿಯಾಗಿ ನಡೆದ ಉಪನಯನ ಸಮಾರಂಭದಲ್ಲಿ ಊರಲ್ಲಿನ ಪ್ರತಿಯೊಬ್ಬ ಬ್ರಾಹ್ಮಣ ಮುತ್ತೈದೆಗೂ ಒಂದೊಂದು ಒಳ್ಳೆಯ ಇಳಕಲ್ಲಿನ ಸೀರೆ-ಖಣ, ಪ್ರತಿಯೊಬ್ಬ ಆಚಾರ್ಯರಿಗೂ ಜೋಡಿ ಧೋತರ-ಶಲ್ಯೆ ದಾನವಾಗಿತ್ತರು. ಸೇರಿದ ಎಲ್ಲರಿಗೂ ಮಂಡಿಗೆ-ಹಾಲು-ತುಪ್ಪದ ಭಾರಿ ಔತಣವಾಯಿತು. ಎಲ್ಲ ಕಡೆ ಹಬ್ಬದ ವಾತಾವರಣ, ಸಂಭ್ರಮ. 'ಪುಣ್ಯವಂತರು' ಅಂತ ಎಲ್ಲರಿಂದ ತಂದೆಯವರ ಪ್ರಶಂಸೆ. 'ಇದೆಲ್ಲ ಆ ತಾಯಿಯ ಪುಣ್ಯದ ಪ್ರಭಾವ' ಅಂತ ಪುಣ್ಯಸ್ಮರಣೆ. ಹೊಗಳಿಕೆ ಯಾರಿಗೆ ಪ್ರಿಯವಲ್ಲ ? ನಮಗೆಲ್ಲ ಅದರ ನಶೆ ಏರಿತ್ತು, ಹೊತ್ತು ಸರಿದದ್ದೇ ತಿಳಿಯಲಿಲ್ಲ.

ಯಾರೋ ಮಧ್ಯೆ 'ಪಾಪ, ರಾಧವ್ವ ಇದ್ದಿದ್ದರೆ–' ಅಂದರು. ಒಮ್ಮೆಲೆ ವಿದ್ಯುದಾಘಾತವಾದಂತಾಯಿತು ನನಗೆ. 'ಏನು ? ಏನು ? ಯಾವಾಗ ?' ಅಂತ ತಡವರಿಸಿದೆ. 'ನಿನಗೆ ಗೊತ್ತಿಲ್ಲವೇ, ರಾಧವ್ವ ಸತ್ತು ಆರು ತಿಂಗಳಾಯಿತಲ್ಲ ?' ಅಂದರು ತಂದೆಯವರು. 'ಪಾಪ, ಭಾಳ ಛಲೋ ಹೆಣ್ಮಗಳು' ಅಂತ ವ್ಯಥೆ ಸೂಚಿಸಿದರು. ''ಭಾಳ ತ್ರಾಸುಪಟ್ಟಳು ಸಾಹೇಬರs ನಿಮ್ಮನ್ನ-ನಿಮ್ಮನೀಯವರ್‍ನ ನೆನಸಿಗೋತs ಪ್ರಾಣಬಿಟ್ಟಳು' ಅಂತ ವಿವರಿಸಿದ ಒಬ್ಬ ಆಚಾರಿ. 'ನಮ್ಮ ತಾಯಿಗೆ ಭಾಳ ಸೇವಾ ಮಾಡಿದ್ದಳು ಪಾಪ' ಅಂದರು ತಂದೆಯವರ ಮಕ್ಕಳು. ನಾನು ಮುಳುಗಿ ಹೋಗುತ್ತಿರುವ ಹಾಗೆ ಕುಸಿದು ಕೂಡ್ರುವ ಮೊದಲು ಒಮ್ಮೆ ಗಟ್ಟಿಯಾದ ಅಳುದನಿಯಲ್ಲಿ ಕೂಗಿ ಕೇಳಿದೆ, 'ನನಗ್ಯಾಕ ಹೇಳ್ಲಿಲ್ಲ ನೀವ್ಯಾರೂ ಆಕಿ ಸಾಯ್ಲಿಕ್ಕೆ

ಆಗ್ಯಾಳ ಅಂತ ?' ನನ್ನ ಆವೇಶ-ಉದ್ವೇಗದ ಕಾರಣ ಅರಿಯದೆ ನನ್ನ ಅಣ್ಣ ಆಶ್ಚರ್ಯದಿಂದ ಕೇಳಿದ, 'ನಿನಗ ಹೇಳಿದ್ದರ ನೀ ಏನು ಮಾಡುವಾಕಿ ಇದ್ದಿ ?'' ನಾನು ಒಮ್ಮೆಲೆ ಸೂಜಿ ಚುಚ್ಚಿದ ಬಲೂನಿನಂತೆ ಠುಸ್ಸೆಂದು ತೆಪ್ಪಗಾದೆ. ಆ ಸಹಜ ಪ್ರಶ್ನೆಯ ಸರಳ ಅರ್ಥ ನನ್ನಲ್ಲಿ ಒಮ್ಮೆಲೆ ಅನಂತವಾದ ಪಾಪಪ್ರಜ್ಞೆಯೊಂದನ್ನು ಮೂಡಿಸಿತು. ನನ್ನ-ನಮ್ಮೆಲ್ಲರ ಅಗಾಧವಾದ ನಿರ್ಲಜ್ಜವಾದ ಸ್ವಾರ್ಥಪರತೆಯ ದರ್ಶನ ಮಾಡಿಸಿತು. ಪಶ್ಚಾತ್ತಾಪ ಪಡಲಿಕ್ಕಾದರೂ ಅರ್ಹತೆ ನಮಗಿದೆಯೇ ಅಂತ ನಾವೇ ಕೇಳಿಕೊಳ್ಳುವ ಹಾಗೆ ಮಾಡಿತು. ಆ ದಿನದ ಉತ್ಸವದಲ್ಲಿ ಹರಿದ ಹಾಲು-ತುಪ್ಪದ ಹೊಳೆಯಲ್ಲಿ ಮಿಂದ ಬ್ರಾಹ್ಮಣರು ಕೈತುಂಬ ದಕ್ಷಿಣೆ ಪಡೆದು 'ಪುಣ್ಯವಂತರು ನೀವು' ಅಂತ ತಂದೆಯವರನ್ನು-ನಮ್ಮನ್ನು ಹರಸಿಹೋಗುತ್ತಲಿದ್ದುದನ್ನು ಬಿಟ್ಟಗಣ್ಣು ಬಿಟ್ಟಂತೆ ನೋಡುತ್ತ ಬಹಳ ಹೊತ್ತು ನಾನು ಮೌನಿಯಾಗಿ ಕೂತಿದ್ದೆ. ಆ ಎಲ್ಲ ಸಂಭ್ರಮದಾಚೆ ದೂರ ಹೊಲೆಯರ ಹಟ್ಟಿಯೊಂದರ ಕತ್ತಲು ಮೂಲೆಯಲ್ಲಿ ಹರಿದ ಕಂಬಳಿಯ ಮೇಲೆ ಬಿದ್ದುಕೊಂಡು ಹೊಟ್ಟೆಯ ಕ್ಯಾನ್ಸರಿನಿಂದ ನರಳಿ-ನರಳಿ ಕಣ್ಮುಚ್ಚಿದ ರಾಧವ್ವನ ಚಿತ್ರ ತಿರುತಿರುಗಿ ಕಣ್ಣಮುಂದೆ ನಿಲ್ಲತೊಡಗಿತ್ತು. ನಮ್ಮೆಲ್ಲರ ಹೊಟ್ಟೆಯನ್ನು ಎಷ್ಟು ಸಲ ಎಷ್ಟು ಬಗೆಗಳಲ್ಲಿ ತಂಪಾಗಿಸಿದ್ದಳು ಆ ಹೆಣ್ಣುಮಗಳು. ಆಕೆಯ ಹೊಟ್ಟೆಯಲ್ಲಿ ಉರಿ ಎದ್ದಾಗ ನಾವೆಲ್ಲ ಎಲ್ಲಿದ್ದೆವೋ... ಇಲ್ಲ, ಇನ್ನು ಇಲ್ಲಿದ್ದರೆ ಆತ್ಮನಿಂದನೆಯ ಕ್ಲೇಶ ಅನುಭವಿಸಬೇಕು. ಬೇಡ, ಆದಷ್ಟು ಬೇಗ ಇಲ್ಲಿಂದ ಹೊರಡುವುದು ಒಳ್ಳೆಯದು. ಹಾಗೆಂದು ಕೂಡಲೇ ಅಲ್ಲಿಂದ ಹೊರಟು ಸೀದಾ ಊರಿಗೆ ಬಂದೆ. ಇಲ್ಲಿ ನಿರ್ಮಲವಾದ ಮನಸ್ಸಿನಿಂದ ಶುದ್ಧವಾದ ಪಶ್ಚಾತ್ತಾಪ ಪಡಲಿಕ್ಕೂ ಸಾಧ್ಯವಾಗದಷ್ಟು ಬಿಡುವೇ ಇರದಷ್ಟು ನೂರು ಕೆಲಸ ಕಾರ್ಯಗಳ ಮಧ್ಯೆ ಸಿಕ್ಕಿಕೊಂಡು ಹೋದೆ–

ಈಗ ರಾಧವ್ವ ಬರಿ ನೆನಪು, ಆಗೀಗ ಕಾಡುವ ನೆನಪು.

(೧೯೮೬)

❖ ❖ ❖

# ಒಲವೆ ಜೀವನ

ಕಳೆದ ಕೆಲ ದಿನಗಳಿಂದ ಆತನಿಗೆ ಬಹಳ ಬೇಸರವಾಗಿತ್ತು. ಅದಕ್ಕೆ ಕಾರಣವಿಲ್ಲದಿರಲಿಲ್ಲ. ಆತ ಒಬ್ಬ ನೇರ ನಡೆನುಡಿಯು, ಪ್ರಾಮಾಣಿಕನಾದ, ಕಷ್ಟಸಹಿಷ್ಣುವಾದ ಕೆಲಸಗಾರನೆಂದು ತನ್ನ ಬ್ಯಾಂಕಿನಲ್ಲಿ ಹೆಸರು ಪಡೆದಿದ್ದ. 'ಸತೀಶ ಕುಲಕರ್ಣಿಯ ಕೆಲಸ ಅಂದರೆ ತಿರುಗಿ ನೋಡುವುದೇ ಬೇಡ' ಅಂತ ಹೆಡ್ ಆಫೀಸಿನವರೆಗೂ ಆತನ ಖ್ಯಾತಿಯಿತ್ತು. ಡಿಗ್ರಿ ಪಡೆದ ನಂತರ ಕ್ಲಾರ್ಕ್ ಎಂದೇ ಆತ ಬ್ಯಾಂಕಿನಲ್ಲಿ ಕೆಲಸಕ್ಕೆ ಸೇರಿದ್ದರೂ, ನಂತರ ಶೀಘ್ರವೇ ಹಲವಾರು ಬ್ಯಾಂಕ್ ಪರೀಕ್ಷೆಗಳನ್ನು ಪಾಸು ಮಾಡಿ ಮನಸ್ಸುಗೊಟ್ಟು ಕೆಲಸ ಮಾಡಿದ್ದರಿಂದ ಆತನಿಗೆ ಪ್ರಮೋಶನ್ ಬರುವುದಿತ್ತು ಇಷ್ಟರಲ್ಲೇ. ಬಂಧು-ಬಳಗ ಯಾರೂ ಇಲ್ಲದ ಆತ ಹಸನ್ಮುಖಿಯಾದ, ತುಂಬು ಜೀವನೋತ್ಸಾಹವುಳ್ಳ, ಆಕರ್ಷಕ ವ್ಯಕ್ತಿತ್ವದ ತರುಣನಾಗಿದ್ದ. ಎಲ್ಲಾ ಸರಿಯಾಗೇ ನಡೆದಿತ್ತು. ಆಗಲೇ ಆತನಿಗೆ ಬೇಸರವಾಗುವಂತಹ ಆ ಘಟನೆ ನಡೆದಿದ್ದು.

ಆತನ ಬ್ಯಾಂಕಿನಲ್ಲಿ ಸಹೋದ್ಯೋಗಿ ಕ್ಲಾರ್ಕ್ ಒಬ್ಬಳಿದ್ದಳು ಕುಸುಮಾ ಪಾಟೀಲ ಎಂದು. ಅವಳೇನೂ ಡಿಗ್ರಿ ಪಡೆದಿರಲಿಲ್ಲ. ಅವಳ ತಂದೆ ಅದೇ ಬ್ಯಾಂಕಿನ ಉದ್ಯೋಗಿಯಾಗಿದ್ದು ಅಕಾಲಮರಣಕ್ಕೀಡಾಗಿದ್ದರಿಂದ ಅನುಕಂಪದ ಆಧಾರದ ಮೇಲೆ ಅವಳಿಗೆ ಅಲ್ಲಿ ಕ್ಲಾರ್ಕ್ ಕೆಲಸ ಸಿಕ್ಕಿತ್ತು. ತೆಳ್ಳಗಿನ ಶರೀರದ, ಆತ್ಮವಿಶ್ವಾಸದ ಅಭಾವವುಳ್ಳ, ಅನಾಕರ್ಷಕ ಹುಡುಗಿ. ಆಕೆಗೆ ಸತೀಶ ಕುಲಕರ್ಣಿಯ ಮೇಲೆ ವಿಪರೀತ ಮೋಹವುಂಟಾಯಿತು. ಆದರೆ ಸ್ತ್ರೀ ಸಹಜ ಸಂಕೋಚದಿಂದ ಬಾಯಿಬಿಟ್ಟು ಹೇಳಲಾಗದೆ, ಹೇಳದೆ ಇರಲೂ ಆಗದೆ, ಬಹಳ ಒದ್ದಾಡಿ ಕೊನೆಗೊಂದು ದಿನ ಒಂದು ಕಾಗದ ಟೈಪ್ ಮಾಡಿ ಲೆಡ್ಜರುಗಳ ಜೊತೆ ಅವನ ಟೇಬಲ್ ಮೇಲಿರಿಸಿದಳು. "ನಾನು ನಿಮ್ಮನ್ನು ಬಹಳ ಪ್ರೀತಿಸುತ್ತೇನೆ, ಕುಸುಮಾ" – ಎಂದಷ್ಟೆ ಒಕ್ಕಣೆ. ಸತೀಶ್ ಕುಲಕರ್ಣಿ ಅದನ್ನೋದಿ ಆಕೆಯ ಕಡೆ ನೋಡಿದ. ಬೆವರೊರೆಸಿಕೊಳ್ಳುತ್ತ ತಲೆತಗ್ಗಿಸಿ ಕೂತಿದ್ದಳು. ಪಾಪ ಅನ್ನಿಸಿತು. ಆದರೆ ಆತ ಪ್ರತಿಕ್ರಿಯೆ ತೋರಲಿಲ್ಲ. ಎರಡು ದಿನಗಳ ನಂತರ ಮತ್ತೆ "ನಿಮ್ಮನ್ನು ಬಹಳ-ಬಹಳ ಪ್ರೀತಿಸುತ್ತೇನೆ", ಮತ್ತೆರಡು ದಿನಗಳ ನಂತರ "ನಿಮ್ಮನ್ನು ನಾನು ಬಹಳ-ಬಹಳ-ಬಹಳ ಪ್ರೀತಿಸುತ್ತೇನೆ", ಎಂದು ಹೀಗೆ 'ಬಹಳ'ದ ಸಂಖ್ಯೆ

ಹನ್ನೆರಡನ್ನು ದಾಟಿದಾಗ ಆತ ಒಂದು ದಿನ ಮಧ್ಯಾಹ್ನದ ಬಿಡುವಿನಲ್ಲಿ ಆಕೆ ಒಬ್ಬಳೇ ಚಹಾ ಕುಡಿಯುತ್ತಿದ್ದಾಗ ಆಕೆಯನ್ನು ಸಮೀಪಿಸಿ ಮೆಲುದನಿಯಲ್ಲಿ ಹೇಳಿದ, "ಹೀಗೆಲ್ಲ ಮಾಡಬಾರದು ಕುಸುಮಾ, ನಿಮ್ಮ ಬಗ್ಗೆ ನನಗೆ ಏನೂ ಅನ್ನಿಸುವುದಿಲ್ಲ." ಅವಳಿಗೆ ಬಹಳ ದುಃಖವಾದದ್ದು ಅವಳ ಮುಖಭಾವದಿಂದಲೇ ಆತನಿಗೆ ತಿಳಿಯಿತು. ಆಕೆ ಸುಮ್ಮನೆ ಎದ್ದು ಹೋಗಬಹುದೆಂದು ಆತನಿಗೆ ಅನಿಸಿತು. ಆದರೆ ಅದಕ್ಕೆ ವ್ಯತಿರಿಕ್ತವಾಗಿ ಆಕೆ ಜಗಳ ಮಾಡುವ ಧಾಟಿಯಲ್ಲಿ "ಆದರೆ ಯಾಕೆ ? ಯಾಕೆ ? ಯಾಕೆ ಅಂತ ನೀವು ಹೇಳಲಿಕ್ಕೇಬೇಕು" ಅಂತ ಪದೇಪದೇ ಕೇಳತೊಡಗಿದಳು. ಈ ಪ್ರಶ್ನೆಗೆ ಏನೆಂದು ಉತ್ತರಿಸುವುದೆಂದು ತಿಳಿಯದೆ ಕ್ಷಣಕಾಲ ಪೆಚ್ಚಾಗಿ ಆತ ಆಕೆಯನ್ನೇ ನೋಡುತಲಿದ್ದ. ಆಕೆ ಪುನಃ ಪುನಃ ಪೀಡಿಸಿದಾಗ ಆತನಿಗೆ ಸಿಟ್ಟೇ ಬಂದಿತು. ಆಗ ತುಸು ಸ್ಪಷ್ಟವಾಗಿಯೇ ಹೇಳಿದ : "ಯಾಕೆ ಅಂದರೆ-ಯಾಕೆ ಅಂದರೆ-ನೀವು ಬಹಳ ತೆಳುವಾಗಿದ್ದೀರಿ, ಮಾತಾಡುವಾಗ ತಡವರಿಸುತ್ತೀರಿ, ಬಗ್ಗಿ ನಡೆಯುತ್ತೀರಿ, ಸೀರೆ ಸಹ ಸರಿಯಾಗಿ ಉಡುವುದಿಲ್ಲ..." ಆತನಿನ್ನೂ ಮಾತಾಡುತ್ತಲೇ ಇದ್ದಾಗ ಆಕೆ ತಟ್ಟನೆ ಎದ್ದು ಹೋಗೇ ಬಿಟ್ಟಳು. ಮುಂದೆ ಒಂದು ವಾರ ರಜೆಯ ಮೇಲೇ ಇದ್ದಳು. ಆ ಅವಧಿಯಲ್ಲೇ ಬೇರೆ ಊರಿಗೆ ಟ್ರಾನ್ಸಫರ್ ಮಾಡಿಸಿಕೊಂಡು ಊರು ಬಿಟ್ಟೇ ಹೋದಳು. ನಂತರ ಎಂದೂ ಆಕೆ ಆ ಬ್ಯಾಂಕಿನಲ್ಲಿ ಯಾರ ಕಣ್ಣಿಗೂ ಬೀಳಲಿಲ್ಲ. ಸತೀಶನಿಗೇನೋ ಪೀಡೆ ತೊಲಗಿತು ಅಂತ ಸಮಾಧಾನವೇ ಆಯಿತು. ಆದರೆ ಈ ನಡುವೆ ಸತೀಶ ಕುಲಕರ್ಣಿಯನ್ನು ಪ್ರೀತಿಸಿ, ಪ್ರೇಮಭಂಗ ಹೊಂದಿ, ಎದೆ ಒಡಕೊಂಡು, ಆ ಹುಡುಗಿ ದೇಶಾಂತರ ಹೋದಳೆಂದು ಗುಸುಗುಸು ಹರಡಿದ್ದರಿಂದ ಸತೀಶನಿಗೆ ಬಹಳ ಬೇಸರವಾಯಿತು. ಇದರಲ್ಲಿ ನಿಜವಾಗಿ ಆತನ ತಪ್ಪೇನೂ ಇರಲಿಲ್ಲ. ಅವಳೇಕೆ ಸುಮ್ಮನೆ ಎದೆ ಒಡೆದುಕೊಳ್ಳಬೇಕಿತ್ತು ? ತಾನೇನೂ ಯಾವ ರೀತಿಯಲ್ಲೂ ಅವಳಿಗೆ ಪ್ರಚೋದನೆ ನೀಡಿರಲಿಲ್ಲ.

ಬಿಡುವಿನ ವೇಳೆ ಒಬ್ಬನೇ ಕೂತು ಇದು ಹೀಗಾಯಿತಲ್ಲ ಅಂತ ಯೋಚಿಸುವಾಗ ಸತೀಶನಿಗೆ ಅನ್ನಿಸಿತ್ತು : ತಾನು ಆ ಹುಡುಗಿಯ ಪ್ರೀತಿ ನಿರಾಕರಿಸಲು ಅವಳು ತೆಳ್ಳಗಿದ್ದದ್ದೇ ಕಾರಣವೆ ? ಖಂಡಿತ ಅಲ್ಲ. ಪ್ರೀತಿಗೂ ದೈಹಿಕ ಆಕರ್ಷಣೆಗೂ ಏನೂ ಸಂಬಂಧವಿರಲಾರದು. ಆಕೆ ದೈಹಿಕವಾಗಿ ಅನಾಕರ್ಷಕಳಾಗಿದ್ದಷ್ಟೇ ತನ್ನ ನಿರಾಕರಣೆಗೆ ಕಾರಣವಲ್ಲ. ಪ್ರೀತಿ ಹುಟ್ಟಲು ಅಥವಾ ಹುಟ್ಟದೇ ಇರಲು ಇದಕ್ಕೂ ಬಲವತ್ತರವಾದ ಬೇರಾವುದೋ ಕಾರಣಗಳಿರಬೇಕು. ಅವು ಯಾವವು ?

ಇಂತಹದೇ ಸಂದಿಗ್ಧ ಮನಸ್ಥಿತಿಯಲ್ಲಿದ್ದಾಗ ಸತೀಶ ಕುಲಕರ್ಣಿಗೆ ಒಮ್ಮೆಲೇ ಈ ಎಲ್ಲಾ ಪ್ರಶ್ನೆಗಳಿಗೂ ಥಟ್ಟನೇ ಉತ್ತರ ಹೊಳೆದ ಅನುಭವವಾಯಿತು. ಅದಕ್ಕೆ ಕಾರಣ ಶೋಭಾ ನಾಯಕ ಅನ್ನುವ ಹೊಸ ಹುಡುಗಿ. ಅದೇ ಬ್ಯಾಂಕಿನ ಇನ್ನೊಂದು

ಶಾಖಾ ಕಚೇರಿ ಆ ಊರಿನ ಹೊರವಲಯದಲ್ಲಿತ್ತು. ಅಲ್ಲಿ ಆಕೆ ಕ್ಲಾರ್ಕ್ ಆಗಿದ್ದಳು. ಪ್ರತಿ ಶನಿವಾರ ಬ್ಯಾಂಕಿನ ಕಡತಗಳನ್ನು -ಲೆಕ್ಕಪತ್ರಗಳನ್ನು ತೆಗೆದುಕೊಂಡು ಮುಖ್ಯ ಕಚೇರಿಗೆ, ಅಂದರೆ ಸತೀಶನ ಬ್ಯಾಂಕಿಗೆ, ಆಕೆ ಬರುತ್ತಿದ್ದಳು. ಸತೀಶನ ಟೇಬಲಿನ ಎದುರಿಗೇ ಇದ್ದ ಉದ್ದವಾದ ಕೌಂಟರಿನಗುಂಟ ನಿಧಾನವಾಗಿ, ಗಂಭೀರವಾಗಿ ನಡೆದುಕೊಂಡು ಕೊನೆಯ ಚೇಂಬರಿನಲ್ಲಿದ್ದ ಅಸಿಸ್ಟಂಟ್ ಮ್ಯಾನೇಜರ ಕಡೆ ಹೋಗುತ್ತಿದ್ದಳು. ಹಾಗೆ ಆಕೆ ನಡೆದು ಹೋಗುತ್ತಿರುವಾಗ ಆಕೆಯ ಬಲಭಾಗದ ಮುಖ, ಕೈ, ಸೊಂಟದವರೆಗೆ ಕೌಂಟರಿನ ಈಚೆ ಕೂತಿದ್ದ ಸತೀಶನಿಗೆ ಕಾಣುತ್ತಿತ್ತು. ಮುಂದೆ ತನ್ನ ಕೆಲಸ ಮುಗಿಸಿ ಅಸಿಸ್ಟಂಟ್ ಮ್ಯಾನೇಜರ್‌ನ ಚೇಂಬರಿನ ಹಿಂಬದಿಯ ಬಾಗಿಲಿಂದ ಹೊರಗೆ ಹೋಗಿ ಆಕೆ ರಸ್ತೆ ತಲುಪುವವರೆಗೂ ಸತೀಶ ಆಕೆಯ ಹಿಂಭಾಗವನ್ನು ನೋಡುತ್ತಿದ್ದ. ಕಟ್ಟುಮಸ್ತಾಗಿದ್ದ ಗಂಭೀರ ಪ್ರಕೃತಿಯ ಹುಡುಗಿ. ಒಂದಿಷ್ಟೂ ಅತ್ತಿತ್ತ ನೋಡುತ್ತಿರಲಿಲ್ಲ. ಆದರೆ ಸತೀಶನ ಟೇಬಲಿನೆದುರು ಹಾಯ್ದು ಹೋಗುವಾಗ ಮಾತ್ರ ಒಂದು ಕ್ಷಣ, ಒಂದೇ ಒಂದು ಕ್ಷಣ, ನಿಂತಂತೆ ಮಾಡಿ ಬಲಕ್ಕೆ ಹೊರಳಿ ಆತನ ಕಣ್ಣಿಗೆ ಕಣ್ಣು ಕೂಡಿಸಿ ಮರುಕ್ಷಣ ಮತ್ತೆ ನೆಟ್ಟಗೆ ಹೋಗಿಬಿಡುತ್ತಿದ್ದಳು. ಪ್ರತಿ ಶನಿವಾರ ಆಕೆ ಬರುವ ಹೊತ್ತಿಗಾಗಿ, ತನ್ನೆದುರು ಹಾಯ್ದು ಹೋಗುವಾಗ ತನ್ನತ್ತ ನೋಡುವ ಕ್ಷಣಕ್ಕಾಗಿ, ಸತೀಶ ಕಾಯತೊಡಗಿದ. ಬರಬರುತ್ತ ಇಬ್ಬರೂ ಒಬ್ಬರನ್ನೊಬ್ಬರು ನೋಡುವ ಕಾಲ ಒಂದು ಕ್ಷಣದಿಂದ ಹಲವಾರು ನಿಮಿಷಗಳಷ್ಟು ಆಯಿತು.

ಹಾಗೇ ಪರಿಸ್ಥಿತಿ ಮುಂದುವರೆದಿದ್ದಾಗ ಒಂದು ಶನಿವಾರ ಆಕೆ ಸತೀಶನತ್ತ ನೋಡದೇ ಹಾಗೆಯೇ ಮುಂದೆ ಹೋಗಿಬಿಟ್ಟಳು. ಕಳೆದ ಕೆಲ ತಿಂಗಳುಗಳಿಂದ ಆಗಿದ್ದ ಅಭ್ಯಾಸ ತಪ್ಪಿಹೋಗಿ ಒಂದು ಕ್ಷಣ ಅವನಿಗೆ ದಿಕ್ಕೇ ತೋಚದಂತಾಯಿತು. ಏನು ಮಾಡುವುದೆಂದು ತಿಳಿಯದೆ ತನ್ನ ಮುಂದಿನಿಂದ ಸರಿದು ಹೋಗುತ್ತಿದ್ದ ಆಕೆಯ ದೇಹದ ಬಲ-ಮೇಲ್ಭಾಗವನ್ನೇ ನೋಡುತ್ತಿದ್ದ ಆತ ಆಕೆಯು ಅಸಿ. ಮ್ಯಾನೇಜರ್‌ನ ಚೇಂಬರಿನೊಳಗೆ ಮರೆಯಾದ ಕೂಡಲೆ ಪೆಚ್ಚಾದ. ಅರ್ಧ ಗಂಟೆಯ ನಂತರ ಚೇಂಬರಿನ ಹಿಂಭಾಗದ ಬಾಗಿಲಿಂದ ಆಕೆ ಹೊರಹೋಗುತ್ತಿರುವುದು ಕಂಡಾಗ ಸತೀಶನಿಗೆ ಒಮ್ಮೆಲೆ ಸಂಕಟ ಸುರುವಾಯಿತು. ಎರಡೇ ಕ್ಷಣಗಳಲ್ಲಿ ಆತ ತಟ್ಟನೆ ಎದ್ದು, ಇದ್ದ ಕೆಲಸ ಇದ್ದಲ್ಲೇ ಬಿಟ್ಟು, ಆಕೆ ರಸ್ತೆ ತಲುಪುವುದರೊಳಗಾಗಿ ಆಕೆಯನ್ನು ಸಂಧಿಸಲೇಬೇಕೆಂಬ ನಿರ್ಧಾರದಿಂದ ಎಲ್ಲರನ್ನೂ ಪಕ್ಕಕ್ಕೆ ಸರಿಸುತ್ತ ಹೊರಬಾಗಿಲು ದಾಟಿ ಗೇಟು ದಾಟಿ ವೇಗವಾಗಿ ಆಕೆ ಹಿಂದಿನ ರಸ್ತೆ ಸೇರುತ್ತಿದ್ದ ಸ್ಥಳಕ್ಕೆ ಧಾವಿಸಿದನು. ಇಷ್ಟೆಲ್ಲ ಮಾಡುತ್ತಲಿರುವಾಗ ಕಳೆದ ಐದಾರು ಕ್ಷಣಗಳಲ್ಲಿ ಸತೀಶನಿಗೆ ಸ್ಪಷ್ಟವಾಗಿ

ಗೊತ್ತಾಯಿತು – ತಾನು ಈ ಗುರುತಿಲ್ಲದ ಹುಡುಗಿ ಶೋಭಾ ನಾಯಕಳನ್ನು ಪ್ರೀತಿಸುತ್ತಿದ್ದೇನೆ – ಎಂದು.

ಅಷ್ಟರಲ್ಲಾಗಲೇ ಆಕೆ ರಸ್ತೆಗೆ ಬಂದು ತನಗಾಗಿ ಕಾಯುತ್ತಿದ್ದ ತನ್ನ ಬ್ಯಾಂಕಿನ ವ್ಯಾನಿನಲ್ಲಿ ಕೂತಿದ್ದಳು. ಆಕೆ ಕೂತಿದ್ದರೂ ವ್ಯಾನು ಹೊರಟಿರಲಿಲ್ಲ. ಆಕೆ ಸತೀಶನತ್ತಲೇ ತಾಳ್ಮೆಯಿಂದ ನೋಡುತ್ತಿದ್ದವಳು ಆತ ಹತ್ತಿರ ಬಂದೊಡನೆ ದೃಢವಾಗಿ ಮುಗುಳ್ನಕ್ಕಳು. ಅದಕ್ಕಾಗಿಯೇ ಕಾದಿದ್ದಂತೆ ಆತನೂ ಪ್ರತಿನಕ್ಕು "ಹಲೋ" ಅಂದ.

"ಮುಂಜಾನೆ ಮಳೆಯಾಗಿದ್ದರಿಂದ ಹವೆ ತಂಪಾಗಿದೆ ಅಲ್ಲವೇ ?" ಅಂದಳು ಆಕೆ.

"ಹೌದು" ಅಂದ ಆತ ತುಸು ನಿಂತು ಕೇಳಿದ, "ನಾಳೆ ರವಿವಾರ ನಿಮಗೂ ರಜೆ. ನದೀದಂಡೆಗೆ ತಿರುಗಾಡಲು ಬರುತ್ತೀರಾ ?"

"ತಿರುಗಾಡಲು ? ಊಹ್ಞೂ. ಆಗುವುದಿಲ್ಲ."

ತಾನು ಒಮ್ಮೆಲೇ ಹಾಗೆ ಕೇಳಿದ್ದು ತಪ್ಪಾಯಿತು ಅನಿಸಿತು ಸತೀಶನಿಗೆ. ಆಕೆ ಸಿಟ್ಟಾದರೆ ? ಛೆ, ಕೆಲಸ ಕೆಟ್ಟಿತೇನೋ. ಇದನ್ನು ಹೇಗೆ ಸುಧಾರಿಸುವುದು ? – ಹೀಗೆಲ್ಲ ಆತ ಚಡಪಡಿಸುತ್ತಿದ್ದಾಗ ಆಕೆಯೇ ಮತ್ತೆ ಮಾತನಾಡಿದಳು. "ಮುಂದಿನ ಶನಿವಾರ ಸಾಧ್ಯವಾದರೆ ಅರ್ಧದಿನದ ರಜೆ ಹಾಕಿ ನನ್ನೊಂದಿಗೇ ಬರ್ರಿ. ನಮ್ಮ ಬ್ಯಾಂಕಿಗೆ ಹೋಗಿ ಅಲ್ಲಿಂದ ಮುಂದೆ ನಮ್ಮ ಮನೆಗೆ ಹೋಗೋಣ. ಆದೀತೆ ?"

"ಓಹೋ" ಎಂದ ಸತೀಶ ಸಂತೋಷದಿಂದ.

"ನಮ್ಮ ಮನೆ ನದೀದಂಡೆಯ ಮೇಲಿದೆ" – ಎಂದು ಮುಗುಳ್ನಗುತ್ತ ಹೇಳಿ ಆಕೆ ಡ್ರೈವ್ಹರನಿಗೆ ಸೂಚನೆ ಕೊಟ್ಟೊಡನೆ ಆಕೆ ಕೂತಿದ್ದ ವ್ಯಾನು ಮುಂದೆ ಚಲಿಸಿತು. ಐದು ನಿಮಿಷಗಳ ನಂತರ ಶಿಳ್ಳೆ ಹಾಕುತ್ತ ಒಳಬಂದ ಸತೀಶನನ್ನು ಆತನ ಸಹೋದ್ಯೋಗಿಗಳು ಹುಬ್ಬೇರಿಸಿ ನೋಡಿದರು.

ಸತೀಶ ಬಹಳ ಉತ್ಕಂಠೆಯಿಂದ ಕಾಯುತ್ತಿದ್ದ ಆ ಶನಿವಾರ ಕೊನೆಗೂ ಬಂದಿತು. ಆ ದಿನ ಅರ್ಧ ದಿನದ ರಜೆ ಹಾಕಿ ಆಕೆ ಬರುವ ಮೊದಲೇ ಸತೀಶ ಹೊರಡಲು ತಯಾರಾಗಿ ನಿಂತಿದ್ದ. ಸರಿಯಾದ ಸಮಯಕ್ಕೆ ಆಕೆಯ ಬ್ಯಾಂಕಿನ ವ್ಯಾನು ಬಂದಿತು. ಆದರೆ ಫೈಲುಗಳ ಜೊತೆ ಕೆಳಗಿಳಿದದ್ದು ಆಕೆಯಾಗಿರದೆ ಬೇರೆ ಯಾರೋ ಒಬ್ಬ ಗಂಡಸಾಗಿದ್ದ. ಒಂದು ಕ್ಷಣ ದಿಗ್ಭ್ರಮೆಗೊಂಡ ಸತೀಶನನ್ನು ವ್ಯಾನಿನಿಂದ ಬಂದ ಕಿಲಕಿಲ ನಗು ಎಚ್ಚರಿಸಿತು. ಆತ ವ್ಯಾನಿನೊಳಗೆ ಬಗ್ಗಿ ನೋಡಿದ. ಶೋಭಾ ನಾಯಕ ಕೂತಿದ್ದಳು. ಆತ ಏನಾದರೂ ಕೇಳುವ ಮೊದಲೇ ಉತ್ತರಿಸಿದಳು," ಈ ದಿನ ನಾನೂ ಹಾಫ್ ಡೇ ಲೀವ್ಹ್ ತಗೊಂಡೆ. ಬರ್ರಿ. ಒಳಗಡೆ ಹೋದ ನಮ್ಮ ಕೊಲೀಗ್ ಬಂದಕೂಡಲೇ

ಹೋಗೋಣ.'' ಮರುಮಾತಾಡದೆ ಸತೀಶ ವ್ಯಾನ್ ಹತ್ತಿ ಆಕೆಯ ಬಲಗಡೆ ಕೂತ. ಆಕೆಯಿಂದ ಹಿತವಾದ ವಾಸನೆ ಬರುತ್ತಿತ್ತು. ಆಕೆಯ ಬಲಭಾಗದ ಮುಖ, ಕೊರಳು, ಕೈ, ಸೀರೆ ನೋಡುತ್ತ ಮೌನವಾಗಿ ಪ್ರಶಂಸಿಸುತ್ತ ಆತ ಸುಮ್ಮನೆ ಕೂತ. ಕೆಲ ಸಮಯದ ನಂತರ ವ್ಯಾನು ಆಕೆಯ ಬ್ಯಾಂಕಿನವರೆಗೆ ಹೋಗಿ ಆಕೆಯ ಸಹೋದ್ಯೋಗಿಯನ್ನಿಳಿಸಿ ಆಕೆಯ ಮನೆಯವರೆಗೂ ಹೋಗಿ ನಿಂತಾಗ ಆಕೆ ನಕ್ಕು ಸತೀಶನ ಕಡೆ ನೋಡಿ, ''ಇದೇ ನಮ್ಮ ಮನೆ. ಇಳೀರಿ.'' ಅಂದಳು. ಬೇರಾವುದೋ ಲೋಕದಲ್ಲಿದ್ದಂತಿದ್ದ ಸತೀಶ ಭ್ರಮಾಧೀನನಾಗಿದ್ದಂತೆಯೇ ಕೆಳಗಿಳಿದ. ಆಕೆ ಆಚೆಬದಿಯಿಂದ ಆಗಲೇ ಕೆಳಗಿಳಿದು ಅವನತ್ತ ನೋಡುತ್ತ ನಗುತ್ತ ನಿಂತಿದ್ದಳು. ಇಬ್ಬರ ನಡುವೆ ಇದ್ದ ವ್ಯಾನು ಕ್ಷಣಾರ್ಧದಲ್ಲಿ ಧೂಳು ಹಾರಿಸುತ್ತ ಮರೆಯಾಯಿತು. ದೊಡ್ಡ ಬೇಲಿಯುಳ್ಳ ಹಲವಾರು ತೆಂಗಿನ ಮರಗಳುಳ್ಳ, ಸುಂದರವಾದ ತೋಟದ ಮಧ್ಯೆ ಇದ್ದ ಹಂಚಿನ ಮನೆ. ಸುಮಾರು ಅರ್ಧ ಫರ್ಲಾಂಗಿನಾಚೆ ನದಿ. ಸುತ್ತೆಲ್ಲ ತೋಟದ ಮನೆಗಳು. ಕೆಂಪು ಮಣ್ಣಿನ ರಸ್ತೆ. ರಸ್ತೆಗುಂಟ ಎತ್ತರದ ಗಿಡಗಳು. ಶಾಂತ-ಸುಂದರ ವಾತಾವರಣ. ನಿಂತಲ್ಲಿಂದಲೇ ''ಹೇಗಿದೆ ?'' ಅಂತ ಆಕೆ ಕೇಳಿದಾಗ ''ಬಹಳ ಸುಂದರವಾಗಿದೆ'' ಎಂದುತ್ತರಿಸಿದ ಸತೀಶ ಆಕೆಗೆ ಎದುರಾಗಿ ಬಂದವನು ಒಮ್ಮೆಲೇ ಚೇಳು ಕುಟುಕಿದಂತಾಗಿ ನಿಂತಲ್ಲೇ ನಿಂತುಬಿಟ್ಟ. ಆತ ನೋಡುತ್ತಿರುವುದೇನು ? ಕಟ್ಟುಮಸ್ತಾಗಿದ್ದ ಗಂಭೀರ ಗಮನೆಯಾದ ಹೊಳೆವ ಕಣ್ಣುಗಳ ಆ ಹುಡುಗಿಗೆ ಎಡಗೈ ಇರಲಿಲ್ಲ. ಮೊಳಕೈಯಿಂದ ಕೆಳಗೆ ಪೂರ್ತಿ ಇರಲೇ ಇಲ್ಲ. ಯಾವಾಗಲೂ ಸೆರಗಿನೊಳಗಡೆ ಮರೆಯಾಗುತ್ತಿದ್ದ ಆ ಊನವನ್ನು ಆತ ಎಂದೂ ಗಮನಿಸಿರಲೇ ಇಲ್ಲ.

ಬಳುಕುತ್ತ ಮುನ್ನಡೆದ ಆಕೆ ಗೇಟು ತೆರೆದು ''ಬರ್ರಿ ಸತೀಶ'' ಅಂತ ಆಹ್ವಾನಿಸಿದಾಗಲೇ ಆತನಿಗೆ ಎಚ್ಚರವಾದದ್ದು. ಒಂದು ಭ್ರಮೆಯಿಂದ ಹೊರಬಂದು ಮತ್ತೊಂದು ಭ್ರಮೆಯಲ್ಲಿ ಸಿಕ್ಕಿಕೊಂಡ ಹಾಗೆ ಚಡಪಡಿಸುತ್ತ ಆತ ಆಕೆಯನ್ನು ಹಿಂಬಾಲಿಸಿದ. ಆಕೆಯ ಪ್ರೀತಿಯ ಜೂಲುನಾಯಿ, ಏಕಾಂಗಿಯಾಗಿ ಆಕೆಯ ದಾರಿ ಕಾಯುತ್ತ ನಿಂತಿದ್ದ ವೃದ್ಧ ತಂದೆ, ಅಡಿಗೆಯ ಮುದುಕಿ, ತೋಟದ ಹಣ್ಣುಗಳು, ಚಹಾ-ತಿಂಡಿ –ಇವೆಲ್ಲಾ ಯಾವುದೋ ಕನಸಿನ ಲೋಕದಲ್ಲಿ ಕಂಡ ವಿಚಿತ್ರಗಳಾಗಿ ತೋರಿ ಸತೀಶ ತುಂಬ ಮಾನಸಿಕ ಅಸ್ವಸ್ಥತೆಯನ್ನನುಭವಿಸಿದ. ''ನೀವು ಬಂದದ್ದು ಬಹಳ ಸಂತೋಷ. ನಮ್ಮ ಶೋಭಾ ತಾಯಿಯಿಲ್ಲದೇ ಒಡಹುಟ್ಟಿದವರಿಲ್ಲದೇ ಬೆಳೆದ ಹುಡುಗಿ. ಅವಳಿಗೆ ಗೆಳತಿಯರೂ ಯಾರೂ ಇಲ್ಲ. ಇತ್ತೀಚೆ ನಿಮ್ಮ ಬಗ್ಗೆ ಹೇಳಿದ್ದಳು. ನೀವು ಆಗಾಗ ಬರುತ್ತ ಇರ್ರಿ'' –ಅಂದರು ಆಕೆಯ ತಂದೆ.

''ಹ್ಞೂ'' ಅಂದ ಸತೀಶ ಯಾಂತ್ರಿಕವಾಗಿ. ಆದರೆ ಇನ್ನೆಂದೂ ಈ ಕಡೆ ತಲೆ

ಹಾಕಲಾರೆನೆಂದು ಆತ ಆಗಲೇ ಮನಸ್ಸಿನಲ್ಲಿ ನಿರ್ಧರಿಸಿಯಾಗಿತ್ತು.

ಆದರೆ ಮುಂದಿನ ಶನಿವಾರ ಸತೀಶ ಕುಲಕರ್ಣಿ ಮತ್ತೆ ಶೋಭಾ ನಾಯಕನ ತೋಟದ ಮನೆಗೆ ಹಾಜರಾದ. ''ಬರುತ್ತೀರೇನು ? ತಂದೆಯುವರು ನಿಮ್ಮನ್ನು ನೆನೆಸುತ್ತಿದ್ದರು'' ಅಂತ ಶೋಭಾ ಕೇಳಿದಾಗ ಆತನಿಗೆ ಇಲ್ಲವೆನ್ನಲಾಗಿರಲಿಲ್ಲ. ಆಶ್ಚರ್ಯವೆಂದರೆ ಈ ಸಲ ಆ ಮನೆ, ತೋಟ, ಶೋಭಾಳ ಮೊಂಡು ಎಡಗೈ ಈ ಯಾವುದರಿಂದಲೂ ಆತನಿಗೆ ಮುಜುಗರವೆನಿಸಲಿಲ್ಲ. ಆತ ಮಧ್ಯಾಹ್ನವಿಡೀ ಅವರೊಂದಿಗೆ ತೆಂಗಿನ ಗಿಡಗಳಿಗೆ ಪಾತಿ ಮಾಡುವುದರಲ್ಲಿ, ಗುಲಾಬಿ ಗಿಡಗಳಿಗೆ ಗೊಬ್ಬರ ಹಾಕುವುದರಲ್ಲಿ, ಮೆಣಸಿನ ಸಸಿಗಳಿಗೆ ನೀರು ಹಾಯಿಸುವುದರಲ್ಲಿ ಸಂತೋಷದಿಂದ ಕಳೆದ. ಸಂಜೆಯಾಗುತ್ತ ಬಂದಂತೆ ಶೋಭಾ ''ನೀವಿಬ್ಬರೂ ಕೈಕಾಲು ತೊಳಕೊಂಡು ಬರ್ರಿ. ನಾನೊಂದಿಷ್ಟು ತಿನ್ನಲು ಏನಾದರೂ ಮಾಡಿ ತರುತ್ತೇನೆ'' ಎಂದು ಹೇಳಿ ಒಳಗೆ ಹೊರಟಳು. ಹಿಂದಿನಿಂದ ಅವಳನ್ನು ಗಮನಿಸುತ್ತಿದ್ದಂತೆ ಸತೀಶನಿಗನಿಸಿತು– ಈ ಹುಡುಗಿ ಧೈರ್ಯವಂತೆ. ಪ್ರಯತ್ನಶೀಲೆ. ತನ್ನದೊಂದು ಅಂಗವೇ ಊನವಾಗಿದ್ದರೂ ಏನೂ ಆಗಿಲ್ಲದವರಂತೆ ಇರಲು, ಬೇರೆಯವರನ್ನೂ ಹಾಗೇ ನಂಬಿಸಲು, ಹೆಣಗುತ್ತಿದ್ದಾಳೆ. ತೋಟಗಾರಿಕೆ ಅವಳ ಹವ್ಯಾಸವಲ್ಲ, ಜೀವನಾಧಾರ. ಪ್ರತಿಯೊಂದನ್ನೂ ಆಕೆ ಶ್ರದ್ಧೆಯಿಂದ ಅಚ್ಚುಕಟ್ಟಾಗಿ ಮಾಡುತ್ತಾಳೆ. ತಾನೂ ಎಲ್ಲರಂತೆ ಜೀವಿಸಲು, ಕೆಲಸ ಮಾಡಲು, ಮದುವೆಯಾಗಲು ಅವಳು ಬಯಸುತ್ತಾಳೆ. ನಿಜವಾಗಿ ಆ ಒಂದೇ ಕೈಯಿಂದ ಅವಳು ಏನೆಲ್ಲಾ ಮಾಡುತ್ತಾಳೆ !

''ಶೋಭಾ ಎರಡು ವರ್ಷದ ಮಗು ಆಗಿದ್ದಾಗ ನಾವು ಉತ್ತರದ ಕಡೆ ತೀರ್ಥಯಾತ್ರೆಗೆ ಹೋಗಿದ್ದೆವು. ನಮ್ಮ ಬಸ್ಸು ಅಪಘಾತಕ್ಕೀಡಾಯಿತು. ಅದರಲ್ಲಿ ನನ್ನ ಮಗಳು ಎಡಗೈ ಕಳಕೊಂಡಳು. ತನ್ನ ತಾಯಿಯನ್ನೂ ಕಳಕೊಂಡಳು.'' –ಅವಳ ತಂದೆ ವಿಷಾದದಿಂದ ಹೇಳಿದರು.

ಸತೀಶ ತನ್ನ ಪ್ರಾಮಾಣಿಕ ಸಂತಾಪ ಸೂಚಿಸಿದ.

''ಆದರೆ ನನ್ನ ಮಗಳು ಧೈರ್ಯವಂತೆ. ಮನೆಕೆಲಸ, ಸ್ಕೂಲು-ಕಾಲೇಜಿನ ಓದು, ಬ್ಯಾಂಕ್ ನೌಕರಿ, ತೋಟದ ಕೆಲಸ ಎಲ್ಲಾ ನಿಭಾಯಿಸುತ್ತಾಳೆ. ಅವಳ ಪಗಾರ ಕಡಿಮೆ ಇದ್ದರೂ ತೋಟದಿಂದ ಬರುವ ಅಲ್ಪ-ಸ್ವಲ್ಪ ಉತ್ಪನ್ನದಿಂದಾಗಿ ಮನೆಯ ಸಾಲ ತೀರಿಸುತ್ತಾ ಇದ್ದೇವೆ. ಅಂತೂ ಹೇಗೋ ಸೋಲದೆ ತಲೆಯೆತ್ತಿ ಬದುಕುವ ಪ್ರಯತ್ನ ಮಾಡುತ್ತಾ ಇದ್ದೇವೆ'' –ಅಂದರು ಆತ.

ಅವರ ಆ ಪ್ರಯತ್ನದಲ್ಲಿ ಕ್ರಮೇಣವಾಗಿ ಸತೀಶನೂ ಭಾಗಿಯಾಗತೊಡಗಿದ. ಶನಿವಾರ ಮಧ್ಯಾಹ್ನ ಹಾಗೂ ಸಂಜೆಯೆಲ್ಲ ಆತ ಶೋಭಾಳ ತೋಟದಲ್ಲಿ ಆಕೆಯ

ತಂದೆಯೊಂದಿಗೆ ಕೆಲಸ ಮಾಡುವುದರಲ್ಲಿ ಕಳೆಯತೊಡಗಿದ. ಕಾಯಿ-ಪಲ್ಯೆಗಳನ್ನು, ಹಣ್ಣುಗಳನ್ನು, ಎಳನೀರುಗಳನ್ನು ಗಿಡಗಳಿಂದ ಇಳಿಸಿ, ರಾಶಿ ಮಾಡಿ, ಬುಟ್ಟಿಗಳಲ್ಲಿ ತುಂಬಿ ಸಂತೆಗೆ ಒಯ್ದು ತಲುಪಿಸುವ ಕೆಲಸದಲ್ಲೂ ಅವರಿಗೆ ನೆರವಾಗತೊಡಗಿದ. ಅವರ ಮನೆಗೆ ಹೊಸ ಹೆಂಚು ಹೊದಿಸುವುದು, ಸುಣ್ಣ ಬಳಿಯುವುದು, ತೋಟಗಾರಿಕೆ ಇಲಾಖೆಯಿಂದ ಬೀಜಗಳನ್ನು ತರುವುದು, ಲಾರಿಯಲ್ಲಿ ಗೊಬ್ಬರ ತರಿಸುವುದು, ಶೋಭಾಳ ತಂದೆಗೆ ಕಾಯಿಲೆಯಾದಾಗ ಡಾಕ್ಟರನ್ನು ಕರೆತರುವುದು, ಬ್ಯಾಂಕಿನ ಪರೀಕ್ಷೆಗಾಗಿ ಓದಲು ಅವಳಿಗೆ ನೆರವಾಗುವುದು –ಇತ್ಯಾದಿ ಕೆಲಸಗಳೆಲ್ಲಾ ದಿನಗಳೆದಂತೆ ಸತೀಶನ ಸ್ವಂತ ಜವಾಬ್ದಾರಿಗಳೇ ಆದವು.

ಹಾಗಿದ್ದಾಗ ಒಂದು ಶನಿವಾರ ಕೆಲಸಗಳನ್ನೆಲ್ಲ ಮುಗಿಸಿ ವರಾಂಡದಲ್ಲಿ ಕುರ್ಚಿ ಹಾಕಿಕೊಂಡು ಕೂತು ಮಾತಾಡುತ್ತಿದ್ದಾಗ ಏನೊಂದು ಪೀಠಿಕೆಯೂ ಇಲ್ಲದೆ ಶೋಭಾಳ ತಂದೆ ಸತೀಶನನ್ನು ನೇರವಾಗಿಯೇ ಕೇಳಿದರು, "ಶೋಭಾಳನ್ನು ನೀವು ಮದುವೆಯಾಗಲೆಂದು ನನ್ನ ಇಚ್ಛೆ– ಆದಷ್ಟು ಬೇಗ ಈ ಕೆಲಸವಾಗಬೇಕು. ನನಗೂ ವಯಸ್ಸಾಯಿತು. ಏನಂತೀರಿ ಸತೀಶ ?"

ಎರಡು ನಿಮಿಷ ಸತೀಶ ಸುಮ್ಮನಿದ್ದಾಗ ಅವರೇ ಮತ್ತೆ ಅಂದರು : "ಹೀಗೆ ಒಮ್ಮೆಲೆ ಕೇಳಬಾರದಿತ್ತೇನೋ. ಹೋಗಲಿ. ಯೋಚನೆ ಮಾಡಿ ಹೇಳಿರಿ."

ಸತೀಶ ತಟ್ಟನೆ ಅಲ್ಲಿಂದೆದ್ದು ಹೊರಗೆ ಹೊರಟ. ಬಾಗಿಲಿನಾಚೆ ನಿಂತಿದ್ದ ಶೋಭಾ ಅವನನ್ನು ಹಿಂಬಾಲಿಸಿದಳು. ಗೇಟಿನ ಕಡೆ ನೇರವಾಗಿ ಹೋಗುತ್ತಿದ್ದ ಆತನ ಸಮಕ್ಕೇ ಹೆಜ್ಜೆ ಹಾಕುತ್ತ ಉತ್ಕಂಠೆಯಿಂದ ಆಕೆ ಹೇಳಿದಳು, "ಪ್ಲೀಜ್, ತಪ್ಪು ತಿಳೀಬಾರದು ಸತೀಶ, ನೀವು ಈ ಬಗ್ಗೆ ವಿಚಾರ ಮಾಡಿಯೇ ನಿರ್ಧಾರ ಮಾಡಿರಿ. ನನಗ್ಗೊತ್ತು, ಈ ವಿಷಯದಲ್ಲಿರುವ ಅಡಚಣೆ ಏನು ಅಂತ. ಅದಕ್ಕೇ ನಾನು ಇಲ್ಲೀವರೆಗೂ ಏನೂ ಕೇಳಲಿಲ್ಲ. ನೀವು ಚೆನ್ನಾಗಿ ಯೋಚನೆ ಮಾಡಿರಿ. ನಂತರವೇ ನಿಮ್ಮ ನಿರ್ಧಾರ ತಿಳಿಸಿರಿ. ನಾನು ಕಾಯುತ್ತಿರುತ್ತೇನೆ."

ತನ್ನ ಬಲಗಡೆ ತನ್ನ ಸಮೀಪವೇ ನಡೆದು ಬರುತ್ತಿದ್ದ ಆಕೆಯ ಮೊಂಡಾದ ಎಡಗೈ ನೋಡುತ್ತಿದ್ದಂತೆ ತಲೆಯೆಲ್ಲ ಬಿಸಿಯಾದಂತೆನಿಸಿ ತಟ್ಟನೆ ನಿಂತು ಆತ ಉತ್ತರಿಸಿದ, "ನಾನು ವಿಚಾರ ಮಾಡುತ್ತೇನೆ ಶೋಭಾ, ಮುಂದಿನ ವಾರ ಬಂದಾಗ ಹೇಳುತ್ತೇನೆ. ನೀವು ಇಲ್ಲೇ ನಿಂತಿರ್ರಿ. ನನ್ನನ್ನು ಕಳಿಸಲು ಬರುವುದು ಬೇಡ. ನಾನೀಗ ಹೋಗುತ್ತೇನೆ. ಇಲ್ಲವಾದರೆ ಕೊನೆಯ ಬಸ್ಸು ಸಿಗಲಾರದು" –ಅಷ್ಟಂದು ಹಿಂತಿರುಗಿ ನೋಡದೆ ಆತ ವೇಗವಾಗಿ ಹೊರಟುಬಂದ.

* * *

ಮರುವಾರದ ಮೊದಲ ದಿನಗಳಲ್ಲಿ ಒಂದು ಬೆಳಿಗ್ಗೆ ಅತ್ಯಂತ ಆಕಸ್ಮಿಕವಾಗಿ ಸತೀಶನ ಟೇಬಲ್ಲಿನೆದುರು ಕುಸುಮಾ ಪಾಟೀಲ ಪ್ರತ್ಯಕ್ಷಳಾದಳು. ತುಂಬು ಆತ್ಮ ವಿಶ್ವಾಸದಿಂದ ನಗುತ್ತ "ಹಲೋ ಸತೀಶ, ಹೇಗಿದ್ದೀರಿ ? ಬರ್ರಿ, ಚಹಾ ಕುಡಿದು ಬರೋಣ" ಎಂದು ಆಹ್ವಾನಿಸಿದಳು. ಅವಳಲ್ಲಾಗಿದ್ದ ಬದಲಾವಣೆ ನಿಜವಾಗಿ ಆಶ್ಚರ್ಯಕಾರಕವಾಗಿದ್ದು ಆತ ಅವಳತ್ತ ಬಹಳ ಹೊತ್ತು ನೋಡುತ್ತಲೇ ಇದ್ದ -ಆಕೆ ಮೈತುಂಬಿಕೊಂಡಿದ್ದಳು. ಕೂದಲನ್ನು ಕತ್ತರಿಸಿ ಬಾಬ್ ಮಾಡಿದ್ದಳು. ಸುಂದರವಾದ ಶೈಲಿಯಲ್ಲಿ ಸೀರೆ ಉಟ್ಟು ಸ್ಲೀವ್‌ಲೆಸ್ ಬ್ಲೌಜ್ ಹಾಕಿದ್ದಳು. ದುಂಡಗಿನ ಅವಳ ಎರಡೂ ತೋಳುಗಳು, ತುಂಬಿಕೊಂಡ ಎರಡೂ ಮುಂಗೈಗಳು, ನೇಲ್‌ಪಾಲಿಶ್ ಹಾಕಿದ್ದ ಶೇಪ್ ಮಾಡಿದ್ದ ಉಗುರುಗಳುಳ್ಳ ಹತ್ತು ಬೆರಳುಗಳು ನಿಜವಾಗಿ ಅದ್ಭುತವೆನಿಸಿದವು.

ಚಹಾ ಕುಡಿಯುತ್ತ ಆಕೆ ತನ್ನ ಬಗ್ಗೆ ಹೇಳಿಕೊಂಡಳು. ಬೇರೆ ಊರಿಗೆ ವರ್ಗವಾಗಿ ಹೋಗಿದ್ದ ಆಕೆ ಕೆಲಸದೊಂದಿಗೆ ಓದನ್ನೂ ಮುಂದುವರಿಸಿ ಡಿಗ್ರಿ ಪಡೆದಿದ್ದಳು. ಇಲಾಖೆಯ ಪರೀಕ್ಷೆಗಳನ್ನೂ ಪಾಸು ಮಾಡಿ ಮ್ಯಾನೇಜರ್ ಆಗಿದ್ದಳು. ಅವಳ ಧ್ವನಿಯಲ್ಲಿ, ನಡೆನುಡಿಯಲ್ಲಿ ಠೀವಿ-ಗತ್ತು-ಆತ್ಮವಿಶ್ವಾಸ ಎದ್ದು ಕಾಣುತ್ತಿದ್ದವು. ಎಲ್ಲ ಹೇಳಿದ ನಂತರ ಕೊನೆಗೆ ದನಿಯಿಳಿಸಿ ಕುಸುಮಾ ಅಂದಳು, "ಇಷ್ಟು ದಿನ ಕಳೆದು ನಿಮ್ಮನ್ನು ನೋಡಲೆಂದೇ ನಾನಿಲ್ಲಿಗೆ ಬಂದೆ ಸತೀಶ, ನಿಮ್ಮ ಬಗೆಗಿನ ನನ್ನ ಭಾವನೆಗಳು ಇಂದಿಗೂ ಹಾಗೆಯೇ ಇವೆ."

ಚಹದ ಕಪ್ಪನ್ನು ಕೆಳಗಿರಿಸಿ ಎದ್ದು ನಿಲ್ಲುತ್ತ ಆತ ಹೇಳಿದ, "ಚಹಕ್ಕಾಗಿ ಥ್ಯಾಂಕ್ಸ್ ಕುಸುಮಾ. ಈಗ ಕೆಲಸದ ಹೊತ್ತು. ಮತ್ತೆ ಭೆಟ್ಟಿಯಾಗಿ ಮಾತನಾಡೋಣ. ಬಾಯ್"

ಕುಸುಮಾಳಿಂದ ಬೀಳ್ಕೊಂಡು ಬಂದ ನಂತರ ಸತೀಶ ಆಕೆಯನ್ನು ಮತ್ತೆ ಭೆಟ್ಟಿಯಾಗಲಿಲ್ಲ. ಆದರೆ ಈ ಭೆಟ್ಟಿ ಆತನ ಮೇಲೆ ಆಳವಾದ ಪರಿಣಾಮವನ್ನುಂಟುಮಾಡಿತು. ಎರಡೂ ಕೈಗಳನ್ನು ಹೊಂದಿರುವುದು ಎಷ್ಟೊಂದು ಸುಂದರವಾದ, ಅದ್ಭುತವಾದ ವಿಷಯ ಅನ್ನುವುದನ್ನು ಆಕೆ ತೋರಿಸಿಕೊಟ್ಟಿದ್ದಳು. ಅಂದಿನಿಂದ ಆತ ಎದುರಿಗೆ ಬಂದ ಎಲ್ಲಾ ಹೆಂಗಸರ ಕೈಗಳನ್ನು ಗಮನಿಸತೊಡಗಿದ. ದಪ್ಪಗಿನ ಕೈಗಳು, ತೆಳ್ಳಗಿನ ಕೈಗಳು, ದುಂಡಾಗಿ ಸುಂದರವಾಗಿದ್ದ ಕೈಗಳು, ಚಪ್ಪಟೆಯಾಗಿ ರೋಮ ತುಂಬಿದ ಕೈಗಳು, ಸಶಕ್ತ ಕೈಗಳು, ಬಲಹೀನ ಕೈಗಳು, ಎಲ್ಲ ಬಗೆಯ ಜೋಡು ಕೈಗಳಲ್ಲಿ ಅದೆಂತಹ ಸೌಂದರ್ಯ ಅಡಗಿತ್ತು ! ಈ ಹಿನ್ನೆಲೆಯಲ್ಲಿ ಶೋಭಾಳ ಯೋಚನೆ ಬಂದಾಗ ಆತನಿಗೆ ಗಂಟಲಲ್ಲಿ ಏನೋ ಸಿಕ್ಕಿಕೊಂಡ ಹಾಗೆ ಅನಿಸತೊಡಗಿತು. ಇಲ್ಲ, ಸಾಧ್ಯವಿಲ್ಲ, ಎಂದಿಗೂ ಸಾಧ್ಯವಿಲ್ಲ – ಅನಿಸತೊಡಗಿತು. ಶನಿವಾರ ಬರಲಿ, ಒಮ್ಮೆ ಹೋಗಿ ಸ್ಪಷ್ಟವಾಗಿ ಹಾಗೆಂದು ಹೇಳಿಬಿಟ್ಟು ಈ ನೋವಿನ

ಪ್ರಕರಣಕ್ಕೆ ತೆರೆ ಎಳೆದುಬಿಡೋಣ ಎಂದಾತ ನಿರ್ಧರಿಸಿಬಿಟ್ಟ. ನಂತರವೇ ಕುದಿಯುತ್ತಲಿದ್ದ ಆತನ ಒಳಮನಸ್ಸು ಹತೋಟಿಗೆ ಬಂದದ್ದು. ಆ ನಿರ್ಧಾರದ ನಂತರ ಶನಿವಾರದ ವರೆಗಿನ ದಿನಗಳನ್ನು ಆತ ಒಂದು ಬಗೆಯ ಶೂನ್ಯ ಮನಸ್ಥಿತಿಯಲ್ಲಿ ಕಳೆದ.

* * *

ಶನಿವಾರ ಮಧ್ಯಾಹ್ನ ಎಂದಿಗಿಂತ ತುಸು ಮುಂಚೆಯೇ ಸತೀಶ ಶೋಭಾಳ ತೋಟದ ಮನೆಗೆ ಹೋದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಆಕೆಯ ತಂದೆ ಪೇಟೆಗೆ ಹೋಗಿದ್ದಿರಬಹುದು. ಶೋಭಾ ತೋಟದಲ್ಲಿ ಏನೋ ಕೆಲಸ ಮಾಡುತ್ತಿದ್ದಿರಬಹುದು. ಆಕೆಯನ್ನು ಕಂಡು ತನ್ನ ನಿರ್ಧಾರ ತಿಳಿಸಿಬಿಟ್ಟು ಬೇಗನೇ ತಿರುಗಿಹೋಗಿ ಬಿಡೋಣವೆಂದುಕೊಂಡು ಆತ ತೋಟದ ಕಡೆ ನಡೆದ.

ಗಿಡಗಳಿಗೆ ನೀರುಣಿಸಿ ಬರುತ್ತಿದ್ದಳೆಂದು ಕಂಡಿತು– ಶೋಭಾಳ ಸೀರೆ ಒದ್ದೆಯಾಗಿತ್ತು. ಕೂದಲು ಕೆದರಿತ್ತು. ಕೈಗೆ ಮಣ್ಣು ಅಂಟಿತ್ತು. ಆತನನ್ನು ಕಂಡೊಡನೆ ಅವಳ ಕಣ್ಣುಗಳು ಹೊಳೆದವು : "ಸತೀಶ, ಯಾವಾಗ ಬಂದಿರಿ ? ಇದೇನು ಈ ದಿನ ಬೇಗನೆ ಬಂದಿರಲ್ಲ ?"

"ಹೌದು", ಆತ ದೃಢವಾಗಿ ಅಂದ, "ಈ ದಿನ ನಾನು ಬೇಗನೆ ತಿರುಗಿ ಹೋಗಬೇಕು, ಈಗಲೇ."

"ಅಂದರೆ ? ಈಗಲೇ ಅಂದರೆ ?" –ಆಕೆಯ ಕಣ್ಣುಗಳ ಬೆಳಕಿನಲ್ಲಿ ಒಮ್ಮೆಲೆ ನೋವಿನ ಸೆಳಕು ಮಿಂಚಿತು.

"ಈಗಲೇ ಅಂದರೆ ಈಗಲೇ. ನಾನು ಹೋಗುತ್ತಿದ್ದೇನೆ. ಮತ್ತೆ ಇಲ್ಲಿಗೆ ಬರುವುದಿಲ್ಲ."

"ಅಂದರೆ ? ನಿಮ್ಮ ಉತ್ತರ 'ಇಲ್ಲ, ಆಗುವುದಿಲ್ಲ' ಎಂದೆ ?" ಗಾಯಗೊಂಡ ಹರಿಣಿಯ ಹಾಗೆ ಕಂಡಳು ಶೋಭಾ.

"ಇಲ್ಲ, ಆಗುವುದಿಲ್ಲ" ಅಂದ ಸತೀಶ.

"ನೀವು ಹಾಗೆ ಹೇಳಲು ಕಾರಣವೇನೆಂದು ಊಹಿಸಬಲ್ಲೆ. ಆದರೂ ಸತೀಶ–"

ಆಕೆಯನ್ನು ಮಧ್ಯದಲ್ಲೇ ತಡೆದ ಆತ, "ಇಲ್ಲ, ಆಗುವುದಿಲ್ಲ. ಈ ಬಗ್ಗೆ ಚರ್ಚೆ ಬೇಡ." ಅಷ್ಟಂದು ಮುಂದಿನ ದೃಶ್ಯವನ್ನು ಎದುರಿಸುವ ಮನಸ್ಸಿಲ್ಲದೆ ಆತ ನೇರವಾಗಿ ಗೇಟಿನ ಕಡೆ ನಡೆದ. ಎರಡು ಕ್ಷಣಗಳ ನಂತರ ಹಿಂದಿನಿಂದ ಆಕೆಯ ನೋವು ತುಂಬಿದ ಧ್ವನಿ ಆತನಿಗೆ ಕೇಳಿಸಿತು : "ನೀನು ಹಾಗೆ ಹೇಳಲು ಕಾರಣವೇನೆಂದು ನನಗೆ ಗೊತ್ತು. ಆದರೆ ನೀನು ಯಾಕೆ ಮೇಲಿಂದ ಮೇಲೆ ಇಲ್ಲಿಗೆ ಬಂದೆ ? ನನ್ನ ಬಗ್ಗೆ ನಿನಗೆ ಏನೂ ಅನ್ನಿಸದಿದ್ದರೆ ಯಾಕೆ ಬರುತ್ತಲೇ ಇದ್ದೆ ? ಯಾಕೆ ? ...ಯಾಕೆ..."

–ಒಮ್ಮೆಲೇ ಏಕವಚನದಲ್ಲಿ ಬದಲಾದ ಸಂಬೋಧನೆ, ಆ ಧ್ವನಿಯಲ್ಲಡಗಿದ ಏಟು ತಿಂದು ಗಾಯಗೊಂಡಂತಹ ಉತ್ಕಂಠೆ –ಆತನನ್ನು ತಡೆದು ನಿಲ್ಲಿಸಿದವು. ಆತ ನಿಂತು ತಿರುಗಿ ನೋಡಿದ.

ಶೋಭಾ ನಿಂತಲ್ಲೇ ನಿಂತು ಆತನೆಡೆ ಕಾತರದಿಂದ ನೋಡುತ್ತಿದ್ದಳು. ಅವಳ ಕಣ್ಣು ತುಂಬಿ ಬಂದಿದ್ದವು. ಧ್ವನಿ, ಅವಳ ದೇಹವೂ ಸಹ, ನೋವಿನಿಂದ ಕಂಪಿಸುತ್ತಿತ್ತು. ಈ ಆಘಾತವನ್ನು ತಾಳಲಾರೆನೆಂಬಂತೆ ಆಧಾರಕ್ಕಾಗಿ ಪಕ್ಕದಲ್ಲಿದ್ದ ತೆಂಗಿನ ಮರವನ್ನು ಆಕೆ ಬಲಗೈಯಿಂದ ಆಧರಿಸಿ ಹಿಡಿದಿದ್ದಳು. ಅವಳ ಮೊಂಡಾದ ಎಡಗೈ ನಿರ್ಜೀವವಾಗಿ ಜೋತು ಬಿದ್ದಿತ್ತು. ಒಂದೇ ನಿಮಿಷ ಆತ ಆಕೆಯನ್ನು ನೋಡುತ್ತಲಿದ್ದ. ಎರಡನೇ ನಿಮಿಷದಲ್ಲಿ ಆತ ಆಕೆಯ ಕಡೆ ಓಡಿ ಬಂದು ಆಕೆಯ ಭುಜಗಳ ಸುತ್ತ ಕೈಹಾಕಿ ಆಕೆಯನ್ನು ತನ್ನ ಎದೆಗೆ ಗಟ್ಟಿಯಾಗಿ ಒತ್ತಿಕೊಂಡು ಬಡಬಡಿಸಿದ : "ನಾನು ನಿನ್ನನ್ನು ಪ್ರೀತಿಸುತ್ತೇನೆ ಶೋಭಾ, ಬಹಳ-ಬಹಳ-ಬಹಳ ಪ್ರೀತಿಸುತ್ತೇನೆ. ನಿನ್ನ ಬಿಟ್ಟು ಹೋಗುವುದಿಲ್ಲ, ನನ್ನನ್ನು ನಂಬು ಶೋಭಾ..."

ತೆಂಗಿನ ಮರ ಆಧರಿಸಿ ಹಿಡಿದಿದ್ದ ಶೋಭಾ ಅದನ್ನು ಬಿಟ್ಟು ಸತೀಶನ ಎದೆಯಲ್ಲಿ ತಲೆಯಿಟ್ಟು ಆತನ ಮಾತುಗಳನ್ನು ಕೇಳುತ್ತಾ ಕಣ್ಣೀರು ಹರಿಸುತ್ತ ಆನಂದಪಟ್ಟಳು.

(ಆಂಗ್ಲ ಸಾಹಿತಿ ಎಚ್. ಇ. ಬೇಟ್ಸ್‌ನ ವಿಚಾರಗಳಿಂದ ಪ್ರೇರಿತ)

(೧೯೮೮)

❖ ❖ ❖

# ತಾರಾ ಮ್ಯಾಡಮ್ ಮತ್ತು ತತ್ವಗಳು

"ಮೇ ಆಯ್ ಕಮಿನ್ ಸರ್ ?" –ತೂಗುಬಾಗಿಲಿನಾಚೆಯಿಂದ ಸ್ಟೈಲಿಶ್ ಇಂಗ್ಲಿಶ್ ಉಚ್ಚಾರಣೆಯ ಮಧುರ ಸ್ವರ ತೇಲಿ ಬಂದಿತು.

"ಯೆಸ್, ಕಮಿನ್", –ಅಂದರು, ಓದುತ್ತಿದ್ದ ಫೈಲಿನಿಂದ ತಲೆಯೆತ್ತದೆಯೇ, ಹಿಂದಿನ ದಿನವೇ ಆ ಕಚೇರಿಗೆ ಹಾಜರಾಗಿ ಚಾರ್ಜು ವಹಿಸಿಕೊಂಡಿದ್ದ ಇಲಾಖೆಯ ನಿರ್ದೇಶಕರು. ಹೆಣ್ಣು ದನಿ ಕೇಳಿ ಬಳೆಗಳ ಕಿಣಿಕಿಣಿ ನಾದ ನಿರೀಕ್ಷಿಸಿದ್ದ ನಿರ್ದೇಶಕರು ಅದು ಕೇಳದಿದ್ದಾಗ ತಲೆಯೆತ್ತಿ ಒಳಬಂದಾಕೆಯನ್ನು ಒಮ್ಮೆ ನೋಡಿದರು. ಸ್ಲೀವ್‌ಲೆಸ್ ಬ್ಲೌಜು, ಬಾಯ್‌ಕಟ್ ಕೂದಲು, ಹೊಕ್ಕುಳ ಕೆಳಗೆ ಸೀರೆ, ಅಪ್ಪಟ ಮಾಡರ್ನ್ ವನಿತೆ. ಆ ಕಿವಿಯಿಂದ ಈ ಕಿವಿಯುವರೆಗೂ ತುಟಿಯುರಳಿಸಿ ಆಕೆ ಮಾತಾಡಿದಳು. "ಸರ್, ನಾನು ಡಾ. ತಾರಾ ಪೋಕಳೆ. ಈ ಆಫೀಸಿನ ಸಹಾಯಕ ನಿರ್ದೇಶಕಿ. ನಿನ್ನೆ ನೀವು ಚಾರ್ಜು ತಗೊಂಡಾಗ ನಾನು ಲೀವ್ದ್ ಮ್ಯಾಲಿದ್ದೆ. ಇವತ್ತ ಬಂದ ಕೂಡಲೇ ನಿಮ್ಮನ್ನ ಭೆಟ್ಟಿ ಆಗ್ಲಿಕ್ಕೆ ಓಡಿ ಬಂದೀನಿ." ಅಷ್ಟಂದು ಅವರು ಹೇಳುವ ಮೊದಲೇ ಅವರೆದುರು ಕೂತು ಕಣ್ಣುಗಳಲ್ಲಿ ಪ್ರಶಂಸೆಯ ಮಿಂಚು ತುಳುಕಿಸುತ್ತ ಮುಂದುವರಿಸಿದಳು, "ನಿಮ್ಮ ಬಗ್ಗೆ ನಾ ಭಾಳ ಕೇಳೀನಿ ಸರ್. ನೀವು ಬಹಳ ಎಫಿಶಿಯಂಟ್, ಮತ್ತ ಅಷ್ಟೇ ಸ್ಟ್ರಿಕ್ಟ್, ಅಗದೀ ಕೇಪೆಬಲ್, ಅಂತ. ನನಗ ಭಾಳ ಖುಷಿ ಆಗೇದ ಸರ್, ಹಾಳಾಗಿ ಹೋಗತಾ ಇರೋ ಈ ಆಫೀಸನ್ನ ಸುಧಾರಸ್ಲಿಕ್ಕೆ ನಿಮ್ಮಂಥಾ ಯೋಗ್ಯ ಆಫೀಸರೇ ಬೇಕಾಗಿತ್ತು. ನೀವು ಇಲ್ಲೆ ಡಾಯರೆಕ್ಟರ್ ಆಗಿ ಬಂದದ್ದು ಸೋಮಾರಿಗಳಿಗೆ ಲಂಚಕೋರರಿಗೆ ಭಾಳ ಫಜೀತಿ ಆಗೇದ, ಆದರ ನನ್ನಂಥಾ ಕೆಲವೇ ಕೆಲವು ಸಿನ್ಸಿಯರ್ ಮತ್ತ ಆನೆಸ್ಟ್ ವರ್ಕರ್ಸ್‌ಗೆ ಭಾಳ ಸಂತೋಷ ಆಗೇದ."

ಹೊಗಳಿಕೆ ಯಾರಿಗೆ ಪ್ರಿಯವಲ್ಲ? ಸಾಹೇಬರ ಹುಬ್ಬು ಸಡಿಲಗೊಂಡವು. ತುಟಿಗಳ ಮೇಲೆ ಕಂಡೂ ಕಾಣದ ಹಾಗೆ ಮುಗುಳ್ನಗು ಮೂಡಿತು. ಈ ಪ್ರತಿಕ್ರಿಯೆಯಿಂದ ಪ್ರಚೋದನೆ ಸಿಕ್ಕಂತೆನಿಸಿ ತಾರಾ ಪೋಕಳೆ ತನ್ನ ನಿವೇದನೆ ಸುರು ಮಾಡಿಯೇ ಬಿಟ್ಟಳು : "ಸರ್, ಈ ಆಫೀಸಿನ್ಯಾಗ ನಾನು ಹದಿನೈದು ವರ್ಷದಿಂದ ಕೆಲಸಾ ಮಾಡ್ಲಿಕ್ಹತ್ತೀನಿ, ನಾಲ್ಕು ಸರೆ ಟ್ರಾನ್ಸಫರ್ ಆದದ್ದನ್ನ ಕ್ಯಾನ್ಸಲ್ ಮಾಡಿಸಿಗೊಂಡೀನಿ ; ನಾನು ಈ ಆಫೀಸಿನ ಆಧಾರಸ್ತಂಭಧಾಂಗ ಪ್ರಾಮಾಣಿಕವಾಗಿ,

ತತ್ವಗಳಿಗೆ ಬದ್ಧಳಾಗಿ ದುಡೀತಾ ಇದ್ದದ್ದು ಮ್ಯಾಲಿನವ್ರಿಗೆಲ್ಲಾ ಗೊತ್ತದ. ನೀವು ಹೊಸದಾಗಿ ಬಂದೀರಿ. ನಿಮಗ ಇಲ್ಲಿಯ ಪರಿಸ್ಥಿತಿಯ ಖರೇ ಪರಿಚಯ ಮಾಡಿ ಕೊಡೂದು ನನ್ನ ಕರ್ತವ್ಯ. ಅದಕ್ಕs ನಿಮಗ ಆ ಬಗ್ಗೆ ನಾಲ್ಕು ಮಾತು ಹೇಳೋಣಂತ ಬಂದೆ. ಅಧಿಕಾರಿಗೆ ಮೊದಲೇ ಎಲ್ಲಾ ಕ್ಲಿಯರ್ ಪಿಕ್ಚರ್ ಕೊಡೋದು ಅಸಿಸ್ಟೆಂಟ್‌ನ ಧರ್ಮ, ಈ ತತ್ವವನ್ನ ಪಾಲಿಸ್ಲಿಕ್ಕೇಂತ ನಾ ಬಂದೀನಿ ಹೊರತಾಗಿ ಬ್ಯಾರೆ ಉದ್ದೇಶ ನನಗಿಲ್ಲ."

ಆಕೆಯ ಅಸ್ಖಲಿತ ಮಾತುಗಳ ಪರಿಣಾಮ ಆಗಲೇ ಹೊಸ ಅಧಿಕಾರಿಯ ಮೇಲೆ ಆಗತೊಡಗಿತ್ತು. 'ತತ್ವಗಳಿಗೆ ಬದ್ಧ'ರಾಗಿಯೇ ಕೆಲಸ ಮಾಡುವ ಉದ್ದೇಶದಿಂದ ಅಲ್ಲಿಗೆ ಬಂದಿದ್ದ ಆತನಿಗೆ 'ತತ್ವ'ಗಳ ಬಗ್ಗೆ ಮಾತಾಡುವ ಈ ಮಹಿಳೆಯ ಬಗ್ಗೆ ಗೌರವ ಮೂಡತೊಡಗಿತ್ತು. ಸ್ವಭಾವತಃ ತುಸು ರಸಿಕರೂ ಆಗಿದ್ದ ಆತನಿಗೆ ಸುಂದರಿಯಲ್ಲದಿದ್ದರೂ ವೈಯಾರಿಯಾಗಿ ಕಾಣುತ್ತಿದ್ದ ಈಕೆಯನ್ನು ತುಸು ಹೊತ್ತು ಕೂಡ್ರಿಸಿಕೊಂಡು ಈಕೆ ಹೇಳುವುದನ್ನು ಕೇಳುವುದರಲ್ಲಿ ತಪ್ಪೇನಿಲ್ಲ ಅನ್ನಿಸಿತು. ಆತ ಮಾತಾಡದಿದ್ದರೂ ಜಾಣೆಯಾಗಿದ್ದ ತಾರಾ ಆತನ ಅನಿಸಿಕೆಯನ್ನು ಅರ್ಥಮಾಡಿಕೊಂಡು ಇನ್ನಷ್ಟು ಮಾತಾಡಿದಳು : "ಸರ್, ಇತ್ತಿತ್ಲಾಗ ೩-೪ ವರ್ಷ ಆಫೀಸಿನ ಮ್ಯಾನೇಜಮೆಂಟು ಪೂರಾ ಕೆಟ್ಟು ಹೋಗೇದ, ನಿಮ್ಮ ಹಿಂದಿನ ನಿರ್ದೇಶಕರಿಗೆ ಸಿನ್ನಿಯರ್ ವರ್ಕರ್ಸ್‌ನ್ನು ಎನ್‌ಕರೇಜ್ ಮಾಡೋ ಬುದ್ಧೀನೇ ಇರಲಿಲ್ಲ. ಹಿಂಗಾಗಿ ನನ್ನಂಥವರು ಭಾಳ ಕಷ್ಟ ಅನುಭವಿಸಿದಿವಿ. ನಾನಂತೂ ಯಾವಾಗಲೂ ತತ್ವನಿಷ್ಠಳಾಗಿ ಕೆಲಸ ಮಾಡುವಾಕಿ. ಪ್ರತಿಯೊಂದೂ ರೂಲ್ಸ್ ಪ್ರಕಾರೇ ಆಗಬೇಕು ಅನ್ನುವಾಕಿ. ಡಿಪಾರ್ಟ್‌ಮೆಂಟಿನ ಕಲ್ಯಾಣವೇ ನನ್ನ ಕಲ್ಯಾಣ ಅಂದುಕೊಂಡಾಕಿ. ಆಫೀಸೇ ನನ್ನ ಮನೆ ಅಂತ ತಿಳದು ಕೆಲಸಾ ಮಾಡುವಾಕಿ. ಹಿಂಗಾಗಿ ಉಳಿದ ಅಸಿಸ್ಟೆಂಟ್ ಡೈರೆಕ್ಟರ್ಸು, ಕ್ಲಾರ್ಕುಗಳು – ಎಲ್ಲಾರಿಗೂ ನಾ ಬ್ಯಾಡಾದೆ. ನನ್ನ ಯಾವ ಯೋಜನೆಗೂ ಪ್ರೋತ್ಸಾಹ ಸಿಗ್ಲಿಲ್ಲ. ಯಾಕಂದರ ಉಳಿದವ್ರೆಲ್ಲಾ ಹೆಚ್ಚಾಗಿ ಸೋಮಾರಿಗಳು, ದಡ್ಡರು, ಭ್ರಷ್ಟಾಚಾರಿಗಳು, ಸ್ವಾರ್ಥಿಗಳು. ಇದು ನಿಮಗೂ ಲಗೂನೇ ಗೊತ್ತಾಗ್ತದ, ಯಾಕಂದರ ನೀವು ಭಾಳ ಕೀನ್ ಆಬ್ಜರ್ವರ್ ಇದ್ದೀರಿ. ನಾ ಒಬ್ಬಾಕೀನೇ ತತ್ವ-ತತ್ವ ಅಂತ ಬಡಿದಾಡಿ ಸುಸ್ತಾದೆ, ಸೋತೆ, ನಿರಾಶ ಆದೆ." ಬಹಳ ನಾಟಕೀಯವಾಗಿ, ಆದರೆ ಪರಿಣಾಮಕಾರಿಯಾಗಿ, ಧ್ವನಿಯಲ್ಲಿ ನೋವು ಹಾಗೂ ಪ್ರಾಮಾಣಿಕ ಅಸಹಾಯಕತೆ ವ್ಯಕ್ತಪಡಿಸುತ್ತ ಆಕೆ ಅಂದಳು, "ಅಂಥಾ ಹೊತ್ತಿನ್ಯಾಗ ನೀವು ಬಂದೀರಿ. ನನಗ ಹೊಸಾ ಬೆಳಕು ಕಾಣಿಸಿಧಾಂಗ ಅನಿಸ್ಲಿಕ್ಹತ್ತೇದ. ಈ ಡಿಪಾರ್ಟ್‌ಮೆಂಟಿನ ಉನ್ನತಿಯ ಸಲುವಾಗಿ ನಾನು ಹಾಕಿಕೊಂಡಿರೋ ಪ್ಲ್ಯಾನುಗಳೆಲ್ಲಾ ಇನ್ನಾದರೂ ನಿಮ್ಮ ಸಹಾಯದಿಂದ

ಕಾರ್ಯ್ಯರೂಪಕ್ಕೆ ಬಂದಾವು ಅನಸ್ತದ. ನಿಮ್ಮ ಗಾಯಡನ್ಸ್‌ದೊಳಗ ನನ್ನ ತತ್ವನಿಷ್ಠ ಸರ್ವ್ಹಿಸ್‌ಗೆ ರೆಕಗ್ನಿಷನ್ ಸಿಕ್ಕು ನಾನು ಇನ್ನೂ ಹೆಚ್ಚು ಕೆಲಸಾ ಮಾಡಬಹುದು, ನಮ್ಮ ಸೆಕ್ಶನ್ನು ಇಡೀ ರಾಜ್ಯದೊಳಗೇ ಅತ್ಯುತ್ತಮ ಸೆಕ್ಶನ್ ಅಂತ ಮನ್ನಣೆ ಪಡೀಬಹುದು, ಅನಸ್ತದ" –ಅಷ್ಟಂದು ದಣಿವಾರಿಸಿಕೊಳ್ಳಲೆಂಬಂತೆ ಆಕೆ ಸುಮ್ಮನಾದಳು.

ಆತ ಆಶ್ವಾಸನೆಯ ದನಿಯಲ್ಲಿ ಎರಡು ಮಾತು ಹೇಳಿದರು, "ಇಲ್ಲಿಯ ಆಡಳಿತ ಹದಗೆಟ್ಟು ಹೋಗಿದ್ದು ಅದನ್ನ ಸರಿಪಡಿಸಲಿಕ್ಕೆ ಅಂತಲೇ ಮೇಲಧಿಕಾರಿಗಳು ನನ್ನನ್ನು ಇಲ್ಲಿ ಕಳಿಸಿದ್ದು. ಇದು ಸಮಾಜ ಕಲ್ಯಾಣ ಇಲಾಖೆ. ಮಹಿಳೆಯರಿಗೆ–ಮಕ್ಕಳಿಗೆ ಸಂಬಂಧಿಸಿದ ಹಾಗೆ ಅನೇಕ ಯೋಜನೆಗಳನ್ನು ನಾವು ಯಶಸ್ವಿಯಾಗಿ ಪೂರೈಸಬೇಕು. ನಿಮಗೆ ಈ ಲೈನಿನೊಳಗೆ ಅನುಭವ ಇದೆ. ತತ್ವಗಳ ಬಗ್ಗೆ ನೀವು ಹೇಳಿದ್ದು ನನಗೆ ಮೆಚ್ಚಿಕೆಯಾಗಿದೆ. ನಾನು ನಿಮಗೆ ಪೂರಾ ಸ್ವಾತಂತ್ರ್ಯ ಕೊಡುವೆ. ಸಿನ್ಸಿಯರ್ಲೀ ಕೆಲಸ ಮಾಡ್ರಿ. ಪ್ರಗತಿ ಸಾಧಿಸಿ ತೋರಿಸಿರಿ. ಎಲ್ಲಾ ಸಹಾಯ ನೀಡುವೆ. ನಿಮ್ಮಂಥ ತತ್ವನಿಷ್ಠ ಮಹಿಳೆಯರೇ ಈ ಇಲಾಖೆಗೆ ಬೇಕು. ಕೆಟ್ಟು ಹೋದದ್ದನ್ನು ಸರಿಪಡಿಸಲು ಏನೇನು ಬೇಕೋ ಎಲ್ಲ ಮಾಡ್ರಿ. ನಿಮ್ಮ ಹಿಂದೆ ನಾನಿದ್ದೇನೆ."

"ಥ್ಯಾಂಕ್ಯೂ ಸರ್, ಥ್ಯಾಂಕ್ಯೂ" –ತಾರಾಳ ದನಿಯಲ್ಲಿ ಕೃತಜ್ಞತೆಯ ಭಾವವಿತ್ತು.

ಬಾಸ್‌ನ ಚೇಂಬರಿನಿಂದ ಅರ್ಧ ಗಂಟೆಯ ನಂತರ ಹೊರಬಿದ್ದಾಗ ಆಕೆ ಇನ್ನೂ ಐದು ವರ್ಷ ಚಿಕ್ಕವಳಾದಂತೆ ಬಳುಕುತ್ತ ನಡೆಯತೊಡಗಿದಳು. ಬಾಸ್‌ನ ಬೆಂಬಲವಿರುವಾಗ ಇನ್ಯಾರ ಹೆದರಿಕೆ ? ತನ್ನ ತತ್ವನಿಷ್ಠ ಕಾರ್ಯಾಚರಣೆಯನ್ನು ಪ್ರಾರಂಭಿಸಿಯೇ ಬಿಡೋಣವೆಂದುಕೊಳ್ಳುತ್ತ ಹುರುಪಿನಿಂದ ಆಕೆ ದೃಢ ಹೆಜ್ಜೆ ಹಾಕಿದಳು. ಮೂಲೆಯ ಟೇಬಲಿನಿಂದ ಬಂದ 'ಅಂತೂ ತಾರಾ ಮ್ಯಾಡಮ್ ಹೊಸ ಮಿಕವನ್ನ ಬಲೆಗೆ ಹಾಕ್ಕೊಂಡ್ಹಾಂಗ ಕಾಣಸ್ತದ' ಎಂಬ ಪಿಸುಧ್ವನಿ ಆ ಹುಮ್ಮಸ್ಸಿನಲ್ಲಿ ಆಕೆಗೆ ಕೇಳಿಸಲೇ ಇಲ್ಲ.

* * *

ನಂತರದ ದಿನಗಳಲ್ಲಿ ಆ ಆಫೀಸಿನಲ್ಲಿ ಪ್ರತಿದಿನ ಒಂದು ವ್ಯವಸ್ಥಿತ ಕಾರ್ಯಕ್ರಮ ನಿಯಮಿತವಾಗಿ ನಡೆಯತೊಡಗಿತು. ಅದೇನೆಂದರೆ ಆಫೀಸು ಸುರುವಾಗುವ ಅರ್ಧ ಗಂಟೆ ಮೊದಲೇ ತಾರಾ ಮ್ಯಾಡಮ್ ನಿರ್ದೇಶಕರ ಚೇಂಬರು ಸೇರುತ್ತಿದ್ದಳು. ಸುಮಾರು ಒಂದು ತಾಸಿನ ನಂತರ ಆಕೆ ಅಲ್ಲಿಂದ ಹೊರಬಿದ್ದು ತನ್ನ ಚೇಂಬರಿಗೆ ಹೋದ ಕೆಲವೇ ನಿಮಿಷಗಳಲ್ಲಿ ಯಾರಾದರೊಬ್ಬರಿಗೆ, ವಿಶೇಷವಾಗಿ ಹೆಣ್ಣುಮಕ್ಕಳಿಗೇ, ನಿರ್ದೇಶಕರಿಂದ ಬುಲಾವ್ ಬರುತ್ತಿತ್ತು. ಮುಂದೆ ಅರ್ಧ

ಗಂಟೆಯವರೆಗೂ ನಿರ್ದೇಶಕರ ಚೇಂಬರಿನಿಂದ ಅವರು ಏರುದನಿಯಲ್ಲಿ ಬೈಯ್ದದ್ದು ಕೇಳಿ ಬರುತ್ತಿತ್ತು. ಆಮೇಲೆ ಬೈಯಿಸಿಕೊಂಡಾಕೆ ಕೆಂಪಾದ ಕಣ್ಣುಗಳೊಂದಿಗೆ ಅಲ್ಲಿಂದ ಹೊರಬಂದು ಇಡೀ ದಿನ ಅಳುತ್ತಲೇ ಇರುತ್ತಿದ್ದಳು. ಅನೇಕ ಸಲ ಆಕೆ ಮತ್ತೆ ತಾರಾ ಮ್ಯಾಡಮ್‌ನ ಚೇಂಬರಿಗೆ ಹೋಗುವುದು, ಅಲ್ಲಿ ತಾರಾ ಮ್ಯಾಡಮ್‌ನಿಂದಲೂ ಬೈಯಿಸಿಕೊಳ್ಳುವುದು, ಅಲ್ಲಿಂದಲೂ ಅಳುತ್ತಲೇ ಹೊರ ಬರುವುದು, ಮುಂದೆ ಅನೇಕ ದಿನ ಅಳುತ್ತಲೇ ಇರುವುದು – ಹೀಗೆ.

ವಾರದಲ್ಲಿ ಮೂರು-ನಾಲ್ಕು ಬಾರಿ ಜಿಲ್ಹಾಮುಖ್ಯಸ್ಥಳವಾದ ಆ ಊರಲ್ಲಿನ ವಿವಿಧ ಮಹಿಳಾ ಸಂಘಟನೆಗಳಿಂದ ಡಾ. ತಾರಾ ಪೋಕಳೆಗೆ ಭಾಷಣದ ಆಮಂತ್ರಣಗಳು ಬರುತ್ತಿದ್ದವು. ಸಮಾಜ ವಿಜ್ಞಾನದಲ್ಲಿ ಡಾಕ್ಟರೇಟ್ ಪಡೆದು ಸಮಾಜ ಕಲ್ಯಾಣ ಇಲಾಖೆಯಲ್ಲಿ ಸರಕಾರೀ ಆಫೀಸರ್ ಆಗಿದ್ದ ತಾರಾ ಮಹಿಳಾ ವಿಮೋಚನಾ ಹೋರಾಟಗಾರ್ತಿಯೂ ಸಾಮಾಜಿಕ ಕಾರ್ಯಕರ್ತೆಯೂ ಆಗಿದ್ದಳು. ಸ್ತ್ರೀಶೋಷಣೆಯನ್ನು ಧಿಕ್ಕರಿಸಿ ಅಸ್ಖಲಿತವಾಗಿ ಮಾತಾಡಬಲ್ಲವಳಾಗಿದ್ದಳು. ಹೀಗಾಗಿ ಊರಲ್ಲಿನ ಮಹಿಳಾ ಸಂಘಗಳು, ಕಾಲೇಜುಗಳು, ಅಕ್ಕನ ಬಳಗಗಳು, ಭಗಿನೀ ಮಂಡಳಗಳು– ಎಲ್ಲರೂ ಆಕೆಯನ್ನು ಅತಿಥಿಯೆಂದು ಆಮಂತ್ರಿಸುತ್ತಿದ್ದರು. ಈ ತನ್ನೆಲ್ಲ ಚಟುವಟಿಕೆಗಳ ಬಗ್ಗೆ ಆಕೆ ಮೇಲಿಂದ ಮೇಲೆ ನಿರ್ದೇಶಕರಿಗೆ ಹೇಳುತ್ತಲೇ ಹೋದದ್ದರಿಂದ ಆಕೆಯ ಕರ್ತೃತ್ವ ಶಕ್ತಿಯ ಬಗ್ಗೆ ಅವರಿಗೆ ಯಾವುದೇ ಸಂಶಯ ಉಳಿಯದಂತಾಯಿತು.

* * *

ಅಂದು ಶನಿ ವಕ್ರಿಸಿದ್ದು ಯೋಜನಾ ವಿಭಾಗದಲ್ಲಿ ವರದಿಗಾರಳಾಗಿ ಕೆಲಸ ಮಾಡುತ್ತಿದ್ದ ನರ್ಮದಾ ಕುಲಕರ್ಣಿಯ ಮೇಲೆ. ಯಾವ ಮುನ್ಸೂಚನೆಯೂ ಇಲ್ಲದೆ ಆಕೆಯನ್ನು ಕರೆಸಿದ ಸಾಹೇಬರು ಆಕೆಯ ಮೇಲೆ ಕಾಗದವೊಂದನ್ನು ಎಸೆದು, "ಏನ್ರೀ ಇದು, ಹೀಗೇ ಏನು ನೀವು ಕೆಲಸ ಮಾಡುವುದು ? ಪಗಾರ ತಗೋತೀರಿ, ದುಡೀಲಿಕ್ಕೆ ಏನಾಗ್ತದ ನಿಮಗ ? ಇಷ್ಟು ಲೇಝಿ ಇದ್ದರ ಕೆಲಸಾ ಬಿಟ್ಟು ಮನ್ಯಾಗಿರ್ರಿ. ನೌಕರೀ ಅಂದ ಮ್ಯಾಲ ತತ್ವನಿಷ್ಠರಾಗಿ ಮಾಡಬೇಕು," ಅಂತ ಇನ್ನೂ ಏನೇನೋ ಒದರಿದರು.

ಪ್ರಸಂಗದ ತಲೆ-ಬುಡ ತಿಳಿಯದೆ ಕಕ್ಕಾವಿಕ್ಕಿಯಾಗಿದ್ದ ನರ್ಮದಾಗೆ 'ತತ್ವ' ಶಬ್ದ ಕೇಳಿದೊಡನೆ ತಲೆಯಲ್ಲಿ ಮಿಂಚು ಹೊಡೆದಂತಾಗಿ ಇದರ ಹಿಂದಿನ ಕೈವಾಡ ಯಾರದೆಂದು ಗೊತ್ತಾಗಿ ಹಲ್ಲು ಕಡಿದಳು. ಹಾಗೆಯೇ ಒಮ್ಮೆ ಆತ ತನ್ನ ಮೇಲೆಸದಿದ್ದ ಕಾಗದದ ಮೇಲೆ ಕಣ್ಣು ಹಾಯಿಸಿದಳು. ಅದು ಆಕೆಯ ಮೇಲಧಿಕಾರಿ ಡಾ. ತಾರಾ ಪೋಕಳೆ ಬರೆದಿದ್ದ ಕಂಪ್ಲೇಂಟು : ತಾನು ಒಂದು ಬಹುಮುಖ್ಯವಾದ ಯೋಜನೆಯ

ವರದಿ ತಯಾರಿಸುವಂತೆ ಅನೇಕ ಬಾರಿ ಹೇಳಿದರೂ ನರ್ಮದಾ ಆ ಕೆಲಸ ಮಾಡಿಲ್ಲ, ಆ ಬಗ್ಗೆ ನೆನಪು ಪತ್ರ ಕಳಿಸಿದರೂ ಲಕ್ಷ್ಯ ಕೊಟ್ಟಿಲ್ಲ, ಇದರಿಂದಾಗಿ ಆಗಬೇಕಾದ ಕೆಲಸ ಆಗದೆ ಇಲಾಖೆಗೆ ಕೆಟ್ಟ ಹೆಸರು ಬಂದಿದೆ, ಇನ್ನು ಒಂದು ವಾರದಲ್ಲಾದರೂ ನರ್ಮದಾ ವರದಿ ತಯಾರಿಸಿ ಕೊಡಲೇಬೇಕು, ಇಲ್ಲವಾದರೆ ಆಕೆಯ ಮೇಲೆ ಕಠಿಣ ಕ್ರಮ ಕೈಕೊಳ್ಳಬೇಕು...

"ಸರ್" –ಅಂತ ನರ್ಮದಾ ವಿವರಣೆ ಕೊಡಲು ಬಾಯಿ ತೆರೆಯುತ್ತಿದ್ದಂತೆ ಆತ ಮತ್ತೆ ಗರ್ಜಿಸಿದರು, "ನನಗ ಏನೂ ಎಕ್ಸ್‌ಪ್ಲೆನೇಷನ್ ಬ್ಯಾಡ, ಆಯ್ ವಾಂಟ್ ವರ್ಕ್. ಆರು ತಿಂಗಳಿಂದ ಈ ಪ್ರಾಜೆಕ್ಟ್ ರಿಪೋರ್ಟ್ ಕೆಲಸ ಪೆಂಡಿಂಗ್ ಬಿದ್ದದ. ನಿಮಗ ನಾಚಿಕಿ ಆಗಬೇಕು. ನಿಮ್ಮ ಅಸಿಸ್ಟೆಂಟ್ ಡೈರೆಕ್ಟರ್ ಡಾ. ತಾರಾ ನಿಮಗ ನಾಲ್ಕು ರಿಮೈಂಡರ್ಸ್ ಕಳಿಸ್ಯಾರ. ಓರಲೀ ಹೇಳ್ಯಾರ. ಆದ್ರೂ ನೀವು ರಿಪೋರ್ಟ್ ಬರದಿಲ್ಲಂದ್ರ ಏನ್ರಿ ಇದು ಕೇರ್‌ಲೆಸ್‌ನೆಸ್ ? ನಾ ಇಂಥಾದನ್ನೆಲ್ಲಾ ನಡಿಸಿಕೊಡೂದಿಲ್ಲ. ಈಗ ಒಂದು ವಾರದಾಗ ಬರದ್ರೀ ಛಲೋ ಆತು, ಇಲ್ಲಂದರ ನಿಮ್ಮನ್ನ ನಾನು ಟರ್ಮಿನೇಟ್ ಮಾಡಬಹುದು. ತಿಳಕೋರಿ. ನೌ, ಗೋ ಎಂಡ್ ಡೂ ಯುವರ್ ವರ್ಕ್."

ಯಾವಾಗಲೂ ಒಳ್ಳೆಯ ಕೆಲಸಗಾರ್ತಿಯೆಂದು ಹೆಸರು ಪಡೆದಿದ್ದ ಮಹತ್ವಾಕಾಂಕ್ಷಿಯಾಗಿದ್ದ ಹುಡುಗಿ ನರ್ಮದಾಗೆ ಬಹಳ ಅವಮಾನವೆನಿಸಿ ಕಣ್ಣೀರು ತಡೆಯಲಾಗದೇ ಆಕೆ ಹೇಗೋ ಹೊರಬಂದಳು. ಆಕೆಗೆ ಕೇವಲ ಕಣ್ಣಿನ ಮೂಲಕ ಅನುಕಂಪ ಸೂಚಿಸುವುದನ್ನು ಬಿಟ್ಟರೆ ಬೇರೇನೂ ಮಾಡಲಾಗದ ಸಹೋದ್ಯೋಗಿಗಳು ಮೌನವಾಗಿ ಕೂತಿದ್ದರು. ತಡೆಯಲಾಗದೆ ಆಕೆ ಎದ್ದು ತಾರಾ ಮ್ಯಾಡಮ್‌ನ ಚೇಂಬರಿಗೆ ಹೋಗಿ ಕೇಳಿಯೇ ಬಿಟ್ಟಳು, "ಮ್ಯಾಡಮ್, ನೀವು ನನಗ ರಿಪೋರ್ಟ್ ಬರಿ ಅಂದಿದ್ರಿ ಖರೆ, ಆದರೆ ಅದಕ್ಕ ಸಂಬಂಧಿಸಿದ ಎಲ್ಲಾ ಪೇಪರ್ಸೂ ನಿಮ್ಮ ಕಡೆ ಇಟ್ಟುಕೊಂಡೀರಿ, ನಾ ಎಷ್ಟು ಸರೆ ಕೇಳಿದ್ರೂ ಪೇಪರ್ಸು ಕೊಡವಲ್ರಿ. ಎಲ್ಲಾ ಪೇಪರ್ಸು ನೀವೇ ಇಟಗೊಂಡಾಗ ನಾಯೇನು ರಿಪೋರ್ಟು ಬರೀಲಿ ? ಮತ್ತ ನನ್ನ ಮ್ಯಾಲೇ ಕಂಪ್ಲೇಂಟು ಕೊಟ್ಟೀರಲ್ಲ ? ಇದು ಸರೀನs ?"

ಡಾ. ತಾರಾ ಪೋಕಳೆಯ ಕಣ್ಣು ಕೆಂಪಾದವು, "ಶಟ್‌ಪ್. ಯಾವದು ಸರಿ ಯಾವದು ತಪ್ಪು ಅಂತ ನನಗೆ ಕಲಿಸ್ಲಿಕ್ಕೆ ಬರ್ತೀಯಾ ? ಸ್ವಲ್ಪಾದ್ರೂ ಡಿಸಿಪ್ಲಿನ್ ಬ್ಯಾಡೇನು ? ನನಗ ನೂರಾ ಎಂಟು ಕೆಲಸಿರ್ತಾವ, ನಿನಗ ಬೇಕಾದ್ದ ಪೇಪರ್ಸು ಸಪ್ಲಾಯ್ ಮಾಡೂದೊಂದೇ ಕೆಲಸ ಅಲ್ಲ. ನೀ ಬೆನ್ನು ಹತ್ತಿ ಕೇಳಿ ಇಸಗೋ ಬೇಕಾದದ್ದು ನಿನ್ನ ಡ್ಯೂಟಿ. ನೀ ಹೀಂಗ ತಿರಿಗಿ-ತಿರಿಗಿ ಮಾತಾಡ್ತೀ ಅಂತ ಈಗ ಬಾಸ್‌ಗ

ಇನ್ನೊಂದು ಕಂಪ್ಲೇಂಟ್ ಬರೀತೀನಿ.''

ನರ್ಮದಾಳ ಧ್ವನಿಯಲ್ಲೀಗ ದೈನ್ಯ ಇಣುಕಿತು, ''ಹಾಂಗ ಮಾಡಬ್ಯಾಡ್ರಿ ಮ್ಯಾಡಮ್, ಅದರ ಬದ್ಲಿ ಆ ಪೇಪರ್ಸು ಕೊಟ್ಟುಬಿಡ್ರಿ ಈಗ ಸಧ್ಯಾ, ಒಂದೇ ದಿನದಾಗ ರಿಪೋರ್ಟ್ ಬರೀತೀನಿ.''

''ಈಗ ಸಧ್ಯಾ ? ಅದ್ಹ್ಯಾಂಗ ಸಾಧ್ಯದ ? ಅವು ನಾ ಎಲ್ಲಿಟ್ಟೇನೋ ಗೊತ್ತಿಲ್ಲ. ಹುಡುಕಬೇಕು.'' ತಾರಾ ನಿರ್ಲಕ್ಷ್ಯದಿಂದ ಅಂದಳು. ನರ್ಮದಾಗೆ ಆತಂಕ, ಗಾಬರಿ, ''ಮ್ಯಾಡಮ್, ಒಂದೇ ವಾರ ಟೈಮ್ ಕೊಟ್ಟಾರ ಬಾಸ್. ನೀವು ಪೇಪರ್ಸ್ ಯಾವಾಗ ಕೊಡ್ತೀರಿ ?''

''ಈ ವಾರ ನಾ ಭಾಳ ಬಿಝಿ ಇದ್ದೀನಿ. ಮುಂದಿನ ವಾರ ನೋಡೋಣಂತ, ಈಗ ಹೋಗು, ನಿನ್ನ ಕೆಲಸಾ ಮಾಡು.'' ತಾರಾಳ ದನಿಯಲ್ಲೂ ಬಾಸ್‌ನ ದನಿಯ ಗಡಸು. ನರ್ಮದಾ ನಿಂತಲ್ಲೇ ಕುಸಿಯುವುದೊಂದು ಬಾಕಿ.

* * *

ಮಹಿಳಾ ಕಲ್ಯಾಣ ವಿಭಾಗದಲ್ಲಿ ಹೊಸದಾಗಿ ಎಮ್. ಎ. ಮಾಡಿಕೊಂಡು ಸೇರಿದ್ದ ಶಶಿಕಲಾ ಪಾಟೀಲಳನ್ನು ಹಿಂದಿನ ದಿನ ಎಲ್ಲರೂ ಅಭಿನಂದಿಸಿದ್ದರು. ಯಾಕೆಂದರೆ ಕೇಂದ್ರ ಸಮಾಜ ಕಲ್ಯಾಣ ಇಲಾಖೆಯ ಸಂಶೋಧನಾ ವಿಭಾಗದಿಂದ ಆಕೆಗೆ ಒಂದು ಬಹುಮೂಲ್ಯ ಫೆಲೋಶಿಪ್ ಸಿಕ್ಕಿತ್ತು. ಅನಾಥ ಮಹಿಳೆಯರ ಸ್ಥಿತಿಗತಿಗಳ ಬಗ್ಗೆ ಆಕೆ ಕೈಗೊಂಡಿದ್ದ ಒಂದು ಸರ್ವೇ ಕೆಲಸವನ್ನು ಪುರಸ್ಕರಿಸಿ, ಅದನ್ನೇ ಇನ್ನೂ ವಿವರವಾಗಿ ಕೈಗೊಳ್ಳಬೇಕೆಂಬ ನಿರ್ದೇಶನದೊಂದಿಗೆ ತಿಂಗಳಿಗೆ ಎರಡು ಸಾವಿರದಂತೆ ಆರು ತಿಂಗಳ ವರೆಗೆ ಇಲಾಖೆಯು ಆಕೆಗೆ ಫೆಲೋಶಿಪ್‌ನ್ನು ಕೊಡಮಾಡಿತ್ತು. ಇಂಥ ಗೌರವಕ್ಕೆ ಪಾತ್ರಳಾದ ಈ ವಿಭಾಗದ ಮೊದಲ ಮಹಿಳೆ ಆಕೆಯಾಗಿದ್ದಳು. ಇದು ಇಡೀ ವಿಭಾಗಕ್ಕೆ ದೊರೆತ ಗೌರವವೆಂದು ಶಶಿಕಲಾಗೆ ಸಹಜವಾಗಿ ಸಂತೋಷವಾಗಿತ್ತು.

ಆದರೆ ಕೂಡಲೇ ನಿರ್ದೇಶಕರ ಚೇಂಬರಿನಿಂದ ಆಕೆಗೆ ಕರೆ ಬಂದಾಗ ಆ ಸಂತೋಷ ಅರ್ಧದಷ್ಟು ಝರ್ರನೇ ಇಳಿದೇ ಹೋಯಿತು.

''ಮಿಸ್ ಪಾಟೀಲ ಅವರೆ, ಈ ಫೆಲೋಶಿಪ್ಪು ನೀವು ತಗೋಬೇಕಂದ್ರ ಕೆಲವು ಪ್ರೊಸೀಜರ್ಸು ಫಾಲೋ ಮಾಡಬೇಕಾಗ್ತದ. ನೀವು ಹಾಂಗ ಮಾಡಿಲ್ಲ. ನೀವು ಇದಕ್ಕ ಅಪ್ಲಾಯ್ ಮಾಡೋವಾಗ ನಿಮ್ಮ ಸೆಕ್ಶನ್ ಹೆಡ್ ಡಾ. ತಾರಾ ಅವ್ರ ಪರ್ಮಿಶನ್ ತಗೋಬೇಕಾಗಿತ್ತು. ಅವರ ಥ್ರೂ ಅಪ್ಲಿಕೇಶನ್ ಕಳಸಬೇಕಾಗಿತ್ತು. ಅದು ಬಿಟ್ಟು ಡೈರೆಕ್ಟಾಗಿ ಸೆಂಟ್ರಲ್ ಆಫೀಸಿಗೇ ಕಳಸೀರಿ. ಇದೆಲ್ಲಾ ರೂಲ್ಸಿಗೆ ವಿರುದ್ಧ ಅಂತ ಡಾ. ತಾರಾ ಹೇಳ್ತಾರ. ಮತ್ತ ಅವರು ಅನ್ನೋದು ಖರೇ ಅದ.''

ಶಶಿಕಲಾ ಸಣ್ಣ ಧ್ವನಿಯಲ್ಲಿ ಹೇಳಿದಳು, "ಸರ್, ನಾನು ತಾರಾ ಮ್ಯಾಡಮ್‌ಗೆ ಅಪ್ಲಿಕೇಶನ್ ಕೊಟ್ಟಿದ್ದೆ, ಅವರು ಅದನ್ನ ಫಾರ್‌ವರ್ಡ್ ಮಾಡಲೇ ಇಲ್ಲ. ಅದಕ್ಕ ನಾನೂ ಒಂದು ಅಡ್ವಾನ್ಸ್ ಕಾಪಿ ಕಳಿಸಿದ್ದೆ...." –ಇದರಲ್ಲಿ ತನ್ನ ತಪ್ಪೇನೆಂದು ತಿಳಿಯದೆ ಆಕೆ ಒದ್ದಾಡುತ್ತಿದ್ದಂತಿತ್ತು.

"ನೀವು ಅಪ್ಲಿಕೇಶನ್ ತಮಗ ಕೊಟ್ಟೇ ಇಲ್ಲಂತ ತಾರಾ ಮ್ಯಾಡಮ್ ಸುಳ್ಳು ಹೇಳ್ತಾರೇನು ?"

"ಹಾಂಗಲ್ಲ ಸರ್–"

"ಮತ್ತ ಹ್ಯಾಂಗ ? ತಪ್ಪು ಮಾಡ್ತೀರಿ, ಮತ್ತ ಆ ತಪ್ಪು ಬ್ಯಾರೆಯವ್ರ ಮ್ಯಾಲ ಹಾಕ್ತೀರಿ. ನಿಮ್ಮ ಸೆಕ್ಶನ್ನಿನ್ಯಾಗ ಈ ಸಲ ಕೆಲಸ ಭಾಳ ಅದ. ಈ ಫೆಲೋಶಿಪ್ ನೀವು ತಗೊಂಡರ ಆಫೀಸಿನ ಕೆಲಸದ ಕಡೆ ನಿಮ್ಮ ಅಟೆನ್‌ಶನ್ ಕಡಿಮೆ ಆಗ್ತದಂತ ಡಾ. ತಾರಾ ಹೇಳ್ತಾರ. ಶೀ ಈಜ್ ಯುವರ್ ಸೆಕ್ಶನ್ ಹೆಡ್. ಅವರ ರೆಕಮೆಂಡೇಶನ್ ಇಲ್ಲದೇ ನೀವು ಇದನ್ನ ಸ್ವೀಕಾರ ಮಾಡ್ಲಿಕ್ಕೆ ಬರೂದಿಲ್ಲ. ನೌ ಯೂ ಮೇ ಗೋ."

ಪೆಚ್ಚುಮುಖ ಹಾಕಿಕೊಂಡ ಶಶಿಕಲಾ ಮೌನವಾಗಿ ಹೊರಬಂದಳು. ಆಫೀಸಿನ ಕೆಲಸವನ್ನು ಆಕೆ ಎಂದೂ ಅಲಕ್ಷಿಸಿರಲಿಲ್ಲ. ಅದರೊಂದಿಗೇ ಹೆಚ್ಚಿನ ಕೆಲಸ ಮಾಡಬಲ್ಲೆನೆಂಬ ವಿಶ್ವಾಸವೂ ಆಕೆಗಿತ್ತು. ಆದರೆ ಯಾಕೆ ಹೀಗೆ ತನ್ನ ಪ್ರಗತಿಗೆ ಅಡ್ಡಗಾಲು ಹಾಕುತ್ತಿದ್ದೀ ಅಂತ ತಾರಾ ಮ್ಯಾಡಮ್‌ಗೆ ಕೇಳುವುದರಲ್ಲಿ ಅರ್ಥವಿಲ್ಲೆಂದು ಆಕೆಗೆ ತಿಳಿದಿತ್ತು. ಆಕೆ ಸುಮ್ಮನೇ ತನ್ನ ಕುರ್ಚಿಯಲ್ಲಿ ಬಂದುಕೂತಳು. ತಾರಾ ಮ್ಯಾಡಮ್ ಬಾಸ್‌ನ ಚೇಂಬರಿಗೆ ಹೋಗಿ ದೊಡ್ಡದನಿಯಲ್ಲಿ ಮಾತನಾಡುತ್ತಿದ್ದುದಕ್ಕೆ ಉಳಿದವರೊಂದಿಗೆ ಅಸಹಾಯಳಾಗಿ ಕಿವಿಗೊಟ್ಟಳು.

'ಇವ್ರೆಲ್ಲಾ ಹಿಂಗೇ ಸರ್, ಆಫೀಸಿನ ಕೆಲ್ಸಾ ಒಂದಬಿಟ್ಟು ಬ್ಯಾರೇ ಎಲ್ಲಾ ಮಾಡ್ತೀವಿ ಅಂತಾರ. ಇಲ್ಲೆ ನಮ್ಮ ಸೆಕ್ಶನ್ನಿನೊಳಗ ಕೆಲಸ ತುಂಬೇದ, ಇದನ್ನ ಬಿಟ್ಟು ಇನ್ನ ಆ ಪ್ರಾಜೆಕ್ಟ್ ಸರ್ವ್ಹೇ ಹ್ಯಾಂಗ ಮಾಡತಾಳ ? ಆಫೀಸಿನ ಕೆಲಸಕ್ಕೆ ಅಡೆತಡೆ ಬರಬಾರದು ನೋಡ್ರಿ, ಅದಕ್ಕ ನನ್ನ ತತ್ವದ ಪ್ರಕಾರ ನಾ ಅಂತೂ ಇದಕ್ಕ ಒಪ್ಪಿಗೀ ಕೊಡೂದಿಲ್ಲ, ನೀವೇನಂತೀರಿ ?....'

ತಾರಾ ಮ್ಯಾಡಮ್‌ಳ ಧ್ವನಿ ಎಷ್ಟು ಜೋರಾಗಿತ್ತೆಂದರೆ ಬಾಸ್ ಏನು ಹೇಳಿದರೋ ಹೊರಗಿದ್ದವರಿಗೆ ಕೇಳಿಸಲಿಲ್ಲ.

* * *

ತತ್ವಪರಿಪಾಲಕಳಾದ ತಾನು ತತ್ವರಹಿತರೆಲ್ಲರ ಸೊಕ್ಕು ಮುರಿಯಲೇಬೇಕೆಂದು ನಿರ್ಧರಿಸಿದ್ದ ತಾರಾ ಮ್ಯಾಡಮ್‌ಳ ಗಮನ ಒಂದು ಸಲ

ಆಫೀಸಿನ ಹಿರಿಯ ಮಹಿಳಾ ಅಧಿಕಾರಿಯಾಗಿದ್ದ ಶ್ರೀಮತಿ ಶ್ರೀವಾಸ್ತವಳ ಕಡೆ ಹರಿಯಿತು. ಹಿಂದಿನ ನಿರ್ದೇಶಕರ ಅವಧಿಯಲ್ಲಿ ಶ್ರಮವಹಿಸಿ ಕೆಲಸ ಮಾಡಿ ಒಳ್ಳೇ ಹೆಸರು ಪಡೆದಿದ್ದ ಶ್ರೀಮತಿ ಶ್ರೀವಾಸ್ತವಗೆ ದಕ್ಷ ಅಧಿಕಾರಿಯೆಂದು ರಾಜ್ಯಮಟ್ಟದ ಬಹುಮಾನವೂ ಬಂದಿತ್ತು. ಇನ್ನೊಂದೇ ವರ್ಷದಲ್ಲಿ ನಿವೃತ್ತಳಾಗಲಿದ್ದ ಆಕೆಯ ಬಗ್ಗೆ ಎಲ್ಲರಿಗೂ ಗೌರವವಿತ್ತು. ತನ್ನನ್ನು ಯಾವಾಗಲೂ ಕಡೆಗಣಿಸಿದ್ದ ಈಕೆಯನ್ನು ಒಂದು ಕೈ ನೋಡಿಯೇ ಬಿಡೋಣ ಅನಿಸಿತು ತಾರಾ ಮ್ಯಾಡಮ್‌ಗೆ. ಪರಿಣಾಮ ಸಾಹೇಬರಿಗೆ ಒಂದು ರಿಪೋರ್ಟ್ ಹೋಯಿತು. ಅದರ ಪ್ರಕಾರ– 'ಶ್ರೀಮತಿ ಶ್ರೀವಾಸ್ತವ ನಾಲ್ಕು ಬಾರಿ ನ್ಯಾಶನಲ್ ಸೆಮಿನಾರ್ ಮಾಡುತ್ತೇವೆಂದು ಐವತ್ತು ಸಾವಿರ ಹಣ ಅಡ್ವಾನ್ಸ್ ಪಡೆದರು. ಆದರೆ ಯಾವ ಖರ್ಚುವೆಚ್ಚಿನ ಲೆಕ್ಕಪತ್ರವನ್ನೂ ಅವರು ಒಪ್ಪಿಸಿಲ್ಲ. ಅವರ ಈ ಹೊಣೆಗೇಡಿ ವರ್ತನೆಯಿಂದಾಗಿ ಇಲಾಖೆಗೆ ಪ್ರತಿವರ್ಷ ಸಿಗಬೇಕಾದ ಬಜೆಟ್‌ನಲ್ಲಿ ಗಣನೀಯ ಖೋತಾ ಆಗಿದೆ. ಈ ಬಗ್ಗೆ ಕ್ರಮ ಕೈಕೊಳ್ಳುವುದು.'

ವಿಷಯ ಗಂಭೀರವಾದದ್ದು. ಸಹಜವಾಗಿ ಸಾಹೇಬರು ಅಪ್‌ಸೆಟ್ ಆದರು. ಶ್ರೀಮತಿ ಶ್ರೀವಾಸ್ತವಳನ್ನು ಕರೆಸಿ ಖಾರವಾಗಿ ವಿಚಾರಿಸಿದರು. ಲೆಕ್ಕಪತ್ರದ ವಿಭಾಗಾಧಿಕಾರಿಯನ್ನೂ ಕರೆಸಿದರು. ಸಂಬಂಧಿಸಿದ ಕಾರಕೂನರನ್ನು ಸಹ. ವಾರಗಟ್ಟಲೆ ನಡೆದ ವಾದ-ಪ್ರತಿವಾದ, ಆಪಾದನೆ-ಸಮರ್ಥನೆ ಇತ್ಯಾದಿಯ ನಂತರ ಶ್ರೀಮತಿ ಶ್ರೀವಾಸ್ತವರು ಸರಿಯಾದ ಸಮಯದಲ್ಲೇ ಲೆಕ್ಕಪತ್ರ ಒಪ್ಪಿಸಿದ್ದರೆಂದೂ, ಆದರೆ ಅದನ್ನು ಪ್ರೋಸೆಸಿಂಗ್ ಮಾಡುವ ಕಾರಕೂನನು ಅಜಾರಿಯಿದ್ದು ದೀರ್ಘಾವಧಿ ರಜೆಯ ಮೇಲೆ ಹೋದುದರಿಂದ ಕೆಲವು ಏರುಪೇರುಗಳಾದವೆಂದೂ ತಿಳಿದು ಬಂದಿತು. ತನ್ನ ತಪ್ಪಿಲ್ಲವೆಂದು ಸಿದ್ಧವಾಗಿದ್ದರೂ ಇಂಥದೊಂದು ಆಪಾದನೆಯನ್ನು ಈ ನಿನ್ನೆ-ಮೊನ್ನೆಯ ಹೆಂಗಸು ತನ್ನ ಮೇಲೆ ಮಾಡಿದಳಲ್ಲ, ಅದೂ ವಿನಾಕಾರಣ ಹಾಗೂ ಹೊಟ್ಟೆಕಿಚ್ಚಿನಿಂದ, ಮತ್ತು ಆಕೆಯ ಮಾತನ್ನು ಈ ಸಾಹೇಬರು ಸಾರಾಸಗಟಾಗಿ ನಂಬುತ್ತಾರಲ್ಲ, ಅಂತ ಬೇಸರವಾಗಿ ಶ್ರೀವಾಸ್ತವ ತಾನಾಗಿ ಬಯಸಿ ಒಂದು ವರ್ಷ ಮುಂಚಿತವಾಗಿಯೆ ನಿವೃತ್ತಿ ಪಡೆದುಕೊಂಡಳು.

* * *

ಸಮಾಜ ಕಲ್ಯಾಣ ಇಲಾಖೆಯ ಆ ಕಚೇರಿಗೆ ಅಧೀನವಾಗಿ ಒಂದು ದೊಡ್ಡ ಲೈಬ್ರರಿಯಿತ್ತು. ಅನೇಕ ವರ್ಷಗಳಿಂದ ಹಿಂದಿನ ಅನೇಕ ಅಭ್ಯಾಸಾಸಕ್ತ ಅಧಿಕಾರಿಗಳು ಅಲ್ಲಿ ಸಮಾಜ ಕಲ್ಯಾಣಕ್ಕೆ ಸಂಬಂಧಿಸಿದ ಸಾವಿರಾರು ಒಳ್ಳೊಳ್ಳೆಯ ಪುಸ್ತಕಗಳನ್ನು ಸಂಗ್ರಹಿಸಿದ್ದರು. ಸಾರ್ವಜನಿಕರಿಗೆ ಮುಕ್ತವಾಗಿದ್ದ ಆ ಲೈಬ್ರರಿಯ ಲಾಭವನ್ನು ಹಲವಾರು ಪಿಎಚ್. ಡಿ. ವಿದ್ಯಾರ್ಥಿಗಳು, ಸಮಾಜ ಕಾರ್ಯಕರ್ತರು, ಸಮಾಜ

ವಿಜ್ಞಾನಿಗಳು, ಪ್ರೊಫೆಸರುಗಳು ಎಲ್ಲರೂ ಪಡೆಯುತ್ತಿದ್ದರು. ಒಮ್ಮೆ ತಾರಾ ಮ್ಯಾಡಮ್ ಒಮ್ಮೆಲೆ ಆ ಲೈಬ್ರರಿಗೆ ಬೀಗ ಹಾಕಿ ಬೀಗದ ಕೈಯನ್ನು ಸೊಂಟಕ್ಕೆ ಸಿಕ್ಕಿಸಿಕೊಂಡಳು. ಪುಸ್ತಕಾರ್ಥಿಗಳಾಗಿ ಬಂದವರಿಗೆಲ್ಲ 'ಇದೇನು ಧರ್ಮಶಾಲೆಯೆ ? ಕಂಡವರೆಲ್ಲ ಬಂದು ಬಿಟ್ಟಿ ಓದಬೇಕನ್ನುತ್ತೀರಲ್ಲ ? ಪುಸ್ತಕಗಳು ಕೆಟ್ಟರೆ, ಹಾಳಾದರೆ, ಹರಿದು ಹೋದರೆ, ಕಳೆದು ಹೋದರೆ, ಯಾರು ಜವಾಬ್ದಾರರು ? ಇಷ್ಟು ಕಷ್ಟಪಟ್ಟು ಕಲೆಕ್ಟ್ ಮಾಡಿದ ಪುಸ್ತಕಗಳನ್ನೆಲ್ಲಾ ಬೇಕಾಬಿಟ್ಟಿಯಾಗಿ ಸಿಕ್ಕವರ ಕೈಗೆ ನಾನು ಕೊಡಲಾರೆ. ಡಿಪಾರ್ಟಮೆಂಟಿನ ಆಸ್ತಿಯನ್ನು ಕಾಪಾಡುವುದು ನನ್ನ ಕರ್ತವ್ಯವೆಂಬ ತತ್ವಕ್ಕೆ ನಾನು ಬದ್ಧಳು'' –ಅಂತ ದಬಾಯಿಸಿ ಕಳಿಸಿಬಿಡುತ್ತಿದ್ದಳು. ಪ್ರತಿದಿನ ಒಬ್ಬ ಪ್ಯೂನ್‌ನಿಂದ ಆ ಪುಸ್ತಕಗಳ ಧೂಳು ಝಾಡಿಸಿ ಲೈಬ್ರರಿಯನ್ನು ಸ್ವಚ್ಛ ಮಾಡಿಸುತ್ತಿದ್ದಳು. ತಾನು ಎಲ್ಲಾದರೂ ಭಾಷಣಕ್ಕೆ ಹೋಗುವಾಗ ಮಾತ್ರ ಅಲ್ಲಿನ ಪುಸ್ತಕಗಳ ನೆರವು ಪಡೆಯುತ್ತಿದ್ದಳು. ಬೇರೆಯವರಿಗೆ ಆ ಪುಸ್ತಕಗಳ ನೆರವು ಪಡೆಯುವ ಅವಕಾಶವೇ ಇಲ್ಲವಾಗಿ ತನ್ನ ಭಾಷಣಗಳೇ ಎಲ್ಲರ ಭಾಷಣಗಳಿಗಿಂತ ಹೆಚ್ಚು ವಿಚಾರಪರಿಪ್ಲುತವಾಗಿರಲು ಹೀಗೊಂದು ಅವಕಾಶವಾಯಿತಲ್ಲ ಎಂದು ಒಳಗೊಳಗೇ ಸಂತೋಷಪಡುತ್ತಿದ್ದಳು. ಹೀಗೆ ಆಫೀಸಿನ ಅತ್ಯಮೂಲ್ಯ ಆಸ್ತಿಯನ್ನು ಸಾರ್ವಜನಿಕರ ಸೊತ್ತಾಗಲು ಬಿಡದೆ ಜತನವಾಗಿ ಬೀಗಹಾಕಿ ನಾಗರಹಾವಿನಂತೆ ಕಾಯ್ದುಕೊಂಡು ನಡೆದಿರುವುದಕ್ಕಾಗಿ ಡಾ. ತಾರಾ ಪೋಕಳೆಗೆ ಸಾಹೇಬರಿಂದ ಶಾಭಾಸ್‌ಗಿರಿ ಸಿಕ್ಕಿತೋ ಇಲ್ಲವೋ ಉಳಿದವರಿಗೆ ತಿಳಿಯಲಿಲ್ಲ.

* * *

''ನಮ್ಮ ಸಮಾಜದಲ್ಲಿ ಹೆಣ್ಣುಮಕ್ಕಳ ಶೋಷಣೆ ಹೆಣ್ಣುಮಕ್ಕಳಿಂದಲೇ ಆಗುತ್ತದೆ. ಉದಾಹರಣೆಗೆ ಹೆಣ್ಣು ಅತ್ತೆಯಾಗಿ ಸೊಸೆಯನ್ನು ಕಾಡುತ್ತಾಳೆ. ವಿವಾಹಿತ ಗಂಡಸಿನ ಜೀವನದಲ್ಲಿ ಬೇರೊಬ್ಬ ಹೆಣ್ಣಾಗಿ ಪ್ರವೇಶಿಸಿ ಆತನ ಹೆಂಡತಿಯನ್ನು ಕಾಡುತ್ತಾಳೆ. ಕಂದಾಚಾರಕ್ಕೆ ಕಟ್ಟುಬಿದ್ದ ತಾಯಿಯಾಗಿ ಮಗಳ ಸ್ವಾತಂತ್ರ್ಯ ಹರಣ ಮಾಡಿ ಕಾಡುತ್ತಾಳೆ. ಹೀಗೇ ಇನ್ನೂ ಅನೇಕ ರೀತಿಯಿಂದ ಹೆಣ್ಣೇ ಹೆಣ್ಣಿಗೆ ವೈರಿಯಾದದ್ದನ್ನು ನಾವು ನೋಡುತ್ತೇವೆ. ಮೊದಲು ಇದನ್ನು ನಾವು ಜಾಗೃತ ಮಹಿಳೆಯರು ವಿರೋಧಿಸಬೇಕು. ಇದೇ ನನ್ನ ತತ್ವ...'' –ಮಹಿಳಾ ದಿನಾಚರಣೆಯ ದಿನ ಡಾ. ತಾರಾ ಪೋಕಳೆ ಅಮೋಘ ಭಾಷಣ ನೀಡುತ್ತಿದ್ದ ಸಮಯದಲ್ಲಿ ಸಾಹೇಬರಿಗೆ ಮೇಲಿನಿಂದ ಆದೇಶ ಬಂದಿತ್ತು– ಡಾ. ತಾರಾ ಬಗ್ಗೆ ಅನೇಕ ದೂರುಗಳೂ ಮೂಕರ್ಜಿಗಳೂ ಬಂದಿದ್ದು ಆ ಬಗ್ಗೆ ವಿಚಾರಣೆ ಕೈಗೊಳ್ಳಬೇಕು ಅಂತ.

* * *

ಅಧಿಕಾರದ ದುರುಪಯೋಗ, ಸರಕಾರಿ ಹಣದ ಅಫರಾತಫರಾ, ಇಲಾಖೆಯ ಒಡೆತನದಲ್ಲಿರುವ ಮಾಲಿನ ಬೇಕಾಯ್ದೇಶಿರ ವಿಲೇವಾರಿ, ಭ್ರಷ್ಟಾಚಾರ – ಈ ಆರೋಪಗಳನ್ನು ಮೇಲುನೋಟಕ್ಕೆ ಸಾಬೀತು ಪಡಿಸಿ, ನ್ಯಾಯಾಂಗ ವಿಚಾರಣೆಯಾಗುವ ತನಕ ಡಾ. ತಾರಾ ಪೋಕಳೆಯನ್ನು ಸೇವೆಯಿಂದ ಅಮಾನತ್ತುಗೊಳಿಸಲಾಯಿತು.

* * *

ಆ ರಾತ್ರಿ ತಡವಾಗಿ ಮನೆ ಸೇರಿದ ಆಕೆ ದಾರಿ ಕಾಯ್ದು ಊಟವಿಲ್ಲದೆ ಉಪವಾಸ ಹಾಸಿಗೆ ಸೇರಿದ್ದ ಗಂಡನನ್ನುದ್ದೇಶಿಸಿ, ಗಟ್ಟಿಯಾಗಿ ಹೇಳತೊಡಗಿದಳು, “ಈ ದೇಶದಾಗ ಪ್ರಾಮಾಣಿಕರಾಗಿ, ತತ್ವನಿಷ್ಠರಾಗಿ ಕೆಲಸಾ ಮಾಡವ್ರಿಗೆ ಅವಕಾಶನೇ ಇಲ್ಲ. ಎಲ್ಲರೂ ದುಷ್ಟರು, ಅಪ್ರಾಮಾಣಿಕರು, ಅಯೋಗ್ಯರು...” ಆಕೆಯ ತತ್ವಪಾಠ ಕೇಳಲು ಆತ ಎಚ್ಚರವಿರಲಿಲ್ಲ, ಎಂದಿನಂತೆ ಆಕೆ ಬರುವ ಮೊದಲೇ ಆಕೆಯ ಲೆಕ್ಚರಿನಿಂದ ತಪ್ಪಿಸಿಕೊಳ್ಳಲೆಂದು ನಿದ್ದೆಗುಳಿಗೆ ಸೇವಿಸಿ ಮರೆವಿನ ಲೋಕಕ್ಕೆ ಜಾರಿಬಿಟ್ಟಿದ್ದ.

(೧೯೯೦)

❖ ❖ ❖

# ದ. ಬ್ರಾ. ಕೃಷ್ಣಪ್ಪ

ಆ ಊರು ಒಂದು ತಾಲೂಕು ಕೇಂದ್ರ. ಅಲ್ಲೊಂದು ಕಾಲೇಜಿತ್ತು, ಆಸ್ಪತ್ರೆಯಿತ್ತು, ಸಹಕಾರಿ ಸಂಘಗಳಿದ್ದವು, ಉದ್ಯೋಗ ವಿನಿಮಯ ಕಚೇರಿಯಿತ್ತು, ಪುಢಾರಿ ಸಾಹುಕಾರ ಕಲ್ಲಪ್ಪನವರಿದ್ದರು, ಮತ್ತು ದ. ಬ್ರಾ. ಕೃಷ್ಣಪ್ಪ ಸಹ ಇದ್ದ. ಸಾಹುಕಾರ ಕಲ್ಲಪ್ಪನವರ ಸಮಕಾಲೀನನೇ ಆಗಿದ್ದ ಕೃಷ್ಣಪ್ಪ ಶಾಲೆಯಲ್ಲಿ-ಕಾಲೇಜಿನಲ್ಲಿ 'ಕೆ. ಎಸ್. (ಕೃಷ್ಣಮೂರ್ತಿ ಶ್ರೀನಿವಾಸಾಚಾರ್ಯ) ಅಗ್ನಿಹೋತ್ರಿ'ಯಾಗಿದ್ದವನು ಈ ಕಾಲು ಶತಮಾನದ ಅವಧಿಯಲ್ಲಿ 'ದ. ಬ್ರಾ. (ದರಿದ್ರ ಬ್ರಾಹ್ಮಣ) ಕೃಷ್ಣಪ್ಪ'ನಾಗಿ ಹೇಗೆ ರೂಪಾಂತರ ಹೊಂದಿದನೆನ್ನುವುದೇ ಒಂದು ಸ್ವಾರಸ್ಯಕರ ಕತೆ. ಆದರೆ ಕೃಷ್ಣಪ್ಪನ ಮಟ್ಟಿಗೆ ಅದೆಲ್ಲ ನೋವಿನ ನೆನಪು. ಇಡೀ ಕತೆಯನ್ನು ಮರೆತುಬಿಡಲು ಆತ ಬಹಳ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಾನೆ. ಆದರೆ ಅಪ್ರಿಯವಾದ ಎಲ್ಲವನ್ನೂ ಮರೆತು ಬಿಡಲು ಮನುಷ್ಯ ಮಾತ್ರನಾದವನಿಗೆ ಹೇಗೆ ಸಾಧ್ಯ ? ಕೆಲವು ಘಟನೆಗಳಂತೂ ತಿರುತಿರುಗಿ ನೆನಪಾಗಿ ಕಾಡಿ ದ. ಬ್ರಾ. ಕೃಷ್ಣಪ್ಪನನ್ನು ಇತ್ತೀಚೆಗೆ ದ. ದ. ಬ್ರಾ. (ದರಿದ್ರಾತಿ ದರಿದ್ರ ಬ್ರಾಹ್ಮಣ) ಕೃಷ್ಣಪ್ಪನನ್ನಾಗಿ ಮಾಡುತ್ತಿವೆ. ಮತ್ತು ಅವನು ಈ ಸ್ಥಿತಿಗೂ ಹೊಂದಿಕೊಳ್ಳಲು ಪ್ರಯತ್ನಿಸುತ್ತಿದ್ದಾನೆ.

* * *

ಕೆಳಮಧ್ಯಮ ವರ್ಗದಿಂದ ಬಂದ ಕೃಷ್ಣಪ್ಪನಿಗೆ ತಾಲೂಕಾ ಆಫೀಸಿನಲ್ಲಿ ಗುಮಾಸ್ತೆಯ ಕೆಲಸವಿತ್ತು. ಅವನು ಬಿ. ಎ. ಓದಿದ ನಂತರ ಹಲವಾರು ವರ್ಷ ಕೆಲಸಕ್ಕಾಗಿ ಅಲೆದೂ ಅಲೆದೂ ಸುಸ್ತಾಗಿ, ಲಂಚ ಕೊಡಲು ಸಾಧ್ಯವಿಲ್ಲದೇ, ಮನಸ್ಸೂ ಇಲ್ಲದೇ, ಸಂಸಾರ ನಿರ್ವಹಣೆ ಮಾಡಲು ಬಹಳ ಪಾಡುಪಟ್ಟಿದ್ದ. ಪಿತ್ರಾರ್ಜಿತವಾಗಿದ್ದ ನಾಲ್ಕೆಕರೆ ಭೂಮಿ ಟೆನನ್ಸಿ ಕಾಯಿದೆ ಪ್ರಕಾರ ರೈತರಿಗೆ ಸೇರಿ ಹೋಗಿತ್ತು. ಕೊನೆಗೆ ಕೃಷ್ಣಪ್ಪನಿಗೆ ಗುಮಾಸ್ತೆಯ ಕೆಲಸ ಸಿಕ್ಕಾಗ ಹೋಗಲಿ, ಇಲ್ಲೇ ಡಿಪಾರ್ಟ್‌ಮೆಂಟು ಪರೀಕ್ಷೆ ಪಾಸುಮಾಡಿ ಬಡ್ತಿ ಪಡೆದರಾಯಿತು ಅಂತ ಸಮಾಧಾನ ಪಟ್ಟುಕೊಂಡಿದ್ದ. ಅಂದರೆ ಅವನಿಗೆ ಸ್ವತಃ ಅಂತಹ ಮಹತ್ವಾಕಾಂಕ್ಷೆಗಳೇನೂ ಇರಲಿಲ್ಲ. ಆದರೆ ಆತ ಬಹಳ ಭಕ್ತಿಯಿರಿಸಿದ್ದ ಆತನ ವಯಸ್ಸಾದ ತಾಯಿಗೆ ಸ್ವಂತದ್ದಾದ ಒಂದು ಪುಟ್ಟಮನೆ ಬೇಕೆಂಬ ಆಸೆಯಿತ್ತು. ತಾಯಿಯ ಆಸೆ ಪೂರೈಸಲು ಏನಾದರೂ ಮಾಡಿ

ಒಂದು ಚಿಕ್ಕ ಸೈಟು ಕೊಳ್ಳಬೇಕೆಂದು ನಿರ್ಧರಿಸಿದ್ದ ಕ್ರಿಷ್ಟಪ್ಪ ತಾನು ನೌಕರಿ ಸುರುಮಾಡಿದ ಪ್ರಾರಂಭದಿಂದಲೇ ಆ ಬಗ್ಗೆ ಕನಸು ಕಾಣತೊಡಗಿದ್ದ. ಆದರೆ ಪ್ರಾರಂಭದಿಂದಲೇ ಆತನಿಗೆ ಭ್ರಮನಿರಸನವೂ ಸುರುವಾಗಿತ್ತು. ಬರುವ ಸಣ್ಣ ಸಂಬಳದಲ್ಲಿ ಸಂಸಾರದ ಸದಸ್ಯರಿಗೆ ಚಟ್ನಿ-ಭಕ್ರಿ ಕಾಣಿಸುವುದೇ ದುಸ್ತರವಾಗಿ ಸೈಟು ಕೊಳ್ಳುವುದು, ಮನೆ ಕಟ್ಟಿಸುವುದಂತೂ ದೂರ ಉಳಿಯಿತು, ದುಸ್ಸಾಧ್ಯವಾದ ಮಾತಾಯಿತು. ಸ್ವಭಾವತಃ ಆಶಾವಾದಿಯಾಗಿದ್ದ ಕ್ರಿಷ್ಟಪ್ಪನೂ ನಂತರದ ವರ್ಷಗಳಲ್ಲಿ ಎದೆಗುಂದತೊಡಗಿದ್ದ. ಯಾಕೆಂದರೆ ಯಾವ ರಾಜಕೀಯವನ್ನೂ, ಕಾರಸ್ಥಾನವನ್ನೂ ತೆರೆಮರೆಯ ನಾಟಕಗಳನ್ನೂ ಅರಿಯದ ಆತನಿಗೆ ಸಮಯಕ್ಕೆ ಸರಿಯಾಗಿ ಕೆಲಸದಲ್ಲಿ ಬಡ್ತಿಯೂ ಸಿಗಲಿಲ್ಲ. ಮುದುಕಿ ತಾಯಿ ಸ್ವಂತ ಮನೆಯ ಕನಸು ಕಾಣುತ್ತ ಇನ್ನೂ ಬದುಕಿಯೇ ಇದ್ದಳು. ಹೀಗಾಗಿ ಪೆನ್‌ಶನ್ ಆದಕೂಡಲೆ ಕ್ರಿಷ್ಟಪ್ಪ ಬೆಳೆಯುತ್ತಿರುವ ಮಗಳ ಲಗ್ನದ ಬಗೆಗಾಗಲೀ ಮಗನ ಶಿಕ್ಷಣ-ನೌಕರಿಯ ಬಗೆಗಾಗಲೀ ಯೋಚಿಸದೆ, ತನಗೆ ಬಂದ ಗ್ರ್ಯಾಚುಯಿಟಿಯ ಎಲ್ಲಾ ಹಣವನ್ನು ಸೈಟಿಗಾಗಿ ಹೌಸಿಂಗ್ ಸೊಸಾಯಿಟಿಯಲ್ಲಿ ಕಟ್ಟಿದ. ಅವರು ಇವತ್ತು ಸೈಟು ಅಲಾಟ್ ಮಾಡುತ್ತೇವೆ, ನಾಳೆ ಮಾಡುತ್ತೇವೆ ಅಂತ ಹೇಳುತ್ತ ನಾಲ್ಕು ವರ್ಷ ಕಾಲ ತಳ್ಳಿದ್ದರು. ಕೊನೆಗೊಮ್ಮೆ ಅವರ ಎಲ್ಲಾ ಔಪಚಾರಿಕತೆಗಳೂ ಮುಗಿದು ಹಣ ಕಟ್ಟಿದವರಿಗೆಲ್ಲಾ ಸೈಟು ಅಲಾಟ್ ಆಗಿ ಕ್ರಿಷ್ಟಪ್ಪನಿಗೆ ಬರಬೇಕಾಗಿದ್ದ ಸೈಟು ಮಾತ್ರ ಕಲ್ಲಪ್ಪ ಸಾಹುಕಾರರ ಅಳಿಯನಿಗೆ ಹೋಗಿಬಿಟ್ಟಿತ್ತು. ಶಾಕ್ ಆದ ಕ್ರಿಷ್ಟಪ್ಪ ಇದೇಕೆ ಹೀಗೆಂದು ಕೇಳಲು ಸೊಸಾಯಿಟಿ ಆಫೀಸಿಗೆ ಹೋದಾಗ ಸಿಕ್ಕದ್ದು ಹಾರಿಕೆಯ ಉತ್ತರ– ಕಲ್ಲಪ್ಪನವರ ಅಳಿಯ ಹೊಸದಾಗಿ ಈ ಊರಿಗೆ ಬಂದು ಇಲ್ಲೇ ಸೆಟಲ್ ಆಗಲು ಹವಣಿಸಿದ್ದಾನೆ. ಕ್ರಿಷ್ಟಪ್ಪನಿಗೆ ಅಲಾಟ್ ಆದ ಸೈಟು ಅವನಿಗೆ ಬಹಳ ಹಿಡಿಸಿದೆ. ಅವನಿಗೆ ಏನಾದರೂ ಹಿಡಿಸಿತೆಂದರೆ ತೀರಿತು, ಅದನ್ನು ಅವನು ಪಡೆದುಕೊಳ್ಳಲೇಬೇಕು. ಅದು ಅವನ ತತ್ತ್ವ. ಕ್ರಿಷ್ಟಪ್ಪನಿಗೇನೂ ಇಂಥ ತತ್ತ್ವಗಳಿಲ್ಲವಲ್ಲ, ಆತ ಕಾಯಬಹುದು. ಇನ್ನು ನಾಲ್ಕು ವರ್ಷಗಳ ನಂತರ ಅದೇ ಸೊಸಾಯಿಟಿಯವರು ಬೇರೆ ಕಡೆ ಕ್ರಿಷ್ಟಪ್ಪನಿಗೆ ಸೈಟು ಕೊಡುತ್ತಾರೆ. ಸದ್ಯಕ್ಕೆ ಆತ ಸುಮ್ಮನಿರುವುದೇ ಒಳ್ಳೆಯದು. ಸಾಹುಕಾರ ಕಲ್ಲಪ್ಪನವರನ್ನು ಈ ಬಡಬ್ರಾಹ್ಮಣ ಎದುರು ಹಾಕಿಕೊಳ್ಳಲುಂಟೆ ? ಸೊಸಾಯಿಟಿಯವರು ಕಲ್ಲಪ್ಪನವರ ಆಜ್ಞಾಧಾರಕರು. ಕಾಯಿದೆಯೂ ಸರಕಾರವೂ ಈಗ ಎಲ್ಲಾ ಅವರ ಪರ. ಕ್ರಿಷ್ಟಪ್ಪನೇನಾದರೂ ಬಾಯಿ ತೆರೆದರೆ ಅದು ದಲಿತರ ಮೇಲಿನ ದಬ್ಬಾಳಿಕೆಯೆನಿಸೀತು. ಮುಂದೆ ಆತನಿಗೇ ತೊಂದರೆ. ಈ ಊರಲ್ಲಿ ಆತ ಶಾಂತಿಯಿಂದ ಬದುಕಿ ಬಾಳುವುದು ಬೇಡವೆ ? ಇಷ್ಟು ಹೇಳುವುದು ತಿಳಿದವರ

ಕರ್ತವ್ಯ. ಉಳಿದದ್ದು ಆತನಿಗೇ ಬಿಟ್ಟದ್ದು.

ಜೋಲು ಮುಖ ಹಾಕಿ ಮನೆಗೆ ಬಂದ ಕ್ರಿಷ್ಟಪ್ಪನಿಂದ ಸಮಾಚಾರ ತಿಳಿದ ಮುದುಕಿ ತಾಯಿ ಅದೇ ಹೊಟ್ಟೆಬೇನೆ ಹಚ್ಚಿಕೊಂಡು ಹಾಸಿಗೆ ಹಿಡಿದಳು. ಮುಂದೆ ಆರು ತಿಂಗಳಲ್ಲಿ ಸತ್ತೂ ಹೋದಳು. ಅದರೊಂದಿಗೇ ಕ್ರಿಷ್ಟಪ್ಪನಿಗೆ ಸೈಟು ಮತ್ತು ಸ್ವಂತ ಮನೆಯ ಸಲುವಾಗಿ ಇದ್ದ ಉತ್ಸಾಹವೂ ಸತ್ತು ಹೋಯಿತು.

* * *

ಆದರೆ ಕ್ರಿಷ್ಟಪ್ಪನಿಗೊಂದು ವಿಷಯದಲ್ಲಿ ಸಮಾಧಾನವಿತ್ತು. ಅದೇನೆಂದರೆ ಆತನ ಕಿರಿಯ ಮಗ ಪ್ರಾಣೇಶ ಮೊದಲಿನಿಂದಲೂ ಓದಿನಲ್ಲಿ ಬಹಳ ಪ್ರತಿಭಾವಂತ. ಯಾವ ಟ್ಯೂಶನ್ನು ಗೈಡು ಇತ್ಯಾದಿಗಳ ಸಹಾಯವಿಲ್ಲದೆ ಯಾವ ಶಿಕ್ಷಕರ ವಿಶೇಷ ಕೃಪಾಕಟಾಕ್ಷವಿಲ್ಲದೆ ಆತ ಎಸ್. ಎಸ್. ಎಲ್. ಸಿ. ಯಲ್ಲಿ ಇಪ್ಪತ್ತನೇ ರ್‍ಯಾಂಕು ಬಂದಿದ್ದ. ಸ್ಥಳೀಯ ದಿನಪತ್ರಿಕೆಯುವರು ಆತನ ಫೋಟೋ ಸಹಿತ ಸಂದರ್ಶನ ಪ್ರಕಟಿಸಿದ್ದರು. ನಿನ್ನ ಮಹತ್ವಾಕಾಂಕ್ಷೆ ಏನು ? ಅಂತ ಕೇಳಿದಾಗ ತಕ್ಷಣ ಉತ್ತರ ಕೊಟ್ಟಿದ್ದ ಹುಡುಗ– ಡಾಕ್ಟರಾಗಿ ಬಡಜನರ ಸೇವೆ ಮಾಡುವುದು– ಎಂದು. ಈ ಹುಡುಗ ಡಾಕ್ಟರಾಗಿ ಮನೆತನಕ್ಕೆ ಒಳ್ಳೇ ಹೆಸರು ತರುತ್ತಾನೆಂದು, ಮುಂದೆ ತಮ್ಮ ಕಷ್ಟಕೋಟಲೆಗಳು ಪರಿಹಾರವಾಗುತ್ತವೆಂದು ಕ್ರಿಷ್ಟಪ್ಪನ ಭರವಸೆ. ಎರಡನೇ ಪಿ. ಯು. ಸಿ. ಯಲ್ಲಿ ಪ್ರಾಣೇಶನಿಗೆ ಎಂಬತ್ತೆಂಟು ಪರ್ಸೆಂಟ್ ಮಾರ್ಕ್ಸ್ ಸಿಕ್ಕವು. ಕ್ರಿಷ್ಟಪ್ಪ ಪಾಪ, ಬಹಳ ಖುಶಿಪಟ್ಟ. ಆದರೆ ವಸ್ತುಸ್ಥಿತಿ ತಿಳಿದಿದ್ದ ಪ್ರಾಣೇಶ ಮಾತ್ರ ಭೂಮಿಗಿಳಿದು ಹೋದ. ಎಂಬತ್ತೆಂಟು ಪರ್ಸೆಂಟಿಗೆ ಮೆಡಿಕಲ್‌ಗೆ ಹೇಗೆ ಸೀಟು ಸಿಗುತ್ತದೆ ? ಅದೂ ಯಾವ ವಿಶೇಷ ಗ್ರೂಪ್‌ಗೂ ಸೇರಲಾರದ ನಿರ್ಭಾಗ್ಯನಿಗೆ ? ಬರೀ ಮಾರ್ಕ್ಸ್ ದೊರೆತರೆ ಸಾಕು ಅನ್ನುವಂತಿದ್ದರೆ ಕನಿಷ್ಟ ತೊಂಬತ್ತೆಂಟು ಪರ್ಸೆಂಟಾದರೂ ಮಾಡಬಾರದಿತ್ತೆ ಆತ ? ಅದಾಗಲಿಲ್ಲ ಅಂದರೆ ಉಳಿದ ಕ್ವಾಲಿಫಿಕೇಶನ್ಸ್ ಬೇಡವೆ ಸೀಟು ಸಿಗಲು ? ಆತ ಬಡಬ್ರಾಹ್ಮಣ ಕ್ರಿಷ್ಟಪ್ಪನ ಮಗನಾಗಿ ಹುಟ್ಟುವ ಮಹಾಪರಾಧ ಮಾಡಿದ್ದಾನೆ, ಅದೂ ನಮ್ಮ ಕನ್ನಡ ರಾಜ್ಯದಲ್ಲಿ, ಅಂದ ಮೇಲೆ ಬರೀ ಮಾರ್ಕ್ಸುಗಳ ಬಲದ ಮೇಲೆ ಸೀಟು ಸಿಕ್ಕೀತೆಂಬ ಕನಸು ಕಾಣುವುದು ತಪ್ಪಲ್ಲವೇ ? ಮೆಡಿಕಲ್ ಕಾಲೇಜುಗಳು ಕೇಳುವಷ್ಟು ಡೊನೇಶನ್ ಕಕ್ಕುವುದಂತೂ ಅಸಾಧ್ಯ ಮಾತು. ಪ್ರಾಣೇಶ ತಿಳುವಳಿಕೆಯ ಹುಡುಗ. ಇನ್ನು ನಂತರ ಕನಸುಗಳು ಭಗ್ನವಾಗುವುದಕ್ಕೆ ತನ್ನಂಥ ಅನೇಕ ಹುಡುಗರು ತೆಪ್ಪಗೆ ಹೊಂದಿಕೊಳ್ಳುವುದೇ ಲೇಸೆಂದು ಆತನಿಗೆ ತಿಳಿಯಿತು. ಆತ ಸುಮ್ಮನೆ ಬಿ.ಎಸ್‌ಸಿ. ಗೆ ಸೇರಿಕೊಂಡ.

ಆದರೆ ತನಗಿಂತ ಸ್ಕೂಲಿನಲ್ಲಿ ಹಲವಾರು ವರ್ಷ ಸೀನಿಯರ್ ಆಗಿ ಕೊನೆಗೆ

ತನ್ನ ಕ್ಲಾಸ್‌ಮೇಟಾಗಿ ಸದಾ ದಾದಾಗಿರಿ ಮಾಡುತ್ತಿದ್ದ ಸಾಹುಕಾರ ಕಲ್ಲಪ್ಪನವರ ಮಗ ಮಾರಪ್ಪ ಐವತ್ತೇ ಪರ್ಸೆಂಟು ಪಡೆದರೂ ಭಾಗ್ಯವು ಬಲವತ್ತರವಾದುದರಿಂದ ಏನಕೇನ ಪ್ರಕಾರೇಣ ವಿಶೇಷ ಕೋಟಾದಲ್ಲಿ ಸೀಟು ಪಡೆದು ಮೆಡಿಕಲ್ ಕಾಲೇಜು ಸೇರಿದ್ದು ಪ್ರಾಣೇಶನಿಗೆ ತಿಳಿಯಿತು. ಆಗಲೂ ವಿಚಲಿತನಾಗದಷ್ಟು ಆತ ಆಗಲೇ ಸ್ಥಿತಪ್ರಜ್ಞನಾಗಿ ಬಿಟ್ಟಿದ್ದ. ಕ್ರಿಷ್ಟಪ್ಪ ಮಾತ್ರ ಇಡೀ ಪ್ರಸಂಗದಿಂದ ಬಹಳ ನೊಂದುಕೊಂಡು ಮೂರು ದಿನ ಉಪವಾಸವಿದ್ದು ಇನ್ನೂ ಬಡಕಲಾದ.

* * *

ಹಾಗೆ ಬಡಕಲಾಗುತ್ತಲೇ ಹೋದ ಕ್ರಿಷ್ಟಪ್ಪನ ಸಂಸಾರದ ಆರ್ಥಿಕ ಸ್ಥಿತಿಯೂ ಹದಗೆಡುತ್ತಲೇ ನಡೆಯಿತು. ಹೆಂಡತಿ ಪಾರ್ಶ್ವವಾಯುವಿನಿಂದ ಹಾಸಿಗೆ ಹಿಡಿದಿದ್ದಳು. ಅವಳಿಗೆ ಸರಿಯಾಗಿ ಔಷಧೋಪಚಾರ ಮಾಡಿಸಲೂ ಆತನಿಗೆ ತಾಕತ್ತಿರಲಿಲ್ಲ. ವಾಸ್ತವವಾಗಿ ಆತ ಈಗ ತನ್ನ ಹಿರಿಯ ಮಗಳು ರಮಾಳ ಮದುವೆ ಮಾಡಬೇಕಿತ್ತು. ಇದ್ದೂರಲ್ಲೇ ಕಾಲೇಜಿತ್ತೆಂದು ಆಕೆ ಬಿ. ಎ. ವರೆಗೂ ಓದಿದ್ದಳು. ಫಸ್ಟ್‌ಕ್ಲಾಸೂ ಸಿಕ್ಕಿತ್ತು. ಅಂಚೆ ಮೂಲಕ ಶಿಕ್ಷಣ ಪಡೆದು ಬಿ.ಎಡ್. ಸಹ ಮುಗಿಸಿದ್ದಳು. ಆದರೆ ಬೆಳೆದ ಹುಡುಗಿ, ಸಂಪ್ರದಾಯಸ್ಥರ ಮನೆತನ, ನೌಕರಿ ಮಾಡುವುದು ಬೇಡ, ವರ ಹುಡುಕಿ ಲಗ್ನ ಮಾಡೋಣ, ಅಂತ ತಾಯಿ-ತಂದೆಯ ಅಭಿಪ್ರಾಯ. ಆದರೆ ವರ ಹುಡುಕಿದ ಕೂಡಲೇ ಸಿಗಬೇಕಲ್ಲ ? ಅಷ್ಟರ ವರೆಗೆ ಇದ್ದೂರಲ್ಲೇ ಅನುಕೂಲವಾದ ನೌಕರಿ ಸಿಕ್ಕರೆ ಮಾಡುತ್ತೇನೆ ಅಂತ ರಮಾ ಹಟಮಾಡಿ ತಂದೆಯನ್ನು ಒಪ್ಪಿಸಿದ್ದಳು. ಅದಕ್ಕೆ ಸರಿಯಾಗಿ ಊರಲ್ಲಿ ಆ ವರ್ಷ ಒಂದು ಹುಡುಗಿಯರ ಹಾಯ್‌ಸ್ಕೂಲು ಸುರುವಾಗಿತ್ತು. ಶಿಕ್ಷಕಿಯ ಜಾಗೆಗೆ ಕೊಟ್ಟ ಜಾಹೀರಾತಿಗೆ ರಮಾ ಅರ್ಜಿ ಹಾಕಿದ್ದಳು. ಜಾಹೀರಾತಿನಲ್ಲಿ ಕೇಳಿದ ವಿಷಯ-ಅರ್ಹತೆ ಎಲ್ಲಾ ಸರಿಹೊಂದುತ್ತಿದ್ದುದರಿಂದ, ಬಿ.ಎಡ್.ಗೆ ಸಹ ಆಕೆ ಅವರು ಕೇಳಿದ ವಿಶೇಷ ವಿಷಯಗಳನ್ನೇ ಅಭ್ಯಸಿಸಿ ಒಳ್ಳೇ ಕ್ಲಾಸು ಪಡೆದಿದ್ದರಿಂದ, ಆಕೆಗೆ ಕೆಲಸ ಸಿಗುವ ಬಗ್ಗೆ ಭರವಸೆಯಿತ್ತು. ಈಚೆಗೆ ಯಾವ ವಿಷಯದ ಬಗೆಗೂ ಭರವಸೆಯಿಟ್ಟುಕೊಳ್ಳುವುದನ್ನೇ ಬಿಟ್ಟಿದ್ದ ಕ್ರಿಷ್ಟಪ್ಪನಿಗೂ ಒಳಗೊಳಗೇ ಒಂದು ಆಸೆ ಹುಟ್ಟತೊಡಗಿತ್ತು – ಮಗಳಿಗೆ ನೌಕರಿ ಸಿಕ್ಕು ಒಂದೆರಡು ವರ್ಷ ಆಕೆಯ ಪಗಾರದ ಹಣ ಕೂಡಿಸಿ ಇಟ್ಟರೆ ಇದ್ದದ್ದರಲ್ಲೇ ಒಂದಿಷ್ಟು ಒಳ್ಳೇ ರೀತಿಯಿಂದ ಆಕೆಯ ಲಗ್ನ ಮಾಡಬಹುದು. ಮಗಳ ಬಾಳು ಸುರಳೀತವಾದರೆ ಸಾಕಲ್ಲ, ಉಳಿದದ್ದರ ಬಗ್ಗೆ ಯಾಕೆ ಸುಮ್ಮನೆ ವ್ಯರ್ಥ ಚಿಂತೆ ?

ಆದರೆ ವಿಧಿ ಅಲ್ಲೂ ಕ್ರಿಷ್ಟಪ್ಪನಿಗೆ ವಿರುದ್ಧವಾಗಿತ್ತು. ರಮಾಗೆ ಎಲ್ಲಾ ಅರ್ಹತೆಗಳಿದ್ದರೂ, ಆ ಅರ್ಹತೆಗಳು ಸಂದರ್ಶನಕ್ಕೆ ಬಂದ ಬೇರಾವ ಅಭ್ಯರ್ಥಿನಿಗೂ

ಇರದಿದ್ದರೂ, ರಮಾಗೆ ಕೆಲಸ ಸಿಕ್ಕಿರಲಿಲ್ಲ. ಹುಡುಗಿಯರ ಹಾಯ್‌ಸ್ಕೂಲಿಗೆ ಶಿಕ್ಷಕಿಯೇ ಬೇಕೆಂದು ಜಾಹೀರಾತಿನಲ್ಲಿ ತಿಳಿಸಿದ್ದರಿಂದ ಅರ್ಜಿ ಹಾಕಿದವರೂ, ಸಂದರ್ಶನಕ್ಕೆ ಬಂದವರೂ ಹೆಂಗಸರೇ ಆಗಿದ್ದರು. ಅವರಲ್ಲಿ ಯಾರಿಗೂ ಆ ಕೆಲಸ ಸಿಕ್ಕಿರಲಿಲ್ಲ. ಕೆಲಸಕ್ಕೆ ಅರ್ಜಿಯನ್ನೇ ಹಾಕಿರದ, ಸಂಬಂಧಿಸಿದ ವಿಷಯಗಳನ್ನು ಅಭ್ಯಸಿಸಿರದೇ ಇದ್ದ, ಬಿ. ಎಡ್. ಮಾಡದೇ ಇದ್ದ ಗಂಡಸು ಅಭ್ಯರ್ಥಿಯೊಬ್ಬನನ್ನು ನಂತರ ಸಂಪರ್ಕಿಸಿ ಆ ಹುದ್ದೆ ಕೊಡಲಾಗಿತ್ತು. ಆತ ಸಾಹುಕಾರ ಕಲ್ಲಪ್ಪನವರ ಅಣ್ಣನ ಮಗನಾಗಿದ್ದುದು ಆತನ ಏಕಮೇವ ಅರ್ಹತೆ.

ಸರಕಾರಿ ರೂಲ್ಸ್ ಪ್ರಕಾರ ವಿಶೇಷ ವರ್ಗಕ್ಕೆ ಸೇರಿದ್ದ ಆತನ ನೇಮಕಾತಿಯಾಗಿದ್ದು ಸರಿಯಾಗಿಯೇ ಇತ್ತು. ಆತ ಅರ್ಜಿ ಹಾಕಿದ್ದನೋ ಇಲ್ಲವೋ, ಡಿಗ್ರಿಯಲ್ಲಿ ಕ್ಲಾಸ್ ಪಡೆದಿದ್ದನೋ ಇಲ್ಲವೋ, ಬಿ. ಎಡ್. ಏಕೆ ಮಾಡಿಲ್ಲ, ಯಾವ ವಿಷಯ ಅಭ್ಯಾಸ ಮಾಡಿದ್ದಾನೆ, ಈಗ ಯಾವ ವಿಷಯ ಹೇಗೆ ಕಲಿಸುತ್ತಾನೆ, ಇವೆಲ್ಲ ಪ್ರಶ್ನೆಗಳು ಅಪ್ರಸ್ತುತ.

* * *

ಕ್ರಿಷ್ಟಪ್ಪನಿಗೀಗ ವಯಸ್ಸಾಗಿದೆ. ದಿನದ ಬಹುಪಾಲು ಬಿಡುವಿನ ಹೊತ್ತನ್ನು ಆತ ಊರಾಚೆಯ ನದೀದಂಡೆಯಲ್ಲಿರುವ ಆಂಜನೇಯನ ಗುಡಿಯ ಕಟ್ಟೆಯ ಮೇಲೆ ಒಬ್ಬನೇ ಸುಮ್ಮನೇ ಕೂತು ಕಳೆಯುತ್ತಾನೆ. ನಡುನಡುವೆ ತನ್ನಷ್ಟಕ್ಕೆ ತಾನೇ 'ಕಾಲ ಕೆಟ್ಟು ಹೋಯಿತು' ಅಂತ ಹೇಳಿಕೊಳ್ಳುತ್ತ ಇರುತ್ತಾನೆ.

ಒಮ್ಮೊಮ್ಮೆ ಆತ ಯೋಚಿಸುತ್ತಾನೆ– ಕಲ್ಲಪ್ಪ ಸಾಹುಕಾರರಿಗೆ ಅವರ ಅಜ್ಜನ ಹೆಸರು ಇಟ್ಟಿದ್ದರು. ಹಾಗೆಯೇ ತನಗೂ ಅಜ್ಜನ ಹೆಸರೇ ಇಡಲಾಗಿತ್ತು. ಕಲ್ಲಪ್ಪ ಸಾಹುಕಾರರ ಅಜ್ಜ ಕಲ್ಯಾ ತನ್ನ ಅಜ್ಜ ವೇದಾಂತ ಕೇಸರಿ ಕೃಷ್ಣಮೂರ್ತಿ ಆಚಾರ್ಯರಲ್ಲಿ ಜೀತದಾಳಾಗಿದ್ದನಂತೆ. ಕಾಲ ಬದಲಾಯಿತು. ಪರಿಸ್ಥಿತಿ ಬದಲಾಯಿತು. ಕಲ್ಯಾನ ಮೊಮ್ಮಗ ಸಾಹುಕಾರ ಕಲ್ಲಪ್ಪನಾದ. ಅವನ ಅಳಿಯನಿಗೆ ಬೇಕಾದಾಗ ಸೈಟು-ಮನೆ ಎಲ್ಲ ಸಿಗುತ್ತದೆ ; ಅವನ ಅಣ್ಣನ ಮಗನಿಗೆ ಕನಿಷ್ಠ ಅರ್ಹತೆ ಇಲ್ಲದಿದ್ದರೂ ನೌಕರಿ ಸಿಗುತ್ತದೆ. ಆದರೆ ವೇದಾಂತ ಕೇಸರಿ ಕೃಷ್ಣಮೂರ್ತಿ ಆಚಾರ್ಯರ ಮೊಮ್ಮಗ ದರಿದ್ರ ಬ್ರಾಹ್ಮಣ ಕ್ರಿಷ್ಟಪ್ಪನಾದ. ಅವನಿಗೆ ಹಣ ಕಟ್ಟಿದರೂ ಸೈಟು ಸಿಗುವುದಿಲ್ಲ ; ಮಗನಿಗೆ ಎಂಬತ್ತೆಂಟು ಪರ್ಸೆಂಟಾದರೂ ಬೇಕಾದ ಕೋರ್ಸಿಗೆ ಸೀಟು ಸಿಗುವುದಿಲ್ಲ ; ಮಗಳಿಗೆ ಕೆಲಸ ಸಿಗುವುದಿಲ್ಲ , ಈ ಬಗ್ಗೆ ಆತನೇನಾದರೂ ಅಂದರೆ ಪೇಪರಿನಲ್ಲೆಲ್ಲ ಗಲಾಟೆ ಏಳುತ್ತದೆ.

ಹಾಗಿದ್ದರೆ ಸರಿ. ಕಾಯೋಣ. ಇದೆಲ್ಲಾ ಸರಿ ಅಂತಾದರೆ ಕ್ರಿಷ್ಟಪ್ಪನ

ಮೊಮ್ಮಗನ ಕಾಲದಲ್ಲಿ ಪರಿಸ್ಥಿತಿ ಮತ್ತೆ ತಿರುವು ಮುರುವಾಗಬಹುದಲ್ಲವೆ ? ಆಗ ಅದೂ ಸರಿ ಅಂತಾಗಬಹುದಲ್ಲವೆ ? ಕಾಲ ಮತ್ತೆ ಬದಲಾಗಬಹುದಲ್ಲವೆ ? ಬದಲಾಗುತ್ತಿರುವುದೇ ಕಾಲವಲ್ಲವೆ ?

ಒಣಗಿ ಹೋಗಿದ್ದ ದರಿದ್ರ ಬ್ರಾಹ್ಮಣ ಕ್ರಿಷ್ಟಪ್ಪನ ಮನದಾಸೆಗಳು ಮೊಮ್ಮಗನ ಕಾಲವನ್ನು ನೆನೆಯುತ್ತ ಮತ್ತೆ ಚಿಗುರತೊಡಗುತ್ತವೆ...

(೧೯೨)

❖ ❖ ❖

# ಮರೀಚಿಕೆ

"ಟಾಟಾ ಆಂಟಿ", "ಸೂಟಿ ಆದ ಕೂಡ್ಲೆ ಪಿಲೂ–ಸತೀಶ ಇಬ್ರನ್ನೂ ಕಳಿಸಬೇಕು. ಹಾಂ", "ಆಂಟಿ ಟಾಟಾ" –ಅಕ್ಕನ ಮೂರೂ ಮಕ್ಕಳು ಮರಾಠಿಯಲ್ಲಿ ಒಂದೇ ಸಮನೆ ಕಿರುಚುತ್ತಿರುವಾಗ ಈ ಬಸ್ಸು ಒಮ್ಮೆ ಬಿಟ್ಟರೆ ಸಾಕು ಅನ್ನಿಸಿತು ಆಕೆಗೆ. ಅಲ್ಲ, ರಾತ್ರಿ ಹನ್ನೊಂದಾಗಲು ಬಂದಿರಬೇಕು. ಸುಮ್ಮನೆ ಮನೆಯಲ್ಲಿ ಮಲಗುವುದು ಬಿಟ್ಟು 'ಆಂಟೀನ್ನ ಕಳಿಸ್ಲಿಕ್ಕೆ ನಾವೂ ಬರ್ತೀವಿ' ಅಂತ ಹಟ ಹಿಡಿದು ತಾವೂ ಬಂದಿವೆ ; ಅಕ್ಕನಿಗಾದರೂ ಕಂಡಲ್ಲಿ ಹೀಗೆ ಹುಡುಗರನ್ನು ಕರಕೊಂಡು ಹೋಗುವುದರಲ್ಲಿ ಎಂತಹ ಹುರುಪೋ ಏನೋ. ಅವಳಿಗೆ ಯಾತರಲ್ಲೂ ಬೇಸರವಿಲ್ಲ. ಬಸ್‌ಸ್ಟ್ಯಾಂಡಿಗೆ ಹೋಗುವುದೆಂದು ರಾತ್ರಿ ಎಷ್ಟು ಉತ್ಸಾಹದಿಂದ ಅಡಿಗೆ ಮಾಡಿದಳು ! ಎಲ್ಲರಿಗೂ ಬಡಿಸಿದಳು. ಗಂಡನ ಕೂಡ ಎಷ್ಟು ನಗುನಗುತ್ತ ಮಾತಾಡುತ್ತಾಳೆ ಅಕ್ಕ– ಲಗ್ನವಾಗಿ ಹನ್ನೆರಡು ವರ್ಷಗಳ ನಂತರ ಸಹ. ಅದೇ ಗಂಡ, ಅದೇ ಮಕ್ಕಳು, ಅದೇ ಮನೆ, ಅದೇ ಕೆಲಸ –ದಿನಾ ಅದೇ ಅದೇ. ಆದರೂ ಇನ್ನೂ ನಿನ್ನೆ ಲಗ್ನವಾದ ಹುಡುಗಿಯ ಹಾಗೆ ಆಡುತ್ತಾಳೆ ಅಕ್ಕ. ಈ ಎಲ್ಲದರಿಂದ ಓಡಿಹೋಗಬೇಕು ಒಮ್ಮೆಯಾದರೂ, ತುಸು ಹೊತ್ತಾದರೂ –ಅಂತ ಅವಳಿಗೆಂದೂ ಅನಿಸಿರಲಿಕ್ಕೇ ಇಲ್ಲವೆ ?

"ಮಿನೀ, ಇನ್ನೊಮ್ಮೆ ಕೊಲ್ಹಾಪುರಕ್ಕ ಬರುವಾಗ ಹೀಂಗ ಒಬ್ಬಾಕಿನೇ ಬರಬ್ಯಾಡ ಹ್ಞಾ, ನಿನ್ನ ಯಜಮಾನರನ್ನ ಹುಡುಗರನ್ನ ಕರಕೊಂಡ ಬಾ" –ಅಕ್ಕ, "ಅಲ್ಲೇನ್ರಿ ?" –"ಹ್ಞಾ, ಹೌದು, ಹೌದು" ಅಂತ ಸೋ ಹಾಕಿದ ಅಕ್ಕನ ಗಂಡ.

ಒತ್ತರಿಸಿ ಬರುತ್ತಿರುವ ಬೇಸರ ಮುಚ್ಚಿಡಲು ಅಷ್ಟೇನೂ ಪ್ರಯತ್ನಪಡದೆ ಆಕೆ ಮಾತಾಡಿದಳು, "ನೀವಿನ್ನ ಮನಿಗೆ ಹೋಗ್ರಿ ಅಕ್ಕಾ, ಹುಡುಗರಿಗೆ ನಿದ್ದೆಯ ಹೊತ್ತು."

"ಹ್ಞಾ ಹ್ಞಾ ಹೋಗ್ತೀವಿ. ನಿನಗೇನ ಬಸ್ಸಿನೊಳಗ ತ್ರಾಸಾಗಲಿಕ್ಕಿಲ್ಲಲ್ಲ ಮಿನೀ, ಪುಶ್‌ಬ್ಯಾಕ್ ಸೀಟ್ಸ್ ಅವ. ಮಲಕೊಂಡಬಿಡು. ನೀ ಕಣ್ಣ ತಗಿಯೂದ್ರಾಗ ಪುಣೆ ಬಂದಿರ್ತದ." –ಅಷ್ಟಂದು ಅಕ್ಕ ಒಮ್ಮೆಲೆ ಗಂಡನ ಕಡೆಗೆ ಹೊರಳಿ ಬಹಳ ಕಾಳಜಿಯ ಧ್ವನಿಯಲ್ಲಿ ಹೇಳಿದಳು, "ಮರೆತು ಬಿಟ್ಟೆ. ಹಾಲಿನ ಭಾಂಡಿಯ ಮ್ಯಾಲ ಮುಚ್ಚಲೇ ಇಲ್ಲ. ಹಾಳು ಬೆಕ್ಕು–"

ಹಾಲಿನ ಸಲುವಾಗಿ ಅಕ್ಕನಿಗೆ ಇರುವ ಕಾಳಜಿ ನೋಡಿ ಆಕೆಗೆ ಮತ್ಸರವಾಯಿತು. ಮನೆಯಲ್ಲಿ ತಾನೂ ಹಾಲಿನ ಸಲುವಾಗಿ ಕಾಳಜಿ ತೆಗೆದುಕೊಳ್ಳುತ್ತಾಳೆ ಖರೆ. ಆದರೆ ಅಕ್ಕನ ಹಾಗೆ ತನಗೆಂದೂ ಹೀಗೆ ಅದರ ಸಲುವಾಗಿ ಹೃತ್ಪೂರ್ವಕ ಕೆಟ್ಟೆನಿಸುವುದಿಲ್ಲ. ಯಾಕೋ.

"ನೋಡ್ರಿ, ಅಕಸ್ಮಾತ್ ಬೆಕ್ಕು ಹಾಲು ಕುಡದಬಿಟ್ಟಿದ್ದರ ನಾಳೆ ನಸೀಕ್ಲೆ ನೀವು ಆಫೀಸಿಗೆ ಹೋಗೋದರೊಳಗಾಗಿ ಚಹಾ ಆಗೂದಿಲ್ಲ. ನಾ ಅಂತೀನಿ– ನೀವು ೯ ಗಂಟೇಕ್ಕ ಹೋದರ ಹ್ಯಾಂಗ ? ಇಲ್ಲದಿದ್ದರ–"

–ಒಮ್ಮೆ ನಿಲ್ಲಿಸಬಾರದೇ ಅಕ್ಕ ಈ ಪುರಾಣ, ಈ ಬಸ್ಸಾದರೂ ಯಾಕೆ ಇಷ್ಟು ತಡ ಮಾಡಬೇಕು...

"ಬಸ್ ಬಿಟ್ಟಿತು ಹಿಂದೆ ಸರೀರಿ ಹುಡುಗ್ರಾ. ಮಿನೀ. ಹೋಗಿ ಬರ್ತಿಯಾ ಹಂಗಾರ ?"

"ಆಂಟಿ ಟಾಟಾ–"

ಉತ್ತರ ರೂಪವಾಗಿ ಆಕೆ ಕಿಡಿಕಿಯಲ್ಲಿ ಮುಖ ತೂರಿ ಕೈ ಬೀಸಿದಳು. ಮತ್ತು ಅವರೆಲ್ಲ ಇನ್ನೂ ಕಾಣುತ್ತಿರುವಾಗಲೇ ಕೈ ಬೀಸುವುದು ನಿಲ್ಲಿಸಿ ಒಳಕ್ಕೆ ಸರಿದು ಸರಿಯಾಗಿ ಕೂತು ಉಸ್ಸೆಂದು ಉಸಿರು ಬಿಟ್ಟಳು.

ಥೂ, ಮೂರು ದಿನ ವ್ಯರ್ಥವಾಗಿ ಕಳೆದುಹೋದವು. ಸಿನೆಮಾ, ತಿರುಗಾಟ, ಪಕ್ವಾನ್ನದ ಊಟ, ಹುಡುಗರ ಧಾಂಧಲೆ–ಛಿಛಿ, ಪುಣೆ ಬಿಟ್ಟು ಹೊರಟಾಗ ಇದನ್ನೆಯೇ ತಾನು ಬಯಸಿದ್ದು ? ಇಂಥದರಿಂದ ಬಿಡುಗಡೆ ಬಯಸಿ ಮನೆಯಿಂದ ಹೊರಟು ಮತ್ತೆ ಇಂಥದರಲ್ಲೇ ಸಿಕ್ಕಿಹಾಕಿಕೊಂಡು ಬೇಸರ ಮಾತ್ರ ಹೆಚ್ಚಾಯಿತು.

–ಅದ್ಭುತ ಹೆಂಗಸು ಅಕ್ಕ. ಎರಡು ದಿನ ತನ್ನೊಡನೆ ಪುಣೆಗೆ ಬಾ ಅಂದರೆ ಮನೆಬಿಟ್ಟು ಹೇಗೆ ಬರಲಿ ಎಂದಳು. ಇವಳಿಗಷ್ಟೇನೆ ಮನೆ ಇರುವುದು ? –ತನಗೂ ಇದೆ. ಅವಳಿಗಿಂತ ದೊಡ್ಡ ಮನೆ, ಕಾರು, ಅವಳ ಗಂಡನಿಗಿಂತ ಹ್ಯಾಂಡ್‌ಸಮ್ ಗಂಡ, ಎರಡು ಮಕ್ಕಳು –ಎಲ್ಲ ಇದೆ. ಹತ್ತು ವರ್ಷಗಳಿಂದ ಇದೆ. ದಿನಾ ಅಡಿಗೆ-ಬಡಿಸುವುದು-ಗಂಡ ಆಫೀಸಿಗೆ ಹೋಗುವಾಗ ಅವನ ಕೋಟಿನ ಬಟನ್ಸ್ ಹಾಕುವುದು– ಆಗ ಅವನು ಮರೆಯದೇ ಇಂದಿಗೂ ತನ್ನ ಹಣೆ ಮುದ್ದಿಸುವುದು– ಪಿಲೂ, ಸತೀಶ ಸ್ಕೂಲಿಗೆ ಹೊರಟಾಗ ಟಾಟಾ– ಮಧ್ಯಾಹ್ನ ನಿದ್ದೆ, Femina, ವಿವಿಧ ಭಾರತಿ– ಮತ್ತೆ ಸಂಜೆಯ ಚಹಾ-ತಿನಿಸು, ಊಟ– ರವಿವಾರವಾಗಿದ್ದರೆ ಸಿನೇಮಾ, ಪಿಕ್‌ನಿಕ್, ಪಾರ್ಟಿ, ರಾತ್ರಿ ತಡವಾಗಿ ಮನೆ ಸೇರುವುದು, 'ನೀ ಇವತ್ತ ಎಲ್ಲಾರಕಿಂತಾ ಛಂದ ಕಾಣ್ತಿದ್ದಿ ಮಿನಿ' ಅಂತ ಗಂಡನ ಕಾಂಪ್ಲಿಮೆಂಟು, ನಂತರ ಮಲಗುವುದು, ಮಲಗಿ

ಮತ್ತೆ ಏಳುವುದು, ಮತ್ತೆ–

ಛೀ, ಇದೇ ಜೀವನವೇ ?

ಮೊನ್ನೆ ಓದಿದ ಒಂದು ಫ್ರೆಂಚ್ ಕತೆ : ಪ್ಯಾರಿಸಿನಲ್ಲಿಯ ಚರ್ಚೊಂದರಲ್ಲಿ ಅಕಸ್ಮಾತ್ ಭೆಟ್ಟಿಯಾಗುತ್ತಾರೆ ಒಬ್ಬ ಐರಿಶ್ ಹೆಂಗಸು, ಒಬ್ಬ ಫ್ರೆಂಚ್ ಯುವಕ. ಚರ್ಚ್‌ನಲ್ಲಿ ಒಟ್ಟಾಗಿ ಪ್ರಾರ್ಥನೆ ಸಲ್ಲಿಸಿದ ನಂತರ ಹೊರಬಂದು ಇಬ್ಬರೂ ಹೋಟೆಲ್‌ಗೆ ಹೋಗುತ್ತಾರೆ ; ಅಲ್ಲಿಂದ ಮುಂದೆ ಒಂದು ಸಿನಿಮಾಕ್ಕೆ ; ಸಂಜೆ ಒಂದು ಸಭೆಗೆ ; ರಾತ್ರಿ ಒಂದು ರೆಸ್ಟ್ ಹೌಸಿಗೆ. ಸರಿ, ಮುಂಜಾನೆ ಅವಳು ಪ್ಲೇನ್ ಹತ್ತಿ ತಿರುಗಿ ತನ್ನ ದೇಶಕ್ಕೆ ಹೋಗುತ್ತಾಳೆ. ಅವಳಿಗೆ ಬಾಯ್ ಬಾಯ್ ಹೇಳಿ ಆತ ತನ್ನ ಆಫೀಸಿಗೆ ಹೋಗುತ್ತಾನೆ. ಇಬ್ಬರಿಗೂ ಜೀವನ ಹೆಚ್ಚು ಸುಂದರವಾದಂತೆ ಅನಿಸುತ್ತದೆ. ಕತೆ ಮುಗಿಯಿತು.

–ಎಷ್ಟೋ ಸಲ ಮಧ್ಯಾಹ್ನ ಒಬ್ಬಳೇ ಮಲಗಿಕೊಂಡು ನಿದ್ದೆ ಬಾರದೆ ಹಾಸಿಗೆಯಲ್ಲಿ ಹೊರಳಾಡುತ್ತಿದ್ದಾಗ ತನಗೆ ಅನಿಸುವುದು –ಒಮ್ಮೆ ಹೋಗಬೇಕು ರೆಕ್ಕೆ ಬಿಚ್ಚಿಕೊಂಡು, ಈ ಎಲ್ಲ ಗೋಡೆ ದಾಟಿ ಆಚೆ ಕಡೆ ಏನಿದೆಯೆಂದು ನೋಡಬೇಕು. ಒಂದು ಸಲವಾದರೂ ಹೀಗೆ ಮಾಡಿದರೆ ಹೇಗೆ, ಹಾಗೆ ಮಾಡಿದರೆ ಹೇಗೆ ಅಂತ ವಿಚಾರಿಸದೆ ಮನಸ್ಸಿಗೆ ಬಂದದ್ದು ಮಾಡಬೇಕು. ಸಿಕ್ಕೀತು ತನಗೂ ಒಂದು ಫೇರೀಲ್ಯಾಂಡ್. ಆದೀತು ಕುದುರೆಯೊಂದಿಗಿನ ರಾಜಕುಮಾರನ ಭೆಟ್ಟಿ– ಆದರೆ ಛೆ, ಇದರರ್ಥ ಬೇರೆಯೇ ಆಗುತ್ತದೆ ; ಹೀಗಲ್ಲ ತನಗನಿಸುವುದು, ಖಂಡಿತ ಹೀಗಲ್ಲ. ತನಗನಿಸುವುದು ಒಟ್ಟು ಹೀಗೆ : ಏನಾದರೂ ಇಲ್ಲಿಯ ತನಕ ಆಗದೇ ಇದ್ದದ್ದು ಆಗಬೇಕು– ಈ ಎಲ್ಲ ಬೇಸರ ಹೋಗಿಸಿಬಿಡುವಂಥಾದ್ದು ಏನಾದರೂ...

ಬಹಳ ಸಲ ವಿಚಾರ ಮಾಡಿದ್ದಳು ಆ ಕತೆ ಓದಿದ ನಂತರ, ರಾತ್ರಿ ಕೊನೆಗೆ ಅವರು ರೆಸ್ಟ್ ಹೌಸಿಗೆ ಹೋಗದೇ ಹಾಗೇ ಒಬ್ಬರನ್ನೊಬ್ಬರು ಬೀಳ್ಕೊಂಡಿದ್ದರೂ ಜೀವನ ಹೆಚ್ಚು ಸುಂದರ ಅನಿಸುತ್ತಿತ್ತೇ ಅವರಿಗೆ ? –ಬಹಳ ಹೊತ್ತಿನ ನಂತರ ಆಕೆ ನಿರ್ಧಾರ ಮಾಡಿದ್ದಳು– ಹೌದು, ಖಂಡಿತ ಅನಿಸುತ್ತಿತ್ತು.

–ಹೀಗೆ ಜೀವನ ಸುಂದರವಾಗುವ ಅವಕಾಶ ಹುಡುಕಿಕೊಂಡೇ ತಾನು ಮೂರು ದಿನಗಳ ಹಿಂದೆ ಪುಣೆ ಬಿಟ್ಟದ್ದು. ಈಗ ವಿಚಾರ ಮಾಡಿ ನೋಡಿದರೆ ಮೂರ್ಖತನ ಅನಿಸುತ್ತದೆ. ಇಂಥ ಅವಕಾಶಗಳೇನು ಕೊಲ್ಹಾಪುರದ ಅಕ್ಕನ ಮನೆಯಲ್ಲಿ ಬಿದ್ದಿರುತ್ತವೆಯೆ ? ತಾನು ತಪ್ಪು ಮಾಡಿದೆ, ಇಲ್ಲಿಗೆ ಬಂದು. ದೂರ ಹೀಗೇ ಎಲ್ಲಾದರೂ ಹೋಗಬೇಕಿತ್ತು, ದೂರ– ಈ ಹಾಲಿನ ಭಾಂಡಿಯ ಹಾಗೂ ಅದರ ಮುಚ್ಚಳದ ಜಗತ್ತಿನಿಂದ ದೂರ...

–ಲಗ್ಷುರಿ ಬಸ್ಸು. ಸಾಕಷ್ಟು ಸ್ಪೀಡಿನಿಂದಲೇ ಓಡುತ್ತಿದೆ. ಬಸ್ ಟರ್ನ್ ತೆಗೆದುಕೊಳ್ಳುವಾಗಲೆಲ್ಲ ಟಿಕೆಟ್ಸ್ ಕೊಡುತ್ತಿರುವ ಕಂಡಕ್ಟರನ ಜೋಲಿ ತಪ್ಪದೇ ಹೆಂಗಸರಿದ್ದ ಸೀಟಿನ ಕಡೆಗೆ ಹೋಗುತ್ತಿದೆ...

"Excuse me–"

–ಬದಿಯಿಂದಲೇ ಬಂದ ಗಡಸು ಧ್ವನಿ ಕೇಳಿ ಆಕೆ ಒಮ್ಮೆಲೆ ಬಲಕ್ಕೆ ಹೊರಳಿ ನೋಡಿದಳು. ಆಕೆಯ ಮಗ್ಗುಲು ಸೀಟಿಗೆ ಕೂತ ಮನುಷ್ಯ ಗಂಭೀರವಾಗಿ ಆಕೆಯನ್ನೇ ನೋಡುತ್ತ ಹೇಳಿದ: "Excuse me madam."

ಏನು ಯಾಕೆ ಅಂತ ತಿಳಿಯದೆ ಆಕೆ ಅವನನ್ನೇ ನೋಡಿದಳು. ಹಿತವೆನ್ನಿಸಿತು. ಆತ ಮಾತಾಡಿಸಿದ್ದೇಕೆ ಅಂತ ಕೇಳುವುದು ಬಿಟ್ಟು ನೋಡುತ್ತಲೇ ಇದ್ದಳು. ಆಕೆಯ ಕಾಲ ಕೆಳಗೆ ಏನೋ ಅಲುಗಾಡಿತು. ಒಮ್ಮೆಲೇ ಹೊಳೆಯಿತು ಆಕೆಗೆ– ತಾನು ಚಪ್ಪಲುಗಾಲಿನಿಂದ ಆತನ ಪಾದ ಮೆಟ್ಟಿದ್ದು. "Oh Sorry," ಅಂತ ಕಾಲು ಈಚೆಗೆ ಎಳೆದುಕೊಂಡಳು. ಮತ್ತೆ ಮತ್ತೆ ವ್ಯಥೆ ವ್ಯಕ್ತಪಡಿಸಿದಳು. "ಅಡ್ಡಿಯಿಲ್ಲ," ಅಂದ ಆತ ನಸುನಗುತ್ತ.

ಅಲ್ಲ ತಾನೆಂಥ ಪೆದ್ದಿ! ಇಷ್ಟು ಹೊತ್ತಿನಿಂದಲೂ ಈತನನ್ನು ಗಮನಿಸಿಯೇ ಇಲ್ಲವಲ್ಲ ಅಂತನಿಸಿತು. ಈ ಧ್ವನಿ ಎಷ್ಟು ಗಡುತರವಾಗಿದೆ ಸಿನೇಮಾದಲ್ಲಿನ ಮಹಾರಾಜನ ಧ್ವನಿಯ ಹಾಗೆ. ಒಂದು ಬದಿಯಿಂದ ನೋಡಿದರೆ ಗ್ರೀಕ್‌ಯೋಧನ ಹಾಗೆ ಕಾಣುತ್ತಾನೆ... ಆಕೆ ತನ್ನ ಕಣ್ಣ ಕೊನೆಯಿಂದ ಹಲವು ಬಾರಿ ಆತನನ್ನು ನೋಡಿದಳು. ಸಮಾಧಾನವಾಗದೆ ಪೂರಾ ತಿರುಗಿ ನೋಡಿದಳು. ಅಕಸ್ಮಾತ್ ಅವನೂ ನೋಡಿದ– ಹೀಗಾದಾಗ ಬೆಚ್ಚಿಬೀಳಲು ತಾನೇನು ಸಣ್ಣ ಹುಡುಗಿಯಲ್ಲವಲ್ಲ ಅಂತ ಆಕೆ ಮುಗುಳ್ನಕ್ಕಳು. ಆತನೂ ನಕ್ಕ, ಸುಂದರವಾಗಿ ನಕ್ಕ.

ಕತೆ ಸುರುವಾಗುತ್ತಿದೆಯೋ ಏನೋ ಅನಿಸಿತು ಆಕೆಗೆ. ಆಕೆ ತನ್ನ ದೃಷ್ಟಿ ಬೇರೆಡೆ ಹೊರಳಿಸಲಿಲ್ಲ. ಹೌದು, ಆತ ಮಾತಾಡುತ್ತಾನೆ ಈಗ:

"ನೀವು ಪುಣೇಕ್ಕ ಹೋಗ್ಬೇಕೋ ಅಥವಾ–"

"ಹೌದು ಪುಣೇಕ್ಕ; ನೀವು?"

"ನಾನೂ ಅಲ್ಲಿಗೇ. ಬಸ್ಸಿನೊಳಗ ಕೂತು ರಾತ್ರಿ ಕಳೀಲಿಕ್ಕೆ ಬ್ಯಾಸರ ಅಲ್ಲs?"

"ಹೌದು."

"ಆದರ ಹೀಂಗ ಛಲೋ ಕಂಪನಿ ಸಿಕ್ಕರ ಬ್ಯಾಸರಾಗೂದಿಲ್ಲ."

ಆಕೆ ನಕ್ಕಳು ಮಾತ್ರ.

"ನೀವು ಪುಣೇದಾಗ ಕಲೀತೀರೇನು?"

“ಆ್ಞ ?” ಏನು ಉತ್ತರಿಸುವುದೆಂದು ತಿಳಿಯದೆ ಆಕೆ ಹೇಳಿದಳು, “ಹ್ಞೂ”.

ತಾನಿನ್ನೂ ಕಾಲೇಜು ಹುಡುಗಿಯ ಹಾಗೆ ಕಾಣುವೆನೆಂದು ಆಕೆ ಬಹಳ ಜನರಿಂದ ಕೇಳಿದ್ದಾಳೆ. ಪ್ರಕಾಶನಂತೂ ಯಾವಾಗಲೂ ಅನ್ನುತ್ತಾನೆ. ಆದರೆ ಈ ಅಪರಿಚಿತನಿಂದ ಈ ಮಾತು ಕೇಳಿದಾಗ ಬೇರೆಯೇ ಏನೋ ಅನಿಸುತ್ತಿದೆ– ಈವರೆಗೆ ಎಂದೂ ಅನಿಸಲಾರದ್ದು. ಆಕೆ ಕಾಳಜೀಪೂರ್ವಕವಾಗಿ ಮಂಗಲಸೂತ್ರವನ್ನು ಬ್ಲೌಜಿನೊಳಗಡೆ ತೂರಿ ಮರೆ ಮಾಡಿದಳು.

“ನಿಮ್ಮ ಹೆಸರು ?”

“ಮಿನಿ” –ಅಂದಳು ಮಿಸೆಸ್ ಮೀನಾಕ್ಷಿ ಪುಣೇಕರ ಅನ್ನದೆ.

“ಓ, Sweet name.”

“ಚಾಕಲೇಟ್ ?” –ಆತ ಕ್ಯಾಡ್‌ಬರೀಸ್ ತುಂಡನ್ನು ಕೈಯಲ್ಲಿ ಹಿಡಿದು ಕೇಳಿದ. ಆಕೆ ಒಂದನ್ನೆತ್ತಿಕೊಂಡಾಗ, "Sweets to the sweet," ಅಂದ.

ಎಷ್ಟು polished, ಎಷ್ಟು smart, ಇದ್ದಾನೆ...

“ವಿಪರೀತ ಗಾಳಿ,” ಅನ್ನುತ್ತ ಕಿಟಕಿಯ ಗಾಜು ಸರಿಸಹೋದಳು ಆಕೆ. ಅರ್ಧ ಸರಿಸಿ ಅವನ ಕಡೆ ನೋಡಿ, “ಬಹಳ ಬಿಗಿ,” ಅಂದಳು.

“ಬಿಡ್ರಿ, ನಾ ಹಾಕ್ತೀನಿ,” ಅಂದು ಆತ ತನ್ನ ಎಡಗೈಯನ್ನು ಅವಳಿಗೆ ಅಡ್ಡವಾಗಿ ಕಿಟಕಿಯವರೆಗೆ ಚಾಚಿ ಗಾಜು ಸರಿಸಿದ. ಈಗ– ತಾನಾದರೂ ಅರ್ಧ ಇಂಚು ಮುಂದೆ ಬಾಗಬೇಕು, ಇಲ್ಲ ಅವನ ಕೈಯಾದರೂ ಅರ್ಧ ಇಂಚು ಈ ಕಡೆ ಸರಿಯಬೇಕು... ಏನಾಯಿತೋ ಅಂತೂ ಒಟ್ಟು ಮರುಕ್ಷಣದಲ್ಲಿ ಆತನ ಮೊಳಕೈ ಮೃದುವಾಗಿ ಅವಳ ಎದೆ ಸವರಿಕೊಂಡು ಹೋಯಿತು, 'Oh, Sorry', 'Oh, it's all right' ಗಳ ನಂತರ ಆಕೆಗೆ ಅನಿಸಿತು– ಎಷ್ಟು ವರ್ಷಗಳ ನಂತರ ಇಂದು ತಾನು ಎಷ್ಟು ಬೇರೆಯೇ ಆಗಿದ್ದೇನೆ... ಹೈಸ್ಕೂಲಿನಲ್ಲಿದ್ದಾಗಂತೂ ಮೂದೇವಿಯಾಗಿದ್ದೆ. ಕಾಲೇಜಿನಲ್ಲಿದ್ದದ್ದು ಎರಡೇ ವರ್ಷ. ತಲೆ ಎತ್ತಿ ಯಾರನ್ನೂ ನೋಡಿರಲಿಲ್ಲ ಸಹ, ಹಿಡಿದು ಲಗ್ನ ಮಾಡಿಬಿಟ್ಟರು. ಹತ್ತು ವರ್ಷವಾಯಿತು ಪುಣೆಯಲ್ಲಿ ಸಂಸಾರ ಹೂಡಿ. ದಿನ ಬೆಳಗಾದರೆ ಅದೇ ರಾಡಿ. ಒಮ್ಮೆ, ಒಂದೇ ಒಂದು ಸಲ, ಗಟ್ಟಿ ಮನಸ್ಸು ಮಾಡಿ ಗಂಡ, ಮಕ್ಕಳು, ಮನೆ, ಹಾಲಿನ ಭಾಂಡಿ ಎಲ್ಲ ಅವರವರ ಪಾಡಿಗೆ ಬಿಟ್ಟು ಬೆಳಕಿಗೆ ಬಂದು ನೋಡಬೇಕೆಂದು ಹೊರಟಾಗಿತ್ತು. ಮೂರು ದಿನವಂತೂ ಕೊಲ್ಹಾಪುರದಲ್ಲಿ ವ್ಯರ್ಥ ಕಳೆದಾಗಿತ್ತು. ಇನ್ನು ತನಗುಳಿದಿರುವುದು ನಾಳೆ ಮುಂಜಾನೆಯ ತನಕದ ಅವಧಿ ಮಾತ್ರ. ಮುಂಜಾನೆ ಆದ ಕೂಡಲೇ ಬರುವುದು ಪುಣೆ. ಮತ್ತೆ ಅದೇ ಅದೇ. ಈ ಅವಕಾಶ ತಿರುಗಿ ಸಿಗುವುದಿಲ್ಲ... ಈ ನಾಲ್ಕೈದು ತಾಸಿನಲ್ಲೇ ಏನಾದರೂ ಆಗಬೇಕು. ಎಷ್ಟೋ

ಸಲ ಎಲ್ಲೋ ಎರಡೇ ಮಿನಿಟು ಭೆಟ್ಟಿಯಾದವರಲ್ಲೂ ಏನೇನೆಲ್ಲ ಆಗಿ ದೊಡ್ಡ ದೊಡ್ಡ adventures ನ ಕತೆಗಳೇ ಹುಟ್ಟುವುದಿಲ್ಲವೇ ? ನೋಡೋಣ. ತಾನಂತೂ ಬಯಲಿಗೆ ಇಳಿದಿದ್ದಾಗಿದೆ. ಅಭೂತಪೂರ್ವ ಅನುಭವವೊಂದು ತನಗಾಗಿ ಕಾದಿದ್ದರೆ ಬೇಡವೇಕೆ ?

—ಎಲ್ಲೋ ಬಸ್ಸು ನಿಂತಾಗ ಆತ ಮೃದುವಾಗಿ ಕೇಳಿದ :

"ಚಹಾ ತಗೋತೀರೇನು ?"

"ಓ ಯೆಸ್."

ಆತ ಎರಡು ಚಹಾ ತರಲು ಹೇಳಿದ. ಅದು ಬಂದಾಗ ತಾನೇ ಕೈಯಿಂದ ಅವಳಿಗೆ ಕೊಟ್ಟ. "ಇಂಥಾ ಥಂಡಿ ಇದ್ದಾಗ ಚಹಾ ಕುಡೀಲಿಕ್ಕೆ ನನಗೆ ಭಾಳ ಸೇರತದ."

"ನನಗೂ," ಅಂದಳು ಆಕೆ.

ಆಕೆ ಬಿಲ್ ಕೊಡಲು ಪರ್ಸ್ ತೆರೆದಾಗ ಬಹಳ ಆರ್ಜವತೆಯಿಂದ ಅವಳ ಕೈ ಮುಟ್ಟಿ ತಡೆದು, "No please, ನನಗೆ ಚಾನ್ಸ್ ಕೊಡ್ರಿ. ಇಂಥಾ ಅವಕಾಶ ನನಗೆಲ್ಲಿ ಮತ್ತೊಮ್ಮೆ ಸಿಗಬೇಕು ?" ಎಂದ.

—ಈತನೂ ತನ್ನಂತೆಯೇ ಅವಕಾಶ ಹುಡುಕಿಕೊಂಡು ಹೊರಟವನಿರಬೇಕು...

ಆಕೆ ಸುಮ್ಮನೆ ಕೈಯಲ್ಲಿದ್ದ ಪುಸ್ತಕದ ಮೇಲೆ ಕಣ್ಣಾಡಿಸಿದಳು.

"ಏನದು ನಿಮ್ಮ ಕೈಯೊಳಗಿನ ಪುಸ್ತಕ ?"

"Waiting for Godot."

"ಓ, ಹಂಗಾರ ನಮ್ಮಿಬ್ಬರ likings ಒಂದೇ ಅಂಥಂಗಾತು. ನಿಮಗೇನನಸ್ತದ ಅಂದರ ಬೆಕೆಟ್ ಬಗ್ಗೆ—" ಆತ ಮಾತಾಡುತ್ತಿದ್ದ : ಸಾಹಿತ್ಯ, ವಿಮರ್ಶೆ, ಹೀಗೇ ಹಲವಾರು ವಿಷಯ. ಆತನ ಬಿಝಿನಿಸ್, ಅದರಿಂದ ಆತನಿಗಾಗುವ ಬೇಸರ— ಅಕಸ್ಮಾತ್ ಬಸ್ಸಿನಲ್ಲಿ ಆಕೆಯ ಭೆಟ್ಟಿಯಾಗಿದ್ದರಿಂದ ಆತನಿಗಾದ ಸಂತೋಷ, ಇತ್ಯಾದಿ.

ಆಕೆ ಆತನ ಧ್ವನಿಯ ಏರಿಳಿವುಗಳಿಗೆ ಕಿವಿಗೊಟ್ಟು ನಡುನಡುವೆ ಹ್ಞೂ, ಅನ್ನುತ್ತ ಆತನ ಮೂಗು— ತುಟಿಗಳ ಚಲನೆ ನೋಡುತ್ತ ಕೂತಿದ್ದಳು. ಯಾಕೋ ಜೀವನವೆಲ್ಲ ಹಗುರಹಗುರವಾದಂತೆ ಅನ್ನಿಸತೊಡಗಿತ್ತು. ಅವಳಿಗೆ ಯಾವಾಗ ನಿದ್ದೆ ಬಂತೋ ಗೊತ್ತಿಲ್ಲ...

''ಮಿನಿ, ಮಿನಿ'' —ಮೆತ್ತಗಿನ ಧ್ವನಿ ಕಿವಿಯ ತೀರ ಸಮೀಪವೇ ಕೇಳಿ ಎಚ್ಚರಾದರೂ ಕಣ್ಣು ತೆರೆಯಲಿಲ್ಲ ಆಕೆ. ಏನೋ ಒಂದು ಥರದ ಗಂಡು ವಾಸನೆ ಹತ್ತಿರದಿಂದಲೇ ಬಂದಂತಾಗಿ ಏನಿರಬಹುದು ಅಂತ ಒಂದು ಕ್ಷಣ ವಿಚಾರಿಸಿದಳು. ಮರುಕ್ಷಣ ಕಾರಣ ಹೊಳೆಯಿತು— ತಾನು ಆ ಅಪರಿಚಿತನ ಭುಜದ ಮೇಲೆ

ತಲೆಯೊರಗಿಸಿ ನಿದ್ರಿಸಿ ಬಿಟ್ಟಿದ್ದೇನೆ– ಅಂತ. ಎರಡು ತಾಸೋ ನಾಲ್ಕು ತಾಸೋ. ತಟ್ಟನೆ ಫ್ರೆಂಚ್ ಕತೆ ನೆನಪಾಯಿತು. ತನ್ನ ಕತೆ ಅದಕ್ಕಿಂತ ಸುಂದರವಾಗಿ ಸಾಗಿದೆ ಅನ್ನಿಸಿತು.

"ಮಿನಿ, ಎಳ್ತೀರೇನು ? ಪುಣೆ ಬಂತು." –ಆತ ಕಲ್ಲುಗೊಮ್ಮಟನ ಹಾಗೆ ಅಲುಗಾಡದೆ ಕುಳಿತೇ ಮಾತನಾಡಿದ. ಆಕೆ ಹಗುರಾಗಿ ಎದ್ದು ಬೆಚ್ಚಿ ಬಿದ್ದ ಹಾಗೆ ಅಂದಳು : "Oh sorry, ನಿಮಗೆಷ್ಟ ತ್ರಾಸ ಕೊಟ್ನೆಲ್ಲ, ನೀವು ಮೊದಲs ಎಬ್ಬಿಸಬಾರದ್ದಾಗಿತ್ತs ?"

"ನನಗೇನೂ ತ್ರಾಸಾಗಿಲ್ಲ. ಅಂದರೆ ನಾ ಒರಟು ಮನುಷ್ಯ– ನಿಮ್ಮ ಕುತ್ತಿಗೆ ನೋವಾಗಿರಬಹುದು–"

–ಊಹ್ಞೂ, indecent ಅನ್ನುವಂಥದರ ನೆರಳೂ ಇರಲಿಲ್ಲ, ಆತನ ಮಾತಿನಲ್ಲಿ...

ಎಷ್ಟು ದಿನದಿಂದ ಕಾಯುತ್ತಿದ್ದೆ ತಾನು ಇಂಥ ಒಂದು ಹಿಂದು-ಮುಂದಿಲ್ಲದ, ಆದರೆ ಸ್ವಯಂಪರಿಪೂರ್ಣವಾದ, ಕಡೆ ತನಕ ನೆನಪುಳಿಯುವ, ಏನಾದರೂ ತನ್ನ ಜೀವನದಲ್ಲಿ ಘಟಿಸೀತು ಅಂತ... ಎಷ್ಟು ಕಾಯಬೇಕಾಯಿತು ಇದಕ್ಕಾಗಿ... ಆದರೆ ಹಾಗೆ ನೋಡಿದರೆ ಇನ್ನೂ ಏನೂ ಆಗಿಯೇ ಇಲ್ಲ. ಈವರೆಗೆ ಆದದ್ದೆಲ್ಲ ತಲೆಬಾಲವಿಲ್ಲದ್ದು. ಇನ್ನೂ ಪೂರ್ಣವಾಗಬೇಕು ಇದು– ಯಾರಿಗೆ ಗೊತ್ತು, ಆ ಫ್ರೆಂಚ್ ಕತೆಯ ಕೊನೆಯ ಹಾಗೆ–

"ನಾನು Waiting For Godot ಓದುತ್ತಿದ್ದೆ ನೀವು ಮಲಗಿಕೊಂಡಾಗ."

"ಓ್ಞ ?" ಆಕೆ ಬಹಳ ಸರಳವಾಗಿ ಅನ್ನುವಂತೆ ಅಂದಳು : "ನಾನು ಎಚ್ಚರಾಗ್ಲಿ ಅಂತ ಕಾಯ್ಕೋತ ?"

ಆತ ನಕ್ಕು, ನಂತರ ಗಂಭೀರವಾಗಿ ಅಂದ : "ನಾವು ಏನೇನೋ ಆಗ್ಲಿ ಅಂತ ಕಾಯ್ತಿರತೀವಿ. ಆದರ ಎಲ್ಲಾ ಎಲ್ಲೆ ಆಗತಾವ ಜೀವನದಾಗ ?"

"ಯಾಕಾಗೂದಿಲ್ಲ ಪ್ರಯತ್ನ ಮಾಡಿದರ ?"

"ಅದೂ ಖರೇನs" –ಆತ ಆಕೆಯ ಕಡೆ ನೋಡಿದ. ಆತನ ದೃಷ್ಟಿ ಖಂಡಿತ ಅರ್ಥಪೂರ್ಣವಾಗಿದೆ– ಅನ್ನಿಸಿತು ಆಕೆಗೆ. ಆತ ತನಗೆ ಏನೋ ಹೇಳಬಯಸಿದಂತಿದೆ. ಹೇಗೆ ಹೇಳಲಿ ಅಂತ ಗೊಂದಲದಲ್ಲಿರುವಂತಿದೆ. ಪುಣೆಯಲ್ಲಿ ಇಳಿದ ಮೇಲೆ ಹೇಳೋಣವೇ ಅಂತ ವಿಚಾರಿಸುತ್ತಿರುವಂತಿದೆ. ಏನು ಹೇಳುವುದು ಅಂತ ಪ್ಲ್ಯಾನ್ ಮಾಡುತ್ತಿರುವಂತಿದೆ– ಸಂಜೆ ಇಷ್ಟು ಹೊತ್ತಿಗೆ ಇಂಥಲ್ಲಿ ಬಾ ಅಂತ ? –ಖರೇನೇ ಎಷ್ಟು ಸುಂದರವಾಗಿ ಮುಂದುವರಿಯುತ್ತಿದೆಯಲ್ಲ ತನ್ನ ಕತೆ...

ನಸುಕು. ಸಮೀಪದಲ್ಲೇ ಪುಣೆ ಸಿಟಿ ಕಾಣುತ್ತಿದೆ. ಆಕೆಯ ಮನಸ್ಸು ಒಮ್ಮೆಲೆ ಅಸ್ವಸ್ಥವಾಯಿತು. ಏನು ಹೇಳಬಹುದು ಆತ ? ತಾನು ಏನೆಂದು ಉತ್ತರಿಸುವುದು ಅದಕ್ಕೆ ? ಛೆ, ಇಷ್ಟು ದಿನ ಎಂದೂ ಈ ಬಗ್ಗೆ ವಿಚಾರ ಮಾಡಿಯೇ ಇಲ್ಲವಲ್ಲ ತಾನು ?

ಇದ್ದಕ್ಕಿದ್ದಂತೆ ಆತ ಕೇಳಿದ : "ನನ್ನ ನೆನಪಿಡುತ್ತೀರಲ್ಲ ?"

ನೇರವಾಗಿ ಉತ್ತರಿಸದೆ ಆಕೆ ಮರುಪ್ರಶ್ನೆ ಹಾಕಿದಳು : "ನೀವು ?"

"ನಾನು ಸುಂದರವಾದದ್ದನ್ನು ಯಾವಾಗಲೂ ನೆನಪಿಡ್ತೀನಿ."

"ಓ, ಥ್ಯಾಂಕ್ಸ್."

ಆಕೆಯ ಮನಸ್ಸು ಹಕ್ಕಿಯಂತೆ ಹಾರಿತು. ಕತೆಯ ಅಂತ್ಯದ ಬಗ್ಗೆ ಆಕೆಗೆ ಸಂಶಯ ಉಳಿಯಲಿಲ್ಲ.

"Waiting For Godot ಅರ್ಧಾಕ್ಕೇ ಉಳೀತು" ಅಂದ ಆತ.

ಅಂದರೆ–

ಪುಣೆ ಬಂದೇಬಿಟ್ಟಿತು.

"ನೀವು ಇದ್ದೀರಿ ಅಂತ ಹೊತ್ತು ಹೋದದ್ದೇ ಗೊತ್ತಾಗ್ಲಿಲ್ಲ. ಥ್ಯಾಂಕ್ಸ್– ಸುಂದರವಾದ ಈ ರಾತ್ರಿಗೆ– ಅಂದರೆ ನಿಮ್ಮ ಸುಂದರ company ಗೆ–" ಆತ ಸಾಮಾನು ಸರಿಪಡಿಸಿಕೊಳ್ಳುತ್ತ ಮಾತಾಡಿದ.

ಆಕೆ ಬಹಳವಾಗಿ ಗಲಿಬಿಲಿಗೊಂಡಿದ್ದಳು. ಏನಾದೀತು ಈ ಕತೆಯ climax ? ಬಹುಶಃ ಆತ ತನ್ನ ಮನಃಸ್ಥಿತಿ ಸರಿಯಾಗಿ ತಿಳಿದಿಲ್ಲ. ಅಂತೆಯೇ ಮುಂದುವರಿಯಲು ಹಿಂದೆ ಮುಂದೆ ನೋಡುತ್ತಿದ್ದಾನೆ, ಸಂಕೋಚಪಡುತ್ತಿದ್ದಾನೆ. ಯಾರು ಮೊದಲು ಮುಂದುವರಿದರೇನು ? ತಾನೇ ಮಾಡಿದರೆ ಆ ಕೆಲಸ ?

ಕೂಲಿಗಳ ಕಿರುಚಾಟ, ಪ್ರಯಾಣಿಕರು ಇಳಿಯುವ ಗಡಿಬಿಡಿ, ಸುತ್ತೆಲ್ಲ ಜನಸಾಗರ.

ಆತ ಬಸ್ಸಿನ ಹಿಂದೆ ಹೋಗಿ ನಿಂತು ಮೇಲಿನಿಂದ ಸಾಮಾನು ಇಳಿಸಿಕೊಳ್ಳುತ್ತಿದ್ದಾನೆ.

–ದೂರದಲ್ಲಿ -ಪ್ರಕಾಶ ಬಂದಿದ್ದಾನೆ, ಕಾರು ತಗೊಂಡು. ತನ್ನನ್ನು ಹುಡುಕುತ್ತಿದ್ದಾನೆ. ಇನ್ನೇನು ಇಲ್ಲಿಗೆ ಬಂದೇಬಿಡುತ್ತಾನೆ... ಆಕೆಯ ತಲೆ ಚುರುಕಾಗಿ ಕೆಲಸ ಮಾಡಿತು. ಪರ್ಸಿನಿಂದ ಆಕೆ ನೀಲಿ ಬಣ್ಣದ ಕಾಗದ-ಪೆನ್ನು ತೆಗೆದಳು. ದುಂಡಾದ ಅಕ್ಷರಗಳಲ್ಲಿ ಇಂಗ್ಲೀಶ್‌ನಲ್ಲಿ ಬರೆದಳು- ತನ್ನ ಫೋನ್ ನಂಬರು, ಅಡ್ರೆಸ್, "ಸಂಜೆ ನಾಲ್ಕಕ್ಕೆ ಫೋನ್ ಮಾಡಿ ನಿನ್ನನ್ನು ಎಲ್ಲಿ ಭೆಟ್ಟಿಯಾಗುವುದೆಂದು ತಿಳಿಸು. ಕಾಯುತ್ತಿರುತ್ತೇನೆ." ಕಾಗದ ಮಡಿಚಿ "Waiting For Godot" ದ ಮೊದಲ

ಪೇಜಿನಲ್ಲೇ ಇಟ್ಟು, ಅಲ್ಲೇ ಆತ ಬಿಟ್ಟುಹೋಗಿದ್ದ ಹ್ಯಾಂಡ್‌ಬ್ಯಾಗಿನ ಮೇಲೆ ಪುಸ್ತಕ ಇಟ್ಟಳು.

"ಹೋಗಿ ಬರ್ತೀರೇನು ? ನಮಸ್ಕಾರ," ಅಂತ ಆತ ಹತ್ತಿರ ಬರುತ್ತಿರುವುದನ್ನು ಕಂಡು "ನಮಸ್ಕಾರ," ಅಂತ ಅವಸರದಿಂದ ಹೇಳಿ ಹೊರಟೇಬಿಟ್ಟಳು ಅಲ್ಲಿಂದ.

* * *

—ಮಧ್ಯಾಹ್ನ ಎರಡು ಗಂಟೆ. ಆಕೆ ಕೂತಲ್ಲಿ ಕೂಡಲಾಗದೆ ನಿಂತಲ್ಲಿ ನಿಲ್ಲಲಾಗದೆ ಚಡಪಡಿಸಿದಳು. ನಾಲ್ಕಕ್ಕೆ ಇನ್ನೂ ಎರಡು ತಾಸು. ಏನಂತ ಫೋನ್ ಮಾಡಬಹುದು ಆತ ? ಇಂಥ ಹೋಟೆಲಿಗೆ ಬಾ ಅಂತ ? ಇಂಥ ಪಾರ್ಕಿನಲ್ಲಿ ಭೆಟ್ಟಿಯಾಗೋಣ ಅಂತ ?

ಅಲ್ಲ, ಹಾಗೆ ಒಂದು ವೇಳೆ ಭೆಟ್ಟಿ ಆಯಿತು ಅಂತಿಟ್ಟುಕೊಂಡರೆ ಮುಂದೆ ? ಆತ ನನಗೆ ನೀನು ಬೇಕು ಅಂದರೆ— ?

—ಅಂದರೇನು ? ತಾನು ಆತನಿಗೆ ತಿಳಿಸಿ ಹೇಳಬೇಕು : ನಾನು ಬಯಸಿ ಕಾದಿದ್ದ ಅಪೂರ್ವ ಅನುಭವವೊಂದನ್ನು ನನಗೆ ತಂದು ಕೊಟ್ಟದ್ದಕ್ಕಾಗಿ ನಿನಗೆ ಋಣಿ. ನನ್ನ ಜೀವನವನ್ನು ನಿನ್ನ ಒಂದು ರಾತ್ರಿಯ ಸಹವಾಸದಿಂದ ಇಷ್ಟು ಸುಂದರವನ್ನಾಗಿ ಮಾಡಿದ್ದೀಯ. ನಾವು ಸ್ನೇಹಿತರಂತೆ ಅಗಲೋಣ. ನನ್ನ ವರ್ತನೆ ನಿನ್ನಲ್ಲಿ ಬೇರೆ ಏನಾದರೂ ನಿರೀಕ್ಷೆ ಹುಟ್ಟಿಸಿದ್ದರೆ ಅದಕ್ಕಾಗಿ ನನ್ನನ್ನು ಕ್ಷಮಿಸು. ನನ್ನ ಉದ್ದೇಶ ಅದಾಗಿರಲಿಲ್ಲ. ನನಗೆ ಸಂಸಾರವಿದೆ. ನಿನ್ನನ್ನು ಯಾವಾಗಲೂ ನೆನಪಿಡುವೆ, ಬಾಯ್...

ಕಾಲಿಂಗ್ ಬೆಲ್ ಕೇಳಿ ತಟ್ಟನೆ ನಿಂತಲ್ಲೆ ನಿಂತಳು ಆಕೆ. ಇದೇನು, ಮನೆಗೇ ಬಂದನೇ ಆತ ಅಂತ ಎದೆ ಒಂದು ಕ್ಷಣ ವೇಗವಾಗಿ ಬಡಿದುಕೊಂಡಿತು. ಆತನನ್ನು ಎದುರಿಸುವ ಧೈರ್ಯ ಒಮ್ಮೆಲೆ ಸೋರಿಹೋದಂತೆನಿಸಿತು.

ಬಂದವನು ಪ್ರಕಾಶ. "ನೀ ಇವತ್ತ ಊರಿಂದ ಬಂದೀ ಅಂತ ಮಧ್ಯಾಹ್ನ ಲೀವ್ಹ್ ಹಾಕಿ ಬಂದ್ಬಿಟ್ಟೆ. ಸಿನೇಮಾಕ್ಕ ಹೋಗೋಣ ?" ಅಂದ ಆತ, ಅವಳಿಂದ ಉತ್ತೇಜಕ ಪ್ರತಿಕ್ರಿಯೆ ನಿರೀಕ್ಷಿಸುತ್ತ.

"ಅಂದರ ? ನೀ ಮಧ್ಯಾಹ್ನೆಲ್ಲಾ ಮನ್ಯಾಗೇ ಇರ್ತೀಯೇನು ? ಅಂದರ ನೀ ಆಫೀಸಿಗೆ ಹೋಗೋದೇ ಇಲ್ಲೇನು ? ಅಂದರ—?" ಅವಳ ಧ್ವನಿ ಗಂಟಲಲ್ಲೇ ಸಿಲುಕಿತು.

"ಅಂದರ ನಾ ಇವತ್ತ ಬಾಯಿಸಾಹೇಬರ ಹುಕುಮಿನ ಗುಲಾಮ ಅಂತ. ಹಿಂಗ್ಯಾಕಾಗೇದ ನಿನ್ನ ಮಾರಿ ? ಆರಾಮಿಲ್ಲೇನು ?"

“ಏನಿಲ್ಲ, ಹಿಂಗೇ ಸ್ವಲ್ಪ ತಲಿ ತಿರುಗಿಧಾಂಗ–” ಅನ್ನುತ್ತ ಆಕೆ ಹಾಸಿಗೆಯಲ್ಲಿ ಕುಸಿದು ಕುಳಿತಳು.

“ಹಂಗಾರ ನೀ ಮಲಕೋ, ರಾಧಾಬಾಯೀಗೆ ಹೇಳ್ತೀನಿ ನಿನಗ ಛಲೋ ಒಂದು ಕಪ್ಪು ಬಿಸೀ ಚಹಾ ಮಾಡಿಕೊಡೂ ಅಂತ. ಡಾಕ್ಟರ್‌ಗೆ ಫೋನ್ ಮಾಡ್ಲೇನು ?” ಕಾಳಜಿಯಿಂದ ಕೇಳಿದ ಪ್ರಕಾಶ.

‘ಬ್ಯಾಡ ಬ್ಯಾಡ.”

“ಮಲಕೋ ನೀನು, ಬಸ್ಸಿನ್ಯಾಗ ಬಂದೀಯಲ್ಲ ಅದರ ಪರಿಣಾಮ ನೋಡು ಇದು. ರೆಸ್ಟ್ ತಗೋ. ಐದ ಮಿನಿಟಿನ್ಯಾಗ ಚಹಾ ಬರ್ತದ,” ಅನ್ನುತ್ತ ಆತ ಅಡಿಗೆಮನೆ ಕಡೆ ಹೋದ.

ಹಿಂದಿನಿಂದ ಎತ್ತರವಾದ ಆ ಆಕೃತಿ ನೋಡುತ್ತಿದ್ದಂತೆ ಒಮ್ಮೆಲೆ ಆಕೆಯ ಕಣ್ಣು ತುಂಬಿ ಬಂದವು. ತಾನು ಬೇಸರಪಟ್ಟುಕೊಂಡಿದ್ದ, ಮೊದ್ದು ಅಂದುಕೊಂಡಿದ್ದ ಈತನಿಗೆ ತನ್ನಲ್ಲಿ ಎಷ್ಟು ಪ್ರೀತಿಯಿದೆ. ಎಂತಹ ಕೆಲಸ ಮಾಡಿದೆ ತಾನು ! ಇನ್ನು ಒಂದೇ ತಾಸು– ನಂತರ ಎಲ್ಲ ಬಯಲಾಗಿ ಬಿಡುತ್ತದೆ. ತನ್ನನ್ನು ಇಷ್ಟು ಪ್ರೀತಿಸುವ ಗಂಡ, ಮಕ್ಕಳು, ಈ ಮನೆ ಎಲ್ಲ ತನ್ನ ಪಾಲಿಗೆ ಇದ್ದೂ ಇಲ್ಲವಾಗುತ್ತದೆ. ನಾಲ್ಕು ಗಂಟೆಗೆ ಫೋನ್ ಎತ್ತುವ ಪ್ರಕಾಶನಿಗೆ ಎಂತಹ ಆಘಾತ ಕಾದಿದೆ... ಆ ಅಪರಿಚಿತ ಎಂಥವನೋ. ಇತ್ತೀಚೆಗೆ ಪುಣೆಯಲ್ಲಿ ಬ್ಲ್ಯಾಕ್‌ಮೇಲ್ ಮಾಡುವವರ ಸಂಖ್ಯೆ ಹೆಚ್ಚಾಗಿದೆಯಂತೆ. ತನ್ನ ಹೆಸರು-ವಿಳಾಸ-ಹಸ್ತಾಕ್ಷರ ಸಹಿತ ಅವನ ಕಡೆಗಿದೆ. ಈ ಆಧಾರದ ಮೇಲೆ ಅವನು ಬೇಕಾದದ್ದು ಮಾಡಬಹುದು. ಪ್ರಕಾಶನಿಗೆ ಇದನ್ನೆಲ್ಲ ತೋರಿಸುವ ಬೆದರಿಕೆ ಹಾಕಿ ತನ್ನಿಂದ ಹಣ ದೋಚಬಹುದು. ಅಷ್ಟೇ ಆದರೆ ಅಡ್ಡಿಯಿಲ್ಲ, ಮತ್ತೇನಾದರೂ ಕೇಳಿದರೆ ?... ತಾನು ನಿರಾಕರಿಸಿದರೆ ತನ್ನ ಗುಟ್ಟು ಬಯಲು ಮಾಡುತ್ತೇನೆಂದರೆ ? ಈ ಮನೆ-ಸಂಸಾರದೊಂದಿಗಿನ ತನ್ನ ಸಂಬಂಧ ? ಮನೆತನದ ಮರ್ಯಾದೆ ? ಮಕ್ಕಳ ಭವಿಷ್ಯ ? ಅಯ್ಯೋ ದೇವರೆ, ಎಂಥ ಹೊತ್ತು ತಂದಿಟ್ಟೆ... ಸಾಹಸ ಬೇಕಾಗಿತ್ತಲ್ಲವೆ ತನಗೆ ? ಹಾಲಿನ ಭಾಂಡಿಯ ಜಗತ್ತಿನಿಂದ, ನೀರಸನೆನಿಸುವ ಗಂಡನಿಂದ, ಯಾಂತ್ರಿಕವೆನಿಸುವ ಸಂಸಾರದಿಂದ, ರೋಮ್ಯಾಂಟಿಕ್ ಬಿಡುಗಡೆ ಬೇಕಾಗಿತ್ತಲ್ಲವೆ ?

ಆಕೆಗೆ ಒಮ್ಮೆಲೆ ಅಳಬೇಕು ಅನ್ನಿಸಿತು... ಆತ್ಮಹತ್ಯೆ ?, ಹ್ಞಾ ಯಾಕಾಗಬಾರದು ? ನಾಚಿಕೆಗೆಟ್ಟ ಬಾಳು ಬಾಳುವುದಕ್ಕಿಂತ ಸಾಯುವುದು ಒಳ್ಳೆಯದಲ್ಲವೆ ? ಪ್ರಕಾಶ ಎಷ್ಟು ಅಳಬಹುದು ತಾನು ಸತ್ತರೆ ? –ಆ ಕಲ್ಪನೆಯಿಂದ ಆಕೆಗೆ ಬಹಳ ಸಮಾಧಾನವೆನಿಸಿತು. ನಾಲ್ಕಕ್ಕೆ ಫೋನ್ ಮಾಡುವ ಅಪರಿಚಿತನಿಗೂ ಸುದ್ದಿ ತಿಳಿದು ಆತ ಧಾವಿಸಿ ಬರಬಹುದು... ಆ ಫ್ರೆಂಚ್ ಕತೆಗಿಂತ ಹತ್ತು ಪಾಲು

ಹೆಚ್ಚು ಸುಂದರವಾಗುತ್ತದಲ್ಲ ತನ್ನ ಕತೆ... ಹೌದು, ಅದೇ ಸರಿ, ನಾಲ್ಕು ಗಂಟೆಯಾಗುತ್ತಿರುವಂತೆಯೇ...

ಆಕೆ ಅಸಹಾಯ ಕಣ್ಣುಗಳಿಂದ ಗೋಡೆಯ ಮೇಲಿನ ಗಡಿಯಾರದ ಕಡೆ ನೋಡಿದಳು. ನಾಲ್ಕಕ್ಕೆ ಹತ್ತು ನಿಮಿಷ. ಎಂಥದೋ ಸಂಕಟ. ಹೊಟ್ಟೆಯಲ್ಲಿನ ಕರುಳೆಲ್ಲ ಹೊರಗೆ ಬರುತ್ತಿರುವಂತೆ ಅನಿಸಿಕೆ. ಕೈಕಾಲು ಅಲುಗಾಡಿಸಲಿಕ್ಕೆ ಶಕ್ತಿಯೇ ಇಲ್ಲ. ಆಕೆಯ ಕಣ್ಣುಗಳು ಭಾರವಾಗಿ ಮುಚ್ಚಿಕೊಂಡವು.

..... ಟ್ರಣ್ ಟ್ರಣ್ –

ಆಕೆ ಬೆಚ್ಚಿ ಕಣ್ಣು ಬಿಟ್ಟಳು. ಇದೇನು, ಇಂಥ crisis ನಲ್ಲೂ ತನಗೆ ನಿದ್ರೆ ಹತ್ತಬೇಕೆ ಅಂತ ಧಡಾರನೆ ಎದ್ದು ಕೂತಳು. ಹೊರಗಿನ ರೂಮಿನಿಂದ ಟೆಲಿಫೋನ್ ಕೂಗುತ್ತಿತ್ತು. ಆಕೆ ಹಾಸಿಗೆಗೆ ಅಂಟಿಕೊಂಡಂತಾಗಿ ಗಡಿಯಾರ ನೋಡಿದಳು –ನಾಲ್ಕು ಗಂಟೆ. ಇನ್ನು ಮುಗಿಯಿತು ಈ ಜಗದ ಬಂಧ, ಎಲ್ಲಕ್ಕೂ – ಎಲ್ಲರಿಗೂ ಗುಡ್‌ಬಾಯ್ –

ಹೊರಗಿನಿಂದ ಕೇಳಿಬರುತ್ತಿದ್ದ ಪ್ರಕಾಶನ ಧ್ವನಿಗೆ ಆಕೆ ನಿರ್ಜೀವಳಂತೆ ಕಿವಿಗೊಟ್ಟಳು : 'ಹಲೋ, ಡಾ. ಮಿಶ್ರಾ ? ನಮಸ್ಕಾರ. ಏನು ಸಂಜೆಯ ಪಾರ್ಟಿಗೇ ? Sorry. ಇವತ್ತ ನನ್ನ ಮಿಸೆಸ್ ಮೈಯಾಗ ಅರಾಮಿಲ್ಲ. ಹ್ಞಾ ಹ್ಞಾ, ನೆನಪದ ಮುಂದಿನ ವಾರ –'

ಮಿನಿ ಹಾಯಾಗಿ ಉಸಿರು ಬಿಟ್ಟಳು. ಆದರೆ ಮರುಕ್ಷಣ ಹಾಸಿಗೆಯಿಂದ ಕೆಳಗಿಳಿದಳು. ಇನ್ನೇನು ಐದಾರು ಮಿನಿಟಿನ ಅವಧಿ. ಅಷ್ಟರಲ್ಲೇ ಬರುವುದು ಆ ಅಪರಿಚಿತನ ಫೋನ್. ಆತ ಬ್ಲ್ಯಾಕ್‌ಮೇಲರ್ ಆಗಿದ್ದು, ದುಷ್ಟ ಆಗಿದ್ದರೆ... ಒಂದೋ ತಾನು ಗಂಡ, ಮಕ್ಕಳನ್ನು ತೊರೆಯಬೇಕು. ಇಲ್ಲವೆ ಯಾವನೋ ಲಫಂಗನ ಜೊತೆ–

ಛಿ. ಮುಂದೆ ವಿಚಾರಿಸಲಾಗದೆ ಆಕೆ ಎರಡೂ ಕೈಗಳಿಂದ ತಲೆ ಗಟ್ಟಿಯಾಗಿ ಹಿಡಿದುಕೊಂಡಳು.

"ಮಿನಿ," ಹೊರಗಿನಿಂದ ಕೂಗಿದ ಪ್ರಕಾಶ, "ನಿನ್ನ ಕಡೆ ಯಾರೋ ಬಂದಾರ ನೋಡು."

ಏನು ? ಬಂದೇಬಿಟ್ಟನೇ ? ಮಿನಿಯ ಕಾಲಲ್ಲಿಯ ಶಕ್ತಿ ಉಡುಗುತ್ತಿರುವಂತೆನಿಸಿತು ; ಆದರೆ ಮರುಕ್ಷಣ ಅವಳು ಹುಚ್ಚು ಧೈರ್ಯದಿಂದ ಧಡಧಡ ಹೊರಗೆ ಬಂದಳು– ಬಂದದ್ದು ಬರಲಿ, ತಾನು ಎಲ್ಲ ಎದುರಿಸಬಲ್ಲೆ, ತಾನೇನು ಹೇಡಿಯೆ ?

ಬಾಗಿಲಲ್ಲಿ ನಿಂತಿದ್ದವ ಬಿಳಿಯ ಸಮವಸ್ತ್ರ ಧರಿಸಿದ್ದ ಒಬ್ಬ ಸೇವಕ. ಬಹಳ

ವಿನಯದಿಂದ ಬಾಗಿ ಕೈಯಲ್ಲಿನ ಪ್ಯಾಕೆಟ್ಟನ್ನು ಮುಂದೆ ಚಾಚಿದ, "ಬಾಯಿಯವರು ತಮಗ ಕೊಟ್ಟು ಬಾ ಅಂದರು."

ಆಕೆ ಅದನ್ನು ಸ್ವೀಕರಿಸಿದಾಗ ಆತ ಬಗ್ಗಿ ಸಲಾಮ್ ಮಾಡಿ ಎರಡು ಹೆಜ್ಜೆ ಹಾಗೇ ಹಿಂದೆ ಸರಿದು ನಂತರ ತಿರುಗಿ ಹೊರಟುಹೋದ. ಪ್ರಕಾಶ ಅಲ್ಲೇ ಪೇಪರೋದುತ್ತ ಕುಳಿತವನು ತಲೆ ಎತ್ತದೆಯೇ ಮಾತಾಡಿದ, "ನಿನ್ನ ಫ್ರೆಂಡ್ ಶಶಿಕಲಾ ಕಳಿಸಿರಬೇಕು– ಏನಾದರೂ ಹೊಸಾ ನಮೂನೆ ಹಲ್ವಾ. ಮತ್ತೇನ ಕೆಲ್ಸ ನಿಮಗ ಹೆಂಗಸರಿಗೆ–"

ಆಕೆ ಉತ್ತರಿಸದೆಯೆ ವೇಗವಾಗಿ ಒಳಗೆ ಬಂದಳು. ಬೆಡ್‌ರೂಮಿನ ಬಾಗಿಲು ಹಾಕಿಕೊಂಡು ಹಾಸಿಗೆ ಮೇಲೆ ಕುಳಿತಳು. ಅವಳ ಕೈ ನಡುಗುತ್ತಿದ್ದವು. ಗುಲಾಬಿ ಬಣ್ಣದ ರ್‍ಯಾಪರ್, ರೇಶಿಮೆಯ ದಾರ– Waiting For Godot, ತಿಳಿ ನೀಲಿ ಬಣ್ಣದ ಕಾಗದ, ತಾನೇ ಬರೆದ ಚೀಟಿ. ಎಲ್ಲ ಸುರಕ್ಷಿತ ವಾಪಸ್.

ಆ ಫ್ರೆಂಚ್ ಕತೆ, ರಾತ್ರಿ ಬಸ್ಸಿನಲ್ಲಿ ಅಕಸ್ಮಾತ್ ಭೆಟ್ಟಿಯಾದ ಅಪರಿಚಿತ, ಅವನು ತಿರುಗಿ ಕಳಿಸಿದ ಪುಸ್ತಕ-ಚೀಟಿ ; ಈ ಮನೆ ಸಂಸಾರ, ಬಿಡುಗಡೆಗಾಗಿ ಕಾದಿದ್ದು... ಸಾಹಸ... ? ಛಿ, ಈ ಎಲ್ಲಕ್ಕೂ ಸೀಮೆಎಣ್ಣೆ ಸುರಿದು ಬೆಂಕಿಯಿಡಬೇಕು...

ಎದ್ದು ಪಡಶಾಲೆಗೆ ಬರುತ್ತ ಗಟ್ಟಿಯಾಗಿ ಹೇಳಿದಳು, "ನಡೀ ಪ್ರಕಾಶ್, ಸಿನೆಮಾಕ್ಕೆ ಹೋಗೋಣ."

(ಒಂದು ಹಳೆಯ ಮರಾಠಿ ಕತೆಯ ಆಧಾರ)

(೧೯೭೩)

❖ ❖ ❖

# ಧೈರ್ಯದ ಮನುಷ್ಯ

೧೯೪೫ರ ಕೊನೆಯ ತಿಂಗಳುಗಳು. ಕೆಲವಾರು ವರ್ಷಕಾಲ ಭೀಕರವಾಗಿ ನಡೆಯುತ್ತಲಿದ್ದ ಎರಡನೆಯ ಮಹಾಯುದ್ಧವು, ಹಿರೋಶಿಮಾ-ನಾಗಾಸಾಕಿ ನಗರಗಳ ಮೇಲೆ ಅಮೇರಿಕೆ ಬಾಂಬು ಹಾಕಿದ ಕೂಡಲೆ, ಅನಿರೀಕ್ಷಿತವಾಗಿ ಒಮ್ಮೆಲೆ ಮುಕ್ತಾಯದ ಹಂತಕ್ಕೆ ಬಂದಿತ್ತು. ನಮ್ಮ ರೆಜಿಮೆಂಟು ಆಗ ಮಲಯಾದಲ್ಲಿತ್ತು. ಬರ್ಮಾ, ಸಿಂಗಾಪೂರ, ಫ್ರೆಂಚ್ ಇಂಡೋಚಾಯನಾ, ಮಲಯಾ ಇತ್ಯಾದಿಗಳಲ್ಲೆಲ್ಲ ಜಪಾನಿ ಪಡೆಗಳು ಶರಣಾದವು. ಯುದ್ಧ ಮುಗಿಯಿತೆಂದು ಮಿತ್ರ ರಾಷ್ಟ್ರಗಳು ಸಾರಿದವು. ಆದರೆ ಅಧಿಕೃತವಾಗಿ ಯುದ್ಧವು ಕೊನೆಗೊಂಡಿತೆಂದು ಉಭಯ ಪಕ್ಷಗಳು ಹೇಳಿಕೆ ಕೊಟ್ಟರೂ ಜಾವಾ, ಸುಮಾತ್ರಾ, ಬೋರ್ನಿಯೊ ಇತ್ಯಾದಿ ಒಳಪ್ರದೇಶಗಳಲ್ಲಿ ಜಪಾನೀಯರ ಜೊತೆಗೆ ನಮ್ಮ ಹೋರಾಟವಿನ್ನೂ ಸಾಗಿಯೇ ಇತ್ತು. ಅವರೆಲ್ಲ 'ಶಿಂಟೋಯಿಜಮ್'ನ ಕಟ್ಟಾ ಪಾಲಕರಾಗಿದ್ದರು. ಅವರ ನಂಬಿಕೆಯ ಪ್ರಕಾರ ಯಾವುದೇ ಯುದ್ಧದ ಅಂತ್ಯಕ್ಕೆ ಎರಡೇ ಎರಡು ಸಾಧ್ಯತೆಗಳಿದ್ದವು ; ಒಂದೋ ಅವರು ವಿಜಯಿಗಳಾಗಬೇಕು, ಇಲ್ಲವೆ, ಹೋರಾಡುತ್ತಲೇ ಸಾಯಬೇಕು. ಹೀಗಾಗಿ ಜಪಾನವು ಶರಣಾಗಿದೆಯೆಂದು ನಮ್ಮ ಪಡೆಗಳು ವಾಯರ್‌ಲೆಸ್ ಮೂಲಕ ಹೇಳಿದರೂ ಅವರು ನಂಬಲಿಲ್ಲ. ಕೊನೆಗೆ ಜಪಾನಿನ ಅರಸು ಹಿರೊಹಿಟೋ ಸ್ವತಃ ರೇಡಿಯೋ ಮೂಲಕ ಅವರಿಗೆಲ್ಲ ಶರಣಾಗಲು ಆಜ್ಞಾಪಿಸಿದ. ಆದರೂ ಅವರು ಇದೇನೋ ಮಿತ್ರ ರಾಷ್ಟ್ರಗಳ ಕುತಂತ್ರವಿರಬೇಕು, ಅದು ತಮ್ಮ ಅರಸನ ಧ್ವನಿಯಾಗಿರಲಾರದು, ಆತನೆಂದೂ ಹಾಗೆ ಹೇಳಲು ಶಕ್ಯವಿಲ್ಲ, ಎಂದೇ ನಂಬಿ ಹೋರಾಟ ಮುಂದುವರಿಸಿದರು. ಹೀಗಾಗಿ ಅವರನ್ನೆಲ್ಲ ಫ್ಲಶ್‌ಔಟ್ ಮಾಡಲು ನಮ್ಮ ಪಡೆಗಳು ಕಾರ್ಯಪ್ರವೃತ್ತವಾದವು. ನೇರ ಯುದ್ಧಕ್ಕಿಂತ ಇದು ಕಷ್ಟದಾಯಕವಾದ ಕೆಲಸವಾಗಿತ್ತು. ಯಾಕೆಂದರೆ ಜಾವಾ-ಸುಮಾತ್ರಾಗಳ ದಟ್ಟ ಕಾಡುಗಳಲ್ಲಿ ಸೇರಿಕೊಂಡ ಅಳಿದುಳಿದ ಜಪಾನೀಯರನ್ನು ಹುಡುಕುವುದು ಹಾಗೂ ಎದುರಿಸುವುದೆಂದರೆ ಸಾವಿನ ಗವಿಯನ್ನು ಹೊಕ್ಕಂತೆಯೇ ಎಂದು ನಮಗೆಲ್ಲ ಗೊತ್ತಿತ್ತು. ಆದರೂ ನಮ್ಮಲ್ಲಿ ಅನೇಕರು ಜೀವದ ಹಂಗುದೊರೆದು ಅಸಾಧಾರಣ ಶೌರ್ಯದಿಂದ ಈ ಕೆಲಸ ಮಾಡಿ ಬ್ರಿಟಿಶ್ ಮೇಲಧಿಕಾರಿಗಳ ಮೆಚ್ಚುಗೆ ಪಡೆದರು. ಹಾಗೆ ಸುಮಾತ್ರಾದ ರಾಜಧಾನಿ ಮೆಡಾನ್ ನಗರವನ್ನು ಜಪಾನಿ

ಗೆರಿಲ್ಲಾಗಳ ಹಾವಳಿಯಿಂದ ಮುಕ್ತಗೊಳಿಸಿದ ಶ್ರೇಯಸ್ಸು ಸಿಕ್ಕದ್ದು ಸೆಕೆಂಡ್ ಲೆಫ್ಟ್‌ನೆಂಟ್ ಪೆರುಮಾಳನಿಗೆ. ಅಂಥವರು ಅನೇಕರಿದ್ದರೂ ಪೆರುಮಾಳ್ ನಮ್ಮ ದೇಶದವನು, ಅದರಲ್ಲೂ ದಕ್ಷಿಣ ಹಿಂದೂಸ್ತಾನದವನು, ಎಂಬ ಕಾರಣಕ್ಕಾಗಿ ನನಗೆ ಆತನ ಬಗ್ಗೆ ವಿಶೇಷ ಅಭಿಮಾನ, ಕೌತುಕವೆನ್ನಿಸಿತ್ತು.

ಈ ಮಧ್ಯೆ, ಅಂದರೆ ಜಪಾನು ಶರಣಾದ ಕೂಡಲೆ ರಂಗೂನಿನಲ್ಲಿ ಮೌಂಟ್ ಬ್ಯಾಟನ್‌ರ ಐತಿಹಾಸಿಕ 'ವ್ಹಿಕ್ಟರಿ ಪರೇಡ್' ನಡೆಯಿತು. ನಾವೆಲ್ಲ ಅದಕ್ಕಾಗಿ ದೊಡ್ಡ ಸಂಖ್ಯೆಯಲ್ಲಿ ರಂಗೂನಿನಲ್ಲಿ ಸೇರಿದೆವು. ಆಸ್ಟ್ರೇಲಿಯಾ, ನ್ಯೂಝೀಲಂಡ್, ಅಮೇರಿಕಾ, ಆಫ್ರಿಕಾ, ಇಂಗ್ಲಂಡ್, ಹಿಂದೂಸ್ತಾನ ಇತ್ಯಾದಿ ಹಲವಾರು ದೇಶಗಳ ಸೈನಿಕ ತುಕಡಿಗಳು ಒಂದೆಡೆ ಸೇರಿ ದಕ್ಷಿಣ ಪೂರ್ವ ಏಶಿಯಾದ ಸೈನ್ಯದ ಸುಪ್ರೀಮ್ ಕಮಾಂಡರ್ ಮೌಂಟ್ ಬ್ಯಾಟನರಿಗೆ ಮಿಲಿಟರಿ ವಂದನೆ ಸಲ್ಲಿಸಿದ ಆ ದೃಶ್ಯ, ಆ ವೈಭವೋಪೇತವಾದ ಮೆರವಣಿಗೆ, ಆ ಅವಿಸ್ಮರಣೀಯ ವಾತಾವರಣ ನಮ್ಮೆಲ್ಲರ ಮೈನವಿರೇಳಿಸಿತು. ಅದೊಂದು ನ ಭೂತೋ ನ ಭವಿಷ್ಯತಿ ಅನ್ನಿಸುವ ಅಪೂರ್ವ ಅನುಭವ.

ವ್ಹಿಕ್ಟರಿ ಪರೇಡಿನ ನಂತರ ಕೂಡಲೆ ನಮ್ಮಲ್ಲಿ ಅನೇಕರಿಗೆ ಒಂದೆರಡು ತಿಂಗಳುಗಳ ರಜೆ ಮಂಜೂರಾಯಿತು. ಇದು ಎಲ್ಲರಿಗೂ ಅತ್ಯಂತ ಖುಷಿಯ ವಿಚಾರವಾಗಿತ್ತು. ಯಾಕೆಂದರೆ ಯುದ್ಧವು ತೀವ್ರವಾಗಿ ನಡೆಯುತ್ತಲಿದ್ದ ಕೊನೆಯ ಹಂತದಲ್ಲಿ ನಮ್ಮಲ್ಲಿ ಅನೇಕರಿಗೆ ವರ್ಷಾನುಗಟ್ಟಲೆ ಮನೆಗೆ ಹೋಗಲು ರಜೆ ಸಿಕ್ಕಿರಲಿಲ್ಲ. ಅದೂ ಅಲ್ಲದೆ ಬದುಕಿ ಉಳಿಯುವ ಬಗೆಗೇ ಯಾರಿಗೂ ಭರವಸೆ ಇರಲಿಲ್ಲ. ಆದ್ದರಿಂದ ಯುದ್ಧವೂ ಮುಗಿದು ರಜೆಯೂ ಸಿಕ್ಕಾಗ ಸಹಜವಾಗಿಯೇ ಬಹುಪಾಲು ಜನರಿಗೆ ಪುನರ್ಜನ್ಮ ಪಡೆದಷ್ಟೆ ಸಂತೋಷವಾಯಿತು. ಹೀಗೆ ರಜೆ ಸಿಕ್ಕು ಊರಿಗೆ ಹೋಗಲಿರುವವರೆಲ್ಲ ರಂಗೂನಿನ ತೀರಪ್ರದೇಶಕ್ಕೆ ಬಂದು ಅಲ್ಲಿರುವ ಟ್ರ್ಯಾನ್ಸಿಟ್ ಕ್ಯಾಂಪುಗಳಲ್ಲಿ ಸೇರಿದರು. ಬೇರೆ ಬೇರೆ ದೇಶಗಳಿಗೆ ಹೋಗಲಿರುವವರೆಲ್ಲ ತಮಗೆ ಬೇಕಾದ ಹಡಗುಗಳು ಬರುವವರೆಗೆ ಕಾಯುತ್ತ ಈ ಕ್ಯಾಂಪುಗಳಲ್ಲಿರಬೇಕಾಗಿತ್ತು. ಕಲಕತ್ತೆಗೆ ಹೋಗಲಿರುವ ಹಡಗು ಬರುವ ದಾರಿ ಕಾಯುತ್ತ ನಾನೂ ಈ ಕ್ಯಾಂಪು ಸೇರಿದೆ.

ಕಳೆದ ಅನೇಕ ದಿನಗಳನ್ನು ಸಾವು-ಬದುಕಿನ ಅನಿಶ್ಚಿತತೆಯ, ಸದಾ ಪ್ರಕ್ಷುಬ್ಧ ವಾತಾವರಣದ, ಹಗಲು ರಾತ್ರಿ ಆಕ್ರಮಣವನ್ನೆದುರಿಸಲು ತುದಿಗಾಲ ಮೇಲೆ ನಿಲ್ಲಬೇಕಾದ ಪರಿಸ್ಥಿತಿಯಲ್ಲಿ ಕಳೆದ ನಮಗೆ ಟ್ರ್ಯಾನ್ಸಿಟ್ ಕ್ಯಾಂಪಿನ ಮುಕ್ತ ವಾತಾವರಣ ಬಲು ಆಪ್ಯಾಯಮಾನವಾಗಿತ್ತು. ಒಳ್ಳೆಯ ಊಟ, ಬೇಕಾದರೆ ಬೇಕಾದ ಆಟಗಳನ್ನಾಡುವ ಅನುಕೂಲ ; ಓದಲು ನ್ಯೂಜ್ ಪೇಪರು-ಮ್ಯಾಗಝೀನುಗಳು ;

ಕೆಲಸವಂತೂ ಏನೂ ಇಲ್ಲ. ಊಟ ಮುಗಿಸಿ ಸಂಜೆ ಏಳೂವರೆ-ಎಂಟರೊಳಗಾಗಿ ನಮ್ಮ ನಮ್ಮ ತಂಬೂಗಳನ್ನು ಸೇರಬೇಕು. ಆದರೂ ಮನೆಗೆ ಹೋಗಲು ಕಾತರಿಸಿದ್ದ ಅನೇಕರಿಗೆ ಈ ಹಾಯಾದ ಜೀವನವೂ ಬೇಸರದ ಬಂಧನವೇ ಅನಿಸಿ, ಅವರು ಇಡೀ ದಿನವನ್ನು ತಮ್ಮ ಹಡಗು ಯಾವಾಗ ಬರಬಹುದೆಂದು ಅವರಿವರನ್ನು ವಿಚಾರಿಸುತ್ತ, ಸಮುದ್ರದಂಡೆಯ ಮೇಲೆ ನಿಂತು ದೂರದವರೆಗೆ ಆತಂಕದಿಂದ ನೋಡುತ್ತ, ಕಳೆಯುತ್ತಿದ್ದರು. ತಮ್ಮ ಹಡಗು ಬಂದವರು ಅತ್ಯುತ್ಸಾಹದಿಂದ ಅವಸರವಸರವಾಗಿ ಗಂಟುಮೂಟೆ ಸಹಿತ ಹಡಗನ್ನೇರಿ ತೀರದಲ್ಲಿರುವವರ ಕಡೆ ಮುಗುಳ್ನಕ್ಕು ಕೈಬೀಸುತ್ತ ಮರೆಯಾಗುತ್ತಿದ್ದರು. ತಮ್ಮ ಹಡಗಿನ್ನೂ ಬರದೇ ಇದ್ದವರು ನಿರಾಸೆಯಿಂದ ತಂಬೂ ಸೇರಿ ಮರುದಿನದ ನಿರೀಕ್ಷೆಯಲ್ಲಿಯೇ ನಿದ್ರಿಸಲು ವ್ಯರ್ಥ ಪ್ರಯತ್ನ ಮಾಡುತ್ತಿದ್ದರು.

ನಮ್ಮದೇ ತಂಬೂವಿನಲ್ಲಿದ್ದ ಪೆರುಮಾಳ್ ಈ ಎಲ್ಲ ಸಾಮಾನ್ಯ ಮಿಲಿಟರಿ ಮಂದಿಗಿಂತ ಭಿನ್ನನಾಗಿದ್ದ. ಯಾವಾಗಲೂ ಏನನ್ನಾದರೂ ಸುದ್ದಿ ಹೇಳಿ ಎಲ್ಲರನ್ನೂ ದಿಗ್ಭ್ರಮೆಗೊಳಿಸುವ ಆತ ತಂಬೂದಲ್ಲಿ ಎಲ್ಲರ ಲಕ್ಷ್ಯದ ಕೇಂದ್ರವಾಗಿದ್ದ. ನಾನಂತೂ ಆತನನ್ನು ತುಂಬ ಮೆಚ್ಚುತ್ತಿದ್ದೆ. ಯಾಕೆಂದರೆ ನಾನು ಆತನಿಗಿಂತ ಎಷ್ಟೋ ಕಿರಿಯನಾಗಿದ್ದರೂ ಆತ ಉಳಿದ ಆಫೀಸರರ ಹಾಗೆ ಜರ್ಬು ತೋರದೆ ನನ್ನೊಂದಿಗೆ ಆತ್ಮೀಯನಾಗಿ ವ್ಯವಹರಿಸುತ್ತಿದ್ದ. ಅಲ್ಲಿದ್ದ ಎಲ್ಲರಲ್ಲಿ ನಾವಿಬ್ಬರೇ ಇಂಗ್ಲಿಶ್ ಬಲ್ಲವರಾಗಿದ್ದು ಅನೇಕ ಸಲ ನಾವು ಯುದ್ಧದ ಬಗೆಗೊಂದೇ ಅಲ್ಲದೆ, ಮನುಷ್ಯ ಜೀವನದ ಅಳವಿನಲ್ಲಿ ಬರುವ ಅನೇಕ ಗಹನ ವಿಷಯಗಳ ಬಗ್ಗೆ ಗಂಭೀರವಾಗಿ ಸೈದ್ಧಾಂತಿಕವಾಗಿ ಚರ್ಚಿಸುತ್ತ ಮಧ್ಯರಾತ್ರಿಯವರೆಗೂ ಕುಳಿತಿರುತ್ತಿದ್ದೆವು.

ಹೀಗೆ ಪೆರುಮಾಳನೊಂದಿಗೆ ಕಳೆದ ಹಲವಾರು ದಿನಗಳಲ್ಲಿ ನಾನು ಆತನ ಬಗ್ಗೆ ಗಮನಿಸಿದ ಕೆಲವು ಮುಖ್ಯ ಅಂಶಗಳೆಂದರೆ– ಮದ್ರಾಸಿನ ಉಪನಗರವೊಂದರಿಂದ ಬಂದ ಆತನಿಗೆ ಆತ ಅತ್ಯಂತ ಪ್ರೀತಿಸುವ ಹೆಂಡತಿ ಹಾಗೂ ಇಬ್ಬರು ಮಕ್ಕಳಿದ್ದರು. ಹಲವು ದಿನಗಳಿಂದ ಅದೇಕೋ ಆತನಿಗೆ ಮನೆಯಿಂದ ಪತ್ರ ಬಂದಿರಲಿಲ್ಲ. ಆದ್ದರಿಂದ ಆತನಿಗೆ ಯೋಚನೆಯಾಗಿತ್ತು. ಆದರೂ ಆತ ಎದೆಗುಂದಿರಲಿಲ್ಲ. ಯುದ್ಧರಂಗದಲ್ಲಿ ಬ್ರಿಟಿಶ್ ಆಫೀಸರರೂ ಮೆಚ್ಚಿ ಹೊಗಳುವಂಥ ಶೌರ್ಯ ತೋರಿದ ಧೀರಯೋಧ. ಅಂತಿಂಥ ಚಿಕ್ಕ ಪುಟ್ಟ ವಿಷಯಗಳಿಗೆ ಎದೆಗುಂದುವನೆ ? –ಹಾಗೆಂದು ಪೆರುಮಾಳ್ ತನ್ನ ಸಾಹಸದ ಕತೆಗಳನ್ನು ಹೇಳಲು ಮೊದಲು ಮಾಡುತ್ತಿದ್ದ. ಸಿಂಗಾಪೂರದಾಚೆಯ ಸಮುದ್ರದಲ್ಲಿ ಆತನೊಬ್ಬನೇ ಜಪಾನೀ ಹಡಗೊಂದನ್ನು ಮುಳುಗಿಸಿದ್ದು ; ಜಾವಾದಲ್ಲಿ ನಲ್ವತ್ತು ಜಪಾನೀ ಸೈನಿಕರಿದ್ದ ಟ್ರೂಪ್‌ಅನ್ನು ಕೇವಲ ಐದೇ ಸಂಗಾತಿಗಳೊಡಗೂಡಿ ಮಣ್ಣು ಮುಕ್ಕಿಸಿದ್ದು ; ಎತ್ತರದ ಮರಗಳು ದಟ್ಟವಾಗಿ ಬೆಳೆದ

ಸುಮಾತ್ರದ ಒಳತೀರದಗುಂಟ ಶತ್ರುಸೈನಿಕರನ್ನು ಹಲವಾರು ಮೈಲು ಬೆನ್ನಟ್ಟಿ ಓಡಿಸಿದ್ದು ; ಕಲ್ಕತ್ತೆಯಿಂದ ಉನ್ನತ ಬ್ರಿಟಿಶ್ ಅಧಿಕಾರಿಗಳಿದ್ದ ಹಡಗೊಂದು ರಂಗೂನಿನ ಕಡೆ ಬರುತ್ತಿದ್ದಾಗ ಅದನ್ನು ಹೊಡೆದುರುಳಿಸಲಿದ್ದ ಜಪಾನೀಯರ ತಂತ್ರವನ್ನು ಕಂಡು ಹಿಡಿದು ಸಕಾಲದಲ್ಲಿ ವಿಫಲಗೊಳಿಸಿ ಬ್ರಿಟಿಶ್ ಅಧಿಕಾರಿಗಳ ಜೀವ ಉಳಿಸಿದ್ದು ; ಹಲವಾರು ಪ್ರಸಂಗಗಳಲ್ಲಿ ಕಡಿದಾದ ದುರ್ಗಮವಾದ ಬೆಟ್ಟಕೊಳ್ಳಗಳ ಪ್ರದೇಶದಲ್ಲಿ ಒಬ್ಬನೇ ಹೋಗಿ ತುರ್ತು ಸಂದೇಶಗಳನ್ನು ಸಂಬಂಧಿಸಿದವರಿಗೆ ತಲುಪಿಸಿದ್ದು ; ಹೀಗೆ ಹಲವಾರು ವೀರಗಾಥೆಗಳು. ಪೆರುಮಾಳನ ಗಂಡೆದೆಯ ಕತೆಗಳಿಗೆ ಕೊನೆಯೇ ಇರಲಿಲ್ಲ. ಅವನ್ನೆಲ್ಲ ಆತ ರಸವತ್ತಾಗಿ ಬಣ್ಣಿಸುತ್ತಿದ್ದರೆ ಕಿರಿಯನಾದ ನಾನು ಬಾಯಿತೆರೆದು ಕಣ್ಣುಪಿಳುಕಿಸದೆ ಕೇಳುತ್ತ ಕೂಡುತ್ತಿದ್ದೆ. ಆತ ಹೇಳುತ್ತಿದ್ದುದರಲ್ಲಿ ಅತಿಶಯೋಕ್ತಿಯೇನೂ ಇರಲಿಲ್ಲವೆಂದು ನಮಗೆಲ್ಲ ಗೊತ್ತಿತ್ತು. ಶೀಘ್ರವೇ ಆತನಿಗೆ ಬಡ್ತಿ ಸಿಗುವುದೆಂದೂ ಎಲ್ಲರಿಗೆ ಗೊತ್ತಿತ್ತು. ದಕ್ಷಿಣ ಹಿಂದೂಸ್ತಾನದವರೇ ಆದ ಐದಾರು ಜನರಿದ್ದ ನಮ್ಮ ತಂಬೂವಿನಲ್ಲಿ ಹೀಗೆ ದಿನಾ ರಾತ್ರಿ ಪೆರುಮಾಳನ ಸುತ್ತ ಕೂತು ರೋಮಾಂಚಕರವಾದ ಆತನ ಸಾಹಸಗಳ ಅನುಭವಗಳನ್ನು ಕೇಳುವುದು, ನಂತರ 'ಎಂಟೆದೆಯ ಬಂಟ'ನೆಂದು ಆತನನ್ನು ಹೊಗಳುವುದು, ಈ ಕಾರ್ಯಕ್ರಮ ಮುಗಿದ ನಂತರವೇ ಮಲಗಲೆಂದು ನಮ್ಮ ನಮ್ಮ ಹೊರಸುಗಳನ್ನು ಸೇರುವುದು– ಇದು ನಮ್ಮ ನಿತ್ಯದ ರೂಢಿಯಾಗಿ ಬಿಟ್ಟಿತ್ತು.

ಅಂತೂ ಕೊನೆಗೊಮ್ಮೆ ಒಂದು ರವಿವಾರ ಕಲ್ಕತ್ತೆಯ ಹಡಗು ಬರಲಿರುವುದೆಂದು ಎರಡುದಿನ ಮುಂಚಿತವಾಗಿ ಅಂದರೆ ಶುಕ್ರವಾರವೇ ನಮಗೆ ಸುದ್ದಿ ಬಂದಿತು. ಆ ಮಧ್ಯಾಹ್ನ ಊಟದ ನಂತರ ಎಲ್ಲರೂ ಪ್ಯಾಕಿಂಗ್ ಮಾಡಲು ತಂಬೂವಿನಲ್ಲಿ ಸೇರಿದಾಗ ನಮ್ಮಲ್ಲಿ ಎಲ್ಲರಿಗಿಂತ ವಯಸ್ಸಾದವನಾಗಿದ್ದ ಜಮಾದಾರ ಜೋಗಿಂದರ್‌ಸಿಂಗ್ ಎಲ್ಲರೂ ಗಮನಿಸುವಷ್ಟು ವ್ಯಥಿತನಾಗಿ ಕಾಣಿಸಿದ. 'ಕ್ಯಾಹುವಾ ಜೋಗಿಂದರ್ ಭಾಯೀ ?' ಅಂತ ಕೇಳಿದಾಗ ಸದಾ ಮೌನಿಯಾಗಿರುತ್ತಿದ್ದ ಆತ ತನ್ನ ಸಂಸಾರದ ಗೋಳಿನ ಕತೆ ಹೇಳಿದ : ಮದುವೆಗೆ ಬಂದ ಮೂವರು ಹೆಣ್ಣುಮಕ್ಕಳು, ಹೊಲಗದ್ದೆಗಾಗಿ ಗಂಡು ಮಕ್ಕಳಲ್ಲಿ ಬಡಿದಾಟ, ಹೆಂಡತಿಗೆ ಸದಾ ಅದೇನೋ ಗುಣವಾಗದ ರೋಗ, ಪಂಜಾಬಿನ ಪೂರ್ವದ ಒಂದು ಮೂಲೆಯಲ್ಲಿರುವ ಆತನ ಹಳ್ಳಿಯಲ್ಲಿ ಸದಾ ರಾಜಕೀಯ ಒಳಜಗಳಗಳು, ಒಟ್ಟು ಮನಃಶಾಂತಿಯಿಲ್ಲ... ಒಂದು ರೀತಿಯಿಂದ ಸೈನ್ಯದಲ್ಲಿನ ಅಸ್ಥಿರ ಬದುಕೇ ಹಾಯಾಗಿತ್ತು... ನಮಗೆಲ್ಲ ಆತನ ಬಗ್ಗೆ ಪಾಪ ಅನಿಸಿ ಮೌನವಾಗಿ ಸಹಾನುಭೂತಿ ಸೂಚಿಸಿ ಸುಮ್ಮನೆ ಕೂತೆವು. ಆಗ ಪೆರುಮಾಳ್ ಆತನಿಗೆ ಕೆಲವು ಮಾತು ಹೇಳಿದ. ಎಂತಹ ಮಾತುಗಳವು !

"ಮನುಷ್ಯನ ಜೀವನದಲ್ಲಿ ಎಲ್ಲ ಬಗೆಯ ಕಷ್ಟಗಳು ಬರುತ್ತವೆ. ಆ ಕಷ್ಟಗಳನ್ನು ಎದುರಿಸುವ ಶಕ್ತಿಯನ್ನು ನಾವು ಪ್ರಯತ್ನಪೂರ್ವಕವಾಗಿ ಮೈಗೂಡಿಸಿಕೊಳ್ಳಬೇಕು. ಅದು ಸಾಧ್ಯವಾಗದ ಮನುಷ್ಯನ ಬಾಳು ನಾಚಿಕೆಗೇಡು. ಕಷ್ಟಗಳು ಸಾಂಸಾರಿಕವಾಗಿರಬಹುದು ಅಥವಾ ಬಾಂಬು ದಾಳಿಯ ರೂಪದಲ್ಲಿರಬಹುದು ; ಕಷ್ಟಗಳ ಸ್ವರೂಪ ಯಾವುದೇ ಇರಲಿ, ಮನುಷ್ಯ ಮನಸ್ಸು ಮಾಡಿದರೆ, ಧೈರ್ಯ ಮಾಡಿದರೆ, ಎಲ್ಲ ಕಷ್ಟಗಳ ಮಧ್ಯದಲ್ಲೂ ಪಾರಾಗುವ ದಾರಿಯೊಂದು ಆತನಿಗೆ ಕಾಣುತ್ತದೆ. ಧೈರ್ಯವೆಂದರೆ 'ಬಂದದ್ದು ಬರಲಿ, ಅನುಭವಿಸೋಣ, ಇನ್ನೇನು ಮಾಡಲಿಕ್ಕಾಗುತ್ತದೆ ?' ಎಂಬ ಅನುರಕ್ತಿಯಲ್ಲ ; ಧೈರ್ಯವೆಂದರೆ 'ಆದದ್ದಾಗಲಿ, ನಶ್ವರವಾದ ಈ ಜೀವನದ ಬಗ್ಗೆ ಹೆದರಿಕೆ ಯಾಕೆ ?' ಎಂಬ ವೈರಾಗ್ಯಭಾವವಲ್ಲ ; ಧೈರ್ಯವೆಂದರೆ 'ಇನೇನಪ್ಪಾ ಗತಿ ? ಈ ಸಂಕಷ್ಟಗಳಿಂದ ಹೇಗಾದರೂ ಮಾಡಿ ಪಾರಾಗಲೇಬೇಕು' ಎಂದು ಅರ್ಧ ಭಯದಿಂದಲೂ ಅರ್ಧ ಪಲಾಯನದ ಆಸೆಯಿಂದಲೂ ಕೂಡಿದ ಪ್ರಯತ್ನವಲ್ಲ. ನಿಜವಾದ ಧೈರ್ಯವೆಂದರೆ ಚಿತ್ತಚಾಂಚಲ್ಯವಿಲ್ಲದೆ ಬಂದುದನ್ನು ಎದುರಿಸಿ ಕಷ್ಟಗಳೊಡನೆ ಹೋರಾಡಿ ವಿಜಯಿಯಾಗಿಯೇ ತೃಪ್ತಿ ಹೊಂದುವ ಮನೋಭಾವ. ಇಂಥ ಧೈರ್ಯ ಮನುಷ್ಯನಿಗೆ ಬೇಕು... ಮಕ್ಕಳ ಲಗ್ನವಾಗದಿದ್ದರೇನು ? ಹೊಲಮನೆ ಬೀಳು ಬಿದ್ದರೇನು ? ಹೆಂಡತಿ ಸತ್ತರೇನು ? ರಾಜಕೀಯ ಪಾರ್ಟಿಗಳು ಸತ್ಯಾನಾಶವಾದರೇನು ? ಜಪಾನೀಯರು ಮತ್ತೆ ದುಪ್ಪಟ್ಟು ಶಕ್ತಿಯಿಂದ ಆಕ್ರಮಣ ಮಾಡಿದರೇನು ? ಮೂರನೆಯ ಮಹಾಯುದ್ಧ ಈಗಲೇ ಸುರುವಾದರೇನು ? ಈಗಿಂದೀಗ ಬಾಂಬು ದಾಳಿಯಾಗಿ ನಮ್ಮ ಇಡಿಯ ಕ್ಯಾಂಪೇ ಸುಟ್ಟು ಹೋದರೇನು ? ಮನುಷ್ಯನಿಗೆ ಮುಖ್ಯವಾಗಿ ಧೈರ್ಯವಿರಬೇಕು, ಜೋಗಿಂದರಾಭಾಯೀ, ಧೈರ್ಯವಿರಬೇಕು...."

– ಪೆರುಮಾಳ್‌ನ ಮಾತುಗಳಲ್ಲಿ ಅಡಕವಾಗಿದ್ದ ಅಮೂಲ್ಯ ಸತ್ಯವನ್ನು ನನ್ನಷ್ಟಕ್ಕೆ ನಾನೇ ಮೆಲುಕು ಹಾಕುತ್ತ ನಾನು ಆ ದಿನವಿಡೀ ಕಳೆದೆ.

* * *

ಆ ರಾತ್ರಿ ಎಂದಿನಂತೆ ಪೆರುಮಾಳನ ಸಾಹಸ ಕತೆಗಳನ್ನು ಕೇಳುವ ಕಾರ್ಯಕ್ರಮ ನಡೆಯಲಿಲ್ಲ. ಯಾಕೆಂದರೆ ಮೊದಲನೆಯದಾಗಿ ಎಲ್ಲರಿಗೂ ಊರಿಗೆ ಹೋಗುವ ಆತುರ, ಮನೆಯ ನೆನಪುಗಳು. ಎರಡನೆಯದಾಗಿ ಆ ಸಾಯಂಕಾಲ ಹೊರಗೆಲ್ಲೋ ಹೋಗಿದ್ದ ಪೆರುಮಾಳ್ ರಾತ್ರಿ ಹತ್ತು ಗಂಟೆಯಾದರೂ ತಂಬೂಕ್ಕೆ ಬಂದಿರಲಿಲ್ಲ. ಸಂಜೆ ಎಂಟರೊಳಗಾಗಿಯೇ ಎಲ್ಲರೂ ಊಟ ಮಾಡಬೇಕಿತ್ತಾದರೂ ಆತ ಊಟಕ್ಕೂ ಬಂದಿರಲಿಲ್ಲ. ಎಲ್ಲರೂ ಎಂಟೂವರೆಯೊಳಗಾಗಿ ತಂಬೂ ಸೇರಬೇಕಿತ್ತಾದರೂ ಆತನ

ಪತ್ತೆಯೇ ಇರಲಿಲ್ಲ. ಯಾರಿಗೂ ಆ ಬಗ್ಗೆ ಕುತೂಹಲವಾಗಲೀ, ಆಸ್ಥೆಯಾಗಲೀ ಇರಲಿಲ್ಲವಾದರೂ ನಾನು ಮಾತ್ರ ಮಲಗುವ ಮುನ್ನ ತುಸು ಹೊತ್ತು ಆ ಬಗ್ಗೆ ಚಿಂತಿಸಿದೆ. ನಂತರ ನಿದ್ರೆ ಹೋದೆ.

ಮಧ್ಯರಾತ್ರಿ ಸುಮಾರು ಒಂದು ಗಂಟೆ ಮೀರಿರಬೇಕು. ಒಮ್ಮೆಲೆ ಎಂಥದೋ ಕಿವಿಗಡಚಿಕ್ಕುವ ಸಪ್ಪಳವಾಯಿತು. ಒಡನೆಯೇ 'ಹಾಯ್, ಮರ್‌ಗಯಾ' ಅಂತಲೂ ಒಂದೆರಡು ಚೀತ್ಕಾರಗಳು ಕೇಳಿಸಿದವು. ಒಮ್ಮೆಲೆ ಎಲ್ಲೆಡೆ ಗಡಿಬಿಡಿ-ಗದ್ದಲ ಸುರುವಾದವು. ಅಂದು ಸಂಜೆ ನಾನು ಎಂದಿಗಿಂತ ತುಸು ಹೆಚ್ಚಾಗಿಯೆ ರಮ್ ಕುಡಿದಿದ್ದೆನಾದ್ದರಿಂದಲೋ ಏನೋ, ನನ್ನ ನಿದ್ರೆಯು ಮಂಪರು ಒಮ್ಮೆಲೆ ಹರಿಯಲಿಲ್ಲ. ಒಂದೆರಡು ನಿಮಿಷ ಬಿಟ್ಟು ಹಾಸಿಗೆಯ ಮೇಲೆ ಎದ್ದುಕೂತು ಕಣ್ಣು ತಿಕ್ಕಿಕೊಂಡು ನೋಡಿದೆ. ತಂಬೂವಿನಲ್ಲಿ ಬಾಗಿಲ ಬಲ ಮೂಲೆಯಲ್ಲಿ ಹಲವಾರು ಜನ ಸೇರಿದ್ದರು. ಪೆರುಮಾಳನ ಹೊರಸಿನ ಸುತ್ತವೆ ? ಹೌದು. ನನ್ನ ನಿದ್ರೆ ಹಾರಿಹೋಯಿತು. ಟಣ್ಣನೆ ಜಿಗಿದುಹೋಗಿ ನೆರೆದವರನ್ನು ಸರಿಸಿ ಇಣುಕಿ ನೋಡಿದೆ : ಪೆರುಮಾಳನ ದೇಹ ವಿಚ್ಛಿನ್ನವಾಗಿ ಬಿದ್ದಿತ್ತು. 'ಕ್ಯಾಹುವಾ ?' ಅಂತ ಕೇಳುತ್ತ ಕ್ಯಾಂಪ್ ಸುಬೇದಾರ ಹಾಗೂ ಇನ್ನಿತರ ಅಧಿಕಾರಿಗಳು ಒಳಬಂದರು. ನಡೆದದ್ದೇನೆಂದು ಸ್ಪಷ್ಟವಿತ್ತು. ರಾತ್ರಿ ಯಾವ ಹೊತ್ತಿಗೋ ತಂಬೂ ಪ್ರವೇಶಿಸಿದ ಪೆರುಮಾಳ್ ತನ್ನ ಹಾಸಿಗೆಯ ಮೇಲೆ ಕೂತು ಹ್ಯಾಂಡ್ ಗ್ರೆನೇಡೊಂದನ್ನು ಎದೆಗೆ ಮೊಣಕಾಲು-ಕೈಗಳಿಂದ ಒತ್ತಿ ಸಿಡಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ. ಆತನ ಎದೆಯಿಂದ ಬೆನ್ನವರೆಗೆ ಇಷ್ಟಗಲ ಆರುಪಾರು ತೂತಾಗಿತ್ತು, ಮೊಣಕಾಲು-ತೊಡೆ ಹಾರಿ ಅಷ್ಟು ದೂರ ಬಿದ್ದಿದ್ದವು. ಸುತ್ತಲೂ ರಕ್ತ ಮಡುಗಟ್ಟಿತ್ತು. ಆತನ ಹೊರಸಿನ ಸನಿಹದಲ್ಲೇ ಮಲಗಿದ್ದ ಇನ್ನಿಬ್ಬರಿಗೆ ಗ್ರೆನೇಡಿನ ಚೂರುಗಳು ಮೈಯಲ್ಲಿ ಸೇರಿ ಗಾಯಗಳಾಗಿ ಅವರು ನೋವಿನಿಂದ ನರಳುತ್ತಿದ್ದರು. ಅವರನ್ನು ಕೂಡಲೇ ಮೆಡಿಕಲ್ ಸೆಂಟರ್‌ಗೆ ಸಾಗಿಸಲಾಯಿತು. ಪೆರುಮಾಳನ ದೇಹವನ್ನು ಮೂಟೆಗಟ್ಟಿ ಹೊರಗೊಯ್ಯಲಾಯಿತು.

* * *

ಪದ್ಧತಿಯಂತೆ ಆತನ ರೆಜಿಮೆಂಟಿಗೆ ಸಂದೇಶ ಕಳಿಸಲಾಗಿ ಮರುದಿನ ಕೂಡಲೆ ಆತನ ಕಿಟ್ ಇನ್‌ವೆಂಟ್ರಿಗಾಗಿ ಆಫೀಸರುಗಳು ಬಂದರು. ಪೆರುಮಾಳ್‌ನ ಹತ್ತಿರವಿದ್ದ ಒಂದೇ ಒಂದು ಕಿಟ್‌ಬ್ಯಾಗನ್ನು ತೆರೆದು ನೋಡಲು ಅದರಲ್ಲಿ ಇನ್ನೂ ಮೂರು ಹ್ಯಾಂಡ್‌ಗ್ರೆನೇಡುಗಳಿದ್ದವು. ಅಷ್ಟಲ್ಲದೆ ಆತನ ಸಾವಿನ ಕಾರಣದ ಬಗ್ಗೆ ಸೂಚನೆ ಕೊಡುವಂಥ ವಿಶೇಷವೇನೂ ಅಲ್ಲಿ ಕಾಣಲಿಲ್ಲ. ಆದರೆ ಹಿಂದಿನ ದಿನ ಆತನ ರೆಜಿಮೆಂಟಿನಿಂದ ಕ್ಯಾಂಪಿಗೆ ಹೊಸದಾಗಿ ಬಂದು ಸೇರಿದ, ಮದ್ರಾಸಿನವನೇ ಆದ. ಆತನ

ಸಂಗಾತಿಯೊಬ್ಬ ಒಂದು ವಿಷಯ ಹೇಳಿದ. ಪೆರುಮಾಳನ ಹೆಸರಿಗೆ ಆತನ ರೆಜಿಮೆಂಟಿನ ಆಡ್ರೆಸಿಗೆ ನಾಲ್ಕಾರು ದಿನಗಳ ಹಿಂದೆ ಮನೆಯಿಂದ ಪತ್ರವೊಂದು ಬಂದಿತ್ತು. ಅದನ್ನು ತಂದು ಆತ ಹಿಂದಿನ ದಿನವೇ ಪೆರುಮಾಳನಿಗೆ ಕೊಟ್ಟಿದ್ದ. ಅದರಲ್ಲೇನಾದರೂ... ಹೌದು, ಆತನ ಹೇಳಿಕೆಯಂತೆ ಪತ್ರ ಕಿಟ್‌ಬ್ಯಾಗಿನ ಮೇಲ್ಭಾಗದಲ್ಲೇ ಇತ್ತು. ಅದರಲ್ಲಿನ ವಿಷಯ : ಕಳೆದ ಒಂದೂವರೆ ವರ್ಷಗಳಿಂದಲೂ ಕುಟುಂಬದ ಪರಿಚಿತನೊಬ್ಬನೊಡನೆ ಅನೈತಿಕ ಸಂಬಂಧ ಹೊಂದಿದ್ದ ಪೆರುಮಾಳನ ಹೆಂಡತಿ ಈತ ಊರಿಗೆ ಬರುವ ವಿಷಯ ತಿಳಿದೊಡನೆ ಮಕ್ಕಳನ್ನು ಬಿಟ್ಟು ಪ್ರಿಯಕರನೊಂದಿಗೆ ಓಡಿಹೋಗಿಬಿಟ್ಟಿದ್ದಳು. ಹಾಗೆಂದು ಪೆರುಮಾಳನಿಗೆ ಆತನ ತಮ್ಮ ಬರೆದು ತಿಳಿಸಿದ್ದ. ಬಹುಶಃ ಪೆರುಮಾಳನಿಗೆ ಹೆಂಡತಿಯ ಈ ವ್ಯವಹಾರದ ವಾಸನೆ ಕೆಲದಿನಗಳ ಹಿಂದೆಯೇ ಬಡಿದಿರಬಹುದು. ಅಂತೆಯೇ ಆಕೆಯ ಪ್ರಿಯಕರನನ್ನು ಬಹುಶಃ ಮುಗಿಸಿಬಿಡಲೆಂದೋ ಏನೋ ಆತ ಹ್ಯಾಂಡ್‌ಗ್ರೆನೇಡುಗಳನ್ನು ಅದು ಹೇಗೋ ಕಣ್ತಪ್ಪಿಸಿ ಕಿಟ್ ಬ್ಯಾಗಿನಲ್ಲಿರಿಸಿಕೊಂಡಿರಬಹುದು. ಆದರೆ ಹೆಂಡತಿಯೇ ಓಡಿಹೋಗಿರುವಳೆಂದ ಮೇಲೆ ಯಾವುದರಲ್ಲೂ ಏನೂ ಅರ್ಥವಿಲ್ಲವೆನಿಸಿ, ನಾಚಿಕೆ-ನೋವು-ಅವಮಾನದಿಂದ ಆತ ತಾನೇ ಸಾವನ್ನಪ್ಪಿರಬಹುದು... ಬಹುದು...

– ಯೋಚನೆ-ತರ್ಕಗಳಿಂದ ನನ್ನ ತಲೆ ಸಿಡಿಯುತ್ತಿತ್ತು. 'ಮನುಷ್ಯನಿಗೆ ಧೈರ್ಯವಿರಬೇಕು... ನಿಜವಾದ ಧೈರ್ಯವೆಂದರೆ ಹೋರಾಟದಲ್ಲಿ ವಿಜಯಿಯಾಗಿಯೇ ತೃಪ್ತಿ ಹೊಂದುವ ಮನೋಭಾವ. ಇಂತಹ ಧೈರ್ಯವಿಲ್ಲದ ಮನುಷ್ಯನ ಬಾಳು...' ಪೆರುಮಾಳನ ಗಡಸು ಗಂಭೀರ ಧ್ವನಿ, ಧೈರ್ಯದ ಬಗೆಗಿನ ಆತನ ಹಲವಾರು ವ್ಯಾಖ್ಯೆಗಳು, ಆತನ ಕೊನೆ-ಮೊದಲಿಲ್ಲದ ಸಾಹಸ ಕತೆಗಳು– ಈ ಎಲ್ಲವನ್ನೂ ಆ ನಾಲ್ಕು ಸಾಲಿನ ಪತ್ರ ಅಣಕಿಸುತ್ತಿತ್ತು... ಮನುಷ್ಯ ಜೀವನದ ಈ ಅಗಾಧ ವ್ಯಂಗ್ಯದ ಬಗೆಗೆ ವಿಭ್ರಮ ಪಡುತ್ತಲೆ ಮರುದಿನ ನಾನು ಕಲಕತ್ತೆಯ ಹಡಗನ್ನೇರಿದೆ.

(೧೯೮೩)

❖ ❖ ❖

# ಕಿರುಕಾದಂಬರಿಗಳು

೧. ಗಂಡಸರು

೨. ಶೋಷಣೆ, ಬಂಡಾಯ ಇತ್ಯಾದಿ....

# ಗಂಡಸರು

## ೧

ಸಂಜೆ ಎಂದಿನಂತೆ ಶಾಲೆಯಿಂದ ಬಂದು ಕೈಕಾಲು ಮುಖ ತೊಳಕೊಂಡು ತಿಂಡಿ ತಿಂದು ಕುಣಿತದ ನಡಿಗೆಯಲ್ಲಿ ಆಕೆ ಅಟ್ಟದ ಮೇಲಿನ ತನ್ನ ರೂಮಿಗೆ ಬರುತ್ತಿದ್ದಾಗ, ರೂಮಿನಲ್ಲಿ ಯಾರೋ ಪುಸ್ತಕಗಳನ್ನು ಕಿತ್ತಾಡುತ್ತಿದ್ದ ಸದ್ದು ಕೇಳಿಸಿ ಆಕೆಗೆ ವಿಪರೀತ ಸಿಟ್ಟು ಬಂತು. ಗೋಪೀನೇ ಇರಬೇಕು. ಎಷ್ಟು ಸಲ ಹೇಳಿಲ್ಲ ಅವನಿಗೆ ತನ್ನ ಕಪಾಟಿನಲ್ಲಿನ ಪುಸ್ತಕ ಮುಟ್ಟಬೇಡ, ನಿನಗೆ ಸ್ಟ್ಯಾಂಪ್ ಅಥವಾ ಪುಸ್ತಕದ ಹಾಳೆಯಲ್ಲಿಟ್ಟ ನವಿಲುಗರಿ ಬೇಕಾಗಿದ್ದರೆ ನನ್ನನ್ನು ಕೇಳು, ಕೊಡುತ್ತೇನೆ ಅಂತ ? ಇವತ್ತು ಚೆನ್ನಾಗಿ ಎರಡೇಟು ಹಾಕಿಯೇ ಬಿಡಬೇಕು. ಹೋಗಿ ಅಮ್ಮನಿಗೆ ಹೇಳಲಿ ಬೇಕಾದರೆ. ಅಮ್ಮನೇನೂ ನನಗೆ ಬೈಯುವುದಿಲ್ಲ.

ಹಾಗೆಂದುಕೊಳ್ಳುತ್ತಾ ಆಕೆ ಸದ್ದಾಗದಂತೆ ರೂಮು ಪ್ರವೇಶಿಸಿ ಅಲ್ಲೇ ಇದ್ದ ರೂಲು ಕಟ್ಟಿಗೆ ತೆಗೆದುಕೊಂಡು ಮೆಲ್ಲನೆ ಹೆಜ್ಜೆಯಿಡುತ್ತ ಹೋಗಿ ಕಪಾಟಿನ ಬಾಗಿಲ ಹಿಂದೆ ಅರೆಮರೆಯಾಗಿ ಕೂತಿದ್ದ ನೀಲಿ ಶರ್ಟಿನ ಬೆನ್ನಮೇಲೆ ರಪ್ ಎಂದು ಬಾರಿಸಿಬಿಡಲು ಕೈ ಎತ್ತುತ್ತಿರುವಂತೆಯೇ– ಸರ್ರನೆ ಹೊರಳಿ ನೋಡಿ ರೂಲುಕಟ್ಟಿಗೆಯೊಂದಿಗೆ ಅವಳ ಕೈಯನ್ನೂ ಬಿಗಿಯಾಗಿ ಹಿಡಿದುಕೊಂಡು ಎದ್ದು ನಿಂತ ಶಂಕರ.

“ಓಹ್ ನೀನs ? ನೀ ಯಾಕ ನನ್ನ ಕಪಾಟು ತಗದೀ ? ನೀ ಯಾವಾಗ ಬಂದಿ ಇಲ್ಲೆ ಕಳ್ಳನ್ಹಾಂಗ ? ನಾ ಗೋಪಿ ಅಂತ ತಿಳಿದಿದ್ದೆ.” –ಕೈ ಬಿಡಿಸಿಕೊಳ್ಳಲು ಪ್ರಯತ್ನಿಸುತ್ತ ಆಕೆ ಅಂದಳು, ಗೋಪಿ ಅಲ್ಲವಲ್ಲ ಸದ್ಯ, ಸಾಮಾನಿಗೇನೂ ಧಕ್ಕೆಯಿಲ್ಲ, ಅಂತ ಸಮಾಧಾನದೊಂದಿಗೆ. ಅವಳ ಕೈ ಬಿಡದೆಯೇ ಬಾಗಿ ಅವಳ ಕಣ್ಣುಗಳನ್ನೇ ನೋಡುತ್ತ ನಗುತ್ತ ಅಂದ ಶಂಕರ, “ಕಳ್ಳ ಯಾಕ ? ನಾಯೇನ ಹೊರಗಿನಾಂವೇನು ? ಕಳ್ಳತನ ಮಾಡೂವಂಥಾ ಕಿಮ್ಮತ್ತಿನ ಸಾಮಾನು ಬ್ಯಾರೇ ಅವs ಅಂಥಾಂಗಾತು ನಿನ್ನ ಹತ್ತರ.”

“ಕೈಬಿಡು, ನೀ ಹೊರಗಿನಂವಾ ಅರೇ ಇರ್ಲಿ, ಒಳಗಿನಂವಾ ಅರೇ ಇರ್ಲಿ, ನನ್ನ ಕಪಾಟು– ನನ್ನ ಸಾಮಾನು ಮುಟ್ಟಬ್ಯಾಡ ನೋಡು.” ಅಸಮಾಧಾನದಿಂದ

ಹೇಳುತ್ತಿದ್ದಂತೆ ಆತನ ಇನ್ನೊಂದು ಕೈಯು ಕಡೆ ಆಕೆಯ ಗಮನ ಹೋಗಿ ಒಮ್ಮೆಲೆ ಕಿರಿಚುವ ಧ್ವನಿಯಲ್ಲಿ ಕೇಳಿದಳು– "ಏನದು ? ಏನ ತಗೊಂಡೀ ? ತೋರಿಸು."

"ಹಿಂಗ್ಯಾಕ ಚೀರತೀ ಶಾಂತಿ ? ನಾ ಬಂದಾಗ ನೀ ಒಳಗಿದ್ದಿ ಅಂತ ನಿನ್ನ ಕರೀಲಿಲ್ಲ. ಊರಿಂದ ಅಕ್ಕ ಬಂದಾಳ. ಓದ್ಲಿಕ್ಕೆ ಏನರೆ ಕನ್ನಡ ಕಾದಂಬರಿ ಕೊಡು ಅಂದಳು. ನೀ ಇಟ್ಟಿರ್ತೀಯಲಾ ಅಂಥವೆಲ್ಲಾ ಕಚಡಾ. ಅದಕ್ಕ ನಿನ್ನ ಕಪಾಟಿನ್ಯಾಗಿನಿಂದ ತಗೊಂಡ್ರಾತು ಅಂತ ಬಂದೆ. ಹಂಗs ನಿನ್ನ ಆರುತಿಂಗಳ ಪರೀಕ್ಷಾದ್ದು ಸಾಯನ್ಸ್ ಪೇಪರು ಸಿಕ್ತು. ನೋಡಿಕೋತ ಕೂತೆ. ಅಷ್ಟರಾಗ ನೀ ನನ್ನ ಕಟಿಗೀ ತಗೊಂಡು ಹೊಡೀಲಿಕ್ಕೇ ಬಂದಿ."

"ಕೊಡೂ ನನ್ನ ಪೇಪರು– ಕೊಡು, ಕೊಡು, ಕೊಡು" –ಶಾಂತಿಯ ದನಿಯಲ್ಲಿ ಅಳು ಇಣುಕಿತು.

ಅವಳ ಕೈಬಿಟ್ಟು ಪೇಪರನ್ನು ಕೊಟ್ಟು ಒಂದು ಗಳಿಗೆ ಅವಳನ್ನೇ ನೋಡಿ ಶಂಕರ ಅಂದ, "ಶಾಂತಿ, ನೀ ಇಷ್ಟ ಹುಶಾರ ಇದ್ದೀ ಅಂತ ನನಗ ಗೊತ್ತs ಇದ್ದಿದ್ದಿಲ್ಲ ನೋಡು. ಎಷ್ಟ ಛೆಂದ ಬರದೀಯ ಪೇಪರು. ಅದಕ್ಕ ನಿನಗ ನೂರಕ್ಕ ತೊಂಬತ್ತೆರಡು ಮಾರ್ಕ್ಸ್ ಕೊಟ್ಟಾರ ನಿಮ್ಮ ಮಾಸ್ತರು. ನಾ ಆಗಿದ್ರ ನೂರಕ್ಕ ನೂರು ಕೊಡ್ತಿದ್ದೆ."

ಗಡಿಬಿಡಿಯಿಂದ ಕಪಾಟಿನ ಬಾಗಿಲು ಭದ್ರಪಡಿಸುತ್ತ ಆಕೆ ಅಂದಳು, "ಹೋಗ್ಹೋಗು, ನಿನ್ನ ಮಾರ್ಕ್ಸ್ ಯಾರಿಗೆ ಬೇಕು ? ನಿಂದು ನನಗ ಏನೂ ಬ್ಯಾಡ."

"ಬ್ಯಾಡ ? ಆದರ ಶಾಂತೀ, ನಾ ನಿಂದು ಏನಾರೆ ಕೇಳಿದ್ರ ? ಕೊಡ್ತೀಯೇನು ?"

"ಏನರೆ ಅಂದ್ರ ? ಏನು ?" –ಅವಳಿಗೆ ಅಚ್ಚರಿ. ಇವನಿಗೂ ತನ್ನ ಸ್ಟ್ಯಾಂಪುಗಳ, ನವಿಲುಗರಿಗಳ ಸಂಗ್ರಹದ ಮೇಲೆ ಕಣ್ಣೋ ಏನೋ,

"ಏನರೆ ಅಂದ್ರ ಏನೋ. ಕೊಡ್ತೀ ಇಲ್ಲೋ ಹೇಳು ಮೊದಲು" –ಆತನ ಕಣ್ಣುಗಳಲ್ಲಿ ತುಂಟ ನಗು.

"ನೀ ಕೇಳಲಾ ಮೊದಲು" –ಹಟದಿಂದ ಅಂದಳು ಆಕೆ. ಮೊದಲೇ ಹ್ಞೂ ಅಂದು ಆಮೇಲೆ ಪೇಚಾಡುವ ಪೆದ್ದಿ ತಾನಾಗಬಾರದಲ್ಲ.

"ಕೇಳ್ತೀನಿ. ಆದರೆ ಈಗಲ್ಲ. ನಾ ದಿಲ್ಲೀಗೆ ಹೋದಮ್ಯಾಲ ಪತ್ರಾ ಬರೀತೀನಿ. ಪತ್ರದಾಗ ಕೇಳ್ತೀನಿ. ಕೊಡ್ತೀಯೋ ಇಲ್ಲೋ ನೋಡೋಣ."

"ನೀ ಊರಿಗೆ ಹೋಗ್ತೀಯಾ ? ಸೂಟಿ ಮುಗೀತೇನು ನಿಂದು ?" –ಆಕೆಗೆ ಬೇಸರ. ಸಂಜೆ ಇನ್ನು ಯಾರೊಂದಿಗೆ ಬ್ಯಾಡ್ಮಿಂಟನ್ ಆಡುವುದು ?

"ಮುಗೀತದ ಇನ್ನೊಂದ ಎರಡದಿನಕ್ಕ. ನಾ ನಾಳೇ ಹೋಗ್ಬೇಕು. ನಾ ಹೇಳಿದ್ದು ಮರೀಬ್ಯಾಡ ಹ್ಞಾ ಮತ್ತ. ನಾ ಪತ್ರಾ ಬರೀಲಿ ಹೌದಲ್ಲೋ ನಿನಗ ?"

"ಛಿ, ಗಂಡು ಹುಡುಗ್ರು ಪತ್ರಾ ಬರದರ ಸೇರೂದಿಲ್ಲ ನನಗ."

ಆತ ನಕ್ಕ. "ಇಂಗ್ಲೀಶಿನ್ಯಾಗ ಬರೀತೀನಿ ಮತ್ತ. ನಿನಗ ಬರ್‍ತದ ಇಲ್ಲೋ ಇಂಗ್ಲೀಶು ?"

ಕೆಣಕಿದಂತಾಯಿತು ಆಕೆಗೆ. "ಬರಲಾರದ ಏನು ? ನಮಗ ಲೆಟರ್ ರೈಟಿಂಗ್ ಕಲಿಸ್ಯಾರಲಾ ಪಾಟೀಲ್ ಸರ್."

ಆತ ಮತ್ತೆ ನಕ್ಕ.

ಆಕೆಗೆ ಒಮ್ಮೆಲೆ ಅನಿಸಿತು– ಶಂಕರ ನಕ್ಕಾಗ ಎಷ್ಟು ಚೆನ್ನಾಗಿ ಕಾಣುತ್ತಾನೆ. ಅವನ ಮೂಗು-ಹಣೆ ಎಲ್ಲ ಇತಿಹಾಸ ಪುಸ್ತಕದಲ್ಲಿನ ವಿಕ್ರಮಾದಿತ್ಯ ರಾಜನ ಹಾಗೆ. ಇವನ ಕೈಯಲ್ಲೊಂದು ಖಡ್ಗ ಕೊಟ್ಟರೆ ಇವನು ಎಲ್ಲರನ್ನೂ ಸೋಲಿಸಬಹುದು– ದೇಶದ ಎಲ್ಲ ವೈರಿಗಳನ್ನೂ. ಇವನನ್ನೇಕೆ ಇಂಡಿಯಾದ ರಾಜನನ್ನಾಗಿ ಮಾಡಬಾರದು ?

–ಶಂಕರನ ತಲೆಯ ಮೇಲೊಂದು ಕಿರೀಟವಿಟ್ಟ ದೃಶ್ಯ ನೆನಸಿದಾಗ ಆಕೆಗೆ ಫಕ್ಕನೆ ನಗು ಬಂತು.

* * *

"ಪೋಸ್ಟಮನ್, ನನಗ ಪತ್ರ ಅದ ಏನ್ರೀ ?"

"ಇಲ್ಲ ತಂಗೀ, ಹಿಂಗ್ಯಾಕ ದಿನಾ ಕೇಳ್ತಿ ? ಪತ್ರ ಬಂದರ ನಾ ಇಟಗೊಂಡು ಕೂಡ್ತೀನೇನು ?"

ಶಾಂತಿಗೆ ಅವನ ಮೇಲೆ ತುಂಬ ಸಿಟ್ಟು ಬಂತು. ಪತ್ರ ಬಂದೀತು ಅಂತ ದಾರಿ ಕಾಯುತ್ತ ಕೂತು ಮೊದಲನೆಯ ಪೀರಿಯಡ್ ಸಹ ತಪ್ಪಿಹೋಯಿತು. ತಡವಾಗಿ ಹೋದರೆ ಮಾಸ್ತರು ಬೈಯುವುದಿಲ್ಲವೇ ?

ಶಂಕರ ಸುಳ್ಳೇ ಹೇಳಿದನೆ ಹಾಗಾದರೆ ? ಹೋಗಿ ಎಂಟು ದಿನವಾಯಿತು. ಇನ್ನೂ ಪತ್ರ ಬರೆದಿಲ್ಲ. ತನಗೆ ಎಂದೂ ಯಾರೂ ಪತ್ರ ಬರೆದಿಲ್ಲ. ಅದಕ್ಕೇ ಪತ್ರದ ಬಗ್ಗೆ ಇಷ್ಟು ಕುತೂಹಲವೇನೋ. ಅಥವಾ ಶಂಕರ ಏನೋ ಕೇಳುತ್ತೇನೆ ಅಂದಿದ್ದನಲ್ಲ, ಏನಿರಬಹುದು ಅಂತಲೋ– ಇನ್ನೇನಿದ್ದೀತು ? ಛೆ- ಇಲ್ಲ, ಸುಮ್ಮನೇ ಹೀಗೇ ಗೆಸ್ ಮಾಡುತ್ತ ವೇಳೆ ಕಳೆಯುವುದು ಸರಿಯಲ್ಲ. ಓದಬೇಕು. ಪ್ರಿಲಿಮಿನರಿ ಪರೀಕ್ಷೆ ಬಂತು. ರ್‍ಯಾಂಕ್ ತಪ್ಪಿಹೋದರೆ ? ಏನಾದರೂ ರ್‍ಯಾಂಕ್ ಬಿಡಬಾರದು. ಶಂಕರನ ಅಮ್ಮ ಹೇಳುತ್ತಿರುತ್ತಾಳಲ್ಲ– "ನಮ್ಮ ಶಂಕರ ಹೈಸ್ಕೂಲಿನಿಂದ ಕಾಲೇಜಿನ ತನಕಾ ಒಂದು ಸಲಾನೂ ಫಸ್ಟ್‌ಕ್ಲಾಸ್ ಬಿಡ್ಲಿಲ್ಲ. ಅದಕ್ಕs ದಿಲ್ಲೀಯಂಥಾ ದೊಡ್ಡ ಊರಾಗಿನ ದೊಡ್ಡ ಕಾಲೇಜಿನ್ಯಾಗ ತಗೊಂಡ್ರು ಅವನ್ನ."

ಶಂಕರನ ಅಮ್ಮನಿಗೆ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಅನ್ನಲಿಕ್ಕೆ

ಬರುವುದಿಲ್ಲ. ಅದು ದೊಡ್ಡ ಕಾಲೇಜು ಅವಳ ಪ್ರಕಾರ. ಆದರೂ ಜಂಭವೆಷ್ಟು ಆ ಮುದುಕಿಗೆ. ಬರೇ ಸೊಕ್ಕಿನ ಮಾತೇ. ಶಂಕರ ಮಾತ್ರ ಹಾಗಲ್ಲ....

ತಾನೂ ರ್‍ಯಾಂಕ್ ಪಡೆದು ಟೆಕ್ನಾಲಜಿ ಕಲಿಯಬೇಕು. ಆಗ ಶಂಕರನ ಅಮ್ಮನ ಸೊಕ್ಕು ಮುರಿಯುತ್ತದೆ.

ಛೀ, ಈ ಶಂಕರ ಇಷ್ಟು ಕೆಟ್ಟವನು ಅಂತ ಗೊತ್ತಿದ್ದರೆ....

* * *

ಶನಿವಾರ ಬೆಳಗಿನ ಸ್ಕೂಲು ಮುಗಿಸಿ ಮನೆಗೆ ಬಂದಾಗ ಪಡಸಾಲೆಯಲ್ಲಿನ ದೊಡ್ಡ ಟೇಬಲ್ ಮೇಲೆ ಆಕೆಗೆ ತನ್ನ ಹೆಸರು ಹೊತ್ತ ನೀಲಿಬಣ್ಣದ ಕವರೊಂದು ಕಾಣಿಸಿತು. ಪಟಕ್ಕನೆ ಅದರ ಮೇಲೆ ಹಾರಿ ಹಿಡಿದುಕೊಂಡು ಆಕೆ ಒಂದೇ ಓಟಕ್ಕೆ ಮಹಡಿ ಏರಿದಳು, 'ಏ ಶಾಂತೀ, ಚಹಾ ತಗೊಂಡು ಹೋಗs' ಅಂತ ಅಮ್ಮ ಕೂಗುತ್ತಿದ್ದರೂ ಲಕ್ಷಿಸದೇ.

ರೂಮಿನ ಬಾಗಿಲು ಹಾಕಿಕೊಂಡು ಪುಸ್ತಕಗಳನ್ನು ಬೀಸಾಡಿ ಮಂಚದ ಮೇಲೆ ಕುಳಿತು ಕವ್ಹರನ್ನು ಬಿಡಿಸಲೆತ್ನಿಸಿದಾಗ ಆಕೆಗೆ ತನ್ನ ಕೈಗಳು ನಡುಗುತ್ತಿದ್ದುದು ಗಮನಕ್ಕೆ ಬಂದಿತು. ಯಾಕೋ ಏನೋ ಆಗಬಾರದ್ದು ಆಗುತ್ತಿದೆ ಅನಿಸಿತು. ಯಾಕಾದರೂ ತಾನು ಈ ಶಂಕರನಿಗೆ ಪತ್ರ ಬರೆಯಲು ಬೇಡವೇ ಬೇಡ ಅಂತ ತಾಕೀತು ಮಾಡಲಿಲ್ಲವೋ ಅನಿಸಿತು. ಪತ್ರ ಒಡೆಯುವ ಮುನ್ನ ಆಕೆ ದೇವರಿಗೆ ಕೈಮುಗಿದಳು. ಇದರಲ್ಲಿ 'ಕೆಟ್ಟದ್ದು' ಏನೂ ಇರದಿರಲಿ ಅಂತ ಪ್ರಾರ್ಥಿಸಿದಳು. ನಂತರ ಧೈರ್ಯವಾಗಿ ಕವ್ಹರು ಹರಿದು ಒಳಗಿನ ಕಾಗದ ತೆರೆದಳು. ಓ, ಶಂಕರನ ಕೈಬರಹ ಎಷ್ಟು ದುಂಡಗಿದೆ ! ಅವನು 's' ಬರೆಯುವ ರೀತಿ ಎಷ್ಟು ಮೋಹಕ ! ಇಷ್ಟು ಛೆಂದ ಇಂಗ್ಲೀಶ್ ಅಕ್ಷರ ಬಹುಶಃ ಶೇಕ್ಸ್‌ಪಿಯರ್‌ನೂ ಬರೆಯುತ್ತಿರಲಾರ.

" My dearest Shanthi " ..........ಅಂತ ಸುರುವಾಗಿತ್ತು ಪತ್ರ. 'Dearest' ? Dear, Dearer ! Dearest ! ಅಂದರೆ ಎಲ್ಲರಿಗಿಂತ, ಎಲ್ಲಕ್ಕಿಂತ ಹೆಚ್ಚು ಪ್ರೀತಿಯ ! ಎಲಾ ಇವನ....

ಏನೇನೋ ಬರೆದಿದ್ದಾನೆ ಶಂಕರ. ಆದರೆ ಓದಿ ಖುಶಿಯಾಗುತ್ತಿದೆ– 'ನಿನ್ನ ಕಣ್ಣು ಎಷ್ಟು ಚೆಂದ. ನನ್ನ ಕನಸಿನ ತುಂಬ ಬರೀ ನಿನ್ನ ನಗುಮುಖ. ನನಗೆ ನಿದ್ರೆಯೋ ಬರುವುದಿಲ್ಲ. ಅಭ್ಯಾಸ ಮಾಡಲು ಆಗುವುದಿಲ್ಲ. ಬರೇ ನಿನ್ನ ನೆನಪು. ನಾನು ನಿನ್ನನ್ನು ಪ್ರೀತಿಸುತ್ತೇನೆ ಶಾಂತೀ' –

ಆಕೆ ಒಮ್ಮೆಲೇ ಬೆಚ್ಚಿಬಿದ್ದಳು. 'I love you Shanthi' –ಓ, ಎಂಥ ಶಕ್ತಿಯಿದೆ ಈ ಇಂಗ್ಲೀಶು ಭಾಷೆಯಲ್ಲಿ. ಕನ್ನಡದ 'ಪ್ರೀತಿ'ಗಿಂತ ಈ Love ಎಷ್ಟು

ಬೇರೆಯಾಗಿದೆ, ಭಯಂಕರವಾಗಿದೆ....

ಆಕೆ ಪತ್ರವನ್ನು ಇನ್ನೊಮ್ಮೆ ಓದಿದಳು. ಮತ್ತೊಮ್ಮೆ. ಮೂರನೆಯ ಸಲ ಓದುವುದರಲ್ಲಿ ಅವಳಿಗೆ ಅದು ಬಾಯಿಪಾಠವಾಗಿ ಹೋಯಿತು.

ಆ ರಾತ್ರಿ ಮಲಗುವ ಮುನ್ನ ಆಕೆ ತನಗೆ ತಾನೇ ಹಲವು ಬಾರಿ ಹೇಳಿಕೊಂಡಳು, 'I love you Shanthi', ಎಷ್ಟು ಚೆಂದದ ವಾಕ್ಯ !

* * *

'ಗಂಡು ಹುಡುಗರಿಗೆ ಸಣ್ಣ ವಯಸ್ಸಿನಲ್ಲಿ ಬುದ್ಧಿಯಿರುವುದಿಲ್ಲ. ಹೀಗೇ ಮಂಗನಾಟ ಆಡುತ್ತಾರೆ. ನಂತರ ಆಟದಂತೆಯೇ ಎಲ್ಲವನ್ನೂ ಲೈಟಾಗಿ ತೆಗೆದುಕೊಂಡು ಲೈಟಾಗಿಯೇ ಮುಗಿಸಿಬಿಡುತ್ತಾರೆ. ಅವರಿಗೆ ಸೀರಿಯಸ್‌ನೆಸ್ ಇರುವುದಿಲ್ಲ. ಸಿನ್ಸಿಯಾರಿಟಿ ಇರುವುದಿಲ್ಲ. ಆದ್ದರಿಂದ ಅವರ ಇಂಥ ಆಟಗಳಿಗೆ ಹುಡುಗಿಯರು ಸೊಪ್ಪು ಹಾಕಬಾರದು. ಹಾಕಿದರೆ ಕೊನೆಗೆ ಕೆಟ್ಟ ಹೆಸರು ಬರುವುದು ಹುಡುಗಿಯರಿಗೇ. ನಮ್ಮ ಸಮಾಜವೇ ಹೀಗೆ. ಗಂಡಸರು ಏನು ಮಾಡಿದರೂ ತಪ್ಪಲ್ಲ. ಹೆಂಗಸಿಗೇ ಎಲ್ಲ ರೂಲ್ಸು, ಕಟ್ಟು, ಮಣ್ಣು.'

ಆ ರಾತ್ರಿ ಶಾಂತಿ ಡೈರಿಯಲ್ಲಿ ಬರೆದಳು. ಮರುದಿನ ಮುಂಜಾನೆ ಎದ್ದು ಡೈರಿಯಲ್ಲಿ ಬರೆದುದನ್ನು ಓದಿದಾಗ ಅವಳಿಗೆ ಸಮಾಧಾನವಾಯಿತು. ಮಧ್ಯಾಹ್ನ ಶಾಲೆಗೆ ಹೋಗುವ ಮುನ್ನ ಮತ್ತೊಮ್ಮೆ ಅದನ್ನೇ ಓದಿ ಅವಸರದಲ್ಲಿ ಕೆಳಗೆ ಇನ್ನೆರಡು ಸಾಲು ಸೇರಿಸಿದಳು,

'ನಮ್ಮ ಹಿಂದೂ ಹೆಂಗಸರು ಈ ಅನ್ಯಾಯ ಅತ್ಯಾಚಾರಗಳನ್ನು ಇನ್ನು ಸಹಿಸಬಾರದು, ಅವರಿನ್ನು ಈ ಕಟ್ಟುಪಾಡುಗಳ ವಿರುದ್ಧ ಬಂಡೇಳಬೇಕು. ಸಂಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕು. ಸ್ವಾತಂತ್ರ್ಯ ಸಿಗುವವರೆಗೂ ಹೋರಾಟ ನಿಲ್ಲಿಸಬಾರದು.'

* * *

ಮುಂದಿನ ಎಂಟು ದಿನಗಳಲ್ಲಿ ಶಂಕರನಿಂದ ಅದೇ ಧಾಟಿಯ ಮತ್ತೆರಡು ಪತ್ರ ಬಂದಾಗ ಮಾತ್ರ ಶಾಂತಿಗೆ ನಿಜವಾಗಿ ಚಿಂತೆಯಾಯಿತು. ಮನೆಯಲ್ಲಿ ಅಕಸ್ಮಾತ್ ಅಣ್ಣನಾಗಲೀ, ಅಪ್ಪನಾಗಲೀ ಇಂಥ ಪತ್ರ ನೋಡಿದರೆ ? ಹೀಗೆಲ್ಲ ಬರೆಯಬೇಡವೆಂದು ಶಂಕರನಿಗೆ ತಿಳಿಸುವುದು ಹೇಗೆ ? ತನ್ನ ಕೈಬರಹ ಅವನಿಗೆ ಸಿಕ್ಕಿಬಿಟ್ಟು ಅವನೇನಾದರೂ ಅದರ ದುರುಪಯೋಗ ಪಡೆಯಲೆತ್ನಿಸಿದರೆ ? ಹುಡುಗಿಯಾದವಳಿಗೆ ಮರ್ಯಾದೆಗಿಂತ ಹೆಚ್ಚಿನದು ಏನಿದೆ ? ಒಮ್ಮೆ ಹೋದ ಮಾನ, ಕೆಟ್ಟ ಹೆಸರು, ಏನಾದರೂ ರಿಪೇರಿಯಾಗುವುದಿಲ್ಲ – ಅಂತ ಅಮ್ಮ ಹೇಳುತ್ತಾಳಲ್ಲ. ತನ್ನ ಮಾನ ಹೋಗಲು,

ಕೆಟ್ಟ ಹೆಸರು ಬರಲು, ತಾನು ಆಸ್ಪದ ಕೊಡಲಾರೆ. ಪರಕೀಯು ಗಂಡು ಹುಡುಗನೊಬ್ಬನಿಗೆ, ಅವನಪ್ಪ ತನ್ನ ಅಪ್ಪನ ಹಳೆಯ ಗೆಳೆಯನಾದರೇನಂತೆ, ಗಂಡಸು ಯಾವಾಗಲೂ ಪರಕೀಯನೇ– ಪತ್ರ ಬರೆಯುವುದು ಶಕ್ಯವಿಲ್ಲದ ಮಾತು.

ಆದರೆ ಹೀಗೆ ಮಾಡಬಹುದು ; ಪತ್ರ ಬರೆದು ಕೆಳಗೆ ತನ್ನ ಹೆಸರು ಬರೆಯದೇ ಬರೇ 'S' ಅಂತ ಬರೆಯಬಹುದು. ಅಂದರೆ ಅಕಸ್ಮಾತ್ ಶಂಕರ ಅದನ್ನು ಯಾರಿಗಾದರೂ ತೋರಿಸಿದರೂ ಅದು ತಾನು ಬರೆದದ್ದು ಅಲ್ಲವೇ ಅಲ್ಲ ಅಂತ ಹೇಳಿ ತಾನೂ ಪಾರಾಗಬಹುದು. ಸರಿ. ಇದೇ ಸರಿ. ಬರೆದೇ ಬಿಡಬೇಕು ಅವನಿಗೆ ಇನ್ನು ಮೇಲೆ ಹೀಗೆಲ್ಲ ಬರೆಯಬೇಡ, ಹೀಗೆಲ್ಲ ನನ್ನ ಬಗ್ಗೆ ತಿಳಿದುಕೊಳ್ಳಬೇಡ, ಅಂತ.

ಇಂಗ್ಲೀಶ್‌ನಲ್ಲೇ ಬರೆಯಬೇಕು. ತಾನೀಗ ಸಾಕಷ್ಟು ಇಂಗ್ಲೀಶ್ ಕಲಿತಿದ್ದೇನೆ. ಇನ್ನೆರಡು ವರ್ಷಕ್ಕೆ ಮ್ಯಾಟ್ರಿಕ್. ತನಗೇನು ಇಂಗ್ಲೀಶ್ ಬರುವುದಿಲ್ಲವೇ ?

ಆ ರವಿವಾರ ಮಧ್ಯಾಹ್ನವೆಲ್ಲ ಕೂತು ವಿಚಾರ ಮಾಡಿ ಪತ್ರ ಬರೆದು, ಹರಿದು ಹಾಕಿ, ಮತ್ತೆ ಬರೆದು, ಫೇರ್ ಕಾಪಿ ತಯಾರಿಸಿ ಒಮ್ಮೆ ಓದಿ ನೋಡಿದಳು.

" Dear Shankar, (ಅವನಿಗೆ 'dearest' ಅಂತ ಬರೆಯುವುದಂತೂ ಸಾಧ್ಯವಿಲ್ಲ. ಅವನು ತನ್ನ ಉಳಿದ ಗೆಳೆಯ ಗೆಳತಿಯರಿಗಿಂತ ತನಗೆ ಹೆಚ್ಚು ಬೇಕಾದವನಾದುದರಿಂದ 'Dearer Shankar' ಅಂತೇನೋ ಬರೆಯಬಹುದಿತ್ತು. ಆದರೂ ಆದಷ್ಟೂ ಸರಳವಾಗಿರುವುದೇ ಒಳ್ಳೆಯದೆಂದು ಬರೀ 'dear' ಸಾಕು ಅಂತ ನಿರ್ಧರಿಸಿಯಾಗಿತ್ತು.)

When you leave Satara, I have already tell you not write me. Still you writing. You write no good things. Love not good for students. We live in society. So we should fear society. Students duty in society is study well. Therefore please do not lift the subject of love now. I have no bad love about you. My love = sister love. I get angry upon you if you write me. Therefore forget me. Forget bad love. Study hard. Pray God every night. He gives sleep to you.

Jai Hind

Yours- "S"

–ಪತ್ರ ಪೋಸ್ಟ್ ಮಾಡಿ ಬಂದ ಆ ರಾತ್ರಿ ಶಾಂತಿಗೆ ಚೆನ್ನಾಗಿ ನಿದ್ರೆ ಬಂತು.

* * *

“ಶಾಂತೀ, ನಿನಗ ನೆನಪದ ಏನು ನೀ ನನಗ ಬರದ ಮೊಟ್ಟ ಮೊದಲನೇ ಪತ್ರ ?” –ಸ್ಟೇಶನ್ ರೋಡಿನ ಗುಂಟ ಸಂಜೆ ತಿರುಗಾಡಿ ಮರಳಿ ಬರುತ್ತಿದ್ದಾಗ ಕೇಳಿದ್ದ ಶಂಕರ.

“ಹ್ಞೂ” ಅನ್ನುತ್ತಿದ್ದಂತೆ ಶಾಂತಿಗೆ ನಗು ಬಂತು.

“ಏನು ನಿನ್ನ ಸ್ಪೆಲಿಂಗು. ಏನು ನಿನ್ನ ಗ್ರ್ಯಾಮರ್.... ರಾಮ ರಾಮ ! ಆದರ ಶಾಂತೀ, ಎರಡೇ ವರ್ಷದಾಗ ನೀ ಭಾಳ ಸುಧಾರಿಸಿದೀ ನೋಡು. ಈಗ ಅಗದೀ ಫಸ್ಟ್‌ಕ್ಲಾಸ್ ಪತ್ರಾ ಬರೀತಿ. ಓದಿಕೋತ ಕೂತರ ನನಗೆ ನಿದ್ದಿ-ನೀರಡಕೀನ ಮರ್ತ ಹೋಗ್ತದ” ಶಂಕರನ ಧ್ವನಿಯಲ್ಲಿ, ಕಣ್ಣಲ್ಲಿ, ಇಡೀ ಮೈಯಲ್ಲಿ ತುಂಟ ನಗು.

“ಎಲ್ಲಾ ಮರ್ತು ಹಂಗs ಕೂತಿ ಅಂದ್ರೆ ಪರೀಕ್ಷಾ ಹ್ಯಾಂಗ ಪಾಸಾಗ್ತೀ ? ಈಸರೆ ನಿಂದು ಫೈನಲ್, ಅದರಾಗ ಢಂ ಅಂದೀ ಅಂದರ ನಿನ್ನ ಮಾತಾಡ್ಸೂದೇ ಇಲ್ಲ ನಾನು. ಫಸ್ಟ್‌ಕ್ಲಾಸ್ ಬರ್ಬೇಕು ನೀನು.”

“ನೀ ನನ್ನನ್ನ ಪ್ರೀತಿ ಮಾಡ್ತೀಯೋ ಏನು ನನ್ನ ಫಸ್ಟ್‌ಕ್ಲಾಸು ಪ್ರೀತಿ ಮಾಡ್ತಿಯೋ ?”

“ನಿನ್ನನ್ನ ಪ್ರೀತಿ ಮಾಡ್ತೀನಿ ಮಾರಾಯಾ, ಅದಕ್ಕs ನೀ ಫಸ್ಟ್‌ಕ್ಲಾಸ್ ಬರಬೇಕೂ ಅಂತೀನಿ.”

“ಶಾಣ್ಯಾಕಿ ಇದ್ದೀ ಹ್ಞಾ ಮಾತಿನ್ಯಾಗ. ಲಗ್ನಾ ಮಾಡಿಕೊಂಡ ಮ್ಯಾಲೆ ನನ್ನ ಬುಟ್ಟೀಯೊಳಗೆ ಇಟಗೊಂಡು ಮಾರಿಕೊಂಡು ಬರ್ತೀ ನೋಡು” –ಹಾಗನ್ನುತ್ತ ಆತ ತನ್ನ ಬಲಗೈಯನ್ನು ಆಕೆಯ ಬೆನ್ನು ಬಳಸಿ ಭುಜದ ಮೇಲಿಡಲು ಯತ್ನಿಸುತ್ತಿರುವಂತೆ ತಟ್ಟನೆ ದೂರ ಸರಿದು ಆಕೆ ಸಿಡುಕಿನಿಂದ ಅಂದಳು.

“ಶಂಕರ, ನಿನಗ ಹಜಾರಬ್ಯಾರೆ ಹೇಳೀನಿ, ನನ್ನ ಮುಟ್ಟೂದು-ಗಿಟ್ಟೂದು ನನಗೆ ಪಸಂದ ಇಲ್ಲಾ ಅಂತ.”

ಕೈ ಹಿಂತೆಗೆದುಕೊಂಡು ನಗುತ್ತ ಆತ ಕೇಳಿದ,

“ಲಗ್ನಾದ ಮ್ಯಾಲೇ ?”

“ಆದಮ್ಯಾಲೂ ಎಷ್ಟೋ ಅಷ್ಟೆ, ಕೈ-ಗೈ ಮುಟ್ಟಿದರ ಹರಕತ್ತಿಲ್ಲ. ಅದಕ್ಕೂ ಹೆಚ್ಚಿನದು ಮಾತ್ರ ನನಗ ಸೇರೋದಿಲ್ಲ. ಛಿ, ಅಸಹ್ಯ. ನೀ ಈ ಕಂಡೀಶನ್‌ಕ ಒಪ್ಪಿದರs ನಿನ್ನ ಲಗ್ನಾಗ್ತೀನಿ ಅಂತನೂ ಹೇಳೀನಿ ನಿನಗ. ನೆನಪದ ಇಲ್ಲೋ ?”

“ನೆನಪದ ಮಾರಾಯಳ. ಆದರ ಈ ಹುಚ್ಚುಚ್ಚಾರ ಕಂಡೀಶನ್ನಿನ ಅರ್ಥರೆ ಏನು ?”

ಆಕೆಯ ಧ್ವನಿ ಒಮ್ಮೆಲೆ ಸೀರಿಯಸ್ಸಾಯಿತು. “ನಿನಗೆ ಇದು ಹುಚ್ಚುಚ್ಚಾರ

ಅನಸ್ತದೇನು ? ಹಂಗಾರ ನೀ ಇನ್ನೂ mature ಆಗಿಲ್ಲ ಅಂಥಾಂಗಾತು. ನೋಡು ಶಂಕರ, ಖರೇ ಪ್ರೀತಿ ಅಂದರ ಮನಸ್ಸಿನ ಪ್ರೀತಿ. ಈ ದೈಹಿಕ ಸಂಬಂಧದಿಂದ ಮನಸ್ಸಿನ ಪ್ರೀತಿ ಹೊಲಸು ಆಗತದ. ನನಗೆ ಅಂಥಾ ಪ್ರೀತಿ ಬ್ಯಾಡ. ನನ್ನ ಖರೇ ಪ್ರೀತಿ ಮಾಡೋವಂಥಾವನ್ನ ನಾ ಲಗ್ನಾಗ್ತೀನಿ. ಗಂಡಸು-ಹೆಂಗಸಿನ ದೈಹಿಕ ಸಂಬಂಧ ನೆನಸಿದರ ಹೇಸಿಗೆ ಬರ್ತದ ನನಗ. ನಾವೇನು ನಾಯಿಗಳs ಹಂದಿಗಳs ? ಮನುಷ್ಯರಾಗಿ ಹುಟ್ಟಿದ್ದಕ್ಕೆ ಪ್ರಾಣಿಗಳಿಗಿಂತ ಬ್ಯಾರೇ ಇರಬೇಕೋ ಬ್ಯಾಡೋ ? ಇದೆಲ್ಲಾ ನಮ್ಮ ಸಮಾಜದಾಗಿನ ಕೆಟ್ಟ ಪದ್ಧತಿ. ಹೆಂಗಸಿನ್ನ ತನ್ನ ಆಳಾಗಿ ಇಟಗೋಳ್ಳಿಕ್ಕೆ ಗಂಡಸು ಹೂಡಿರೋ ಸಂಚು. ನನಗೆ ಇದು ಸೇರೋದಿಲ್ಲ ನೋಡು, ಏನಂತೀ ?''

ಕತ್ತಲಲ್ಲಿ ಶಂಕರ ನಗುತ್ತಿದ್ದುದು ಮಸುಕಾಗಿ ಕಂಡು ಆಕೆ ಒಮ್ಮೆಲೆ ಸಿಟ್ಟಾದಳು. ''ನಗತೀ ಯಾಕ ?''

''ನಾ ಎಲ್ಲೆ ನಗ್ತೀನಿ ?'' ಅನ್ನುತ್ತ ಆತ ಗಟ್ಟಿಯಾಗಿ ನಕ್ಕಾಗ ಆಕೆಗೆ ಅವಮಾನವಾಯಿತು.

''ನೀಯೇನೂ ನಮ್ಮನೀ ತನಕಾ ಕಳಸ್ಲಿಕ್ಕೆ ಬರೋದು ಬ್ಯಾಡ, ನಾಯೆಲ್ಲಾ ಹೋಗ್ತೀನಿ ಒಬ್ಬಾಕೀನೇ'' – ಅಂತ ಆಕೆ ಬಿರಬಿರನೆ ಮುಂದೆ ನಡೆದಳು.

''ಏ ಶಾಂತೀ, ತಡೀಯೇ.... ಸಿಟ್ಟಾಗಬ್ಯಾಡ ಮಾರಾಯಳ, ನಂದು ತಪ್ಪಾತು. ನೀ ಹೇಳಿದ್ದೆಲ್ಲಾ ಅಗದೀ ಕರೆಕ್ಟ್....''

– ಶಂಕರ ಹಿಂದಿನಿಂದ ಕೂಗುತ್ತಲೇ ಇದ್ದ.

* * *

''ಶಂಕರ, ನೀ ಎಷ್ಟೇ ಹೇಳಿದ್ರೂ ನನಗ ನಿಮ್ಮವ್ವನದೇ ಹೆದರಿಕಿ. ಆಕೀಗೆ ಮೊದ್ಲಿನಿಂದ್ಲೂ ನನ್ನ ಕಂಡರ ಆಗೂದಿಲ್ಲ. ಆಕೀಗೆ ನಮ್ದು ವಿಷಯ ಗೊತ್ತಾದರ ಏನಂತಾಳೋ.''

''ಏನೂ ಅನ್ನೂದಿಲ್ಲ ಶಾಂತೀ, ಒಂದ ವ್ಯಾಳ್ಯಾ ಏನರೆ ಅಂದಳು ಅಂತ ತಿಳಕೋ. ಆಕೀನ್ನ ನಾಯೇನು ಕೇಳೂದಿಲ್ಲ. ಶಾಂತೀ, ನಾ ನಿನ್ನ ಭಾಳ-ಭಾಳ ಪ್ರೀತಿ ಮಾಡ್ತೀನಿ. ನಾ ನಿನ್ನ ಲಗ್ನಾ ಆಗ್ಲಿಕ್ಕೆ ಈ ಜಗತ್ತಿನ್ಯಾಗಿನ ಯಾವ ಶಕ್ತೀನೂ ಅಡ್ಡ ಬರೂದಿಲ್ಲ. ನಾ ಎಲ್ಲ face ಮಾಡ್ತೀನಿ ನಿನ್ನ ಸಲುವಾಗಿ.''

– ಅವಳ ಕೈಮೇಲೆ ಕೈಹಾಕಲು ಆತ ಕೈಮುಂದೆ ಮಾಡಿದಾಗ ಒಂದು ಕ್ಷಣ ಹಿಂತೆಗೆದು, ನಂತರ ಕೈನೀಡಿ, ಆತ ತನ್ನ ಕೈ ಹಾಕುತ್ತಿದ್ದಂತೆ ತಟ್ಟನೆ ಆಕೆ ಕೈ ಹಿಂತೆಗೆದುಕೊಂಡಳು.

''ನಾಯೇನ ಅಸ್ಪೃಶ್ಯರವಾ ಏನs ? ಹಿಂಗ್ಯಾಕ ಮೈಲಿಗಿ ಆದವರ್‍ಹಾಂಗ ಮಾಡ್ತೀ ?''

"ಗಂಡಸ್ರುನ್ನೆಲ್ಲಾ ಆದಷ್ಟು ದೂರ ಇಡೂದs ಛಲೋ."

* * *

"ಕಂಗ್ರ್ಯಾಚುಲೇಶನ್ಸ್, ಮಿಸ್ ಕಾಮತ್, ನಿಮ್ಮ ಭಾಷಣ ಅಗದೀ ಎಕ್ಸ್‌ಲಂಟ್ ಇತ್ತು."

– ಕಾಲೇಜಿನ ವಾರ್ಷಿಕ ಚರ್ಚಾಕೂಟದ ಸಮಾರಂಭ ಮುಗಿಸಿಕೊಂಡು, ಗೆಳತಿಯರ ಅಭಿನಂದನೆ ಸ್ವೀಕರಿಸಿ, ಅವರಿಂದ ಬೀಳ್ಕೊಂಡು ಶಾಂತಿ ಒಬ್ಬಳೇ ಮನೆಯ ದಾರಿ ಹಿಡಿದಾಗ ಅವಳ ಹಿಂದಿನಿಂದಲೇ ಅಷ್ಟು ಹೊತ್ತಿನಿಂದಲೂ ನಡಕೊಂಡು ಬಂದಿದ್ದ ಪ್ರೊಫೆಸರ್ ಮಠದ ಹೇಳಿದ – ತುಂಬ ಸ್ಟೈಲಿಶ್ ಆಗಿ.

''ಥ್ಯಾಂಕ್ಯೂ ಸರ್'' ಅಂದಳು ಆಕೆ ಹೆಮ್ಮೆಯಿಂದ. ಅವಳೊಂದಿಗೇ ನಡೆದುಬರುತ್ತ ಆತ ಮುಂದುವರಿಸಿದ, "ನಮ್ಮ ಹಿಂದುಸ್ಥಾನದಾಗ ಹೆಂಗಸರಿಗೆ ಖರೇ ಅರ್ಥದಾಗ ಸ್ವಾತಂತ್ರ್ಯ ಸಿಕ್ಕೈತೇನು ಅನ್ನೂದು ನಾವೆಲ್ಲಾ ಸೀರಿಯಸ್ಲೀ ವಿಚಾರ ಮಾಡಬೇಕಾದಂಥಾ ವಿಷಯ. ಅವರಿಗೂ ವ್ಹೋಟು ಹಾಕೂ ಅಧಿಕಾರ ಐತಿ. ಸಾಲೀ-ಕಾಲೇಜು ಕಲಿಯೂ ಅಧಿಕಾರ ಐತಿ, ನೌಕರೀ ಮಾಡೋ ಅಧಿಕಾರ ಐತಿ, ಖರೇ. ಆದರ ನಮ್ಮ ದೇಶದಾಗಿನ ಗಂಡಸ್ರು ನೀವು ಹೇಳಿಧಾಂಗ ಮನುವಿನ ಮೊಮ್ಮಕ್ಕಳು. ಖರೇ ಅರ್ಥದಾಗ ಹೆಂಗಸಿಗೆ ಸ್ವಾತಂತ್ರ್ಯ ಸಿಗ್ಲಿಕ್ಕೆ, ಈ ಮರಿಮನುಗಳ ದಬ್ಬಾಳಿಕಿಯಿಂದ ಹೆಂಗಸು ಪಾರಾಗ್ಲಿಕ್ಕೆ ಇನ್ನೂ ಎಷ್ಟು ಕಾಲ ಬೇಕೋ. ನೀವು ಹೇಳಿದ ಪಾಯಿಂಟ್ಸ್ ನನಗೆ ಭಾಳ ಪಸಂದಾದ್ವು."

"ಖರೇನs ಸರ್ ? ನಮ್ಮ ದೇಶದಾಗ ಅಗದೀ ಕಡಿಮಿ ಗಂಡಸ್ರಿಗೆ ಈ ಐಡಿಯಾ ಪಸಂದಾಗೋದು."

"ನನಗ ಮಾತ್ರ ನಿಮ್ಮ ಐಡಿಯಾ ಅಗದೀ ಪಸಂದಾತು. ನಮ್ಮ ಹೆಂಗಸ್ರು ನಿಮ್ಹಾಂಗ bold ಆಗ್ಬೇಕು." ಮಠದ್‌ನ ಕಣ್ಣಲ್ಲಿ ಪ್ರಶಂಸೆ ಸ್ಪಷ್ಟವಾಗಿ ಮಿನುಗುತ್ತಿತ್ತು.

* * *

"ಯಾಕ ಶಂಕರ್. ಅಗದೀ ಸೀರಿಯಸ್ಸಾಗಿ ಬಿಟ್ಟೀಯಲಾ ಈ ಸರೆ ? ಧೊಡ್ಡ ನೌಕರೀ ಸಿಕ್ಕಿತು ಅಂತ 'ಗ' ಬಂತೇನು ನಿನಗ ?"

"ಶಾಂತೀ, ನಾ ನಿನಗ ಒಂದೆರಡು ಮಾತು ಹೇಳ್ತೀನಿ, ನೆನಪಿನ್ಯಾಗಿಟಕೋ. ನೀ ಕಾಲೇಜಿನ್ಯಾಗ ಮತ್ತು ಸುಡಗಾಡು ಸಭಾದಾಗ, ಅಲ್ಲೆ-ಇಲ್ಲೆ ಭಾಷಣಾ ಮಾಡೂದು ಇನ್ನ ಬಂದ ಮಾಡು."

"ಯಾಕ ? ಯಾಕ ಶಂಕರ ?" ಅವಳಿಗೆ ಎಲ್ಲಿಲ್ಲದ ಅಚ್ಚರಿ, ಆತಂಕ,

"ಯಾಕಂದರ ಅದೆಲ್ಲಾ ಮರ್ಯಾದಸ್ಥ ಹೆಂಗಸರ ಕೆಲಸಲ್ಲ. ಸ್ತ್ರೀ ಸ್ವಾತಂತ್ರ್ಯ,

ಮಣ್ಣು-ಸುಡುಗಾಡು ಅಂತ ಎಲ್ಲೆ ಬೇಕಾದಲ್ಲೆ ಹೋಗಿ ಬಾಯಿಗೆ ಬಂದದ್ದು ಒದರಿ ಬರೂದು ಇನ್ನ ಬಿಟ್ಟಬಿಡು. ನನಗದೆಲ್ಲಾ ಪಸಂದಿಲ್ಲ."

"ಆದರ ಯಾಕ ಪಸಂದಿಲ್ಲ ನಿನಗ ? ಇದ್ದ ಮಾತು ಇದ್ಧಾಂಗ ಹೇಳೂದ್ರಾಗ ತಪ್ಪೇನದ ?" –ಅವಳಿಗೆ ಅಳುವೇ ಬಂದಿತ್ತು.

"ತಪ್ಪು ? ಅಂಥದೆಲ್ಲಾ ನಮ್ಮವ್ವಗ ಸೇರೂದಿಲ್ಲ."

"ಓ !"

* * *

"ಶಾಂತೀ, ಇದೇನು ನಿನ್ನ ಎಲ್ಲಾ ನೋಟ್‌ಬುಕ್ಕಿನ್ಯಾಗೂ 'ಶ್ರೀ ಶಂಕರ ಪ್ರಸನ್ನ' ಅಂತ ಬರದೀಯಲ್ಲ, ನಿನಗ ಶಿವನವ್ಯಾಲೆ ಇಷ್ಟ ಭಕ್ತಿಯೇನು ?" –ಸಹಪಾಠಿಯೊಬ್ಬಳು ಕೇಳಿದ್ದಳು.

"ಹ್ಞೂ ಮತ್ತ, ಶಿವನೇ ಅಲ್ಲೇನು ಮೂರುಲೋಕದ ಸ್ವಾಮಿ ?"

"ನಿನ್ನ ನೋಟ್‌ಬುಕ್ಕಿನ್ಯಾಗ, ಎಲ್ಲಾ ಟೆಕ್ಸ್ಟ ಬುಕ್ಕಿನ್ಯಾಗ, ನಿನ್ನ ರೂಮಿನ ಗೋಡೇ ವ್ಯಾಲೆ, ಕಪಾಟಿನ ಬಾಗಿಲ ವ್ಯಾಲೆ ಮೂಡಿರೋ ಈ 'ಶಂಕರ' ಮೂರು ಲೋಕದ ಸ್ವಾಮಿನೋ ಅಥವಾ...."

"ನನ್ನ ಸ್ವಾಮಿ ಅನ್ನೊದಂತೂ ಖರೇ. ಮೂರು ಲೋಕದ ಸುದ್ದಿ ನನಗ ಗೊತ್ತಿಲ್ಲ" –ಅಂದು ಶಾಂತಿ ನಕ್ಕಿದ್ದಳು.

* * *

ಮುಂದೊಮ್ಮೆ ಸಂಜೆ ಶಾಂತಿ ಕಾಲೇಜಿನಿಂದ ಮನೆಗೆ ಬಂದು ತನ್ನ ರೂಮಿಗೆ ಹೋಗಲು ಮಹಡಿಯ ಕಡೆ ತಿರುಗಿದಾಗ ಆಕೆಗೆ ವ್ಹೆರಾಂಡಾದಲ್ಲಿ ಕೂತು ಅಪ್ಪ-ಅಮ್ಮ ಏನೋ ಗುಸುಗುಸು ನಡೆಸಿದ್ದು ಕೇಳಿಸಿತು. ನಡುವೆ ತನ್ನ ಹೆಸರು ಕೇಳಿಸಿದ್ದರಿಂದ ಆಕೆ ಅಲ್ಲೇ ಮರೆಗೆ ನಿಂತಳು. "ನನಗ ಗೊತ್ತಿತ್ತು ಆ ಸೂಳೆಮಗಾ ಹಿಂಗ ಕೈ ಕೊಡ್ತಾನಂತ. ನಾ ಮೊದ್ಲs ಹೇಳಿದ್ದೆ ನಿನಗ -ಇದು ಆಗೋ ಮಾತಲ್ಲ ಅಂತ. ನೀ ಕೇಳ್ಳಿಲ್ಲಾ" –ಅಪ್ಪನ ಧ್ವನಿಯಲ್ಲಿ ಸಿಟ್ಟು, ದುಃಖ, ಅಸಹಾಯಕತೆ.

"ಅಲ್ಲ, ನಮ್ಮ ಹುಡುಗಿಗೆ ಏನು ಕಡಿಮೆ ಆಗೇದಂತ ಒಲ್ಲೆ ಅಂದ್ರು ಅವ್ರು ? ನೀವು ಶಂಕರನ್ನs ಕೇಳಬೇಕಾಗಿತ್ತು ಡೈರೆಕ್ಟ್ ಆಗಿ ?" –ಅಮ್ಮನ ಧ್ವನಿಯಲ್ಲಿ ಕಣ್ಣೀರು.

"ಶಂಕರನೂ ಅಲ್ಲೇ ಇದ್ದಾ. ಅವನ ಅಪ್ಪನೂ ಇದ್ದಾ. ನಮ್ದೂ-ನಿಮ್ದೂ ಗೆಳತನಾ ಇರ್ಲಿ. ಈ ಸಂಬಂಧ ಬ್ಯಾಡ, ಅಂದ್ರು. ಹುಡುಗಿ bold ಇದ್ದಾಳಂತ, ಭಾಳ ಕಲತಾಳಂತ, ಏನೋ ಹಿಂಗs ಅರ್ಥ ಇಲ್ಲದ್ದು ಬೊಗಳಿದ್ರು. ಆಕೀನ್ನ ಮಾಡಿಕೊಳ್ಳೋದು ನಮ್ಮ ಯೋಗ್ಯತಾ ಅಲ್ಲ ಅಂದ್ರು. ನಮ್ಮ ದೊಡ್ಡ ಸಂಸಾರ

ತೂಗಿಸಿಕೊಂಡು ಹೋಗೂವಂಥಾ ಸಾದಾ ಹುಡಿಗಿ ಬೇಕು ನಮಗ, ಅಂದ್ರು. ಹಾಳಾಗಿ ಹೋಗ್ಲಿ ಅಂತ ಎದ್ದು ಬಂದೆ."

"ಅಯ್ಯೋ ದೇವರs. ನನ್ನ ಕೂಸಿಗೆ ಪಾಪ, ಇದನ್ನ ಕೇಳಿದ್ರೆ ಶಾಕ್ ಆಗತದಲ್ರೀ.... ಏನರೆ ಮಾಡ್ರೀ...."

–ಶಾಂತಿ ಧಡಧಡ ಮಹಡಿ ಏರಿದಳು. ಕಪಾಟಿನ ಕೀಲಿ ತೆರೆದು ಶಂಕರನ ಪತ್ರಗಳನ್ನಿಟ್ಟಿದ್ದ ಗಂಧದ ಪೆಟ್ಟಿಗೆ ಹೊರಗೆ ತೆಗೆದಳು. ಪತ್ರಗಳನ್ನೆಲ್ಲಾ ಬಿಡಿಸಿ ಒಂದರ ಮೇಲೊಂದು ಇಟ್ಟಳು. ತಾನು ಇತ್ತೀಚೆಗೆ ದಿನಾ ಪೂಜೆ ಮಾಡುತ್ತಿದ್ದ ಶಿವ-ಪಾರ್ವತಿಯ ಕಾಗದದ ಪಟವನ್ನೂ ತೆಗೆದು ಆ ಪತ್ರಗಳ ರಾಶಿಯ ಮೇಲೆ ಇಟ್ಟಳು. ಶಂಕರ ರಜೆಗೆಂದು ಇಲ್ಲಿ ಬಂದಾಗ ದಿನಾ ತಂದು ಕೊಡುತ್ತಿದ್ದ ಕೆಂಪು ಗುಲಾಬಿ ಹೂಗಳನ್ನು ಕೂಡಿಸಿ ಸಂಗಮರವರಿ ಕಲ್ಲಿನ ಚಿಕ್ಕ ಪೆಟ್ಟಿಗೆಯಲ್ಲಿ ಹಾಕಿಟ್ಟಿದ್ದಳು. ಆ ಒಣಗಿದ ಪಕಳೆಗಳನ್ನೆಲ್ಲ ತೆಗೆದು ಆ ಪಟದ ಮೇಲೆ ಹಾಕಿದಳು. ಕಡ್ಡಿ ಕೊರೆದು ಅದಕ್ಕೆ ಬೆಂಕಿ ಇಟ್ಟಳು.

ಉರಿ ಎದ್ದು ನಿಧಾನವಾಗಿ ಎಲ್ಲ ಬೂದಿಯಾಗುವುದನ್ನು ದಿಟ್ಟಿಸಿ ನೋಡುತ್ತಾ ಕೂತಳು.

–ಅಲ್ಲ, ಈ ಅಮ್ಮನಿಗೊಂದು ಹುಚ್ಚು. ತನಗೇಕೆ ಶಾಕ್ ಆಗಬೇಕು ? ಇಷ್ಟೆಲ್ಲ ಮಾತಾಡಿ, ಪತ್ರ ಬರೆದು, ವಚನಕೊಟ್ಟು, ಕೊಚ್ಚಿಕೊಂಡು, ಕೊನೆಗೆ ಹೀಗೆ ಕೈಕೊಡುವ ವಂಚಕನಿಂದ ತಾನು ಪಾರಾದುದು ಒಳ್ಳೆಯದೇ ಆಗಲಿಲ್ಲವೆ ? ತನಗಿಂಥವನು ಗಂಡನಾಗದಿದ್ದುದು ತನ್ನ ಪುಣ್ಯವೇ ಅನ್ನಬೇಕು. ಇವನದೆಂಥ ಪ್ರೀತಿ ? ತನಗೆ ಬೇಕಾದುದು ನಿಜವಾದ ಪ್ರೀತಿ. ಎಲ್ಲ ಪರಿಸ್ಥಿತಿಯಲ್ಲೂ ಒಂದೇ ಸಮನಾಗಿರುವ ಪ್ರೀತಿ. ತನಗಿವನು ಬೇಡ.... ಬೇಡವೇ ಬೇಡ.... ಅಮ್ಮನಿಗೆ ಹೇಳಿಬಿಡುತ್ತೇನೆ ಈಗಲೇ. ಇಂಥ ಅಯೋಗ್ಯನಿಗಾಗಿ ಅಳಬೇಡ ಅಂತ.

–ಇದೇನು, ಈ ಉರಿಯ ಹೊಗೆಯಿಂದ ಕಣ್ಣಲ್ಲಿ ನೀರು ಬರುತ್ತಿದೆಯಲ್ಲ ಹಾಳಾದ್ದು ಅಂದುಕೊಳ್ಳುತ್ತ, ಕಣ್ಣೊರೆಸಿಕೊಳ್ಳುತ್ತ, ಆಕೆ ಎದ್ದು ಕೆಳಗೆ ನಡೆದಳು.

❖ ❖ ❖

# ೨

ಬಾಗಿಲಮೇಲೆ ಟಕ್ ಟಕ್ ಅಂತ ತಟ್ಟಿದ ಶಬ್ದ ಕೇಳಿದಾಗ ಮಾಡುತ್ತಿದ್ದ ಕೆಲಸದಿಂದ ತಲೆಯೆತ್ತದೆಯೆ ಪ್ರೊ. ಮಠದ್ "Yes, come in", ಅಂದ.

ತೂಗಾಡುವ ಬಾಗಿಲನ್ನು ನೂಕಿಕೊಂಡು ಆಕೆ ಅಳುಕುತ್ತ ಒಳಗೆ ಬಂದಳು.

"ಓ, ಮಿಸ್ ಕಾಮತ, ಬರ್ರಿ ಬರ್ರಿ" –ಅಂದ ಆತ ಮುಖದ ತುಂಬ ನಗುತ್ತ.

ಆಕೆ ನಿಂತೇ ಇದ್ದಾಗ, "ಕೂಡ್ರಿ, ಕೂಡ್ರಿ, ಏನು, ಕ್ಲಾಸ್ ಮುಗೀತs ? ಮನೀಗೆ ಹೊಂಟ್ರೇನು ?" ಎಂದ.

ಸಂಕೋಚದಿಂದ ಕುರ್ಚಿಯ ತೀರ ತುದಿಗೆ ಕೂಡುತ್ತ ಆಕೆ ಅಂದಳು, "Sorry, ನಿಮಗ ಡಿಸ್ಟರ್ಬ್ ಮಾಡ್ಲಿಕ್ಹತ್ತೀನೇನೋ. ನೀವೇನೋ ಕೆಲಸಾ ನಡೆಸೀರಿ."

"ಡಿಸ್ಟರ್ಬ್ ಇಲ್ಲಾ ಏನಿಲ್ಲಾ. ನೀವು ಬಂದದ್ದು ಛಲೋ ಆತು, ನಾನು ನಿಮ್ಮನ್ನ ಭೆಟ್ಟಿ ಆಗಾಂವs ಇದ್ದೆ."

ಈ ಮಠದ್‌ನ ಕಣ್ಣುಗಳು ಮೊದಲಿನಿಂದಲೂ ಇಷ್ಟೇ ಹೊಳೆಯುತ್ತಿದ್ದವೇ ಅಥವಾ ಇವತ್ತೇ ಹೀಗೋ ?

"ನನ್ನs ? ಯಾಕ ?" –ಅವಳಿಗೆ ಆಶ್ಚರ್ಯ, ಕುತೂಹಲ.

"ನಾಳಿನ ಸಂಡೇ ಕರ್ನಾಟಕ ಸಂಘದಾಗ ನನ್ನ ಹೊಸಾ ಕಾದಂಬರಿಯ ಬಿಡುಗಡೆ ಸಮಾರಂಭ ಅದ. ಅದಕ್ಕ ನಿಮ್ಮನ್ನು invite ಮಾಡಾಂವ ಇದ್ದೆ."

"ಸರ್, ನೀವು ಕಾದಂಬರಿ ಬರೀತೀರಾ ?" –ಅವಳಿಗೆ ಹೇಳತೀರದ ಆಶ್ಚರ್ಯ, ಕೌತುಕ.

"ನೀವು ನೋಡೇ ಇಲ್ಲೇನು ನನ್ನ ಯಾವ್ದೂ ಕಾದಂಬರಿ ? ಎಂಥಾ ನಿರ್ಭಾಗ್ಯ ನಾನು !" –ಆತ ನಗುತ್ತ ಎರಡು ಪುಸ್ತಕಗಳನ್ನು ಅವಳ ಕಡೆ ಚಾಚಿದ.

ಆಕೆಯ ಕಣ್ಣುಗಳು ಒಮ್ಮೆಲೆ ಹೊಳೆದವು, "ಓ, 'ಕಾ. ಮ.' ಅಂತ ಹೆಸರಿನಿಂದ ಬರೆಯವ್ರು ನೀವೇನಾ ಸರ್ ? ನಾ ಹಂಗಾರ ನಿಮ್ಮ ಎಲ್ಲಾ ಕಾದಂಬರೀ ಓದೀನಿ. 'ಕಾ. ಮ.' ನನ್ನ ಪ್ರೀತಿಯ ಲೇಖಕ. ಸ್ಪೆಶಲೀ ಮಹಿಳಾ ಉದ್ಧಾರದ ಬಗ್ಗೆ ಬರೆದಿರೋ ಕಾದಂಬರಿಗಳಂತೂ ನನಗ ಭಾಳ-ಭಾಳ ಸೇರತಾವ. ಖರೇ ಹೇಳಬೇಕಂದ್ರ, ಹಿಂದೂ ಹೆಣ್ಮಕ್ಕಳ ದುಸ್ಥಿತಿಯ ಸಲುವಾಗಿ ನನಗ ಕಳಕಳಿ ಹುಟ್ಟಿಸಿ ಸೀರಿಯಸ್ಸಾಗಿ ವಿಚಾರ

ಮಾಡ್ಲಿಕ್ಕೆ ಹಚ್ಚಿದ್ದೇ ಈ ಕಾದಂಬರಿಗಳು....''

''ಹೌದೇನು ? ಹಂಗಾರ ನಾ ಬರದದ್ದು ಸಾರ್ಥಕ ಆಧಾಂಗಾತು. I am a strong supporter of the Women's lib. ಆದರ ಈ ಹೆಂಗಸರ ಉದ್ಧಾರದ ಸಲುವಾಗಿ ನನಗ ಇರೋ ಕಳಕಳಿಯಿಂದ ಏನೂ ಹೆಚ್ಚಿನ ಉಪಯೋಗ ಆಗವಲ್ದಲಾ, ನನ್ನ ಪುಸ್ತಕ –ಆರ್ಟಿಕಲ್ಸು-ಭಾಷಣ ಯಾವುದರಿಂದನೂ ವಿಶೇಷ ಜಾಗೃತಿ ಹೆಂಗಸರೊಳಗ ಆಗವಲ್ದಲಾ ಅಂತ ನನಗ ಕೆಟ್ಟನಿಸ್ತಿತ್ತು. ನಿಮ್ಮಂಥಾ ಉತ್ಸಾಹೀ ಆದರ್ಶವಾದೀ ಹುಡುಗಿಗೆ ನನ್ನ ತತ್ತ್ವದ ಬಿಸಿ ತಟ್ಟೇದ ಅಂದರ ಖರೇನ ನನಗ Satisfaction ಅನಸ್ತದ.''

ಆತನ ಹೊಗಳಿಕೆಯಿಂದ ಆಕೆಗೆ ನಾಚಿಕೆ ಅನಿಸಿತು. ತಗ್ಗಿಸಿದ ಆಕೆಯ ಮುಖವನ್ನೇ ದಿಟ್ಟಿಸಿ ನೋಡುತ್ತಿದ್ದಂತೆ ಒಂದು ಕ್ಷಣ ಆತನಿಗೆ ತಾನು ಏನು ಮಾತಾಡುತ್ತಿದ್ದೆ ಅನ್ನುವುದು ಮರೆತಂತಾಯಿತು. ಕೂಡಲೆ ಹೊಸ ವಿಷಯ ಹುಡುಕಿ ಆತ ಕೇಳಿದ, ''ನೀವು ಬಂದದ್ದು-''

''ನಾನು ಬಂದದ್ದು'' –ತಲೆಯೆತ್ತಿ ಆತನನ್ನು ನೋಡುತ್ತಾ ಶಾಂತಿ ಹೇಳಿದಳು, ''ನನಗ ನಾಳೆ ಶನಿವಾರದ ಕ್ಲಾಸ್-ಸೆಮಿನಾರ್‌ನೊಳಗ ಒಂದ ಪೇಪರ್ ಓದಬೇಕಾಗೇದ ರೋಮ್ಯಾಂಟಿಕ್ ಪೀರಿಯಡ್‌ನ ಕವಿಗಳ ಬಗ್ಗೆ. ನಮ್ಮ ಇಂಗ್ಲಿಶ್ ಪ್ರೊಫೆಸರ್ ಕಡೆ ಹೋಗಿದ್ದೆ ಕೆಲವು ಡಿಫಿಕಲ್ಟೀಜ್ ಕೇಳ್ಲಿಕ್ಕೆ. ಅವ್ರು explain ಮಾಡಿದ್ರು. ಆ ಮ್ಯಾಲೆ ಇನ್ನೂ ಡೀಟೇಲ್ಸ್ ಬೇಕಾಗಿದ್ರೆ ನಿಮ್ಮ ಕಡೆ ಹೋಗಿ ಕೇಳು, ಅಂದ್ರು. ಇಂಗ್ಲಿಶ್ ಲಿಟರೇಚರ್ ನಿಮ್ಮ ಸಬ್ಜೆಕ್ಟ್ ಅಲ್ಲದಿದ್ರೂ ನೀವು ಭಾಳ ಓದಿಕೊಂಡೀರಿ, ನನಗ ಬೇಕಾದ ಹೆಲ್ಪ್ ಮಾಡೇ ಮಾಡ್ತೀರಿ, ಅಂದ್ರು. ನಿಮಗ ತ್ರಾಸಾಗತದೇನೋ-''

''ನೋ, ನೋ. It is a pleasure, ಎಲ್ಲಿ ನೋಡೋಣ, ಏನದು ಡಿಫಿಕಲ್ಟಿ''

''ಕೀಟ್ಸ್‌ನ ಫಿಲೊಸಫಿ-''

''ಓಹೋ, ಕೀಟ್ಸ್ ನನ್ನ ಪ್ರೀತಿಯ ಕವಿ.''

''ಹೌದs ಸರ್ ? ನನಗೂ....''

* * *

''ಸರ್, ಇವತ್ತಿನ ಫಂಕ್ಶನ್‌ದ ಅಧ್ಯಕ್ಷರಾಗಿದ್ದರಲಾ, ಅವ್ರು ನಿಮ್ಮ ಕಾದಂಬರಿಗಳ ಬಗ್ಗೆ ಮಾತಾಡೋವಾಗ ನಿಮಗೆ ಹಿಂದೂ ಹೆಣ್ಣುಮಕ್ಕಳ ಉದ್ಧಾರದ ಸಲುವಾಗಿ ಇರೋ ಅನುಕಂಪ ಅಪ್ರೀಸಿಯೇಟ್ ಮಾಡಿ, ಕಡೀಕೆ ಮಾತ್ರ ಇದು ತೀರಾ Ideailistic attitude, ಇವ್ರು ಹೇಳೂವಂಥಾ ಸ್ವಾತಂತ್ರ್ಯ ಅಂದರ ಅದು ಸ್ವೇಚ್ಛಾ-ಸ್ವೈರಾಚಾರ ಆದೀತು- ಅಂತ ಅಂದ್ರು. ನನಗ ಭಾಳ ಸಿಟ್ಟು ಬಂದ್ಬಿಡ್ತು''

– ಸಮಾರಂಭದ ನಂತರ ಕತ್ತಲಾಯಿತೆಂದು ತನ್ನನ್ನು ಕಳಿಸಲು ತನ್ನೊಂದಿಗೆ ಬರುತ್ತಿದ್ದ ಪ್ರೊ. ಮಠದ್‌ಗೆ ಶಾಂತಿ ಹೇಳಿದಳು.

ಆತ ನಿರ್ಲಿಪ್ತನಂತೆ ನಕ್ಕ. "ನಿಮಗs ಗೊತ್ತದsಲಾ, ವಿಚಾರ ಸ್ವಾತಂತ್ರ್ಯ, ನೈತಿಕ ಸ್ವಾತಂತ್ರ್ಯ ಇವನ್ನ ಹೆಂಗಸು ಪಡಕೊಳ್ಳೋದಂದ್ರ ಅದು ನಮ್ಮ ಸಮಾಜದಾಗಿನ ಗಂಡಸ್ರಿಗೆ ಸಹನ ಆಗೂದಿಲ್ಲ. ಅದಕ್ಕ ಅವ್ರು ಸ್ವೇಚ್ಛಾ ಅಂತಾರ. ಹಿಂದೂ ಗಂಡಸರು ಲಕ್ಷೋಪಲಕ್ಷ ವರ್ಷದಿಂದ ಹೆಂಗಸರ ಮುಗ್ಧತನದ, ದೈಹಿಕ ದೌರ್ಬಲ್ಯದ, ಸರಳತನದ, ದುರುಪಯೋಗ ತಗೋಳತಾ ಬಂದಾರ. ಅವರನ್ನ ಬರೇ instrumental ಆಗಿ ನೋಡತಾ ಬಂದಾರ. ಹೆಂಗಸು ಅಂದರ ನಮ್ಮ ಗಂಡಸ್ರಿಗೆ ಬರೇ ಆಟದ ವಸ್ತು. ಈ ಆಟಕ್ಕ ಯಾರರೆ ವಿರುದ್ಧ ಮಾತಾಡಿದರ ಗಂಡಸಿನ ಕಣ್ಣು ಕೆಂಪಗಾಗ್ತಾವ. ಅಧ್ಯಕ್ಷರಿಗೆ ಸಿಟ್ಟು ಬಂದದ್ದು ಅದಕ್ಕs."

"ಸರ್, ನೀವು ಖರೇನs ಎಲ್ಲಾ ಗಂಡಸ್ರಿಗಿಂತ ಎಷ್ಟ ಬ್ಯಾರೇ ಇದ್ದೀರಿ ! ಹೆಂಗಸ್ರಿಗೆ ಆಗ್ತಿರೋ ಅನ್ಯಾಯದ ಸಲುವಾಗಿ ಎಷ್ಟ ಕಳಕಳಿ ಅದs ನಿಮಗ !" – ಶಾಂತಿಯ ಧ್ವನಿಯಲ್ಲಿ ಮುಕ್ತಪ್ರಶಂಸೆ.

"ಹೌದು, ನೀವು ಈ ಹೊಸಾ ಕಾದಂಬರಿ ಓದಿರಬೇಕಲ್ಲ ? ಇದನ್ನಂತೂ ನಾ ಸ್ಪೆಶಲೀ ಹೆಂಗಸರಿಗೆ ಗಂಡಸಿನಿಂದ ಆಗೋ ನೂರು ತರದ ಮೋಸಗಳ ಬಗ್ಗೆ ಬರದೀನಿ. ತಮ್ಮನ್ನ ಆಟಿಗೆಯ ಸಾಮಾನು ಅಂತ ಟ್ರೀಟ್ ಮಾಡೋದರ ವಿರುದ್ಧ ಹೆಂಗಸರು ಸಿಡಿದೇಳಬೇಕು ಅನ್ನೋದೇ ನನ್ನ ಉದ್ದೇಶ" – ಪ್ರೊ. ಮಠದ್‌ನ ಮಾತಿನಲ್ಲಿ ಯಾವಾಗಲೂ ಆವೇಶ. ಇವತ್ತಂತೂ ಅದರಲ್ಲಿ ಘೋಷಣೆಯ ಶಕ್ತಿ ಸೇರಿದಂತಿತ್ತು.

ಆತನ ಮಾತು, ಆತನ ಕಾದಂಬರಿಗಳ ವಿಷಯ, ದಾರಿಯಲ್ಲಿ ಉದ್ದಕ್ಕೂ ಆತ ತನ್ನಿಂದ ಒಂದು ಫೂಟು ಅಂತರದಲ್ಲೇ ನಡೆದು ಬರುತ್ತಿದ್ದ ಸೌಜನ್ಯ, ಶಾಂತಿಯನ್ನು ಒಮ್ಮೆಲೆ ಮುಗ್ಧಳನ್ನಾಗಿ ಮಾಡಿದುವು.

* * *

"ಗೊತ್ತು-ಗುರಿ ಇಲ್ಲದ ಅಲೆಮಾರಿ ಬಾಳಾಗಿತ್ತು ನನ್ನದು ಇಷ್ಟು ದಿನ, ನೂರು ಆದರ್ಶಗಳನ್ನು ಕಟ್ಟಿಕೊಂಡು ಆಯುಷ್ಯದುದ್ದಕ್ಕೂ ಏಕಾಕಿಯಾಗಿ ಹೋರಾಡುತ್ತ ಬಂದಿರುವೆ ನಾನು. ಗುರಿ ತಲುಪಬೇಕೆನ್ನುವ ಛಲ, ಏನು ಬಂದರೂ ಎದುರಿಸಿಯೇನೆಂಬ ಧೈರ್ಯ, ಹಿಡಿದ ತತ್ವಗಳನ್ನು ಎಂದಿಗೂ ಬಿಡಲಾರೆನೆಂಬ ವಿಶ್ವಾಸ, ಯಾರಿಗೂ-ಯಾತಕ್ಕೂ ಎಂದಿಗೂ ಅಂಜಲಾರದ ಕೆಚ್ಚು ನನಗೆ ಮೊದಲೂ ಇತ್ತು, ಈಗಲೂ ಇದೆ, ಎಂದಿಗೂ ಇರುತ್ತದೆ. ಆದರೆ ನನಗೆ ಏನು ಇರಲಿಲ್ಲ, ಯಾವುದರ ಕೊರತೆಯಿತ್ತು, ಅನ್ನುವುದು ನಿಮ್ಮನ್ನು ಕಂಡ ಕ್ಷಣ ನನಗೆ ತಿಳಿಯಿತು.

ನನ್ನ ಬರವಣಿಗೆ, ನನ್ನ ಆದರ್ಶ, ನನ್ನ ತತ್ತ್ವಗಳು, ನನ್ನ ಇಡೀ ಜೀವನ- ಎಲ್ಲದರ ಕೇಂದ್ರ ಬಿಂದು ನೀವು. ನೀವಿಲ್ಲದೆ ಈ ಯಾವುದಕ್ಕೂ ಏನೂ ಅರ್ಥವಿಲ್ಲ. ಹೇಳಿ- ನೀವು ನನಗೆ ಬೆಳಕಾಗುತ್ತೀರಾ ? ಗಾಳಿಯಾಗುತ್ತೀರಾ ? ಅರ್ಥವಾಗುತ್ತೀರಾ ?

–ನೀವು ಇಲ್ಲವೆಂದರೆ ನಾನು ಮತ್ತೆ ಕಾಡು ಸುತ್ತುವೆ, ಗುಡ್ಡ ಏರುವೆ, ಹೊಳೆ ಈಜುವೆ, ಬೆಂಕಿಯಲ್ಲಿ ಹಾರುವೆ, ಬೇಯುವೆ, ಉಗಿಯಾಗುವೆ, ನೀರಾಗುವೆ, ಹರಿಯುವೆ, ಕತ್ತಲಲ್ಲಿ ಕಣ್ಣುಕಣ್ಣು ಬಿಡುವೆ, ಹೀಗೇ.... ಸಾಗುವೆ.

–ನನಗೆ ಗೊತ್ತಿದೆ, ನಿಮ್ಮ ಎದೆಯಲ್ಲಿ ಯಾವುದೋ ವೇದನೆಯ ಹಿಮಾಲಯ ಅಡಗಿದೆ. ನಿಮ್ಮ ಕಣ್ಣುಗಳಲ್ಲಿ ಆ ವೇದನೆ ಸದಾ ಮಿನುಗುತ್ತದೆ. ನಿಮ್ಮ ದುಃಖವನ್ನೆಲ್ಲ ನನಗೆ ಕೊಡಿ. ಎರಡೂ ಕೈ ನೀಡಿ ಅದನ್ನು ಅಪ್ಪಿಕೊಳ್ಳುವೆ. ಪ್ರತಿಯಾಗಿ ನನಗೆ ನಿಮ್ಮದೊಂದು ಕಿರುನಗೆ ಸಾಕು. ನಿಮ್ಮದೊಂದು ಕಣ್ಣಮಿಂಚು ಸಾಕು. ನಾನು ರಾಕ್ಷಸನಲ್ಲ. ನನಗೆ ಹೂವನ್ನು ಹೊಸಕಿ ಹಾಕುವ ಬಯಕೆಯಿಲ್ಲ. ನಾನು ಬಾಯಾರಿದವನು. ನನಗೆ ನಿಮ್ಮ ಒಲವಿನಮೃತ ಮಾತ್ರ ಸಾಕು.

–ನನಗೆನಿಸುತ್ತದೆ, ನಾನು ಇಷ್ಟು ದಿನ ನಿಮ್ಮನ್ನೇ ಹುಡುಕುತ್ತಿದ್ದೆ. ನಿಮ್ಮನ್ನು ಕಂಡ ಕ್ಷಣ ನನ್ನ ಶೋಧನೆ ಮುಗಿಯಿತೆಂದು ನನಗೆ ಗೊತ್ತಾಗಿ ಹೋಯಿತು. ನಾನು ಇಷ್ಟು ವರ್ಷ ತ್ರಸ್ತನಾಗಿ, ಹುಚ್ಚನಾಗಿ, ಹಪಾಪಿಯಾಗಿ ಅರಸುತ್ತಲಿದ್ದ ಬೆಳಕು ನಿಮ್ಮ ಕಣ್ಣುಗಳಲ್ಲಿ ನನಗೆ ಕಾಣಿಸಿತು...."

–ನೋಟ್‌ಬುಕ್‌ನಲ್ಲಿರಿಸಿ ಕೊಟ್ಟಿದ್ದ ದೊಡ್ಡದಾದ ಆ ನಿವೇದನಾಪತ್ರವನ್ನು ಓದುತ್ತಿದ್ದಂತೆ ಶಾಂತಿಗೆ ಪ್ರಾಮಾಣಿಕವಾಗಿ ಅನಿಸಿತು. ಈ ಪ್ರೊ. ಮಠದ ಕಾದಂಬರಿ ಬಿಟ್ಟು ಕವಿತೆ ಬರೆದಿದ್ದರೆ ಎಷ್ಟು ಚೆನ್ನಿತ್ತು....

ಎಷ್ಟು ಚೆಂದದ ಪತ್ರ ! ಎಷ್ಟು ಪ್ರಾಮಾಣಿಕವಾಗಿ, ಗಂಭೀರವಾಗಿ, ಮುಗ್ಧವಾಗಿ, ಸುಂದರವಾಗಿ ರೋಮ್ಯಾಂಟಿಕ್ ಆಗಿ, ಆದರೂ ಮನಸ್ಸು ತಟ್ಟುವಂತೆ....

* * *

"ಶಾಂತಿ, ನನ್ನ ಹಾಗೆಯೇ ನೀನೂ ಬೆಳಕನ್ನು ಹುಡುಕುತ್ತಿದ್ದೆಯೆಂದು, ಅದು ನಿನಗೆ ನನ್ನ ಕಣ್ಣುಗಳಲ್ಲಿ ಕಾಣಿಸಿತೆಂದು, ತಿಳಿದು ನನಗೆ ಏನೆನಿಸಿತು ಗೊತ್ತೇ ? ನಿನ್ನನ್ನು ಎತ್ತಿಕೊಂಡು ಬೀದಿಗಳ ತುಂಬಾ ಕುಣಿದಾಡಬೇಕು ಅನಿಸಿತು. ನಾನು ನಿಜವಾಗಿಯೂ ಹಾಗೆ ಮಾಡುವವನೇ. ನನಗೆ ಯಾರದೂ ಅಂಜಿಕೆಯಿಲ್ಲ.

–ನಿನ್ನಾಣೆ ಶಾಂತಿ, ನನಗೆ ನಿನ್ನ ಕೆರಿಯರ್‌ನ್ನಾಗಲೀ ಜೀವನವನ್ನಾಗಲೀ ಕಲಂಕಿತಗೊಳಿಸುವ ಮನಸ್ಸಿಲ್ಲ. ನೀನು ಇದೇ ಅರಳುತ್ತಿರುವ ಹೂವಿನ ಹಾಗೆ. ನಾನು ನಿನ್ನನ್ನು ಪ್ರೀತಿಸುತ್ತಿದ್ದೇನೆ. ಇದರರ್ಥ ನಾನು ನಿನ್ನನ್ನು possess

ಮಾಡಬೇಕೆನ್ನುತ್ತೇನೆ ಎಂದಲ್ಲ. ನೀನು ಬೇಕಾದವರನ್ನು ಮದುವೆಯಾಗು. ಬೇಕಾದಲ್ಲಿ ಹೋಗು. ಬೇಕಾದ್ದನ್ನು ಮಾಡು. ನಾನು ಹೀಗೆಯೇ ನಿನ್ನನ್ನು ಪ್ರೀತಿಸುತ್ತ ಇರುತ್ತೇನೆ. ಮದುವೆ ಅಂದರೆ ಬರಿಯ ಅರ್ಥವಿಲ್ಲದೊಂದು ಬಂಧನ. ಪ್ರೀತಿಗೂ ಅದಕ್ಕೂ ಸಂಬಂಧವಿಲ್ಲ. ಇದಕ್ಕೆ ನನ್ನ ಮದುವೆಯೇ ಸಾಕ್ಷಿ. ನನ್ನ ಹೆಂಡತಿಯೊಂದಿಗೆ ಎಷ್ಟೋ ವರ್ಷಗಳಿಂದ ನಾನು ಕೂಡಿ ಬಾಳುತ್ತಿದ್ದರೂ ನನಗೆಂದೂ ಅವಳನ್ನು ಪ್ರೀತಿಸುವ ಅವಶ್ಯಕತೆ ತೋರಿಲ್ಲ. ನಿನ್ನ ಬಗೆಗೆ ನನಗನಿಸುತ್ತಿರುವುದು ಇದೇನೋ ಬೇರೆಯೇ ಅಭೂತಪೂರ್ವ ಅವರ್ಣನೀಯ ಅಸಾಧ್ಯ ಭಾವನೆ. ನಾನು ಹೇಗೆ ಹೇಳಲಿ ?- ಹಾ, ನಾಳೆ ಸಂಜೆ ಆರು ಗಂಟೆಗೆ ಲೈಬ್ರೆರಿಯಲ್ಲಿ ನನ್ನನ್ನು ಕಾಣುತ್ತೀಯಾ ?

ನಿನ್ನ ಕಾ. ಮ.''

* * *

''ಯಾಕ ಶಾಂತಿ, ಈ ಕೆರೀ ದಂಡೀಮ್ಯಾಲೆ ನಾವು ಬಂದು ಕೂತು ಈಗ ಅರ್ಧಾ ತಾಸಾತು, ಇನ್ನೂ ನನ್ನ ಕಡೇ ನೋಡವಲ್ಲಿ ?'' ಮಠದ್.

'ನಿಜ ಹೇಳಬೇಕೆಂದರೆ ನನಗೆ ಹೆದರಿಕೆಯಾಗುತ್ತಿದೆ ನಿನ್ನ ಬಗ್ಗೆ, ನನ್ನ ಬಗ್ಗೆ, ಈ ಪ್ರಕರಣದ ಬಗ್ಗೆ. ಇದು ತಪ್ಪು ಅನಿಸುತ್ತಿದೆ. ನನ್ನ ಕಾಲ ಕೆಳಗಿನ ನೆಲವೇ ನೀರಾಗಿ ನನ್ನನ್ನು ಕೊಚ್ಚಿಕೊಂಡು ಹೊರಟ ಹಾಗೆ ಅನ್ನಿಸುತ್ತಿದೆ–' ಎಂದೆಲ್ಲ ಚೀರಿ ಹೇಳಬೇಕೆನಿಸಿತು ಶಾಂತಿಗೆ. ಆದರೆ ಆಕೆ ಏನೂ ಹೇಳದೆ ಮತ್ತಷ್ಟು ತಲೆ ತಗ್ಗಿಸಿದಳು.

''ಶಾಂತಿ !'' –ಆಕೆ ಪ್ರತಿಭಟಿಸುವ ಮೊದಲೇ ಆತನ ಕೈ ಅವಳನ್ನು ಬಿಗಿಯಾಗಿ ಬಳಸಿತು. ಅವಳ ಮುಖದ ಸಮೀಪ ಬಾಗಿ ತೀರ ಪಿಸುದನಿಯಲ್ಲಿ ಆತನೆಂದ, ''ಶಾಂತಿ, ನಿನ್ನ ಎದೀಮ್ಯಾಲ ತಲೀ ಇಟ್ಟು ಅಳಬೇಕು ಅನಸ್ತದ ನನಗ. ನನ್ನ ಒಳಗ ಹೆಪ್ಪುಗಟ್ಟಿದ ಅತೃಪ್ತಿ, ದುಃಖ ಕರಗಿ ಹೋಗಬೇಕು ಅಂತಾವ ಶಾಂತಿ.''

ಆಕೆ ಒಮ್ಮೆಲೆ ಎದ್ದು ನಿಂತಳು. ಆಕೆಯ ಮೈಯಿಡೀ ನಡುಗುತ್ತಿತ್ತು. ಕೆಲಕ್ಷಣ ಆಕೆಗೆ ಮಾತಾಡಲಾಗಲೇ ಇಲ್ಲ. ಅಕಸ್ಮಾತ್ತಾಗಿ ಆತನೂ ಎದ್ದು ನಿಂತ. ನಡುಗುವ ಧ್ವನಿಯಲ್ಲಿ ಮಾತಾಡಿದ. ''ಇಲ್ನೋಡು ಶಾಂತಿ, ನಾ ಹೆಚ್ಚು ಏನೂ expect ಮಾಡೂದಿಲ್ಲ ನಿನ್ನ ಕಡಿಂದ. ಇಷ್ಟಕ್ಕ ಅವಕಾಶ ಕೊಡು ನನಗ, ಪ್ಲೀಜ್. ಇದೂ ಪಾಪ ಅನಸ್ತದೇನು ನಿನಗ ? ನನಗನ್ನೂದಿಲ್ಲ. ಪ್ರೀತಿಗೂ, ಪಾಪಕ್ಕೂ ಏನು ಸಂಬಂಧ ಶಾಂತಿ ?'' ಲಾಜಿಕ್ ಪ್ರೊಫೆಸರನ ತರ್ಕ ಸರಣಿ ಸರಿಯಾಗಿಯೇ ಇತ್ತು. ಯಾಕೋ ಶಂಕರನ ನೆನಪು ಒಮ್ಮೆಲೆ ಅವಳನ್ನು ತಡವಿ ಹೋದಂತಾಯಿತು. ಶಾಂತಿಗೆ ಅನಿಸಿತು– ತಾನಿನ್ನು ಬೀಳುತ್ತೇನೆ. ಬಹುಶಃ ತನಗೆ ಎಚ್ಚರ ತಪ್ಪುತ್ತಿದೆ, ಕಣ್ಣಿಗೆ ಕತ್ತಲು ಬರುತ್ತಿದೆ....

—ಆಕೆ ಅಸಹಾಯಕಳಾಗಿ ಆತನನ್ನು ಗಟ್ಟಿಯಾಗಿ ಅಪ್ಪಿದಳು.

* * *

"ನಂದೂ-ನಿಂದೂ ನಂಟು ಇಷ್ಟ ಗಟ್ಟಿ ಆಗಿ ಹ್ಯಾಂಗ ಅಂಟಿಕೊಂಡಿತು ನಿನಗ ಗೊತ್ತೇನು ಶಾಂತಿ ? ನಮ್ಮಿಬ್ಬರ ವಿಚಾರ ಒಂದs ಅವ. ಆದರ್ಶ ಒಂದs ಅವ. ಭಾವನಾ ಒಂದs ಅವ. ಎಲ್ಲಾ ರೀತಿಯ ಬಂಧನದಿಂದ ದೂರಾಗಿ ಪೂರಾ ಫ್ರೀ ಆಗಿ ಇರಬೇಕು —ಅಂತ ನಿನಗ ಹ್ಯಾಂಗ ಅನಸ್ತದ ನೋಡು. ನನಗೂ ಹಾಂಗs ಮುಕ್ತ ಜೀವನದ ಹಂಬಲು ಇತ್ತು ಮೊದಲಿನಿಂದಲೂ" —ಮಠದ್.

"ಅದಕ್ಕಿಂತ ಹೆಚ್ಚಾಗಿ ನನ್ನನ್ನ ನಿಮ್ಮ ಹತ್ತಿರ ತಂದದ್ದು ಅಂದರ-" ಆತನ ಹತ್ತಿರ ಸರಿದು ಶಾಂತಿ ಅಂದಳು, "ನಮ್ಮ ಹೆಣ್ಣುಮಕ್ಕಳಿಗೆ ಆಗ್ತಿರೋ ಅನ್ಯಾಯದ ಸಲುವಾಗಿ ನಿಮಗ ಇರುವ ಕಳಕಳಿ. ಈ ಧ್ಯೇಯದ ಸಲುವಾಗಿ ಇಷ್ಟು ನಿಷ್ಠಾದಿಂದ fight ಮಾಡೋ ಗಂಡಸನ್ನೇ ನಾ ನೋಡಿರ್ಲಿಲ್ಲ. ಮತ್ತ ಎರಡನೇ ಕಾರಣ ಅಂದರ— ನಿಮ್ಮ ಲಿಟರೇಚರ್. ನಿಮ್ಮ ಬರವಣಿಗೆ, ನಿಮ್ಮ ಆಳವಾದ ಓದು— I'm mad after both. ನಿಮ್ಮಷ್ಟು maturity, ನಿಮ್ಮಷ್ಟು deep understanding ಸಹಸಾ ಎಲ್ಲರಿಗೂ ಇರೋದಿಲ್ಲ." —ಶಂಕರನ ನೆನಪಾಗಿಯೋ ಏನೋ, ಆಕೆ ನಿಟ್ಟುಸಿರುಬಿಟ್ಟಳು.

"ಶಾಂತೀ, ಖರೇ ಪ್ರೀತಿ ಅಂದರ ಇದs ನೋಡು. ವಿಚಾರ, ಭಾವನಾ, ತತ್ವ, ಆದರ್ಶ, ಹೃದಯ, ಮನಸ್ಸು —ಎಲ್ಲಾದರ ಮಿಲನ ಆಗೇದ ನಮ್ಮಿಬ್ಬರದೂ. ನನಗೇನನಸ್ತದ ಗೊತ್ತೇನು ?"

"ಏನನಸ್ತದ ?" —ಆಕೆಗೆ ಅಕಾರಣ ಭಯ.

"ಒಮ್ಮೊಮ್ಮೆ ನನಗನಸ್ತದ, ಈ ಮಿಲನ ನಾವು ಯಾವ ರೀತಿಯಿಂದಲೂ ಅಪೂರ್ಣ ಬಿಡಬಾರದು." —ಆತನ ಕಣ್ಣುಗಳೇಕೋ ಕೆಂಪಾಗಿ ಉರಿಯುತ್ತಿದ್ದಂತೆ ಕಂಡಿತು ಆಕೆಗೆ.

"ಇಲ್ಲ ಸರ್, ಅದೊಂದು ಕೇಳಬ್ಯಾಡ್ರಿ."

ನಿರಾಶೆಯುಕ್ತ ಕೆಣಕುವ ಧಾಟಿಯಲ್ಲಿ ಆತನೆಂದ, "ನನಗ ಗೊತ್ತದ, ನಿನ್ನ boldness ಎಲ್ಲಾ ಬರೇ ಭಾಷಣದಾಗ, ಬಾಯಿ ಮಾತಿನ್ಯಾಗ. Freedom ಇರಬೇಕು ಹೆಂಗಸರಿಗೆ— ಅಂತೀದಿ. ಆದರ ಸ್ವತಃ ನಿನಗ ನೀನ ಒಂದನೂರು restrictions ಹಾಕ್ಕೊಂಡೀದಿ. ನಿನ್ನದು ನಾ ಎಣಿಸಿಧಾಂಗ, 'Take all, give all' ಥರದ ಪ್ರೀತಿ ಅಲ್ಲ. ಒಂದ ನಮೂನೀ ಮಡೀ ಪ್ರೀತಿ. Extreme ಗೆ ಹೋಗೋ ಧೈರ್ಯಾ ಇಲ್ಲ ನಿನಗ. ನೀ ಪುಕ್ಕಿ-"

—ಆತನ ಮಾತು ಕೇಳುತ್ತಿದ್ದಂತೆ ಎದೆಯಲ್ಲಿ ವಿಪರೀತ ನೋವಿನ

ಅನುಭವವಾಗಿ ತೀರ ಕೆಳದನಿಯಲ್ಲಿ ಆಕೆ ಅಂದಳು, "ಸರ್, ನನಗ ಸ್ವಲ್ಪ ವಿಚಾರ ಮಾಡ್ಲಿಕ್ಕೆ ಅವಕಾಶ ಕೊಡ್ರಿ."

"ಹ್ಞಾ ಹ್ಞಾ. ವಿಚಾರ ಮಾಡು. ನಿನ್ನ ವಿಚಾರ ಮುಗಿಯೂದ್ರಾಗ ಇಬ್ರೂ ಮುದುಕರಾಗಿರ್‍ತೇವಿ."

–ಇವತ್ತು ಯಾಕಿಷ್ಟು ಸಿಟ್ಟು, ಯಾಕಿಷ್ಟು ಅಸಹನೆ, ಅಸಮಾಧಾನ, ತಿಳಿಯದೆ ಆಕೆಗೆ ಚಡಪಡಿಕೆಯಾಯಿತು.

* * *

ಶಾಂತಿಯ ಬಿ. ಎ. ದ ರಿಜಲ್ಟ್ ಬಂದಾಗ ಆಕೆ ಮುಂಬೈಯಲ್ಲಿನ ಮಾಂಸಿಯ ಮನೆಯಲ್ಲಿದ್ದಳು. ಆಕೆಗೆ ಅಭಿನಂದಿಸಿ ಪ್ರೊ. ಮಠದ್ ಸಾತಾರೆಯಿಂದ ಪತ್ರ ಬರೆದಿದ್ದ. ಮಾಂಸಿಯ ಮನೆಯ ಟೆರೇಸ್ ಮೇಲೆ ಒಬ್ಬಳೇ ಕೂತು ಆ ಪತ್ರದ ಕೊನೆಯ ಭಾಗವನ್ನು ಆಕೆ ಹತ್ತು ಬಾರಿ ಓದಿದಳು.

"ನಿನ್ನ ಭೆಟ್ಟಿ ಆದಾಗ ನನ್ನ ಶೋಧನೆ ಪೂರ್ಣವಾಯಿತೆಂದು ನಿನಗೆ ಹೇಳಿದ್ದೆ, ನೆನಪಿದೆಯೆ ಶಾಂತಿ ? ಆದರೆ ನೀನು ನನ್ನ ಪೂರ್ಣತೆಯ ಅನುಭವವನ್ನು ಇನ್ನೂವರೆಗೂ ಅಪೂರ್ಣವಾಗಿಯೇ ಇಟ್ಟಿರುವಿ. ಯುಗಾಂತರಗಳಿಂದ ನನ್ನ ಆತ್ಮವು ಅರಸುತ್ತಲಿದ್ದ ಅಮೂಲ್ಯ ಅನುಭವವೊಂದು ನನ್ನ ಕೈಗೆ ಸಿಕ್ಕೂ ಸಿಗಲಾರದಂತೆ ನುಣುಚಿಕೊಳ್ಳುತ್ತಿರುವ ಅತೃಪ್ತಿ ನನಗೆ. ನೀನೋ ಪಾಪ-ಪುಣ್ಯಗಳ, ನೀತಿ-ನಿಯಮಗಳ ಚಕ್ರದಿಂದ ಹೊರಬರಲಾಗದ ಧರ್ಮಿಷ್ಠೆ. ನಿನ್ನ ಕೆಚ್ಚು, ಆದರ್ಶ, ಧ್ಯೇಯದ ಮಾತು ಕೇಳಿ ನಾನು ಮೋಸ ಹೋದೆನೇನೋ ಅನಿಸುತ್ತಿದೆ. ಕೀಟ್ಸ್ ನಿನಗೆ ಪ್ರೀತಿಯ ಕವಿ ಅಲ್ಲವೆ ? ನಿನಗೆ ನೆನಪಿರಬೇಕು–

Bold lover, never, never canst thou Kiss.
Though winning near the goal-yet do not grieve;
She cannot fade, though thou hast not thy bliss,
For ever wilt thou love, and she be fair !

ಶಾಂತಿ, ನೀನು ಯಾವಾಗಲೂ ಹೀಗೆಯೇ ನನ್ನ ಕೈಗೆಟುಕದ ಸುಂದರ ವಸ್ತುವಾಗಿ ನನ್ನನ್ನು ಆಟವಾಡಿಸುತ್ತಿರು. ನಾನು– "I shall be your Bold lover for ever !"

–ಶಾಂತಿಗೆ ಸ್ಪಷ್ಟವಾಗಿ ಅನಿಸಿತು, ತನ್ನನ್ನು ಇಷ್ಟೊಂದು ಉತ್ಕಟವಾಗಿ ಪ್ರೀತಿಸುವ ಈತನಿಗೆ ಬೇಕಾದದ್ದನ್ನು ತಾನು ಕೊಡಲಾರೆನಾದರೆ ತನ್ನ ಯಾವ ಮಡಿವಂತಿಕೆಗೂ, ಆದರ್ಶಗಳಿಗೂ, ನಂಬಿಕೆಗಳಿಗೂ ಅರ್ಥವಿಲ್ಲ.

ಆಕೆ ಆಗಿಂದಾಗ ಒಂದೇ ಸಾಲಿನ ಪತ್ರವೊಂದನ್ನು ಬರೆದಳು, “ 'Take all, give all .'' ಪತ್ರ ಬರೆದ ನಂತರ ಅವಳಿಗೆ ತಾನು ಈ ಜೀವನದಲ್ಲಿ ಇನ್ನು ಸಾಧಿಸಬೇಕಾದುದೇನೂ ಉಳಿಯಲಿಲ್ಲ, ಎಲ್ಲ ದೃಷ್ಟಿಯಿಂದಲೂ ತಾನು ಪೂರ್ಣತೆಯನ್ನು ಮುಟ್ಟಿದೆ, ಎಂದೆನಿಸಿ ಶಾಂತವಾದ ಸಮಾಧಾನವಾಯಿತು. ಮರುದಿನವೇ ಸಾತಾರೆಗೆ ಹೋಗುವುದಿದ್ದುದರಿಂದ ಪತ್ರವನ್ನು ಪೋಸ್ಟ್ ಮಾಡದೆ ಆತನ ಕೈಯಲ್ಲೇ ಕೊಟ್ಟು ಆಶ್ಚರ್ಯದಿಂದ, ಆನಂದದಿಂದ ಆತನ ಕಣ್ಣುಗಳು ಬೆಳಗುವುದನ್ನು ನೋಡಬೇಕೆಂದು ನಿರ್ಧರಿಸಿ ಅದನ್ನು ಜೋಪಾನವಾಗಿ ಮಡಿಸಿ ಸೂಟ್‌ಕೇಸಿನ ತಳದಲ್ಲಿಟ್ಟಳು.

* * *

ರಜೆ ಮುಗಿಸಿ ಶಾಂತಿ ಸಾತಾರೆಗೆ ತಿರುಗಿ ಬಂದ ದಿನ ಸಂಜೆ ಅವಳ ಗೆಳತಿ ಜಯಶ್ರೀ ದೇಸಾಯಿ ಅವಳನ್ನು ಕಾಣಲೆಂದು ಬಂದಳು. ಬಂದವಳು ಎರಡನೆಯ ಮಾತಿಲ್ಲದೆ ಶಾಂತಿಯ ತೊಡೆಯ ಮೇಲೆ ಮುಖವಿಟ್ಟು ಗಟ್ಟಿಯಾಗಿ ಅಳುವುದಕ್ಕೆ ಪ್ರಾರಂಭಿಸಿದಳು.

‘‘ಏನಾತು ಜಯಾ ? ಹಿಂಗ್ಯಾಕ ಅಳ್ತೀ ? ಮನ್ಯಾಗ ಎಲ್ಲಾರು ಆರಾಮಿದ್ದಾರಿಲ್ಲೊ ?'' —ಆತಂಕದಿಂದ ಶಾಂತಿ ಕೇಳಿದಳು.

ಹೌದೆಂದು ಗೋಣುಹಾಕಿ ಸೂಚಿಸಿದ ಜಯಶ್ರೀ ಇನ್ನೂ ಗಟ್ಟಿಯಾಗಿ ಅಳತೊಡಗಿದಳು.

“ಏನಾತs ಮಾರಾಯಳs ? ಇದೇನು ನಿನ್ನ ಅವತಾರ ? ಹರಕ ಸೀರಿ, ಕೆದರಿದ ಕೂದಲಾ, ಕೆಂಪಾದ ಕಣ್ಣು, ಅಲ್ಲs ಪ್ರೇಮ ಭಂಗ ಆತೋ ಏನು ಮತ್ತ ?''

“ನಾ ಕೆಟ್ಟೆ ಶಾಂತೀ, ನಾ ಹಾಳಾದೆ'' —ಜಯಶ್ರೀಯ ಮೈಯಿಡೀ ಅಳುವಿನಿಂದ ನಡುಗುತ್ತಿತ್ತು.

‘‘ಅಂಥಾದ್ದೇನಾತು ಜಯಾ ? ಇತ್ತಿತ್ಲಾಗ ನೀ ಯಾರ್ನೋ ಪ್ರೀತಿ ಮಾಡ್ಲಿಕ್ಹತ್ತೀನಿ ಅಂತ ಹೇಳತಿದ್ದೆಲಾ, ಆ ನಿನ್ನ ಪ್ರೇಮಿ ಏನರೆ ಕೈಕೊಟ್ನೇನು ?'' —ಆಕೆಯ ಬೆನ್ನು ಸವರುತ್ತ ಕಾಳಜಿಯಿಂದ ಕೇಳಿದಳು ಶಾಂತಿ. ಆದರೆ ಜಯಶ್ರೀ ಏನೂ ಮಾತಾಡದೆ ಅಳುವುದನ್ನೇ ಮುಂದುವರಿಸಲು, ಈಕೆ ಅತ್ತಾದರೂ ಮುಗಿಸಲೆಂದು ಶಾಂತಿ ಸುಮ್ಮನೆ ಕೂತಳು. ಜಯಶ್ರೀಯ ಅಪರಿಪಕ್ವ ಬುದ್ಧಿಯ ಬಗ್ಗೆ, ದುಡುಕುವ ಸ್ವಭಾವದ ಬಗ್ಗೆ, ಸರಳವಾಗಿ ಎಲ್ಲ ನಂಬುವ ಮೂಢತೆಯ ಬಗ್ಗೆ, ಮೊದಲಿನಿಂದಲೂ ಶಾಂತಿಗೆ ಅನಿಸುತ್ತಿದ್ದ ಜುಗುಪ್ಸೆ ಇಂದು ಅವಳ ಅಳುವನ್ನು ಕಂಡೊಡನೆ ಒಮ್ಮೆಲೆ ಅನುಕಂಪವಾಯಿತು.

ಅತ್ತು ಪೂರೈಸಿದ ಜಯಶ್ರೀ ಎದ್ದು ಕುಳಿತು ಹೇಳಿದಳು, "ಶಾಂತಿ, ನಾ ಇನ್ನ ವಿಷ ತಗೊಂಡು ಸಾಯ್ತೀನಿ, ನನಗ ಬ್ಯಾರೇ ಹಾದೀನs ಇಲ್ಲ."

"ಏನಾತು ಹೇಳರೆ ಹೇಳs ಪುಣ್ಯಾತ್ಗಿತ್ತಿ."

"ಏನ ಹೇಳ್ಲಿ ಶಾಂತಿ ? ಎಷ್ಟ ನಂಬಿದ್ದೆ ಅವನನ್ನ. ಎಂದೂ ಕೈಬಿಡೂದಿಲ್ಲ ಅಂದಿದ್ದ. ನೀನs ನನ್ನ ಸರ್ವಸ್ವ ಅಂದಿದ್ದ. ಒಬ್ಬಾಕಿ ಹೆಂಡ್ತಿ ಇದ್ರೂ ನಿನ್ನನ್ನ ಎರಡನೇ ಲಗ್ನಾ ಆಗ್ತೀನಿ ಅಂದಿದ್ದಾ. ಹಾಗಂತ ನಾನು-"

"ಹಾಗಂತ ನೀನು-"

ಜಯಶ್ರೀಗೆ ಮತ್ತೊಮ್ಮೆ ಅಳು ಉಕ್ಕಿ ಬಂತು.

"ಹಾಂಗಂತ ನಾನು ಅವನಿಗೆ ಸರ್ವಾರ್ಪಣಾ ಮಾಡಿದೆ ಶಾಂತೀ, ಎರಡ ಲಗ್ನಾ ಮಾಡಿಕೋಬಾರದು ಅಂತ ಕಾಯಿದೇ ಇದ್ರೂ ಈ ಕಾಯಿದೇ ಸರಕಾರೀ ನೌಕರರಲ್ಲದವ್ರಿಗೆ ಹತ್ತೂದಿಲ್ಲಾ ಅಂತ ಹೇಳಿದಾ. ಈಗ...."

"ಈಗ ಏನಾತು ಜಯಾ ? ಬೇಕಾಯ್ದೇಶೀರ ಆದರ ಆಗವಲ್ದು, ನಿಮ್ಮ ಸಂಬಂಧ ಇಷ್ಟ ಮುಂದುವರದದ ಅಂದ್ರ ನೀವು ಲಗ್ನಾ ಆಗಿಬಿಡ್ರೆಲಾ ?"

ಮತ್ತೊಮ್ಮೆ ಅತ್ತು ಪೂರೈಸಿ ಮಡಿಲಿನೊಳಗಿಂದ ಒಂದು ಮಡಿಚಿ ಮುದ್ದೆಯಾದ ಕಾಗದ ತೆಗೆಯುತ್ತ ಜಯಶ್ರೀ ಹೇಳಿದಳು– "ಅವಾ ನನಗ ಎಲ್ಲಾ ಸುಳ್ಳs ಹೇಳಿದ್ದ ಶಾಂತೀ, ನನಗ ಹೇಳಿದಾಂಗ ಆ ಜ್ಯೂನಿಯರ್ ಬಿ. ಎಸ್‌ಸಿ. ಯೊಳಗ ಇದ್ದಾಳಲಾ ರಮಾ ಪಾಟೀಲ– ಆಕಿಗೂ ಹೇಳ್ಯಾನ. ಆಕಿಗೇನು ಗೊತ್ತು ಪಾಪ ನನ್ನ ಕತೀ. ಆಕಿ ತಾನಾಗಿ ಇವತ್ತ ನನಗ ತನ್ನದೂ-ಅವನದೂ ರೋಮಾನ್ಸ್ ಕಥೀ ಹೇಳಿ ಅವಾ ತನಗ ಬರದ ಪತ್ರಾ ಸುದ್ದಾ ತೋರ್ಸಿದ್ಳು. ಅದನ್ನs ತಂದೀನಿ ನೋಡು."

"ಏನಂತ ಬರದಾನ ಮಗಾ ?"

"ಮತ್ತೇನ ಹೊಸಾದು ಬರೀತಾನ ? ನನಗ ಏನೇನು ಬರೀತಿದ್ನೋ ಆಕೀಗೂ ಅದನ್ನs ಬರದಾನ. ಇನ್ನೂ ಯಾರ್‍ಯಾರಿಗೆ ಟೊಪಿಗೀ ಹಾಕ್ಯಾನೋ ಹಿಂಗs.... ನಾ ಏನ್ಮಾಡ್ಲಿ ಶಾಂತಿ ? ಅಕಸ್ಮಾತ್ ಏನರೆ ಹೆಚ್ಚೂ ಕಡಿಮೆ ಆತಂದ್ರ ನಾ ಏನ್ಮಾಡ್ಲಿ ಶಾಂತೀ ?" –ಜಯಶ್ರೀ ಮತ್ತೆ ಅಳತೊಡಗಿದಳು.

"ಸೀದಾ ಅವನ ಕಡೇ ಹೋಗಿ ಎಲ್ಲಾ ಹೇಳಿ ಈಗೇನ್ಮಾಡೋದು ಅಂತ ಕೇಳ್ಲಿಲ್ಯಾಕ ನೀನು ?"

"ಅಂವಾ ನನಗೆಲ್ಲೆ ಸಿಗ್ತಾನ ಶಾಂತೀ ? ಮನೀಗೆ ಹೋದ್ರ ಕೀಲಿ ಹಾಕಿತ್ತು. ಯಾರೋ ಹೇಳಿದ್ರು, ಇವನ ರೋಮಾನ್ಸಿನ ಕಥೀ ಹೆಂಡ್ತೀ ಕಿವಿಗೆ ಬಿದ್ದು ಇವನನ್ನ ಛಲೋತ್ನ್ಯಾಗಿ ಝಾಡಿಸಿದಳಂತ. ಆಕೀನ್ನ ರಮಿಸಲಿಕ್ಕೆ ಕಾಶ್ಮೀರ–ಆಗ್ರಾ ಕಡೆ

ಕರಕೊಂಡು ಹೋಗ್ಯಾನ, ಇನ್ನ ಮೂರು ತಿಂಗಳು ಬರೋದಿಲ್ಲ ಅಂತ.''

''ಓ, ಹಿಂಗಾತೇನು ?'' –ಶಾಂತಿಗೆ ಏನು ಹೇಳಲೂ ತೋಚಲಿಲ್ಲ. ಮುದ್ದೆಯಾಗಿದ್ದ ಜಯಶ್ರೀಯ ಕಾಲಬದಿಯಲ್ಲಿ ಬಿದ್ದ ಕಾಗದವನ್ನೆತ್ತಿ ಬಿಡಿಸಿ ನೋಡಿದಳು ಆಕೆ. ಕೈಬರಹ ಪರಿಚಿತವೆನಿಸಿತು. ಹ್ಞ, ಹೌದು, ಎಷ್ಟು ಪರಿಚಿತ....

''ಗುರಿ ತಲುಪಬೇಕೆನ್ನುವ ಛಲ, ಏನು ಬಂದರೂ ಎದುರಿಸಿಯೇನೆಂಬ ಧೈರ್ಯ, ಹಿಡಿದ ತತ್ವಗಳನ್ನು ಎಂದಿಗೂ ಬಿಡಲಾರೆನೆಂಬ ವಿಶ್ವಾಸ ಎಂದಿಗೂ ನನ್ನಲ್ಲಿದೆ.... ಏನು ಇರಲಿಲ್ಲ ಅನ್ನುವುದು ನಿಮ್ಮನ್ನು ಕಂಡ ಕ್ಷಣ ತಿಳಿಯಿತು.... ನನ್ನ ಆದರ್ಶ, ನನ್ನ ಜೀವನ ಎಲ್ಲದರ ಕೇಂದ್ರ ಬಿಂದು ನೀವು.... ನಿಮ್ಮ ಎಲ್ಲ ದುಃಖ ನನಗೆ ಕೊಡಿ, ಅಪ್ಪಿಕೊಳ್ಳುತ್ತೇನೆ. ಪ್ರತಿಯಾಗಿ ನಿಮ್ಮದೊಂದು ಕಿರುನಗೆ ಸಾಕು ನನಗೆ.... ನನಗೆನಿಸುತ್ತಿದೆ, ನಾನು ಇಷ್ಟು ದಿನ ನಿಮ್ಮನ್ನು ಹುಡುಕುತ್ತಿದ್ದೆ.... ನನ್ನ ಶೋಧನೆ ಪೂರ್ಣವಾಯಿತು....''

ಎಷ್ಟು ಪರಿಚಿತ !

ಜಯಶ್ರೀಯನ್ನು ಅಳುವುದಕ್ಕೆ ಬಿಟ್ಟು ಶಾಂತಿ ಎದ್ದು ಟೇಬಲ್ ಬಳಿಗೆ ಹೋದಳು. ಪುಟ್ಟ ಗುಲಾಬಿ ಬಣ್ಣದ ಕವ್ಹರಿನಲ್ಲಿ ಹಾಕಿಟ್ಟಿದ್ದ " Take all, give all " ಹೊರಗೆ ತೆಗೆದಳು. ಸಣ್ಣಸಣ್ಣ ಚೂರುಗಳಾಗಿ ಹರಿದು ಕಿಟಕಿಯಲ್ಲಿ ಗಾಳಿಗೆ ತೂರಿದಳು. ಕಾಗದದ ಚೂರುಗಳು ದಿಕ್ಕೆಟ್ಟು ಮಹಡಿಯ ಎತ್ತರದಿಂದ ಕೆಳಗೆ ಹುಲ್ಲ ಮೇಲೆ, ಕಲ್ಲ ಮೇಲೆ, ಕೆಸರಿನಲ್ಲಿ, ಮಣ್ಣಿನಲ್ಲಿ ಬೀಳುತ್ತಿದ್ದಾಗ ಕಿಟಕಿಯ ಸರಳುಗಳನ್ನು ಬಿಗಿಯಾಗಿ ಹಿಡಿದುಕೊಂಡು ಹಾಗೇ ನಿಂತು ಕಣ್ಣು ಮುಚ್ಚಿದಳು.

❖ ❖ ❖

## ೩

ಸಾತಾರೆಯಲ್ಲಿರುವುದೇ ಬೇಡವೆಂದು ತಂದೆ-ತಾಯಿಗಳ ಕೂಡ ಹಟಮಾಡಿ ಒಪ್ಪಿಗೆ ಪಡೆದು ಶಾಂತಿ ಮುಂಬೈಯ ಮಾಂಶಿಯ ಮನೆಗೆ ಬಂದು ಆರು ತಿಂಗಳು ಸತತ ಪರಿಶ್ರಮಿಸಿದ ನಂತರ ಅವಳಿಗೆ ಶಾ ಮಾಣಿಕಚಂದ ಎಂಡ್ ಸನ್ಸ್ ಲಿಮಿಟೆಡ್‌ನವರ ಕೈಗಾರಿಕಾ ಸಾಮಾನುಗಳ ಶೋರೂಮ್‌ನಲ್ಲಿ ರಿಸೆಪ್ಶನಿಸ್ಟ್ ಕೆಲಸ ಸಿಕ್ಕಿತ್ತು. ಇಂದು ಅವಳು ಮೊದಲ ಸಲ ಕೆಲಸಕ್ಕೆ ಹಾಜರಾಗಿದ್ದಳು. ವ್ಹಿ. ಟಿ. ಯಲ್ಲಿರುವ ಆ ಶೋರೂಮ್‌ನವರೆಗೂ ಅವಳನ್ನು ಕಳಿಸಲು ಬಂದಿದ್ದ ಮಾಂಶಿಯ ಕಿರಿಮಗನಿಗೆ ಆಕೆ ಹೇಳಿದ್ದಳು– "ಇನ್ನ ನೀ ಕಾಲೇಜಿಗೆ ಹೋಗು ಬಾಳೂ, ಸಂಜೀಕೆ ಮತ್ತ ಕರೀಲಿಕ್ಕೆ ಅಂತ ಬರಬ್ಯಾಡ, ನನಗೆಲ್ಲಾ ಗೊತ್ತಾಗ್ತದ, ನಾ ಲೋಕಲ್ ಹಿಡಿದು ಬರ್ತೀನಿ ಮಾತುಂಗಾಕ್ಕ."

ಮೊದಲ ಸಲ ನೌಕರಿ ಮಾಡಲು ಸುರುಮಾಡುವ ಈ ಸಂಭ್ರಮ ಎಷ್ಟು ವಿಚಿತ್ರವಾದುದು, ತನಗೆ ಇದರ ಭರದಲ್ಲಿ ಎಲ್ಲ ಮರೆತಿದೆಯಲ್ಲ, ಕಳೆದ ಆರು ತಿಂಗಳಿಂದಲೂ ತನ್ನನ್ನು ಮುಸುಕಿದ್ದ ದಿಕ್ಕೆಟ್ಟಂತಹ ಭಾವನೆ ಕೂಡ ಇಂದು ಇಲ್ಲದಾಗಿದೆಯಲ್ಲ. ಹೀಗೇ ಮುಂದುವರಿದರೆ ಒಂದು ದಿನ ತಾನು ಜೀವನದಲ್ಲಿ ಪೆಟ್ಟು ತಿಂದುದನ್ನು ಸಂಪೂರ್ಣ ಮರೆಯಬಹುದು –ಎಂದೆನಿಸಿ ಶಾಂತಿಗೆ ಹಗುರ ಅನಿಸಿತು. ಅವಳ ಜೊತೆ ಕೆಲಸ ಮಾಡುವವರಲ್ಲಿ ಇನ್ನೂ ಮೂವರು ಹುಡುಗಿಯರಿದ್ದರು. ಅಬ್ಬ, ಅವರ ಫ್ಯಾಶನ್ನೇ! ಶೋಕೇಸ್‌ನಲ್ಲಿಟ್ಟ ಗೊಂಬೆಗಳ ಹಾಗಿದ್ದಾರೆ. ಶಾಂತಿಯನ್ನು ನೋಡಿ, ಕ್ಯಾಮರಾದೆದುರು ನಿಂತ ಹಾಗೆ ಬಾಗಿ ನಸುನಕ್ಕು 'ಹಲೋ' ಅಂದರು. ಹೇಗಪ್ಪ ಈ ಚಿಟ್ಟೆಗಳ ಕೂಡ ಇಡೀ ದಿನ ಕಳೆಯುವುದು –ಎನಿಸಿತು ಆಕೆಗೆ.

ಕೌಂಟರಿನಲ್ಲಿ ಕೂತಿದ್ದ ಗುರೂ ಶರ್ಟ್-ಬೆಲ್ ಪ್ಯಾಂಟಿನ ಮನುಷ್ಯ ಸರಳವಾಗಿ ನಕ್ಕು "ವೆಲ್ ಕಮ್ ಮಿಸ್ ಕಾಮತ" ಅಂದ. ತನ್ನ ಕೆಲಸವನ್ನು ಈತನೇ, ರಮಾಕಾಂತ ಸಿಂಧೆ, ಕಲಿಸಿ ಕೊಡುತ್ತಾನೆಂದು ಮ್ಯಾನೇಜರ್ ಮೊದಲೇ ಹೇಳಿದ್ದರು. ಈತನನ್ನು ನೋಡಿದೊಡನೆ ಶಾಂತಿಗೆ ತುಂಬ ಸಮಾಧಾನವಾಯಿತು. ಈ ಎಲ್ಲ ಬಣ್ಣಬಣ್ಣದ ಚಿತ್ರವಿಚಿತ್ರದ ಭಯಂಕರವಾದ ಜನ ಸಮುದ್ರದಲ್ಲಿ ಈತನೊಬ್ಬನೇ ಮನುಷ್ಯ, ತನ್ನ

ಹಾಗಿರುವ ಇನ್ನೊಬ್ಬ ಮನುಷ್ಯ– ಅನಿಸಿತು. ನಂತರ ಆಕೆ ದಿನವಿಡೀ ರಮಾಕಾಂತ ಸಿಂಧೆಯ ಪಕ್ಕದಲ್ಲೇ ಉಳಿದಳು.

ಎಷ್ಟು ಸರಳ, ಎಷ್ಟು frank, ಎಷ್ಟು protective ಆಗಿದ್ದಾನೆ ಈ ಮನುಷ್ಯ, ಒಬ್ಬ ಹಿರಿಯ ಅಣ್ಣನ ಹಾಗೆ ಅನಿಸಿತು ಆಕೆಗೆ. ಆತನ ಮರಾಠೀ ಶೈಲಿಯ ಇಂಗ್ಲಿಶ್ ಆಕೆಗೆ ತುಂಬ ಮೋಜೆನಿಸಿತು.

ಸಂಜೆಯ ಹೊತ್ತಿಗೆ ಮತ್ತೊಮ್ಮೆ ಬಂದ ಮ್ಯಾನೇಜರ್ ಶಾಂತಿಯ ಬಳಿಗೆ ಬಂದು ಅವಳ ಹೆಗಲ ತಟ್ಟಿ ನಕ್ಕು, "ಹೌ ಡು ಯೂ ಡು ?" ಅಂತ ಕೇಳಿ ಮುಂದೆ ಸಾಗಿದಾಗ ಸಿಂಧೆ ತಗ್ಗಿದ ಧ್ವನಿಯಲ್ಲಿ ಆಕೆಗೆ ಹೇಳಿದ, "ಈ ಮನುಷ್ಯನ ವಿಷಯದಾಗ ಮಾತ್ರ ನೀವು ಜ್ವಾಕಿ ಇರಬೇಕು ಹ್ನಾ ಮಿಸ್ ಕಾಮತ."

"ಯಾಕ ?" ಆಕೆ ಕುತೂಹಲದಿಂದ ಕೇಳಿದಳು.

"ಇಪ್ಪತ್ನಾಲ್ಕೂ ತಾಸೂ ಕುಡಿದಿರತಾನ."

"ಕುಡಿದಿರತಾನ ? ಅಂದರ ಸೆರೆ ?" –ಆಕೆಗೆ ಆಘಾತ.

"ಮತ್ತೇನು ನೀರು ಕುಡಿದಿರ್‍ತಾನಂತ ತಿಳದ್ರೇನು ?" –ಅನ್ನುತ್ತ ರಮಾಕಾಂತ ಸಿಂಧೆ ನಕ್ಕ– "You are still a child."

"ಕುಡಿಯೂದರಷ್ಟು ಕೆಟ್ಟ ಚಟಾ ಮತ್ತೊಂದಿಲ್ಲಂತ. ನನಗಂತೂ ಕುಡುಕರು ಅಂದ್ರ ಥೇಟ್ ರಾಕ್ಷಸ್ರು ಅನಸ್ತಾರ. ಛೀ...."

"ನೀವು ಎಲ್ಲಿದ್ದೀರಿ ಮಿಸ್ ಕಾಮತ ? ಕುಡೀಲಾರದ ಗಂಡಸು ಈಗಿನ ಕಾಲದಾಗ ಎಲ್ಲಿ ಸಿಗ್ತಾನ ನಿಮಗ ? ಹೆಂಗಸ್ರೂ ಕುಡೀತಾರ ಈಗ. ಆ ಕಡೀ ಟೇಬಲಿಗೆ ಕೂತಾಳಲಾ ಲೂಸಿ ಫರ್ನಾಂಡಿಸ್, ಆರು ಪೆಗ್ ಒಂದs ಸರೆ ಕುಡೀತಾಳ. ಈ ಮಂದೀಗೆ ಕುಡೀದಿದ್ದರ ಮೈಮ್ಯಾಲ ಶುದ್ಧೀನೇ ಉಳಿಯೂದಿಲ್ಲ."

–ಶಾಂತಿಗೆ ಆಘಾತದ ಮೇಲೆ ಆಘಾತ ; "ಎಲ್ಲಾ ಗಂಡಸ್ರೂ ಕುಡೀತಾರs ? ನೀವೂ ?"

"ಹ್ನಾ ಹ್ನಾ, ನಾನೂ", ಆತ ನಕ್ಕ.

ಆತ ನಗುತ್ತಿರುವುದನ್ನು ನೋಡುತ್ತಿರುವಂತೆ ಆಕೆಗೆ ಈ ರಮಾಕಾಂತ ಸಿಂಧೆಯೂ ಕುಡಿಯುತ್ತಿದ್ದರೆ ಕುಡಿಯುವುದು ತಾನು ತಿಳಿದಷ್ಟೇನು ಕೆಟ್ಟದಾಗಿರಲಿಕ್ಕಿಲ್ಲ ಅನಿಸಿತು.

* * *

ಶನಿವಾರ ಕೆಲಸಕ್ಕೆ ಅರ್ಧ ರಜಾ. ಅಂದು ಕೆಲಸದ ಅವಧಿ ಮುಗಿದ ನಂತರ ತನ್ನ ವ್ಯಾನಿಟಿ ಬ್ಯಾಗು ಮತ್ತು ರೇನ್‌ಕೋಟ್ ಹೊತ್ತು ಶೋರೂಮಿನ ದೊಡ್ಡದಾದ

ಕಂಪೌಂಡು ದಾಟಿ ಶಾಂತಿ ರಸ್ತೆಗೆ ಬರುತ್ತಿದ್ದಂತೆ ಸಿಂಧೆ ಹಿಂದಿನಿಂದ ಕೂಗಿದ, 'ಸ್ವಲ್ಪ ನಿಂದರ್‍ರೀ ಮಿಸ್ ಕಾಮತ."

ಆಕೆ ತಿರುಗಿ ನೋಡಿ ನಿಂತಳು. ದಿನಾ ಸಿಂಧೆಯ ಜೊತೆ ಸ್ಟೇಶನ್‌ವರೆಗೂ ನಡೆದು ಹೋಗುವುದು ಈಗವಳಿಗೆ ರೂಢಿಯಾಗಿ ಬಿಟ್ಟಿತ್ತು. ಹೀಗೆ ನಿರ್ಭಿಡೆಯಿಂದ ಯಾರ ಅಂಜಿಕೆಯೂ ಇಲ್ಲದೆ ಯಾರೋ ಗಂಡಸೊಡನೆ ರಸ್ತೆಯಲ್ಲಿ ಹೋಗುವುದು ಸಾತಾರೆಯಲ್ಲಿ ಸಾಧ್ಯವಿತ್ತೇ ? ಜನದ ಬಾಯಲ್ಲಿ ತಮ್ಮಿಬ್ಬರ ಹೆಸರೂ ಹೊಲಸಾಗಿ ಬಿಡುತ್ತಿತ್ತು, ಏನೂ ಇಲ್ಲದೆಯೇ ಎಷ್ಟು ಮಾತಾಡಿದರು ಜನ ತನ್ನ ಬಗ್ಗೆ ! 'ಅಯ್ಯೋ, ಆಕಿನs ? ಸಾಲ್ಯಾಗಿದ್ದಾಗ ಒಬ್ಬನ ಕೂಡ ಎಲ್ಲಾ ಮಾಡಿ ಮುಗಿಸಿದಳು. ಅದು ಸಾಕಾಗ್ಲಿಲ್ಲಂತ ಕಾಲೇಜಕ್ಕ ಬಂದ ಮ್ಯಾಲೆ ಒಬ್ಬ ಲಗ್ನಾದ ಗಂಡಸಿನ ಮನೀ ತೊಳೆದಳು. ಅವನ ಹೇಣ್ತೀ ಪುಣ್ಯ ದೊಡ್ಡದಿತ್ತೂ ಅಂತ ಬಚಾವಾದ ಅಂವಾ. ಇಲ್ದಿದ್ರ ಎಲ್ಲಾ ಮೂರಾಬಟ್ಟೀ ಮಾಡ್ತಿತ್ತು ಈ ಬಾಜಾರಿ ಹೆಣ್ಣು....' ಹೀಗೇ ಇನ್ನೂ, ಕೇಳುವ ಹಾಗೆ ಎದುರಿಗೇ ಅಂದರು. ಕೇಳದ ಹಾಗೆ ಹಿಂದೆ ಅಂದುದೆಷ್ಟೋ !.... ಹಾಗೆ ನೋಡಿದರೆ ಮುಂಬೈ ಎಷ್ಟು ಒಳ್ಳೆಯದು....

"ಇಷ್ಟ ಲಗೂ ಮನೀಗೆ ಹೋಗಿ ಏನ್ಮಾಡ್ತೀರಿ ?" —ಸಿಂಧೆ ಅವಳಿಗಾಗಿ ಗೇಟು ತೆರೆಯುತ್ತ ಕೇಳಿದ.

"ನೀವೇನ್ಮಾಡ್ತೀರಿ ಮನೀಗೆ ಹೋಗಿ ?" ಆಕೆ ತುಂಟತನದಿಂದ ನಕ್ಕು ಕೇಳಿದಳು.

"ನಾಯೆಲ್ಲಿ ಮನೀಗೆ ಹೋಗ್ಲಿ ? ನನಗ ಮನೀನೆ ಇಲ್ಲ. ಗೆಳೆಯಾನ ರೂಮಿನ್ಯಾಗ ಇರ್‍ತೀನಿ. ನನ್ನ ಗೆಳೆಯಾ ರಾತ್ರಿ ಲೇಟಾಗಿ ಬರ್‍ತಾನ. ಬಂದ ಮ್ಯಾಲ ಅಲ್ಲೇ ಒಂದು ಇರಾಣೀ ಖಾನಾವಳಿ ಅದs ಅಲ್ಲೇ ಊಟಾ ಮಾಡ್ತೇವಿ, ಮಲಕೋತೀವಿ. ಅಲ್ಲಿ ತನಕಾ ನಾ ಹಿಂಗ ಎಲ್ಲೆಲ್ಲರ ತಿರಗ್ತಿರ್‍ತೀನಿ, ಸಿನೆಮಾ ನೋಡ್ತೀನಿ."

"ನನಗ ತೋರಿಸ್ತೀರೇನು ಹಂಗಾರ ಇವತ್ತ ಒಂದು ಸಿನೆಮಾ ?" —ಈ ಮಾತಾಡಿದವಳು ತಾನೆಯೇ ಅಂತ ಆಕೆಗೆ ಆಶ್ಚರ್ಯ.

ಆತನಿಗೆ ಇನ್ನೂ ಆಶ್ಚರ್ಯ ; "ನೀವು ನನ್ನ ಕೂಡ ಸಿನೇಮಾಕ್ಕ ಬರ್‍ತೀರಿ ?"

ಆತನ ಆಶ್ಚರ್ಯದಿಂದ ಆಕೆಗೆ ನಾಚಿಕೆಯಾಯಿತು.

ಲೂಸಿ ಫರ್ನಾಂಡಿಸ್ ದಿನಾ ಮ್ಯಾನೇಜರ್ ಜೊತೆ ಹೋಗುವುದನ್ನು ಆಕೆ ನೋಡಿದ್ದಳು. ಉಳಿದಿಬ್ಬರು ಹುಡುಗಿಯರಿಗೂ ಬಾಯ್ ಫ್ರೆಂಡ್ಸ್ ಇದ್ದರು. ಹಾಗೆ ನೋಡಿದರೆ ಮುಂಬೈಯ ಬೀದಿಗಳಲ್ಲಿ ಸಂಜೆ ಹೊತ್ತು ಎಲ್ಲರೂ ಜೊತೆಯಾಗಿಯೇ ತಿರುಗುತ್ತಿದ್ದರು. ಸಿಂಧೆಯ ಜೊತೆ ಹೋಗಬೇಕೆಂಬ ಇಚ್ಛೆಯಿಂದಲ್ಲ ತಾನು ಹಾಗೆ ಕೇಳಿದ್ದು. ಹೋದರೂ ತಪ್ಪೇನದರಲ್ಲಿ— ಅಂತ ಕೇಳಿದ್ದು.

ಸಿಂಧೆ ಮೃದುವಾಗಿ ಹೇಳಿದ, "ನನಗ ಆಶ್ಚರ್ಯ ಆದದ್ದಕ್ಕ ತಪ್ಪು ತಿಳೀಬ್ಯಾಡ್ರಿ. ನೀವು ಉಳಿದ ಹುಡಿಗ್ಯಾರ ಹಾಂಗ ಅಲ್ಲ ಅಂತ ನನಗ ಗೊತ್ತದ."

"ನೀವೂ ಮುಂಬೈಯ ಉಳಿದ ಗಂಡಸರ ಹಾಂಗ ಅಲ್ಲಂತ ನನಗೂ ಗೊತ್ತದ" –ಆಕೆ ನಾಚದೆ ಅವನನ್ನೇ ನೋಡುತ್ತ ಹೇಳಿದಳು.

"ನೀವು ಹೋಗೋಣ ಅಂದರ ಹೋಗೋಣ. ಯಾವ ಸಿನೆಮಾ ?" –ಶಾಂತವಾಗಿ ಕೇಳಿದ ಆತ.

"ಹೋಗೋಣ. ಆದರ ಸಿನೇಮಾಕ್ಕ ಬ್ಯಾಡ, ಜುಹೂಕ್ಕ ಹೋಗೋಣ. ಕೂತು ಮಾತಾಡೋಣ, ಹಂಗs ಆರಾಮ ಕೂತು...."

"ಅಚ್ಛಾ ?" –ಆತನ ಕಣ್ಣುಗಳಲ್ಲಿ ಆಕೆಯ ಸೂಚನೆಯ ಬಗ್ಗೆ ಮೆಚ್ಚುಗೆ ವ್ಯಕ್ತಗೊಂಡಿತ್ತು.

"ಟ್ಯಾಕ್ಸಿ...."

* * *

ಒಂದು ರವಿವಾರ ಮಧ್ಯಾಹ್ನ ಶಾಂತಿ ಬಾಂದ್ರಾದಲ್ಲಿರುವ ಸಿಂಧೆಯ ರೂಮಿನ ವಿಳಾಸ ಹುಡುಕಿಕೊಂಡು ಹೋದಳು. ರೂಮಿನ ಎದುರುಗಡೆಯೇ ಪ್ರಸಿದ್ಧ ಸರ್ಜನ್‌ರೊಬ್ಬರ ದೊಡ್ಡ ಕ್ಲಿನಿಕ್ ಇದ್ದುದನ್ನು ಆತ ಮೊದಲೇ ಹೇಳಿದ್ದರಿಂದ ಹುಡುಕುವುದು ಕಷ್ಟವೇನೂ ಆಗಲಿಲ್ಲ. ಇಕ್ಕಟ್ಟಾದ ಸಂದಿಯಲ್ಲಿಂದ ಹಾಯ್ದು ಮೆಟ್ಟಲುಗಳನ್ನೇರಿ ಆಕೆ ಬಾಗಿಲು ತಟ್ಟಿದಾಗ ಅದು ಕಿರ್ರೆಂದು ಸಪ್ಪಳ ಮಾಡಿ ತೆರೆದುಕೊಂಡಿತು. ಎದುರಿಗೆ ಅಜಾನುಬಾಹುವಾದ ಬರಿ ಪ್ಯಾಂಟ್ ಮಾತ್ರ ಧರಿಸಿದ್ದ ಸಿಖ್ ಸರದಾರಜಿಯನ್ನು ನೋಡಿ ತುಸು ಹಿಂದೆ ಸರಿದು ಆಕೆ ತೊದಲಿದಳು.

"ಎಕ್ಸ್‌ಕ್ಯೂಜ್ ಮಿ, ಮಿಸ್ಟರ್ ಸಿಂಧೆ–" ಆಕೆಯ ಮಾತು ಮುಗಿಯುವ ಮೊದಲೇ ಆತ ದೊಡ್ಡದಾಗಿ ಅಟ್ಟಹಾಸ ಮಾಡಿ "ಆಯಿಯೇ ಆಯಿಯೇ ಬಹನ್‌ಜೀ" ಅಂತ ಅವಳನ್ನು ಸ್ವಾಗತಿಸಿ ಹರಕು-ಮುರುಕು ಇಂಗ್ಲಿಷ್‌ನಲ್ಲಿ ಹೇಳಿದ, "ನಾವು ನಿಮ್ಮನ್ನೇ ಕಾಯುತ್ತಿದ್ದಿವಿ. ನೀವು ಇವತ್ತು ರೂಮಿಗೆ ಬರುವವರಿದ್ದೀರೆಂದು ಈ ಸಿಂಧೇಕಾ ಬಚ್ಚಾ ಮುಂಜಾನೆಯಿಂದಲೂ ನನ್ನ ಕಡೆಯಿಂದ ರೂಮು ಕ್ಲೀನ್ ಮಾಡಿಸುತ್ತಿದ್ದಾನೆ."

ಅಷ್ಟರಲ್ಲಿ ರಮಾಕಾಂತನೂ ಎದ್ದು ಬಂದ, "ಬಾ ಶಾಂತೀ, ಬರ್ತೀಯೋ ಇಲ್ಲೋ ಅನಿಸಿತ್ತು." ಒಳಗೆ ಬಂದ ಆಕೆಗೆ ಆತ ತನ್ನ ಗೆಳೆಯ ಸಿಂಗ್‌ನ ಪರಿಚಯ ಮಾಡಿಸಿದ. ಸಿಂಗ್ ಮತ್ತೊಮ್ಮೆ ಅಟ್ಟಹಾಸ ಮಾಡಿ ಅಂದ, "ನಿಮ್ಮ ಪರಿಚಯವಾದಾಗಿನಿಂದ ಒಂದು ರಜೆಯ ದಿನವೂ ನನ್ನ ಗೆಳೆಯ ನನಗೆ ಸಿಕ್ಕಿಲ್ಲ. ನೀವು

ಅವನನ್ನು ನನ್ನಿಂದ ಪೂರಾ ಕಸಿದುಕೊಂಡಿದ್ದೀರಿ.'' ನಂತರ ಆತ ಆಕೆಗೆ ಮಾತಾಡಗೊಡದೆ, ಸಿಂಥೆ ತಡೆಯಲೆತ್ನಿಸಿದರೂ ಕೇಳದೆ, ಬಹಳ ಸೂಕ್ಷ್ಮ ತಿಳಿವಳಿಕೆಯ ಮನುಷ್ಯನಂತೆ, ``ನೀಚೇ ಸೇ ಚಾಯ್ ಲಾವೂಂಗಾ'' ಅಂತ ಶರ್ಟ್ ಹಾಕಿಕೊಂಡು ಕೆಳಗಿಳಿದು ಹೊರಟೇ ಹೋದ. ಹಾಗೆ ಹೋಗುವಾಗ ಆತ ಕಣ್ಣು ಮಿಟುಕಿಸಿದ್ದನ್ನು ಕಂಡು ಸಿಂಥೆ ಬಹಳ ಕಾಳಜಿಯಿಂದ ಶಾಂತಿಯ ಕಡೆ ತಿರುಗಿ, ಹೇಳಿದ, ``ಸಿಂಗ್‌ನ ನಡವಳಿಕೆ ನೀ ತಪ್ಪ ತಿಳೀಬ್ಯಾಡ ಶಾಂತೀ. ಏಕಾಏಕಿ ಅಂವಾ ಹಿಂಗ ನಮ್ಮಿಬ್ಬರನ್ನು ಬಿಟ್ಟು ವಿಂಕ್ ಮಾಡಿಕೋತ ಹೋದದ್ದು ನೋಡಿ ಅವನಿಗೆ ನಾ ನಿನ್ನ ಬಗ್ಗೆ ಏನರೆ ಹುಚ್ಚುಚ್ಚಾರ ಹೇಳಿರಬಹುದೂಂತ ನಿನಗ ಅನಿಸಿತೇನು ? ಅವನ ಸ್ವಭಾವನs ಹಾಂಗ. ಈ ಪಂಜಾಬೀ ಮಂದೀ ತಲಿ ಯಾವಾಗ್ಲೂ ಹೆಚ್ಚು ದೂರ ಓಡೂದಿಲ್ಲ. ಒಂದು ಗಂಡು, ಒಂದು ಹೆಣ್ಣು, ಇದರ ಅರ್ಥ ಸೆಕ್ಸ್ ಅಂತಲೇ ಅಂತಾನ ಸಿಂಗ್. ಅವನಿಗೆ ಫ್ರೆಂಡ್‌ಶಿಪ್‌ದ ಕಲ್ಪನಾ ಬರೂದಿಲ್ಲ.''

ಸಿಂಥೆಗೆ ಅನಿಸಿದ ಕಾಳಜಿಯಿಂದ ಅವಳಿಗೆ ನಗುಬಂತು. ``ಹೋಗ್ಲಿ ಬಿಡು, ಹಾಂಗ ಅಂವಾ ನಮ್ಮಿಬ್ಬರ ಸಲುವಾಗಿ ಏನರೆ ತಿಳಿದಿದ್ರೂ ನಾ ಕೇರ್ ಮಾಡೂದಿಲ್ಲ.''

``ಹಾಗಂದ್ರ ಹ್ಯಾಂಗ ಶಾಂತೀ ? ನಾವು ಮಂದೀ ಅಭಿಪ್ರಾಯಕ್ಕ ಕೇರ್ ಮಾಡಬೇಕಾಗತದ. ಸುಮ್ನೆ ಹೆಸರು ಕೆಡ್ಲಿಕ್ಕೆ ಯಾಕ ಸ್ಕೋಪ್ ಕೊಡಬೇಕು ನಾವು ಏನೂ ಕಾರಣ ಇಲ್ಲದs ? ಮನಶ್ಯಾಗ ಕ್ಯಾರೆಕ್ಟರ್ ಅಂದ್ರ ಭಾಳ ಮಹತ್ವದ್ದು. ಭಾಳ ಜ್ವಾಕಿಯಿಂದ ಕಾಯ್ಕೋಬೇಕು ಅದನ್ನ.''

ಶಾಂತಿಗೆ ಒಮ್ಮೆಲೆ ಕುಸಿದಂತೆನಿಸಿತು. ಆಕೆಯ ಮುಖದಲ್ಲಾದ ಬದಲಾವಣೆ ಎಷ್ಟು ಸ್ಪಷ್ಟವಾಗಿತ್ತೆಂಬುದು ರಮಾಕಾಂತ ಅದನ್ನು ಒಮ್ಮೆಲೆ ಗಮನಿಸಿದಾಗಲೇ ಆಕೆಗೆ ತಿಳಿಯಿತು.

``ಯಾಕ ಶಾಂತೀ ? ನಿನಗ ಆರಾಮಿಲ್ಲೇನು ? ಇವತ್ತಿನ ಪಿಕ್ಚರ್ ಪ್ರೋಗ್ರ್ಯಾಂ ಕ್ಯಾನ್ಸಲ್ ಮಾಡೋಣೇನು ?'' –ಅನುಕಂಪದಿಂದ ಕೇಳಿದ ಆತ.

``ಇಲ್ಲ, ಇಲ್ಲ, ನಾ ಆರಾಮಿದ್ದೀನಿ. ಪಿಕ್ಚರ್‌ಕ ಹೋಗೋಣ ಇವತ್ತ. ನಾಳೆ ನಾ ಸಾತಾರಕ್ಕ ಹೋಗ್ಬೇಕಲ್ಲ ದೀಪಾವಳಿ ಹಬ್ಬಕ್ಕ. ಇನ್ನ ಹದಿನೈದ ದಿನಾ ಭೆಟ್ಟಿ ಆಗೂದಿಲ್ಲ.''

``ಓಹೋ, ನೀ ಹಬ್ಬಕ್ಕ ಅಂತ ರಜಾ ತಗೊಂಡು ಹೊಂಟೀಯೇನು ? ಈಗ ತಿಳೀತು.'' ಆತ ಕುರ್ಚಿಯಲ್ಲಿ ಹಿಂದಕ್ಕೊರಗಿ ಉಸಿರು ಬಿಟ್ಟು ತನಗೇ ಎಂಬಂತೆ ಅಂದ, ``ಪುಣ್ಯವಂತಿ ಇದ್ದೀ ನೀನು. ನಿನಗ ನಿನ್ನವರು, ನಿನ್ನ ಮನೀ, ನಿನ್ನ ಊರು ಅಂತ ಅದ.''

ಶಾಂತಿ ಒಮ್ಮೆಲೆ ಮುಂದೆ ಸರಿದು ಕೂತು ಕೇಳಿದಳು, ``ನಾವಿಬ್ರೂ

ಒಬ್ಬರಿಗೊಬ್ಬರು ಪರ್ಸನಲ್ ಲೈಫ್ ಸಲುವಾಗಿ ಏನೂ ಚೌಕಾಶಿ ಮಾಡಬಾರದು ಅಂತ ನೀ ಕಂಡೀಶನ್ ಹಾಕೀ ಖರೇ. ಆದ್ರೂ ರಮಾಕಾಂತ, ನನಗೆ ನಿನ್ನ ಬಗ್ಗೆ ಕೇಳಬೇಕು ಅನಸ್ತದ,''

''ನನ್ನ ಸಲುವಾಗಿ ಹೇಳುವಂಥಾದ್ದು ಏನೂ ಇಲ್ಲ ಶಾಂತಿ, ಅದS ನನ್ನ ಟ್ರ್ಯಾಜಿಡಿ. ನನಗ ನನ್ನವ್ರು ಅನ್ನವ್ರು ಯಾರೂ ಯಾರೂ ಇಲ್ಲ.''

''ಫ್ರೆಂಡ್ಸು ?'' –ತನ್ನ ಪ್ರಶ್ನೆಯ ಉದ್ದೇಶವೇನಿತ್ತೆಂಬುದು ಆಕೆಗೆ ಆತನ ಉತ್ತರದಿಂದ ಸ್ಪಷ್ಟವಾಯಿತು.

''ನಿನ್ನ ಗುರ್ತು ಆಗೂತನಕಾ ಫ್ರೆಂಡ್ಸೂ ಯಾರೂ ಇರ್ಲಿಲ್ಲ. ಫ್ರೆಂಡ್ ಅಂದರ ಖರೇ ಅರ್ಥದಾಗ ಫ್ರೆಂಡ್. ಅಂದರ ಯಾರ ಸಹವಾಸದಿಂದ ಮನಸಿಗೆ ಸಮಾಧಾನ ಸಿಗತದೋ ಅಂಥ ಫ್ರೆಂಡ್– ನನಗ ಇಷ್ಟದಿನಾ ಯಾರೂ ಇರ್ಲಿಲ್ಲ.''

ರಮಾಕಾಂತನ ಮಾತುಗಳಲ್ಲಿ ಆಡಂಬರವಿಲ್ಲ, ಶೋ ಇಲ್ಲ. ಭಾವುಕತೆ ಇದ್ದರೂ ಅದು ಸೆಂಟಿಮೆಂಟಲ್ ಅನಿಸುವುದಿಲ್ಲ. ಆತ ಹೆಚ್ಚು ಓದಿದವನಲ್ಲ. ಇಂಗ್ಲಿಷ್ ಸಹ ತಪ್ಪಾಗಿ ಮಾತಾಡುತ್ತಾನೆ. ಆತನ ವಿಚಾರಗಳು ಯಾವುವೂ ಕ್ರಾಂತಿಕಾರಿಯಲ್ಲ. ಆತ ರ್‍ಯಾಂಕ್ ವಿದ್ಯಾರ್ಥಿ ಆಗಿರಲಾರ. ಶಾ ಮಾಣಿಕಚಂದರ ಫರ್ಮ್ ಬಿಟ್ಟರೆ ಬೇರೆಲ್ಲೂ ಬಹುಶಃ ಆತನ ಹೆಸರು ಕೇಳಿದವರೂ ಯಾರೂ ಇರಲಾರರು....

–ಶಾಂತಿಗೆ ಆತನ ಬಗ್ಗೆ ಪಾಪ ಅನಿಸಿತು. ವಿಷಯ ಬದಲಿಸುತ್ತ ಆಕೆ ಕೇಳಿದಳು, ''ನಾ ಊರಿಗೆ ಹೋದಾಗ ನನಗ ಪತ್ರಾ ಬರೀತೀಯಾ ?''

''ಪತ್ರ ? ನಾ ಎಂದೂ ಯಾರಿಗೂ ಬರದಿಲ್ಲ ; ನನಗೂ ಯಾರೂ ಬರದಿಲ್ಲ. ಹ್ಯಾಂಗ ಬರೀಬೇಕಂತ ನನಗ ಗೊತ್ತೂ ಇಲ್ಲ. ಅಷ್ಟಕ್ಕೂ, ಏನಂತ ಬರೀಲಿ ? ಅಂದರ ಬರಿಯೂ ಕಾರಣ ಅರೆ ಏನದ ?''

''ಹಂಗಾರ ನನಗೂ ಬರೀಬ್ಯಾಡ ಅಂತೀಯಾ ?''

''ಬರೀ. ನಿನಗ್ಯಾಕ ಬ್ಯಾಡನ್ನಿ ? ಊರಿಗೆ ಹೋಗಿ ಸುರಕ್ಷಿತ ಮುಟ್ಟಿದ್ದು, ನಿಮ್ಮ ತಂದೀ-ತಾಯೀ ಆರೋಗ್ಯ, ಹಬ್ಬ ಹ್ಯಾಂಗಾತು- ಬರೀ.''

ಶಾಂತಿ ನಕ್ಕಳು.

''ವೇ ಅಯ್ ಕಮಿನ್ ?'' –ಅಂತ ಸುಳ್ಳೇ ಕೆಮ್ಮುತ್ತ ಗಂಟಲು ಸರಿಪಡಿಸಿಕೊಳ್ಳುತ್ತ ಸಿಂಗ್ ಬಂದ. ಅವನ ಹಿಂದೆ ಚಹಾದ ಟ್ರೇ ಹೊತ್ತ ಹೋಟೆಲಿನ ಹುಡುಗ.

* * *

ಸಾತಾರೆಯಲ್ಲಿ ಕಳೆದ ಹದಿನೈದು ದಿನಗಳು ಶಾಂತಿಯ ಪಾಲಿಗೆ ತುಂಬ

ಬೇಸರವಾದವು. ಅವಳ ತಂದೆ ಅರ್ಧಾಂಗ ವಾಯುವಿನಿಂದ ಹಾಸಿಗೆ ಹಿಡಿದಿದ್ದರು. ಹಿರಿಯ ಅಣ್ಣ ತಂದೆಯ ಕಡೆ ಕೊಡಬೇಕಾದಷ್ಟು ಗಮನ ಕೊಡುತ್ತಿಲ್ಲ ; ಅದಕ್ಕೆ ಅವನ ಹೆಂಡತಿಯೇ ಕಾರಣ ಅಂತ ತಾಯಿ ಮೂರೂ ಹೊತ್ತೂ ಅಳುತ್ತಿದ್ದಳು. ಗಳಿಸುವವ ತನ್ನ ಗಂಡ ಒಬ್ಬನೇ, ಕೂತು ತಿನ್ನುವವರು ನೂರು ಜನ, ಅಂತ ಅತ್ತಿಗೆ ಗೊಣಗುತ್ತಿದ್ದಳು. ಶಾಂತಿಗೆ ತಲೆ ಚಿಟ್ಟು ಹಿಡಿದುಹೋಗಿ ರಜೆ ಮುಗಿಯುವ ಮೊದಲೇ ಆಕೆ ಮುಂಬೈಗೆ ಹೊರಟು ಬಂದಳು.

ಇಲ್ಲಿ ಬಂದ ನಂತರ ಆಕೆಗೆ ಅನಿಸಿತು, ತಾನು ಯಾಕೋ ಇತ್ತಿತ್ತಲಾಗಿ ಭಾವನೆಗಳ ಕೋಮಲತೆಯನ್ನು ಕಳೆದುಕೊಳ್ಳುತ್ತಿದ್ದೇನೆ. ಅಲ್ಲೇ ಇದ್ದು ತಾಯಿಯನ್ನು ಸಂತಯಿಸಬೇಕಾಗಿತ್ತು. ತಂದೆಯ ಸೇವೆ ಮಾಡಬೇಕಾಗಿತ್ತು. ಅವರನ್ನು ಬಿಟ್ಟರೆ ತನ್ನ ಕಷ್ಟ-ಸುಖ ವಿಚಾರಿಸುವವರು ಯಾರಿದ್ದಾರೆ ? ಯಾಕೋ ಮುಂಬೈಯ ಯಾಂತ್ರಿಕತೆ ತನ್ನ ನರನರಗಳಲ್ಲೆಲ್ಲಾ ಹೊಕ್ಕಂತಿದೆ....

–ಸಮುದ್ರ ದಂಡೆಯ ಮರಳಲ್ಲಿ ಒಬ್ಬಳೇ ಕೂತು ಆಕೆ ವಿಚಾರ ಮಾಡಿದಳು. ತನ್ನದು ತಪ್ಪಾಯಿತು ಅನಿಸಿತು. ಹಾಗೆಂದು ಕೂಡಲೇ ತಾಯಿಗೊಂದು ಪತ್ರ ಬರೆಯಬೇಕು ಅನಿಸಿತು. –ಮುಂಬೈಯಲ್ಲಿ ಒಳ್ಳೊಳ್ಳೆಯ ಡಾಕ್ಟರುಗಳಿದ್ದಾರೆ, ಮಾಂಶಿಯ ಮನೆಯೂ ಅನುಕೂಲ, ತಂದೆಯವರನ್ನು ಇಲ್ಲೇ ಕರಕೊಂಡು ಬಾ, ನಾನೇ ಎಲ್ಲ ವ್ಯವಸ್ಥೆ ಮಾಡುತ್ತೇನೆ, ನೀನು ಕಾಳಜಿ ಮಾಡಬೇಡ, ತಂದೆಯವರಿಗೆ ನೆಟ್ಟಗಾಗುತ್ತದೆ....

ಬಸ್ ಹಿಡಿದು ಆಕೆ ಸಂಜೆ ಮನೆಗೆ ಬಂದಾಗ ಮನೆಯಲ್ಲಿ ಯಾರೂ ಇರಲಿಲ್ಲ. ಸರ್ಕಸ್ ನೋಡಲೆಂದು ದಾದರಕ್ಕೆ ಹೋಗಿದ್ದರು. ಆಕೆ ಕೈಕಾಲು ತೊಳಕೊಂಡು ಚಹಾಕ್ಕೆ ಎಸರಿಟ್ಟು ಪಡಸಾಲೆಗೆ ಬಂದಾಗ ಕೆಲಸದ ಹುಡುಗಿ ಬನೂ ಕೆಲವು ಪತ್ರ ತಂದುಕೊಟ್ಟಳು, "ಒಂದು ಸಂಜೀ ಪೋಸ್ಟ್‌ನ್ಯಾಗ ಬಂತು, ಒಂದನ್ನ ನಿಮ್ಮ ಆಫೀಸ್ ಸಿಪಾಯಿ ತಂದುಕೊಟ್ಟ. ಇನ್ನೊಂದು ತಾರ, ಕೆಳಗಿನ ಮನೀ ಬಹನ್‌ಜಿ ಸೈನ್ ಮಾಡಿ ತಗೊಂಡು ಕೊಟ್ಟರು."

ತನ್ನ ಹೆಸರಿಗೇ ಇದ್ದ ಮೂರೂ ಕಾಗದಗಳನ್ನು ಆಕೆ ಬನೂ ಅವುಗಳ ಬಗ್ಗೆ ವಿವರಣೆ ಕೊಟ್ಟ ಕ್ರಮದಲ್ಲೇ ಒಂದೊಂದಾಗಿ ಬಿಡಿಸಿದಳು. ಸಾತಾರೆಯಿಂದ ಬಂದಿದ್ದ ಪತ್ರ, ಪತ್ರವಲ್ಲ, ಲಗ್ನದ ಆಮಂತ್ರಣ ಪತ್ರಿಕೆ. ಶಂಕರನ ಲಗ್ನ. ಜೊತೆಗೊಂದು ಕಿರು ಪತ್ರ. ಲಗ್ನದ ನಂತರ ತಾವಿಬ್ಬರೂ ಅಮೇರಿಕಾಕ್ಕೆ ಹೋಗುತ್ತಿದ್ದೇವೆ, ತಮ್ಮನ್ನು ಹರಸಬೇಕು, ಅಂತ ಶಂಕರನ ಕೈಬರಹ.

ತನಗೇನನಿಸುತ್ತಿದೆಯೆಂದು ಶಾಂತಿ ಯೋಚಿಸಿ ತಿಳಿಯಲು ಪ್ರಯತ್ನಿಸಿದಳು.

ಇದು ದುಃಖವಲ್ಲ, ಹಳೆಯ ಗಾಯ ಕೆದಕಿದ ಅನುಭವವಲ್ಲ, ನಿರ್ಲಿಪ್ತತೆಯೂ ಅಲ್ಲ, ಉದಾಸೀನತೆಯಲ್ಲ – ಏನೋ.... ಹೋಗಲಿ. ಶುಭಾಶಯ ಕಳಿಸೋಣ.

ಎರಡನೆಯ ಚೀಟಿ ರಮಾಕಾಂತ ಸಿಂಧೆಯದು. "ರಜೆ ಮುಗಿಯುವ ಮೊದಲೇ ತಿರುಗಿ ಬಂದಿರುವಿ ಅಂತ ನಿನ್ನ ಕಸಿನ್ ಹೇಳಿದ. ಸಾಧ್ಯವಾದರೆ ಸಂಜೆ ಬಾ."

ಟೆಲಿಗ್ರಾಂ ಸಾತಾರೆಯಿಂದ ಬಂದಿತ್ತು, "Father expired. Come immediately." ಅವಳ ಅಣ್ಣನ ಹೆಸರಿನಿಂದ ಬಂದಿತ್ತು.

ಗ್ಯಾಸ್ ಮೇಲಿಟ್ಟ ಚಹಾ ಮರೆತು ಶಾಂತಿ ಕೂತಲ್ಲೇ ಸುಮ್ಮನೆ ಕೂತಳು.

ಅರ್ಧ ಗಂಟೆಯ ನಂತರ ಬಂದ ಮಾಂಶಿ ಅವಳನ್ನು ಹಾಗೆ ಕೂತಿದ್ದಂತೆಯೇ ಕಂಡಳು. ಮಾಂಶಿಯ ಹಿಂದೆಯೇ ಹುಡುಗರೂ ಬಂದರು.

"ಯಾರದದು ತಾರು ಶಾಂತೀ ?" ಅನ್ನುತ್ತ ಹತ್ತಿರ ಬಂದ ಮಾಂಶಿ, ಶಾಂತಿ ಮಾತಾಡದಿರಲು ತಾನೇ ತಾರನ್ನು ನೋಡಿ ಒಮ್ಮೆಲೆ ಶಾಂತಿಯ ಹತ್ತಿರ ಕುಸಿದು ಕೂತು ಅವಳನ್ನು ತಬ್ಬಿಕೊಂಡು ಅಳತೊಡಗಿದಳು.

* * *

"ಯಾರು ? ಶಾಂತಿ ? ಇಂಥಾ ರಾತ್ರೀ ಒಬ್ಬಾಕೀನೇ ಹ್ಯಾಂಗ ಬಂದಿ ? ಯಾಕ ಬಂದಿ ?" –ರಮಾಕಾಂತ ತುಂಬ ಅಚ್ಚರಿಯಿಂದ ಕೇಳಿದ.

ಆತನ ರೂಮಿನೊಳಗೆ ಬಂದ ಆಕೆ ಬಾಗಿಲು ಹಾಕಿ, ಹಾಕಿದ ಬಾಗಿಲಿಗೇ ಒರಗಿ ನಿಂತು ತಲೆಯೆತ್ತಿ ಆತನನ್ನು ನೋಡಿದಳು.

"ನಿನಗ ನನ್ನ ಚೀಟಿ ಮುಟ್ಟಿತೇನು ಶಾಂತಿ ? ಮಧ್ಯಾಹ್ನದಾಗs ಕಳಿಸಿದ್ದೆ, ಸಂಜೀಗೆ ಫ್ರೀ ಇದ್ದರ ಬಾ ಅಂತ. ಇಂಥಾ ರಾತ್ರೀ ಯಾಕ ಬಂದಿ ನೀನು ? ನಿಮ್ಮ ಮಾಂಶಿ ಹ್ಯಾಂಗ ಬಿಟ್ಟರು ನಿನ್ನ ? ಯಾರರೆ ನೋಡಿದರೆ ಏನಂತಾರ ?"

ಶಾಂತಿಗೆ ದುಃಖವಾಯಿತು. ಕೆಳದನಿಯಲ್ಲಿ ಆಕೆ ಹೇಳಿದಳು, "ಮಾಂಶೀ ಬ್ಯಾಡ ಅಂದ್ರೂ ಬಂದೀನಿ. ನೀನು ಹೋಗು ಅಂದರ, ಮಂದಿ ಏನಂದಾರು ಅಂತ ಅಂಜಿಕಿ ಇದ್ದರ, ಹೋಗಿ ಬಿಡ್ತೀನಿ."

"ಹಾಂಗಲ್ಲ ಶಾಂತೀ", ಆತ ಸುಧಾರಿಸಿಕೊಳ್ಳಲೆತ್ನಿಸುತ್ತ ಹೇಳಿದ. "ಸಿಂಗ್ ಊರಿಗೆ ಹೋಗ್ಯಾನ" –ನಂತರ ತಾನು ಹಾಗೆ ಹೇಳಿದ್ದಕ್ಕೆ ಅರ್ಥವಿಲ್ಲೆಂದು ತಿಳಿದು ಒಮ್ಮೆಲೆ ಸುಮ್ಮನಾದ.

"ರಮಾಕಾಂತ, ನಮ್ಮ ಅಪ್ಪ ಸತ್ತು ಹೋದರು ಅಂತ ಟೆಲಿಗ್ರಾಂ ಬಂತು ಸಂಜೆ."

"ಓ ! ಸಾರಿ" –ಒಮ್ಮೆಲೆ ಮುಂದೆ ಬಂದು ಆಕೆಯ ಕೈಗಳನ್ನು ಹಿಡಿದುಕೊಂಡ.

" I'am very sorry, ಶಾಂತೀ, ಅಲ್ಲ, ಅಂದರ ನೀ ಊರಿಗೆ

ಹೋಗೂದಿಲ್ಲೇನು ?''

ಶಾಂತಿ ಆತನ ಕೈಗಳನ್ನು ತನ್ನ ಕೈಗಳಲ್ಲಿಟ್ಟೇ ಆತನ ಕಣ್ಣುಗಳನ್ನು ನೋಡುತ್ತ ಮಾತಾಡಿದಳು, ``ರಮಾಕಾಂತ, ನನಗ–''

``ಏನು ಶಾಂತಿ ? ನಿನಗ ಏನು ಹೆಲ್ಪ್ ಬೇಕು ಹೇಳು, ನಾ ರೆಡೀ ಇದ್ದೀನಿ'' –ಆತನ ಧ್ವನಿಯಲ್ಲಿ ಪ್ರಾಮಾಣಿಕತೆ ಇತ್ತು.

``ರಮಾಕಾಂತ, ನನಗ ಈಗ ಇಲ್ಲಿಂದ ಹೋಗು ಅನಬ್ಯಾಡ.''

``ನಾಯೆಲ್ಲೆ ಹೋಗು ಅಂದೆ ? ನಿನಗ ಸಮಾಧಾನ ಆಗೂ ತನಕಾ ಕೂಡು. ಆ ಮ್ಯಾಲ ನಾನs ಕಳಸಿ ಬರ್ತೀನಿ ಮಾತುಂಗಾದ ತನಕಾ.''

``ರಮಾಕಾಂತ !'' ಆಕೆಯ ಧ್ವನಿ ಆಕೆಗೇ ಕೇಳಿಸದಷ್ಟು ಬದಲಾಗಿತ್ತು. ಎರಡು ಕ್ಷಣ, ನಂತರ ಆತನೇ ಮುಂದೆ ಬಂದನೋ, ಆಕೆಯೇ ಮುಂದೆ ಬಂದಳೋ, ಅಂತೂ ಮೂರನೆಯ ಕ್ಷಣ ಇಬ್ಬರೂ ಗಟ್ಟಿಯಾಗಿ ಅಪ್ಪಿಕೊಂಡಿದ್ದರು.

ಶಾಂತಿಯ ಧ್ವನಿ ಅಳು, ಯಾಚನೆ, ಅರ್ಪಣೆ, ನಿರಾಶೆ, ನಿಸ್ಸಹಾಯತೆ ಎಲ್ಲ ಕೂಡಿ ತೀರ ಅಸ್ಪಷ್ಟವಾಯಿತು. ``ರಮಾಕಾಂತ, ನನಗ ಏನೂ ತಿಳೀವಲ್ದು.... ರಮಾಕಾಂತ.... ನಾನು....''

ರಮಾಕಾಂತ ತಿಳಿವಳಿಕೆಯುಳ್ಳವನಾಗಿದ್ದ. ಶಾಂತಿ ಹೇಳಬೇಕೆಂದಿದ್ದುದು, ಹೇಳಲು ಆಗದೇ ಇದ್ದುದು, ಆತನಿಗೆ ತಿಳಿದು ಹೋಯಿತು, ಆತ ಅವಳನ್ನು ಮಗುವಿನಂತೆ ಎತ್ತಿಕೊಂಡು ಮೃದುವಾಗಿ ಮಂಚದ ಮೇಲೆ ಮಲಗಿಸಿದ.

* * *

ಅರ್ಧ ಗಂಟೆಯ ನಂತರ ಮೈ-ಮನಸು ಎಲ್ಲ ಹಗುರ-ಹಗುರವೆನಿಸಿದಾಗ ಅಂಗಾತಾಗಿ ಮಲಗಿದ್ದ ಶಾಂತಿ ತನ್ನ ಎದೆಯ ಮೇಲೆ ತಲೆಯಿಟ್ಟು ಮಲಗಿದ್ದ ರಮಾಕಾಂತನ ಕೂದಲಲ್ಲಿ ಬೆರಳಾಡಿಸುತ್ತ ನಕ್ಕು ಅಂದಳು, ``ನಿನಗ ಗೊತ್ತದs ಏನು ರಮಾಕಾಂತ ? ನಾ ಕಾಲೇಜಿನ್ಯಾಗಿದ್ದಾಗ ಒಬ್ಬನ್ನ....''

ಅವಳ ತುಟಿಯ ಮೇಲೆ ತುಟಿಯಿಟ್ಟು ಮೆತ್ತಗೆ ಮುದ್ದಿಸಿ ಆತ ಅಂದ, ``ಹಿಂದಕ ಏನೇನು ಆತು ಅನ್ನೂದನ್ನ ಮರತಬಿಡು ಶಾಂತೀ, ನಾನೂ ನನ್ನ ಭೂತ ಮರ್ತಬಿಡ್ತೀನಿ. ನಾವು ಹೊಸಾ ಜೀವನಾ ಸುರೂ ಮಾಡೋಣ.''

``ಹ್ಞಾ, ಆದರೂ ನನಗ ಹೇಳಬೇಕನಸ್ತದ.''

``ಹೇಳು, ಆದರ ಹಿಂಗ-ಇವತ್ತ ಬ್ಯಾಡ. ಒಮ್ಮೆ ಇಬ್ಬರಿಗೂ ಪುರಸೊತ್ತಿದ್ದಾಗ ಕೂತು ಹಿಂದಕ ಏನೇನಾತು ಅನ್ನೂದನ್ನ ಒಬ್ಬರಿಗೊಬ್ಬರು ಹೇಳಿಕೊಳ್ಳೋಣಂತ. ಆದರೂ ನನಗದು ವ್ಯರ್ಥ ಅನಸತದ. ಹಿಂದಿನದು ತಗೊಂಡು ಏನ್ಮಾಡೂದು ? ನಾ

ಹೇಳ್ತೀನಿ ಕೇಳು— ನಿನ್ನ ಜೀವನದಾಗ ಹಿಂದ ನೀ ಏನs ತಪ್ಪು ಮಾಡಿದ್ರೂ ನಾ ಕ್ಷಮಾ ಮಾಡ್ತೀನಿ. ಇನ್ನ ಮುಂದ ನೀ ನನಗ loyal ಆಗಿದ್ದರ ತೀರಿತು. ಹೌದಲ್ಲೊ."

"ಹೌದು" —ಅಂದು ಆಕೆ ಆತನ ಎದೆಯಲ್ಲಿ ಮುಖ ಹುದುಗಿಸಿ ಕಣ್ಣು ಮುಚ್ಚಿದಳು.

* * *

ರಮಾಕಾಂತನಲ್ಲಿ ವಿಲಕ್ಷಣವಾದುದೊಂದು ಸಂರಕ್ಷಕ ಭಾವವಿದೆ. ಆತನೊಡನೆ ಮಲಗಿ ಎದ್ದಾಗ ಆಗುವ ಸಮಾಧಾನ-ಕಾಮತೃಪ್ತಿ ಅಲ್ಲ ಅದು, ಮಗುವಾಗಿದ್ದಾಗ ತಂದೆಯ ಮಡಿಲಲ್ಲಿ ಆಡುವಾಗ ಆಗುತ್ತಿದ್ದಂಥ ಸಮಾಧಾನ.... ಆತನಿಗೆ ತನ್ನ ಬಗ್ಗೆ ಎಷ್ಟು ಕಾಳಜಿಯಿದೆ! ಕೆಲಸದ ಅವಧಿಯಲ್ಲಿ ಇತರ ಜನರೆಲ್ಲ ಇದ್ದಾಗ ತನ್ನ ಕಡೆ ಹೆಚ್ಚಾಗಿ ನೋಡುವುದಿಲ್ಲ ಕೂಡ. "ಮಂದಿ ನಿನಗ ಅಪಶಬ್ದ ಆಡಬಾರದು ಶಾಂತೀ, ನಿನ್ನ ಹೆಸರು ಕೆಡಧಾಂಗ ನೋಡಿಕೊಳ್ಳೂದೂ ನನ್ನ ಕರ್ತವ್ಯ."

ಮಠದ್‌ನ ಮುಕ್ತ ಸ್ವೈರವೃತ್ತಿಗಿಂತ ಎಷ್ಟು ಭಿನ್ನ! ಛಿ, ಮಠದ್ ಬರಿಯ ಸ್ವಾರ್ಥದ ಮುದ್ದೆಯಾಗಿದ್ದ. ರಮಾಕಾಂತನಿಗೆ ಎಷ್ಟು ಧೋರಣೆಯಿದೆ....

ಅದಕ್ಕೇ ಮಾಂಶಿಯ ಮನೆ ಬಿಟ್ಟು ತಾನು ಬಾಂದ್ರಾದಲ್ಲೇ ಎರಡು ಕೋಣೆಗಳುಳ್ಳ ಹೊಸಮನೆಗೆ ಬಂದಾಯಿತು. ಒಂದು ರೀತಿಯಿಂದ ತನ್ನ-ರಮಾಕಾಂತನ ಸಂಸಾರವೇ ಸುರುವಾಗಿದೆ ಇಲ್ಲಿ.

ಮಾಂಶಿ ಗುಟ್ಟಾಗಿ ಉಪದೇಶಿಸಿದ್ದಳು ಒಂದು ದಿನ, "ನೀ ಸುಮ್ಮ ಲಗ್ನಾ ಮಾಡಿಕೊಂಡ ಬಿಡಲಾ ಅವನನ್ನ? ಜಾತಿ-ಸುಡ್ಲಿ, ಬ್ಯಾರೇ ಆದರ ಆಗವೊಲ್ದು. ಲಗ್ನ ಅಂತ ಒಂದಾದರ ಅಡ್ಡಿಯಿಲ್ಲ. ಇದೇನು ಛಂದ ಮಾರಾಯಳs? ನಿಮ್ಮವ್ವಗೇನರೆ ಗೊತ್ತಾದರ ಎದೀ ಒಡಕೊಂಡು ಪ್ರಾಣಾ ಬಿಡ್ತಾಳ ನೋಡು. ಲಗೂನ ಲಗ್ನಾಗಿಬಿಡ್ರಿ."

ಹೌದಲ್ಲ, ಲಗ್ನವಾಗದೆ ಹೂಡಿದ ಸಂಸಾರ ಮಾಂಶಿಗೆ ಮಹಾಪರಾಧವಾಗಿ ಕಂಡರೆ ಮಾಂಶಿಯ ತಪ್ಪೇನಿದೆ ಅದರಲ್ಲಿ? ಆದರೂ ಮಾಂಶಿಯ ಮಾತಿನ ಬಗ್ಗೆ ಸೀರಿಯಸ್ಸಾಗಿ ವಿಚಾರಿಸುವ ಅವಶ್ಯಕತೆಯೇನೂ ಅಷ್ಟಾಗಿ ಕಾಣುತ್ತಿಲ್ಲ.

ಒಂದು ವರ್ಷದ ನಂತರ ಯಾವುದೋ ಮಾತು ಬಂದಾಗ ಶಾಂತಿ ನಗುತ್ತ ಮಾಂಶಿ ಅಂದದ್ದನ್ನು ಹೇಳಿದ್ದಳು ರಮಾಕಾಂತನಿಗೆ.

ಅವಶ್ಯವಾದುದೊಂದು ಮಹತ್ವದ್ದೊಂದು ವಿಷಯ ಮರೆತುಬಿಟ್ಟು ಒಮ್ಮೆಲೆ ನೆನಪಾದವರಂತೆ ಆತ ಅಂದ, "ಹೌದು ಶಾಂತೀ, ಅದೂ ವಿಚಾರ ಮಾಡಬೇಕಾದ ವಿಷಯ. ಮಂದೀ ಸಲುವಾಗಿ ಇವೆಲ್ಲಾ formalities ನಾವು ಮಾಡಬೇಕು. ಸುಮ್ನೆ ಮಂದಿ ನಿನ್ನ ಸಲುವಾಗಿ ಅಪಶಬ್ದ ಆಡಬಾರದು ನೋಡು."

“ನಿನಗ ಹಿಂಗನಸ್ತಿದ್ದರ ರಜಿಸ್ಟ್ರೇಶನ್ ಮಾಡಸೂಣಂತ. ನನಗೇನು ಆ ವಿಧಿಯೊಳಗ ವಿಶೇಷ ನಂಬಿಕೆ ಇಲ್ಲ.”

“ರಜಿಸ್ಟ್ರೇಶನ್ ?” –ರಮಾಕಾಂತ ಗಂಭೀರನಾದ. ನಂತರ ಅವಳನ್ನು ತನ್ನ ತೋಳುಗಳಲ್ಲಿ ಬರಸೆಳೆದು ಗಂಭೀರ ಧ್ವನಿಯಲ್ಲಿ ಅಂದ, “ಶಾಂತಿ, ನಾ ನಿನಗ ಎಂದೂ ನನ್ನ ಸಲುವಾಗಿ ಏನೂ ಹೇಳೇ ಇಲ್ಲಲ್ಲs ?”

“ನನಗೂ ಕೇಳೋ ಅವಶ್ಯಕತಾ ಅನಸಿಲ್ಲ.”

“ಆದರ ಈಗ ಹೇಳೋ ಅವಶ್ಯಕತಾ ಅನಸತದ ನನಗ. ಹೇಳೋ ಟೈಮೂ ಬಂದದ ಈಗ. ಶಾಂತೀ, ನಾ ಹೇಳೂದ ಕೇಳಿ ನನ್ನ ಬಿಟ್ಟು ಹೋಗ್ತಿಯೇನು ?” –ರಮಾಕಾಂತನ ಕಣ್ಣು ಒಮ್ಮೆಲೆ ತುಂಬಿ ಬಂದವು.

“ನಿನಗ ಹಾಂಗನಸ್ತದೇನು ರಮಾಕಾಂತ ?”

“ಇಲ್ಲ. ನನಗ ವಿಶ್ವಾಸ ಅದ ನೀ ನನ್ನ ಕ್ಷಮಾ ಮಾಡ್ತೀ ಅಂತ. ಕ್ಷಮಾ ಮಾಡಲಾಗದ ಪ್ರೀತಿ ಖರೇ ಪ್ರೀತೀನೇ ಅಲ್ಲ. ತ್ಯಾಗ-ಕ್ಷಮಾ ಇವೆರಡೂ ಪ್ರೀತಿಗಿಂತ ಹೆಚ್ಚು ಅಮೂಲ್ಯ ನನ್ನ ದೃಷ್ಟಿಯೊಳಗ.”

“ನನ್ನ ನಂಬು ರಮಾಕಾಂತ. ಇಷ್ಟ ದಿನಾ ಕೂಡಿ ಇದ್ದಿವಿ. ನಾ ಎಂದರೆ ಅಪನಂಬಿಕೆಗೆ ಅವಕಾಶ ಆಗೂಹಾಂಗ ನಡಕೊಂಡೀನೇನು ?”

“ಇಲ್ಲ ಶಾಂತೀ, ನಿನ್ನ ಪ್ರೀತಿ ಅಗದೀ loyal ಅದ. Loyalty ನೇ ಪ್ರೀತಿಯ ಖರೇ ಮಾನದಂಡ. ನಾ ನಿನಗ ಹೇಳ್ತೀನಿ ಶಾಂತೀ, ಇವತ್ತ ಎಲ್ಲಾ ಹೇಳ್ತೀನಿ.”

* * *

ಆ ರಾತ್ರಿ ತಡವಾಗಿ ಮನೆಗೆ ಬಂದ ರಮಾಕಾಂತ ಸೀದಾ ಶಾಂತಿ ಕೂತಿದ್ದಲ್ಲಿಗೆ ಹೋಗಿ ಅವಳಿಗೊಂದು ಭಾವಚಿತ್ರ ತೋರಿಸಿದ. ಮೈತುಂಬ ಸೆರಗು ಹೊದ್ದು ಚಿತ್ರವಿಚಿತ್ರದ ಆಭರಣ ಧರಿಸಿದ ಸಣ್ಣ ಹುಡುಗಿಯ ಚಿತ್ರ. ಶಾಂತಿ ಅದನ್ನು ನೋಡುತ್ತಿದ್ದಂತೆ ಆತ ಅವಳಿಂದ ತುಸುದೂರ ನಡೆದುಹೋಗಿ ಅವಳ ಕಡೆ ಬೆನ್ನುಮಾಡಿ ನಿಂತು ಸಮತೋಲನದ ಧ್ವನಿಯಲ್ಲಿ ಒಂದೇ ಉಸುರಿಗೆ ಹೇಳಿದ, “ಆಕಿ ನನ್ನ ಹೆಂಡತಿ. ಅಂದರ ಅಕ್ಕನ ಮಗಳು. ನನಗ ಆಕಿನ್ನ ಲಗ್ನ ಆಗೋ ಮನಸ್ಸು ಒಂದಿಷ್ಟೂ ಇರ್ಲಿಲ್ಲ. ಬ್ಯಾಡ ಅಂತ ಎಷ್ಟು ಹೊಡಕೊಂಡ್ರೂ ಮನ್ಯಾಗ ಕೇಳ್ಲಿಲ್ಲ. ನಮ್ಮವ್ವ ಈ ಲಗ್ನಾ ನೋಡೇ ಸಾಯ್ತೀನಿ ಅಂದಳು ಅಂತ ಹಟಹಿಡಿದು ಲಗ್ನಾ ಮಾಡಿದ್ರು. ಮರುದಿನಾನೇ ಯಾರಿಗೂ ಹೇಳದs ಕೇಳದs ಊರು ಬಿಟ್ಟೆ. ಮುಂಬೈಗೆ ಬಂದೆ. ಹನ್ನೆರಡು ವರ್ಷ ಆಗಿ ಹೋದವು. ಮನೀಯವರದು ಯಾರದೂ ಮಾರೀ ನೋಡಿಲ್ಲ ನಾನು. ನಾ ಸತ್ತೀನಂತs ತಿಳಿದಿರಬೇಕು ಅವರೆಲ್ಲ. ಅದs ಛಲೋನು ಆತು

ಅನ್ನು."

"ನೀನ್ಯಾಕೆ ಒಲ್ಲೆ ಅಂದಿ ರಮಾಕಾಂತ ? ಛಂದ ಇದ್ದಾಂಗ ಕಾಣಸ್ತಾಳ ಹುಡಿಗಿ" –ಶಾಂತಿಯ ಧ್ವನಿಯಲ್ಲಿ ಅಸೂಯೆಯ ನೆರಳೂ ಇರಲಿಲ್ಲ.

"ಅದು ಮತ್ತೊಂದು ಕಥಿ. ನಾ ನನ್ನ ಕ್ಲಾಸ್‌ಮೇಟ್ ಒಬ್ಬಾಕಿನ್ನ ಲವ್ಹ್ ಮಾಡ್ತಿದ್ದೆ. ಭಾಳ-ಭಾಳ ಲವ್ಹ್ ಮಾಡ್ತಿದ್ದೆ. ನಾವು ಎಷ್ಟೋ ಸಾರೆ ಕೂಡಿ ಮಲಗಿದ್ದಿವಿ ಸಹ. ಆಕಿ ಕಡೀಕೆ ನನಗ ಕೈಕೊಟ್ಟಳು. ಯಾರೋ ದೊಡ್ಡ ಆಫೀಸರ್‌ನ್ನ ಲಗ್ನಾಗಿ ಫಾರಿನ್ನಿಗೆ ಹಾರಿಹೋದಳು. ನನಗ ಆಕೀನ್ನ ಮರೀಲಿಕ್ಕೆ ಆಗಲಿಲ್ಲ.... ಭಾಳ ದಿನಾ ಆಗಿರಲಿಲ್ಲ...."

ಶಾಂತಿ ಸುಮ್ಮನೇ ಕೇಳುತ್ತಿದ್ದಳು.

"ಅದಕ್ಕ ಲಗ್ನನೂ ಬ್ಯಾಡ, ಏನೂ ಬ್ಯಾಡ ಅನಿಸಿ ಓಡಿ ಬಂದೆ. ಭಾಳ ನಿರಾಶೆ, ಭಾಳ ದುಃಖ ಅನುಭವಿಸೀನಿ. ಎಷ್ಟೋ ಸರೆ...."

ಆತ ಅಳುತ್ತಿದ್ದುದು ಗಮನಕ್ಕೆ ಬಂದು ಶಾಂತಿ ಎದ್ದು ಆತನ ಹಿಂದೆ ಹೋಗಿ ನಿಂತು ಸ್ನೇಹದಿಂದ ಭುಜದ ಮೇಲೆ ಕೈಯಿರಿಸಿದಳು. "ಮರ್‍ತುಬಿಡು ರಮಾಕಾಂತ".

"ಮರತೀನಿ ಶಾಂತೀ, ನಿನ್ನ ಸಹವಾಸದಾಗ ಎಲ್ಲಾ ಮರತೀನಿ" –ಆತ ಕಣ್ಣೊರೆಸಿಕೊಂಡು ಅವಳ ಕಡೆ ತಿರುಗಿ ಅವಳ ಭುಜದ ಮೇಲೆ ತಲೆಯಿಟ್ಟು ಎರಡೂ ಕೈಗಳಿಂದ ಅವಳನ್ನು ಬಳಸಿ ಹೇಳಿದ, "ಲಗ್ನಾದ ಹೆಂಡ್ತಿ ಜೀವಂತ ಇದ್ದಾಳ. ಅದಕ್ಕ ರಜಿಸ್ಟ್ರೇಶನ್ ಭಾನಗಡಿ ಬ್ಯಾಡ. ಸಿಂಪಲ್ ಆಗಿ ಯಾವದರ ಗುಡ್ಯಾಗ ಲಗ್ನಾಗೋಣ. ಆದಷ್ಟು ಲಗೂ. ಏನಂತೀ ?"

ತಾನು ಅವನನ್ನು ಕ್ಷಮಿಸಿದ ಬಗ್ಗೆ ಅವನಿಗೇನೂ ಕೃತಜ್ಞತೆ ಅನಿಸಿಯೇ ಇಲ್ಲವೆ, ಅಂತ ಆಕೆಗೆ ಒಂದು ಕ್ಷಣ ಆಶ್ಚರ್ಯವಾಯಿತು. ಮರುಕ್ಷಣ, ಅದು ಆತನಿಗೆ ತನ್ನಲ್ಲಿರುವ ಆಳ ವಿಶ್ವಾಸವನ್ನೇ ತೋರಿಸುತ್ತದಲ್ಲವೆ, ಅಂತ ಸಮಾಧಾನವೆನಿಸಿತು.

* * *

ಸಿಂಪಲ್ ಆಗಿ ನಡೆಯಲಿರುವ ಮದುವೆಗಾಗಿ ತುಸು ಬಟ್ಟೆ ಕೊಳ್ಳಲೆಂದು ಒಂದು ರಜಾದಿನ ಮುಂಜಾನೆ ಅವರಿಬ್ಬರೂ ದಾದರಿಗೆ ಹೋಗುವ ಸಿದ್ಧತೆಯಲ್ಲಿದ್ದಾಗ ಪೋಸ್ಟ್ ಬಂತು.

"ಏನೋ, ನಿನ್ನ ಹೆಸರಿಗೆ ದಪ್ಪ ಪಾಕೀಟು ಬಂದದ ನೋಡು" ಅಂತ ಆತ ಕೂಗಿ ಹೇಳಿದ.

ತಯಾರಾಗಿ ಹೊರಗೆ ಬಂದ ಶಾಂತಿಗೆ ಆ ಕವರ್ ಮೇಲೆ ಮಠದ್‌ನ ಅಕ್ಷರ ನೋಡಿ ಇದೇನು ಹಾಳು ಅಪಶಕುನ ಅನಿಸಿತು.

"ಇದು ಹಿಂಗs ಇರ್ಲಿ ನಡೀ ರಮಾಕಾಂತ, ನಮಗ ಹೊತ್ತಾಗ್ತದ" ಎಂದು ಆಕೆ ಅವಸರಿಸಿದಳು.

"ಅರೆ, ಯಾರದದು ಪತ್ರ ? ನೋಡೆರs ನೋಡಲಾ"

"ಅದs, ನಾ ನಿನಗ ಹೇಳಿದ್ದಿಲ್ಲs- ನಾ ಹಿಂದಕ ಒಬ್ಬನ್ನ ಲವ್ಹ್ ಮಾಡಿದ್ದೆ ಅಂತ ?"

"ಓಹೋ, ಅವನದೇನು ? ಛಲೋ ಹೊತ್ತಿನ್ಯಾಗ ತನ್ನ ನೆನಪ ಮಾಡಿಕೊಟ್ಟಾನ. ಇನ್ವಿಟೇಶನ್ ಕಳ್ಸೂಣೇನು ಅವನಿಗೂ ?" ಅಂತ ನಕ್ಕು ಆತ ಬೂಟ್ಸ ಹಾಕಿಕೊಳ್ಳತೊಡಗಿದ, "ನಡೀ, ರಾತ್ರಿ ಊಟಾಗಿ ಮಲಗೋವಾಗ ಆರಾಮ ಕೂತು ಓದಿ ನೋಡೀಯಂತ ಏನ ಬರದಾನಂತ."

ಯಾಕೋ ಶಾಂತಿಗೆ ಪಿಚ್ಚೆನ್ನಿಸತೊಡಗಿತು. ಆಕೆ ರಮಾಕಾಂತನ ಹಿಂದೆ ಸುಮ್ಮನೆ ನಡೆದಳು.

* * *

ರಾತ್ರಿ ಶಾಂತಿ ಮಂಚದ ಮೇಲೆ ಕೂತಿದ್ದಳು. ರಮಾಕಾಂತ ಮೊದಲು ಅವಳ ಪಕ್ಕದಲ್ಲಿ ಮಲಗಿದ್ದವನು ಅವಳ ಮಾತು ಕೇಳುತ್ತ ಕೇಳುತ್ತ ನಡುವೆಯೇ ಯಾವಾಗಲೋ ಎದ್ದು ಹೋಗಿ ಎದುರಿನ ಕುರ್ಚಿಯಲ್ಲಿ ಕೂತಿದ್ದನು. ಶಾಂತಿ ನಿಧಾನವಾಗಿ ಎಲ್ಲ ಹೇಳಿದಳು. ಅಲ್ಲಲ್ಲಿ ಅವಳು ಹೇಳಲು ಮರೆತ ಸಣ್ಣ-ಪುಟ್ಟವುಗಳನ್ನು ಹೇಳಲು ಮರದ್ ಅವಳಿಗೆ ಆಕಸ್ಮಿಕವಾಗಿ ತಿರುಗಿ ಕಳಿಸಿದ ಮಾಂಶಿಯ ಮನೆಯಿಂದ redirect ಆಗಿದ್ದ ಅವಳವೇ ಪತ್ರಗಳಿದ್ದವು.

ಎಷ್ಟೋ ಹೊತ್ತಿನವರೆಗೆ ರಮಾಕಾಂತ ಸುಮ್ಮನೇ ಕೂತಿದ್ದ. ನಗೆಚಾಟಿಕೆಯ ಧ್ವನಿಯಲ್ಲೇ ಕಥೆ ಹೇಳಲು ಪ್ರಾರಂಭಿಸಿದ್ದ ಶಾಂತಿ ಕ್ರಮೇಣ ಗಂಭೀರನಾಗುತ್ತಿದ್ದ ರಮಾಕಾಂತನನ್ನು ನೋಡುತ್ತ ತನಗೆ ತಿಳಿಯದೇ ತಾನೂ ಗಂಭೀರಳಾಗಿ, ಕೊನೆಗೆ ಪೆಚ್ಚಾಗಿ ಸುಮ್ಮನೆ ಕೂತಳು. ಬಹಳ ಹೊತ್ತಾದರೂ ಆತ ಏನೂ ಮಾತಾಡದಿರಲು ಸುಮ್ಮನೆ ಮಲಗಿದಳು.

ದಣಿದಿದ್ದರಿಂದ ಅವಳಿಗೆ ಕೂಡಲೇ ನಿದ್ರೆ ಬಂತು.

* * *

ಮುಂಜಾನೆ ಶಾಂತಿಗೆ ಎಚ್ಚರವಾದಾಗ ಪಕ್ಕದಲ್ಲಿ ಆತ ಇರಲಿಲ್ಲ. ದಿನಾ ಅವಳು ಚಹಾ ಮಾಡಿ ಹೊದಿಕೆ ಎಳೆದು ಎಬ್ಬಿಸುವವರೆಗೂ ಏಳದಿರುತ್ತಿದ್ದ ಆತ ಇಂದು ಇಷ್ಟು ಬೇಗನೇ ಎದ್ದದ್ದು ಅವಳಿಗೆ ಯಾಕೋ ಆಶ್ಚರ್ಯವನ್ನುಂಟು ಮಾಡಲೇ ಇಲ್ಲ. ಎಲ್ಲ ಮೊದಲೇ ಗೊತ್ತಿದ್ದಂತೆ ಆಕೆ ಎದ್ದು ಟೇಬಲ್ ಬಳಿ ಹೋಗಿ ನೋಡಿದಳು.

ರಮಾಕಾಂತನ ಪತ್ರವಿತ್ತು.

"ನನ್ನನ್ನು ಕ್ಷಮಿಸು ಶಾಂತೀ, ಇಷ್ಟೊಂದನ್ನು ತಡೆದುಕೊಳ್ಳಲು ನಾನು ಅಸಮರ್ಥ. ನನ್ನ ಹೃದಯ ಒಡೆದು ಹೋಗುತ್ತಿದೆ. ನಾನು ಜೀವನದಲ್ಲಿ ಮತ್ತೊಮ್ಮೆ ಸೋತಿರುವೆ. ನನ್ನನ್ನು ಮರೆತುಬಿಡು, ಕ್ಷಮಿಸಿಬಿಡು."

* * *

ಕೆಲಸಕ್ಕಾಗಿ ಎಂದಿನಂತೆ ಆಕೆ ಹೋದಾಗ ಒಬ್ಬಳೇ ಇದ್ದುದನ್ನು ಕಂಡು ಮ್ಯಾನೇಜರ್ ಹಲ್ಲು ಕಿರಿದ. ಮಧ್ಯಾಹ್ನದ ಬಿಡುವಿನಲ್ಲಿ ಆಕೆಗೆ ತಿಳಿಯಿತು, ರಮಾಕಾಂತ ಸಿಂಧೆ ಮೂರು ತಿಂಗಳ ಸಿಕ್ ಲೀವ್ದ ಪಡೆದುಕೊಂಡು ಹೋಗಿದ್ದಾನೆ-ಅಂತ.

❖ ❖ ❖

೪

ಒಂದು ಸಂಜೆ ಶಾಂತಿ ತನ್ನ ಮನೆಯಲ್ಲಿ ಸುಮ್ಮನೇ ಒಬ್ಬಳೇ ಕೂತಿದ್ದಾಗ ಲೂಸಿ ಫರ್ನಾಂಡಿಸ್ ಬಂದಳು. ಶಾಂತಿಗೆ ಆಶ್ಚರ್ಯ. ಲೂಸಿಯು ಜೊತೆ ಕೆಲಸ ಮಾಡುತ್ತಿದ್ದಾಗಲೇ ಅವಳೆಂದೂ 'ಹಲೋ ಹಲೋ' ಬಿಟ್ಟು ಹೆಚ್ಚಿಗೆ ಮಾತಾಡಿರಲಿಲ್ಲ. ಈಗಂತೂ ಆಕೆ ಶಾ ಚಂದರ ಫರ್ಮಿನ ಕೆಲಸ ಬಿಟ್ಟೇ ಆರು ತಿಂಗಳಾಗಿತ್ತು. ಈಗೇಕೆ ತನ್ನನ್ನು ಕಾಣಲು ಲೂಸಿ ಬಂದಿರಬಹುದು ಆಕೆಗೆ ತಿಳಿಯಲಿಲ್ಲ.

''ಹಲೋ ಶಾಂತಿ, ಆಶ್ಚರ್ಯ ಆತಲ್ಲವೇ ಈ ದೆವ್ವ ಎಲ್ಲಿಂದ ಬಂತು ಅಂತ ? ನಿನ್ನ ಮನೆಯ ಮೇಲಿನ ಫ್ಲೋರಿನಲ್ಲಿ ನನ್ನ ಕಜಿನ್ ಇದ್ದಾನೆ. ಅವನನ್ನು ನೋಡಲು ಬಂದಿದ್ದೆ. ತಿರುಗಿ ಹೋಗುವಾಗ ನಿನ್ನ ನೇಮ್‌ಪ್ಲೇಟ್ ನೋಡಿ ಒಳಗೆ ನುಗ್ಗಿದೆ. ಬೇಸರವಿಲ್ಲ ತಾನೇ ?'' – ಲೂಸಿ ಸ್ವಚ್ಛ ಇಂಗ್ಲಿಶ್‌ನಲ್ಲಿ ಕೇಳಿದಳು.

''ಛೇ, ಛೇ, ಬೇಸರ ಏಕೆ ? ನೀನು ಬಂದದ್ದು ಸಂತೋಷ'' ಅಂದಳು ಶಾಂತಿ.

ಮುಂದೆ ಹತ್ತು ನಿಮಿಷಗಳಲ್ಲಿ ಅವಳಿಗೆ ಲೂಸಿಯ ಬಗ್ಗೆ ಒಂದು ಬಗೆಯ ಪ್ರೀತಿ ಉಂಟಾಯಿತು. ಚೆಲ್ಲೆಂದು, ಸೊಕ್ಕಿನವಳೆಂದು, ವಿಪರೀತ ಫ್ಯಾಶನ್ನಿನವಳೆಂದು, ಬಣ್ಣದ ಚಿಟ್ಟೆಯೆಂದು ತಾನು ಜುಗುಪ್ಸೆಗೊಂಡಿದ್ದ ಈ ಕ್ರಿಶ್ಚಿಯನ್ ಹುಡುಗಿಯ ಮನಸ್ಸು ಎಷ್ಟು ಸರಳವಾಗಿದೆ. ಮೊದಲೇ ತನಗಿದು ತಿಳಿದಿದ್ದರೆ ಈ ಹೊತ್ತಿಗೆ ವಿಶಾಲ ಮುಂಬೈಯಲ್ಲಿ ಏಕಾಕಿಯಾಗಿರುವಾಗ ತನಗೊಬ್ಬಳು ಗೆಳತಿಯೆಂದಾದರೂ ಆಗುತ್ತಿದ್ದಳಲ್ಲ, ಅನಿಸಿತು. ಚಹಾ ಕುಡಿಯುತ್ತ ಲೂಸಿ ಕೇಳಿದಳು, ''ಬೇರೆ ಕೆಲಸಕ್ಕೆ ಪ್ರಯತ್ನಿಸುತ್ತಿದ್ದೀಯಾ ?''

''ಹೌದು, ಇದ್ದ ಹಣ ಖರ್ಚಾದುದಲ್ಲದೆ ಒಂದೆರಡು ಒಡವೆಗಳೂ ಕೈಬಿಟ್ಟು ಹೋದವು. ಏನಾದರೂ ಮಾಡಲಿಕ್ಕೇ ಬೇಕು. ಏನು ಮಾಡಲಿ ? ಕೆಲಸ ಸಿಗುವುದು ಎಷ್ಟು ಕಠಿಣ ನಿನಗ ಗೊತ್ತಿದೆ.''

ಒಂದು ಕ್ಷಣ ವಿಚಾರಿಸಿ ಲೂಸಿ ಹೇಳಿದಳು, ''ಹಾಗಿದ್ದರೆ ನನ್ನ ಕೂಡ ನಮ್ಮ ಪಾರ್ಟಿ ಆಫೀಸಿಗೆ ಬಾ. ನಮ್ಮ ಲೀಡರ್ ನಿನಗೆ ಹೆಲ್ಪ್ ಮಾಡಬಹುದು.''

''ಯಾವ ಪಾರ್ಟಿ ? ಆಫೀಸೆಂಥದು ? ಲೀಡರ್ ಯಾರು'' – ಶಾಂತಿಗೆ ಈ ಶಬ್ದಗಳು ತುಂಬ ಕ್ರಾಂತಿಕಾರಿ ಅನಿಸಿದವು.

"ನಿನಗೆ ಗೊತ್ತೇ ಇಲ್ಲವಲ್ಲ. ನಾನು ಸ್ವತಂತ್ರ ಪಾರ್ಟಿಯ ಮೆಂಬರ್. ಅಂಧೇರಿಯಲ್ಲಿ ದೊಡ್ಡ ಆಫೀಸಿದೆ ಈ ಪಾರ್ಟಿಯದು. ನೂರಾರು ತರುಣ-ತರುಣಿಯರು ಮೆಂಬರುಗಳಾಗಿದ್ದಾರೆ. ನಮ್ಮದೊಂದು ಸಾಪ್ತಾಹಿಕ ಪತ್ರಿಕೆ ಕೂಡ ಇದೆ ಹಿಂದಿಯಲ್ಲಿ – 'ಕ್ರಾಂತಿ' ಅಂತ. ಪಾರ್ಟಿಯ, ಪತ್ರಿಕೆಯ, ಇಡೀ movement ನ ಹೆಡ್ ನಮ್ಮ ಲೀಡರ್, ಜಾನ್ ಅಶೋಕಕುಮಾರ್. ಓ ! He is a wonderful man ! You must see him. ಇವತ್ತು ಬಾ ನನ್ನ ಕೂಡ. ಬರುತ್ತೀಯಾ ?"

"ಜಾನ್ ಅಶೋಕ ಕುಮಾರ್ ? ಇದೆಂಥ ಹೆಸರೇ ?" – ಅಂತ ಶಾಂತಿ ನಕ್ಕಳು.

ಆ ದೊಡ್ಡ ಮನುಷ್ಯನ ಹೆಸರಿನ ಬಗ್ಗೆ ತಾನು ಹಗುರವಾಗಿ ನಕ್ಕದ್ದು ಲೂಸಿಗೆ ಸೇರಲಿಲ್ಲವೆಂದು ಆಕೆಗೆ ತಕ್ಷಣ ತಿಳಿಯಿತು.

"ಒಂದು ತಲೆಮಾರಿನ ಹಿಂದೆಯಷ್ಟೇ ಅವರು ಮತಾಂತರ ಹೊಂದಿದ್ದು. ಮೊದಲು ಹಿಂದುವಾಗಿದ್ದಾಗ ಶೆಡ್ಯೂಲ್ಡ್ ಕಾಸ್ಟ್‌ಗೆ ಸೇರಿದ್ದರು. ಈಗ ಕ್ರಿಶ್ಚಿಯನ್ ಆದರೂ ಅವರ ವ್ಯಕ್ತಿತ್ವ ಅಂದರೆ ಹಿಂದೂ ಕ್ರಿಶ್ಚಿಯನ್ ಎರಡೂ ಸಂಸ್ಕೃತಿಗಳ ಅಪೂರ್ವ ಸಂಗಮ. ಅವರ ಆದರ್ಶವೂ ಅದೇ – ಪೂರ್ವ ಹಾಗೂ ಪಶ್ಚಿಮದ ಸಾಂಸ್ಕೃತಿಕ, ಭಾವನಾತ್ಮಕ, ರಾಜಕೀಯ ಸಮನ್ವಯ ಸಾಧಿಸುವುದು. ನೀನು ಒಮ್ಮೆ ನೋಡಿದರೆ ಸಾಕು ಅವರನ್ನ, ತುಂಬ impressed ಆಗಿಬಿಡುತ್ತೀಯ. ಅವರ ಪರ್ಸನ್ಯಾಲಿಟೀನೇ ಹಾಗೆ."

"ಸರಿ, ನನಗೊಂದು ಕೆಲಸ ಸಿಗುವುದಾದರೆ ನಿನ್ನ ಕೂಡ ಬಂದು ಅವರನ್ನು ನೋಡಲಡ್ಡಿಯಿಲ್ಲ."

* * *

"ಕ್ರಾಂತಿ" ಪತ್ರಿಕೆಗೆ ಮುಂಬೈಯ ಪೂರ್ವ ವಿಭಾಗದ ಸುದ್ದಿ ವರದಿಗಾರಳಾಗಿ ಸೇರಿದ ನಂತರ ಶಾಂತಿಗೆ ದಿನವಿಡೀ ಮೈತುಂಬ ಕೆಲಸ. ದಿನಕಳೆದಂತೆ ಆ ಪಾರ್ಟಿಯ ವ್ಯಾಪ್ತತೆ ಅವಳಿಗೆ ಅಚ್ಚರಿಯುಂಟುಮಾಡುತ್ತಿತ್ತು. 'ಕ್ರಾಂತಿ' ಆಕೆ ಮೊದಲು ತಿಳಿದಿದ್ದಂತೆ ಸರಕಾರಕ್ಕೆ ವಿರುದ್ಧವಾದ ಧೋರಣೆಯುಳ್ಳ ಪತ್ರಿಕೆಯಾಗಿರಲಿಲ್ಲ. ಜಾನ್ ಅಶೋಕಕುಮಾರನೇನೋ ಕಳೆದ ಹಲವು ವರ್ಷಗಳಿಂದ ಸತತವಾಗಿ ಸ್ವತಂತ್ರ ಪಕ್ಷದಿಂದ ಚುನಾವಣೆಗೆ ನಿಂತು ಆರಿಸಿ ಬರುತ್ತಲಿದ್ದ. ಸ್ವತಂತ್ರ ಪಕ್ಷದ ದಕ್ಷ ಕೆಲಸಗಾರನೆಂಬ ಖ್ಯಾತಿಯೂ ಅವನದಿತ್ತು. ಆದರೆ ಆತನ ಕಾರ್ಯವ್ಯಾಪ್ತಿ ಬರಿಯ ರಾಜಕೀಯಕ್ಕೆ ಸೀಮಿತವಾಗಿರಲಿಲ್ಲ. ಪಾರ್ಟಿಯ ವತಿಯಿಂದ ಅಂಧೇರಿಯಲ್ಲಿ ಆತನೊಂದು ಅಬಲಾಶ್ರಮ ನಡೆಸುತ್ತಿದ್ದ. ಬಡಹುಡುಗರಿಗಾಗಿ ಒಂದು ರೆಸಿಡೆನ್ಶಿಯಲ್ ಪ್ರೈಮರಿ ಸ್ಕೂಲನ್ನೂ ನಡೆಸುತ್ತಿದ್ದ. ಮೂಲತಃ ಆತ

ಮಂಗಳೂರಿನವನೆಂದೂ ಆತನಿಗೆ ಅಲ್ಲಿ ಸಾಕಷ್ಟು ಪಿತ್ರಾರ್ಜಿತ ಆಸ್ತಿಯಿದೆಯೆಂದೂ ಶಾಂತಿಗೆ ತಿಳಿದು ಬಂತು. ಆತ ಸಂಪಾದಿಸುತ್ತಿದ್ದ "ಕ್ರಾಂತಿ" ಪತ್ರಿಕೆ ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸುತ್ತಿತ್ತು. ವ್ಯಕ್ತಿಸ್ವಾತಂತ್ರ್ಯದ ಯಾವುದೇ ಘಟಕಕ್ಕೆ ಯಾವುದೇ ಶಕ್ತಿಯಿಂದ ಧಕ್ಕೆ ಬಂದರೆ ಅದನ್ನು ಸರ್ವ ಪ್ರಯತ್ನದಿಂದಲೂ ವಿರೋಧಿಸಿ ನಿವಾರಿಸುವುದೇ ಪತ್ರಿಕೆಯ ಧ್ಯೇಯ. ಹೀಗೆ ವ್ಯಕ್ತಿ ಸ್ವಾತಂತ್ರ್ಯಕ್ಕೆ ಧಕ್ಕೆ ತರುವ ಶಕ್ತಿ ಯಾವುದೇ ಸಂಸ್ಥೆಯಾಗಿರಲಿ, ದೊಡ್ಡ ವ್ಯಕ್ತಿಯಾಗಿರಲಿ, ಸಾಮಾಜಿಕ ಕಟ್ಟಳೆಯಾಗಿರಲಿ, ಧರ್ಮಗುರುವಾಗಿರಲಿ, ಕೊನೆಗೆ ಸರಕಾರವಾಗಿದ್ದರೂ, ಅದನ್ನು ಪತ್ರಿಕೆ ಸ್ಪಷ್ಟವಾಗಿ ಖಂಡಿಸುತ್ತಿತ್ತು. ಎಷ್ಟೋ ಸಲ ಹಾಗೆ ತೊಂದರೆಗೊಳಗಾದ ವ್ಯಕ್ತಿಗಳ ಪರವಾಗಿ ಜಾನ್ ಅಶೋಕ ಕುಮಾರ ಸ್ವತಃ ಕೋರ್ಟಿಗೆ ಹೋಗಿ ಎಲ್ಲ ವೆಚ್ಚ ನಿರ್ವಹಿಸಿ ವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಉದಾಹರಣೆಗಳನ್ನು ಪಾರ್ಟಿಯ ಮೆಂಬರುಗಳು ಹೇಳುತ್ತಿದ್ದರು. ಒಂದು ಧ್ಯೇಯಕ್ಕಾಗಿ ಒಬ್ಬ ಮನುಷ್ಯ ಇಷ್ಟೆಲ್ಲ ಆಳಕ್ಕೆ ಉದ್ದಕ್ಕೆ ಹೋಗಬಲ್ಲನಲ್ಲ, ಅಂತ ಶಾಂತಿಗೆ ಆಶ್ಚರ್ಯವಾಗುತ್ತಿತ್ತು. ಪರಿಣಾಮವಾಗಿ ಆಕೆಗೆ ತನ್ನ ಕೆಲಸದಲ್ಲಿ ಆಸಕ್ತಿ ಹೆಚ್ಚಿತು. ತಾನೇಕೆ ಇಷ್ಟು ನಿರಾಶಳಾಗಿದ್ದೇನೆ. ಒಂದಾನೊಂದು ಕಾಲದಲ್ಲಿ ತನ್ನಲ್ಲಿ ಜೀವಂತವಾಗಿ ಉರಿಯುತ್ತಿದ್ದ ಮಹಿಳಾ ಉದ್ಧಾರ, ಮೂಢ ನಂಬಿಕೆಗಳ ವಿರೋಧ, ಸಂಪ್ರದಾಯಗಳ ದಾಸ್ಯದಿಂದ ಹೆಂಗಸರ ಬಿಡುಗಡೆ, ಮುಂತಾದ ಆದರ್ಶಗಳನ್ನೆಲ್ಲ ತಾನೇಕೆ ಹೀಗೆ ಸತ್ತು ಹೋಗಲು ಬಿಡಬೇಕು, ತಾನೂ ಏನನ್ನಾದರೂ ಮಾಡಬೇಕು, ಎಂದೆಲ್ಲ ಅನಿಸತೊಡಗಿತು.

ಜೊತೆಗೆ ಜಾನ್ ಅಶೋಕಕುಮಾರನ ಬಗ್ಗೆ ಗೌರವವೂ ಬೆಳೆಯಿತು.

* * *

ಒಂದು ಮಧ್ಯಾಹ್ನ ಪತ್ರಿಕೆಯ ಕಾರ್ಯಾಲಯದಲ್ಲಿನ ತನ್ನ ವಿಭಾಗದಲ್ಲಿ ಕೂತು ಶಾಂತಿ ಮರುದಿನದ ಪತ್ರಿಕೆಗೆ ಬೇಕಾದ ಅಂತಿಮ ವರದಿ ತಯಾರಿಸುತ್ತಿದ್ದಾಗ ಜಾನ್ ಅಶೋಕ ಕುಮಾರ್ ಬಂದು "ಹಲೋ ಮಿಸ್ ಕಾಮತ್" ಅಂದ.

ಆಕೆ ಎದ್ದು ನಿಂತು "ಹಲೋ ಸರ್" ಅಂದಳು. ಆತ ಆತ್ಮೀಯವಾಗಿ ಕನ್ನಡದಲ್ಲೇ ಮಾತಾಡಿದಾಗ ಅವಳಿಗೆ ತುಸು ಆಶ್ಚರ್ಯವೆನಿಸಿತು. "ಕೂತುಕೊಳ್ಳಿ. ನಿಮ್ಮ ಕೆಲ್ಸ ಹೇಗೆ ಸಾಗಿದೇಂತ ಕೇಳೋಕೆ ಬಂದೆ."

ಆತ ಎದುರಿನ ಕುರ್ಚಿಯಲ್ಲಿ ಕೂತ ನಂತರ ತಾನೂ ಕೂತು ಆಕೆ ಮೃದುವಾಗಿ ವಿನೀತಳಾಗಿ ಉತ್ತರಿಸಿದಳು.

"ಕೆಲಸ ಛಲೋ ನಡದದ."

ನಾಲ್ಕೈದು ನಿಮಿಷ ಆ-ಈ ಮಾತಾಡಿ ಒಮ್ಮೆಲೆ ಧ್ವನಿ ತಗ್ಗಿಸಿ ಆತನೆಂದ,

"ನಿಮ್ಮ ಬಗ್ಗೆ ನನಗೊಂದು anonymous ಪತ್ರ ಬಂದಿದೆ." –ನಂತರ ಆಕೆಯ ಕಣ್ಣುಗಳಲ್ಲಿ ಮೂಡಿದ ಗಾಬರಿಯನ್ನು ಲಕ್ಷಿಸಿ ಆಕೆಯನ್ನು ಸಂತವಿಸುವಂತೆ ಮತ್ತೆ ಅಂದ, "ನಾನೇನೂ ಅದ್ರಲ್ಲಿ ಬರೆದಿರೋದನ್ನ ಸೀರಿಯಸ್ಸಾಗಿ ತಗೊಳ್ಳಿಲ್ಲ. ಸುಮ್ನೆ ತಮಾಷೆಗೆ ನಿಮಗೆ ಹೇಳಿದೆ ಅಷ್ಟೇ."

"ಏನಿದೆ ಸರ್ ಅದರಲ್ಲಿ ?"

ಕಿಸೆಯಲ್ಲಿ ಕೈಹಾಕಿ ಆತನೊಂದು ಇನ್‌ಲ್ಯಾಂಡ್ ಕವ್ಹರು ತೆಗೆದು ಕೊಟ್ಟ ಆಕೆಗೆ.

"ನಿಮ್ಮ ಆಫೀಸಿನಲ್ಲಿ ಕೆಲಸ ಮಾಡುತ್ತಿರುವ ಕಾಮತ ತುಂಬ ನೀತಿಗೆಟ್ಟವಳು. ಅವಳು ತೀರ ಸಣ್ಣವಳಿದ್ದಾಗ ಅವಳ ಕೂಡ ಪ್ರೇಮ ಪ್ರಕರಣದಲ್ಲಿ ಸಿಲುಕಿಕೊಂಡಿದ್ದ ಒಬ್ಬಾತ ಅವಳಿಂದ ಪೆಟ್ಟು ತಿಂದು ವಿದೇಶಕ್ಕೆ ಹೋಗಿಬಿಟ್ಟ. ಕಾಲೇಜಿನಲ್ಲಿದ್ದಾಗಂತೂ ಆಕೆಯಿಂದ ಒಬ್ಬ ಸಂಸಾರಸ್ಥ ಪ್ರೊಫೆಸರನಿಗೆ ಹುಚ್ಚೇ ಹಿಡಿಯಿತು. ತೀರ ಇತ್ತೀಚೆಗೆ ಆಕೆಯ ಸಹೋದ್ಯೋಗಿಯಾದವನೊಬ್ಬನು ಆಕೆಯಿಂದ ಮೋಸಹೋಗಿ ಆತ್ಮಹತ್ಯೆ ಮಾಡಿಕೊಳ್ಳಲು ಹೋಗಿದ್ದ, ಸ್ವಲ್ಪದರಲ್ಲಿ ಉಳಿದ. ಇಂಥವಳಿಂದ ಪಾರ್ಟಿಗೆ ಕೆಟ್ಟ ಹೆಸರು ಬರಬಹುದು. ಅವಳು ಎಂದು ಯಾತಕ್ಕೂ ಯಾರಿಗೂ loyal ಆಗಿದ್ದವಳಲ್ಲ. ಈ ಅಪಾಯಕಾರಕ ಹೆಣ್ಣಿನ ಬಗ್ಗೆ ಜಾಗರೂಕರಾಗಿರಿ– ಇತಿ ಹಿತೈಷಿ."

–ಆಕೆ ಪತ್ರ ಓದಿ ಮುಗಿಸುತ್ತಿದ್ದಂತೆ ಜಾನ್ ಅಶೋಕಕುಮಾರ ನಕ್ಕು ಅಂದ, "ನೀವು ಯೋಚಿಸ್ಬೇಕಾಗಿಲ್ಲ. ನನಗೆ ವ್ಯಕ್ತಿಯ ಯೋಗ್ಯತೆ ತಕ್ಷಣ ಗೊತ್ತಾಗುತ್ತೆ. ಇಲ್ದಿದ್ರೆ ನಾನು ನಿಮ್ಮನ್ನ ಪತ್ರಿಕೇಲಿ ಸೇರಿಸಿಕೊಳ್ತಾನೆ ಇರ್ಲಿಲ್ಲ."

ಬಹಳ ಹೊತ್ತಿನ ನಂತರ ಶಾಂತಿ "ಥ್ಯಾಂಕ್ಸ್" ಅಂದಳು. ನಂತರ ಮತ್ತೆ ಸುಮ್ಮನೇ ಕೂತಳು.

"ನನಗೆ ಗೊತ್ತಿದೆ ಮಿಸ್ ಕಾಮತ. ನಾವು ಎಷ್ಟೇ ಮುಂದುವರಿದರೂ, ಕ್ರಾಂತಿಯ ಮಾತಾಡಿದರೂ, ಸ್ವಾತಂತ್ರ್ಯ-ಹಕ್ಕುಗಳ ಬಗ್ಗೆ ಹೋರಾಡಿದರೂ, ನಂ ದೇಶದಲ್ಲಿ ಯಾವಾಗ್ಲೂ ಗಂಡಸ್ರಿಗೊಂದು ಕಾಯ್ದೆ, ಹೆಂಗಸರಿಗೆ ಬೇರೆಯೇ ಒಂದು ಕಾಯ್ದೆ. ಒಂದು ಕೆಲಸಾನ, ಅದೆಷ್ಟೇ ಕೆಟ್ಟದ್ದಾಗಿರ್‍ಲಿ, ಗಂಡಸು ಮಾಡಿದ್ರೆ ಸಮಾಜ ಆ ಕಡೆ ನೋಡೋ ದೃಷ್ಟಿನೇ ಬೇರೆ. ಅದೇ ಕೆಲ್ಸಾ ಒಂದು ವೇಳೆ ಹೆಂಗಸು ಮಾಡಿದ್ರೆ ಅದೇ ಸಮಾಜ ರಂಭಾಟ ಮಾಡಿ ಬಿಡುತ್ತೆ. ಮೇಲೇರಲು ಹೇಗೆ ಹೆಂಗಸಿಗೆ ಸ್ವಾತಂತ್ರ್ಯ ಇಲ್ಲವೋ ಹಾಗೆಯೇ ತನಗೆ ಬೇಕೆಂದಾಗ ಕೆಟ್ಟು ಹೋಗಲೂ ಆಕೆಗೆ ಸ್ವಾತಂತ್ರ್ಯವಿಲ್ಲ. ತಪ್ಪು ಯಾರದೇ ಆಗಿದ್ದರೂ, ಕೆಟ್ಟ ಹೆಸರು ಬರೋದು ಹೆಂಗಸಿಗೇ." ಮಾತಾಡುತ್ತ ಆತ ಎದ್ದು ಬೆನ್ನ ಹಿಂದೆ ಕೈಕಟ್ಟಿಕೊಂಡು ಅಲ್ಲೇ ಶತಪಥ ಹಾಕತೊಡಗಿದ. ಈಗ ಆತನ ಧ್ವನಿಯಲ್ಲಿ ಚಿಂತೆ, ಸಂತಾಪಗಳೆರಡೂ ಕೂಡಿದವು : "ಹೀಗೆ ಕೆಟ್ಟ ಹೆಸ್ರು ಬರಬಾರ್‍ದು

ಅಂತಿದ್ರೆ ಹೆಂಗಸು ಒಬ್ಬ ಗಂಡಸಿನ ಗುಲಾಮಳಾಗಿ, ಪ್ರತಿಯೊಂದ್ರಲ್ಲೂ ಆತನನ್ನ ಅನುಸರಿಸಿಕೊಂಡು, ಆತ ಹೇಳಿದ ಹಾಗೆ ಕೇಳ್ಕೊಂಡು ನಾಯಿಬಾಳು ಬಾಳಬೇಕು, ಎಂದಿಗೆ....''

ಶಾಂತಿ ಅಲ್ಲೇ ಕೂತಿದ್ದರೂ ಆಕೆಗೆ ಆತನ ಮಾತು ಕೇಳಿಸದಂತಾದವು. ಯಾರು ಬರೆದಿರಬಹುದು ಈ ಪತ್ರವನ್ನು ಅಂತ ಆಕೆ ಯೋಚಿಸಿದಳು. ಅದರಲ್ಲಿನ 'ಕೆಟ್ಟ ಹೆಸರು'. 'loyalty' ಶಬ್ದಗಳು ಆಕೆಗೆ ರಮಾಕಾಂತನ ನೆನಪು ತಂದವು. ಪ್ರೀತಿಗಿಂತ loyalty ನೇ ಮುಖ್ಯವೆಂದು, ಕ್ಷಮೆಯೇ ಮುಖ್ಯವೆಂದು ನಂಬಿದ್ದ, ತನಗೆ ಕೆಟ್ಟ ಹೆಸರು ಬರಬಾರದೆಂದು ಕಾಳಜಿ ಮಾಡುತ್ತಿದ್ದ, ಸಿಂಧೆಯ ಪತ್ರವಿರಬಹುದೇ ಇದು ? ಕೈಬರಹವೇನೋ ಹಾಗಿಲ್ಲ....

ಜಾನ್ ಅಶೋಕಕುಮಾರ್‌ನ ಲೆಕ್ಚರು ಸಾಗಿಯೇ ಇತ್ತು. ''ನಮ್ಮ ದೇಶದಲ್ಲಿ ಗಂಡಸಿನ ವ್ಯಕ್ತಿಸ್ವಾತಂತ್ರ್ಯಕ್ಕೆ ಹಲವು ರಾಜಕೀಯ ಅಡೆತಡೆಗಳಿವೆ. ಆದರೆ ಹೆಂಗಸಿನ ವ್ಯಕ್ತಿಸ್ವಾತಂತ್ರ್ಯಕ್ಕಿರುವ ಮುಖ್ಯ ಅಡೆತಡೆ ಅಂದರೆ ಗಂಡಸು. ಯಾವತ್ತಿಗೆ ನಮ್ಮ ದೇಶದ ಗಂಡಸರಿಗೆ –ಈ ಬಗ್ಗೆ ಅರಿವಾಗುತ್ತೋ.''

ಶಾಂತಿಗೆ ಹಸಿವೆಯಾಗತೊಡಗಿತ್ತು.

* * *

''ಕ್ರಾಂತಿ''ಯ ವಾರ್ಷಿಕೋತ್ಸವದ ಸಂದರ್ಭದಲ್ಲಿ ಹೊರಬರಲಿದ್ದ ವಿಶೇಷ ಸಂಚಿಕೆಗಾಗಿ ವಿಶೇಷ ಲೇಖನವೊಂದನ್ನು ತಯಾರಿಸಬೇಕೆಂದೂ, ಅದಕ್ಕೆ ಅವಶ್ಯವಾದ ವಿವರಗಳನ್ನು ಶನಿವಾರ ಮಧ್ಯಾಹ್ನ ತನ್ನ ಮನೆಗೆ ಬಂದು ಪಡೆಯಬೇಕೆಂದೂ, ತನಗೆ ಫ್ಲೂ ಆದುದರಿಂದ ಆಫೀಸಿಗೆ ಬರಲು ಸಾಧ್ಯವಿಲ್ಲವೆಂದೂ, ತೊಂದರೆಗಾಗಿ ಕ್ಷಮಿಸಬೇಕೆಂದೂ, ಜಾನ್ ಅಶೋಕಕುಮಾರ ಒಂದು ಶನಿವಾರ ಮುಂಜಾನೆಯೆ ಶಾಂತಿಗೆ ಹೇಳಿ ಕಳಿಸಿದ.

ಮಧ್ಯಾಹ್ನ ನಾಲ್ಕು ಗಂಟೆಗೆ ಆಕೆ ಮಲಬಾರ ಹಿಲ್ಸ್‌ನಲ್ಲಿರುವ ಆತನ ಬಂಗಲೆಗೆ ಹೋದಾಗ ಆಳೊಬ್ಬನು ಆಕೆಯನ್ನು ಸ್ವಾಗತಿಸಿ ಮಹಡಿಯ ಮೇಲಿರುವ ಮನೆಯೊಡೆಯನ ಬೆಡ್‌ರೂಮಿನವರೆಗೂ ಆಕೆಯನ್ನು ಬಿಟ್ಟು ಕೆಳಗಿಳಿದು ಹೊರಟುಹೋದ.

ಸ್ವೆಟರ್-ಸ್ಕಾರ್ಫ್ ಹಾಕಿಕೊಂಡು ಮೈತುಂಬ ರಗ್ಗು ಹೊದ್ದುಕೊಂಡು ದೊಡ್ಡ ಮಂಚದ ಮೇಲೆ ಅರ್ಧ ಮಲಗಿದ್ದ ಜಾನ್ ಅಶೋಕಕುಮಾರ ಮಲಗಿದಲ್ಲಿಂದಲೇ ಆಕೆಯನ್ನು ಸ್ವಾಗತಿಸಿದ. ''ಬನ್ನಿ ಮಿಸ್ ಕಾಮತ. I hope you don't mind this inconvenience."

"Not at all" ಅನ್ನುತ್ತ ಶಾಂತಿ ಒಳಗೆ ಬಂದಳು.

"ಈ ಆರ್ಟಿಕಲ್ ನೋಡಿ, ಇವೊತ್ತೇ ಮುಗಿಸ್ಬಿಟ್ಟು ನಾಳೆ ಪ್ರಿಂಟ್‌ಗೆ ಕೊಡ್ಬೇಕು. ನನಗೆ ಮೊನ್ನೆಯಿಂದ್ಲೂ ಜ್ವರ, ದಯವಿಟ್ಟು ಏನೂ ತಿಳ್ಕೋಬೇಡಿ."

"ಖಂಡಿತ ಇಲ್ಲ ಸರ್" ಅಂತ ಆಕೆ ಟೇಬಲ್ಲಿನ ಪಕ್ಕದ ಕುರ್ಚಿಯಲ್ಲಿ ಕೂತಳು. ಆ ದೊಡ್ಡದಾದ ಮಲಗುವ ಕೋಣೆ, ಕೋಣೆಯಲ್ಲಿನ ಮಬ್ಬುಗತ್ತಲು, ದೊಡ್ಡ ಮಂಚ, ಸುತ್ತ ನಿಶ್ಶಬ್ದತೆ, ಏಕಾಕಿ ಗಂಡಸು -ಯಾಕೋ ಯಾವುದೂ ಆಕೆಗೆ ಅಸ್ವಾಭಾವಿಕ ಎನಿಸಲಿಲ್ಲ. ಸಂಕೋಚವುಂಟು ಮಾಡಲಿಲ್ಲ. ಬಹುಶಃ ಜಾನ್ ಅಶೋಕಕುಮಾರನ ಬಿಚ್ಚು ಮನಸ್ಸಿನ ವರ್ತನೆಯೇ ಕಾರಣವಿರಬೇಕು.

ಆತ ಹೇಳುತ್ತಿದ್ದುದನ್ನು ಬರೆದುಕೊಳ್ಳುತ್ತಿದ್ದಂತೆ ಶಾಂತಿಗೆ ಹೊತ್ತಾಗುತ್ತಿದ್ದುದರ ಖಬರೇ ಉಳಿಯಲಿಲ್ಲ. ಅನಾದಿಕಾಲದಿಂದಲೂ ಎದುರಿನ ಮಂಚದಿಂದ ಆ ಧ್ವನಿ ಬರುತ್ತಿದ್ದಂತೆ, ತಾನು ಅದನ್ನು ಕೇಳುತ್ತ ಬರೆದುಕೊಳ್ಳುತ್ತಿದ್ದಂತೆ, ಈ ಕ್ರಿಯೆ ಪ್ರಕೃತಿಯ ಒಂದು ಅಂಶವೇ ಆಗಿಬಿಟ್ಟಿರುವಂತೆ ಆಕೆಗೆ ಅನಿಸಿತು. ಬರಬರುತ್ತ ಆತನ ಶಬ್ದಗಳನ್ನು ಕೇಳುವ, ಅದನ್ನು ಕೇಳಿದಂತೆ ಬರೆಯುವ ಕಿವಿ-ಕೈಗಳ ಚಲನ ತೀರ ಸ್ವನಿಯಂತ್ರಿತವಾಗಿಬಿಟ್ಟು, ಯಾಂತ್ರಿಕವಾಗಿ ಬಿಟ್ಟು, ಆಕೆ ಇದಾವುದಕ್ಕೂ ಸಂಬಂಧವಿಲ್ಲದ ಬೇರೆಯೇ ಏನೇನೋ ವಿಚಾರಗಳಲ್ಲಿ, ನೆನಪುಗಳಲ್ಲಿ ಮಗ್ನಳಾಗಿಬಿಟ್ಟಳು.

'ಕ್ಷಮಿಸಲಾಗದ ಪ್ರೀತಿ ಪ್ರೀತಿಯೇ ಅಲ್ಲ.... ನನ್ನಿಂದ ನಿನಗೆ ಮಂದಿ ಅಪಶಬ್ದ ಆಡುವಂತಾಗಬಾರದು.... ಹೊಸ ಜೀವನ ಸುರೂ ಮಾಡೋಣ....' ಅನ್ನುತ್ತಿದ್ದಾನೆ ರಮಾಕಾಂತ ಸಿಂಧೆ. ಪಕ್ಕದಲ್ಲೇ ಗಂಡಸರಿಂದ ಹೆಂಗಸರಿಗಾಗುವ ಮೋಸ, ಅನ್ಯಾಯ, ಅತ್ಯಾಚಾರ ತಡೆಯಲಿಕ್ಕೆ ಹೋರಾಡಲೆಂದು ಖಡ್ಗ ಹಿಡಿದು ಹೊರಟಿದ್ದಾನೆ ಪ್ರೊ. ಮಠದ್. ಅವನ ಹಣೆಯ ಮೇಲೆ 'Bold lover' ಅಂತ ಬರೆದು ಅಂಟಿಸಿದ ಪಟ್ಟಿಯಿದೆ. ಅವನ ಹಿಂದೆ ಎಷ್ಟೋ ಮಂದಿ ಗಂಡಸರು ಹೊರಟಿದ್ದಾರೆ. ಎಲ್ಲರ ಕೈಯಲ್ಲಿ ನಾಮಫಲಕಗಳೂ ಉದ್ದನ್ನ ಕಟ್ಟಿಗೆಗಳ ಮೇಲೆ ಸಿಕ್ಕಿಸಿದ ಹಲಗೆಗಳ ಮೇಲೆ ಘೋಷಣೆಗಳೂ ಇವೆ. ಅವರೆಲ್ಲ 'ಅನ್ಯಾಯಕ್ಕೆ ಧಿಕ್ಕಾರ' ಅಂತ ಕೂಗುತ್ತಿದ್ದಾರೆ. 'ಭಾರತ ದೇಶದ ಮಹಿಳೆಯರಿಗೆ ಜಯವಾಗಲಿ' ಅಂತ ಘೋಷಿಸುತ್ತಿದ್ದಾರೆ. ಅವರ ಧ್ವನಿ ಮುಗಿಲು ಮುಟ್ಟುತ್ತಿದೆ. ಮಧ್ಯದಲ್ಲೇ ಯಾರೋ 'ನಿಲ್ಲಿರಿ' ಅಂತ ಕೂಗುತ್ತಾರೆ- ಮೆರವಣಿಗೆ, ಘೋಷಣೆ, ಗದ್ದಲ ಎಲ್ಲ ಒಂದು ಕ್ಷಣ ಮಂಕಾಗುತ್ತದೆ. ಹರಿದ ಸೀರೆಯ ಕೆದರಿದ ತಲೆಯ ಬಡಕಲು ಮೈಯ ಹೆಂಗಸೊಬ್ಬಳು ಬೀದಿಯ ನಟ್ಟ ನಡುವೆ ನಿಂತು ಅಳುತ್ತಿದ್ದಾಳೆ. ಅವಳ ಮೈಮೇಲೆಲ್ಲ ರಕ್ತದ ಕಲೆಗಳಿವೆ. ಅವಳ ಕಾಲುಗಳಿಗೆ ಹಗ್ಗ

ಬಿಗಿದು ಕಟ್ಟಿದ್ದಾರೆ. ಹಗ್ಗದ ಒಂದು ತುದಿ ಶಂಕರನ ಕೈಯಲ್ಲಿದೆ. ಓ, ಫಾರಿನ್ನಿನಿಂದ ಯಾವಾಗ ಬಂದ ಈತ ? ಎಷ್ಟು ಬದಲಾಗಿದ್ದಾನೆ.... ಹೆಂಗಸಿನ ಅಳು ಬರಬರುತ್ತ ಜೋರಾಗುತ್ತದೆ. ಆದರೆ ಜೊತೆಗೇ ಮೆರವಣಿಗೆಯ, ಜನಗಳ ಘೋಷಣೆಯ ಧ್ವನಿಯೂ ಜೋರಾಗುತ್ತದೆ. ಬರಬರುತ್ತ ಹೆಂಗಸಿನ ಧ್ವನಿ ಈ ಧ್ವನಿಯಲ್ಲಿ ಕರಗಿಹೋಗುತ್ತದೆ. ಯಾರು ಈಕೆ ? –ಅಯ್ಯೋ.

–ಸಾಕ್ಷಾತ್ ಭಾರತಮಾತೆ !

ಶಾಂತಿ ಒಮ್ಮೆಲೇ ಏದುಸಿರು ಬಿಡುತ್ತ ಎದ್ದು ನಿಂತಾಗ ಮಲಗಿದ್ದ ಜಾನ್ ಅಶೋಕ್ ಕುಮಾರನೂ ಎದ್ದು ಕೂತು , "ಏನಾಯ್ತು ಮಿಸ್ ಕಾಮತ ?" ಎಂದ.

ಶಾಂತಿಗೆ ನಾಚಿಕೆಯಾಯಿತು, ತಟ್ಟನೆ ಕೂತು, "ಏನೂ ಇಲ್ಲ ಸರ್" ಅಂದಳು. ನಂತರ "ಯಾಕೋ ನನಗೆ ಅಷ್ಟು ಆರಾಮಿಲ್ಲ" ಅಂತ ವಿವರಿಸಿದಳು.

"ಓ, ತುಂಬ ಸಾರಿ" ಅಂದ ಆತ ಪಶ್ಚಾತ್ತಾಪದ ಧ್ವನಿಯಲ್ಲಿ, "ಇನ್ನೇನು ಮುಗೀತಲ್ಲ, ಕೊನೇ ಎರಡುಸಾಲು ಬರ್ಕೊಂಡ್ಬಿಡಿ. ನಂತರ ನಿಮ್ಮನ್ನ ಮನೇಗೆ ಬಿಟ್ಟುಬರೋಕೆ ಹೇಳ್ತೀನಿ ಡ್ರೈವ್ಹರ್‌ಗೆ."

–ಅದಷ್ಟನ್ನು ಬರೆದು ಮುಗಿಸಿದ ಆಕೆ ವೇಳೆ ನೋಡಿದಳು, ರಾತ್ರಿ ಒಂಬತ್ತೂವರೆ ಆಗಿತ್ತು. ಆಕೆ ಗಡಿಯಾರ ನೋಡಿದ್ದನ್ನು ಗಮನಿಸಿದ ಜಾನ್ ಅಶೋಕಕುಮಾರ್ ಸಂತಾಪ ಸೂಚಿಸುತ್ತ ಅಂದ, "ತುಂಬ ಹೊತ್ತಾಯ್ತು, ನಾನಂತೀನಿ" –ಒಂದು ಗಳಿಗೆ ಅನುಮಾನಿಸಿ ಮತ್ತೆ, "ನೀವು ಎರಡ್ನಿಮಿಷ ಕೂತಿರಿ. ಒಂದಿಷ್ಟು ಏನಾದ್ರೂ ತಗೊಂಡು...."

ಶಾಂತಿ ಪ್ರತಿಯಾಡದೆ ಕೂತಳು. ಮಂಚದಿಂದ ಎದ್ದು ಕೆಳಗಿಳಿದ ಆತನನ್ನೇ ಒಂದು ಕ್ಷಣ ಕಣ್ಣುಬಿಟ್ಟು ನೋಡಿದಳು. ಲುಂಗಿ, ಸಾದಾ ಶರಟು, ಮೇಲೊಂದು ಕಪ್ಪು ಸ್ವೆಟರ್ ಧರಿಸಿದ್ದ ಆತ ಆಜಾನುಬಾಹುವಾಗಿ ತುಂಬ ದೊಡ್ಡವನಾಗಿ ಕಾಣಿಸಿದ. ಆತ ನಡೆದಾಡುವಾಗ ಬಂದ ವಾಸನೆಯಿಂದ ಅವಳಿಗೆ ಒಮ್ಮೆಲೆ ಅನಿಸಿತು– ನೀಲಗಿರಿ ಎಣ್ಣೆಗೆ, ವ್ಹಿಕ್ಸ್‌ಗೆ ಇಷ್ಟು ಚೆಂದದ ಪರಿಮಳವಿರುವುದು ಹೇಗೆ ? ಆತ ಕಪಾಟಿನಿಂದ ಒಂದು ವ್ಹಿಸ್ಕಿ ಬಾಟಲ್ ತೆಗೆದ. ಅವಳ ಕಡೆ ತಿರುಗಿ ತೀರ ಸಹಜವಾಗಿ ಕೇಳಿದ, "ನೀವು ಡ್ರಿಂಕ್ಸ್ ತಗೊಳ್ಳುತ್ತೀರಾ ?"

ಕೆಂಪು ಬಣ್ಣದ ಸುಂದರ ಆಕಾರದ ಆ ಬಾಟಲು ನೋಡುತ್ತ ಶಾಂತಿ ಏನೂ ಹಿಂದು-ಮುಂದು ನೋಡದೆ "ಹ್ಞೂ" ಅಂದಳು.

"ಗುಡ್" ಅಂದು ಆತ ಎರಡು ಗ್ಲಾಸುಗಳಿಗೆ ವ್ಹಿಸ್ಕಿ ಸುರುವಿ ನೀರು ಬೆರೆಸಿ ಒಂದನ್ನು ಆಕೆಗೆ ಕೊಟ್ಟಾಗ, "Cheer you" ಎಂದು ಗ್ಲಾಸನ್ನೆತ್ತಿಕೊಂಡ ಆಕೆಗೆ ತಾನು

ಹುಟ್ಟಿದಂದಿನಿಂದಲೂ ಬರಿ ವ್ಹಿಸ್ಕಿ ಕುಡಿದೇ ಬೆಳೆದಿರುವಂತೆನ್ನಿಸಿತು.

* * *

ಸುಮಾರು ಒಂದು ಗಂಟೆಯ ನಂತರ, ಇನ್ನೂ ಕುಡಿಯುತ್ತಲೇ ಇದ್ದ ಶಾಂತಿಗೆ ಒಮ್ಮೆಲೇ ಎಲ್ಲವೂ ತಮಾಷೆಯೆನ್ನಿಸಿ ಆಕೆ ಗಟ್ಟಿಯಾಗಿ ನಕ್ಕುಬಿಟ್ಟಳು.

"ಯಾಕೆ ನೀವು ನಗ್ತಿರೋದು ?" – ಅಂದ ಆತ.

"ಹಿಂಗೇ ಸುಮ್ಮನೇ" – ಅಂತ ಆಕೆ ಗ್ಲಾಸನ್ನು ಕೆಳಗಿಟ್ಟು ಮತ್ತಷ್ಟು ನಗತೊಡಗಿದಳು.

"ಎಲಾ ಹುಚ್ಚು ಹುಡುಗಿ !" ಅಂತ ಆತ ಗ್ಲಾಸು ಕೆಳಗಿಟ್ಟು ಎದ್ದು ಆಕೆಯ ಹತ್ತಿರ ಬಂದ. ಆಕೆಯನ್ನೆ ಒಂದು ಗಳಿಗೆ ನೋಡಿ ತನ್ನ ಬಲಗೈ ಆಕೆಯ ಕಡೆ ಚಾಚಿ, "ಶಾಂತಿ, How about sleeping with me ? ಅಂದ್ರೆ.... ಒತ್ತಾಯವಿಲ್ಲ...."

ಆತನ ಕೈಹಿಡಿದುಕೊಂಡು ತಡವರಿಸುತ್ತ ಎದ್ದುನಿಂತ ಆಕೆ ತಲೆ ಕೊಡಹಿ "ಓ ಯಸ್, ಆಲ್‌ರೈಟ್" ಅಂದಳು.

* * *

ವಿಶೇಷ ಸಂಚಿಕೆಯ ಕೆಲಸವೆಲ್ಲ ಮುಗಿದ ನಂತರ ವಿಶ್ರಾಂತಿ-ವಿರಾಮಕ್ಕೆಂದು ಶಾಂತಿ ಜಾನ್‌ನ ಜೊತೆ ಹದಿನೈದು ದಿನ ಖಂಡಾಲಾಕ್ಕೆ ಹೋಗಿದ್ದಳು. ಹಗಲು ರಾತ್ರಿ ವ್ಹಿಸ್ಕಿ, ವ್ಹಿಸ್ಕಿಗಿಂತ ಬೆಚ್ಚಗಾದ ಆತನ ಅಪ್ಪುಗೆ, ಬೇರೆಯೇ ಲೋಕವೊಂದರ, ಇಲ್ಲಿನದೆಲ್ಲ ಮರೆಸಿಬಿಟ್ಟಂತಹ ಅನುಭವ. ಪ್ರತಿ ಬೆಳಿಗ್ಗೆ ಆಕೆ ಹಾಸಿಗೆ ಬಿಟ್ಟು ಏಳುವ ಮುನ್ನ ಆಕೆಯನ್ನು ಬರಸೆಳೆದು ಬಿಗಿದಪ್ಪಿ ಒರಟಾಗಿ ಚುಂಬಿಸಿ ಆತ ಹೇಳುತ್ತಿದ್ದ, "You are a wonderful woman !"

"You are wonderful too." ಅನ್ನುತ್ತಿದ್ದಳು ಆಕೆ. ನಿಜವಾಗಿ ಅದ್ಭುತ ಶಕ್ತಿಯುಳ್ಳ ಮನುಷ್ಯ. ಒಂದು ದಿನಕ್ಕೆ ಎಂಟು ಸಲ, ಹತ್ತು ಸಲ, ಕೆಲವೊಮ್ಮೆಯಂತೂ ತಾಸಿಗೊಮ್ಮೆ.... ಪ್ರತಿ ಸಲವೂ ಅರ್ಧ ಗಂಟೆಗಿಂತ ಹೆಚ್ಚು, ಪ್ರತಿಸಲವೂ ಅದೇ ಮೊದಲನೆಯ ಸಲವೇನೋ ಎಂಬಂತೆ....

ಆಕೆ ಯೋಚಿಸುತ್ತಿದ್ದಳು : ಇದೆಲ್ಲಕ್ಕೆ ಏನಾದರೂ ಒಂದು ಅರ್ಥವಿದೆಯೇ ? ಎಲ್ಲಿಯ ಜಾನ್, ಎಲ್ಲಿಯ ಕ್ರಾಂತಿ, ಎಲ್ಲಿಯ ವ್ಯಕ್ತಿಸ್ವಾತಂತ್ರ್ಯ, ಎಲ್ಲಿಯ ಸಾತಾರೆ, ಎಲ್ಲಿಯ ತಾನು, ಇದೆಲ್ಲ ಕೂಡಿದ್ದು ಹೇಗೆ....

– ಮುಂದೆ ವಿಚಾರಿಸಲು ಆಕೆಗೆ ಬೇಡವಾಯಿತು. ಯಾವುದೇ ಆಗಲಿ, ಶುರುವಾದಾಗ. ಅದು ಹೇಗೆ ಮುಂದುವರಿದೀತು, ಹೇಗೆ ನಡೆದೀತು, ಕೊನೆಗೆ ಹೇಗೆ ಮುಗಿದೀತು. ಇದೆಲ್ಲದರ ಅರ್ಥವೇನು. ಹೀಗೆಲ್ಲ ಯೋಚಿಸುವುದೇ ತಪ್ಪು ಅನಿಸಿತು.

ಎಲ್ಲದಕ್ಕೂ ಅರ್ಥವಿರಬೇಕೆಂದಾದರೂ ಏಕೆ ಅಪೇಕ್ಷಿಸಬೇಕು ? ಅರ್ಥ-ಅನರ್ಥ, ಸರಿ-ತಪ್ಪು, ಒಳ್ಳೆಯದು-ಕೆಟ್ಟದ್ದು ಈ ಶಬ್ದಗಳೆಲ್ಲ ಒಮ್ಮೆಲೆ ಅರ್ಥ ಕಳೆದುಕೊಂಡಿವೆ....

ಖಂಡಾಲಾದಿಂದ ತಿರುಗಿ ಕಾರಿನಲ್ಲಿ ಹೊರಟಾಗ ಶಾಂತಿಯ ತಲೆ ಪೂರಾ ಖಾಲಿಯಾಗಿತ್ತು. ದಾರಿಯುದ್ದಕ್ಕೂ ಆಕೆ ಏನೂ ಮಾತಾಡಲಿಲ್ಲ. ಜಾನ್ ಸುಮ್ಮನೇ ಡ್ರೈವ್ ಮಾಡುತ್ತಿದ್ದ. ಆಗಾಗ ಆತನ ಎಡಗೈ ಆಕೆಯ ಭುಜ, ಬೆನ್ನು, ತಲೆ, ಎದೆ ಸವರಿಕೊಂಡು ಹೋಗುತ್ತಿತ್ತು. ದೂರದಿಂದ ಮುಂಬೈ ಕಾಣತೊಡಗಿದಾಗ ಆತ ರೋಡಿನ ಮೇಲೆಯೇ ದೃಷ್ಟಿ ನೆಟ್ಟಿದ್ದಂತೆ ಇದ್ದಕ್ಕಿದ್ದಂತೆ ಕೇಳಿದ, "ಶಾಂತೀ, ನನ್ನನ್ನು ಮದುವೆಯಾಗುತ್ತೀಯಾ ? ಅಂದ್ರೆ- ಒತ್ತಾಯವಿಲ್ಲ."

ಏನೂ ಹಿಂದು-ಮುಂದು ನೋಡದೆ ತಲೆಕೊಡಹಿ ಆಕೆ ಉತ್ತರಿಸಿದಳು, "ಓ ಯಸ್, ಆಲ್‌ರೈಟ್."

* * *

ಮುಂದೆ ಎಂಟು ದಿನಗಳ ನಂತರ ಒಂದು ಸಂಜೆ ಶಾಂತಿ ಮನೆಯನ್ನು ಸ್ವಚ್ಛಗೊಳಿಸುತ್ತಿದ್ದಾಗ ಬಾಗಿಲ ಗಂಟೆ ಬಡಿದುಕೊಂಡಿತು. ಕಸಪೊರಕೆಯನ್ನು ಅಲ್ಲೇ ಚೆಲ್ಲಿ ಎತ್ತಿ ಸಿಕ್ಕಿಸಿದ್ದ ಸೀರೆಯನ್ನು ಕೆಳಗೆ ಇಳಿ ಬಿಟ್ಟು ಆಕೆ ಬಾಗಿಲು ತೆರೆದಳು. ಜಾನ್ ಬಂದಿದ್ದ ಕಾರು ತೆಗೆದುಕೊಂಡು.

"ಹಲೋ ಡಾರ್ಲಿಂಗ್, ಏನ್ಮಾಡ್ತಿದ್ದೀಯಾ ?" ಅಂತ ಅವಳನ್ನು ಅಂಟಿಕೊಂಡೇ ಒಳಗೆ ಬಂದ. ಅವಳು ನಡೆಸಿದ್ದ ಕೆಲಸ ನೋಡಿ, "ಶಾಂತಿ, ನಾ ಇವೊತ್ತು ನಿನಗೊಂದು ಸಲಹೆ ಕೊಡೋಕೆ ಬಂದೆ" ಅಂದ ಅನುಮಾನಿಸುತ್ತ.

ಅವನಿಂದ ಬಿಡಿಸಿಕೊಳ್ಳುತ್ತ ಕೂದಲು ಸರಿಪಡಿಸಿಕೊಳ್ಳುತ್ತ ಆಕೆ "ಏನದು ?" ಅಂದಳು.

"ನಾನೀಗ ಎಲೆಕ್ಷನ್ ಗಡಿಬಿಡೀಲಿರೋದ್ರಿಂದ ಅನಿವಾರ್ಯವಾಗಿ ನಮ್ಮ ಮದುವೇನ ಮೂರು ತಿಂಗಳು ಮುಂದೆ ಹಾಕಬೇಕಾಗಿದೆ."

"ನಾಯೆಲ್ಲಿ ಈ ಸಧ್ಯಾ ಲಗ್ನಾಗೋಣ ಅಂತ ಅವಸರಾ ಮಾಡಿದೆ ?"

"ನೀನ್ಮಾಡ್ಲಿಲ್ಲ. ಆದ್ರೆ ನನಗನಿಸುತ್ತೆ...."

"ಏನನಸ್ತದ ಹೇಳಲಾ ?" —ಆತ ಅನುಮಾನಿಸುವ ರೀತಿ ಆಕೆಗೆ ಹೊಸದು.

"ನೀನು ಈಗ್ಲೇ ಬಂದು ನನ್ನ ಮನೇಲಿ ಯಾಕಿರಬಾರದು ? ಅಂದ್ರೆ— ಒತ್ತಾಯವಿಲ್ಲ."

"ಓ ಯಸ್, ಆಲ್‌ರೈಟ್."

"ಗುಡ್ ಗರ್ಲ್" ಅಂತ ಆತ ಆಕೆಯನ್ನು ಪುನಃ ತಬ್ಬಿಕೊಂಡ. ಆಕೆಯ

ಪ್ರತಿಕ್ರಿಯೆ ಅನುಕೂಲವಾಗಿದ್ದು ತಿಳಿದು ಎರಡೂ ಕೈಗಳಲ್ಲೂ ಆಕೆಯನ್ನು ಎತ್ತಿಕೊಂಡು ಬಳಿಯಲ್ಲೇ ಇದ್ದ ದೀವಾನ್ ಮೇಲೆ ಮಲಗಿಸಿದ. "You are a wonderful woman !" ಅನ್ನುತ್ತ ಆಕೆಗೆ ಅಂಟಿಕೊಂಡ.

–ಹದಿನೈದು ನಿಮಿಷಗಳ ನಂತರ ಆಕೆ ಇನ್ನೂ ಹಾಗೇ ಮಲಗಿದ್ದಾಗ ಆತ ಎದ್ದು ಬಟ್ಟೆ ಹಾಕಿಕೊಂಡು ಅವಳ ಬಳಿಯಲ್ಲೇ ಕೂತು ಅವಳ ಕೈ ತನ್ನ ಕೈಗಳಲ್ಲಿ ತೆಗೆದುಕೊಂಡು ಮೃದುವಾಗಿ ಕೇಳಿದ, "ಶಾಂತಿ, ಮದುವೆಗೆ ಮುಂಚೇನೇ ನೀನು ಬಂದು ನನ್ನ ಜೊತೇಲಿರೂಂತ ಕೇಳಿದೆ ಅಂತ ಬೇಸರವೆ ? ನಿನಗೆ ಒತ್ತಾಯ ಮಾಡುವುದಿಲ್ಲ ನಾನು. ಪ್ರತಿಯೊಬ್ಬರ ಭಾವನೆಗಳನ್ನೂ, ವಿಚಾರಗಳನ್ನೂ ನಾವು ಗೌರವಿಸ್ಬೇಕು ಅಲ್ವಾ ? ಒತ್ತಾಯ, ಅದೂ ಇಂಥ ವಿಷಯದಲ್ಲಿ –ಬರೀ ಬ್ರೂಟಾಲಿಟಿ ಆಗುತ್ತೆ."

"ನನಗ್ಯಾಕ ಬ್ಯಾಸರಾಗ್ಬೇಕು ಜಾನ್ ? ಆದ್ರೂ ನೀ ನನ್ನ feelings ಗೆ ಇಷ್ಟ care ಮಾಡ್ತೀಯಲ್ಲಾ ಅಂತ ಖುಶಿ ನನಗ. ವಿಚಾರಗಳ ವಿಷಯದಾಗ, ಭಾವನೆಗಳ ವಿಷಯದಾಗ, ಪ್ರತಿಯೊಬ್ಬರಿಗೂ ಪೂರಾ ಸ್ವಾತಂತ್ರ್ಯ ಇರಬೇಕು ಅಂತ ನಿನಗ ಹ್ಯಾಂಗ ಅನಸ್ತದ ನೋಡು, ನನಗೂ ಮೊದಲಿನಿಂದಲೂ ಹಂಗs ಅನಸ್ತದ. ಹೆಚ್ಚಾಗಿ ಗಂಡಸ್ರಿಗೆ ಹಿಂಗನ್ನೋದು ಕಮ್ಮಿ, ಅದಕ್ಕ ನನಗ ನಿನ್ನ ಮ್ಯಾಲ–" ಆಕೆ ಒಮ್ಮೆಲೆ ಎದ್ದು ಆತನನ್ನು ಅಪ್ಪಿಕೊಂಡು ಆತನ ಕಿವಿಯಲ್ಲಿ ಉಸುರಿದಳು. "ನನಗನಸ್ತದ ಜಾನ್, I have started loving you, ಜೀವನದಾಗ ಮೊದಲನೇ ಸರೆ ಖರೇ ಅರ್ಥದಾಗ ಪ್ರೀತಿ ಮಾಡ್ಲಿಕ್ಹತ್ತೀನಿ."

* * *

ರಾತ್ರಿ ಹನ್ನೆರಡೂವರೆಗೆ ತೂರಾಡುತ್ತ ಮೆಟ್ಟಲೇರಿ ಮೇಲೆ ಬಂದ ಜಾನ್‌ಗೆ ಆಸರೆ ಕೊಡಲೆಂದು ಓದುತ್ತ ಕೂತಿದ್ದ ಶಾಂತಿ ತಟ್ಟನೆ ಎದ್ದು ಬಂದಾಗ ಬ್ರ್ಯಾಂಡಿಯ ವಾಸನೆ ಅವಳ ಮೂಗಿಗೆ ಭಸ್ ಎಂದು ಹೊಡೆಯಿತು. ಕೋಟು, ಟೈ, ಪ್ಯಾಂಟ್ ತೆಗೆದಿರಿಸಲು ಆತನಿಗೆ ಸಹಕರಿಸುತ್ತ ಆಕೆ ಕೇಳಿದಳು, "ಊಟ ಮಾಡ್ತೀಯಾ ಜಾನ್ ?"

"ಊಟ ? ಹ್ಞಾ ಹ್ಞಾ, ಮಾಡ್ತೀನಿ, ಇವೊತ್ತು ನನಗೆ human flesh ಬೇಕು ತಿನ್ನಲಿಕ್ಕೆ" –ಅಂತ ಗಟ್ಟಿಯಾಗಿ ಹುಚ್ಚುಚ್ಚಾಗಿ ನಗುತ್ತ ಅವಳನ್ನು ತನ್ನತ್ತ ಎಳೆದುಕೊಂಡನು. ಆತನ ಹಿಡಿತದಲ್ಲಿ ವಿಲಕ್ಷಣ ಪಾಶವೀಯತೆಯು ಅನುಭವವಾಯಿತು ಆಕೆಗೆ. ಬಿಡಿಸಿಕೊಳ್ಳಲು ಹೆಣಗಿ ನಂತರ ಅದು ವ್ಯರ್ಥವೆಂದು ತಿಳಿದು ಆಕೆ ಸುಮ್ಮನಾದಳು.

ಸುಮಾರು ನಸುಕಿನ ಮೂರು ಗಂಟೆಯ ಹೊತ್ತಿಗೆ ಜಾನ್‌ಗೆ ಎಚ್ಚರವಾಯಿತು. ಮಬ್ಬು ಇಳಿದಿತ್ತು. ಕೂಡಲೇ ಆತ ಪಕ್ಕಕ್ಕೆ ತಿರುಗಿ ಗಾಢ ನಿದ್ರೆಯಲ್ಲಿದ್ದ ಶಾಂತಿಯನ್ನು

ಒರಟಾಗಿ ಅಲುಗಿಸಿ ಎಚ್ಚರಗೊಳಿಸಿದ,

"ಶಾಂತೀ, ಏ ಶಾಂತೀ...."

ಕಣ್ಣುಬಿಟ್ಟು ಆಕೆ ನಿದ್ದೆಯ ಮಂಪರಿನಲ್ಲೇ ಏನು ಎಂಬಂತೆ ಆತನ ಕಡೆ ನೋಡಿದಳು. ಆಕೆಗೆ ಪೂರ್ಣ ಎಚ್ಚರವಾಗುವುದನ್ನೂ ಕಾಯದೆ ತುಸು ಅಸಹನೆಯಿಂದ ಆತನೆಂದ, "ಶಾಂತಿ, ನಿನ್ನೆ ರಾತ್ರಿ ನೀನು ಬಂದಾಗ ಒಂಬತ್ತು ಗಂಟೆಯಾಗಿತ್ತೆಂದು ಡ್ರೈವ್ಹರ್ ಹೇಳಿದ್ನಲ್ಲ, ಎಲ್ಲಿಗೆ ಹೋಗಿದ್ದೆ ?"

ಆತನ ಪ್ರಶ್ನೆಯಲ್ಲಿನ ಮೊನೆಯಿಂದ ಆಕೆಗೆ ಪೂರಾ ಎಚ್ಚರಾಯಿತು. ಆಕಳಿಸುತ್ತ ಆತನ ಕಡೆ ಹೊರಳಿ ಆತನ ಎದೆಯಲ್ಲಿ ಮುಖ ಹುದುಗಿಸುತ್ತ ಆಕೆ ಅಂದಳು. "ನೀ ಕುಡದ ನಿಶೇದಾಗ ಮರ್ತುಬಿಟ್ಟಿ ಕಾಣಸ್ತದ. ನೀನೇ ಹೇಳಿದ್ದಿಲ್ಲೇನು ಆ ಪ್ರೆಸ್ ಕಾನ್ಫರನ್ಸ್ ಅಟೆಂಡ್ ಆಗಿ ರಿಪೋರ್ಟ್ ಬರಿ ಅಂತ ? ಎಲ್ಲಾ ಮುಗಿಸಿ ಬರ್ಲಿಕ್ಕೆ ತಡಾ ಆತು,"

ಬಳಿಗೆ ಬಂದವಳನ್ನು ದೂರ ಸರಿಸಿ ಆತ ಸಿಡುಕಿನಿಂದ ಅಂದ, "ಅದೆಂಥ ಹಾಳಾದ ಕಾನ್ಫರೆನ್ಸು ರಾತ್ರಿ ಒಂಬತ್ತು ಗಂಟೆಯ ವರೆಗೆ ? ಲೇಟಾಗುತ್ತೆ ಅಂತ ಗೊತ್ತಾದ್ಮೇಲೆ ಬೇಗ ಎದ್ದು ಬಂದ್ಬಿಡಬಾರದಾಗಿತ್ತೆ ನೀನು ? ಹೀಗೆಲ್ಲ ಲೇಡಿಸ್ ರಾತ್ರಿ ಒಬ್ಬೊಬ್ರೇ ತಿರುಗೋದು ಸರಿಯಲ್ಲ, ನನಗಂತೂ ಒಂದಿಷ್ಟೂ ಸೇರೋಲ್ಲ."

ಶಾಂತಿಗೆ ಮತ್ತಷ್ಟು ಎಚ್ಚರಾಯಿತು. ಆಕೆ ಏನೂ ಮಾತಾಡದೆ ಮೇಲೆ ನೋಡುತ್ತ ಸುಮ್ಮನೆ ಅಂಗಾತಾಗಿ ಮಲಗಿದಳು.

ತುಸು ಹೊತ್ತು ಬಿಟ್ಟು ಜಾನ್ ಮತ್ತೆ ಅಂದ, "ಶಾಂತಿ, ಇದನ್ನ ನೆನಪಿಟ್ಕೋ, ಇನ್ನೊಮ್ಮೆ ಹೀಗೆ ಲೇಟಾಗಿ ಬರ್ಬೇಡ."

"ಆಲ್‌ರೈಟ್" ಅಂದಳು ಆಕೆ.

ತಿರುಗಿ ಬೆಳಗಾಗುವವರೆಗೂ ಜಾನ್ ಮತ್ತೆ ಆಕೆಯ ಹತ್ತಿರ ಸರಿಯಲಿಲ್ಲ.

* * *

ಸ್ವತಂತ್ರ ಪಾರ್ಟಿಯ ಪರವಾಗಿ ಪಾರ್ಟಿಯ ಸದಸ್ಯರೆಲ್ಲ ಜಾನ್ ಅಶೋಕ ಕುಮಾರನಿಗೆ ಮತಗಳನ್ನು ದೊರಕಿಸಲೆಂದು ಕ್ಯಾನ್‌ವ್ಹಾಸ್ ಮಾಡಲು ದಿನಾ ಗುಂಪುಗುಂಪಾಗಿ ಬೇರೆ ಬೇರೆ ಕಡೆ ಹೋಗುತ್ತಿದ್ದರು. ಸ್ವತಃ ಜಾನ್‌ನ ಜೊತೆ ಮಾತ್ರ ಯಾವಾಗಲೂ ಲೂಸಿ ಫರ್ನಾಂಡಿಸ್, ತಪ್ಪಿದರೆ ರೀಟಾ ಮಾರಿಸ್, ಇಬ್ಬರ ಪೈಕಿ ಯಾರಾದರೊಬ್ಬರು ಹೋಗುತ್ತಿದ್ದರು. ಈ ದಿನಗಳಲ್ಲಿ ಶಾಂತಿ ಹೆಚ್ಚಾಗಿ ಮನೆಯಲ್ಲೇ ಇರುತ್ತಿದ್ದಳು. ದಿನಕ್ಕೆ ಒಂದೋ ಎರಡೋ ಗಂಟೆ ಮಾತ್ರ ಆಫೀಸಿಗೆ ಬಂದು ಪತ್ರಿಕೆಯ ಕೆಲಸ ನೋಡುತ್ತಿದ್ದಳು.

ಒಂದು ಮಧ್ಯಾಹ್ನ ಮಾತುಂಗಾದ ಕಡೆ ಹೊರಟ ಸದಸ್ಯರುಗಳಲ್ಲಿ ಒಬ್ಬನಾದ ಬಂಗಾಲಿ ಹುಡುಗ ಸತೀಶ ಬ್ಯಾನರ್ಜಿ ಶಾಂತಿಗೆ ಕೇಳಿದ, "ಬರುತ್ತೀರಾ ನಮ್ಮ ಜೊತೆಗೆ ? ನೀವು ತುಂಬ ಚೆನ್ನಾಗಿ ಮಾತಾಡುತ್ತೀರಿ– ನಿಮ್ಮ ಮಾತು ಕೇಳಿದವರೆಲ್ಲ ನಮ್ಮ ಪಾರ್ಟಿಗೇ ಮತ ಕೊಡುವುದು ಖಂಡಿತ." ಕೂತು ಬೇಸರವಾಗಿದ್ದ ಆಕೆ ಒಮ್ಮೆಲೆ ಒಪ್ಪಿದಳು. ಆಕೆ ಎದ್ದು ಹೊರಗೆ ಬಂದಾಗ, ಆಫೀಸಿನ ಜೀಪು ಎದುರಿಗೇ ನಿಂತಿತ್ತು. ಆಕೆಯನ್ನು ಕಂಡೊಡನೆ ಮುಂದಿನ ಸೀಟಿನಲ್ಲಿ ಕೂತವರಿಬ್ಬರು ಎದ್ದು ಹಿಂದೆ ಹೋದರು. ಡ್ರೈವರ್‌ನ ಪಕ್ಕದಲ್ಲಿ ಬ್ಯಾನರ್ಜಿ ಕೂತ. ಬ್ಯಾನರ್ಜಿಯ ಪಕ್ಕದಲ್ಲಿ ಶಾಂತಿ ಕೂತೊಡನೆ ಜೀಪು ಹೊರಟಿತು.

–ಸಂಜೆ ತಿರುಗಿ ಅವರೆಲ್ಲ ಆಫೀಸಿಗೆ ಬಂದಾಗ ಉಳಿದವರೆಲ್ಲ ಆಗಲೇ ಬಂದಿದ್ದರು. ಜಾನ್ ಅಲ್ಲೇ ಶತಪಥ ತಿರುಗುತ್ತಿದ್ದ. ಜೀಪ್‌ನಿಂದ ಶಾಂತಿ ಇಳಿದೊಡನೆ ಆತ ಕಟುವಾಗಿ ಕೇಳಿದ, "ನಿನಗ್ಯಾರು ಕ್ಯಾನವ್ಹಾಸ್ ಮಾಡ್ಲಿಕ್ಕೆ ತಿರುಗು ಅಂತ ಹೇಳಿದವರು ?"

ಆತ ಇಂಗ್ಲಿಶ್‌ನಲ್ಲೇ ಮಾತಾಡಿದ್ದರಿಂದ ಸುತ್ತಲಿದ್ದವರೆಲ್ಲ ಒಂದು ಕ್ಷಣ ಅಪ್ರತಿಭರಾದರು. ಶಾಂತಿ ಮಾತಾಡುವ ಮೊದಲೇ ಬ್ಯಾನರ್ಜಿ ನಮ್ರನಾಗಿ ಹೇಳಿದ, "ನಾನೇ ಬನ್ನಿರಿ ಅಂತ ರಿಕ್ವೆಸ್ಟ್ ಮಾಡಿದೆ."

"ಯೂ ಶಟಪ್" ಅಂತ ಜಾನ್ ಗುಡುಗಿದಾಗ ಶಾಂತಿಗೆ ತಡೆಯಲಾಗಲಿಲ್ಲ. ಆಕೆ ಮುಂದೆ ಬಂದು ನೇರವಾಗಿ ಆತನನ್ನೇ ನೋಡುತ್ತ ಕೇಳಿದಳು, "ನಾ ಹೋದರ ಏನಾತು ಒಂದಿನಾ ? ಎಲ್ಲಾರೂ ಹೋಗೋದಿಲ್ಲೇನು ? ನಾನೂ ಪಾರ್ಟಿಯ ಮೆಂಬರ್ ಅಲ್ಲೇನು ?"

"ಪಾರ್ಟಿಯ ಮೆಂಬರು ಹೌದು, ಆದರೆ ಅದಕ್ಕಿಂತ ಹೆಚ್ಚಾಗಿ ನೀನು ಇನ್ನೆರಡು ತಿಂಗಳಲ್ಲಿ ನನ್ನ ಹೆಂಡತಿ ಆಗುವವಳು."

ಆತ 'ಹೆಂಡತಿ' ಶಬ್ದ ಉಚ್ಚರಿಸಿದ ರೀತಿಯಿಂದ ಶಾಂತಿಗೆ ಒಮ್ಮೆಲೇ ಯಾರೋ ತನ್ನ ಮೈಮೇಲೆಲ್ಲ ಹೊಲಸು ನೀರೆರಚಿದಂತೆನಿಸಿತು. ಆಕೆ ವ್ಯಗ್ರಳಾಗಿ ಆತನ ಕಡೆ ತಿರುಗಿ ತಲೆಯೆತ್ತಿ ನೋಡಿದಳು. ಜಾನ್ ಆಕೆಗೆ ತೀರ ಹೊಸಬನಾಗಿ ಕಾಣಿಸಿದ. ಈ ಅಸಹನೆ, ಈ ಸಂತಾಪ ಆತನಲ್ಲಿ ಆಕೆ ಮೊದಲೆಂದೂ ನೋಡಿರಲಿಲ್ಲ. ಕ್ಷಣಕಾಲ ಆಕೆಗೆ ಆಶ್ಚರ್ಯವಾಗಿ ಹಾಗೇ ಅವನನ್ನು ನೋಡುತ್ತ ನಿಂತಳು. ಮರುಕ್ಷಣ ಆತ ಉಳಿದವರ ಕಡೆ ತಿರುಗಿ, "ಎಕ್ಸ್‌ಕ್ಯೂಜ್ ಮಿ, ನನಗಿವತ್ತು ಮೈ ಸರಿಯಿಲ್ಲ, ನಾನು ಮನೆಗೆ ಹೋಗಬೇಕು" ಅಂದವನೇ ಶಾಂತಿಯ ಕೈಹಿಡಿದು ಎಳೆದುಕೊಂಡೇ ಕಾರಿನ ಕಡೆ ನಡೆದ. ದಿನಾ ಸಂಜೆ ಎಲ್ಲರೂ ಆಫೀಸಿನಲ್ಲಿ ಸೇರಿದಾಗ ಜಾನ್ ಎಲ್ಲರೊಂದಿಗೆ ಸಮಾಲೋಚಿಸಿ

ಮರುದಿನದ ಕಾರ್ಯಕ್ರಮಗಳ ಬಗ್ಗೆ ನಿರ್ದೇಶನ ಕೊಡುವುದು ಪದ್ಧತಿಯಾಗಿತ್ತು. ಇಂದು ಆತ ಎಲ್ಲ ಮರೆತಂತೆ ಅಕಸ್ಮಾತ್ತಾಗಿ ಆಫೀಸಿನಿಂದ ಹೊರಟು ಬಂದಿದ್ದ.

ಮನೆಗೆ ಬಂದೊಡನೆ ಶಾಂತಿ ಸಿಟ್ಟಿನಿಂದ ಕೇಳಿದಳು, ''ಇವತ್ತ ಹಾಂಗ ಎಲ್ಲಾರ ಮುಂದ ನನ್ನ ಅಪಮಾನ ಮಾಡೋ ಅವಶ್ಯಕತಾ ಏನಿತ್ತು ?''

''ನಿನ್ನ ಅಪಮಾನ ?'' ಜಾನ್‌ನ ಧ್ವನಿಯೊಂದಿಗೆ ಇಡೀ ಮೈ ಸಿಟ್ಟಿನಿಂದ ನಡುಗುತ್ತಿತ್ತು. ''ನೀನು ಆ ಹಲ್ಕಾ ಬ್ಯಾನರ್ಜಿಯ ಜೊತೆ ಊರೆಲ್ಲಾ ಸುತ್ತಾಡಿ ಬಂದೆಯಲ್ಲ ಅವನ ಪಕ್ಕದಲ್ಲೇ ಕೂತು ? ಅದರಿಂದ ನನ್ನ ಅಪಮಾನ ಎಷ್ಟು ಆಯಿತೆಂದು ಯೋಚಿಸಿದೆಯಾ ?''

ಆತನ ತರ್ಕ ಶಾಂತಿಗೆ ತಿಳಿಯಲಿಲ್ಲ. ಆದರೆ ಆತನ ವರ್ತನೆಯಿಂದ ಆಕೆಗೆ ಬಹಳ ಬೇಸರವಾಯಿತು. ಆತನನ್ನು ಬಲವಾಗಿ ವಿರೋಧಿಸಬೇಕೆಂದು ತೀವ್ರ ಇಚ್ಛೆಯಾಯಿತು. ಆದರೆ ಆತ ಎಷ್ಟು ಸಿಟ್ಟಾಗಿದ್ದನೆಂದರೆ ತಾನು ಏನಾದರೂ ಪ್ರತಿಯಾಡಿದರೆ ಎಲ್ಲಾದರೂ ಹೊಡೆದುಬಿಟ್ಟಾನೆಂದು ಆಕೆಗೆ ಹೆದರಿಕೆಯಾಯಿತು. ಆಕೆ ಸುಮ್ಮನಾದಳು.

''ಶಾಂತೀ, ನೀನೇನು ಚಿಕ್ಕ ಹುಡುಗಿಯಲ್ಲ. ನಿನಗಿದೆಲ್ಲ ತಿಳಿಯಬೇಕು. ಇನ್ನಾದರೂ ತಿಳ್ಕೋ, ನೀನು ಬೇರೆ ಗಂಡಸರ ಜೊತೆ ಸುತ್ತೋದು ನನಗಿಷ್ಟವಿಲ್ಲ.''

ಆಕೆ ಮತ್ತೂ ಸುಮ್ಮನಿದ್ದಳು, ಜಾನ್‌ಗೆ ತಾನೇ ಸೋಲುತ್ತಿರುವಂತೆನಿಸಿತು. ಆದರೆ ಆತ ಸೋಲಲು ತಯಾರಿರಲಿಲ್ಲ, ಆತ ಅವಳೆದುರಿಗೆ ಹೋಗಿ ನಿಂತು ಅವಳ ಎರಡು ಭುಜಗಳನ್ನು ಗಟ್ಟಿಯಾಗಿ ಅದುಮಿ, ''ಏನು ?'' ಅಂದ.

-ಆಕೆ ''ಸರಿ'' ಅಂದಳು.

ಆತನಿಗೆ ಸಮಾಧಾನವಾಯಿತು.

* * *

ಒಂದು ಮಧ್ಯಾಹ್ನ ಶಾಂತಿ ಊಟ ಮುಗಿಸಿ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ ಯಾರೋ ಧಡಧಡನೆ ಮಹಡಿಯೇರಿ ಬರುತ್ತಿದ್ದುದು ಕೇಳಿಸಿತು. ಜಾನ್ ಈಗ ತಾನೇ ಆಫೀಸಿಗೆ ಹೋಗಿದ್ದ. ಅತಿಥಿಗಳಿಗ್ಯಾರಿಗೂ ಮೇಲೆ ಪ್ರವೇಶವಿರಲಿಲ್ಲ. ಆಳುಗಳೂ ಕರೆಯದೆ ಬರುವ ಹಾಗಿರಲಿಲ್ಲ. ಯಾರಿರಬಹುದು ಅಂತ ಯೋಚಿಸುತ್ತ ಆಕೆ ಎದ್ದು ಕೂತಾಗ ಧಡಾರನೆ ಬಾಗಿಲು ತೆರೆದುಕೊಂಡು ಜಾನ್ ಒಳಗೆ ಬಂದ. ಯಾಕೆ ಏನೆಂದು ಆಕೆ ಕೇಳುವ ಮೊದಲೇ ಕೈಯಲ್ಲಿದ್ದ ಕಾಗದವೊಂದನ್ನು ಅವಳ ಮುಖದ ಮೇಲೆಯೇ ಎಸೆದು ''ಇದೆಲ್ಲ ಏನು ಶಾಂತಿ ?'' ಅಂತ ಚೀರುದನಿಯಲ್ಲಿ ಕೇಳಿದ.

ಶಾಂತಿಗೆ ಒಮ್ಮೆಲೆ ಇದು ತನ್ನ ಯಾರದಾದರೂ ಹಿತೈಷಿಗಳ ಅನಾಮಧೇಯ

ಪತ್ರವಿರಬಹುದೆ, ಮತ್ತೊಮ್ಮೆ ತನ್ನ ಗಾಲಿ ಮುರಿಯಿತೇ, ಅನಿಸಿತು.

ಆದರೆ ಇಲ್ಲ. ಪತ್ರ 'ಅಫಿಶಿಯಲ್' ಎಂದಿತ್ತು. ಅದರ ಮೇಲೆ ಸ್ಪಷ್ಟವಾಗಿ ಟೈಪ್ ಮಾಡಿದ ಅಕ್ಷರಗಳಿದ್ದವು. ಒಡೆದೇ ಇದ್ದ ಕವ್ಹರಿನೊಳಗಿಂದ ಪತ್ರ ತೆಗೆದು ನೋಡಿದಳು ಆಕೆ.

–ಕಲಕತ್ತೆಯಿಂದ ಬಂದಿತ್ತು "Women" ಎಂಬ, ಅಂತಾರಾಷ್ಟ್ರೀಯ ಸಹಯೋಗದೊಡನೆ ಭಾರತದ ಸಮಾಜಕಲ್ಯಾಣ ಸಂಸ್ಥೆಯೊಂದು ಇತ್ತೀಚೆ ಹೊರಡಿಸಲಾರಂಭಿಸಿದ್ದ, ಈಗಾಗಲೇ ಸಾಕಷ್ಟು ಪ್ರಸಿದ್ಧಿ ಪಡೆದಿದ್ದ, ಪತ್ರಿಕೆಗೆ ಸಹ-ಸಂಪಾದಕಿಯು ಕೆಲಸದ ಆರ್ಡರು. ಶಾಂತಿಗೆ ಒಂದು ಕ್ಷಣ ಸಹಜವಾಗಿ ಸಂತೋಷವಾಯಿತು. ಆಕೆ ಕಣ್ಣರಳಿಸಿ ಜಾನ್ ಕಡೆ ನೋಡಿದಳು. "ಇದರಾಗ ಏನದ ನೀ ಇಷ್ಟ ಅಪ್‌ಸೆಟ್ ಆಗೂವಂಥಾದ್ದು ?"

"ಏನಿದು ? ನೀನಿದಕ್ಕೆ ಯಾವತ್ತು ಅಪ್ಲೈ ಮಾಡಿದ್ದು ? ಇಂಟರ್‌ವ್ಯೂ ಆದದ್ದು ಯಾವಾಗ ? ನನಗೆ ಏನೂ ಹೇಳದೇ ಇದ್ದುದೇಕೆ ?"

"ಓಹ್ !" –ಆತನ ಸಿಟ್ಟಿನ ಕಾರಣ ತಿಳಿದು ಸಮಾಧಾನವಾಗಿ ಉತ್ತರಿಸಿದಳು ಆಕೆ. "ಇದಕ್ಕ ಅಪ್ಲಾಯ ಮಾಡಿದ್ದು ಆರು ತಿಂಗಳ ಹಿಂದೆ, ಇಂಟರವ್ಯೂನೂ ಆವಾಗೇ ಆತು, ನೀ ಆವಾಗ ನನ್ನ ಕೂಡ ಸರಿಯಾಗಿ ಮಾತು ಸುದ್ಧಾ ಆಡ್ತಿರಲಿಲ್ಲ."

"ಆಮೇಲಾದ್ರೂ ಹೇಳಬಹುದಿತ್ತಲ್ಲ ?" –ಆತನ ಸಿಟ್ಟು ಇನ್ನೂ ಇಳಿದಿರಲಿಲ್ಲ.

"ಖರೇ ಹೇಳಬೇಕಂದ್ರ...." ಶಾಂತಿ ಖರೆ ಹೇಳಿದಳು, "ನನಗದು ಮರ್‍ತ ಹೋಗಿತ್ತು."

"ಇಲ್ನೋಡು ಶಾಂತಿ," ಆತ ಗಂಭೀರವಾಗಿ ಹೇಳಿದ, "ನೀನು ಏನೇ ಮಾಡೋದಿದ್ರೂ ನನಗೆ ಹೇಳಿ ಮಾಡ್ಬೇಕು. ನನ್ನ ಪರ್ಮಿಶನ್ ಇಲ್ಲದೆಯೇ ಇಂಥದ್ದೆಲ್ಲ ಮಾಡಬೇಡ ಇನ್ನು. ನಿನ್ನ ಒಳ್ಳೇದಕ್ಕಾಗಿಯೇ ನಾನ್ಹೇಳೋದು. ಏನಂತೀಯ ?"

"ಅದಕ್ಯಾಕ ಅಷ್ಟ ಸಿಟ್ಟಾಗ್ತೀ ಮಾರಾಯಾ ? ಈ ಕೆಲಸಕ್ಕೆ ಹೋಗದಿದ್ರಾತಲ್ಲ" ಅಂದಳಾಕೆ. ಜಗಳಕ್ಕೆ ಪೂರ್ಣವಿರಾಮ ಕೊಡಬಯಸುತ್ತ.

"ಈ ಕೆಲಸಾನೂ ಬೇಡ, ಆ ಕೆಲಸಾನೂ ಬೇಡ ನೀನಿನ್ಮೇಲೆ ಮನೇ ನೋಡ್ಕೊಂಡು ಇದ್ಬಿಡು. ಏನಂತೀಯಾ ?"

ಆಕೆ ಅಚ್ಚರಿಯಿಂದ ಆತನನ್ನು ನೋಡಿದಳು. ನಂತರ ಈಗಾಗಲೇ ಆಫೀಸಿಗೆ ಹೋಗಲು ಆತನಿಗೆ ತಡವಾಗಿರುವುದನ್ನು ತಿಳಿದು ಬೇಗನೆ "ಹಂಗs ಆಗ್ಲಿ" ಅಂದಳು.

ಮದುವೆಗೆ ಇನ್ನೂ ನಾಲ್ಕು ದಿನ ಇದ್ದಾಗ ಒಂದು ಸಂಜೆ ಜಾನ್ ಬಹಳ ಉತ್ಸಾಹದಿಂದ ಮನೆಗೆ ಬಂದ. ಶಾಂತಿಯನ್ನು ಅಪ್ಪಿ ಚುಂಬಿಸಿ "ನಡೆ ಡಾರ್ಲಿಂಗ್, ಶಾಪಿಂಗ್‌ಗೆ ಹೋಗ್ಬರೋಣ. ಇನ್ನು ನಾಲ್ಕೇ ದಿನ. ಎಲ್ಲ ಪ್ರಿಪರೇಶನ್ ಮಾಡ್ಕೋಬೇಕು" ಅಂದ.

"ಪ್ರಿಪರೇಶನ್ ಎಂಥಾದ್ದು ? ಇದೇನು ಮಂಟಪ ಕಟ್ಟಿ ಶಹನಾಯಿ ಬಾರಿಸಿ ಮಾಡಿಕೊಳ್ಳೋ ಲಗ್ನ ಅಲ್ಲಲ್ಲ. ಸಿಂಪಲ್ ಆಗಿ ಮುಗಿಸಬೇಕು. ಆಮ್ಯಾಲ ಒಂದು ಪಾರ್ಟಿ ಕೊಟ್ರಾತು ಆಫೀಸಿನ ಮಂದೀಗೆಲ್ಲ" –ಅಂದಳು ಶಾಂತಿ. ಯಾಕೋ ಅವಳಿಗೆ ಇತ್ತೀಚೆಗೆ ಎರಡು ಮೂರು ದಿನ ತುಂಬ ಮಾನಸಿಕ ಅಸ್ವಸ್ಥತೆಯೆನಿಸತೊಡಗಿತ್ತು. ಎಂದೂ ಇಲ್ಲದೆ ಈಗ ಒಮ್ಮೆಲೆ ಅಮ್ಮನ ನೆನಪಾಗಿ ಅಳು ಬರುವಂತಾಗತೊಡಗಿತ್ತು.

"ಹೌದೌದು. ಆದ್ರೂ ಸ್ವಲ್ಪನಾದ್ರೂ ಇದ್ದೇ ಇರುತ್ತಲ್ಲ formal ಆಗಿ ?" –ಜಾನ್ ಅನುಮಾನಿಸುತ್ತಿದ್ದಂತೆ ತೋರಿತು. ಯಾವಾಗಲೂ ಖಡಾಖಂಡಿತವಾಗಿ, ತೀರ ಸ್ಪಷ್ಟವಾಗಿ, ಆಜ್ಞಾಪಿಸುವ ಧ್ವನಿಯಲ್ಲೇ ಎಲ್ಲರೊಂದಿಗೂ ಮಾತಾಡುತ್ತಿದ್ದ ಜಾನ್ ಅಕಸ್ಮಾತ್ತಾಗಿ ಒಮ್ಮೊಮ್ಮೆ ಹೀಗೆ ಅನುಮಾನಿಸುವುದನ್ನು ನೋಡಿದರೆ ಶಾಂತಿಗೆ ಹೇಗೋ ಅನಿಸುತ್ತಿತ್ತು. ಆಕೆ ಎದ್ದು ಕನ್ನಡಿಯೆದುರು ನಿಂತು ಕೂದಲು ಬಾಚಿಕೊಳ್ಳುತ್ತಿದ್ದಾಗ ಜಾನ್ ಅವಳ ಹಿಂದೆ ಬಂದು ನಿಂತು ಅವಳ ಕೊರಳು ಚುಂಬಿಸಿ ಆತನಿಗೆ ಅಸ್ವಾಭಾವಿಕವೆನಿಸುವಷ್ಟು ಮೃದುವಾದ ಧ್ವನಿಯಲ್ಲಿ ಹೇಳಿದ, "ನಾಳೆ ಬೆಳಿಗ್ಗೆ ಸ್ವಲ್ಪ ಚರ್ಚ್‌ಗೆ ಹೋಗ್ಬೇಕು ಶಾಂತಿ,"

"ಚರ್ಚ್‌ಗೆ ?" ಆಕೆ ಸರ್ರನೆ ತಿರುಗಿ ಆತನನ್ನೆದುರಿಸಿದಳು. "ಯಾಕ ? ಯಾಕ ?" ಮರುಕ್ಷಣ ತನ್ನ ಆತಂಕದಿಂದ ಅವಳಿಗೆ ನಾಚಿಕೆಯಾಯಿತು.

ಆತ ಇನ್ನೂ ಮೃದುವಾಗಿಯೇ ಇದ್ದ ಧ್ವನಿಯಲ್ಲಿ ಹೇಳಿದ, "ಅಂದರೆ ಮದುವೆ ಆಗೋ ಮೊದ್ಲು ನೀನು ಕ್ರಿಸ್ಚಿಯನ್ ಆಗಿ ಕನ್ವರ್ಟ್ ಆಗ್ಬೇಕು."

ಶಾಂತಿಯ ಮುಖ ಬೆಳ್ಳಗಾಗುತ್ತಿರುವುದನ್ನು ಲಕ್ಷಿಸದೆಯೇ ಆತ ಮುಂದುವರಿಸಿದ, "ನಾನಿವತ್ತು ದೊಡ್ಡ ಚರ್ಚ್‌ನ ಫಾದರ್ ಅವರನ್ನ ಭೇಟಿಯಾಗಿದ್ದೆ. ಬೆಳಿಗ್ಗೆ ಹತ್ತು ಗಂಟೆಗೆ ಕರ್‍ಕೊಂಡುಬಾ, ಎರಡು ಗಂಟೇಲಿ ಮುಗಿಸಿ ಬಿಡ್ತೀನಿ ಅಂದ್ರು. ತುಂಬ ಒಳ್ಳೆಯವ್ರು" –ಮಾತಾಡುತ್ತ ಆಡುತ್ತ ಆತನ ಧ್ವನಿಯಲ್ಲಿ ಮರಳಿ ಆತನಿಗೆ ಸಹಜವಾದ ಆತ್ಮವಿಶ್ವಾಸ, ನಿರ್ಧಾರ ಮೂಡಿದವು, "ಅಂದ್ರೆ ಇದೆಲ್ಲ ಬರೀ formality. ನೀನು ನನ್ನನ್ನು ಕೂಡಿದ್ಮೇಲೆ ನನ್ನ ಧರ್ಮವೇ ನಿನ್ನದೂ ಅಲ್ಲವೆ ? ಈಗ ಮಾಡೋದು ಬರೀ ವಿಧಿ, ಅಷ್ಟೇ. ಮುಂದೆ ನಮ್ಮ ಮಕ್ಕಳನ್ನು ಸಮಾಜ outcastes ಥರಾ ಟ್ರೀಟ್ ಮಾಡ್ಬಾರದಲ್ಲ ? ಏನಂತೀಯ ?"

ಆಕೆಯಿಂದ 'ಓ ಯಸ್, ಆಲ್‌ರೈಟ್' ನಿರೀಕ್ಷಿಸಿದ್ದ ಆತನಿಗೆ ಎಷ್ಟೊತ್ತಾದರೂ ಆಕೆ ಮಾತಾಡದಿರಲು ಅನುಮಾನವಾಗಿ ಆತ ಅವಳ ಸಮೀಪ ಬಂದು ಅವಳ ಭುಜದ ಮೇಲೆ ಕೈಯಿಟ್ಟ. "ಶಾಂತೀ" ಅಂದ.

ಆತನ ಕೈ ಹಾಗೇ ಇರಗೊಟ್ಟು ಆಕೆ ಸ್ಥಿರವಾದ ಧ್ವನಿಯಲ್ಲಿ ಕೇಳಿದಳು, "ಜಾನ್, ನೀ ಇಷ್ಟ ದಿನ ಎಂದೂ ಇದರ ಸಲುವಾಗಿ ಏನೂ ಹೇಳೇ ಇಲ್ಲಲ್ಲ ? ಈ ಮತಾಂತರ, ಚರ್ಚ್, ಪಾದ್ರಿ ಇದೆಲ್ಲ ಯಾಕೆ ? ನೀನು ನಂಬುತ್ತೀಯಾ ಇದನ್ನೆಲ್ಲ ? ನಾವಿಬ್ರೂ ಒಬ್ಬರಿಗೊಬ್ಬರು ಸಮೀಪ ಬಂದಾಗ ನಮಗ ಅಡ್ಡ ಆಗಲಾರದ ಧರ್ಮ ಈಗ್ಯಾಕ ಅಡ್ಡ ಆಗತದ, ಲಗ್ನದ ವ್ಯಾಳ್ಯಾಕ್ಕ ? ನಾವು ಸರಳ ರಜಿಸ್ಟ್ರಾರ್ ಆಫೀಸಿಗೆ ಹೋಗಿ ಲಗ್ನಾಗೂಣು. ಧರ್ಮ ಅಂತನ್ನೂದು ಒಂದು ಇರೂದೇ ಖರೇ ಇದ್ದರ, ಹುಟ್ಟಿನಿಂದ ಬಂದ ಧರ್ಮವನ್ನ ಚರ್ಚ್‌ನಲ್ಲಾಗಲೀ, ಗುಡಿಯಲ್ಲಾಗಲೀ, ಬದಲಿ ಮಾಡಿಕೊಳ್ಳುವುದು ಶಕ್ಯ ಅದನs ? ನಾ ನಂಬೂದಿಲ್ಲ ಅವನ್ನೆಲ್ಲ. ಇದು ಹುಚ್ಚುಚ್ಚಾರ ಅನಸತದ ನನಗ."

ಎಂದೂ ಹೆಚ್ಚು ಮಾತಾಡದಿದ್ದ ಶಾಂತಿಯ ಈ ಆಕಸ್ಮಿಕ ಮಾತಿನ ಪ್ರವಾಹಕ್ಕೆ ಮುಗ್ಧನಾದಂತೆ ಕೇಳುತ್ತಲಿದ್ದ ಜಾನ್ ಆಕೆ ಮಾತು ನಿಲ್ಲಿಸುತ್ತಲೇ ಆಶ್ಚರ್ಯದಿಂದ, ಸಂಯಮ ಕಳೆದುಹೋಗದಂತೆ ಪ್ರಾಮಾಣಿಕವಾಗಿ ಪ್ರಯತ್ನಿಸುತ್ತ ಅಂದ, "ಶಾಂತೀ, ಈ ವಿಷಯದಲ್ಲಿ ನಾನು ನಿನ್ನ ವಿಚಾರ ಕೇಳೋಕೆ ಸಿದ್ಧನಿಲ್ಲ. ನಿನ್ನ ವಿಚಾರಗಳಿಗೆ ಅರ್ಥವೂ ಇಲ್ಲ. ಈ ವಿಚಾರದಲ್ಲಿ ನೀನು ನಾನ್ಹೇಳಿದ್ದನ್ನು ಒಪ್ಪೋದು ನಿನ್ನ ಕರ್ತವ್ಯ ಕೂಡ. ಅಷ್ಟಕ್ಕೂ ಕನ್‌ವ್ಹರ್ಟ್ ಆದ್ರೆ ನಿಂದೇನು ಕೊಳ್ಳೇ ಹೋಗೋದು ? ಕ್ರಿಸ್ಚಿಯನ್ ಧರ್ಮ ಜಗತ್ತಿನಲ್ಲೇ ಸರ್ವಶ್ರೇಷ್ಠವಾದ ಧರ್ಮ."

"ಇರಬಹುದು" ಆತನ ಕೈಕೊಡಹಿ ಶಾಂತಿ ಅಂದಳು, "ಆದರೆ ಎಲ್ಲರಿಗೂ ಅಲ್ಲ."

"ಶಾಂತೀ !" ಜಾನ್‌ನ ಧ್ವನಿ ಕೂಗೇ ಆಗಿತ್ತು :

"ನಮ್ಮ ಧರ್ಮದ ಬಗ್ಗೆ ಹೀಗೆಲ್ಲ ಮಾತಾಡಿದ್ರೆ ಹಲ್ಮುರೀತೀನಿ ನಿಂದು."

ಶಾಂತಿ ವಿಸ್ಮಯದಿಂದ, ಆತನ ಧರ್ಮಾಭಿಮಾನದ ಬಗ್ಗೆ ಪ್ರಶಂಸೆಯಿಂದ ಆತನ ಕಡೆ ನೋಡಿದಳು.

ಸಿಟ್ಟಿನಿಂದ ನಡುಗುತ್ತ ಆತನೆಂದ, "ಎಲ್ಲೋ ಭಿಕಾರಿ ಹಾಗೆ ಬಿದ್ದೋಳನ್ನ ಮನೇಗೆ ಕರ್‍ಕೊಂಡ್ಬಂದು ಒಳ್ಳೊಳ್ಳೇ ತಿನಿಸು ಕೊಟ್ಟೆ, ಬಟ್ಟೆ ಕೊಟ್ಟೆ, ಒಡವೆ ಕೊಟ್ಟೆ, ಜೊತೆಗೆ ಮಲಗಿಸಿಕೊಂಡೆ, ಸಾಲದು ಅಂತ ಮದ್ವೆ ಬೇರೆ ಆಗ್ತಿನೀಂತ ಯಾವ್ದೋ ಹಾಳು ಗಳಿಗೇಲಿ ಮಾತು ಕೊಟ್ಟೆ, ಇವಳಿಗೆ-ಇವಳಿಗೆ ನನ್ನ ಧರ್ಮದಲ್ಲಿ ನಂಬ್ಕೆ ಇಲ್ವಂತೆ. ಹಲ್ಕಾ ಮುಂಡೆ...."

ಶಾಂತಿ ಸ್ತಬ್ಧಳಾಗಿ ನಿಂತಿದ್ದಳು.

ಜಾನ್ ಎದ್ದು ಹೋಗಿ ವ್ಹಿಸ್ಕಿ ಬಾಟಲ್ ತೆಗೆದು ಗ್ಲಾಸಿಗೆ ಸುರುವಿ ಗಟಗಟನೆ ಕುಡಿದ. ನಂತರ ಅವಳ ಕಡೆ ತಿರುಗಿ ಹೇಳಿದ. "ನಿನ್ನ ಪುಕ್ಕಟೆ ಸಾಕಿದೀನಿ ಇಷ್ಟು ದಿನ : ನನ್ಮಾತು ನೀನು ಕೇಳ್ಲೇಬೇಕು, ಫಾದರ್‌ಗೆ ಮಾತುಕೊಟ್ಟು ಬಂದಿದೀನಿ. ಅವ್ರಿಗೆ ನಿರಾಶೆ ಆಗಲು ಕೊಡೋಲ್ಲ ನಾನು." ನಂತರ ಆತ ಧಡಧಡನೆ ಮೆಟ್ಟಲಿಳಿದು ಹೊರಗೆ ಹೊರಟುಹೋದ.

ರಾತ್ರಿಯಿಡೀ ಆತ ತಿರುಗಿ ಬರಲಿಲ್ಲ.

* * *

ಎಚ್ಚರಾಗಿಯೇ ಮಲಗಿಕೊಂಡಿದ್ದ ಶಾಂತಿಯ ತಲೆಯೆಲ್ಲ ಸಿಡಿಯುತ್ತಿತ್ತು. ತಿಳಿವಳಿಕೆ ಬಂದಾಗಿನಿಂದ ತಾನು ಎಂದೂ ಗುಡಿಗೆ ಹೋದವಳಲ್ಲ, ದೇವರಿಗೆ ಕೈ ಮುಗಿದವಳಲ್ಲ, ಯಾವ ಸ್ವಾಮಿಗೂ ಬಾಬಾಗೂ ಅಡ್ಡಬಿದ್ದವಳಲ್ಲ, ತನ್ನದಾದ ಧರ್ಮವೆಂಬುದೊಂದಿದೆ ಎಂದೇ ಯೋಚಿಸಿದವಳಲ್ಲ. ಅಂತಹುದರಲ್ಲಿ ಇಂದು ಜಾನ್ ಮಾಡಿದ ಸಲಹೆ ತನಗೆ ಇಷ್ಟೇಕೆ ಒಮ್ಮೆಲೆ ಅಪ್ರಿಯವಾಗಿ, ಅಶಕ್ಯವಾಗಿ, ಕಲ್ಪನಾತೀತವಾಗಿ ತೋರಿತು ? ತನಗರಿಯದೇ ತಾನು ಹಿಂದೂ ಧರ್ಮವನ್ನು ಪ್ರೀತಿಸುತ್ತಿದ್ದೇನೆಯೇ ? ಅಥವಾ ಧರ್ಮಗಳೆಲ್ಲ ಬರೇ ಮನುಷ್ಯನ ಕಲ್ಪನೆ ಎಂದೇ ತಾನು ಯಾವಾಗಲೂ ನಂಬಿರುವುದರಿಂದ ಈ ಮತಾಂತರ ಇತ್ಯಾದಿ ತನಗೆ ಅರ್ಥವಿಲ್ಲದ್ದಾಗಿ ಕಾಣುತ್ತಿವೆಯೋ ?

ನಡುರಾತ್ರಿ ಆಕೆಗೆ ಒಮ್ಮೆಲೆ ಬಹಳ ವರ್ಷಗಳ ನಂತರ ಅಳು ಬಂತು. ಭಯಂಕರ ಅಳು. ಮೈಯೆಲ್ಲ, ಹಾಸಿಗೆಯಲ್ಲ, ಮಂಚವೆಲ್ಲ, ಕೋಣೆಯೆಲ್ಲ, ಮನೆಯೆಲ್ಲ – ಇಡೀ ಮುಂಬೈಯೆಲ್ಲ ನಡುಗಿಸುವಂಥ ಅಳು. ತಡೆದುಕೊಳ್ಳಲು ಯತ್ನಿಸದೆ ಆಕೆ ನಿಧಾನವಾಗಿ, ಗಟ್ಟಿಯಾಗಿ, ಸಮಾಧಾನವಾಗುವಂತೆ ಅತ್ತಳು.

* * *

ಮುಂಜಾನೆ ಎದ್ದೊಡನೆ ಕೆಳಗೆ ಬಂದು ಆಕೆ ಟೆಲಿಫೋನ್ ರಿಸೀವ್ಹರ್ ಎತ್ತಿಕೊಂಡು ನಂಬರು ತಿರುಗಿಸಿದಳು.

ಆಚೆ ಕಡೆಯಿಂದ ಸುಸ್ಪಷ್ಟ ಧ್ವನಿ ಬಂತು. "ಹಲೋ, ಸಾಂತಾಕ್ರೂಜ್ ಏರೋಡ್ರಮ್, ಗುಡ್‌ಮಾರ್ನಿಂಗ್ ....ಏನು ? ಕಲಕತ್ತಾಕ್ಕೆ ? ಸಾರಿ, ಎಲ್ಲ ಬುಕ್ ಆಗಿವೆ. ಸ್ವಲ್ಪ ನಿಲ್ಲಿ ಪ್ಲೀಜ್ ....ಹ್ಞಾ, ಒಂದು ಸೀಟ್ ಕ್ಯಾನ್ಸಲ್ ಆಗಿದೆ, ನಿಮಗೆ ಕೊಡಬಲ್ಲೆವು ....ಹ್ಞಾ ಹ್ಞಾ, ಸರಿಯಾಗಿ ಎಂಟೂ ಮೂವತ್ತು."

೫

ಮುಂಬೈನಿಂದ ವಿಮಾನ ಮೇಲೆ ಹಾರಿದಾಗ ಶಾಂತಿಗೆ ತನ್ನ ಮನಸ್ಸು ಒಂದಿಷ್ಟೂ ಚುರುಗುಡದಿರುವುದನ್ನು ಗಮನಿಸಿ ಮಜಾ ಅನಿಸಿತು. ಎದುರಿಗಿದ್ದ ಪತ್ರಿಕೆಯೊಂದನ್ನೆತ್ತಿಕೊಂಡು ಆಕೆ ಆರಾಮವಾಗಿ ಸೀಟಿನಲ್ಲಿ ಹಿಂದಕ್ಕೊರಗಿದಳು. ತುಸು ಹೊತ್ತಿನ ನಂತರ "ಎಕ್ಸ್‌ಕ್ಯೂಸ್ ಮಿ" ಅಂತ ಪಕ್ಕದಿಂದ ಬಂದ ಧ್ವನಿ ಕೇಳಿ ಬಲಕ್ಕೆ ತಿರುಗಿ ನೋಡಿದಳು. ಪಕ್ಕದ ಸೀಟಿಗೆ ಕೂತಿದ್ದ ವಿದೇಶಿ ತರುಣನೊಬ್ಬ ಆಕೆಯನ್ನು ಮಾತಾಡಿಸುತ್ತಿದ್ದ. ನೀಲಿ ಕಣ್ಣಿನ, ಕೆಂಪು ಕೂದಲಿನ, ಗುಲಾಬಿ ಬಣ್ಣದ, ಉದ್ದಕ್ಕೂ ಅಗಲಕ್ಕೂ ಇದ್ದ ಆತ ತುಂಬ ಮೋಹಕವಾಗಿ ಕಾಣಿಸಿದ. ತಾನು ಕಷ್ಟಪಟ್ಟು ಅಲಂಕಾರ ಮಾಡಿಕೊಂಡು ಬಂದದ್ದು ಒಳ್ಳೆಯದಾಯಿತು ಅನಿಸಿತು ಶಾಂತಿಗೆ. ಆಕೆ ಮುಖದ ತುಂಬ ನಗುತ್ತ ಆತನೆಡೆಗೆ ತಿರುಗಿದಳು. ಆತ ಐರಿಶ್ ಅಂತೆ. ಆತನ ಮುತ್ತಜ್ಜ ಭಾರತದವನಂತೆ. ಭಾರತೀಯ ಸಂಸ್ಕೃತಿಯ ಬಗ್ಗೆ ತನಗೆ ಮೋಹ ಬಹಳ ; ಇಲ್ಲಿನ ಕಲೆ, ಸಾಹಿತ್ಯ, ವೇದ, ಪುರಾಣ ಎಲ್ಲ ತನಗೆ ಪ್ರಿಯ ; ಶಾಂತಿನಿಕೇತನ ನೋಡಲೆಂದು ಕಲಕತ್ತೆಗೆ ಹೊರಟಿರುವುದು ; ಶಾಂತಿ ಸಂಪಾದಕಿಯಾಗಲೆಂದು ಹೊರಟಿರುವ "Women" ಪತ್ರಿಕೆ ತಾನು ನೋಡಿದ್ದೇನೆ ; ಅದರ ಮುಖ್ಯ ವ್ಯವಸ್ಥಾಪಕನ ಮಗ ತನ್ನ ಪೆನ್ ಫ್ರೆಂಡ್ ; ತುಂಬ ಸ್ಕೋಪ್ ಇರುವ ಪತ್ರಿಕೆ ; ಭಾರತೀಯ ಹೆಂಗಸರು ಸೀರೆ ಉಡುವುದು ತುಂಬ ಚೆಂದ ; ತನಗೆ ಭಾರತದ ಹುಡುಗಿಯನ್ನು ಮದುವೆಯಾಗುವ ಆಸೆ ; ಭಾರತೀಯ ಹುಡುಗಿಯರು ಪ್ರೀತಿಯಲ್ಲಿ ಪ್ರಾಮಾಣಿಕರಾಗಿರುತ್ತಾರೆ ; ಯುರೋಪಿನ ಹುಡುಗಿಯರಂತೆ ಚೆಲ್ಲು ಅಲ್ಲ ; ಬದಲಾಗದಿರುವುದೇ ನಿಜವಾದ ಪ್ರೀತಿ, ನಿಜವಾದ ಸಂಬಂಧ ; ಭಾರತದ ಸಾಂಸ್ಕೃತಿಕ ನಿಯೋಗವೊಂದು ಕಳೆದ ವರ್ಷ–

–ಹೀಗೆ ಕೊನೆಯಿಲ್ಲದ ಆತನ ಮುದ್ದು ಮಾತುಗಳನ್ನು ಕೇಳುತ್ತ ಶಾಂತಿ ಮುಗುಳ್ನಗುತ್ತ ಸುಮ್ಮನೇ ಕೂತಳು.

ಆತ ಕಲಕತ್ತೆಯಲ್ಲಿ ತಾನಿಳಿಯಲಿರುವ ಹೋಟೆಲಿನ ವಿಳಾಸ, ಫೋನ್ ನಂಬರು ಕೊಟ್ಟು, ಅವಳ ಮೇಲೆ ಬಾಗಿ ಆರ್ಜವತೆಯಿಂದ ಕೇಳಿದ, "ನೀನು ಖಂಡಿತ ಬಂದು ನನ್ನ ಕೂಡ ಸ್ವಲ್ಪ ಹೊತ್ತು ಕಳೆಯುತ್ತೀಯಲ್ಲ ?"

"ಸ್ವಲ್ಪ ಹೊತ್ತೇಕೆ ?" ಶಾಂತಿ ಆತನ ಐರಿಶ್ ಉಚ್ಚಾರಣೆಯಿಂದ ಮೋಜೆನಿಸಿ ನಗುತ್ತ ಅಂದಳು,

"ನಿನಗೆ ಬೇಕಾದರೆ ನೀನು ತಿರುಗಿ ಹೋಗುವ ತನಕವೂ ನಿನ್ನ ಕೂಡ ಇರುತ್ತೇನೆ."

“ನಿಜವಾಗಿ ? ಅದ್ಭುತ” ಆ ವಿದೇಶಿಯನ ಕಣ್ಣು ಪಳಪಳನೆ ಹೊಳೆದವು.

ಹತ್ತು ನಿಮಿಷ ಬಿಟ್ಟು ಆತ ಕೇಳಿದ, “ನಾನು ನಿನ್ನನ್ನು ಮುದ್ದಿಸಬಹುದೇ ?”

“ಓಹೋ” ಅಂದಳು ಆಕೆ.

ಆತನ ದೀರ್ಘವಾದ ಮೃದುವಾದ ಮೈ ಜುಮ್ಮೆನ್ನಿಸುವ ಚುಂಬನ ಕೊನೆಗೊಮ್ಮೆ ಕೊನೆಗೊಂಡಾಗ ಆಕೆಗೆನಿಸಿತು– ಚುಂಬನವೂ ಒಂದು ಕಲೆ, ಎಷ್ಟು ಸುಂದರವಾದ ಕಲೆ....

ಮತ್ತೆ ಹತ್ತು ನಿಮಿಷ ಬಿಟ್ಟು ಆತ ಅವಳ ಸೊಂಟದ ಸುತ್ತ ಕೈಹಾಕಿ ಅವಳನ್ನು ಬಳಿಗೆಳೆದುಕೊಂಡು ಅವಳ ಕಿವಿಯಲ್ಲಿ ಪಿಸುಗುಟ್ಟಿದ, “ನನ್ನ ಕನಸಿನ ಹುಡುಗಿ, ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನೂ ನನ್ನನ್ನು ಪ್ರೀತಿಸುತ್ತೀಯಾ ?”

ಬಲವಾಗಿ ತಲೆ ಕೊಡಹಿ ಆಕೆ ಉತ್ತರಿಸಿದಳು, “ಇಲ್ಲ.”

“ಆದರೆ ಏಕೆ ?” –ಆತನಿಗೆ ಆಶ್ಚರ್ಯ.

“ಏಕೆಂದರೆ ಹಾಗೆಂದರೇನೆಂದು ನನಗೆ ಗೊತ್ತಿಲ್ಲ.”

❖ ❖ ❖

# ಶೋಷಣೆ, ಬಂಡಾಯ ಇತ್ಯಾದಿ....

ಬೆಳಗಿನ ಜಾವದ ಸಕ್ಕರೆನಿದ್ದೆಯಲ್ಲಿದ್ದ ಆಕೆಗೆ ಒಂದೇ ಸಮನೆ ಕಿರುಚತೊಡಗಿದ ಕರೆಗಂಟೆಯ ಸದ್ದಿನಿಂದ ಎಚ್ಚರಾಗಿ, ಸಹಜವಾಗಿ ಸಿಟ್ಟು ಬರುತ್ತದೆ. ಹಾಸಿಗೆಯಿಂದಿಳಿದು ಹೊರಬಾಗಿಲ ಕಡೆ ನಡೆದಾಗ ಹಾಲ್‌ನಲ್ಲಿದ್ದ ಗೋಡೆಯ ಗಡಿಯಾರದ ಮೇಲೆ ಕಣ್ಣು ಬಿದ್ದು ಅರೆ, ಇದೇನು, ಆಗಲೆ ಎಂಟಾಯಿತಲ್ಲ, ದಿನಾ ಆರೂವರೆಗೇ ಕೆಲಸಕ್ಕೆ ಬರುವ ರೋಶನ್‌ಬಿ ಇಂದೇಕೆ ಇಷ್ಟು ತಡಮಾಡಿದಳು – ಅನಿಸುತ್ತದೆ. ಇನ್ನು ಹತ್ತರ ಲೋಕಲ್‌ಟ್ರೇನು ಹಿಡಿಯಲು ಮಾಡಬೇಕಾದ ಅವಸರ, ಪಡಬೇಕಾದ ಅವಸ್ಥೆ ನೆನೆದು ಸಿಟ್ಟಿನೊಂದಿಗೆ ಬೇಸರವೂ ಬರುತ್ತದೆ. ತಡವಾಗುವುದಿದ್ದರೆ ಹಿಂದಿನ ದಿನವೇ ಹೇಳಿ ಹೋಗಲು ಏನು ಧಾಡಿ ಈ ರೋಶನ್‌ಗೆ ? ತಾನು ಅಲಾರಂ ಆದರೂ ಇಟ್ಟುಕೊಳ್ಳಬಹುದಿತ್ತು. ಈಗೆಷ್ಟು ಫಜೀತಿ....

ರೋಶನ್‌ಳನ್ನು ಬೈಯಲು ಸಿದ್ಧಳಾಗಿ ಆಕೆ ಬಾಗಿಲು ತೆರೆದಾಗ ಎದುರಿಗೆ ಕಂಡದ್ದು ರೋಶನ್ ಅಲ್ಲ, ಕೈಯಲ್ಲಿ ಸೂಟ್‌ಕೇಸ್ ಹಿಡಿದು ಎಲ್ಲೋ ಹೊರಡಲು ಸಿದ್ಧಳಾಗಿದ್ದ ಆಚೆ ಬ್ಲಾಕಿನ ಕಮಲಾ.

“ಸಾರಿ ಶಶಿ, ನಿನ್ನ ನಿದ್ದೀ ಡಿಸ್ಟರ್ಬ್ ಮಾಡಿದೆನೋ ಏನೋ. ಪಾಪ, ನಿನ್ನೆ ರಾತ್ರೀ ೧೨ ರ ತನಕಾ ಯಾವುದೋ ಡೆಲಿವ್ಹರಿ ಕೇಸ್ ಅಟೆಂಡ್ ಮಾಡಿದ್ದಿ ಅಂತ. ಆದರ ನನಗ ಈಗ ಹನ್ನೊಂದ ಘಂಟೇಕ್ಕ ಗಾಡೀ ಅದ. ಅಷ್ಟರಾಗ ಇನ್ನೂ ಒಂದೆರಡ ಕಡೆ ಹೋಗ್ಬೇಕಾಗೇದ. ಅದಕ್ಕs ನಿನಗ ಹೇಳಿ ಹೋಗ್ಲಿಕ್ಕೆ ಬಂದೆ.” – ಕಮಲಾನ ಧ್ವನಿಯಲ್ಲಿ ಎಂದಿನ ಅದೇ ಮೃದುತೆ.

“ನೀ ಎಬ್ಬಿಸಿದ್ದು ಛಲೋನೇ ಆತು ಕಮಲಾ, ಒಳಗ ಬಾ. ಅಲ್ಲ, ಇದೇನು ಒಮ್ಮಿಂದೊಮ್ಮೆಲೆ ಊರಿಗೆ ಹೊರಟಿ ? ಯಾವೂರಿಗೆ ?”

ಒಳಗೆ ಬಂದರೂ ಕೂತುಕೊಳ್ಳದೆ ನಿಂತೇ ಮಾತನಾಡಿದಳು ಕಮಲಾ, “ಬೆಂಗಳೂರಿಗೆ, ಅಲ್ಲಿಂದ ಮುಂದ ಮೈಸೂರಿಗೆ.”

“ಓಹೋ, ಅಂದರ ಆ ಪ್ರೊಡ್ಯೂಸರ್‌ನ ಆಫರ್ ಒಪ್ಪಿಗೊಂಡಬಿಟ್ಟೇನು ? ಗುಡ್. ನೀ ಈ ಕೆಲ್ಸಾ ಎಂದೋ ಮಾಡಬೇಕಿತ್ತು. ಹೋಗಲಿ, ಈಗರೇ ಹೊರಟೀಯಲ್ಲ.

ಇನ್ನ ನಿನ್ನ ಟ್ಯಾಲೆಂಟ್ ಏಕದಂ ಗೊತ್ತಾಗ್ತದ ನೋಡು ಮಂದೀಗೆ. ಒಮ್ಮೆಲೆ ಸ್ಯೂಪರ್‌ಸ್ಟಾರ್ ಆಗಿಬಿಡ್ತೀ ನೀನು. ಇನ್ನೇನು–" ಹುರುಪಿನಿಂದ ಮಾತಾಡುತ್ತಿದ್ದ ಆಕೆ ಕಮಲಾನ ಮುಖ ಇಳಿದಿದ್ದನ್ನು ಕಂಡು ಒಮ್ಮೆಲೆ ಆ ಮಾತು ನಿಲ್ಲಿಸಿ ಕೇಳಿದಳು, "ಯಾಕ ಕಮಲಾ ? ನಿನ್ನ ಜೋಡಿ ಶಿವಮೂರ್ತಿ ಬರ್ತಾರಿಲ್ಲೋ ? ಮೊದಲ್ನೇ ಸಲ ದೂರದ ಊರಿಗೆ ಹಾಂಗ ಒಬ್ಬಾಕಿ ಹೋಗೂದು ಛಲೋ ಅಲ್ಲ. ತಿರಿಗಿ ಯಾವಾಗ ಬರಾಕಿ ನೀನು ? ನೀ ಬರೂ ತನಕಾ ಮನ್ಯಾಗ ರಾಜು-ನೀಲಾ ಇಬ್ರೇ ಇರ್ತಾರ ? ಹಾಂಗ ನಾ ನೋಡ್ತಿರ್ತೀನಿ ಬಿಡು ಅವ್ರನ್ನ. ಆದರ ನೀ ಎಂದ ಬರಾಕಿ ? ಕೂತರ ಕೂಡು, ಚಹಾ ಮಾಡ್ತೀನಿ."

–ಒಳಗೆ ಹೊರಟ ಆಕೆಯನ್ನು ತಡೆದು ಕಮಲಾ ಸೋತ ದನಿಯಲ್ಲಿ ಹೇಳಿದಳು, "ಶಶಿ ಇಲ್ಲೆ ಕೇಳು, ಪ್ಲೀಜ್, ನನಗೀಗ ಚಹಾ-ಗಿಹಾ ಬ್ಯಾಡ. ನಾ ಭಾಳ ಗಡಿಬಿಡಿಯೊಳಗಿದ್ದೀನಿ. ನಿನ್ನ ಎಲ್ಲಾ ಪ್ರಶ್ನೀ ಉತ್ತರಾ ನಾ ಈಗ ಹೇಳೋ ಮೂಡಿನ್ಯಾಗಿಲ್ಲ. ಸಾವಕಾಶ ನಿನಗs ಗೊತ್ತಾದೀತು. ಆದರ ಒಂದ ಮಾತು ಹೇಳತೀನಿ– ನಾ ಇನ್ನ ಬಹುಶಃ ತಿರಿಗಿ ಬರೂದಿಲ್ಲ. ಬಹುಶಃ ಏನು, ಖಾತ್ರೀನೇ. ನಾ ಇನ್ನ ಮುಂಬಯಿಗೆ ತಿರಿಗಿ ಬರೂದಿಲ್ಲ."

ಆಕೆಗೆ ಆಶ್ಚರ್ಯ-ಚಿಂತೆ ಎರಡೂ ಆದವು. "ಅದ್ಯಾಕ ಕಮಲಾ ? ಏನಾತು ? ಹಿಂಗ್ಯಾಕ ಮಾತಾಡ್ತೀ ? ಹೇಳಲ್ಲ, ನನಗೂ ಹೇಳೊದಿಲ್ಲೇನು, ನಿನ್ನ ಶಶೀಗೆ ?" ಹಾಗನ್ನುತ್ತ ಆಕೆ ಮುಂದೆ ಬಂದು ಕಮಲಾನ ಕೈಗಳನ್ನು ಹಿಡಿದುಕೊಂಡಳು.

ಮೆಲ್ಲಗೆ ಕೈಬಿಡಿಸಿಕೊಂಡು ತನ್ನ ವ್ಯಾನಿಟಿ ಬ್ಯಾಗಿನಿಂದ ಒಂದು ಚಿಕ್ಕ ಪುಸ್ತಕದ ಆಕಾರದ ಪ್ಯಾಕೆಟನ್ನು ಹೊರತೆಗೆದು ಬಳಿಯಲ್ಲಿನ ಟೇಬಲಿನ ಮೇಲಿಡುತ್ತ ಕಮಲಾ ಅಂದಳು, "ಹೇಳಿದ್ನೆಲ್ಲ, ಯಾವ ಪ್ರಶ್ನೀಗೂ ಉತ್ತರ ಕೊಡೋ ಮೂಡಿನ್ಯಾಗಿಲ್ಲ ನಾನು. ಆದರ ನನ್ನ ನೆನಪಿನ ಸಲುವಾಗಿ ನಿನಗ ಇದನ್ನ ಕೊಟ್ಟು ಹೋಗ್ಲಿಕ್ಕೆ ಬಂದೀನಿ."

ಅದರೆಡೆ ಕಣ್ಣುಹರಿಸಿದಾಗ ಅದನ್ನು ನೀಟಾಗಿ ಪ್ಯಾಕ್ ಮಾಡಿದ್ದರೂ ಅದೇನಿರಬಹುದೆಂದು ಆಗಲೆ ಅಂದಾಜು ಹಾಕಿದ್ದ ಆಕೆ ಅಂದಳು, "ಪ್ರಶ್ನೀ-ಉತ್ತರಾ ಒತ್ತಟ್ಟಿಗಿರ್ಲಿ ಕಮಲಾ, ಆದರ ನೀ ಮುಂಬಯಿ ಬಿಟ್ಟು ಹೋಗೋ ಈ ನಿರ್ಧಾರ ತಗೊಳ್ಳೂವಾಗ ಸಾಕಷ್ಟು ವಿಚಾರ ಮಾಡಿಯೋ ಇಲ್ಲೋ ?"

"ವಿಚಾರ ?" ಕಮಲಾ ಖಿನ್ನಳಾಗಿ ನಕ್ಕಳು. "ಈ ಹತ್ತು ವರ್ಷ ನಾ ಬರೇ ವಿಚಾರನೇ ಮಾಡೀನಿ ಶಶಿ, ಬ್ಯಾರೆ ಏನೂ ಮಾಡಿಲ್ಲ. ಬರೇ ವಿಚಾರ ಮಾಡೋದರಾಗs ಜೀವನಾ ಕಳೆಯೋದು ಬ್ಯಾಡ ಅಂತ, ಇನ್ನಾದ್ರೂ ಏನರೆ ಮಾಡಿ ನೋಡೋಣ ಅಂತ ಹೊರಟೀನಿ."

ಕಮಲಾನ ಮಾತಿನ ಅರ್ಥ ಸಾಕಷ್ಟು ತಿಳಿದಿದ್ದ ಆಕೆ ಅಂದಳು, "ಹಂಗಾರ ಹೋಗಿ ಬಾ, ಗುಡ್‌ಲಕ್. ಇಷ್ಟು ವರ್ಷ ನೀ ಅನುಭವಿಸಿದ ದುಃಖದ ಕಥೀ ಎಲ್ಲಾ ಮರತು ನೀ ಹೊಸಾ ಜೀವನಾ ಸುರು ಮಾಡೋ ಹಾಂಗ ಆಗ್ಲಿ."

"ಹೊಸಾ ಜೀವನಾ ಅಂತೂ ಸುರು ಮಾಡಲಿಕ್ಕೆ ಹೊರಟೇನಿ. ಆದರ ಹಿಂದಿನದು ಮರೀಲಿಕ್ಕೆ ಮಾತ್ರ ಈ ಜನ್ಮದಾಗ ಆಗತದೋ ಇಲ್ಲೋ."

"ನೋ, ನೋ, ಯೂ ಮಸ್ಟ್ ಫರ್‌ಗೆಟ್ ಇಟ್. ಇಲ್ದಿದ್ರ ಹಿಂಗ ಓಡಿ ಹೋಗೋದಕ್ಕ ಏನು ಅರ್ಥ ? ಬಿ ಬ್ರೇವ್ಹ್ ! ನೀ ಮತ್ತ ಆ ಮೊದಲಿನ ಬೇಫಾಮ ಧೈರ್ಯದ ಹುಡುಗಿ ಆದದ್ದು ನೋಡ್ಲಿಕ್ಕೆ ನಾ ಬೆಂಗಳೂರ ತನಕಾ ಬರತೀನಿ ಮತ್ತ."

ಕಮಲಾ ಮತ್ತೆ ಅದೇ ಖಿನ್ನ ನಗೆ ನಕ್ಕಳು. ನಂತರ ಆಕೆಯ ಪ್ರಶ್ನೆಗೆ ನೇರವಾಗಿ ಉತ್ತರಿಸದೆ ಅಂದಳು, "ಶಶಿ, ನೀ ಒಬ್ಬಾಕಿ ನನ್ನ ಮೊದಲಿನಿಂದ್ಲೂ ಪೂರಾ ತಿಳಕೊಂಡಾಕಿ. ನೀ ನನ್ನ ಪಾಲಿಗೆ ಬರೇ ಗೆಳತಿ, ಬರೇ ನೇಬರ್ ಅಲ್ಲ, ನನ್ನ ಸೇವ್ಹಿಯರ್ ನೀನು. ನಿನ್ನ ಮೊರಲ್ ಸಪೋರ್ಟ್ ಇಲ್ದಿದ್ರ ನಾನು ಈ ಬೃಹತ್ ಮುಂಬೈಯೊಳಗ ಜೀವನಾ ಮಾಡಲಾರದೇ ಎಂದೋ ಕೊಲ್ಯಾಪ್ಸ್ ಆಗ್ತಿದ್ದೆ. ಅದಕ್ಕಂತs ನಿನಗ ಹೋಗುವಾಗ ನನ್ನ ಡೈರಿ ಕೊಟ್ಟು ಹೋಗ್ಬೇಕು ಅನಿಸಿತು. ನನ್ನ ಜೀವನ ನಿನ್ನ ಮುಂದ ಯಾವಾಗ್ಲೂ ತೆರೆದ ಪುಸ್ತಕ. ನನ್ನ ಡೈರೀ ಓದೋದ್ರಿಂದ ನಿನ್ನ ಅಮೂಲ್ಯ ಟೈಮ್ ಹಾಳಾಗತದ ಖರೆ. ಆದರೂ ನನ್ನ ರಿಯಲ್ ಫೀಲಿಂಗ್ಸ್ ನೀನಾದ್ರೂ ತಿಳಕೊಳ್ಳಲಿ ಅಂತ ಆಶಾ ನನಗ...."

ಕಮಲಾನ ದನಿಯಲ್ಲಿ ಆಕೆ ಹೇಳದಿದ್ದರೂ ಒಡೆದು ಕಾಣುತ್ತಿದ್ದ ಅಸಮಾಧಾನ-ವ್ಯಥೆ ಇತ್ತು. ಯಾರು ಆಕೆಯನ್ನು ಸರಿಯಾಗಿ ತಿಳಿದುಕೊಂಡು ಆಕೆಯ ಭಾವನೆಗಳನ್ನು, ಆಕೆಯನ್ನು ಗೌರವಿಸಬೇಕಿತ್ತೋ ಆ ವ್ಯಕ್ತಿ ಹಾಗೆ ಮಾಡಲಿಲ್ಲವಲ್ಲ ಎಂಬ ವ್ಯಥೆ.

"ಥ್ಯಾಂಕ್ಸ್ ಕಮಲಾ— ನಿನ್ನ ಈ ಅಭಿಮಾನಕ್ಕ" —ಶಶಿ ದನಿ ಇಳಿಸಿ ಅಂದಳು. "ಆದರ ನೀ ಹಿಂಗ ಹೊರಟಿದ್ದು ಶಿವಮೂರ್ತಿಗೆ ತಿಳಿಸೀಯೋ ಇಲ್ಲೋ ? ಅಥವಾ ಅವ್ರೂ ಬರ್ತಾರೇನು ನಿನ್ನ ಜೊತಿಗೆ ?"

ಕೆಳಗಿರಿಸಿದ್ದ ಸೂಟ್‌ಕೇಸ್ ಎತ್ತಿಕೊಂಡು ಬಾಗಿಲ ಕಡೆ ಹೊರಡುತ್ತ ಕಮಲಾ ಹೇಳಿದಳು, "ಡೈರೆಕ್ಟರ್ ಸಾಹೇಬರು ನನ್ನ ಜೋಡೀ ಬರೂದಿಲ್ಲ."

—'ಡೈರೆಕ್ಟರ್ ಸಾಹೇಬರು ?' ಹತ್ತು-ಹದಿನೈದು ವರ್ಷಗಳ ಹಿಂದೆ ಶಿವಮೂರ್ತಿಯನ್ನು ಹಾಗೆಂದು ಕಮಲಾ ಸಂಬೋಧಿಸುತ್ತಿದ್ದ ನೆನಪು. ಅವರಿಬ್ಬರೂ ಮದುವೆಯಾದ ನಂತರದ ಈಚಿನ ವರ್ಷಗಳಲ್ಲಿ ಆತನ ಬಗ್ಗೆ ಮಾತಾಡುವಾಗಲೆಲ್ಲ

ಕಮಲಾ 'ಮೂರ್ತಿ' ಎಂದಷ್ಟೆ ಅನ್ನುತ್ತಿದ್ದಳಲ್ಲ, ಈಗೇಕೆ – ಒಮ್ಮೆಲೆ ಶಶಿಗೆ ಅನಿಸಿತು, ಕಮಲಾ ನಿಜವಾಗಿಯೂ ಇನ್ನೆಂದೂ ತಿರುಗಿ ಬರುವುದೇ ಇಲ್ಲವೋ ಏನೋ, ಇದೇ ಅವಳ ಕೊನೆಯ ಭೆಟ್ಟಿಯಾಗಬಹುದೋ ಏನೋ.... ಆ ವಿಚಾರದಿಂದ ಶಶಿಗೆ ಬಹಳ ದಿನಗಳ ನಂತರ ಒಂದು ಥರಾ ಚಿಂತೆಯ ಅನುಭವವಾಯಿತು. ಕಮಲಾನ ಈ ಆಕಸ್ಮಿಕ ನಿರ್ಧಾರದ ಹಿಂದೆ ಏನೋ ರಹಸ್ಯವಿರಬೇಕು, ಕಮಲಾನನ್ನು ಹೀಗೆ ಹೋಗಲು ಬಿಡಬಾರದು, ಅವಳೇನಾದರೂ ಅಪಾಯ ಮಾಡಿಕೊಂಡಾಳು, ಅವಳನ್ನು ಒತ್ತಾಯದಿಂದ ನಿಲ್ಲಿಸಿಕೊಂಡು ಏನಾಯಿತೆಂದು ಕೇಳಬೇಕು, ಶಿವಮೂರ್ತಿಯ ಮಾತುಂಗಾದ ಆಫೀಸಿಗೆ ಫೋನ್ ಮಾಡಿ ತಿಳಿಸಬೇಕು, ಕಮಲಾ ಎಂಥದೋ ಆಪತ್ತಿನಲ್ಲಿದ್ದಾಳೆ.... ಶಶಿ ಹೀಗೆಲ್ಲ ವಿಚಾರ ಮಾಡುತ್ತಿರುವಾಗ ಆಗಲೇ ಬಾಗಿಲು ದಾಟಿದ್ದ ಕಮಲಾ "ಬಾಯ್ ಶಶಿ, ದೇವ್ರು ನಿನಗಾದರೂ ಛಲೋ ಮಾಡ್ಲಿ" ಅಂತ ಮೆಲುದನಿಯಲ್ಲಿ ಹೇಳಿದಳು. ಅವಳ 'ನಿನಗಾದರೂ' ಶಶಿಯನ್ನು ಚುಚ್ಚಿತು. ಕಮಲಾನನ್ನು ಒತ್ತಾಯಿಸಿದರೂ ಅವಳು ನಿಲ್ಲಲಾರಳೆಂದು ಅನಿಸಿತು. ಹೀಗೆ ದೂರ ಹೋಗುವುದರಲ್ಲೇ ಅವಳ ಸುಖ-ನೆಮ್ಮದಿ ಇದ್ದರೆ ಹೋಗಲಿ ಅನಿಸಿತು. ಶಶಿ ಸುಮ್ಮನೆ ಬಾಗಿಲಲ್ಲಿ ನಿಂತು ಕೈಬೀಸಿದಳು. ನಂತರ ಐದು ನಿಮಿಷ ಬಿಟ್ಟು ಎದುರಿಗೆ ಬಾಲ್ಕನಿಗೆ ಬಂದು ಕೆಳಗಡೆ ರಸ್ತೆಯ ಮೇಲೆ ನಿಂತಿದ್ದ ಟ್ಯಾಕ್ಸಿಯೊಂದರಲ್ಲಿ ಕಮಲಾ ಕೂಡುತ್ತಿದ್ದುದನ್ನು, ರಾಜು-ನೀಲಾ ಇಬ್ಬರೂ ಅವಳಿಗೆ ಟಾ ಟಾ ಮಾಡುತ್ತಿದ್ದುದನ್ನು ನೋಡಿದಳು.

* * *

ತಡವಾಗಿ ಬಂದ ರೋಶನ್‌ಬೀಯನ್ನು ಗದರಿಸಲೆಂದು ಸ್ನಾನದ ಮನೆಯಿಂದ ಹೊರಬಂದ ಶಶಿ ರೋಶನ್‌ಬೀಯ ಅತ್ತು ಕೆಂಪಾದ ಕಣ್ಣುಗಳನ್ನು ನೋಡಿ ಧ್ವನಿ ಏರಿಸದೇ ಕೇಳಿದಳು, "ಯಾಕಿಷ್ಟು ಲೇಟು ರೋಶನ್ ?"

ರೋಶನ್‌ಬೀಯ ಕಣ್ಣುಗಳಿಂದ ನೀರು ಧಾರೆಯಾಗಿ ಹರಿಯಿತು. ಇದೇನೂ ಶಶಿಗೆ ಹೊಸತಲ್ಲ. ಕಳೆದು ಏಳೆಂಟು ವರ್ಷಗಳಿಂದ ರೋಶನ್‌ಬಿ ಅವಳ ಮನೆಯಲ್ಲಿ ಅಡಿಗೆಯವಳಾಗಿ, ಕೆಲಸದವಳಾಗಿ, ಹಲವಾರು ಸಲ ದಾದಿಯೂ ಆಗಿ, ಒಟ್ಟು ಶಶಿಗೆ ಬಹಳ ಆಪ್ತಳಾಗಿ ಕೆಲಸ ಮಾಡುತ್ತ ಬಂದಿದ್ದಾಳೆ. ವಾರದಲ್ಲಿ ಮೂರು ಸಲವಾದರೂ ರೋಶನ್‌ಬಿ ಹೀಗೆಯೇ ಕೊಡಗಟ್ಟಲೆ ಕಣ್ಣೀರು ಸುರಿಸುತ್ತಾಳೆ. ಕಣ್ಣೀರು ಸುರಿಸುತ್ತಲೇ ಮನೆಯ ಹಾಗೂ ಹೊರಗಿನ ಎಲ್ಲಾ ಕೆಲಸ ನೀಟಾಗಿ ನಿಭಾಯಿಸುತ್ತಾಳೆ. ಅವಳ ಕೆಲಸದಲ್ಲಿ ಕಣ್ಣೀರು ಅಡ್ಡಿಯಾಗುವುದಿಲ್ಲವೆಂದು ಗೊತ್ತಿದ್ದರಿಂದ ಶಶಿಯೂ ಅಷ್ಟಾಗಿ ಅವಳ ಕಣ್ಣೀರಿನ ಕಡೆ ಲಕ್ಷ್ಯ ಕೊಡುವುದಿಲ್ಲ. ಎಂದಾದರೊಮ್ಮೆ ರಜೆಯ ದಿನ ಯಾರೂ

ಪೇಶಂಟ್ಸ್ ಇಲ್ಲದೆ ತೀರ ಬಿಡುವಾಗಿದ್ದಾಗ ಮಾತ್ರ ಆಕೆ ರೋಶನ್‌ಬೀಯ ಕಣ್ಣೀರಿನ ಕತೆ ಕೇಳುವುದು. ರೋಶನ್‌ಬೀಯೂ ದಡ್ಡಿಯಲ್ಲ. ಅವಳಿಗೆ ಗೊತ್ತು, ಡಾಕ್ಟರ್ ಬಾಯಿಗೆ ಇವತ್ತು ಆಗಲೇ ತಡವಾಗಿದೆ. ಊಟ ಮಾಡಿ ಅವರು ಹತ್ತರ ಲೋಕಲ್ ಹಿಡಿದು ವ್ಹಿ. ಟಿ. ಯವರೆಗೂ ಹೋಗಬೇಕು, ಇಲ್ಲವಾದರೆ ದೊಡ್ಡ ದವಾಖಾನೆಯ ದೊಡ್ಡ ಡಾಕ್ಟರು ಸಿಟ್ಟಾಗುತ್ತಾರೆ. ಇದು ತನ್ನ ಕಥೆ ಬಿಚ್ಚಲು ಸಮಯವಲ್ಲ.... ತಾನೀಗ ಮೌನವಾಗಿ ಬೇಗ ಬೇಗ ಕೆಲಸ ಮುಗಿಸುವುದೇ ಒಳ್ಳೆಯದು ಅಂತ.

ಆದರೂ ಇವತ್ತೇಕೋ ಆಕೆಗೆ ತಡೆದುಕೊಳ್ಳುವುದಾಗಲಿಲ್ಲ. ಶಶಿ ಊಟ ಮುಗಿಸಿ ಡ್ರೆಸ್ ಮಾಡಿಕೊಳ್ಳುತ್ತಿದ್ದಾಗ ಬಾಗಿಲಲ್ಲಿ ಬಂದು ನಿಂತಳು. ಗಂಟಲುಬ್ಬಿ ಬಂದು "ಡಾಕ್ಟರ್ ಬಾಯೀ...." ಅಂದಳು.

ರೋಶನ್‌ಬೀಯ ಕತೆ ಇವತ್ತು ಬೇರೆಯಾಗಿದೆ ಅಂದುಕೊಂಡು ಶಶಿ ಕನ್ನಡಿಯೆದುರು ಕೂತಿದ್ದ ಹಾಗೇ ಹರುಕು-ಮುರುಕು ಹಿಂದೂಸ್ತಾನಿಯಲ್ಲಿ ಏನಾಯಿತೆಂದು ಕೇಳಿದಳು. ಆಕೆ ಅಷ್ಟು ಕೇಳುವುದೇ ತಡ, ರೋಶನ್‌ಬಿ ಕೂತಲ್ಲೇ ಕುಸಿದು ಕುಳಿತು ಅಳಲಾರಂಭಿಸಿದಳು. ಅಳುವಿನ ನಡುವೆ ಡಾಕ್ಟರ್ ಬಾಯಿಯ ಗಡಿಬಿಡಿಯ ಹೊತ್ತಿನಲ್ಲಿ ತಾನು ಇಂಥ ಭಾವೋದ್ರೇಕಕ್ಕೊಳಗಾಗಿ ತೊಂದರೆಯುಂಟು ಮಾಡಿದ್ದನ್ನು ಸಮರ್ಥಿಸಿಕೊಳ್ಳಲೆನ್ನುವಂತೆ ಹೇಳುತ್ತ ಹೋದಳು– ಕಳೆದ ಎಂಟು ದಿನಗಳಿಂದ ಆಕೆಯ ಗಂಡ ಮೆಹಬೂಬ್ ಮನೆಗೇ ಬಂದಿರಲಿಲ್ಲ. ಕೊನೆಯ ಮಗುವಿಗೆ ವಿಪರೀತ ಕೆಮ್ಮು-ಜ್ವರ. ಪ್ರತಿಸಲ ತನ್ನ ಸಂಬಳದ ಹಣದಲ್ಲಿ ಒಂದು ಪಾಲನ್ನಾದರೂ ಅವಳಿಗೆ ಕೊಡುತ್ತಿದ್ದವನು ಈ ಸಲ ಏನೂ ಕೊಟ್ಟಿಲ್ಲ. ಅಷ್ಟೇ ಅಲ್ಲ, ರೋಶನ್‌ಬೀಗೆ ಇವೊತ್ತು ಇಷ್ಟೊಂದು ಸಂತಾಪವಾಗಲು ಕಾರಣ– ಆಕೆ ಬಹು ಕಷ್ಟಪಟ್ಟು ದುಡಿದು ಸಮಯ ಬಂದಾಗ ಇರಲೆಂದು ಕೂಡಿಸಿಟ್ಟಿದ್ದ ಟ್ರಂಕಿನಲ್ಲಿನ ಹಣ ಸುಮಾರು ಇನ್ನೂರು ರೂಪಾಯಿಯಷ್ಟನ್ನು ಕಿತ್ತುಕೊಂಡು ಹೋಗಿದ್ದಾನೆ....

"ಅವಳ ಮನೆ ಹಾಳಾಗ, ಅವಳಿಗೆ ಹುಳ ಬೀಳ...." ರೋಶನ್‌ಬಿ ಇನ್ನೇನು ಮಾಡಲೂ ತೋಚದೆ ತನ್ನ ಗಂಡ ಇಟ್ಟುಕೊಂಡ ಹೆಂಗಸಿಗೆ ಶಾಪಹಾಕುತ್ತ ಅಳುತ್ತಿದ್ದಳು.

"ನಿನ್ನ ಗಂಡನ ತಪ್ಪಿಗೆ ಬೇರೆ ಹೆಂಗಸನ್ನೇಕೆ ಬೈಯುತ್ತೀ ರೋಶನ್ ? ಇವನ ಬುದ್ಧೀನೇ ಸರಿ ಇದ್ದಿದ್ದರೆ ಅವಳೇನು ಮಾಡುತ್ತಿದ್ದಳು ?"

"ಇಲ್ಲ ಡಾಕ್ಟರ್‌ಬಾಯಿ, ನನ್ನ ಗಂಡನ ಬುದ್ಧಿ ಸರಿಯಾಗೇ ಇತ್ತು. ಆ ಲೌಡೀನೇ ಅವನನ್ನ ಕೆಡಿಸಿದ್ದು...."

ಇದಲ್ಲವೆ ಪತಿಪರಾಯಣತೆ ಅಂದುಕೊಳ್ಳುತ್ತ ಶಶಿ ಮುಂದೆ ಮಾತು ಬೆಳೆಸದೆ

ರೋಶನ್‌ಬೀಯ ಮಗುವಿಗಾಗಿ ಗುಳಿಗೆ-ಔಷಧ ಕೊಟ್ಟು, ಮಧ್ಯಾಹ್ನ ಮನೆಗೆ ಬೇಗ ಹೋಗಬಹುದೆಂದು ತಿಳಿಸಿ, ಹಾಗೆಯೇ ಸಂಜೆ ಮಗುವನ್ನು ಕರೆತಂದು ತೋರಿಸಲು ಹೇಳಿ, ಅವಸರವಸರವಾಗಿ ಹತ್ತಿರ ಲೋಕಲ್ ಸಿಕ್ಕೀತೇ ಅಂತ ಚಡಪಡಿಸುತ್ತ ಸ್ಟೇಶನ್ ಕಡೆ ಹೆಜ್ಜೆ ಹಾಕಿದಳು.

* * *

ಕಳೆದ ಹದಿನೈದಿಪ್ಪತ್ತು ವರ್ಷಗಳಲ್ಲಿ ಈ ಮುಂಬೈ ಮಹಾನಗರ ಎಷ್ಟೊಂದು ಬೆಳೆದಿದೆ, ಅಭಿವೃದ್ಧಿ ಹೊಂದಿದೆ, ಜನಸಂಖ್ಯೆ ಎಷ್ಟು ಹೆಚ್ಚಾಗಿದೆ, ಎಷ್ಟೊಂದು ಹೊಸ ಉದ್ಯಮಗಳು – ಇತರ ಸಂಸ್ಥೆಗಳು ಹುಟ್ಟಿ ಬೆಳೆದಿವೆ, ಏನೆಲ್ಲ ಬದಲಾವಣೆಯಾಗಿದೆ. ಆದರೆ ಇಷ್ಟೆಲ್ಲ ಬದಲಾವಣೆಗಳ ಮಧ್ಯೆ ಏನೂ ವಿಶೇಷ ಬದಲಾಗದೆ ಎಂದಿನಂತೆಯೆ ನೀರಸ ಯಾಂತ್ರಿಕ ನಿರ್ಜೀವ ಬದುಕು ಸಾಗಿಸುತ್ತಿರುವಂತೆ ತೋರುವವುಗಳೆಂದರೆ ಈ ಲೋಕಲ್ ಗಾಡಿಗಳು. ಮುಂಜಾನೆಗಳಲ್ಲಿ ತುಂಬಿ ತುಳುಕಿ, ಮಧ್ಯಾಹ್ನ ತುಸುವೆ ಉಸಿರಾಡಿಸಿ, ಸಂಜೆ-ರಾತ್ರಿ-ಮಧ್ಯರಾತ್ರಿಗಳಲ್ಲೆಲ್ಲಾ ಉಸಿರು ಕಟ್ಟುವಂತೆ ಜನಗಳನ್ನು ತುಂಬಿಕೊಂಡು ಓಡುತ್ತಿದ್ದ ಈ ಗಾಡಿಗಳು ಎಂದಿನಂತೆಯೇ ಇವೆ. ಎಷ್ಟು ಅವಸರ, ಎಷ್ಟು ಧಾವಂತ ಇವಕ್ಕೆ. ಎಂದೂ ಕೊನೆಯಿಲ್ಲದ ಓಡಾಟ ಇವುಗಳದು. ಎಂಥ ಬೇಸರದ ಬದುಕು....

ಮೊದಲು ಬಂದವರೆಲ್ಲ ಕೂತಿದ್ದ, ಆಮೇಲೆ ಬಂದವರೆಲ್ಲ ನಿಂತಿದ್ದ, ಒಟ್ಟು ಗಿಜಿಗಿಜಿ ಅನ್ನುತ್ತಿದ್ದ ಹೆಂಗಸರ ಡಬ್ಬಿಯಲ್ಲಿ ಶಶಿ ಹತ್ತಿದಾಗ "ಬರ್‍ರಿ ಬರ್‍ರಿ ಡಾಕ್ಟರ್ ಬಾಯೀ" ಅಂತ ಮರಾಠಿಯಲ್ಲಿ ರಾಗವಾಗಿ ಕರೆ ಬಂದತ್ತ ನೋಡಿದರೆ ಒಂದು ಕೈತುಂಬ ಫೈಲುಗಳ ಕಂತೆ ಹಿಡಿದು, ಇನ್ನೊಂದು ಕೈಯನ್ನು ತನ್ನ ಅವಿರತ ಲೆಕ್ಚರಿಗೆ ಬೇಕಾದ ಹಾವಭಾವ ಪ್ರದರ್ಶಿಸಲು ಉಪಯೋಗಿಸುತ್ತ ಮೂಲೆಯಲ್ಲಿ ಹೇಗೋ ಜಾಗ ಮಾಡಿಕೊಂಡು ಕೂತಿದ್ದ ಶಾಂತಾ ಆಪ್ಟೆ. ಆಪ್ಟೆ ದಂಪತಿಗಳು ಶಶಿಯ ಪೇಶಂಟ್ಸ್ ಅಷ್ಟೇ ಅಲ್ಲ, ಆಕೆಯ ನೆರೆಯವರು ಸಹ. ಗಂಡ-ಹೆಂಡತಿ ಇಬ್ಬರೂ ವಕೀಲರು. ನಗುಮುಖದ ಆ ಉತ್ಸಾಹೀ ಹೆಂಗಸನ್ನು ಕಂಡರೆ ಶಶಿಗೆ ಯಾವಾಗಲೂ ಮೆಚ್ಚಿಕೆ. ಆಕೆ ನಕ್ಕು "ಹಲೊ" ಅಂದಳು.

ನಂತರ ಶಶಿ ಕೇಳದೆಯೇ, ಗದ್ದಲದಲ್ಲಿ ಆಕೆಗೆ ತಾನು ಹೇಳುತ್ತಿರುವುದು ಕೇಳಿಸುವುದೋ ಇಲ್ಲವೋ ಎಂದು ಸಹ ವಿಚಾರಿಸುವ ಗೊಡವೆಗೆ ಹೋಗದೆ, ಶಾಂತಾ ಆಪ್ಟೆ ತನ್ನ ಅಸ್ಖಲಿತ ಮರಾಠಿಯಲ್ಲಿ ಹೇಳತೊಡಗಿದಳು, "ನಾಳಿನ ಸಂಡೇ ನಮ್ಮ ಮುಳುಂದದ ಲೇಡೀಜ್ ಕ್ಲಬ್ಬಿನ ವತಿಯಿಂದ ಮನರಂಜನಾ ಕಾರ್ಯಕ್ರಮ ಅದ ಡಾಕ್ಟರ್ ಬಾಯೀ, ನಿಮಗ ಹತ್ತು ರೂಪಾಯಿಯ ತಿಕೀಟು ಕೊಡ್ಲಿಕ್ಕೆ ನಿಮ್ಮ ಮನೀಗೆ

ಬರಬೇಕಾಗೇದ. ಈ ಪ್ರೋಗ್ರ್ಯಾಮಿನಿಂದ ಬಂದ ರೊಕ್ಕಾ ಎಲ್ಲಾ ಅನಾಥಾಶ್ರಮಕ್ಕೆ ಕೊಡವ್ರಿದ್ದೀವಿ. ಸುಮಾರು ಎರಡು ಸಾವಿರ– ಮೂರು ಸಾವಿರ ಆದೀತು ಕಲೆಕ್ಷನ್ನು. ಅಷ್ಟಲ್ಲದ ಕ್ಲಬ್ಬಿನ ಮೆಂಬರ್ಸೂ ವಂತಿಗೆ ಹಾಕಿ ಒಟ್ಟು ಐದು ಸಾವಿರ ಹ್ಯಾಂಗಾರ ಕೂಡಿಸಿ ಕೊಡಬೇಕಂತೀವಿ. ಅಂದ್ರ ಆ ಹುಡುಗ್ರಿಗೆಲ್ಲಾ ಎರಡೆರಡು ಜೋಡಿ ಅಂಗಿ-ಚಡ್ಡಿ ಹೊಲಿಸಬಹುದು. ಏನಂತೀರಿ ನೀವು ? ಇವತ್ತ ಸೆಶನ್ಸ್ ಕೋರ್ಟಿನೊಳಗ ಒಂದು ಕೇಸಿಂದು ಹಿಯರಿಂಗ್ ಅದ ಅಂತ ಹೊರಟೇನಿ. ಇಲ್ದಿದ್ರ ಚಂದಾ ವಸೂಲಿಗೇ ಹೋಗಾಕಿ ಇದ್ದೆ. ಏನಂತೀರಿ ನೀವು ?''

ಮೊದಲಿ ದಿನಗಳಲ್ಲಿ ತಮಾಷೆಯೆನ್ನಿಸಿದ್ದ ಅವಳ 'ಏನಂತೀರಿ ನೀವು'ಗೆ ಈಗ ಹೊಂದಿಕೊಂಡಿದ್ದ ಶಶಿ ಮುಗುಳ್ನಕ್ಕು ಅಂದಳು, ''ಚಂದಾವಸೂಲಿ ಬಿಟ್ಟು ಕೋರ್ಟಿಗೆ ಹೊರಟೀರಿ ಅಂದ ಮ್ಯಾಲೆ ಕೇಸು ಭಾಳ ಮಹತ್ವದ್ದೇ ಇರಬೇಕಲ್ಲ.''

ಅವಳ ಧ್ವನಿಯಲ್ಲಿ ವ್ಯಂಗ್ಯವಿರಲಿಲ್ಲ. ಶಾಂತಾ ಆಪ್ಟೆಯ ಕೆಲಸದಲ್ಲಿನ ಪ್ರಾಮಾಣಿಕತೆ-ನಿಷ್ಠೆಯ ಬಗ್ಗೆ ಅವಳಿಗೆ ಗೊತ್ತಿದ್ದರಿಂದ ವ್ಯಂಗ್ಯವಾಡುವ ಪ್ರಶ್ನೆಯೇ ಇರಲಿಲ್ಲ.

''ಹೌದು, ಭಾಳ ಇಂಪಾರ್ಟೆಂಟ್ ಕೇಸು. ಮೊನ್ನೆ ಹೇಳಿದ್ನೆಲ್ಲ ನಿಮಗ ನಮ್ಮ ಮನೆಯೊಳಗ ಅಡಿಗೆ ಮಾಡೋ ಬ್ರಾಹ್ಮಣ ವಿಧವೆ, ಸಕೇಶಿ, ಆಕೀ ಕೇಸು. ಆಕೀ ಗಂಡ ಸತ್ತ ಮ್ಯಾಲ ಆಕಿನ್ನ ಭಾವ-ಮೈದುನಂದಿರು ಜುಲುಮೀ ಮಾಡಿ ಹೆಬ್ಬಟ್ಟು ಒತ್ತಿಸಿಕೊಂಡು ಆಕಿಗೆ ಬರಬೇಕಾದ ಚೂರುಪಾರು ಆಸ್ತಿ ಎಲ್ಲಾ ಎತ್ತಿ ಹಾಕಿ ಆಕಿನ್ನ ಮನೀಬಿಟ್ಟು ಹೊರಗ ಹಾಕ್ಯಾರ. ಆಕಿ ತನ್ನ ದೈವದಾಗ ಇದ್ದದ್ದು ಇಷ್ಟು ಅಂತ ಸುಮ್ನs ಕೂತಿದ್ದಳು. ನಾನs ಮುದ್ದಾಂ ಆಕೀ ವತಿಯಿಂದ ಕೇಸು ಹಾಕೀನಿ ಅವರ ಮ್ಯಾಲ. ಇನ್ನೇನು ಮುಗೀಲಿಕ್ಕೆ ಬಂತು. ಆಕಿಗೆ ಆಕೀ ಗಂಡನ ಪಾಲಿನ ಹೊಲಾ, ದುಡ್ಡು, ಬಂಗಾರ ಎಲ್ಲಾ ಸಿಗತದ. ಏನಂತೀರಿ ನೀವು ?''

''ಪರೋಪಕಾರದ ಕೆಲಸ,'' ಶಶಿ ನಿಜವಾದ ಪ್ರಶಂಸೆಯಿಂದ ಅಂದಳು. ಅಡಿಗೆಯವಳಿಂದ ಈ ಕೇಸಿಗಾಗಿ ಏನೂ ಹಣದ ಅಪೇಕ್ಷೆಯಿಲ್ಲದೆ ಶಾಂತಾ ಈ ಕೆಲಸ ಮಾಡಿದ್ದಾಳೆಂದು ಆಕೆಗೆ ಗೊತ್ತು.

''ಮತ್ತ ಮಾಡ್ಲಿಕ್ಕೆ ಬೇಕಲ್ರೀ. ನಮಗ ಆದಷ್ಟು ಎಲ್ಲರಿಗೂ ಸಹಾಯ ಮಾಡೋದರೆಪಾ. ನಮ್ಮ ಆಪ್ಟೆ ಸಾಹೇಬ್ರೂ ಈ ಕೇಸಿನ್ಯಾಗ ಭಾಳ ಇಂಟರೆಸ್ಟ್ ತಗೊಂಡಾರ. ಅವ್ರೇ ಕೇಸ್ ಪೇಪರ್ಸೆಲ್ಲಾ ರೆಡೀ ಮಾಡಿ ಕೊಟ್ಟದ್ದು. ಏನಂತೀರಿ ನೀವು ?'' ಹೌದು, ಆಕೆ ಹೇಳದಿದ್ದರೂ ಕಳೆದ ಆರೇಳು ವರ್ಷಗಳಿಂದ ಆಕೆಯ ನೆರೆಯಲ್ಲಿದ್ದುದರಿಂದ ಶಶಿಗೆ ಗೊತ್ತು. ಶಾಂತಾ ಆಪ್ಟೆಯ ಗಂಡನೂ ಹೆಂಡತಿಯ

ಹಾಗೆಯೇ ಪರೋಪಕಾರಿ ಅಂತ. ಇಬ್ಬರೂ ಯಾವಾಗಲೂ ಹೀಗೆ ಬಡವರ, ಅನಾಥರ, ದುಃಖಿಗಳ ಸಲುವಾಗಿ ಮಿಡುಕುತ್ತಿರುತ್ತಾರೆ ಅಂತ. ಪಕ್ಕದಲ್ಲಿ ಕೂತಿದ್ದ ಗುಜರಾಥೀ ಹೆಂಗಸಿಗೆ ತನ್ನ ಕೇಸಿನ ವಿವರಗಳನ್ನು ಗಟ್ಟಿದನಿಯಲ್ಲಿ ಹೇಳುತ್ತ ಶಾಂತಾ ಆಪ್ಟೆ ಆಕೆಯ ಕಡೆ ಹೊರಳಿದಾಗ ಶಶಿ ಬೇಕೆಂತಲೆ ಸ್ವಲ್ಪ ದೂರ ಸರಿದಳು. ಯಾಕೋ ಇವತ್ತು ಬೇರೆಯವರ ಮಾತು ಕೇಳಿಸಿಕೊಳ್ಳುವ ತಾಳ್ಮೆಯಿಲ್ಲ. ಮನಸ್ಸೂ ಇಲ್ಲ. ಮುಂಜಾನೆಯಿಂದ ತಲೆ ಬೇರೆ ಸಿಡಿಯತೊಡಗಿದೆ. ಎಷ್ಟು ಪ್ರಯತ್ನಿಸಿದರೂ ಕಮಲಾನ ಖಿನ್ನ ನಗು ಬೀರುವ ಕಣ್ಣುಗಳು, ಆ ವ್ಯಥೆ ತುಂಬಿದ ಮುಖ ಮನಸ್ಸಿನಿಂದ ಮರೆಯಾಗುತ್ತಿಲ್ಲ. ಆಕೆ ಅದೇಕೆ ಹೀಗೆ ಹೊರಟು ಹೋದಳೋ. ನಿಜವಾಗಿಯೂ ಬೆಂಗಳೂರಿಗೆ ಹೋದಳೋ ಅಥವಾ ತಿರುಗಿ ತನ್ನ ಹಳ್ಳಿಗೇ ಹೋದಳೋ ಅಥವಾ ಬೇರೆಲ್ಲಾದರೂ.... ಛೇ ತಾನು ಆಕೆಯನ್ನು ಹಾಗೆ ಹೋಗಗೊಡಬಾರದಿತ್ತು....

"ಆ ಹೆಂಗಸು, ಅದೇ ನಮ್ಮ ಅಡಿಗೆಯಾಕೆ, ವಿಧವೆ, ಪಾಪ, ಉಟ್ಟಸೀರೆಯ ಮೇಲೆ ನಮ್ಮಲ್ಲಿಗೆ ಬಂದಿದ್ದಳು," ಶಾಂತಾ ಆಪ್ಟೆ ಹುರುಪಿನಿಂದ ಇನ್ನಾರಿಗೋ ಹೇಳತೊಡಗಿದ್ದಳು, "ಈಗ ನೋಡ್ರಿ, ನಾಲ್ಕೆಕರೆ ಜಮೀನು, ಆರು ತೊಲ ಬಂಗಾರ, ಮೂರು ಸಾವಿರ ಕ್ಯಾಶ್ –ಇಷ್ಟೆಲ್ಲಾ ಸಿಗೋ ಹಾಂಗಾತು, ಪಾಪ, ಬದುಕಿಕೊಳ್ಳಲಿ ಬಡವಿ...."

ಶಶಿ ಕಿಡಿಕಿಯ ಹೊರಗೆ ಓಡುತ್ತಿದ್ದ ಗಿಡಗಳನ್ನು, ತಾರು ಕಂಬಗಳನ್ನು, ಕಟ್ಟಡಗಳನ್ನು ನೋಡುತ್ತ ಸುಮ್ಮನೆ ನಿಂತಳು.

* * *

ವ್ಹಿ. ಟಿ. ಯಲ್ಲಿ ಇಳಿದು ಕೈಗಡಿಯಾರ ನೋಡಿಕೊಂಡಾಗ ಶಶಿಗೆ ಅನಿಸಿತು, ಇನ್ನು ಬಸ್ಸಿಗಾಗಿ ಕಾಯ್ದು ನಿಂತರೆ ತಾನು ಸರಿಯಾದ ವೇಳೆಗೆ ಹಾಸ್ಪಿಟಲ್ ತಲುಪಲು ಶಕ್ಯವಿಲ್ಲ. ಆಕೆ 'ಟ್ಯಾಕ್ಸಿ' ಅಂತ ಕೂಗಿ ಪಕ್ಕಕ್ಕೆ ಬಂದಾಗ ಎದುರಿಗೆ ಲೀಲಾ ಕುಲಕರ್ಣಿ, ಕೆಳಗಿನ ಬ್ಲಾಕಿನಲ್ಲಿನ ರಿಟಾಯರ್ಡ್ ಟೀಚರರ ಮಗಳು, ಕಾಣಿಸಿದಳು. "ಬಾ ಲೀಲಾ, ನಿನ್ನ ಬ್ಯಾಂಕಿನ ಎದುರಿಗೇ ಹಾಯ್ದು ಹೋಗಬೇಕು ನಾನು, ನಿನಗ ಡ್ರಾಪ್ ಕೊಡ್ತೀನಿ," ಅಂದಳು ಶಶಿ.

"ಥ್ಯಾಂಕ್ಸ್ ಡಾಕ್ಟರ್" ಅನ್ನುತ್ತ ಲೀಲಾ ಶಶಿಯೊಡನೆ ಟ್ಯಾಕ್ಸಿ ಏರಿದಳು.

ಹತ್ತು ಮಿನಿಟಿನ ದಾರಿ. ಏನಾದರೂ ಮಾತನಾಡಲೆಂದು ಶಶಿ ಕೇಳಿದಳು, "ಅಂದಹಾಗೆ ಬ್ಯಾಂಕಿನ ಡಿಪಾರ್ಟ್‌ಮೆಂಟಲ್ ಪರೀಕ್ಷಾಕ್ಕ ಕೂತಿದ್ದೆಲ್ಲ ಲೀಲಾ, ರಿಝಲ್ಟ್ ಬಂತೇನು ?"

"ಹ್ಞಾ ಡಾಕ್ಟರ್, ಪಾಸಾಗೀನಿ."

"ಹಂಗಾರ ಪ್ರಮೋಶನ್ ಸಿಗತದ ಅನ್ನು."

"ಪರೀಕ್ಷಾ ಪಾಸಾಗೋದಕ್ಕೂ ಪ್ರಮೋಶನ್‌ಗೂ ಏನೂ ಸಂಬಂಧಿಲ್ಲ ಡಾಕ್ಟರ್. ನನಗಿಂತ ಜ್ಯೂನಿಯರ್ ಇದ್ದಳಲ್ಲ ಒಬ್ಬಾಕಿ ಪಾರ್ಸಿ ಹುಡಿಗಿ, ಒಂದ ದಿನಾ ನಿಮಗ ಟ್ರೇನಿನ್ಯಾಗ ತೋರ್ಸಿದ್ದೆ, ಆಕಿ ನನ್ಹಾಂಗ ಗ್ರ್ಯಾಜುಯೇಟ್ ಸಹ ಅಲ್ಲ, ಆಕೀಗೆ ಆಗ್ಲೇ ಪ್ರಮೋಶನ್ ಸಿಕ್ಕಿಹೋತು. ನನಗ ಡಿಗ್ರೀ ಇದ್ದು ಎಕ್ಸ್‌ಪೀರಿಯನ್ಸ್ ಇದ್ದು ಪರೀಕ್ಷಾ ಪಾಸಾದ್ರೂ ಏನೂ ಸಿಕ್ಕಿಲ್ಲ." – ಲೀಲಾನ ಧ್ವನಿಯಲ್ಲಿ ಸಹಜವಾಗಿ ಆಕ್ಷೇಪಣೆಯಿತ್ತು, ನೋವಿತ್ತು.

"ಅದ್ಯಾಕ ಇಷ್ಟು ಅನ್ಯಾಯ ಲೀಲಾ ?" ಶಶಿ ಅನುಕಂಪದಿಂದ ಕೇಳಿದಳು.

"ಈ ಪ್ರೈವ್ಹೇಟ್ ಮ್ಯಾನೇಜಮೆಂಟಿನ ಬ್ಯಾಂಕಿನ್ಯಾಗೆಲ್ಲಾ ಇದೇ ಹಣೆಬರಹ ಡಾಕ್ಟರ್, ಮ್ಯಾಲಿನವರ ಮರ್ಜಿ ಕಾಯ್ದರ ಎಲ್ಲಾ ಕೆಲ್ಸ ಆಗತಾವ. ಅವರ ಮರ್ಜಿ ಕಾಯದಿದ್ದರ ಎಲ್ಲಾ ಕ್ವಾಲಿಫಿಕೇಶನ್ನೂ ವ್ಯರ್ಥ" ಲೀಲಾನ ಮುಖ ಸಿಟ್ಟು-ಅಸಹಾಯಕತೆಯಿಂದ ಕೆಂಪಾಗಿತ್ತು.

"ಮ್ಯಾಲಿನವರ ಮರ್ಜಿ ಅಂದರ ?"

"ಅಂದರ ಮ್ಯಾನೇಜರು ಹೇಳಿಧಾಂಗ ಕುಣೀಬೇಕು, ಓವ್ಹರ್‌ಟೈಂ ಕೆಲಸಾ ಮಾಡಬೇಕು, ಅವರು ಬಾ ಅಂದಲ್ಲೆ ಹೋಗಬೇಕು, ಕೂಡ್ರು ಅಂದರ ಕೂಡ್ರಬೇಕು, ನಿಲ್ಲು ಅಂದರ ನಿಲ್ಲಬೇಕು...." ಅಸಹನೆಯಿಂದ ಲೀಲಾ ಮಾತು ಮುಗಿಸಿದಳು, "ಮಲಗು ಅಂದರ ಮಲಗಬೇಕು."

ಶಶಿಯ ಬೇಸರ ಹತ್ತು ಪಾಲು ಹೆಚ್ಚಾಯಿತು. ಮಾತು ಬದಲಿಸಲೆತ್ನಿಸುತ್ತ ಆಕೆ ಅಂದಳು, "ಯಾಕೋ ವೀಕ್ ಕಾಣಸ್ತೀ ಲೀಲಾ, ಸಂಜೀನ್ಯಾಗ ಮನೀಗೆ ಬಾ. ಟಾನಿಕ್ಕಿನ ಸ್ಯಾಂಪಲ್ಸ್ ಮಸ್ತ ಬಂದು ಬಿದ್ದಾವ. ಒಂದೆರಡು ಛಲೋ ಟಾನಿಕ್ಸ್ ಕೊಡ್ತೇನಿ."

"ಥ್ಯಾಂಕ್ಸ್ ಡಾಕ್ಟರ್"

* * *

ಇಡಿಯ ದಿನದ ದುಡಿಮೆಯಿಂದ ದಣಿದು ಸಂಜೆ ಮನೆಗೆ ಬಂದ ಶಶಿಗೆ ಇವತ್ತು ಯಾರೂ ಪೇಶಂಟ್ಸ ಮನೆಗೆ ಬರದಿದ್ದರೆ ಸಾಕು ಅನ್ನಿಸಿತು. ಹಾಸ್ಪಿಟಲಿನ ಡ್ಯೂಟಿ ಮುಗಿಸಿ ಆರು ಗಂಟೆಗೆ ಹಿಂದಿರುಗಿದ ನಂತರ ಸಂಜೆ ಏಳರಿಂದ ಒಂಬತ್ತರ ವರೆಗೆ ಆಕೆ ಮನೆಯಲ್ಲೇ ಪೇಶಂಟ್ಸ್ ನೋಡುತ್ತಿದ್ದಳು. ಆಸುಪಾಸಿನವರಿಗೆಲ್ಲಾ ಆಕೆ ಬಹಳ ವಿಶ್ವಾಸದ ಡಾಕ್ಟರು. ಎಷ್ಟೋ ಸಲ ರಾತ್ರಿ ಹತ್ತು-ಹನ್ನೊಂದರವರೆಗೂ ಆಕೆಗೆ ಬಿಡುವಿರುತ್ತಿರಲಿಲ್ಲ. ಕೆಲಸದ ಬಗ್ಗೆ ಎಂದೂ ಬೇಸರಿಸದ ಆಕೆಗೆ ಇಂದೇಕೋ ಆಲಸ್ಯ,

ಸುಸ್ತು, ಬೇಸರ, ತಲೆನೋವು. ಏನೇನೋ. ಪುಣ್ಯಕ್ಕೆ ಗೌರೀ ಹಬ್ಬವೋ ಅಂಥದೇ ಏನು ಮಣ್ಣೋ ಇದ್ದುದರಿಂದಲೇ ಇರಬೇಕು, ಇವತ್ತು ಯಾರೂ ಪೇಶಂಟ್ಸ್ ಬಂದಿಲ್ಲ ಅನಿಸಿತು ಆಕೆಗೆ. ಒಳ್ಳೆಯದಾಯಿತು. ರೋಶನ್‌ಬಿ ಮಾಡಿಟ್ಟು ಹೋಗಿದ್ದ ಅಡಿಗೆಯನ್ನು ಫ್ರಿಜ್‌ನಿಂದ ತೆಗೆದು ಊಟ ಮಾಡಿ ಮಲಗಿಬಿಡಬೇಕು.

ಹಾಗೆಂದುಕೊಳ್ಳುತ್ತಿರುವಾಗಲೇ ಕರೆಗಂಟೆ ಬಾರಿಸಿತು. ಬಾಗಿಲು ತೆರೆದು ಬಂದಾಕೆಯನ್ನು ಒಳಗೆ ಕುಳ್ಳಿರಿಸಿ ಬಂದ ಸೇವಂತಿಬಾಯಿ, ಒಂದು ಕಾಲಕ್ಕೆ ನರ್ಸ್ ಆಗಿ ಕೆಲಸ ಮಾಡಿ ನಿವೃತ್ತಿ ಹೊಂದಿ ಈಗ ಶಶಿಯ ಸಾಯಂಕಾಲದ ಮನೆಯಲ್ಲಿನ ದವಾಖಾನೆಯಲ್ಲಿ ಆಕೆಗೆ ನೆರವಾಗಲೆಂದು ಬರುತ್ತಿದ್ದ ಹೆಂಗಸು, ಹೇಳಿದಳು, ಆಚೆ ಬೀದಿಯ ದೊಡ್ಡ ಬಂಗ್ಲೆಯ ಬಾಯೀ ಸಾಹೇಬ ಬಂದಿದ್ದಾರೆಂದು.

ಓಹ್, ಟೆಕ್ಸ್‌ಟೈಲ್ಸ್ ಮಿಲ್ಲಿನ ಮ್ಯಾನೇಜಿಂಗ್ ಡೈರೆಕ್ಟರ್ ಭಾಸ್ಕರ್‌ಸಿಂಗ್‌ರ ಹೆಂಡತಿ ಪೂರ್ಣಿಮಾ. ಬೆಳ್ಳಗಿನ ತೆಳ್ಳಗಿನ ಕನಸುಗಣ್ಣುಗಳ ಕವಿಯಿತ್ರಿ. ಸದಾ ಬಂಗಾರದೊಡವೆ ತೊಟ್ಟು ಮಿನುಗುವ ಸೀರೆಯುಟ್ಟು ಮರ್ಸಿಡಿಸ್ ಬೆಂಝ್‌ನಲ್ಲಿ ಬಳುಕುತ್ತ ತಿರುಗಾಡುವ ಬೆಡಗಿ. ಯಾಕೆ ಬಂದಿದ್ದಾಳೋ. ಪುಣ್ಯಕ್ಕೆ ಮತ್ತೆ ಬಸಿರಿರಬಾರದು....

"ನಮಸ್ಕಾರ ಡಾಕ್ಟರ್" ಅನ್ನುತ್ತ ಎದ್ದು ನಿಂತವಳನ್ನು ಪ್ರತಿವಂದಿಸಿ ಕೂಡ್ರು ಹೇಳಿದಳು ಶಶಿ, "ಹ್ಞೂ, ಮತ್ತೇನು ಮಿಸೆಸ್ ಸಿಂಗ್ ? ಪ್ರಕೃತಿ ಹ್ಯಾಗಿದೆ ಈಗ ?"

"ಯಾಕೋ ಒಂದು ವಾರದಿಂದ ಬಹಳ ಸುಸ್ತು. ಒಂಥರಾ ಗಿಡಿನೆಸ್ ಅನಸತದ ಡಾಕ್ಟರ್, ಹಸಿವೀನೇ ಆಗೂದಿಲ್ಲ, ಏನು ನೋಡಿದ್ರೂ ವಾಂತಿ ಬಂಧಾಂಗ ಆಗತದ...." – ಆಕೆಯ ಎಂದಿನವೇ ರೋಗಲಕ್ಷಣಗಳು. ಹತ್ತು ವರ್ಷಗಳಿಂದ ಕೇಳಿಕೇಳಿ ಅಭ್ಯಾಸವಾಗಿದೆ ಶಶಿಗೆ. ನಕ್ಕು ಆಕೆ ಅಂದಳು, "ಈ ಸಲ ಪೀರಿಯಡ್ ಬಂದಿಲ್ಲ ಹೌದಲ್ಲೋ ?"

ಧ್ವನಿ ಇಳಿಸಿ ಪೂರ್ಣಿಮಾ ಸಿಂಗ್ ಅಂದಳು, "ಇಲ್ರೀ ಡಾಕ್ಟರ್, ಹದಿನೈದು ಇಪ್ಪತ್ತು ದಿನಾ ಆಗಿ ಹೋತು. ನನಗ ಹೆದರಿಕಿ ಆಗ್ತದ ಡಾಕ್ಟರ್." – ಶಶಿ ನಕ್ಕಳು. "ಹೆದರಿಕಿ ಎಂಥಾದ್ದು ಮಿಸೆಸ್ ಸಿಂಗ್ ? ನಿಮಗಿದು ಆರನೆಯ ಸಲ ಅಲ್ಲವೆ ? ಸಾಕಷ್ಟು ಎಕ್ಸ್‌ಪೀರಿಯನ್ಸ್ ಇದ್ದೀರಿ." ಮಿಸೆಸ್ ಸಿಂಗ್ ನಗಲಿಲ್ಲ. ಒಂಬತ್ತು ತಿಂಗಳು ಬಸಿರಾಗಿರುವುದು, ಹೆರುವುದು, ಮಗುವನ್ನು ಬೆಳೆಸುವುದು, ಮತ್ತೆ ಬಸಿರಾಗುವುದು, ಮತ್ತೆ ಹೆರುವುದು – ಇವೆಲ್ಲ ಆಕೆಗೆ ಪ್ರಿಯವಾದ ವಿಷಯಗಳಾಗಿರಲಿಲ್ಲ. ಬಾಡಿದ ಆಕೆಯ ಮುಖ ನೋಡಿ ಆಕೆಯನ್ನು ಪ್ರಸನ್ನಗೊಳಿಸಲೆಂದು ಶಶಿ ಅಂದಳು, "ಅದೆಲ್ಲ ಇರ್ಲಿ ಮಿಸೆಸ್ ಸಿಂಗ್, ಯಾಕೋ ಇತ್ತಿತ್ಲಾಗ ಯಾವ ಮ್ಯಾಗಝೀನಿನೊಳಗೂ ನಿಮ್ಮ

ಕವಿತಾ ನೋಡಿಧಾಂಗ ಇಲ್ಲಲಾ, ಎಷ್ಟು ರೆಗ್ಯುಲರ್ಲೀ ಬರೀತಿದ್ರಿ, ಈಗ್ಯಾಕ ಬಿಟ್ಟುಬಿಟ್ಟರಿ ಸಾಹಿತ್ಯ ಸೃಷ್ಟಿ ? ಬರಕೋತ ಇರ್ರಿ. ಅಂದರ ಈ ಸುಸ್ತು-ಗಿಡೀನೆಸ್ ಎಷ್ಟೋ ಕಡಿಮೆ ಅನಸ್ತಾವ."

ಪೂರ್ಣಿಮಾಳ ಮುಖ ಇನ್ನಷ್ಟು ಬಾಡಿತು– "ಎಲ್ಲೀ ಕವಿತಾ ಡಾಕ್ಟರ್ ? ಮಕ್ಕಳನ್ನ ಸಂಭಾಳಸೊದೇ ಸಾಕಾಗತದ."

"ಅದ್ಯಾಕ, ಮಕ್ಕಳನ್ನ ನೋಡಿಕೊಳ್ಳಿಕ್ಕೆ ಇಬ್ಬರು ಆಯಾ ಇದ್ದಾರಲ್ಲ ? ಅಡಿಗಿಗೆ, ಮ್ಯಾಲಿನ ಕೆಲಸಕ್ಕ, ಹೊರಗಿನ ಕೆಲಸಕ್ಕ ಏನಿಲ್ಲಂದ್ರೂ ಐದಾರು ಸರ್ವೆಂಟ್ಸ್ ಇದ್ದಾರಲ್ಲ, ಮತ್ತ ಸುಪರವ್ಹಿಜನ್‌ಗೆ ನಿಮ್ಮ ಅತ್ತೆಯವ್ರು ಇದ್ದಾರ, ಎಲ್ಲಾ ಅನುಕೂಲ ಇದ್ದು ಅದ್ಯಾಕ ಹಿಂಗಂತೀರಿ ?"

"ಎಲ್ಲಾ ಅದ ಡಾಕ್ಟರ್, ಇರಬೇಕಾದದ್ದs ಇಲ್ಲ." ಪೂರ್ಣಿಮಾ ಸೋತ ಧ್ವನಿಯಲ್ಲಿ ಅಂದಳು. ಏನಾದರೂ ಮಾಡಿ ಅವಳನ್ನು ಸ್ವಲ್ಪವಾದರೂ ಖುಶಿಗೊಳಿಸಲೆಂದು ಶಶಿ ಚೇಷ್ಟೆಯ ಧ್ವನಿಯಲ್ಲಿ ಅಂದಳು, "ಅಂದರ ಮಿಸ್ಟರ್ ಸಿಂಗ್ ಅವರು ಭಾಳ ಬಿಝಿ ಇರ್ತಾರ, ನಿಮ್ಮ ಕಡೆ ಸಾಕಷ್ಟು ಲಕ್ಷ್ಯ ಕೊಡೂದಿಲ್ಲ ಅಂತ ಬೇಜಾರೇನು ನಿಮಗ ?"

ಪೂರ್ಣಿಮಾ ನಗದೆ ಅಂದಳು, "ಅವ್ರು ನನ್ನ ಕಡೆ ಲಕ್ಷ್ಯ ಕೊಡದಿದ್ರೇ ಛಲೋ ಇರ್ತಿತ್ತು. ನನಗ ಬೇಕಾದ್ದು ಮಾಡಿಕೊಂಡು ನಾ ಆರಾಮಿರ್ತಿದ್ದೆ."

"ಈಗೇನು ಅವರು ನಿಮಗ ಏನು ಮಾಡ್ಲಿಕ್ಕೆ ಬ್ಯಾಡ ಅಂದಾರ ?"

"ಅವರs ?" ಪೂರ್ಣಿಮಾ ಸ್ವಲ್ಪ ಹೊತ್ತು ಸುಮ್ಮನೆ ಕುಳಿತಳು. ನಂತರ ಕೆಳಗೆ ನೋಡುತ್ತ ಇಳಿಧ್ವನಿಯಲ್ಲಿ ಹೇಳಿದಳು, "ಕವಿತಾ ಯಾಕ ಬರಿಯೋದಿಲ್ಲ ಅಂದ್ರೆಲ್ಲ ಡಾಕ್ಟರ್, ಅದಕ್ಕ ಹೇಳಿದೆ. ನಮ್ಮನೀಯವ್ರಿಗೆ ನಾ ಕವಿತಾ ಬರೆಯೋದು ಸೇರೋದಿಲ್ಲ...."

"ಓಹ್, ಹಿಂಗೇನು ?" ಶಶಿ ನಕ್ಕು ವಾತಾವರಣವನ್ನು ತಿಳಿಯಾಗಿಸಲೆತ್ನಿಸಿದಳು. "ವರ್ಷಕ್ಕೊಂದು- ಎರಡು ವರ್ಷಕ್ಕೊಂದು ಈ ಜೀವಂತ ಕಾವ್ಯನೇ ಸೃಷ್ಟಿ ಮಾಡ್ತೀರಲ್ಲ, ಮತ್ಯಾಕ ಬೇಕಬಿಡ್ರಿ ಆ ಜುಜುಬಿ ಕವಿತಾ ?"

"ಈ ಜೀವಂತ ಕವಿತಾ ನನ್ನನ್ನ ಸ್ವಲ್ಪ ಸ್ವಲ್ಪs ಕೊಲ್ಲತಾ ಹೊರಟಾವ" ಅಂದ ಸಿಂಗ್‌ಳ ಮಾತನ್ನ ಕೇಳದಂತೆ ನಟಿಸುತ್ತ ಆಕೆ ಔಷಧ ತರಲೆಂದು ಒಳಗಿನ ಕೋಣೆಗೆ ನಡೆದಳು.

* * *

ಎಲ್ಲ ಮುಗಿಸಿ ರಾತ್ರಿ ಹಾಸಿಗೆ ಸೇರಿದಾಗ ಶಶಿಗೆ ಫಕ್ಕನೆ ಕಮಲಾಳ ಡೈರಿಯ

ನೆನಪು ಬಂದಿತು. ಆಕೆ ನಿಧಾನವಾಗಿ ಎದ್ದು ಕಮಲಾ ಬಿಟ್ಟು ಹೋಗಿದ್ದ ಪ್ಯಾಕೆಟ್ ತೆರೆದು ಅವಳ ಡೈರಿ ಹೊರತೆಗೆದಳು. ಬೆಡ್‌ಲ್ಯಾಂಪ್ ಹಚ್ಚಿಕೊಂಡು ಮತ್ತೆ ಹಾಸಿಗೆಯ ಮೇಲುರುಳಿದಳು.

....ಸುರುಳಿಯಾಗಿ ಸುತ್ತಿಕೊಂಡು ಬಿಚ್ಚಿಕೊಂಡು ಬಂದವು ನೆನಪುಗಳು. ಬಹಳ ವರ್ಷಗಳ ಹಿಂದೆ ವಿಜಾಪುರದ ಗರ್ಲ್ಸ್ ಹೈಸ್ಕೂಲಿನಲ್ಲಿ ಕಮಲಾ ತನ್ನ ಸಹಪಾಠಿಯಾಗಿದ್ದದ್ದು, ಆಕೆಯ ಪಾಠದಲ್ಲಿನ ಜಾಣ್ಮೆ, ಅಭಿನಯದಲ್ಲಿನ ಆಸಕ್ತಿ, ಉಕ್ಕುವ ಉತ್ಸಾಹ, ಸಂಪ್ರದಾಯದ ವಿರುದ್ಧ ಬಂಡೇಳುವ ಪ್ರವೃತ್ತಿ, ಸ್ವಾತಂತ್ರ್ಯಪ್ರಿಯತೆ, ಜೀವನೋತ್ಸಾಹ ತುಂಬಿ ಚೆಲ್ಲುವ ಚಿಲುಮೆಯಾಗಿದ್ದ ಕಮಲಾ.... ರಾತ್ರಿ ಸದ್ದಿಲ್ಲದೇ ಸರಿಯುತ್ತಿತ್ತು.

* * *

ವಿಜಾಪುರದಲ್ಲಿ ಸರಕಾರಿ ಡಾಕ್ಟರಾಗಿದ್ದ ತಂದೆಯ ಮನೆಯಲ್ಲಿ ಅಚ್ಚೆಯ ಒಬ್ಬಳೇ ಮಗಳಾಗಿದ್ದ ಶಶಿಗೆ ಸ್ಕೂಲಿನಲ್ಲಿ ಕಮಲಾ ಬಹಳ ಆತ್ಮೀಯ ಗೆಳತಿ. ಸಮೀಪದ ಹಳ್ಳಿಯಾದ ಹುನಗುಂದದಿಂದ ಓದಲೆಂದೇ ವಿಜಾಪುರಕ್ಕೆ ಬಂದು ಅಲ್ಲಿನ ತನ್ನ ದೊಡ್ಡಣ್ಣನ ಮನೆಯಲ್ಲಿದ್ದಳು ಕಮಲಾ. ನೆರೆಯವರೂ, ಒಂದೇ ಕ್ಲಾಸಿನವರೂ ಆದ ಇಬ್ಬರೂ ಹುಡುಗಿಯರಲ್ಲಿ ಗೆಳೆತನ ಬಹುಬೇಗ ಬೆಳೆದು ಪ್ರಗಾಢವಾದ ಆತ್ಮೀಯತೆಯಲ್ಲಿ ಪರಿವರ್ತಿತವಾಗಿತ್ತು. ಆ ದಿನಗಳ ಬಗ್ಗೆ ವಿಚಾರ ಮಾಡಿದಾಗ ಶಶಿಗೆ ಈಗಲೂ ಒಂದು ವಿಷಯದ ಬಗ್ಗೆ ಆಶ್ಚರ್ಯವೆನಿಸುತ್ತದೆ– ತಮ್ಮಿಬ್ಬರ ಮೂಲಭೂತ ವ್ಯಕ್ತಿತ್ವಗಳಲ್ಲಿ, ಜೀವನ ದೃಷ್ಟಿಯಲ್ಲಿ ಅಪಾರ ಅಂತರವಿತ್ತು ; ತಮ್ಮಿಬ್ಬರ ವಿಚಾರಗಳಲ್ಲಿ, ಭಾವನೆಗಳಲ್ಲಿ ಸಹ ಅಂಥದೇ ಅಂತರ. ಹೀಗಿದ್ದೂ ತಾವಿಬ್ಬರೂ ಗೆಳತಿಯರಾದುದು ಹೇಗೆ ? ಈ ಎಲ್ಲ ಮೀರಿದ ಏನೋ ಆಂತರಿಕವಾದುದೊಂದು ತಮ್ಮಿಬ್ಬರನ್ನೂ ಇಷ್ಟು ವರ್ಷಗಳವರೆಗೆ ಹೀಗೆ ಬೆಸೆದಿತ್ತೋ ಏನೋ.

ಶಶಿಗೆ ಇನ್ನೂ ನೆನಪಿದೆ ; ಒಂದು ಸಲ ಕ್ಲಾಸಿನಲ್ಲಿ 'ನನ್ನ ಜೀವನದ ಗುರಿ'ಯ ಬಗ್ಗೆ ನಿಬಂಧ ಬರೆಯಲು ಕನ್ನಡ ಟೀಚರು ಹೇಳಿದ್ದರು ನಂತರ ಕಮಲಾ ಬರೆದ ನಿಬಂಧವನ್ನು ಬಹಳ ಶ್ಲಾಘಿಸಿ ಎಲ್ಲರಿಗೂ ಓದಿ ತೋರಿಸಿದ್ದರು. ಕಮಲಾ ಅದರಲ್ಲಿ ಅಭಿನಯದ ಬಗ್ಗೆ ತನಗಿರುವ ಪ್ರೀತಿ-ಸೆಳೆತ ವರ್ಣಿಸಿ ತಾನೊಬ್ಬ ದೊಡ್ಡ ಅಭಿನೇತ್ರಿಯಾಗುವ ಕನಸು ಕಂಡಿದ್ದಳು. ಹನ್ನೆರಡು-ಹದಿಮೂರು ವರ್ಷಗಳ ಹುಡುಗಿಯ ಆ ಕಲಾಸಕ್ತಿ ಎಷ್ಟು ತೀವ್ರವಾಗಿತ್ತೆಂದು ಮುಂದೆ ಎಷ್ಟೋ ದಿನಗಳ ನಂತರ ಶಶಿಗೆ ತಿಳಿಯತೊಡಗಿತ್ತು. ಸ್ಕೂಲಿನ ನಾಟಕಗಳಲ್ಲಿ ಯಾವಾಗಲೂ ಅವಳದೇ

ಮುಖ್ಯ ಪಾತ್ರ. ಅವಳಿಗೇ ಯಾವಾಗಲೂ ಮೊದಲ ಬಹುಮಾನ. ಆ ದಿನಗಳಲ್ಲೇ ಡಾಯರಿ ಬರೆಯಲು ಸುರು ಮಾಡಿದ ಕಮಲಾಳ ಡಾಯರಿಯ ಮೊದಲ ಹಲವಾರು ಪುಟಗಳ ತುಂಬ ಬರೇ ಅದೇ ಕನಸು :

"ಜೀವನ ಒಂದು ಕಲೆ ಅಂತ ಇವತ್ತು ಟೀಚರು ಕ್ಲಾಸಿನಲ್ಲಿ ಹೇಳಿದರು. ಆದರೆ ನನ್ನ ಮಟ್ಟಿಗೆ ಕಲೆಯೇ ಜೀವನ. ಕಲಾದೇವಿಯನ್ನು ಆರಾಧಿಸುವುದೇ ನನ್ನ ಜೀವನದ ಪರಮ ಧ್ಯೇಯ. ಅದಕ್ಕಾಗಿ ನನ್ನ ಬಾಳು ಮುಡಿಪು.

ಕಲಾವಿದರನ್ನು ಈ ಸಮಾಜ ಸರಿಯಾಗಿ ಗೌರವಿಸುವುದಿಲ್ಲ. ಅದರಲ್ಲೂ ಹೆಂಗಸರು ಕಲೆಯನ್ನೇ ಜೀವನನ್ನಾಗಿ ಮಾಡಿಕೊಳ್ಳಬಯಸಿದರೆ ಅವರಿಗೆ ನೂರೆಂಟು ವಿಘ್ನಗಳು ಎದುರಾಗುವುದು ಖಂಡಿತ. ಎಲ್ಲಕ್ಕಿಂತ ಮುಖ್ಯವಾಗಿ ಕಲೆಯ ಮೇಲೆಯೇ ಅವಲಂಬಿಸಿದರೆ ಹೊಟ್ಟೆ ತುಂಬುವುದೇ ಅನಿಶ್ಚಿತ. ಹೀಗೆಲ್ಲ ಶಶಿ ನನ್ನನ್ನು ಸದಾ ಅಧೈರ್ಯಗೊಳಿಸಲು ಯತ್ನಿಸುತ್ತಾಳೆ. ಒಂದು ದೃಷ್ಟಿಯಿಂದ ಆಕೆ ಅನ್ನುವುದು ನಿಜ. ಆದರೆ ನನ್ನ ಗುರಿ ಸಾಧಿಸಲು ನಾನು ಎಲ್ಲ ರೀತಿಯ ವಿರೋಧವನ್ನು ಎದುರಿಸುವೆ. ಎಲ್ಲ ಸಂಪ್ರದಾಯಗಳನ್ನು ಧಿಕ್ಕರಿಸುವೆ. ಎಲ್ಲ ಅನಿಷ್ಟಗಳೊಂದಿಗೆ ಹೋರಾಡುವೆ. ಹಣ ಗಳಿಸುವುದು ನನಗೆ ಗೌಣ. ತಂದೆಯ ಹಾಗೆ ಡಾಕ್ಟರಾಗಿ ಸಾವಿರಗಟ್ಟಲೆ ಸಂಪಾದಿಸಿದರೇನೇ ಸುಖವಾಗಿರಬಹುದೆಂಬ ಶಶಿಯ ಅಭಿಪ್ರಾಯ ನಾನು ಒಪ್ಪುವುದಿಲ್ಲ. ನನ್ನ ಧ್ಯೇಯ ಸಾಧನೆಗಾಗಿ ಶ್ರಮಿಸುವುದೇ ನನ್ನ ಸುಖ."

ಕಮಲಾನ ಈ ನಿಷ್ಠೆ, ದೃಢತೆ, ದೃಷ್ಟಿಕೋನ ಎಲ್ಲ ಆಕೆ ಬೆಳೆದಂತೆ ಆಕೆಯೊಡನೆ ಬೆಳೆಯುತ್ತಲೇ ಹೋದವು. ಕಲೆಯ ಬಗ್ಗೆ ಅವಳಿಗಿರುವ ಇಂಥ ತೀವ್ರ ಆರಾಧಕ ಭಾವದಿಂದಾಗಿ ಅವಳೆಂದೂ ಸುಖಿಯಾಗಲಾರಳೆಂದು ಶಶಿಗೆ ಯಾವಾಗಲೂ ಅನಿಸುತ್ತಿತ್ತು. ಕಮಲಾ ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದಳು. ಕಾಲೇಜಿನಲ್ಲಿ ಅವಳಿಗೆ ಯಾವಾಗಲೂ ಪ್ರಥಮ ವರ್ಗ, ಪ್ರಥಮ ರ್‍ಯಾಂಕು ತಪ್ಪುತ್ತಿರಲಿಲ್ಲ. ಚೆನ್ನಾಗಿ ಓದಿ ಆಯ್. ಎ. ಎಸ್. ಆಗುವುದು ಬಿಟ್ಟು ಈ ಹುಡುಗಿ ಇದೇನು ಹುಚ್ಚು ತಲೆಗಂಟಿಸಿಕೊಂಡಿದ್ದಾಳೆ ಅನಿಸುತ್ತಿತ್ತು ಶಶಿಗೆ. ಇದೊಂದೇ ಅಲ್ಲ, ಕಮಲಾನ ತಲೆಯಲ್ಲಿ ಇನ್ನೂ ಹಲವು ತರದ ಹುಚ್ಚುಗಳಿವೆ ಅಂತ ಶಶಿಗೆ ಆಗಲೇ ಸಂಶಯ ಬರತೊಡಗಿತ್ತು. ಉದಾಹರಣೆಗೆ ಪ್ರೇಮ :

"ಗಂಡು-ಹೆಣ್ಣಿನ ಪ್ರೇಮ ಒಂದು ದೈವೀ ಭಾವನೆ. ನಿಜವಾದ ಪ್ರೇಮಕ್ಕೆ ಆದಿ-ಅಂತ್ಯಗಳಾಗಲೀ, ಪ್ರತಿಫಲಾಪೇಕ್ಷೆಯಾಗಲೀ, ಆಸೆ-ಆಮಿಷಗಳಾಗಲೀ ಇರಲಾರವು. ಎಂಥ ಕಠಿಣ ಪರಿಸ್ಥಿತಿಯಲ್ಲೂ ಎದೆಗುಂದದೆ

ಮುನ್ನುಗ್ಗಬಲ್ಲದ್ದೇ, ಎಂದಿಗೂ ಯಾವ ಕಾರಣಕ್ಕೂ ಬದಲಾಗಲಾರದ್ದೇ, ಸದಾ ಪ್ರತಿಕ್ಷಣ ಹೆಚ್ಚುತ್ತ ಹೋಗುತ್ತಿರುವುದೇ ನಿಜವಾದ ಪ್ರೇಮ. ಪ್ರೇಮದ ಬಗ್ಗೆ ಇಂತಹದೇ ಅಭಿಪ್ರಾಯಗಳನ್ನು ಹೊಂದಿರುವ ವ್ಯಕ್ತಿಯೊಬ್ಬ ಬಾಳಿನಲ್ಲಿ ನನಗೆ ಸಿಕ್ಕರೆ ನಾನು ಧನ್ಯಳು.

ಶಶಿ ನನಗೆ ರೋಮ್ಯಾಂಟಿಕ್ ಫೂಲ್ ಅನ್ನುತ್ತಾಳೆ. ಅವಳ ದೃಷ್ಟಿಯಲ್ಲಿ ಪ್ರೇಮ ಅನ್ನುವುದು ಬರೀ ಭ್ರಮೆ. ಮದುವೆ ಅನ್ನುವುದು ಒಂದು ವ್ಯಾವಹಾರಿಕ ಒಪ್ಪಂದ. ಮದುವೆ, ಪವಿತ್ರತೆ, ಪ್ರೇಮ, ಬಂಧನ ಇವೆಲ್ಲಾ ಆಕೆಯ ಮಟ್ಟಿಗೆ ಬೋಗಸ್ ಶಬ್ದಗಳು. ಇವುಗಳ ಬೆನ್ನಟ್ಟಿದ ವ್ಯಕ್ತಿಗೆ ಅಂತ್ಯದಲ್ಲಿ ದುಃಖ-ನಿರಾಸೆ ಕಟ್ಟಿಟ್ಟದ್ದು ಅನ್ನುತ್ತಾಳೆ ಶಶಿ.

ನಾನು ಹಾಗನ್ನುವುದಿಲ್ಲ. ನಿಜವಾದ ಪ್ರೇಮಕ್ಕೆ ಎಲ್ಲ ದುಃಖಗಳನ್ನು ನಿವಾರಿಸುವ ಶಕ್ತಿಯಿದೆ. ಅಂಥ ಪ್ರೇಮದ ಅನುಭವರಹಿತವಾದ ಜೀವನವೇ ಅಪರಿಪೂರ್ಣ."

ಆ ದಿನಗಳಲ್ಲಿ 'ಇಂಗ್ಲೀಷ್ ಲಿಟರೇಚರ್, ಅದೂ ಬರೇ ರೋಮ್ಯಾಂಟಿಕ್ ಕಾವ್ಯ, ಓದಿ ನಿನ್ನ ತಲೆ ಕೆಟ್ಟು ಹೋಯಿತಲ್ಲೇ ಕಮಲಾ', ಅಂತ ಶಶಿ ಅವಳನ್ನು ಹಾಸ್ಯ ಮಾಡುತ್ತಿದ್ದಳು. ಪ್ರತಿಯಾಗಿ ಕಮಲಾ 'ಸಾಯನ್ಸ್ ಓದಿ ನಿನ್ನ ತಲೆ-ಹೃದಯ ಎರಡೂ ಕಲ್ಲಾಗಿವೆಯಲ್ಲೇ ಶಶಿ,' ಅನ್ನುತ್ತಿದ್ದಳು. 'ಗಂಡಸರೆಲ್ಲಾ ಸ್ವಾರ್ಥಿಗಳು ಕಮಲಾ, ನಿನ್ನ ಕನಸಿನ್ಯಾಗಿರೋ ಆದರ್ಶ, ನಿಸ್ವಾರ್ಥ ಪ್ರೇಮ ಯಾವ ಗಂಡಸಿನ ಮನಸ್ಸಿನೊಳಗೂ-ಹೃದಯದೊಳಗೂ ಇರೋದಿಲ್ಲ. ಕಾವ್ಯದಾಗ ಮಾತ್ರ ಅಂಥಾದ್ದು ಸಿಗೋದು. ಹಾಂಗ ನೋಡಿದರ ಗಂಡಸರಿಗೆ ಮನಸ್ಸು-ಹೃದಯ ಅನ್ನೋದೇ ಇರೋದಿಲ್ಲ. ಅವರಿಗಿರೋದು ಅದ್ಭುತ ತಲೆ ಮಾತ್ರ. ಆ ಅದ್ಭುತ ತಲೆ ಉಪಯೋಗಿಸಿ ನಿನ್ನಂಥ ಬಕರಾ ಹೆಂಗಸರನ್ನ ಸಿಸ್ಟಮ್ಯಾಟಿಕ್ ಆಗಿ ಫೂಲ್ ಮಾಡತಾರ,' ಅಂತ ಶಶಿ ಪದೇ ಪದೇ ಅವಳಿಗೆ ತಿಳುವಳಿಕೆ ತಂದು ಕೊಡಲು ಪ್ರಯತ್ನಿಸುತ್ತಿದ್ದಳು. ಆದರೆ ಕಮಲಾನದು ಯಾವಾಗಲೂ ಒಂದೇ ಧೋರಣೆ. 'ನಿನ್ಹಾಂಗ ಪುರುಷದ್ವೇಷಿ ಆಗಿ ಜೀವನದ ಖರೇ ಸುಖಾ-ಆನಂದ ಕಳಕೊಳ್ಳೋದು ಮೂರ್ಖತನ ಶಶಿ, ಗಂಡು-ಹೆಣ್ಣಿನ ಪ್ರೀತಿಯೊಳಗ, ಬಂಧನದೊಳಗ ಏನು ತೃಪ್ತಿ ಸಿಗತದ, ಅದರ ಮುಂದ ಎಲ್ಲಾ ಕಷ್ಟ-ಕೋಟಲೆಗಳೂ ಶೂನ್ಯ.'

'ನಾ ಪುರುಷದ್ವೇಷಿ ಅಲ್ಲ ಕಮಲಾ. ಸುಖಾ-ಆನಂದ ಬ್ಯಾಡನ್ನೋದಿಲ್ಲ ನಾನು. ಆದರ ಈ ಪ್ರೀತಿ-ಬಂಧನ ಅಂತೀಯಲ್ಲ, ಅದು ಬ್ಯಾಡಂತೀನಿ. ಯಾಕಂದರ ಅಂಥಾದ್ದು ಅಸ್ತಿತ್ವದೊಳಗೇ ಇಲ್ಲ. ಗಂಡು-ಹೆಣ್ಣಿನ ಸಂಬಂಧದ ಸುಖಾ ಇರ್ಲಿ, ಆದರ

ಆ ಸಂಬಂಧ ಕೊರಳಿಗೆ ಉರಲು ಆಗೋದು ಬ್ಯಾಡ ಅಂತೀನಿ.'

'ಅಂದ್ರ ? ಬೇಕಾದಾಗ ಬೇಕಾದವರ್‍ನ ಕೂಡಿ ಸಾಕಾದ ಕೂಡ್ಲೇ ಗುಡ್ ಬಾಯ್ ಅನ್ನೊದೇನು ?' –ಆ ಪರಿ ಕಮಲಾ ಕನಸಿನಲ್ಲೂ ಕಲ್ಪಿಸಲಾರಳು.

'ಯಸ್, ಸಿಂಪಲ್. ಖಾವೋ ಪೀವೋ ಮಜಾಕರೋ ಫಿರ್ ಆಗೇ ಬಢೋ, ಬಾಕೀ ಸಬ್ ಭೂಲ್ ಜಾವೋ,' ಅಂತ ಶಶಿ ಕಣ್ಣು ಮಿಟುಕಿಸಿ ನಕ್ಕಾಗ, 'ಥೂ, ನಾವೇನು ಅಮೇರಿಕನ್‍ರೇನು ? ಹಿಂಗನ್ಲಿಕ್ಕೆ ನಿನಗ ನಾಚಿಕೆ ಆಗೂದಿಲ್ಲಽ ?' ಅಂತ ಕಮಲಾ ಸಿಟ್ಟಾಗುತ್ತಿದ್ದಳು.

* * *

ಮೆಡಿಕಲ್‍ಗೆ ಸೀಟು ಸಿಕ್ಕಿ ಮುಂಬಯಿಗೆ ಬಂದ ನಂತರ ಶಶಿಗೆ ಕಮಲಾಳ ಒಡನಾಟ ತಪ್ಪಿತ್ತು. ರಜೆಯಲ್ಲಿ ಹೋದಾಗಲಷ್ಟೇ ಕಮಲಾಳ ಭೇಟಿಯಾಗುತ್ತಿದ್ದುದು. ಕಮಲಾ ಬಿ. ಎ. ಮುಗಿಸಿ ಎಮ್. ಎ. ಓದಲೆಂದು ಧಾರವಾಡಕ್ಕೆ ಹೋದಳು. ಈಗ ಮೊದಲಿನಕಿಂತ ಹೆಚ್ಚು ಗಂಭೀರಳಾಗಿದ್ದಳು. ಆದರೆ ಅವಳ ವಿಚಾರ, ಧ್ಯೇಯ, ಆದರ್ಶ ಈಗ ಇನ್ನಷ್ಟು ಗಟ್ಟಿಯಾಗಿದ್ದವು. ತನ್ನೆಲ್ಲ ಧೋರಣೆ, ದೃಷ್ಟಿಕೋನ, ಹಂಬಲಗಳಿಗೆ ಒಂದು ಮೂರ್ತರೂಪ ಕೊಡುವ ಅವಕಾಶಕ್ಕಾಗಿ ಆಕೆ ಕಾಯುತ್ತಿದ್ದಳು. ಭವಿಷ್ಯದಲ್ಲಿನ ಗುರಿ ಅವಳಿಗೆ ಸ್ಪಷ್ಟವಾಗಿದ್ದರೂ ಅದನ್ನು ತಲುಪಲು ಸಾಗಬೇಕಾದ ದಾರಿ ಅಸ್ಪಷ್ಟವಾಗಿತ್ತು. ಅಂತೆಯೇ ಆ ದಿನಗಳಲ್ಲಿ ಆಕೆಯ ವರ್ತನೆಯಲ್ಲಿ ಎಂಥದೋ ಚಡಪಡಿಕೆ, ಅತೃಪ್ತಿ, ಹುಡುಕಾಟದ ಅಸಹನೆ ತೋರುತ್ತಿದ್ದವು. ಮಾನಸಿಕವಾಗಿ ಆಕೆ ಆಗ ಸಾಕಷ್ಟು ಅಶಾಂತಿಯನ್ನನುಭವಿಸುತ್ತಿದ್ದಿರಬೇಕು :

> "ಇತ್ತೀಚೆಗೆ ಸದಾ ನನಗೊಂದು ವಿಧದ ಅತೃಪ್ತಿ, ಕಾತರ. ಬೇಸಿಗೆಯ ಮೊದಲ ಮಳೆಗಾಗಿ ಪರಿತಪಿಸುತ್ತಿರುವ, ಧಗೆ ಹಾಯುತ್ತಿರುವ ವಿಜಾಪುರದ ಎರೆಮಣ್ಣಿನ ಹೊಲದಂತಾಗಿದೆ ನನ್ನ ಮನಸ್ಸು. ಎದುರಿಗೆ ಕಾಣುತ್ತಿರುವ ದಾರಿಯೆಲ್ಲ ಮಸುಕು-ಮಸುಕು, ಮಬ್ಬು, ಕತ್ತಲು. ಆದರೂ ಬರಲಿರುವ ಮಳೆಯ-ಬೆಳಕಿನ ಸೂಚನೆ ಆಗಲೇ ಅಸ್ಪಷ್ಟವಾಗಿ ನನಗೆ ಕಾಣುತ್ತಿದೆ. ಅದಕ್ಕೇ ನನ್ನ ಹೃದಯ ಧಡಧಡಿಸುತ್ತಿದೆ. ಆದರೆ ಕಾಯಲೇಬೇಕಾದ ಈ ಸ್ವಲ್ಪ ಅವಧಿಯನ್ನು ಕಳೆಯುವುದು ಅಸಹ್ಯವಾಗುತ್ತಿದೆ...."

ಹೌದು, ಶಶಿಗೆ ಸರಿಯಾಗಿ ನೆನಪಿದೆ, ಕಮಲಾ ಬಹಳ ಕಾಲ ಕಾಯಬೇಕಾಗಲಿಲ್ಲ. ಆಕೆ ಕೊನೆಯ ವರ್ಷ ಎಮ್. ಎ. ನಲ್ಲಿದ್ದಾಗ ಧಾರವಾಡದ ಕನ್ನಡ ಸಂಘದವರ ನಾಡಹಬ್ಬದ ಆಮಂತ್ರಣದ ಮೇರೆಗೆ ಮುಂಬಯಿಯಿಂದ ಒಂದು ವಿಶಿಷ್ಟ ನಾಟಕ ಕಂಪನಿ ಬಂದಿತ್ತು. 'ರಸಿಕಕೂಟ' ಅಂತ ಅದರ ಹೆಸರು, ಅದರ ಪ್ರೊಪ್ರೈಟರು

ಶಿವಮೂರ್ತಿ ಅನ್ನುವ ಎತ್ತರದ, ಆಕರ್ಷಕ ನಿಲುವಿನ, ಸುಶಿಕ್ಷಿತ, ಪ್ರಭಾವೀ ವ್ಯಕ್ತಿತ್ವದ ಮನುಷ್ಯ. ಆತನ ನಾಟಕ ಕಂಪನಿ 'ವಿಶಿಷ್ಟ'ವೆನ್ನಿಸಲು ಕಾರಣ, ಕಮಲಾನೇ ವಿವರಿಸಿದಂತೆ, ಅದರಲ್ಲಿರುವವರೆಲ್ಲ ಸುಶಿಕ್ಷಿತರು, ಸಾಕಷ್ಟು ವೈಯಕ್ತಿಕ ಆಸ್ತಿ-ಪಾಸ್ತಿ ಇದ್ದವರು. ಒಂದು ದೃಷ್ಟಿಯಿಂದ ಹವ್ಯಾಸಿ ಕಲಾವಿದರು. ಅಲ್ಲಲ್ಲಿ ನಾಟಕ ಆಡಿ ಸಂಗ್ರಹಿಸಿದ ಹಣದಲ್ಲಿ ಹೆಸರಿಗೆ ಅಲ್ಪ ಗೌರವವೇತನ ಪಡೆದು ಉಳಿದದ್ದನ್ನು ಮತ್ತೆ ಹೊಸ ನಾಟಕಗಳನ್ನು ಸಂಯೋಜಿಸಲು ಉಪಯೋಗಿಸುತ್ತಿದ್ದರು. ಆ-ಈ ಸಂಘ-ಸಂಸ್ಥೆಗಳ ಸಹಾಯಾರ್ಥ ನಾಟಕ ಪ್ರಯೋಗಿಸುತ್ತಿದ್ದರು. ಎಲ್ಲ ವಿಶೇಷವಾಗಿ ಹೊಸಬಗೆಯ ನಾಟಕಗಳು. ಕನ್ನಡ ಹಾಗೂ ಮರಾಠಿ ಎರಡೂ ಭಾಷೆಗಳಲ್ಲೂ ನಾಟಕಗಳನ್ನಾಡುತ್ತಿದ್ದುದು ಅವರ ವೈಶಿಷ್ಟ್ಯ. ಮುಂಬಯಿಯ ಪ್ರಗತಿಪರ ಧೋರಣೆಯ ಬುದ್ಧಿಜೀವಿಗಳ ವಲಯದಲ್ಲಿ 'ರಸಿಕಕೂಟ' ಒಳ್ಳೆಯ ಹೆಸರು ಪಡೆದಿತ್ತು.

ಶಿವಮೂರ್ತಿಯನ್ನು ಶಶಿ ನೋಡಿದ್ದು ಇದಾದ ಐದಾರು ವರ್ಷಗಳ ನಂತರ. ಆಗಲೂ ಆತ ನೋಡಿದೊಡನೆ ಪ್ರಭಾವ ಬೀರಬಲ್ಲ ಗಡಸು ಧ್ವನಿಯ ಮನುಷ್ಯನಾಗಿದ್ದ. ಹೊಳೆಯುತ್ತಿದ್ದ ಆತನ ಕಣ್ಣುಗಳು ಕತೆ ಹೇಳುವಂತಿದ್ದವು. ಆತನಿಗೆ ಗ್ರೀಕ್ ಯೋಧನ ಮೈಕಟ್ಟಿತ್ತು. ಕಂಪನಿಯ ನಾಟಕಗಳಲ್ಲೆಲ್ಲ ಹೆಚ್ಚಾಗಿ ಆತನೇ ಹೀರೋ ಆಗಿರುತ್ತಿದ್ದ. ಕಂಪನಿಯ ಪ್ರೊಪ್ರೈಟರ್‌ನಾಗಿ, ನಾಟಕಗಳ ನಾಯಕನಾಗಿ, ನಿರ್ದೇಶಕನೂ ಆಗಿದ್ದ ಆತ 'ಡೈರೆಕ್ಟರ್ ಸಾಹೇಬ'ರೆಂದು 'ರಸಿಕಕೂಟ'ದವರಿಗೆಲ್ಲ ಪರಿಚಿತ ಆತ್ಮೀಯನಾಗಿದ್ದ. ಧಾರವಾಡದಲ್ಲಿ ಪ್ರಥಮ ಸಲ ಆತನ ಕಂಪನಿ ಪ್ರಯೋಗಿಸಿದ ಮೂರು ಹೊಸ ಅಲೆಯ ನಾಟಕಗಳಿಂದ ಕಮಲಾ ಸಹಜವಾಗಿ ಪ್ರಭಾವಿತಳಾದಳು. ಕನ್ನಡ ಸಂಘದ ಲೇಡೀಜ್ ರೆಪ್ರಜೆಂಟೇಟಿವ್ಹ್ ಆಗಿದ್ದ ಆಕೆ ಶಿವಮೂರ್ತಿಯ ಕಂಪನಿ ಧಾರವಾಡದಲ್ಲಿದ್ದ ಇಡೀ ಒಂದು ವಾರ ಕಾಲದಲ್ಲಿ ಹಲವಾರು ಸಲ ಆತನನ್ನು ವೈಯಕ್ತಿಕವಾಗಿ ಭೆಟ್ಟಿಯಾದಳು. ಸಮಾನ ಮನೋಧರ್ಮಿಗಳಾದ ಇಬ್ಬರೂ ಗಂಟೆಗಟ್ಟಲೆ ಕೂತು ಚರ್ಚಿಸಿದರು ; ಹರಟೆ ಹೊಡೆದರು ; ಒಟ್ಟಿಗೆ ಊಟ ಮಾಡಿದರು ; ಕನ್ನಡ ಸಂಘದವರು ಅತಿಥಿಗಳಿಗಾಗಿ ಏರ್ಪಡಿಸಿದ್ದ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳ— ಜೋಗ, ಬನವಾಸಿ, ಕಿತ್ತೂರು, ಎಲ್ಲಮ್ಮನ ಗುಡ್ಡ ಇತ್ಯಾದಿ— ಪ್ರವಾಸದಲ್ಲಿ ಪಾಲ್ಗೊಂಡರು ; ಪರಸ್ಪರ ವಿಚಾರ ವಿನಿಮಯ, ವಾಗ್ವಾದ, ಪರಾಮರ್ಶೆ ನಡೆಸಿದರು ; ಆಧುನಿಕ ರಂಗಭೂಮಿಯಲ್ಲಿ ತರಬಹುದಾದ ಕ್ರಾಂತಿಯ ಬಗ್ಗೆ ಕನಸು ಕಂಡರು....

''ಎಂತಹ ಅದ್ಭುತ ಮನುಷ್ಯ ಈ 'ಡೈರೆಕ್ಟರ್ ಸಾಹೇಬರು !'

ನಾಟಕಗಳ ಬಗ್ಗೆ, ಅಭಿನಯದ ಬಗ್ಗೆ, ಒಟ್ಟು ರಂಗಭೂಮಿಯ ಬಗ್ಗೆ ಆತನಿಗೆ ಎಷ್ಟು ಜ್ಞಾನ, ಎಂಥ ನಿಷ್ಠೆ, ಏನು ಆರಾಧಕ ಭಾವ ! ತನ್ನ ಊರು, ಹೊಲ, ಗದ್ದೆ, ತೋಟ, ಬಂಧು, ಬಳಗ, ಸುಖ, ಸಂಪತ್ತು ಎಲ್ಲ ಬಿಟ್ಟು ನಾಟಕದ ಹುಚ್ಚಿಗಾಗಿ ಮುಂಬಯಿ ಸೇರಿದ ಈತನ ಕಲಾಪ್ರೇಮ ಎಷ್ಟು ಆಳವಾಗಿದ್ದೀತು ! ಕಲಾಸೇವೆಯ ಹೆಸರಲ್ಲಿ ಸ್ವಂತ ಖರ್ಚು ಮಾಡಿಕೊಂಡು ಹೀಗೆ ಊರೂರು ಅಲೆಯುವವರು ಬೇರಾರು ಇದ್ದಾರು ? ಆತನ ಅಭಿನಯ, ಮಾತು, ಒಟ್ಟು ವ್ಯಕ್ತಿತ್ವದಲ್ಲಿ ಎಂಥ ಜಾದೂ ಇದೆ !"

–ಈ ಜಾದೂವಿನ ಮೋಡಿಗೆ ಕಮಲಾ ಸಂಪೂರ್ಣವಾಗಿ ಸೋತಳು. ಆ ಸಲ ಮೆಡಿಕಲ್ ಕೊನೆಯ ವರ್ಷದ ಪರೀಕ್ಷೆ ಮುಗಿಸಿ ಶಶಿ ವಿಜಾಪುರಕ್ಕೆ ಹೋದಾಗ ಬೇಸಿಗೆ ರಜೆಯಲ್ಲಿ ಕಮಲಾನ ಮಾತುಗಳ ತುಂಬ ಈ 'ಡೈರೆಕ್ಟರ್ ಸಾಹೇಬರು' ತುಂಬಿದ್ದ. ಆತನ ಬಗ್ಗೆ ಮಾತನಾಡುವಾಗ, ಆತನ ವಿಚಾರಗಳನ್ನು ತನ್ನವೇ ಎಂಬಂತೆ ವಿವರಿಸುವಾಗ, ಆತನ ಸುಸಂಸ್ಕೃತತೆ, ಕಲಾಭಿಜ್ಞತೆ, ಉನ್ನತ ಅಭಿರುಚಿಗಳನ್ನು ವರ್ಣಿಸುವಾಗ ಕಮಲಾ ಬೇರೆಯೇ ಲೋಕದಲ್ಲಿರುವಂತೆ ತೋರುತ್ತಿದ್ದಳು. ಆ ತಂದ್ರಿಯಿಂದ ಅವಳನ್ನೆಚ್ಚರಿಸಲು ಶಶಿ ಅನೇಕ ಸಲ ಪ್ರಾಮಾಣಿಕ ಪ್ರಯತ್ನ ಮಾಡಿದ್ದಳು :

'ಅಲ್ಲ ಕಮಲಾ, ಯಾರರೆ ಒಬ್ಬ ಸಭ್ಯ ಮನುಷ್ಯನ್ನ ನೋಡಿ ಲಗ್ನಾ ಮಾಡಿ ನಿನ್ನ ಗಂಡನ ಮನೀಗೆ ಕಳಿಸೋ ಪ್ರಯತ್ನದಾಗಿದ್ದಾರ ನಿನ್ನ ದೊಡ್ಡಣ್ಣ. ನಿನ್ನ ಟೆಂಪರಮೆಂಟ್‌ಗೂ ಗೃಹಿಣೀ ಜೀವನಾನೇ ಸೂಟ್ ಆಗತದ. ಅದೆಲ್ಲಾ ಬಿಟ್ಟು ಇದೇನು ಹುಚ್ಚು ತಲಿಗೇರಿಸಿಕೊಂಡೀ ನೀನು ? ಲಗ್ನಾದ ಮ್ಯಾಲ ಬೇಕಾದರ ಟೈಮು ಸಿಕ್ಕರ ಕಲಾಸೇವಾ-ಸುಡುಗಾಡು ಏನಾದ್ರೂ ಮಾಡು.'

'ನಾ ನಿನಗ ಎಂದೋ ಹೇಳೀನಲ್ಲ ಶಶಿ, ಲಗ್ನದ ಸಲುವಾಗಿ ನನ್ನ ಆಯ್‌ಡಿಯಾಜ್ ಏನು ಅಂತ. ಕಲೆಯ ಸಲುವಾಗಿ ನನಗಿರೋ ಭಕ್ತಿ-ಪ್ರೀತಿ ತಿಳಕೊಂಡು ಗೌರವಿಸೋವಂಥಾ ವ್ಯಕ್ತಿ ಸಿಕ್ಕರ ನಾ ಲಗ್ನಾಗ್ತೀನಿ. ಇಲ್ದಿದ್ರ ಹಿಂಗs ಇರ್ತೀನಿ. ನನ್ನ ಕಾಲ ಮ್ಯಾಲ ನಾ ನಿಲ್ಲತೀನಿ. ನನಗ ಯಾರ ಹಂಗೂ ಬ್ಯಾಡ.'

* * *

ಜೀವನದ ಬಗ್ಗೆ ಕಮಲಾಳಿಗಿದ್ದ ಕನಸುಗಳು ನೂರಾರು, ಸಾವಿರಾರು. ಬಣ್ಣಬಣ್ಣದ ಚೆಂದಚೆಂದದ ಕನಸುಗಳು, ಆದರೆ ಬಹುಬೇಗ ಜೀವನದ ಉರಿಬಿಸಿಲ ಬೇಗೆ ಅವಳ ಮೃದುಮಧುರ ಕನಸುಗಳನ್ನು ಬಾಡಿಸತೊಡಗಿತು.

ಹೌಸ್ ಸರ್ಜನ್‌ಶಿಪ್ ಮುಗಿಸಿ ಮುಂಬಯಿಯಲ್ಲೇ ಸಿಕ್ಕ ಸರಕಾರಿ ನೌಕರಿ

ಸೇರಿದಳು ಶಶಿ. ನಂತರ ಹಲವಾರು ಸಾವಿರ ಪಗಡಿ ಸುರಿದು ಮುಳುಂದದಲ್ಲಿ ಒಳ್ಳೆಯ ಲೊಕ್ಯಾಲಿಟಿಯೊಂದರಲ್ಲಿ ಒಂದು ಬ್ಲಾಕ್ ಹಿಡಿದಳು. ಆ ವೇಳೆಗಾಗಲೇ ಆಕೆಯ ತಂದೆ-ತಾಯಿ ಇಬ್ಬರೂ ತೀರಿಹೋಗಿದ್ದರಿಂದ ವಿಜಾಪುರದಲ್ಲಿ ಆಕೆಗೆ ತನ್ನವರು-ತನ್ನದು ಅಂತ ಏನೂ ಇರಲಿಲ್ಲ. ಹೀಗಾಗಿ ಒಂದು ರೀತಿಯಿಂದ ಶಶಿಗೆ ಮುಂಬಯಿ ವಾಸವೇ ಸ್ಥಾಯಿಯಾಯಿತು.

ಈ ಎಲ್ಲ ದಿನಗಳಲ್ಲಿ ಕಮಲಾನೊಂದಿಗೆ ಪತ್ರ ವ್ಯವಹಾರದ ಸಂಬಂಧವಿರಿಸಿಕೊಂಡಿದ್ದರಿಂದ ಕಮಲಾಳ ಜೀವನದಲ್ಲಿ ಆಗುತ್ತಲಿದ್ದ ಬದಲಾವಣೆಗಳು ಆಕೆಗೆ ಗೊತ್ತಾಗುತ್ತಲಿದ್ದವು. ಆಗ ಘಟಿಸಿದ ಕೆಲವು ಘಟನೆಗಳಿಂದಾಗಿ ಕಮಲಾಳ ಭವಿಷ್ಯದ ದಾರಿ ನಿರ್ಧರಿತವಾಯಿತು. ಮೊದಲನೆಯದಾಗಿ ಆಕಸ್ಮಿಕ ಹೃದಯಾಘಾತದಿಂದ ಕಮಲಾಳ ಅಣ್ಣ ಸತ್ತರು. ಇಷ್ಟು ದಿನ ಆತನೇ ಕಮಲಾಳ ವಿದ್ಯಾಭ್ಯಾಸ-ಯೋಗಕ್ಷೇಮ ನೋಡಿಕೊಂಡಿದ್ದರಿಂದ ಈಗ ಆತನ ಇಬ್ಬರು ಅಲ್ಪವಯೀ ಮಕ್ಕಳು ರಾಜು-ನೀಲಾರನ್ನು ನೋಡಿಕೊಳ್ಳುವುದು ತನ್ನ ನೈತಿಕ ಹೊಣೆ ಎಂದು ಕಮಲಾ ತಿಳಿದಳು. ಹಾಗೂ ಅದಕ್ಕಾಗಿ ಆಕೆಗೊಂದು ನೌಕರಿಯ ಜರೂರತ್ತು ಇತ್ತು. ಆದರೆ ಬೇರಾವುದೇ ಬಗೆಯ ನೌಕರಿಯಲ್ಲಿ ಆಕೆಗೆ ಆಸಕ್ತಿ ಇರಲಿಲ್ಲ.

ಎರಡನೆಯದಾಗಿ ಇದೇ ಸಮಯದಲ್ಲಿ ಆಕೆಗೆ ಮುಂಬಯಿಯಿಂದ ಶಿವಮೂರ್ತಿಯಿಂದ ಒಂದು ಪ್ರಪೋಜಲ್ ಬಂತು : 'ರಸಿಕಕೂಟ'ದ ನಾಟಕಗಳಲ್ಲಿ ಖಾಯಂ ಆಗಿ ಅಭಿನಯಿಸಬಲ್ಲ ಒಬ್ಬ ನಾಯಕಿಯ ಅವಶ್ಯಕತೆಯಿರುವುದರಿಂದ ಸಾಕಷ್ಟು ಸಂಬಳ ಕೊಟ್ಟು ಈ ಜಾಗ ತುಂಬಲು ನಿರ್ಧರಿಸಿರುವುದಾಗಿಯೂ ಕಮಲಾ ಒಪ್ಪುವುದಾದರೆ ತಮಗೆಲ್ಲ ಸಂತೋಷವೆಂದೂ ಆತ ಬರೆದಿದ್ದ. ಕಮಲಾಗೆ ಬಯಸಿದ ಭಾಗ್ಯ ಬಾಗಿಲಿಗೇ ಬಂದಂತಾಯಿತು.

ಮೂರನೆಯದಾಗಿ ಕಮಲಾ ವಿಜಾಪುರ-ಧಾರವಾಡ ಬಿಟ್ಟು ದೂರ ಹೋಗಲು ಬಯಸಿದ್ದಳು. ಕಾರಣ, ಶಶಿ ಮೊದಲೇ ಊಹಿಸಿದ್ದಂತೆ, ಪ್ರೇಮಭಂಗ. ಯೂನಿವ್ಹರ್ಸಿಟಿಯಲ್ಲಿನ ಎರಡು ವರ್ಷಗಳಲ್ಲಿ ಕಮಲಾಳೊಂದಿಗೆ ಹಲವಾರು ಸಲ ನಾಟಕದಲ್ಲಿ ಹೀರೋ ಆಗಿದ್ದ ಹುಡುಗನೊಬ್ಬ ಕೆಲವಾರು ತಿಂಗಳು ಅವಳೊಡನೆ ಪ್ರೇಮದ ನಾಟಕವನ್ನೂ ಆಡಿ ಪರೀಕ್ಷೆ ಮುಗಿದೊಡನೆ ನಾಟಕಕ್ಕೆ ಪರದೆ ಎಳೆದು ರಂಗದ ಹಿಂಬದಿಯಲ್ಲಿ ಅಂತರ್ಧಾನನಾಗಿ ಬಿಟ್ಟಿದ್ದ.

ಈ ಎಲ್ಲ ಕಾರಣಗಳಿಂದಾಗಿ ಕಮಲಾ ಮುಂಬಯಿಗೆ ಬರುವ ನಿರ್ಧಾರ ಕೈಗೊಂಡಳು. ಶಶಿಯ ನೆರೆಯ ಬ್ಲಾಕ್‌ನಲ್ಲಿ ಇಬ್ಬರು ಗುಜರಾಥೀ ದಂಪತಿಗಳಿದ್ದರು. ತಮ್ಮ ವಿಶಾಲವಾದ ಬ್ಲಾಕ್‌ನ ಎರಡು ಕೋಣೆಗಳನ್ನು 'ಡಾಕ್ಟರ್ ಬಾಯಿ'ಯ ಗೆಳತಿಗೆ

ಕೊಡಲು ಅವರು ಸಂತೋಷದಿಂದಲೇ ಒಪ್ಪಿದರು. ಹಾಗೆ ಕಮಲಾ ಮುಂಬಯಿಗೆ ಬಂದು ಶಿವಮೂರ್ತಿಯ ಕಂಪನಿಯ ನೌಕರಿಗೆ ಸೇರಿದಳು. ನಂತರ ಎರಡು ತಿಂಗಳಲ್ಲಿ ರಾಜು-ನೀಲಾರನ್ನೂ ಕರೆಸಿಕೊಂಡಳು.

ಅದು ಹತ್ತಾರು ವರ್ಷಗಳ ಹಿಂದಿನ ಮಾತು. ಈ ಎಲ್ಲ ದಿನಗಳಲ್ಲಿ ಏನೇನೆಲ್ಲ ಆಗಿಹೋಯಿತು....

* * *

ರಾತ್ರಿಯೆಲ್ಲ ಕಮಲಾಳ ಡಾಯರಿಯ ಪುಟಗಳೇ ಕಣ್ಣ ಮುಂದೆ ಕಟ್ಟಿದಂತಾಗಿ ಸರಿಯಾಗಿ ನಿದ್ರೆಯಾಗದೆ ಹೋದುದರಿಂದಲೋ ಏನೋ, ಮರುದಿನ ಡ್ಯೂಟಿಗೆ ಹೋದಾಗ ಶಶಿ ಎಂದಿನಂತೆ ಗೆಲುವಾಗಿರಲಿಲ್ಲ. ಎಂದಿನ ರೌಂಡ್ ಮುಗಿಸಿ ಆಕೆ ತನ್ನ ಕುರ್ಚಿಯಲ್ಲಿ ಬಂದು ಕೂತಾಗ ಡಾ. ಸತೀಶ ದೇಶಪಾಂಡೆ ಬಂದು "ಗುಡ್‌ಮೋರ್ನಿಂಗ್ ಡಾಕ್ಟರ್" ಅಂದು ಆಕೆಯ ಎದುರಿನ ಕುರ್ಚಿಯಲ್ಲಿ ಕೂತ.

ಶಶಿ ಬರಿ ಮುಗುಳ್ನಕ್ಕಳು.

ಆತನೇ ಮತ್ತೆ ಕಾಳಜಿಯ ಧ್ವನಿಯಲ್ಲಿ ಕೇಳಿದ, "ಯಾಕ ಶಶೀ, ಸಪ್ಪಗಿದ್ದೀಯಲ್ಲ ? ರಾತ್ರಿ ಯಾವ್ದರೆ ಸೀರಿಯಸ್ ಕೇಸು ಅಟೆಂಡ್ ಮಾಡಿ ನಿದ್ದಿಗೆಟ್ಟೀಯೇನು ? ಆರಾಮಿಲ್ದಿದ್ರ ಹಾಫ್‌ಡೇ ಲೀವ್ಹ್ ಹಾಕಿ ಸುಮ್ಮ ಹೋಗಿ ರೆಸ್ಟ್‌ತಗೋ. ತಲೆನೋವಿದ್ರ ಹೇಳು, ಕಾಫೀ ತಂದಕೊಡ್ತೇನಿ. ಎರಡು ಗುಳಿಗೀ ನುಂಗಿ ಕಾಫಿ ಕುಡದು ಇಲ್ಲೇ ರೆಸ್ಟ್‌ತಗೋ. ಅಥವಾ–"

"ನನಗೇನೂ ಆಗಿಲ್ಲ ಸತೀಶ," ಆತನ ವಿಪರೀತ ಕಾಳಜಿಯ ಬಗೆಗೆ ತನಗನಿಸಿದ ಬೇಸರವನ್ನು ಮುಚ್ಚಿಡಲು ಯತ್ನಿಸದೇ ಶಶಿ ಹೇಳಿದಳು, "ಯಾಕೋ ಬ್ಯಾಸರ ಬಂದದ ಅಷ್ಟ."

"ಹೌದs ? ಹಂಗಾರ ಮಧ್ಯಾಹ್ನದಾಗ ಇಬ್ರೂ ಹ್ಯಾಂಗರೆ ಮಾಡಿ ಆಫ್ ತಗೊಂಡು ಪಿಕ್ಚರಿಗೆ ಹೋಗೋಣ ನಡಿ. ಏನಂತೀ ?"

"ನೋಡೋಣ", ಅನ್ನುತ್ತ ಶಶಿ ಆಕಳಿಸಿದಳು.

"ಬೀ ಚಿಯರ್‌ಫುಲ್ ಡಿಯರ್, ನಾ ಓ. ಟೀ. ಗೆ ಹೋಗಬೇಕು ಈಗ ಬರಲಾ ? ಬಾಯ್."

ಸತೀಶನ ಅಗಲವಾದ ಬೆನ್ನನ್ನು ಹಿಂದಿನಿಂದ ನೋಡುತ್ತಿದ್ದಂತೆ ಬಹಳ ದಿನಗಳ ನಂತರ ಶಶಿಗೆ ಇಂದು ಆತನ ಬಗ್ಗೆ ಪಾಪ ಅನಿಸಿತು. ಮೆಡಿಕಲ್ ಕಾಲೇಜಿನಲ್ಲಿ ಆಕೆಗಿಂತ ಎರಡು ವರ್ಷ ಸೀನಿಯರ್ ಆಗಿದ್ದ ಬೆಳಗಾವಿಯ ಕಡೆಯ ದೇಶಪಾಂಡೆ ಮನೆತನದ ಹುಡುಗ ಸತೀಶ. ಮೊದಮೊದಲು ಬ್ಯಾಡ್ಮಿಂಟನ್ ಆಡಲು ಶಶಿಗೆ

ಜೊತೆಯಾಗುತ್ತಿದ್ದಾತ ಮುಂದೊಂದು ದಿನ 'ಐ ಲವ್ ಯೂ' ಹಾಡಿದ್ದ ಅವಳೆದುರಿಗೆ. ಅಂಥದರಲ್ಲೆಲ್ಲಾ ತನಗೆ ನಂಬಿಕೆಯಿಲ್ಲವೆಂದು ಶಶಿ ಧಿಕ್ಕರಿಸಿದಾಗ ಆರೇಳು ತಿಂಗಳ ಕಾಲ ಗಡ್ಡ ಬೆಳೆಸಿ ಎಲ್ಲರ ಕಂಪನಿ ತೊರೆದು ಬರೇ ಸಿಗರೇಟು ಸೇದುತ್ತ ನಿರಾಶ ಪ್ರೇಮಿಯ ಹಾಗೆ ಅಲೆದಾಡಿದ. ಯಾತಕ್ಕೂ ಆಕೆ ಜಗ್ಗದಿದ್ದಾಗ ಮತ್ತೆ ನಾರ್ಮಲ್ ಆಗಿ ಒಳ್ಳೆಯ ಹುಡುಗನ ಹಾಗೆ ಓದಿ ಪಾಸಾಗಿ ಮುಂದೆ ಎಮ್. ಎಸ್. ನೂ ಮಾಡಿ ಕೆಲಸಕ್ಕೆ ಸೇರಿದ್ದ. ಆತನ ಪ್ರೇಮವನ್ನು, ಆತನೊಂದಿಗೆ ಮದುವೆಯನ್ನು ನಿರಾಕರಿಸಿದ್ದ ಶಶಿ ಒಂದೇ ಹಾಸ್ಪಿಟಲಿನಲ್ಲಿ ಕೆಲಸ ಮಾಡುತ್ತಿದ್ದ ಆತನ ಗೆಳೆತನವನ್ನು, ಸಹವಾಸವನ್ನು ನಿರಾಕರಿಸಲಿಲ್ಲ. ಸತೀಶ ಅಷ್ಟರಿಂದಲೇ ತೃಪ್ತಿಪಟ್ಟ ಹಾಗೆ ತೋರುತ್ತಿದ್ದರೂ ಆಗೀಗ ಮತ್ತೆ ಮತ್ತೆ ಮದುವೆಯ ಬೇಡಿಕೆಯನ್ನು ಮುಂದಿರಿಸಿ ಅವಳ ಮನಃಪರಿವರ್ತನೆಗೆ ಪ್ರಯತ್ನಿಸುವುದನ್ನು ಇನ್ನೂ ಬಿಟ್ಟಿರಲಿಲ್ಲ.

ಮಧ್ಯಾಹ್ನ ಊಟದ ಬಿಡುವಿನ ತುಸು ಮುಂಚೆ ಶಶಿಯನ್ನು ಕಾಣಲು ಮಾಲಿನಿಬಾಯಿ ಪಟೇಲ ಬಂದಳು. ಶಶಿ ಇರುವ ಬಿಲ್ಡಿಂಗಿನಲ್ಲೇ ಮೇಲಿನ ಫ್ಲೋರಿನಲ್ಲಿ ಆಕೆಯ ಮನೆ. ಪಶ್ಚಿಮ ಮುಳುಂದದಿಂದ ಕಳೆದ ಹತ್ತಾರು ವರ್ಷಗಳಿಂದಲೂ ಮ್ಯುನಿಸಿಪಲ್ ಕಾರ್ಪೊರೇಶನ್ ಮೆಂಬರ್ ಆಗಿ ಆರಿಸಿ ಬರುತ್ತಿದ್ದ, ಅಸೆಂಬ್ಲಿಯ ಚುನಾವಣೆಗೆ ಸ್ಪರ್ಧಿಸಲು ತಯಾರಿ ನಡೆಸಿದ್ದ, ಖಂಡಿತ ಆರಿಸಿ ಬರುವೆನೆಂದು ಆತ್ಮವಿಶ್ವಾಸವಿದ್ದ, ಪ್ರಭಾವೀ ಹೆಂಗಸು ಆಕೆ – ಸದಾಕಾಲ ಆ-ಈ ಮೀಟಿಂಗು-ಸಭೆ ಅಂತ ಓಡಾಡುತ್ತಲೇ ಇದ್ದಳು. ಆಕೆಯ ಗಂಡ ಪಾಪ, ಕೆಲವರ್ಷಗಳ ಹಿಂದೆ ಕಾರು ಅಪಘಾತದಲ್ಲಿ ಎರಡೂಕಾಲು ಕಳೆದುಕೊಂಡವನಿಗೆ ಮೊನ್ನೆಮೊನ್ನೆ ಹಾರ್ಟ್ ಅಟ್ಯಾಕ್ ಆಗಿತ್ತು. ತುಂಬ ಬಿಝಿಯಾಗಿರುವ ಮಾಲಿನಿಬಾಯಿ ಮನೆಯಲ್ಲಿ ಗಂಡನಿಗೆ ಸರಿಯಾದ ಆರೈಕೆ ಮಾಡಲಾಗುವುದಿಲ್ಲವೆಂದು, ಶಶಿ ಕೆಲಸ ಮಾಡುವ ಹಾಸ್ಪಿಟಲಿಗೆ ಆತನನ್ನು ಸೇರಿಸಿದ್ದಳು, ಹೇಗೂ ಶಶಿ ಇರುತ್ತಾಳಲ್ಲ. ಕಾಳಜಿ ತಗೊಳ್ಳುತ್ತಾಳೆ ಅಂತ. ಇವತ್ತು ಆತನನ್ನು ಡಿಸ್‌ಚಾರ್ಜ್ ಮಾಡುವವರಿದ್ದರೆಂದು ಈಕೆ ಬಂದಳೆಂದು ಕಾಣುತ್ತದೆ.

"ಬರ್ರಿ ಬರ್ರಿ ಮಿಸೆಸ್ ಪಟೇಲ, ನಿಮ್ಮ ಹಜ್‌ಬಂಡ್ ಈಗ ಆರಾಮಿದ್ದಾರ. ರೆಸ್ಟ್ ತಗೊಂಡ್ರು ಸಾಕು. ಎಲ್ಲಾ ಮೆಡಿಸಿನ್ಸ್ ನೇಮದಿಂದ ಕೊಡ್ರಿ ಆತು. ನಾನೂ ಬಂದು ದಿನಾ ಚೆಕ್‌ಅಪ್ ಮಾಡ್ತಿರ್ತೀನಿ. ನೀವೇನೂ ಕಾಳಜಿ ಮಾಡೋ ಕಾರಣಿಲ್ಲ."

ಮಾಲಿನಿಬಾಯಿ ಗಂಡನ ಸಲುವಾಗಿ ಕಾಳಜಿ ಮಾಡುವ ಜಾತಿಯ ಹೆಂಗಸೇ ಅಲ್ಲ. ಆಕೆಯ ಕಾಳಜಿಯ ವಿಷಯ ಬೇರೆಯೇ ಆಗಿತ್ತು : "ನಿಮಗೂ ಗೊತ್ತಿರಬೇಕಲ್ಲ ಡಾಕ್ಟರ್ ಬಾಯಿ, ಈ ಸರೆ ಅಸೆಂಬ್ಲಿ ಇಲೆಕ್ಷನ್ನಿಗೆ ಕಾಂಟೆಸ್ಟ್ ಮಾಡಬೇಕಂತೀನಿ. ಆರಿಸಿ

ಬಂದರ ಜನಸೇವಾ ಮಾಡ್ಲಿಕ್ಕೆ ಒಂದು ಅವಕಾಶ ಸಿಕ್ಹಾಂಗ ಆಗತದ. ಸುಮ್ನ ಮನ್ಯಾಗ ಕೂತು ಯಾಕ ವ್ಯರ್ಥ ಕಾಲಹರಣ ಮಾಡಬೇಕು ಎಲ್ಲಾ ಹೆಂಗಸರ್ಹಾಂಗ ? ನಮ್ಮ ಕೈಯಾಗ ಅಧಿಕಾರ ಇದ್ದರ ಬಡವ್ರು, ದುಃಖೀ, ಅನಾಥ ಹೆಂಗಸ್ರಿಗೆ ಏನಾದ್ರೂ ಕಲ್ಯಾಣ ಮಾಡಬೇಕಂತ ಮನಸದ ನಂದು. ನಮ್ಮ ಹಿಂದೂ ಸಮಾಜದಾಗ ಹೆಂಗಸರದು ಎಷ್ಟ ಶೋಷಣಾ ನಡೀತದ, ಏನ ಕಥಿ ! ಹಾಂಗ ಶೋಷಣೆ, ಅನ್ಯಾಯ, ಅತ್ಯಾಚಾರಕ್ಕೊಳಗಾದ ಹೆಂಗಸರ ಸಲುವಾಗಿ ಏನರೆ ಮಾಡಬೇಕು ಅಂತ ನನ್ನ ಖಟಿಪಿಟಿ, ಅದಕ್ಕs ಈ ಧಾವತಿ...."

ಆಕೆಯ ಉದ್ದೇಶಕ್ಕೂ ಈ ಖಟಿಪಿಟಿ-ಧಾವತಿಗೂ ಇರುವ ಸಂಬಂಧವೇನೆಂದು ಸರಿಯಾಗಿ ಅರ್ಥವಾಗದಿದ್ದರೂ ಶಶಿ ಅಂದಳು, "ಗುಡ್‌ಲಕ್ ಮಿಸೆಸ್ ಪಟೇಲ, ನೀವಂಥಾಂಗ ಎಲ್ಲಾ ಹೆಂಗಸ್ರೂ ಮನೀ-ಮಕ್ಕಳು-ಸಂಸಾರ ಅಂತ ಕೂತರ ಹೆಂಗಸರ ಪ್ರಾಬ್ಲೆಮ್ಸ್ ಸಲುವಾಗಿ ಫೈಟ್ ಮಾಡುವರ್‍ಯಾರು ? ಎಲ್ಲಾ ಅನ್ಯಾಯನೂ ಸಹನ ಮಾಡಿಕೋತ ಹೊಂಟಾರಂತs ನಮ್ಮ ಹೆಂಗಸರ ಮ್ಯಾಲ ದಿನಾ ದಿನಾ ಹೆಚ್ಚು ಹೆಚ್ಚು ಅನ್ಯಾಯ ಆಗಲಿಕ್ಹತ್ಯಾವ. ಯಾರರೆ ಅನ್ಯಾಯದ ವಿರುದ್ಧ, ಅತ್ಯಾಚಾರದ ವಿರುದ್ಧ ಬಂಡೇಳಬೇಕಲ್ಲ. ಅದು ನಿಮ್ಮಂಥಾ ಧೈರ್ಯದ ಹೆಂಗಸ್ರಿಗೆ ಆಗದಿದ್ದರ ಇನ್ಯಾರಿಗೆ ಸಾಧ್ಯ ಆದೀತು ?"

ಶಶಿಯ ಪ್ರಶಂಸೆಯಿಂದ ಉಬ್ಬಿದ ಮಾಲಿನಿಬಾಯಿ ಆಕೆಗೆ ಹೆಚ್ಚು ತೊಂದರೆ ಕೊಡದೆ ಬೇಗನೆ ಹೊರಟು ಹೋದಳು.

* * *

ಸಂಜೆ ಕೆಲಸ ಮುಗಿಸಿ ಸ್ಟೇಶನ್ ಕಡೆ ಹೊರಡುವ ಬಸ್ಸಿಗಾಗಿ ಶಶಿ ಕಾಯುತ್ತ ನಿಂತಾಗ ಮತ್ತೆ ಬಂದ ಸತೀಶ ದೇಶಪಾಂಡೆ, "ಬ್ಯಾಸರ ಅಂತಿದ್ದಿ ಶಶಿ, ಪಿಕ್ಚರ್ ಬ್ಯಾಡ ಅಂದಿ. ಜುಹೂ ಕಡೆ ಹೋಗೋಣ ಅಂದ್ರೂ ಬ್ಯಾಡ ಅಂದಿ. ನನ್ನ ಕ್ವಾರ್ಟರ್ಸ್ ಕಡೆ ಹೋಗೋಣ ನಡಿ. ಇವತ್ತ ಫಸ್ಟ್‌ಕ್ಲಾಸ್ ಆಯಿಸ್‌ಕ್ರೀಮ್ ಮಾಡೀನಿ. ಆಮ್ಯಾಲ ಬೇಕಾದರ ನಿನ್ನ ಮುಳುಂದದ ತನಕಾ ಕಳಸ್ಲಿಕ್ಕೆ ಬರ್ತೀನಿ."

ಹೆಚ್ಚು ಹೇಳಿಸಿಕೊಳ್ಳದೆ ಶಶಿ ಆತನೊಂದಿಗೆ ಹಾಸ್ಪಿಟಲಿನ ಹಿಂಬದಿ ಅನತಿ ದೂರದಲ್ಲಿದ್ದ ಡಾಕ್ಟರ್ಸ್ ಕ್ವಾರ್ಟರ್ಸ್ ಕಡೆ ಹೊರಟಳು.

ಸತೀಶನ ಫ್ಲ್ಯಾಟ್ ಸಾಕಷ್ಟು ಬೆಚ್ಚಗಿತ್ತು. ಆಯಿಸ್‌ಕ್ರೀಮ್ ಸಾಕಷ್ಟು ತಂಪಾಗಿತ್ತು. ಬೆಡ್‌ರೂಮಿನ ಹವೆ ತುಂಬ ಬೆಚ್ಚಗಿತ್ತು. ಹೊರಗೆ ತುಂಬ ತಂಪಾಗಿತ್ತು. ಸತೀಶನ ಅಪ್ಪುಗೆ ಎಷ್ಟು ಬೆಚ್ಚಗಿತ್ತು. ಶಶಿಯ ಮನಸ್ಸು ಎಷ್ಟೋ ತಂಪಾಯಿತು....

ಸತೀಶನಿಗೆ ಥ್ಯಾಂಕ್ಸ್ ಹೇಳಿ ಆಕೆ ರಾತ್ರಿ ಎಂಟರ ಲೋಕಲ್‌ನಲ್ಲಿ ಕೂತಾಗ

ಕಿಡಿಕಿಯಲ್ಲಿಂದ ಬೀಸುತ್ತಿದ್ದ ತಣ್ಣಗಿನ ಗಾಳಿ ಅವಳ ಕೂದಲನ್ನು ಹಣೆಯ ಮೇಲೆ ಹರಡುತ್ತಿರುವಾಗ ಶಶಿಗೆ ಖಂಡಿತವಾಗಿ ಅರಿವಿತ್ತು– ತನ್ನ ಹಾಗೂ ಸತೀಶನ ದೈಹಿಕ ಸಂಬಂಧದ ಬಗ್ಗೆ ತನಗೆ ಯಾವ ಉದ್ವೇಗವಾಗಲಿ, ಸಂಕೋಚವಾಗಲಿ, ನಾಚಿಕೆಯಾಗಲಿ ಇಲ್ಲ. ಇಬ್ಬರೂ ಕೂಡಿ ಪಿಕ್ಚರ್ ನೋಡುವ ಹಾಗೆ, ಚಹಾ ಕುಡಿಯುವ ಹಾಗೆ, ಇವತ್ತು ಆಯಿಸ್‌ಕ್ರೀಮ್ ತಿಂದ ಹಾಗೆ, ಇಬ್ಬರೂ ಮಲಗುವುದು ಸಹ ತಮ್ಮ ಗೆಳೆತನದ ವಿಸ್ತಾರದ ಒಂದು ಬಗೆ. ತನ್ನನ್ನು ಬಿಟ್ಟು ಸತೀಶ ಈ ಥರಾ ಬೇರಾವ ಹೆಂಗಸಿನೊಂದಿಗೂ ಮಲಗುವುದಿಲ್ಲೆಂದು ತನಗೆ ಗೊತ್ತಿದ್ದರೂ ಆ ಬಗ್ಗೆ ತನಗೆಂದೂ ಅಭಿಮಾನವಾಗಲಿ, ಹೆಮ್ಮೆಯಾಗಲಿ ಅನಿಸಿಲ್ಲ. ಅದೇ ತಾನು ಡಾಕ್ಟರ್ ಕೇಸಕರ್ ಜೊತೆ ಅಥವಾ ಡಾಕ್ಟರ್ ಖಾನ್ ಜೊತೆ ಎಂದಾದರೊಮ್ಮೆ ಮಲಗಿದ್ದು ಹೇಳಿದರೆ ಸತೀಶನೇಕೆ ಅಷ್ಟು ಅಪ್‌ಸೆಟ್ ಆಗಬೇಕು ?

* * *

ಜೀವನವನ್ನು ಹೀಗೆ ಲಘುವಾಗಿ ತೆಗೆದುಕೊಳ್ಳದಿದ್ದರೆ ಇಂದಿನ ಜಗತ್ತಿನಲ್ಲಿ ಬದುಕುವುದೇ ಕಠಿಣವಾದೀತು. ಎಲ್ಲದರ ಬಗೆಗೂ ಭಾವುಕವಾಗಿ ಯೋಚಿಸುತ್ತ ಎಲ್ಲವನ್ನೂ ಗಂಭೀರವಾಗಿ ಪರಿಗಣಿಸುತ್ತ ಹೋದರೆ ಸಂಕಷ್ಟಗಳು ಎದುರಾಗುವುದು ತಪ್ಪಿದ್ದಲ್ಲ. ತಾನು ಮೊದಲಿನಿಂದಲೂ ಮಾನವೀಯ ಸಂಬಂಧಗಳ ಬಗೆಗೆ ಹೀಗೆ ನಿರ್ಲಿಪ್ತ-ನಿರ್ವಿಕಾರಳಾಗಿದ್ದರಿಂದಲೇ ತನಗೆ ಈವರೆಗೂ ಯಾವ ಮಾನಸಿಕ ಜಂಜಾಟವಿಲ್ಲದೆ ಬದುಕಿರುವುದು ಸಾಧ್ಯವಾಗಿದೆ ಅನಿಸಿತು ಶಶಿಗೆ. ಇದು ಸಾಧ್ಯವಾಗದ ಕಮಲಾನ ಬದುಕು ಎಂಥ ಟ್ರ್ಯಾಜೆಡಿ ಆಯಿತು.... ಕಮಲಾಗೆ ತನ್ನ ತಪ್ಪಿನ ಅರಿವಾದದ್ದು ಮಾತ್ರ ತೀರಾ ಇತ್ತೀಚೆ. ಹತ್ತಾರು ವರ್ಷಗಳ ಹಿಂದೆ ಆಕೆ ಮುಂಬಯಿಗೆ ಬಂದ ಹೊಸತರಲ್ಲಿಯೇ ಆಕೆಗೆ ಈ ಅರಿವು ಬಂದಿದ್ದರೆ ಇವತ್ತು ಆಕೆ ಪರದೇಶಿಯಂತೆ ಹೀಗೆ ಪಲಾಯನ ಮಾಡಬೇಕಾಗುತ್ತಿರಲಿಲ್ಲವೇನೋ. ಆದರೆ ಆ ದಿನಗಳಲ್ಲಿ ಕಮಲಾ ಈ ಭೂಮಿಯ ಮೇಲೇ ಇರಲಿಲ್ಲ. ಅವಳ ಕಣ್ಣುಗಳ-ಮನಸ್ಸಿನ-ಎದೆಯ ತುಂಬ ಆಗ ಬರೀ ಆಕಾಶ-ಮೋಡ-ನಕ್ಷತ್ರ-ಚಂದ್ರ ಇತ್ಯಾದಿಗಳೇ ತುಂಬಿದ್ದವು.

> “ಎರಡು ವರ್ಷಗಳ ಹಿಂದೆ ನನ್ನ ಪ್ರಥಮ ಪ್ರೇಮವು ವಿಫಲವಾದಾಗ ನಾನು ಇನ್ನೆಂದೂ, ಯಾರನ್ನೂ ಪ್ರೇಮಿಸುವುದೇ ಇಲ್ಲವೇನೋ, ನನ್ನ ಹೃದಯದ ಬಾಗಿಲು ಇನ್ನು ಸದಾಕಾಲ ಮುಚ್ಚಿಯೇ ಹೋಯಿತೇನೋ ಅಂದುಕೊಂಡಿದ್ದೆ. ಆದರೆ ಶಿವಮೂರ್ತಿಯ ಒಡನಾಟದಲ್ಲಿ ಕಳೆದ ಈ ದಿವಸಗಳಲ್ಲಿ ನನಗೆ ಸ್ಪಷ್ಟವಾಗಿ ಅನಿಸುತ್ತದೆ– ನಾನು ನಿಜವಾಗಿ ಪ್ರೀತಿಸಿದ್ದು ಶಿವಮೂರ್ತಿಯನ್ನು ಮಾತ್ರ ; ನನ್ನ ಹೃದಯ ಸಿಂಹಾಸನವನ್ನು ಚಿರಕಾಲ

ಆಕ್ರಮಿಸಬಲ್ಲ ಯೋಗ್ಯತೆಯಿರುವ ಒಬ್ಬನೇ ಒಬ್ಬ ಗಂಡಸು ಶಿವಮೂರ್ತಿ ಮಾತ್ರ ; ನಾನು ಕಲಾವಿದೆ ಹೌದು, ರಾಜು-ನೀಲಾರ ಜವಾಬ್ದಾರಿ ಹೊತ್ತ ಹಿರಿಯಳು ಹೌದು, ಹಲವಾರು ಆದರ್ಶ ಹೊತ್ತಿರುವ ಕನಸುಗಾರ್ತಿ ಹೌದು, ಬಾಳಿಗೊಂದು ಗುರಿಯಿರಿಸಿಕೊಂಡು ಅದಕ್ಕಾಗಿ ಹೋರಾಡುವ ಕೆಚ್ಚನ್ನು-ಸ್ಥೈರ್ಯವನ್ನು ಹೊಂದಿರುವ ಹೋರಾಟಗಾರ್ತಿ ಹೌದು. ಆದರೆ ಈ ಎಲ್ಲಕ್ಕಿಂತ ಹೆಚ್ಚಾಗಿ, ಎಲ್ಲಕ್ಕಿಂತ ಮುಖ್ಯವಾಗಿ ನಾನೊಬ್ಬ ಹೆಂಗಸು. ಈ ಅರಿವನ್ನು ನನಗೆ ತಂದುಕೊಟ್ಟವನು ಶಿವಮೂರ್ತಿ. ಈತನೇ ನಾನು ಯುಗಾಂತರಗಳಿಂದ ಅರಸುತ್ತಲಿದ್ದ ನನ್ನ ಬಾಳಸಂಗಾತಿ. ಈತನೇ ನನ್ನೆಲ್ಲ ಕನಸುಗಳನ್ನು ಸಾಕಾರಗೊಳಿಸಬಲ್ಲ ಆದರ್ಶ ಪ್ರಿಯತಮ. ಈತ ನನ್ನ ಜನ್ಮಾಂತರಗಳ ಪ್ರೇಮಿ. ಈತ ನನ್ನ ಜೀವ.... ನನ್ನ ಸರ್ವಸ್ವ...."

ಆ ದಿನಗಳಲ್ಲಿ ಶಿವಮೂರ್ತಿ ದಿನಾ ಕಮಲಾಳ ಮನೆಗೆ ಬರುತ್ತಿದ್ದ. ರಜಾದಿನಗಳಲ್ಲಿ ಇಬ್ಬರೂ ಒಟ್ಟಾಗಿ ಹೊರಗಡೆ ಹೋಗುತ್ತಿದ್ದರು. ಅನೇಕ ಸಲ ಆತನನ್ನು ಕಮಲಾ ಶಶಿಯ ಮನೆಗೂ ಕರೆದುಕೊಂಡು ಬಂದಿದ್ದಳು. ಆತನನ್ನು ನೋಡಿದರೆ ಕಮಲಾನ ಹಾಗೆಯೇ ಆತನೂ ಆಕೆಯ ಬಗ್ಗೆ ಹುಚ್ಚಾಗಿದ್ದು ಶಶಿಗೆ ಸ್ಪಷ್ಟವಾಗಿ ಗೊತ್ತಾಗುವಂತಿತ್ತು. ಕಮಲಾಗಂತೂ ತನ್ನ ಬಗೆಗಿನ ಆತನ ಪ್ರೀತಿಯ ಬಗ್ಗೆ ಸಂಶಯವೇ ಇರಲಿಲ್ಲ :

"ನಾನೆಷ್ಟು ಭಾಗ್ಯವಂತೆ ! ಶಿವಮೂರ್ತಿ ನನ್ನನ್ನೆಷ್ಟು ಪ್ರೀತಿಸುತ್ತಾನೆ ! ಇವತ್ತು ಸಂಜೆ ಪಾರ್ಕಿನಲ್ಲಿ ಕೂತಿದ್ದಾಗ ಆತ ಹೇಳಿದ, 'ಕಮಲಾ, ಇಷ್ಟು ದಿನಾ ನಾ ಎಲ್ಲೆಲ್ಲೋ ತಿರುಗಾಡಿದೆ, ಯಾರ್‍ಯಾರನ್ನೋ ಭೆಟ್ಟಿ ಆದೆ, ಏನೇನೋ ಮಾಡಿದೆ, ಒಂದು ಥರಾ ನೆಲೀ ಇಲ್ಲದ ಜಿಪ್ಸೀ ಹಾಂಗ ಇದ್ದೆ. ನನ್ನ ಜೀವಕ್ಕ ಒಂದು ಅರ್ಥ ಕೊಟ್ಟಾಕಿ ನೀನು. ನನ್ನ ಕತ್ತಲು ತುಂಬಿದ ಬಾಳಿಗೆ ಬೆಳಕು ತೋರಿಸಿದಾಕಿ ನೀನು. ಎಲ್ಲಾ ಇದ್ದರೂ ಏನೋ ಒಂದು ಇಲ್ಲಾ ಅಂತ ನನಗ ಯಾವಾಗ್ಲೂ ಅನಿಸ್ತಿತ್ತು. ಆ ಕೊರತೆ ನಿನ್ನ ಸಹವಾಸದಿಂದ, ನಿನ್ನ ಪ್ರೀತಿಯಿಂದ ತುಂಬಿ ಬಂತು. ಈಗ ಜೀವನ ಪರಿಪೂರ್ಣ ಆತು ಅನಸ್ತದ ನನಗ. ಈ ನಿನ್ನ ಋಣಾ ನಾ ಹ್ಯಾಂಗ ತೀರಸ್ಲಿ ?'.... ಮೂರ್ತಿ, ನಿಜವಾಗಿ ನೋಡಿದರೆ ನಾನು ನಿನಗೆ ಋಣಿಯಾಗಿರಬೇಕು. ನಿನ್ನಿಂದ ನಾನು ಪಡೆದದ್ದು ಎಷ್ಟು ಅಮೂಲ್ಯವಾಗಿದೆಯೆಂದರೆ ಈ ಜೀವನದಲ್ಲಿ ನಾನಿನ್ನು ಪಡೆಯಬೇಕಾಗಿರುವುದು ಏನೂ ಇಲ್ಲ ಅನಿಸುತ್ತದೆ...."

– ಅದೆಲ್ಲ ಸರಿ ; ಶಶಿಯೂ ಕಮಲಾನ ಅಭಿಪ್ರಾಯ ಒಪ್ಪಿದ್ದಳು. ಆದರೆ

ಕಮಲಾನ ಕನಸುಗಳೆಲ್ಲ ಮೈವೆತ್ತು ಬಂದ ಈ ರಾಜಕುಮಾರನಿಗೆ ಆಗಲೇ ಮದುವೆಯಾಗಿತ್ತು. ಮೂರು ಮಕ್ಕಳೂ ಇದ್ದವು. ಅಷ್ಟೇ ಅಲ್ಲ. ನಾಟಕದ ಹೀರೋಯಿನ್ ಜೊತೆ ತನ್ನ ಗಂಡ ರಂಗಮಂಚದ ಹೊರಗೂ ಹೀರೋ ಆಗಿ ಪ್ರೇಮ ಸಲ್ಲಾಪ ನಡೆಸಿದ ಸುದ್ದಿ ಆತನ ಹೆಂಡತಿಯ ಕಿವಿಯ ವರೆಗೂ ಹೋಗಿ ಆಕೆ ಆತನನ್ನು ತರಾಟೆಗೆ ತೆಗೆದುಕೊಂಡಿದ್ದಳು, ಬೆದರಿಸಿದ್ದಳು, ಅತ್ತಳು, ಸಾಯುವೆನೆಂದಳು, ಬಿಟ್ಟು ಹೋಗುವೆನೆಂದಳು, ಕೇಸ್ ಮಾಡುವೆನೆಂದಳು, ಇಬ್ಬರನ್ನೂ ಖೂನಿ ಮಾಡಿಸುತ್ತೇನೆಂದಳು....

> "ಏನಾದ್ರೂ ನಿನ್ನ ಮ್ಯಾಲಿನ ನನ್ನ ಪ್ರೀತಿ ಬದಲಾಗೂದಿಲ್ಲ ಕಮಲಾ. ಅದಕ್ಕ ಎಷ್ಟ ವಿರೋಧ ಬರತದೋ ಅಷ್ಟು ಅದು ಹೆಚ್ಚೇs ಆಗತದ. ನಾ ಒಂದು ಹೆಜ್ಜೀ ಇಟ್ಟ ಮ್ಯಾಲ ಮುಗೀತು, ಏನ ಕಷ್ಟ ಬಂದ್ರೂ ಹಿಂದಕ್ಕ ಸರಿಯೂ ಮನುಷ್ಯ ಅಲ್ಲ, ಅಂತಾನೆ ಮೂರ್ತಿ. ನಾನು ಶೋಧಿಸುತ್ತಿದ್ದುದು ಇಂತಹ ಪ್ರೀತಿಯನ್ನು. ನಾನು ಕಾಯುತ್ತಿದ್ದುದು ಇಂತಹ ಮನುಷ್ಯನಿಗಾಗಿ. ಇವತ್ತಿಗೆ ನನ್ನ ಶೋಧನೆ ಪೂರ್ಣವಾಯಿತು. ನಾನು ಕಾಯುತ್ತಿದ್ದುದು ಸಾರ್ಥಕವಾಯಿತು."

– ಆದರೂ ಸಮಸ್ಯೆಗಳಿದ್ದವು. ಒಬ್ಬ ಹೆಂಡತಿ-ಮೂರು ಮಕ್ಕಳಿದ್ದ ಶಿವಮೂರ್ತಿಗೆ ತನ್ನ ಜೀವನದಲ್ಲಿನ ಇಷ್ಟು ದಿನಗಳ ಕೊರತೆ ತುಂಬಿಕೊಟ್ಟಿದ್ದವಳಲ್ಲಿ ಪ್ರೀತಿ- ಅವಳ ಬಗ್ಗೆ ಹೇಳತೀರದ ಎಳೆತ ಇತ್ತು ನಿಜ, ಆದರೆ ಅವಳೊಂದಿಗೆ ಬಹಿರಂಗವಾಗಿ ಮತ್ತೊಂದು ಸಂಸಾರ ಹೂಡಲು, ಆಕೆಯನ್ನು ಎರಡನೆಯ ಹೆಂಡತಿಯನ್ನಾಗಿ ಎಲ್ಲರೆದುರು ಸ್ವೀಕರಿಸುವುದು ಆತನಿಗೆ ಸುಲಭವಾಗಿ ಗ್ರಾಹ್ಯವಾಗುವ ವಿಷಯವಾಗಿರಲಿಲ್ಲ. ಆದರೆ ಮದುವೆಯಾಗದೆ ಹಾಗೇ ಆತನ 'ಸಹಚರಿ'ಯಾಗಿರಲು ಕಮಲಾ ಸಿದ್ಧಳಿರಲಿಲ್ಲ. ಏನೊಂದೂ ಇತ್ಯರ್ಥವಾಗದ ಆ ಸಂಧಿ ಕಾಲದಲ್ಲಿ ಕಮಲಾ ಚಿಂತಿಸಿ ಚಿಂತಿಸಿ ಸೊರಗಿ ಹೋಗಿದ್ದಳು :

> "ಶಿವಮೂರ್ತಿ ಇಲ್ಲದ ಜೀವನವನ್ನು ನಾನು ಕಲ್ಪಿಸಲೂ ಸಾಧ್ಯವಿಲ್ಲ. ಆತ ಬೇರೊಬ್ಬಳ ಗಂಡನೇ ಆಗಿರಲಿ, ಹಲವು ಮಕ್ಕಳ ತಂದೆಯೇ ಆಗಿರಲಿ, ಕೊಲೆಗಡುಕನೇ ಆಗಿದ್ದರೂ ಸಹ ಅವನು ನನಗೆ ಬೇಕು. ನಾನು ಬದುಕಿರಲು ಆತನ ಪ್ರೀತಿ ಬೇಕು. ನಾನು ಉಸಿರಾಡಲು ಆತನ ಆಧಾರ ಬೇಕು. ನಾನು ನಿಜವಾಗಿ ಪ್ರೀತಿಸಿದ ಗಂಡಸು ಆತನೊಬ್ಬನೇ. ಏನಾದರೂ ಆಗಿ ಆತ ನನ್ನ ಕೈಬಿಟ್ಟರೆ ನಾನು ಸಾಯುವುದೇ ನಿಶ್ಚಿತ."

– ಹಾಗೆಂದು ಶಶಿಗೂ ಅನುಮಾನ ಬರತೊಡಗಿತ್ತು. ಹೀಗಾಗಿ ಆಕೆಯೇ ಈ

ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಿದಳು. ಪರಿಣಾಮ ಶಿವಮೂರ್ತಿ ಕಮಲಾ ಇಬ್ಬರೂ ಒಂದು ರವಿವಾರದ ದಿನ ದೂರದ ದೇವಸ್ಥಾನವೊಂದರಲ್ಲಿ ಕೆಲವೇ ಆತ್ಮೀಯರ ಸಮ್ಮುಖದಲ್ಲಿ ಹಾರ ಬದಲಾಯಿಸಿ ದಂಪತಿಗಳಾದರು :

''ಇವತ್ತು ನಾನು ಪರಮಸುಖಿ. ಇನ್ನು ಜೀವನದಲ್ಲಿ ನಾನು ಬಯಸುವುದೇನೂ ಇಲ್ಲ. ಈಗಲೇ ಸತ್ತರೂ ನನಗೆ ಖುಶಿ.''

* * *

ಬಹಳ ದಿನಗಳ ನಂತರ ಇಂದು ರೋಶನ್‌ಬೀಯ ಕಣ್ಣಲ್ಲಿ ಒಂದಿಷ್ಟೂ ನೀರಿಲ್ಲದೆ ಆಕೆಯ ಮುಖ ಶಾಂತವಾಗಿದ್ದುದನ್ನು ಕಂಡ ಶಶಿಗೆ ಸ್ವಲ್ಪ ಆಶ್ಚರ್ಯವೇ ಆಯಿತು. ಇವತ್ತು ಆಕೆ ಡ್ಯೂಟಿಗೆ ಹೋಗುವುದೂ ಇಲ್ಲದ್ದರಿಂದ ವಿರಾಮವಾಗಿ ಪೇಪರು ಹಿಡಿದು ಈಜಿಛೇರಿನಲ್ಲಿ ಕೂತಿದ್ದಂತೆ ಆಕೆ ಕೇಳಿದಳು, ''ಮತ್ತೇನು ರೋಶನ್, ನಿನ್ನ ಗಂಡ ಹಾದೀ ಮ್ಯಾಲ ಬಂಧಾಂಗ ಕಾಣಸ್ತದ.''

ರೋಶನ್‌ಬಿ ತಲೆತಗ್ಗಿಸಿ ನೆಲ ಒರೆಸುತ್ತಿದ್ದವಳು ಸುಮ್ಮನೇ ತನ್ನ ಕೆಲಸ ಮುಂದುವರಿಸಿದಳು. ಶಶಿಯೇ ಮತ್ತೆ ಅಂದಳು, ''ಅವೆಲ್ಲಾ ಬ್ಯಾರೆ ಹೆಂಗಸರ ಹುಚ್ಚು ಸ್ವಲ್ಪ ದಿನಾ ಇರ್ತಾವ. ಆ ಮ್ಯಾಲ ತಾನs ಹೆಂಡ್ತಿ-ಮಕ್ಕಳ ಹತ್ತರ ಬರತಾನ, ಅಂತ ನಾ ಹೇಳಿದ್ದಿಲ್ಲs ನಿನಗ ? ನೀ ಸುಮ್ಮನs ಅತ್ತು ಅತ್ತು ಹೈರಾಣಾದಿ.''

ಈಗ ರೋಶನ್‌ಬಿ ಶಾಂತವಾಗಿ ಹೇಳಿದಳು. ''ನನ್ನ ಗಂಡ ಏನು ಹಾದೀ ಮ್ಯಾಲ ಬಂದಿಲ್ರಿ ಬಾಯೀ, ನಾನs ಅವನ ಹಾದೀ ಬಿಟ್ಟು ಹೋಗಬೇಕಂತ ಠರಾಯಿಸೀನಿ.''

ರೋಶನ್‌ಬೀಯಂಥ ವಿನೀತ ಮೆತ್ತಗಿನ ಹೆಂಗಸಿನಿಂದ ಈ ಮಾತು ಕೇಳಿ ಶಶಿಗೆ ಆಶ್ಚರ್ಯ : ''ಅಂದರ ? ಗಂಡನ್ನ ಬಿಟ್ಟು ಹೋಗತೀ ?''

''ಇಂವಾ ಎಂಥ ಗಂಡರೀ ಬಾಯೀ, ಒಂದಿನಾ ಹೆಂಡ್ತಿ-ಮಕ್ಕಳು ಇದ್ದಾರೋ, ಸತ್ತಾರೋ ನೋಡಲಿಕ್ಕೆ ಸುದ್ದಾ ಅವನಿಗೆ ಪುರಸೊತ್ತಿಲ್ಲ. ಇಷ್ಟ ದಿನಾ ಪಗಾರದಾಗ ಒಂದ ಪಾಲು ರೊಕ್ಕಾ ಅರೆ ನನಗ ತಂದಕೊಡತಿದ್ದಾ. ಈಗ ಅದೂ ಕೊಡವಲ್ಲ. ಎಲ್ಲಾ ಒಯ್ದು ಆ ರಂಡೀ ಹೆಣಕ್ಕ ಸುರೀತಾನ. ಏನ ಮಾಡ್ಲಿ, ನನ್ನ ನಸೀಬನs ಖೊಟ್ಟಿ. ಮದಿವ್ಯಾಗ ನಮ್ಮಣ್ಣ ಕೊಟ್ಟ ಬಂಗಾರ, ಹೊಸಾ ಅರಿವಿ, ಹಿತ್ತಾಳಿ ಭಾಂಡಿ ಎಲ್ಲಾ ಒಂದೊಂದಾಗಿ ಗಿರವೀ ಅಂಗಡಿ ಸೇರಿ ಮಾಯ ಆದವು. ಅಷ್ಟs ಅಲ್ಲದ ನಾ ಮುಂಜಾನಿಂದ ಸಂಜೀತನಕಾ ಸಾಯಬೀಳ ದುಡದು ಗಳಿಸಿದ್ದೂ ಕಸಗೋತಾನ. 'ಅಲ್ಲಾ' ಕೊಟ್ಟ ಈ ಮಕ್ಕಳಿಗೇನು ತಿನಸಲಿ ನಾನು ? ಮೂರು ಹೊತ್ತೂ ರಂಡೀ ಮನ್ಯಾಗs ಬಿದ್ದಿರತಾನ. ಇಂಥವ್ನ ತಗೊಂಡು ಏನ ಸುಡ್ತೀರಿ ?''

ಶಶಿ ಅನೇಕ ಸಲ ಕೇಳಿದ್ದ ಹಳೆಯ ಕತೆ ಅದು. ಇದೆಲ್ಲ ಅವಳಿಗೆ ಗೊತ್ತಿದ್ದದ್ದೆ.

ಅಂತೆಯೇ ಆಕೆ ಕೇಳಿದಳು, ''ಆದರ ಇದನ್ನೆಲ್ಲಾ ನೀ ಇಷ್ಟ ವರ್ಷ ಸಹನ ಮಾಡಿಕೋತನs ಬಂದೀಯಲ್ಲ. ಈಗ್ಯಾಕ ಬಿಟ್ಟು ಹೋಗ್ತೀನಿ ಅಂತಿದಿ ?''

ತುಸು ತಡೆದು ಸಂಕೋಚದ ದನಿಯಲ್ಲಿ ರೋಶನ್‌ಬಿ ಉತ್ತರಿಸಿದಳು, ''ಇಷ್ಟs ಆಗಿದ್ರ ನಾನೂ ಹೋಗ್ತಿದ್ದಿಲ್ರಿ ಬಾಯೀ ; ಈ ನನ್ನ ಗಂಡ ಯಾವಾಗರೆ ಖಾಲಿ ಕೈ ಮಾಡಿಕೊಂಡು ಹೋದರ, ಆಕಿ ಕೇಳಿದ್ದು ಆಗಿಂದಾಗ ತಂದು ಕೊಡದಿದ್ದರ, ಆ ರಂಡಿ ಮಾರಿ ತಿರಿವಿಕೊಂಡು ಕೂಡ್ತಾಳ. ಆವಾಗ ಇಂವಾ ತನ್ನ ತೆವಲು ತೀರಿಸಿಕೊಳ್ಳಿಕ್ಕೆ ನನ್ನ ಹತ್ತರ ಬರ್ತಾನ. ಆಮ್ಯಾಲ ನಾನು ಬಸರಿದ್ದಾಗ, ಹಡೆಯೋವಾಗ, ಕೂಸು ಸಣ್ಣದಿದ್ದಾಗ ನನ್ನ ಕಡೆ ತಿರುಗಿ ನೋಡಿದ್ರ ಕೇಳ್ರಿ. ನನ್ನ ನಶೀಬ ಕೆಟ್ಟದ್ದು ಬಾಯೀ. 'ಅಲ್ಲಾ' ನನಗ ಎಂಟು ಮಕ್ಕಳ್ನ ಕೊಟ್ಟಾ, ಎಲ್ಲಾ ಹೆಣ್ಣೇ ಆದ್ವು. ಅದಕ್ಕ ಬ್ಯಾರೆ ನನ್ನ ಗಂಡಗ ಸಿಟ್ಟು. ಆ ರಂಡೀಗೆ ಮೂರು ಗಂಡು ಮಕ್ಕಳಾಗ್ಯಾವಂತ ಅಕೀ ಹತ್ತರs ಹೋಗ್ತಾನ. ನೀವs ಹೇಳ್ರಿ, ಗಂಡು ಹಡಿಯೂದು ನಮ್ಮ ಕೈಯಾಗಿನ ಮಾತ ? ನಾ ಹಿಂಗ ಎಷ್ಟಂತ ಬಸರಾಗ್ಲಿ ? ಎಷ್ಟಂತ ಹಡೀಲಿ ? ಅದಕ್ಕs ಈ ಗಂಡನೂ ಬ್ಯಾಡಾ, ಅವನ ಸುಖಾನೂ ಬ್ಯಾಡಾ ಅಂತ ತವರ ಮನೀಗೆ ಹೋಗಿ ಬಿಡಬೇಕಂತ ಮಾಡೀನಿ. ದುಡದು ತಿನ್ನವ್ರಿಗೆ ಎಲ್ಲ್ಯಾದರ ಏನ್ರಿ ? ಪುಣೆದಾಗ ನಮ್ಮ ಅಣ್ಣಾ-ಅವ್ವಾ ಅದಾರ. ಪತ್ರಾ ಹಾಕ್ಸೀನಿ. ನಮ್ಮ ಅಣ್ಣಾ ಕರಿಯಾಕ ಬರ್ತಾನು. ನಾ ಹೋಗಿ ಬಿಡ್ತೀನ್ರಿ ಬಾಯೀ.''

ರೋಶನ್‌ಬಿ ಈಗ ನಾಲ್ಕಾರು ವರ್ಷಗಳ ಹಿಂದೆಯೇ ಹೀಗೆ ದಿಟ್ಟಳಾಗಿದ್ದರೆ ಸ್ವಲ್ಪ ಜನಸಂಖ್ಯೆಯಾದರೂ ಕಡಿಮೆಯಾಗುತ್ತಿತ್ತಲ್ಲ ಅನಿಸಿತು ಶಶಿಗೆ. ಹಾಗೆಯೇ ಇನ್ನು ಇಷ್ಟು ಒಳ್ಳೆಯ ಕೆಲಸದವಳು ತನಗೆ ಸಿಗಲಾರಳು ಅನ್ನಿಸಿತು.

ರೋಶನ್‌ಬೀಯ ಕರ್ಮಕತೆಯ ಬಗ್ಗೆ ಪಾಪ ಅನಿಸಿತು. ಇದು ಅವಳಂಥ ಎಷ್ಟು ಹೆಂಗಸರ ಕತೆಯೋ, ಇಂಥದಕ್ಕೆಲ್ಲ ಕೊನೆಯೇ ಇಲ್ಲವೆ ಈ ದೇಶದಲ್ಲಿ ಅನಿಸಿತು.

* * *

ಸಂಜೆ ಹೇಳಿದ್ದಂತೆ ತಿಕೀಟು ಕೊಡಲು ಶಾಂತಾ ಆಪ್ಟೆ ಬಂದಾಗ ಬಿಡುವಾಗಿದ್ದು ಬೇಸರವಾಗಿದ್ದ ಶಶಿ ಆಕೆಗೆ ಚಹಾ ಕೊಟ್ಟು ಹಾಗೆಯೇ ಹರಟುತ್ತ ಕೂತಳು. ಶಾಂತಾ ಆಪ್ಟೆ ಕಾರ್ಯದರ್ಶಿಯಾಗಿದ್ದ ಲೇಡೀಜ್ ಕ್ಲಬ್ಬಿನವರ ಕಳೆದ ವರ್ಷದ ಕಾರ್ಯಕ್ರಮಗಳ ವರದಿಯನ್ನು ಆಸಕ್ತಿಯಿಂದ ಕೇಳಿದಳು. ವಿಧವೆಯರ ಪುನರ್ನಿವೇಶನ, ಅನಾಥ ಮಕ್ಕಳಿಗೆ ಸ್ಕೂಲಿನ ಫೀ-ಬಟ್ಟೆ-ಆಹಾರ ಇತ್ಯಾದಿ ಒದಗಿಸುವುದು, ಬಡ ಜಾಣ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್ಪಿನ ವ್ಯವಸ್ಥೆ, ಕಡಿಮೆ ಖರ್ಚಿನಲ್ಲಿ ದಲಿತ ವರ್ಗದ ವಧೂವರರ ಸಾಮೂಹಿಕ ವಿವಾಹ ನಡೆಸಿದ್ದು, ಹರಿಜನರಿಗೆ ವಸತಿಗಾಗಿ ಕಾರ್ಪೊರೇಶನ್ನಿನಿಂದ ಜಾಗ ದೊರಕಿಸಿದ್ದು, ಇತ್ಯಾದಿ,

ಇತ್ಯಾದಿ.....

ಶಾಂತಾ ಆಪ್ಟೆಯ ಲೆಕ್ಕರಿಗೆ ತಡೆ ಬಂದದ್ದು ಕರೆಗಂಟೆಯ ಸದ್ದಿನಿಂದ. ಚೆಕ್‌ಅಪ್‌ಗೆ ಬಂದಿದ್ದ ಪೂರ್ಣಿಮಾ ಸಿಂಗ್ ಅಪರೂಪವಾಗಿ ಬಿಡುವಾಗಿದ್ದ ಗಂಡ ಭಾಸ್ಕರ್‌ಸಿಂಗನನ್ನೂ ಡಾಕ್ಟರ್‌ಬಾಯಿ ಹೇಳಿದ್ದಂತೆ ಆಕೆಯ ಭೇಟಿಗೆ ಕರೆತಂದಿದ್ದಳು. ಲೊಕ್ಯಾಲಿಟಿಯಲ್ಲೆಲ್ಲ ಪರಿಚಿತಳಾಗಿದ್ದ ಆಪ್ಟೆ ವಕೀಲಬಾಯಿಯನ್ನು ಸಿಂಗ್ ದಂಪತಿಗಳೂ ಬಲ್ಲವರಾದ್ದರಿಂದ ಆಕೆ ಎದ್ದು ಹೋಗದೆ ಅಲ್ಲೇ ಕೂತಳು. ಅಷ್ಟೇ ಅಲ್ಲ, ಅಲ್ಲೇ ಅವರಿಗೂ ಹತ್ತಹತ್ತು ರೂಪಾಯಿಯ ನಾಲ್ಕು ತಿಕೇಟು ಹಾಕಿದಳು. ನಂತರ ಪೂರ್ಣಿಮಾಗೆ ಕೇಳಿದಳು, "ಮುಂದಿನ ತಿಂಗಳು ಕ್ಲಬ್ಬಿನ ವಾರ್ಷಿಕೋತ್ಸವ ಅದ, ಆವಾಗ ನೀವು ದಯಮಾಡಿ ನಿಮ್ಮ ಕವಿತಾವಾಚನ ಮಾಡಬೇಕು. ಹಿಂದಕ್ಕೊಮ್ಮೆ ನೀವು ಮುಂಬಯಿಯ ಲೋಕಲ್ ಕವಿ ಸಮ್ಮೇಳನದಾಗ ಕವಿತಾ ಓದಿದ್ದು ಕೇಳಿದ್ದೆ. ಭಾಳ ಇಂಪ್ರೆಸಿವ್ಹ್ ಅನಿಸ್ತು. ನಮಗ ಈ ಸಲ ನಿರಾಶ ಮಾಡಬ್ಯಾಡ್ರಿ ನೀವು."

ಪೂರ್ಣಿಮಾಳ ಬದಲು ಆಕೆಯ ಗಂಡ ಇಂಗ್ಲೀಷಿನಲ್ಲಿ ಉತ್ತರಿಸಿದ, "ಲಗ್ನಾಗೂಕಿಂತಾ ಮೊದ್ಲ, ಆಮ್ಯಾಲ ಲಗ್ನಾದ ಮ್ಯಾಲೂ ಹೊಸದಾಗಿ ಸ್ವಲ್ಪ ದಿನ, ಖಾಲೀ ಇದ್ದಳು ಅಂತ ಅದೇನೇನೋ ರಬಿಶ್ ಬರೀತಿದ್ಳು. ಈಗ ಶೀ ಹ್ಯಾಜ್ ಬೆಟರ್ ಥಿಂಗ್ಸ್ ಟು ಲುಕ್ ಟು. ಇಂಥಾದ್ದಕ್ಕೆಲ್ಲಾ ಆಕೀಗೆ ಟೈಮೇ ಸಿಗೂದಿಲ್ಲ."

ಮುಖಭಂಗ ಮಾಡಿಸಿಕೊಂಡು ಸುಮ್ಮನಿರುವ ಹೆಂಗಸೆ ಆಪ್ಟೆ ವಕೀಲಬಾಯಿ ? "ನೋಡ್ರಿ ಮಿ. ಸಿಂಗ್, ನಿಮ್ಮ ಮಿಸೆಸ್ಸು ಟ್ಯಾಲೆಂಟೆಡ್ ಇದ್ದಾರ. ಅದನ್ನ ಅಪ್ರೀಶಿಯೇಟ್ ಮಾಡೋದು ಬಿಟ್ಟು ಹಿಂಗ ಡಿಸ್‌ಕರೇಜ್ ಮಾಡೋದು ಇಟ್ ಈಜ್ ರಾದರ್ ಅನ್‌ಜಂಟಲ್‌ಮನ್ಲೀ."

ಅನಿವಾರ್ಯವಾಗಿ ಶಶಿ ಮಧ್ಯೆ ಬಾಯಿ ಹಾಕಿ ಮಾತು ಬದಲಿಸಬೇಕಾಯಿತು : "ಅದಿರ್ಲಿ ಮಿಸ್ಟರ್ ಸಿಂಗ್, ನೀವು ಬಿಝೀ ಇರ್ತೀರಂತ ಗೊತ್ತಿದ್ದೂ ಮುದ್ದಾಂ ನಿಮ್ಮನ್ನ ಕರಕೊಂಡ ಬರ್ರಿ ಅಂತ ಯಾಕ ಹೇಳಿದ್ದೆ ಹೇಳ್ತೀನಿ, ಕೇಳ್ರಿ. ಈ ಸರೆ ಪೂರ್ಣಿಮಾಬಾಯಿಗೆ ನಾರ್ಮಲ್ ಡೆಲಿವ್ಹರಿ ಆಗ್ಲಿಕ್ಕಿಲ್ಲ. ಭಾಳ ವೀಕ್ ಆಗ್ಯಾರ...."

"ನಾರ್ಮಲ್ ಆಗ್ದಿದ್ರ ಸಿಝೇರಿಯನ್ ಮಾಡಿದ್ರಾತು. ಈಗ ಸಿಝೇರಿಯನ್ ಅಂದ್ರ ಸೀರಿಯಸ್ ಆಪರೇಶನ್ನೇ ಅಲ್ಲವಲ್ಲ" –ನಿರ್ಲಕ್ಷ್ಯವಾಗಿ ಹೇಳಿದ ಆತ, ಸಿಗರೇಟು ಸೇದುತ್ತ ಆರಾಮವಾಗಿ ಕೂತು.

"ಅದಲ್ಲ ಪ್ರಶ್ನಿ ಈಗ. ಅವರಿಗೆ ಪಾಪ ಪ್ರೆಗ್ನೆನ್ಸಿ ಬೇರ್ ಮಾಡೋವಷ್ಟು ಶಕ್ತಿನೇ ಉಳಿದಿಲ್ಲ ಈ ಸಲ. ಅದಕ್ಕ ಡಿ & ಸಿ ಮಾಡಿಸಿದ್ರು...." –ಡಾಕ್ಟರ್‌ಳನ್ನು ಅಲ್ಲೇ ತಡೆದು ಆತನೆಂದ, "ಹೆಂಗಸಾಗಿ ಪ್ರೆಗ್ನೆನ್ಸಿ ಬೇರ್ ಮಾಡೋ ಶಕ್ತಿ ಇಲ್ಲ ಅಂದ್ರ

ಏನ್ರೀ ಡಾಕ್ಟರ್ ? ಏನರೆ ಗುಳಿಗೀ ಔಷಧ ವಗೈರೆ ಕೊಡ್ರಿ. ಖರ್ಚು ಬೇಕಾದಷ್ಟಾಗ್ಲಿ. ನಾ ಕೊಡ್ಲಿಕ್ಕೆ ತಯಾರಿದ್ದೀನಿ. ಏನು ಮಹಾ, ಒಂಬತ್ತು ತಿಂಗಳು ಆಡಾಡತಾ ಕಳೆದು ಹೋಗ್ತಾವ."

ಉಗುಳು ನುಂಗಿ ಶಶಿ ಅಂದಳು, "ಒಳ್ಳೇದು, ಈ ಒಂದು ಸಲ ಏನಾದರೂ ಮಾಡೋಣಂತ. ಆದರ ಒಟ್ಟಿನ ಮ್ಯಾಲ ಅವ್ರು ಭಾಳ ವೀಕ್ ಆಗ್ಯಾರ. ಇನ್ನ ಮುಂದ ಚೈಲ್ಡ್ ಬೇರಿಂಗ್ ಅವ್ರಿಗೆ ಆಗೋದಿಲ್ಲ. ಫೇಟಲ್ ಆದೀತು. ಅದಕ್ಕ ನೀವು ವ್ಯಾಸೆಕ್ಟಮಿ ಮಾಡಿಸಿಕೊಳ್ಳೋದು ಚಲೋ."

—"ಏನಂದ್ರಿ ?" ಸಿಂಗ್ ಕುರ್ಚಿಯಲ್ಲಿ ಪುಟಿದೆದ್ದ : "ಅದೆಲ್ಲಾ ನನ್ನ ಟೆಂಪರಮೆಂಟ್‌ಗೆ ಸೂಟ್ ಆಗೋದಿಲ್ಲ. ಆಪರೇಶನ್ನು-ಸುಡುಗಾಡು ಏನು ಮಣ್ಣಿದ್ರೂ ಆಕಿಗೇ ಮಾಡ್ರಿ. ನನಗ ಅದಕ್ಕೆಲ್ಲಾ ಟೈಮಿಲ್ಲ. ಇಷ್ಟಕ್ಕs ನನ್ನ ಕರೆಸಿದ್ರಾ ? ಹಂಗಾರ ಥ್ಯಾಂಕ್ಸ್ ಡಾಕ್ಟರ್ ; ನಾ ಇನ್ನ ಬರ್ತೀನಿ." —ಕೈಯಲ್ಲಿನ ಸಿಗರೇಟನ್ನು ನೆಲದ ಮೇಲೆ ಎಸೆದು ಬೂಟುಗಾಲಿನಿಂದ ಹೊಸಕಿ ಹಿಂದಿರುಗಿ ನೋಡದೆ ಹೊರಟೇ ಹೋದ ಭೂಪ.

"ಇವ್ರಿಗೆ ಸಿಟ್ಟು ಬಂತು ಕಾಣಸ್ತದ ಡಾಕ್ಟರ್, ಪ್ಲೀಜ್ ಎಕ್ಸ್‌ಕ್ಯೂಜ್ ಮಿ," ಅನ್ನುತ್ತ ಆತನ ವಿಧೇಯ ಹೆಂಡತಿ, ಸಂಕೋಚದ ಮುದ್ದೆಯಾಗಿ ಕಾತರದಿಂದ ಆತನನ್ನು ಹಿಂಬಾಲಿಸಿದಳು.

—ಸುರುವಾಯಿತು ಶಾಂತಾ ಆಪ್ಟೆಯ ಫೂತ್ಕಾರ : 'ಇವನೇನು ಮನುಷ್ಯನೇ ಮೃಗವೇ ? ಇಷ್ಟು ಕಲಿತು— ಮಾಡಿ ಇವಳೇಕೆ ಹೀಗೆ ಮೂಕ ಕುರಿಯಂತಾಗಿರಬೇಕು ? ಇವನ ಶ್ರೀಮಂತಿಕೆ, ದೊಡ್ಡಸ್ತನಕ್ಕಿಷ್ಟು ಬೆಂಕಿ ಬೀಳs.... ಹೆಂಡತಿ ಅಂದರೆ ಇಂಥವರ ಪಾಲಿಗೆ ಸಾಕಿದ ನಾಯಿಗಿಂತಲೂ ಕಡೆಯಾದಳಲ್ಲ.... ಇದು ಹೆಂಗಸರದೇ ತಪ್ಪಲ್ಲವೆ ಡಾಕ್ಟರ್ ಬಾಯೀ ? ಇಷ್ಟು ಅತ್ಯಾಚಾರ ಯಾಕೆ ಹೀಗೆ ಸಹಿಸಬೇಕು ? ಇವರಿಗೇನು ಸ್ವಂತ ವ್ಯಕ್ತಿತ್ವವಿಲ್ಲವೆ ? ವಿಚಾರಗಳಿಲ್ಲವೆ ? ಇವರ ಭಾವನೆಗಳಿಗೆ ಏನೂ ಕಿಮ್ಮತ್ತಿಲ್ಲವೆ ? ನಾನಾಗಿದ್ದಿದ್ದರೆ ಇವನ ಕಾರು-ಬಂಗ್ಲೆ-ಬಂಗಾರ-ರೇಷ್ಮೆಸೀರೆ-ಬ್ಯಾಂಕ್ ಬ್ಯಾಲೆನ್ಸು ಎಲ್ಲ ಎಡಗಾಲಲ್ಲಿ ಒದ್ದು ಬಿಟ್ಟು ಹೋಗಿಬಿಡುತ್ತಿದ್ದೆ...."

ಇವಳೊಮ್ಮೆ ಮಾತು ನಿಲ್ಲಿಸಿ ಎದ್ದು ಹೋದರೆ ಸಾಕು ಅನ್ನಿಸಿತು ಶಶಿಗೆ.

* * *

ಇತ್ತೀಚೆಗೆ ಕಮಲಾಳ ಡಾಯರಿಯ ಕೆಲವಾರು ಪುಟಗಳನ್ನಾದರೂ ಓದದಿದ್ದರೆ ಶಶಿಗೆ ರಾತ್ರಿ ನಿದ್ದೆಯೇ ಬರುವುದಿಲ್ಲ.

ಅದರಲ್ಲಿನ ಬಹುಪಾಲು ವಿಷಯ ಶಶಿಗೆ ಗೊತ್ತಿದ್ದದ್ದೇ. ಆದರೂ ಕಮಲಾನ

ಕಣ್ಣಿನಿಂದ ಅವಲೋಕಿಸಿದಾಗ ಎಲ್ಲ ಸಂಗತಿಗಳು ಬೇರೆಯೇ ಬೆಳಕಿನಲ್ಲಿ ಕಾಣತೊಡಗಿದ್ದವು. ಶಿವಮೂರ್ತಿಯ ಜೊತೆ ಕಮಲಾ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದು, ಕನ್ನಡ ಹಾಗೂ ಮರಾಠಿ ಎರಡೂ ರಂಗಭೂಮಿಗಳ ಅಭಿಮಾನಿಗಳಿಂದ ಶ್ರೇಷ್ಠ ಅಭಿನೇತ್ರಿಯೆಂದು ಹೆಸರು ಗಳಿಸಿದ್ದು, ಅವಳಿಗೆ ಬಂದ ಹಲವಾರು ಬಹುಮಾನಗಳು. ಸಂದ ಮಾನ-ಸನ್ಮಾನಗಳು, ಮತ್ತು ನಂತರ ಹಿಂದಿ ಚಿತ್ರವೊಂದರಲ್ಲಿ ನಟಿಸಲು ಪ್ರಸಿದ್ಧ ನಿರ್ಮಾಪಕರೊಬ್ಬರಿಂದ ಅವಳಿಗೆ ಬಂದ ಕರೆ, ಅವಳ ಭವಿಷ್ಯದ ದಿಕ್ಕನ್ನೇ ಬದಲಿಸಿ ಅವಳಿಗೆ ಪ್ರಸಿದ್ಧಿ-ಹಣ ಎರಡೂ ತಂದುಕೊಡಬಹುದಾಗಿದ್ದ ಅವಕಾಶ, ಅದರಿಂದ ಅವಳಿಗಾದ ಆನಂದ-ಅಭಿಮಾನ.... ಆದರೆ ಆಕಸ್ಮಿಕವಾಗಿ ಶಿವಮೂರ್ತಿಯಿಂದ ಅದಕ್ಕೆ ತಡೆ, ಆಕೆ ಸಿನಿಮಾ ಸೇರಕೂಡದೆಂದು ಖಂಡತುಂಡವಾದ ನಿರ್ಬಂಧ....

> ''–ಎಷ್ಟೋ ವರ್ಷಗಳಿಂದ ನಾನು ಕಾಯುತ್ತಲಿದ್ದ ಅವಕಾಶ ಬಂದಿರುವಾಗ ಮೂರ್ತಿ ಯಾಕೆ ಬೇಡ ಅನ್ನುತ್ತಾನೋ. ನನಗೆ ಹೆಸರು, ಹಣ ಬರುವುದಾದರೆ ಆತ ಅಭಿಮಾನ ಪಡಬೇಡವೆ ? ಆತನಿಗೇಕೆ ಈ ಹಟ ? ಎಷ್ಟು ಪ್ರಯತ್ನಿಸಿದರೂ ಆತನ ಮನಸ್ಸು ಬದಲಿಸುವುದು ಆಗಲೊಲ್ಲದು. ಹಿಂದೆಲ್ಲ ನಾನು ಏನು ಹೇಳಿದರೂ, ಕೇಳಿದರೂ ಹಿಂದು-ಮುಂದು ನೋಡದೆ ಒಪ್ಪಿಬಿಡುತ್ತಿದ್ದವನು ಈಗೀಗ ನನ್ನ ಎಲ್ಲ ಮಾತು-ಕತೆ, ನಡೆ-ನುಡಿಗಳಲ್ಲಿ ತಪ್ಪು ಕಾಣತೊಡಗಿದ್ದಾನೆ. ನಾನು ಏನು ಮಾಡುವೆನೆಂದರೂ ಬೇಡ. ಎಲ್ಲಿಗೆ ಹೋಗುವೆನೆಂದರೂ ಬೇಡ. ನನಗೆನಿಸುತ್ತದೆ– ಆತನಿಗೆ ನನ್ನ ಮೇಲೆ ಎಂಥದೋ ಅನುಮಾನ. ಪಾರ್ಟಿಗಳಲ್ಲಿ ಬೇರೆ ಯಾರಾದರೂ ನನ್ನನ್ನು ಮಾತಾಡಿಸಿದರೆ ಆತನಿಗೆ ಸಿಟ್ಟು ಬರುತ್ತದೆ. ತೀರ ಅವಶ್ಯವಿದ್ದಾಗ ಸಹ, ರಿಹರ್ಸಲ್ ನಡೆದಾಗ, ಸಹನಟರೊಂದಿಗೆ ನಾನು ಮಾತಾಡಿದರೆ ಆತನ ಕಣ್ಣು ಕೆಂಪಾಗುತ್ತವೆ. ಮಾತು ಮಾತಿಗೆ 'ನಾನು ನಿನಗಾಗಿ ಎಷ್ಟು ತ್ಯಾಗ ಮಾಡಿದೆ, ನಿನಗದರ ಬೆಲೆಯೇ ಇಲ್ಲ' ಅನ್ನುತ್ತಾನೆ. ಆತ ನನಗಾಗಿ ತನ್ನ ಹೆಂಡತಿ-ಮಕ್ಕಳನ್ನೇನೂ ಬಿಟ್ಟಿಲ್ಲ. ಬಿಡಲಿ ಅಂತ ನಾನೆಂದೂ ಬಯಸಲೂ ಇಲ್ಲ. ಆತ ಇರುವುದು ಸಹ ಅವರೊಂದಿಗೆ. ಆತನ ದುಡಿಮೆಯ ಹಣವೆಲ್ಲ ಎಂದಿನಂತೆ ಅವರಿಗಾಗಿಯೇ. ಆತ ಸಿನೆಮಾ-ಪಿಕ್‌ನಿಕ್ಕುಗಳಿಗೆ, ದೂರದ ಪ್ರವಾಸಗಳಿಗೆ-ಊರಲ್ಲಿನ ಇತರ ಎಲ್ಲ ಸಾರ್ವಜನಿಕ ಕಾರ್ಯಕ್ರಮಗಳಿಗೆ ಹೋದಾಗ ಆತನಿಗೆ ಜೊತೆಯಾಗಿರುವವರು ಆ ಹೆಂಡತಿ, ಆಕೆಯ ಮಕ್ಕಳು. ವಾರದಲ್ಲಿ ಒಂದು ದಿನವೋ, ಬಹಳವಾದರೆ ಎರಡು ದಿನವೋ ಬಿಡುವಿದ್ದಾಗ ಮಾತ್ರ ಆತ ನನ್ನೊಂದಿಗೆ ಕಳೆಯುವುದು. ಹೀಗಿದ್ದಾಗ....

—ಜಾತಿ-ಕುಲ ಬಿಟ್ಟು ಈತನನ್ನು ಲಗ್ನವಾಗಿದ್ದಕ್ಕೆ ಬಂಧು-ಬಳಗ, ಸ್ನೇಹಿತರು-ಪರಿಚಿತರು ಎಲ್ಲರಿಂದ ದೂರವಾದವಳು ನಾನು. ರಂಗದ ಮೇಲೆ ನನ್ನ ಅಭಿನಯ ನೋಡಿ ಹೊಗಳುವ ಜನ ಹಿಂದೆ ನನ್ನ ಬಗ್ಗೆ ಆಡಿಕೊಳ್ಳುತ್ತಾರೆ. ನನ್ನ ಮನೆಯಲ್ಲಿ, ಈ ಗೂಡಿಗೆ ಮನೆ ಅನ್ನುವುದಾದರೆ, ಯಾವ ಹಬ್ಬಹರಿದಿನಗಳೂ ನಡೆಯುವುದಿಲ್ಲ ; ಗೌರಿ-ಗಣೇಶರ ಪೂಜೆಗೆ ಇಲ್ಲಿ ಅರಿಷಿಣ ಕುಂಕುಮಕ್ಕೆಂದು ಯಾವ ಮುತ್ತೈದೆಯೂ ಬರುವುದಿಲ್ಲ ; ಯಾವ ಅತಿಥಿ-ಅಭ್ಯಾಗತರೂ ಇಲ್ಲಿ ಬಂದು ಇದ್ದು ಉಪಚಾರ ಪಡೆಯುವಂತಿಲ್ಲ ; ನಾನೆಂದೂ ಗಂಡನೆನ್ನುವವನನ್ನು ಸೀರೆಗಾಗಿ, ಒಡವೆಗಾಗಿ, ಸಿನೆಮಾಕ್ಕಾಗಿ, ಸಂಜೆ ವಾಕಿಂಗಿಗಾಗಿ, ಯಾತಕ್ಕಾಗಿಯೂ ಕಾಡಿಸಿ ಪೀಡಿಸುವ ಸುಖದ ಅನುಭವ ಪಡೆದಿಲ್ಲ.... ಯಾರ ತ್ಯಾಗ ದೊಡ್ಡದು ?"

ಐದಾರು ವರ್ಷಗಳ ಹಿಂದಿನ ದಿನಗಳು ಅವು. ಕಮಲಾ ಮಾನಸಿಕವಾಗಿ ಬಹಳ ಹಿಂಸೆಯನ್ನನುಭವಿಸುತ್ತಿದ್ದಿರಬೇಕು ಆಗ. ಶಶಿಗೆ ನೆನಪಿದೆ, ಆ ದಿನಗಳಲ್ಲಿ ಕಮಲಾ ಬಹಳ ಎನೀಮಿಕ್ ಆಗಿದ್ದಳು. ಶಶಿ ಅನೇಕ ಸಲ ಒತ್ತಾಯಿಸಿದ ನಂತರ ಕೊನೆಗೊಮ್ಮೆ ಅವಳೊಂದಿಗೆ ದೊಡ್ಡಾಸ್ಪತ್ರೆಗೆ ಹೋಗಿ ಪೂರಾ ಪರೀಕ್ಷೆ ಮಾಡಿಸಿಕೊಳ್ಳಲು ಒಪ್ಪಿದ್ದಳು. ಆಗ ಆಕೆಯ ಹೊಟ್ಟೆಯಲ್ಲಿ ಟ್ಯೂಮರ್ ಬೆಳದಿದೆಯೆಂದೂ ತಕ್ಷಣ ಆಪರೇಶನ್ ಮಾಡಿ ತೆಗೆಯಬೇಕೆಂದೂ ಗೊತ್ತಾಯಿತು. ಕಮಲಾ ಯಾಕೋ ದವಾಖಾನೆ-ಡಾಕ್ಟರುಗಳಿಗೆ ಮೊದಲಿನಿಂದಲೂ ಹೆದರುತ್ತಿದ್ದಳು. ಆಪರೇಶನ್ನಿನ ಹೆಸರು ಕೇಳಿಯಂತೂ ಎದೆ ಒಡೆದುಕೊಂಡು ಬಿಟ್ಟಿದ್ದಳು. ಶಶಿ ಎಷ್ಟು ಹೇಳಿದರೂ ಆಕೆಯ ಹೆದರಿಕೆ ಕಡಿಮೆಯಾಗಲಿಲ್ಲ. ಕೊನೆಗೆ ಆಪರೇಶನ್ ಆಗುವವರೆಗೂ ಶಿವಮೂರ್ತಿ ಆಕೆಯ ಹತ್ತಿರವೇ ಇರುತ್ತೇನೆಂದು ಮಾತುಕೊಟ್ಟ ನಂತರ ಆಕೆ ಒಪ್ಪಿದ್ದಳು. ಶಶಿಗೆ ಆಶ್ಚರ್ಯವೆನ್ನಿಸಿತ್ತು— ಎಂಥೆಂಥ ಡಾಕ್ಟರುಗಳಿಗಿಂತ ಈ ಶಿವಮೂರ್ತಿ ಹೆಚ್ಚಿನ ಔಷಧವಾದನಲ್ಲ ಈಕೆಯ ಜಡ್ಡಿಗೆ ಅಂತ. ಶಿವಮೂರ್ತಿಯ ಸಾಮೀಪ್ಯ ಮಾತ್ರದಿಂದ ಕಮಲಾಗೆ ಎಂತಹ ಧೈರ್ಯ-ಸಮಾಧಾನ ಅನಿಸುತ್ತಿತ್ತೆಂದು ಶಶಿಗೆ ಆಗ ಕಲ್ಪನೆಗೂ ನಿಲುಕದ ವಿಷಯವಾಗಿತ್ತು :

"ಮೂರ್ತಿ ನನ್ನ ಹತ್ತಿರ ಇದ್ದರೆ ಸಾಕು. ನಾನು ಸತ್ತರೂ ಚಿಂತೆಯಿಲ್ಲ. ಆದರೆ ಮೂರ್ತಿ ಇಲ್ಲದೆ ಆಪರೇಷನ್ ನಡೆದು ಒಂದು ವೇಳೆ ಏನಾದರೂ ಹೆಚ್ಚುಕಮ್ಮಿ ಆದರೆ ಕೊನೆ ಗಳಿಗೆಯಲ್ಲಿ ಮೂರ್ತಿಯ ಮುಖ ನೋಡದೇ ನಾನು ಸಾಯಬೇಕಾದರೆ ಸತ್ತ ನಂತರವೂ ನಾನು ಅತೃಪ್ತಳಾಗಿರಬೇಕಾಗುತ್ತದೆ. ಮೂರ್ತಿ ಬಳಿಯಿದ್ದಾಗ ಸಾವು ಬಂದರೂ ಸ್ವಾಗತಿಸಲು ನಾನು ಸಿದ್ಧಳು."

ಶಶಿ ಕೇಳಿದಾಗ ಶಿವಮೂರ್ತಿ ಆತಂಕದ ಧ್ವನಿಯಲ್ಲಿ ಅಂದಿದ್ದ, "ನಾ ಅವಶ್ಯ ಆಕೀ ಹತ್ತರ ಇರ್ತೀನಿ ಡಾಕ್ಟರ, ಆಕೀ ಸಮಾಧಾನನs ನನಗ ಮುಖ್ಯ."

ಆದರೆ ಬಹುಶಃ ವಸ್ತುಸ್ಥಿತಿ ಹಾಗಿರಲಿಲ್ಲ. ಕಮಲಾನ ಸುಖ-ಸಮಾಧಾನಗಳಿಗಿಂತಲೂ ಮುಖ್ಯವಾದ ಇತರ ವಿಷಯಗಳೂ ಇದ್ದವು ಆತನಿಗೆ :

"ಇವತ್ತು ಮೂರ್ತಿ ಹೇಳಿದ– ಆತನಿಗೇನೋ ಬೇರೆ ಅರ್ಜೆಂಟ್ ಕೆಲಸಕ್ಕಾಗಿ ಪುಣೆಗೆ ಹೋಗಬೇಕಾಗಿದೆ, ಬಹುಶಃ ಮಗಳಿಗೆ ವರ ನೋಡಲು ಇರಬೇಕು, ಆಪರೇಶನ್ ಇದ್ದ ದಿನ ಆತನಿಗೆ ಇಲ್ಲಿರಲಾಗುವುದಿಲ್ಲ, ಏನಾದರೂ ಬೇರೆ ವ್ಯವಸ್ಥೆ ಮಾಡಿಕೋ, ಬೇಕಾದರೆ ಊರಿನಿಂದ ನಿನ್ನ ಅತ್ತಿಗೆಯನ್ನು ಕರೆಸಿಕೋ, ಅಂದ.

"ಅತ್ತಿಗೆಗೇಕೆ ತೊಂದರೆ ಅಂತ ನಾನಂದಾಗ ಆತನಿಗೆ ವಿಪರೀತ ಸಿಟ್ಟು ಬಂತು : 'ಹೌದು, ನಿನ್ನವರಿಗೆ ಯಾರಿಗೂ ತೊಂದರೆ ಆಗಬಾರದು, ನನಗೆ ಮಾತ್ರ ಎಷ್ಟು ತೊಂದರೆಯಾದರೂ ಅಡ್ಡಿಯಿಲ್ಲ ಅಲ್ಲವೆ ? ನನ್ನ ಚಿಂತೆಗಳ, ಜವಾಬ್ದಾರಿಗಳ, ಕರ್ತವ್ಯಗಳ ಬಗ್ಗೆ ಎಂದಾದರೂ ಯೋಚಿಸಿದ್ದೀಯಾ ? ಸದಾ ನಾನು ನಿನ್ನ ಸೇವೆಗೆ ಸಿದ್ಧನಿರಬೇಕಾದ ಗುಲಾಮ ಅಂತ ತಿಳಿದಿರುವಿ ! ನನಗಾಗುವುದಿಲ್ಲ. ಏನಾದರೂ ಮಾಡಿಕೋ. ಇಷ್ಟಕ್ಕೂ ಇಂಥ ಆಪರೇಶನ್ನು ದಿನಾ ನೂರು ಮಾಡುತ್ತಾರೆ ಡಾಕ್ಟರು. ಏನಾಗುತ್ತದೆ ಇಷ್ಟು ಫಸ್ ಮಾಡಲು ? ಶಶಿ ಡಾಕ್ಟರು ಇದ್ದೇ ಇರುತ್ತಾರಲ್ಲ ನಿನ್ನ ಜೊತೆಗೆ ? ನಾನೇ ಯಾಕೆ ಬೇಕು ಅಂತ ? ಬರೇ ಫಾಲ್ಸ್ ಪ್ರೆಸ್ಟೀಜ್ ಸಲುವಾಗಿ, 'ನೋಡ್ರಿ, ನನ್ನ ಗಂಡ ಹೇಗೆ ನನ್ನ ಕಾಲಕಸದ ಹಾಗಿದ್ದಾನೆ' ಅಂತ ಮಂದಿಯ ಮುಂದೆ ತೋರಿಸಿಕೊಳ್ಳುವ ಸಲುವಾಗಿ ! ಆಯ್ ಹೇಟ್ ದಿಸ್.'

"ಓಹ್, ಯಾಕೆ ಈತ ನನ್ನನ್ನು ಇಷ್ಟು ತಪ್ಪು ತಿಳಿಯುತ್ತಾನೆ ? ನನಗೆ ಯಾರಿಗೂ ಏನೂ ತೋರಿಸಬೇಕಾಗಿಲ್ಲ, ಆದರೆ ಈತನ ಸಾನ್ನಿಧ್ಯ ಮಾತ್ರ ಬೇಕು, ಈತನ ಕಷ್ಟ-ಸುಖಗಳ ಬಗ್ಗೆ ನಾನು ಹಗಲಿರುಳು ಚಿಂತಿಸುತ್ತೇನೆ, ಅಂತೆಲ್ಲ ಈತನಿಗೇಕೆ ತಿಳಿಯುವುದಿಲ್ಲ ? ಇಷ್ಟಕ್ಕೂ ನನ್ನ ಆರೈಕೆ-ಕಾಳಜಿಯೂ ಈತನದೇ ಜವಾಬ್ದಾರಿ ಅಲ್ಲವೆ ? ಕರ್ತವ್ಯ ಅಲ್ಲವೆ ?

"ಹೋಗಲಿ. ಈತನ ಮನಸ್ಸಿನ ವಿರುದ್ಧ ಏನೂ ಮಾಡುವುದು ಬೇಡ. ತನ್ನ ಜವಾಬ್ದಾರಿ ನಿರ್ವಹಿಸಲು ಈತ ಪುಣೆಗೆ ಹೋಗಲಿ. ನನಗೆ ಏನ ಾದರೇನು ? ಬದುಕಿ ಉಳಿದರೆ ಮತ್ತೆ ಈತನ ಎದೆಯಲ್ಲಿ ಮುಖ ಹುದುಗಿಸಿ ಎಲ್ಲ ಮರೆಯಲು ಪ್ರಯತ್ನಿಸುತ್ತೇನೆ. ಸತ್ತರೆ ಚಿಂತೆ ಕಳೆಯಿತು."

ಇಷ್ಟೆಲ್ಲಾ ನಡೆದ ನಂತರ ಕಮಲಾನ ಆಪರೇಶನ್ ಇದ್ದ ದಿನ ಶಿವಮೂರ್ತಿ ಪುಣೆಗೆ ಹೋಗದೆ ನೇರವಾಗಿ ಹಾಸ್ಪಿಟಲಿಗೇ ಬಂದಿದ್ದ. ಆಪರೇಶನ್ ಆದ ನಂತರ ಕಮಲಾನನ್ನು ಸ್ಪೆಶಲ್ ರೂಂನಲ್ಲಿ ತಂದು ಮಲಗಿಸಿದಾಗ ಶಶಿಯೂ ಅಲ್ಲೇ ಇದ್ದಳು. ಶಿವಮೂರ್ತಿಯನ್ನು ನೋಡಿ ಕಮಲಾಳ ಮುಖ ಒಮ್ಮೆಲೆ ಅರಳಿತ್ತು : 'ಯಾಕ ಮೂರ್ತಿ, ಪುಣೇಕ್ಕ ಹೋಗ್ಲಿಲ್ಲೇನು ?'

'ಇಲ್ಲ ಕಮಲಾ, ಎರಡು-ಮೂರು ದಿವಸದಿಂದ ಮನ್ಯಾಗ ಆಕೀಗೆ ಭಾಳ ನೆಗಡಿ-ಕೆಮ್ಮು ಬಂದದ. ಆಕೀಗೆ ಆರಾಮಿಲ್ಲದಾಗ ಹ್ಯಾಂಗ ಬಿಟ್ಟುಹೋಗೋದು ಅಂತ ಕ್ಯಾನ್ಸಲ್ ಮಾಡಿದೆ' ಅಂದ ಆತ. ಅರಳಿದ ಮುಖ ಒಮ್ಮೆಲೇ ಬಾಡಿತ್ತು. ಕಾರಣ ಶಶಿಗೆ ತಿಳಿದದ್ದು ಈಗಲೇ.

"ನನಗನಿಸುತ್ತಿದೆ, ಮೂರ್ತಿ ನನ್ನನ್ನು ಅಲಕ್ಷಿಸುತ್ತಿದ್ದಾನೆ. ಆತನಲ್ಲಿ ಮೊದಲಿನ ಆ ಆರಾಧಕ ಭಾವ, ತನ್ಮಯತೆ, ಉತ್ಕಟತೆ, ಉನ್ಮಾದ ಉಳಿದಿಲ್ಲ. ಇದು ಸಹಜ ಕ್ರಿಯೆಯಾಗಿರಬಹುದು. ಆದರೆ ನನ್ನ ಮಟ್ಟಿಗೆ ಸಹಿಸಲು ಅಸಾಧ್ಯವಾದ ಸತ್ಯ. ನಾನು ಬದುಕಿದ್ದು ಆತನ ಪ್ರೀತಿಯ ಉತ್ಕಟತೆಯ ಆಧಾರದ ಮೇಲೆ. ಅದೇ ಕುಸಿಯತೊಡಗಿದರೆ ನಾನು ಪೂರಾ ಮುಳುಗಿ ಹೋದಂತೆ. ದೇವರೆ, ನನಗಿನ್ನೇನೂ ಬೇಡ, ಆದರೆ ಮೂರ್ತಿ ನನ್ನ ಪಾಲಿಗೆ ಎಂದೆಂದೂ ಬದಲಾಗದಿರಲಿ."

* * *

ಅಂದು ರಾತ್ರಿ ಸುಮಾರು ಹತ್ತು ಗಂಟೆಯ ಹೊತ್ತಿಗೆ, ಇನ್ನೇನು ಪೇಶಂಟ್ಸ್ ಬರಲಿಕ್ಕಿಲ್ಲ, ಊಟ ಮಾಡಿ ಮಲಗೋಣವೆಂದುಕೊಂಡು ಶಶಿ ಏಳುವಷ್ಟರಲ್ಲಿ, ತೆರೆದೇ ಇಟ್ಟಿದ್ದ ಮುಂಬಾಗಿಲಿನಿಂದ ಲೀಲಾ ಕುಲಕರ್ಣಿ ನಿಶಬ್ದವಾಗಿ ಒಳಬಂದಳು.

"ಹಲೋ ಲೀಲಾ, ಇದೇನು ಇಷ್ಟೊತ್ತಿನ್ಯಾಗ" ಅಂತ ಶಶಿ ಅನ್ನುವುದರೊಳಗೆ ಧಾವಿಸಿ ಅವಳೆಡೆ ಬಂದ ಲೀಲಾ ಅವಳ ಕಾಲಬಳಿ ಕುಸಿದು ಅಳಲಾರಂಭಿಸಿದಳು. "ಏನಾತು ಲೀಲಾ ? ಹಿಂಗ್ಯಾಕ ಒಮ್ಮಿಗಿಲೆ–" ಅಂತ ಅವಳನ್ನು ಎಬ್ಬಿಸಲೆತ್ನಿಸಿದ ಶಶಿಯನ್ನು ತಡೆದು ಬಿಕ್ಕುತ್ತ ಲೀಲಾ ಮಾತನಾಡಿದಳು, "ನಾ ಹಾಳಾದೆ ಡಾಕ್ಟರ್, ಘಾತ ಆತು, ನಾ ದೊಡ್ಡ ಡಿಫಿಕಲ್ಟಿಯೊಳಗಿದ್ದೀನಿ.... ನನ್ನ ಏನಾರೆ ಮಾಡಿ ಪಾರು ಮಾಡಬೇಕು ನೀವು.... ಇಲ್ದಿದ್ರ ನಾ ಉಳಿಯಾಂಗಿಲ್ಲ...." ಅಳುತ್ತ ಮಾತನಾಡುತ್ತಿದ್ದ ಲೀಲಾಳನ್ನು ಬಲವಂತವಾಗಿ ಎತ್ತಿ ಸೋಫಾದ ಮೇಲೆ ಕೂಡ್ರಿಸಿದ ಶಶಿಯ ಅನುಭವಿಕ ಕಣ್ಣು ಲೀಲಾನನ್ನೊಮ್ಮೆ ಮೇಲಿನಿಂದ ಕೆಳಗಿನ ವರೆಗೆ ನೋಡಿ ಅಳೆಯಿತು. ಆಕೆ ಲೀಲಾನನ್ನು ಸಂತವಿಸುವ ಆದರೂ ನಿರ್ವಿಕಾರವಾದ ಧ್ವನಿಯಲ್ಲಿ ಹೇಳಿದಳು, "ನಿನ್ನ ಡಿಫಿಕಲ್ಟಿ ಏನಂತ ನನಗ ಗೊತ್ತಾತು ಬಿಡು. ಅದನ್ನ ಪರಿಹಾರ ಮಾಡಲಿಕ್ಕೂ ಬಂದೀತು.

ಆದರ ಇದಕ್ಕ ನಿನ್ನ ತಂದಿ ಅಥವಾ ಕಡೀಕೆ ತಾಯೀದರೆ ಒಪ್ಪಿಗೆ ಬೇಕು. ಡಾಕ್ಟರು ಹಾಂಗ ರಿಸ್ಕ್ ತಗೋಳ್ಳಿಕ್ಕೆ ಬರೂದಿಲ್ಲ.''

''ನೀವು ನನ್ನ ಪಾಲಿಗೆ ಬರೇ ಡಾಕ್ಟರ್ ಅಲ್ಲ, ನನ್ನ ಹಿರೇ ಅಕ್ಕ ಅಂತ ತಿಳಕೊಳ್ರಿ. ನೀವs ಏನರೆ ವ್ಯವಸ್ಥಾ ಮಾಡ್ರಿ ಡಾಕ್ಟರ್, ಮನ್ಯಾಗ ಗೊತ್ತಾದರ ಮರ್ಯಾದೀ ಹೋತು ಅಂತ ಎದೀ ಒಡಕೋತಾರ. ನಮ್ಮ ಅಣ್ಣಾ ನನ್ನ ಕುತಿಗೇನೇ ಹಿಚಿಕಿ ಬಿಡ್ತಾನ. ಪ್ಲೀಜ್ ಡಾಕ್ಟರ್. ನೀವು ಆಗೋದಿಲ್ಲ ಅಂದ್ರ ನಾ ವಿಷಾ ತಗೊಂಡು ಪ್ರಾಣಾ ಬಿಡ್ತೇನಿ. ನನ್ನ ಪಾಲಿಗೆ ಬ್ಯಾರೇ ಹಾದೀನs ಉಳದಿಲ್ಲ.''

ಶಶಿ ಗಂಭೀರಳಾದಳು. ಅಜ್ಞಾನಿ, ಅನನುಭವಿ, ಅಧೈರ್ಯದ ಈ ಹುಡುಗಿ ನಿಜವಾಗಿಯೂ ವಿಷ ತೆಗೆದುಕೊಂಡರೂ ಆಶ್ಚರ್ಯವಿಲ್ಲ ಅನಿಸಿತು ಆಕೆಗೆ. ಬಹಳವಾದರೆ ಇಪ್ಪತ್ತೆರಡು ವರ್ಷವಿರಬೇಕು ಲೀಲಾಗೆ. ಬಿ. ಕಾಮ್. ಹಾಯ್ ಸೆಕೆಂಡ್ ಕ್ಲಾಸಿನಲ್ಲಿ ಪಾಸಾದಳೆಂದು ಬ್ಯಾಂಕಿನಲ್ಲಿ ನೌಕರಿ ಸಿಕ್ಕಿತ್ತು. ತಂದೆ-ತಾಯಿ ನಾಲ್ಕು ಮಕ್ಕಳ ಸಂಸಾರಕ್ಕೆ ತಂದೆಯ ಪೆನ್ಶನ್ನಿನ ಹಣ ಸಾಕಾಗುತ್ತಿರಲಿಲ್ಲವಾದ್ದರಿಂದ, ಹಿರಿಯ ಮಗ ಉಂಡಾಡಿಯಾಗಿ ಮನೆತನಕ್ಕೆ ನಿರುಪಯೋಗಿಯಾದುದರಿಂದ, ಎರಡನೆಯವಳಾದ ಲೀಲಾ ಈ ನೌಕರಿ ಮಾಡಿ ಮನೆಯನ್ನು ತೂಗಿಸುವುದು ಅತ್ಯವಶ್ಯವಾಗಿತ್ತು. ತನ್ನ ಹೊಣೆ ಅರಿತ ಕರ್ತವ್ಯಶೀಲ ಹುಡುಗಿ ಆಕೆ. ಹೀಗೇಕೆ ಜಾರಿದಳು ? ಏನಾದರೂ ಪ್ರೇಮ ಪ್ರಕರಣವಿರಬಹುದೆ ? ಏನಿದ್ದರೂ ಮೊದಲೇ ಹೀಗೆಲ್ಲ ಆಗದಂತೆ ಜಾಗ್ರತೆ ವಹಿಸಬಾರದೆ ? ಪಾಪ, ಇದಕ್ಕೆಲ್ಲ ಹೊಸಬಳು. ಅಂತೆಯೇ ಹೀಗೆ ಕಷ್ಟದಲ್ಲಿ ಸಿಕ್ಕಿಕೊಂಡಿದ್ದಾಳೆ. ಅವಳಿಗೆ ಸಹಾಯ ಮಾಡಿದರೆ ತಪ್ಪಿಲ್ಲ....

ಶಶಿ ಹೀಗೆಲ್ಲ ಯೋಚಿಸುತ್ತಿದ್ದಾಗ ಲೀಲಾ ತಲೆತಗ್ಗಿಸಿ ಕಣ್ಣೀರು ಹಾಕುತ್ತಾ ಕೂತಿದ್ದಳು.

* * *

ನಾಲ್ಕಾರು ದಿನಗಳ ನಂತರ ಡಾ. ಸತೀಶ ದೇಶಪಾಂಡೆಯ ಸಹಾಯದಿಂದ ಲೀಲಾಗೆ ಗುಟ್ಟಾಗಿ ಅಬಾರ್ಶನ್ ಮಾಡಿಸಿ ತೀರ ಅಶಕ್ತಳಾಗಿದ್ದ ಅವಳನ್ನು ಸತೀಶನ ಕ್ವಾರ್ಟರ್ಸಿಗೆ ಕರಕೊಂಡು ಹೋಗಿ ಕಾಫಿ ಕುಡಿಸಿ ಒಂದೆರಡು ಗಂಟೆಗಳ ಬಳಿಕ ಆಕೆ ತುಸು ಚೇತರಿಸಿಕೊಂಡ ನಂತರ ಅಲ್ಲಿಂದ ಟ್ಯಾಕ್ಸಿಯಲ್ಲಿ ಅವಳನ್ನು ಮನೆಗೆ ಕರೆದುಕೊಂಡು ಬರುವಾಗ ದಾರಿಯಲ್ಲಿ ಶಶಿ ಆಕೆಗೆ ಒಂದೇ ಒಂದು ಪ್ರಶ್ನೆ ಕೇಳಿದಳು, ''ನೀ ಹಿಂಗ್ಯಾಕ ಮಾಡಿದಿ ಲೀಲಾ ? ಇದರಿಂದ ನಿನಗೇನು ಸಿಕ್ಕಿತು ?''

''ಪ್ರಮೋಶನ್ !'' —ಕ್ಷೀಣ ಧ್ವನಿಯಲ್ಲಿ ನಕ್ಕು ಲೀಲಾ ಉತ್ತರಿಸಿದಳು, ''ನಾ

ಈಗ ಕ್ಲಾರ್ಕ್ ಅಲ್ಲ ಡಾಕ್ಟರ್, ಆಫೀಸರ್ ಆಗೀನಿ. ನಮ್ಮ ಬಾಸ್ ಹೇಳಿದಾಂಗ ಕೇಳದಿದ್ದರ ನನಗ ಆ ಪ್ರೈವ್ಹೇಟ್ ಬ್ಯಾಂಕಿನ್ಯಾಗ ಎಂದೂ ಪ್ರಮೋಶನ್ ಸಿಗ್ತಿರಲಿಲ್ಲ. ಪ್ರಮೋಶನ್ ಸಿಗದಿದ್ರ ನನ್ನ ಸಣ್ಣ ಪಗಾರದಾಗ ಅಪ್ಪನ ಬ್ಲಡ್‌ಪ್ರೆಶರಿಗೆ ಔಷಧ ತರೋದು, ಚಿಂದಿ ಸೀರಿ ಉಟಕೊಂಡು ಕಾಲ ಕಳೀತಿರೋ ಅವ್ವಗ ಹೊಸಸೀರಿ ತರೋದು, ಇಬ್ಬರು ತಮ್ಮಂದಿರ ಕಾಲೇಜಿನ ಫೀ ಕಟ್ಟೋದು, ನನ್ನ ಉಢಾಳ ಅಣ್ಣನ ಸಿಗರೇಟು-ಹೊಟೇಲಿಗೆ ರೊಕ್ಕಾ ಕೊಡೋದು, ಉದ್ದರೀ ಅಂಗಡಿ ಬಾಕಿ ಕೊಡೋದು -ಯಾವುದೂ ಆಗ್ತಿರಲಿಲ್ಲ...."

"ಅದು ಎಲ್ಲಾ ಸರಿ, ಆದರ ನೀನು ಇನ್ನೂ ಲಗ್ನ ಆಗೋ ಹುಡುಗಿ, ಕೇರಫುಲ್ ಆಗಿರಬೇಕು."

"ಇನ್ನ ನನಗೆಲ್ಲೀ ಲಗ್ನರೀ ಡಾಕ್ಟರ್ ? ಹಿಂಗ ಒಂದು ಸಲಾ ಅಪವಿತ್ರ ಆದ ದೇಹಾನ ಗಂಡ ಅನ್ನಿಸಿಕೊಳ್ಳೋ ವ್ಯಕ್ತಿಗೆ ಹ್ಯಾಂಗ ಅರ್ಪಣಾ ಮಾಡೋದು ? ಅದು ಇದಕ್ಕಿಂತ ಹೆಚ್ಚಿನ ಪಾಪದ ಕೆಲಸ ಅನಸತದ ನನಗ."

ಈ ಮಾತಿಗೆ ಶಶಿಯಲ್ಲಿ ಪ್ರತಿಮಾತು ಇರಲಿಲ್ಲ. ಆಕೆ ಸುಮ್ಮನಾದಳು.

* * *

ಮದುವೆಗೆ ಮೊದಲು ಯಾರೊಂದಿಗಾದರೂ ದೈಹಿಕ ಸಂಬಂಧ ಉಂಟಾದರೆ ಮದುವೆಯಾಗುವ ವ್ಯಕ್ತಿಗೆ ಅದು ದ್ರೋಹ ಅಂತ ಲೀಲಾ ತಿಳಿದದ್ದು ತಪ್ಪು ಅನ್ನಿಸಲಿಲ್ಲ ಶಶಿಗೆ. ಯಾಕೆಂದರೆ ಸಾಮಾನ್ಯವಾಗಿ ಎಲ್ಲರೂ ತಿಳಿಯುವುದು ಹಾಗೆಯೇ. ವಿಶೇಷವಾಗಿ ಗಂಡಸರು ತಾವು ಮದುವೆಯಾಗುವ ಹೆಣ್ಣು ವ್ಹರ್ಜಿನ್ ಆಗಿರಲೇಬೇಕೆಂದು ಯಾವಾಗಲೂ ಇನ್‌ಸಿಸ್ಟ್ ಮಾಡುತ್ತಾರೆ ಅಂತ ಅನುಭವದಿಂದ ಅವಳಿಗೆ ಗೊತ್ತಿತ್ತು. ಆದರೂ ಇದಕ್ಕೆ ಅಪವಾದವಾದವರೂ ಇರುತ್ತಾರೆ ಅಂತ ಕಮಲಾ ವಾದಿಸುತ್ತಿದ್ದಳು :

> "ಎಲ್ಲಾ ಗಂಡಸರೂ ಒಂದೇ ಥರಾ ಮೀನ್ ಮೈಂಡೆಡ್ ಆಗಿರುತ್ತಾರೆಂದು ಶಶಿಯ ಅಭಿಪ್ರಾಯ. ಬಹುತೇಕ ಗಂಡಸರು ತಮ್ಮ ಹೆಣ್ಣಿನ ವಿಷಯದಲ್ಲಿ ಮೀನ್ ಮೈಂಡೆಡ್ ಆಗಿರುವುದೂ ನಿಜವೇನೋ. ಆದರೆ ಸುದೈವದಿಂದ ನನ್ನ ಮೂರ್ತಿ ಹಾಗಲ್ಲ. ಮದುವೆಗೆ ಮೊದಲು ನಾನಾಗಿ ಆತನಿಗೆ ನನ್ನ ಧಾರವಾಡದಲ್ಲಿ ಯೂನಿವ್ಹರ್ಸಿಟಿಯಲ್ಲಿದ್ದಾಗಿನ ವಿಫಲ ಪ್ರೇಮದ ಬಗ್ಗೆ ತಿಳಿಸಿದಾಗ ನನ್ನನ್ನಪ್ಪಿ ಹಣೆಯ ಮೇಲೊಂದು ಹೂ ಮುತ್ತನಿತ್ತು ಆತ ಅಂದಿದ್ದ, 'ಕಮಲಾ, ಒಂದು ಗಂಡು ಹಾಗೂ ಒಂದು ಹೆಣ್ಣಿನ ಪ್ರೀತಿಗೆ ಪರಸ್ಪರ ಭೂತಕಾಲವೊಂದು ಅಡ್ಡಿಯಾಗುವುದಾದರೆ ಅದು

ನಿಜವಾದ ಪ್ರೀತಿಯೇ ಅಲ್ಲ. ಒಂದಾರು ತಿಂಗಳು ನೀನು ಬೇರೊಬ್ಬ ಗಂಡಸಿನ ಒಡನಾಟ ಹೊಂದಿದ್ದರೆ ಏನಂತೆ ? ಅದೀಗ ಮುಗಿದ ಕತೆ ಅಲ್ಲವೆ ? ಇಷ್ಟಕ್ಕೂ ದೈಹಿಕ ಸಂಬಂಧದ ಆಧಾರದ ಮೇಲೆ ಒಬ್ಬ ವ್ಯಕ್ತಿಯ ಚಾರಿತ್ರ್ಯದ ಪವಿತ್ರತೆ ಅಳೆಯುವುದೇ ತಪ್ಪು. ನಾವು ಊಟ ಮಾಡಿದ್ದು ಹೇಗೆ ನಮ್ಮೊಳಗೆ ಉಳಿಯುವುದಿಲ್ಲವೋ ಹಾಗೆಯೇ ನಾವು ಒಬ್ಬ ವ್ಯಕ್ತಿಯೊಂದಿಗೆ ಮಲಗಿ ಎದ್ದುದ್ದರ ಒಂದಂಶವೂ ನಮ್ಮೊಳಗೆ ಉಳಿಯುವುದಿಲ್ಲ. ನಿಜವಾಗಿ ಉಳಿಯುವುದು ಅಂದರೆ ಮನಸ್ಸು-ಮನಸ್ಸಿನ ಸಂಬಂಧ. ನೀನು ಇತಿಹಾಸದ ಬಗ್ಗೆ ಕೊರಗಬೇಡ. ನೀನು ನನ್ನ ಪಾಲಿಗೆ ವ್ಹರ್ಜಿನ್ ಮೇರಿಯ ಹಾಗೆ ಪವಿತ್ರಳು. ನನ್ನ-ನಿನ್ನ ಪ್ರೀತಿಗೆ ಇಂಥ ಚಿಲ್ಲರೆ ಕಾರಣಗಳಿಂದ ಯಾವ ತಡೆಯೂ ಬರಲಾರದು''.

–''ಮೂರ್ತಿಯದು ಎಂಥ ದೊಡ್ಡ ಮನಸ್ಸು ! ನನ್ನಷ್ಟು ಭಾಗ್ಯಶಾಲಿ ಹೆಂಗಸು ನಾನೇ.''

ಕಮಲಾ ಎಷ್ಟೇ ವಾದಿಸಿದರೂ ಯಾಕೋ ಈ ಮಾತು ಮಾತ್ರ ಶಶಿಗೆ ಒಪ್ಪಲು ಆಗುತ್ತಿರಲಿಲ್ಲ. ತನ್ನ ಹೆಂಡತಿಯ ಇತಿಹಾಸದ ಬಗ್ಗೆ ಹೀಗೆ ನಿರ್ಲಿಪ್ತನಾಗಿರಲು ನಿಜವಾಗಿಯೂ ಈ ನಮ್ಮ ಹಿಂದುಸ್ತಾನದ ಯಾವ ಗಂಡಸಿಗೂ ಸಾಧ್ಯವಿಲ್ಲವೆಂದೇ ಶಶಿಯ ದೃಢವಾದ ಅಭಿಪ್ರಾಯ. ಯಾವುದೋ ಕಾವಿನಲ್ಲಿ ಆದರ್ಶದ ಮಾತುಗಳನ್ನು ಎಲ್ಲರೂ ಆಡಬಹುದು. ಕಾವು ಇಳಿದಾಗ ನಿಜ ಸ್ವರೂಪ ಬಯಲಿಗೆ ಬಂದೇ ಬರುವುದು. ಆಗ ಈ ಹುಚ್ಚು ಕಮಲಾನ ಕಣ್ಣಿನ ಪೊರೆ ಹರಿಯುವುದು ನಿಶ್ಚಿತ. ಆದರೆ ಅಂಥ ಆಘಾತ ಕಮಲಾ ತಾಳಲಾರಳು. ತನ್ನ ಸುತ್ತಲಿನ ಭ್ರಮೆಯ ದಂತದ ಗೋಪುರ ಕುಸಿದರೆ ಕಮಲಾ ಮಾನಸಿಕವಾಗಿ ಬ್ರೇಕ್‌ಡೌನ ಆಗುವುದು ನಿಶ್ಚಯ.

ನಿಜವಾಗಿ ಆದದ್ದೂ ಹಾಗೆಯೇ. ಕಮಲಾನ ಡಾಯರಿಯ ಪುಟಗಳನ್ನು ತಿರುವಿ ಹಾಕುತ್ತಿರುವಾಗ ಈ ಬ್ರೇಕ್‌ಡೌನಿನ ಪೂರ್ಣ ಕಲ್ಪನೆ ಬಂದಿತ್ತು ಶಶಿಗೆ :

''ಎಷ್ಟೋ ದಿನಗಳಿಂದ ಮೂರ್ತಿ ನನ್ನೊಂದಿಗೆ ರಾತ್ರಿ ಕಳೆಯಲು ಬಂದೇ ಇಲ್ಲ. ಕಂಪನಿಯಲ್ಲಿ ಕೆಲಸ ಮಾಡಲು ಹೋದಾಗ ಭೆಟ್ಟಿಯಾಗುತ್ತದೆ, ನಿಜ. ಆಗೀಗ ಸಂಜೆ ಮನೆಗೂ ಬರುತ್ತಾನೆ. ಬಂದವನು ಬೂಟು ಸಹ ಕಳಚದೆ ಅತಿಥಿಯ ಹಾಗೆ ಪಡಶಾಲೆಯಲ್ಲಿ ಕೂತು ಆ-ಈ ಮಾತಾಡಿ ನಂತರ ಕೈ ಗಡಿಯಾರ ನೋಡಿಕೊಳ್ಳುತ್ತ ಎದ್ದು ಹೊರಟು ಬಿಡುತ್ತಾನೆ. 'ಆ ಮನೆಯಲ್ಲಿ ಕೆಲಸವಿದೆ' ಅನ್ನುತ್ತಾನೆ. 'ನೀನು ಅಂಡರ್‌ಸ್ಟ್ಯಾಂಡ್ ಮಾಡಿಕೋಬೇಕು. ಕೋ-ಆಪರೇಟ್ ಮಾಡಬೇಕು,' ಅನ್ನುತ್ತಾನೆ. ಆತ ಹೋದ ನಂತರ ರಾತ್ರಿಯಿಡೀ

ನಾನು ಕಿಡಿಕಿಯು ಹೊರಗೆ ಕಾಣುವ ಮುಂಬಯಿಯ ಕಪ್ಪು ಆಕಾಶವನ್ನೇ ನೋಡುತ್ತ ಎಚ್ಚರವಾಗಿರುತ್ತೇನೆ. ಅನೇಕ ಸಂಜೆಗಳು ಆತ ಬರುತ್ತಾನೆಂದು ಬಾಲ್ಕನಿಯಲ್ಲೇ ನಿಂತಿರುತ್ತೇನೆ. ಸಂಜೆ ಸದ್ದಿಲ್ಲದೆ ಸರಿದುಹೋದಾಗ ಒಳಬರಲೂ ಶಕ್ತಿಯಿಲ್ಲದ ಹಾಗೆ ಕಾಲುಗಳು ಜಡವಾಗಿ ಬಿಟ್ಟಿರುತ್ತವೆ. 'ಇತ್ತಿತ್ಲಾಗ ನೀ ಸರಿಯಾಗಿ ಊಟಾನೇ ಮಾಡೂದಿಲ್ಲಲ್ಲ ಆಂಟಿ ?' ಅನ್ನುತ್ತಾಳೆ ನೀಲಾ. ನನಗೆ ಊಟ-ನಿದ್ರೆ, ಕೆಲಸ-ಜೀವನವೇ ಬೇಸರವೆನಿಸತೊಡಗಿದೆ. ನಾನು ನಂಬಿದ್ದ ಮೌಲ್ಯಗಳು ಒಮ್ಮೆಲೆ ಪೊಳ್ಳಾಗಿ ನನ್ನ ಕಾಲ ಕೆಳಗಿನ ನೆಲವೇ ಕುಸಿಯುತ್ತಿರುವಂತೆ ಅನಿಸುತ್ತಿದೆ. ಇನ್ನು ಈ ಪರಿಸ್ಥಿತಿ ತಾಳುವುದು ಅಶಕ್ಯವೆನಿಸಿ ನಿನ್ನೆ ಖಟ್ಟಿಗೆ ಹಚ್ಚಿ ಮೂರ್ತಿಯನ್ನು ಕೇಳಿಯೇ ಬಿಟ್ಟೆ. ಆತ ನನ್ನನ್ನು ಲಗ್ನವಾಗಿದ್ದು ನಿಜವಾಗಿದ್ದ ಮೇಲೆ ನನ್ನ ಆಸೆ-ಆಕಾಂಕ್ಷೆಗಳನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸುವುದು ಆತನ ಕರ್ತವ್ಯವಲ್ಲವೆ ? ಬಂಧು-ಬಾಂಧವರಿಂದ, ಸ್ವಜಾತಿಯುವರಿಂದ, ನಿಕಟ ಸ್ನೇಹಿತ ವರ್ಗದಿಂದ ಇಡಿಯ ಸಮಾಜದಿಂದ ದೂರವಾಗಿ ಆತನನ್ನು ಕಟ್ಟಿಕೊಂಡು ಸರ್ವಾರ್ಪಣ ಮಾಡಿದ್ದಕ್ಕೆ ಪ್ರತಿಯಾಗಿ ಆತನ ಸಹವಾಸವಾದರೂ ನನಗೆ ಸಮಾಧಾನವಾಗುವಷ್ಟು ಸಿಗಕೂಡದೇ ?

'ನೀನೇನು ನನಗೆ ಸರ್ವಾರ್ಪಣ ಮಾಡಿದ್ದು ? ಅದೆಲ್ಲಾ ಮೊದಲೇ ಯಾರಿಗೋ ಅರ್ಪಣ ಆಗಿತ್ತು. ಖಜಾನೆ ಖಾಲಿಯಾದ ಮೇಲೆ ಲೂಟಿ ಮಾಡಿದವನ ಹಾಗೆ ನನ್ನ ಕರ್ಮ' – ಅಂದುಬಿಟ್ಟ ಆತ.

ಈ ಮೂರ್ತಿಗೇಕೆ ತಿಳಿಯುವುದಿಲ್ಲ ? ಆರೇಳು ತಿಂಗಳು ನನಗೆ ಬೇರೊಬ್ಬನ ಸಹವಾಸವಾದದ್ದು ಖರೆ. ಆದರೆ ಅದು ಮೂರ್ತಿಯ ಸಹವಾಸ ನನಗೆ ಲಭಿಸುವ ಮೊದಲೇ. ನಂತರ ಅದೊಂದು ಕೆಟ್ಟ ಕನಸೆಂದು ನಾನು ಮರೆತು ಬಿಟ್ಟೇ ಹಳೆಯ ಕಾಲವಾಗಿ ಹೋಯಿತು. ಆ ಮನುಷ್ಯನ ಬಗ್ಗೆ ನನಗಿದ್ದುದು ಬರಿಯ ಇನ್‌ಫ್ಯಾಚ್ಯುಯೇಶನ್. ಅದು ಪ್ರೀತಿ ಅಲ್ಲ.... ಅದು ಪ್ರೀತಿ ಅಲ್ಲವೇ ಅಲ್ಲ.... ನಾನು ನಿಜವಾಗಿ ಪ್ರೀತಿಸಿದ್ದು, ನಿಜವಾಗಿ ಪೂರ್ಣ ಮನಸ್ಸಿನಿಂದ ಸರ್ವಾರ್ಪಣ ಮಾಡಿದ್ದು ಮೂರ್ತಿಯೊಬ್ಬನಿಗೆ ಮಾತ್ರ....

ನನ್ನ ಆರೇಳು ತಿಂಗಳ ಅವಧಿಯ ಬೇರೊಬ್ಬನ ಸಹವಾಸ ಇಷ್ಟೊಂದು ಕಾಡುತ್ತದಲ್ಲ ಮೂರ್ತಿಯನ್ನು, ತನ್ನ ಇಡೀ ಜನ್ಮದ ಅವಧಿಯ ಬೇರೊಬ್ಬಳೊಂದಿಗಿನ ಸಹವಾಸದ ಬಗ್ಗೆ, ಅದಕ್ಕಾಗಿ ನನಗೇನು ಅನಿಸುತ್ತಿರಬಹುದೆಂಬುದರ ಬಗ್ಗೆ, ಆತನೆಂದೂ ಏನೂ ವಿಚಾರಿಸಿಯೇ ಇಲ್ಲವೆ ?

ಮೂರ್ತಿ ಏನೇ ಅಂದರೂ ನನ್ನನ್ನು ಎಷ್ಟೇ ಅಲಕ್ಷಿಸಿದರೂ ಅದಕ್ಕಾಗಿ ನನಗೆಷ್ಟೇ ಅಸಮಾಧಾನವಾಗಿದ್ದರೂ ಆತನನ್ನು ನೋಡಿದ ತಕ್ಷಣ ನನಗೆ ಎಲ್ಲ ಮರೆವಾಗಿ ಬಿಡುತ್ತದೆ. ಆತನ ಅಗಲವಾದ ಎದೆಯಲ್ಲಿ ಮುಖವಿಟ್ಟು ಆತನನ್ನು ಬಳಸಿ ಆತನಿಗೆ ಹತ್ತಿಕೊಂಡು ಮಲಗಿದಾಗ ಇಂದಿಗೂ ನನಗೆ ಮಧುಚಂದ್ರದ ರಾತ್ರಿಗಳದೇ ಅನುಭವ...."

–ಕಮಲಾಳ ಈ ದೌರ್ಬಲ್ಯ ಬಹುಶಃ ಮೂರ್ತಿಗೆ ಗೊತ್ತಿತ್ತು. ತಾನವಳಿಗೆ ಏನೇ ಅಂದರೂ, ಅವಳೊಂದಿಗೆ ಹೇಗೆಯೇ ನಡೆದುಕೊಂಡರೂ ತನಗೆ ವಿರೋಧವಾಗಲೀ, ಆಕ್ಷೇಪಣೆಯಾಗಲೀ ಬರುವುದಿಲ್ಲೆಂದು ಆತನಿಗೆ ತಿಳಿದಿತ್ತು. ಅದಕ್ಕೆಂದೇ ಇರಬೇಕು, ತನಗೊಂದು ಮಗುವಾದರೂ ಆಗಬಾರದೇ ಅಂತ ಕಮಲಾ ಹಂಬಲಿಸುತ್ತಿದ್ದಳು. ಶಶಿಗೆ ನೆನಪಿದೆ, ಆಕೆಯೇ ಅನೇಕ ಸಲ ಕಮಲಾನನ್ನು ತನಗೆ ಪರಿಚಯದ ಗೈನಕಾಲಜಿಸ್ಟ್ ಕಡೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದ್ದಳು. ಆದರೆ ಕಮಲಾಳ ದುರ್ಭಾಗ್ಯ. ಮೂರು ನಾಲ್ಕು ಸಲ ಗರ್ಭ ನಿಂತರೂ ಮೂರು ತಿಂಗಳಾಗುವುದರೊಳಗೇ ಅವಳಿಗೆ ಗರ್ಭಪಾತವಾಗಿ ಬಿಡುತ್ತಿತ್ತು. ಕೊನೆಗೆ ನಿರಾಶಳಾದ ಕಮಲಾ ತನಗಿನ್ನು ಈ ಜನ್ಮದಲ್ಲಿ ಮಕ್ಕಳ ಭಾಗ್ಯವಿಲ್ಲವೆಂದು ಒಪ್ಪಿ ಸುಮ್ಮನಾಗಿ ಬಿಟ್ಟಿದ್ದಳು. ಮಕ್ಕಳಾಗಿದ್ದರೆ ಬಹುಶಃ ಶಿವಮೂರ್ತಿ ಹಾಗೂ ಕಮಲಾರ ಮಧ್ಯೆ ಬರಬರುತ್ತ ಬಿಡತೊಡಗಿದ್ದ ಬಿರುಕು ಸ್ವಲ್ಪವಾದರೂ ಸಹ್ಯವಾಗುತ್ತಿತ್ತೇನೋ ಅಂತ ಶಶಿಗೂ ಅನೇಕ ಸಲ ಅನ್ನಿಸಿತ್ತು. ಅದೇನೇ ಇದ್ದರೂ ಶಿವಮೂರ್ತಿಯ ಇತ್ತೀಚೆಗಿನ ವರ್ತನೆ ಅಕ್ಷಮ್ಯ ಅನಿಸುತ್ತಿತ್ತು ಶಶಿಗೆ :

"ಮೊನ್ನೆ ರಾತ್ರಿ ನನ್ನ ಜೀವನದ ಮಹಾ ದುರ್ದಿನ. ನಾಲ್ಕು ದಿನಗಳ ಮಟ್ಟಿಗೆ ಕಂಪನಿ ಕೊಲ್ಹಾಪುರಕ್ಕೆ ಹೋಗಿತ್ತು ನಾಟಕ ಪ್ರದರ್ಶನಕ್ಕಾಗಿ. ಮೈಯಲ್ಲಿ ಆರಾಮಿರಲಿಲ್ಲವೆಂದು ಮೂರ್ತಿಗೆ ಈ ಟ್ರಿಪ್ಪಿಗೆ ಬರಲಾಗಿರಲಿಲ್ಲ. ಅವನಿಲ್ಲದೆ ಹೋಗುವುದು ನನಗಿಷ್ಟವಿರಲಿಲ್ಲವಾದರೂ ನಾನು ಹೋಗದಿದ್ದರೆ ನಾಟಕಗಳು ಸಪ್ಪೆಯಾಗುವವೆಂದು ಮ್ಯಾನೇಜರ್ ಗಾಡಗೀಳ ಹಾಗೂ ಇತ್ತೀಚೆಗಷ್ಟೆ ನಮ್ಮ ನಾಟಕಗಳಲ್ಲಿ ಗೌರವನಟನಾಗಿ ಅಭಿನಯಿಸತೊಡಗಿದ್ದ ವಿನೋದ ಸಹಾನಿ ಇಬ್ಬರೂ ಒತ್ತಾಯಿಸಿದ್ದರಿಂದ ನಾನು ಹೋಗಿದ್ದೆ. ನಾಲ್ಕೇ ದಿನ ಹೋಗಿದ್ದರೂ ಮೂರ್ತಿಯನ್ನು ಕಾಣದೆ ಯುಗವಾದ ಹಾಗೆ ಅನ್ನಿಸಿತ್ತು. ಬಂದಕೂಡಲೆ ಆತನಿಗೆ ಫೋನ್ ಮಾಡೋಣ ಅಂದುಕೊಂಡೆ. ಆದರೆ ಅಷ್ಟರೊಳಗೆ ಆತನೇ ಬಂದ. 'ನಿನ್ನನ್ನು ನೋಡದ ಎಷ್ಟೋ ದಿನಾ ಆಧಾಂಗ

ಅನಸ್ತು ಕಮಲಾ, ನೀ ಇನ್ನ ನನ್ನ ಬಿಟ್ಟು ಎಲ್ಲ್ಯೂ ಹೋಗಬ್ಯಾಡ' ಅಂತ ಬಿಗಿದಪ್ಪಿದ. ನನಗೆ ಏಕದಂ ಖುಶಿಯಾಯಿತು.

ಆ ರಾತ್ರಿ ಒಟ್ಟಿಗಿದ್ದಾಗ ಮೂರ್ತಿಯ ವರ್ತನೆಯಲ್ಲಿ ಹೊಸ ಮದುಮಗನ ಹುಮ್ಮಸ್ಸು. ಬಹಳ ದಿನಗಳ ನಂತರ ನನ್ನ ಮೈ ಜುವ್ ಜುವ್ ಅಂದಿತ್ತು. ಎಷ್ಟೋ ಹೊತ್ತು ಕಣ್ಣು ಮುಚ್ಚಿಯೇ ಇದ್ದ ನಾನು ನಡುವೆ ಒಮ್ಮೆ ಅರೆಗಣ್ಣು ತೆರೆದೆ. ಯಾಕೋ ಇದ್ದಕಿದ್ದ ಹಾಗೆ ಮೂರ್ತಿಯ ಮುಖ ಗಡುಸಾದ ಹಾಗೆ, ಬಿಗಿದುಕೊಂಡ ಹಾಗೆ ಅನಿಸಿತು. 'ಏನಾತು ಮೂರ್ತಿ ?' ಅಂತ ಕೇಳಿದ್ದಕ್ಕೆ 'ಏನೂ ಇಲ್ಲ' ಅಂತ ಒಮ್ಮೆಲೇ ನನ್ನಿಂದ ಬೇರೆಯಾಗಿ ಆ ಕಡೆ ಮುಖ ಹೊರಳಿಸಿ ಮಲಗಿಬಿಟ್ಟ. ಆತನ ಆಕಸ್ಮಿಕ ಅಸಮಾಧಾನದ ಕಾರಣ ತಿಳಿಯದೆ ನಾನೂ ತೆಪ್ಪಗೆ ಮಲಗಿದೆ.

ಅರ್ಧರಾತ್ರಿ ಕಳೆದಿರಬೇಕು. ಆಗತಾನೇ ನಿದ್ರೆಯಲ್ಲಿ ಮುಳುಗಿದ್ದ ನನ್ನನ್ನು ಹಿಡಿದು ಬಿರುಸಾಗಿ ಅಲ್ಲಾಡಿಸಿ ಎಬ್ಬಿಸುತ್ತ ನಾನೆಂದೂ ಕೇಳಿರದ ಒರಟು ಧ್ವನಿಯಲ್ಲಿ ಆತ ಕೇಳಿದ, 'ಕಮಲಾ, ನಿನ್ನ ಬಲದ ತೊಡೀಮ್ಯಾಲ ಹಸಿರು ಗುರ್ತು ಆಗೇದಲ್ಲ, ಅದು ಎಂಥಾದ್ದು ?'

'ಆ್ಞ ? ಹ್ಞೂ ?' ಅಂತ ನಾನು ಕನವರಿಸಿದೆ. ನಂತರ 'ಏನು ? ಎಲ್ಲಿ ? ನನಗೇನೂ ಗೊತ್ತಿಲ್ಲ' ಅಂದೆ. ತೊಡೆ ನೋಡಿಕೊಂಡೆ. ಹಸಿರು ಗುರುತು ಆದದ್ದೇನೋ ನಿಜವಿತ್ತು. ಎಲ್ಲಾದರೂ ಏನಾದರೂ ಬಡಿದಿರಬೇಕು ಅಂದೆ. ಆ ಉತ್ತರದಿಂದ ಆತನಿಗೆ ಸಮಾಧಾನವಾಗಲಿಲ್ಲ. ಇಷ್ಟು ಪೆಟ್ಟಾಗುವ ಹಾಗೆ ಬಡಿದದ್ದು ನಿನಗೆ ಹೇಗೆ ಲಕ್ಷ್ಯಕ್ಕೆ ಬಂದಿಲ್ಲ ಅಂದ. ಮತ್ತೆ ಗೊತ್ತಿಲ್ಲ ಅಂದೆ. ನಿದ್ರಿಸಲು ಪ್ರಯತ್ನಿಸಿದೆ. ಆತ 'ಕೋಲ್ಹಾಪೂರಕ್ಕ ಹೋದಾಗ ವಿನೋದ ಸಹಾನಿ ಛಲೋ ಕಂಪನಿ ಕೊಟ್ಟಿರಬೇಕಲ್ಲ ?' ಅಂದ. ನನ್ನ ನಿದ್ರೆ ಹಾರಿ ಹೋಯಿತು. ಪೂರಾ ಎಚ್ಚರಾಯಿತು. ಈ ಪ್ರಶ್ನೆಗೂ ನನ್ನ ತೊಡೆಯ ಮೇಲಿನ ಹಸಿರು ಕಲೆಗೂ ಸಂಬಂಧ ಕಲ್ಪಿಸುತ್ತ ಮೂರ್ತಿಯ ತಲೆಯಲ್ಲಿ ಆ ಕ್ಷಣದಲ್ಲಿ ನಡೆದಿದ್ದ ವಿಪ್ಲವದ ಅರ್ಥ ಅರೆಕ್ಷಣದಲ್ಲಿ ನನಗೆ ಹೊಳೆದು ಹೋಯಿತು. ಮೈಮೇಲೆ ಯಾರೋ ರಾಡಿ ನೀರನ್ನು ಎರಚಿದಂತಾಯಿತು. ಆತನ ಸಮೀಪ ಮಲಗಿರಲು ಸಾಧ್ಯವಾಗದೆ ಎದ್ದು ಮಂಚದಿಂದಿಳಿದು ಕೆಳಗೆ ಚಾಪೆಯ ಮೇಲೆ ಮಲಗುತ್ತ ಹೇಳಿದೆ, 'ನಿನ್ನ ಈ ತಪ್ಪು ಕಲ್ಪನೆ, ವ್ಯರ್ಥ ಸಂಶಯಕ್ಕಾಗಿ ದೇವರs ನಿನ್ನನ್ನ ಕ್ಷಮಿಸಬೇಕು !'

ಆತ ಧಡಕ್ಕನೆ ಎದ್ದ. ಏನಾಗುತ್ತಿದೆಯೆಂದು ನನಗರಿವಾಗುವ

ಮೊದಲೇ ನನ್ನ ಕೂದಲು ಹಿಡಿದೆಳೆದು ಬೆನ್ನು-ಮುಖ-ತಲೆಯ ಮೇಲೆ ನ ಎಲ್ಲಾಕಾರು ಬಾಕ್ಸಿಂಗ್ ಕೊಟ್ಟ. ನನ್ನ ಕಣ್ಣಿಗೆ ಕತ್ತಲು ಕವಿಯಿತು. 'ರಂಡೆ, ನನಗ ಮೋಸ ಮಾಡ್ತೀಯಾ ? ನನ್ನ ಬೆನ್ನಹಿಂದ ಬ್ಯಾರೆ ಗಂಡಸರ ಜೋಡೀ ಮಜಾ ಮಾಡ್ತೀಯಾ ? ಹಿಂಗ ಮಾಡೋ ಚಟಾ ಇರೋದ್ರಿಂದನೆs ಇರಬೇಕು, ನಿನ್ನ ಆ ಎಮ್. ಎ. ದ ಲವ್ವರ್ ಕೈಬಿಟ್ಟು ಹೋದದ್ದು. ಹಿಂಗs ಎಷ್ಟ ಮಂದಿ ನಿನ್ನ ಮೂಸಿ ಹೋಗ್ಯಾರೋ ಏನೋ.... ಆದರ ನಾ ಸುಮ್ಮ ಬಿಟ್ಟು ಹೋಗೂದಿಲ್ಲ. ನಿನ್ನ ಮೂಗು, ಮೊಲೆ ಕೊಯ್ದು ಕತ್ತೀ ಮ್ಯಾಲ ಮೆರವಣಿಗೆ ಮಾಡಸ್ತೀನಿ. ನೀ ಊರ ಸೂಳಿ ಇದ್ದೀ ಅಂತ ಮೊದ್ಲ ಗೊತ್ತಿತ್ತು ನನಗ.... ನಿನ್ನಂಥಾಕಿ ಸಲುವಾಗಿ ಹೆಂಡ್ತೀ-ಮಕ್ಕಳ ವಿರೋಧ ಕಟ್ಟಿಗೊಂಡೆ. ನಾನs ಮೂರ್ಖ. ಲಗ್ನಾದ ಮ್ಯಾಲರೆ ಗರತೀ ಹಾಂಗ ಸಂಸಾರ ಮಾಡತೀ ಅಂದರ ಆ ಹಾದರದ ಚಟಾ ಎಲ್ಲೆ ಹೋದೀತು ? ನಿನ್ನ ತಲೀ ಬೋಳಿಸಿ....' ಮುಂದಿನ ಮುಕ್ತಾಫಲಗಳು ಉದುರುವ ಮುನ್ನವೆ ಬಹುಶಃ ನನಗೆ ಎಚ್ಚರವೇ ತಪ್ಪಿತೆಂದು ಕಾಣುತ್ತದೆ....

—ನಾನು ಮತ್ತೆ ಕಣ್ತೆರೆದಾಗ ನಸುಕು ಹರಿಯುತ್ತಲಿತ್ತು. ರಾತ್ರಿ ನಡೆದದ್ದೆಲ್ಲ ಎಂದಿಗೂ ನಿಜವಾಗಿರಲಾರದು, ಅದು ಕನಸೇ ಸರಿ ಅಂದುಕೊಂಡೆ. ಒಮ್ಮೆಲೆ ವಿಪರೀತ ಅಳು ಬಂತು. ಮೈಯೆಲ್ಲ, ಮೈಯ ಒಳಗಿನದೆಲ್ಲ, ಸುತ್ತಲಿನದೆಲ್ಲ ನಡುಗಿಸುವ, ಭೂಕಂಪದಂತಹ ಅಳು. ಹೊರಳಿ ಹೊರಳಿ ನಿಸ್ಸಂಕೋಚವಾಗಿ, ನಿರ್ಲಜ್ಜವಾಗಿ, ನಿರಂತರವಾಗಿ, ಮುಕ್ತವಾಗಿ ಅತ್ತೆ. ಅತ್ತು ಮುಗಿದ ನಂತರ ಎದ್ದೆ. ಮೈ ಎಲ್ಲ ನೋಯುತ್ತಿತ್ತು. ಮಂಚದ ಮೇಲೆ ಆಗ ತಾನೇ ಕಣ್ತೆರೆದಿದ್ದ ಮೂರ್ತಿ ಮಲಗಿದ್ದ ಹಾಗೆಯೇ ಕೈ ಚಾಚಿ 'ಬಾ' ಅಂದ. ಹೌದು, ರಾತ್ರಿಯದು ಕೆಟ್ಟ ಕನಸೇ ಸರಿ ಅಂತ ತೀರ್ಮಾನಿಸಿದೆ. ಮೌನವಾಗಿ ಹೋಗಿ ಮೂರ್ತಿಯ ತೋಳುಗಳಲ್ಲಿ ಸೇರಿಕೊಂಡೆ. ಆತ 'ಸಾರಿ ಕಮಲಾ' ಅಂದ. ಮತ್ತೆ ಅಳು ಉಕ್ಕಿ ಬಂತು....'

ಓದುತ್ತಿದ್ದಂತೆ ಶಶಿಗೆ ಯಾಕೋ ಗಂಟಲುಬ್ಬಿ ಬಂದಂತಾಯಿತು. ಪ್ರೀತಿ-ವಿಶ್ವಾಸದ ಬಗೆಗೆ ತುಂಬ ರೋಮ್ಯಾಂಟಿಕ್ ವಿಚಾರಗಳನ್ನಿರಿಸಿಕೊಂಡಿದ್ದ ಕಾಲೇಜು ಹುಡಿಗಿ ಕಮಲಾ ನೆನಪಾದಳು ಆಕೆಗೆ ; ಪ್ರೀತಿಸಿದ ವ್ಯಕ್ತಿಯನ್ನು ಕನಸಿನಲ್ಲೂ, ಕಲ್ಪನೆಯಲ್ಲೂ ಅನುಮಾನಿಸಲಾರದ ದೃಢ ಮನಸ್ಕ ಪ್ರೇಮಿಯ ಶೋಧದಲ್ಲಿದ್ದ ಕಮಲಾ.... ಆದರೆ ಈ ಮನುಷ್ಯ—

'ಮೊನ್ನಿನ ತನ್ನ ವರ್ತನೆಗಾಗಿ ಮೂರ್ತಿ ನಂತರ ತುಂಬ ಪಶ್ಚಾತ್ತಾಪ ವ್ಯಕ್ತಪಡಿಸಿದ. ಇನ್ನೆಂದೂ ಕೈಯೆತ್ತುವುದಿಲ್ಲೆಂದು ಪ್ರಮಾಣ ಮಾಡಿದ. ಮುಳುಗಿ ಹೋಗುತ್ತಿರುವವಳಿಗೆ ಸಿಕ್ಕ ತೇಲುತ್ತಿರುವ ಕಡ್ಡಿಯ ಆಧಾರದ ಹಾಗೆ ತೀರ ಡೆಸ್ಪರೇಟ್ ಆಗಿದ್ದ ನನಗೆ ಆ ಆಶ್ವಾಸನೆಯಿಂದ ಎಷ್ಟೋ ಸಮಾಧಾನವಾಯಿತು. ಕುಡಿದ ನಿಶೆಯಲ್ಲಿ ತಾನು ಹಾಗೆ ಬ್ರೂಟಲ್ ಆಗಿ ವರ್ತಿಸಿದ್ದಕ್ಕಾಗಿ ಆತ ಕ್ಷಮೆ ಸಹ ಬೇಡಿದ. ನಾನು ಕ್ಷಮಿಸದಿರುವುದು ಹೇಗೆ ಸಾಧ್ಯ ? ಆತ ನನ್ನ ಮೂರ್ತಿ ಅಲ್ಲವೆ ? ನಾನು ಕ್ಷಮಿಸಿದೆ, ಮರೆತೆ.

''ಆದರೆ ಈ ನನ್ನ- ನನ್ನವನೇ ಆದ - ನನ್ನ ಜೀವಪ್ರಾಣವಾದ ಮನುಷ್ಯ ಟೆಂಥ್‌ರೇಟ್ ಕುಡುಕ ಕಾರ್ಮಿಕನೊಬ್ಬನ ಹಾಗೆ ನನ್ನ ಬಗ್ಗೆ ಸಂಶಯ ತಾಳಬಲ್ಲನೆಂಬ ಅಂಶ ಮಾತ್ರ ನನ್ನ ತೀರ ಆಳದಲ್ಲಿ ಚುಚ್ಚಿ ಆಚೆ ಪಾರಾಗಿ ಹೋಯಿತು.... ಆತ ನನಗೆ ಉಪಯೋಗಿಸಿದ್ದ ಆ ಬೈಗುಳ ಪದಗಳು ನೆನಪಾದಾಗಲಂತೂ ನಾನು ಕಣ್ ಕಣ್ಣು ಬಿಡುತ್ತೇನೆ. ಹುಟ್ಟಿದ ನಂತರ ಎಂದೂ ಯಾರ ಬಾಯಿಂದಲೂ ಇಂಥ ಮಾತು ಕೇಳಿರಲಿಲ್ಲ. ಗಂಡ ಅನ್ನಿಸಿಕೊಂಡವನಿಂದ ಕೇಳಬೇಕಾಯಿತೇ.... ಅಥವಾ ಬಹುಶಃ ಆ ಶಬ್ದಗಳಿಗೆ ಮೂರ್ತಿಯ ದೃಷ್ಟಿಯಲ್ಲಿ ವಿಶೇಷ ಅರ್ಥವಿರಲಾರದು. ಆಗ ಆತ ಬಹಳವಾಗಿ ಕುಡಿದಿದ್ದನೆಂದು ಕಾಣುತ್ತದೆ. ನಂತರ ಆತನಿಗೇ ಪಶ್ಚಾತ್ತಾಪವಾಯಿತಲ್ಲ....''

—ಕಮಲಾ ತನ್ನನ್ನು ತಾನೇ ಸಂತಯಿಸಿಕೊಳ್ಳುವ ಈ ಪರಿಯ ಬಗ್ಗೆ ಶಶಿಗೆ ಅಯ್ಯೋ ಪಾಪ ಅನ್ನಿಸಿತು.

* * *

''ಗುಡ್ ಮೋರ್ನಿಂಗ್ ಶಶಿ,'' ವ್ಹಿ. ಟಿ. ಸ್ಟೇಶನ್ ಮೇಲೆ ಶಶಿ ಲೋಕಲ್ ಇಳಿಯುತ್ತಲೇ ಅವಳನ್ನು ಸ್ವಾಗತಿಸಲೆಂಬಂತೆ ನಿಂತಿದ್ದ ಸತೀಶ ದೇಶಪಾಂಡೆ.

''ಹಲೋ ಸತೀಶ, ಇದೇನು ಇಲ್ಲಿಗೆ ಬಂದೀ ? ರಜಾಗಿಜಾ ತಗೊಂಡು ಊರಿಗೆ ಹೊರಟೀಯೇನು ?'' ಯಾವ ಆಶ್ಚರ್ಯ-ಕುತೂಹಲವೂ ಇಲ್ಲದ ಧ್ವನಿ ಶಶಿಯದು.

''ಊರಿಗೆ ಹೊರಟಿಲ್ಲ. ಆದರ ಸನಿಹದಾಗ ಹೋಗಬೇಕಾಗೇದ. ಅದಕ್ಕs ನಿನಗ ಹೇಳ್ಲಿಕ್ಕೆ, ನಿನ್ನ ಕೂಡ ಸ್ವಲ್ಪ ಮಾತಾಡಲಿಕ್ಕೆ ಅಂತ ಇಲ್ಲೀ ತನಕಾ ಬಂದೆ. ನನ್ನ ಕಾರು ತಗೊಂಡು ಬಂದೀನಿ. ನಿನ್ನ ಡ್ಯೂಟೀ ಸುರೂ ಆಗ್ಲಿಕ್ಕೆ ಇನ್ನೂ ಒಂದು ತಾಸು ಟೈಮು ಅದ. ಅಲ್ಲೀ ತನಕಾ ನನ್ನ ಕೂಡ ಟೈಮ್ ಕಳೀಲಿಕ್ಕೆ ಏನರೆ ಅಬ್ಜೆಕ್ಷನ್ ಅದs ಏನು ?''

—ಸತೀಶ ಗಂಭೀರನಾಗಿ ಕೇಳಿದ.

"ನೋ ಅಬ್ಜೆಕ್ಷನ್" ಅಂತ ನಗುತ್ತ ಉತ್ತರಿಸಿದ ಶಶಿಯ ಕೈಹಿಡಿದುಕೊಂಡು ಆತ ಜನಸಾಗರದ ಮಧ್ಯೆ ದಾರಿ ಮಾಡಿಕೊಂಡು ತನ್ನ ಕಾರು ಪಾರ್ಕ್ ಮಾಡಿದ್ದಲ್ಲಿಗೆ ನಡೆದ.

ಮುಂದಿನ ಸುಮಾರು ಅರ್ಧ ತಾಸಿನವರೆಗೆ ಒಬ್ಬನೇ ಆಡಿದ ಆತನ ಮಾತುಗಳನ್ನು ಶಶಿ ಆಕಳಿಸುತ್ತಾ ಕೂತು ಕೇಳಿದಳು. ಶಶಿಯ ಬಗೆಗಿನ ಆತನ ಹಲವಾರು ವರ್ಷಗಳ ಪ್ರೇಮ ; ಆಕೆಯ ನಿರಾಕರಣೆಯಿಂದ ಅದು ಕಡಿಮೆಯಾಗಿಲ್ಲ ; ಆಕೆ ಹಲವಾರು ಸಲ ಉದ್ದೇಶಪೂರ್ವಕವಾಗಿ ಬೇರೆಯವರ ಸಂಗ ಮಾಡಿದ್ದರೂ ಆತ ಅದನ್ನು ಕಡೆಗಣಿಸಿದ್ದಾನೆ ; ಆಕೆ ಇಲ್ಲದೆ ಜೀವನ ಅಪೂರ್ಣ ಅಂತ ಆತನಿಗೆ ಈಗಲೂ ಅನಿಸುತ್ತದೆ, ಅದಕ್ಕೇ ಇಷ್ಟು ವರ್ಷ ಆತ ಮದುವೆಯಾಗದೆ ಉಳಿದದ್ದು ; ಆದರೆ ಊರಿನಲ್ಲಿ ಆತನಿಗೆ ವೃದ್ಧ ತಾಯಿಯೊಬ್ಬಳಿದ್ದಾಳೆ, ಮಗನ ಲಗ್ನ ನೋಡಿ ಸಾಯುವ ಇಚ್ಛೆ ಮುದುಕಿಯದು ; ಈ ಸಲ ರಜೆಯಲ್ಲಿ ಈ ಕಾರ್ಯ ಆಗಲೇಬೇಕೆಂಬ ಆಕೆಯ ಹಟ, ವಿನಂತಿ, ಕೊನೆಯ ಆಸೆ ; ಮಗನಾದವನು ಅಷ್ಟನ್ನಾದರೂ ನಡೆಸಿಕೊಡದಿದ್ದರೆ ಹೇಗೆ ? ಶಶಿ ದೊಡ್ಡ ಮನಸ್ಸು ಮಾಡಿ ಒಪ್ಪುತ್ತಾಳೆಯೇ ಅಂತ ಕೊನೆಯ ಸಲ ಕೇಳುತ್ತಿದ್ದಾನೆ ಆತ ; ಇಲ್ಲವೆಂದಾದರೆ ತಾಯಿ ಹೇಳಿದ ಯಾವ ಹೆಣ್ಣಿಗಾದರೂ ಕಣ್ಣುಮುಚ್ಚಿ ತಾಳಿ ಕಟ್ಟುವುದೊಂದೇ ಆತನಿಗುಳಿದಿರುವ ದಾರಿ ; ಇದಕ್ಕೆ ಶಶಿ ಏನನ್ನುತ್ತಾಳೆ ?

"ಕೇಳಿದ್ದನ್ನs ಎಷ್ಟು ಸಲ ಕೇಳ್ತೀ ಸತೀಶ ? ಹೇಳಿದ್ದನ್ನs ಎಷ್ಟ ಸಲ ಹೇಳಬೇಕು ?"

ಹಿಂದಿನ ರಾತ್ರಿ ಓದಿದ್ದ ಕಮಲಾನ ಡಾಯರಿಯ ಪರಿಣಾಮವೋ ಏನೋ, ಶಶಿಗೆ ಗಂಡಸು ಜಾತಿಯ ಬಗೆಗೇ ಎಲ್ಲಿಲ್ಲದ ಅಸಹನೆ-ಅಸಡ್ಡೆ ಅನಿಸತೊಡಗಿತ್ತು. ಅದನ್ನು ಮುಚ್ಚಿಡುವ ಪ್ರಯತ್ನ ಮಾಡದೆ ಆಕೆ ಅಂದಳು, "ಈ ಜನ್ಮದಾಗ ನಾ ಲಗ್ನ ಆಗಿ ಒಬ್ಬ ಗಂಡಸಿನ ಗುಲಾಮಳಾಗೂದಿಲ್ಲ."

"ಗುಲಾಮ ಯಾಕಾಗ್ತೀ ಶಶಿ ? ಮಹಾರಾಣಿ ಹಾಂಗ ಇರು. ನಾನs ನಿನ್ನ ಗುಲಾಮ ಆಗ್ತೀನಿ ಬೇಕಾದರ. ನಿನಗ ಎಷ್ಟ ಸರೆ ಹೇಳೀನಿ...."

"ನನಗ ಏನೂ ಹೇಳಬ್ಯಾಡ ಸತೀಶ, ಅದರಿಂದ ಏನೂ ಉಪಯೋಗ ಆಗೂದಿಲ್ಲ. ಥಣ್ಣಗ ಊರಿಗೆ ಹೋಗಿ ನಿಮ್ಮವ್ವ ತೋರ್ಸಿದ ಹುಡುಗಿನ್ನ ಲಗ್ನಾಗಿ ಸುಖದಿಂದಿರು." –ಶಶಿ ತಣ್ಣಗೆ ಹೇಳಿದಳು.

ಸತೀಶ ಗಂಭೀರವಾಗಿ ಕಾರನ್ನು ಹಾಸ್ಪಿಟಲಿನ ರಸ್ತೆಗೆ ತಿರುಗಿಸಿದ. ಟ್ರ್ಯಾಫಿಕ್ ಸಿಗ್ನಲ್‌ಗಳ ಕಡೆ ಆತನ ಗಮನವಿಲ್ಲದ್ದನ್ನು ಗಮನಿಸಿದ ಶಶಿ ಆತನ ಹೆಗಲು ಮುಟ್ಟಿ

ಎಚ್ಚರಿಸಿದಳು, "ಸಿನೆಮಾದಾಗಿನ ಟ್ರ್ಯಾಜಿಕ್ ಹೀರೋನ್ಹಾಂಗ ಬಿಹೇವ್ ಮಾಡಬ್ಯಾಡ ಸತೀಶ, ನನಗ ರಸ್ತೇ ಅಪಘಾತದಾಗ ಸಾಯೋ ಮನಸ್ಸಿಲ್ಲ."

ಸತೀಶ ಮಾತಾಡಲಿಲ್ಲ.

* * *

ರವಿವಾರ. ಎಂದಿನಂತೆ ಶಶಿ ಹತ್ತರ ಲೋಕಲ್ ಹಿಡಿಯಲು ಓಡಬೇಕಾಗಿಲ್ಲ. ಒಂದೊಂದು ಸಲ ರವಿವಾರವೂ ಆಕೆ ಕೆಲಸಕ್ಕೆ ಹೋಗಬೇಕಿತ್ತು. ಆದರೆ ಇವತ್ತು ಇಲ್ಲ. ಇವತ್ತು ಬೇಗನೆ ಊಟ ಮುಗಿಸಿ ಹಾಸಿಗೆಯ ಮೇಲುರುಳಿಕೊಂಡು ಕಮಲಾನ ಡಾಯರಿ ಆದಷ್ಟು ಓದಿ ಮುಗಿಸಬೇಕು ಅಂದುಕೊಂಡಳು. ಸ್ನಾನ ಮಾಡಿ ಹಾಗೆಯೇ ಕಮಲಾನ ಬ್ಲಾಕಿನ ಕಡೆ ಒಂದು ರೌಂಡ್ ಹೋಗಿ ಹುಡುಗರನ್ನು ವಿಚಾರಿಸಿಕೊಂಡು ಬರಬೇಕೆಂದು ಹೋದಳು. ಶಶಿಯನ್ನು ನೋಡಿ ರಾಜು-ನೀಲಾರಿಗೆ ಖುಶಿಯಾಯಿತು. ಕಾಲೇಜಿನಲ್ಲಿ ಓದುತ್ತಿದ್ದ ಹುಡುಗರು ಅವರಿಬ್ಬರೂ. ಅವರ ಪಾಲಿಗೆ ಕಮಲಾ ತಾಯಿ-ತಂದೆ ಎಲ್ಲಾ ಆಗಿದ್ದಳು. ಅವರಿಗೆ ಏನೆಂದು ಹೇಳಿ ಹೋಗಿದ್ದಾಳೋ ? "ಆಂಟಿಗೆ ಮೈಸೂರಿನ್ಯಾಗ ಫಿಲ್ಮಿನೊಳಗ ಆ್ಯಕ್ಟ್ ಮಾಡ್ಲಿಕ್ಕೆ ಯಾರೋ ಪ್ರೊಡ್ಯೂಸರ್ ಕರದಾರಂತ. ತಿರಿಗಿ ಬರಲಿಕ್ಕೆ ಭಾಳ ದಿನಾ ಆದೀತು ಅಂತ ಅಂದಳು. ಅದಕ್ಕಂತ ಅನಕಾತ ಇಲ್ಲೆ ಬಂದಿರ್ರಿ ಅಂತ ನಮ್ಮ ತಾಯಿಯವರಿಗೆ ತಿಳಿಸಿ ಹೋಗ್ಯಾಳ. ವಿಜಾಪೂರದಿಂದ ನಮ್ಮ ತಾಯಿ ಬರವ್ರಿದ್ದಾರ ನಾಳೆ-ನಾಡದ ಇಷ್ಟರಾಗ" —ನೀಲಾ ವಿವರಿಸಿದಳು.

"ಮತ್ತೇನರೆ ಹರಕತ್ತಾದರ ಏನೂ ಸಂಕೋಚ ಮಾಡಿಕೊಳ್ಳಲಾರದೇ ನನ್ನ ಕಡೆ ಬಾ ನೀಲಾ, ಏನು ಹೆಲ್ಪ್ ಬೇಕಾಗಿದ್ರೂ ಕೇಳು", ಶಶಿ ತುಸು ತಡೆದು ಸೇರಿಸಿದಳು, "ಏನರೆ ಹಣದ್ದು ಅಡಚಣಿ ಇದ್ದರ—"

"ಅದೆಲ್ಲಾ ವ್ಯವಸ್ಥಾ ಆಂಟಿ ಮಾಡೇ ಹೋಗ್ಯಾಳ್ರಿ ಡಾಕ್ಟರ್", ನೀಲಾ ಹೇಳಿದಳು, "ಬ್ಯಾಂಕಿನೊಳಗ ನನ್ನ ಹೆಸರ್ಲೆ ಅಕೌಂಟ್ ಓಪನ್ ಮಾಡಿ ತಿಂಗಳಾ ನಮಗ ಬೇಕಾಗೋವಷ್ಟು ಅಮೌಂಟ್ ತಗೊಳ್ಳಿಕ್ಕೆ ಹೇಳ್ಯಾಳ. ಮತ್ತೇನರೆ ಅವಶ್ಯ ಬಿದ್ರ ನಿಮಗ ಕೇಳು ಅಂತನೂ ಹೇಳ್ಯಾಳ."

ಶಿವಮೂರ್ತಿಯ ಕಂಪನಿಯ ನಾಟಕಗಳಲ್ಲಷ್ಟೇ ಅಲ್ಲದೆ ಆಗೀಗ ಬೇರೆ ಕಂಪನಿಗಳು-ಸಂಘ ಸಂಸ್ಥೆಗಳು ಆಹ್ವಾನಿಸಿದಾಗ ಬೇರೆ ನಾಟಕಗಳಲ್ಲೂ ಅಭಿನಯಿಸುತ್ತಿದ್ದ ಕಮಲಾ ಸಾಕಷ್ಟು ಹಣ ಮಾಡಿದ್ದಳು. ಅವಳು ಪೇಯಿಂಗ್ ಗೆಸ್ಟ್ ಆಗಿ ಸೇರಿಕೊಂಡಿದ್ದ ಮನೆಯ ಗುಜರಾಥಿ ದಂಪತಿಗಳು ಯಾವುದೋ ಕಾರಣಕ್ಕಾಗಿ ಮರಳಿ ಗುಜರಾಥಕ್ಕೆ ಹೋದುದರಿಂದ ಅದೇ ಮನೆಯನ್ನೇ ಇನ್ನಷ್ಟು ಹಣ ಕೊಟ್ಟು ಬಾಡಿಗೆ ಹಿಡಿದಿದ್ದಳು. ಐದಾರು ವರ್ಷಗಳ ಬಾಡಿಗೆ ಹಣವನ್ನು ಅಡ್ವಾನ್ಸ್ ಆಗಿ

ಕೊಟ್ಟಿದ್ದಳು. ಶಶಿ ನೋಡುತ್ತಿದ್ದಂತೆ ಮನೆಯೂ ಸಾಕಷ್ಟು ಸುಸಜ್ಜಿತವಾಗಿಯೇ ಇತ್ತು. ಎಷ್ಟು ಕನಸುಗಳಿದ್ದವು ಕಮಲಾಗೆ ಸಂಸಾರದ ಬಗ್ಗೆ ! ತನ್ನದೇ ಆದುದೊಂದು ಪುಟ್ಟ ಮನೆ, ಪ್ರೀತಿಸುವ ಗಂಡ, ಮುದ್ದಾದ ಒಂದೆರಡು ಮಕ್ಕಳು – ಇತ್ಯಾದಿಗಳೇ ಸರ್ವಸ್ವವೆಂದು ನಂಬಿದ್ದ ಟಿಪಿಕಲ್ ಹಿಂದೂ ಹೆಂಗಸು ಆಕೆ. ಯಾವುದೋ ಭ್ರಮೆಗೊಳಗಾಗಿ ಈ ಶಿವಮೂರ್ತಿಯನ್ನು ಕಟ್ಟಿಕೊಳ್ಳುವ ಬದಲು ಬೇರೆ ಯಾರಾದರೊಬ್ಬ ಕ್ವಾಲಿಫಾಯ್ಡ್ ವರನನ್ನು ನೋಡಿ ಲಗ್ನವಾಗಿದ್ದರೆ ಆಕೆ ಸುಖಿಯಾಗುತ್ತಿದ್ದಳು ಅಂತ ಯಾವಾಗಲೂ ಅನಿಸುತ್ತಿದ್ದ ಹಾಗೆ ಶಶಿಗೆ ಈಗಲೂ ಅನಿಸಿತು. ಆದರೆ ಕಮಲಾಗೆ ಮಾತ್ರ ಎಂದೂ ಹಾಗನಿಸಲಿಲ್ಲವೆಂದೂ ಶಶಿಗೆ ಗೊತ್ತಿತ್ತು :

> “ಈ ಜನ್ಮದಲ್ಲಿ ನನ್ನ ಮನಸ್ಸು ಒಪ್ಪುವ ಗಂಡಸು ಶಿವಮೂರ್ತಿ ಮಾತ್ರ. ಆತ ಮದುವೆಯಾದವನಿರಲಿ, ಮಕ್ಕಳೊಂದಿಗನಿರಲಿ, ಸಂಶಯ ಪಿಶಾಚಿಯಾಗಿರಲಿ, ನನ್ನನ್ನು ಬೇಕಾದಷ್ಟು ಅಲಕ್ಷಿಸಲಿ, ಅವಮಾನಿಸಲಿ, ಆದರೂ ನನಗೆ ಅವನು ಬೇಕು, ಅವನೇ ಬೇಕು. ಅವನಿಲ್ಲದೆ ನಾನು ಸುಖಿಯಾಗಲಾರೆ. ಅವನ ದೋಷಗಳೇನೇ ಇದ್ದರೂ ಒಂದು ವಿಷಯ ಮಾತ್ರ ನಿಜ, ಅವನು ನನ್ನನ್ನು ಪ್ರೀತಿಸುತ್ತಾನೆ. ನನ್ನ ವಿನಃ ಇನ್ನಾರನ್ನೂ ಎಂದೂ ಪ್ರೀತಿಸಿಲ್ಲ, ಮುಂದೆಯೂ ಪ್ರೀತಿಸುವುದಿಲ್ಲ. ಎಷ್ಟೋ ಸಾವಿರ ಸಲ ಈ ಹಿಂದೆ ನನಗವನು ಹೇಳಿದ್ದಾನೆ, ‘ಕಮಲಾ, ನೀನು ನನ್ನ ಜೀವನದಲ್ಲಿ ಬರುವ ಮೊದಲು ನನಗೆ ಹೆಂಡತಿ, ಮಕ್ಕಳು, ಪ್ರಸಿದ್ಧಿ, ಹಣ, ಸುಖ ಎಲ್ಲಾ ಇತ್ತು. ಆದರೆ ನನ್ನ ಆತ್ಮ ಯಾವಾಗಲೂ ಯಾವ ಕಾರಣಕ್ಕಾಗಿಯೋ ಸದಾ ಅತೃಪ್ತವಾಗಿರುತ್ತಿತ್ತು. ಅದು ಯಾಕೆ ಅಂತ ನನಗೇ ಗೊತ್ತಿರಲಿಲ್ಲ. ನಿನ್ನನ್ನು ಕಂಡಾಗಲೇ ನನಗದರ ಕಾರಣ ಗೊತ್ತಾಗಿದ್ದು. ನನ್ನಂತರಂಗಕ್ಕೆ ನಿನ್ನಂತಹ ಸಂಗಾತಿಯ- ಅಲ್ಲ, ನಿನ್ನದೇ – ಅವಶ್ಯಕತೆಯಿತ್ತು. ಅದೀಗ ಪೂರ್ಣವಾಯಿತು. ನೀನು ನನಗೆ ಎಷ್ಟೆಲ್ಲ ಕೊಟ್ಟಿರುವಿ. ಇಂಥ ಅಪೂರ್ವ ತೃಪ್ತಿಯನ್ನು ಹಿಂದೆ ನಾನೆಂದೂ ಅನುಭವಿಸಿರಲಿಲ್ಲ.’ ಶಿವಮೂರ್ತಿ ಏನೇ ಹೇಳಿದರೂ ಮನಸ್ಸಿನಿಂದ ಹೇಳಿರುತ್ತಾನೆ. ತೋರಿಕೆಯ ಮಾತುಗಳಿಗೆ ಆತನಲ್ಲಿ ಆಸ್ಪದವಿಲ್ಲ ಅಂತ ನನಗೆ ಗೊತ್ತು. ಅದಕ್ಕೆಂದೇ ಆತ ಆಗೀಗ ಕೆಟ್ಟ ಮಾತು ಆಡಿದರೂ, ನೋಯಿಸಿದರೂ, ಅಲಕ್ಷಿಸಿದರೂ ನನಗವನು ಮತ್ತೆ ಮತ್ತೆ ಬೇಕು ಅನ್ನಿಸುವುದು. ಅವನನ್ನು ಲಗ್ನವಾಗಿ ನಾನು ಪೂರ್ಣ ಸುಖಿಯಾಗಿಲ್ಲ ನಿಜ, ಆದರೆ ಇನ್ನಾರನ್ನೇ ಲಗ್ನವಾಗಿದ್ದರೂ ನಾನು ಪೂರ್ಣ ದುಃಖಿಯಾಗಿರುತ್ತಿದ್ದೆ.

ಈ ಜನ್ಮದಲ್ಲಿ ನನಗೆ ಸುಖ-ಸಂತೋಷ ಲಭ್ಯವಿರುವುದೇ ಆದಲ್ಲಿ ಅದು ಮೂರ್ತಿಯ ಪ್ರೀತಿಯಲ್ಲಿ, ಸಹವಾಸದಲ್ಲಿ ಮಾತ್ರ."

ಅನೇಕ ದಿನಗಳ ವರೆಗೆ ಈ ವಿಷಯದಲ್ಲಿ ಮಾತ್ರ ಕಮಲಾನ ಅಭಿಪ್ರಾಯ ಸರಿಯಿರಬಹುದೇನೋ ಅನಿಸುತ್ತಿತ್ತು ಶಶಿಗೆ. ಶಿವಮೂರ್ತಿ ಮನುಷ್ಯ ಎಂಥವನೇ ಆಗಿರಲಿ, ಆತ ಕಮಲಾನನ್ನು ಪ್ರೀತಿಸುವುದು ಮಾತ್ರ ನಿಜವಿರಲೇಬೇಕು. ಇಲ್ಲವಾದರೆ ಯಾರು ಹೀಗೆ ರಿಸ್ಕ್ ತೆಗೆದುಕೊಂಡು ಕಾನೂನುಬಾಹಿರ ಎರಡನೆಯ ಲಗ್ನವಾಗುತ್ತಾರೆ ? ಒಂದು ರೀತಿಯಿಂದ ಇದೂ ದೊಡ್ಡ ತ್ಯಾಗವೇ.

ಆದರೆ ಈ ತ್ಯಾಗಪುರುಷನ ನಿಜವಾದ ಬಣ್ಣಗಳು ಒಂದೊಂದೇ ಬಯಲಿಗೆ ಬರತೊಡಗಿ ಕಮಲಾನ ಅಚಲ ನಂಬಿಗೆ ತುಸು-ತುಸುವಾಗಿ ಕುಸಿಯತೊಡಗಿದ್ದು ಮಾತ್ರ ಶಶಿಗೆ ತಿಳಿದಿರಲಿಲ್ಲ :

"ಮೂರ್ತಿ ಈಗೀಗ ಯಾಕೋ ಮಾತುಮಾತಿಗೆ ಸಿಡುಕುತ್ತಾನೆ. ನನ್ನ ಮೇಲಿರಲಿ, ರಾಜು-ನೀಲಾರ ಮೇಲೂ ಸಿಡುಕತೊಡಗಿದ್ದಾನೆ. ಪಾಪ ನೀಲಾ, 'ನಾವಿಲ್ಲಿರೋದು ಮೂರ್ತಿ ಅಂಕಲ್‌ಗೆ ಸೇರೋದಿಲ್ಲ ಕಾಣಸ್ತದ ಆಂಟೀ, ಸುಮ್ನ ನಮ್ಮ ಸಲುವಾಗಿ ಗಂಡಾ-ಹೆಂಡ್ತಿ ನಡುವ ಮನಸ್ತಾಪ ಆಗೋದು ಬ್ಯಾಡ, ಥಣ್ಣಗ ನಮ್ಮನ್ನ ವಿಜಾಪೂರಕ್ಕೆ ತಿರುಗಿ ಕಳಿಸಿ ಬಿಡು. ಮನೀ ಅದ, ಅವ್ವ ಇದ್ದಾಳ, ಕಾಲೇಜೂ ಅದ. ನಮ್ಮದು ಹ್ಯಾಂಗೋ ನಡೀತದ. ನೀನರೆ ಆರಾಮ ಇರು', ಅಂತ ಕಣ್ಣಲ್ಲಿ ನೀರು ತಂದು ಹೇಳಿದಳು. ಹಾಗಲ್ಲ, ಮೂರ್ತಿ ಸಿಡುಕುವುದಕ್ಕೂ ಹುಡುಗರು ಇಲ್ಲಿರುವುದಕ್ಕೂ ಏನೂ ಸಂಬಂಧವಿಲ್ಲ ಅಂತ ನೀಲಾಳನ್ನು ಸಮಾಧಾನಪಡಿಸಬೇಕಾದರೆ ಸಾಕಾಯಿತು.

ನೀಲಾಗೆ ಏನೇ ಹೇಳಿದರೂ ನನಗೆ-ನನ್ನ ಒಳಗೆ ಎಲ್ಲೋ ಒಂದೆಡೆಗೆ ಅನಿಸುತ್ತಿದೆ, ಮೂರ್ತಿ ಯಾಕೋ ವಿಶೇಷವಾಗಿ ನೀಲಾಳನ್ನು ಕಂಡರೆ ಸಿಡುಕುತ್ತಾನೆ. ಆ ಹುಡುಗಿ ಏನು ಮಾಡಿದರೂ ತಪ್ಪು. ಸಂಗೀತ ಕ್ಲಾಸಿಗೆ ಹೋದರೆ ತಪ್ಪು, ಸಿನೇಮಾಕ್ಕೆ ಹೋದರೆ ತಪ್ಪು, ಕಾಲೇಜಿನಲ್ಲಿನ ಯಾವುದಾದರೂ ಸಮಾರಂಭಕ್ಕೆ ಹೋದರೆ ತಪ್ಪು, ಯಾರೊಡನಾದರೂ ಮಾತಾಡಿದರಂತೂ ತೀರ ದೊಡ್ಡ ತಪ್ಪು. 'ಛಂದಾಗಿ ಮರ್‍ಯಾದಿಯಿಂದ ಕಾಲೇಜಿಗೆ ಹೋಗಿ ಸೀದಾ ಮನೀಗೆ ಬಾ ಅಂತ ಹೇಳು ಆ ಹುಡುಗಿಗೆ. ಸಂಗೀತ ಕಲ್ತು ಈಕೇನು ನಾಚ್‌ವಾಲಿ ಆಗಾಕೇನು ? ಸಿನೇಮಾದ ಚಟಾ ಯಾಕ ಈಕೀಗೆ ? ಅದ್ಯಾಕ ಎಲ್ಲಾರ ಕೂಡ ಫಿದೀ ಫಿದೀ ನಕ್ಕೋತ ಮಾತಾಡ್ತಾಳ ? ನಿನ್ನ ಸಲಿಗಿ ಅದs ಆಕೀಗೆ, ಅದಕ್ಕs ಹಿಂಗ ಹಾದೀ ಬಿಡ್ಲಿಕ್ಹತ್ತ್ಯಾಳ. ನನಗೇನು ಇದು ಸರೀ

ಬರೂದಿಲ್ಲ.' -ಹೀಗೇ ಏನೇನೋ.

ನೀಲಾ ಸ್ವಲ್ಪ ಸೋಶಿಯಲ್ ಇರುವುದು ನಿಜ. ತುಂಬಿ ಹರಿಯುವ ಜೀವನೋತ್ಸಾಹವುಳ್ಳ ಹದಿನೆಂಟರ ಪ್ರಾಯ ಅವಳಿಗೆ. ಈ ವಯಸ್ಸಿನಲ್ಲಿ ಜೊತೆಯವರೊಂದಿಗೆ ನಗುತ್ತ, ಕಲೆಯುತ್ತ ಇರಬಾರದೆ ? ಸಿನೆಮಾ ನೋಡಬಾರದೆ ? ಸಂಗೀತದಲ್ಲಿ ಆಸಕ್ತಿ ಇದ್ದರೆ ಕಲಿಯಬಾರದೆ ? ಎಲ್ಲದರಲ್ಲೂ ಈತ ಡೊಂಕು ಕಾಣುವುದೇಕೆ ?

'ನನ್ನ ಮಗಳು ಅಪರ್ಣಾ ಈಗ ಎಷ್ಟು ಛೆಂದ ಡಾನ್ಸ್ ಮಾಡ್ತಾಳಂತೀ ಕಮಲಾ, ಆಕಿಗೆ ಭರತನಾಟ್ಯದ್ದು ಛಲೋ ನ್ಯಾಕ್ ಅದ ನೋಡು. ದೇವದತ್ತ ಕಲಾ ಅದs ಆಕೀಗೆ,' ಅನ್ನುತ್ತಾನೆ ಇದೇ ಮೂರ್ತಿ. ಅದೆಷ್ಟೋ ಸಲ ಮಧ್ಯಾಹ್ನ ಬಂದು, 'ಹುಡುಗೂರ್ನ-ಆಕೀನ್ನ ಸಿನಿಮಾಕ್ಕ ಕಳಿಸಿ ಬಂದೆ. ಅವರಿಗೂ ಏನರೆ ಎಂಟರ್‌ಟೇನ್‌ಮೆಂಟ್ ಬೇಕಲ್ಲಾ ಮತ್ತ,' ಅನ್ನುತ್ತಾನೆ. ನಿನ್ನ ಮಗಳು ಡಾನ್ಸ್ ಕಲಿತು ಏನಾಗಬೇಕನ್ನುತ್ತಾಳೆ– ಅಂತ ಕೇಳಬೇಕನಿಸಿದರೂ ನಾನು ಕೇಳುವುದಿಲ್ಲ. ಬೇರೆಯವರ ಹೆಣ್ಣುಮಕ್ಕಳ ವಿಷಯದಲ್ಲಿ ಹಗುರವಾಗಿ ಮಾತನಾಡುವದು ನನಗೆಂದೂ ಸೇರುವುದಿಲ್ಲ. ಮೂರ್ತಿಗೇಕೆ ಇಂಥ ಸಂಕುಚಿತ ಬುದ್ಧಿಯೋ.

ಮೊನ್ನೆ ನೀಲಾ ಅಳುತ್ತ ಬಂದು ಹೇಳಿದಳು, 'ಆಂಟಿ, ಕಾಲೇಜು ಬಿಟ್ಟು ಬರೋವಾಗ ಎದುರಿನ ಮನೀ ಪ್ರಕಾಶ ಭೆಟ್ಟಿಯಾಗಿದ್ದ. ಅವನು ನನ್ನ ಕ್ಲಾಸ್‌ಮೇಟ್, ಭಾಳ ಹುಷಾರ ಹುಡುಗ. ಸ್ಟೇಶನ್ನಿನಿಂದ ಮನೀತನಕಾ ನನ್ನ ಕೂಡ ಬಂದ. ಅವನ ನೋಟ್ಸ್ ಬೇಕಾಗಿದ್ದವು ಅಂತ ನಾನs ಮೊದ್ಲ ಮಾತಾಡ್ಸಿದ್ದೆ. ಮೂರ್ತಿ ಅಂಕಲ್ ಯಾವಾಗ ಹಿಂದಿನಿಂದ ಬಂದರೋ ಏನೋ, ನಡು ರಸ್ತೇದಾಗ ಇಬ್ರನ್ನೂ ನಿಲ್ಲಿಸಿ ಪ್ರಕಾಶಗ ಸಿಕ್ಹಾಂಗ ಬೈದು ಬಿಟ್ರು. 'ಲಫಂಗ, ಮಂದೀ ಹುಡಿಗ್ಯಾರ ಬೆನ್ನು ಹತ್ತುತ್ತೀಯಾ' ಅಂದರು. ಆತ ಪಾಪ, ಕಕ್ಕಾವಿಕ್ಕಿಯಾದ. ತನ್ನ ತಪ್ಪೇನು ಅಂತ ಕಡಿಕೂ ಗೊತ್ತಾಗ್ಲಿಲ್ಲ ಅವನಿಗೆ. ಅಂಕಲ್ ಕಡೆ ಬೈಸಿಕೊಂಡು ಸುಮ್ನ ತಲೀ ತಗ್ಗಿಸಿಕೊಂಡು ಹೋಗಿಬಿಟ್ಟ ಪಾಪ. ನನಗ ಎಷ್ಟು ಇನ್‌ಸಲ್ಟ್ ಆತು.... ಕಾಲೇಜಿನ್ಯಾಗ ಮುಖಾ ಎತ್ತಿ ತಿರಿಗ್ಯಾಡೂದು ಶಕ್ಯ ಇಲ್ಲ ಇನ್ನ. ಪಾಪ, ಪ್ರಕಾಶ ಎಷ್ಟ ಛಲೋ ಹುಡುಗ....'

–ಹೌದು. ಒಳ್ಳೆಯ ಆಟಗಾರನ ಮೈಕಟ್ಟುಳ್ಳ ಡೀಸೆಂಟ್ ಕಾಣುವ ಸ್ಮಾರ್ಟ್ ಹುಡುಗ ಪ್ರಕಾಶ.... ವಿನೋದ ಸಹಾನಿಯ ಹಾಗೆ. ವಿನೋದನನ್ನು

ಕಂಡರೂ ಮೂರ್ತಿಗೆ ಆಗುವುದಿಲ್ಲ. ಈಗ ಪ್ರಕಾಶನ ಮೇಲೆ ಸಿಟ್ಟು. ಆತನ ದೃಷ್ಟಿಯಲ್ಲಿ ಸ್ಮಾರ್ಟ್ ಆಗಿರುವ, ವಯಸ್ಸಿನಿಂದ ಚಿಕ್ಕವರಾಗಿರುವ, ಇಂಪ್ರೆಸಿವ್ ಆಗಿರುವ ತರುಣರೆಲ್ಲಾ 'ಬದ್ಮಾಶ್ ಸೂಳೇ ಮಕ್ಕಳು' ....ಇದು ಎಂಥ ವಿಚಿತ್ರ ಕಾಂಪ್ಲೆಕ್ಸ್ !

ಇಷ್ಟೇ ಆಗಿದ್ದರೆ ನಾನು ಯೋಚಿಸಬೇಕಾಗಿರಲಿಲ್ಲ. 'ಅವರ ಸ್ವಭಾವನs ಹಾಂಗ ನೀಲಾ, ನಾವು ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು. ಬಾಯಿಯಿಂದ ಏನs ಅಂದ್ರೂ ಮನಸ್ಸಿನಿಂದ ಅವರು ಕೂಸಿನಂಥವರು' ಅಂತ ನೀಲಾಗೆ ಹೇಳಿ ಸಮಾಧಾನಗೊಳಿಸಿದೆ ನಿಜ, ಆದರೆ ಸ್ವತಃ ನನಗೇ ನನ್ನ ಮಾತಿನಲ್ಲಿ ನಂಬಿಕೆಯಿಲ್ಲದಂತಾಗತೊಡಗಿದೆ.''

ಕಮಲಾನ ಎಲ್ಲ ನಂಬಿಕೆಗಳೂ ಹಾಗೆ ಒಂದೊಂದಾಗಿ ಕುಸಿಯತೊಡಗಿದ್ದವು. ಮೂರ್ತಿಯ ಮೇಲಿನ ನಂಬಿಕೆ, ತನ್ನ ಮೇಲಿನ ನಂಬಿಕೆ, ಜೀವನದ ಮೇಲಿನ ನಂಬಿಕೆ, ಆದರ್ಶಗಳ ಮೇಲಿನ ನಂಬಿಕೆ, ಎಲ್ಲ ನಿಧಾನವಾಗಿ ಕರಗತೊಡಗಿದ್ದವು.

"ನಿನ್ನೆ ಸಂಜೆ ಬಹಳ ಬೇಸರ ಬಂದಿತ್ತು. ಇಡಿಯ ದಿನದ ಕೆಲಸದಿಂದ ದಣಿವೂ ಆಗಿತ್ತು. ರಾಜು ವಿಜಾಪೂರಕ್ಕೆ ಹೋಗಿದ್ದರಿಂದ ಮನೆಯಲ್ಲಿ ಒಬ್ಬಳೇ ಇದ್ದು ಬೇಸರವಾಗಿದ್ದರಿಂದಲೋ ಏನೋ ನೆರೆಮನೆಯ ಶಾಂತಾ ಆಪ್ಟೆಯೊಂದಿಗೆ ನೀಲಾ ಮಧ್ಯಾಹ್ನದ ಪಿಕ್ಚರಿಗೆ ಹೋಗಿದ್ದಳು, ಇನ್ನೂ ಬಂದಿರಲಿಲ್ಲ. ಇದ್ದಕ್ಕಿದ್ದಂತೆ ಮುಗಿಲೆಲ್ಲ ಕಪ್ಪಾಗಿ ಮಳೆ ಹನಿಯತೊಡಗಿತು. ಆಗಲೇ ಮಳೆಗಾಲ ಪ್ರಾರಂಭವಾಗಿದ್ದರಿಂದ ತಣ್ಣಗಿನ ಹವೆ ಬೀಸತೊಡಗಿತು. ಮನೆಗೆಲ್ಲ ಒಬ್ಬಳೇ ಇದ್ದೆ. ಈಗ ಮೂರ್ತಿ ಬರಬಾರದೆ, ಈ ಮಳೆಯಲ್ಲಿ, ಕತ್ತಲಲ್ಲಿ, ಚಳಿಯಲ್ಲಿ ಆತನನ್ನಪ್ಪಿ ಬೆಚ್ಚಗೆ ಮಲಗುವುದು ಎಷ್ಟು ಚೆನ್ನ ಅನ್ನಿಸಿತು.

—ಹಿಂದಿನ ನೆನಪುಗಳು ಕಾಡಿದವು....

—ಒಂದು ಸಲ ಮಳೆಗಾಲದಲ್ಲಿ ಇಬ್ಬರೂ ಮಹಾಬಲೇಶ್ವರಕ್ಕೆ ಹೋಗಿದ್ದೆವಲ್ಲ. 'ಕೆಟ್ಟ ಥಂಡೀ ಹವಾದಾಗ ಇದೆಂಥ ಹನೀಮೂನ್‌ರೆಪಾ ನಿಮ್ದು' ಅಂತ ಮ್ಯಾನೇಜರ್ ಗಾಡಗೀಳ ಚೇಷ್ಟೆ ಮಾಡಿದ್ದ. ಅವನಿಗೇನು ಗೊತ್ತು, ನಾವಿಬ್ಬರೂ ಒಟ್ಟಿಗಿದ್ದಾಗ ಚಳಿ-ಮಳೆ-ಬಿಸಿಲು ಯಾವುದೂ ತಾಗುವುದಿಲ್ಲ ಅಂತ ? ಮಹಾಬಳೇಶ್ವರದ ದಟ್ಟಡವಿಯಲ್ಲಿ ಧೋಧೋ ಮಳೆ ಸುರಿಯುತ್ತಿದ್ದಾಗ ಕೈಕೈ ಹಿಡಿದುಕೊಂಡು ನಿಧಾನವಾಗಿ ತೋಯಿಸಿಕೊಳ್ಳುತ್ತ ಹಕ್ಕಿಗಳಂತೆ ಚಿಲಿಪಿಲಿ ಮಾತಾಡುತ್ತ ಎರಡು-ಮೂರು

ಮೈಲು ದಾರಿ ನಡೆದಿದ್ದೆವು. ಯಾವ ಕೆಲಸಕ್ಕೋ ಆ ಕಡೆ ಹಾಯ್ದು ಹೋದ ಫಾರೆಸ್ಟ್ ಡಿಪಾರ್ಟ್‌ಮೆಂಟಿನ ಜೀಪಿನ ಡ್ರೈವರ್ ನಮ್ಮನ್ನು ನೋಡಿ ಯಾರೋ ಪಾಪ ಮಳೆಯಲ್ಲಿ ಸಿಕ್ಕಿದ್ದಾರೆ ಅಂದುಕೊಂಡು ಜೀಪು ನಿಲ್ಲಿಸಿ 'ಬರ್ರೀ ಡ್ರಾಪ್ ಕೊಡ್ತೀನಿ' ಅಂದಾಗ ನಾವು ಬೇಡವೆಂದದ್ದು ಕೇಳಿ ಅತ್ಯಾಶ್ಚರ್ಯದಿಂದ ಎರಡು ನಿಮಿಷ ನಮ್ಮನ್ನೇ ನೋಡಿ ಮುಂದೆ ಹೋದನಲ್ಲ, ಖಂಡಿತ ನಾವು ಹುಚ್ಚರೆಂದುಕೊಂಡಿರಬೇಕು ಆತ. ಆತ ಏನಂದುಕೊಂಡಿರಬಹುದೆಂದು ನೆನೆದು ನಾವು ನಕ್ಕೇ ನಕ್ಕಿದ್ದೆವು. ಹಾಗೆ ನೋಡಿದರೆ ಆಗ ನಾವು ಹುಚ್ಚರೇ ಆಗಿದ್ದಿಲ್ಲವೆ ?

– ಇನ್ನೊಂದು ಸಲ ಮಹಾಬಳೇಶ್ವರದ ಈ ಘಟನೆಗಿಂತ ಬಹಳ ಹಿಂದೆ -ನಾನು ಮುಂಬೈಗೆ ಬಂದ ಹೊಸದರಲ್ಲಿ ಒಮ್ಮೆ ಜಡಿಮಳೆ ಬೀಳತೊಡಗಿತ್ತು. ಆ ದಿನ ಕಂಪನಿಯಲ್ಲಿ ರಿಹರ್ಸಲ್ ಮುಗಿಯಲು ಬಹಳ ತಡವಾಯಿತು. ನಾನು ಕೇಳದಿದ್ದರೂ ನನ್ನನ್ನು ಕಳಿಸಲು ಬರುವೆನೆಂದು ಹೇಳಿ ಮೂರ್ತಿ ಕಾರು ತೆಗೆದುಕೊಂಡು ಬಂದ. ರಾತ್ರಿ ಹತ್ತು ಗಂಟೆಯಾಗಲು ಬಂದಿರಬೇಕು. ನನಗಿನ್ನೂ ಆಗ ಮುಂಬಯಿಯ ದಾರಿಗಳ ಪರಿಚಯವಿರಲಿಲ್ಲ. ಆದರೂ ಕಂಪನಿಯ ಆಫೀಸಿನಿಂದ ನಮ್ಮ ಮನೆಗೆ ಕಾರಿನಲ್ಲಿ ಹೋಗಲು ಸುಮಾರು ಒಂದು ತಾಸಿಗಿಂತ ಹೆಚ್ಚಿಗೆ ಸಮಯ ಬೇಕಾಗುವುದಿಲ್ಲೆಂದು ಅಂದಾಜು ಗೊತ್ತಿತ್ತು. ಆದರೆ ಎಷ್ಟು ಹೊತ್ತಾದರೂ ಕಾರು ಹಾಗೇ ಸಾಗುತ್ತಿದ್ದುದನ್ನು ನೋಡಿ ಸಂಶಯದಿಂದ ಕೇಳಿದೆ, 'ನಾವು ಹೊರಟಿದ್ದು ಎಲ್ಲಿಗೆ ಡೈರೆಕ್ಟರ್ ಸಾಹೇಬರೆ ?'

– ಆತ ಸುಮ್ಮನಿದ್ದ.

– ನನಗೆ ಹೆದರಿಕೆಯಾಗಲಿಲ್ಲ. ಆ ಮನುಷ್ಯನ ಬಗ್ಗೆ ನನಗೆ ತುಂಬ ಕೌತುಕ, ಪ್ರಶಂಸೆ, ಗೌರವ. ಮತ್ತೂ ಏನೇನೋ ಹೆಸರಿಸಲಾಗದ ಭಾವನೆಗಳಿದ್ದುದರಿಂದ, ಅದಕ್ಕೂ ಹೆಚ್ಚಾಗಿ ನನ್ನ ಮೇಲೆಯೇ ನನಗೆ ಸಾಕಷ್ಟು ಭರವಸೆಯಿದ್ದುದರಿಂದ, ನಾನು ಸುಮ್ಮನೆ ಕುಳಿತೆ.

ಕೊನೆಗೊಮ್ಮೆ ಕಾರು ನಿಂತದ್ದು ಮುಂಬಯಿಯ ಹೊರವಲಯದಲ್ಲಿನ ತೀರ ನಿರ್ಜನವಾದ ಯಾವುದೋ ಪ್ರದೇಶದಲ್ಲಿ, ಸುಂದರವಾಗಿ, ಶಾಂತವಾಗಿ ಕಾಣುತ್ತಿದ್ದುದೊಂದು ಲಾಜಿಂಗ್‌ನ ಎದುರಿಗೆ. ಅಲ್ಲಿನವರಿಗೆ ಮೂರ್ತಿ ಪರಿಚಿತನಿರಬೇಕು. ವೇಟರುಗಳು-ಸರ್ವರುಗಳು-ಲಾಜಿಂಗಿನ ಮಾಲೀಕ ಸಹ ಆತನೊಂದಿಗೆ ತುಂಬ ಗೌರವದಿಂದ ವರ್ತಿಸುತ್ತಿದ್ದರು. ಏನೂ ವಿಶೇಷ

ಪ್ರತಿಕ್ರಿಯೆ ತೋರಿಸದೆ ನಾನು ಮೂರ್ತಿಯ ಹಿಂದೆ, ಬಹುಶಃ ಈ ಮೊದಲೇ ಕಾದಿರಿಸಿದ್ದ ರೂಮಿಗೆ ಹೋದೆ. ಯಾವುದೋ ರಾಜನ ಅಂತಃಪುರದಂತಿತ್ತು ಅದೆಲ್ಲ. ತುಂಬ ಆತ್ಮವಿಶ್ವಾಸದಿಂದ ನಾನು ಸೋಫಾದ ಮೇಲೆ ಕೂತೆ. ಆತ ವ್ಹಿಸ್ಕಿ ಕುಡಿಯುವುದನ್ನು ನೋಡುತ್ತಾ ತಣ್ಣಗಿನ ಆ್ಯಪಲ್‌ಜ್ಯೂಸ್ ಹೀರಿದೆ. ನಂತರ–

–ನಂತರ ಯಾವ ಹಿನ್ನೆಲೆ-ಸೂಚನೆ ಏನೂ ಇಲ್ಲದೆ ನಡೆದಿತ್ತು ಆ ಘಟನೆ. ಧಡಕ್ಕನೆ ಎದ್ದು ಅನಾಮತ್ತಾಗಿ ನನ್ನನ್ನೆತ್ತಿ ನನ್ನ ಯಾವ ಪ್ರತಿಭಟನೆಯನ್ನೂ ಲೆಕ್ಕಿಸದೆ ಹಾಸಿಗೆಯಲ್ಲಿ ಕೆಡವಿ ನಾನು ಮಿಸುಗಾಡಲೂ ಆಸ್ಪದ ಕೊಡದಂತೆ ಆತನ ಬಲವಾದ ತೋಳುಗಳು ನನ್ನನ್ನು ಬಿಗಿದಪ್ಪಿದವು. ಹೊರಗೆ ಮಳೆ ಸುರಿಯುತ್ತಲೇ ಇತ್ತು....

ನಂತರದ ದಿನಗಳಲ್ಲಿ ಹಲವಾರು ಬಾರೀ ಇದೇ ಘಟನೆಯ ಪುನರಾವರ್ತನೆ. ಇದೆಲ್ಲವನ್ನೂ ವಿರೋಧಿಸಬೇಕೆಂದು ನನಗೆ ತೀವ್ರವಾಗಿ ಅನ್ನಿಸುತ್ತಿತ್ತು. ಪ್ರತಿಸಲ ಎಲ್ಲ ಮುಗಿದ ನಂತರ ನಾನು ಮೈಯಿಡೀ ನಡುಗುತ್ತ ಎದೆ ಬರಿದಾಗುವಂತೆ ಅಳುತ್ತಿದ್ದೆ. ಪ್ರತಿಸಲ ಆತ ಕೊನೆಗೆ 'ಸಾರಿ ಕಮಲಾ, ನನ್ನನ್ನ ಕ್ಷಮಿಸು. ಬಟ್ ಆಯ್ ಕಾಂಟ್ ಕಂಟ್ರೋಲ್ ಮಾಯ್‌ಸೆಲ್ಫ್', ಅನ್ನುತ್ತಿದ್ದ. ಪ್ರತಿ ಸಲ ಅದೆಲ್ಲ ನಡೆದಾಗ ನಾನು ಆತನನ್ನು ಬೈಯುತ್ತಿದ್ದೆ. ಪ್ರತಿಸಲ ಅದೆಲ್ಲ ಮುಗಿದಾಗ ನಾನು ಆತನ ಎದೆಯಲ್ಲಿ ಮುಖ ಹುದುಗಿಸಿ ಮಲಗಿ ಏನೋ ವಿಚಿತ್ರ ಸಮಾಧಾನ ಅನುಭವಿಸುತ್ತಿದ್ದೆ.... ಈ ಎಲ್ಲ ಘಟನೆಗಳು, ಅವುಗಳ ಪರಿಣಾಮವಾಗಿ ದಿನೇ ದಿನೇ ಗಾಢವಾಗಿ ಬೆಸೆಯುತ್ತ ಹೊರಟ ನಮ್ಮ ಸಂಬಂಧದ ಎಳೆಗಳ ಪೂರ್ಣ ವಿಶ್ಲೇಷಣೆ ನನಗೆಂದೂ ಮಾಡಲು ಸಾಧ್ಯವಿಲ್ಲ. ಬಹುಶಃ ಇದಕ್ಕೇ 'ಹಣೆಯಲ್ಲಿ ಬರೆದಿತ್ತು' ಅನ್ನುತ್ತಾರೇನೋ....

ಮುಂಬಯಿಯಲ್ಲಿ ಪ್ರತಿವರ್ಷ ಮಳೆಗಾಲ ಬರುತ್ತದೆ. ಸಂಜೆ ಮೋಡ ಕವಿದು ಮಳೆ ಸುರಿಯುತ್ತದೆ. ಗಾಳಿಯಲ್ಲಿ ಒಂದು ಥರಾ ಬೆಚ್ಚಗಿನ ತಂಪು ವಾಸನೆ ಬರುತ್ತದೆ.... ಆದರೆ ಈಗೀಗ ಮೂರ್ತಿಗೆ ಮಳೆಯ ಬಗೆಗಿನ ಆಸಕ್ತಿ ಕಡಿಮೆಯಾಗಿದೆ. ಯಾಕೆ ಬಹಳ ದಿನ ಬರಲಿಲ್ಲವೆಂದು ನಾನು ಕೇಳಿದರೆ 'ಹ್ಯಾಂಗ ಬರ್ಲಿ ? ಒಂದೇ ಸಮನೆ ಮಳಿ ಸುರೀತದ ಕಾಣ್ಸೂದಿಲ್ಲ ?' ಅನ್ನುತ್ತಾನೆ. ನನಗೆ ಮಾತ್ರ ಇನ್ನೂ ತೋಯಿಸಿಕೊಳ್ಳುವ, ನೆನೆಯುವ, ಉರಿಯುವ, ಬೆಂಕಿಯಾಗುವ, ಗಾಳಿಯಾಗುವ, ಮೋಡವಾಗುವ,

ಶೂನ್ಯದಲ್ಲಿ ಶೂನ್ಯವಾಗುವ ಬಯಕೆ.... ಎಂದೆಂದಿಗೂ ಹಿಂಗದ ಬಯಕೆ....

–ಕರೆಗಂಟೆ ಕೇಳಿ ನೀಲಾ ಬಂದಳೇನೋ ಅಂತ ಬಾಗಿಲು ತೆರೆದರೆ ಎದುರಿಗೆ ಮೂರ್ತಿ. ಎಷ್ಟು ಖುಷಿಯಾಯಿತು ನನಗೆ. ಒಬ್ಬರಿಗೊಬ್ಬರು ಅಂಟಿಕೊಂಡಂತೆ ಒಳಕೋಣೆಗೆ ಹೋಗಿ ಕೂತೆವು. ಏನೂ ಮಾತಾಡದೆ ಮೌನವಾಗಿ ಮುತ್ತುಗಳ ವಿನಿಮಯ ನಡೆಯಿತು. ನಂತರ ಆತ ಎಂದಿನಂತೆ ವ್ಹಿಸ್ಕಿ ಬಾಟಲ್ ತೆರೆದ. ನಾನು ಹಾಗೆಯೇ ಆತನ ಎದೆಗಾನಿಸಿಕೊಂಡು ಕಣ್ಣುಮುಚ್ಚಿ ಆ ತಂದ್ರಿಯಿಂದ ಹೊರಬರಲು ಇಷ್ಟವಿಲ್ಲದೆ ಈ ಕ್ಷಣ ಅನಂತವಾಗಬಾರದೆ ಅಂದುಕೊಳ್ಳುತ್ತ ಕೂತಿದ್ದೆ.

ಅರ್ಧ ಗಂಟೆಯ ನಂತರ ನೀಲಾ ಬಂದಳು. 'ಎಲ್ಲಿ ಹೋಗಿದ್ಳು ?' ಅಂತ ಮೂರ್ತಿ ಕೇಳಿದಾಗ ಹೇಳಿದೆ, ಆಪ್ಟೆ ಬಾಯಿಯ ಜೊತೆ ಪಿಕ್ಚರಿಗೆ ಹೋಗಿದ್ದಳು ಅಂತ, ಆಪ್ಟೆ ಬಾಯಿಯಂಥ ಹಿರಿಯ ಹೆಂಗಸೊಂದಿಗೆ ಹೋದದ್ದರಿಂದ ಆತನ ಆಕ್ಷೇಪಣೆಯಿರಲಾರದು ಎಂಬ ಧೈರ್ಯದೊಂದಿಗೆ. ಆತ ಸುಮ್ಮನಾದ. ನನಗೆ ಮಾತ್ರ ಒಮ್ಮೆಲೆ ಎಲ್ಲ ಹುರುಪು ಜರ್ರನೆ ಇಳಿದು ಹೋಯಿತು.

ರಾತ್ರಿ ಹನ್ನೆರಡು ದಾಟಿತು. ಮೂರ್ತಿ ತನ್ನ ಗ್ಲಾಸಿಗೆ ಐದನೇ ಪೆಗ್ ಸುರಿಯುತ್ತಿದ್ದ. ಅಷ್ಟರವರೆಗೂ ಸುಮ್ಮನಿದ್ದ ನಾನು ಮೆಲ್ಲನೆ 'ಸಾಕು ಮೂರ್ತಿ, ಎಷ್ಟು ಕುಡೀತೀ ?' ಅಂದೆ. 'ಶಟ್‌ಅಪ್' ಅಂದ ಆತ ಒಮ್ಮೆಲೆ ಒರಟಾಗಿ. ನನಗೆ ಗೊತ್ತಾಯಿತು. ಇನ್ನು ಇಡಿಯ ರಾತ್ರಿ ನಡೆಯಲಿರುವ ಆಟ. ನಾನು ಎದ್ದು ಹೋಗಿ ನೀಲಾಗೆ ಊಟ ಮಾಡಿ ರೂಮಿನ ಬಾಗಿಲು ಗಟ್ಟಿಯಾಗಿ ಒಳಚಿಲುಕ ಹಾಕಿಕೊಂಡು ಮಲಗಿಕೊಳ್ಳಲು ಹೇಳಿ ವಾಪಸು ಬಂದೆ.

ಆರನೆಯ ಪೆಗ್ ಮುಗಿದಾಗ ಕಣ್ಣೆಲ್ಲ ಕೆಂಪಾಗಿ ನೆಟ್ಟಗೆ ನಿಲ್ಲಲೂ ಆಗದೆ ಜೋಲಿ ಹೊಡೆಯುತ್ತ ಎದ್ದುನಿಂತ ಮೂರ್ತಿ ಒಂದೊಂದಾಗಿ ತನ್ನ ಬಟ್ಟೆ ಕಿತ್ತೆಸೆದ. ಇಂಥ ಸನ್ನಿವೇಶಗಳು ನನಗೆ ಹೊಸದಾಗಿರಲಿಲ್ಲ. ಕಳೆದ ಮೂರು-ನಾಲ್ಕು ವರ್ಷಗಳಿಂದ ನಮ್ಮ ಸಂಬಂಧ ಈ ತರದ ಹೊಸರೂಪ ತಾಳಿತ್ತು. ಕುಡಿದ ಅಮಲಿನಲ್ಲಿ ಯಾವ ತರದ ಅನುನಯವೂ, ಮೃದುತ್ವವೂ, ರೋಮಾಂಚನವೂ ಇಲ್ಲದೆ, ನನ್ನ ಬೇಕು-ಬೇಡ, ತೃಪ್ತಿ-ಅತೃಪ್ತಿಗಳಿಗೆ ಒಂದಿನಿತೂ ಬೆಲೆಕೊಡದೆ, ಸತತ ತಾಸೆರಡು ತಾಸು ನಡೆಯುವ ಆಕ್ರಮಣ. ಪ್ರತಿಭಟನೆಯ ಪರಿಣಾಮ ಬರೀ ಮನಸ್ತಾಪವಾದುದರಿಂದ, ಆ ಮನಸ್ತಾಪ

ಸಹಿಸುವ ಗಟ್ಟಿತನ ನನ್ನಲ್ಲಿ ಉಳಿದಿರಲಿಲ್ಲವಾದ್ದರಿಂದ, ಈ ಎಲ್ಲ ಕ್ರಿಯೆಯಲ್ಲಿ ನಾನು ಅಗಾಧ ಮೌನ ತಾಳಿ ಬಿಡುತ್ತಿದ್ದೆ.

ಆದರೆ ಇಂದಿನ ಪರಿ ಬೇರೆಯದೇ ಬಗೆಯದೆನಿಸತೊಡಗಿತು. ಪೂರ್ತಿ ದಿಗಂಬರನಾಗಿ ನನ್ನೆದುರು ನಿಂತು ಮಹಾರಾಜನ ಠೀವಿಯಲ್ಲಿ ಕೈಚಾಚಿ ಆತ ಆಜ್ಞಾಪಿಸುವ ಹಾಗೆ ಹೇಳಿದ, 'ಗೆಟಪ್, ಗೋ ಆ್ಯಂಡ್ ಫೆಚ್ ದ್ಯಾಟ್ ನೀಸ್ ಆಫ್ ಯುವರ್ಸ್'. ಕಣ್‌ಕಣ್ಣು ಬಿಡುತ್ತ ನಾನು ಕೇಳಿದೆ, 'ಏನಂದಿ ಮೂರ್ತಿ ? ಶುದ್ಧೀ ಮ್ಯಾಲಿದ್ದೀಯೋ ಇಲ್ಲೋ ?' ಆತ ಪಶುವಿನ ಹಾಗೆ ಗರ್ಜಿಸಿದ, 'ನಾ ಶುದ್ಧೀ ಮ್ಯಾಲಿದ್ದೀನಿ. ನೀವೆಲ್ಲಾರೂ ಬೇಶುದ್ಧ ಆಗಿ ಬಿಹೇವ್ ಮಾಡ್ಲಿಕ್ಹತ್ತೀರಿ. ನಿಮ್ಮನ್ನ ಶುದ್ಧೀ ಮ್ಯಾಲ ತರಬೇಕಾಗೇದ. ಅದಕ್ಕs ಹೇಳಿದೆ, ಕರಕೊಂಡು ಬಾ ಹೋಗು ಆ ನೀಲಿನ್ನ. ನೀ ಎದ್ದು ಹೋಗ್ತೀಯೋ ಏನು ನಾನs ಹೋಗಲ್ಯೋ ?'

ಒಂದು ಕ್ಷಣ ನನ್ನ ಬುದ್ಧಿಗೆ ಮಂಕು ಕವಿಯಿತು. ಮರುಕ್ಷಣ ಆತನ ಮಾತಿನ ಅರ್ಥ ಹೊಳೆದು ಮೈಯೆಲ್ಲ ಬೆಂಕಿಯಾಯಿತು. ಆದರೆ ನಾನೇನು ಮಾಡಬಹುದಿತ್ತು ? ತಿರುಗಿ ಮಾತಾಡಿದರೆ ಆತ ನನ್ನನ್ನು ಹೊಡೆಯಲು, ಹಿಂಸಿಸಲು, ಸಾಯಿಸಲೂ ಸಿದ್ಧನಿದ್ದ ಹಾಗೆ ಕಾಣಿಸಿತು. ಚಾಲೇಂಜ್ ಮಾಡಿದರೆ ನನ್ನನ್ನು ಒದ್ದು ಕೆಡವಿ ಸೀದಾ ಹೋಗಿ ಒಳಗೆ ಮಲಗಿರುವ ನೀಲಾಳನ್ನು ಹಿಡಿದೆಳೆಯಲೂ ತಯಾರಿದ್ದ ಹಾಗೆ ಕಾಣಿಸಿತು. ಆತನನ್ನು ತಡೆಯಲು ಮನೆಯಲ್ಲಿ ಬೇರಾರೂ ಗಂಡಸಿರಲಿಲ್ಲ. ಹಾಗೆಂದೇ ಇಷ್ಟು ಉರಿಯುತ್ತಿರುವನಲ್ಲವೇ ಈತ ? ನನಗೂ ಒಬ್ಬ ವಯಸ್ಸಿಗೆ ಬಂದ ಮಗನಿದ್ದಿದ್ದರೆ ಹೀಗೆಲ್ಲ ಆಡುವ ಧೈರ್ಯವಾಗುತ್ತಿತ್ತೇ ಈತನಿಗೆ ?.... ನಾನು ಅನುನಯದಿಂದ ಆತನ ಕೈ ಹಿಡಿದು ಮಂಚದ ಕಡೆ ಕರೆದೊಯ್ಯಲೆತ್ನಿಸುತ್ತ ಅಳುದನಿಯಲ್ಲಿ ಅಂದೆ, 'ಹಿಂಗ್ಯಾಕ ಮಾಡ್ತೀ, ಮೂರ್ತಿ ? ನೀಲಾ ನಿನ್ನ ಮಗಳ ಸಮಾನ, ಹಿಂಗೆಲ್ಲಾ ಮಾತಾಡಬಾರದು.'

ಬಿರುಸಾಗಿ ಕೈ ಕೊಸರಿಕೊಂಡು ಆತ ಮತ್ತೆ ಒದರಿದ, 'ನನ್ನ ಮಗಳ ಹೆಸರು ತಗದರ ನಿನ್ನ ಕುತಿಗೀ ಹಿಚಿಕಿ ಬಿಡ್ತೀನಿ. ಈ ರಂಡಿ ಮಧ್ಯಾಹ್ನ ಸಿನೆಮಾ ನೋಡಿ ಏನೇನು ಮಜಾ ಮಾಡಿ ಬಂದಾಳೋ ಯಾರಿಗ್ಗೊತ್ತು ? ಎದುರಿನ ಮನೀ ಪ್ರಕಾಶನ ಜೋಡೀ ಮಲಗಿದರ ನಡೀತದ ಆಕೀಗೆ. ಮತ್ತ ನನ್ನ ಜೋಡೀ ಮಲಗಿದರ ಏನಾಗ್ತದ ? ಕರೀ ಆಕಿನ್ನ. ನಾನೂ ಒಂದು ಕೈ ನೋಡ್ತೀನಿ....'

ಒಳಗೆ ಮಲಗಿದ್ದ ಆ ಪಾಪದ ಹುಡುಗಿಗೆ ಇದೆಲ್ಲ ಕೇಳಿಸೀತೆಂಬ ಭಯದಿಂದ ಕುಗ್ಗಿ ನಾನೆಂದೆ. 'ಸಿನಿಮಾಕ್ಕ ಆಕಿ ಆಪ್ಟೇ ವಕೀಲ ಬಾಯಿ ಜೊತೆ ಹೋಗಿದ್ದಳು ಮೂರ್ತಿ, ಆಪ್ಟೆಬಾಯಿ ಡೀಸೆಂಟ್ ಆಗಿರೋ ವಯಸ್ಕ ಹೆಂಗಸು.'

'ಹ್ಹ ಹ್ಹ ಹ್ಹ....' ಆತ ಕುಸಿದು ಕೂತು ನಗತೊಡಗಿದ, 'ಡೀಸೆಂಟ್ ಹೆಂಗಸಂತ. ಇಡೀ ದಿನಾ ಪಿರೀಪಿರೀ ಹೊರಗs ತಿರಗ್ತಿರ್ತಾಳ. ಊರ ಸೂಳಿ ಆಕಿ. ಆಕೀ ಜೋಡೀ ಈ ನೀಲಿನೂ ಧಂದೇ ಮಾಡ್ಲಿಕ್ಕೆ ಹೋಗಿದ್ದಳು. ಹೌದಲ್ಲೋ ?'

ಇನ್ನು ಆತನೊಂದಿಗೆ ಮಾತನಾಡಿ ಪ್ರಯೋಜನವಿಲ್ಲವೆಂದು ನಾನು ಸುಮ್ಮನೆ ಕೂತೆ. ಇದ್ದಕ್ಕಿದ್ದಂತೆ ಆತ ಬಿಕ್ಕಿ ಬಿಕ್ಕಿ ಅಳತೊಡಗಿದ, 'ಕಮಲಾ, ನೀ ನನಗ ಮೋಸ ಮಾಡಿದಿ, ನನ್ನ ಪ್ರೀತಿ ಮಾಡೋ ಮೊದಲs ಮತ್ತೊಬ್ಬನ್ನ ಪ್ರೀತಿ ಮಾಡಿದ್ದಿ. ನಾ ಎಷ್ಟ ಸುಖದಿಂದಿದ್ದೆ. ನೀ ಬಂದು ನನ್ನ ಸುಖ-ಶಾಂತಿ ಎಲ್ಲಾ ಹಾಳು ಮಾಡಿದಿ. ನಿನ್ನ ಭೆಟ್ಟಿ ಆಗಿದ್ದಿಲ್ಲಂದ್ರ ನಾ ಎಷ್ಟು ಸುಖೀ ಇರ್ತಿದ್ದೆ.... ಭೆಟ್ಟಿ ಆಗಿದ್ರೂ ನಾಲ್ಕ ದಿನಾ ಮಜಾ ಮಾಡಿ ಗುಡ್‌ಬಾಯ್ ಹೇಳಿ ಹೋದನಲ್ಲ ಆ ನಿನ್ನ ಗೆಣ್ಯಾ, ಹಾಂಗ ಎಷ್ಟ ಮಂದಿ ಗುಡ್‌ಬಾಯ್ ಹೇಳಿ ಹೋಗ್ಯಾರೋ ಏನೋ ನಿನಗ, ಶಾಣ್ಯಾರು ಅವರೆಲ್ಲ, ನಾನೂ ಹಾಂಗ ದೂರಾಗೂದು ಬಿಟ್ಟು ನಿನ್ನಂಥಾಕಿನ್ನ ಲಗ್ನಾ ಆದೆ.... ಎಂಥಾ ತಪ್ಪು ಮಾಡಿದೆ.... ಅಯ್ಯೋ ದೇವರೇ....' – ಹಾಗೆ ತುಸು ಹೊತ್ತು ಪ್ರಲಾಪಿಸಿ ಆತ ಅಲ್ಲೇ ನಿದ್ದೆ ಹೋಗಿಬಿಟ್ಟ. ಆತನ ಮಾತು ಬಂದಾಯಿತಲ್ಲ, ಏನಾದರೂ ಅನಾಹುತವಾಗುವುದು ತಪ್ಪಿತಲ್ಲ ಅಂತ ಹಾಯೆನಿಸಿ ನಾನು ಆತನಿಗೆ ಅಲ್ಲೇ ರಗ್ಗು ಹೊದಿಸಿ ದೀಪವಾರಿಸಿ ಊಟವಿಲ್ಲದೆ ಹಾಗೇ ಹಾಸಿಗೆಯ ಮೇಲೆ ಉರುಳಿಕೊಂಡೆ....

– ನಾನು ದೇವರೆಂದು ತಿಳಿದು ಆರಾಧಿಸಿದ ಈ ಮನುಷ್ಯ ಕುಡಿದ ಅಮಲಿನಲ್ಲೇ ಏಕಾಗಲೊಲ್ಲದು, ಆ ಮಗುವಿನ ಮೇಲೆ ಕಣ್ಣು ಹಾಕಬೇಕೆ ? ಅಕಸ್ಮಾತ್ ಇದು ಅವಳಿಗೆ ಗೊತ್ತಾದರೆ ಈ ಮನೆಯಲ್ಲಿ ನಾನು ಅವಳೊಂದಿಗೆ ಹೇಗೆ ಬದುಕಿರಲಿ ?

– ನಾನು ಮೋಸ ಮಾಡಿದೆನಂತೆ. ನಾನು ಎಲ್ಲ ಮೊದಲೇ ಹೇಳಿರಲಿಲ್ಲವೆ ? ಎಲ್ಲ ಗೊತ್ತಿದ್ದೂ ನನ್ನನ್ನು ತಾನಾಗಿ ಮೇಲೆ ಬಿದ್ದು ಸ್ವೀಕರಿಸಿ, ಸುಖಜೀವನದ ಆಶ್ವಾಸನೆ ಕೊಟ್ಟು, ನಾನೇ ಸರ್ವಸ್ವವೆಂಬಂತೆ

ನಂಬಿಸಿ, ಈಗ ಎಂದೋ ಒಮ್ಮೆ ನನ್ನ ಜೀವನದಲ್ಲಿ ನಡೆದುಹೋದ ಕಹಿ ಘಟನೆಯನ್ನು ತಿರುತಿರುಗಿ ಹೀಗೆ ಎತ್ತಿ, ಆಡಿ, ಹಂಗಿಸಿದರೆ ಇದು ಮೋಸವಲ್ಲವೆ ?

ಉಳಿದದ್ದು ಹಾಗಿರಲಿ, ನಾವಿಬ್ಬರೂ ಒಂದಾಗಿದ್ದು ಅನೇಕ ಜನ್ಮಗಳ ಪುಣ್ಯದ ಫಲವೆಂದು ಎಷ್ಟೋ ಸಲ ಇಬ್ಬರೂ ತಿರುತಿರುಗಿ ಅಂದುಕೊಂಡು ಈಗ ಎಲ್ಲವೂ ಒಂದು ದೊಡ್ಡ ತಪ್ಪೆಂದು ಆತನಿಗೆ ಅನಿಸುವುದಾದರೆ ನನ್ನ ಜೀವನಕ್ಕೆ ಉಳಿದಿರುವ ಅರ್ಥವಾದರೂ ಏನು ?

—ಮರುದಿನ ಮುಂಜಾನೆ ತಡವಾಗಿ ಎದ್ದ ಮೂರ್ತಿ ಯಾಚನೆಯ ಧ್ವನಿಯಲ್ಲಿ ಅಂದ, 'ನನ್ನ ಕ್ಷಮಿಸು ಕಮಲಾ, ರಾತ್ರಿ ನನ್ನ ಮೈಯಾಗ ಏನು ದೆವ್ವ ಬಂದಿತ್ತೋ ಏನೋ. ನಾ ನಿನಗ ಭಾಳ ತ್ರಾಸ ಕೊಟ್ಟೆ. ಪ್ಲೀಜ್, ಅದೆಲ್ಲಾ ಮರ್‍ತು ಬಿಡು. ನನ್ನ ಸಲುವಾಗಿ ನೀ ಎಷ್ಟ ತ್ಯಾಗ ಮಾಡೀದಿ. ನಿನಗ ನಾ ಹಿಂಗೆಲ್ಲಾ ಬೈಯೂದು-ಹೊಡಿಯೂದು ಮಾಡಬಾರದು. ನನ್ನ ಕ್ಷಮಿಸು. ಪ್ಲೀಜ್, ಮರ್‍ತುಬಿಡು ಎಲ್ಲಾ'.

ಅದು-ಇದು ಬೈದದ್ದು ಮರೆಯಬಲ್ಲೆ, ಹೊಡೆದದ್ದು ಮರೆಯಬಲ್ಲೆ, ನನ್ನನ್ನು ಅಲಕ್ಷಿಸಿದ್ದು, ಅವಮಾನಿಸಿದ್ದು, ಕಾಲಕಸವಾಗಿ ನಡೆಯಿಸಿಕೊಂಡದ್ದು, ನನ್ನ ಸುಖ-ಸಂತೋಷಗಳಿಗೆ, ಆಸೆ-ಆಕಾಂಕ್ಷೆಗಳಿಗೆ ಬೆಲೆ ಕೊಡಲಾರದ್ದು —ಈ ಎಲ್ಲ ಮರೆಯಬಲ್ಲೆ, ಕ್ಷಮಿಸಬಲ್ಲೆ. ಆದರೆ ಕಾಲ ಮೇಲೆ ಹಸಿರು ಕಲೆ ಕಂಡು ನಾನು ಪರಪುರುಷನ ಸಂಗ ಮಾಡಿರಬಹುದೆಂದು ಸಂಶಯಪಟ್ಟಿದ್ದು ? ಹಲವಾರು ಬಾರಿ ಎಗ್ಗಿಲ್ಲದೇ ನನ್ನನ್ನು 'ಸೂಳೆ' ಅಂತ ಕರೆದಿದ್ದು ? ಮಗಳ ವಯಸ್ಸಿನ ನೀಲಾನ ಮೇಲೆ ಕಣ್ಣು ಹಾಕಿದ್ದು ? ಇದನ್ನೆಲ್ಲ ಹೇಗೆ ಮರೆಯಲಿ ? ಒಂದು ವೇಳೆ ನಾನು ಇದನ್ನು ಹೇಗಾದರೂ ಮಾಡಿ ಮರೆತರೂ, ಕ್ಷಮಿಸಿದರೂ ದೇವರು ಕ್ಷಮಿಸಬಹುದೇ ?''

...............

ಈ ಘಟನೆ ನಡೆದ ನಂತರ ನನಗೊಂದು ಥರಾ ಮಬ್ಬು ಕವಿದಂತಾಗಿದೆ. ನಾನು ಏನು ಮಾಡುವೆನೋ, ಏನು ತಿನ್ನುವೆನೋ, ಏನು ಮಾತಾಡುವೆನೋ, ಎಲ್ಲಿಗೆ ಹೊರಟಿದ್ದೇನೋ, ಯಾವುದರ ಖಬರೂ ಇರುವುದಿಲ್ಲ. ಯಾವಾಗಲೂ ಒಂದು ಬಗೆಯ ಅರ್ಧ ನಿದ್ರಾವಸ್ಥೆಯಲ್ಲಿದ್ದಂತಿರುತ್ತೇನೆ. ಕೆಲಸದ ಕಡೆ ಲಕ್ಷ್ಯವೇ ಉಳಿದಿಲ್ಲ. ಮನೆಯಲ್ಲಿ, ದಾರಿಯಲ್ಲಿ, ಕಂಪನಿಯಲ್ಲಿ ಎಲ್ಲ ಕಡೆ ಉಸಿರುಗಟ್ಟಿಸುವಂತೆನಿಸುತ್ತದೆ. ಈ ಪ್ರತಿಕ್ಷಣ ಕೊಲ್ಲುವ

ಗಾಳಿಯಿಂದ ನಾನು ಎಲ್ಲಾದರೂ ದೂರ-ದೂರ ಓಡಿ ಹೋಗಬೇಕು ಅನಿಸುತ್ತದೆ. ಆದರೆ ಎಲ್ಲಿಗೆ ? ಎಷ್ಟು ಸಂತಾಪವಾಗಿದ್ದರೂ ದುಃಖವಾದರೂ ಎದೆ ಬಿರಿದು ಹೋದರೂ ಮೂರ್ತಿಯ ತೋಳಿನಾಸರೆ ಸಿಕ್ಕ ಕ್ಷಣವೇ ನಾನು ಇನ್ನೂ ಎಲ್ಲ ಮರೆಯುತ್ತೇನೆ. ನನಗೆ ಯಾಕೆ ಈ ದೌರ್ಬಲ್ಯವೋ.... ಎಂದೂ, ಯಾರಿಂದಲೂ ಅತ್ತ ಸರಿ ಅನ್ನಿಸಿಕೊಂಡವಳಲ್ಲ. ಹೆತ್ತವರಿಂದ ಬೆಳೆಸಿದವರಿಂದ ಒಂದು ಬಿರುಸು ಮಾತು ಅನ್ನಿಸಿಕೊಂಡವಳಲ್ಲ. ಈ ಮನುಷ್ಯನಿಂದ ಇಷ್ಟು ಅಪಮಾನ, ಅನ್ಯಾಯ, ಅತ್ಯಾಚಾರ ಯಾಕಾದರೂ ಸಹಿಸುತ್ತಿರುವೆ.... ಹೊರಗಿನ ಜಗತ್ತು ನನ್ನ ಪ್ರತಿಭೆಯನ್ನು, ಕಲೆಯನ್ನು, ಸೌಂದರ್ಯವನ್ನು ಎಲ್ಲವನ್ನೂ ಮುಕ್ತಕಂಠದಿಂದ ಹೊಗಳುವಾಗ ನನಗೆ ಏನೂ ಅನ್ನಿಸುವುದಿಲ್ಲ. ನಾನು ಪ್ರೀತಿಸಿದ ಈ ಮನುಷ್ಯನ ಕಣ್ಣನೋಟದಲ್ಲಿ ಎಂದಾದರೊಮ್ಮೆ ಪ್ರಶಂಸೆ ಮಿಂಚಿದರೆ ನಾನು ಪುಲಕಿತಳಾಗುತ್ತೇನೆ. ಈತ ಎಂದಾದರೂ ತಪ್ಪಿಯಾದರೂ ನನ್ನ ಬಗ್ಗೆ ಒಂದು ಒಳ್ಳೆಯ ಮಾತು ಹೇಳಿಲ್ಲ ಇತ್ತೀಚಿನ ದಿನಗಳಲ್ಲಿ.... ಹೊಗಳಿದರೆ ಹೆಂಗಸರು ಸೊಕ್ಕಿಗೇರಿ ಕೆಡುತ್ತಾರೆಂದು ಆತನ ಅಭಿಪ್ರಾಯ.... ಈ ಥರ ಒದ್ದಾಡುತ್ತ ನಾನು ಎಷ್ಟು ದಿನ ತಲೆ ಕೆಡದೆ ಇರಬಲ್ಲೆ ?"

* * *

ಸಂಜೆಯಾದರೂ ಕಮಲಾಳ ಡಾಯರಿ ಹಿಡಿದು ಶಶಿ ಮಲಗಿಯೇ ಇದ್ದಳು. ಕತ್ತಲು ಕವಿಯುತ್ತಿದ್ದರೂ ಎದ್ದು ದೀಪ ಹಾಕದೆ ಮಬ್ಬು ಬೆಳಕಿನಲ್ಲಿ ಹಾಗೇ ಓದುತ್ತ ಹೋದಳು. ಕಣ್ಣು ಉರಿಯತೊಡಗಿದ್ದವು. ತಲೆ ನೋಯತೊಡಗಿತ್ತು. ಮಿದುಳು ಧೀಂಗುಡುತ್ತಿತ್ತು. ಇವತ್ತು ಇಡಿಯ ದಿನ ತಾನು ಊಟವನ್ನೂ ಮಾಡಿಲ್ಲವೆನ್ನುವುದು ನೆನಪಾಗಿ ಬೇಸರವಾಯಿತು. ಏಳಲು, ಅಡಿಗೆ ಮಾಡಿಕೊಳ್ಳಲು, ದೀಪ ಹಾಕಲು ಎಲ್ಲಕ್ಕೂ ಬೇಸರವಾಗಿ ಆಕೆ ಹಾಗೇ ಕಣ್ಣುಮುಚ್ಚಿ ಬಿದ್ದುಕೊಂಡಳು.

ಕರೆಗಂಟೆಯ ಸದ್ದಾದಾಗಲೂ ಆಕೆಗೆ ಏಳಬೇಕು ಅನ್ನಿಸಲಿಲ್ಲ. ಯಾರಾದರೂ ಬಂದಿರಲೊಲ್ಲರೇಕೆ, ಗಂಟೆ ಬಡಕೊಳ್ಳಲೊಲ್ಲದೇಕೆ, ಏಳುವುದು ಬೇಡ, ಯಾರಿದ್ದರೂ ಇರಲಿ, ಹಾಳಾಗಿ ಹೋಗಲಿ....

ಆದರೆ ಕರೆಗಂಟೆಯ ಸದ್ದಿನೊಂದಿಗೇ ಅವಳಿಗೆ ತೀರ ಪರಿಚಿತ 'ಡಾಕ್ಟರ್ ಬಾಯೀ' ಕರೆ ಕೇಳಿ ಆಕೆ ಧಡಕ್ಕನೆ ಎದ್ದಳು. ತುಸು ಆಶ್ಚರ್ಯದಿಂದಲೇ ಬಾಗಿಲು ತೆರೆದಳು. ಹೌದು, ಆಕೆ ಧ್ವನಿ ಗುರುತಿಸಿದಂತೆ ಸರಿಯಾಗಿ ರೋಶನ್‌ಬಿ ಬಂದಿದ್ದಳು. ನಗುನಗುತ್ತ ಅವಳೆದುರು ನಿಂತಿದ್ದಳು. ಹೊಸ ಕೆಂಪು ಬಣ್ಣದ ಸೀರೆಯುಟ್ಟು, ಕಿವಿಯಲ್ಲಿ

ಹಿತ್ತಾಳೆಯ ಝುಮುಕಿತೊಟ್ಟು, ಕೈತುಂಬ ಬಣ್ಣಬಣ್ಣದ ಬಳೆ ಹಾಕಿಕೊಂಡು, ಹೊಸ ಮದುಮಗಳಂತೆ.

ಶಶಿಗೆನಿಸಿತು, ಈಕೆ ಮನೆಯಲ್ಲಿ ಏನಾದರೂ ಬಿಟ್ಟು ಹೋಗಿರಬಹುದು, ಅದನ್ನು ಒಯ್ಯಲೆಂದು ಎರಡು ದಿನಗಳ ಮಟ್ಟಿಗೆ ಬಂದಿರಬೇಕು. ಅಥವಾ.... ಬೇರೆ ಮದುವೆಯಾಗಿರಬಹುದೇ ? ಛೆ, ಇರಲಾರದು. ಆರೇಳು ಮಕ್ಕಳ ತಾಯಿಯನ್ನು ಯಾರು ಲಗ್ನವಾದಾರು ? ಅವಳೇನು ಗಂಡಸಲ್ಲವಲ್ಲ....

"ಬಾ ಬಾ ರೋಶನ್, ಇದೇನು, ಹೋದಾಕಿ ಎಷ್ಟು ದಿನ ಗಪ್‌ಗಡದ್ ಆಗಿಬಿಟ್ಟಿದ್ದಿ. ಈಗ ಒಮ್ಮಿಗಿಲೆ ಪ್ರತ್ಯಕ್ಷ ಆಗೀಯಲ್ಲ, ಏನು ಸುದ್ದಿ ?"

ಒಳಬಂದು ನೆಲದ ಮೇಲೆ ಕೂಡುತ್ತ ರೋಶನ್‌ಬಿ ಖುಷಿಯಿಂದ ಉತ್ತರಿಸಿದಳು, "ನಾ ತಿರಿಗಿ ಬಂದು ಬಿಟ್ಟೆನ್ರಿ ಡಾಕ್ಟರ್ ಬಾಯಿ".

"ಹೌದಾ ? ಗುಡ್. ಅದ್ಯಾಂಗ ಬಂದಿ ? ಅಷ್ಟು ಗಟ್ಟಿ ಮನಸ್ಸು ಮಾಡಿ ಹೋದಾಕಿ ? ನಿನ್ನ ಗಂಡ ಕರೀಲಿಕ್ಕೆ ಬಂದಿದ್ನೋ ಏನು ?"

"ಇಲ್ರಿ ಬಾಯೀ, ಆದರ ನಾ ಇಲ್ಲದs ಭಾಳ ತ್ರಾಸು ಆಗೇತಿ, ಅದಕ್ಕ ಲಗೂನ ತಿರಿಗಿ ಬಾ ಅಂತ ಕಾರ್ಡು ಬರದಿದ್ದನ್ರಿ. ಪೂರಾ ಕಾರ್ಡು ನನ್ನ ಹೆಸರಿಗೇನs ಬರದಿದ್ದನ್ರಿ." ಗಂಡ ತನ್ನ ಹೆಸರಿಗೆ ಪತ್ರ ಬರೆದದ್ದು ರೋಶನ್‌ಬೀಗೆ ದೊಡ್ಡ ಥ್ರಿಲ್ ಆಗಿತ್ತು. ನಿರಿಗೆ ಬಿದ್ದ ಅವಳ ಸೊರಗಿದ ಮುಖದಲ್ಲಿ ಆ ಮಾತು ಹೇಳುವಾಗ ಕೆಂಪು ಮೂಡಿತ್ತು. ಅನೇಕ ವರ್ಷ ಆತನ ಕೈಯಲ್ಲಿ ಪಡಬಾರದ ಪಾಡು ಪಟ್ಟು, ರೋಸಿ ಹೋಗಿ, ಕೊನೆಯ ದಾರಿಯೆಂದು ದೂರ ಹೋಗಿದ್ದ ಆಕೆಯ ಮನಸ್ಸನ್ನು ಹರಕು ಮುರಕು ಭಾಷೆಯಲ್ಲಿ ಗಂಡ ಗೀಚಿದ್ದ ನಾಲ್ಕು ಸಾಲುಗಳ ಪೋಸ್ಟ್ ಕಾರ್ಡು ಪೂರಾ ಬದಲಿಸಿತ್ತು. ಶಶಿಗೆ ನಗು ಬಂತು :

"ಅಲ್ಲ ರೋಶನ್, ನೀ ಬಂದಿ ಖರೆ, ಈಗ ಮತ್ತ ನಿನ್ನ ಗಂಡ ಮೊದಲಿನ್ಹಾಂಗ ತ್ರಾಸು ಕೊಡ್ಲಿಕ್ಕೆ ಸುರೂ ಮಾಡಿದ್ರ ಏನ್ಮಾಡ್ತಿ ?"

ವಿಶ್ವಾಸದ ಧ್ವನಿಯಲ್ಲಿ ಉತ್ತರಿಸಿದಳು ರೋಶನ್, "ನಾ ಅಷ್ಟು ದಡ್ಡಿ ಅಲ್ರಿ ಬಾಯೀ. ಬರೋವಾಗ ನಮ್ಮ ಅಣ್ಣನ್ನ, ಇನ್ನೊಬ್ರು ನಮ್ಮ ನಿಕ್ಕಾ ಮಾಡಿಸಿದ ಹಿರ್‍ಯಾರನ್ನ ಕರಕೊಂಡು ಬಂದಿದ್ದೆ. ಇಲ್ಲಿನ ನಾಲ್ಕು ಮಂದೀ ಕೂಡಿಸಿದ್ದೆ. ಎಲ್ಲಾರ ಮುಂದ ವಚನಾ ಕೊಟ್ಟಾನ."

"ಏನಂತ ?"

"ಇನ್ನಮ್ಯಾಲ ವಾರದಾಗ ಒಂದುದಿನಾ ತಪ್ಪದs ಮನೀಗೆ ಬರ್ತೀನಿ ಅಂತ ; ಮತ್ತ ಹೆಂಡ್ತಿ ಗಳಿಸಿದ ರೊಕ್ಕಾ ಕೈಯಿಂದ ಮುಟ್ಟೂದಿಲ್ಲಾ ಅಂತ ; ತವರು

ಮನಿಯಿಂದ ನಾ ತಂದ ಯಾವ ಸಾಮಾನೂ ಒತ್ತೀ ಇಡ್ಲಿಕ್ಕೆ ಒಯ್ಯೂದಿಲ್ಲಾ ಅಂತ.''

ಎಷ್ಟು ಅಲ್ಪತೃಪ್ತಳು ಈ ಮುಗ್ಧ ಹೆಂಗಸು ಅನ್ನಿಸಿತು ಶಶಿಗೆ. ತಾನು ಕೊಟ್ಟ ವಚನವನ್ನು ಆಕೆಯ ಗಂಡ ಮೆಹಬೂಬ್ ನಡೆಸುವನೆಂಬ ಭರವಸೆಯೇನೂ ಶಶಿಗೆ ಇರಲಿಲ್ಲ. ಆದರೆ ಆತನಿಂದ ಹಲವಾರು ವರ್ಷ ನರಕ ಅನುಭವಿಸಿದ ಈ ಹೆಂಡತಿಗೆ ಆತನ ಮೇಲೆ ಎಂಥ ವಿಶ್ವಾಸ!

''ಮತ್ತ ಆ ಇನ್ನೊಬ್ಬಾಕಿ ? ಆಕೀ ಸಲುವಾಗೇ ಬ್ಯಾಸತ್ತು ನೀ ಹೋದದ್ದಲ್ಲ ?''

''ಆ ಇನ್ನೊಬ್ಬಾಕಿ ನನ್ನ ಮನಿಗೇನು ಬಂದಿಲ್ಲಲ್ರಿ, ತನ್ನ ಮನ್ಯಾಗ ತಾ ಅದಾಳ. ಇರ್‍ಲಿ ಬಿಡ್ರಿ, ಆಕಿಗೂ ಮಕ್ಕಳು-ಮರಿ ಆಗ್ಯಾವು. ನಾ ಯಾಕ ಆಕೀಗೆ ಕೆಟ್ಟದು ಬಯಸ್ಲಿರಿ ಬಾಯೀ ? ಅಲ್ಲಾ ನನ್ನ ಮಕ್ಕಳಿಗೆ ಛಲೋ ಮಾಡ್ಲಿಕ್ಕಿಲ್ಲ. ನನ್ನ ಗಂಡ ವಾರದಾಗ ಒಂದಿನಾ ಮನೀಗೆ ಬಂದು ಮಕ್ಕಳಿಗೆ ಮುಖಾ ತೋರಿಸಿದ್ರ, ನಾ ದುಡದ ರೊಕ್ಕಾ ಕೇಳದಿದ್ರ, ನನ್ನ ಸಾಮಾನು ಒಯ್ದು ಆಕೀಗೆ ಕೊಡದಿದ್ರ ಸಾಕಲ್ರೀ ನನಗ.''

ಇನ್ನೂ ಒಂದು ಪ್ರಶ್ನೆಯಿತ್ತು ಶಶಿಯದು : ''ಅದೆಲ್ಲ ಆತು ರೋಶನ್, ಆದರ ನಿನಗ ಈಗಾಗಲೇ ಸಾಕಾದಷ್ಟು ಮಕ್ಕಳಾಗ್ಯಾವ. ಇನ್ನ ಗಂಡನ ಕೂಡ ರಾಜೀ ಮಾಡಿಕೊಂಡೀ ಅಂದರ ಮತ್ತಾ ವರ್ಷಾ ವರ್ಷಾ ಹಡೀಲಿಕ್ಕೆ ಸುರು ಆಗತದಲ್ಲ ?''

ಅದಕ್ಕೂ ಸಿದ್ಧವಿತ್ತು ರೋಶನ್‌ಬೀಯ ಉತ್ತರ : ''ಅಲ್ಲಾ ಕೈಬಿಚ್ಚಿ ಮಕ್ಕಳ್ನ ಕೊಡೋವಾಗ ಬ್ಯಾಡ ಅನ್ಲಿಕ್ಕ ನಾವೆಷ್ಟರವರ್‍ರೀ ಬಾಯೀ ?''

ಶಶಿ ಒಮ್ಮೆಲೆ ತೆಪ್ಪಗಾದಳು.

* * *

ರೋಶನ್‌ಬೀಯ ವೈಯಕ್ತಿಕ ಜೀವನದ ಕತೆ ಏನೇ ಇರಲಿ, ಒಳ್ಳೆಯ ಕೆಲಸದವಳೊಬ್ಬಳು ಮತ್ತೆ ಮರಳಿ ಬಂದಳಲ್ಲ ಅಂತ ಶಶಿಗೆ ಖುಷಿಯಾಯಿತು. ಅಡಿಗೆಮನೆಯನ್ನು ಅವಳಿಗೊಪ್ಪಿಸಿ ಶಶಿ ಸಿನಿಮಾ ಹಾಡೊಂದನ್ನು ಗುನುಗುನಿಸುತ್ತ ಪಡಸಾಲೆಯಲ್ಲಿ ಬಂದು ಕೂತಾಗ ಮಾಲಿನಿಬಾಯಿ ಪಟೇಲ ಬಂದಳು. ಕಾಲು ಮುರಿದುಕೊಂಡು ಹೃದಯರೋಗಿಯಾಗಿ ಹಾಸಿಗೆ ಹಿಡಿದಿದ್ದ ಅವಳ ಗಂಡನಿಗೇನಾದರೂ ಹೆಚ್ಚು ಕಡಿಮೆಯಾಯಿತೇನೋ ಅಂದುಕೊಂಡಳು ಶಶಿ. ಈ ಹೊತ್ತಿನಲ್ಲಿ ವ್ಹಿಜಿಟ್‌ಗೆ ಹೋಗಲು ಅವಳಿಗೆ ಮನಸ್ಸೂ ಇರಲಿಲ್ಲ. ಆದರೆ ಮಾಲಿನಿಬಾಯಿ ಬಂದದ್ದು ಬೇರೆಯ ಕೆಲಸಕ್ಕಾಗಿ.

''ಅಸೆಂಬ್ಲಿಗೆ ಕಾಂಟೆಸ್ಟ್ ಮಾಡೀನಿ ಡಾಕ್ಟರ್, ನಿಮ್ಮ ವ್ಹೋಟು ಕೇಳ್ಲಿಕ್ಕೆ ಬಂದೀನಿ. ನಿಮ್ಮದಷ್ಟs ಅಲ್ಲ, ನಿಮಗ ಭಾಳ ಮಂದಿ ಬೇಕಾದವ್ರಿದ್ದಾರ ಡಾಕ್ಟರ್ಸು, ಪೇಶಂಟ್ಸು, ವಗೈರೆ. ಅವರಿಗೆಲ್ಲಾ ನನ್ನ ಸಲುವಾಗಿ ಹೇಳ್ಬೇಕು ನೀವು. ನಮ್ದು

ಹ್ಯಾಂಗಿದ್ರೂ ರೂಲಿಂಗ್ ಪಾರ್ಟಿ. ನಾ ಆರಿಸಿ ಬಂದs ಬರ್ತೀನಿ ಅಂತ ಪಾರ್ಟಿಯ ಕಾರ್ಯಕರ್ತರೆಲ್ಲಾ ಹೇಳತಾರ. ಮತ್ತ ಬಹುತೇಕ ಜನರ ಬೆಂಬಲಾನೂ ಅದ ನನಗ. ಇದೇ ಏರಿಯಾದಾಗ ಎಷ್ಟೋ ವರ್ಷದಿಂದ ಇದ್ದೀನಿ ನೋಡ್ರಿ. ಸಮಾಜ ಸೇವಾದಾಗ, ದೀನದಲಿತರ ಸೇವಾದಾಗ ಇಡೀ ಆಯುಷ್ಯ ಕಳದೀನಿ. ಇನ್ನೂ ಹೆಚ್ಚಿನ ಸೇವಾ ಮಾಡ್ಲಿಕ್ಕೆ ಅವಕಾಶ ಸಿಗಲಿ ಅಂತ ಇಲೆಕ್ಶನ್ನಿಗೆ ನಿಂತದ್ದು. ನನಗ ನಿಮ್ಮ ಬೆಂಬಲ ಬೇಕು.''

''ನಮ್ಮ ಬೆಂಬಲ ಯಾವಾಗ್ಲೂ ನಿಮಗ ಇದ್ದs ಅದ ಮಿಸೆಸ್ ಪಟೇಲ, ಲೇಡೀಜ್ ಸಲುವಾಗಿ ಫೈಟ್ ಮಾಡವ್ರನ್ನ ಕಂಡ್ರ ನನಗ ಯಾವಾಗ್ಲೂ ಭಾಳ ಅಭಿಮಾನ. ನನ್ನ ವ್ಹೋಟು ನಿಮಗs.''

''ಥ್ಯಾಂಕ್ಸ್ ಡಾಕ್ಟರ್'' ಮಾಲಿನಿಬಾಯಿಗೆ ಖುಷಿಯಾಯಿತು.

''ನಿಮ್ಮ ಯಜಮಾನ್ರು ಹ್ಯಾಂಗಿದ್ದಾರ ಈಗ ?''

'ಅವ್ರು ಆರಾಮ ಇದ್ದಾಂಗ ಕಾಣಸ್ತದ''

''ಅಂದ್ರ ? ಈ ಊರಾಗಿಲ್ಲೇನು ಅವ್ರು ?''

''ಇದ್ದಾರ್ರೀ. ಮನೀ ಬಿಟ್ಟು ಎಲ್ಲಿಗೆ ಹೋಗತಾರ ? ಅದು ಹಿಂಗಾಗೇದ ಡಾಕ್ಟರ್, ಊರಿನಿಂದ ನಮ್ಮ ಅತ್ತೀಯವರ್ನ ಕರಿಸಿಕೊಂಡೀನಿ ತಮ್ಮ ಮಗನ ಕಾಳಜೀ ತಗೊಳ್ಲಿಕ್ಕೆ. ಈಗಿನ ಕಾಲದ ಸರ್ವ್ಹಂಟ್ಸ್ ಎಲ್ಲೆ ಅಷ್ಟು ರಿಲಾಯಬಲ್ ಸಿಗ್ತಾರ ? ಅಟ್ಟದ ಮ್ಯಾಲಿನ ರೂಮಿನೊಳಗ ವ್ಯವಸ್ಥಾ ಮಾಡೀನಿ ನಮ್ಮ ಯಜಮಾನರ್ದು. ಅವರ ದೇಖರೇಖಿ ಎಲ್ಲಾ ಅತ್ತೀಯವ್ರು ಮಾಡತಾರ. ಅವರ ಸಹಾಯಕ್ಕೆ ಭೋಲಾ ಅಂತ ಒಬ್ಬ ಹುಡುಗನೂ ಇದ್ದಾನ. ನಾ ನೋಡ್ರಿ, ಈ ಇಲೆಕ್ಷನ್ ಬಂತಲಾ, ತಿರಿಗ್ಯಾಡೂದು ಭಾಳ ಇರತದ ನನಗ. ಹಿಂಗಾಗಿ ನಾಲ್ಕೆಂಟು ದಿನಾ ಆತು, ಯಜಮಾನರ ರೂಮಿನ ಕಡೆ ಹೋಗಿ ನೋಡೋದೇ ಆಗಿಲ್ಲ ನನಗ. ಆದರ ಅವ್ರಿಗೆ ಆರಾಮಿದ್ದಿರಬೇಕು. ಏನಾರೆ ತ್ರಾಸಾಗಿದ್ರ ಭೋಲಾ ನನಗ ಹೇಳತಿದ್ದ.''

ಇಲೆಕ್ಷನ್‌ನಲ್ಲಿ ಆರಿಸಿ ಬಂದು ಜನಸೇವೆ ಮಾಡುವ ಅದ್ಭುತ ಗುರಿಯಿಟ್ಟುಕೊಂಡ ಈ ಅದ್ಭುತ ಹೆಂಗಸಿನ ಸಲುವಾಗಿ, ಆಕೆಯ ಹಾಸಿಗೆ ಹಿಡಿದ ರೋಗಿ ಗಂಡನ ಸಲುವಾಗಿ, ನಂತರ ರೋಶನ್‌ಬಿ ಹಾಗೂ ಮೆಹಬೂಬರ ಸಲುವಾಗಿ ಶಶಿ ಯೋಚಿಸಿದಳು....

ಚಹಾದೊಂದಿಗೆ ಹೊರಬಂದ ರೋಶನ್‌ಬೀಯನ್ನು ನೋಡಿ, ಆಕೆ ಹಿಂದೆ ತಮ್ಮಲ್ಲೂ ಕೆಲಸಮಾಡಿದ್ದರಿಂದ, ಮಾಲಿನಿಬಾಯಿಗೆ ಅತ್ಯಾಶ್ಚರ್ಯವಾಯಿತು : ''ಅರೆ, ಇದೇನು, ರೋಶನ್ ಯಾವಾಗ ಬಂದಳು ?''

ಶಶಿ ಸ್ವಲ್ಪದರಲ್ಲಿ ರೋಶನ್‌ಬೀಯ ಕತೆ ಹೇಳಿದಳು. ಕೇಳಿ ಮಾಲಿನೀಬಾಯಿಯ

ಧ್ವನಿಯಲ್ಲಿ ದಲಿತರ ಉದ್ಧಾರಕ್ಕಾಗಿ ಹೋರಾಡುವ ಧುರೀಣೆಯ ಕಾವು ಒಮ್ಮೆಲೆ ಏರಿತು : "ಛೀ, ಇದೇನು ಸಾಧಿಸಿದ ಹಾಗಾಯಿತು ? ಗಂಡ ಇನ್ನೊಬ್ಬಳ ಕೂಡ ಮಜಾ ಮಾಡುವಾಗ ಸುಮ್ಮನೆ ಕೂತು ಹ್ಯಾಗೆ ನೋಡುತ್ತಾಳೋ, ಹ್ಯಾಗೆ ತಾಳಿಕೊಳ್ಳುತ್ತಾಳೋ ಈ ಪೆದ್ದಿ ರೋಶನ್ ! ಬಿಟ್ಟು ಹೋದವಳು ನಾಚಿಕೆ ಬಿಟ್ಟು ಹೀಗೆ ತಿರುಗಿ ಬಂದಳ್ಯಾಕೆ ? ನಾಲ್ಕು ಜನರನ್ನು ಮಧ್ಯಸ್ಥಿಕೆಗೆ ಕೂಡಿಸಿದವಳು ಎಲ್ಲರ ಎದುರಿಗೆ ಆತ ತಿಂಗಳಾ ತನ್ನ ಪಗಾರ ಇವಳಿಗೇ ತಂದು ಕೊಡಬೇಕೆಂದಾದರೂ ಹಟ ಹಿಡಿಯಬಾರದೆ ? ಡಾಕ್ಟರ್, ಇದಕ್ಕೇ ನೋಡ್ರಿ ನನ್ನ ಮೈ ಉರಿಯುವುದು. ನಮ್ಮ ಬಹುಪಾಲು ಹೆಣ್ಣುಮಕ್ಕಳಿಗೆ ತಮ್ಮ ರೈಟ್ಸ್ ಬಗ್ಗೆ ಅರಿವೇ ಇಲ್ಲ. ತಮ್ಮ ಮೇಲೆ ಸದಾ ನಡೆದಿರುವ ಶೋಷಣೆಯ ಬಗ್ಗೆ ತಿಳುವಳಿಕೆಯೇ ಇಲ್ಲ. ಇನ್ನು ಇದರ ವಿರುದ್ಧ ಬಂಡೇಳುವ ಮಾತಂತೂ ದೂರವೇ ಉಳೀತು."

ಮಾಲಿನಿಬಾಯಿಯ ಲೆಕ್ಚರಿನ ಅಲ್ಪಸ್ವಲ್ಪ ಅರ್ಥವಾಗಿದ್ದ ರೋಶನ್‌ಬಿ ಅಂದಳು. "ನಿಮ್ಹಾಂಗ ಸಾಲೀಕಲ್ತಿದ್ರ ನಾವೂ ಎದುರು ಬೀಳತಿದ್ದಿವ್ರಿ ಗಂಡಗ. ಹೇಳಿ ಕೇಳಿ ಮಂದೀ ಮನಿ ಮುಸುರೀ ತಿಕ್ಕಿ ಹೊಟ್ಟೀ ಹೊರಕೊಳ್ಳವ್ರು ನಾವು. ಗಂಡನ್ನ ಬಿಟ್ಟು ಹೋದ್ರ ಮಂದಿ ಛೀ ಅಂತಾರು. ನನ್ನ ಆರು ಮಂದಿ ಹೆಣ್ಣುಮಕ್ಕಳ ಮದಿವೀ ಯಾರು ಮಾಡವ್ರು ? ಗಂಡ್ಸು ಏನಾಡಿದ್ರೂ ನಡೀತೈತಿ ಬಾಯೀ, ಹೆಂಗಸು ಎಚ್ಚರದಿಂದ ಹೆಜ್ಜೆ ಹಾಕ್ಬೇಕು ನೋಡ್ರಿ."

ರೋಶನ್‌ಬೀಯನ್ನು ಬಿಟ್ಟು ಶಶಿಯ ಕಡೆ ತಿರುಗಿ ಲೆಕ್ಚರು ಮುಂದುವರಿಸಿದಳು ಮಾಲಿನಿಬಾಯಿ, "ನೋಡಿದ್ರಾ ಡಾಕ್ಟರ್ ? ನಮ್ಮ ದೇಶದಾಗ ಗಂಡಸ್ರಿಗೆ ಒಂದು ಬ್ಯಾರೇನ ಕೋಡ್ ಆಫ್ ಕಾಂಡಕ್ಟ್, ಹೆಂಗಸ್ರಿಗೆ ಒಂದು ಬ್ಯಾರೇನs. ಸ್ವತಃ ಹೆಂಗಸ್ರೇ ಇದನ್ನ ಒಪ್ಪಿಕೊಂಡು ಬಿಟ್ಟಾರ. ಅದಕ್ಕೇ ಗಂಡಸ್ರಿಗೆ ಅನ್ಯಾಯ, ಅತ್ಯಾಚಾರದ ಮಾರ್ಗ ಮೋಕಳೀಕ ಆಗ್ಯಾವ. ಇದರ ವಿರುದ್ಧ ಹೋರಾಡಬೇಕಂತೀನಿ ನಾನು. ನಮ್ಮ ಹೆಂಗಸ್ರಿಗೆ ತಾವು ಕಳಕೊಂಡಿರೋ ಹಕ್ಕುಗಳ ಬಗ್ಗೆ, ಸ್ವಾತಂತ್ರ್ಯದ ಬಗ್ಗೆ ತಿಳುವಳಿಕಿ ತಂದುಕೊಡಬೇಕಂತೀನಿ. ಈ ರೋಶನ್‌ಳಂಥಾ ಹೆಂಗಸ್ರಿಂದೇ ನಮ್ಮ ದೇಶದಾಗಿನ ಗಂಡಸ್ರು ಅಟ್ಟಾ ಏರಿ ಕೂತು ಹೆಂಗಸ್ರನ್ನ ಕಾಲಕಸಾ ಆಗಿ ಕಾಣತಿರೋದು...."

–ಶಶಿ ಯೋಚಿಸುತ್ತಿದ್ದಳು –ಈ ಮಾಲಿನಿಬಾಯಿಯ ಗಂಡನ ಕಾಲು ಕುಂಟಾಗಿರದೇ, ಆತ ಹೃದಯರೋಗಿಯಾಗಿರದೇ, ಆತ ಹಾಸಿಗೆ ಹಿಡಿಯದೇ ಹೋಗಿದ್ದರೆ, ಆತ ಗಟ್ಟಿಮುಟ್ಟಾಗಿ ಓಡಾಡಿಕೊಂಡು ಮೆಹಬೂಬನ ಹಾಗೆ ಹೊರಗೊಬ್ಬ ಗಿಂಡತಿಯನ್ನು ಇಟ್ಟುಕೊಂಡಿದ್ದರೆ, ನೀನೇನು ಊರು-ಹೊಲಗೇರಿ ಒಂದು ಮಾಡಿದರೂ ನಾನು ಅವಳನ್ನು ಬಿಡುವುದಿಲ್ಲ ಅನ್ನುವಂತಿದ್ದರೆ.... ಆಗಲೂ

ಈ ವುಡ್-ಬೀ ಎಮ್. ಎಲ್. ಎ. ಯ ಕೆಚ್ಚು ಈಗಿನ ಹಾಗೇ ಇರುತ್ತಿತ್ತೇ ? –ಇಲ್ಲ ಅಮ್ಮಣ್ಣೀ, ನಮ್ಮ ಸಮಾಜದಲ್ಲಿ ಒಬ್ಬ ಹೆಂಗಸು ನಿನ್ನ ಹಾಗೆ ಬಾಯಿಗೆ ಬಂದದ್ದು ಮಾತಾಡುವ, ಮನಸ್ಸಿಗೆ ತಿಳಿದದ್ದು ಮಾಡುವ ಧೈರ್ಯವುಳ್ಳವಳಾಗಿರಬೇಕಿದ್ದರೆ ಒಂದೋ ಆಕೆಗೆ ಗಂಡ ಇರಬಾರದು ; ಇಲ್ಲವೇ ಆತ ಇನ್‌ವ್ಯಾಲಿಡ್ ಆಗಿರಬೇಕು ; ಷಂಢನಾಗಿರಬೇಕು. ಇಲ್ಲವೇ–

* * *

ಗಂಡ ಎಲ್ಲ ರೀತಿಯಿಂದ ಸಮರ್ಥನಿದ್ದೂ ಹೆಂಡತಿ ಧೈರ್ಯವುಳ್ಳವಳಾಗಿರಬೇಕಿದ್ದರೆ ಅದು ಬಹಳ ಕ್ವಚಿತ್ ಆಗಿ ಕಾಣಸಿಗಬಹುದಾದ ಕೇಸು. ಉದಾಹರಣೆಗೆ ಆಪ್ಟೆ ದಂಪತಿಗಳು.

ಮುಂಜಾನೆ ಆಪ್ಟೆಬಾಯಿಯ ಹಿರಿಯ ಮಗಳಿಗೆ ಆರಾಮಿಲ್ಲೆಂದೂ ಸ್ವಲ್ಪ ಬಂದು ನೋಡಿಹೋಗಬೇಕೆಂದೂ ಅವರ ಮನೆಯ ಅಡಿಗೆಯಾಕೆ ಬಂದು ಹೇಳಿದ್ದರಿಂದ ಶಶಿ ಸ್ನಾನ ವಗೈರೆ ಮುಗಿಸಿ ಅವರ ಬ್ಲಾಕಿಗೆ ಹೋದಳು. ಶಾಂತಾಬಾಯಿ ಮನೆಯಲ್ಲಿ ಇರಲಿಲ್ಲ. ಆಪ್ಟೆ ವಕೀಲ ಸಾಹೇಬರೇ ಹೊರಬಂದು "ಯಾ ಯಾ ಡಾಕ್ಟರ್ ಬಾಯೀ" ಅಂತ ಮರಾಠಿಯಲ್ಲಿ ಸ್ವಾಗತಿಸಿದರು. ಶಶಿಯನ್ನು ಕರೆದುಕೊಂಡು ಒಳಗೆ ಮಗಳು ಮಲಗಿದ್ದಲ್ಲಿಗೆ ಹೋದರು. ತುಂಬ ಪ್ರೀತಿಯಿಂದ, ಕಾಳಜಿಯಿಂದ, ಜ್ವರ ಬಂದು ಮಲಗಿದ್ದ ಮಗಳ ಹೊದಿಕೆ ಸರಿಸಿ "ಮೀನೂ, ಡಾಕ್ಟರ್ ಬಂದಾರ ನೋಡು ಮಗೂ" ಅಂದರು. ಎದ್ದು ಕೂಡಲು ಅವಳಿಗೆ ಸಹಾಯ ಮಾಡಿದರು. ತನ್ನ ಕಿಟ್‌ಬ್ಯಾಗಿನಿಂದ ಶಶಿ ಸಿರಿಂಜ್ ತೆಗೆದಾಗ ತಾವೇ ಮುಂದಾಗಿ ಅದನ್ನು ತೆಗೆದುಕೊಂಡು ಸ್ಟರ್‌ಲೈಜ್ ಮಾಡಿಕೊಟ್ಟರು. "ಏನೂ ಆಗುವುದಿಲ್ಲ ಮಗು. ಆರಾಮಾಗುತ್ತೀ" ಅಂತ ಸಾಂತ್ವನ ಹೇಳಿದರು. ಅಡಿಗೆಯಾಕೆ ತಂದಿತ್ತ ಚಹಾವನ್ನು ಶಶಿಗೆ ತಾವೇ ಕೊಟ್ಟು ಇನ್ನೊಂದನ್ನು ಮಗಳಿಗೆ ಕುಡಿಸಿದರು. ಅದೆಲ್ಲ ನೋಡುತ್ತಿದ್ದಂತೆ ಶಶಿಗೆ ಈ ವ್ಯಕ್ತಿ ಈ ಹುಡುಗಿಯ ತಂದೆಯಲ್ಲ, ತಾಯಿ ಅನ್ನಿಸಿತು. ನಂತರ ಆಪ್ಟೆ ಹೇಳಿದರು, "ಶಾಂತಾನದು ಇವತ್ತೊಂದು ಕೇಸ್ ಇತ್ತು. ನಾ ಫ್ರೀ ಇದ್ದೆ. ಅದಕ್ಕ ಮುಂಜಾನೆಯೆ ಆಕೆ ಕೋರ್ಟಿಗೆ ಹೋದಳು. ಮಗಳನ್ನ ನೋಡಿಕೊಳ್ಳಲಿಕ್ಕೆ ಅಂತ ನಾನು ಮನೆಯೊಳಗೆ ಉಳಿದೆ. ನಮ್ಮ ಶಾಂತಾನದು ನಿಮಗ ಗೊತ್ತಲ್ಲ, ನೂರಾಎಂಟು ಪರೋಪಕಾರದ ಪ್ರೊಗ್ರ್ಯಾಮ್ಸ್ ಇರತಾವ ಅಕೀವು. ಏನೇನೋ ಪ್ರಿನ್ಸಿಪಲ್ಸ್ ಇಟಗೊಂಡಾಳ. ವ್ಯಾಲ್ಯೂಜ್ ಇಟಗೊಂಡಾಳ. ಅವುಗಳ ಸಲುವಾಗಿ ಹಗಲಿಡೀ ದುಡೀತಾಳ. ಪಾಪ, ಆಕೀಗೆ ರೆಸ್ಟೇ ಸಿಗೂದಿಲ್ಲ. ನಾ ಎಷ್ಟS ಹೆಲ್ಪ್ ಮಾಡಿದ್ರೂ ಮತ್ತ ಆಕೀ ಕೆಲಸ ಆಕೀಗೆ ಸಾಕಷ್ಟ ಇರತಾವ."

ನಿನ್ನೆ ರಾತ್ರಿ ಅನ್ನಿಸಿದ್ದಂತೆ ಶಶಿಗೆ ಮತ್ತೆ ಅನ್ನಿಸಿತು. ನಮ್ಮ ಸಮಾಜದಲ್ಲಿ ಒಬ್ಬ

ಹೆಂಗಸಿಗೆ ಬೇಕಾದ್ದನ್ನು ಹೇಳುವ, ಮಾಡುವ, ಯೋಚಿಸುವ, ಯೋಜಿಸುವ, ಕಾರ್ಯರೂಪಕ್ಕಿಳಿಸುವ ಧೈರ್ಯವಿರಬೇಕಾದರೆ ಆಕೆ ಪ್ರಿನ್ಸಿಪಲ್ಸ್‌ಗಾಗಿ-ವ್ಯಾಲ್ಯೂಜ್‌ಗಾಗಿ ಹೋರಾಡಬಲ್ಲವಳಿರಬೇಕಾದರೆ, ಒಂದೋ ಆಕೆಗೆ ಗಂಡ ಇರಬಾರದು ; ಇಲ್ಲವೇ ಆತ ಅಂಗವಿಕಲನೋ, ಷಂಢನೋ ಆಗಿರಬೇಕು ; ಇಲ್ಲವೇ ಆತ ಆಪ್ಟೆ ವಕೀಲರ ಹಾಗೆ ಥರೋ ಜಂಟಲ್‌ಮನ್ ಆಗಿರಬೇಕು.... ಮತ್ತು ಈ ಕೊನೆಯ ಸಾಧ್ಯತೆ ತೀರ ವಿರಳ.

—ಬೆಂಕಿ ಬೀಳಲಿ ಇಂಥ ವ್ಯವಸ್ಥೆಗೆ....

* * *

ಈಗೀಗ ತಾನು ಸದಾ ಮೂಡೀಯಾಗಿರುತ್ತೇನೆಂದು, ಮೊದಲಿನ ಹಾಗೆ ಕೆಲಸದಲ್ಲಿ ಪ್ರಸನ್ನತೆ ಉಳಿದಿಲ್ಲವೆಂದು, ಯಾವಾಗಲೂ ಒಂದು ಥರಾ ಕಾರಣವಿಲ್ಲದ ಬೇಸರ ಮನಸ್ಸನ್ನು ಕವಿದಿರುತ್ತದೆಂದು ಶಶಿಗೆ ಅನಿಸುತ್ತಲಿದೆ. ಕಮಲಾನ ಡಾಯರಿ ಓದುತ್ತಿರುವುದರ ಪರಿಣಾಮವೇ ? —ಇರಲಾರದು. ಕಮಲಾ ತನಗೆ ಬಹಳ ಆತ್ಮೀಯವಾಗಿದ್ದ ಗೆಳತಿ, ಸರಿ. ಆದರೆ ಆಕೆಯ ಜೀವನದ ಬಗೆಗಿನ ಹುಚ್ಚು ಕಲ್ಪನೆಗಳನ್ನು ತಾನೆಂದೂ ಒಪ್ಪಿರಲಿಲ್ಲ. ಅವುಗಳ ಬಗ್ಗೆ ಆಕೆಯನ್ನು ಸದಾ ಹಾಸ್ಯ ಮಾಡುತ್ತ, ಎಚ್ಚರಿಸುತ್ತ, ಟೀಕಿಸುತ್ತ ಇದ್ದೆ. ಅಷ್ಟೊಂದು ರೋಮ್ಯಾಂಟಿಕ್ ವಿಚಾರಗಳನ್ನಿಟ್ಟುಕೊಂಡ ಯಾರೇ ಆದರೂ ಹೀಗೆ ಕೊನೆಯಲ್ಲಿ ದುಃಖಿಯಾಗುವುದು ಸಹಜವಿತ್ತು. ಅದೂ ಗಂಡಸಿನ ಬಗ್ಗೆ ಹೀಗೆ ಆದರ್ಶಗಳನ್ನಿಟ್ಟುಕೊಂಡರೆ ನಿರಾಶೆ ಕಟ್ಟಿಟ್ಟ ಬುತ್ತಿಯೆಂದು ತಾನೆಷ್ಟು ಸಲ ಅವಳಿಗೆ ಹೇಳಿರಲಿಲ್ಲ ? ಆಪ್ಟೆ ವಕೀಲರಂಥ ಗಂಡಸು ನಮ್ಮಲ್ಲಿ ಕೋಟಿಗೊಬ್ಬರು ಸಿಗಬಹುದು ಅಷ್ಟೇ. ಈ ಕಮಲಾ ಸುಂದರವಾಗಬಹುದಾಗಿದ್ದ ತನ್ನ ಬಾಳಿಗೆ ತಾನೇ ಕತ್ತಲು ಕವಿಸಿಕೊಂಡಳು. ಈ ವಿಚಾರವೇ ಇತ್ತೀಚೆ ತನ್ನನ್ನು ಕಾಡುತ್ತಿರುವುದು ?

ಅಥವಾ—

ಮೊನ್ನೆ ಕೊನೆಯ ಸಲ ತನ್ನನ್ನು ಮದುವೆಯಾಗಲು ಕೇಳಿ ತಾನು ಇಲ್ಲವೆಂದಾಗಿನಿಂದ ಸತೀಶ ದೇಶಪಾಂಡೆ ಹಾಸ್ಪಿಟಲಿನಲ್ಲಿ ತನ್ನ ಕಣ್ಣು ತಪ್ಪಿಸಿ ಅಡ್ಡಾಡುತ್ತಿದ್ದಾನೆ. ಡ್ಯೂಟಿ ಅವರ್ಸ್‌ನಲ್ಲೂ ಎಷ್ಟು ಬೇಕೋ ಅಷ್ಟೇ ಮಾತು. ಮಧ್ಯಾಹ್ನ ಲಂಚ್‌ಗೆ ತನಗೆ ಕಂಪನಿ ಕೊಡಲು ಬರುತ್ತಿಲ್ಲ. 'ಚಹಾಕ್ಕೆ ಬರ್‍ತೀಯೇನು ಶಶಿ ?' ಅಂತ ಕೇಳುವುದಿಲ್ಲ. 'ಭಾಳ ದಣಿದಾಂಗ ಕಾಣಸ್ತೀ, ನಡೀ ನನ್ನ ಕ್ವಾರ್ಟರ್ಸಿಗೆ ಹೋಗಿ ಸ್ವಲ್ಪ ಆರಾಮು ತಗೊಂಡು ಆಮ್ಯಾಲ ಹೋಗೀಯಂತ,' ಅನ್ನುವುದಿಲ್ಲ. ಬಹುಶಃ ತಾನಿನ್ನು ಶೀಘ್ರದಲ್ಲೇ ಬೇರೆ ಹುಡುಗಿಯನ್ನು ಲಗ್ನವಾಗಲಿರುವುದರಿಂದ

ಹೀಗೆಲ್ಲ ಮಾಡಬಾರದು ಅನಿಸಿರಬೇಕು ಆತನಿಗೆ. ಆತನ ಈ ಮೌನ, ಈ ದೂರತೆ, ಈ ತಾತ್ಸಾರದ ಪರಿಣಾಮವೇ ತನ್ನ ಇತ್ತೀಚಿನ ಬೇಸರ ? –ಅಂದರೇನು ತಾನೇನು ಸತೀಶನನ್ನು ಪ್ರೀತಿಸುತ್ತಿದ್ದೇನೋ ಏನು ಮಣ್ಣೋ ?

–ಛೇ, ಛೇ ತಾನು ಮತ್ತು ಪ್ರೀತಿ ಮತ್ತು ಒಬ್ಬ ಗಂಡಸು ! ಎಲ್ಲಿಂದೆಲ್ಲಿಯ ಸಂಬಂಧ ! ತಾನೇನು ಕಮಲಾ ಅಲ್ಲ ಗಂಡಸನ್ನು ಪ್ರೀತಿಸಲು. ತಾನೇನು ರೋಶನ್‌ಬಿ ಅಥವಾ ಪೂರ್ಣಿಮಾ ಸಿಂಗ್ ಅಲ್ಲ ಗಂಡಸಿನ ಹಿಡಿತದಲ್ಲಿ ಸಿಕ್ಕು ಒದ್ದಾಡಲು. ತಾನೇನು ಲೀಲಾ ಕುಲಕರ್ಣಿಯಲ್ಲ ಬಸಿರಾಗಿ ಅಳುತ್ತ ಕೂಡಲು. ತಾನು ಈ ಎಲ್ಲಾ ಮೂರ್ಖ ಹೆಂಗಸರಿಗಿಂತ ಬೇರೆ. ತೀರ ಬೇರೆ.

ಹಾಗಿದ್ದರೆ ಮೊನ್ನೆ ಸಂಜೆ ತೀರ ಬೇಸರವಾಗಿದ್ದಾಗ, ಎಲ್ಲಾದರೂ ಔಟಿಂಗ್‌ಗೆ ಹೋಗಬೇಕು ಅನ್ನಿಸಿದಾಗ, ಡಾ. ಖಾನ್ ಎಷ್ಟು ಜುಲುಮೆಯಿಂದ ಎಲಿಫಂಟಾ ಕೇವ್ಸ್‌ಗೆ ಅಥವಾ ವಿಹಾರ್‌ಲೇಕ್‌ಗೆ ಹೋಗೋಣ ಬಾ ಅಂತ ಕರೆದರೂ ತಾನೇಕೆ ಒಲ್ಲೆ ಅಂದಿದ್ದು ? ಎದುರಿಗೆ ಸತೀಶನೂ ಇದ್ದ. ಖಾನ್ ತನ್ನನ್ನು ಕರೆದಾಗ ತನ್ನ ಕಡೆ ಒಮ್ಮೆ ನೋಡಿದ. ತಾನು ಒಲ್ಲೆ ಅಂದಾಗ ಎದ್ದು ಹೋದ. ಸತೀಶ ಹೋದೊಡನೆ ತನಗೇಕೆ ತಲೆನೋವು ಸುರುವಾದದ್ದು ?

–ಮುಂದೆ ಯೋಚಿಸಲು ಬೇಸರವಾಯಿತು ಶಶಿಗೆ. ಲೀಲಾ ಪುರಸೊತ್ತಾಗಿದ್ದರೆ ಅವಳನ್ನು ಕರಕೊಂಡು ಒಂದು ಸಿನೆಮಾನಾದರೂ ನೋಡೋಣವೆಂದು ಕೆಳಗಿಳಿದು ಕುಲಕರ್ಣಿ ಮಾಸ್ತರರ ಮನೆಗೆ ಹೋದರೆ ಬಾಗಿಲಲ್ಲೇ ಭೆಟ್ಟಿಯಾದಳು ಲೀಲಾ. ಎಲ್ಲೋ ಹೊರಡುವ ತಯಾರಿಯಿಂದ ಹೊರಬಂದಿದ್ದಳು. ಶಶಿಗೆ ಲೀಲಾ ಒಮ್ಮೆಲೇ ಬದಲಾದಂತೆ ತೋರಿದಳು. ಅವಳ ಒಂದು ಜಡೆ, ವಾಯಲ್ ಸೀರೆ, ಮುತ್ತಿನ ಬೆಂಡೋಲೆ, ಹವಾಯಿ ಚಪ್ಪಲಿ, ದೊಡ್ಡ ಕರಿಯ ಕೊಡೆ ಮಾಯವಾಗಿದ್ದವು. ಎತ್ತಿ ಕಟ್ಟಿದ ಕೂದಲು, ಪಾಲಿಸ್ಟರ್ ಸೀರೆ, ದೊಡ್ಡ ಬಳೆಯಾಕಾರದ ರಿಂಗು, ಎತ್ತರದ ಹಿಮ್ಮಡಿಯ ಶೂ, ಫ್ಯಾಶನೇಬಲ್ ಆಗಿ ಕಾಣುತ್ತಿದ್ದ ಸೀರೆಗೆ ಮ್ಯಾಚ್ ಆಗಿದ್ದ ವ್ಯಾನಿಟಿಬ್ಯಾಗ್, ಮುಖದ ಮೇಲೆ ಆತ್ಮವಿಶ್ವಾಸದ ಮುಗುಳ್ನಗು. ಆಕೆ "ನಮಸ್ಕಾರ ಡಾಕ್ಟರ್" ಅಂದಾಗ ಶಶಿ ಚೇತರಿಸಿಕೊಂಡು ಕೇಳಿದಳು, "ಎಲ್ಲಿಗೆ ಸವಾರಿ ?"

ಧ್ವನಿ ತಗ್ಗಿಸಿ ಕಣ್ಣು ಮಿಟುಕಿಸುತ್ತಾ ಲೀಲಾ ಕುಲಕರ್ಣಿ ಹೇಳಿದಳು, "ನಮ್ಮ ಬಾಸ್ ಕೂಡ ಲೋಣಾವಳಕ್ಕ ಹೊರಟೇನಿ. ಆಫೀಶಿಯಲ್ ಟೂರ್ ಅಂತ ಹೇಳೀನಿ ಮನ್ಯಾಗ. ಈ ಸೀಕ್ರೆಟ್ ನಿಮ್ಮೊಳಗ ಇರ್‍ಲಿ." ನಂತರ ನಕ್ಕು ಮತ್ತೆ ಸೇರಿಸಿದಳು, "ಮತ್ತೇನರೆ ಡಿಫಿಕಲ್ಟಿಯೊಳಗ ಇನ್ನ ಸಿಕ್ಕಿಹಾಕಿಕೊಂಡು ನಿಮಗ ತ್ರಾಸ ಕೊಡೂದಿಲ್ಲ ಡಾಕ್ಟರ್, ನಾ ಈಗ ಸಾಕಷ್ಟು ಶಾಣ್ಯಾಕಿ ಆಗೀನಿ. ನೀವ ಹೇಳಿದಾಂಗ ಕೇರ್‌ಫುಲ್

ಆಗಿರ್ತೀನಿ. ನಾ ಬರಲ್ಯಾ ? ಬಾಯ್.'' ಸ್ಟೈಲಿಶ್‌ಆಗಿ ಕೈಬೀಸಿ ಲೀಲಾ ಹೊರಟೇಹೋದಳು.

ಆಕೆಯ ಈ ಹೊಸ ಶಾಣೇತನದ ಬಗ್ಗೆ, ಕೇರ್‌ಫುಲ್ ಆಗಿರಲು ಕಲಿತಿರುವ ದೂರಾಲೋಚನೆಯ ಬಗ್ಗೆ, ಆಕೆಯನ್ನು ಅಪ್ರಿಶಿಯೇಟ್ ಮಾಡಬೇಕು ಅಂದುಕೊಂಡಳು ಶಶಿ. ಯಾಕೋ ಕೂಡಲೇ ಸಾಧ್ಯವಾಗಲಿಲ್ಲ. ತಾನೇಕೆ ಹೀಗೆ ಬದಲಾಗುತ್ತಿದ್ದೇನೆ ಅಂತ ತನ್ನನ್ನೇ ಬೈಯ್ದುಕೊಂಡು ಇವತ್ತು ಒಬ್ಬಳೇ ಕೂತು ಸಿನೆಮಾ ನೋಡೋಣವೆಂದು ಹೊರಟಳು. ರಾತ್ರಿ ಸಿನೆಮಾ ಮುಗಿಸಿ ಬಂದ ನಂತರ ರೋಶನ್‌ಬಿ ಇವತ್ತು ಸ್ಪೆಶಲ್ಲಾಗಿ ತಯಾರಿಸಿ ಫ್ರಿಜ್‌ನಲ್ಲಿರಿಸಿದ್ದ ಚಿಕನ್‌ಬಿರಿಯಾನಿ ಜೊತೆಗೆ ಫ್ರೆಶ್ ಆಗಿದ್ದ ಕೋಲ್ಡ್ ಬಿಯರ್ ಇತ್ತು. ಆರಾಮವಾಗಿ ಕುಡಿದು ತಿಂದು ಶಿಸ್ತಾಗಿ ಮಲಗುವುದು ಬಿಟ್ಟು ಇದೇನು ಇಲ್ಲದ ಚಿಂತೆ ಅಂತ ತಲೆಕೊಡವಿ ಆಕೆ ಮುಂದೆ ನಡೆದಳು.

* * *

ಆರಾಮಾಗಿ ಕುಡಿದು ತಿಂದು ಶಿಸ್ತಾಗಿ ಮಲಗುವ ಮುನ್ನ ಇತ್ತೀಚಿನ ರಾತ್ರಿಗಳಲ್ಲಿ ಅಭ್ಯಾಸವಾಗಿದ್ದಂತೆ ಶಶಿ, ಕಮಲಾನ ಡಾಯರಿಯ ಪುಟಗಳನ್ನು ತಿರುವಿದಳು. ಕಣ್ಣಲ್ಲಿ ನಿದ್ದೆ ತೂರಿ ಬರುತ್ತಿದ್ದುದರಿಂದ ಪುಟಗಳನ್ನು ಹಾರಿಸಿ ಅಲ್ಲಲ್ಲಿ ಅಷ್ಟಿಷ್ಟು ಓದುತ್ತ ನಡೆದಳು. ನಿಧಾನವಾಗಿ ಅವಳಿಗರಿಯದಂತೆ ಅವಳ ಆರಾಮು-ನಿದ್ದೆ ಎರಡೂ ಕರಗತೊಡಗಿದವು.

> ``ಮೂರ್ತಿಯ ಜೊತೆ ಯಾವುದೇ ಕಾರಣಕ್ಕಾಗಿಯೂ ನಾನು ವಾದಿಸುವುದನ್ನು, ಚರ್ಚಿಸುವುದನ್ನು ಬಿಟ್ಟು ಯುಗವಾಯಿತು. ಎಲ್ಲ ವಿಷಯದಲ್ಲೂ ತನ್ನದೇ ಅಂತಿಮ ತೀರ್ಮಾನವಾಗಬೇಕೆಂದು ಬಯಸುವ, ತನ್ನ ವಿಚಾರಗಳೇ ಅತ್ಯಂತ ಸರಿಯೆಂದು ದೃಢವಾಗಿ ನಂಬಿರುವ, ಇತರರ-ಅದರಲ್ಲೂ ಹೆಂಗಸರ-ಅದರಲ್ಲೂ ನನ್ನ ವಿಚಾರಗಳಿಗೆ ಕಿವಿಗೊಡುವುದಾಗಲೀ, ನನ್ನ ಅಭಿಪ್ರಾಯಗಳನ್ನು ಕೇಳುವುದಾಗಲೀ ಸಮಯ ಹಾಳೆಂದು ತಿಳಿದಿರುವ ಆತನೊಂದಿಗೆ ವಾದಿಸಿ, ಚರ್ಚಿಸಿ ಏನು ಫಲ ? ಮೊನ್ನೆ ಮನೆಗೆ ಸುಣ್ಣ ಬಳಿಸುತ್ತಿರುವಾಗ ಎಲ್ಲ ಸಾಮಾನು ಹೊರತೆಗೆದಾಗ ಹಳೆಯ ಸೂಟ್‌ಕೇಸೊಂದು ಕಣ್ಣಿಗೆ ಬಿತ್ತು. ನನ್ನ ಹಳೆಯ ಪುಸ್ತಕಗಳು ಕಾಗದ ಪತ್ರಗಳನ್ನು ತುರುಕಿರಿಸಿದ್ದ ಸೂಟ್‌ಕೇಸು. ಸುಮ್ಮನೆ ಕುತೂಹಲದಿಂದ ತೆರೆದು ನೋಡಿದರೆ ಹರಿದುಹೋದ ನೋಟ್‌ಬುಕ್ ಒಂದರಿಂದ ಹಾಳೆಯೊಂದು ಹೊರಗಿಣಿಕಿ ನೋಡುತ್ತಿತ್ತು. ಹಾಯ್‌ಸ್ಕೂಲಿನಲ್ಲಿದ್ದಾಗ ನಾಡಹಬ್ಬದ

ನಿಮಿತ್ತ ಇಟ್ಟಿದ್ದ ನಿಬಂಧ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದಿದ್ದ ನನ್ನದೇ ನಿಬಂಧದ ಕರಡು ಪ್ರತಿ. ತಲೆಬರಹ ''ಹೆಣ್ಣುಮಕ್ಕಳಿಗೆ ವಿಚಾರ ಸ್ವಾತಂತ್ರ್ಯ.'' ಆರೇಳು ಪುಟಗಳ ಆ ನಿಬಂಧದ ಮೊದಲ ಪ್ಯಾರಾದಲ್ಲಿ ಕೆಂಪು ಮಸಿಯಿಂದ ಅಂಡರ್‌ಲೈನ್ ಮಾಡಿದ್ದ ಒಂದು ವಾಕ್ಯವನ್ನ- ''ಯಾವುದೇ ವಿಷಯದಲ್ಲಿ ಸ್ವಾತಂತ್ರ್ಯವೆನ್ನುವುದನ್ನು ಬೇರೆಯುವರು 'ಕೊಡು'ತ್ತಾರೆನ್ನುವುದು ಮೂರ್ಖತನ ; ಸ್ವಾತಂತ್ರ್ಯಕ್ಕಾಗಿ ಪ್ರತಿ ವ್ಯಕ್ತಿಯೂ ಸ್ವತಃ ಹೋರಾಡಬೇಕು ಹಾಗೂ ಸಿಕ್ಕ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಸತತ ಹೋರಾಡುತ್ತಲೇ ಇರಬೇಕು.'' ಇಪ್ಪತ್ತೈದು ವರ್ಷಗಳಿಗೂ ಹಿಂದೆ ಇದ್ದ ಈ ಎಚ್ಚರ, ಈ ಪ್ರಜ್ಞೆ, ಆ ಧೈರ್ಯ, ಕೆಚ್ಚು ಜೀವನದ ಬಿರುಗಾಳಿಗೆ, ಬೆಂಕಿಗೆ, ಬಿಸಿಲಿಗೆ ಸಿಕ್ಕಿ ದಿಕ್ಕೆಟ್ಟು ಉರಿದು ಸುಟ್ಟು ಹೋದವಲ್ಲ.... ಶಶಿ ಹೇಳುವಂತೆ ಹೆಂಗಸಿನ ಕನಸುಗಳು-ಆದರ್ಶಗಳು-ತತ್ವಗಳು ಫಲಿಸಲು, ಗುರಿ ಕಾಣಲು ನಮ್ಮ ಸಮಾಜದಲ್ಲಿ ಒಂದೋ ಆಕೆ ಮದುವೆಯಾಗದೇ ಇರಬೇಕು, ಇಲ್ಲವೇ ಆಕೆಯ ಗಂಡ ನಪುಂಸಕನಾಗಿರಬೇಕು, ಇಲ್ಲವೇ ಅತ್ಯಂತ ಸಜ್ಜನನ ಾಗಿರಬೇಕು, ಮತ್ತು ಈ ಕೊನೆಯ ಸಾಧ್ಯತೆ ತೀರ ವಿರಳ. ನಾನೀಗ ಏನ ಾಗಿದ್ದೇನೆಂದು ಪರಾಮರ್ಶಿಸಿ ನೋಡಿದರೆ ನನ್ನ ಅಸ್ತಿತ್ವದ ಬಗ್ಗೆ ನನಗೆ ನ ಾಚಿಕೆಯಾಗುತ್ತದೆ. ಮೂರ್ತಿ ಹೇಳಿದ್ದಕ್ಕೆಲ್ಲ ತಲೆ ಹಾಕುವ, ಆತ ಮಾಡು ಅಂದದ್ದನ್ನು ಮಾಡುವ, ಬೇಡ ಅಂದದ್ದನ್ನು ಬಿಡುವ, ಆತನ ಸ್ವಪ್ರಶಂಸೆಯನ್ನು ಆಸಕ್ತಿಯಿಂದ ಕೇಳುವ, ಆತನ ಪ್ರತಿಭೆ, ಪರ್ಸನ್ಯಾಲಿಟಿ, ಪ್ರಭಾವಗಳನ್ನು ಬಾಯಿತುಂಬ ಸ್ತುತಿಸುವ, ಸ್ವಂತದ ಇರುವಿಕೆಯನ್ನು ಪೂರಾ ಮರೆತು ಬಿಟ್ಟಿರುವ ಪಂಜರದ ಗಿಣಿ ನಾನು.... ಇಷ್ಟಾಗಿ ಈ ಪಂಜರವೇ ನನ್ನ ಸ್ವರ್ಗವೆಂದು ನಂಬಲು ಅವಿರತ ಶ್ರಮಿಸುತ್ತಿರುವ ಗಿಣಿ.

''ಆದರೆ ಈ ಗಿಣಿಯ ರೆಕ್ಕೆಗಳೀಗ ಪಂಜರದಿಂದ ಹೊರಬಂದು ನೀಲಿಯ ಮುಗಿಲಲ್ಲಿ ಹಾರಬಯಸುತ್ತಿವೆ. ಹೀಗೆಯೇ ಇದ್ದರೆ ನಾನು ಏನನ್ನೂ ಸಾಧಿಸಲಾರೆ. ನಾನು ಧೈರ್ಯ ತೋರಬೇಕು. ಅನವಶ್ಯಕ ಬಂಧನಗಳಿಂದ ಮುಕ್ತಳಾಗಬೇಕು. ಎಲ್ಲಿ ನನ್ನ ಪ್ರತಿಭೆಗೆ ಪೂರ್ಣ ಅವಕಾಶ ಸಿಗುವುದೋ ಅಲ್ಲಿಗೆ ಹೋಗಬೇಕು. ಇತ್ತೀಚೆ ನನ್ನೊಳಗಿನದೊಂದು ದನಿ ಸದಾ ಹೀಗೆ ಆರ್ತವಾಗಿ ಕೂಗುತ್ತಿರುತ್ತದೆ.''

* * *

''ಮೂರ್ತಿಯ ಎದುರು ನಾನು ಮೂಕಳಾಗುತ್ತೇನೆ,

ಕುಬ್ಜಳಾಗುತ್ತೇನೆ. ಅಸಹಾಯ ಮಗುವಿನಂತಾಗುತ್ತೇನೆ. ಕಣ್ಣು-ಬಾಯಿ-ಕಿವಿ-ತಲೆ-ಮಿದುಳು ಈ ಯಾವುದೂ ಕೆಲಸ ಮಾಡದ, ಕೇವಲ ಹೃದಯವೊಂದೇ ಧಡಧಡಿಸುವ ಮೇಣದ ಗೊಂಬೆಯಾಗುತ್ತೇನೆ. ಆತನ ಅಪಶಬ್ದಗಳನ್ನು ಒಂದು ಕಿವಿಯಿಂದ ಕೇಳಿ ಇನ್ನೊಂದು ಕಿವಿಯಿಂದ ಬಿಟ್ಟುಬಿಡುತ್ತೇನೆ. ಆತನ ನಿರ್ಲಕ್ಷ್ಯವನ್ನು ಹೊಟ್ಟೆಯಲ್ಲಿ ಹಾಕಿಕೊಂಡು ಶಾಂತಳಾಗಿರುತ್ತೇನೆ. ಆತನ ಉದ್ದೇಶಪೂರ್ವಕ ತಿರಸ್ಕಾರ, ತಾತ್ಸಾರಗಳನ್ನು ನನಗಲ್ಲವೇ ಅಲ್ಲ ಅಂದುಕೊಂಡು ಮತ್ತೆ ಆತನ ಬೇಕು-ಬೇಡಗಳನ್ನು ಪೂರೈಸುವುದರಲ್ಲಿ ತತ್ಪರಳಾಗುತ್ತೇನೆ. ಮೃದುಮಾತು-ಉನ್ಮಾದ-ಉದ್ವೇಗರಹಿತವಾದ, ಕೇವಲ ಯಾಂತ್ರಿಕವಾದಂತೆನಿಸುವ, ಹಾಸಿಗೆಯ ಆಟದಲ್ಲಿ ಆತನ ಮೂಕ ಸಂಗಾತಿಯಾಗುತ್ತೇನೆ. ನನ್ನ ತಲೆಯಲ್ಲಿ, ಮನಸ್ಸಿನಲ್ಲಿ, ಹೃದಯದಲ್ಲಿ ಸದಾ ರಿಂಗಣಗುಣಿತ ನಡೆಯಿಸಿರುವ ನೂರು-ಸಾವಿರ-ಲಕ್ಷ-ಕೋಟಿ ವಿಚಾರಗಳಲ್ಲಿ, ಭಾವನೆಗಳಲ್ಲಿ ಒಂದನ್ನಾದರೂ ಆತನ ಗಮನಕ್ಕೆ ತರುವ ಪ್ರಯತ್ನ ಮಾಡದೆ ಸುಮ್ಮನೇ ಇದ್ದು ಬಿಡುತ್ತೇನೆ.''

* * *

"ಹೀಗಿರುತ್ತಿರಲು –

ಒಂದು ಮುಂಜಾನೆ ಕಂಪನಿ ಆಫೀಸಿನಲ್ಲಿ ವಿನೋದ ಸಹಾನಿಯೊಂದಿಗೆ ಒಂದು ಹೊಸ ನಾಟಕದ ಪ್ರಯೋಗದ ಬಗ್ಗೆ ಚರ್ಚಿಸುತ್ತಿದ್ದಾಗ ನನ್ನನ್ನು ಕಾಣಲು ಒಬ್ಬಾತ ಬಂದರು. ಆತನೊಬ್ಬ ಸುಪ್ರಸಿದ್ಧ ಹಿಂದೀ ಚಲನಚಿತ್ರ ನಿರ್ಮಾಪಕ-ನಿರ್ದೇಶಕ. ತಾನು ನನ್ನ ಅಭಿನಯವನ್ನು ಮೆಚ್ಚಿದ್ದಾಗಿಯೂ ತನ್ನ ಹೊಸ ಚಿತ್ರವೊಂದರಲ್ಲಿ ನಾಯಕಿಯ ಪಾತ್ರವನ್ನು ಸ್ವೀಕರಿಸಬೇಕೆಂದೂ ನನ್ನ ಅನುಕೂಲ ನೋಡಿಕೊಂಡು ಕಾಲ್‌ಶೀಟ್ ಕೊಟ್ಟರೆ ಉಳಿದ ವ್ಯವಸ್ಥೆ ಮಾಡಲು ಅನುಕೂಲವೆಂದೂ ಹೇಳಿದರು. ವಿನೋದ ಸಹಾನಿ ನಿಜವಾದ ಸಂತೋಷದಿಂದ 'ಕಂಗ್ರಾಟ್ಸ್' ಹೇಳಿದ. ನಾನು ಹಿಂದೆ ಮುಂದೆ ನೋಡದೆ ಒಪ್ಪಿಗೆ ನೀಡಿ ಬಂದಾತನಿಗೆ ಕಾಫಿ ಕೊಟ್ಟು ಸತ್ಕರಿಸಿ ಕಳಿಸಿದೆ. ಶಿವಮೂರ್ತಿ ಹೆಂಡತಿ, ಮಕ್ಕಳನ್ನು ಕರಕೊಂಡು ಮಾಥೇರಾನಕ್ಕೆ ಹೋಗಿದ್ದ. ಆತ ತಿರುಗಿ ಬರುವುದನ್ನೇ ಕಾಯುತ್ತ, ಈ ಸುದ್ದಿ ಕೇಳಿ ಆತನಿಗಾಗಬಹುದಾದ ಸಂತೋಷ ನೆನೆದು ಸಂತೋಷಿಸುತ್ತ ಎರಡು ದಿನ ಕಳೆದೆ.

ನನಗೆ ಸಿನೆಮಾದಲ್ಲಿ ನಟಿಸುವ ಅವಕಾಶ ದೊರೆತದ್ದಕ್ಕಾಗಿ ಮೂರ್ತಿಗೆ ಸಂತೋಷವಾಗುವುದೆಂಬ ಬಗ್ಗೆ ನನಗೆ ಖಾತ್ರಿ ಇರಲು ಕಾರಣವೂ ಇತ್ತು.

ಸುಮಾರು ಆರು ವರ್ಷಗಳ ಹಿಂದೆ ಆತನ ಪರಿಚಯದ ನಿರ್ಮಾಪಕರೊಬ್ಬರು ಆತನನ್ನು ಮುಖ್ಯ ಪಾತ್ರದಲ್ಲಿ ಹಾಕಿಕೊಂಡು ಚಿತ್ರ ತಯಾರಿಸಲು ಯೋಜಿಸಿದ್ದರು. ಆದರೆ ಹಣದ ತೊಂದರೆ ಬಂದುದರಿಂದ ಆ ಯೋಜನೆ ಅಲ್ಲಿಗೇ ನಿಂತು ಹೋಗಿತ್ತು. ಶಿವಮೂರ್ತಿಯೇ ಒಂದಿಷ್ಟು ಹಣ ಹಾಕಿ ಅದೇ ಚಿತ್ರವನ್ನು ಒಂದೆರಡು ರೀಲುಗಳಷ್ಟು ಮಾಡಿ ಮುಗಿಸಿದರೂ ಹಲವಾರು ವಿಘ್ನಗಳು ಬಂದು ಆ ಪ್ರಯತ್ನವನ್ನು ಅಲ್ಲಿಗೇ ಕೈ ಬಿಡಬೇಕಾಗಿತ್ತು. ಆಗ ಆತ ನನಗೆ ಹೇಳಿದ್ದ, 'ನಾವು ನಾಟಕ ಮಾಡಿ ಎಷ್ಟs ಹೆಸರು ಗಳಿಸಿದ್ರೂ ರಂಗಭೂಮಿ ಮ್ಯಾಲೆ ಏನೇ ಕ್ರಾಂತಿ ಮಾಡಿದ್ರೂ ಅದರ ಇಫೆಕ್ಟ್ ತೀರ ಲಿಮಿಟೆಡ್ ಆಗ್ತದ ಕಮಲಾ, ಒಂದಿಲ್ಲೊಂದು ದಿನಾ ನಾನೂ-ನೀನೂ ಒಂದು ಪಿಕ್ಚರಿನ್ಯಾಗ ಭಲೋ ಗ್ರ್ಯಾಂಡಾಗಿ ಆ್ಯಕ್ಟ್ ಮಾಡಿ ಧಿಡೀರ್ ಅಂತ ಸ್ಯೂಪರ ಸ್ಟಾರ್ಸ್ ಆಗೋ ಕನಸು ನನಗ. ಮೊದಲಿನಿಂದ್ಲೂ ಈ ಕನಸು ಇತ್ತು ಅನ್ನು. ಈಗ ನೀ ಭಾಗ್ಯಲಕ್ಷ್ಮೀ ಹಾಂಗ ನನ್ನ ಲೈಫ್‌ನ್ಯಾಗ ಎಂಟರ್ ಆದಮ್ಯಾಲೆ ಈ ಕನಸು ನನಸಾಗೋದ್ರಾಗ ನನಗೇನೂ ಸಂಶಯ ಉಳಿದಿಲ್ಲ.'

ಆದರೆ ಎರಡು ದಿನಗಳ ನಂತರ ಆತ ಬಂದಾಗ ಈ ವಿಷಯ ತಿಳಿದು ಆತ ಪ್ರತಿಕ್ರಿಯೆ ತೋರಿದ್ದು ತೀರ ಭಿನ್ನವಾಗಿ : 'ನೀ ಆ ಹಿಂದೀ ಸಿನೇಮಾದ ಲಫಂಗ ಮಂದೀ ಕೂಡ ವ್ಯವಹಾರ ಮಾಡೋದು ನನಗೆ ಬೇಕಾಗಿಲ್ಲ. ನನ್ನ ಕೇಳಲಾರದೆ ಅದ್ಹ್ಯಾಂಗ ಒಪ್ಪಿಗೀ ಕೊಟ್ಟಿ ನೀನು ? ನಿನಗ ತಿಳಿಯೂದಿಲ್ಲಾ ಅಂದಮ್ಯಾಲೆ ನನ್ನ ಕೇಳಿ ಎಲ್ಲಾ ಮಾಡಬೇಕು ಅಂತ ಗೊತ್ತಿಲ್ಲೇನು ನಿನಗ ? ಈಗರ ಏನಾತು, ಒಲ್ಲೆ ಅಂತ ಹೇಳಿಬಿಡು ಆ ಮನುಷ್ಯಾಗ. ಫೋನ್ ಮಾಡಿಬಿಡು. ಇಲ್ಲಂದ್ರ ನಾನs ಮಾಡ್ತೀನಿ. ನಾ ಇಲ್ಲದಾಗ ಬಂದು ನಿನ್ನ ಕಾಂಟ್ರ್ಯಾಕ್ಟ್ ತಗೋಬೇಕಂದರ ಎಷ್ಟು ಧೈರ್ಯ ಆ ಸೂಳೇಮಗನಿಗೆ—'

'ಅಲ್ಲ ಮೂರ್ತಿ, ನಾ ಅಡ್ವಾನ್ಸ್ ಚೆಕ್ ಸಹ ತಗೊಂಡು ಬಿಟ್ಟೀನಲ್ಲ.'

'ಅದನ್ನ ಬಿಸಾಕು ಅವನ ಮುಖದ ಮ್ಯಾಲ. ಯಾಕ, ಚೆಕ್ ಕೊಟ್ಟರ ಬೇಕಾದ್ದು ಮಾಡ್ಲಿಕ್ಕೆ ತಯಾರಿದ್ದೀಯೇನು ನೀನು ?'

ಈ ತರದ ಮಾತುಗಳನ್ನು ಬಹಳವಾಗಿ ಕೇಳಿದ್ದ ನನಗೆ ಈ ಸಲ ಯಾಕೋ ವಿಪರೀತ ಸಿಟ್ಟು ಬಂತು : 'ಬಾಯಿಗೆ ಬಂದಾಂಗ ಮಾತಾಡಬ್ಯಾಡ ಮೂರ್ತಿ. ರೊಕ್ಕದ ಸಲುವಾಗಿ ಅಲ್ಲ ನಾ ಒಪ್ಪಿದ್ದು. ಜೀವನದಾಗ ರೊಕ್ಕ ಒಂದೇ ಮುಖ್ಯ ಅಲ್ಲ. ಅದಕ್ಕಿಂತ ಹೆಚ್ಚಿನ ವ್ಹ್ಯಾಲ್ಯೂಜ್ ಕೆಲವು ಇರ್ತಾವ. ಈ ಕೆಲಸ ಒಪ್ಪಿಕೊಳ್ಳೋದ್ರಿಂದ ಹೆಚ್ಚಿನ ಸ್ಕೋಪ್, ಹೆಚ್ಚು ಪ್ರಸಿದ್ಧಿ, ಹೆಚ್ಚು

ಅನುಭವ ಸಿಗ್ತದ ಅಂತ ನಾ ಒಪ್ಪಿಗೀ ಕೊಟ್ಟೀನಿ.'

ನನ್ನಿಂದ ಎಂದೂ ಎದುರುತ್ತರ ನಿರೀಕ್ಷಿಸಿರದಿದ್ದ ಆತನಿಗೆ ತಲೆಕೆಟ್ಟಂತಾಗಿಬಿಟ್ಟಿರಬೇಕು. ಆತ ಒದರಿಯೇ ಬಿಟ್ಟ : 'ಹಂಗಾರ ಒಂದು ಅಂಗಡೀನೇ ತಗಿ. ಸಾಕಷ್ಟು ಸ್ಕೋಪು, ಪ್ರಸಿದ್ಧಿ, ಅನುಭವ, ಇನ್ನೂ ಏನೇನು ಬೇಕೋ ಎಲ್ಲಾ ಸಿಗತಾವ" ಹಾಗಂದು ಆತ ರಾತ್ರಿ ಹನ್ನೆರಡಾಗುತ್ತ ಬಂದಿದ್ದ ಆ ಅಸಮಯದಲ್ಲಿ ಎದ್ದು ಬಟ್ಟೆ ಹಾಕಿಕೊಂಡು ಬಾಗಿಲು ತೆರೆದುಕೊಂಡು, ಅಡ್ಡಗಟ್ಟಲು ಪ್ರಯತ್ನಿಸಿದ ನನ್ನನ್ನು ಒರಟಾಗಿ ನೂಕಿ ಹೊರಗೆ ಹೊರಟೇ ಹೋದ.

ನನಗೆ ತೀವ್ರವಾಗಿ ಅನಿಸಿತು– ಈ ಸಲ ನಾನು ಏನಾದರೂ ಸೋಲಬಾರದು. ನನಗನ್ನಿಸಿದ್ದನ್ನು ಮಾಡಿಯೇ ತೀರಬೇಕು. ಈತನ ತಾಳಕ್ಕೆ ತಕ್ಕ ಹಾಗೆ ಕುಣಿಯುತ್ತ ಹೋದರೆ ನಾನಿನ್ನು ಪೂರಾ ನಿಸ್ಸತ್ವ-ನಿರ್ಜೀವ-ನಿಷ್ಕ್ರಿಯ-ನಿರುಪಯೋಗಿ ಜಂತುವಾಗಿ ಬಿಡುತ್ತೇನೆ. ಒಳ್ಳೆಯ ಅವಕಾಶ ಸಿಕ್ಕಾಗ ನಾನು ಬಿಡುವುದಿಲ್ಲ. ಏನು ಮಾಡುತ್ತಾನೋ ನೋಡೋಣ....

* * *

"ನಾಲ್ಕು ದಿನಗಳ ನಂತರ ಮತ್ತೆ ಆ ನಿರ್ಮಾಪಕರು ಬಂದಾಗ ಅನಿವಾರ್ಯ ಕಾರಣಗಳಿಂದಾಗಿ ನನ್ನ ಒಪ್ಪಿಗೆಯನ್ನು ಹಿಂದೆಗೆದುಕೊಳ್ಳುತ್ತಿದ್ದೇನೆಂದೂ ಅದಕ್ಕಾಗಿ ದಯವಿಟ್ಟು ಕ್ಷಮಿಸಬೇಕೆಂದೂ ಕೇಳಿಕೊಂಡು ಅವರ ಚೆಕ್ ಅನ್ನು ಹಿಂತಿರುಗಿಸಿ ಕೈಮುಗಿದು ಬೀಳ್ಕೊಟ್ಟೆ.

–ಮೂರ್ತಿಯನ್ನು ನಾನು ಬಹಳವಾಗಿ ಪ್ರೀತಿಸುತ್ತೇನೆ. ಆತನಿಗೆ ಬೇಡವಾದುದನ್ನು ಮಾಡಿ ಆತನ ಮನಸ್ಸು ನೋಯಿಸಲು ನನಗಿಷ್ಟವಿಲ್ಲ. ಪ್ರಸಿದ್ಧಿಗಿಂತ, ಅನುಭವಕ್ಕಿಂತ, ಹಣಕ್ಕಿಂತ, ಆದರ್ಶಗಳಿಗಿಂತ, ಎಲ್ಲಕ್ಕಿಂತ ಹೆಚ್ಚಿನದು ಆತನ ಮನಸ್ಸಮಾಧಾನ. ಆತ ನಗುತ್ತಿದ್ದರೆ ಆ ನಗುವಿನಲ್ಲಿ ಈ ಎಲ್ಲಕ್ಕಿಂತ ಹೆಚ್ಚಿನದು ನನಗೆ ಸಿಗುತ್ತದೆ....

* * *

–ಮೊನ್ನೆ ಶನಿವಾರ, ನಮ್ಮ ಲಗ್ನದ ವಾರ್ಷಿಕೋತ್ಸವದ ದಿನ. ಹೆಂಡತಿಯ ಹುಟ್ಟು ಹಬ್ಬದಂದು, ಲಗ್ನದ ಹುಟ್ಟು ಹಬ್ಬದಂದು, ಮತ್ತಿತರ ಹಬ್ಬ ಹುಣ್ಣಿಮೆಗಳಂದು ತಪ್ಪದೇ ಉಡುಗೊರೆಗಳನ್ನು ತಂದು ಆ ದಿನ ಊಟಕ್ಕೆ ಹೊರಗಡೆ ಹೋಗಿ ಸಿನೆಮಾ ನೋಡಿ ಒಟ್ಟಾಗಿ ಖುಷಿಯಿಂದಿರುವ ಅನೇಕ ಗಂಡ-ಹೆಂಡಿರನ್ನು ನೋಡಿದ್ದೇನೆ ನಾನು. ಮೊದಮೊದಲು ನಾವೂ

ಹಾಗಿರುವ ಕನಸು ಕಾಣುತ್ತಿದ್ದೆ. ಆದರೆ ಈ ವಿಷಯದಲ್ಲಿ ಮೂರ್ತಿಗೆ ನೆನಪಿನ ಶಕ್ತಿ ಕಡಿಮೆ. ಹಿಂದೆಲ್ಲ ಆತ ಇಂಥ ದಿನಗಳಲ್ಲಿ ನನ್ನೊಂದಿಗಿರದಿದ್ದರೆ ಅತ್ತು ಕರೆದು ಒಂದಿಷ್ಟು ರಂಪ ಮಾಡಿ ಆತ ರಮಿಸಿ ಮುದ್ದುಗರೆದ ನಂತರವೇ ಸುಮ್ಮನಾಗುತ್ತಿದ್ದೆ. ಇತ್ತೀಚಿನ ವರ್ಷಗಳಲ್ಲಿ ಆತ ರಮಿಸುವುದೂ, ಮುದ್ದುಗರೆಯುವುದೂ ಬಿಟ್ಟು ಬಿಟ್ಟ ನಂತರ ನಾನೂ ಅಳುವುದು-ಹಟ ಹಿಡಿಯುವುದು ಬಿಟ್ಟು ಬಿಟ್ಟಿದ್ದೆ. ಆದರೆ ಎಲ್ಲಾ ಬಿಟ್ಟಿದ್ದರೂ ಮೂರ್ತಿಯ ಸಾಮೀಪ್ಯದ ಆಸೆ ಮಾತ್ರ ನನ್ನಲ್ಲಿನ್ನೂ ಪ್ರಬಲವಾಗಿ ಉಳಿದೇ ಇತ್ತು. ಈ ಸಲ ಯಾಕೋ ನಮ್ಮ ಲಗ್ನದ ಹುಟ್ಟುಹಬ್ಬದಂದು ಆತನೊಂದಿಗೆ ಇರಬೇಕು ಅಂತ ಪ್ರಬಲವಾಗಿ ಅನ್ನಿಸಿತ್ತು. ಅದರೊಂದಿಗೆ ಹಿಂದಿನ ಆ ತೀವ್ರ ಸೆಳೆತ, ಹುಚ್ಚು, ಉನ್ಮಾದ, ಇಡಿಯ ಜಗತ್ತಿನ ವಿರೋಧವನ್ನೇ ಎದುರಿಸಿಯೇವೆಂಬ ಗಟ್ಟಿತನ, ಜೊತೆಗಿರುವಾಗ ಅನಿಸುವ ಸಾರ್ಥಕತೆ —ಎಲ್ಲವನ್ನೂ ಮೆಲುಕು ಹಾಕುವ ಇಚ್ಛೆಯಾಗಿತ್ತು. ಅದಕ್ಕೆಂದೇ ನಾಲ್ಕಾರು ದಿನ ಮೊದಲಿನಿಂದಲೇ ಮೂರ್ತಿಗೆ ಆ ಬಗ್ಗೆ ಹೇಳುತ್ತ ಬಂದಿದ್ದೆ. ಆತನೂ ಶನಿವಾರ ನನ್ನೊಂದಿಗೆ ಕಳೆಯುವ ಮಾತು ಕೊಟ್ಟಿದ್ದ. ನಾನು ಆ ದಿನ ಮುಂಜಾನೆ ಬೇಗನೆ ಎದ್ದು ತಲೆಗೆ ಸ್ನಾನ ಮಾಡಿ ಸಿಹಿ ತಯಾರಿಸಿ ನಮ್ಮ ರೂಮನ್ನು ಅಲಂಕರಿಸಿ ನಾನೂ ಶೃಂಗಾರವಾಗಿ ಮೂರ್ತಿಗಾಗಿ ಉಡುಗೊರೆಗಳೊಂದಿಗೆ ಕಾಯುತ್ತ ಕೂತೆ, ಹತ್ತಾರು ವರ್ಷಗಳ ಹಿಂದೆ ಕಾಯುತ್ತಿದ್ದ ಹಾಗೆಯೇ.

ಮುಂಜಾನೆ ಸದ್ದಿಲ್ಲದೆ ಸರಿಯಿತು. ಮಧ್ಯಾಹ್ನವೂ ಕಳೆಯಿತು, 'ನೀ ಊಟಾನರೆ ಮಾಡು ಆಂಟೀ, ಎಷ್ಟೊತ್ತು ಉಪವಾಸ ಇರ್ತೀ ?' ಅಂದಳು ನೀಲಾ. ಊಟ ಮಾಡಲು ಮನಸ್ಸು ಬರಲಿಲ್ಲ. ಮೂರ್ತಿಗೆ ಏನೋ ತೀರ ಅರ್ಜೆಂಟಾದ ಕೆಲಸವಿರಬೇಕು. ಇನ್ನು ಆತ ಸಂಜೆಗೇ ಬರುವುದು ಅನ್ನಿಸಿ ಒಂದು ಕಪ್ಪು ಕಾಫಿ ಕುಡಿದು ಹಾಗೆಯೇ ಮಲಗಿದೆ.

ಸಂಜೆಯೂ ಹಾಗೆಯೇ ಕಳೆಯಿತು. ರಾತ್ರಿಯಾಗತೊಡಗಿತು. ಮೂರ್ತಿ ಏಕೆ ಬರಲಿಲ್ಲ ? ಮೈಯಲ್ಲಿ ಆರಾಮವಿರದಿದ್ದರೆ ಫೋನ್ ಮಾಡಿ ತಿಳಿಸಬಹುದಿತ್ತು. ಏನಾಯಿತು ನನ್ನ ಮೂರ್ತಿಗೆ ? ಬರುತ್ತೇನೆಂದು ಮಾತು ಕೊಟ್ಟು ಯಾಕೆ ಬರಲಿಲ್ಲ ಅವನು ? ನಾನು ಹುಚ್ಚಿಯ ಹಾಗೆ ಕಾಯುತ್ತೇನೆಂದು ಆತನಿಗೆ ಗೊತ್ತಿಲ್ಲವೇ ? ಊಟ-ನಿದ್ದೆ ಬಿಟ್ಟು ಆತ ಬರುವ ದಾರಿಯಲ್ಲಿ ಕಣ್ಣುನೆಟ್ಟು, ಜೀವನೆಟ್ಟು ಕೂತಿರುತ್ತೇನೆಂದು ಗೊತ್ತಿಲ್ಲವೇ ?

—ಆ ರಾತ್ರಿ ಸದ್ದಿಲ್ಲದೆ ನನ್ನ ದಿಂಬು ತೋಯುತ್ತಿತ್ತು.

—ಮುಂದೆ ಎರಡು ದಿನ ಬಿಟ್ಟು ಮೂರ್ತಿ ಬಂದಾಗ ನಾನಿನ್ನೂ ಬ್ರೂಡಿಂಗ್ ಮೂಡ್‌ನಲ್ಲೇ ಇದ್ದೆ. ಆತ ಬಂದ. ಖುಶಿಯಾಗಿದ್ದ. ಕಳೆದೆರಡು ದಿನ ನಾನನುಭವಿಸಿದ್ದ ನೋವಿನ ಕಲ್ಪನೆ ಲೇಶಮಾತ್ರವೂ ಆತನಿಗಿರಲಿಲ್ಲ. 'ಯಾಕ ಕಮಲಾ, ಆರಾಮಿಲ್ಲೇನು ?' ಅಂತ ಕೇಳಿದ. ಅಳು ತಡೆದುಕೊಳ್ಳಲು ಪ್ರಯತ್ನಿಸುತ್ತ ಶನಿವಾರ ಆತ ಬರಲಿಲ್ಲವೇಕೆಂದು ಕೇಳಿದರೆ ಅದು ತೀರ ಗೌಣವಾದ ವಿಷಯವೆಂಬಂತೆ ಭುಜ ಹಾರಿಸಿ ಹೇಳಿದ, 'ಹೌದು, ಬರ್ಲಿಕ್ಕಾಗ್ಲಿಲ್ಲ. ಏನ್ಮಾಡೋದು. ಊರಿನಿಂದ ನನ್ನ ಹೆಂಡತಿಯ ಅಣ್ಣ-ಅತ್ತಿಗೆ ಬಂದಿದ್ದರು. ಅವರು ಮನೆಯೊಳಗಿದ್ದಾಗ ಬಿಟ್ಟು ಬಂದರೆ ಚೆನ್ನಲ್ಲ ಅಂತ ಬರ್ಲಿಲ್ಲ. ಇವತ್ತು ಮುಂಜಾನೆ ಊರಿಗೆ ಹೋದರು. ಅದಕ್ಕೇನೀಗ ? ನೀನು ಇಷ್ಟು ಸೆಂಟಿಮೆಂಟಲ್ ಆಗ್ಬಾರ್ದು. ಸ್ವಲ್ಪ ರೀಝನಿಂಗ ಕಲಿತುಕೋ. ನೀ ಇಷ್ಟು ಎಜ್ಯುಕೇಟೆಡ್ ಇದ್ದೀ. ತಿಳುವಳಿಕೆ ಇದ್ದಾಕಿ ಇದ್ದೀ. ಆ ಅನ್‌ಎಜ್ಯುಕೇಟೆಡ್ ಅಡ್ನಾಡಿ ಹೆಂಗಸಿನ್ಹಾಂಗ ನೀನೂ ಹಟಾ ಮಾಡಿದರ ಇಬ್ಬರ ನಡುವ ನಾ ಏನ್ಮಾಡ್ಲಿ ?'

—ಇಷ್ಟು ವರ್ಷ ಆತನ ಹೆಂಡತಿಯಾಗಿ ನಾನು ಆತನಿಗೆ ಏನು ಕೇಳಿದ್ದೆ ? ಯಾತಕ್ಕಾಗಿ ಹಟ ಮಾಡಿದ್ದೆ ? ಯಾವುದೋ ಒಂದು ದಿನ ನನ್ನೊಂದಿಗೆ ಕಳೆಯಲು ವಿನಂತಿಸಿದ್ದೂ ಹಟ ಮಾಡಿದ ಹಾಗಾಯಿತೆ ? ನಾನು ವಾದಿಸಿದೆ. ಮಾತಿಗೆ ಪ್ರತಿಮಾತು ಬೆಳೆಯಿತು. ಆತ ಯಾವಾಗಲೂ ಹಾಗೆಯೇ, ನನ್ನ ಮಾತಿಗೆ ನ್ಯಾಯವಾಗಿ ಉತ್ತರಿಸಲು ಬರದಂತಾದಾಗ, ತನ್ನ ತಪ್ಪನ್ನೇನ ಾದರೂ ನಾನು ಪುರಾವೆ ಸಹಿತ ಸಿದ್ಧಮಾಡಿ ತೋರಿಸಿದಾಗ, ಒಮ್ಮೆಲೆ ಸಹನೆ ಕಳೆದುಕೊಂಡು ಹೊಲಸು ಮಾತಾಡಲು ಸುರು ಮಾಡುತ್ತಿದ್ದ. ನನ್ನ ಬಾಯಿ ಮುಚ್ಚಲು ಅದೊಂದೇ ದಾರಿಯೆಂದು ಆತನಿಗೆ ತಿಳಿದಿತ್ತು. ಈಗಲೂ ನಾನು ಆತನ ಬಾಯಿಂದುದುರುವ ಆಣಿಮುತ್ತುಗಳನ್ನು ನಿರೀಕ್ಷಿಸುತ್ತ ಕೂತೆ. ಆದರೆ ಈ ಸಲ ನನ್ನ ನಿರೀಕ್ಷೆ ಸುಳ್ಳಾಯಿತು. ಸಹನೆ ಕಳೆದುಕೊಳ್ಳದೆ ಗಂಭೀರನಾಗಿ, ಶಾಂತವಾಗಿ, ಆದರೆ ಬಲು ದೃಢತೆಯಿಂದ ಆತ ಕೆಲವು ಮಾತು ಹೇಳಿದ. ಎಂಥ ಮಾತು !

'ಇಲ್ಲೆ ಕೇಳು ಕಮಲಾ, ಹಿಂಗ ಮ್ಯಾಲಿಂದ ಮ್ಯಾಲೆ ನನ್ನ ನಿನ್ನ ನಡುವ ಜಗಳ, ವಾದ, ಮನಸ್ತಾಪ ಆಗೋದು ಬ್ಯಾಡ. ನಿನಗೊಂದು ಮಾತು ಹೇಳ್ತಿರ್‍ತೀನಿ, ನೆನಪಿನ್ಯಾಗಿಟಕೋ. ಪ್ರತಿಯೊಂದು ಮಾತಿಗೆ ಅಧಿಕಾರ ಚಲಾಯಿಸ್ಲಿಕ್ಕೆ ಬರಬ್ಯಾಡ. ಮಾತು ಮಾತಿಗೆ ಇಲ್ಲ್ಯಾಕ ಬರೂದಿಲ್ಲ,

ಇಲ್ಲ್ಯಾಕ ಇರೂದಿಲ್ಲ, ಹಾಂಗ್ಯಾಕ ಮಾಡೂದಿಲ್ಲ, ಹಿಂಗ್ಯಾಕ ಮಾಡೂದಿಲ್ಲ ಅಂತ ಕೇಳಬ್ಯಾಡ. ಏನು ಮಾಡಬೇಕು, ಯಾರ ಸಲುವಾಗಿ ಎಷ್ಟು ಮಾಡಬೇಕು ಅಂತ ನನಗೆ ಪೂರಾ ಗೊತ್ತದ. ನಾ ಏನು ಮಾಡ್ತೀನೋ ಅದನ್ನ ಬರೋಬ್ಬರೀನೇ ಮಾಡ್ತೀನಿ. ನಿನಗ ಕಡೀ ಸಲ ಹೇಳತೀನಿ. ನಿನ್ನ ಎಲ್ಲಾ ಬುದ್ಧೀ ಉಪಯೋಗಿಸಿ ತಿಳಕೋ. ತಿಳಕೊಂಡು ನೆನಪಿನ್ಯಾಗಿಟಕೋ. ಒಂದನೇ ಮಾತು : ನನಗ ನಿನ್ನ ಬೇಕು-ಬೇಡ, ಆಶಾ-ಆಕಾಂಕ್ಷಾ, ಸುಖಾ-ದುಃಖಾ ಈ ಎಲ್ಲಾಕ್ಕಿಂತಾ ಆ ಮನೀ ಏನದ ಅಲ್ಲಾ, ಅಲ್ಲಿಯ ಶಾಂತಿ-ಸಮಾಧಾನ ಹೆಚ್ಚು ಮುಖ್ಯ. ಆ ಮನ್ಯಾಗ ಯಾರಿಗೂ ಅಸಂತೋಷ-ಅಸಮಾಧಾನ ಆಗಧಾಂಗ ನೋಡಿಕೊಳ್ಳೂದು ನನ್ನ ಮೊದಲ್ನೇ ಕರ್ತವ್ಯ. ಆ ಕರ್ತವ್ಯ ಪೂರೈಸಿ ಆದ ಮ್ಯಾಲೆ ನಿನ್ನ ಸುಖ-ಸಂತೋಷದ ಕಡೆ ಲಕ್ಷ್ಯ ಕೊಡೋದು ಎರಡನೇ ಕರ್ತವ್ಯ. ಈ ಎರಡೂ ಕರ್ತವ್ಯ ನಾ ಶಕ್ಯಾನುಸಾರ ನಿಭಾಯಿಸಿಗೋತ ಹೊಂಟೀನಿ. ತಿಳೀತs.

ಇನ್ನ ಎರಡನೇ ಮಾತು ಅಂದರ ಪ್ರತಿಯೊಂದಕ್ಕೂ 'ನನಗ ಹಕ್ಕು ಇಲ್ಲೇನು, ನನಗ ಅಧಿಕಾರ ಇಲ್ಲೇನು' – ಅಂತ ಕೇಳಬ್ಯಾಡ. ನಾ ನಿನ್ನ ಪ್ರೀತಿ ಮಾಡೇನಿ. ಲಗ್ನಾ ಮಾಡಿಕೊಂಡೇನಿ. ನಿನಗ ನನ್ನ ಮ್ಯಾಲೆ ಹಕ್ಕು ಅದ. ಅಧಿಕಾರ ಅದ. ಇಲ್ಲ ಅನ್ನೋದಿಲ್ಲ. ಆದರ ಅದು ೧೦% ಮಾತ್ರ, ಭಾಳಾದರ ೧೫% ಅಂತಿಟ್ಟುಕೋ. ನಿನ್ನ ವ್ಯವಹಾರ ಯಾವಾಗಲೂ ಈ ಪರ್ಸೆಂಟೇಜ್‌ದ ಮಿತಿಯೊಳಗs ಇರ್ಲಿ.'

– ನಾ ಮೂಕಳಾಗಿದ್ದೆ. ವಿಚಾರ ಶೂನ್ಯಳಾಗಿದ್ದೆ. ಯಾವುದರದೂ ಶುದ್ಧಿಯಿಲ್ಲದವಳಾಗಿದ್ದೆ. ಬಹುಶಃ ಆಗಲೇ ಸತ್ತೇಹೋದೆ.

* * *

ಬಹಳ ವರ್ಷಗಳ ನಂತರ ನನ್ನ ಕಣ್ಣು ತೆರೆದಿವೆ. ನಾನು ಎಚ್ಚತ್ತಿದ್ದೇನೆ. ಸತ್ಯವನ್ನು, ವಾಸ್ತವಿಕತೆಯನ್ನು ಕಾಣುತ್ತಿದ್ದೇನೆ. ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದೇನೆ. ಅರಗಿಸಿಕೊಳ್ಳಲು ವ್ಯರ್ಥ ಹೆಣಗುತ್ತಿದ್ದೇನೆ.

ಯಾರು ಇಹಪರಗಳಲ್ಲಿ ನನ್ನ ಸರ್ವಸ್ವವೋ ಯಾರಿಗಾಗಿ ನಾನು ಮನೆ-ಮಠ-ಮರ್ಯಾದೆ-ಆಸೆ-ಆದರ್ಶ ಎಲ್ಲ-ಎಲ್ಲ ತೊರೆದೆನೋ, ಯಾರ ಭೆಟ್ಟಿಯಿಂದ ನನ್ನ ಜನ್ಮ ಸಾರ್ಥಕವೆಂದು ತಿಳಿದಿದ್ದೆನೋ, ಯಾರ ಅನ್ಯಾಯ-ಅತ್ಯಾಚಾರ-ಅಪಮಾನ ಅಲಕ್ಷ್ಯಗಳನ್ನು ತುಟಿಮುಚ್ಚಿ ಸಹಿಸಿದೆನೋ, ಯಾರ ಪ್ರೀತಿಯಲ್ಲಿ ಸ್ವರ್ಗ ಕಾಣಲು ಬಯಸಿದೆನೋ, ಯಾರು ದೊರಕಿದ್ದು ಈ

ಜನ್ಮದ ನನ್ನ ಅಹೋಭಾಗ್ಯವೆಂದು ನಂಬಿದ್ದೆನೋ ಆ ವ್ಯಕ್ತಿಯ ಜೀವನದಲ್ಲಿ ನನಗೆ ಗೌಣ ಸ್ಥಾನ ! ಆ ವ್ಯಕ್ತಿಯ ಮೇಲೆ ನನಗೆ ಅತ್ಯಂತ ಸೀಮಿತ ಅಧಿಕಾರ ! ನಾನು ಆತನ ಮನಸ್ಸಿನಲ್ಲಿ, ಹೃದಯದಲ್ಲಿ, ಜೀವನದಲ್ಲಿ ಆಕ್ರಮಿಸಿದ ಸ್ಥಾನ ಕೇವಲ ೧೦% ! ನಾನು ಇಲ್ಲವಾದರೂ, ದೂರ ಹೋದರೂ, ಸತ್ತು ಹೋದರೂ ಆತನ ಜೀವನ ವಿಶೇಷ ಏರುಪೇರುಗಳಿಲ್ಲದೆ ನಡೆದೇ ಹೋಗುತ್ತದೆ....

–ನನ್ನ ಹೃದಯ ಒಡೆದು ಸಿಡಿದು ಹೋಗುತ್ತಿದೆ. ನನ್ನ ಶೋಧನೆ ಅಪೂರ್ಣವಾಗಿ, ದಿಕ್ಕಾಪಾಲಾಗಿ ಕನಸುಗಳು-ಆದರ್ಶಗಳು ನನ್ನನ್ನು ಅಣಕಿಸುತ್ತಿವೆ. ನನ್ನ ನಂಬಿಕೆಗಳು ನನ್ನನ್ನೇ ನೋಡಿ ಅಪಹಾಸ್ಯ ಮಾಡಿ ನಗುತ್ತಿವೆ.

–ಮೂರ್ತಿ, ನೀನು ಈಗ ಹೇಳಿದ ಮುತ್ತಿನಂಥ ಈ ಎರಡು ಮಾತುಗಳನ್ನು ನೀನು ಹತ್ತಾರು ವರ್ಷ ಮೊದಲೇ ಏಕೆ ಹೇಳಲಿಲ್ಲ ? ಆಗೇಕೆ ನಾನಿಲ್ಲದೆ ಬದುಕುವುದಿಲ್ಲವೆಂದೆ ? ನಾನೇ ನಿನ್ನ ಪ್ರಾಣ ಸರ್ವಸ್ವವೆಂದೆ ? ನನ್ನಿಂದಲೇ ನಿನ್ನ ಜೀವನಕ್ಕೆ ಅರ್ಥ ಬರುವುದೆಂದೆ ?

–ಬಹಳ ಸಹಿಸಿರುವೆ. ಇನ್ನು ಸಹಿಸಲಾಗುವುದಿಲ್ಲ. ನಾನಿದ್ದರೂ ಒಂದೇ, ಇರದಿದ್ದರೂ ಒಂದೇ, ಅಂದ ಬಳಿಕ ಇಷ್ಟು ನೋವು ಸಹಿಸುತ್ತ ಈ ಮನುಷ್ಯನೊಂದಿಗೆ ಏಕಿರಲಿ ? ಎಲ್ಲಾದರೂ ಹಾಳಾಗಿ ಹೋಗುತ್ತೇನೆ. ಜೀವನದಲ್ಲಿ ನಾನನುಭವಿಸಿದ ಈ ಬೃಹತ್ ಸೋಲಿನ ನೋವನ್ನು, ಅವಮಾನವನ್ನು, ಹಿಂಸೆಯನ್ನು ಎಲ್ಲಿ ಸ್ವಲ್ಪವಾದರೂ ಮರೆಯಲಾಗುವುದೋ ಅಂಥ ಸ್ಥಳವೊಂದು ಈ ಭೂಮಿ ಮೇಲಿದ್ದರೆ ಅಲ್ಲಿಗೆ ಹೋಗುತ್ತೇನೆ -ಎಂದು ತಿರುಗಿ ಬಾರದ ಹಾಗೆ.

* * *

ನಾಲ್ಕಾರು ದಿನ ನಾನು ಸುಮ್ಮನಿದ್ದುದನ್ನು, ಸಪ್ಪಗಿದ್ದುದನ್ನು ನೋಡಿ ಮೂರ್ತಿ ನನ್ನನ್ನು ಬಳಿಗೆಳೆದುಕೊಂಡು ತಲೆ ನೇವರಿಸುತ್ತಾ ಅಂದ, 'ಸಿಟ್ಟಿನ್ಯಾಗ ನಾನೇನೋ ಎರಡು ಮಾತು ಹೇಳಿದರ ಅದನ್ನ ಇಷ್ಟು ಮನಸ್ಸಿಗೆ ಹಚ್ಚಿಗೊಂಡು ಕೊರಗತಾರೇನು ಹುಚ್ಚಿ ? ಛೀ, ನೀ ದೊಡ್ಡ ಹುಚ್ಚಿ. ನೋಡು, ನಾ ನಿನ್ನ ಭಾಳ ಪ್ರೀತಿ ಮಾಡತೀನಿ. ಅದಕ್ಕs ಮತ್ತ-ಮತ್ತ ನಿನ್ನ ಹತ್ತಿರ ಬರತೀನಿ. ಇದನ್ನ ಈ ಜಗತ್ತಿನೊಳಗಿನ ಯಾವ ಶಕ್ತಿಯೂ ತಡೆಯಲಾರದು.' ನಾನು ಎಂದಿನಂತೆ ಆತನ ಅಪ್ಪುಗೆಯಲ್ಲಿ ಕರಗುತ್ತೇನೆ. ಆತನನ್ನು

ಕ್ಷಮಿಸಿಬಿಡುತ್ತೇನೆ. ಆತ ಅಂದಿದ್ದನ್ನೆಲ್ಲಾ ಮರೆತುಬಿಡುತ್ತೇನೆ....

—ಆದರೆ ಬಹುಶಃ ಈ ಸಲ ನನ್ನನ್ನೇ ನಾನು ಮೋಸಗೊಳಿಸಿಕೊಳ್ಳುತ್ತಿದ್ದೇನೆ.''

* * *

ಸರಿರಾತ್ರಿ ಕಳೆಯಿತೆಂದು ಕಾಣುತ್ತದೆ. ಇಲ್ಲಿಂದ ಮುಂದೆ ಕಮಲಾನ ಡಾಯರಿಯ ಪುಟಗಳು ಹೆಚ್ಚಾಗಿ ಖಾಲಿಯಾಗಿಯೇ ಇದ್ದವು. ಅವಳು ಕೊನೆಯ ಸಲ ಅದರಲ್ಲಿ ಬರೆದದ್ದು ಅವಳು ಊರಿಗೆ ಹೋಗುವುದಕ್ಕಿಂತ ಸುಮಾರು ಆರು ತಿಂಗಳ ಹಿಂದೆ. ಆ ಆರು ತಿಂಗಳುಗಳಲ್ಲಿ ಅವಳ ಮಾನಸಿಕ ವಿಪ್ಲವ-ಅಶಾಂತಿ ಇನ್ನಷ್ಟು ಹೆಚ್ಚಿರಬೇಕು. ಮತ್ತೂ ನಾಲ್ಕಾರು ಸಲ ಮೂರ್ತಿಯೊಂದಿಗೆ ಇಂಥವೇ ಘರ್ಷಣೆಗಳಾಗಿರಬೇಕು. ಇಬ್ಬರಲ್ಲಿನ ವೈಮನಸ್ಯ ಹೆಚ್ಚುತ್ತ ಹೋಗಿರಬೇಕು. ಡಾಯರಿ ಬರೆಯುವಷ್ಟು ಮನಸ್ವಾಸ್ಥ್ಯವೂ ಅವಳಿಗೆ ಉಳಿಯದೇ ಹೋಗಿರಬೇಕು. ತಾನು ಇಷ್ಟೊಂದು ಪ್ರೀತಿಸಿದ, ನಂಬಿದ ಮನುಷ್ಯನ ಬಾಳಿಗೆ ತಾನು ಅನಿವಾರ್ಯಳಲ್ಲ, ಅತ್ಯವಶ್ಯಳಲ್ಲ ಎಂಬ ಪ್ರಜ್ಞೆ ಅವಳನ್ನು ಎಡೆಬಿಡದೆ ಕುಟುಕಿರಬೇಕು. ಕೊನೆಗೆ ಈ ಎಲ್ಲಕ್ಕೂ ಏನೂ ಅರ್ಥವಿಲ್ಲವೆಂದುಕೊಂಡು ಈ ಎಲ್ಲವೂ ಅಸಹ್ಯವಾಗಿ ಅವಳು ಇಲ್ಲಿಂದ ಕೊನೆಯವರೆಗೆ ದೂರ ಹೋಗಿ ಬಿಡುವ ನಿರ್ಣಯ ತೆಗೆದುಕೊಂಡಿರಬೇಕು.

ಮೊದಮೊದಲು ಕಮಲಾನ ಡಾಯರಿ ಹಿಡಿದಾಗ ಶಶಿಗೆ ಹತ್ತೊಂಬತ್ತನೇ ಶತಮಾನದ ರೋಮ್ಯಾಂಟಿಕ್ ಕಾದಂಬರಿಯೊಂದನ್ನು ಓದುತ್ತಿರುವ ಅನುಭವವಾಗುತ್ತಿತ್ತು. ಆದರೆ ಬರಬರುತ್ತ ಆ ರೋಮ್ಯಾಂಟಿಕ್ ಕಥನದ ಹಿಂದಿನ-ಒಳಗಿನ ನೋವು ಕಠೋರವಾಸ್ತವವಾಗಿ, ಕ್ರೂರಸತ್ಯವಾಗಿ, ಕಣ್ಣಿಲ್ಲದ ದುರ್ವಿಧಿಯಾಗಿ, ತನ್ನ ಅಂತಃಚೇತನವನ್ನು ಚುಚ್ಚುತ್ತಿರುವಂತೆ, ಅಣಕಿಸುತ್ತಿರುವಂತೆ ಭಾಸವಾಗತೊಡಗಿತ್ತು ಶಶಿಗೆ. ತನ್ನ ಇಷ್ಟು ದಿನಗಳ ವಿಚಾರಗಳ, ನಂಬಿಕೆಗಳ, ಅಭಿಪ್ರಾಯಗಳ ಬುಡವೇ ಇದರಿಂದ ಅಲ್ಲಾಡತೊಡಗಿದಂತೆ ಅನಿಸತೊಡಗಿತ್ತು. ಒಬ್ಬ ವ್ಯಕ್ತಿಗೆ ಇನ್ನೊಬ್ಬ ವ್ಯಕ್ತಿಯ ಸಲುವಾಗಿ ಇಷ್ಟೊಂದು ತೀವ್ರವಾದ, ಉತ್ಕಟವಾದ, ಅದಮನೀಯವಾದ ಅನಿಸಿಕೆಗಳಿರಬೇಕಾದರೆ ಅದಕ್ಕೆ ಅರ್ಥವಿಲ್ಲ, ತಳಬುಡವಿಲ್ಲ ಅಂತ ಹೇಗನ್ನಲು ಸಾಧ್ಯ ? ಈ ಅನಿಸಿಕೆಗಳಿಗೆ ತನ್ನ ಊಹೆಗೆ ನಿಲುಕದ ಯಾವುದೋ ಅರ್ಥವಿರಬೇಕು. ತನಗೇ ಇಷ್ಟು ದಿನ ಜೀವನದ ಈ ಮುಖ ತಿಳಿದಿಲ್ಲ. ಯಾವುದನ್ನು ತಾನು ಸೆಂಟಿಮೆಂಟಲ್ ಎಂದು, ಅರ್ಥವಿಲ್ಲದ ಹುಚ್ಚು ಎಂದು, ಮೂರ್ಖತನವೆಂದು ಜರೆದಿದ್ದಳೋ ದೂರವಿರಿಸಿದ್ದಳೋ ಅದಕ್ಕೆಲ್ಲ ತನಗೇ ತಿಳಿಯದ ಅರ್ಥವೊಂದಿದೆ ಹಾಗಾದರೆ....

–ಹಾಗಾದರೆ ತಾನು ಜೀವನಕ್ಕೆ ಅರ್ಥಕೊಡುವ ಈ ಎಲ್ಲದರಿಂದ ವಂಚಿತಳಾಗಿದ್ದೇನೆಯೇ ? ಮುಖ್ಯವಾದುದೊಂದನ್ನು ತಾನು ಕಳೆದುಕೊಂಡಿದ್ದೇನೆಯೇ ?

ಹಲವಾರು ಬಾರಿ ಕಮಲಾ ದುರ್ಬಲ ಮನಸ್ಸಿನ, ಸ್ವಂತ ವ್ಯಕ್ತಿತ್ವವಿಲ್ಲದ ಸಾಮಾನ್ಯ ಹೆಂಗಸೆಂದು ತಾನು ಅವಳೆದುರೇ ಟೀಕಿಸಿದ್ದುಂಟು. ಆದರೆ ಇಷ್ಟೆಲ್ಲ ನೋವು ಎದುರಿಸಿ, ಇಷ್ಟೆಲ್ಲ ದುಃಖ ಸಹಿಸಿ, ತಾನು ನಂಬಿದ ತತ್ವಗಳಿಗಾಗಿ ಮೌನವಾಗಿ ಹೋರಾಡಿ, ಆ ಹೋರಾಟ ವಿಫಲವೆಂದು ಅರಿವಾದಾಗ ಎಲ್ಲವನ್ನೂ ಧಿಕ್ಕರಿಸಿ ದೂರ ನಡೆದ ಕಮಲಾ ದುರಂತ ನಾಟಕದ ಧೀರೋದಾತ್ತ ನಾಯಕಿಯ ಹಾಗೆ ಅನಿಸುತ್ತಿದ್ದಾಳೆ ತನಗೆ. ಅವಳ ಬಗ್ಗೆ ಪ್ರಶಂಸೆ-ಕೌತುಕ-ಅಭಿಮಾನ ಅನಿಸುತ್ತಿದೆ. ಆದರೆ ಜೊತೆಗೇ ಅವಳ ದೈವಕ್ಕಾಗಿ ಕೆಡುಕೆನಿಸುತ್ತಿದೆ....

ಅರೆ, ಇದೇನು ? ತಾನೂ ದೈವದ ಬಗ್ಗೆ, ಯಾವುದು ಇಲ್ಲವೆಂದು ಇಷ್ಟು ವರ್ಷ ನಂಬಿದ್ದಳೋ ಅಂಥ ದೈವದ ಬಗ್ಗೆ, ಯೋಚಿಸುತ್ತಿರುವೆನಲ್ಲ ಅಂತ ಆಶ್ಚರ್ಯವೂ, ನಾಚಿಕೆಯೂ ಆಯಿತು ಶಶಿಗೆ. ಆಕೆ ಒಮ್ಮೆಲೇ ಮುಸುಕು ಹಾಕಿ ಮಲಗಿಬಿಟ್ಟಳು.

* * *

ಅಂದು ಶಶಿಗೆ ಹಾಸ್ಪಿಟಲಿನಲ್ಲಿ ತನ್ನದೇ ಸ್ವಂತದ ಎರಡು ಕೇಸುಗಳಿದ್ದುದರಿಂದ ಆಕೆ ಎಂದಿಗಿಂತ ತುಸು ಬೇಗನೇ ಡ್ಯೂಟಿಗೆ ಹೋಗಿದ್ದಳು. ಎರಡೂ ಆಪರೇಶನ್ನಿನ ಕೇಸುಗಳು ; ಪೂರ್ಣಿಮಾ ಸಿಂಗ್‌ಗೆ ಸಿರ್ಘೋರಿಯನ್-ಕಮ್-ಟ್ಯುಬೆಕ್ಟಮಿ ; ಪಟೇಲ್ ಸಾಹೇಬರಿಗೆ ಹಾರ್ಟ್ ಆಪರೇಶನ್. ಪೂರ್ಣಿಮಾಳ ಕೇಸನ್ನು ಆಕೆಯೇ ನೋಡಿಕೊಳ್ಳುವವಳಿದ್ದಳು. ಪಟೇಲ್ ಸಾಹೇಬರ ಆಪರೇಶನ್ನಿಗೆ ಡಾ. ಸತೀಶ ದೇಶಪಾಂಡೆ ಹಾಗೂ ಆರ್. ಎಮ್. ಓ. ಡಾ. ಮುಖರ್ಜಿ ಇದ್ದರು. ಹಿಂದಿನ ರಾತ್ರಿ ಬಹಳ ಹೊತ್ತು ಓದುತ್ತಾ ಕೂತಿದ್ದರಿಂದ, ನಂತರವೂ ನೂರು ವಿಚಾರಗಳಿಂದ ಸರಿಯಾಗಿ ನಿದ್ರೆ ಆಗಿರದಿದ್ದುದರಿಂದ ಶಶಿಗೆ ಸಣ್ಣಗೆ ತಲೆನೋಯುತ್ತಿತ್ತು. ಎರಡೂ ಆಪರೇಶನ್ಸ್ ಮುಗಿದ ನಂತರ ತಣ್ಣಗೆ ಹೋಗಿ ಡ್ಯೂಟಿ ರೂಮಿನಲ್ಲಿ ಒಂದು ತಾಸು ಮಲಗಿ ಬಿಡಬೇಕು ಅಂದುಕೊಳ್ಳುತ್ತಲೇ ಆಪರೇಶನ್ನಿನ ತಯಾರಿಯ ಉಸ್ತುವಾರಿ ನೋಡಿಕೊಳ್ಳುತ್ತಿದ್ದಳು.

ಆಪರೇಶನ್ ಥಿಯೇಟರಿನ ಹೊರಗೆ ಆತಂಕವೇನೂ ಇಲ್ಲದೇ ಇದ್ದರೂ ಸಾಕಷ್ಟು ಅಸಹನೆಯಿಂದ ಗಳಿಗೆಗೊಮ್ಮೆ ವಾಚು ನೋಡಿಕೊಳ್ಳುತ್ತ ಪೈಪ್ ಸೇದುತ್ತ ಕಾಯುತ್ತ ಕೂತಿದ್ದ ಮಿ. ಭಾಸ್ಕರ್‌ಸಿಂಗ್‌ನ ಎದುರು ನರ್ಸ್ ಆತನ ಸಹಿಗಾಗಿ ಪೇಪರು ಹಿಡಿದಾಗ ಒಂದು ಕ್ಷಣ ಅದರ ಮೇಲೆ ಕಣ್ಣಾಡಿಸಿ ಆತ ಒರಟಾಗಿ ಅಂದ, “ಕರೀರಿ

ನಿಮ್ಮ ಲೇಡಿ ಡಾಕ್ಟರನ್ನ."

ಆತನ ಮರ್ಸಿಡಿಸ್ ಬೆಂಝ್, ಇಂಪೋರ್ಟೆಡ್ ಬಟ್ಟೆಯ ಸೂಟು, ವಜ್ರದುಂಗುರ ಇತ್ಯಾದಿ ನೋಡಿದ್ದ ನರ್ಸ್ ಮರುಮಾತಾಡದೆ ಒಳಗಿದ್ದ ಶಶಿಗೆ ಸಂದೇಶ ಮುಟ್ಟಿಸಿದಳು. ಶಶಿ ಹೊರಬಂದು ಮೃದುವಲ್ಲದ ಧ್ವನಿಯಲ್ಲಿ ಕೇಳಿದಳು, "ಏನು ಮಿ. ಸಿಂಗ್ ? ನನ್ನನ್ನು ಕರೆದಿರಂತೆ ?"

ಕೈಯಲ್ಲಿನ ಪೇಪರನ್ನು ಆಕೆಯೆದುರು ಹಿಡಿದು ಸಿಂಗ್ ಕೇಳಿದ, "ನನ್ನ ಹೆಂಡತಿಗೆ ಸಿಝೇರಿಯನ್ ಮಾಡ್ತೀರಿ, ಸರಿ. ಟ್ಯುಬೆಕ್ಟಮೀನೂ ಮಾಡು ಅಂತ ಹೇಳಿದವರ್‍ಯಾರು ನಿಮಗ ?"

ಸಹನೆ ಕಳೆದುಕೊಳ್ಳದೆ ಉತ್ತರಿಸಿದಳು ಶಶಿ, "ಯಾರೂ ಹೇಳಿಲ್ಲ ಮಿ. ಸಿಂಗ್, ಆದರ ನಾ ನಿಮ್ಮ ಫ್ಯಾಮಿಲಿ ಡಾಕ್ಟರು. ಮಿಸೆಸ್ ಸಿಂಗ್ ನನ್ನ ಕಾಯಂ ಪೇಶೆಂಟು. ಅವರ ಕಾನ್‌ಸ್ಟಿಟ್ಯೂಶನ್ ನನಗ ಮೊದಲಿನಿಂದ್ಲೂ ಪೂರಾ ಗೊತ್ತದ. ಅವರು ಭಾಳ ವೀಕ್ ಆಗ್ಯಾರ. ಸೊಂಟ ಹಾಗೂ ತೊಡೆಯ ಎಲುಬುಗಳೊಳಗ ಏನೇನೂ ಶಕ್ತಿ ಉಳಿದಿಲ್ಲ. ಅವರು ಇನ್ನ ಮತ್ತೆ ಪ್ರೆಗ್ನಂಟ್ ಆದರ ಜೀವಕ್ಕ ಧೋಕಾ ಅದ. ಅವರಿಗಿನ್ನೂ ಮೂವತ್ತು ವರ್ಷ ಮಾತ್ರ ವಯಸ್ಸು. ಇಪ್ಪತ್ನಾಲ್ಕನೇ ವರ್ಷದಿಂದ ಮೂವತ್ತನೇ ವರ್ಷದ ತನಕಾ ತಪ್ಪದೇ ಪ್ರತಿ ವರ್ಷ ಅವ್ರಿಗೆ ಡೆಲಿವ್ಹರಿ ಆಗಿಕೋತ ಬಂದದ. ಹಿಂಗ ಇನ್ನ ಎಷ್ಟ ಸಲ ತಾಳೀತು ಆ ಜೀವ ? ಅದಕ್ಕ ನಾನs ರಿಸ್ಕ್ ತಗೊಂಡು ಈ ಆಪರೇಶನ್ ಮಾಡ್ಬೇಕಂತೀನಿ."

"ನಿಮ್ಮ ಈ ಕಳಕಳಿಗೆ ಥ್ಯಾಂಕ್ಸ್ ಡಾಕ್ಟರ್", ಸಿಂಗ್ ಒರಟಾಗಿಯೇ ಹೇಳಿದ, "ಆದರ ಮಕ್ಕಳನ್ನ ಹಡೆಯೂದ್ರಿಂದ ಯಾರರೆ ಹೆಂಗಸ್ರು ಸಾಯತಾರಂದರ ನನಗ ಆಶ್ಚರ್ಯ ಆಗ್ತದ. ನಂಬಿಕೇನೇ ಆಗೂದಿಲ್ಲ. ಹೆಂಗಸ್ರು ಹುಟ್ಟಿದ್ದೇ ಮಕ್ಕಳ್ನ ಹಡೀಲಿಕ್ಕೆ. ನನಗ್ಗೊತ್ತದ ಇನ್ನೂ ಹತ್ತು ಹಡದ್ರೂ ನನ್ನ ಹೆಂಡ್ತಿಗೆ ಏನು ಧಾಡೀನೂ ಆಗೂದಿಲ್ಲ. ಆದರ ಈ ಟ್ಯುಬೆಕ್ಟಮೀಗೆ ನನ್ನ ಒಪ್ಪಿಗೆ ಸುತಾರಾಂ ಇಲ್ಲ."

ಆತನ ಮಾತು ಕೇಳುತ್ತಿದ್ದಂತೆ ರಪ್ಪನೆ ಆತನ ಕಪಾಳಿಗೊಂದೇಟು ಕೊಡಬೇಕೆನಿಸಿದರೂ ಹಾಗೆ ಮಾಡಲು ಅದು ಸಮಯವಲ್ಲದ್ದರಿಂದ ಶಶಿ ಕೇಳಿದಳು, "ಯಾಕ ಬ್ಯಾಡಂತೀರಿ ನೀವು ?"

ಏನೂ ಸಂಕೋಚ-ನಾಚಿಕೆಯಿಲ್ಲದೆ ಹೇಳಿದ ಸಿಂಗ್, "ಪೂರ್ಣಿಮಾ ಐದು ಮಕ್ಕಳ ತಾಯಿಯಾದ್ರೂ ಈಗ ಹ್ಯಾಂಗ ಛಲೋ ಫಿಗರ್ ಅದs ನೋಡ್ರಿ, ಟ್ಯುಬೆಕ್ಟಮಿ ಮಾಡಿದ್ರ ಅಡ್ಡಾತಿಡ್ಡಾ ಮೈಬಂದು ಧುಡುಮಿ ಆಗಿ ಬಿಡ್ತಾಳ. ನನಗ ಅದು ಸೇರೋದಿಲ್ಲ. ನಾವು ಹಾಯ್ ಸರ್ಕಲ್‌ನ್ಯಾಗ ಮೂವ್ಹ್ ಮಾಡವ್ರು. ತಿಂಗಳದಾಗ

ಎರಡ ಸರೆ ಫಾರಿನರ್ಸ್ ಗೆಸ್ಟ್ ಅಂತ ಬರ್‍ತಾರ ನಮ್ಮ ಫ್ಯಾಕ್ಟರಿಗೆ, ಮತ್ತ ಮನೀಗ. ನನ್ನ ಹೆಂಡ್ತಿ ಟ್ರಿಮ್ ಆಗಿ ಕಾಣಿಸಬೇಕು ಎಲ್ಲಾರ ಮುಂದ. ನೀವು ಟ್ಯೂಬೆಕ್ಟಮಿ ಮಾಡಿ ಆಕಿ ಫಿಗರ್ ಹಾಳು ಮಾಡಲಿಕ್ಕೆ ನಾ ಅವಕಾಶ ಕೊಡೋದಿಲ್ಲ. ದಿಸ್ ಈಜ್ ಮಾಯ್ ಫಾಯಿನಲ್ ಸೇ.''

–ಶಶಿಯ ಮೈಯಿಡೀ ಉರಿಯುತ್ತಿತ್ತು. ಶಕ್ಯವಿದ್ದರೆ ಈ ಪ್ರಾಣಿಯನ್ನು ಅನಾಮತ್ತಾಗಿ ಎತ್ತಿ ಗೇಟಿನಾಚೆಯ ಮೇನ್‌ರೋಡಿನ ಮೇಲೆ ಎಸೆದುಬಿಟ್ಟು, ಓಡುತ್ತಿರುವ ವಾಹನಗಳ ಕೆಳಗೆ ಸಿಕ್ಕು ಆತ ಜಿಬ್ಬೆಯಾಗುವುದನ್ನು ನೋಡಿ ಆನಂದಿಸುತ್ತಿದ್ದಳು ಆಕೆ. ಆದರೆ ಅಂಥದೇನೂ ಮಾಡುವುದು ಶಕ್ಯವಿಲ್ಲದ್ದರಿಂದ ಆಕೆ ಸುಮ್ಮನೆ ಒಳಗೆ ಬಂದಳು. ನೋವು ತಿನ್ನುತ್ತ ಇನ್ನೂ ಓ. ಟಿ. ಯ ಹೊರಗೆ ಸ್ಟ್ರೆಚರಿನಲ್ಲಿ ಮಲಗಿದ್ದ ಪೂರ್ಣಿಮಾ ಸುಸ್ತಾಗಿದ್ದರೂ ಹೊರಗೆ ನಡೆದಿದ್ದ ಸಂಭಾಷಣೆ ಕೇಳಿಸಿಕೊಂಡಿದ್ದಳು. ಕೆಂಪಾಗಿದ್ದ ಶಶಿಯ ಮುಖ ನೋಡಿ ಕ್ಷೀಣದನಿಯಲ್ಲಿ ಆಕೆ ``ಹೋಗ್ಲಿ ಬಿಡ್ರಿ ಡಾಕ್ಟರ್, ಇದು ನನ್ನ ದೈವ'' ಅಂತ ಶಶಿಯನ್ನೇ ಸಂತೈಸಲೆತ್ನಿಸಿದಳು.

–``ದೈವ ಅಂದ್ರ ಏನ್ರೀ ಡಾಕ್ಟರ್ ?'', ತನ್ನ ಗಂಡನ ಆಪರೇಶನ್ ಇದೆಯೆಂದು ಕಷ್ಟಪಟ್ಟು ಬಿಡುವು ಮಾಡಿಕೊಂಡು ಹಾಸ್ಪಿಟಲಿಗೆ ಬಂದಿದ್ದ ಮಾಲಿನಿಬಾಯಿ ಪಟೇಲ ಮಿಸೆಸ್ ಸಿಂಗ್‌ಳ ವಿಷಯ ಕೇಳಿ ನಂತರ ಶಶಿಗೆ ಅಂದಿದ್ದಳು, ``ನಮ್ಮ ಹೆಂಗಸ್ರು ತಮ್ಮ ದೌರ್ಬಲ್ಯ-ಅಸಹಾಯಕತೆ-ಇನ್‌ಫೀರಿಯಾರಿಟಿ ಇದೆಲ್ಲಾ ಕೂಡಿಸಿ ಅದಕ್ಕ 'ದೈವ' ಅಂತ ಕರೀತಾರ. ಪರಿಸ್ಥಿತಿ ಎದುರಿಸಿ ಫೈಟ್ ಮಾಡೋ ತಾಕತ್ತಿದ್ದವರ ಡಿಕ್ಶನರಿಯೊಳಗೆ ದೈವ ಅನ್ನೋ ಶಬ್ದಾನೇ ಇರೋದಿಲ್ಲ.''

ದೈಹಿಕವಾಗಿ, ಮಾನಸಿಕವಾಗಿ ಎರಡೂ ಬಗೆಯಿಂದ ಸಾಕಷ್ಟು ದಣಿದಿದ್ದ ಶಶಿ ಆಕೆಗೆ ಉತ್ತರಿಸುವ ಗೊಡವೆಗೇ ಹೋಗಲಿಲ್ಲ. ಆಗ ಮಾಲಿನೀಬಾಯಿಯೇ ಮತ್ತೆ ಅಂದಳು, ``ಈ ಹುಡುಗಿ ಪೂರ್ಣಿಮಾ ನನಗ ಮೊದಲಿನಿಂದ್ಲೂ ಗೊತ್ತು ಡಾಕ್ಟರ್, ನನ್ನ ಸಣ್ಣ ತಂಗಿ ಕುಸುಮಾ ಈಗ ಅಮೇರಿಕಾದೊಳಗಿದ್ದಾಳಲ್ಲ, ಆಕೀನೂ ಈ ಪೂರ್ಣಿಮಾನೂ ಕಾಲೇಜಿನೊಳಗ ಕ್ಲಾಸ್‌ಮೇಟ್ಸ್ ಆಗಿದ್ರು. ಪೂರ್ಣಿಮಾ ಭಾಳ ಬ್ರಿಲಿಯಂಟ್ ಸ್ಟೂಡಂಟ್. ರೆವ್ಹಲ್ಯೂಶನರೀ ಕವಿತಾ ಬರೀತಿದ್ಳು. ನನಗಿನ್ನೂ ಛಲೋ ನೆನಪದ– ಆಕೆ ರವಿವಾರಕ್ಕೊಮ್ಮೆ ತಾನು ಹೊಸದಾಗಿ ಬರದ ಕವಿತಾ ತಗೊಂಡು ನಮ್ಮ ತಾಯಿ ಮನೀಗೆ ಬರ್‍ತಿದ್ಳು. ನಮಗೆಲ್ಲಾ -ಅಂದರ ನಾನು, ಕುಸುಮಾ, ನಮ್ಮ ಅಣ್ಣ, ಮತ್ತ ಕೆಲವು ಫ್ರೆಂಡ್ಸು -ಹಿಂಗ ಒಂದು ಸರ್ಕಲ್ಲೇ ಇತ್ತು ನಮ್ದು –ಓದಿ ತೋರಸತಿದ್ಳು. ಅದರಾಗ ಈ ದೈವ -ಆ ದೈವ ಅಂತ ತಮ್ಮ ವೀಕ್‌ನೆಸ್ ಎಲ್ಲಾ

ದೈವದ ಮ್ಯಾಲೆ ಹಾಕಿ ಪಾರಾಗೋವಂಥಾ ಕೈಲಾಗದ ಮಂದಿನ್ನ ಕ್ರಿಟಿಸಾಯಿಝ್ ಮಾಡಿ ಒಂದು ಕವಿತಾ ಬರೆದಿದ್ಳು. ಯಾವುದೋ ಕಾಂಪಿಟೇಶನ್ನಿನ್ಯಾಗ ಫಸ್ಟ್ ಪ್ರಾಯಿಜ್ ಸಿಕ್ಕಿತ್ತು ಅದಕ್ಕ. ಇವತ್ತ ನನಗ ಅದs ನೆನಪಾಗ್ಲಿಕ್ಹತ್ತೇದ.''

–ಯಾರ ಇತಿಹಾಸದಲ್ಲಿಯೂ ಆಸಕ್ತಿಯಿರದ ಶಶಿ ಏನೂ ಪ್ರತಿಕ್ರಿಯೆ ತೋರದೆ ಸುಮ್ಮನೇ ಇದ್ದಾಗ ಮಾಲಿನಿಬಾಯಿ ರಹಸ್ಯವಾದುದನ್ನೇನೋ ಹೇಳುವಂತೆ ಧ್ವನಿ ತಗ್ಗಿಸಿ ಮುಂದುವರಿಸಿದಳು, ''ಈ ದರಿದ್ರ ಸಿಂಗನ್ನ ಮದಿವ್ಯಾಗಿ ಪೂರ್ಣಿಮಾನ ಕರಿಯರೇ ಹಾಳಾತು ಡಾಕ್ಟರ್. ರೊಕ್ಕ ಸಾಕಷ್ಟು ಅದ ಈ ಮನಷ್ಯಾನ ಹತ್ರ. ಆದರ ಏನೂ ರಿಫೈನ್‌ಮೆಂಟ್ ಇಲ್ಲ. ಅಂಡರ್‌ಸ್ಟ್ಯಾಂಡಿಂಗ್ ಇಲ್ಲ. ಲಗ್ನಾದ ಮ್ಯಾಲ ಪೂರ್ಣಿಮಾನ ಕವಿತಾ ಓದಿ ಸದಾ 'ಈ ಕವಿತಾ ಯಾರ ಸಲುವಾಗಿ ಬರದೀ ? ಇದರಾಗಿನ 'ಈತ' ಅನ್ನೋವಾತ ಯಾರು ? ನಿನ್ನ ಹಳೇ ಗೆಣ್ಯಾ ಏನು ? ಈ ಕವಿತಾ ಇನ್ಯಾರ ಸಲುವಾಗಿ ಬರದೀ ? 'ಅವರೆಲ್ಲ' ಅಂದರ ಯಾರ್‍ಯಾರು ? ಈ ಕವಿತಾ ಯಾತರ ಸಲುವಾಗಿ ಬರಿದೀ ? 'ಆ ದಿನ' ಅಂದರ ಯಾವ ದಿನ ? ಅವತ್ತ ಎಲ್ಲೆ ಹೋಗಿದ್ದಿ ? ಏನ್ಮಾಡಿದ್ದಿ ?' ಅಂತ ಕಿಟಿಕಿಟಿ ಹಚ್ಚತಿದ್ದನಂತ. ಕಡೀಕೆ ತಲಿಚಿಟ್ಟು ಹಿಡಿದು ಆಕಿ ಬರಿಯೂದೇ ಬಿಟ್ಟುಬಿಟ್ಟಳು. ಹಿಂಗಂತ ಹೇಳಿ ನಮ್ಮ ಕುಸುಮಾನ ಮುಂದ ಅತ್ತಳಂತ.''

ನಂತರ ಮುಷ್ಟಿ ಬಿಗಿದು ಮತ್ತೂ ಆಕೆಯೇ ಅಂದಳು. ''ನಾನಾಗಿದ್ರ ಗಂಡನ ಮೀನ್‌ಮೈಂಡೆಡ್‌ನೆಸ್ ಸಲುವಾಗಿ, ಅಥವಾ ಅವನನ್ನ ಮೆಚ್ಚಿಸೋ ಸಲುವಾಗಿ, ಹಿಂಗ ನನ್ನ ಇಂಟರೆಸ್ಟ್ -ಹಾಬೀಸ್ ಎಂದೂ ಸ್ಯಾಕ್ರಿಫಾಯಿಸ್ ಮಾಡ್ತಿದ್ದಿಲ್ಲ. ಈಗ ನನ್ನ ಗಂಡಗೂ ಏನೇನೂ ನನ್ನ ವಿಚಾರ-ಅಭಿಪ್ರಾಯ ಸೇರೂದಿಲ್ಲ. ನನಗ ಗೊತ್ತದ. ಆದರ ನಾನೇನು ಗಂಡನ ಸಲವಾಗಿ ನನಗನಿಸೋದನ್ನ ಹೇಳೋದು-ಮಾಡೋದು ಬಿಟ್ಟಿಲ್ಲ. ಯಾಕ್ಬಿಡಬೇಕು ? ಲಗ್ನಾದ ಮಾತ್ರಕ್ಕ ನಮ್ಮನ್ನ ನಾವು ಮಾರಿಕೊಂಡ್ಹಾಂಗ ಆತೇನು ?''

–ಎಲ್ಲ ಸರಿ ಮಾಲಿನಿಬಾಯಿ, ಶಶಿ ಮನಸ್ಸಿನಲ್ಲೇ ಅಂದುಕೊಂಡಳು, ಆದರೆ ನಿನ್ನ ಗಂಡ ಕಾಲು ಮುರಿದುಕೊಂಡು ಹಾಸಿಗೆ ಹಿಡಿದಿರದಿದ್ದರೆ....

* * *

ಸಂಜೆ ಶಶಿ ತನ್ನ ಮನೆಯ ಪಡಸಾಲೆಯಲ್ಲಿ ಪೇಶಂಟ್ಸ್ ನೋಡಲೆಂದೇ ಹಾಕಿದ್ದ ಪಾರ್ಟಿಶನ್‌ನಲ್ಲಿ ಯಾವುದೋ ಮೆಡಿಕಲ್ ಮ್ಯಾಗಝೀನ್ ತಿರುವಿ ಹಾಕುತ್ತ ಕೂತಾಗ ಲೀಲಾ ಕುಲಕರ್ಣಿ ಬಂದಳು. ಕಳೆದ ಕೆಲವು ದಿನಗಳಲ್ಲಿ ದಾರಿಯ ಮೇಲೆ, ಟ್ರೇನಿನಲ್ಲಿ, ತಮ್ಮ ಬಿಲ್ಡಿಂಗ್‌ನ ಕಂಪೌಂಡ್‌ನಲ್ಲಿ ಶಶಿ ಹಲವಾರು ಸಲ ನೋಡಿದಾಗ ಲೀಲಾ ದಿನ ದಿನಕ್ಕೆ ಹೆಚ್ಚು ಧೈರ್ಯವಂತೆಯಾಗಿ, ಆತ್ಮವಿಶ್ವಾಸವುಳ್ಳವಳಾಗಿ, ತೃಪ್ತಳಾಗಿ

ಕಾಣಿಸಿದ್ದಳು. ಅಷ್ಟೇ ಅಲ್ಲ, ಅನೇಕ ಸಲ ಶಶಿ ಬಿಡುವಾಗಿದ್ದಾಗ ಬಂದು ಕೂತು ತಾನು ಬಾಸ್ ಜೊತೆ ಹೋಗಿದ್ದ ಔಟಿಂಗ್‌ಗಳ ವರ್ಣನೆ ಮಾಡುತ್ತಿದ್ದಳು. ಪ್ರಮೋಶನ್ ಸಿಕ್ಕು ಖುಶಿಯಾಗಿದ್ದ ಆಕೆಯೀಗ ಇತರ ಚಿಲ್ಲರೆ ವಿಷಯಗಳ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಆಕೆಯನ್ನು ಸನಿಹದಿಂದ ನೋಡಿದಾಗ ಶಶಿಗೆ ಆಕೆ ಸೊರಗಿದಂತೆ, ಬಿಳಿಚಿಕೊಂಡಂತೆ, ನಿಶ್ಯಕ್ತಳಾದಂತೆ ಕಾಣಿಸಿದಳು. ಓವ್ವರ್‌ವರ್ಕ್‌ನ ಫಲವಿರಬೇಕು– ಆಫೀಸಿನ ಒಳಗೆ ಹಾಗೂ ಹೊರಗೆ, ಎರಡೂ ಕಡೆ ದುಡಿದಿದ್ದರ ಪರಿಣಾಮವಿರಬೇಕು, ಅನ್ನಿಸಿತು ಶಶಿಗೆ.

ಹೌದು, ಶಶಿಯ ಅನುಭವಿಕ ಕಣ್ಣುಗಳು ತಪ್ಪಿರಲಿಲ್ಲ. ಲೀಲಾ ತನ್ನ ಇತ್ತೀಚಿನ ತೊಂದರೆಗಳ ಬಗ್ಗೆ ತುಸು ಕಾಳಜಿಯಿಂದಲೇ ಹೇಳಿಕೊಂಡಳು. ಸರಿಯಾಗಿ ಮುಟ್ಟಾಗುವುದಿಲ್ಲ ; ಮುಟ್ಟಾಗಿ ಎಂಟು-ಹತ್ತು ದಿನಗಳಾದರೂ ಬ್ಲೀಡಿಂಗ್ ನಿಲ್ಲುವುದಿಲ್ಲ ; ಕೈಕಾಲುಗಳಲ್ಲಿ ಸದಾ ನಿಶ್ಯಕ್ತಿ ; ವಿಪರೀತ ಸೊಂಟನೋವು ; ಅಲ್ಲದೇ ಬಿಳಿಸೆರಗು ; ಸಂಜೆಯಾದೊಡನೆ ತಲೆನೋವು ; ಹಸಿವೆ ಇಲ್ಲ ; ಇತ್ಯಾದಿ ಇತ್ಯಾದಿ.

''ನಾ ಔಷಧ-ಟಾನಿಕ್ಕು ಎಲ್ಲಾ ಕೊಡ್ತೀನಿ ಲೀಲಾ, ಅವನ್ನ ತಪ್ಪದೇ ದಿನಾ ತಗೋ. ಆದರ ನೀ ಭಾಳ ಎನೀಮಿಕ್ ಆಗೀದಿ. ನಿನಗ ಆ ಕಾಂಟ್ರಾಸೆಪ್ಟಿವ್ಸ್ ಒಗ್ಗಿಲ್ಲ. ಅವನ್ನ ಬಿಟ್ಟುಬಿಡು.''

''ಅಂದರs – ?''

''ಅಂದರ ಸ್ವಲ್ಪ ದಿನಾ, ಅಂದರ ತಿಂಗಳೆರಡು ತಿಂಗಳು, ನಿನ್ನ ಹೊರಗಿನ ಆ್ಯಕ್ಟಿವಿಟೀಸ್ ಎಲ್ಲಾ ಸ್ಟಾಪ್ ಮಾಡ್ಬೇಕು.''

ಲೀಲಾಳ ಮುಖ ಸಪ್ಪೆಯಾಯಿತು, ''ಅದು ಹ್ಯಾಂಗ ಸಾಧ್ಯ ಡಾಕ್ಟರ್ ? ನನಗ ಪ್ರಮೋಶನ್ ಆಗೇದ ಖರೇ, ಆದರ ಇನ್ನೂ ಪ್ರೊಬೇಶನರಿ ಇದ್ದೀನಿ. ಪ್ರಮೋಶನ್ ಕನ್‌ಫರ್ಮೇಶನ್ ಆಗೂತನಕಾ ಬಾಸ್ ಹೇಳಿಧಾಂಗ ಕೇಳ್ಲಿಕ್ಕೆ ಬೇಕಲ್ಲ.''

''ನೋಡು, ಏನ್ಮಾಡ್ತೀಯೋ. ನಿನ್ನ ಆರೋಗ್ಯದ ಪ್ರಶ್ನೆ. ಜಾಬ್‌ಕಿಂತಾ ಆರೋಗ್ಯ ಮುಕ್ಯ ಅಲ್ಲs ?''

''ನನ್ನ ಸದ್ಯದ ಪರಿಸ್ಥಿತಿಯೊಳಗ ಜಾಬೇ ಮುಖ್ಯ ಡಾಕ್ಟರ್, ಅದು ನಿಮಗೂ ಗೊತ್ತದ.''

ಹೌದು. ಶಶಿಗೆ ಗೊತ್ತಿತ್ತು. ಆದರೂ- ''ಹಾಂಗಾದರ ಪೂರಾ ಬಿಡ್ಲಿಕ್ಕೆ ಆಗದಿದ್ರೂ ಸ್ವಲ್ಪ ಕಂಟ್ರೋಲ್ ಮಾಡು ಸಾಧ್ಯ ಆದರ.''

''ಆಗ್ಲಿ ಡಾಕ್ಟರ್. ಇನ್ನ ಮೂರು ತಿಂಗಳು ಅಷ್ಟೇ. ಅಷ್ಟರಾಗ ಕನ್‌ಫರ್ಮೇಶನ್ ಆರ್ಡರ್ ಕೊಡಸ್ತೀನಿ ಅಂತ ಹೇಳ್ಯಾರ ಬಾಸ್. ಆಮ್ಯಾಲೇನು ನಾ ಬಾಸ್‌ನ ಮರ್ಜೀ ಅಷ್ಟಾಗಿ ಹಿಡೀಬೇಕಾಗಿಲ್ಲ.''

–ಲೀಲಾಳನ್ನು ಕೂಲಂಕುಷವಾಗಿ ಪರಿಶೀಲಿಸುತ್ತಿದ್ದ ಶಶಿ ಮನಸ್ಸಿನಲ್ಲೇ ಲೆಕ್ಕ ಹಾಕಿಕೊಳ್ಳುತ್ತಿದ್ದಳು– ಇನ್ನು ಮೂರು ತಿಂಗಳು. ಏನೂ ಹಿಡಿತವಿಲ್ಲದೆ ಇದೇ ರೀತಿ ಈ ಹುಡುಗಿ ಬಾಸ್‌ನ ಮರ್ಜಿ ಕಾಯಲು ತನ್ನ ಜೀವಶಕ್ತಿಯನ್ನು ಸೋರಿಸುತ್ತ ಸಾಗಿದರೆ ಮುಂದೆಂದೂ ಚೇತರಿಸಿಕೊಳ್ಳಲಾಗದಷ್ಟು ಆಕೆಯ ದೇಹಸ್ಥಿತಿ ಕೆಡಬಹುದು. ಆಕೆಯ ಎದೆ, ಗಂಟಲು, ಪುಪ್ಪುಸ ನೋಡುತ್ತಿದ್ದರೆ ಟಿ. ಬಿ. ಯ ಎಲ್ಲಾ ಲಕ್ಷಣಗಳೂ ಕಾಣಿಸುತ್ತಿವೆ. ಅತಿಯಾಗಿ ಲೈಂಗಿಕ ಕ್ರಿಯೆಯಲ್ಲಿ ತೊಡಗಿದ, ಊಟ-ವಿಶ್ರಾಂತಿ ಕಡೆಗಣಿಸಿ ದುಡಿದದ್ದರ ಫಲ.... ಆದರೆ ಹಾಗೆಂದು ಅವಳಿಗೆ ಹೇಳಲಾಗದು. ಅವಳ ಬಾಸ್ ರೆಗ್ಯುಲರ್ ವೂಮನೈಜರ್ ಇರಬೇಕು. ಅವನಿಂದಾಗಿ ಈ ಪಾಪದ ಹುಡುಗಿಗೆ ಪ್ರಮೋಶನ್, ಜಾಬ್ ಕನ್‌ಫರ್ಮೇಶನ್ ಮಾತ್ರವಲ್ಲದೆ ಸಿಫಿಲಿಸ್‌ನೂ ಬಳುವಳಿಯಾಗಿ ದೊರೆತ ಹಾಗಿದೆ. ಕರ್ಮವೇ.... –ಶಶಿಯ ಪರೀಕ್ಷೆ ಮುಗಿದ ನಂತರ ಎದ್ದು ಸೀರೆ ಸರಿಪಡಿಸಿಕೊಂಡು ಟೇಬಲಿನಿಂದಿಳಿದು ಲೀಲಾ ನಾಚಿಕೆಯಿಂದ ಅಂದಳು, “ಮುಂದಿನ ಮೇ ತಿಂಗಳದಾಗ ಆಪ್ಟೆ ವಕೀಲರ ಅಣ್ಣನ ಮಗನ ಕೂಡ ನನ್ನ ಲಗ್ನ ಆಗೂದದ ಡಾಕ್ಟರ್, ಅವನೂ ಇಲ್ಲೇ ಪಿ. ಎಂಡ್ ಟಿ. ಯೊಳಗ ಕೆಲಸದಾಗಿದ್ದಾನ. ಅಷ್ಟರಾಗ ನಾ ಆರಾಮಾದರ ಸಾಕು.” ಆ ನೆನಪಿನಿಂದ ಲೀಲಾ ಖುಶಿಯಾದ ಹಾಗೆ ಕಾಣಿಸಿತು. ಲಗ್ನವಾಗುವ ವ್ಯಕ್ತಿಗೆ ದ್ರೋಹ ಮಾಡುತ್ತಿರುವೆನೆಂಬ ಕೊರಗೇನೂ ಆಕೆಗೆ-ಆಕೆಯೇ ಹಿಂದೆ ಅಂದಿದ್ದಂತೆ– ಈಗಿರುವ ಹಾಗೆ ಕಾಣಲಿಲ್ಲ. ಆಕೆಯಲ್ಲಾದ ಈ ಪ್ರಗತಿಯ ಬಗ್ಗೆ ಶಶಿಗೆ ಸಂತೋಷವೆನಿಸಿದರೂ ಈ ಹುಡುಗಿಯ ಲಗ್ನದ, ಸುಖೀ ಸಂಸಾರದ ನೂರು ಕನಸುಗಳಲ್ಲಿ ಎಷ್ಟು ಸಫಲವಾಗುವವೋ, ಎಷ್ಟು ಕಮರಿ ಹೋಗುವವೋ ಅಂತ ಆಕೆ ಚಿಂತಿಸಿದಳು.

* * *

ಲೀಲಾ ಹೊರಟುಹೋದ ತುಸು ಹೊತ್ತಿನಲ್ಲಿ ಶಾಂತಾ ಆಪ್ಟೆ ಬಂದಳು. ತನ್ನ ಮಗಳಿಗೆ ಗುಣವಾದ ಸಂಗತಿ ತಿಳಿಸಿ ಥ್ಯಾಂಕ್ಸ್ ಹೇಳಿದಳು. ನಂತರ ಪದ್ಧತಿಯಂತೆ ತನ್ನ ಇತ್ತೀಚಿನ ಕಾರ್ಯಕ್ರಮಗಳ ವರದಿ ಒಪ್ಪಿಸಿದಳು. ತನ್ನ ಅಡಿಗೆಯಾಕೆಯ ಕೇಸಿನಲ್ಲಿ ತನ್ನ ಪಾರ್ಟಿಗೇ ಜಯವಾಗಿ ಆಕೆಗೆ ಗಂಡನ ಆಸ್ತಿಯೆಲ್ಲಾ ಸಿಕ್ಕದ್ದು ; ತನ್ನೂರಿನಿಂದ ಕಲಿಯಲು ಇಲ್ಲಿಗೆ ಬಂದಿದ್ದ ಇಬ್ಬರು ಹುಡುಗರಿಗೆ ತಾನು ಕಾಲೇಜಿನಲ್ಲಿ ಫ್ರೀಶಿಪ್ ಸಿಗುವಂತೆ ಮಾಡಿದ್ದು ; ಮತ್ತು ಇತ್ತೀಚೆ ತಾನೂ ವಕೀಲ ಸಾಹೇಬರೂ ಕೂಡಿ ಬಡ ಕುಲಕರ್ಣಿ ಮಾಸ್ತರರ ಮಗಳು ಲೀಲಾನನ್ನು ಮದುವೆಯಾಗಲು ತಮ್ಮ ಭಾವನ ಮಗನನ್ನು ಒಪ್ಪಿಸಿದ್ದು ; ಮದುವೆಗೆ ಬೇಕಾದ ಹಣವನ್ನು ತಾವೇ ಬಡ್ಡಿಯಿಲ್ಲದ ಸಾಲರೂಪವಾಗಿ ಮಾಸ್ತರರಿಗೆ ಕೊಡಲು ನಿರ್ಧರಿಸಿದ್ದು ; ವರದಕ್ಷಿಣೆ ಕೇಳಬೇಡವೆಂದು ವರನನ್ನು ಮನವೊಲಿಸಿದ್ದು ; ಇತ್ಯಾದಿ.

ನಂತರ ಕೆಳದನಿಯಲ್ಲಿ ಆಕೆ ಅಂದಳು, 'ಡಾಕ್ಟರ್, ನೀವೂ ನೋಡತಾನೇ ಇದ್ದೀರಲ್ಲ, ಈ ಲೀಲಾ ಹಾಂಗ ಭಾಳ ಛಲೋ ಹುಡುಗಿ. ನೌಕರಿಗೆ ಸೇರಿದ ಮ್ಯಾಲ ತನ್ನ ಬಾಸ್ ಒಡ್ಡಿದ ಬಲೆಗೆ ಬಿದ್ದು ಕ್ಯಾರೆಕ್ಟರ್ ಹಾಳು ಮಾಡಿಕೊಂಡಳು. ಇದು ನನಗಷ್ಟs ಗೊತ್ತಿರೋ ಸೀಕ್ರೆಟ್. ಒಮ್ಮೆ ಹಿಂಗ ಏನೋ ಆಸೆ-ಆಮಿಷಕ್ಕೆ ಬಿದ್ದು ಹಾಳಾದ ಹುಡಿಗ್ಯಾರು ಕಡಿತನಕಾ ಹಾಳಾಗೇ ಹೋಗ್ತಾರ. ಲೀಲಾನ ಜೀವನ ಹಾಂಗ ಹಾಳಾಗಬಾರದು ಅಂತ ನಾನೂ ವಕೀಲ ಸಾಹೇಬ್ರೂ ಕೂಡಿ ಭಾಳ ಖಟಿಪಿಟಿ ಮಾಡಿ ಈ ಲಗ್ನಾ ಠರಾಯಿಸೀವಿ. ವಕೀಲ ಸಾಹೇಬ್ರು ಅಂತಿದ್ರು– ಲಗ್ನದಕಿಂತಾ ಮೊದಲ ಏನಕೇನ ಕಾರಣೇನ ಕಾಲು ಜಾರತಾವ. ಹಾಂಗಂತ ಅಂಥಾ ಹೆಂಗಸರನ್ನ ಪೂರಾ ಕಂಡೆಮ್ನ್ ಮಾಡ್ಬಾರದು. ನಮ್ಮ ರಘೂ ಛಲೋ ಹುಡುಗ. ಲೀಲಾ ಅವ್ನ ಲಗ್ನಾಗಿ ಸುಖದಿಂದಿರ್ತಾಳ. ನಮಗೂ ಅಷ್ಟು ಪುಣ್ಯ ಬರ್ಲಿ. ಏನಂತಿರಿ ನೀವು ?"

ಶಾಂತಾಬಾಯಿಯ ಧ್ವನಿಯಲ್ಲಿ ತಾನು ಮಾಡಿದ ಪುಣ್ಯಕಾರ್ಯಗಳ ಬಗ್ಗೆ ಹೆಮ್ಮೆಯಿತ್ತು. ಈ ಎಲ್ಲ ಪುಣ್ಯಕಾರ್ಯಗಳನ್ನು ಮಾಡಿದ ಹೆಮ್ಮೆ ಅವಳದಾಗಲು ಮುಖ್ಯ ಕಾರಣ ಮಾತ್ರ ಆಕೆಯ ಗಂಡನೇ ಅನ್ನುವುದು ಶಶಿಗೆ ಗೊತ್ತಿತ್ತು.

* * *

ಪೇಶೆಂಟ್ಸ್ ಬರುವ ಸಮಯ ಮೀರಿ ಹೋದ ನಂತರ ಶಶಿ ಎದ್ದು ಊಟ ಮಾಡಿ ಮಲಗುವ ಕೋಣೆಗೆ ಬಂದಳು. ಈ ಕೋಣೆಗೆ ಬಂದು ಕಳೆದ ಅನೇಕ ದಿನಗಳಿಂದ ಹಾಸಿಗೆಯ ಪಕ್ಕದ ಟೇಬಲಿನ ಮೇಲಿರಿಸಿದ್ದ ಕಮಲಾನ ಡಾಯರಿಯನ್ನು ನೋಡಿದೊಡನೆ ಆಕೆಯ ಮನಸ್ಸು ಖಿನ್ನವಾಗುತ್ತಿತ್ತು. ಎಲ್ಲ ಉತ್ಸಾಹ-ಹುಮ್ಮಸ್ಸು ಜರ್ರನೆ ಇಳಿದು ಹೋಗಿ ಆಕೆ ಆಕೆಯಲ್ಲದ ಬೇರಾರೋ ಆದಂತೆ ಭಾಸವಾಗುತ್ತಿತ್ತು.

ಇಂದೂ ಆಕೆ ಓದಿರಿಸಿದ್ದ ಆ ಡಾಯರಿಯನ್ನು ಎತ್ತಿಕೊಂಡು ಅದರ ಮೇಲೆ ಮತ್ತೆ ಕೈಯಾಡಿಸಿದಳು. ಕಣ್ಣಾಡಿಸಿದಳು. ಖಾಲಿಯಾಗೇ ಇದ್ದ ಅನೇಕ ಪುಟಗಳ ಕೊನೆಗೆ ಕೊನೆಯ ಪೇಜಿನಲ್ಲಿ ಕೆಲವು ಸಾಲುಗಳನ್ನು ಬರೆದು ಕಮಲಾ ಕಾಟು ಹಾಕಿದ್ದಳು. ಕಾಟು ಹಾಕಿದ್ದರೂ ಅವಸರದಿಂದ ಹಾಕಿದ್ದರಿಂದಲೋ ಏನೋ ಅವನ್ನೋದುವುದು ಶಶಿಗೆ ಕಷ್ಟವಾಗಲಿಲ್ಲ :

"ಎಲ್ಲ ಮುಗಿಯಿತು. ನನ್ನೆಲ್ಲ ಕನಸುಗಳು ನನ್ನೆದುರೇ ಪೂರ್ಣ ಸುಟ್ಟು ಭಸ್ಮವಾದವು. ಜೀವನದ ಬಗ್ಗೆ, ಭವಿಷ್ಯದ ಬಗ್ಗೆ ನನಗೀಗ ಯಾವ ಭ್ರಮೆಯೂ ಇಲ್ಲ. ಒಂದು ಮಗುವಾದರೂ ನನಗಿದ್ದರೆ ಬದುಕಿ ಬಾಳಲು ಸ್ವಲ್ಪವಾದರೂ ಮನಸ್ಸಿರುತ್ತಿತ್ತೇನೋ.... ಈಗ ನಾನೇಕೆ ಬದುಕಿರಲಿ ?

* * *

"ನಿನ್ನೆ ರಾತ್ರಿ ನಿದ್ದೆಗುಳಿಗೆಗಳನ್ನು ನುಂಗಿ ನೀರು ಕುಡಿದು ಮಲಗಿಬಿಡಬೇಕೆಂದು ನಿರ್ಧರಿಸಿದೆ. ರಾಜು-ನೀಲಾರನ್ನು ಸೆಕೆಂಡ್ ಶೋ ಪಿಕ್ಚರಿಗೆ ಕಳಿಸಿದೆ. ಮೂರ್ತಿಗೇನಾದರೂ ಬರೆಯಬೇಕು ಅಂದುಕೊಂಡೆ. ಅವಶ್ಯವೆನಿಸಲಿಲ್ಲ, ಬಿಟ್ಟೆ. ಮೂರು ಗುಳಿಗೆ ನುಂಗಿದೆ. ನೀರು ಕುಡಿದೆ. ಇನ್ನೂ ಮೂವತ್ತು ಗುಳಿಗೆಗಳಿದ್ದವು. ನನ್ನ ಬುದ್ಧಿಯಿನ್ನೂ ನನ್ನ ಸ್ವಾಧೀನದಲ್ಲೇ ಇತ್ತು. ಯೋಚಿಸಿದೆ. ನಾನು ಯಾಕೆ ಸಾಯಲಿ ? ನಾನು ಸತ್ತರೆ ಮೂರ್ತಿ ಖಂಡಿತಾ ಎದೆ ಒಡಕೊಳ್ಳುವುದಿಲ್ಲ. ಹುಚ್ಚನಾಗುವುದಿಲ್ಲ. ಆತನ ಜೀವನ ಯಾವ ರೀತಿಯಿಂದಲೂ ಬದಲಾಗುವುದಿಲ್ಲ. ಮತ್ತೆ ನಾನು ಸಾಯುವುದರ ಅರ್ಥವಾದರೂ ಏನು– ?

"ನನ್ನ ಬದುಕಿಗೂ ಅರ್ಥವಿಲ್ಲ, ಸಾವಿಗೂ ಅರ್ಥವಿಲ್ಲ. ಎರಡೂ ಒಂದೇ. ನಾನು ಗುಳಿಗೆಗಳನ್ನು ಬಿಸಾಕಿ ಬಿಟ್ಟೆ...."

–ಕಮಲಾ ಸಾಯಬಹುದಾಗಿತ್ತೆಂಬ ವಿಚಾರದಿಂದ ಶಶಿಗೆ ಒಮ್ಮೆಲೆ ಕಣ್ಣೀರು ಬಂದವು. ಅವಳಿಗೆ ನೆನಪಿದ್ದಂತೆ ಎಷ್ಟೋ ವರ್ಷಗಳಿಂದ ಅವಳ ಕಣ್ಣು ಹಸಿಯಾಗಿರಲಿಲ್ಲ ಈಗ–

ಅವಳಿಗೆ ಮತ್ತೆ ಅನ್ನಿಸಿತು– ಕಮಲಾ ದೂರ ಹೋಗುವ ನಿರ್ಣಯ ಕೈಗೊಂಡು ಒಳ್ಳೆಯದು ಮಾಡಿದಳು. ಇಲ್ಲಿ ಬದುಕಿರುವ ಪ್ರತಿಕ್ಷಣವೂ ಸಾಯುತ್ತಿರುವ ಬದಲು ದೂರ ಹೋಗಿ ಹೊಸ ಬದುಕನ್ನು ಅನ್ವೇಷಿಸುವ ಪ್ರಯತ್ನ ಮಾಡಬೇಕೆಂದಾದರೂ ಅವಳಿಗೆ ಅನಿಸಿತಲ್ಲ, ಅಷ್ಟೆ ಮನೋದಾರ್ಢ್ಯ ಸಾಕು ಮುಂದೆ ಬದುಕಿರಲು, ಅನ್ನಿಸಿತು.

* * *

ಮುಂಜಾನೆ ಏಳುತ್ತಲೇ ಕಾಫಿಯ ಕಪ್ಪನ್ನು ಅವಳ ಕೈಯಲ್ಲಿರಿಸುತ್ತ ರೋಶನ್‌ಬಿ ನಗುಮುಖದಿಂದ ಹೇಳಿದಳು, "ನಿಮ್ಮ ದೋಸ್ತ ಕಮಲಾಬಾಯಿ ವಾಪಸು ಬಂದಾರ್ರೀ ಬಾಯೀ."

ನಿದ್ದೆಗಣ್ಣಿನಲ್ಲಿದ್ದ ಶಶಿ ಕಣ್ಣು ತೆರೆದು ಪಿಳಿಪಿಳಿ ನೋಡಿದಳು, "ಏನಂದಿ ರೋಶನ್ ?"

ರೋಶನ್‌ಬಿ ತಾನಂದದ್ದನ್ನು ಮತ್ತೆ ಅಂದಳು. ಶಶಿಗೆ ಒಂದು ಕ್ಷಣ ಏನೂ ತೋಚಲಿಲ್ಲ. ಗಂಟೆ ನೋಡಿಕೊಂಡಳು. ಒಂಬತ್ತಾಗಲು ಬಂದಿತ್ತು. ಹಾಗೆಯೇ ಎದ್ದು ನೈಟ್‌ಗೌನಿನಲ್ಲೇ ಹತ್ತಾರು ಹೆಜ್ಜೆ ಹಾಕಿ ಕಮಲಾನ ಬ್ಲಾಕಿಗೆ ಹೋದಳು. ಬಾಗಿಲು ತೆರೆದ ನೀಲಾ ಮುಖದ ತುಂಬಾ ನಗು ತುಂಬಿಕೊಂಡು ಮೆತ್ತಗೆ ಅಂದಳು, "ಬರ್ರಿ ಡಾಕ್ಟರ್, ನಮ್ಮ ಆಂಟಿ ನಿನ್ನೆ ರಾತ್ರೀನೇ ತಿರಿಗಿ ಬಂದುಬಿಟ್ಟಳು. 'ನೀವು ಮಲಗಿದ್ದಿರಿ ಅಂತ ಕಾಣಸ್ತದ."

“ಮತ್ತ್ಯಾಕ ಇನ್ನೂ ಇದ್ದಿಲ್ಲ ?” —ಮುಚ್ಚಿದ ಬಾಗಿಲ ಕಡೆ ನೋಡುತ್ತಾ ಕೇಳಿದಳು ಶಶಿ. ಧ್ವನಿಯೇರಿಸದೆ, ಪಿಸುಗುಟ್ಟುವ ಹಾಗೆ ನೀಲಾ ಉತ್ತರಿಸಿದಳು, “ಶಿವಮೂರ್ತಿ ಅಂಕಲ್‌ನೂ ಒಳಗ ಇದ್ದಾರ. ಅವರಿಗೆ ತಾ ಬರೋದು ಮೊದಲs ತಿಳಿಸಿದ್ದಳಂತ ಕಾಣಸ್ತದ. ದಾದರಿನಿಂದ ಇಬ್ರೂ ಕೂಡೇ ಕಾರಿನ್ಯಾಗs ಬಂದ್ರು. ದಣದಾರ ಕಾಣಸ್ತದ. ಮಲಗ್ಯಾರ. ಇನ್ನೂ ಎದ್ದಿಲ್ಲ.”

ಓಹ್....

ನೀಲಾ ಮತ್ತೆ ಹೇಳಿದಳು, “ಬಂದ ಕೂಡ್ಲೇ ಆಂಟಿ ಹೇಳಿದಳು, ಇನ್ನ ಆಕಿ ನಮ್ಮನ್ನ ಬಿಟ್ಟು, ಮುಂಬೈ ಬಿಟ್ಟು ಎಂದೂ ಎಲ್ಲ್ಯೂ ಹೋಗೋದಿಲ್ಲಾ ಅಂತ.” ಆಕೆಗೆ ಬಹಳ ಖುಶಿಯಾಗಿತ್ತು. “ಮೂರ್ತಿ ಅಂಕಲ್‌ನೂ ಅಂದ್ರು ನೀ ಇನ್ನ ಎಲ್ಲ್ಯೂ ಹೋಗಬ್ಯಾಡಾ ಅಂತ. ಅಂಕಲ್ ಹೇಳಿದ್ದು ಆಂಟಿ ಕೇಳೇ ಕೇಳ್ತಾಳ. ಇನ್ನ ಆಕಿ ಎಲ್ಲ್ಯೂ ಹೋಗೂದಿಲ್ಲ ಡಾಕ್ಟರ್.” ತನಗಾದ ಸಂತೋಷದಲ್ಲಿ ಶಶಿಯೂ ಪಾಲ್ಗೊಳ್ಳಲೆಂಬ ಆಸೆಯನ್ನು ಬಹಿರಂಗವಾಗಿಯೇ ಪ್ರಕಟಿಸಿದ್ದಳು ನೀಲಾ.

—ಶಶಿಗೆ ಸಂತೋಷಕ್ಕಿಂತ ಹೆಚ್ಚಾಗಿ ದಿಗಿಲಾಗಿತ್ತು. ಮುಚ್ಚಿದ್ದ ಬಾಗಿಲತ್ತ ಆಕೆ ಮತ್ತೆ ಮತ್ತೆ ನೋಡಿದಳು. ಹೊರಗೆ ತಾನು ಮಾತಾಡಿದ ಧ್ವನಿ ಕೇಳಿದ್ದರೂ ಒಳಗಿನ ಬಾಗಿಲ ಚಿಲುಕ ತೆಗೆದಿರಲಿಲ್ಲ. ಇದಲ್ಲವೇ ಪ್ರೇಮಿಗಳ ಪುನರ್ಮಿಲನ ಅಂದುಕೊಳ್ಳುತ್ತ ಪೆದ್ದಾಗಿ ಆಕೆ ಸದ್ದಾಗದಂತೆ ಅಲ್ಲಿಂದ ಹೊರಟು ಬಂದಳು.

* * *

ಲೋಕಲ್ ಹಿಡಿದು ಡ್ಯೂಟಿಗೆ ಹೊರಟಾಗ ಎಂದಿನಂತೆಯೇ ಇಂದೂ, ಇಂದು ಎಂದಿಗಿಂತ ಒಂದಿಷ್ಟು ಹೆಚ್ಚಾಗಿಯೇ, ಶಶಿಗೆ ಅನಿಸಿತು— ಕಳೆದ ಹದಿನೈದಿಪ್ಪತ್ತು ವರ್ಷಗಳಲ್ಲಿ ಈ ಮುಂಬಯಿ ಮಹಾನಗರ ಎಷ್ಟೊಂದು ಬೆಳೆದಿದೆ, ಅಭಿವೃದ್ಧಿ ಹೊಂದಿದೆ, ಜನಸಂಖ್ಯೆ ಎಷ್ಟು ಹೆಚ್ಚಾಗಿದೆ, ಎಷ್ಟೊಂದು ಹೊಸ ಉದ್ಯಮಗಳು, ಇನ್ನಿತರ ಸಂಸ್ಥೆಗಳು ಹುಟ್ಟಿ ಬೆಳೆದಿವೆ. ಏನೆಲ್ಲಾ ಬದಲಾವಣೆಯಾಗಿದೆ. ಆದರೆ ಇಷ್ಟೆಲ್ಲ ಬದಲಾವಣೆಗಳ ಮಧ್ಯೆ ಏನೂ ವಿಶೇಷ ಬದಲಾಗದೆ ಎಂದಿನಂತೆಯೇ ನೀರಸ ನಿರ್ಜೀವ ಯಾಂತ್ರಿಕ ಬದುಕು ಸಾಗಿಸುತ್ತಿರುವಂತೆ ತೋರುವವುಗಳೆಂದರೆ ಈ ಲೋಕಲ್ ಗಾಡಿಗಳು. ಮುಂಜಾನೆಗಳಲ್ಲಿ ತುಂಬಿ ತುಳುಕಿ, ಮಧ್ಯಾಹ್ನ ತುಸುವೆ ಉಸಿರಾಡಿಸಿ, ಸಂಜೆ ರಾತ್ರಿ-ಮಧ್ಯರಾತ್ರಿಗಳಲ್ಲೆಲ್ಲಾ ಉಸಿರುಕಟ್ಟುವಂತೆ ಜನಗಳನ್ನು ತುಂಬಿಕೊಂಡು ಓಡುತ್ತಿದ್ದ ಈ ಗಾಡಿಗಳು ಎಂದಿನಂತೆಯೇ ಇವೆ. ಎಷ್ಟು ಅವಸರ, ಎಷ್ಟು ಧಾವಂತ, ಎಷ್ಟು ಪರಿಶ್ರಮ ಇವಕ್ಕೆ— ಏನಾದರೂ ಸೊಲ್ಲೆತ್ತದೆ ಎಂದೂ ಗೊಣಗದೆ ಓಡುತ್ತಿರುವುದೇ, ತೀರ ಹಾಳಾಗಿ ನಿರುಪಯೋಗಿಯಾಗಿ ಮೂಲೆ

ಗುಂಪಾಗುವವರೆಗೂ ಧಾವಿಸುತ್ತಿರುವುದೇ, ಇವುಗಳ ಕರ್ಮ. ಎಂದೂ ಕೊನೆಯಿಲ್ಲದ ಓಡಾಟ ಇವುಗಳದು. ಎಂಥ ಬೇಸರದ ಬದುಕು....

–ಯೋಚಿಸುತ್ತಿದ್ದಂತೆ ಶಶಿಗೆ ಬಹಳ ಬೇಸರವಾಗುತ್ತದೆ. ಅವಳ ತಲೆ ಗಿಮ್ಮೆನ್ನುತ್ತದೆ. ಯಾವ ಯಾವವೋ ನೆನಪುಗಳು, ಯಾರಯಾರವೋ ಮುಖಗಳು, ಎಲ್ಲೆಲ್ಲಿಯವೋ ದೃಶ್ಯಗಳು, ಏನೇನೋ ವಿಚಿತ್ರ ಅನಿಸಿಕೆಗಳು. 'ಎಲ್ಲಾ ನನ್ನ ದೈವ'ವೆಂದು ಕ್ಷೀಣವಾಗಿ ಹೇಳಿ ಅರೆಗಣ್ಣು ಮುಚ್ಚಿ ಮಲಗಿದ್ದ ಪೂರ್ಣಿಮಾ ಸಿಂಗ್ ; ಗಂಡನ ಪೋಸ್ಟ್‌ಕಾರ್ಡು ಬಂತೆಂದು ಎಲ್ಲ ಮರೆತು ಬೀಗುತ್ತ ತಿರುಗಿ ಬಂದ ರೋಶನ್‌ಬಿ ; ಪ್ರಮೋಶನ್ ಪಡೆದು ಲಗ್ನವಾಗಲಿರುವ ಖುಶಿಯಲ್ಲಿ ಬರಲಿರುವ ವಿಪತ್ತಿನ ಅರಿವಿಲ್ಲದ ಲೀಲಾ ಕುಲಕರ್ಣಿ ; ಜೊತೆಗೆ ಶೋಷಣೆಯ ವಿರುದ್ಧ ಬಂಡಾಯ ಹೂಡಬೇಕೆಂದು ಲೆಕ್ಚರ್ ಕೊಡುತ್ತ ತಿರುಗುವ ಮಾಲಿನಿಬಾಯಿ ಪಟೇಲ್ ಹಾಗೂ ಹಾಸಿಗೆ ಹಿಡಿದ ಆಕೆಯ ಗಂಡ ; ನಗುನಗುತ್ತಲಿದ್ದ ಆಪ್ಟೆ ದಂಪತಿಗಳು ; ದಿನವೂ ತಾನು ನೋಡುವ ನೂರಾರು ಪೇಶಂಟುಗಳು ; ತನ್ನೊಂದಿಗೆ ಇಡಿಯ ಮಧ್ಯಾಹ್ನ-ಸಂಜೆ ಕಳೆದು ರಾತ್ರಿ ಹೆಂಡತಿಯ ಹೆದರಿಕೆಗಾಗಿ ಬೇಗ ಮನೆ ಸೇರಲು ಓಡುವ ತನ್ನ ಸಹೋದ್ಯೋಗಿ ಡಾಕ್ಟರುಗಳು ; ಹಾಗೂ ಇವರೆಲ್ಲರ ಆಚೆ ಧೈರ್ಯವಾಗಿ ಎಲ್ಲ ಧಿಕ್ಕರಿಸಿ ದೂರ ಹೋಗಿ, ಕೆಲವಾರು ತಿಂಗಳಲ್ಲೇ ತಿರುಗಿ ತಾನು ಧಿಕ್ಕರಿಸಿ ಹೋಗಿದ್ದ ಬದುಕನ್ನೇ ಅಪ್ಪಿಕೊಳ್ಳಲು ಸ್ವಇಚ್ಛೆಯಿಂದ ವಾಪಸು ಬಂದಿದ್ದ ಕಮಲಾ.... ಇನ್ನೂ ಆಚೆ –ಯಾರದು ?

ವ್ಹಿ. ಟಿ. ಸ್ಟೇಶನ್ನಿನಲ್ಲಿ ಲೋಕಲ್ ಇಳಿದ ಶಶಿ ಪ್ಲಾಟ್‌ಫಾರ್ಮಿನ ಮೇಲೆ ಗಿಜಿಗುಡುತ್ತಿರುವ ಜನಸಂದಣಿಯ ನಡುವೆಯೂ ದೂರದಲ್ಲಿ ಸೂಟ್‌ಕೇಸು ಹಿಡಿದು ನಿಂತಿದ್ದ ಡಾ. ಸತೀಶ ದೇಶಪಾಂಡೆಯನ್ನು ಗುರ್ತಿಸಿದಳು. ಒಂದು ಕ್ಷಣ ಆಕೆಯ ತಲೆಯಿಂದ ಕಣ್ಣಿಂದ ಮನಸ್ಸಿನಿಂದ ಆ ಎಲ್ಲ ವಿಚಾರಗಳು, ದೃಶ್ಯಗಳು, ಜನಗಳು ಮರೆಯಾದವು. ಸುತ್ತಲೂ ಹಾಡೇ ಹಗಲಿನ ಆ ಉರಿಬಿಸಿಲಲ್ಲೂ ಕತ್ತಲು ಕವಿದಂತೆನಿಸಿತು. ತುಸುವೇ ಬೆಳಕು. ಆ ಕಡುಗತ್ತಲಲ್ಲಿ ನಸುಬೆಳಕಿನಲ್ಲಿ ಆಕೆಗೆ ಮೈಮನಗಳೆರಡೂ ಮರೆವಾಗಿ ತಲೆಸುತ್ತಿ ಬರುತ್ತಿರುವಂತೆನಿಸಿ ಬೀಳುವ ಮೊದಲೇ ಏನನ್ನಾದರೂ ಆಧರಿಸಿ ಹಿಡಿಯಬೇಕೆಂದು ಆಕೆ ಧಾವಿಸಿ ಮುಂದೆ ಬಂದಳು–

–ಓಡಿ ಬಂದು ತನ್ನ ಕೈ ಹಿಡಿದ ಶಶಿಯನ್ನು ಸತೀಶ ಆಶ್ಚರ್ಯದಿಂದ ನೋಡಿದ. ಆತ ಮಾತನಾಡಲು ಬಾಯಿ ತೆರೆಯುವ ಮುನ್ನವೆ ಶಶಿ ಅಂದಳು, "ನೀ ಊರಿಗೆ ಹೋಗಬ್ಯಾಡ ಸತೀಶ, ಆಮ್ಯಾಲ ಬರ್ತೀನೀಂತ ನಿಮ್ಮ ತಾಯಿಗೆ ಟೆಲಿಗ್ರಾಂ ಕೊಟ್ಟುಬಿಡು." ನಂತರ ತನ್ನ ಮನಸ್ಸೆಲ್ಲಿ ಮತ್ತೆ ಬದಲಾಗಿ ಬಿಡುವುದೋ ಎಂಬ ಅವಸರದಲ್ಲಿ ಸುತ್ತಲಿನ ಪರಿಸರದ ಒಂದಿನಿತೂ ಪರಿವೆಯಿಲ್ಲದೆ ತೀರ

ಅನ್‌ರೋಮ್ಯಾಂಟಿಕ್ ರೀತಿಯಲ್ಲಿ ಆಕೆ ಹೇಳಿದಳು, "ಸತೀಶ, ನಿನ್ನ ಪ್ರಪೋಜಲ್ ಒಪ್ಪಿದೆ, ನಡಿ, ನಾವು ಲಗ್ನ ಆಗೋಣ."

"ಖರೇನೇ ಶಶಿ ?" ಸತೀಶನಿಗೆ ಅನುಮಾನ, ಅಚ್ಚರಿ.

"ಖರೇನೇ". – ಶಶಿ ಆತನಿಗೆ ಆತು ನಿಂತು ಹೇಳಿದಳು. ನಂತರ ಎಲ್ಲ ಭಾರ ಇಳಿದವಳಂತೆ ದೀರ್ಘವಾಗಿ ನಿಟ್ಟುಸಿರು ಬಿಟ್ಟಳು.

"ವಂಡರ್‌ಫುಲ್, ದಿಸ್ ಮಸ್ಟ್ ಬಿ ಸೆಲೆಬ್ರೇಟೆಡ್ –"

– ಸತೀಶ ಒಂದು ಕೈಯಿಂದ ಅವಳನ್ನು ಬಳಸಿ ಹಿಡಿಯುತ್ತ ಹೇಳಿದ, "ಈಗ ಮೊದ್ಲ ಹಾಸ್ಪಿಟಲಿಗೆ ಹೋಗೋಣ. ನೀ ಇವತ್ತು ರಜಾ ಹಾಕು. ಆಮ್ಯಾಲ ಇಬ್ರೂ ಊಟಕ್ಕ ತಾಜ್‌ಗೆ ಹೋಗೋಣ. ಆಮ್ಯಾಲೆ ನನ್ನ ಫ್ಲ್ಯಾಟ್‌ಗೆ ಹೋಗಿ ಆರಾಮು ತಗೊಳ್ಳೋಣ. ನಡೀ."

ಎಂದಿನಂತೆ ಆತ 'ಏನಂತೀ ಶಶಿ ?' ಅಂತ ತನ್ನ ಅಭಿಪ್ರಾಯ ಕೇಳಲಿಲ್ಲವೆಂಬುದೂ ಶಶಿಯ ಗಮನಕ್ಕೆ ಬರಲಿಲ್ಲ. ಆತನ ಧ್ವನಿಯಲ್ಲಿ ಎಂದಿನ ಅನುನಯ-ಆರ್ಜವತೆ ಒಮ್ಮೆಲೆ ಮಾಯವಾಗಿ ಆಗಲೇ ಅಧಿಕಾರದ ಸೆಳಕು ಮಿಂಚಿದಂತೆ ಒಂದು ಕ್ಷಣ ಅನಿಸಿದರೂ ಆ ಅನಿಸಿಕೆಯನ್ನು ಆಚೆ ಕೊಡಹುವಂತೆ ತಲೆ ಅಲ್ಲಾಡಿಸಿ ಶಶಿ ಆತನಿಗಂಟಿಕೊಂಡಂತೆಯೇ ಆತನನ್ನು ಹಿಂಬಾಲಿಸಿದಳು. ಯಾವಾಗಲೂ ನಡೆಯುವಾಗ ಬಿರುಸಿನಿಂದ ರಪ್ ರಪ್ ಸದ್ದು ಮಾಡುತ್ತಿದ್ದ ಆಕೆಯ ಚಪ್ಪಲಿಗಳು ಇಂದು ಒಮ್ಮೆಲೆ ವಿಧೇಯವಾಗಿ, ನಿಃಶಬ್ದವಾಗಿ, ಮೌನವಾಗಿರುವಂತೆ ಒಂದು ಕ್ಷಣ ಅನಿಸಿದರೂ, ಪ್ರಯತ್ನಪೂರ್ವಕವಾಗಿ ಎಲ್ಲವನ್ನೂ ಅಲಕ್ಷಿಸಿ ಆತನಿಗಿಂತ ಎರಡು ಹೆಜ್ಜೆ ಹಿಂದೆ-ಹಿಂದೆ ಆಕೆ ನಡೆದಳು.

❖ ❖ ❖

## ಇನ್ನಷ್ಟು ಕತೆಗಳು

1. ದೆವ್ವ
2. ಹರಿದು ಬಾ ತಾಯಿ
3. ಮುಂದಾಳುವಿನ ಜನತಾ ಸೇವೆ
4. ಸೋನಿಯಾ
5. ಸಮಾಧಾನ
6. ಇಲ್ಲಿಂದ ಮುಂದೆಲ್ಲಿ?
7. ಒಂದು ಗಿಡ, ಒಂದು ಬಾವಿ

# ದೆವ್ವ

ನಿನ್ನೆ ರಾತ್ರಿ ಹಾಳು ಕನಸು. ಸ್ಕೂಟರ್ ಮೇಲೆ ಕೂತು ಗಾಳಿಯೊಂದಿಗೆ ಗಾಳಿಯಾಗಿ ವಿಪರೀತ ಸ್ಪೀಡಿನಿಂದ ತಾನು ಹೋಗುತ್ತಿದ್ದಂತೆ... ತನ್ನ ಹಿಂದೆ ತನಗೆ ಆತು ಕೂತವಳ ನೈಲಾನ್ ಸೀರೆಯ ಸೆರಗು ಭರ್‍ರೆಂದು ಹಾರಾಡುತ್ತಿದ್ದಂತೆ... ತನ್ನ ಬೆನ್ನಿಗೆ ಅವಳ ಎದೆಯ ಹಿತವಾದ ಸ್ಪರ್ಶ... ಯಾರವಳು ? ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ತಾನು ನಿರ್ದೇಶಿಸಿದ ತನ್ನ ನಾಟಕದ ನಾಯಕಿಯಾಗಿದ್ದ ಆ ತೆಳುವಾದ ಎತ್ತರವಾದ ಹುಡುಗಿಯೆ ? ಅಥವಾ ಮಗ್ಗುಲ ಮನೆಗೆ ಹೊಸದಾಗಿ ಬಾಡಿಗೆಗೆ ಬಂದಿರುವ ತರುಣ ಇಂಜಿನಿಯರನ ದಪ್ಪನಾದ ಬೆಳ್ಳಗಿನ ಹೆಂಡತಿಯೆ ? ಇಲ್ಲವೆ ಮೊನ್ನೆ ಆ ಹುಡುಗಿಯರ ಕಾಲೇಜಿನ ಗ್ಯಾದರಿಂಗಿಗೆ ತಾನು ಭಾಷಣಕ್ಕಾಗಿ ಹೋದಾಗ ಕಾರ್ಯದರ್ಶಿಯೆಂಬ ನೆವದಿಂದ ಎರಡು ತಾಸು ತನ್ನ ಹಿಂದೆ-ಮುಂದೆ ಮಾತಾಡುತ್ತ ಸುಳಿದಾಡಿದ... ಬಳುಕುವ ನಡುವಿನ ಹೆಂಗಸೆ ? ...ಯಾರಿದ್ದರೇನು, ಸ್ಕೂಟರಿನ ಹಿಂದಿನ ಸೀಟಿನಲ್ಲಿ ಅವಳು ಕೂತಿದ್ದಂತೂ ನಿಜ. ಆ ಕೊನೆಯಿಲ್ಲವೆಂಬಂತೆ ತೋರುತ್ತಿದ್ದ ದಾರಿಗುಂಟ ತಾವಿಬ್ಬರೂ ಎಲ್ಲಿಗೋ ಹೊರಟಿದ್ದೂ ಅಷ್ಟೇ ನಿಜ. ಎಷ್ಟು ಸುಂದರವಾಗಿತ್ತು ಕನಸಿನ ಈ ಮೊದಲ ಅಂಕ !... ಮುಂದೆ–

ಮುಂದೆ ಹೊಸ ಬಗೆಯ ತಂತ್ರವೆಂದು ತನ್ನ ಇತ್ತೀಚಿನ ನಾಟಕದಲ್ಲಿ Climax ನ್ನು ತಾನು ಪ್ರಾರಂಭದಲ್ಲೇ ತಂದ ಹಾಗೆ ನಡೆದಿತ್ತು ಆ ಅನಿರೀಕ್ಷಿತ ಘಟನೆ. ಅಬ್ಬ, ಈಗ ನೆನೆದರೂ ಮೈಮೇಲಿನ ಕೂದಲು ಸೆಟೆದು ನಿಲ್ಲುತ್ತವೆ... ಮುಂದೇನಾಯಿತು ? ಹ್ಞಾ, ಮುಂದೆ ಫಕ್ಕನೆ ತನ್ನ ಮುಖದ ಮೇಲೆ ಸರಿಯಾಗಿ ಯಾರೋ ಉಗುಳಿದ ಹಾಗೆ... ತನ್ನ ಬಗ್ಗೆ ತನಗೇ ಒಂದು ಕ್ಷಣ ಹೇಳತೀರದ ಜಿಗುಪ್ಸೆ, ಹೇಸಿಕೆ, ನಾಚಿಕೆ. ನಂತರ ತಲೆತಗ್ಗಿಸಿದ್ದ ಹಾಗೆಯೇ– ಕಣ್ಣು ಮುಚ್ಚಿದ್ದ ಹಾಗೆಯೇ ಉಗುಳಿದವರು ಯಾರೆಂದು ನೋಡಲು ಪ್ರಯತ್ನಿಸಿದ್ದ ತಾನು.

ಅಸ್ಪಷ್ಟ, ತೀರ ಮಸಕಾಗಿದ್ದ ಆಕೃತಿ. ಭಯಾನಕವಾಗಿತ್ತು. ನೆರಳೊಂದಿಗೆ ನೆರಳಾಗಿ ಹೊರಟೇ ಹೋಗಿತ್ತು. ಮೈಯೆಲ್ಲ ಬೆವರೋ ಬೆವರು. ಆ ಹೊತ್ತಿಗೆ ಸರಿಯಾಗಿ ತನ್ನ ಹೆಂಡತಿ ಬಂದು, ಮುಸುಕೆಳೆದು, ಎಬ್ಬಿಸಿ, ಪುಣ್ಯ ಕಟ್ಟಿಕೊಂಡಳು ಮಹಾರಾಯತಿ. ತನ್ನ ಹುಚ್ಚಾಗಿದ್ದ ಮುಖ ನೋಡಿ ಸಂಶಯ ಬರುವಷ್ಟು ಬುದ್ಧಿ ಅವಳಿಗಿರದಿದ್ದುದೂ ಪುಣ್ಯವೇ ಅನ್ನಬೇಕು.

“ಏಳ್ರೀ, ಬೆಳಗಾಗಿ ತಾಸಾತು. ಇನ್ನೂ ಕನಸು ಕಾಣತೀರೇನು ?”

ಕನಸು ? ಇವಳಿಗೇನಾದರೂ ತನ್ನ ಕನಸಿನ ಪತ್ತೆ ಹತ್ತಿದರೆ... ಛೆ, ಇವಳನ್ನು ಮಳ್ಳ ಮಾಡುವುದೆಷ್ಟೊತ್ತು ? ಅಪ್ಪಿ ಮುದ್ದಿಸಿ ಚಿನ್ನಾ ಅಂದರೆ ಸಾಕು, ತನ್ನ ಗಂಡ ಶ್ರೀರಾಮನೆಂದು ನಂಬುವ ಗರತಿ ಅವಳು. ಹೆಂಡತಿಯಾದವಳಿಗೆ ಅಷ್ಟೂ ಉದಾರತೆಯಿರದಿದ್ದರೆ ಹೇಗೆ ?

“ಹ್ಞೂ, ನೀ ಬಂದಿದ್ದಿ ಕನಸಿನ್ಯಾಗ.”

ನಾಚಿ ತನ್ನೆದೆಯ ಮೇಲೊರಗಿದ ಅವಳನ್ನು ಎರಡು ನಿಮಿಷ ಹಾಗೇ ಇರಗೊಟ್ಟು ನಂತರ ಹೇಳಿದ ಅವನು, “ಇನ್ನೊಂದು ಹತ್ತು ಮಿನಿಟು ಬಿಟ್ಟು ಏಳತೀನಿ, ನೀ ಚಹಾ ಮಾಡು ಹೋಗು.”

ತಾನು ಹೋಗೆಂದಿದ್ದಕ್ಕಾಗಿ ಅವಳು ತಪ್ಪು ತಿಳಿಯದಿರಲೆಂದು ಮೃದುವಾಗಿ ಅವಳ ಕೈ ಅದುಮಿದ. ಹೊರಗಡೆ ಅಳತೊಡಗಿದ ಕಿರಿಯ ಮಗನನ್ನು ರಮಿಸಲೆಂದು ಆಕೆ ಎದ್ದು ಹೋದಾಗ ನಿಟ್ಟುಸಿರಿಟ್ಟು ಮುಸುಗೆಳೆದ ಆತ. ಕನಸಿನಲ್ಲಿ ತನಗೆ ಆತು ಕೂತವಳನ್ನು ಮತ್ತೊಮ್ಮೆ ನೆನೆಯಲೆತ್ನಿಸಿದ. ...ಅವಳ ಮುಖ ಹೇಗಿತ್ತು ? ಚೆಲುವಾಗಿಯೇ ಇದ್ದಿರಬೇಕು. ಇಲ್ಲವಾದರೆ ತನ್ನ ಸ್ಕೂಟರ್ ಹತ್ತಲು ತಾನೆಂದಾದರೂ ಅವಳಿಗೆ ಅವಕಾಶ ಕೊಡುತ್ತಿದ್ದೆನೆ ? ಎಷ್ಟು ಛಂದ ಕನಸು... ತಮ್ಮ ನಾಟಕ ಸಂಘದ ಅಧ್ಯಕ್ಷರ ಮಗಳು ಸುಮನಾ ಮದುವೆಯಾಗಿ ಹೋದಾಗಿನಿಂದ ತಾನು ಯಾರೊಂದಿಗೂ ಸ್ಕೂಟರ್ ಮೇಲೆ ಹಾಗೆ ವೇಗವಾಗಿ ವಿಹಾರ ಹೋದದ್ದೇ ಇಲ್ಲ... ಸುಮನಾ ಕಾಲೇಜಿನಲ್ಲಿ ಓದುತ್ತಿದ್ದ ಹುಡುಗಿ. ತನ್ನ ನಾಟಕಗಳ ಬಗ್ಗೆ ಬಹಳ ಉತ್ಸಾಹ ಅವಳಿಗೆ. ದೊಡ್ಡ ಮನಸ್ಸಿನವಳು. ಯಾತಕ್ಕೂ ಒಲ್ಲೆ ಅಂದವಳಲ್ಲ. ಒಮ್ಮೆಯಂತೂ ಕತ್ತಲಲ್ಲಿ ಕೆರೆಯ ಏರಿಯ ಮೇಲೆ ಮಾತಾಡುತ್ತ ಕೂತಾಗ ತನ್ನ ಕೈಹಿಡಿದು, ‘ಅಯ್ಯೋ, ನಿಮ್ಮ ಮದುವೆಯಾಗಿರದಿದ್ದರೆ ಎಷ್ಟು ಚೆನ್ನಾಗಿತ್ತು !’ ಎಂದು ಅತ್ತುಬಿಟ್ಟಳು ಪಾಪ. ಕಣ್ಣು ತುಂಬಿ ಬಂದಿದ್ದ ಅವಳಿಗೆ ತನ್ನ ಕಣ್ಣಂಚಿನಲ್ಲಿಯ ನಗು, ತನ್ನ ಆ ವೀರ ಸ್ಥಿತಪ್ರಜ್ಞ ಸಿನಿಕ್ ನಗು, ಕಾಣಿಸದೆ– ‘ಮುಂದಿನ ಜನ್ಮದಲ್ಲಾದರೂ ಆ ಭಾಗ್ಯ ನನ್ನದಾಗಲಿ’ ಎಂದು ಕಣ್ಣೊರೆಸಿಕೊಂಡಿದ್ದಳು... ಇಂಥ ಹೊತ್ತಿನಲ್ಲೇ ಹೆಂಗಸರು ಉದಾರಿಗಳಾಗುವುದು... ತಾನು ಅವಳಾಗಿ ಬಯಸಿ ಕೊಟ್ಟದ್ದನ್ನು ಸ್ವೀಕರಿಸಿದ್ದೆನಷ್ಟೆ. ಇಲ್ಲವಾದರೆ ಅವಳಿಗೆ ಸುಮ್ಮನೆ ಅವಮರ್ಯಾದೆಯಲ್ಲವೆ ?

ಸುಮನಾ ಒಳ್ಳೆಯ ಹುಡುಗಿ. ಸ್ಕೂಟರ್ ಮೇಲೆ ಹಿಂದಿನ ಸೀಟಿನಲ್ಲಿ ತನ್ನ ಮೈಗೆ ಒತ್ತಿ ಕುಳಿತು ಕತ್ತಲಲ್ಲಿ ಊರಹೊರಗೆ ವೇಗವಾಗಿ ವಿಹಾರ ಹೋಗುವುದು ಅವಳಿಗೆ ಬಹಳ ಇಷ್ಟ. ದೇವರು ಅವಳಿಗೆ ಒಳ್ಳೆಯದು ಮಾಡಿದ ; ಅವಳ ಗಂಡನಿಗೆ

ಒಳ್ಳೆಯ ಪಗಾರಿನ ಕೆಲಸವಿದೆಯಂತೆ. ಭಗ್ನಪ್ರೇಮಿಯಲ್ಲಿ ಕಾಣುವ ಉದಾಸೀನತೆ, ಶೂನ್ಯತೆ, ಅರ್ಥಹೀನತೆ ಅವಳಲ್ಲಿ ಮದುವೆಯ ನಂತರವೂ ಹಾಗೇ ಉಳಿದಿದ್ದರೆ ತನ್ನ ಇನ್ನೊಂದು ನಾಟಕಕ್ಕೆ ಒಳ್ಳೆಯ ಸಾಮಗ್ರಿಯಾಗಬಹುದಿತ್ತೇನೋ ನಿಜ. ಆದರೆ ಆ ಬಜಾರಿ ಮದುವೆಯ ನಂತರ ಒಮ್ಮೆ ದಾರಿಯಲ್ಲಿ ಕಾಣ ಸಿಕ್ಕಿದಾಗ ತನ್ನೆಡೆ ನೋಡಲಿಲ್ಲ ಕೂಡ. ಹೋಗಲಿ. ತನಗಾಗಿ ಭಗ್ನಹೃದಯಿಗಳಾದವರಿಗೇನು ಬರವೆ ? ಹೆಸರಾಂತ ನಾಟಕಕಾರ ತಾನು... ಸಾವಿರ fans ತನಗೆ...

ನಿನ್ನೆಯ ಕನಸಿನಿಂದ ಸುಮನಾನ ನೆನಪಾಯಿತು. ಯಾರು ನಿನ್ನೆ ತನ್ನೊಂದಿಗೆ ಇದ್ದವಳು ?

"ಏಳ್ರೀ, ಚಹಾ ತಯಾರಾತು, ಇವತ್ತ ನಿಮಗ ಆರ್ಟ್ಸ್ ಕಾಲೇಜಿನೊಳಗ ಸತ್ಕಾರ ಸಮಾರಂಭ ಅದ, ಮರತಿರೇನು ? ನನ್ನೂ ಕರ್‍ಕೊಂಡು ಹೋಗತೀನಂತ ಹೇಳೀರಿ, ನೆನಪದs ಇಲ್ಲೊ ?"

ಓ, ಮರೆತೇ ಹೋಗಿತ್ತು. ಸ್ಥಳೀಯ ಕಾಲೇಜಿನಲ್ಲಿ ಇಂದು ತನಗೆ ಸತ್ಕಾರ ಕೂಟ. ಪಾಶ್ಚಿಮಾತ್ಯ ನಾಟಕದ ತಂತ್ರವನ್ನಭ್ಯಸಿಸಲು ಎರಡು ವರ್ಷಗಳ ಮಟ್ಟಿಗೆ ಭಾರತದ ಸಾಂಸ್ಕೃತಿಕ ಮಂಡಳದವರು ಸ್ಕಾಲರ್‌ಶಿಪ್ ಕೊಟ್ಟು ತನ್ನನ್ನು ಬರುವ ತಿಂಗಳು ಫ್ರಾನ್ಸಿಗೆ ಕಳಿಸಲಿದ್ದುದು ಅದಕ್ಕೊಂದು ಕಾರಣ. ಇನ್ನು ಅಲ್ಲಿ ಹೋಗಿ ಎರಡು ತಾಸು ಅಲ್ಲಿನ ಪ್ರೊಫೆಸರುಗಳು ತನ್ನನ್ನು ತನ್ನ ನಾಟಕಗಳನ್ನು ಸಿಕ್ಕಾಪಟ್ಟೆ ಭಯಂಕರವಾಗಿ ಹೊಗಳುವುದನ್ನು ಕೇಳಬೇಕು. ಏನು ಶಿಕ್ಷೆಯೋ ! ಸ್ಟೇಜಿನ ಮೇಲೆ ಮಧ್ಯದ ಕುರ್ಚಿಯಲ್ಲೇ ಕೂಡಬೇಕಾದ ತಾನು ನಿದ್ದೆ ಮಾಡುವ ಹಾಗೂ ಇಲ್ಲ ; ಎದುರುಗಡೆ ಒಂದು ಪಕ್ಕಕ್ಕೆ ಕೂತ ಹುಡುಗಿಯರ ಕಡೆ ನೋಡುವ ಹಾಗೂ ಇಲ್ಲ ; ಸಾಲದ್ದಕ್ಕೆ ತನ್ನ ಅಕ್ಕ-ಪಕ್ಕದಲ್ಲಿ ಆಸೀನರಾಗುವ ಪ್ರಿನ್ಸಿಪಾಲರು, ಕಾರ್ಯದರ್ಶಿ ಇಬ್ಬರೂ ಕೆಟ್ಟಮೋರೆಯ ಗಂಡಸರೇ. ಛೆ, ಯಾಕಾದರೂ ಒಪ್ಪಿದೆನೋ...

ಇಷ್ಟು ಸಾಲದೆಂದು ಇವಳನ್ನು ಬೇರೆ ಕರೆದೊಯ್ಯಬೇಕಂತೆ. ಗಂಡನನ್ನು ಸಭೆಯಲ್ಲಿ ಇತರರು ಹೊಗಳುವಾಗ ಗಂಭೀರವಾಗಿ ಕೂತು ಕೇಳುವ, ಅವನ ನಾಟಕಗಳಿಗೆ–ಕಲಾಸೇವೆಗೆ ತಾನೇ ಸ್ಫೂರ್ತಿ ಎಂಬ ಭ್ರಮೆಯನ್ನು ಕೆಲವರಲ್ಲಾದರೂ ಹುಟ್ಟಿಸುವ ಸ್ತ್ರೀ ಸಹಜ ಬಯಕೆ ಅವಳಿಗೆ. ಆದರೆ ಹೆಂಡತಿ-ಮಕ್ಕಳು ಸಮೇತನಾಗಿ ತಾನು ಹೋದರೆ, ತಮ್ಮ ಪುಟ್ಟ-ಪುಟ್ಟ ಸುಂದರ ಆಟೋಗ್ರಾಫ್‌ಗಳೊಂದಿಗೆ ತನ್ನನ್ನು ಸುತ್ತುವರಿಯುವ ನಗುಮುಖದ ರಮಣಿಯರಿಗೆ ಉತ್ಸಾಹಭಂಗವಾಗದೆ ? ತನ್ನ ನಾಟಕಗಳ ಬಗ್ಗೆ ಓದದೆಯೋ, ಓದಿ ಅರ್ಥವಾಗದೆಯೋ ಅವರುಗಳು ಕೇಳುವ ಅಸಂಬದ್ಧ ಪ್ರಶ್ನೆಗಳಿಗೆ ಅವರ ಮುಖಗಳ ಸಮೀಪ ಬಾಗಿ ತಾನು ಅಸಂಬದ್ಧ ಉತ್ತರ

ನೀಡುವ ಅವಕಾಶವೆಲ್ಲಿ ? ತಿರುಗಿ ಬರುವಾಗ ಬಸ್‌ಗಾಗಿ ಕಾಯುತ್ತ ತಡವಾಯಿತೆಂದು ಚಡಪಡಿಸುತ್ತ ನಿಂತಿರುವ ಯಾರಾದರೂ ಅಸಹಾಯ ಸುಂದರಿಗೆ ತನ್ನ ಸ್ಕೂಟರ್‌ನಲ್ಲಿ ಲಿಫ್ಟ್ ಕೊಡುವುದು ಹೇಗೆ ಸಾಧ್ಯ ? ಛೇ, ತೀರಾ ಅನ್‌ರೋಮ್ಯಾಂಟಿಕ್ ಆಗುವುದು. ಹೇಗೆ ಇವಳನ್ನು ತಪ್ಪಿಸುವುದು... ? 'ನೀನು ಬರಬೇಡ ಕಣೇ' ಎಂದು ಹೇಳಿದರೆ ಸಿಟ್ಟಾಗಿ ಅತ್ತು ಊಟ ಬಿಟ್ಟು ರಾತ್ರಿ ಮಕ್ಕಳೊಂದಿಗೆ ಹೊರಗಿನ ರೂಮಿನಲ್ಲೇ ಮಲಗುತ್ತಾಳೆ ಇವಳು. ನಂತರ ಇವಳನ್ನು ಸಮಾಧಾನಪಡಿಸಬೇಕಾದರೆ 'ನೀನೇ ನನ್ನ ಬಾಳಿನ ಬೆಳಕು' ಎಂದು ಮುಂತಾಗಿ ಸಿನೆಮಾ ನಾಯಕನ ಹಾಗೆ ಅರ್ಥವಿಲ್ಲದ್ದೆಲ್ಲ ಮಾತಾಡಿ, ಅವಳು ಇಚ್ಛಿಸಿದರೆ ಅವಳೊಂದಿಗೆ ಮೂರುವರೆ ತಾಸು ಸೆಕೆಯಲ್ಲಿ ಕೂತು ಹೊಸದಾಗಿ ಬಂದಿರುವ ಕನ್ನಡ ಸಿನೆಮಾ ನೋಡುವ ಶಿಕ್ಷೆ ಬೇರೆ ಅನುಭವಿಸಬೇಕು. ಎಂಥ ಸತ್ವ ಪರೀಕ್ಷೆ...

ಅವನು ಮನಸ್ಸಿಲ್ಲದ ಮನಸ್ಸಿನಿಂದ ಹೊದಿಕೆ ಸರಿಸಿ ಎದ್ದು ಆಕಳಿಸುತ್ತಲೇ ಅಡಿಗೆ ಮನೆಗೆ ಬಂದು ಮುಖ ತೊಳೆಯದೆಯೆ ಚಹಕ್ಕಾಗಿ ಕೈ ಚಾಚಿದಾಗ ಪ್ರೀತಿಯಿಂದ ಗದರಿಸಿದಳು ಹೆಂಡತಿ, "ಇದೇನ್ರೀ ಇದು ಅಸಹ್ಯ, ಮುಖಾ ತೊಳಕೊಂಡು ಬರ್ರೆಲಾ."

ಹತ್ತುಗಂಟೆಗೆ ಇರುವ ಸಮಾರಂಭಕ್ಕಾಗಿ ಇವಳು ಎಂಟಕ್ಕೆ ಸಿಂಗಾರಾಗಿ ಕೂತಿದ್ದಾಳೆ : ಜರದ ಸೀರೆ, ಎತ್ತಿ ಕಟ್ಟಿದ್ದಾಳೆ ಕೂದಲನ್ನ, ಮಲ್ಲಿಗೆ ಹೂ. ಒಮ್ಮೆ ವಿಮರ್ಶಕನ ದೃಷ್ಟಿಯಿಂದ ಅಡಿಯಿಂದ ಮುಡಿಯವರೆಗೆ ಅವಳನ್ನು ನೋಡಿದ ಆತ... ಅಡ್ಡಿಯಿಲ್ಲ, ಚೆನ್ನಾಗಿಯೇ ಇದ್ದಾಳೆ ತನ್ನ ಹೆಂಡತಿ. ಈಗಿವಳು ಒಮ್ಮೊಮ್ಮೆ ಪೆದ್ದುಪೆದ್ದೆನಿಸಿದರೂ ಇವಳಿಗಾಗಿ ತಾನು ಹುಚ್ಚಾದ ಕಾಲವೂ ಒಂದಿತ್ತು. ತಾನು ಪ್ರೀತಿಸಿದ್ದ (ಪ್ರೀತಿ ? ಹಹ್ಹಹ್ಹ...) ಹುಡುಗಿಯರಾರೂ ತನ್ನ ಪ್ರೀತಿಗೆ ಸೊಪ್ಪು ಹಾಕಲಿಲ್ಲವೆಂದು ತಾನು ಪರೀಕ್ಷೆಗೆ ಕೂಡ್ರುವದನ್ನೂ ಬಿಟ್ಟು ದುಃಖಾಂತ ನಾಟಕಗಳನ್ನೇ ಬರೆಯುತ್ತ ತಿರುಗುತ್ತಿದ್ದ ದಿನಗಳಲ್ಲಿ ಇವಳ ಅಪ್ಪನ ಕೈಗೆ ಸಿಕ್ಕು ಬಿದ್ದಿದ್ದೆ. ಇವಳನ್ನು ಕಟ್ಟಿದರು. ನಂತರ ರಾತ್ರಿ ಹಗಲಾಗಿ, ಹಗಲು ರಾತ್ರಿಯಾಗಿ ಇವಳೊಂದಿಗೆ ಮುಗಿಯದ ಆಟದಲ್ಲಿ ಮೈಮರೆತಾಗ ಪ್ರೀತಿ-ಗೀತಿ ಎಲ್ಲ ಹುಚ್ಚೆನ್ನಿಸಿತ್ತು ; ಇದಿಷ್ಟೆ ಖರೆ ಅನಿಸಿತ್ತು. ಅಷ್ಟರ ಮಟ್ಟಿಗೆ, ಸ್ವಲ್ಪ ಕಾಲವೇ ಏಕಾಗಲೊಲ್ಲದು, ತನಗೆ ಮಬ್ಬು ಕವಿಸಿದ ವ್ಯಕ್ತಿತ್ವ– 'ವ್ಯಕ್ತಿತ್ವ'ವೆಂಬ ದೊಡ್ಡ ಹೆಸರೇಕೆ ಸುಮ್ಮನೆ, 'ಮೈ' ಸರಿಯಾದ ಶಬ್ದ –ಇವಳದು.

ಇಷ್ಟು ತಯಾರಾದವಳಿಗೆ ಬರಬೇಡ ಅಂದರೆ ಸರಿಯಾಗದು. ಬರಲಿ. ತಾನು ಗಂಭೀರವಾಗಿರಬೇಕಾಗುವುದಷ್ಟೆ ? ಇರೋಣ, ಅದರಲ್ಲೇನು ? ಹೆಂಡತಿಯೊಂದಿಗೆ ತಾನು ನಡೆದು ಬರುವಾಗ, ಇಲ್ಲದ ಪ್ರೀತಿ ಕಣ್ಣಲ್ಲಿ ತುಂಬಿಕೊಂಡು ಮಾತಾಡುವಾಗ,

ತಮ್ಮೆಡೆ ದಿಟ್ಟಿಸಿ ನೋಡುವ ಹುಡುಗಿಯರ ಕಣ್ಣಲ್ಲಿನ ಒತ್ತಿ ಹಿಡಿದ ಅಸೂಯೆ ಕಂಡು ಆನಂದಿಸಬಹುದು...

"ವ್ಹಾ, ಅಗದಿ ಛೆಂದ ಕಾಣಸ್ತೀ ಇವತ್ತ. ಪ್ರಸಿದ್ಧ ನಾಟಕಕಾರನ ಹೆಂಡತಿ ಅಂದರ ಹೀಂಗಿರಬೇಕು" —ಎಂದು ನಾಟಕೀಯವಾಗಿ ಬರಸೆಳೆದು ಮುತ್ತಿಟ್ಟು ದೂರ ಸರಿಸಿದ ಆತ.

ಅವಳ ತಲೆಯ ಖೊಬ್ಬರಿ ಎಣ್ಣೆಯ ವಾಸನೆ ಗಮ್ಮೆಂದು ಮೂಗಿಗೆ ಬಡಿಯಿತು. ಅವಳು ದೂರವಾದಾಗ ಅದು ಮೂಗಿನಿಂದ ಮೇಲೆ-ಮೇಲೆ ಸರಿಯುತ್ತ ತಲೆಯೊಳಗೆ ಬಂದಿತು. ಮೆದುಳಿನ ಒಳಗೆ— ತೀರ ಒಳಗೆ ಎಲ್ಲೋ ಹುದುಗಿಕೊಂಡಿದ್ದ ಈವ್ನಿಂಗ್-ಇನ್-ಪ್ಯಾರಿಸ್‌ನ ವಾಸನೆಯನ್ನು ಬಡಿದೆಬ್ಬಿಸಿತು.

ಈವ್ನಿಂಗ್-ಇನ್-ಪ್ಯಾರಿಸ್... ಮತ್ತು ಬರಿಸುವ, ಸೂಕ್ಷ್ಮವಾದ, ಎಂಥದೋ ಚಡಪಡಿಕೆಯುಂಟು ಮಾಡುವ ಪರಿಮಳ...

"ಈ ಸೆಂಟ್ ನನಗೆ ಬಹಳ ಇಷ್ಟ"ವೆಂದು ಹೇಳುತ್ತ ತಾನು ಸಮೀಪ ಸರಿದಾಗ, "ಹೀಗೇನು ?" ಎಂದು ನಗುತ್ತ ದೂರ ಸರಿದಿದ್ದಳು ಆ ಬಡಿವಾರದ ಹುಡುಗಿ, ಸ್ವಪ್ನಾ ದೇಶಪಾಂಡೆ.

ತನಗೆ ಅಪಮಾನವಾದರೂ ತನ್ನ ಗಮನಕ್ಕೆ ಅದು ಬಂದಿಲ್ಲವೆಂದು ನಟಿಸುತ್ತ ಅಂದಿದ್ದ ಆತ, "ನಿಮ್ಮ ಕೂಡ ಇದ್ದಾಗ ಏನೋ ಕನಸಿನೊಳಗಿದ್ದಂತೆ ಅನಿಸುವುದು." ಇಷ್ಟಕ್ಕೆಲ್ಲ ಜಗ್ಗುವ-ಬಗ್ಗುವ ಹುಡುಗಿಯಾಗಿರಲಿಲ್ಲ ಆಕೆ : "ನೀವು ಸಾಹಿತಿಗಳು, ಕನಸಿನಲ್ಲಿ ಕಂಡದ್ದನ್ನ ಎಚ್ಚರವಾದಾಗ ಮರೆತು ಬಿಡುತ್ತೀರಿ" ಎಂದು ಹಾಸ್ಯ ಮಾಡಿದ್ದಳು. ಕೈ ಕುಲುಕಲೆಂದು ತಾನು ಕೈ ಚಾಚಿದಾಗ, 'ನಮಸ್ತೆ' ಎಂದು ಕೈ ಜೋಡಿಸಿ ಮತ್ತೆ ನಕ್ಕು ಮಾಯವಾಗಿದ್ದಳು...

'ಭಲೆ ಹುಡುಗಿ' ಎಂದುಕೊಂಡಿದ್ದ ತಾನು. ಸಿಟ್ಟು ಬಂದರೂ ಅವಳ ಬಿಗುವಿಗಾಗಿ-ಸೊಕ್ಕಿಗಾಗಿ ಮೆಚ್ಚಿಗೆಯಾಗಿತ್ತು. ಇಂಥ ಹುಡುಗಿಯನ್ನು ಒಲಿಸಿಕೊಂಡು ಇವಳು ತನಗಾಗಿ ಒದ್ದಾಡುವಂತೆ ಮಾಡಿದರಲ್ಲವೆ ಜೀವನ ಸಾರ್ಥಕ, ಅನ್ನಿಸಿತ್ತು. ಅನಿಸಿದ ತಕ್ಷಣ ಕಾರ್ಯೋನ್ಮುಖನಾಗಿದ್ದ ಆತ...

"ಹೋಗೋಣೇನ್ರೀ ? ನೀವೇನೂ ತಯಾರಾಗೇ ಇಲ್ಲಲ್ಲ ?" —ಅಡಿಗೆಮನೆಯಿಂದ ಕೂಗಿ ಕೇಳಿದಳು ಹೆಂಡತಿ.

ಈ ಹೆಂಡತಿ ಪೆದ್ದಿಯೆನಿಸಿದರೂ ತನ್ನ ಕಲ್ಪನೆಯಲ್ಲಿ ತನಗೇನಾದರೂ ಅವಮಾನಕರ ಪ್ರಸಂಗ ಬಂದಾಗ ಒಮ್ಮೆಲೆ ಏನಾದರೂ ಮಾತಾಡಿ ತನ್ನನ್ನು ವಾಸ್ತವ ಜಗತ್ತಿಗೆಳೆತರುತ್ತಾಳೆ ; ಅವಮಾನದ ಪ್ರಸಂಗ ತಪ್ಪಿಸುತ್ತಾಳೆ. ಅವಳಿಗೆ ಅದರ ಅರಿವೂ

ಇರಲಾರದು. ಅವಳ ಸಹಾನುಭೂತಿಯಿಂದಲೇ ಅಲ್ಲವೆ ತನಗೆ ಸ್ವಪ್ನಾ ದೇಶಪಾಂಡೆಯಿಂದಾದ ಅವಮಾನ ಮರೆತುಬಿಡುವುದು ಸಾಧ್ಯವಾದದ್ದು ?

ಅದ್ಭುತ ಹುಡುಗಿ ಸ್ವಪ್ನಾ. ಅವಳ ಕಣ್ಣಿಗೆ ತನ್ನ ಒಳಗಿನದೆಲ್ಲ ಕಾಣುತ್ತಿತ್ತು. ಯಾರಿಗೂ ಕಾಣಲಾರದ್ದು, ತಾನು ಸಹ ತನ್ನಲ್ಲಿ ಇಲ್ಲವೇ ಇಲ್ಲವೆಂದು ದೃಢವಾಗಿ ನಂಬಿದ್ದು, ಅವಳಿಗೆ ಕಾಣುತ್ತಿತ್ತು. ಅಂತೆಯೇ ಅವಳೊಂದಿಗಿನ ತನ್ನ ನಾಟಕ ಅಯಶಸ್ವಿಯಾಯಿತು. ತನ್ನ ಮೊದಲ ಸೋಲು ಅದು. ಹೌದು ; ಬಿದ್ದಿದ್ದ ತಾನು ಝಾಡಿಸಿಕೊಂಡು ಎದ್ದನಂತರ ಎದುರಿಸಬೇಕಾಗಿ ಬಂದಿದ್ದ ಮೊದಲ ಸೋಲು. ಆದರೇನೀಗ ? ಅದರ ನಾಮನಿಶಾನೆಯೂ ಇಲ್ಲ ತನ್ನ ನೆನಪಿನಲ್ಲಿ. ಅವಳೊಂದಿಗೇ ಧೂಳಾಗಿ ಹೋಯಿತು ಅದೆಲ್ಲ... “ನನಗ ನಿನ್ನ ಮರೀಲಿಕ್ಕೆ ಸಾಧ್ಯನಃ ಇಲ್ಲ ಸ್ವಪ್ನಾ, ದೇವರಾಣೆ”, ಎಂದಿದ್ದಿತ್ತು ತಾನೊಮ್ಮೆ ನಶೆಯಲ್ಲಿದ್ದಾಗ. ಹ್ಞ, ಮನುಷ್ಯರು ತಮ್ಮ ಭಾವನೆಗಳ ಶಾಶ್ವತತೆಯ ಬಗೆಗೆ ಆಣೆ ಪ್ರಮಾಣ ಮಾಡುತ್ತಿರುವಾಗ ವಿಧಿ ದೂರದಿಂದ ಅಣಕಿಸಿ ನಗುತ್ತಿರಬೇಕು... ಎಷ್ಟು ಕಾಳಜಿಪೂರ್ವಕ, ಎಷ್ಟು Systematic ಆಗಿ ಪ್ರಯತ್ನಿಸಿದ್ದೆ ತಾನು ಅವಳನ್ನು ಒಲಿಸಿಕೊಳ್ಳಲು ! ಯಾರೂ ತನಗಿಷ್ಟು ಶ್ರಮ ಕೊಟ್ಟಿರಲಿಲ್ಲ. ಎಷ್ಟೋ ಸಲ ಅವಳೊಂದಿಗಿದ್ದಾಗ ತಾನೂ ನಿಜವಾಗಿಯೂ ಈ ಪ್ರೀತಿ-ಪ್ರೀತಿಯೆಂದು ಎಲ್ಲರೂ ಹೊಡೆದುಕೊಳ್ಳುತ್ತಾರಲ್ಲ ಆ ಜಾಲದಲ್ಲಿ ಸಿಕ್ಕಿರುವೆನೇನೋ ಎಂಬ ಭ್ರಮೆಯಾಗಿತ್ತು ತನಗೆ. ತನ್ನ ಪ್ರಯತ್ನ ಸಫಲವಾಗುವ ಸ್ಟೇಜು ಬಂದಾಗಷ್ಟೆ ತನಗೆ ಎಚ್ಚರಾದದ್ದು, ತನ್ನ ಉದ್ದೇಶದ ಅರಿವಾದದ್ದು. ಪ್ರೀತಿಯ ಸರಳದಾರಿ ಮೂರ್ಖರಿಗಷ್ಟೆ ಹೇಳಿದ್ದು. ನೂರಾರು ಕಂತ್ರಾಟಗಳಿಂದೊಡಗೂಡಿರಬೇಕಾದ, ಒಂದಿಲ್ಲೊಂದು ಭಾನಗಡಿ ನಡೆದಿರಬೇಕಾದ ನಾಟಕಕಾರನಿಗೆ ಒಪ್ಪುವ ಜೀವನವಾಗಬೇಕು ತನ್ನದು. ಸ್ವಪ್ನಾಳಂಥ ಹುಡುಗಿಯ ಹೃದಯ ಒಡೆಯುವುದೆಂದರೆ ಎಂಥ ಸಾಹಸೀ ಕೆಲಸ ! ಇದನ್ನಾಧರಿಸಿ ಬರೆಯುವ ನಾಟಕ ಇನ್ನೆಷ್ಟು ಇಂಟರೆಸ್ಟಿಂಗ್ ಆದೀತು !... ಆದರೆ ಛೆ, ತನ್ನ ಕಲ್ಪನೆಗಳನ್ನೆಲ್ಲ ತಲೆಕೆಳಗು ಮಾಡಿದ್ದಳು ಆಕೆ. ತನ್ನ ಒಳಗೆ ಕೈಹಾಕಿ ಅಲ್ಲಿನ ರಾಡಿಯನ್ನು ಹೀಚಿ ಹೊರತೆಗೆದು ತನ್ನ ಮುಖಕ್ಕೆ ಎರಚಿದ್ದಳು. ಅದೆಲ್ಲ ನೆನಪಾದರೆ ಪಾಪ-ಪುಣ್ಯ, ದೇವರು-ಪರಲೋಕ ಮುಂತಾದ ನಾನ್‌ಸೆನ್ಸ್ ಬಗ್ಗೆ ವಿಚಾರ ಬರುತ್ತವೆ ; ತಲೆ ಕೆಡಿಸುತ್ತವೆ... ಇದು ತನಗೆ ಹೇಳಿದ್ದಲ್ಲ. ಹೋಗಲಿ, ಆ ನೆನಪೇ ಬೇಡ. ಸ್ವಪ್ನಾ ಸ್ವಪ್ನವಾಗಿ ಕರಗಿ ಹೋಗಲಿ. ತನ್ನ ಒಳಗಿನ ಕತ್ತಲು ತುಂಬಿದ ಹೊಲಸುನಾರುವ ಗಟಾರವನ್ನು ಕಂಡವಳ, ತನ್ನ ವರ್ತನೆಯನ್ನು ಖಂಡಿಸಿ ದೂರವಾದವಳ, ತನ್ನ ವರ್ತನೆಯಿಂದಾಗಿ ಹೃದಯ ಒಡೆದುಕೊಳ್ಳಲಾರದವಳ, ತನ್ನ ನೆನಪಿನಲ್ಲಿ ಕಣ್ಣೀರಿಡದವಳ ಬಗ್ಗೆ ವಿಚಾರ ಮಾಡುವುದೇ ಬೇಡ...

"ಬರ್ರಿ-ಬರ್ರಿ, ನಮಸ್ಕಾರ-ನಮಸ್ಕಾರ." –ಇಷ್ಟಗಲ ಬಾಯ್ದೆರೆದು ಸ್ವಾಗತಿಸಿದ ಬೋಳುತಲೆಯ ಕಾರ್ಯದರ್ಶಿ. ಅವನ ಹಿಂದೆ ಮೋಟು ಜಡೆಯ ಮೊಂಡ ಮೂಗಿನ ದಪ್ಪಗಿನ ಒಬ್ಬ ಹುಡುಗಿ.

"ಇವರು ನಮ್ಮ ಕಾಲೇಜಿನ ಲೇಡೀಸ್ ರಿಪ್ರೆಜೆಂಟೇಟಿವ್ಹ್ ಮಿಸ್ ಗೋಖಲೆ. ಇವರು ನಮ್ಮ ಇಂದಿನ ಅತಿಥಿಗಳು, ಪ್ರಸಿದ್ಧ ನಾಟಕಕಾರರು ಶ್ರೀಮಾನ್–"

ಪಕ್ಕದಲ್ಲಿ ಹೆಂಡತಿಯಿರದಿದ್ದರೆ ಮಿಸ್ ಗೋಖಲೆಯ ಕೈ ಕುಲುಕಬಹುದಾಗಿತ್ತು... ಯಾವ ಗಡಿಬಿಡಿಯೂ ಇಲ್ಲದೆ ನಿಧಾನವಾಗಿ ಸ್ವಾಗತ ಭಾಷಣಮಾಡಿದ ಆ ಟೈಟ್‌ಪ್ಯಾಂಟಿನ ಕಾರ್ಯದರ್ಶಿ. ತನಗೋ ಆಗಲೇ ಬೇಸರ ಬರಲು ಸುರುವಾಗಿದೆ. ಮಿಸ್ ಗೋಖಲೆ ಸ್ವಲ್ಪ ದೂರದಲ್ಲಿ ಕೂತು ಲಕ್ಷ್ಯಗೊಟ್ಟು ಭಾಷಣ ಕೇಳುತ್ತಿದ್ದಾಳೆ. ಈ ಹುಡುಗಿಗೆ ತನ್ನ ನಾಟಕಗಳ ಬಗ್ಗೆ ಪ್ರಾಮಾಣಿಕ ಆಸ್ಥೆಯಿದ್ದಂತಿದೆ... ನೋಡಬೇಕು, ಪ್ರಯತ್ನ-ಪ್ರಯತ್ನ ಮಾಡಬೇಕು...

ತನ್ನ ನಾಟಕಗಳನ್ನು ಓದಿ ಮೆಚ್ಚಿ ತನಗೆ ಪತ್ರ ಬರೆದು, ಆ ಸ್ನೇಹ ಇನ್ನೂ ಮುಂದುವರಿದಾಗ ತನ್ನನ್ನು ಕಾಣಲೆಂದು ದೂರದ ಊರಿನಿಂದ ಹಿಂದೊಮ್ಮೆ ಬಂದಿದ್ದಳು ಒಬ್ಬ ಶ್ರೀಮಂತಕುಮಾರಿ– ಅವಳ ಹೆಸರು ಬಹುಶಃ ಶಾಂತಾನೋ ಎಂದೇನೋ ಇತ್ತು. ಅವಳಿಗೆ ಸಾಹಿತ್ಯದ ಹುಚ್ಚು. ತನ್ನ ನಾಟಕಗಳಿಗೆ ಇಲ್ಲದ ಅರ್ಥ ಹುಡುಕಲೆತ್ನಿಸುತ್ತ ಕೇಳಿದ್ದಳು, 'ನೀವು ಯಾರನ್ನೋ ಪ್ರೀತಿಮಾಡಿ ನಿರಾಶರಾಗಿರಬೇಕು, ಅಲ್ಲೇನ್ರಿ ?'

ಇವಳ ತಲೆ, ಸುಮ್ಮನೆ ತನ್ನೊಂದಿಗೆ ಎರಡು ದಿನ ಅಲ್ಲಿ-ಇಲ್ಲಿ ತಿರುಗಾಡಿ ಮಜಾ ಮಾಡಿ ಹೊರಟು ಹೋಗುವುದು ಬಿಟ್ಟು ತಲೆಯೆಲ್ಲ ಹರಟುತ್ತಿದ್ದಾಳಲ್ಲ, ಎಂದು ಸಿಟ್ಟು ಬಂದಿತ್ತು. ಆದರೂ ತಡೆಹಿಡಿದಿದ್ದ. ಹುಡುಗಿ ಚೂಟಿಯಾಗಿದ್ದಳು. ಹೊಟೆಲ್ ಅಂಜೀಮಾದಲ್ಲಿ ಅವಳ ರೊಕ್ಕದಿಂದಲೇ ಕಾಫಿ ಕುಡಿದು, ಅವಳ ಕಾರಿನಲ್ಲೇ ಊರಾಚೆಯ ಗುಡ್ಡದ ಮೇಲಿನ ಈಶ್ವರ ಗುಡಿಯ ಕಡೆ ಹೋಗಿ ಮಾವಿನ ಗಿಡದ ನೆರಳಲ್ಲಿ ಅವಳ ತೊಡೆಯ ಮೇಲೆಯೇ ತಲೆಯಿರಿಸಿ ಮಲಗಿ ಭಾವಪೂರಿತ ಧ್ವನಿಯಲ್ಲಿ ಹೇಳಿದ್ದ ತಾನು– ಹಿಂದೆ ಕಾಲೇಜಿನಲ್ಲಿ ತಾನು ಪ್ರೇಮಿಸಿದ್ದ ಮಹಾಕಥೆಯನ್ನು, ಪರ್ವ-ಪರ್ವವಾಗಿ, ತನಗೆ ಕೈಕೊಟ್ಟ ಹುಡುಗಿಯರನ್ನು ಮಹಾತ್ಯಾಗಿ - ನಿಸ್ವಾರ್ಥ ಪ್ರೇಮಿ- ಯೋಗಿನಿ ಎಂದೆಲ್ಲ ಸಾಧ್ಯವಾದ ಮಟ್ಟಿಗೆ ಚಿತ್ರಿಸುತ್ತ ; ಎಲ್ಲವೂ ತನ್ನ wishful thinking ಎಂಬ ಅರಿವು ಕುಟುಕುತ್ತಿದ್ದರೂ ಲೆಕ್ಕಿಸದೇ.

'ಇವರನ್ನು ಫ್ರಾನ್ಸಿಗೆ ಕಳಿಸಲಿರುವುದು ನಮಗೆಲ್ಲ ಭಾರಿ ಅಭಿಮಾನದ

ವಿಷಯ. ಇವರು ಅಲ್ಲಿನದೆಲ್ಲ ಕಲಿತು ಇಲ್ಲಿ ಬಂದು ಇನ್ನೂ ಒಳ್ಳೆಯ ನಾಟಕಗಳನ್ನು ಬರೆಯುವಂತಾಗಲಿ–' ಪ್ರಿನ್ಸಿಪಾಲರು ಗೊಗ್ಗರು ದನಿಯಲ್ಲಿ ಏನೇನನ್ನೋ ಹಾರೈಸುತ್ತಲೇ ಇದ್ದರು. ಹುಡುಗರ ಚಪ್ಪಾಳೆಯ ಸದ್ದು ಕಿವಿ ಗಡಚಿಕ್ಕುವಂತಿತ್ತು...

'ಇವರ ನಾಟಕಗಳೆಲ್ಲ ಜೀವಂತವಾಗಿ ಕಾಣುವುದು ಅವುಗಳ ವೈಶಿಷ್ಟ್ಯ. ಪ್ರಾಮಾಣಿಕತೆ, ಧೈರ್ಯ, ಸಾಹಸೀ ಪ್ರವೃತ್ತಿ ಇವರ ಬರವಣಿಗೆಯ ಲಕ್ಷಣಗಳು. ನಿಜ ಜೀವನದಲ್ಲೂ ಹಾಗೆಯೇ...'

ಯಾಕೋ ವಿಪರೀತ ತಲೆನೋವು. ಎದೆಯಲ್ಲೊಂದು ಬಗೆಯ ಸಂಕಟ. ಎಂದಿನಂತೆ ತನ್ನ ಬಗೆಗೆ ಇತರರಾಡುವ ಒಳ್ಳೆಯ ಮಾತುಗಳನ್ನು ಕೇಳಿ ನಂಬಿ ಅಭಿಮಾನಪಟ್ಟು ತೆಪ್ಪಗಿರುವುದು ಯಾಕೋ ಸಾಧ್ಯವಾಗಲೊಲ್ಲದು... ಎಲ್ಲ ನಾಟಕೀಯವೆನಿಸತೊಡಗಿದೆ. ಪ್ರಿನ್ಸಿಪಾಲರ ಭಾಷಣದಲ್ಲಿ ಮನಸ್ಸು ಹಾಕಿ ಹಾಳು ಸ್ವಪ್ನಾನನ್ನು ತಲೆಯಿಂದಾಚೆ ಸಾಗಹಾಕಬೇಕು...

ಪ್ರಾಮಾಣಿಕತೆ ?

ರಾತ್ರಿ ಕನಸಿನಲ್ಲಿ ತನ್ನ ಮುಖದ ಮೇಲೆ ಉಗುಳಿ ಮಾಯವಾದ ಆ ಅಸ್ಪಷ್ಟ ಆಕೃತಿ ಕಣ್ಣೆದುರು ತೇಲಿಬಂದಂತಾಯಿತು. ಕಣ್ಣು ಕಿರಿದುಗೊಳಿಸಿ ಗುರುತು ಹಿಡಿಯಲೆತ್ನಿಸಿದ ಆತ. ಊಹ್ಞೂ, ತೀರ ಅಸ್ಪಷ್ಟ. ಕೆಂಗಣ್ಣು-ಉರಿ ಮೋರೆ... ಯಾರಿದು ? ದೆವ್ವವೆ ? ಸ್ವಪ್ನಾನ ದೆವ್ವವೇ ? ಛೆ, ಅವಳಿನ್ನೂ ಬದುಕಿದ್ದಾಳೆ. ತನ್ನ ದಾದು-ದರಕಾರು ಮಾಡದೆಯೂ ಬದುಕಿದ್ದಾಳೆ... ಆದರೂ ತನ್ನ ಪಾಲಿಗವಳು ಸತ್ತಂತೆಯೇ. ಅವಳದೇ ಹಾಗಿದ್ದರೆ ಈ ದೆವ್ವ ?

ಛೆ, ಜೊತೆಗೆ ಬೇರೆಯುವರಿದ್ದಾಗ ಮುಖದ ಮೇಲೆ ಉಗುಳಿ ಅವಮಾನಿಸುವಷ್ಟು ಅಸಭ್ಯಳಲ್ಲ ಸ್ವಪ್ನಾ.

ಅಥವಾ ತಾನೆಂದೋ ಮರೆತ, ತನಗಿನ್ನೂ ತಿಳುವಳಿಕೆ ಬರದಿದ್ದಾಗ ತನ್ನನ್ನು ಒದ್ದಾಡಿಸಿದವರ ಪೈಕಿ ಯಾರೋ ಒಬ್ಬರ ದೆವ್ವವೇ ?... ಇರಲಾರದು.

ಹಾಗಿದ್ದರೆ ಸ್ವಪ್ನಾ ತನಗಿಲ್ಲವೆಂದು ಹೇಳಿ ಛೇಡಿಸಿದ್ದ conscience ಎಂಬಂಥದೇನಾದರೂ ಇರಬಹುದೇ ಇದು ?

'ಇವರ ನಾಟಕಗಳಲ್ಲಿ, ಒಂದು ಬಗೆಯ ತೀವ್ರಪ್ರಜ್ಞೆಯಿದ್ದುದು ಇನ್ನೊಂದು ವಿಶೇಷ'...

ತಲೆ ತಿರುಗಲಾರಂಭಿಸಿತ್ತು ಆತನಿಗೆ.

'ಕಲೆಯ ಸೇವೆಗಾಗಿ ಇವರು ಈಗ ಎರಡು ವರ್ಷಗಳ ಮಟ್ಟಿಗೆ ದೂರದ ಫ್ರಾನ್ಸ್‌ಗೆ ಹೋಗಲಿದ್ದಾರೆ.'

ನಗು ಬಂದಿತು ಆತನಿಗೆ. ನಗು ತುಟಿಯಂಚಿನಲ್ಲಿ ಮೂಡುವುದಕ್ಕೂ ಕಣ್ಣು ಮಿಸ್ ಗೋಖಲೆಯ ಕಡೆ ತಿರುಗುವುದಕ್ಕೂ ಸಮನಾಯಿತು. ಒಂದು ಕ್ಷಣ ಕಕ್ಕಾಬಿಕ್ಕಿಯಾದರೂ ಮರುಕ್ಷಣ ಸಾವರಿಸಿಕೊಂಡು ನಗೆಯರಳಿಸಿದ ಅವಳ ಚಾಣಾಕ್ಷತೆಯ ಬಗ್ಗೆ ಮೆಚ್ಚಿಗೆಯೆನಿಸಿತು.

ಏ ಮುದುಕಾ, ಯಾಕೆ ಹೀಗೆ ಸಿಕ್ಕಾಪಟ್ಟೆ ಮಾತಾಡುತ್ತಿದ್ದೀ ? ಕ್ಲಾಸಿನಲ್ಲಿ ನಿರ್ಭಾಗ್ಯ ಹುಡುಗರಿಗೆ ಸುಳ್ಳುಪಳ್ಳು ಸೇರಿಸಿ ಲೆಕ್ಚರು ಕುಟ್ಟಿ ಅಭ್ಯಾಸ ನಿನಗೆ. ನಾನು ಯಾವ ಕಲೆಯ ಸೇವೆಗೂ ಹೊರಟಿಲ್ಲವೋ. ನನಗೊಂದು ದೆವ್ವ ಬೆನ್ನು ಹತ್ತಿದೆ. ಅದರಿಂದ ತಪ್ಪಿಸಿಕೊಳ್ಳಬೇಕಾಗಿದೆ ನನಗೆ. ನನ್ನಿಂದ ನನಗೆ ದೂರ ಹೋಗಲು ಸಾಧ್ಯವೇನೋ ನೋಡಲು ಹೊರಟಿದ್ದೇನೆ... ಓಡಿ ಹೊರಟಿದ್ದೇನೆ...

ಪ್ಯಾರಿಸ್ಸಿನಲ್ಲಿ ತನ್ನ ಸ್ಕೂಟರ್ ಮೇಲೆ ದಿನಾ ಹೊಸ-ಹೊಸ ಹುಡುಗಿಯರನ್ನು ಕರೆದೊಯ್ಯುವ ಕನಸು ಕಾಣುತ್ತಿದ್ದಾಗ ಕಾತರದ ದನಿಯಲ್ಲಿ ಅವನ ಹೆಂಡತಿ ಕೇಳಿದ್ದಳು ಒಂದು ರಾತ್ರಿ, "ನೀವು ಲಗೂ ಬರಬೇಕು, ನೀವಿಲ್ಲದ ನಾ ಹ್ಯಾಂಗ ಇರ್ಲಿ ?" ಕಾಣುತ್ತಿದ್ದ ಕನಸಿನಿಂದ ಹೊರಬರದೆಯೆ, ಅವಳು ಮುಂದೆ ಮಾತಾಡದಂತೆ ಅವಳ ಬಾಯಿಯ ಮೇಲೆ ತುಟಿಯೂರಿ ಪಿಸುಗುಟ್ಟಿದ್ದ ತಾನು, "ನಾ ಎಲ್ಲಿದ್ರೂ ನನ್ನ ಮನಸ್ಸು ಇಲ್ಲೇ ಇರ್ತದ." ಅವಳಿಗೆ ಸಮಾಧಾನವಾಗಲು ಅಷ್ಟು ಸಾಕಾಗಿತ್ತು.

'ದೇವರು ಇವರಿಗೆ ದೀರ್ಘಾಯುಷ್ಯ ಕೊಡಲಿ.'

ಬೇಡವೋ ಮುದುಕಾ, ನಾನು ಕಂಡ ಬದುಕು ನನಗೆ ಸಾವಿನ ಬಗ್ಗೆ ಅಗಾಧ ಪ್ರೀತಿ ಹುಟ್ಟಿಸಿದೆ...

ಮುದುಕ ಪ್ರಿನ್ಸಿಪಾಲರ ಭಾಷಣ ಮುಗಿಯಿತೆಂದು ಸಮಾಧಾನದ ನಿಟ್ಟುಸಿರು ಬಿಡುವಾಗ ಮತ್ತೊಬ್ಬ ಬಂದು ನಿಂತ. ಕನ್ನಡ ಲೆಕ್ಚರರ್ ಅಂದರು ಯಾರೋ– ಸರಿ. ಇನ್ನಿವನು ತಾನು ಕಲಿತ ವಿಮರ್ಶೆಯ ತತ್ವಗಳನ್ನೂ, ನಾಟಕಗಳನ್ನೂ ಕುರಿತು ಉಪನ್ಯಾಸ ಮಾಡುವನೋ ಎಂದು ಕಸಿವಿಸಿಯಾಯಿತು ಆತನಿಗೆ. ಪಕ್ಕಕ್ಕೆ ತಿರುಗಿ ನೋಡಿದ. ಹೆಂಡತಿ ಬಿಟ್ಟ ಕಣ್ಣುಗಳಿಂದ ಭಾಷಣಕಾರನನ್ನೆ ನೋಡುತ್ತಿದ್ದುದನ್ನು ಖಚಿತಪಡಿಸಿಕೊಂಡು ಮಿಸ್ ಗೋಖಲೆಯ ಕಡೆ ಹೊರಳಿದ. ಆಕೆ ಅವನನ್ನೇ ನೋಡುತ್ತಿದ್ದವಳು ಈ ಸಲ ಬೆಚ್ಚದೆ ನಿರ್ಧಾರದ ನಗೆ ಬೀರಿದಳು.

'ಇವರ ಭಾಷೆಯ ವೈಶಿಷ್ಟ್ಯವೆಂದರೆ ಸೂಜಿಯ ಮೊನೆಯಂತಹ ವ್ಯಂಗ್ಯ ; ಹರಿತವಾದ ಬಾಣದಂತೆ ಇವರ ಟೀಕೆ ; ಬಾರುಕೋಲಿನಿಂದ ಹೊಡೆದೆಬ್ಬಿಸಿದಂತೆ ಇವರ ಮಾತು...' ಆ ಮಹಾಶಯನ ಉಪಮೆಗಳ ಪಟ್ಟಿ ಮುಗಿಯುವಂತೆಯೇ ಕಾಣಲಿಲ್ಲ.

ವ್ಯಂಗ್ಯ-ಟೀಕೆ... 'ನಿನ್ನ ನೋವನ್ನು ಮರೆಯಲು ಇತರರನ್ನು ನೋಯಿಸಿ

ಆನಂದಿಸುತ್ತೀ ನೀನು' —ದೂರದಿಂದ ಕೂಗಿತು ದೆವ್ವ...

"ನೀರು, ನೀರು" ಎಂದು ತಡವರಿಸಿದ ಆತ. ಭಾಷಣ ಕೇಳಿಯೇ ಗಂಟಲೊಣಗಿತೇನೊ ಎಂದುಕೊಂಡ ಕಾರ್ಯದರ್ಶಿ ನೀರು ತಂದುಕೊಟ್ಟ. ಗಟಗಟನೆ ಕುಡಿದ ನಂತರ ಬುದ್ಧಿ ಸ್ವಲ್ಪ ಸ್ಥಿಮಿತಕ್ಕೆ ಬಂದಿತು. ಎಲ್ಲಾ ಬಿಟ್ಟು ಎದ್ದು ದೂರ ಓಡಿ ಹೋಗುವ ಬಯಕೆಯನ್ನು ಅದುಮಿಡಲೆತ್ನಿಸುತ್ತ, ಎದುರಿಗೇ ಬಂದು ನಿಂತಂತಾಗುವ ಆ ಸ್ಪಷ್ಟ ಆಕೃತಿಯನ್ನು ಭ್ರಮೆಯೆಂದುಕೊಂಡು ಸಮಾಧಾನವಾಗಿರ ಬಯಸುತ್ತ ಆತ ತನಗೆ ಅಧ್ಯಕ್ಷರು ಹಾಕಿದ ದೊಡ್ಡ ಹಾರವನ್ನು ಸ್ಟೈಲಿಶ್ ಆಗಿ ನಿಂತು ಸ್ವೀಕರಿಸಿದ.

ನಾಟಕಕಾರರು ಕೊನೆಯದಾಗಿ ದಯವಿಟ್ಟು ನಾಲ್ಕು ಮಾತು ಹೇಳಬೇಕೆಂದು ಅಧ್ಯಕ್ಷರು ಸವಿನಯ ಪ್ರಾರ್ಥನೆ ಮಾಡಿದಾಗ ಆತ ಎದ್ದು ನಿಂತು ತನಗೆ ಅವರೆಲ್ಲ ತೋರಿದ ವಿಶ್ವಾಸಕ್ಕಾಗಿ ಋಣಿಯೆಂದು ತುಂಬಿದ ಕಂಠದಿಂದ ಹೇಳಿದ ; ಅವರು ಹಾರೈಸಿದಂತೆ ಸಾಧ್ಯವಿದ್ದಷ್ಟೂ ಕಲೆಯ ಸೇವೆ ಮಾಡುವೆನೆಂದು ವಚನವನ್ನಿತ್ತ ; ತನ್ನ ಬಾಳೇ ಜನತೆಗೆ ಮೀಸಲೆಂದು ಘೋಷಿಸಿದ ; ಅದ್ಭುತ ಚಪ್ಪಾಳೆಯ ಸದ್ದಿನ ಮಧ್ಯದಲ್ಲಿ ಮಾತು ಮುಗಿಸಿ ಕುರ್ಚಿಯಲ್ಲಿ ಧೊಪ್ಪನೆ ಕುಕ್ಕರಿಸಿದ...

ಮತ್ತೆ ಆ ಹೆದರಿಸುವ ಆಕೃತಿ... 'ನೀನು ಮನುಷ್ಯನೇ ? ನಿನಗೆ ವಿವೇಕವೊಂದೆಂಬುದಿದೆಯೇ ?' ಎಂದು ಮುಂತಾಗಿ ಗೊಡ್ಡು ಪುರಾಣದ ಪ್ರಶ್ನೆ ಕೇಳುತ್ತ. ಸಮೀಪ ಸಮೀಪ ಬರುತ್ತಿದೆ... ಛೆ, ಇದೇನು ಹುಚ್ಚು ! ಇಂಥದಕ್ಕೆಲ್ಲ ಕೇರ್ ಮಾಡುವ ಸ್ಟೇಜನ್ನು ತಾನು ದಾಟಿ ಬಹಳ ಕಾಲವಾಯಿತೆಂದು ಅದಕ್ಕೆ ಗೊತ್ತಿಲ್ಲವೇನೋ ಪಾಪ, ಸ್ವಪ್ನಾ ದೇಶಪಾಂಡೆಯಂತೆ ಅದೂ ಮೋಸ ಹೋಗಿದೆ...

ಹೆಂಡತಿ ಯಾರೋ ಹೆಂಗಸರೊಂದಿಗೆ ಮಾತಾಡುತ್ತಿದ್ದಾಗ ಮಿಸ್ ಗೋಖಲೆಯನ್ನು ಸಮೀಪಿಸಿದ ಆತ. ಏನು ಮಾತಾಡುವುದೆಂದು ವಿಚಾರಿಸಿ ನಿರ್ಧರಿಸಿ ಆತ ಬಾಯಿ ತೆರೆಯುವ ಮುಂಚೆಯೇ ಅವಳೆಂದಳು, "ಮಿ-ಇವರೆ, ನಾ ನಿಮ್ಮ ನಾಟಕಾ ಭಾಳ like ಮಾಡ್ತೀನಿ. ನಾಡಹಬ್ಬಕ್ಕ ನೀವು ಮೊನ್ನೆ ಪಬ್ಲಿಶ್ ಮಾಡಿದ 'ಹಾಳುಗೋಡೆಯ ದೆವ್ವ' ನಾಟಕವನ್ನ ಅಭಿನಯಿಸಬೇಕು ಅನ್ಕೊಂಡೀವಿ. ಇವತ್ತ ರಾತ್ರಿ ನಮ್ಮ ಹಾಸ್ಟೆಲಿಗೆ ಬಂದು ರಿಹರ್ಸಲ್ ಒಮ್ಮೆ ನೋಡತೀರೇನು ಪ್ಲೀಜ್ ?"

ರಾತ್ರಿ... ? ಹುಡುಗಿಯರ ಹಾಸ್ಟೆಲಿಗೆ... ?

"ಓ ಯೆಸ್" ಅಂದ ಆತ ಒಮ್ಮೆಲೆ.

"ಇದು ತಗೋಳ್ರಿ ನನ್ನ ಅಡ್ರೆಸ್."

ತಾನಂದುಕೊಂಡದ್ದಕ್ಕಿಂತ ಹೆಚ್ಚು ಬುದ್ಧಿವಂತೆಯಾಗಿದ್ದಳು ಮಿಸ್ ಗೋಖಲೆ.

ಬಳಿಯಲ್ಲಿ ನಿಂತಿದ್ದ ಗುಂಪಿನಲ್ಲಿ ಯಾರದೋ ಜೋಕಿಗೆ ಉಳಿದವರೆಲ್ಲ ನಕ್ಕರು. ಆತನೂ ಏಕೆಂದು ವಿಚಾರಿಸದೆಯೆ ನಕ್ಕ. ನಗುತ್ತಿದ್ದರೆ ಮಾತ್ರ ಆ ದೆವ್ವವನ್ನು ದೂರವಿಡುವುದು ಸಾಧ್ಯವೆಂಬ ರಹಸ್ಯ ಅವನಿಗೀಗ ಗೊತ್ತಾಗಿಬಿಟ್ಟಿತ್ತು. ಅವಶ್ಯವಿದ್ದುದಕ್ಕಿಂತ ಜೋರಾಗಿ ನಕ್ಕ ಆತ. ಆತನ ನಗು ಸ್ಫುಟವಾಗಿ, ಉಳಿದವರೆಲ್ಲರ ಧ್ವನಿಯನ್ನು ತನ್ನಲ್ಲಿ ಅಡಗಿಸಿಕೊಂಡು ದೊಡ್ಡದಾಗಿ ಕೇಳಿಸಿತು...

ಟಾಂಗಾದಲ್ಲಿ ಕೂತು ಹೆಂಡತಿಯೊಂದಿಗೆ ಮನೆಗೆ ಬರುವಾಗಲೂ ನಗುತ್ತಲೇ ಇದ್ದ ಆತ. "ಫಂಕ್ಶನ್ ಹ್ಯಾಂಗಾತ್ರೀ ?" ಎಂದು ಆಕೆ ಕೇಳಿದಾಗ ಅವಳ ಮೇಲೆ ಬಾಗಿ ತುಂಟ ನಗು ನಕ್ಕು, "ಭಲೋ ಆತ್ರೀ" ಎಂದ.

ಮನೆಯ ಬೀಗ ತೆರೆದು ಮಕ್ಕಳೊಂದಿಗೆ ಆಕೆ ಒಳಗೆ ಹೋದನಂತರ ಎರಡು ನಿಮಿಷ ಅಲ್ಲೇ ನಿಂತು, ಪಕ್ಕದ ಮನೆಯ ಗೇಟಿನಲ್ಲಿ ನಿಂತಿದ್ದ ಇಂಜಿನಿಯರನ ಚೆಂದ ಹೆಂಡತಿಯ ಕಡೆ ನೋಡಿ ಶಿಳ್ಳು ಹಾಕಿದ.

'ಸ್ವಪ್ನಾ, ನೀನು ಸೋತೆ' —ಎಂದು ಅವನ ಮನಸ್ಸು ಕೇಕೆ ಹಾಕಿತು.

*

*

*

ಆ ರಾತ್ರಿ ಅವನ ಸ್ಕೂಟರು ಊರ ಹೊರಗಿನ ನಿರ್ಜನ ದಾರಿಯಲ್ಲಿ ವೇಗವಾಗಿ ಓಡುತ್ತಿತ್ತು. ಹಿಂದಿನ ಸೀಟಿನಲ್ಲಿ ಕೂತಿದ್ದ ಮಿಸ್ ಗೋಖಲೆಯ ಸೆರಗು ಗಾಳಿಗೆ ಮನಬಂದಂತೆ ಹಾರಾಡುತ್ತಿತ್ತು...

❖ ❖ ❖

# ಹರಿದು ಬಾ ತಾಯಿ

ರಾಜಾಪುರ-ಶಾಹಿಪುರ ಜಿಲ್ಲೆಗಳ ಗಡಿಯಲ್ಲಿನ ಒಂದು ಚಿಕ್ಕ ಹಳ್ಳಿ ಹನುಮಾಪುರ. ವರ್ಷದಲ್ಲಿ ಹನ್ನೆರಡೂ ತಿಂಗಳು ಅಲ್ಲಿ ಬೇಸಿಗೆ. ಮಳೆಯನ್ನಂತೂ ಹಲವಾರು ವರ್ಷಗಳ ಕಾಲ ಅಲ್ಲಿನವರು ಕಂಡಿರುತ್ತಿರಲಿಲ್ಲ. ಎಲ್ಲಿ ನೋಡಿದಲ್ಲಿ ಉದ್ದಕ್ಕೂ-ಅಗಲಕ್ಕೂ ಚಾಚಿರುವ ಕಪ್ಪು ಎರೆಮಣ್ಣಿನ ಬಯಲು. ಕಲ್ಲುಗುಡ್ಡಗಳು. ಊರ ಹೊರಗಿನ ಕೆರೆಯ ನೀರೇ ಕುಡಿಯಲು, ಬಳಸಲು ಗತಿ. ಕಡುಬೇಸಿಗೆಯಲ್ಲಿ ಕೆರೆ ಬತ್ತಿದಾಗ ದನಕರುಗಳು, ಮನುಷ್ಯರು, ಗಿಡಗಂಟೆಗಳು ಎಲ್ಲವೂ-ಎಲ್ಲರೂ ಸಾಯತೊಡಗುತ್ತಿದ್ದರು. ಇದೊಂದು ಅನಾಹುತವೆಂದಾಗಲೀ, ದುರಂತವೆಂದಾಗಲೀ ಊರಿನ ಜನರೆಂದೂ ವಿಶೇಷ ತಲೆಕೆಡಿಸಿಕೊಂಡವರಲ್ಲ. ಇದೇ ಪ್ರಕೃತಿನಿಯಮ, ಇದೇ ಜೀವನ, ಎಂದು ಸಮಚಿತ್ತಭಾವದಿಂದ ಇದನ್ನು ಸ್ವೀಕರಿಸಿ ಅವರು ಕಾಲಾಂತರದಿಂದ ತೆಪ್ಪಗೆ ಇದ್ದರು.

ಇಂತಹ ಬರಗಾಲಪೀಡಿತ ಹಳ್ಳಿಯಲ್ಲೂ ಕೆಲವು ಜನರಿಗೆ ಮನುಷ್ಯ ಸಹಜವಾದ ಕನಸುಗಳಿದ್ದವು. ಸರಳ ಸುಂದರ ಕನಸುಗಳು. ತಮ್ಮ ಹೊಲಗಳಲ್ಲಿ ಹಸಿರು ಪೈರು ಬೆಳೆದು ಕಂಗೊಳಿಸಿದಂತೆ, ತಮ್ಮ ತೋಟಗಳಲ್ಲಿ ತೆಂಗು-ಬಾಳೆಗಳು ಮೈದುಂಬಿ ನಿಂತಂತೆ, ತಮ್ಮ ಅಂಗಳಗಳಲ್ಲಿ ಮಲ್ಲಿಗೆ-ತುಳಸಿ-ಕನಕಾಂಬರ ಅರಳಿದಂತೆ, ದನಗಳು ಕೆರೆಯ ದಡದಲ್ಲಿ ಮೇಯುತ್ತಿರುವಂತೆ, ಕನಸುಗಳು. ಹನುಮಾಪುರದ ಅಗಸಿಯ ಬಳಿ ಇರುವ ಹಟ್ಟಿಯಲ್ಲಿ ಅಜ್ಜನೊಂದಿಗೆ ವಾಸವಾಗಿದ್ದ ತಿಮ್ಮನಿಗಂತೂ ಸದಾ ಇಂತಹ ಕನಸುಗಳೇ. ಊರ ಹೊರಗಿನ ತಮ್ಮ ಹೊಲದ ಪಕ್ಕದಲ್ಲೇ ನೀರು ಹರಿಯುತ್ತಿರುವ ಕನಸುಗಳು. ಕಡುಬೇಸಿಗೆಯ ಉರಿಬಿಸಿಲಿನ ಬೇಗೆಯನ್ನು ಮರೆಸುವಂತಹ ತಂಪಾದ-ಸೊಂಪಾದ ಕನಸುಗಳು.

ಹೀಗಿರುತ್ತಿರಲು ಒಮ್ಮೆ ತಿಮ್ಮನ ಅಜ್ಜ ರಾಜಾಪುರಕ್ಕೆ ಸಂತೆಗೆಂದು ಹೋಗಿದ್ದವನು ಖುಷಿಯಿಂದ ಕುಣಿಯುತ್ತಲೇ ತಿರುಗಿ ಬಂದನು. ಊರವರನ್ನೆಲ್ಲ ಕೂಗಿ ಕೂಗಿ ಕರೆದು ಹಾಲು-ಸಕ್ಕರೆ ಕುಡಿದಂಥ ಸುದ್ದಿ ಹೇಳಿದನು. ಸನಿಹದ ತಾಲೂಕು ಕೃಷ್ಣಾಪುರದಲ್ಲಿ ಕೃಷ್ಣಾನದಿಗೆ ದೊಡ್ಡದೊಂದು ಆಣೆಕಟ್ಟು ಕಟ್ಟುತ್ತಾರಂತೆ. ಅಲ್ಲಿಂದ ರಾಜಾಪುರ, ಶಾಹಿಪುರ, ಯಶೋಪುರ ಜಿಲ್ಲೆಗಳಿಗೆಲ್ಲ ನೀರು ಬಿಡುತ್ತಾರಂತೆ.

ಕೃಷ್ಣಾಪುರದ ಸಮೀಪವೇ ಇರುವ ಹನುಮಾಪುರಕ್ಕಂತೂ ದೊಡ್ಡ ಕಾಲುವೆಯಲ್ಲಿ ಸಮೃದ್ಧವಾಗಿ ನೀರು ಹರಿದು ಬರುತ್ತದಂತೆ. ಊರವರೆಲ್ಲ ತೋಟಪಟ್ಟಿ ಮಾಡಿಕೊಂಡಿರಬಹುದಂತೆ. ಇನ್ನು ತಮ್ಮೂರಿಗೆ ಬರಗಾಲವಿಲ್ಲ- ದನಗಳು ಮೇವಿಲ್ಲದೆ ಸಾಯುವುದಿಲ್ಲ. ಹಣದ ಕೊರತೆಯಿಂದಾಗಿ ಹೆಣ್ಣುಮಕ್ಕಳ ಮದುವೆಗಳು ನಿಲ್ಲುವುದಿಲ್ಲ. ಎರಡು ಹೊತ್ತಿನ ಕೂಳಿಗೆ ತತ್ವಾರವಾಗಿ ಯಾರೂ ಊರು ಬಿಟ್ಟು ಹೋಗುವುದಿಲ್ಲ. ಓಹ್... ದೇವರು ಅಂತೂ ಕಣ್ತೆರೆದ !

ಅಜ್ಜನೊಂದಿಗೆ ತಿಮ್ಮನೂ ಊರಿನ ಇನ್ನಿತರರೂ ಕೃಷ್ಣಾಪುರದವರೆಗೆ ಚಕ್ಕಡಿ ಕಟ್ಟಿಕೊಂಡು ಹೋಗಿ ಕೃಷ್ಣಾನದಿಗೆ ಆಣೆಕಟ್ಟು ಕಟ್ಟುವ ಕೆಲಸ ಪ್ರಾರಂಭವಾಗಿದ್ದನ್ನು ಕಣ್ಣಾರೆ ನೋಡಿದರು. ದೊಡ್ಡ-ದೊಡ್ಡ ಇಂಜಿನೀಯರ್ ಸಾಹೇಬರು ಟೆಂಟ್ ಹಾಕಿಕೊಂಡು ಅಲ್ಲೇ ವಸತಿ ಮಾಡಿದ್ದರು. ಹಗಲು ರಾತ್ರಿ ಸರ್ವೆ ಕೆಲಸ ನಡೆಯುತ್ತಿತ್ತು. ಎತ್ತರದ ಕೆಂಪಗಿನ ತೇಜಸ್ವಿ ಕಣ್ಣುಗಳ ಸೂಪರಿಂಟೆಂಡಿಂಗ್ ಇಂಜಿನಿಯರ್ ಸಾಹೇಬರು, ವಿಜಯಧ್ವಜರಾವ್ ಅಂತ, ಅದ್ಭುತ ಹೆಸರಿನವರು, ಕೆಲಸದ ಮೇಲುಸ್ತುವಾರಿ ನೋಡಿಕೊಳ್ಳುತ್ತಿದ್ದರು. ಸುಡುಬಿಸಿಲಲ್ಲಿ ಕಾರ್ಮಿಕರೊಂದಿಗೆ ಸ್ವತಃ ಶ್ರಮಿಸಿ ಬೆವರು ಹರಿಸುತ್ತ ಹೊತ್ತು ಮುಳುಗಿ ಕತ್ತಲಾಗುವವರೆಗೂ ಕೆಲಸ ಮಾಡುತ್ತಿದ್ದರು. ನಸುಕಿನ ಮೂರು ಗಂಟೆಗೇ ಎದ್ದು ಒಬ್ಬರೇ ಗುಡ್ಡಗಾಡಿನಲ್ಲಿ ನಡೆದುಕೊಂಡು ಹೋಗಿ ನದಿಯ ನೀರಿನ ಪಾತ್ರವನ್ನು ಅಳೆಯುತ್ತಿದ್ದರು. ಸೇತುವೆಯ ಹೊಳಹು ಹಾಕುತ್ತ, ಕಾಲುವೆಯ ನಕ್ಷೆ ತಯಾರಿಸುತ್ತ, ಇಡೀ ದಿನ ಕಾರ್ಯಮಗ್ನರಾಗಿರುತ್ತಿದ್ದರು. ಕೆಲಸ ನಡೆದದ್ದನ್ನು ನೋಡಿಕೊಂಡು ಹೋಗಲು ಬಂದ ಪಿ.ಡಬ್ಲ್ಯೂ.ಡಿ. ಮಂತ್ರಿಗಳು ಕೆಲಸದ ಪ್ರಗತಿಯನ್ನು ಮೆಚ್ಚಿ ಶ್ಲಾಘಿಸಿದರು. ತಿರುಗಿ ಹೊರಟಾಗ ರಾಜಾಪುರ ಇನ್‌ಸ್ಪೆಕ್ಷನ್ ಬಂಗ್ಲೆಯಲ್ಲಿ ತಮಗಾಗಿ ವ್ಯವಸ್ಥೆ ಮಾಡಿದ್ದ ಭೂರಿಭೋಜನಕ್ಕೆ ತಮ್ಮೊಂದಿಗೆ ಬರಲು ಒತ್ತಾಯದ ಆಮಂತ್ರಣ ನೀಡಿದರು. “ಕ್ಷಮಿಸ್ರಿ ಸರ್. ಕೆಲಸದ ಸೈಟ್ ಬಿಟ್ಟು ನಾ ಬರಲಾರೆ” ಅಂತ ಮಂತ್ರಿಗಳ ಆಮಂತ್ರಣವನ್ನೇ ನಿರಾಕರಿಸಿದ ವಿಜಯಧ್ವಜರಾವ್ ಅವರು ತಮ್ಮ ಟೆಂಟ್‌ನಲ್ಲಿ ಮೂರು ಕಲ್ಲುಗಳನ್ನಿಟ್ಟು ಹೂಡಿದ್ದ ಒಲೆಯಲ್ಲಿ ಕಟ್ಟಿಗೆ ಹಾಕಿ ಉರಿಸಿ ಅನ್ನ ಬೇಯಿಸಿಕೊಂಡು ಮೆಂತೆಹಿಟ್ಟು ಕಲಸಿ ಉಂಡು, ಮತ್ತೆ ಕಂದೀಲಿನ ಬೆಳಕಿನಲ್ಲಿ ತಮ್ಮ ನಕ್ಷೆಗಳನ್ನು ಹರವಿಕೊಂಡು ಕೂತರು.

“ಈ ಯಪ್ಪನ ಹೊಟ್ಟೆ ತಣ್ಣಗಿರಲಿ, ಇವನ ಪುಣ್ಯೇದಿಂದ ನಮ್ಮೂರಿಗೂ ಕಾವಲಿ ನೀರು ಬರೂದು ಇನ್ನು ತಡಾ ಆಗಾಂಗಿಲ್ಲ” ಅಂದುಕೊಳ್ಳುತ್ತ ಹನುಮಾಪುರದವರೆಲ್ಲ ತಿರುಗಿ ಬಂದರು.

* * *

ತಿಮ್ಮನ ಅಜ್ಜ ಕಾಲವಾಗಿ ವರುಷಗಳೇ ಗತಿಸಿದವು. ಹನುಮಾಪುರದವರ ನಂಬಿಕೆಗಳೆಲ್ಲಾ ಹುಸಿಯಾಗಿದ್ದವು. ಆಣೆಕಟ್ಟಿನ ಕೆಲಸ ಅಂದುಕೊಂಡ ಅವಧಿಯಲ್ಲಿ ಮುಗಿಯಲಿಲ್ಲ. ಜೀವನೋಪಾಯಕ್ಕಾಗಿ ಸುತ್ತಲಿನ ಅನೇಕ ಹಳ್ಳಿಯ ಗಂಡುಮಕ್ಕಳ ಹಾಗೆ ತಿಮ್ಮನೂ ಆಣೆಕಟ್ಟಿನ ಕಾಮಗಾರಿಯಲ್ಲಿ ಕೂಲಿಗಾಗಿ ದುಡಿಯತೊಡಗಿದ್ದ. ಕಾಮಗಾರಿ ಈಗ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯುತ್ತಿತ್ತು. ಸಾವಿರಾರು ಕೂಲಿಗಳು, ನೂರಾರು ಕಂತ್ರಾಟುದಾರರು, ಲೆಕ್ಕವಿಲ್ಲದಷ್ಟು ಇಂಜಿನೀಯರರು, ವಿಜಯಧ್ವಜರಾವ್ ಎಂದೋ ವರ್ಗವಾಗಿ ಹೋಗಿದ್ದರು. ಬೆಂಗಳೂರಿಂದ ಹೊಸದಾಗಿ ಬಂದಿದ್ದರು ಎಸ್. ಈ. ಸಾಹೇಬ ಭೀಮೇಗೌಡರು ; ಇಡಿಯ ದಿನ ಕಲ್ಲು ಕಡಿಯುವ, ನೆಲ ಅಗೆಯುವ, ಸೇತುವೆ ಕಟ್ಟುವ ಕೆಲಸದ ಕರ್ಕಶ ಸದ್ದಿನಿಂದ ಕೃಷ್ಣೆಯ ಕೊಳ್ಳ ತುಂಬಿ ಗಿಜಿಗಿಡುತ್ತಿತ್ತು. ಸಂಜೆಯಾದರೆ ಸಾಕು, ಯಾರು ಯಾರೋ ಬಿಳಿ ದಿರಿಸಿನ ಗಾಂಧಿ ಟೊಪ್ಪಿಗೆಯ ಜನ ಕಾರುಗಳಲ್ಲಿ ಬರುತ್ತಿದ್ದರು. ಎತ್ತರದ ಗುಡ್ಡದ ಮೇಲೆ ಕಟ್ಟಲಾಗಿದ್ದ ಗೆಸ್ಟ್‌ಹೌಸಿನಲ್ಲಿ ಬಿಡಾರ ಹೂಡಿದ್ದ ಭೀಮೇಗೌಡರೂ, ಕಂತ್ರಾಟುದಾರರೂ ಈ ಗಾಂಧೀ ಟೊಪ್ಪಿಗೆಯ ಜನರೂ ಸೇರಿ ಗುಜುಗುಜು ಮಾತಿನ ವ್ಯವಹಾರ ಪ್ರಾರಂಭಿಸುತ್ತಿದ್ದರು. ಗೆಸ್ಟ್‌ಹೌಸಿನ ಕಸ ಬಳಿಯುವ ಕೆಲಸವನ್ನು ಮಾಡುತ್ತಿದ್ದ ತಿಮ್ಮ ಆ ದಿನಗಳಲ್ಲಿ ಬಾಟಲಿ ಗ್ಲಾಸುಗಳನ್ನೂ, ಲಕ್ಷ-ಲಕ್ಷ ರೂಪಾಯಿಗಳ ವ್ಯವಹಾರವನ್ನೂ ಮೊದಲ ಬಾರಿಗೆ ನೋಡಿ ಬೆರಗಾಗಿದ್ದ.

ಭೀಮೇಗೌಡರ ಕೆಲಸದ ರೀತಿಯೇ ವಿಚಿತ್ರವೆನಿಸುತ್ತಿತ್ತು ತಿಮ್ಮನಿಗೆ. ಪಾನಮತ್ತರಾಗಿ ಮಲಗಿದ ಅವರು ಮುಂಜಾನೆ ಕೆಂಪುಕಣ್ಣು ಮಾಡಿಕೊಂಡು ಎದ್ದಾಗ ಗಂಟೆ ಹತ್ತು ದಾಟಿರುತ್ತಿತ್ತು. ಸೈಟಿಗೆ ಎಂದೂ ಹೋಗದೆ ಕೂತಲ್ಲೇ ನಕ್ಷೆಗಳನ್ನು ಪರೀಕ್ಷಿಸುವ ಅಪರೂಪದ ಇಂಜಿನಿಯರು ಅವರು. ಯಾವಾಗಲೋ ಮಧ್ಯಾಹ್ನ ಒಮ್ಮೆ ಕೆಲಸ ನಡೆಯುವಲ್ಲಿಗೆ ಹೋಗಿ ಒಂದು ದಿಕ್ಕು ತೋರಿಸಿ, "ಈ ದಿಕ್ಕಿನಲ್ಲಿ ಇಲ್ಲಿಂದ ಅಲ್ಲೀವರೆಗೆ ಇಪ್ಪತ್ತು ಕಿಲೋಮೀಟರು ಉದ್ದ ಆರು ಫೂಟು ಆಳ ತಗ್ಗು ತಗೀರಲೋ" ಎಂದು ಆಜ್ಞೆ ನೀಡಿದವರು ಮರುದಿನ ಹೋಗಿ, "ಎಲಾ ಕಳ್ಳ ನನ್ನ ಮಕ್ಕಳಿರಾ, ಹೊಟ್ಟೆಗೆ ಏನು ತಿಂತೀರೋ ? ಇಲ್ಲ್ಯಾಕೆ ತಗ್ಗು ತೆಗೆದಿರಿ ? ಮುಚ್ರಿ ಇದನ್ನ. ಆ ಕಡೆ ನಡೀರಲೋ, ಅಲ್ಲೆ ತಗ್ಗು ತೆಗೆಯೋದೈತಿ," ಅನ್ನುತ್ತಿದ್ದರು. ಒಂದು ಸಲ ಸಿಮೆಂಟಿನ ಕೊರತೆಯಾಗಿ ಕೆಲಸ ನಿಂತಿತು. ಯಾವ ಕಂಪನಿಯ ಸಿಮೆಂಟಿಗೆ ಆರ್ಡರು ಕೊಡುವುದೆಂದು ನಿರ್ಧರಿಸಲು ಭೀಮೇಗೌಡರು ಆರು ತಿಂಗಳು ವಿಚಾರ ವಿಮರ್ಶೆ ಮಾಡಿದರು. ಕೆಲಸ ನಿಂತ ಆ ಆರು ತಿಂಗಳಲ್ಲಿ ಸರಕಾರೀ ನೌಕರರೆಲ್ಲಾ ಸಂಬಳ ಪಡೆದು ಚೈನೀ ಹೊಡೆಯುತ್ತಾ ಕೃಷ್ಣಾ ನದಿಯ ದಂಡೆಗುಂಟ ವಿಹರಿಸಿದರು. ಕೂಲಿಯಿಲ್ಲದಿದ್ದಾಗ ಹೊಟ್ಟೆಗೂ ಬಿಡುವು

ಕೊಡಬೇಕಾದ ತಿಮ್ಮನೂ, ಅವನಂಥವರೂ ಕಂಗೆಟ್ಟು ಹೋದರು.

ಹೀಗೆ ಆಣೆಕಟ್ಟಿನ ಕೆಲಸ ಆಗೀಗ ನಿಂತು ಹೋಗುವುದು ಸಾಮಾನ್ಯವಾಗಿಬಿಟ್ಟಿತು. ಅದಕ್ಕೆ ಅಧಿಕಾರಿಗಳು ಹಲವಾರು ಕಾರಣಗಳನ್ನು ನೀಡುತ್ತಿದ್ದರು. ಸರಕಾರ ಹಣ ಕೊಟ್ಟಿಲ್ಲ ; ಸರಕಾರದ ಬಳಿ ಹಣವೇ ಇಲ್ಲ ; ಸರಕಾರವೇ ಬದಲಾಗಿದೆ ; ಮಿನಿಸ್ಟರ್ ವಿದೇಶಕ್ಕೆ ಹೋಗಿದ್ದಾರೆ ; ಹಣಕಾಸು ವಿಭಾಗದ ಮುಖ್ಯಾಧಿಕಾರಿಗಳ ಮಗಳ ಲಗ್ನವಿದೆ ; ಮಿನಿಸ್ಟರಿಗೂ ಕಂತ್ರಾಟುದಾರರಿಗೂ ಹೊಂದಾಣಿಕೆ(!)ಯಾಗಿಲ್ಲ ; ಪ್ರಾಜೆಕ್ಟಿನಲ್ಲಿ ಮೂಲಭೂತ ಬದಲಾವಣೆ ಮಾಡಬೇಕಾಗಿದೆ ; ತಜ್ಞರ ಸಮಿತಿ ಪರಾಮರ್ಶೆ ನಡೆಸುತ್ತಿದೆ ; ಹೀಗೆಯೇ ಏನೇನೋ ಕಾರಣಗಳು. ಪ್ರಾರಂಭದ ವರ್ಷಗಳಲ್ಲಿ ವಿಜಯಧ್ವಜರಾವ್‌ರಂತಹ ಒಂದಿಬ್ಬರು ಅಧಿಕಾರಿಗಳು ಮಾಡಿದ್ದ ಒಳ್ಳೆಯ ಕೆಲಸವನ್ನು ಕಣ್ಣಾರೆ ನೋಡಿದ್ದ ತಿಮ್ಮನಿಗೆ ಈ ನಂತರದ ವರ್ಷಗಳಲ್ಲಿ ನಡೆದ ವ್ಯವಹಾರಗಳನ್ನೆಲ್ಲ ನೋಡಿದಾಗ ರೋಸಿಹೋಗುತ್ತಿತ್ತು. ತನ್ನೂರಿಗೆ ಕಾಲುವೆಯಲ್ಲಿ ನೀರು ಹರಿದು ಬರುವುದಿರಲಿ, ಈ ಅಧಿಕಾರಿಗಳು ರಾಜಕಾರಣಿಗಳ ಕಾಗೆ ಬಳಗವೆಲ್ಲ ಸೇರಿ ಕೃಷ್ಣಾಪುರದ ಸುತ್ತಲಿನ ಪ್ರದೇಶದ ಸ್ವಾಭಾವಿಕ ನಿಸರ್ಗ ಸೌಂದರ್ಯವನ್ನೆಲ್ಲ ಹಾಳುಗೆಡವುತ್ತಿದ್ದಾರಲ್ಲ ಎಂದು ತಿಮ್ಮನಿಗೆ ದಿಗಿಲಾಗುತ್ತಿತ್ತು. ಅವನು ಚಿಕ್ಕಂದಿನಲ್ಲಿ ನೋಡಿ ಅನುಭವಿಸಿದ್ದ ಕೆನೆಮೊಸರು, ಗಟ್ಟಿಹಾಲು, ನಳನಳಿಸುವ ಬದನೆಕಾಯಿ, ಜುಳುಜುಳು ಹರಿಯುವ ಕೃಷ್ಣೆ, ಹಸಿರು ತುಂಬಿದ ಗುಡ್ಡಗಳು ಎಲ್ಲವೂ ಮಾಯವಾಗಿದ್ದವು. ಎಲ್ಲ ಕಡೆ ಸರಕಾರಿ ನೌಕರರಿಗಾಗಿ, ಕೂಲಿಗಳಿಗಾಗಿ ಕಟ್ಟಿದ ಕಾಂಕ್ರೀಟ್ ಮನೆಗಳು, ನೀರು ಬೆರೆಸಿದ ಹಾಲು, ಸತ್ವವಿಲ್ಲದ ಕಾಯಿಪಲ್ಲೆ, ಮಡುಗಟ್ಟಿ ನಿಂತ ಕೃಷ್ಣೆಯ ನೀರಲ್ಲಿ ಮೊಸಳೆಗಳ ಭೀತಿ, ಗೆಸ್ಟ್‌ಹೌಸಿನಲ್ಲಿ ಬಾಟಲಿಗಳ ಸದ್ದು, ಕೋಳಿಮಾಂಸದ ಗಬ್ಬುನಾತ, ನೋಟುಗಳ ಹಾರಾಟ, 'ಹೊಂದಾಣಿಕೆ'ಗಾಗಿ ಮಂತ್ರಿಗಳ ಬಾಗಿಲಿಗೆ ಎಡತಾಕುವ ಅಧಿಕಾರಿಗಳು, ಅವರ ಹಿಂದೆ ಕಂತ್ರಾಟುದಾರರು.

ಹನುಮಾಪುರದ ಬರಗಾಲ ನೀಗಲು ಇನ್ನೆಷ್ಟು ವರ್ಷ ಕಾಯಬೇಕೋ ಎಂದು ತಿಮ್ಮ ತಪಿಸುತ್ತಿದ್ದ.

* * *

ಕೃಷ್ಣಾಪುರದ ಆಣೆಕಟ್ಟಿನ ಕೆಲಸ ಇನ್ನೂ ನಡೆದೇ ಇದೆ. ತಿಮ್ಮ ತನ್ನ ಮಸುಕಾಗತೊಡಗಿರುವ ಕಣ್ಣುಗಳಿಂದ ಗಮನಿಸುತ್ತಲೇ ಇದ್ದಾನೆ. ಗೆಸ್ಟ್‌ಹೌಸಿನ ಚಟುವಟಿಕೆಗಳು, ಮೊದಲು ಕತ್ತಲಾದ ನಂತರ ಮಾತ್ರ ನಡೆಯುತ್ತಿದ್ದಂತಹವು. ಈಗ ಹಾಡು ಹಗಲೇ ನಡೆಯುತ್ತಿವೆ. ಈಗ ಯಾರೂ ಲಕ್ಷಗಳ ಬಗ್ಗೆ ಮಾತಾಡುವುದಿಲ್ಲ.

ಈಗೆಲ್ಲಾ ಕೋಟಿಗಳ ವ್ಯವಹಾರ. ರಾತ್ರಿ ಮಾತ್ರ ನಡೆಯುತ್ತಿದ್ದ ಬಾಟಲಿ ಗ್ಲಾಸುಗಳ ನೃತ್ಯ ಈಗ ಬೆಳಗಿನಿಂದಲೇ ಆರಂಭವಾಗುತ್ತಿದೆ. ಮೊದಲಾದರೋ ಕದ್ದು ನಡೆಯುತ್ತಿದ್ದ 'ಹೊಂದಾಣಿಕೆ' ಕಾರ್ಯಕ್ರಮಗಳು ಈಗ ತೀರ ಆಧುನಿಕವಾದ ಮುಕ್ತ ರೀತಿಯಲ್ಲಿ ನಡೆಯುತ್ತವೆ. ಎಸ್. ಈ. ಸಾಹೇಬರ ಜೊತೆಗೆ ಸಿ. ಈ. ಸಾಹೇಬರೂ ಅಲ್ಲೀಗ ದೊಡ್ಡ ದೊಡ್ಡ ಬಂಗಲೆಗಳಲ್ಲಿ ನೆಲಸಿದ್ದಾರೆ. ಅವರ ಬಂಗಲೆಗಳ ವೈಭವ ನೋಡುವಂತಹದು. ಈ ಸಾಹೇಬರುಗಳು ತಿಂಗಳಿನಲ್ಲಿ ಹೆಚ್ಚಿನ ದಿನಗಳನ್ನು ರಾಜಧಾನಿಯಲ್ಲೇ ಕಳೆಯುತ್ತಾರೆ. ಅವರು ಕೊಡುವ ಪರ್ಸೆಂಟೇಜ್ ಆಧಾರದ ಮೇಲೆ ಮಂತ್ರಿಗಳು ಅವರ ಕೆಲಸಕ್ಕೆ ಹಣ ಬಿಡುಗಡೆ ಮಾಡುತ್ತಾರೆ. ಹೀಗೆ ಸರಕಾರ ಬಿಡುಗಡೆ ಮಾಡಿದ ಹಣದ ನಾಲ್ಕನೆಯ ಒಂದು ಭಾಗ ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ತಿರುಗಿ ಮಂತ್ರಿಗಳು- ಶಾಸಕರಿಗೇ ಹೋಗಿಬಿಡುತ್ತದೆ. ಉಳಿದುದನ್ನು ಈ ಅಧಿಕಾರಿಗಳು ಕಂತ್ರಾಟುದಾರರೊಂದಿಗೆ ಯಥಾನುಕೂಲ ಹಂಚಿಕೊಳ್ಳುತ್ತಾರೆ. ವ್ಯವಹಾರವೆಲ್ಲ ತೀರ ನೇರವಾಗಿ ನಡೆದುದರಿಂದ ತಿಮ್ಮನಂಥವರಿಗೂ ನಡೆದುದೆಲ್ಲ ತಿಳಿಯುತ್ತಿದೆ.

ತಿಮ್ಮನಿಗೀಗ ಏನು ಕಂಡರೂ ದಿಗಿಲಾಗುವುದಿಲ್ಲ. ಇಪ್ಪತ್ತು ಕಿಲೋಮೀಟರ ದೂರ ರಸ್ತೆ ಮಾಡಿ, ಮೂವತ್ತು ಕಿಲೋಮೀಟರ ಮಾಡಿದ್ದೇವೆಂದು ಲೆಕ್ಕ ತೋರಿಸುತ್ತಾರೆ. ಎರಡು ಫೂಟು ಆಳದ ತಗ್ಗು ತೆಗೆದು ಹತ್ತು ಫೂಟು ತೆಗೆಸಿದ್ದೇವೆಂದು ಬರೆಯುತ್ತಾರೆ. ಐವತ್ತು ಮಂದಿ ಕೂಲಿಗಳನ್ನು ನೇಮಿಸಿಕೊಂಡು ನೂರು ಮಂದಿ ಅಂತ ನಮೂದಿಸುತ್ತಾರೆ. ಒಂದುನೂರು ಚೀಲ ಸಿಮೆಂಟು ಹಾಕಿದಲ್ಲಿ ನೂರೈವತ್ತು ಚೀಲ ಹಾಕಿದ ದಾಖಲೆ ತಯಾರಿಸುತ್ತಾರೆ. ಅಕಸ್ಮಾತ್ ಒಬ್ಬ ಪ್ರಾಮಾಣಿಕ ಇಂಜಿನಿಯರ್ ಈ ಥರ ಸುಳ್ಳು ಅಳತೆ ಬರೆಯುವುದಿಲ್ಲೆಂದು ಪ್ರತಿಭಟಿಸಿದರೆ ಅವನ ಗತಿ ಮುಗಿದಂತೆ. ತಿಮ್ಮನೇ ನೋಡಿರುವಂತೆ ಅಂಥ ಇಂಜಿನಿಯರನನ್ನು ರೂಮಿನಲ್ಲಿ ಕೂಡಿಹಾಕಿ ಜೀವದ ಬೆದರಿಕೆ ತೋರಿಸಿ ಕಂತ್ರಾಟುದಾರರು ತಮಗೆ ಬೇಕಾದ ಅಳತೆ ಬರೆಸಿಕೊಳ್ಳುತ್ತಾರೆ.

ತಿಮ್ಮನಿಗೇ ತಿಳಿಯುವ ಇವೆಲ್ಲ ಮೇಲಿನ ಸಾಹೇಬರಿಗೆ ತಿಳಿಯುವುದಿಲ್ಲವೆ ? ಯಾರಿಗೆ ಗೊತ್ತು ? ಈಗಿನ ದೊಡ್ಡ ಸಾಹೇಬ ಕಾಳಪ್ಪನವರು ಯಾವಾಗಲೂ ಮಂತ್ರಿಗಳ ಜೊತೆಗೇ ತಿರುಗಾಡುತ್ತಿರುತ್ತಾರೆ. ಅವರೆಂದೂ ಯಾವ ನಕ್ಷೆ-ಯೋಜನೆಗಳ ಬಗೆಗೂ ತಲೆಕೆಡಿಸಿಕೊಂಡವರಲ್ಲ. ಕಚೇರಿಗೆ ಬರುವ ಸರಕಾರಿ ಆದೇಶಗಳನ್ನೂ, ಪತ್ರಗಳನ್ನೂ ಅವರಿಗೆ ಓದಿ ಅರ್ಥ ಹೇಳಲೆಂದೇ ಒಬ್ಬ ಆಫೀಸರ್ ಇದ್ದಾನೆ. ಅವರೊಂದಿಗೇ ಓದಿ ಅವರಿಗಿಂತ ಹೆಚ್ಚಿನ ಅಂಕ ಗಳಿಸಿದರೂ ದುರ್ದೈವದಿಂದ ಇನ್ನೂ ಪ್ರಮೋಶನ್ ಸಿಗದೆ ಕೊಳೆಯುತ್ತಿರುವ ಈ ಕೆಳಗಿನ ಆಫೀಸರನೇ ಅವರ ಕಚೇರಿಯ ವ್ಯವಹಾರಗಳನ್ನು ಅವರ ಆದೇಶಾನುಸಾರ ಗಮನಿಸಿಕೊಳ್ಳುತ್ತಾನೆ.

ಯಾರೂ ಯಾತರ ಬಗೆಗೂ ಆಕ್ಷೇಪಿಸುವುದಿಲ್ಲ. ಹಿಂದೆ-ಮುಂದೆ ನೋಡುವುದಿಲ್ಲ. ಅಪರಾಧೀ ಭಾವವಂತೂ ಇಲ್ಲವೇ ಇಲ್ಲ. ಕೃಷ್ಣೆಯಲ್ಲಿ ಹರಿದ ನೀರಿಗಿಂತ ಹೆಚ್ಚು ಹಣ, ನೂರಾರು ಕೋಟಿಗಳಷ್ಟು ಹಣ ಹರಿದಿದೆ, ಹರಿಯುತ್ತಲೇ ಇದೆ.

ತಿಮ್ಮನೀಗ ತಿರುಗಿ ಹನುಮಾಪುರಕ್ಕೇ ಹೋಗಿದ್ದಾನೆ. ಹನುಮಾಪುರದ ಪರಿಸ್ಥಿತಿಯಲ್ಲಿ ಏನೂ ಬದಲಾವಣೆಗಳಾಗಿಲ್ಲ. ಆದರೆ ಒಂದಲ್ಲ ಒಂದು ದಿನ ಕೃಷ್ಣೆಯ ನೀರು ಕಾಲುವೆಯಲ್ಲಿ ಹರಿದು ತಮ್ಮೂರಿಗೆ ಬರುತ್ತದೆ, ಆಗ ಎಲ್ಲ ಹಸಿರಾಗುತ್ತದೆ, ಹೊನ್ನಾಗುತ್ತದೆ, ಎಂದು ಈಗ ತಿಮ್ಮನ ಮೊಮ್ಮಗ ಕನಸು ಕಾಣುತ್ತಿದ್ದಾನೆ.

❖ ❖ ❖

# ಮುಂದಾಳುವಿನ ಜನತಾಸೇವೆ

ಅದೊಂದು ಸಣ್ಣ ತಾಲೂಕು ಕೇಂದ್ರ. ಅಲ್ಲೊಂದು ಸರಕಾರಿ ಪದವಿಪೂರ್ವ ಕಾಲೇಜು. ಸುತ್ತಮುತ್ತಲ ಹತ್ತಾರು ಹಳ್ಳಿಗಳಿಂದ ವಿದ್ಯಾರ್ಥಿಗಳು ಆ ಕಾಲೇಜಿಗೆ ಬರುತ್ತಿದ್ದರು. ಸನಿಹದಲ್ಲೆಲ್ಲೂ ಬೇರೆ ಕಾಲೇಜು ಇಲ್ಲದ್ದರಿಂದ ಸಹಜವಾಗಿಯೆ ಆ ಕಾಲೇಜಿನಲ್ಲಿ ಪ್ರವೇಶ ಪಡೆಯಲು ಪ್ರತಿವರ್ಷ ಸಾಕಷ್ಟು ನೂಕುನುಗ್ಗಲು ಇರುತ್ತಿತ್ತು. ಪ್ರತಿವರ್ಷ ಹಳ್ಳಿಗಳಿಂದ ಬರುವ ಹಲವಾರು ಮುಗ್ಧ ವಿದ್ಯಾರ್ಥಿಗಳಿಗೆ ಆ ಕಾಲೇಜಿನಲ್ಲಿ ಪ್ರವೇಶ ದೊರಕಿಸಿಕೊಡಲು ಸ್ವಯಂಪ್ರೇರಣೆಯಿಂದ ಸಹಾಯ ಮಾಡಲು ಒಬ್ಬ ಸ್ವಯಂ ಘೋಷಿತ ಮುಂದಾಳು ಮುಂದೆ ಬರುತ್ತಿದ್ದ. ಅವನ ಹೆಸರು ಕಲ್ಲಪ್ಪ ಮಣ್ಣೆನಮನಿ.

ಈ ವರ್ಷ ಎಂದಿನಂತೆ ಕಲ್ಲಪ್ಪ ಮಣ್ಣೆನಮನಿ ಖಾದಿ ಶರ್ಟ್-ಪಾಯಿಜಾಮ ಧರಿಸಿ ಗತ್ತಿನಿಂದ ಕಾಲೇಜಿಗೆ ಬಂದ. ಜೂನ್ ತಿಂಗಳು. ಆಗಷ್ಟೇ ಎಸ್ಸೆಸ್ಸೆಲ್ಸಿ ಫಲಿತಾಂಶ ಹೊರಬಂದಿತ್ತು. ಕಾಲೇಜಿನಲ್ಲಿ ಅಪಾರ ಜನಸಂದಣಿ. ಎಲ್ಲರನ್ನು ನೂಕಿಕೊಂಡು ಪ್ರಿನ್ಸಿಪಾಲರ ಕೋಣೆಯ ಹೊರಗಿದ್ದ ಸಿಪಾಯಿಯನ್ನ ಆಚೆ ದೂಡಿ ಮಣ್ಣೆನಮನಿ ಒಳಗೆ ಪ್ರವೇಶಿಸಿದ. 'ಓಹೋ' ಅಂದುಕೊಂಡ. ಹೊಸ ಪ್ರಿನ್ಸಿಪಾಲರು. ಈಗಷ್ಟೆ ಇಲ್ಲಿಗೆ ವರ್ಗವಾಗಿ ಬಂದಿದ್ದರು. ಇನ್ನೂ ಯುವಕ. ಆದರ್ಶವಾದಿಯಂತೆ. ಶಿಸ್ತಿನ ಸಿಪಾಯಿಯಂತೆ, ಕಟ್ಟಾ ಕಾನೂನು ಪರಿಪಾಲಕನಂತೆ... ಹಾಗಂತೆ-ಹೀಗಂತೆ ಅಂತ ಮೊದಲೇ ಮಣ್ಣೆನಮನಿ ಕೇಳಿ ತಿಳಿದಿದ್ದ. ಆದರೆ ಏನಿದ್ದರೇನು, ತಾನು ಸಾಮಾನ್ಯನಲ್ಲವಲ್ಲ. ತಾನು ಮುಂದಾಳು, ನಾಳಿನ ಶಾಸಕ, ಮುಂದಿನ ಮಂತ್ರಿ, ತನ್ನ ಮುಂದೆ ಇಂಥ ಪ್ರಿನ್ಸಿಪಾಲರು ಯಾವ ಗಿಡದ ತೊಪ್ಪಲು, ಅಂತ ತಾತ್ಸಾರದಿಂದಲೇ ಆತ ಕುರ್ಚಿಯಲ್ಲಿ ಕೂತ. ತನ್ನ ಬೇಡಿಕೆ ಮಂಡಿಸಿದ. ಒಂದು ಪಟ್ಟಿಯನ್ನು ಟೇಬಲ್ ಮೇಲೆ ಕುಕ್ಕಿದ. ಈ ಪಟ್ಟಿಯಲ್ಲಿ ಹೆಸರಿದ್ದವರಿಗೆಲ್ಲಾ ಪ್ರವೇಶ ಕೊಡಲೇಬೇಕು ಅಂತ ಹೇಳಿದ.

"ಆಗುವುದಿಲ್ಲ ಕಲ್ಲಪ್ಪನವರೆ. ನಾವು ಮೆರಿಟ್ ಪ್ರಕಾರ ಸೀಟು ಕೊಡುತ್ತೇವೆ. ಮೆರಿಟ್ ಮತ್ತು ಮೀಸಲಾತಿಗೆ ಸಂಬಂಧಪಟ್ಟ ಸರಕಾರದ ಕಾನೂನಿನಂತೆ ಯಾರಿಗೆ ಅಡ್ಮಿಶನ್ ಸಿಗಬೇಕೋ ಅವರ ಹೆಸರುಗಳು ಹೊರಗೆ ನೋಟೀಸ್ ಬೋರ್ಡ್ ಮೇಲೆ

ಇವೆ. ಬೇರೆ ಯಾವ ಹೆಸರನ್ನೂ ನಾನು ಪರಿಗಣಿಸುವುದಿಲ್ಲ. ದಯವಿಟ್ಟು ಒತ್ತಾಯ ಮಾಡಬೇಡಿರಿ'' -ಸೌಮ್ಯವಾಗಿ ಆದರೆ ದೃಢವಾಗಿ ಹೇಳಿದರು. ಪ್ರಿನ್ಸಿಪಾಲರು.

``ಸ್ವಾಮಿ ಪ್ರಿನ್ಸಿಪಾಲರೆ, ಹೊಸದಾಗಿ ಬಂದಿದ್ದೀರಿ. ಇಲ್ಲಿ ನಿಮ್ಮ ಸರಕಾರದ ಕಾನೂನು ನಡೆಯುವುದಿಲ್ಲ. ನಾನು ಈ ಭಾಗದ ಮುಂದಾಳು. ಇಲ್ಲಿ ನನ್ನದೇ ಕಾನೂನು. ಇಲ್ಲಿಯ ದೀನದಲಿತರ ಮುಖವಾಣಿ ನಾನು. ಇಲ್ಲಿಯ ಸಮಸ್ತ ಬಡವರ ಬಂಧು ನಾನು. ನಮ್ಮ ಪೈಕಿಯ ಎಲ್ಲಾ ಹುಡುಗರಿಗೆ ನೀವು ಅಡ್ಮಿಶನ್ ಕೊಡಲೇ ಬೇಕು. ನೀವು ಇಲ್ಲವೆಂದರೆ ಪಾಪ ಈ ಬಡಮಕ್ಕಳು ಎಲ್ಲಿಗೆ ಹೋಗಬೇಕು ? ವಿದ್ಯೆ ಕಲಿಯುವ ಅವಕಾಶದಿಂದ ಅವರನ್ನು ನೀವು ವಂಚಿತಗೊಳಿಸತಕ್ಕದ್ದಲ್ಲ. ಹೆಂಗಾದರೂ ಮಾಡಿ ಇಷ್ಟು ಮಂದೀನ್ನ ನೀವು ಅಕಾಮಡೇಟ್ ಮಾಡಲೇ ಬೇಕು.''

ಪ್ರಿನ್ಸಿಪಾಲರ ಹುಬ್ಬು ಬಿಗಿದುಕೊಂಡವು. ಅವರು ನಿರ್ಧಾರದ ದನಿಯಲ್ಲಿ ಹೇಳಿದರು. ``ನನ್ನ ಮಿತಿಯನ್ನು ತಿಳಿದುಕೊಳ್ಳಿರಿ ಕಲ್ಲಪ್ಪನವರೆ, ಪದವಿಪೂರ್ವ ಕಾಲೇಜಿಗೆ ಇಂತಿಷ್ಟೇ ಸೀಟು ಅಂತ ನಿಗದಿಪಡಿಸಲಾಗಿರುತ್ತದೆ. ಆ ಸೀಟುಗಳನ್ನ ನಿಯಮಗಳ ಪ್ರಕಾರ ಹಂಚಲಾಗಿದೆ. ನಾನು ಯಾವುದೇ ಒತ್ತಡಕ್ಕೂ ಜಗ್ಗುವವನಲ್ಲ. ತಿಳಿಯಿತೆ ?''

ಸೋಲೇ ಅರಿಯದ ಮುಂದಾಳು ಹಿಂದಿರುಗಿ ಹೋಗಬೇಕಾಯಿತು.

* * *

ಮರುದಿನ ಆ ಚಿಕ್ಕ ಊರಿನ ಚಿಕ್ಕ ಕಾಲೇಜಿನ ಆವರಣದಲ್ಲಿ ದೊಡ್ಡ ದೊಡ್ಡ ಪೋಸ್ಟರುಗಳು ಎದ್ದು ನಿಂತವು. ಹೊಸ ಪ್ರಿನ್ಸಿಪಾಲರ ಕಾರ್ಟೂನು ಚಿತ್ರ. ಜೊತೆಗೆ ಘೋಷಣೆಗಳು ; 'ಸೀಟು ಮಾರಾಟ ಮಾಡುವ ಪ್ರಿನ್ಸಿಪಾಲನಿಗೆ ಧಿಕ್ಕಾರ', 'ಕಾಲೇಜಿನಲ್ಲಿ ಸೀಟು ಬೇಕೆ ? ಒಂದು ಸೀಟಿಗೆ ಐದು ಸಾವಿರ ರೂಪಾಯಿ !', 'ವಿದ್ಯೆಯ ವ್ಯಾಪಾರಿ ಪ್ರಿನ್ಸಿಪಾಲನನ್ನು ಒದ್ದೋಡಿಸಿರಿ' ಇತ್ಯಾದಿ, ಇತ್ಯಾದಿ, ಮುಂದಾಳು ಕಲ್ಲಪ್ಪ ಮಣ್ಣಿನಮನಿ ತನ್ನ ಹಿಂಬಾಲಕರನ್ನು ಕರಕೊಂಡು ಊರಲ್ಲಿ ಮೆರವಣಿಗೆ ಮಾಡಿದ. ತಾಲ್ಲೂಕು ಆಫೀಸಿಗೆ ಹೋಗಿ ಬಡವರಿಗಾದ ಅನ್ಯಾಯದ ವಿರುದ್ಧ ಪ್ರತಿಭಟಿಸಿ, ನ್ಯಾಯ ಕೋರಿ, ಮನವಿಪತ್ರ ಸಲ್ಲಿಸಿದ. ನಾಲ್ಕಾರು ದಿನ ಊರಲ್ಲೆಲ್ಲ ಇದೇ ಸುದ್ದಿ.

* * *

ಕಾಲೇಜಿನಲ್ಲಿ ಪ್ರವೇಶ ಪ್ರಕ್ರಿಯೆ ಮುಗಿದಿತ್ತು. ಸಂತೆಯ ದಿನ ಹೊತ್ತು ಮುಳುಗಿದ ನಂತರ ಸುತ್ತಲಿನ ಹಳ್ಳಿಗಳಿಂದ ಬಂದಿದ್ದ ಹಲವಾರು ಜನ ಮುಂದಾಳುವನ್ನು ಸುತ್ತುವರಿದಿದ್ದರು. ಮುಂದಾಳು ತನ್ನದೇ ಆದ ಗತ್ತಿನಲ್ಲೇ ಅವರ ಜೊತೆ ಸಂಧಾನ ನಡೆಸಿದ್ದ :

"ಯಜಮಾನರೆ, ನೀವು ಮೂರು ಸಾವಿರ ವಾಪಸು ತಗೊಳ್ರಿ. ಪಾಟೀಲರೆ, ಇಗೋ ನಿಮ್ಮ ಒಂದು ಸಾವಿರ. ಗೌಡರೆ, ನಿಮ್ಮ ಎರಡು ಸಾವಿರ ತಗೊಳ್ಳಿರಿ. ಈ ಸಲ ನಮ್ಮ ಗ್ರಹಚಾರ ಸರಿಯಿಲ್ಲ."

ಆದರೆ ಅವರು ತಕರಾರು ತೆಗೆದರು. "ಏನಿದು ಕಲ್ಲಪ್ಪಣ್ಣಾ, ನಮ್ಮ ಮಕ್ಕಳಿಗೆಲ್ಲ ಕಾಲೇಜಿನಲ್ಲಿ ಸೀಟು ಕೊಡಿಸ್ತೀನಿ, ತಲಾ ಐದು ಸಾವಿರ ಕೊಡಬೇಕು, ಅಂತ ಹೇಳಿ ಹಣ ಇಸಗೊಂಡಿ. ನಮ್ಮ ಹುಡುಗರಿಗೆ ಸೀಟೂ ಸಿಗಲಿಲ್ಲ. ನಮ್ಮ ಹಣಾನೂ ಅರ್ಧಕ್ಕರ್ಧ ನುಂಗಿ ಹಾಕ್ತಿದ್ದೀಯಲ್ಲಪ್ಪೋ..."

ಕಲ್ಲಪ್ಪ ಮಣ್ಣಿನಮನಿಗೆ ಸಿಟ್ಟು ಬಂದಿತು. "ಅಲ್ಲಪ್ಪೋ, ನಿಮ್ಮ ಅರ್ಧ ಹಣಾನ ನಾನು ನುಂಗಿ ಹಾಕ್ತೀನಾ ? ಇದು ನನಗಲ್ಲ. ರಾಜಧಾನಿಗೆ ಹೋಗಿ ಮಿನಿಸ್ಟರ್ನ ಕಂಡು ಈ ಕೆಟ್ಟ ಹುಳುವಿನಂಥಾ ಪ್ರಿನ್ಸಿಪಾಲನ್ನ ಇಲ್ಲಿಂದ ಎತ್ತಂಗಡಿ ಮಾಡಿಸಬೇಕಲ್ಲ. ಅದಕ್ಕೆಲ್ಲ ನನಗೆ ಹಣ ಬೇಡವಾ ? ನಾನು ಮಾಡೋದೆಲ್ಲ ನಿಮಗಾಗಿ, ಜನತೆಗಾಗಿ ಅಂತ ಗೊತ್ತಿಲ್ಲವಾ ? ಜನತಾ ಸೇವೆಯೇ ಜನಾರ್ದನನ ಸೇವೆ ಅಂತ ನಂಬಿದವನು ನಾನು. ಸುಮ್ಮನೆ ಎದ್ದು ಹೋಗಿರಿ" ಅಂತ ಮುಂದಾಳು ಗರ್ಜಿಸಿದ.

ಎಲ್ಲರೂ ತೆಪ್ಪಗಾದರು.

❖ ❖ ❖

# ಸೋನಿಯಾ

"A little boy is a little boy, but a little girl is a little mother."

ನಿಜವಾಗಿಯೂ ಹೌದೆ ?

೧

ಸಂಜೆ ಐದೂವರೆಯ ಸಮಯ. ಕಾಲೇಜಿನಿಂದ ಆಗಲೇ ಬಂದಿದ್ದ ನಾನು ಸ್ಕೂಲಿನಿಂದ ಬರಲಿರುವ ಮಕ್ಕಳಿಗಾಗಿ ತಿಂಡಿ ಮಾಡುವ ಕೆಲಸದಲ್ಲಿದ್ದೆ. ಹೊರಗೆ ಸ್ಕೂಲಿನ ರಿಕ್ಷಾದ ಹಾರ್ನ್‌ದೊಂದಿಗೆ ಮಕ್ಕಳ ಗಲಾಟೆ ಕೇಳಿಸಿತು. ಬೂಟುಗಳ ಟಪ್ ಟಪ್, ಬ್ಯಾಗುಗಳ ಧಪ್ ಧಪ್, ಜೊತೆಗೆ- "ಅಮ್ಮಾ ಇವತ್ತು ಸ್ಕೂಲಿನಾಗ ಏನಾತು ಗೊತ್ತೇನು ?"

"ಏನಾತು ಚಿನ್ನ ?"

ದಿನವೂ ಸ್ಕೂಲಿನಿಂದ ಬರುತ್ತಿದ್ದಂತೆಯೇ ತುಂಬ ಉದ್ವೇಗ, ಉತ್ಸಾಹ, ಅವಸರದಿಂದ ವರದಿಯೊಪ್ಪಿಸುವುದು ನನ್ನ ಮಗಳು ಮಿಲಿಯ ರೂಢಿ. ಕೆಲಸ ಮಾಡುತ್ತಲೇ ಅವಳಿಗೆ ಕಿವಿಗೊಟ್ಟು, ನಡುನಡುವೆ ಒಂದೊಂದು ಮಾತಾಡುವುದು ನನ್ನ ಪರಿಪಾಠ.

"ಇವತ್ತು ಕನ್ನಡ ಪೀರಿಯಡ್ ಇದ್ದಾಗ ಸೋನಿಯಾ ಬೋರ್ಡಿನ ಮ್ಯಾಲ ಟೀಚರ ಚಿತ್ರಾ ತಗದು ನ್ಯೂಜ್ ರೀಡರ್ ಅಂತ ಬರೆದಿದ್ದಳು. ಟೀಚರ್ ಬಂದು ನೋಡಿ ಸಿಟ್ಟಾಗಿ ಎಲ್ಲರ್ನೂ ಸ್ಟ್ಯಾಂಡಪ್ ಆನ್ ದ ಬೆಂಚ್ ಮಾಡಿಸಿದ್ರು".

ಅವರ ಕಾನ್ವೆಂಟಿನಲ್ಲಿ ಕನ್ನಡ ಕಲಿಸುವ ಒಬ್ಬ ಮೇಡಮ್ ಬರೀ ಸುದ್ದಿ ಓದಿದಂತೆ ಪುಸ್ತಕ ಓದಿ ಎದ್ದು ಹೊರಟುಹೋಗುವುದು ನನಗೆ ಗೊತ್ತಿತ್ತು. ಆಕೆಯ ಬಾಬ್‌ಕಟ್, ಎದ್ದು ಕಾಣುವ ಲಿಪ್‌ಸ್ಟಿಕ್, ಚಿತ್ರವಿಚಿತ್ರ ಅಲಂಕಾರ ನೆನಪಾಗಿ ಒಂದು ಕ್ಷಣ ನಗು ಬಂದಿತು.

"ಆದರ ಸ್ಕೂಲು ಬಿಟ್ಟ ಮ್ಯಾಲ ಆ ಚಿತ್ರಾ ತಗದದ್ದು ಸೋನಿಯಾನೇ ಅಂತ ಗೊತ್ತಾಗಿ ಆಕಿಗೆ ಒಂದು ತಾಸು ನೀಲ್ ಡೌನ್ ಪನಿಶ್‌ಮೆಂಟ್ ಕೊಟ್ರು."

"ಮಿಲಿ, ಖರೇ ಹೇಳು, ಸೋನಿಯಾ ಚಿತ್ರಾ ತಗಿಯೋವಾಗ ನೀ ಏನು ಮಾಡತಾ ಇದ್ದಿ ?"

"ಅಮ್ಮಾ, ನಾ ಕೈಕಾಲು ಮುಖಾ ತೊಳಕೊಂಡು ಬರ್ತೀನಿ ಹ್ಞಾ" –ಅಂತ ಹೇಳಿ ಮಿಲಿ ಕಾಲು ಕಿತ್ತಳು. ನನ್ನ ಪ್ರಶ್ನೆಯ ಉತ್ತರ ನನಗೆ ಗೊತ್ತಾಗಿ ಬಿಟ್ಟಿತು.

ಮಿಲಿಯ ಆಪ್ತ ಗೆಳತಿ ಸೋನಿಯಾ. ತುಂಬ ತುಂಟಿ. ಓದಿನಲ್ಲಿ ಜಾಣೆ ಕೂಡ. ಬೋರ್ಡಿನ ಮೇಲೆ ಟೀಚರರ ಚಿತ್ರ ತೆಗೆಯುವುದು, ಆಯಾ ಟೀಚರರಿಗೆ ಹೊಂದುವಂಥ ಟೀಕೆ-ಟಿಪ್ಪಣಿ ಬರೆಯುವುದು, ಹಾಜರಿ ತೆಗೆದುಕೊಳ್ಳುವಾಗ ಪ್ರಾಕ್ಸಿ ಹೇಳುವುದು, ಟೀಚರನ್ನೇ ತಬ್ಬಿಬ್ಬು ಮಾಡುವಂಥ ಪ್ರಶ್ನೆ ಕೇಳುವುದು, ಕ್ಲಾಸಿನಲ್ಲಿ ಬೋರಾದರೆ ಟೇಪ್ ರಿಕಾರ್ಡರಿನಲ್ಲಿ ಕ್ಯಾಸೆಟ್ ಹಾಕಿ ಕೇಳುವುದು, ಹಿಂದಿನ ಬೆಂಚಿನಲ್ಲಿ ಕೂತು ಕಳ್ಳ ದನಿಯಲ್ಲಿ ಜೋಕ್ಸ್ ಹೇಳುತ್ತ ತಾನು ಗಂಭೀರವಾಗಿ ಕೂತು ಜೊತೆಯವರನ್ನು ನಗಿಸಿ ಅವರು ಬೈಯಿಸಿಕೊಳ್ಳುವಂತೆ ಮಾಡುವುದು –ಇವೆಲ್ಲ ಸೋನಿಯಾಳ ಪ್ರೀತಿಯ ಹವ್ಯಾಸಗಳು.

ಹುಡುಗಿಯರಷ್ಟೇ ಅಲ್ಲ, ಹುಡುಗರಿಗೂ ಸೋನಿಯಾನೇ ಲೀಡರ್. ಆಕೆಯೇ ಯಾವಾಗಲೂ ಕ್ಲಾಸಿನ ಮಾನಿಟರ್. ತನ್ನ ವಿರುದ್ಧ ಸೊಲ್ಲೆತ್ತುವ ಗಂಡು ಹುಡುಗರ ಹೆಸರುಗಳನ್ನು ಬ್ಲ್ಯಾಕ್ ಲಿಸ್ಟಿನಲ್ಲಿ ಸೇರಿಸಿ ಟೀಚರಿಂದ ಶಿಕ್ಷೆ ವಿಧಿಸುವುದೆಂದರೆ ಅವಳಿಗೆ ಬಹಳ ಇಷ್ಟ. ಎತ್ತರವಾಗಿ ಕಟ್ಟುಮಸ್ತಾಗಿದ್ದ ಆಕೆ ಹಲವಾರು ಬಾರಿ ಕ್ಲಾಸಿನಲ್ಲಿ ಫೈಟಿಂಗ್ ಮಾಡಿ ಹುಡುಗರನ್ನು ಸೋಲಿಸಿದ್ದೂ ಉಂಟು.

ಕ್ರೀಡಾಕೂಟಗಳಲ್ಲಿ, ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ಸಭೆ-ಮೆರವಣಿಗೆಗಳಲ್ಲಿ, ಸೋನಿಯಾ ಯಾವಾಗಲೂ ಮುಂಚೂಣಿಯಲ್ಲಿರುತ್ತಿದ್ದಳು. ಪರೀಕ್ಷೆಗಳಲ್ಲೂ ಅಷ್ಟೇ, ಮೊದಲ ರ್‍ಯಾಂಕು ತಪ್ಪಿದರೆ ಎರಡು ಅಥವಾ ಮೂರನೆಯ ರ್‍ಯಾಂಕು ಅವಳಿಗೆ ಸಿಕ್ಕೇ ಸಿಗುತ್ತಿತ್ತು. ಒಮ್ಮೆ ಮಿಲಿಯ ಕ್ಲಾಸಿನವರು ಕಾರವಾರಕ್ಕೆ ಟ್ರಿಪ್ ಹೋದಾಗ ಕಾಲುಜಾರಿ ನೀರಲ್ಲಿ ಮುಳುಗಿ ಹೋಗತೊಡಗಿದ್ದ ಕ್ಲಾಸ್ ಟೀಚರನ್ನು ಸೋನಿಯಾ ಈಜಿಕೊಂಡು ಹೋಗಿ ದಡಕ್ಕೆ ಎಳೆದು ತಂದಳು.

ಈ ಘಟನೆಯ ನಂತರವಂತೂ ಸೋನಿಯಾಳ ವೀರಗಾಥೆಗಳು ಹೊಸ ಬಣ್ಣವನ್ನೇ ಪಡೆದುಕೊಂಡವು. ಹುಟ್ಟಿನಿಂದ ರಜಪೂತಳಾದ ಆಕೆಯನ್ನು ಎಲ್ಲರೂ ಸ್ಟಂಟ್ ಕ್ವೀನ್ ಎಂದೇ ಕರೆಯತೊಡಗಿದ್ದರು.

ಮಿಲಿಗಂತೂ ಸೋನಿಯಾ ಬಗ್ಗೆ ವಿಪರೀತ ಅಭಿಮಾನ, ನನಗೂ ಅಷ್ಟೆ.

## ೨

ಮಿಲಿಯ ಒಂಬತ್ತನೆಯ ಇಯತ್ತೆಯ ಪರೀಕ್ಷೆ ಮುಗಿದು ಬೇಸಿಗೆಯ ರಜವೂ ಮುಗಿಯಲು ಬಂದಿತ್ತು. ಎಸ್. ಎಸ್. ಎಲ್. ಸಿ. ಗೆ ಹೋಗುವ ಸಂಭ್ರಮ. ಟ್ಯೂಶನ್ನುಗಳ ಭರಾಟೆ. ಭವಿಷ್ಯದ ಬಗ್ಗೆ ನೂರು ಆಸೆಗಳು, ಕನಸುಗಳು.

ರಜೆಯಿಡೀ ಸೋನಿಯಾಳ ಭೆಟ್ಟಿ ಆಗಿರಲಿಲ್ಲ. ಒಮ್ಮೆ ಹೋಗಿ ಬರುವೆ ಅನ್ನುತ್ತಿದ್ದಳು. ಆಗಲೇ ಸೋನಿಯಾಳಿಂದ ಫೋನ್ ಬಂತು– "ಈಗಿಂದೀಗ ಮನೆಗೆ ಬಾ, ಅರ್ಜೆಂಟ್. ಕೂಡಲೇ ಬಾ, ಪ್ಲೀಜ್".

ಮಿಲಿ ಖುಷಿಯಿಂದ ಅಲಂಕರಿಸಿಕೊಂಡು ತನ್ನ ದ್ವಿಚಕ್ರ ವಾಹನದಲ್ಲಿ ಆಗಿಂದಾಗ ಹೊರಹೋದಳು.

ನಾನು ಏನೋ ಓದುತ್ತಾ ಇದ್ದೆ. ಮೆಚ್ಚಿಕೊಂಡ ಪುಸ್ತಕಗಳನ್ನು ತಿರುತಿರುಗಿ ಓದಲು ಬೇಸಿಗೆಯ ರಜ ಒಳ್ಳೆಯ ಕಾಲ ಅಂದುಕೊಳ್ಳುತ್ತಾ ಇದ್ದೆ. ಸುಮಾರು ಎರಡು ತಾಸು ಕಳೆದಿರಬೇಕು. ಆಗ–

–ಆಗ ಮಿಲಿ ತಿರುಗಿ ಬಂದಳು.

ಕಣ್ಣೆಲ್ಲ ಅತ್ತು ಕೆಂಪಾಗಿದೆ. ಮುಖದ ಮೇಲಿನ ಕಳೆಯೇ ಬತ್ತಿಹೋಗಿದೆ. ಕೈಕಾಲಲ್ಲಿನ ಶಕ್ತಿ ಸೋರಿ ಹೋಗಿದೆ. ಒಳಗೆ ಬಂದವಳೇ ಸೋಫಾದಲ್ಲಿ ಕುಸಿದು ಕೂತಳು.

ನನಗೆ ಗಾಬರಿ. ಏನಾಯಿತೆಂದು ಕೇಳುವ ಮೊದಲೇ ಸೋತ ದನಿಯಲ್ಲಿ ಆಕೆ ಹೇಳಿದಳು. "ಅಮ್ಮಾ, ಸೋನಿಯಾಳ ಮದುವಿ ಮಾಡಿಬಿಟ್ಟಾರಮ್ಮಾ...."

'ಸೋನಿಯಾಳನ್ನು ಗಲ್ಲಿಗೆ ಏರಿಸಿಬಿಟ್ಟಾರಮ್ಮಾ' ಅನ್ನುವ ಧಾಟಿಯಲ್ಲಿ ಬಂತು ಆ ಮಾತು.

"ಏನಂದಿ ಮಿಲಿ ? ಮದುವಿ ಮಾಡ್ಯಾರಽ ? ಆ ಕೂಸಿಗೆ ? ಅದ್ಹ್ಯಾಂಗ ? ಇನ್ನೂ ಮೆಜಾರಿಟಿಗೇ ಬಂದಿಲ್ಲಲ್ಲ..." ಮಾತಾಡುತ್ತಿದ್ದಂತೆ ನನ್ನ ಮಾತಿನ ಅರ್ಥಹೀನತೆಯ ಅರಿವಾಗಿ ನಾನು ಒಮ್ಮೆಲೆ ಸುಮ್ಮನಾದೆ.

ಮಿಲಿ ಹೇಳತೊಡಗಿದಳು. ಹೇಳುತ್ತ ಹೇಳುತ್ತ ಹೋದಂತೆ ಅವಳ ದನಿಯಲ್ಲಿನ ನೋವು, ದಿಗ್ಭ್ರಮೆ, ಅಸಹಾಯಕತೆ ಮಾಯವಾಗಿ ಸಿಟ್ಟು, ಆಕ್ರೋಶ, ಸಂತಾಪ ಕಾಣತೊಡಗಿದವು.

ಸೋನಿಯಾ ಸಂಪ್ರದಾಯಸ್ಥ ರಜಪೂತ ಕುಟುಂಬದ ಹಿರಿಯ ಮಗಳು. ಸಿರಿವಂತ ವ್ಯಾಪಾರಿಯಾಗಿದ್ದ ಆಕೆಯ ತಂದೆಗೆ ಐವರು ಹೆಣ್ಣುಮಕ್ಕಳು. ರಾಜಸ್ಥಾನ ಬಿಟ್ಟು ಈ ಕಡೆ ಬಂದು ನೆಲೆಸಿ ಎರಡು ತಲೆಮಾರು ಕಳೆದವು. ಮನೆಯಲ್ಲಿ ಸೋನಿಯಾಳ

ಅಜ್ಜಿ, ವಿಧವೆ ಸೋದರತ್ತೆ, ಅಜ್ಜಿಯ ಅತ್ತೆ ಹೀಗೆ ಮೂವರು ಮುದುಕಿಯರು. ಹದಿನಾಲ್ಕು ವರ್ಷಕ್ಕೆ ಹುಡುಗಿಯ ಕೈ ಹಳದಿ ಮಾಡುವುದು ಸಂಪ್ರದಾಯ. ಹೆಚ್ಚು ಕಲಿತರೆ ಈ ಕಡೆ ಅವರ ಜಾತಿಯ ವರ ಸಿಗುವುದೇ ಇಲ್ಲ. ಹಿರಿಯ ಮಗಳದೇ ಮದುವೆಯನ್ನು ಸರಿಯಾದ ಕಾಲಕ್ಕೆ ಮಾಡದಿದ್ದರೆ ತಂಗಿಯರ ಗತಿಯೇನು ? ಎಲ್ಲ ರೀತಿಯಿಂದ ಯೋಚನೆ ಮಾಡಿ ಹಿರಿಯರು ನಿರ್ಧರಿಸಿದರು. ಮುಂಬಯಿಯಲ್ಲಿ ಪ್ರಸಿದ್ಧ ಬಿಜಿನೆಸ್‌ಮನ್ ಆಗಿದ್ದವರ ಮಗ. ಮ್ಯಾಟ್ರಿಕ್ ಫೇಲಾಗಿದ್ದರೇನಂತೆ, ಲಕ್ಷಾನುಗಟ್ಟಲೆ ಹಣ ಗಳಿಸುತ್ತಾನೆ. ಒಳ್ಳೆಯ ವರ, ಸೋನಿಯಾ ತಕರಾರು ಮಾಡುತ್ತಾಳೆ ಅಂತ ಗೊತ್ತಿತ್ತು. ಅವಳಿಗೆ ಹೇಳದೆಯೇ ಮದುವೆಯ ತಯಾರಿ ಮಾಡಿದರು. ನೆಂಟರ ಮನೆಗೆ ಹೋಗೋಣ ಅಂತ ಹೇಳಿ ಕರಕೊಂಡು ಹೋದರು. ಯಾರದೋ ಮದುವೆ ಅಂತ ಸುಳ್ಳು ಹೇಳಿದರು. ತನ್ನದೇ ಅಂತ ತಿಳಿದಾಗ ಪ್ರತಿಭಟಿಸಿದಳು, ಅತ್ತಳು, ಉಪವಾಸ ಕೂತಳು. ಕೂಡಿದ ಬಂಧುಗಳು ಬುದ್ಧಿ ಹೇಳಿದರು. ಅವಳ ಸ್ವಂತ ತಾಯಿ ನೀನು ಒಪ್ಪದಿದ್ದರೆ ವಿಷ ಕುಡಿದು ಸಾಯುತ್ತೇನೆಂದು ಬೆದರಿಕೆ ಹಾಕಿದಳು. ಸೋನಿಯಾಗೆ ದಿಕ್ಕೇ ತೋಚಲಿಲ್ಲ. ಮದುವೆ ನಡೆದೇ ಹೋಯಿತು. ಭಾರಿ ವೈಭವದ ಮದುವೆ.

ವೈಭವದ ಮದುವೆಯ ನಂತರ ಸಿಮ್ಲಾದಲ್ಲಿ ಒಂದು ತಿಂಗಳ ಹನಿಮೂನ್. ಅದಾದ ನಂತರ ಒಂದು ವಾರ ಇದ್ದು ಹೋಗಲು ಸೋನಿಯಾ ತವರಿಗೆ ಬಂದಿದ್ದಳು. “ಹ್ಯಾಂಗಿದ್ದಾಳ ಸೋನಿಯಾ ? ಏನಂತಾಳ ?” –ಉಗುಳು ನುಂಗಿ ಕೇಳಿದೆ.

“ಏನಂತಾಳಮ್ಮಾ ಪಾಪ, ಬರೇ ಅಳತಾಳ. ಸೊರಗಿ ಕಡ್ಡಿ ಆಗ್ಯಾಳ. ಮುಖದ ಮ್ಯಾಲ, ಕುತ್ತಿಗೀ ಮ್ಯಾಲ ನೀಲಿ ನೀಲಿ ಕಲೆ. ಮೈತುಂಬ ಬಂಗಾರ, ಜರೀ ಸೀರಿ, ಕಾಲೊಳಗೂ ಒಜ್ಜಾ-ಒಜ್ಜಾ ಚೈನು. ಎದ್ದು ತಿರಗ್ಯಾಡಲಿಕ್ಕೂ ಶಕ್ತಿ ಇಲ್ಲ ಆಕಿಗೆ. ಘೂಂಘಟ ಹಾಕ್ಕೊಂಡು ಕೂತಬಿಟ್ಟಾಳ. ಮಾತಾಡಿದರ ಕಣ್ಣಾಗ ನೀರು ಬರ್ತಾವ.” ಗೆಳತಿಯೊಂದಿಗೆ ತಾನೂ ಕಣ್ಣೀರು ಸುರಿಸಿ ಬಂದಿದ್ದ ಮಿಲಿಗೆ ನಿಜವಾಗಿ ಆಘಾತವಾಗಿತ್ತು.

ಸದಾ ನಗುತ್ತ ಜೋಕು ಮಾಡುತ್ತ ಕುಣಿಯುತ್ತಲೇ ಓಡಾಡುತ್ತಿದ್ದ ಸೋನಿಯಾಳ ಮುಖ ಕಣ್ಣೆದುರು ಬಂತು. ‘ಛೆ, ಅನ್ಯಾಯ’ ಅಂದುಕೊಂಡೆ.

೩

ಮತ್ತೆ ಒಂದು ವರ್ಷ ಕಳೆದಿತ್ತು. ಮಿಲಿ ಎಸ್. ಎಸ್. ಎಲ್. ಸಿ. ಯಲ್ಲಿ ತುಂಬ ಚೆನ್ನಾಗಿ ಮಾಡಿದ್ದಳು. ರಿಝಲ್ಟ್ ಬಂದ ದಿನವೇ ಸೋನಿಯಾ ಊರಿಗೆ ಬಂದ ಸುದ್ದಿ

ತಿಳಿದಿದ್ದರಿಂದ ಪೇಢೆ ತಗೊಂಡು ಗೆಳತಿಯನ್ನು ಕಾಣಲು ಹೊರಟಳು. ನಾನೂ ಜೊತೆಗೆ ಹೋದೆ.

ಸೋನಿಯಾ ತನ್ನ ಮೂರು ತಿಂಗಳ ಮಗುವನ್ನೆತ್ತಿಕೊಂಡು ನಗುತ್ತ ಕೂತಿದ್ದಳು. ಬಂಗಾರದೊಡವೆ ತೊಟ್ಟು ರೇಶಿಮೆ ಸೀರೆ ಉಟ್ಟು ಮಗುವಿಗೂ ಅಲಂಕಾರ ಮಾಡಿ ರಂಗು ರಂಗಿನ ಚಿತ್ತಾರದ ದುಪ್ಪಟಿಯಲ್ಲಿ ಮಗುವನ್ನು ಸುತ್ತಿ ಮಡಿಲಲ್ಲಿರಿಸಿಕೊಂಡು ಕೂತಿದ್ದಳು ಒಂದು ಸುಂದರ ಕಲಾಕೃತಿಯ ಹಾಗೆ. ಸೋನಿಯಾಳ ಮದುವೆ ಒಂದು ಟ್ರ್ಯಾಜಿಡಿ ಅಂದುಕೊಂಡು ಕಳೆದ ವರ್ಷವಿಡೀ ಅವಳಿಗಾಗಿ ಪರಿತಾಪ ಪಟ್ಟಿದ್ದು ನಮ್ಮದೇ ತಪ್ಪೇನೋ ಅನಿಸುವ ಹಾಗೆ. ಆಕೆಯ ತುಟಿಯಂಚಿನ ಮಂದಸ್ಮಿತ, ಕಣ್ಣಲ್ಲಿನ ಮಿಂಚು, ಮುಖದ ಮೇಲಿನ ದೈವೀಕಳೆ, ತಾಯ್ತನದ ಸೊಗಸು –ಎಲ್ಲ ಎಷ್ಟು ಚೆಂದ....

''ಹೇಗಿದ್ದೀ ಸೋನಿಯಾ ?'' ಅಂತ ಕೇಳುವುದೇ ತಡ, ಪಟಪಟ ಅರಳು ಹುರಿದಂತೆ ಮಾತಾಡಿದಳು. ಮೂರೇ ತಿಂಗಳಾಗಿದ್ದರೂ ಎಷ್ಟು ತುಂಟವಾಗಿದೆ ಮಗು. ತಾಯಿಯನ್ನು ನೋಡಿದರೆ ನಗುತ್ತದೆ, ಅಜ್ಜಿಯನ್ನು ನೋಡಿದರೆ ಅಳುತ್ತದೆ, ಹಾಲು ಬೇಕಾದಾಗ ಕೈಯೆತ್ತಿ ಚೀರುತ್ತದೆ, ನಿದ್ರೆ ಬಂದಾಗ ಹಾಡಿದರೇನೇ ಮಲಗುತ್ತದೆ, ರಾತ್ರಿಯಿಡೀ ಹಾಸಿಗೆ ಒದ್ದೆ ಮಾಡುವುದಿಲ್ಲ, ಎಲ್ಲ ಟೈಮಿಗೆ ಸರಿಯಾಗಿ ಆಗಬೇಕು, ಪಾಪ್ ಮ್ಯೂಜಿಕ್ ಹಾಕಿದರೆ ಅದಕ್ಕೆ ಬಹಳ ಖುಷಿ, ಆಹಾ, ಇಂತಹ ಅಪರೂಪದ ಮಗು ಬೇರೆಲ್ಲೂ ಇರಲಾರದು.... ಇರಲು ಹೇಗೆ ಸಾಧ್ಯ ?

''ನಾ ಈಗ ಭಾಳ ಹ್ಯಾಪಿ ಇದ್ದೀನಿ ಆಂಟಿ, ದಿನಾ ಹ್ಯಾಂಗ ಕಳೀತದಂತ ಗೊತ್ತ ಆಗೋದಿಲ್ಲ ಈ ಪಾಪೂನ ತುಂಟಾಟದಾಗ....''

'ನೀನು ಹೀಗೆಯೇ ಸುಖವಾಗಿರು, ನಗುನಗುತ್ತ ಇರು, ನಿನಗೆ ಒಳ್ಳೆಯದಾಗಲಿ' ಅಂತ ಹರಸಿ ಬಂದೆ.

* * *

ಆ ರಾತ್ರಿ ತಿರುತಿರುಗಿ ನನಗೆ ಮಾಸ್ತಿಯವರ ''ಸರಸಿಯ ಗೊಂಬೆ'' ನೆನಪಾಗತೊಡಗಿತು. 'ಒಬ್ಬ ಪುಟ್ಟ ಹುಡುಗನೆಂದರೆ ಪುಟ್ಟ ಹುಡುಗನೇ. ಒಬ್ಬ ಪುಟ್ಟ ಹುಡುಗಿ ಮಾತ್ರ ಒಬ್ಬ ಪುಟ್ಟ ತಾಯಿಯಾಗಿರುತ್ತಾಳೆ'. ಎಂತಹ ಜೀವನ ದರ್ಶನ !

ನನಗೆ ನಿದ್ರೆ ಬರಲಿಲ್ಲ. ಇವರಾಗಲೇ ಗೊರಕೆ ಹೊಡೆಯತೊಡಗಿದ್ದರು. ನಾನು ಚಿಕ್ಕಂದಿನಲ್ಲಿ ಬಹುವಾಗಿ ಮೆಚ್ಚಿಕೊಂಡಿದ್ದ ಸರಸಿಯ ಗೊಂಬೆಯ ಕತೆಯನ್ನು ಮಿಲಿಗೆ ಹೇಳೋಣವೆಂದುಕೊಂಡು ಅವಳ ಕೋಣೆಗೆ ಹೋದೆ.

ಟೇಬಲ್ ಲ್ಯಾಂಪ್ ಉರಿಯುತ್ತಿತ್ತು. ಮಿಲಿಯ ಎದುರಿಗೆ ಪುಸ್ತಕವಿತ್ತು.

ಆದರೆ ಆಕೆ ಓದುತ್ತಿರಲಿಲ್ಲ. ನಾನು ಹೋಗಿ ಅವಳ ಹೆಗಲ ಮೇಲೆ ಮೃದುವಾಗಿ ಕೈಯಿಟ್ಟಾಗ ತಟ್ಟನೆ ತಲೆಯೆತ್ತಿ ಏನೂ ಪೀಠಿಕೆಯಿಲ್ಲದೆ, ಬಹುಶಃ ಬಹಳ ಹೊತ್ತಿನಿಂದ ಅವಳ ಮನಸ್ಸಿನಲ್ಲಿ ತಾಕಲಾಡತೊಡಗಿದ್ದ ಆ ಪ್ರಶ್ನೆಯನ್ನು ಕೇಳಿದಳು.

''ಅವ್ವಾ, ಸ್ಕೂಲಿನ್ಯಾಗ ಒಂಬತ್ತು ವರ್ಷ ಸೋನಿಯಾ ನನ್ನ ಕ್ಲಾಸ್‌ಮೇಟಾಗಿದ್ದಳು. ನಿನಗೆ ಗೊತ್ತಲ್ಲ ? ಕರಿಯರ್ ಸಲುವಾಗಿ ಎಷ್ಟು ಕನಸು ಇದ್ದವು ಆಕಿಗೆ ! ನಾವಿಬ್ರೂ ಡಾಕ್ಟರ್ ಆಗೋಣ, ನಮ್ಮ ದೇಶದ ಬಡಜನರ ಸೇವಾ ಮಾಡೋಣ ಅಂದುಕೋತಿದ್ವಿ ನಾವು. ಅಂಥಾ ಹುಡುಗಿನ್ನ ಈ ಥರಾ ಟ್ರಾನ್ಸ್‌ಫಾರ್ಮ್ ಮಾಡಿ ಆಕಿಯ ವ್ಯಕ್ತಿತ್ವವನ್ನೇ ಕೊಲೆ ಮಾಡ್ಯಾರಲ್ಲಮ್ಮಾ, ಈ ಅನ್ಯಾಯಕ್ಕ ಯಾರು ಜವಾಬ್ದಾರರು ?''

ನಾನು ಸುಮ್ಮನಿದ್ದೆ.

''ಹೊತ್ತು ಭಾಳ ಆಗೇದ ಮಿಲಿ, ಮಲಕೋ'' ಅಂತ ಹೇಳಿ ಹೊರಟು ಬಂದೆ.

ನಾನೆಂದೂ ಸರಸಿಯ ಗೊಂಬೆಯ ಕತೆಯನ್ನು ಮಿಲಿಗೆ ಹೇಳಲೇ ಇಲ್ಲ.

❖ ❖ ❖

# ಸಮಾಧಾನ

೧

ಆ ತಾಲೂಕಿನಲ್ಲಿ ಕೆಲವರ್ಷಗಳ ಹಿಂದೆಯಷ್ಟೆ ಶುರುವಾಗಿದ್ದ ಸರಕಾರಿ ಹೈಸ್ಕೂಲಿಗೆ ವರ್ಗವಾಗಿ ಅವಳು ಬಂದಿದ್ದಳು. 'ಹೊಸ ಊರು. ಬಸ್ ಪ್ರವಾಸ. ಎಲ್ಲ ಹೇಗೋ ಏನೋ. ಒಂದು ತಿಂಗಳು ರಜಾ ಹಾಕು. ಅಷ್ಟರಲ್ಲಿ ನನ್ನದೂ ಟ್ರಾನ್ಸ್‌ಫರ್ ಆರ್ಡರ್ ಬರುತ್ತದೆ. ಇಬ್ಬರೂ ಕೂಡಿಯೇ ಹೋಗೋಣ....' ಅಂತ ಬಹಳ ಹೇಳಿದ್ದ ಅವಳ ಗಂಡ. ಅವಳು ಕೇಳಿರಲಿಲ್ಲ ; ಹೇಗೂ ಮಾವಶಿ ಅದೇ ಊರಲ್ಲಿದ್ದಾಳೆ. ಅವಳ ಮನೆಯೂ ದೊಡ್ಡದಿದೆ. ಅದರಲ್ಲೇ ಮೂರು ರೂಮ್ಸು ಕೊಡುವೆನೆಂದು ಹೇಳಿಯೇ ಬಿಟ್ಟಿದ್ದಾಳಲ್ಲ. ಸುಮ್ಮನೆ ರಜಾ ಹಾಳು ಮಾಡುವುದೇಕೆ ? ನಾನು ಹೋಗುತ್ತೇನೆ. ನೀವು ನಿಮ್ಮ ಆರ್ಡರು ತಗೊಂಡೇ ಬರ್ರಿ. ನನ್ನ ಸಲುವಾಗಿ ಕಾಳಜಿ ಬೇಡ –ಅಂತ ಹೇಳಿ ಎರಡು ಸೂಟ್‌ಕೇಸ್ ತಗೊಂಡು ಹೊರಟು ಬಂದೇಬಿಟ್ಟಿದ್ದಳು. 'ಜೋಕೆಯಿಂದ ಹೋಗು ರಜನೀ, ಹೋದಕೂಡಲೇ ಟೆಲಿಗ್ರಾಮ್ ಕೊಡು. ದಿನಾ ಪತ್ರ ಬರೆ' –ಅಂತ ತಾಕೀತು ಮಾಡಿ ಕಳಿಸಿದ್ದ ಆತ.

ಅಲ್ಲ, ತಾನೇನು ಸಣ್ಣ ಹುಡುಗಿಯೆ ? ಅಥವಾ ತಿಳಿವಳಿಕೆಯಿಲ್ಲದ, ಅಂಜುಬುರುಕ, ಕೈಲಾಗದ, ಅವಲಂಬೀ ಹೆಂಗಸೆ ? ಗಂಡನಿಲ್ಲದೆ ಪರಊರಲ್ಲಿ, ಅದೂ ಮಾವಶಿಯ ಮನೆಯಿರುವ, ಅಷ್ಟು ದೊಡ್ಡದೂ ಅಲ್ಲದ ಇಂಥ ಊರಲ್ಲಿ, ಒಂದು ತಿಂಗಳ ಮಟ್ಟಿಗೆ ಒಬ್ಬಳೇ ಇರುವುದು ತನಗೆ ಆಗುವುದಿಲ್ಲವೆ ? ಗಂಡ-ಹೆಂಡತಿ ಇಬ್ಬರೂ ನೌಕರಿಯಲ್ಲಿದ್ದಾಗ ಇಂಥ ಪ್ರಸಂಗಗಳು ಆಗಾಗ ಬರತಕ್ಕವೇ. ತನ್ನ ಗಂಡ ಬಹಳ ಸೆಂಟಿಮೆಂಟಲ್ ಅನಿಸಿತು ಅವಳಿಗೆ.

ಹಾಗೆ ನೋಡಿದರೆ ಲಗ್ನವಾದ ನಂತರದ ಇಡೀ ಎರಡು ವರ್ಷ ಆತ ಅವಳನ್ನೆಂದೂ ಒಬ್ಬಳನ್ನೇ ಎಲ್ಲಿಯೂ ಕಳಿಸಿರಲಿಲ್ಲ. ಈ ಸ್ವಾತಂತ್ರ್ಯ, ಬಹಳ ದಿನಗಳ ನಂತರ ಹೀಗೆ ಯಾವ ಎಗ್ಗಿಲ್ಲದೆ ದಾರಿಯಲ್ಲಿ ಬೇಕಾದ ಕಡೆ ನೋಡುತ್ತ ನಡೆಯುವ ಸ್ವಾತಂತ್ರ್ಯ ಅವಳಿಗೆ ಪ್ರಿಯವೆನಿಸುತ್ತಿದೆ. ಹಳೆಯ ಸಾಹಸಗಳ ನೆನಪಾಗುತ್ತಿದೆ. ಈಗ ಮತ್ತೆ ಸಾಮರ್ಥ್ಯ ಪರೀಕ್ಷೆ ಮಾಡಿಕೊಳ್ಳಬಾರದೇಕೆ ಅನಿಸುತ್ತಿದೆ. ಒಂದು ಥರಾ ಸುಖೀ ಆತ್ಮವಿಶ್ವಾಸದ ಅನುಭವವಾಗುತ್ತಿದೆ.

ಹೈಸ್ಕೂಲು ಹೊಸದು. ಜನ ಹೊಸಬರು. ಖರೆ. ಆದರೆ ತನಗೇನೂ ಅದರಿಂದ ತೊಂದರೆಯಾಗಲಾರದು. ತಾನು ಹೋದ ತಕ್ಷಣ ಎಲ್ಲರೂ ಎಲ್ಲ ರೀತಿಯಿಂದ ತನಗೆ ಎಲ್ಲ ನೆರವು ನೀಡಲು ಮುಂದೆ ಬರುವುದು ನಿಶ್ಚಯ. ಹೊಸ ಪ್ರಿನ್ಸಿಪಾಲರು 'ನಿಮಗೇನಾದರೂ ಬೇಕಿದ್ದರೆ ನನಗೆ ಹೇಳ್ರಿ ಮಿಸೆಸ್ ನಾಯಕ್, ಯಾತಕ್ಕೂ ಸಂಕೋಚಪಡಬೇಕಾಗಿಲ್ಲ'. ಅನ್ನುವುದರಲ್ಲಿ ಸಂಶಯವಿಲ್ಲ. ಸಹೋದ್ಯೋಗಿ ಶಿಕ್ಷಕರು 'ನಿಮಗೆ ಬೇಕಾದ ಪೀರಿಯಡ್ಸ್ ತಗೊಳ್ರಿ ಮಿಸೆಸ್ ನಾಯಕ್, ನಿಮ್ಮ ಅನುಕೂಲ ಮುಖ್ಯ' –ಅಂತ ತನ್ನನ್ನು ಪ್ರಸನ್ನಗೊಳಿಸಲು ಒದ್ದಾಡುವುದೂ ನಿರೀಕ್ಷಿತವೇ. ಹುಡುಗರು-ಹುಡುಗಿಯರಂತೂ ಒಂದೆರಡು ವಾರಗಳ ನಂತರ 'ನಮಗೆ ನಾಯಕ ಮ್ಯಾಡಮ್ ಅವರೇ ಬೇಕು' ಅಂತ ಸ್ಟ್ರೈಕ್ ಮಾಡಿದರೂ ಮಾಡಿದರೇ. ಶಿಕ್ಷಕಿಯರ ಅಸೂಯೆಯನ್ನು ಮಾತ್ರ ತಾನು ಎದುರಿಸಬೇಕಾಗಬಹುದು. ಆದರೆ ಅದೇನೂ ತನಗೆ ಸಮಸ್ಯೆಯಾಗಲಾರದು.

* * *

ಜೊತೆಯ ಹೆಂಗಸರ ಅಸೂಯೆ ತಾನು ಮೊದಲಿನಿಂದಲೂ ಕಂಡು ಅನುಭವಿಸಿ ಆನಂದಿಸಿದ್ದು. ಚಿಕ್ಕವಳಿದ್ದಾಗ ಸ್ಕೂಲಿನಲ್ಲಿ ಜೊತೆಯ ಹುಡುಗಿಯರು ತನ್ನ ರೂಪಕ್ಕಾಗಿ, ತನ್ನ ಮೊದಲ ರ್‍ಯಾಂಕಿಗಾಗಿ, ಬ್ಯಾಡ್ಮಿಂಟನ್ ಚ್ಯಾಂಪಿಯನ್‌ಶಿಪ್‌ಗಾಗಿ, ಗಂಡುಹುಡುಗರೊಂದಿಗಿನ ಸ್ನೇಹಕ್ಕಾಗಿ ಅಸೂಯೆ ಪಟ್ಟರು. ಕಾಲೇಜಿನಲ್ಲೂ ಅದೇ ಹಾಡಿನ ಪುನರಾವರ್ತನೆ. ಮಜವಾಗಿದ್ದವು ಆ ದಿನಗಳು. ನಂತರ ಟ್ರೇನಿಂಗ್ ಕಾಲೇಜಿನಲ್ಲೂ ಅಷ್ಟೆ. ಗವ್ರ್ನರ್ಮೆಂಟ್ ಹೈಸ್ಕೂಲಿನಲ್ಲಿ ನೌಕರಿಗೆ ಸೇರಿದಾಗಲೂ ಅಷ್ಟೆ. ತಾನು ಹೋದ ಕಡೆಯಲ್ಲೆಲ್ಲ ಜನರ ಕಣ್ಣು ಹೊರಳುವುದು, ತನ್ನ ಎರಡು ಮಾತಿನಿಂದ ಜನರ ಕಣ್ಣು ಅರಳುವುದು, ಅಭ್ಯಾಸವಾಗಿಹೋಗಿಬಿಟ್ಟಿದೆ. ಲಗ್ನವಾದ ನಂತರವೂ ಈ ಥರದ ಮುಕ್ತ ಪ್ರಶಂಸೆಗೆ ತಾನು ಎರವಾಗಿಲ್ಲ. ಸರಕಾರಿ ಕಾಲೇಜಿನಲ್ಲಿ ಕೆಮಿಸ್ಟ್ರಿ ರೀಡರ್ ಆಗಿರುವ ಗಂಡನಿಗೆ ತನ್ನ ಬಗ್ಗೆ ಬಹಳ ಅಭಿಮಾನ. ಆತನೂ ತನ್ನ ಪ್ರಶಂಸಕನೇ. ಒಮ್ಮೊಮ್ಮೆ ಆತನ ಪ್ರಶಂಸೆ ಬೋರ್ ಆಗುತ್ತದಷ್ಟೆ.

ಈಗ- ಹೀಗೆ ಯಾರೂ ಕಾಣದ ಹೊಸ ಊರಿಗೆ- ಹೊಸ ಜಾಗಕ್ಕೆ ಬಂದು ಸೇರಿರುವುದು ಅದಕ್ಕೇ ಮಜವೆನಿಸುತ್ತಿದೆ. 'ಇವತ್ತಿನ್ನೂ ಬಂದಿರುವಿ ರಜನೀ, ರೆಸ್ಟ್ ತಗೋ. ನಾಳೆ ಹೋಗಿ ಕೆಲಸಕ್ಕೆ ಹಾಜರಾಗುವಿಯಂತೆ' –ಅಂತ ಮಾವಶಿ ಎಷ್ಟು ಹೇಳಿದರೂ ಕೇಳದೆ ಹುರುಪಿನಿಂದ ಹೊರಟಿದ್ದಾಳೆ.

* * *

"ಪ್ರಿನ್ಸಿಪಾಲರ ಹತ್ತಿರ ವರ್ಮಾಬಾಯಿಯವ್ರು ಮಾತಾಡತಾ ಇದ್ದಾರೆ. ಸ್ವಲ್ಪ

ವೇಟ್ ಮಾಡ್ರಿ" –ಅಂತ ಕ್ಲಾರ್ಕ್ ತನ್ನ ಟೇಬಲಿನಿಂದ ತಲೆಯೆತ್ತದೇ ಹೇಳಿದಾಗ ಅವಳಿಗೆ ಸ್ವಲ್ಪ ನಿರಾಶೆಯಾಯಿತು. ಒಂದೇ ಕ್ಷಣ. ಇನ್ನು ಈ ಪ್ರಿನ್ಸಿಪಾಲರನ್ನು, ಇಡೀ ಹೈಸ್ಕೂಲನ್ನು, ಅದರ ಮೇಲಿನವರನ್ನು ಸಹ, ತನ್ನ ಕೂಡ ಮಾತಾಡಲು ವೇಟ್ ಮಾಡಹಚ್ಚಿದಾಗ ಈ ನರೆತಲೆಯ ಕ್ಲಾರ್ಕ್‌ನಿಗೆ ತನ್ನ ಕಿಮ್ಮತ್ತು ತಿಳಿಯುವುದೆಂದು ಆಕೆ ಸಮಾಧಾನ ಹೇಳಿಕೊಂಡಳು. ಐದು ನಿಮಿಷ, ಹತ್ತು ನಿಮಿಷ. ಅವಳ ಸಹನೆ ಮೀರುತ್ತ ಬಂತು. ಅವಳಿಗೆ ನೆನಪಿರುವ ಹಾಗೆ ಅವಳೆಂದೂ ಯಾರಿಗೂ ಕಾಯ್ದುದಿಲ್ಲ. ಇನ್ನು ಈ ಪ್ರಿನ್ಸಿಪಾಲನದೇನು ? ಇವಳ್ಯಾವಳು ವರ್ಮಾಬಾಯಿ ಇಷ್ಟೊತ್ತು ಮಾತಾಡುವವಳು ? ತಾನೊಮ್ಮೆ ಒಳಗೆ ಹೋದರೆ ಅವಳಲ್ಲಿಂದ ಹೊರಡಬೇಕಾಗುವುದು ಖಂಡಿತ ; ಹೋಗಿಯೇ ಬಿಟ್ಟರೇನು –ಅಂತ ಅವಳಂದುಕೊಳ್ಳುವಷ್ಟರಲ್ಲಿ ಅವಳ ಹೆಸರಿನ ಕಾರ್ಡನ್ನು ಪ್ರಿನ್ಸಿಪಾಲರ ಕಡೆ ಒಯ್ದಿದ್ದ ಪ್ಯೂನ್ ಹೊರಬಂದು ಅವಳಿಗೆ ಪ್ರಿನ್ಸಿಪಾಲರ ಸಂದೇಶವಿದ್ದ ಚೀಟಿ ಕೊಟ್ಟನು. ಆಫೀಸಿಗೆ ಹೋಗಿ ಜಾಯಿನಿಂಗ್ ರಿಪೋರ್ಟ್ ಕೊಡಲು ಅವರು ತಿಳಿಸಿದ್ದರು. ಅವಳಿಗೆ ಸಿಟ್ಟು ಬಂದಿತು. ಹೊಸದಾಗಿ ಬಂದಾಕೆಯ ಮುಖ ಸಹ ನೋಡದೆ ಹೀಗೆ ಹೇಳಿ ಕಳಿಸುವುದೆ ? ಅಂಥದೇನು ಏಕಾಂತ ನಡೆದಿದ್ದೀತು ಇವರದು ? ಪ್ರಿನ್ಸಿಪಾಲರ ರೂಮಿನ ತೂಗುಬಾಗಿಲ ಸಂದಿಯಿಂದ ಅವಳಿಗೆ ಕಂಡದ್ದು ವರ್ಮಾಬಾಯಿಯ ದೊಡ್ಡ ತುರುಬು, ಗುಲಾಬಿ ಜಾರ್ಜೆಟ್ ಸೀರೆ. ಹೋಗಲಿ, ರಿಪೋರ್ಟ್ ಮಾಡಿಕೊಳ್ಳುವುದು ಎಷ್ಟು ಹೊತ್ತಿನ ಕೆಲಸ, ಆ ಮೇಲೆ ನೋಡೋಣ ಒಂದು ಕೈ, ಅಂತ ಅವಳು ಆಫೀಸಿನ ಕಡೆ ನಡೆದಳು.

* * *

ಆಕೆ ಸ್ಟಾಫ್ ರೂಮಿಗೆ ಹೋದಾಗ ಒಂದೆಡೆ ಬಹಳಷ್ಟು ಶಿಕ್ಷಕರು-ಶಿಕ್ಷಕಿಯರು ಗುಂಪಾಗಿ ಕೂಡಿದ್ದು ಕಾಣಿಸಿತು. ಕೆಲವರು ನಿಂತು, ಕೆಲವರು ಕೂತು, ಕೆಲವರು ಅರ್ಧಮರ್ಧ ಕೂತಹಾಗೆ ಬಾಗಿ, ತುಂಬ ಆಸಕ್ತಿಯಿಂದ ತುಂಬ ಕುತೂಹಲದಿಂದ, ಕೌತುಕದಿಂದ ಕೇಳುತ್ತಿದ್ದರು. ಯಾರದು ಇಷ್ಟೊಂದು ಜನರ ಲಕ್ಷ್ಯವನ್ನು ಹಿಡಿದಿಟ್ಟುಕೊಂಡು ಮಾತಾಡುವುದೆಂದು ಅವಳು ಬಾಗಿ ನೋಡಿದರೆ– ಓಹ್, ದೊಡ್ಡ ತುರುಬು, ಗುಲಾಬಿ ಜಾರ್ಜೆಟ್ ಸೀರೆ, ವರ್ಮಾಬಾಯಿಯ ಹಿಂಭಾಗ. ತುಂಬ ಸ್ಟೈಲಿಶ್ ಆದ ಇಂಗ್ಲೀಷ್‌ನಲ್ಲಿ ಅದೇನೇನೋ ಹೇಳುತ್ತಿದ್ದಳು. ಎಲ್ಲರೂ ನಕ್ಕೇ ನಕ್ಕರು. ನಕ್ಕೇ ನಕ್ಕರು. ಹೊಸದಾಗಿ ಬಂದಾಕೆಯ ಕಡೆಗೆ ಅವರು ಯಾರೂ ತಿರುಗಿ ಸಹ ನೋಡಲಿಲ್ಲ.

* * *

ಒಂಬತ್ತನೆ ತರಗತಿಯ ಬಿ ಡಿವ್ಹಿಜನ್ನಿಗೆ ಆಕೆ ಹೋದಾಗ ತಟ್ಟನೆ ಎದ್ದು ನಿಂತ

ಹುಡುಗರು-ಹುಡುಗಿಯರು ಪ್ರಶ್ನಾರ್ಥಕವಾಗಿ ಆಕೆಯನ್ನು ಕಣ್ಣರಳಿಸಿ ನೋಡಿದರು. ವಿದ್ಯಾರ್ಥಿಗಳು ತನ್ನನ್ನು ನೋಡುವಾಗೆಲ್ಲ ಅವರ ಎಳೆಯ ಕಣ್ಣುಗಳಲ್ಲಿ ಸುವ್ಯಕ್ತವಾಗುವ ಮೆಚ್ಚುಗೆಯ ಅಭ್ಯಾಸವಾಗಿದ್ದ ಅವಳಿಗೆನಿಸಿತು – ಈ ವಿದ್ಯಾರ್ಥಿಗಳ ಮೆಚ್ಚುಗೆಯನ್ನ ಮೊದಲು ಗಳಿಸಬೇಕು, ಉಳಿದವರದು ಎಷ್ಟು ಹೊತ್ತಿನ ಕೆಲಸ....

“ನಾನು ರಜನಿ ನಾಯಕ್, ಇನ್ನು ಮೇಲೆ ನಾನು ನಿಮಗೆ ಸಾಮಾನ್ಯ ವಿಜ್ಞಾನ ಹೇಳುತ್ತೇನೆ–”

“ಇನ್ನು ಮೇಲೆ ? ಅಂದರೆ ದಿನಾಲು ?” – ಮುಂದಿನ ಬೆಂಚಿನ ಹುಡುಗ ತಟ್ಟನೆ ಕೇಳಿದ.

“ಹೌದು, ದಿನಾಲು” – ಆಕೆ ಆತ್ಮವಿಶ್ವಾಸದ ಮುಗುಳ್ನಗೆಯೊಂದಿಗೆ ಹೇಳಿದಳು. ಕ್ಲಾಸಿನಲ್ಲಿ ಒಮ್ಮೆಲೆ ಹಲವಾರು ಅಸಮಾಧಾನದ ಧ್ವನಿಗಳೆದ್ದವು : “ಯಾಕೆ ? ವರ್ಮಾ ಮ್ಯಾಡಮ್‌ಗೆ ಏನಾಯಿತು ?” “ಇಷ್ಟು ದಿನ ಅವರೇ ಬರುತ್ತಿದ್ದರಲ್ಲ, ಈಗೇಕೆ–”, “ವರ್ಮಾ ಮ್ಯಾಡಂ ಯಾಕೆ ಬರೋದಿಲ್ಲ ?”, “ವರ್ಮಾ ಮ್ಯಾಡಂ–”

–“ಸಾಯ್‌ಲೆನ್ಸ್ !” ಎಂದಾಕೆ ರೂಲುಕಟ್ಟಿಗೆಯಿಂದ ಟೇಬಲಿನ ಮೇಲೆ ಮೂರು ನಾಲ್ಕು ಬಾರಿ ಕುಟ್ಟಿದಾಗಲೇ ಹುಡುಗರು ಸುಮ್ಮನಾದರು. ಆದರೂ ಅವರ ಅತೃಪ್ತಿಯ ಗುಸುಗುಸು ನಿಲ್ಲಲೇ ಇಲ್ಲ.

* * *

ಆ ರಾತ್ರಿ ರಜನಿ ಗಂಡನಿಗೆ ಪತ್ರ ಬರೆದಳು : “ನಾನು ಸುರಕ್ಷಿತ ಬಂದು ಮುಟ್ಟಿದೆ. ಮಾವಶಿಯ ಮನೆ ಚೆನ್ನಾಗಿದೆ. ಇವತ್ತು ಡ್ಯೂಟಿಗೆ ರಿಪೋರ್ಟ್ ಮಾಡಿದೆ. ಯಾಕೋ ಇಲ್ಲಿನ ಹೈಸ್ಕೂಲ್, ಪ್ರಿನ್ಸಿಪಾಲರು, ಟೀಚರ್ಸ್ಸು, ಹುಡುಗರು, ನನಗೆ ಅಷ್ಟು ಹಿಡಿಸಲಿಲ್ಲ. ಮೊದಲ ದಿನವೆಂದು, ಅದೂ ನಿಮ್ಮನ್ನು ಬಿಟ್ಟು ಬಂದಿರುವೆನೆಂದು, ಹೀಗನಿಸುತ್ತಿರಬಹುದು. ಕ್ರಮೇಣ ಎಲ್ಲ ಸರಿಹೋಗುವುದರಲ್ಲಿ ಸಂಶಯವಿಲ್ಲ.”

* * *

## ೨

ಮರುದಿನ ಆಕೆ ಹೈಸ್ಕೂಲಿಗೆ ಹೋದಾಗ ಮೊದಲ ಗಂಟೆಯಾಗಿ ಪ್ರಾರ್ಥನೆ ನಡೆದಿತ್ತು. ಎಲ್ಲರೂ ಸಾಲಾಗಿ ನಿಂತಿದ್ದರು. ಆಕೆಯೂ ಹಿಂದಿನ ಸಾಲಿಗೆ ಹೋಗಿ ಎಲ್ಲರ ಬೆನ್ನುಗಳನ್ನು ಪರೀಕ್ಷಿಸುತ್ತ ನಿಂತಳು. ಆಕೆಯೆಂದೂ ಪ್ರಾರ್ಥನೆಯ ಹಾಡನ್ನು ಹಾಡುತ್ತಿರಲಿಲ್ಲ. ಆಕೆಗೆ ಪ್ರಾರ್ಥನೆಯಲ್ಲಿ ನಂಬಿಕೆ ಇರಲಿಲ್ಲ. ಆದರೆ ಇಂದು ಇದ್ದಕ್ಕಿದ್ದಂತೆ ಅವಳಿಗೆ ಪ್ರಾರ್ಥನೆಯ ಹಾಡು ಬಹಳ ಇಂಪಾಗಿ ಕೇಳಿಸಿತು. ಅವಳು

ಲಕ್ಷ್ಯ ಕೊಟ್ಟು ಕೇಳಿದಳು. ಹೌದು ತೀರಾ ಎದುರಿನ ಸಾಲಿನಿಂದ ಬಹಳ ಇಂಪಾದ ದನಿಯೊಂದು ಪ್ರಾರ್ಥನೆಯ ಹಾಡಿನ ಒಂದೊಂದೇ ಸಾಲನ್ನು ಬಹಳ ಭಾವಪೂರಿತವಾಗಿ ಹೇಳುತ್ತಿತ್ತು. ಉಳಿದವರು ಅನುಸರಿಸುತ್ತಿದ್ದರು. ಆಕೆ ಕಾಲೆತ್ತರಿಸಿ ನೋಡಿದಳು– ಹಾಡುತ್ತಿರುವಾಕೆ ವರ್ಮಾಬಾಯಿ. ಇನ್ನೂ ಕಾಲೆತ್ತರಿಸಿ ನೋಡಿದಾಗ ಆಕೆಗೆ ವರ್ಮಾಬಾಯಿಯ ಮುಖ ಮೊದಲ ಬಾರಿ ಪೂರಾ ಕಾಣಿಸಿತು. ಆಕೆಗೆ ಒಮ್ಮೆಲೆ ಅಸ್ವಸ್ಥತೆಯೆನಿಸಿತು. ಈ ವರ್ಮಾಬಾಯಿಯ ಮುಖ ಇಷ್ಟು ಕೋಮಲವಾಗಿ, ಸುಂದರವಾಗಿ, ಆಕರ್ಷಕವಾಗಿ ಇರಲು ಹೇಗೆ ಸಾಧ್ಯ ? ಬಹುಶಃ ದೂರದಿಂದ ಮಾತ್ರ ಹೀಗೆ ಕಾಣುತ್ತಿರಬಹುದು. ಬಹುಶಃ ಅದು ಅತಿಯಾದ ಮೇಕಪ್ ಇರಬಹುದು. ಬಹುಶಃ ಬಿಸಿಲಿನಲ್ಲಿ ನಡೆದುಬಂದುದರಿಂದ ತನಗೇ ಕಣ್ಣು ಸರಿಯಾಗಿ ಕಾಣದಂತಾಗಿವೆಯೋ ಏನೋ. ಬಹುಶಃ....

* * *

"ಸರ್, ಇದು ನಾಳಿನ ಸ್ವಾತಂತ್ರ್ಯ ದಿನೋತ್ಸವದ ಪ್ರೋಗ್ರ್ಯಾಮಿನ ಡೀಟೇಲಾದ ಪ್ಲ್ಯಾನು. ನಾನು ಮೊದಲು ಇದ್ದೆನಲ್ಲ, ಆ ಸ್ಕೂಲಿನಲ್ಲಿ ಎಲ್ಲಾ ಎಕ್‌ಸ್ಟ್ರಾ ಕರಿಕ್ಯುಲರ್ ಆ್ಯಕ್ಟಿವ್ಹಿಟೀಜ್‌ನ ಪ್ಲ್ಯಾನೂ ನಾನೇ ಮಾಡುತ್ತಿದ್ದೆ. ಎಲ್ಲ ಕಾಂಪಿಟೇಶನ್ಸ್‌ದಲ್ಲೂ ನನ್ನ ಬ್ಯಾಚಗೇ ಫಸ್ಟ್ ಪ್ರೈಜ್ ಬರ್‍ತಿತ್ತು. ಇದು ನೋಡ್ರಿ ಸರಿಯಾಗಿದೆಯೆ ಅಂತ. ನೀವು ಹೇಳಿದರೆ ಟೀ ಪಾರ್ಟಿಯ ವ್ಯವಸ್ಥೆಯನ್ನೂ ನಾನು ನೋಡಿಕೊಳ್ಳುತ್ತೇನೆ" –ತುಂಬ ಸಿಂಗಾರಾಗಿ ಸ್ಕೂಲಿಗೆ ಬಂದಿದ್ದ ಆಕೆ ಬಂದೊಡನೆ ಪ್ರಿನ್ಸಿಪಾಲರನ್ನು ಅವರ ರೂಮಿನಲ್ಲಿ ಕಂಡು ಮಾತನಾಡಿದಳು. ಆತ ಫೈಲಿನಲ್ಲಿ ಮುಖವಿಟ್ಟುಕೊಂಡೇ ಹೇಳಿದರು, "ನೀವು ಮಿಸೆಸ್ ವರ್ಮಾ ಅವರನ್ನು ಕನ್ಸಲ್ಟ್ ಮಾಡ್ರಿ. ಈ ವಿಷಯಗಳಲ್ಲೆಲ್ಲ ಅವರು ಎಕ್ಸ್‌ಪರ್ಟ್. ಅವರು ಹ್ಞೂ ಅಂದರೆ ಮುಗಿಯಿತು."

* * *

ಸ್ವಾತಂತ್ರ್ಯ ದಿನೋತ್ಸವದಂದು ಹುಡುಗಿಯರಿಂದ ಸ್ವಾಗತಗೀತೆ ಹಾಡಿಸಿದ್ದು, ಆಶುಭಾಷಣ ಸ್ಪರ್ಧೆ– ವಿವಿಧ ಕ್ರೀಡಾಸ್ಪರ್ಧೆಗಳನ್ನು ನಿರ್ವಹಿಸಿದ್ದು, ಶಿಕ್ಷಕರ ಟೀ ಪಾರ್ಟಿಯಲ್ಲಿ ಓಡಾಡಿದ್ದು –ಎಲ್ಲ ಮಿಸೆಸ್ ವರ್ಮಾ. ಅವಳ ಮುಖದಲ್ಲಿ ಸದಾ ನಗೆ. ನಗುವ ಹೆಂಗಸಿನ ಬಗ್ಗೆ ಅದೇನೋ ಗಾದೆಯಿದೆಯಲ್ಲಾ –ರಜನಿ ನೆನಪಿಸಿಕೊಳ್ಳಲು ಹೆಣಗಿದಳು. ಸಾಲದ್ದಕ್ಕೆ ಶಿಕ್ಷಕರಿಗಾಗಿ ನಡೆದ ಬ್ಯಾಡ್ಮಿಂಟನ್ ಮ್ಯಾಚಿನಲ್ಲಿ ರಜನಿಗೆ ಮಿಸೆಸ್ ವರ್ಮಾಳಿಂದ ಸೋಲು. ರಜನಿಯ ಬ್ಯಾಡ್ಮಿಂಟನ್ ಜೀವನದಲ್ಲಿ ಪ್ರಾಯಶಃ ಮೊದಲ ಸೋಲು.

"ಮಿಸೆಸ್ ವರ್ಮಾಗೆ ಈ ಸೀರೆ ಎಷ್ಟು ಒಪ್ಪುತ್ತದಲ್ರೀ ?"

"ಮಿಸೆಸ್ ವರ್ಮಾ ಅವರ ಆಟ ವಂಡರ್‌ಫುಲ್ ಆಗಿತ್ತು."

"ವರ್ಮಾ ಮ್ಯಾಡಮ್ ಎಷ್ಟು ಎಫೀಶಿಯಂಟ್ ಇದ್ದಾರಲ್ಲ...."

"ಹಲೋ ವರ್ಮಾ ಮ್ಯಾಡಮ್, ಸ್ವಲ್ಪ ಇತ್ತ ಕಡೇನೂ ಬರ್ರೆಲ್ಲ...."

* * *

ಆ ರಾತ್ರಿ ರಜನಿ ಗಂಡನಿಗೆ ಬರೆದಳು : "ನನಗೆ ಬಹಳ ಬೇಸರವಾಗುತ್ತಿದೇರೀ. ಮನಸ್ಸಿಗೆ ಸ್ವಲ್ಪವೂ ಸಮಾಧಾನವಿಲ್ಲ. ನಮ್ಮ ಸ್ಕೂಲಿನ ಸುದ್ದಿ ಬರೆ ಎಂದು ಕೇಳಿದೀರಿ. ಹೇಳಿಕೊಳ್ಳುವಂಥ ಆ್ಯಕ್ಟಿವ್ಹಿಟೀಜ್ ಇಲ್ಲಿ ಏನೂ ನಡೆಯುವುದಿಲ್ಲ. ಈ ಸ್ಕೂಲೇ ಅಷ್ಟು ಸರಿಯಾಗಿಲ್ಲ. ....ಅಂದಹಾಗೆ ಇಲ್ಲಿ ಮಿಸೆಸ್ ವರ್ಮಾ ಅಂತ ಒಬ್ಬ ಟೀಚರಿದ್ದಾಳೆ. ಅವಳಷ್ಟು ಕೆಟ್ಟ ಹೆಂಗಸನ್ನು ನಾನು ಎಂದೂ ಎಲ್ಲಿಯೂ ನೋಡಿಯೇ ಇಲ್ಲ.... ನನಗೆಷ್ಟು ಬೇಸರವಾಗಿದೆ ಅಂದರೆ ನೀವು ಹೇಳಿದ ಹಾಗೆ ರಜೆ ತಗೊಂಡು ತಿರುಗಿ ಬಂದುಬಿಡಲೇ ಅಂತ ವಿಚಾರಿಸುತ್ತಿದ್ದೇನೆ. ಈ ಊರೂ ಛಲೋ ಇಲ್ಲ. ನಾವಿಬ್ಬರೂ ನಮ್ಮ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿಸಿಕೊಂಡು ಬೇರೆ ಊರಿಗೆ ಮಾಡಿಸಿಕೊಳ್ಳುವುದು ಆದೀತೆ ?...."

* * *

## ೩

ಅಂದು ಸ್ಕೂಲಿಗೆ ಲೇಟಾಯಿತೆಂದು ಅವಳು ಗಡಿಬಿಡಿಯಿಂದ ನಡೆದುಕೊಂಡು ಹೊರಟಾಗ ಇದ್ದಕ್ಕಿದ್ದಂತೆ ಮಳೆ ಸುರುವಾಯಿತು. ಕೊಡೆ ಏರಿಸಿಕೊಂಡು ಸೀರೆ ಹೊಲಸಾಗದಂತೆ ಎತ್ತಿ ಹಿಡಿದುಕೊಂಡು ಆಕೆ ಸ್ಕೂಲಿನ ಗೇಟಿನಲ್ಲಿ ಕಾಲಿಡುತ್ತಿರುವಂತೆ ಭರ್ರೆಂದು ಕಾರೊಂದು ಅವಳಿಗೆ ತೀರ ಸನಿಹದಲ್ಲೇ ಅವಳ ಸೀರೆಗೆ ರಾಡಿನೀರು ಸಿಡಿಸುತ್ತ, ಹಾಯ್ದುಹೋಗಿ ಸ್ಟಾಫ್‌ರೂಮಿನ ಎದುರಿಗೆ ನಿಂತಿತು. ಸುಂದರವಾದ ನೀಲಿಬಣ್ಣದ ಹೊಸ ಮರ್ಸಿಡಿಸ್. ಡ್ರೈವರ್ ಸೀಟಿನಲ್ಲಿ ಕೂತವನು ಆಜಾನುಬಾಹುವಾದ ಬೀಟಲು ಕೂದಲಿನ ಆಕರ್ಷಕ ವ್ಯಕ್ತಿ. ಕಾರು ನಿಲ್ಲಿಸಿದೊಡನೆ ತಟ್ಟನೆ ಇಳಿದುಬಂದು ಎದುರುಗಡೆಯ ಸೀಟಿನ ಮಗ್ಗುಲ ಬಾಗಿಲನ್ನು ಬಗ್ಗಿ ತೆರೆದು ಆತ ನಿಂತ ಭಂಗಿಯನ್ನೆ ನೋಡುತ್ತಿದ್ದ ರಜನಿಗೆ ಆಶ್ಚರ್ಯವಾದುದು ಕಾರಿನಿಂದ ಡೌಲಾಗಿ ಇಳಿಯುತ್ತಿದ್ದ ಮಿಸೆಸ್ ವರ್ಮಾನನ್ನು ಕಂಡಾಗ.

ಯಾರಿರಬಹುದು ಆತ ? ಆಕೆಯ ಗಂಡ ? ಆಗಿರಲಾರ. ಇಲ್ಲ, ಆಗಿರಲಿಕ್ಕೆ ಶಕ್ಯವೇ ಇಲ್ಲ....

* * *

ನಾಲ್ಕು ದಿನ ರಜೆಯ ಮೇಲೆ ಹೋಗಿದ್ದಳು ಮಿಸೆಸ್ ವರ್ಮಾ. ಸ್ಟಾಫ್‌ರೂಮಿನಲ್ಲಿ ನಿಶ್ಶಬ್ದತೆ. ಮೂವತ್ತಕ್ಕೂ ಮಿಕ್ಕಿ ಶಿಕ್ಷಕ-ಶಿಕ್ಷಕಿಯರಿದ್ದರೂ ವಿಶೇಷವಾಗಿ ಮಾತೇ ಇಲ್ಲ. ತನಗಾದರೂ ಏನಾಯಿತು ? ಯಾವಾಗಲೂ ಅರಳು ಹುರಿದಂತೆ ಮಾತಾಡುತ್ತ ನೂರು ಜನರ ಕುತೂಹಲ - ಆಸಕ್ತಿಗಳನ್ನು ತಾಸುಗಟ್ಟಲೆ ಹಿಡಿದಿಟ್ಟುಕೊಳ್ಳುತ್ತಿದ್ದೆನಲ್ಲ. ಈಗೇಕೆ ಮಾತೇ ಬರಲೊಲ್ಲವು ? ವರ್ಮಾ ಇಲ್ಲದ್ದಕ್ಕೆ ಒಂದು ರೀತಿ ಹಾಯೆನಿಸಿದರೂ, ಯಾವ ರೀತಿಯಿಂದಲೂ ಸೋತುಹೋದದ್ದನ್ನು ಗೆದ್ದುಕೊಳ್ಳಲಾಗುತ್ತಿಲ್ಲವಲ್ಲ. ಟೀಚರ್ಸೆಲ್ಲಾ ಮೌನವಾಗಿ ಕ್ಲಾಸಿಗೆ ಹೋಗಿ-ಬಂದು ಮಾಡುತ್ತಿದ್ದಾರೆ. ಎಲ್ಲರನ್ನೂ ಬಹುಶಃ ಇಲ್ಲದ ವರ್ಮಾನ ಭೂತ ಹಿಡಿದುಕೊಂಡಿದೆ.... ತನ್ನ ಸಾಹಸ ಸಾಮರ್ಥ್ಯ ಪರೀಕ್ಷೆಯ ಕನಸುಗಳೆಲ್ಲಾ ಒಡೆದು ಹೋಗುತ್ತಿವೆ. ತನ್ನ ಇಷ್ಟು ವರ್ಷಗಳ ಆತ್ಮವಿಶ್ವಾಸ ಹನಿಹನಿಯಾಗಿ ಸೋರಿಹೋಗುತ್ತಿದೆ. ಈ ಊರಿನ ಹವಾಗುಣದಿಂದಲೋ ಏನೋ, ಒಂದು ರೀತಿಯ ಜಡತ್ವ ಬರುತ್ತಿದೆ– ಮಾನಸಿಕವಾಗಿ, ದೈಹಿಕವಾಗಿ.

"ಏನು ರಜನೀ, ಬಂದಾಗ ಎಷ್ಟು ಹುರುಪಿನಿಂದಿದ್ದಿ. ಈಗ್ಯಾಕೋ ಸಪ್ಪಗೆ ಕಾಣತೊಡಗಿರುವಿಯಲ್ಲ. ಗಂಡನ್ನ ಬಿಟ್ಟಿರೂದಾಗೂದಿಲ್ಲೇನು ?" –ಮಾವಶಿ ಚೇಷ್ಟೆ ಮಾಡಿದ್ದಳು.

"ಯಾಕೋ, ಒಂದು ನಮೂನೆ ಜಡ್ಡು ಬಂದ್ಹಾಂಗ ಆಗೇದ. ಇಲ್ಲೀ ಹೈಸ್ಕೂಲೇ ಸೇರ್‍ಲಿಲ್ಲ ನನಗ."

"ಅದ್ಯಾಕ ಸೇರ್‍ಲಿಲ್ಲ ? ಭಾಳ ಚಲೋ ರೆಪ್ಯುಟೇಶನ್ ಅದ ನಿಮ್ಮ ಹೈಸ್ಕೂಲಿಗೆ. ಕ್ವಾಲಿಫಾಯ್ಡ್ ಟೀಚರ್‍ಸು ಇದ್ದಾರ. ಪ್ರತೀ ವರ್ಷ ಪಬ್ಲಿಕ್ ಪರೀಕ್ಷಾದಾಗ ರ್‍ಯಾಂಕು ತಪ್ಪಿದ್ದಿಲ್ಲ. ನಮ್ಮ ಹುಡುಗ್ರೆಲ್ಲಾ ಅಲ್ಲೇ ಕಲ್ತಾರ. ಆ ವರ್ಮಾ ಅಂತ ಬಾಯೀ ಇದ್ದಾಳಲ್ಲ, ಉತ್ತರದಿಂದ ಬಂದಾಳ ನೋಡು ಎರಡು ವರ್ಷಾತು, ಆಕೆ ಬಂದಾಗಿನಿಂದಂತೂ ಎಲ್ಲಾ ಆ್ಯಕ್ಟಿವ್ಹಿಟೀಜ್‌ನ್ಯಾಗೂ ನಿಮ್ಮ ಸ್ಕೂಲಿನದೇ ಮೇಲುಗೈ. ಊರಾಗೆಲ್ಲಾ ನಿಮ್ಮ ಸ್ಕೂಲಿಂದೇ ಮಾತು. ಮತ್ತ ನೋಡಲಿಕ್ಕನೂ ಎಷ್ಟ ಛೆಂದ ಇದ್ದಾಳಲ್ಲ ಆಕಿ ?...."

* * *

ಮಿಸೆಸ್ ವರ್ಮಾ ರಜೆ ಮುಗಿಸಿ ತಿರುಗಿ ಬಂದಾಗ ಸ್ಟಾಫ್ ರೂಮಿನಲ್ಲಿ ಹಬ್ಬದ ವಾತಾವರಣ. ಯಾವ ಊರಿಗೆ ಹೋಗಿದ್ದಳೋ, ಯಾಕೆ ಹೋಗಿದ್ದಳೋ, ಏನು ಮಾಡಿ ಬಂದಳೋ, ಯಾರಿಗೆ ಗೊತ್ತು ? ಯಾರಿಗೂ ಅದರ ಬಗ್ಗೆ ಕುತೂಹಲವಿದ್ದ ಹಾಗೆ ಕಾಣಲಿಲ್ಲ. ಎಲ್ಲರೂ ಅವಳನ್ನು ಸುತ್ತುವರಿದು ಕೂತುಬಿಟ್ಟಿದ್ದರು.

“ಏನು ವರ್ಮಾ ಮ್ಯಾಡಮ್ ಪಿಂಕುಪಿಂಕಾಗಿ ಬಂದುಬಿಟ್ಟಿದ್ದೀರಿ, ಏನು ಸಮಾಚಾರ ?”

“ಬಂದಿರಾ ವರ್ಮಾ ಬಾಯಿಯವರೆ, ಈ ರಿಪೋರ್ಟ್ಸ್ ಬರೆಯೋ ಕೆಲ್ಸ ಹಾಗೇ ಉಳ್ಕೊಂಡಿದೆ. ನೀವು ಬಂದನಂತರವೇ ಫೈನಲೈಜ್ ಮಾಡೋದು ಅಂದ್ರು ಪ್ರಿನ್ಸಿಪಾಲ್ರು. ಸ್ವಲ್ಪ ಗೈಡ್ ಮಾಡ್ರಿ.”

“ಸ್ಟಾಫ್ ರೂಮೆಲ್ಲಾ ಜೀವ ಕಳಕೊಂಡ ಹಾಗಾಗಿತ್ತು ನೀವಿಲ್ಲದೇ. ಇಡೀ ಸ್ಕೂಲೇ ಪ್ಯಾರಲೈಜ್ ಆದಹಾಗಿತ್ತು.”

ಹೀಗೇ....

ಅಂದು ಸ್ಕೂಲು ಬಿಟ್ಟು ರಜನಿ ಮನೆಗೆ ಹೊರಟಾಗ ಸ್ಕೂಲಿನ ಕಾಂಪೌಂಡಿನಾಚೆ ನೀಲಿ ಮರ್ಸಿಡಿಸ್ ಕಾಯುತ್ತಿದ್ದುದು ಕಾಣಿಸಿತು.

* * *

ಅದೇ ತಿಂಗಳು ಇನ್‌ಸ್ಪೆಕ್ಶನ್ ಇತ್ತು. ಬರಲಿರುವ ಇನ್‌ಸ್ಪೆಕ್ಟರ್‌ರ ಹೆಸರು ಕೇಳಿದಾಗ ರಜನಿಗೆ ಹಾಯೆನಿಸಿತು. ಅವಳಿಗೆ ಸಾಕಷ್ಟು ಪರಿಚಯವಿದ್ದ, ಅವಳಿಂದ ಸಾಕಷ್ಟು ಪ್ರಭಾವಿತರಾಗಿದ್ದ ಇನ್‌ಸ್ಪೆಕ್ಟರ್. ಎರಡು ಮೂರು ಸಲ ಅವರ ಭೆಟ್ಟಿಯಾಗಿತ್ತು. ರಜನಿಯ ಕ್ಲಾಸಿನ ಹುಡುಗರನ್ನು, ಅವಳ ಕಲಿಸುವಿಕೆಯ ವಿಧಾನಗಳನ್ನು ಅವರು ಬಹಳ ಶಿಫಾರಸ್ಸು ಮಾಡಿದ್ದರು. ಬರಲಿ, ಈಗಲಾದರೂ ತನ್ನ ಮಹತ್ವ ಉಳಿದವರಿಗೆ ಗೊತ್ತಾದೀತು. ಮತ್ತು ಯಾರಿಗೆ ಗೊತ್ತು, ಗಾಳಿ ಬೀಸುವ ದಿಕ್ಕು ಬದಲಾದರೂ ಆದೀತು.

ರಜನಿ ಆಸ್ಥೆಯಿಂದ ಇನ್‌ಸ್ಪೆಕ್ಷನ್‌ಗಾಗಿ ಕಾಯ್ದಳು. ತನ್ನ ತರಗತಿಯ ಹುಡುಗರನ್ನು ಶ್ರಮವಹಿಸಿ ತಯಾರು ಮಾಡಿದಳು. ಕ್ಲಾಸ್‌ರೂಮನ್ನು ಸ್ವತಃ ನಿಂತು ಬಗೆಬಗೆಯಾಗಿ ಶೃಂಗರಿಸಿದಳು. ಇನ್‌ಸ್ಪೆಕ್ಶನ್ ದಿನ ತನ್ನ ಮದುವೆಯ ರಿಸೆಪ್ಶನ್‌ಗೆ ಕೊಂಡಿದ್ದ ಸೀರೆಯನ್ನುಟ್ಟಳು. ಆದರೆ ಕಾರಿನಿಂದಿಳಿಯುತ್ತಿದ್ದಂತೆ ಇನ್‌ಸ್ಪೆಕ್ಟರ್ ಸಾಹೇಬರು ರಜನಿಯನ್ನು ಹೋಗಲಿ, ಕೈಮುಗಿದು ಹಲ್ಕಿರಿಯುತ್ತ ನಿಂತಿದ್ದ ಪ್ರಿನ್ಸಿಪಾಲರನ್ನೂ ನೋಡದೆ ಸೀದಾ “ಹಲೋ, ಮಿಸೆಸ್ ವರ್ಮಾ” ಅಂತ ಅವಳ ಕಡೆಗೇ ಹೆಜ್ಜೆ ಹಾಕಿ, ಕ್ಯಾಮರಾದೆದುರು ನಿಂತ ಹಾಗೆ ಸ್ವರ್ಗೀಯ ಸ್ಮಿತ ಬೀರುತ್ತಿದ್ದ ಅವಳ ಕೈಕುಲುಕಿ, ಕೈಹಿಡಿದುಕೊಂಡೇ ಮೇಲೆ ನಡೆದರು.

ಅವರು ಬಂದಿದ್ದು ಸ್ಕೂಲಿನ ಇನ್‌ಸ್ಪೆಕ್ಶನ್‌ಗೆಂದೇ ಆದರೂ ಹಾಗೆ ಕ್ಲಾಸುಕ್ಲಾಸಿಗೆ ಹೋಗಿ ತನಿಖೆ ಮಾಡದೆ ಇಡೀ ದಿನ ವರ್ಮಾಳೊಂದಿಗೆ ಮಾತಾಡುತ್ತ ಪ್ರಿನ್ಸಿಪಾಲರ ರೂಮಿನಲ್ಲೇ ಕಳೆದರು. ಸ್ಕೂಲಿನ ಬಗ್ಗೆ ಅವರು ಬಹಳ ಒಳ್ಳೆಯ

ರಿಪೋರ್ಟ್ ಬರೆದರೆಂದೂ ಎಲ್ಲ ವರ್ಮಾ ಮ್ಯಾಡಮ್‌ನ ಪ್ರಭಾವವೆಂದೂ ಸ್ಟಾಫ್‌ರೂಮಿನಲ್ಲಿ ಗುಜುಗುಜು. ಸಂಜೆ ಸ್ಕೂಲು ಬಿಡುವ ಹೊತ್ತಿಗೆ ವರ್ಮಾಳನ್ನು ಕರೆದೊಯ್ಯಲು ಬಂದ ನೀಲಿ ಮರ್ಸಿಡಿಸ್‌ನಲ್ಲೇ ಇನ್‌ಸ್ಪೆಕ್ಟರೂ ಭರ್ರ್....

* * *

ಆ ರಾತ್ರಿ ರಜನಿ ಗಂಡನಿಗೆ ಬರೆದಳು : "ನನಗಿನ್ನು ಇಲ್ಲಿ ಇರಲು ಆಗುವುದಿಲ್ಲ. ಇಲ್ಲಿ ಬಂದಾಗಿನಿಂದ ನನಗೆ ಮೈಯಲ್ಲಿ ಒಂದು ದಿನವೂ ನೆಟ್ಟಗಿಲ್ಲ. ಸದಾ ತಲೆನೋವು, ಸುಸ್ತು, ಬೇಸರ. ನಮ್ಮ ಸ್ಕೂಲಿನ ಜನ ಬಹಳ ಇಮ್ಮೋರಲ್ ಆಗಿದ್ದಾರೆ. ಸ್ಕೂಲಿಗೆ ಸ್ವಲ್ಪವೂ ಒಳ್ಳೆಯ ಹೆಸರಿಲ್ಲ. ನಾನು ಮುಂದಿನ ವಾರದಿಂದ ರಜೆ ಹಾಕುತ್ತೇನೆ. ನಿಮ್ಮ ಆರ್ಡರ್ ಬರುವುದು ಇನ್ನೂ ಎಷ್ಟು ದಿನವೋ ಏನೋ. ನಾನು ಬಂದುಬಿಡುತ್ತೇನೆ. ನನಗೇಕೋ ನೌಕರಿಯೇ ಬೇಸರವಾಗಿದೆ. ನಿಮ್ಮ ಬಹಳ ದಿನಗಳ ಇಚ್ಛೆಯಂತೆ ಇನ್ನು ನಾನು ನೌಕರಿಗೆ ರಾಜೀನಾಮೆ ಕೊಟ್ಟುಬಿಟ್ಟು ಮನೆ ನೋಡಿಕೊಂಡಿರುತ್ತೇನೆ. ಒಟ್ಟು ನನ್ನ ಮನಸ್ಸಿನ ಸ್ವಾಸ್ಥ್ಯವೇ ತಪ್ಪಿಹೋಗಿದೇರೀ. ಎಂದೂ ಹೀಗಾಗಿರಲಿಲ್ಲ...."

* * *

೪

ನಾಲ್ಕು ದಿನಗಳ ನಂತರ ಒಮ್ಮೆ ಅದೇ ಬೇಸರದಲ್ಲೇ ರಜನಿ ಹುಡುಗರ ಟ್ಯುಟೋರಿಯಲ್ಸ್ ತಿದ್ದುತ್ತ ಸ್ಟಾಫ್ ರೂಮಿನಲ್ಲಿ ಕೂತಿದ್ದಳು. ಎದುರಿಗೇ ಪೇಪರೋದುತ್ತ ಕೂತಿದ್ದ ಮಿಸೆಸ್ ವರ್ಮಾಳ ಕಡೆ ಬೇಕೆಂದೇ ನೋಡದೆ, ಆಚೆಯ ಟೇಬಲಿಗೆ ಕೂತಿದ್ದ ಅಲಮೇಲಮ್ಮ ಮ್ಯಾಡಂ ಜೊತೆ ಮಾತಾಡುತ್ತ ಕೆಲಸ ನಡೆಸಿದ್ದಳು. ಅವಳಿಗೇಕೋ ಇತ್ತೀಚೆ ವರ್ಮಾ ಉಸಿರಾಡಿಸಿದ ಗಾಳಿಯೇ ಉಸಿರುಗಟ್ಟಿಸುತ್ತಿತ್ತು.

"ಬಾಯೀ ಸಾಬ, ರಾವ್‌ಸಾಹೇಬ್ರು ಫೋನು ಬಂದೈತೆ." ಪ್ಯೂನ್‌ನ ಧ್ವನಿ ಕೇಳಿ ಮೂವರೂ ಒಮ್ಮೆಲೆ ತಲೆಯೆತ್ತಿ ನೋಡಿದರು. ಯಾರಿಗೆ ಫೋನು ಅಂತ ರಜನಿ ಕೇಳಬೇಕೆಂದುಕೊಳ್ಳುವಷ್ಟರಲ್ಲಿ ವರ್ಮಾ ತಟ್ಟನೆ ಎದ್ದು ಓಡುತ್ತಲೆ ಆತನನ್ನು ಹಿಂದೆ ಹಾಕಿ ಹೊರಗೆ ಹೋದಳು.

ಒಂದು ಕ್ಷಣದ ಮೌನದ ನಂತರ ತಡೆಯದೆ ರಜನಿ ಕೇಳಿದಳು, "ಅಲ್ರೀ ಅಲಮೇಲಮ್ಮ, ಈ ರಾವ್ ಸಾಹೇಬ ಯಾರು ?" ಓದುತ್ತಿದ್ದ ಪುಸ್ತಕವನ್ನು ಮುಚ್ಚಿಟ್ಟುಬಿಟ್ಟು ರಾಗವಾಗಿ ಆಕಳಿಸುತ್ತ ಅಲಮೇಲಮ್ಮ ಹೇಳಿದಳು : "ಅದೇ ವರ್ಮಾ ಬಾಯಿನ್ನ ದಿನಾ ಕಾರ್‍ನಲ್ಲಿ ಕಳಿಸಲು, ಕರಕೊಂಡು ಹೋಗಲು ಬರ್‍ತಾರಲ್ಲ. ಆ ಉದ್ದನೆಯ ಹ್ಯಾಂಡ್‌ಸಮ್ ಮನುಷ್ಯ, ನೀವು ನೋಡಿಲ್ಲವೇ ?"

"ನೋಡೀನಿ. ಆದರ ಯಾರವ್ವ ?" ಅದೇಕೋ ರಜನಿಗೆ ಆತನ ಬಗ್ಗೆ ಬಹುವಚನ ಬಳಸುವುದಾಗಲಿಲ್ಲ. ಅಲಮೇಲಮ್ಮನಿಗೋ ಆತನ ಬಗ್ಗೆ ಬಹಳ ಶ್ರದ್ಧೆಯಿದ್ದ ಹಾಗೆ ತೋರಿತು : "ಅವರು ಇಲ್ಲಿನ ಎಮ್. ಎಲ್. ಎ. ಅಷ್ಟೇ ಅಲ್ಲ, ದೊಡ್ಡ ಕಾಂಟ್ರ್ಯಾಕ್ಟರ್. ಈ ಸ್ಕೂಲಿನದು, ಅಷ್ಟೇಕೆ, ಈ ತಾಲೂಕಿನ ಸುತ್ತಮುತ್ತಲೆಲ್ಲ, ದೊಡ್ಡ ಬಿಲ್ಡಿಂಗ್ಸ್ ಕಟ್ಟಿದವರು ಆತನೇ. ಅಷ್ಟೇ ಅಲ್ಲ, ಬಹಳ ಪ್ರಸಿದ್ಧ ಸೋಶಿಯಲ್ ವರ್ಕರ್. ಸುತ್ತಲಿನ ಜನ ಆತನಿಗೆ ಧರ್ಮರಾಜ ಅಂತಾರೆ. ಆತ ಈ ಜಿಲ್ಲೆಗೇ ಆಧಾರಸ್ತಂಭ ಇದ್ಧಾ್ಹಗೆ. ಅಷ್ಟೇ ಅಲ್ಲ. ಈ ಸ್ಕೂಲಿನ ಬಗ್ಗೆ ಬಹಳ ಇಂಟರೆಸ್ಟ್ ಅವ್ರಿಗೆ. ಇಲ್ಲಿ ಈ ಸ್ಕೂಲು ಮಾಡಿಸಿದವ್ರು ಮುಂದಿನ ವರ್ಷ ಇದನ್ನು ಜ್ಯೂನಿಯರ್ ಕಾಲೇಜಾಗಿ ಮಾಡುವವರು ಅವ್ರೇ. ಪ್ರಿನ್ಸಿಪಾಲ್ರಿಗೆ, ಮೇಲಿನ ಅಥೋರಿಟೀಸ್‌ಗೆ ಅವ್ರ ಬಗ್ಗೆ ತುಂಬ ಗೌರವ. ಅಷ್ಟೇ ಅಲ್ಲ –"

ಅಸಹನೆಯಿಂದ ಆಕೆಯನ್ನು ತಡೆದು ರಜನಿ ಕೇಳಿದಳು, "ಅದೆಲ್ಲ ಇರ್ಲಿ, ಈ ವರ್ಮಾಗೆ ಏನು ಸಂಬಂಧ ಆತನದು ?" ಮರುಕ್ಷಣ ಅವಳಿಗೆನಿಸಿತು, ಇದೇನು ಎಲ್ಲ ಸಾಮಾನ್ಯ ಮಟ್ಟದ ಹೆಂಗಸರ ಹಾಗೆ ತಾನೂ ಗಾಸಿಪ್ ಮಾಡುತ್ತಿದ್ದೇನೆ....

"ವರ್ಮಾಬಾಯಿ ಈ ಸ್ಕೂಲಿಗೆ ಎರಡು ವರ್ಷದ ಹಿಂದೆ ಬಂದಾಗ ಆತ ಸೋಶಿಯಲ್ ಗ್ಯಾದರಿಂಗಿಗೆ ಗೆಸ್ಟ್ ಆಗಿ ಬಂದಿದ್ರು. ಹಾಗೇ ಪರಿಚಯ ಬೆಳೀತು. ನಮ್ಮ ವರ್ಮಾಬಾಯಿನ್ನ ನೋಡಿದ್ರೆ ಯಾರ ತಲೆ ಕೆಡೋದಿಲ್ಲ ಹೇಳ್ರಿ. ಈಗ ವರ್ಮಾಬಾಯಿ ಅವರ ಜೊತೆ ಅವರ ಮನೇಲೇ ಇರ್‍ತಾರೆ."

"ಅಂದರ ? ಈಕೀಗೇನು ಗಂಡಗಿಂಡ ಇಲ್ಲೇನು ?"

ಅಲಮೇಲಮ್ಮನ ಧ್ವನಿ ತಗ್ಗಿತು, "ವರ್ಮಾ ಬಾಯಿಯ ಗಂಡ ಮಿಲಿಟರೀಲಿದಾರಂತೆ. ಏನೋ ಅವ್ರಿಬ್ರಿಗೂ ಸರಿಹೊಂದೋಲ್ವಂತೆ."

ಒಂದು ಕ್ಷಣ ರಜನಿಗನಿಸಿತು– ಈಗಾಗುವ ಬದಲು ಎರಡು ವರ್ಷಗಳ ಹಿಂದೆಯೇ ತನಗಿಲ್ಲಿ ವರ್ಗವಾಗಿ ತಾನೇ ವರ್ಮಾಬಾಯಿಯ ಜಾಗೆಯಲ್ಲಿ ಬಂದಿದ್ದರೆ.... ಮರುಕ್ಷಣ ಆಕೆ ಗಟ್ಟಿಯಾಗಿ ಕೇಳಿದಳು, "ಅಂದರ ? ವರ್ಮಾಬಾಯಿ ಗಂಡನ್ನ ಬಿಟ್ಟಾಳ ? ಇನ್ನೊಬ್ಬನ ಕೂಡ ಲಗ್ನಾಗದ ಹಾಂಗ ಇದ್ದಬಿಟ್ಟಾಳ ?"

"ಶ್" –ರಜನಿಯ ಏರಿದ ಧ್ವನಿಯನ್ನು ತಗ್ಗಿಸಲೆತ್ನಿಸುತ್ತ ಅಲಮೇಲಮ್ಮ ಅಂದಳು, "ಹಾಗೆ ಇಲ್ಲಿ ಯಾರೂ ಅನ್ನೋಲ್ವಮ್ಮಾ. ವರ್ಮಾ ಬಾಯಿ ಡೈವ್ಹೋರ್ಸ್ ತಗೋತಾಳಂತೆ. ಬಹುಶಃ ಈಗ ತಗೊಂಡಿರಲೂಬಹುದು. ಆಮೇಲೆ ಇವ್ರಿಬ್ರೂ ಮದುವೆಯಾಗ್ತಾರಂತೆ."

–ಈಗಂತೂ ಆಗಿಲ್ಲವಲ್ಲ. ಲಗ್ನವಾಗದೇ ಹಾಗೇ ಯಾವನ ಜೊತೆಗೋ

ಇದ್ದಾಳಲ್ಲ. ಈಕೆ ಎಂಥ ಹೆಂಗಸು– ಬಿದ್ದ ಹೆಂಗಸು.... ಛೀ ಛೀ....

* * *

ಆ ರಾತ್ರಿ ರಜನಿ ಗಂಡನಿಗೆ ಬರೆದಳು : "ನಾನೀಗ ಅಗದೀ ಆರಾಮ ಇದ್ದೀನ್ರೀ. ನೀವು ಏನೂ ಕಾಳಜಿ ಮಾಡಬಾರದು. ಹೊಸದಾಗಿ ಬಂದಾಗ ಏನೋ ಬೇಸರವೆನಿಸಿತ್ತು. ಈಗ ಅಗದೀ ಫ್ರೆಶ್ ಆಗಿರುವೆ. ಈ ಊರು, ಇಲ್ಲಿನ ಹವೆ, ಜನ, ನಮ್ಮ ಸ್ಕೂಲು –ಎಲ್ಲ ನನಗೆ ತುಂಬ ಹಿಡಿಸಿವೆ. ನನಗಿಲ್ಲಿ ಯಾವ ತರದ ಅನಾನುಕೂಲತೆಯೂ ಇಲ್ಲ. ಇಷ್ಟು ಒಳ್ಳೆಯ ನೌಕರಿ ಬಿಡುವ ವಿಚಾರ ಮಾಡುವುದೇ ಮೂರ್ಖತನ. ನಿಮ್ಮ ಟ್ರಾನ್ಸ್‌ಫರ್ ಆರ್ಡರ್ ಬೇಕಾದಾಗ ಬರಲಿ. ನೀವು ನಿಧಾನವಾಗಿ ಬರ್ರಿ. ನಾನು ತೀರ-ತೀರ ಆರಾಮಿದ್ದೇನೆ. ಏಕ್‌ದಂ ಖುಶ್ ಇದ್ದೇನೆ.

ಅಂದಹಾಗೆ ನಿಮಗೆ ಮಿಸೆಸ್ ವರ್ಮಾ ಅನ್ನುವ ಕೆಟ್ಟ ಹೆಂಗಸಿನ ಬಗ್ಗೆ ಬರೆದಿದ್ದೆನಲ್ಲವೆ ? ಆಕೆ...."

❖ ❖ ❖

# ಇಲ್ಲಿಂದ ಮುಂದೆಲ್ಲಿ?

## ೧

ಆಕೆ ಶ್ರೀಮತಿ ಯಶಸ್ವಿನಿ ದೇಸಾಯಿ.

ರಾಮನಗರದ ಹೊಸ ಚೀಫ್ ಜ್ಯುಡೀಶಿಯಲ್ ಮ್ಯಾಜಿಸ್ಟ್ರೇಟ್. ಬಹಳ ಸ್ಟ್ರಿಕ್ಟ್, ಬಹಳ ಸಿನ್ಸಿಯರ್, ಬಹಳ ದಿಟ್ಟೆಯಾದ ಹೆಣ್ಣುಮಗಳು ; ಜಡ್ಜ್ ಅಂದರೆ ಹೀಗಿರಬೇಕು ; ಯಾವ ಕೇಸನ್ನೂ ಸುಮ್ಮಸುಮ್ಮನೆ ಪೆಂಡಿಂಗ್ ಇಡುವುದಿಲ್ಲ, ಅಡ್ಜರ್ನ್ ಮಾಡುವುದಿಲ್ಲ, ಯಾವ ವಕೀಲರಿಗೂ ನ್ಯಾಯದೊಂದಿಗೆ ಆಟವಾಡಲು ಬಿಡುವುದಿಲ್ಲ, ನ್ಯಾಯಾಲಯವೆಂದರೆ ನಿಜವಾಗಿ ನ್ಯಾಯದೇವತೆಯ ಮಂದಿರ ಅನಿಸುವಂತೆ ವಾತಾವರಣ ನಿರ್ಮಿಸಿದ್ದಾಳೆ ; ಆಕೆ ಇಲ್ಲಿಗೆ ಬಂದಾಗಿನಿಂದ ಅಪರಾಧಿಗಳ ಸೊಲ್ಲು ಬಹಳ ಮಟ್ಟಿಗೆ ಅಡಗಿದೆ ; ಜನರಿಗೆ ಕೋರ್ಟು-ಕಚೇರಿ ಬಗ್ಗೆ ಸಾಮಾನ್ಯವಾಗಿ ಇರುವ ಕೆಟ್ಟ ಭಾವನೆ ಗಣನೀಯವಾಗಿ ಕಡಿಮೆಯಾಗಿದೆ ; ಸತ್ಯ-ನ್ಯಾಯಗಳಲ್ಲಿ ನಂಬಿಕೆ ಬರತೊಡಗಿದೆ ; ಹೀಗಂತ ರಾಮನಗರದ ಜನ ಮಾತಾಡಿಕೊಳ್ಳುತ್ತಿದ್ದಾರೆ.

ಶ್ರೀಮತಿ ಯಶಸ್ವಿನಿ ದೇಸಾಯಿ, ಸಿ. ಜೆ. ಎಮ್.

ಆಕೆಯದು ಮೊದಲಿನಿಂದಲೂ ಯಶಸ್ಸಿನ ದಾರಿ. ಪ್ರತಿಭಾವಂತ ವಿದ್ಯಾರ್ಥಿನಿಯಾಗಿದ್ದ ಆಕೆ ಸ್ನಾತಕೋತ್ತರ ಪದವಿಯೊಂದಿಗೆ ಬಂಗಾರದ ಪದಕಗಳನ್ನು ಪಡೆದವಳು. ಸ್ಪರ್ಧಾತ್ಮಕ ಪರೀಕ್ಷೆ ಪಾಸಾಗಿ ನೇರವಾಗಿ ಮ್ಯಾಜಿಸ್ಟ್ರೇಟ್ ಹುದ್ದೆಗೆ ಆಯ್ಕೆಯಾದವಳು. ಕಾಲೇಜು ದಿನಗಳಿಂದಲೂ ಮಹಿಳಾ ವಿಮೋಚನೆಯ ಸಲುವಾಗಿ ಹೋರಾಡುತ್ತ ಬಂದವಳು. ಸತತವಾಗಿ ಅನ್ಯಾಯ, ಶೋಷಣೆ, ದಬ್ಬಾಳಿಕೆಗೆ ಒಳಗಾಗುತ್ತಿರುವ ಮಹಿಳೆಯರಿಗೆ ನ್ಯಾಯ ದೊರಕಿಸಿ ಕೊಡಲೆಂದೇ ಕಾನೂನು ಓದಿ ನ್ಯಾಯಾಧೀಶಳಾದವಳು ; ತನ್ನ ಪರಿಮಿತಿಯಲ್ಲಿ ಬರುವ ಮಹಿಳೆಯರಿಗೆ ಸಂಬಂಧಿಸಿದ ಯಾವುದೇ ಕೇಸು ಇರಲಿ, ಸಂಬಂಧಿಸಿದ ವಕೀಲರಿಗಿಂತ ಹೆಚ್ಚಾಗಿ ಸ್ವತಃ ತಾನೇ ಕೇಸು ಅಭ್ಯಸಿಸಿ ಶೋಷಿತ ಮಹಿಳೆಗೆ ಪೂರ್ಣ ನ್ಯಾಯ ಸಿಗುವಂತೆ ತೀರ್ಪು ನೀಡುತ್ತಾಳೆ. ಆಕೆಯ ಕೋರ್ಟಿನಲ್ಲಿ ಯಾವ ವಕೀಲನೂ ಮಹಿಳಾ ಕಕ್ಷಿದಾರರ ವಿರುದ್ಧ ಕೇಸು ಹಿಡಿಯಲು ಸಾಮಾನ್ಯವಾಗಿ ಮುಂದೆ ಬರುವುದಿಲ್ಲ. ತನ್ನ ಸರ್ವಿಸಿನ ಹದಿನಾರು ವರ್ಷಗಳಲ್ಲಿ ಆಕೆ ಸಾವಿರಾರು ವಂಚಿತ ಮಹಿಳೆಯರಿಗೆ ಅವರ ಪಾಲಿನ

ಆಸ್ತಿಯ ಹಕ್ಕು ಕೊಡಿಸಿದ್ದಾಳೆ, ಅವರನ್ನು ಪೀಡಿಸುವ ಗಂಡಂದಿರನ್ನು ಅತ್ತೆ-ಮಾವಂದಿರನ್ನು ಶಿಕ್ಷಿಸಿದ್ದಾಳೆ, ಪೀಡಕ ಪತಿಗಳಿಂದ ವಿಚ್ಛೇದನ ಕೊಡಿಸಿದ್ದಾಳೆ, ಅಪ್ರಾಪ್ತ ವಯಸ್ಸಿನ ಮಕ್ಕಳ ಪಾಲನೆಯ ಅಧಿಕಾರ ಕೊಡಿಸಿದ್ದಾಳೆ, ಒಟ್ಟು ಮಹಿಳೆಯರ ಪಾಲಿನ ನ್ಯಾಯದೇವತೆಯೇ ಆಗಿದ್ದಾಳೆ.

## ೨

ರಾಮನಗರಕ್ಕೆ ಶ್ರೀಮತಿ ಯಶಸ್ವಿನಿ ದೇಸಾಯಿ ಸಿ. ಜೆ. ಎಮ್. ಎಂದು ವರ್ಗವಾಗಿ ಬಂದಾಗಿನಿಂದ ಎಲ್ಲರೂ ಆಕೆಯ ಬಗ್ಗೆ ಪ್ರಶಂಸೆಯ ಮಾತುಗಳನ್ನಾಡುತ್ತಿದ್ದಾರೆ. ಆಕೆಯನ್ನು ಕೌತುಕದಿಂದ ಆದರಿಸುತ್ತಿದ್ದಾರೆ. ಕಾಲೇಜುಗಳಲ್ಲಿ, ಲಾಯನ್ಸ್-ರೋಟರಿ ಕ್ಲಬ್ಬುಗಳಲ್ಲಿ, ಸಾರ್ವಜನಿಕ, ಧಾರ್ಮಿಕ, ರಾಜಕೀಯ ಸಂಘ-ಸಂಸ್ಥೆಗಳಲ್ಲಿ, ಎಲ್ಲಿಯೇ ಒಂದು ಮುಖ್ಯ ಸಮಾರಂಭ ನಡೆದರೂ ಆಕೆಯೇ ಮುಖ್ಯ ಅತಿಥಿ. ಆಕೆಯೇ ಆಕರ್ಷಣೆಯ ಕೇಂದ್ರಬಿಂದು. ಎತ್ತರ ನಿಲುವಿನ, ನಸುಗಪ್ಪು ಬಣ್ಣದ, ತೇಜಃಪುಂಜ ಕಣ್ಣುಗಳ, ಕಂಚಿನ ಕಂಠದ ಆಕೆ ವೇದಿಕೆಯ ಮೇಲೆ ನಿಂತು ಮಾತಾಡುವುದನ್ನು ನೋಡುವುದೇ ಚೆಂದ, ಕೇಳುವುದೂ ಚೆಂದ.

ಆದರೆ ರಾಮನಗರದಲ್ಲಿ ಯಶಸ್ವಿನಿ ಸುಖಿಯಾಗಿಲ್ಲ. ಯಾಕೆಂದರೆ ಮೊಟ್ಟಮೊದಲ ಬಾರಿಗೆ ಆಕೆ ತನ್ನ ಸಂಸಾರವನ್ನು ಬಿಟ್ಟು ದೂರದ ಊರಿಗೆ ಬಂದಿದ್ದಾಳೆ. ಅನಿವಾರ್ಯವಾಗಿ ಇದ್ದಾಳೆ. ಮನೆಯ ನೆನಪು ಆಕೆಯನ್ನು ಸದಾ ಕಾಡುತ್ತದೆ. ಯಶಸ್ವಿನಿ ಕಾನೂನು ಓದುತ್ತಿದ್ದಾಗ ತನ್ನ ಸಹಪಾಠಿಯಾಗಿದ್ದ ಮನೋಹರ ದೇಸಾಯಿಯನ್ನು ಪ್ರೀತಿಸಿದಳು. ಆ ವಯಸ್ಸಿನ ಉಳಿದ ಹುಡುಗ-ಹುಡುಗಿಯರ ಹಾಗೆ ಕ್ಯಾಂಪಸ್ಸಿನಲ್ಲಿದ್ದಾಗ ಪ್ರೀತಿಸಿ, ಓದು ಮುಗಿದ ನಂತರ ಗುಡ್‌ಬಾಯ್ ಹೇಳಿ ಹೋಗುವ ಪ್ರೀತಿಯಾಗಿರಲಿಲ್ಲ ಅದು. ಸುಸಂಸ್ಕೃತನೂ, ಸಭ್ಯನೂ, ತಿಳಿವಳಿಕೆಯುಳ್ಳವನೂ ಆಗಿದ್ದ ಮನೋಹರನನ್ನು ಆಕೆ ಎಲ್ಲ ರೀತಿಯಿಂದ ಪರೀಕ್ಷಿಸಿ, ಮೆಚ್ಚಿ ಮದುವೆಯಾದಳು. ಮದುವೆಯ ನಂತರ ಇಬ್ಬರೂ ಜೊತೆಯಾಗಿ ಬೆಂಗಳೂರಿನಲ್ಲಿ ವಕೀಲ ವೃತ್ತಿ ಪ್ರಾರಂಭಿಸಿದರು. ಯಶಸ್ವಿನಿ ಐದಾರು ವರ್ಷಗಳಲ್ಲಿ ಮ್ಯಾಜಿಸ್ಟ್ರೇಟ್ ಆಗಿ ಆಯ್ಕೆಯಾಗಿ ನೌಕರಿ ಸುರು ಮಾಡಿದಳು. ಮನೋಹರ ಮಾತ್ರ ವಕೀಲನಾಗಿಯೇ ಮುಂದುವರೆದ. ಎರಡು ಮಕ್ಕಳು– ಮಗಳು ಕೀರ್ತಿ ಇಂಜಿನಿಯರಿಂಗ್ ಎರಡನೆಯ ವರ್ಷದಲ್ಲಿದ್ದಳು, ಮಗ ಕಿರಣ ಇನ್ನೂ ಹಾಯ್‌ಸ್ಕೂಲಿನಲ್ಲಿದ್ದ. ಮನೋಹರನ ತಾಯಿ ಗಟ್ಟಿಮುಟ್ಟಾಗಿದ್ದರು. ಮನೆವಾರ್ತೆಯಲ್ಲಿ ತುಂಬ ಸಹಾಯ ಮಾಡುತ್ತಿದ್ದರು. ನೌಕರಿ ಮಾಡತೊಡಗಿ

ಹದಿನಾರು ವರ್ಷಗಳಾದರೂ ಬೆಂಗಳೂರಿನಲ್ಲಿಯೇ, ಹಾಗೂ ಸಮೀಪದ ಊರುಗಳಲ್ಲಿ, ಪೋಸ್ಟ್ ದೊರಕಿಸಿಕೊಳ್ಳುವಲ್ಲಿ ಈ ವರೆಗೂ ಆಕೆ ಯಶಸ್ವಿಯಾಗಿದ್ದಳು. ಆದರೆ ಈ ಸಲ ಆಕೆ ಬೆಂಗಳೂರಿನಿಂದ ರಾಮನಗರಕ್ಕೆ ಬರಲೇಬೇಕಾಗಿತ್ತು. ಪ್ರಮೋಶನ್ ಬಂದಿದ್ದರಿಂದ ವರ್ಗಾವಣೆಯನ್ನು ನಿರಾಕರಿಸುವ ಹಾಗಿರಲಿಲ್ಲ. ಮಕ್ಕಳೂ ಈಗ ದೊಡ್ಡವರಾಗಿದ್ದರು. ಮನೆಯಲ್ಲಿ ಮನೋಹರನ ತಾಯಿ ಇದ್ದರು. ಹೀಗಾಗಿ ಕಳೆದ ಎಂಟು-ಹತ್ತು ತಿಂಗಳುಗಳಿಂದ ಆಕೆ ರಾಮನಗರದಲ್ಲಿ ಒಬ್ಬಳೇ ಇದ್ದಳು.

ಈ ಮಧ್ಯೆ ವಾರಾಂತ್ಯದಲ್ಲಿ ಎರಡು ಸಲ ಮಾತ್ರ ಬೆಂಗಳೂರಿಗೆ ಹೋಗಿ ಬರಲು ಸಾಧ್ಯವಾಗಿತ್ತು. ಅವಸರದಿಂದ ಹೋಗುವುದು, ಗಂಡ-ಮಕ್ಕಳ ಮುಖವನ್ನೂ ಸರಿಯಾಗಿ ನೋಡುವುದಾಗಿರುತ್ತಿರಲಿಲ್ಲ, ಅಷ್ಟರಲ್ಲೇ ಮತ್ತೆ ಅವಸರದಿಂದ ಹೊರಟು ಬಂದುಬಿಡುವುದು. ಬಂದ ನಂತರ ಮನಸ್ಸಿಗೆ ಬಹಳ ಬೇಸರವಾಗುತ್ತಿತ್ತು. ಮನೋಹರನೇ ನಾಲ್ಕಾರು ಸಲ ಬಂದು ಇದ್ದು ಹೋಗಿದ್ದ. ಚಿಂತಿಸಬೇಡ, ಹೇಗಾದರೂ ಮೂರು ವರ್ಷ ಕಳೆಯಲಿ, ಮತ್ತೆ ಬೆಂಗಳೂರಿಗೇ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಲು ಪ್ರಯತ್ನಿಸೋಣ, ಅಂತ ಸಮಾಧಾನ ಮಾಡಿದ್ದ. ಆದರೆ ಸ್ವಭಾವತಃ ಕುಟುಂಬವತ್ಸಲೆಯೂ ಭಾವುಕಳೂ ಆಗಿದ್ದ ಯಶಸ್ವಿನಿಗೆ ಈ ಅಗಲಿಕೆಯ ಅನುಭವ ಬಹಳ ನೋವಿನದಾಗಿತ್ತು. ಇಡಿಯ ದಿನ ಕೋರ್ಟಿನ ಕಲಾಪಗಳಲ್ಲಿ ಸಮಯ ಹೇಗೋ ಕಳೆದುಹೋಗುತ್ತಿತ್ತು. ಸಂಜೆ ಕ್ವಾರ್ಟರ್ಸಿಗೆ ಮರಳಿದಾಗ ಮನೆಯ ನೆನಪಾಗಿ ಬಹಳ ಏಕಾಕಿಯೆನ್ನಿಸಿ ದುಃಖವಾಗುತ್ತಿತ್ತು. ಅಮ್ಮ-ಅಮ್ಮ ಅಂತ ಹಿಂದೆ-ಮುಂದೆ ಸುತ್ತಾಡುವ ಮಗಳು, ಸ್ಕೂಲು ಬಿಟ್ಟು ಬಂದೊಡನೆ ಆಕೆಯ ತೊಡೆಯ ಮೇಲೆ ತಲೆಯಿರಿಸಿ ಮಲಗುವ ಮಗ, ತಾಯಿಯಂತೆ ಆದರಿಸಿ ಉಪಚರಿಸುತ್ತಿದ್ದ ಅತ್ತೆ, ಮತ್ತು ರಾತ್ರಿಗಳಲ್ಲಿ ತನ್ನ ಬಿಸಿಯಪ್ಪುಗೆಯಲ್ಲಿ ಜಗತ್ತು ಮರೆಸುತ್ತಿದ್ದ ಗಂಡ –ಈ ಎಲ್ಲರಿಂದ ಇಷ್ಟು ದೂರವಾಗಿ ಒಬ್ಬಳೇ ಹೀಗೆ ಒದ್ದಾಡುತ್ತ ಯಾಕಿರಬೇಕು ? ಸಾಕಷ್ಟು ವರ್ಷ ದುಡಿದದ್ದಾಗಿದೆ. ಇನ್ನು ವ್ಹಾಲಂಟರಿ ರಿಟಾಯರ್‌ಮೆಂಟ್ ಏಕೆ ತಗೊಳ್ಳಬಾರದು ? ಮನಃಶಾಂತಿಯೇ ಇಲ್ಲದಿದ್ದರೆ ಈ ನೌಕರಿ, ಹಣ, ಅಂತಸ್ತು, ಕೀರ್ತಿಗಳಿಂದ ಏನು ಪ್ರಯೋಜನ ? –ಹೀಗೆ ಯೋಚಿಸಿ ಯಶಸ್ವಿನಿ ಹೈರಾಣಾಗುತ್ತಿದ್ದಳು.

ಈಗ ಕೋರ್ಟಿಗೆ ಬೇಸಿಗೆ ಬಿಡುವು ಸುರುವಾಗಲಿತ್ತು. ಯಶಸ್ವಿನಿ ತುಂಬ ಆಸ್ಥೆಯಿಂದ ಗಂಡ-ಮಕ್ಕಳಿಗಾಗಿ ಹಲವಾರು ವಸ್ತುಗಳನ್ನು ಖರೀದಿಸಿದಳು. ಎಲ್ಲಾ ಸಾಮಾನು ನೀಟಾಗಿ ಪ್ಯಾಕ್ ಮಾಡಿದಳು. ದೀರ್ಘವಾದ ರಜೆ ಇದೆ, ನಾನು ಮನೆಗೆ

ಬರುತ್ತಿದ್ದೇನೆ, ನನಗೆ ಬಹಳ ಖುಶಿಯಾಗಿದೆ, ಎಂದು ಗಂಡನಿಗೆ ಪತ್ರ ಬರೆದಳು. ಇಡಿಯ ರಜೆಯ ಅವಧಿಯಲ್ಲಿ ಗಂಡನಿಗೂ, ಮಕ್ಕಳಿಗೂ ಜೊತೆಯಾಗಿ ಇಷ್ಟು ದಿನ ತಾನಿಲ್ಲದ ಕೊರತೆಯನ್ನು ತುಂಬಿ ಕೊಡುವೆನೆಂದು ಯೋಚಿಸಿ ಆನಂದಪಟ್ಟಳು. ಚಿಕ್ಕ ಹುಡುಗಿಯಂತೆ ರೋಮಾಂಚನ ಅನುಭವಿಸಿದಳು.

ಆದರೆ ಸ್ವಂತದ ಕಷ್ಟ-ಸುಖಗಳ ಬಗ್ಗೆ ಯೋಚಿಸುತ್ತ ಕರ್ತವ್ಯವನ್ನು ನಿರ್ಲಕ್ಷಿಸುವ ಅಧಿಕಾರಿಯಾಗಿರಲಿಲ್ಲ ಆಕೆ. ರಜೆ ಸುರುವಾಗುವ ಮೊದಲು ಯಾವ ಮಹತ್ವದ ಕೇಸೂ, ವಿಶೇಷವಾಗಿ ಹೆಣ್ಣುಮಕ್ಕಳಿಗೆ ಸಂಬಂಧಿಸಿದ್ದು, ಪೆಂಡಿಂಗ್ ಉಳಿಯದ ಹಾಗೆ ಕೆಲಸ ನಿರ್ವಹಿಸಿದಳು. ಬೇರೆ ಮ್ಯಾಜಿಸ್ಟ್ರೇಟರು ಬೇಕೆಂತಲೇ ಕೇಸು ಮುಂದೆ ಮುಂದೆ ಹಾಕುತ್ತಾರೆ. ಈ ಮೇಡಮ್ಮು ಎಷ್ಟು ಬೇಗ ಎಲ್ಲ ಇತ್ಯರ್ಥ ಮಾಡುತ್ತಾರೆ, ಅಂತ ಕೋರ್ಟಿನ ಒಳಗೂ ಹೊರಗೂ ಜನ ಮಾತಾಡಿದರು. ಹಾಗೆ ಆಕೆ ಬಹಳಷ್ಟು ವ್ಯಾಜ್ಯಗಳನ್ನು ಬಗೆಹರಿಸಿದಳು : ರೆವ್ಹೆನ್ಯೂ ಡಿಪಾರ್ಟಮೆಂಟಿನಲ್ಲಿ ಮೊದಲ ದರ್ಜೆ ಗುಮಾಸ್ತನಾಗಿದ್ದ ಮಲ್ಲಪ್ಪ ಕುಡಿದು-ಕುಡಿದು ಹಣ ಹಾಳು ಮಾಡುತ್ತ ಸಂಸಾರ ನಿರ್ಲಕ್ಷಿಸುತ್ತ ಇದ್ದ. ಆತನ ಪ್ರತಿ ತಿಂಗಳ ಸಂಬಳದಲ್ಲಿ ಅರ್ಧದಷ್ಟು ನೇರವಾಗಿ ಆತನ ಹೆಂಡತಿಗೆ ಸಿಗುವ ವ್ಯವಸ್ಥೆಯನ್ನು ಯಶಸ್ವಿನಿ ಮಾಡಿದಳು. ಹೆಂಡತಿ ಮತ್ತು ಮೂರು ಚಿಕ್ಕ ಮಕ್ಕಳಿದ್ದೂ ಮತ್ತೊಬ್ಬಳೊಂದಿಗೆ ಕೂಡಾವಳಿ ಮಾಡಿಕೊಂಡು ಮನೆತನದ ಆಸ್ತಿ-ಪಾಸ್ತಿ, ಬಂಗಾರ-ಹಣ ಎಲ್ಲವನ್ನೂ ಎರಡನೆಯವಳಿಗೇ ಕೊಡುವ ಹವಣಿಕೆಯಲ್ಲಿದ್ದ ಕಾಲೇಜು ಶಿಕ್ಷಕ ಶಿವಮೂರ್ತಿಯಿಂದ ಆತನ ಹೆಂಡತಿಗೆ ಆಕೆ ಬಯಸಿದಂತೆ ವಿಚ್ಛೇದನೆ ಕೊಡಿಸಿ ಪಿತ್ರಾರ್ಜಿತ ಆಸ್ತಿಯ ಬಹುಪಾಲು ಆಕೆಗೂ, ಮಕ್ಕಳಿಗೂ ಸಿಗುವಂತೆ ತೀರ್ಪು ಇತ್ತಳು. ಹೊಸದಾಗಿ ಮದುವೆಯಾಗಿ ಕರೆತಂದ ವಧುವಿಗೆ ವರದಕ್ಷಿಣೆಗಾಗಿ ಕಿರುಕುಳ ನೀಡುತ್ತಿದ್ದ ಪಿ.ಡಬ್ಲ್ಯೂ.ಡಿ. ಯಲ್ಲಿ ಇಂಜಿನೀಯರ ಆಗಿದ್ದ ಮಹಾದೇವ ಶೆಟ್ಟಿಯನ್ನು ಕರೆಸಿ ಛೀಮಾರಿ ಹಾಕಿ ಹೆಂಡತಿಯನ್ನು ಸರಿಯಾಗಿ ಬಾಳಿಸಬೇಕೆಂದು ತಾಕೀತು ಮಾಡಿ, ತಪ್ಪಿದರೆ ನೌಕರಿ ಹೋದೀತೆಂದು ಎಚ್ಚರಿಕೆ ನೀಡಿ ಖುಲಾಸೆ ಮಾಡಿದಳು. ಅಣ್ಣ ಸತ್ತ ನಂತರ ಆತನ ವಿಧವೆ ಪತ್ನಿಯನ್ನು ಬೀದಿಪಾಲು ಮಾಡಿದ್ದ ಡಾ. ಮಧುಕರನಿಂದ ಆತನ ಅತ್ತಿಗೆಗೆ ಆಸ್ತಿಯ ಪಾಲು ಕೊಡಿಸಿ ಆಕೆಗೆ ಕಿರುಕುಳ ನೀಡಿದ್ದರಿಂದ ಆರು ತಿಂಗಳ ಸಾದಾಶಿಕ್ಷೆ ವಿಧಿಸಿ, ಆತ ಮತ್ತೆ ಸೊಲ್ಲೆತ್ತದಂತೆ ಮಾಡಿದಳು. ಉನ್ನತ ಬ್ಯಾಂಕ್ ಅಧಿಕಾರಿಯಾಗಿದ್ದ ಅಪ್ಪಾಸಾಹೇಬ ಪಾಟೀಲ ಕಾರಣವಿಲ್ಲದೆ ತನ್ನ ಮೂರನೆಯ ಹೆಂಡತಿಗೆ ವಿಚ್ಛೇದನ ನೀಡಲು ಪ್ರಯತ್ನಿಸುತ್ತಿದ್ದುದನ್ನು ತಡೆದು ಇಬ್ಬರಿಗೂ ರಾಜಿ ಮಾಡಿಸಿದಳು. ಫ್ಯಾಕ್ಟರಿ ಮಾಲೀಕ ಸಾಂಬ್ರಾಣಿ ತನ್ನ ಕೈಕೆಳಗಿನ ನಾಲ್ಕನೆಯ ದರ್ಜೆ

ಮಹಿಳಾ ಉದ್ಯೋಗಿಯೊಬ್ಬಳಿಗೆ ಲೈಂಗಿಕ ಕಿರುಕುಳ ನೀಡುತ್ತಿದ್ದುದನ್ನು ಸಾಬೀತುಪಡಿಸಿ ಆತನಿಗೆ ದಂಡವನ್ನೂ ಆಕೆಗೆ ಪರಿಹಾರವನ್ನು ವಿಧಿಸಿದ್ದಳು.

ಹೀಗೆ ರಜೆಯ ಮೊದಲು ಎಲ್ಲ ಕೇಸುಗಳನ್ನೂ ಯಶಸ್ವಿನಿ ತೃಪ್ತಿಕರವಾಗಿ ಇತ್ಯರ್ಥ ಮಾಡಿ ಸಮಾಧಾನದಿಂದ ಬೆಂಗಳೂರಿನ ಬಸ್ಸು ಏರಿ ಕೂತಳು.

೩

ಬಸ್ಸು ಹೊರಟಾಗ ಮಾತ್ರ ಆಕೆ ಕೇಸುಗಳನ್ನೂ ವಕೀಲರ ವಾದ-ಪ್ರತಿವಾದಗಳನ್ನೂ ಸಂಪೂರ್ಣವಾಗಿ ಮರೆತಳು. ಆಕೆಯ ಕಣ್ಣತುಂಬ, ಮನಸ್ಸುತುಂಬ ಮನೆ, ತನ್ನ ಮನೆ, ಗಂಡ, ಮಕ್ಕಳು ತುಂಬಿದರು. ಇಂಜಿನೀಯರಿಂಗ್ ಓದುತ್ತಿದ್ದ, ಇನ್ನೂ ತಾಯಿಯ ಕಡೆಯಿಂದಲೇ ಜಡೆ ಹಾಕಿಸಿಕೊಳ್ಳುತ್ತಿದ್ದ ಮಗಳು, ಪಾಪ, ಏನು ಮಾಡುತ್ತಿದ್ದಾಳೋ, ರಾತ್ರಿಯ ಹೊತ್ತಿನಲ್ಲಿ ವಿದ್ಯುತ್ ಹೋಗಿ ದೀಪಗಳು ಆರಿದರೆ ಓಡಿ ಬಂದು ತಾಯಿಯ ಮಗ್ಗುಲಲ್ಲಿ ಮಲಗುವ ಮಗ, ಪಾಪ, ಹೇಗೆ ಈ ಕಷ್ಟಗಳನ್ನು ಎದುರಿಸುತ್ತಿದ್ದಾನೋ, ಮುಖ್ಯವಾಗಿ ಗಂಡ ಮನೋಹರ, ಅದೆಷ್ಟೋ ವರ್ಷಗಳಿಂದ ಹಗಲಿರುಳೂ ಜೊತೆಯಾಗಿದ್ದ ಹೆಂಡತಿಯನ್ನು ಅಗಲಿ ಎಷ್ಟು ಒದ್ದಾಡುತ್ತಿದ್ದಾನೋ. ನೆನೆಯುತ್ತಿದ್ದಂತೆ ಯಶಸ್ವಿನಿಗೆ ಕಣ್ಣುತುಂಬಿ ಬಂದವು. ಈ ರಜೆಯ ಪ್ರತಿಯೊಂದು ಕ್ಷಣವನ್ನೂ ಆಕೆ ತನ್ನವರಿಗಾಗಿ ಮೀಸಲಿಡುವಳು. ಸಾಧ್ಯವಾದರೆ ರಜೆಯನ್ನು ವಿಸ್ತರಿಸುವಳು. ಇನ್ನೂ ಒಂದಿಷ್ಟು ಯೋಚಿಸಿದರೆ ನೌಕರಿಗೇ ರಾಜೀನಾಮೆ ಕೊಡಬೇಕು ಅನ್ನಿಸುತ್ತದಲ್ಲ. ಆ ಬಗೆಗೂ ಮನೋಹರನೊಂದಿಗೆ ಈ ಸಲ ಸಮಾಲೋಚಿಸಬೇಕು. ಸಂಸಾರದ ಸುಖ ಮತ್ತು ಶಾಂತಿಗಿಂತ ಯಾವುದೂ ಹೆಚ್ಚಿನದಲ್ಲವಲ್ಲ.

೪

ಇಷ್ಟು ದಿನಗಳ ನಂತರ ಯಶಸ್ವಿನಿ ಮನೆಗೆ ಬಂದಿದ್ದಳು. ಅವಳನ್ನು ಎದುರುಗೊಳ್ಳಲು ಯಾರೂ ಬಸ್‌ಸ್ಟ್ಯಾಂಡಿಗೆ ಬಂದಿರಲಿಲ್ಲ. ಮನೆಯಲ್ಲೂ ಅತ್ತೆ ಒಬ್ಬರೇ ಇದ್ದರು. ಮಗಳು ಕಾಲೇಜಿನ ಸಹಪಾಠಿಗಳೊಂದಿಗೆ ಪಿಕ್‌ನಿಕ್‌ಗೆ ಹೋಗಿದ್ದಳು. ರವಿವಾರವಾದುದರಿಂದ ಮಗ ಕ್ರಿಕೆಟ್ ಆಡಲು ಹೋಗಿದ್ದ. ಸಂಜೆಯಾಗಿತ್ತೆಂದು ಮನೋಹರ ಕ್ಲಬ್ಬಿಗೆ ಹೋಗಿದ್ದ.

ಒಂದು ಕ್ಷಣ ಮನಸ್ಸಿಗೆ ಪಿಚ್ಚೆನ್ನಿಸಿದರೂ ಆಕೆ ಸಾವರಿಸಿಕೊಂಡಳು. ಕೈಕಾಲು ಮುಖ ತೊಳೆದು, ಅತ್ತೆ ಕೊಟ್ಟ ಚಹಾ ಕುಡಿದಳು. ನೀನು ಹೇಗಿದ್ದೀ, ಕೆಲಸ ಹೇಗೆ ನಡೆದಿದೆ, ಆರೋಗ್ಯವೇ ಅಂತ ಏನೂ ಕೇಳದೆ ಅತ್ತೆ ಈಚೆಗೆ ಮದುವೆಯಾದ ತನ್ನ ಮಗಳು ಅಂದರೆ ಮನೋಹರನ ತಂಗಿಯ ಸಂಭ್ರಮವನ್ನೇ ವರ್ಣಿಸುತ್ತ ಕೂತಾಗ

ಯಶಸ್ವಿನಿ ಎದ್ದು ಮಲಗುವ ಕೋಣೆಗೆ ಹೋಗಿ ಅಡ್ಡಾದಳು. ಆಕೆಯ ಕಣ್ಣುಗಳು ಕೂಡಲೇ ಮುಚ್ಚಿಕೊಂಡವು.

ರಾತ್ರಿ ಅದೆಷ್ಟೋ ಹೊತ್ತಿನಲ್ಲಿ ಅತ್ತೆ ಆಕೆಯನ್ನು ಎಬ್ಬಿಸಿದರು. 'ಏಳಮ್ಮಾ, ಊಟ ಮಾಡು, ಮಕ್ಕಳು ಊಟ ಮಾಡಿ ಮಲಗಿಬಿಟ್ಟರು, ಮನು ಬರೋದು ಬಹಳ ತಡವಾದೀತು, ಇಂದು ರವಿವಾರವಲ್ಲವೆ, ಅವನಿಗೂ ಇದೊಂದೇ ದಿನ ಸಿಗೋದು. ನೀನು ಉಂಡು ಮುಗಿಸಿ ವಿಶ್ರಾಂತಿ ತಗೋ. ಕೀರ್ತಿ ಪಿಕ್‌ನಿಕ್‌ನಿಂದ ದಣಿದು ಬಂದು, ಊಟ ಮಾಡಿ ಮಲಗಿಯೇ ಬಿಟ್ಟಳು. ಕಿರಣ ಪಾಪ, ಆಡುವಾಗ ಕಾಲು ಉಳುಕಿತಂತೆ, ಎಣ್ಣೆ ಹಚ್ಚಿ ತಿಕ್ಕಿದ್ದೇನೆ, ಸಾಕಾಗಿದೆ ಅಂತ ಮಲಗಿದ್ದಾನೆ. ನೀನು ಏಳಮ್ಮಾ....'

ಎಲ್ಲೋ ಏನೋ ತಪ್ಪುತ್ತಿದೆ ಅನಿಸಿತು ಯಶಸ್ವಿನಿಗೆ. ಆಕೆ ಎದ್ದು ಮುಖ ತೊಳೆದು, ಮಲಗಿದ್ದ ಮಕ್ಕಳಿಬ್ಬರನ್ನೂ ಕಣ್ಣುತುಂಬ ನೋಡಿ, ಅವರ ಹಣೆಗಳನ್ನು ಮೃದುವಾಗಿ ಮುದ್ದಿಸಿ, ಊಟ ಮಾಡಿ, ಮತ್ತೆ ಮಲಗಿದಳು. ನಾಳೆಯಿಂದ ನಿಧಾನವಾಗಿ ಎಲ್ಲವನ್ನೂ ಕೈಗೆ ತೆಗೆದುಕೊಳ್ಳೋಣವೆಂದು ಯೋಚಿಸಿ ಸಮಾಧಾನಪಟ್ಟುಕೊಂಡಳು. ಮಧ್ಯ ರಾತ್ರಿ ದಾಟಿದ ನಂತರ ಮನೆಗೆ ಬಂದು, ತಾಯಿ ಬಡಿಸಿದ ಊಟ ಮಾಡಿ ಹಾಸಿಗೆಗೆ ಬಂದು ಮಾತೇ ಆಡದೆ ಬಿಗಿದಪ್ಪಿದ ಮನೋಹರನಿಗೆ, ನಿದ್ದೆ ಕೆಟ್ಟಿದ್ದಕ್ಕೆ ಸಿಟ್ಟು ಬಂದರೂ ಹೇಳದೆ, ಸಹಕಾರ ನೀಡಿದಳು.

ಮರುದಿನ ಮುಂಜಾನೆ ಯಶಸ್ವಿನಿ ಎಲ್ಲರಿಗಿಂತ ಮುಂಚಿತವಾಗಿ ಎದ್ದಳು. ಬೇಗನೆ ಕಾಲೇಜಿಗೆ ಹೋಗಲಿರುವ ಮಗಳಿಗಾಗಿ ಅವಳಿಗಿಷ್ಟವಾದ ಮಸಾಲೆ ಉಪ್ಪಿಟ್ಟು ಮಾಡಿದಳು. ತಿನ್ನುತ್ತ ಕೂತ ಮಗಳನ್ನೆ ನೋಡುತ್ತ ನಿಂತಳು. ಅಮ್ಮಾ, ಇವತ್ತಿನ ತಿಂಡಿ ಎಕ್ಸಲೆಂಟ್ ಆಗಿದೆ. ಎಷ್ಟೋ ದಿನ ಆಗಿತ್ತು ಇಂಥ ಉಪ್ಪಿಟ್ಟು ತಿಂದು, ಯು ಆರ್ ಗ್ರೇಟ್ ಮಮಾ, ಅಂತ ಕೀರ್ತಿ ಅನ್ನುತ್ತಾಳೆಂದು ನಿರೀಕ್ಷಿಸಿದಳು.

ಇಲ್ಲ. ಬದಲಿಗೆ, ಏನು ಮಮಾ, ಉಪ್ಪಿಟ್ಟು ಮಾಡಿದ್ದೀ, ಈಗೆಲ್ಲ ಇದನ್ನು ಯಾರೂ ಇಷ್ಟಪಡೋದಿಲ್ಲ. ನೂಡಲ್ಸ್ ಮಾಡಲು ಹೇಳಿದ್ದೆ ನಾನು ಅಜ್ಜಿಗೆ– ಅಂದಳು. ಮಗಳು ದೊಡ್ಡವಳಾಗಿದ್ದಾಳೆ. ಅವಳ ಇಷ್ಟಾನಿಷ್ಟಗಳೂ ಬದಲಾಗಿವೆ. ತಾನೇ ಹೊಂದಿಕೊಳ್ಳಬೇಕು.

ಸ್ಕೂಲಿಗೆ ಹೊರಟ ಮಗ ಕಿರಣ ಎಷ್ಟು ಎತ್ತರವಾಗಿದ್ದಾನೆ. ಎಷ್ಟು ಸ್ಮಾರ್ಟ್ ಆಗಿದ್ದಾನೆ. ತಾನು ಮೊದಲ ಸಲ ನೋಡಿದಾಗ ಮನೋಹರನೂ ಹೀಗೆಯೇ ಇದ್ದ. ಪ್ರೀತಿಯಿಂದ ಯಶಸ್ವಿನಿ ಮಗನ ಮುಖವನ್ನು ಬೊಗಸೆಯಲ್ಲಿ ಹಿಡಿದು ಹಣೆಗೊಂದು ಮುತ್ತನ್ನಿತ್ತಳು. ಆತ ಕೊಸರಿಕೊಂಡು ಥೂ, ಬಿಡು ಮಮಾ, ನನ್ನ ಹೇರ್ ಸ್ಟಾಯಿಲ್ ಕೆಡಿಸಿಬಿಟ್ಟೆ ಅಂತ ಓಡಿ ಹೋದ.

ಅಡಿಗೆಮನೆಗೆ ಬಂದು ಅತ್ತೆ, ಇಂದಿನಿಂದ ನಿಮಗೆ ರೆಸ್ಟ್, ನಾನು ಇರುವ ವರೆಗೂ ಅಡಿಗೆಮನೆ ಚಾರ್ಜು ನನ್ನದೇ, ಅಂತ ಹೇಳಿ ಸೆರಗು ಸಿಕ್ಕಿಸಿ ಕೆಲಸ ಸುರು ಮಾಡಿದಳು. ನಿನ್ನೆಯೇ ಬಂದಿದ್ದೀ, ನೀನೇ ರೆಸ್ಟ್ ತಗೋ, ನಾನೆಲ್ಲ ನೋಡಿಕೊಳ್ತೀನಿ, ಅಂತ ಅತ್ತೆ ಅಂದರು. ಒತ್ತಾಯಿಸಿದರೂ ಅವರು ಅಡಿಗೆಮನೆಯಿಂದ ಆಚೆಗೆ ಹೋಗದಿದ್ದಾಗ ಯಶಸ್ವಿನಿ ನಗುತ್ತಲೇ ಬಲವಂತವಾಗಿ ಅವರನ್ನು ಕೈಹಿಡಿದು ಎಳೆದು ತಂದು ಹಾಲ್‌ನಲ್ಲಿ ಸೋಫಾದ ಮೇಲೆ ಕೂಡ್ರಿಸಿದಳು. ಆಗ ಬಿಟ್ಟುಬಿಟ್ಟು ಅತ್ತೆ ಮಾತಾಡಿದರು. ಮನೂ ಊಟದ ಬಗ್ಗೆ ಬಹಳ ಪರ್ಟಿಕ್ಯುಲರ್ ಇದ್ದಾನೆ, ಇಂತಹ ಪದಾರ್ಥ ಹೀಗೆಯೇ ಆಗಬೇಕೆಂದು ಅವನ ಹಟ, ಹೆಚ್ಚು-ಕಡಿಮೆ ಆದರೆ ಊಟ ಬಿಟ್ಟೇಳುತ್ತಾನೆ. ಇತ್ಯಾದಿ. ಇತ್ಯಾದಿ. ಬಹಿರಂಗವಾಗಿ ಯಶಸ್ವಿನಿ ಏನೂ ಹೇಳಲಿಲ್ಲ. ಮನಸ್ಸಿನಲ್ಲಿ ಮಾತ್ರ ಅಂದುಕೊಂಡಳು, ಎಲಾ ಮುದುಕಿ, ಏಳೆಂಟು ತಿಂಗಳು ನಾನು ದೂರವಾಗಿದ್ದ ಮಾತ್ರಕ್ಕೆ ನನ್ನ ಗಂಡನಿಗೇ ಪರಕೀಯಳಾಗುವೆನೆ ? ನನ್ನ ಕೈಯಡಿಗೆಗಿಂತ ಹೆಚ್ಚು ಪ್ರಿಯವಾದುದು ಅವನಿಗೇನಿದ್ದೀತು ? ಆಗಲಿ, ನೋಡಿಯೇ ಬಿಡೋಣ.

ಆದರೆ ಮಧ್ಯಾಹ್ನ ಊಟಕ್ಕೆ ಕೂತಾಗ ಮನೋಹರ ತುತ್ತಿಗೊಮ್ಮೆ ಛೇ, ಏನಿದು ಪಲ್ಯ ಇಷ್ಟು ಖಾರ, ಸಾರಿಗೆ ನೀರು ಜಾಸ್ತಿ. ಚಟ್ನಿಗೆ ಒಂಥರಾ ಟೇಸ್ಟ್ ಇದೆ. ಅಂತೆಲ್ಲ ಮುಖ ಸಿಂಡರಿಸಿದಾಗ ಆಕೆಗೆ ನಿಜವಾಗಿ ಚಿಂತೆಯಾಯಿತು. ಇವತ್ತು ನಿನ್ನ ಹೆಂಡತಿ ಅಡಿಗೆ ಮಾಡಿದ್ದು ಮಾರಾಯಾ, ಅಂತ ಅತ್ತೆ ನಕ್ಕು ಹೇಳಿದಾಗ ಆತ ಒಮ್ಮೆಲೆ ಸುಮ್ಮನಾಗಿದ್ದ.

ಯಶಸ್ವಿನಿ ಮನೆಗೆ ಬಂದು ಒಂದು ವಾರ ಕಳೆದಿತ್ತು. ಯಾವುದೂ ಬದಲಾಗಿರಲಿಲ್ಲ. ಮಗಳು ತನ್ನದೇ ಜಗತ್ತಿನಲ್ಲಿದ್ದಳು. ಅಜ್ಜೀ, ಹಸಿವೆಯಾಗಿದೆ, ಅಜ್ಜೀ ಟೀ ಕೊಡು, ಅಜ್ಜೀ ಜಡೆ ಹಾಕು ಬಾ, ಅಜ್ಜೀ ಟಿಫಿನ್ ಬಾಕ್ಸ್ ರೆಡಿ ಆಯಿತೇ, ಅಂತ ಹತ್ತು ಸಲ ಅಜ್ಜಿಯನ್ನೇ ಕೂಗುತ್ತಿದ್ದಳು. ಒಂದೆರಡು ಸಲ ಮಾತ್ರ ಯಶಸ್ವಿನಿಯ ಬಳಿ ಬಂದು ಅಮ್ಮಾ, ಸೌಥ್ ಇಂಡಿಯಾ ಇಂಡಸ್ಟ್ರಿಯಲ್ ಟೂರ್‌ಗೆ ಹೋಗಬೇಕು, ಐದು ಸಾವಿರ ಆಗುತ್ತದೆ, ಮೇಲೆ ಶಾಪಿಂಗ್‌ಗೆ ಒಂದೈದು ಸಾವಿರ, ಒಟ್ಟು ಹತ್ತು ಸಾವಿರಕ್ಕೆ ಚೆಕ್ ಕೊಟ್ಟು ಬಿಡ್ತೀಯಾ, ಅಂತ ಕೇಳಿ ಇಸಗೊಂಡಿದ್ದಳು. ಗ್ಯಾದರಿಂಗ್ ಇದೆ, ಹೊಸ ಡ್ರೆಸ್ ತಗೋ ಬೇಕು, ಒಂದಿಷ್ಟು ದುಡ್ಡು ಕೊಟ್ಟಿರು ಮಮಾ, ಅಂದಿದ್ದಳು.

ಯಶಸ್ವಿನಿಗೆ ಕಿರಣನ ಮೇಲೆ ವಿಶೇಷ ಪ್ರೀತಿ. ಗಂಡು ಮಗ ಅಂತ ಅಲ್ಲ, ಆತ ಚಿಕ್ಕಮಗುವಾಗಿದ್ದಾಗಿನಿಂದಲೂ ಸದಾ ಅಮ್ಮನಿಗೆ ಅಂಟಿಕೊಂಡೇ ಇರುತ್ತಿದ್ದುದರಿಂದಾಗಿ ಇರಬೇಕು. ಈಗ ದೊಡ್ಡವನಾಗಿದ್ದಾನೆ. ತಾನು ರಾಮನಗರಕ್ಕೆ

ವರ್ಗವಾಗಿ ಹೋದಾಗಿನಿಂದಂತೂ ಬಹಳೇ ದೊಡ್ಡವನಾಗಿದ್ದಾನೆ. ಸದಾ ಟ್ಯೂಶನ್, ಕ್ರಿಕೆಟ್, ಗೆಳೆಯರು ಅಂತ ಹೊರಗೇ ಇರುತ್ತಾನೆ. ಮನೆಯಲ್ಲಿದ್ದಾಗ ತಂದೆಯೊಂದಿಗೆ ರಾಷ್ಟ್ರೀಯ-ಅಂತರ್ರಾಷ್ಟ್ರೀಯ ವಿದ್ಯಮಾನಗಳ ಬಗ್ಗೆ ಮಾತಾಡುತ್ತಾನೆ. ಯಶಸ್ವಿನಿ ಏನಾದರೂ ಹೇಳಬಂದರೆ, ನೋ ಮಮ್ಮಾ, ಯೂ ಕಾಂಟ್ ಅಂಡರ್‌ಸ್ಟ್ಯಾಂಡ್ ದೀಜ್ ಥಿಂಗ್ಸ್ ಅನ್ನುತ್ತಾನೆ. ಅಜ್ಜೀ, ನೀನೇ ಹೋಳು ಹಾಕಿ ಹುಳಿ ಮಾಡು, ಅಂತ ಹೇಳುತ್ತಾನೆ, ರಾತ್ರಿ ಯಶಸ್ವಿನಿ ಆತನ ಕೋಣೆಗೆ ಹೋಗಿ ಕೂತು ಎಲ್ಲ ಕಡೆ ಹರವಿದ ವಸ್ತುಗಳನ್ನು ಸರಿಪಡಿಸಲು ತೊಡಗಿದರೆ, ಮಗನಿಗೆ ಮುದ್ದು ಮಾಡಲು ಹೋದರೆ, ನಿನಗೀಗ ರಜೆ ಇದೆ, ಹೋಗಿ ವಿಶ್ರಾಂತಿ ತಗೋಬಾರದೆ, ಅನ್ನುತ್ತಾನೆ. ದೂರವಾಗುತ್ತಾನೆ. ಆದರೆ ಗಂಭೀರವಾಗಿ, ಮಮ್ಮಾ, ಯೂ ನೋ, ನಾನು ಕಂಪ್ಯೂಟರ್ ಇಂಜಿನೀಯರಿಂಗ್ ಮಾಡಬೇಕು ಅಂತ ನಿರ್ಧರಿಸಿದ್ದೇನೆ, ಇನ್ನೂ ಎರಡು ವರ್ಷ ಟೈಮಿದೆ, ಮೆರಿಟ್ ಸೀಟ್ ಸಿಗೋದು ಕಷ್ಟವೇ. ಪೇಮೆಂಟ್ ಸೀಟಿಗಾಗಿ ಹಣ ರೆಡಿ ಮಾಡಿಡು, ಈಗಲೇ ಹೇಳಿದ್ದೇನೆ ನೋಡು, ಅಂತ ತುಂಬ ದೂರದೃಷ್ಟಿಯುಳ್ಳವನ ಹಾಗೆ ಮಾತಾಡುತ್ತಾನೆ.

ಎಂಟು ದಿನ, ಹದಿನೈದು ದಿನ, ಇಪ್ಪತ್ತು ದಿನ.... ಯಶಸ್ವಿನಿಗೆ ನಿಜವಾಗಿ ಆತಂಕವೆನಿಸತೊಡಗಿತು. ಎಂತಹ ವೆಲ್‌ನಿಟ್ ಕುಟುಂಬವಾಗಿತ್ತು ತನ್ನದು. ಮಕ್ಕಳು-ಗಂಡ ತನಗೆ ಎಷ್ಟು ಹತ್ತಿರವಾಗಿದ್ದರು. ಯಾಕೆ ಹೀಗಾಯಿತು ?

– ಅಥವಾ ಅವರು ಹತ್ತಿರವಾಗಿದ್ದರೆಂಬುದು ತನ್ನದೇ ತಪ್ಪು ತಿಳುವಳಿಕೆಯಾಗಿತ್ತೇ ?

ಇಲ್ಲ. ಅವರೆಲ್ಲರ ಪ್ರೀತಿಯನ್ನು ಹೀಗೆ ಕಳೆದುಕೊಳ್ಳುತ್ತ ಹೋಗಲು ತಾನು ತಯಾರಿಲ್ಲ. ವ್ಹಾಲಂಟರಿ ರಿಟಾಯರ್‌ಮೆಂಟ್ ಬಗ್ಗೆ ತಾನೀಗ ಸೀರಿಯಸ್ಸಾಗಿ ವಿಚಾರಿಸುವುದೊಳಿತು. ಪೆನ್‌ಶನ್ ಅಂತೂ ಸಿಕ್ಕೇ ಸಿಗುತ್ತದೆ. ತನ್ನ ಈ ಪುಟ್ಟ ಸಂಸಾರ ಸುಖಿಯಾಗಿರಲು, ಕಂಫರ್ಟೆಬಲ್ ಆಗಿರಲು, ಈಗಾಗಲೇ ತಾನು ದುಡಿದು ಗಳಿಸಿದ್ದು ಸಾಕು. ತಾನಿನ್ನು ಮತ್ತೆ ಮನೆ ಬಿಟ್ಟು ಹೋಗುವುದು ಬೇಡ. ಅತ್ತೆಗೂ ವಯಸ್ಸಾಗಿದೆ. ತನ್ನ ಸಂಸಾರದ ಭಾರವನ್ನು ಅವರ ಮೇಲೆ ಹೊರಿಸುವುದು ಸರಿಯಲ್ಲ. ಕಣ್ಣಿನಿಂದ ದೂರವಾದವರು ಮನಸ್ಸಿನಿಂದಲೂ ದೂರವಾಗುತ್ತಾರೆನ್ನುವುದರಲ್ಲಿ ತಥ್ಯವಿದ್ದರೂ ಇದ್ದೀತು. ಇಲ್ಲ, ತನ್ನ ಜೀವಕ್ಕಿಂತ ಪ್ರಿಯರಾದ ಮನೋಹರ, ಕೀರ್ತಿ, ಕಿರಣರನ್ನು ಬಿಟ್ಟು ಇನ್ನು ಎಲ್ಲಿಯೂ ಹೋಗಬಾರದು. ಇದೇ ಸರಿ ಅಂತ ಕಾಣುತ್ತದೆ. ಮನೋಹರನಿಗೂ ಇದು ಸರಿಯೆನಿಸುವುದರಲ್ಲಿ ಸಂಶಯವಿಲ್ಲ. ಪರ್ಫೆಕ್ಟ್ ಅಂಡರ್‌ಸ್ಟ್ಯಾಂಡಿಂಗ್ ಇರುವ ಗಂಡ ಆತ.

೫

ಏನಂದೆ ಯಶೂ, ನಿನಗೆ ತಲೆ ಕೆಟ್ಟಿದೆಯೇ ? ರಿಟಾಯರ್‌ಮೆಂಟ್ ತಗೊಳ್ಳುತ್ತೀಯಾ ? ಆರ್ ಯೂ ಜೋಕಿಂಗ್ ? ಇಂತಹ ಒಳ್ಳೇ ಕೆಲಸ, ಎಷ್ಟು ಮರ್ಯಾದೆ, ಎಂತಹ ಅಂತಸ್ತು, ಏನೆಲ್ಲಾ ಸೌಲಭ್ಯಗಳು. ನಿನ್ನ ನೌಕರಿ ರಾಮನಗರದಲ್ಲಿದ್ದರೂ ನಿನ್ನ ಕಡೆ ಕೇಸು ಇದ್ದವರು ಬೆಂಗಳೂರಿನ ಈ ನಮ್ಮ ಮನೆಗೆ ಏನೆಲ್ಲ ಸಾಮಾನು ತಂದುಕೊಡುತ್ತಾರೆ. ಅಲ್ಲ, ಸಿಟ್ಟಾಗಬೇಡ, ಅವರು ಪ್ರೀತಿಯಿಂದ ಕೊಟ್ಟದ್ದು ನಾವು ತಗೊಂಡರೇನು ತಪ್ಪು ? ಬೇಡವೆ ? ಸರಿ, ಆಗಲಿ, ಇನ್ನು ಮುಂದೆ ತಗೊಳ್ಳುವುದಿಲ್ಲ. ಆದರೆ ರಿಟಾಯರ್‌ಮೆಂಟ್ ತಗೊಳ್ಳೋ ವಿಚಾರ ಮಾತ್ರ ಮೂರ್ಖತನದ್ದು. ಅದು ಸಾಧ್ಯವಿಲ್ಲ.

ಅಲ್ಲ ಯಶೂ, ಸ್ವಲ್ಪ ವಿಚಾರ ಮಾಡು. ನೀನು ಇಲ್ಲಿದ್ದಾಗ ಸೈಟು ಅಲಾಟ್ ಆಗಿತ್ತಲ್ಲ, ಅಲ್ಲಿ ಮನೆ ಕಟ್ಟಿಸಲು ಹೌಸಿಂಗ್ ಲೋನ್‌ಗೆ ಅರ್ಜಿ ಹಾಕಿದ್ದೇನೆ. ನಿನ್ನ ಹೆಸರಿನಲ್ಲೇ ಬೇಗ ಸಿಗುತ್ತದೆ ಅಂತ. ಈಗ ಸ್ಯಾಂಕ್ಶನ್ ಆಗಿದೆ, ಹತ್ತು ಲಕ್ಷ. ಮನೆ ಕಟ್ಟಿಸಬೇಕು. ಸಾಲವನ್ನೂ ತೀರಿಸಬೇಕಲ್ಲ. ನೀನೇ ನೋಡುತ್ತಿದ್ದೀ, ನಮ್ಮ ಕಾರು ಹಳೆಯದಾಗಿದೆ. ಹೊಸ ಮಾಡೆಲ್ ಇಂಡಿಕಾ ಬೇಕು ಅಂದಳು ಕೀರ್ತಿ, ಬೇಡ ಟಾಟಾ ಎಸ್ಟೀಮ್ ಇರಲಿ ಅಂದ ಕಿರಣ. ಆಗಲಿ, ಕಿರಣ ನಿನ್ನ ಪ್ರೀತಿಯ ಮಗನಲ್ಲವೇ, ಅವನಿಷ್ಟದಂತೆಯೇ ಆಗಲಿ, ಅಂತ ಎಸ್ಟೀಮ ಬುಕ್ ಮಾಡಿದ್ದೇನೆ. ಮುಂದಿನ ವಾರವೇ ಬರುತ್ತದೆ. ಹಾ, ನಿನ್ನ ರಜೆ ಇನ್ನೂ ಮುಗಿದಿರುವುದಿಲ್ಲ. ಹೊಸ ಕಾರು ನಿನ್ನಿಂದಲೇ ಓಪನಿಂಗ್ ಆಗಬೇಕಲ್ಲ.

ಮತ್ತೆ ನಿನಗೆ ಗೊತ್ತೇ ಇದೆ. ತಂಗಿಯ ಲಗ್ನಕ್ಕೆ ಮಾಡಿದ ಸಾಲ ಇನ್ನೂ ಇದೆ. ಈಗೇನೋ ಆಕೆ ಹೆರಿಗೆಗೆ ಬರುತ್ತಾಳೆ ಅನ್ನುತ್ತಿದ್ದಳು ಅಮ್ಮ. ಆಕೆಯ ಮಗುವಿಗೂ ಬಂಗಾರ-ಸಿಂಗಾರ ಅಂತ ಕೊಡಬೇಕಲ್ಲ. ನಮ್ಮ ಪ್ರೆಸ್ಟೀಜ್ ಪ್ರಶ್ನೆ.

ನೀನು ಇಮೋಶನಲ್ ಆಗಬೇಡ ಯಶೂ, ಪ್ರ್ಯಾಕ್ಟಿಕಲ್ ಆಗಿ ವಿಚಾರ ಮಾಡು. ಮನೆ ಬಿಟ್ಟು ಸ್ವಲ್ಪ ದೂರ ಇದ್ದದ್ದಕ್ಕೆ ಇಷ್ಟು ಬೇಜಾರು ಮಾಡಿಕೊಂಡರೆ ಹೇಗೆ ? ದೂರವಾದರೂ ಎಂತಹ ದೂರ ? ಒಂದು ದಿನದ ಪ್ರವಾಸ. ನೀನು ಬಾ ಅಂದ ಕೂಡಲೆ ನಾನು ಹಾರಿ ಬರುವೆ ನಿನ್ನ ಹತ್ತಿರ. ಎಷ್ಟೋ ಹೆಣ್ಣುಮಕ್ಕಳು ಈಗ ವರ್ಷಾನುಗಟ್ಟಲೆ ಪರದೇಶಗಳಿಗೂ ಹೋಗುತ್ತಾರೆ. ನೌಕರಿಗಾಗಿ ನಾಲ್ಕಾರು ವರ್ಷ ನೀನು ಮನೆ ಬಿಟ್ಟು ಪರಊರಿಗೆ ಹೋದರೇನಂತೆ ? ನೀನಂತೂ ಬಹಳ ಸೋಶಿಯಲ್ ಇದ್ದೀಯಾ. ಹೋದಲ್ಲೆಲ್ಲ ನಿನಗೆ ಫ್ರೆಂಡ್ಸ್ ಆಗುತ್ತಾರೆ, ಆ-ಈ ಕಾರ್ಯಕ್ರಮ ಅಂತ ಇರುತ್ತವೆ. ಹೇಗೋ ಟೈಮು ಕಳೆಯುತ್ತದೆ. ನೀನು ಹೇಗಾದರೂ ಅಡ್ಜಸ್ಟ್ ಮಾಡಿಕೊಳ್ಳಲು ಕಲಿತುಕೋ.

ರಿಟಾಯರ್‌ಮೆಂಟ್ ಈಜ್ ಇಂಪಾಸಿಬಲ್. ಆ ವಿಚಾರ ಮರೆತುಬಿಡು. –ಮನೋಹರ ಸ್ಪಷ್ಟವಾಗಿ ಹೇಳಿದ.

## ೬

ಇನ್ನೂ ಒಂದು ವಾರ ರಜೆ ಇದೆಯಲ್ಲಮ್ಮಾ, ಅದೇಕೆ ಇಷ್ಟು ಬೇಗ ತಿರುಗಿ ಹೊರಟಿದ್ದೀ, ರಜೆ ಮುಗಿಯುವ ವರೆಗೆ ಇದ್ದರಾಗಿತ್ತು, ಅಂದರು ಯಶಸ್ವಿನಿಯ ಅತ್ತೆ.

ಇಲ್ಲ, ಕೆಲಸಗಳಿವೆ. ಕೋರ್ಟು ಸುರುವಾಗುವ ಮೊದಲೇ ಮಾಡಬೇಕಾದ ಕೆಲಸವಿದೆ. ಮತ್ತೆ ದೀಪಾವಳಿಗೆ ಬರುತ್ತೇನೆ ಅಂತ ಹೇಳಿ ಯಶಸ್ವಿನಿ ರಾಮನಗರದ ಬಸ್ಸು ಹತ್ತಿದಳು.

ಸೋತವರಂತೆ ಬಸ್ಸು ನಿಧಾನವಾಗಿ ಹೊರಟಿತು.

❖ ❖ ❖

# ಒಂದು ಗಿಡ, ಒಂದು ಬಾವಿ

## ೧

ನಿನಗೆ ನೆನಪಿದೆಯೆ, ಐವತ್ತು ವರ್ಷಗಳ ಹಿಂದೆ ಈ ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ ? ಊರಲ್ಲಿನ ಪಟಾಕಿ ಸುಡುವ ಸಂಭ್ರಮ, ಸಿಹಿ ಹಂಚುವ ಹುರುಪು, ಪರಸ್ಪರ ಅಭಿನಂದಿಸಿಕೊಳ್ಳುವ ಆನಂದ, ಆ ಎಲ್ಲ ಗದ್ದಲ ಇಲ್ಲಿಯ ವರೆಗೂ ಕೇಳಿ ಬರುತ್ತಿತ್ತು. ನಾನು ಕಿವಿ ನಿಮಿರಿಸಿ ಕೇಳಿ ಸಂತೋಷ ಪಡುತ್ತಾ ಇದ್ದೆ. ಕೆಲ ದಿನಗಳ ಹಿಂದೆಯಷ್ಟೆ ಊರಲ್ಲಿ ಸ್ವಾತಂತ್ರ್ಯಕ್ಕಾಗಿ ಚಳುವಳಿ ನಡೆದಿತ್ತು. ನಾಯಕರು ಬರುತ್ತಿದ್ದರು. ಭಾಷಣ ಮಾಡುತ್ತಿದ್ದರು. ಕಡಪಾ ಮೈದಾನದಲ್ಲಿ ಮಾಡಿದ ಭಾಷಣಗಳು ಧ್ವನಿ ವರ್ಧಕದ ಮೂಲಕ ಊರಾಚೆಯ ಈ ಪ್ರದೇಶದ ವರೆಗೂ ಕೇಳಿ ಬಂದು, ನನ್ನ ಕಲ್ಲುಗಳಲ್ಲೂ ಸ್ಫೂರ್ತಿ ಉಕ್ಕಿಸುತ್ತಿದ್ದವು. ರಾಷ್ಟ್ರಪಿತ ಈ ಊರಿಗೆ ಭೇಟಿ ನೀಡಿದ ನೆನಪಿಗಾಗಿಯೇ ಊರಿನಿಂದ ದೂರವಿರುವ ಈ ಪ್ರದೇಶದ ಜನರಿಗೆ ಅನುಕೂಲವಾಗಲೆಂದು ನನ್ನನ್ನು ನಿಯಮಿಸಿದರು. ನನ್ನ ಸುತ್ತೆಲ್ಲ ಹಸಿರು. ಅಲ್ಲೊಂದು ಇಲ್ಲೊಂದು ಕೆಂಪು ಹಂಚಿನ ಮನೆಗಳು. ನಡುವೆ ಕೆಂಪು ಮಣ್ಣಿನ ಕಾಲುದಾರಿ. ಇಂಥ ನಾಲ್ಕು ತೆಳುವಾದ ದಾರಿಗಳು ನನ್ನೆದುರೇ ಕೂಡುತ್ತಿದ್ದವು. ಈ ಕೂಟದ ಆಚೆ ಬದಿಗೆ ನಿನ್ನನ್ನು ತಂದು ನೆಟ್ಟರು, ಅಂದು ನಮ್ಮ ದೇಶ ಸ್ವತಂತ್ರವಾದ ದಿನ. ನೀನು ಪುಟ್ಟದಾಗಿ, ಮಾಟವಾಗಿ ಗೇಣುದ್ದ ಮಾತ್ರ ಇದ್ದೆ. ಎಷ್ಟು ನಾಜೂಕಾಗಿದ್ದೆ. ಈಚೆ ಬದಿಯಿಂದ ನಾನು ನಿನ್ನನ್ನು ನೋಡುತ್ತಲೇ ಇದ್ದೆ. ನೀನೋ ಎರಡು ದಿನ ತಗ್ಗಿಸಿದ ತಲೆಯನ್ನು ಎತ್ತಿರಲೇ ಇಲ್ಲ. ನಿನ್ನನ್ನು ಮಾತಾಡಿಸಲು ನಾನೆಷ್ಟೋ ಬಾರಿ ಪ್ರಯತ್ನಿಸಿದೆ. ಕೂಗಿ ಕರೆದೆ. ಸಿಳ್ಳು ಹಾಕಿದೆ. ಊಹ್ಞೂ. ನಂತರ ಆ ರಾತ್ರಿ ಮಳೆ ಸುರಿಯಿತು. ಅಬ್ಬ, ಐವತ್ತು ವರ್ಷಗಳ ಹಿಂದಿನ ಧಾರವಾಡದ ಮಳೆ ಹೇಗಿರುತ್ತಿತ್ತೆಂದು ನಿನಗೆ ನೆನಪಿರಬೇಕು. ನೆಲವನ್ನೂ, ನೆಲದಾಳವನ್ನೂ, ಮನವನ್ನೂ ಮನದಾಳವನ್ನೂ ತೋಯಿಸಿ ತಂಪುಗೊಳಿಸುತ್ತಿದ್ದ ಜೀವದಾಯಿನಿಯಾಗಿದ್ದ ಚೈತನ್ಯದಾಯಿನಿಯಾಗಿದ್ದ ಮಳೆ. ನನ್ನ ಮೈ-ಮನಸ್ಸು ಅಕ್ಷರಶಃ ತುಂಬಿಬಂದವು. ಮುಂಜಾನೆ ನಸುಕಿನಲ್ಲೆದ್ದು ನೋಡಿದೆ, ಮೊದಲ ಬಾರಿಗೆ ನೀನು ತಲೆಯೆತ್ತಿ ನಗುತ್ತ ನಿಂತಿದ್ದೆ. ನನಗೆಷ್ಟು ಖುಶಿಯಾಯಿತು ಗೊತ್ತೆ ?

ಹಾಗೆ ಸುರುವಾಗಿದ್ದ ನಮ್ಮಿಬ್ಬರ ಗೆಳೆತನದ ಪ್ರಾರಂಭದ ಆ ದಿನಗಳು ಬಹಳ

ಸುಂದರವಾಗಿದ್ದವು. ಆಗೆಲ್ಲ ಈ ಪರಿಸರ ಎಷ್ಟು ಪ್ರಶಾಂತವಾಗಿತ್ತು. ಹಗಲು ಹೊತ್ತಿನಲ್ಲಿ ಕಾಲೇಜಿಗೆ ಹೋಗಿ ಬರುವ ಹುಡುಗರು ಮೆಲುದನಿಯಲ್ಲಿ ಮಾತಾಡುತ್ತ, ಕಾವ್ಯದ ಬಗ್ಗೆಯೋ ಗಣಿತದ ಸಮಸ್ಯೆಗಳ ಬಗ್ಗೆಯೋ ಚರ್ಚಿಸುತ್ತ ನಡೆದು ಹೋಗುತ್ತಿದ್ದರು. ಸುತ್ತಲಿನ ಮನೆಗಳ ಹೆಣ್ಣುಮಕ್ಕಳು ತಾಮ್ರದ ಕೊಡಗಳನ್ನು ಹೊತ್ತು ನನ್ನ ಕಟ್ಟೆಗೆ ಬರುತ್ತಿದ್ದರು. ಹಗ್ಗ ಬಿಟ್ಟು ನೀರು ಸೇದಿಕೊಂಡು ಸುಖ-ದುಃಖದ ಮಾತಾಡುತ್ತ ಹೋಗುತ್ತಿದ್ದರು. ಶನಿವಾರದಂದು ಊರಲ್ಲಿನ ಜನರೂ ಈ ದಾರಿಯಾಗಿ ಬಂದು  ಸಪ್ತಾಪುರದ ಹನುಮಂತದೇವರ ಗುಡಿಗೆ ಹೋಗುತ್ತಿದ್ದರು. ಸಂಜೆಗಳಲ್ಲಿ ಕೆಲವು ಪ್ರೇಮಿಗಳ ಜೋಡಿಗಳೂ ವಾಕಿಂಗ್ ಬರುತ್ತಿದ್ದವು. ಹೊತ್ತು ಮುಳುಗಿದ ಬಳಿಕ ಮಾತ್ರ ಎಲ್ಲ ಕಡೆ ಶಾಂತ, ಸ್ತಬ್ಧ ವಾತಾವರಣ. ಆಗ ಅಷ್ಟು ಬೀದಿ ದೀಪಗಳೂ ಇರಲಿಲ್ಲ. ಜನರೂ ಹೊತ್ತಾದ ನಂತರ ಹೊರಗಡೆ ತಿರುಗಾಡುತ್ತಿರಲಿಲ್ಲ. ಕತ್ತಲಲ್ಲಿ, ಬೆಳದಿಂಗಳಲ್ಲಿ ನಾನು ಮತ್ತು ನೀನು ಇಬ್ಬರೇ. ರಸ್ತೆಯ ಈಚೆ ಬದಿ ನಾನು, ಆಚೆ ಬದಿ ನೀನು.

ನೀನು ದಿನದಿನಕ್ಕೆ ಎಷ್ಟು ಚೆನ್ನಾಗಿ ಬೆಳೆಯುತ್ತ ಹೋದೆ. ನಾನು ಅಚ್ಚರಿಯಿಂದ ನೋಡನೋಡುತ್ತಿದ್ದಂತೆ ನೀನು ಮೈದುಂಬಿಕೊಂಡು ಚಿಗುರುತ್ತ, ಪಲ್ಲವಿಸುತ್ತ, ಅರಳುತ್ತ ಸಾಗಿದೆ. ನಿನ್ನನ್ನು ನೋಡುತ್ತಿರುವುದೇ ನನ್ನ ಕಣ್ಣುಗಳಿಗೊಂದು ಹಬ್ಬವಾಗಿತ್ತು. ಅನೇಕ ರಾತ್ರಿಗಳನ್ನು ನಾವಿಬ್ಬರೂ ಪ್ರೀತಿಯ ಮಾತುಗಳನ್ನಾಡುತ್ತ ಒಬ್ಬರನ್ನೊಬ್ಬರು ಕಣ್ಣಿನಲ್ಲೇ ಆರಾಧಿಸುತ್ತ ಕಳೆದೆವು. ಆ ಶಾಂತಿ, ಆ ಹಸಿರು, ಆ ತಂಗಾಳಿ, ಆ ನೀರವತೆ, ಆ ಏಕಾಂತ, ಆ ಸಂಗಸುಖ – ಇವುಗಳಿಗೆಲ್ಲಾ ಎಂದೂ ಕೊನೆಯೆಂಬುದೇ ಇಲ್ಲವೆಂದು ನಂಬಿ ಸುಖಿಸಿದೆವು.

## ೨

ಯಾಕೋ ನನ್ನ ಆರೋಗ್ಯ ಅಷ್ಟು ಸರಿಯಿರಲಿಲ್ಲ. ಒಂದು ಕಾಲಕ್ಕೆ ಈ ಭಾಗದ ನಾಗರಿಕರಿಗೆಲ್ಲ ನೀರುಣಿಸುತ್ತಿದ್ದ ನಾನು ಬರಬರುತ್ತ ಖಿನ್ನಮನಸ್ಕನಾಗತೊಡಗಿದೆ. ಸದಾ ಮೈ ಭಾರ, ಮನಸ್ಸು ಭಾರ. ಅಲ್ಲ, ಎಂತಹ ನಾಗರಿಕರಿವರು, ಏನೇನನ್ನೆಲ್ಲ ತಂದು ನನ್ನಲ್ಲಿ ಚೆಲ್ಲಿಬಿಡುವ ಅನಾಗರಿಕರು. ಈಗೀಗ ಮನೆಮನೆಗೆಲ್ಲ ನಲ್ಲಿಗಳಲ್ಲಿ ನೀರು ಬರಲಾರಂಭಿಸಿದ್ದರಿಂದ ಮುಂಚಿನಂತೆ ಹೆಣ್ಣುಮಕ್ಕಳು ಕೊಡ ಹೊತ್ತು ನನ್ನ ಕಟ್ಟೆಗೆ ಬರುತ್ತಿರಲಿಲ್ಲ. ಖಾಲಿಯಾದ ಕಟ್ಟೆಯನ್ನು ರಿಟಾಯರ್ ಆಗಿದ್ದ ಮುದುಕರು ಆಕ್ರಮಿಸಿದರು. ದಿನಾ ಸಂಜೆ ಬಂದು ತಾಸುಗಟ್ಟಲೆ ಕೂತು ಮಾತಾಡುವರು. ಅವರು ನೌಕರಿಯಲ್ಲಿದ್ದಾಗ ದೇಶದಲ್ಲಿ ಸುಭಿಕ್ಷೆ ಇತ್ತು, ಈಗ ಕಾಲ ಬದಲಾಗಿದೆ, ಜನ

ಹಾಳಾಗಿದ್ದಾರೆ, ಮುದುಕರನ್ನು ಕೇಳುವುದಿಲ್ಲ, ಗೌರವಿಸುವುದಿಲ್ಲ, ಕರ್ನಾಟಕ ಏಕೀಕರಣವಾಗಿದೆ, ಇನ್ನು ಕನ್ನಡ ಭಾಷೆ ಅಭಿವೃದ್ಧಿ ಹೊಂದುವುದು, ಧಾರವಾಡದಲ್ಲಿ ಮೊದಲಿನಷ್ಟು ಮಳೆಯಾಗುವುದಿಲ್ಲ, ಹಸಿರೂ ಕಡಿಮೆಯಾಗಿದೆ, ಲೈನಬಜಾರಿನ ಪೇಢೆಗೆ ಮೊದಲಿನ ರುಚಿ ಇಲ್ಲ, ಹೀಗೆಯೇ ನೂರೊಂದು ಸುದ್ದಿಗಳು....

ನಿನ್ನ ನೆರಳಲ್ಲೊಂದು ಸಿಮೆಂಟಿನ ಬೆಂಚು. ಅಲ್ಲಿ ಯೂನಿವ್ಹರ್ಸಿಟಿಗೆ ಹೋಗುವ ಬಸ್ಸಿನ ಸ್ಟಾಪ್ ಮಾಡಿದ್ದರು. ಬಸ್ಸಿಗೆ ಕಾಯುವವರೆಲ್ಲ ಆ ಬೆಂಚಿನ ಮೇಲೆ ಮತ್ತು ಸುತ್ತ-ಮುತ್ತ ಕೂತು-ನಿಂತು ಹೊತ್ತು ಕಳೆಯುವರು. ಅದೆಷ್ಟೋ ಹುಡುಗ-ಹುಡುಗಿಯರಿಗೆ ಇದೇ ಮೀಟಿಂಗ್ ಪ್ಲೇಸ್ ಎಂಬ ಗುಟ್ಟು ತಿಳಿದ ನಾನೂ ನೀನೂ ಮರೆಯಲ್ಲೇ ನಗುತ್ತಿದ್ದೆವು. ಬಸ್ಸುಗಳು ಸಾಲಾಗಿ ಬಂದು ಹೋದರೂ ಕೆಲವರು ಬಸ್‌ಸ್ಟಾಪ್‌ನಲ್ಲೇ ಉಳಿದುಕೊಳ್ಳುವರು. ಬಸ್ ಹೋದ ನಂತರ ಮತ್ತೆ ಪಿಸುದನಿಯಲ್ಲಿ ಮಾತಾಡಿಕೊಳ್ಳುತ್ತ ನಿಲ್ಲುವರು. ಕೊನೆಗೆ ಒಂದೇ ಬಸ್ಸು ಹತ್ತಿ ಹೋಗುವರು. ಸಂಜೆ ಮತ್ತೆ ಅದೇ ಸ್ಟಾಪ್‌ನಲ್ಲಿಳಿದು ಕತ್ತಲಾಗುವ ವರೆಗೂ ನಿಲ್ಲುವರು. ಅವರ ಕಣ್ಣುಗಳಲ್ಲಿನ ಮಿಂಚು, ಹೃದಯಗಳ ಬಡಿತ, ಮನಸ್ಸುಗಳ ಮಿಡಿತ, ಎಲ್ಲವೂ ನೋಡಲು ಚೆನ್ನ. ಇವರಲ್ಲದೇ ಸಂಜೆಯ ಹೊತ್ತು ಕೆಲವರು ವಯಸ್ಸಾದ ದಂಪತಿಗಳೂ ಬಂದು ಈ ಬೆಂಚಿನ ಮೇಲೆ ಕೂಡುವರು. ಅವರಲ್ಲಿ ಒಂದು ಜೊತೆ ಸಾಹಿತ್ಯಪ್ರೇಮಿಗಳು. ಬೇಂದ್ರೆಯವರ ಕಾವ್ಯದ ಬಗ್ಗೆ, ಶಂಬಾ ಅವರ ಸಿದ್ಧಾಂತಗಳ ಬಗ್ಗೆ ಚರ್ಚಿಸುವರು. ಇನ್ನೊಬ್ಬಾತ ಬರೀ ಪೇ ಸ್ಕೇಲ್ ಬಗ್ಗೆ, ಬೋನಸ್-ಇನ್‌ಕ್ರಿಮೆಂಟ್ ಬಗ್ಗೆ ಮಾತಾಡಿ-ಮಾತಾಡಿ ಬೋರ್ ಮಾಡುತ್ತಿದ್ದ. ಒಬ್ಬಾಕೆ ವಯಸ್ಸಾದ ಮುತ್ತೈದೆ ಸದಾ ತನ್ನ ಪೆದ್ದು ಗಂಡನ ಮೇಲೆ ಹರಿಹಾಯುವಳು. ಹೀಗೆ ನಿಂತಲ್ಲೇ ಜೀವನದ ಹತ್ತು ಹಲವು ಮುಖಗಳ ಪರಿಚಯ ನಮಗಾಗುತ್ತಿತ್ತು.

ಈಚೆಗೆ ಇಲ್ಲಿ ಸುತ್ತಲೂ ಬಹಳ ಅಂಗಡಿಗಳು ತಲೆಯೇಳತೊಡಗಿದ್ದವು. ಮೊದಲು ಏನು ಬೇಕಾದರೂ ಪೇಟೆಗೇ ಹೋಗಬೇಕಿತ್ತು. ಈಗ ಇಲ್ಲೇ ಕಾಯಿಪಲ್ಲೆ, ಹಾಲು, ಕಿರಾಣಿ ಸಾಮಾನು ಎಲ್ಲ ಸಿಗುವುದು. ಓಡಾಡುವ ಜನರೂ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದಾರೆ. ಇಡೀ ದಿನ ಎಲ್ಲರಿಗೂ ಗಡಿಬಿಡಿ, ಅದೇನೋ ಅವಸರ, ಎಲ್ಲರೂ ಯಾವಾಗಲೂ ಎಲ್ಲಿಯೋ ಧಾವಿಸುತ್ತಲೇ ಇರುತ್ತಾರೆ. ಹಾಯಾಗಿ ಮೆಲುದನಿಯಲ್ಲಿ ಮಾತಾಡಿಕೊಂಡು ಜನರು ವಿರಾಮವಾಗಿ ನಡೆದುಹೋಗುತ್ತಿದ್ದ ದಿನಗಳು ಬಹುಶಃ ಮುಗಿದಿರಬೇಕು. ಇಲ್ಲಿ ಈಗ ಮೊದಲಿನಷ್ಟು ಹಸಿರು, ಆ ಶಾಂತಿ, ಸಮಾಧಾನ ಇಲ್ಲ. ಏನೋ ಕಳೆದುಹೋಗುತ್ತಿದೆ, ಮರೆಯಾಗುತ್ತಿದೆ....

೩

ಎಷ್ಟೊಂದು ನೆನಪುಗಳು ! ಒಂದು ಮಳೆಗಾಲದ ಸಂಜೆಯ ಹೊತ್ತಿನಲ್ಲಿ ಜಿಟಿಜಿಟಿ ಮಳೆ ಹನಿಯುತ್ತಿದ್ದಾಗ, ತಂಗಾಳಿ ಬೀಸುತ್ತಿದ್ದಾಗ, ಮಲ್ಲಿಗೆಯ ಕಂಪು ಮಾವಿನ ಚಿಗುರಿನ ತಂಪು ಗಾಳಿಗುಂಟ ತೇಲಿ ಬರುತ್ತಿದ್ದಾಗ, ಕೋಗಿಲೆಗಳು ಬಣ್ಣಬಣ್ಣದ ಹಕ್ಕಿಗಳು ಇಂಪಾಗಿ ಉಲಿಯುತ್ತಿದ್ದಾಗ, ಸಂಜೆ ಸೂರ್ಯನ ಕೆಂಪು ಧಾರವಾಡದ ಗಿಡಮರಗಳನ್ನು ಮನೆ-ದಾರಿಗಳನ್ನು ಆವರಿಸಿಕೊಂಡಿದ್ದಾಗ, ನೀನು ಬಂದಿದ್ದೆ. ನನ್ನ-ನಿನ್ನ ಗೆಳೆತನ, ಆ ಚಿನ್ನಾಟ, ಪ್ರೀತಿಯ ಮಾತುಗಳು, ಒಲವಿನ ನೋಟಗಳು, ನಾವು ಸುಖ-ದುಃಖ ಹಂಚಿಕೊಂಡಿದ್ದು, ನಮ್ಮ ಸುತ್ತಲಿನ ಪರಿಸರ ಅರಳಿದಾಗ ನಾವೂ ಸಂತೋಷಪಟ್ಟಿದ್ದು, ನಮ್ಮ ಪರಿಸರ ಬಾಡಿದಾಗ ನಾವೂ ಕೊರಗಿದ್ದು —ಈ ಎಲ್ಲವೂ ನೆನಪುಗಳಾಗಿ ನನ್ನ ಕಾಯಂ ಸಂಗಾತಿಗಳಾಗಿ ಉಳಿದುಬಿಟ್ಟಿವೆ.

ಈಗ ನೀನಿಲ್ಲ.

ಇತ್ತೀಚೆ ನೀನು ಯಾಕೋ ಬಳಲಿದಂತೆ ಕಾಣುತ್ತಿದ್ದೆ. ಇಡೀ ದಿನ ಭರ್ರೆಂದು ಸದ್ದು ಮಾಡುತ್ತ, ಓಡಾಡುವ ರಾಕ್ಷಸಾಕಾರದ ಬಸ್ಸು-ಟ್ರಕ್ಕುಗಳ ಧೂಳು ಮುಸುಗಿ ನಿನ್ನ ಸುಂದರ ಹರಿದ್ವರ್ಣ ಕಾಂತಿ ಮಸುಕಾಗತೊಡಗಿತ್ತು. ನಿನ್ನ ಸುತ್ತ ಮೊದಲಿನಂತೆ ಏಕಾಂತವಿರಲಿಲ್ಲ. (ನೆನಪಿದೆಯೋ, ಆ ಏಕಾಂತದಲ್ಲಿ ನಾವು ಪರಸ್ಪರ ಪ್ರೀತಿಸುತ್ತಿದ್ದುದು ?) ಶಾಂತಿಯಿರಲಿಲ್ಲ. ಅದೆಷ್ಟೊಂದು ಡಬ್ಬಿ ಅಂಗಡಿಗಳು, ಅದೆಷ್ಟೊಂದು ಆಟೋ ರಿಕ್ಷಾಗಳು, ಹೋಟೆಲುಗಳು, ಸಿಗರೇಟು-ಬೀಡಿ ಅಂಗಡಿಗಳು, ಆಯ್‌ಸ್ಕ್ರೀಮ್ ಪಾರ್ಲರುಗಳು ! ಎಲ್ಲ ಕಡೆ ಗುಟಖಾ-ಪಾನ್‌ಮಸಾಲಾ ತಿಂದು ಉಗುಳಿದ ಹೊಲಸು ಕಲೆಗಳು, ಬೀಡಿ-ಸಿಗರೇಟಿನ ಹೊಗೆಯ ದುರ್ಗಂಧ, ಕಾಲಿಡಲೂ ಆಗದಷ್ಟು ಜನರಿಂದ ತುಂಬಿ ಗಿಜಿಗಿಡುವ ಚಿಕನ್ ಕಾರ್ನರುಗಳು, ಬಾರುಗಳು, ಛೇ, ಛೇ.... ಇಷ್ಟು ಜನರೆಲ್ಲ ಎಲ್ಲಿಂದ ಬಂದರು ?— ನನಗೂ ನಿನಗೂ ಅಚ್ಚರಿಯಾಗುತ್ತಿತ್ತು, ಉಸಿರುಗಟ್ಟುತ್ತಿತ್ತು....

ಯಾರು ಯಾರೋ ಬಂದು ನಿನ್ನ ರೆಂಬೆ-ಕೊಂಬೆಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದುಕೊಂಡು ಹೋದರು. ಆದರೂ ನಿನ್ನದು ಗಟ್ಟಿ ಜೀವ. ಬಿಸಿಲಲ್ಲಿ, ಧೂಳಿನಲ್ಲಿ, ಹೊಲಸು ಪರಿಸರದಲ್ಲಿ ಹಸಿರುಹೊತ್ತು ನೀನು ನಿಂತೇ ಇದ್ದೆ. ನಿನ್ನಿಂದಾದಷ್ಟು ತಂಪನ್ನು, ನೆರಳನ್ನು, ಸುಳಿಗಾಳಿಯನ್ನು ನಿನ್ನ ಬಳಿಸಾರಿದವರಿಗೆ ನೀಡುತ್ತಲೇ ಇದ್ದೆ.

ಆಗೊಮ್ಮೆ ಯಾರೋ ದೊಡ್ಡ ಮನುಷ್ಯರು ಮೂರು-ನಾಲ್ಕು ಕಾರುಗಳಲ್ಲಿ ಬಂದರು. ನಿನ್ನ ಸುತ್ತಲಿನ ಜಾಗವನ್ನೆಲ್ಲ ನಿನ್ನ ಪರಿವೆ ಮಾಡದೇ ಅಳತೆ ಮಾಡಿದರು.

ಮತ್ತೆ ಸುತ್ತೆಲ್ಲ ಕಲ್ಲುಗಳು, ಇಟ್ಟಿಗೆಗಳು ಬಂದುಬಿದ್ದವು. ನನ್ನಲ್ಲಿ ಏನೋ ಒಳಗುದಿ ಸುರುವಾಗಿತ್ತು. ಏನೋ ತಳಮಳ, ಆತಂಕ. ಹಲವಾರು ರಾತ್ರಿ ನನಗೆ ನಿದ್ರೆಯೇ ಬರಲಿಲ್ಲ. ತುಂಬ ಬಳಲಿಕೆ, ಅಸ್ವಸ್ಥತೆ. ಅಮಾವಾಸ್ಯೆಯ ಒಂದು ರಾತ್ರಿ ನಾನು ದಣಿದು ಒಣಗಿ ಒಂದು ಥರಾ ಎಚ್ಚರತಪ್ಪಿದಂತಹ ನಿದ್ರೆಗೊಳಗಾದೆ. ಏನೇನೋ ಕೆಟ್ಟ ಕನಸುಗಳು. ಹಳವಂಡ, ಮಂಪರು. ಹೀಗೆ ಎಂಥದೋ ಕಸಿವಿಸಿ ಅನುಭವಿಸುತ್ತ ಅದೆಷ್ಟು ಹೊತ್ತು ಕಳೆಯಿತೋ....

ಎಚ್ಚರಾಗಿ ಕಣ್ಣುಬಿಟ್ಟಾಗ, ಅಯ್ಯೋ, ನೀನಿರಲಿಲ್ಲ. ನನ್ನ ವರುಷಗಳ ಸಂಗಾತಿ ನೀನು ಬುಡ ಕಡಿಸಿಕೊಂಡು ಧೂಳು ತುಂಬಿದ ಮಣ್ಣಿನಲ್ಲಿ ಜೀವವಿಲ್ಲದೆ ಬಿದ್ದಿದ್ದೆ. ಏನು ನಡೆಯುತ್ತಿದೆ ಎಂದು ತಿಳಿಯದೆ ದಿಗ್ಭ್ರಮೆಯಲ್ಲಿದ್ದ ನಾನು ನೋಡುತ್ತಿದ್ದಂತೆಯೇ ನಿನ್ನ ಅವಶೇಷಗಳನ್ನು ಹೇರಿಕೊಂಡು ಬೃಹದಾಕಾರದ ಲಾರಿಯೊಂದು ಅದೆತ್ತಲೋ ಹೊರಟುಹೋಯಿತು.

ನಾನು ಇದ್ದಲ್ಲೇ ಕಲ್ಲಾದೆ.

ಸುತ್ತಲಿನ ಸಾವಿರ ಸದ್ದುಗಳು, ಹೊಲಸು ವಾಸನೆ, ಗದ್ದಲ ಈ ಯಾವುದೂ ನನ್ನನ್ನು ತಟ್ಟಲಿಲ್ಲ. ನಾನು ಎಲ್ಲ ಸಂವೇದನೆಗಳನ್ನೂ ಕಳೆದುಕೊಂಡಿದ್ದೆ.

* * *

೪

ನೀನಿಲ್ಲದಿದ್ದರೆ ನಾನೂ ಇರುವುದಿಲ್ಲ ಅಂತ ಅಂದುಕೊಂಡಿದ್ದ ಕಾಲವೂ ಒಂದಿತ್ತು. ವಸಂತ ಋತುವಿನ ಮುಂಜಾವುಗಳಲ್ಲಿ ಉಲಿಯುತ್ತಿದ್ದ ಕೋಗಿಲೆಗಳು, ಸಂಜೆಯಲ್ಲಿ ಹಾಡುತ್ತಿದ್ದ ಹಕ್ಕಿಗಳು, ಮಲ್ಲಿಗೆ-ಸಂಪಿಗೆಗಳು, ಸ್ವಚ್ಛಂದವಾಗಿ ಸುತ್ತೆಲ್ಲ ಓಡಾಡಿಕೊಂಡಿದ್ದ ಆಡುಗಳು, ಕುರಿಗಳು, ಕೋಳಿಗಳು, ಆಕಳುಗಳು, ದೂರದ ಹನುಮಂತನ ಗುಡಿಯಿಂದ ಕೇಳಿಬರುತ್ತಿದ್ದ ಗಂಟೆಯ ನಿನಾದ, ದಪ್ಪ-ದಪ್ಪ ಪುಸ್ತಕಗಳನ್ನೆತ್ತಿಕೊಂಡು ಗಂಭೀರ ಮುಖಭಾವದಿಂದ ಓಡಾಡುತ್ತಿದ್ದ ಶಿಕ್ಷಕರು, ವಿದ್ಯಾರ್ಥಿಗಳು, ಈ ಎಲ್ಲ ನೋಟಗಳು ಈಗ ಕಾಣಸಿಗುವುದಿಲ್ಲ.

ನೀನೇ ಇಲ್ಲದ ಮೇಲೆ ಇಲ್ಲಿ ಯಾವ ಕೋಗಿಲೆಯೂ, ಹಕ್ಕಿಯೂ ಬರುವುದಿಲ್ಲ. ಇಲ್ಲಿ ಬರೀ ಹಂದಿಗಳು ತುಂಬಿವೆ. ಎಲ್ಲ ಕಡೆ ಕಾಂಕ್ರೀಟು ಕಟ್ಟಡಗಳೆದ್ದುದರಿಂದ ಯಾವ ಹೂಗಿಡಗಳೂ ಇಲ್ಲಿ ಅರಳುವುದಿಲ್ಲ. ಕೋಳಿಗಳನ್ನಂತೂ ಪೆಟ್ಟಿಗೆಗಳಲ್ಲಿ ಕೂಡಿ ಹಾಕಿರುತ್ತಾರೆ, ನಾಳೆ ಬರಲಿರುವ ಸಾವು ನೆನೆದು ಅವು ಆಕ್ರಂದಿಸುತ್ತಲೇ ಇರುತ್ತವೆ. ಯಾರ ಕೈಯಲ್ಲೂ ಪುಸ್ತಕಗಳೇ ಇರುವುದಿಲ್ಲವಾದ್ದರಿಂದ ಯಾರು ಯಾವ ಧಂಧೆ ಮಾಡುತ್ತಾರೋ ತಿಳಿಯುವುದೇ ಇಲ್ಲ. ಯಾರು ಶಿಕ್ಷಕರೋ-ವಿದ್ಯಾರ್ಥಿಗಳೋ,

ಡಾಕ್ಟರರೋ-ಪೇಶಂಟೋ, ಸಭ್ಯರೋ-ಕಳ್ಳರೋ, ಏನೂ ತಿಳಿಯುವುದಿಲ್ಲ. ಎಲ್ಲರ ತಲೆಗೂದಲಿಗೂ ಬಣ್ಣ ; ಎಲ್ಲರ ಮುಖಗಳ ಮೇಲೂ ಅತೃಪ್ತಿಯ ಕಳೆ ; ಎಲ್ಲರ ಬಾಯಲ್ಲೂ ಗುಟಖಾನೋ ಮತ್ತೆಂಥದೋ ಸುಡುಗಾಡು. ಇದು ಎಂತಹ ಸಂಸ್ಕೃತಿ !

ನಿಜವಾಗಿ ಹೇಳಬೇಕೆಂದರೆ ನಾನೂ ಈಗ ಬದುಕಿಲ್ಲ. ನನ್ನೊಳಗೆ ಒಂದು ಕಾಲದಲ್ಲಿ ತುಂಬಿಕೊಂಡಿದ್ದ ಅಮೃತ ಸಮಾನವಾದ ಸಿಹಿನೀರು ಅದೆಂದೋ ಬತ್ತಿಹೋಗಿದೆ. ಸುತ್ತೆಲ್ಲ ತಲೆಯೆತ್ತಿ ನಿಂತ ಬೋರ್‌ವೆಲ್ಲುಗಳಿಂದ ನನ್ನ ಸೆಲೆಗಳು ಜೀವ ಕಳೆದುಕೊಂಡಿವೆ. ನನ್ನ ಸುತ್ತ ತಿಪ್ಪೆ, ಕಸ. ನನ್ನೊಳಗೂ ಅದೇ. ಗಣೇಶ ಚವತಿ ಬಂತೆಂದರೆ ಸಾಕು, ಸಾವಿರಾರು ಗಣಪತಿಗಳನ್ನು ತಂದು ನನ್ನಲ್ಲಿ ವಿಸರ್ಜಿಸುತ್ತಾರೆ. ಬಾಡಿದ ಹೂಗಳು, ಎಲೆಗಳು, ಕಾಗದದ ಚೂರುಗಳು, ಒಣಗಿದ ಕಸಕಡ್ಡಿ, ಮಣ್ಣು, ಎಲ್ಲವನ್ನೂ ನನ್ನಲ್ಲಿ ಸುರಿಯುತ್ತಾರೆ. ಎಲ್ಲ ಸೇರಿ ದುರ್ನಾತ ಬೀರುತ್ತಿರುವ ಕೊಳಚೆಗುಂಡಿಯಾಗಿದ್ದೇನೆ ನಾನು. ಸಂಜೆಗಳಲ್ಲಿ ಉದ್ದ ಕೂದಲು ಬಿಟ್ಟು ಕಪ್ಪು ಕನ್ನಡಕ ತೊಟ್ಟು ವಿಚಿತ್ರ ವೇಷಧಾರಿಗಳಾದ ಜನರು ವಿಚಿತ್ರ ವಾಹನಗಳನ್ನೇರಿ ಬರುತ್ತಾರೆ. ಬಾರುಗಳ ಒಳಸೇರುವ ಮೊದಲು ಹಾಗೂ ಹೊರಬಂದ ನಂತರ ತುಸು ಹೊತ್ತು ನನ್ನ ಕಟ್ಟೆಯ ಮೇಲೆ ಕೂತಿರುತ್ತಾರೆ. ಅವರ ಮಾತು, ಅಭಿರುಚಿ, ವರ್ತನೆ ನೋಡಿ ಜುಗುಪ್ಸೆಯಾಗುತ್ತದೆ. ನಾನೇಕೆ ಇನ್ನೂ ಇಲ್ಲಿದ್ದೇನೆ ಅನಿಸುತ್ತದೆ. ನನಗೂ ಒಂದಲ್ಲೊಂದು ದಿನ ನಿನ್ನಂತೆ ಈ ಹೊಲಸು ಪರಿಸರದಿಂದ ಮುಕ್ತಿ ಸಿಗುವುದೇ ? ಅಥವಾ ಈ ಅತಂತ್ರ ಸಂಸ್ಕೃತಿಯ ಪ್ರತೀಕವಾಗಿ ನಾನು ಹೀಗೆಯೇ ಕೊನೆವರೆಗೆ ನಾರುತ್ತ ಉಳಿದುಕೊಂಡಿರಬೇಕೇ ?

❖ ❖ ❖

# ವೀಣಾ ಅವರ ಕೃತಿಗಳ ಬಗ್ಗೆ ಕೆಲವು ಅಭಿಪ್ರಾಯಗಳು

**ಒಂದು ಟಿಪ್ಪಣಿ :**

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಶ್ರೀಮತಿ ರಾಜಲಕ್ಷ್ಮಿ ಎನ್. ರಾವ್ ಅವರ ನಂತರ ಬಹುಶಃ ಪ್ರೊ. ವೀಣಾ ಅವರದೇ ನವ್ಯ ಸ್ತ್ರೀಧ್ವನಿಯೆನ್ನಬೇಕು. ''ನೆನಪು.... ಬರಿ ನೆನಪು'' ಕತೆ ಕರ್ನಾಟಕ ಕಾಲೇಜ ಮಿಸೆಲೆನಿಯಲ್ಲಿ ಫ್ರಾಯ್ಡನ ಮಾನಸಶಾಸ್ತ್ರದ ಸಮರ್ಥನೆಯೊಂದಿಗೆ ಪ್ರಸಿದ್ಧವಾದಾಗಲೇ (ಆಗಿನ್ನೂ ಇವರು ಬಿ. ಎ. ಕ್ಲಾಸಿನಲ್ಲಿದ್ದರು.) ಅವರು ಹೊಸದೃಷ್ಟಿಯ ಒಳ್ಳೆಯ ಕತೆಗಾರ್ತಿಯಾಗುವ ಲಕ್ಷಣ ತೋರಿಸಿದ್ದರು. ಆ ಕತೆಯೇ ಮುಂದೆ ''ಸಂಕ್ರಮಣ''ದಲ್ಲಿ, ನಂತರ ''ಕಸ್ತೂರಿ''ಯಲ್ಲಿಯೂ ಪ್ರಕಟವಾಗಿ ಓದುಗರಲ್ಲಿ ಕುತೂಹಲವನ್ನೂ ಆಸ್ಥೆಯನ್ನೂ ನಿರ್ಮಾಣ ಮಾಡಿತು. ಈಗ ಆ ಕತೆಯ ಜೊತೆಗೆ ಅವರು ಇತ್ತೀಚೆಗೆ ಬರೆದ ನಾಲ್ಕು ಕತೆಗಳನ್ನು ಸೇರಿಸಿ ಅವರ ಒಂದು ಚಿಕ್ಕ ಸಂಕಲನವನ್ನು ಸಂಕ್ರಮಣ ಪ್ರಕಾಶನದವರು ಹೊರತರುತ್ತಿರುವದು ಸಂತೋಷದ ಸಂಗತಿ.

''ಮುಳ್ಳುಗಳು'' ಸಂಕಲನದ ಕತೆಗಳ ಬಗ್ಗೆ ಇವರು ಒಳ್ಳೆಯ ಕತೆ ಬರೆಯಬಲ್ಲರು, ಇವರ ಕತೆಗಳು ಚನ್ನಾಗಿವೆ ಎಂಬ ಪ್ರಾಥಮಿಕವಾದ ಮಾತುಗಳನ್ನು ಬಿಟ್ಟು ಮತ್ತೇನಾದರೂ ಹೇಳಲು ಸಾಧ್ಯವೇ ಎಂಬುದನ್ನು ನೋಡುವದೇ ನನ್ನ ಟಿಪ್ಪಣಿಯ ಉದ್ದೇಶವಾಗಿದೆ. ಪ್ರೊ. ವೀಣಾ ಅವರಿಗೆ ಪ್ರಾಮುಖ್ಯವಾಗಿ ಸ್ತ್ರೀ ಮನವನ್ನು, ಅದರಲ್ಲಿಯೂ ತರುಣ (ಇನ್ನೂ ಲಗ್ನವಾಗದ, ಇಷ್ಟರಲ್ಲಿಯೇ ಲಗ್ನವಾಗಲಿರುವ, ಅದೇ ಲಗ್ನವಾದ) ಸ್ತ್ರೀಯ ಮನವನ್ನು ಚಿತ್ರಿಸುವದರಲ್ಲಿ ಬಹಳ ಆಸಕ್ತಿ ಹಾಗೂ ಇಂಥ ಚಿತ್ರಣವನ್ನು ಅವರು ಸ್ವಲ್ಪ ದಿಟ್ಟತನದಿಂದ, ಆದಷ್ಟು ಪ್ರಾಮಾಣಿಕವಾಗಿ, ಸೂಕ್ಷ್ಮವಾಗಿ ಮಾಡಲು ಯತ್ನಿಸುತ್ತಾರೆ ಎಂದು ಮುಂತಾದ್ದಾಗಿ, ಇಲ್ಲಿಯ ಕತೆಗಳನ್ನು ಓದಿದ ಯಾರಿಗೂ ಅನಿಸುವ ಮಾತುಗಳನ್ನು, ಎತ್ತಿ ಹೇಳುವ ಅವಶ್ಯಕತೆ ಇದೆಯೆಂದು ನನಗನಿಸುವದಿಲ್ಲ. ಈ ಕತೆಗಳಲ್ಲಿ ವಿಮರ್ಶಕನ ಕುತೂಹಲವನ್ನೂ ಕಾಳಜಿಯನ್ನೂ ಕೆರಳಿಸುವ ವಿಷಯವೆಂದರೆ ಅವುಗಳಲ್ಲಿಯ ಕಥನಕಲೆಯ ಸ್ವರೂಪ ಮತ್ತು ಅಭಿವ್ಯಕ್ತಿಯ ರೀತಿ. ಪ್ರೊ. ವೀಣಾ ಅವರ ಕಥನಕಲೆಯ

ಬಗ್ಗೆ ನಿರ್ದಿಷ್ಟವಾಗಿ, ಸ್ಪಷ್ಟವಾಗಿ ಏನೂ ಹೇಳಲು ಬರುವದಿಲ್ಲೆಂಬುದೇ ಅದರ ಸದ್ಯದ ವೈಶಿಷ್ಟ್ಯ. ಯಾಕೆಂದರೆ ಅದು ತನ್ನ ಶಕ್ತಿಯನ್ನು, ಒಲವನ್ನು, ಸೀಮೆಯನ್ನು ತಾನೇ ಶೋಧಿಸುವ ಪ್ರಯೋಗಾವಸ್ಥೆಯಲ್ಲಿದೆ. ಇಂಥ ಅವಸ್ಥೆ ಬೆಳೆಯುವ ಕಲೆಗೆ ತೀರ ಅವಶ್ಯವಾದದ್ದು, ಅನಿವಾರ್ಯವಾದದ್ದು ಎಂದು ಗಮನದಲ್ಲಿಟ್ಟುಕೊಂಡು, ಅದರ ಕೆಲವು ಆಂತರಿಕ ಒಲವುಗಳನ್ನಾಗಲಿ ಸಂಘರ್ಷಗಳನ್ನಾಗಲಿ ಎತ್ತಿ ತೋರಿಸುವದೇ ವಿಮರ್ಶೆ ಸದ್ಯ ಮಾಡಬಹುದಾದ ಕೆಲಸ. ಈ ದೃಷ್ಟಿಯಿಂದ ಇಲ್ಲಿಯ ಕತೆಗಳನ್ನು ಪ್ರತ್ಯೇಕವಾಗಿ ತೆಗೆದುಕೊಂಡು ಪ್ರತಿಯೊಂದರ ವೈಶಿಷ್ಟ್ಯವನ್ನು ಸೂಚಿಸುವ ಯತ್ನ ಈ 'ಟಿಪ್ಪಣಿ'ಯಲ್ಲಿ ಮಾಡಲಾಗಿದೆ.

'ಮುಳ್ಳುಗಳು' ಎಂಬ ಕತೆ ಇನ್ನೂ ಲಗ್ನವಾಗದ, ಆದರೆ ಲಗ್ನಕ್ಕಾಗಿ ಕಾತರಳಾಗಿ ನಿಂತ, ಪ್ರಾಧ್ಯಾಪಿಕೆ ಶಾಂತಿಯ ಒಂದು ದಿನದ 'ಮೂಡ'ನ್ನು ರೂಪಿಸುತ್ತದೆ. ಕತೆಯಲ್ಲಿ ಬರುವ ಎಲ್ಲ ಸನ್ನಿವೇಶಗಳೂ ಆ ಮನಸ್ಥಿತಿಯನ್ನು ಸ್ಪಷ್ಟವಾಗಿ ಮೂರ್ತಗೊಳಿಸಲು ಸಹಾಯ ಮಾಡುತ್ತವೆ. ಕತೆಯ ಅರ್ಥವೆಲ್ಲ ಅದರ ಕೇಂದ್ರದಲ್ಲಿದ್ದ ಒಂದು ವ್ಯಂಗ್ಯಾತ್ಮಕವಾದ ಸಂಗತಿಯನ್ನವಲಂಬಿಸಿದೆಯೆಂದು ನಾವು ಗಮನಿಸಬೇಕು : ನಾಯಿಕೆಯು ತನ್ನ ಕಾತರತೆಯನ್ನು ಬಿಚ್ಚುಮನಸ್ಸಿನಿಂದ ಒಪ್ಪಿಕೊಳ್ಳದೆ, ತನಗೆ ಒಳಗೆ ತೊಂದರೆ ಕೊಡುವ 'ಮುಳ್ಳು' ತನ್ನ ಹೊರಗೆ ಇವೆ ಎಂದು ಸಾಧಿಸುತ್ತ, ತನ್ನ ಮನಸ್ಸಿನ ಸಂದಿಗ್ಧತೆಯಲ್ಲಿಯೇ ತೊಳಲಾಡುವ ಸನ್ನಿವೇಶವೇ ಮೂಲತಃ ವ್ಯಂಗ್ಯಾತ್ಮಕವಾದದ್ದು. ಆದರೆ ಈ ಕೇಂದ್ರ ವ್ಯಂಗ್ಯದ ಅರಿವು ಯಾಕೋ ಏನೋ ನಿರ್ಲಿಪ್ತ ವಸ್ತುನಿಷ್ಠ ಕಲಾಪ್ರಜ್ಞೆಯ ಪಾತಳಿಯ ಮೇಲೆ ಕೆಲಸ ಮಾಡುವದಿಲ್ಲವಾದ್ದರಿಂದ ಕತೆ ಪಡೆಯಬೇಕಾದ ಗಹನತೆಯನ್ನೂ ಅರ್ಥಪೂರ್ಣತೆಯನ್ನೂ ಪಡೆದಿಲ್ಲವೆಂದೆನಿಸುವದು. ಆದರೆ ಕತೆ ಹೇಳುವ ರೀತಿಯಲ್ಲಿ, ಸನ್ನಿವೇಶಗಳನ್ನು ಸಾಂಕೇತಿಕವಾಗಿ, ಉದ್ದೇಶಪೂರ್ಣವಾಗಿ ಉಪಯೋಗಿಸಿಕೊಳ್ಳುವಲ್ಲಿ ಸಾಕಷ್ಟು ಕಲೆಗಾರಿಕೆಯಿದೆ.

'ಮುಳ್ಳುಗಳು' ಕತೆಯಲ್ಲಿ ಸಾಧಿಸದಿದ್ದದ್ದು 'ಅತಿಥಿ'ಯಲ್ಲಿ ಮಾತ್ರ ಚನ್ನಾಗಿ ಸಾಧಿಸಿದೆ. ವಸ್ತುವಿನಲ್ಲಿರುವ ವ್ಯಂಗ್ಯಕ್ಕೆ ತಿಳಿಗಣ್ಣಿನ ವಸ್ತುನಿಷ್ಠತೆಯ ಬೆಂಬಲ ಸಿಕ್ಕಿದ್ದರಿಂದ 'ಅತಿಥಿ' ತುಂಬ ಯಶಸ್ವಿಯಾಗಿದೆ. ತನ್ನ ಮಹತ್ವಾಕಾಂಕ್ಷೆಗಾಗಿ ತಾರುಣ್ಯದಲ್ಲಿ ಪ್ರೇಮವನ್ನು ಧಿಕ್ಕರಿಸಿ, ನಂತರ ವಯಸ್ಸಾದಂತೆ ಜೀವನ ಸಾಫಲ್ಯಕ್ಕೆ ಎರವಾಗಿ, sadistic ಆಗುತ್ತ ನಡೆದ, ಜೀವನಕ್ಕೇ ಅತಿಥಿಯಾದ ಪ್ರೊ. ಲೀಲಾವತಿಯ ಮನಸ್ಥಿತಿಯ ಚಿತ್ರಣ ಈ ಕತೆಯಲ್ಲಿದೆ. ದೃಷ್ಟಿಕೋನದಲ್ಲಿ ವಿಡಂಬನೆ-ಸಹಾನುಭೂತಿಗಳ ಸಮತೋಲವನ್ನು ಸಾಧಿಸಲು ಲೇಖಿಕೆ ಮಾಡಿದ ಪ್ರಯತ್ನ ತುಂಬ

ಕುತೂಹಲಕಾರಿಯಾಗಿದೆ. ನಾಯಿಕೆಯನ್ನು ಬರೇ ಟೀಕಿಸಲು ಹೊರಟಂತಿದ್ದ ಕತೆ ಮುಂದೆ ಹೋದಂತೆ ಸಹಾನುಭೂತಿಯಿಂದ ಮಿಡಿಯುವದನ್ನು ನೋಡಿದರೆ, ಕತೆ ಬರೆಯುವದೇ ಒಂದು ಸತ್ಯಶೋಧನೆಯ ಸಾಧನವಾಗಬಹುದು ಎಂಬ ಮಾತನ್ನು ಮನಗಾಣಬಹುದು.

'ಪ್ರಶ್ನೆ'ಯಲ್ಲಿ ಕತೆ ತನ್ನ ಜೀವವನ್ನೂ, ತನ್ನ ದೇಹವನ್ನೂ ತಾನೇ ಹುಡುಕುತ್ತ ನಡೆದಂತೆ ತೋರುತ್ತದೆ. ಕತೆಯು 'ದೇಹ'ದ ದೃಷ್ಟಿಯಿಂದ ಶಶಿಯ ಮನಸ್ಸಿನ ತೀಕ್ಷ್ಣ ಉದ್ವೇಗ, ಭಾಷೆ, ಲಯಗಳ ಮುಖಾಂತರ ಚನ್ನಾಗಿ ಅಭಿವ್ಯಕ್ತಗೊಂಡಿದೆಯೆನ್ನಬಹುದು. ಆದರೆ ಕತೆಯಲ್ಲಿ ಬರುವ ಅನುಭವದ ಮೂಲ 'ಆತ್ಮ' ಮಾತ್ರ ಪ್ರತ್ಯಕ್ಷ ರೂಪು ತೆಗೆದುಕೊಳ್ಳಲು ಹಿಂಜರಿದಂತಿದೆ. ಹೀಗಾಗಿ ಕತೆಯಲ್ಲಿ ಬರುವ ಪ್ರಶ್ನೆಗಳಲ್ಲಿ ಬಹಳಷ್ಟು ಕತೆಯನ್ನು ಹೆಣೆಯಲು ಸಹಾಯಕವಾಗುವ ಯಾಂತ್ರಿಕ ಸಾಧನಗಳಾಗಿ ಪರಿಣಮಿಸಿದಂತೆ ಅಲ್ಲಲ್ಲಿ ಅನಿಸಿಬಿಡುವದು. ಇಲ್ಲಿಯ ವಸ್ತುವಿನಲ್ಲಿ, ತಂತ್ರದಲ್ಲಿ, ಭಾಷೆಯಲ್ಲಿ ಒಂದು ವಿಶಿಷ್ಟ ನವ್ಯದೃಷ್ಟಿ ತನ್ನ ತನ್ನತನವನ್ನು ಶೋಧಿಸಲು ಯತ್ನ ಮಾಡುತ್ತಿರುವದನ್ನು ನೋಡಿದಾಗ ಪ್ರೊ. ವೀಣಾ ಅವರ ಕಲೆಗಾರಿಕೆ ಕಠಿಣವಾದರೂ ಅನಿವಾರ್ಯವಾದ ಬೆಳವಣಿಗೆಯ ಮಾರ್ಗವನ್ನು ಹಿಡಿದಿದೆ ಎಂದೆನ್ನಬಹುದು.

"ನೆನಪು.... ಬರಿ ನೆನಪು" ಈ ಸಂಕಲನದಲ್ಲಿಯ ಅತ್ಯಂತ ಯಶಸ್ವಿಯಾದ ಕತೆ. ಸಣ್ಣಕತೆಯಲ್ಲಿರಬೇಕಾದ ಎಲ್ಲ ಗುಣಗಳೂ ಇಲ್ಲಿ ಒಂದು ಹೊಂದಾಣಿಕೆಯನ್ನು ಪಡೆದಿವೆ : ಒಂದು ಕೇಂದ್ರ ನಾಟಕೀಯ ಸನ್ನಿವೇಶ ; ಅದರಿಂದ ಉಂಟಾಗುವ ಅನಪೇಕ್ಷಿತ ಪರಿಣಾಮ : ಕೊನೆಗೆ ಕತೆ ಅನಿವಾರ್ಯವಾಗಿ, ಆದರೂ ನಾಟ್ಯಪೂರ್ಣವಾಗಿ, ಮುಕ್ತಾಯಗೊಳ್ಳುವ ರೀತಿ – ಇವು ಈ ಕತೆಯಲ್ಲಿ ಅಚ್ಚುಕಟ್ಟಾಗಿ ಸಾಧಿಸಲ್ಪಟ್ಟಿವೆ. ಇಷ್ಟರಲ್ಲಿಯೇ ಲಗ್ನವಾಗಲಿರುವ ನಾಯಿಕೆ ತನ್ನ ಹಳೆಯ ನೆನಪುಗಳನ್ನು ತನ್ನ ಬೆಳೆದ ಮನಸ್ಸಿನ ಮುಖಾಂತರ ಅರಗಿಸಿಕೊಂಡು ಒಂದು ಹೊಸ ಸಂಕೀರ್ಣವಾದ, ಸ್ತಿಮಿತವಾದ ಸ್ಥೈರ್ಯವನ್ನು ಸಾಧಿಸುವ ಚಮತ್ಕಾರ ಈ ಕತೆಯ ವಸ್ತು. ಇಲ್ಲಿ ಅನುಭವದ ಸಂಕೀರ್ಣತೆಯನ್ನೂ ಸಂದಿಗ್ಧತೆಯನ್ನೂ ಒಪ್ಪಿಕೊಳ್ಳುವ ರೀತಿಯಲ್ಲಿ, ದೃಷ್ಟಿಕೋನದಲ್ಲಿ ನವ್ಯತೆ ಇದೆ.

"ನೀನೇ ತಂತಿ" ಪ್ರಾಮುಖ್ಯವಾಗಿ 'ರೊಮ್ಯಾಂಟಿಕ್' ಕತೆ. ಅಲ್ಲಿ ಬರುವ ಸರಯೂ, ಅವಳ ಮುಂಚಿನ 'ಪ್ಲೇಟೋನಿಕ್' ಪ್ರೇಮಿ, ಅವಳ ಗಂಡ ಹರೀಶ, ಅವಳ ವೈವಾಹಿಕ ಜೀವನಕ್ಕೆ ಅಡ್ಡಿ ಮಾಡುವ ಹಳೆಯ ಪ್ರೇಯಸನ ನೆನಪು – ಇವು ಹಳೆಯ ತ್ರಿಕೋಣಾಕೃತಿಯನ್ನೇ ಸೂಚಿಸುತ್ತವೆ. ಕತೆಯಲ್ಲಿ ಬರುವ ಪಂಜರದ ಗಿಳಿ, ಆ

ಗಿಳಿಯನ್ನು ಸರಯೂ ಬಿಟ್ಟುಬಿಡುವ ಸನ್ನಿವೇಶ, ವೀಣೆಯ ತಂತಿ, ಆ ಹಾಡು —ಎಲ್ಲ ಬಹಳ ಪಾರದರ್ಶಕವಾದ ಸಂಕೇತಗಳಾಗಿ ಬರುವದೂ 'ರೊಮ್ಯಾಂಟಿಕ್' ರೀತಿಯು ಕಲಾತ್ಮಕತೆಯನ್ನೇ ಸೂಚಿಸುತ್ತದೆ. ಈ ಕತೆ ಅತ್ಯಂತ ಇತ್ತೀಚಿನ ಕತೆ ಎಂಬ ಮಾತು ಪ್ರೊ. ವೀಣಾ ಅವರ ಪ್ರಾಯೋಗಿಕ ಅನಿರ್ದಿಷ್ಟ ಮನೋಭೂಮಿಕೆಯನ್ನೇ ಸಾರಿ ಹೇಳುವಂತಿದೆ. ಹಳೆ-ಹೊಸ, ಕಲ್ಪಕತೆ-ವಾಸ್ತವಿಕತೆ, ಸಂಕೀರ್ಣತೆಯು ಅರಿವು ಸುಲಭೀಕರಣ ಮಾಡಹಚ್ಚುವ ಕಲೆ. ಇವುಗಳ ಅನಿವಾರ್ಯವಾದ ಘರ್ಷಣೆ ಪ್ರೊ. ವೀಣಾ ಅವರ ಕತೆಗಳಲ್ಲಿಯೂ ಒಂದು ಅತ್ಯಂತ ಕುತೂಹಲಕಾರಿಯಾದ ಸಂಗತಿ. ಪ್ರೊ. ವೀಣಾ ಅವರು ಈ ಘರ್ಷಣೆಯನ್ನು ಪರಿಹರಿಸಬಹುದಾದ ರೀತಿಯ ಮೇಲೆ ಮುಂದಿನ ಬೆಳವಣಿಗೆ ಅವಲಂಬಿಸಿದೆ.

ಪ್ರೊ. ವೀಣಾ ಅವರ ಕಲೆಗಾರಿಕೆಯಲ್ಲಿ ಬೆಳೆಯುವ ಸಾಮರ್ಥ್ಯ ಸಾಕಷ್ಟಿದೆ. ಈ ಕತೆಗಳಲ್ಲಿ ಒಂದು ಕೇಂದ್ರ ಪ್ರತಿಮೆಯ ಸುತ್ತ ಕತೆ ಹೆಣೆಯುವ ಕಲೆ ಇವರಿಗೆ ಚೆನ್ನಾಗಿ ಸಾಧಿಸಿದೆಯೆನ್ನಬಹುದು. ಆದರೆ ಇಂಥ ಕಲೆಗಾರಿಕೆಯತ್ತ ಲಕ್ಷ ಸ್ವಲ್ಪ ಹೆಚ್ಚಾದರೆ ಅನುಭವ ತರಲವಾಗುತ್ತದೆ. ತನ್ನ ನೈಜ ಸಾಂದ್ರತೆಯನ್ನು ಕಳೆದುಕೊಳ್ಳುತ್ತದೆ ಎಂಬ ಮಾತನ್ನು ಅವರು ಲಕ್ಷದಲ್ಲಿಡಬೇಕಾದದ್ದು ಅವಶ್ಯ. ಒಟ್ಟಿನ ಮೇಲೆ, ಅನುಭವವನ್ನು ಎದುರಿಸುವ ದಿಟ್ಟತನ, ಅದನ್ನು ತಮ್ಮದೇ ಆದ ರೀತಿಯಲ್ಲಿ ಎದುರಿಸಿ ಗೆಲ್ಲುವ ಹವ್ಯಾಸ, ತೀಕ್ಷ್ಣ ಕಲಾಪ್ರಜ್ಞೆ, ಭಾಷೆಯ ಮೇಲಿನ ಸಹಜ ಪ್ರಭುತ್ವ ಇವನ್ನೆಲ್ಲ ನೋಡಿದರೆ ಈ ಕತೆಗಾರ್ತಿಯ ಭವಿಷ್ಯ ಉಜ್ವಲವಾಗಿದೆಯೆಂದು ನಿಸ್ಸಂಕೋಚವಾಗಿ ಹೇಳಬಹುದು.

**ಶಾಂತಿನಾಥ ದೇಸಾಯಿ**

* * * * *

ನಿಜವಾಗಿಯೂ ಧೈರ್ಯದಿಂದ ಬರೆಯದಿದ್ದರೂ ಹಾಗೆ ಬರೆದಂತೆ ತೋರಿಸಿಕೊಂಡ ಶ್ರೀಮತಿ ತ್ರಿವೇಣಿಯವರ ಜನಪ್ರಿಯತೆ ಒಂದು ರೀತಿಯದು ; ಶೈಲಿ, ತಂತ್ರ ಮತ್ತು ನೈತಿಕ ಮೌಲ್ಯಗಳ ದೃಷ್ಟಿಯಿಂದ ಹೊಸತೇನನ್ನೂ ಮಾಡಲಾಗದ ಅವರು ಸಂಪ್ರದಾಯ ಶರಣರಿಗೆ ತೀರ ಹೆಚ್ಚು ನೋವಾಗದ ರೀತಿಯಲ್ಲಿ, ಅಂಥವರು ಬೆಚ್ಚಿಬೀಳದ ರೀತಿಯಲ್ಲಿ ಕೆಲವು ಪ್ರಶ್ನೆಗಳನ್ನು ಕೇಳಿ ಅವರ ಮೆಚ್ಚುಗೆ ಗಳಿಸಿದರು. ಇವರ ದಾರಿಯಲ್ಲೇ ನಡೆದ ಇನ್ನೂ ಅನೇಕ ಲೇಖಕಿಯರು ಈ ಜನಪ್ರಿಯತೆಯ ತಂತ್ರವನ್ನು ತಮ್ಮದಾಗಿ ಮಾಡಿಕೊಂಡು ಯಶಸ್ವಿಯಾದರು. ಈ ರೀತಿಯ

ಲೇಖಕಿಯರಿಂದ ಭಿನ್ನವಾದ ರೀತಿಯಲ್ಲಿ ಬದುಕಿನ ಬಗ್ಗೆ ಕೆಲವು ಮೂಲಭೂತ ಪ್ರಶ್ನೆಗಳನ್ನು ಕೇಳಿ ಅಷ್ಟೇ ಧೈರ್ಯದಿಂದ ಆ ಪ್ರಶ್ನೆಗಳಿಗೆ ಉತ್ತರಕ್ಕೆ ಹುಡುಕಾಡಿದ ರಾಜಲಕ್ಷ್ಮಿ ಎನ್. ರಾವ್ ಅವರ ಮಾರ್ಗದಲ್ಲಿ ವೀಣಾ ಅವರಿದ್ದಾರೆ. ಇವರ "ಮುಳ್ಳುಗಳು" ಕಥಾ ಸಂಕಲನ ಗದ್ಯ ಸಾಹಿತ್ಯಕ್ಕೆ ಹೊಸ ಜೀವ ತಂದಿರುವಂತೆಯೇ ಕಥಾಸಾಹಿತ್ಯಕ್ಕೆ ಹೊಸ ಭರವಸೆ ತಂದಿದೆ.

ಇವರ ಕತೆಗಳಿಗಿಂತ ಹೆಚ್ಚಾಗಿ ಈ ಕತೆಗಳ ಹಿಂದಿನ ಪ್ರಜ್ಞೆ ಹೆಚ್ಚು ಸ್ವಾರಸ್ಯಕರವಾದದ್ದು. ಒಬ್ಬ ವ್ಯಕ್ತಿಯ ಮನಸ್ಸಿನ ಅನಿಸಿಕೆಗಳನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಧೈರ್ಯ ಮತ್ತು ಆ ಅನಿಸಿಕೆಗಳ ಆಳಕ್ಕೆ ಇಳಿಯುವ ಕುತೂಹಲ ಇವು ಇಲ್ಲಿವೆ. ಇದರ ಜೊತೆಗೆ ತೀವ್ರವಾದ ಭಾವನೆಗಳನ್ನು ಅದೇ ಸ್ಥಿತಿಯಲ್ಲಿ ಹಿಡಿದಿಡಬಲ್ಲ ಶೈಲಿಯನ್ನು ಈ ಲೇಖಕಿ ರೂಢಿಸಿಕೊಂಡಿದ್ದಾರೆ.

**ಪಿ. ಲಂಕೇಶ್**

* * *

ಹೊಸ ಸಂವೇದನೆಯ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಶ್ರೀಮತಿ ವೀಣಾ ಅವರ ಸಾಧನೆ ಅಪೂರ್ವವಾದುದು. ಹೆಣ್ಣುಮಕ್ಕಳ ಒಳತೋಟಿಯನ್ನು ನಿರ್ಭೀತಿಯಿಂದ ಯಾವುದೇ ವ್ಯೆಚಳಿ ಇಲ್ಲದೆ ಇವರಷ್ಟು ದಿಟ್ಟವಾಗಿ, ಕಲಾತ್ಮಕವಾಗಿ ಅಭಿವ್ಯಕ್ತಿಸುತ್ತಿರುವ ಇನ್ನೊಬ್ಬ ಲೇಖಕಿ ಕನ್ನಡದಲ್ಲಿ ಇಲ್ಲ ಎನ್ನಬಹುದು. ತಮ್ಮ ಮೊದಲ ಕಥಾಸಂಕಲನ "ಮುಳ್ಳುಗಳು" ಮೂಲಕ ಎಲ್ಲರ ಗಮನ ಸೆಳೆದ, ಕನ್ನಡದ ಪ್ರತಿಭಾನ್ವಿತ ಲೇಖಕಿಯರ ಕೊರತೆಯನ್ನು ತುಂಬಬಲ್ಲವರು ಇವರೇ ಎಂಬ ಭರವಸೆಯನ್ನು ಕೃತಿಯಿಂದ ಕೃತಿಗೆ ಬೆಳೆಯುತ್ತ ಬಂದ ವೀಣಾ ನಿಜಗೊಳಿಸಿದ್ದಾರೆ. ವೀಣಾರವರ ಜೀವಂತ ಕಲೆಗಾರಿಕೆಯನ್ನು ಅವರ "ಕೊನೆಯ ದಾರಿ" ಮತ್ತು "ಕವಲು" ಕಥಾಸಂಕಲನಗಳಲ್ಲಿ ಹಾಗೂ "ಗಂಡಸರು" ಕಾದಂಬರಿಯಲ್ಲಿ ನಿಚ್ಚಳವಾಗಿ ಕಾಣಬಹುದು. ಸಮಾಜದ ಅಂತರಂಗ ಪ್ರಪಂಚವನ್ನು ಸೂಕ್ಷ್ಮವಾಗಿ ಬಿಚ್ಚುತ್ತಾ ಹೋಗುವ, ವ್ಯಕ್ತಿಗಳ ಮುಖವಾಡಗಳನ್ನು ಕಳಚಿ ಅವರ ನಿಜಸ್ವರೂಪವನ್ನು ಅನಾವರಣಗೊಳಿಸುವ, ಮತ್ತು ಸಂಕೀರ್ಣ ಅನುಭವಗಳನ್ನು ಸಫಲ ಕೃತಿಯಾಗಿ ಅಣಿಗೊಳಿಸುವ ಇವರ ಪ್ರತಿಭೆ ಕಣ್ಣು ಕುಕ್ಕುವಂಥದು.

**ಶ್ರೀಕೃಷ್ಣ ಆಲನಹಳ್ಳಿ**

* * *

"ಮಧ್ಯಮ ವರ್ಗದ ಮಹಿಳೆಯ ಸ್ವಾತಂತ್ರ್ಯದ ಹಂಬಲ ಮತ್ತು ಕಟು ವಾಸ್ತವಗಳ ದಾಖಲೆಯಾಗುವ "ಅವಳ ಸ್ವಾತಂತ್ರ್ಯ" ಕತೆಯ ಕೊನೆಯ ಭಾಗ ಸಶಕ್ತ ವ್ಯಂಗ್ಯವಾಗಿದೆ. ಕತೆಯ ವಸ್ತುವಿಗೆ ಹೊಂದಿಕೊಂಡಂತೆ ರೂಪುಗೊಂಡ ಶೈಲಿ ಮತ್ತು ಕತೆಯ ಕೊನೆಯಲ್ಲಿ ಮುಕ್ತಾಯಕ್ಕೆಂಬಂತೆ ಕೊಡುವ ಭಾಗ ಪೂರಕತಂತ್ರವಾಗಿ ಪರಿಣಮಿಸಿದೆ. ಇಡೀ ಕತೆ ವಿಮಲಾ ಶಂಕರಳ ಶೃಂಖಲಿತ ದಿನಚರಿಯನ್ನು ಮಂಡಿಸುತ್ತಲೇ ಸಾಗಿ ಕಡೆಯಲ್ಲಿ ಅರ್ಥಪೂರ್ಣ ತಿರುವು ತೆಗೆದುಕೊಳ್ಳುತ್ತದೆ. ಇದೇ ವಿಮಲಾ ಶಂಕರ್ ಸ್ತ್ರೀ ಸ್ವಾತಂತ್ರ್ಯ ಕುರಿತು ಆಡುವ ಮಾತುಗಳು ಕತೆಗೆ ವ್ಯಂಗ್ಯದ ಒತ್ತು ಕೊಡುವಲ್ಲಿ ಸಫಲವಾಗಿವೆ. ಮರ್ಯಾದೆ ಎಂಬ ಕತೆ ವೀಣಾ ಅವರ ಆಕರ್ಷಕ ಬರವಣಿಗೆ ಮತ್ತು ಕಥಾ ಶಿಲ್ಪಗಳ ಯಶಸ್ವೀ ಮಾದರಿಯಾಗಿದೆ. ತಮ್ಮ ತಂದೆ ಮನೆಯ ಅಡಿಗೆ ಹೆಣ್ಣನ್ನು ವಿವಾಹವಾಗಲು ನಿಶ್ಚಯಿಸಿದ್ದನ್ನು ತಿಳಿದ ಮಕ್ಕಳು ಹಿರಿಯಳಾದ ಕಮಲಾಳನ್ನು ಕರೆಯಿಸಿಕೊಳ್ಳುತ್ತಾರೆ. ಆಕೆ ಬಂದಾಗ ಸಿಗುವ ಸ್ವಾಗತ ಹೋಗುವಾಗ ಸಿಗುವುದಿಲ್ಲ. ಆಕೆ ತೆಗೆದುಕೊಂಡ ನಿರ್ಧಾರ– ಮಕ್ಕಳ ಆರೈಕೆಯೂ ಇಲ್ಲದ ತಂದೆ ಅಡಿಗೆಯವಳನ್ನೇ ವರಿಸುವ ತೀರ್ಮಾನವನ್ನು ಬೆಂಬಲಿಸುವ ನಿರ್ಧಾರ– ಇಂಥ ಅನಾದರಕ್ಕೆ ಕಾರಣ. ಇಷ್ಟು ಕಥಾ ಕೇಂದ್ರ ವೀಣಾರವರ ನಿರೂಪಣಾ ಕ್ರಮದಲ್ಲಿ ಆಕರ್ಷಣೀಯವಾಗಿದೆ."

**ಬರಗೂರು ರಾಮಚಂದ್ರಪ್ಪ**

❖ ❖ ❖

# ವೀಣಾ ನಡೆದ ದಾರಿ....

ಡಾ. ವೀಣಾ ಶಾಂತೇಶ್ವರ ಅವರ ಇದುವರೆಗಿನ ಕಥನ ಸಾಹಿತ್ಯ ಒಂದು 'ಹೊತ್ತಿಗೆ'ಯಾಗಿ ಪ್ರಕಟವಾಗುತ್ತಿರುವ ಈ ಸಂದರ್ಭದಲ್ಲಿ ಈ ಕೃತಿಯ ಕುರಿತು ನನ್ನ ಎರಡು ಮಾತುಗಳನ್ನು ದಾಖಲಿಸಲು ಅವರು ನನಗೆ ಅವಕಾಶ ನೀಡಿರುವುದು ಅಪೂರ್ವ ಸಂತೋಷವನ್ನುಂಟು ಮಾಡಿದೆ. ಇಪ್ಪತ್ತನೆಯ ಶತಮಾನದ ಆಧುನಿಕ ಕಥಾಸಾಹಿತ್ಯದಲ್ಲಿ ನವ್ಯದ ಅಲೆ ಬಂದಾಗ ವೀಣಾ 'ಮುಳ್ಳುಗಳು' ಕಥಾ ಸಂಕಲನದ ಮೂಲಕ ಹೆಜ್ಜೆಗುರುತು ಮೂಡಿಸಿದರು.

ದೀಪಾವಳಿ ವಿಶೇಷಾಂಕದಲ್ಲಿ ಅವರ ಸುಂದರವಾದ ಫೋಟೋ ನೋಡಿದಾಗ, 'ಗಂಡಸರು' ಕಾದಂಬರಿ ೧೯೭೫ ರ ಪ್ರಜಾವಾಣಿ ದೀಪಾವಳಿ ವಿಶೇಷಾಂಕದಲ್ಲಿ ಪ್ರಕಟವಾದಾಗ ಅವರನ್ನು ನೋಡಬೇಕು ಎಂದು ಸಹಜವಾಗಿಯೇ ಅನ್ನಿಸಿತ್ತು. ೧೯೭೫ ರ ಆ ಪ್ರಜಾವಾಣಿ ವಿಶೇಷಾಂಕದಲ್ಲಿ 'ವೀಣಾ' ಎಂಬ ಹೆಸರಿನಲ್ಲಿ ಮೊದಲ ಬಹುಮಾನ ಪಡೆದ ಕಿರು ಕಾದಂಬರಿ ಪ್ರಕಟವಾಗಿತ್ತು. ಕಲಾವಿದ ರಮೇಶ್ ರಚಿಸಿದ ಹಲವು ಚಿತ್ರಗಳು ಕಾದಂಬರಿ ಜೊತೆಗೆ 'ಗಂಡಸರು' ಎಂಬ ಅಕ್ಷರಗಳು ಒಂದೊಂದೂ ಒಂದೊಂದು ಬಣ್ಣದಲ್ಲಿ ಅಚ್ಚಾಗಿದ್ದವು. ಕೈಗೆ ಸರಪಳಿ ತೊಡಿಸಿದ, ಕಣ್ಣಿನಲ್ಲಿ ಕ್ರೋಧ, ಆಕ್ರೋಶ ಹೊಮ್ಮಿಸುತ್ತಿದ್ದ ಹೆಣ್ಣಿನ ಮುಖ, ಆ ಸಂಚಿಕೆ ಈಗಲೂ ನನ್ನ ಬಳಿ ಇದೆ. ಮೊದಲು ಓದಿದ ಅನುಭವ ಆ ಪುಟಗಳನ್ನು ನೋಡಿದಾಗ ಮತ್ತೆ ಮರುಕಳಿಸುತ್ತದೆ. ಆಗ ಈ ಕಾದಂಬರಿ ಅನೇಕ ಗಂಡಸರಿಗೆ ಒಂದು ಬಗೆಯ ಶಾಕ್ ನೀಡಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಮೈಸೂರಿನಲ್ಲಿ ಮಾನಸ ಗಂಗೋತ್ರಿಯಲ್ಲಿ ನಾನು ಎಂ. ಎ. ಓದುತ್ತಿದ್ದಾಗ ಪ್ರೊ. ಹಾ. ಮಾ. ನಾಯಕರು ನಡೆಸಿದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನಕ್ಕೆ ವೀಣಾ ಶಾಂತೇಶ್ವರ ಬಂದಿದ್ದರು. ಅವರು 'ಎಲಬುರ್ಗಿ' ಎಂಬುದನ್ನು ಬದಲಾಯಿಸಿ 'ಶಾಂತೇಶ್ವರ' ಎಂದು ಮಾಡಿಕೊಂಡಿದ್ದು ಸರಿಯೋ ತಪ್ಪೋ ಎಂದು ನಾವು ಗೆಳತಿಯರು ಚರ್ಚಿಸಿದ್ದೆವು. ನಮ್ಮ ಮೇಡಂ ಡಾ. ವಿಜಯಾ ಆಗ ಲೇಖಕಿಯರಿಗೇ ಪ್ರತ್ಯೇಕ ಸಮ್ಮೇಳನ ಮಾಡಿ ನಮ್ಮನ್ನು ಪ್ರತ್ಯೇಕಗೊಳಿಸಬಾರದು ಎಂದು ಸಮ್ಮೇಳನದಿಂದ ದೂರ ಉಳಿದಿದ್ದರು. ಚಿಕ್ಕ ಮಗುವನ್ನೆತ್ತಿಕೊಂಡು ಬಂದಿದ್ದ ವೀಣಾ ನಮ್ಮ ಗಮನ ಸೆಳೆದರು.

ಕರ್ನಾಟಕ ಲೇಖಕಿಯರ ಸಂಘದವರು ಕುಪ್ಪಳಿಯಲ್ಲಿ 'ಕವಿಶೈಲದಲ್ಲಿ ಲೇಖಕಿಯರು' ಕಾರ್ಯಕ್ರಮ ನಡೆಸಿದಾಗ ಇನ್ನೊಮ್ಮೆ ಅವರು ಭೇಟಿಯಾದರು. ಗೋಷ್ಠಿಯೊಂದರ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದ ಅವರು 'ಸ್ತ್ರೀವಾದ' ಎಂದರೆ ಸ್ವೇಚ್ಛಾಚಾರವಲ್ಲ ಎಂದು ಒತ್ತಿ ಹೇಳಿದರು. ಆಗ ಎರಡು ದಿನ ಅವರ ಒಡನಾಟ. ಬೆಂಗಳೂರಿನಲ್ಲಿ ೨೦೦೩ ರಲ್ಲಿ ನಡೆದ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನಕ್ಕೆ ಅವರು ಅಧ್ಯಕ್ಷೆಯಾಗಿದ್ದರು. ತಮ್ಮ ಭಾಷಣದಲ್ಲಿ ಡಿ. ಆರ್. ನಾಗರಾಜ್ ಹೇಳಿದ 'ಗಾರ್ಗಿ ಪ್ರತಿಭೆ ಮತ್ತು ಕಾತ್ಯಾಯನಿ ಪ್ರತಿಭೆ' ಮಾದರಿಗಳ ಮಾತನ್ನು ಉಲ್ಲೇಖಿಸಿದರು. ಲೇಖಕಿಯರ ಅಭಿವ್ಯಕ್ತಿಯನ್ನು ಕುರಿತು ಮಾತನಾಡುವಾಗ ನಾನು, ಟಾಲ್‌ಸ್ಟಾಯ್ ಹೇಳಿದ "All happy families are alike : each unhappy family is unhappy in its own way" ಎಂಬ ಮಾತನ್ನು ಉಲ್ಲೇಖಿಸಿ ಸ್ತ್ರೀಯರ ಬದುಕೂ, ಪ್ರತಿಭೆಯೂ ಹೀಗೆಯೇ, ಅಸಂಖ್ಯ ಮಾದರಿಗಳಲ್ಲಿದೆ, ಡಿ. ಆರ್. ಹೇಳಿದಂತೆ ಎರಡು ಮಾದರಿಗಳಲ್ಲಿ ಅಡಕಗೊಳಿಸಲು ಸಾಧ್ಯವಿಲ್ಲ. ಪುರುಷರ ಪ್ರತಿಭೆಯನ್ನು ಹೀಗೆ ವಿಂಗಡಿಸಲು ಸಾಧ್ಯವೇ ಎಂದ ಮಾತು ಅವರಿಗೆ ಒಪ್ಪಿಗೆಯಾಗಿತ್ತು.

ನಾನು ಮತ್ತು ನನ್ನ ಪತಿ ಧಾರವಾಡದ ಯಾವುದೋ ಕಾರ್ಯಕ್ರಮಕ್ಕೆ ಹೋದಾಗ ಅವರನ್ನು ಭೇಟಿಯಾದೆವು. ಹೀಗೆ ವೀಣಾ ಶಾಂತೇಶ್ವರ ಅವರ ಕೃತಿಗಳಂತೆ, ವ್ಯಕ್ತಿಯಾಗಿಯೂ ಅವರ ಸರಳ ಸಜ್ಜನಿಕೆ ನನ್ನನ್ನು ಆಕರ್ಷಿಸಿದೆ.

ವೀಣಾ ಶಾಂತೇಶ್ವರ ಆಧುನಿಕ ಕನ್ನಡ ಕಥಾಸಾಹಿತ್ಯದಲ್ಲಿ ಪರಂಪರೆಯೊಂದನ್ನು ತನ್ನ ನಂತರದ ಲೇಖಕಿಯರಿಗೆ ನಿರ್ಮಿಸಿಕೊಟ್ಟರು. ಕಳೆದ ನಲವತ್ತು ವರ್ಷಗಳಿಂದ ಬರೆಯುತ್ತಿರುವ ವೀಣಾ ಶಾಂತೇಶ್ವರ ಕನ್ನಡದಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಮೊದಲ ಲೇಖಕಿಯೂ ಹೌದು. (ಆಜ್ಞೇಯ ಅವರ ಹಿಂದಿ ಕಾದಂಬರಿ 'ನದೀ ದ್ವೀಪಗಳು' ಅನುವಾದಕ್ಕಾಗಿ)

೧೯೬೮ ರಲ್ಲಿ ಪ್ರಕಟವಾದ 'ಮುಳ್ಳುಗಳು' ಸಂಕಲನದ ಕತೆಗಳನ್ನು ಬರೆದಾಗ ಅವರು 'ವೀಣಾ ಎಲಬುರ್ಗಿ'. 'ಮುಳ್ಳುಗಳು' ಪ್ರಕಟವಾಗಿ ಕೆಲವು ವರ್ಷಗಳ ನಂತರ ವಿದ್ಯಾರ್ಥಿನಿಯಾಗಿದ್ದ ನಾನು ಆ ಸಂಕಲನದ 'ನೆನಪು ಬರೀ ನೆನಪು' ಕಥೆ ಓದಿ ಅನುಭವಿಸಿದ ಆಪ್ತ ನೆನಪು ಇಂದಿಗೂ ಹಸಿರಾಗಿದೆ. ಕ್ರೌನ್ ಆಕಾರದ ಕೇವಲ ೭೬ ಪುಟಗಳ ಪುಟ್ಟ ಪುಸ್ತಕದ ರಕ್ಷಾ ಕವಚದ ಮೇಲೆ ಹಸಿರು ಕ್ಯಾಕ್ಟಸ್ ಮುಳ್ಳಿನ ಚಿತ್ರವಿತ್ತು. 'ನೆನಪು ಬರೀ ನೆನಪು' ಬಾಲ್ಯ ಸ್ನೇಹಿತನನ್ನು ಹಲವು ವರ್ಷಗಳ ನಂತರ ನೋಡಿದಾಗ ಮೂಡುವ ಎಳೆತನದ ನೆನಪುಗಳು, ಜೀವಂತಿಕೆಯ ನಿರೂಪಣೆ, ಅನಿರೀಕ್ಷಿತ ತಿರುವಿನಿಂದ ಕೂಡಿದ ಕಥೆ, ತೀರ ಹೊಸತನದ ಕಥಾ ತಂತ್ರ - ಎಲ್ಲಾ

ವೀಣಾ ಅವರ ಬರವಣಿಗೆ ಹೊಸ ಬಗೆಯದು ಎಂದು ಸಾದರಪಡಿಸಿದವು. ಎಳೆಯ ಮನಸ್ಸಿನ ಅನುಭವ ಚಿತ್ರಗಳನ್ನು ಪ್ರಬುದ್ಧ ತರುಣಿಯೊಬ್ಬಳು ಎದುರಿಸುವ, ಪ್ರತಿಕ್ರಿಯಿಸುವ ಸನ್ನಿವೇಶಗಳನ್ನು ಅವಳ ಮನಸ್ಸಿನ ಸೂಕ್ಷ್ಮ ವಿಶ್ಲೇಷಣೆಯ ಮೂಲಕ ಅಭಿವ್ಯಕ್ತಿಸಿದ ರೀತಿ ಅನನ್ಯ. ಶಾಂತಿನಾಥ ದೇಸಾಯಿ "ಇಲ್ಲಿಯ ವಸ್ತುವಿನಲ್ಲಿ, ತಂತ್ರದಲ್ಲಿ, ಭಾಷೆಯಲ್ಲಿ ಒಂದು ವಿಶಿಷ್ಟ ನವ್ಯ ದೃಷ್ಟಿ ತನ್ನತನವನ್ನು ಶೋಧಿಸಲು ಯತ್ನ ಮಾಡುತ್ತಿರುವುದನ್ನು ನೋಡಿದಾಗ ವೀಣಾ ಅವರ ಕಲೆಗಾರಿಕೆ ಕಠಿಣವಾದರೂ ಅನಿವಾರ್ಯವಾದ ಬೆಳವಣಿಗೆಯ ಮಾರ್ಗವನ್ನು ಹಿಡಿದಿದೆ ಎನ್ನಬಹುದು" ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. (ಮುಳ್ಳುಗಳು ಸಂಕಲನದ ಮುನ್ನುಡಿಯಲ್ಲಿ)

ಕನ್ನಡ ಲೇಖಕಿಯರ ಆತ್ಮಕಥೆಗಳ ಸಂಪುಟ 'ಲೇಖ-ಲೋಕ'ದಲ್ಲಿ ವೀಣಾ ತಮ್ಮ ಸ್ತ್ರೀಪಾತ್ರಗಳ ಕುರಿತು ಹೀಗೆ ಬರೆದಿದ್ದಾರೆ– "ಏಕಾಕಿಯಾಗಿ ಗಂಡಸಿನ ಹಾಗೂ ಸಮಾಜದ ಅನ್ಯಾಯಗಳ ವಿರುದ್ಧ ಹೋರಾಡುವ ಮಹಿಳೆಯ ದಾರಿ ಇನ್ನೂ ಸುಗಮವಾಗಿಲ್ಲ. ಪರಿಪೂರ್ಣ ಮಹಿಳಾ ಸ್ವಾತಂತ್ರ್ಯಕ್ಕೆ ಕಾಲವಿನ್ನೂ ಪಕ್ವವಾಗಿಲ್ಲ. ಆಕೆ ಹೊಂದಾಣಿಕೆ ಮಾಡಿಕೊಳ್ಳಬೇಕು ಅಥವಾ ತನ್ನ ತತ್ವಗಳಿಗಾಗಿ ನೋವು ಅನುಭವಿಸುತ್ತ ಬದುಕಿರಬೇಕು. ಹೋರಾಡಿ ಜಯಗಳಿಸಿಯೂ ಸುಖವಾಗಿರುವ ಭಾಗ್ಯ ತೀರಾ ಕಡಿಮೆ ಸಂಖ್ಯೆಯ ಮಹಿಳೆಯರಿಗಿದೆ. ಉಳಿದವರನ್ನು ಈ ಸಮಾಜ ಒತ್ತಾಯದಿಂದ ಹೊಂದಾಣಿಕೆ ಮಾಡಿಕೊಳ್ಳಲು ಹಚ್ಚುತ್ತದೆ. ಈ ಮಹಿಳೆಯರು ಅಂಜುಬುರುಕರಲ್ಲ, ಹೇಡಿಗಳಲ್ಲ, ಕಟುವಾಸ್ತವದ ಅರಿವುಳ್ಳವರು, ಇವರು ಸೋತವರಲ್ಲ, ಪಕ್ವತೆ ಹೊಂದಿದವರು," (ಲೇಖಲೋಕ : ೨– ಡಾ. ವೀಣಾ ಶಾಂತೇಶ್ವರ ; ಪು. ೧೧೯)

ವೀಣಾ ಶಾಂತೇಶ್ವರ ಈ ಮಾತುಗಳನ್ನು ಬರೆದ ಕೆಲವೇ ವರ್ಷಗಳ ನಂತರ ಈಗ ನಾವು ಮತ್ತೆ ತಿರುಗಿ ನೋಡಿದರೆ ಸಾಹಿತ್ಯ, ಸಂಸ್ಕೃತಿ, ರಾಜಕೀಯ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕೆಲವು ಮಹಿಳೆಯರು ತಮ್ಮ ವಿಶಿಷ್ಟ ವ್ಯಕ್ತಿತ್ವ ಮತ್ತು ಸೀಮೋಲ್ಲಂಘನೆಗಳ ಜೊತೆಗೆ ಮನ್ನಣೆ, ಗೌರವ ಪಡೆದುಕೊಂಡಿರುವುದೂ, ಜೊತೆಗೇ ನೌಕರಿ ಮಾಡುವ- ಮಾಡದ ಮಹಿಳೆ ಶೋಷಣೆಗೆ ಒಳಗಾಗುವ ಸನ್ನಿವೇಶವೂ ಕಾಣುತ್ತದೆ. ನೂರಕ್ಕೆ ತೊಂಬತ್ತೊಂಬತ್ತರಷ್ಟು ಹೆಂಗಸರು ತಮ್ಮತನವನ್ನು ಸ್ಥಾಪಿಸಿಕೊಳ್ಳಲು ಸಾಧ್ಯವಾಗದೇ ಹೊಂದಾಣಿಕೆ ಮಾಡಿಕೊಂಡೇ ಬದುಕು ಸಾಗಿಸುತ್ತಿಲ್ಲವೇ ?

ವೀಣಾ ಅವರ ಬರವಣಿಗೆಯ ಸತ್ವವನ್ನೂ ಜೀವಂತಿಕೆಯನ್ನೂ ಗಮನಿಸಿದಾಗ ನನಗೆ ಬೆಲ್ಲ-ಸಕ್ಕರೆಗಳನ್ನು ಕುರಿತ ನುಡಿಯೊಂದು ಜ್ಞಾಪಕಕ್ಕೆ ಬರುತ್ತಿದೆ. "ಬೆಲ್ಲಕ್ಕೆ

ವಿಶಿಷ್ಟ ರುಚಿ, ಸುವಾಸನೆ, ಸತ್ವ ಇದೆ. ಆದರೆ ಬೆಲ್ಲವನ್ನು ಸಂಸ್ಕರಿಸಿ ಮಾಡುವ ಪ್ರಕ್ರಿಯೆಯಲ್ಲಿ ಈ ವೈಶಿಷ್ಟ್ಯಗಳೆಲ್ಲ ಕಳೆದುಹೋಗುತ್ತವೆ. ಲೇಖಕಿಯರ ಸಂವೇದನೆ ಬೆಲ್ಲದಂತೆ. ವಿಶಿಷ್ಟ ಸತ್ವ, ರುಚಿ, ಬಣ್ಣದ ಗುಣಗಳನ್ನು ಹೊಂದಿದ್ದರೂ ಅಭಿವ್ಯಕ್ತಿಯ ಸಮಸ್ಯೆಯಿಂದ, ಹಿಂಜರಿಕೆಯಿಂದ ಈ ಅನುಭವಗಳು ಸಂಸ್ಕರಣೆಯಾಗಿ ಬರಹ ರೂಪದಲ್ಲಿ ಬಂದಾಗ ಅವು ಸಕ್ಕರೆಯಂತೆ ತಮ್ಮ ಮೂಲಗುಣ ರೂಪಗಳನ್ನು ಕಳೆದುಕೊಂಡಿರುತ್ತವೆ. (ಸಂಕಿರಣವೊಂದರಲ್ಲಿ ಮರಾಠೀ ಲೇಖಕಿಯೊಬ್ಬರು ಹೇಳಿದ ಮಾತಿದು.)

ವೀಣಾ ಶಾಂತೇಶ್ವರ ಅವರು ಬರವಣಿಗೆಯನ್ನು ಆರಂಭಿಸಿದ ಕಾಲದಲ್ಲಿ ಬರೆಯುತ್ತಿರುವವರಲ್ಲಿ ಈ ತೊಡಕುಗಳಿದ್ದರೂ ಅವರು ಅವುಗಳನ್ನು ಮೀರಿ ಅಭಿವ್ಯಕ್ತಿಯಲ್ಲಿ ತಮ್ಮ ಸ್ವಂತಿಕೆಯನ್ನು ಸಾಧಿಸಿದ್ದಾರೆ.

ಪ್ರೊ. ಶಾಂತಿನಾಥ ದೇಸಾಯಿಯವರು ವೀಣಾ ಅವರ ಕಥೆಗಳ ಈ ಗುಣವನ್ನು 'ಮುಳ್ಳುಗಳು' ಸಂಗ್ರಹದ ಕಥೆಗಳಲ್ಲೇ ಗುರುತಿಸಿದ್ದಾರೆ. "ಈ ಕತೆಗಳಲ್ಲಿ ವಿಮರ್ಶಕನ ಕುತೂಹಲವನ್ನೂ ಕಾಳಜಿಯನ್ನೂ ಕೆರಳಿಸುವ ವಿಷಯವೆಂದರೆ ಅವುಗಳಲ್ಲಿಯ ಕಥನ ಕಲೆಯ ಸ್ವರೂಪ ಮತ್ತು ಅಭಿವ್ಯಕ್ತಿಯ ರೀತಿ."

ತಮ್ಮ ಮೊದಲ ಸಂಕಲನದ ಕತೆಗಳ ದಿಟ್ಟ ಅಭಿವ್ಯಕ್ತಿಯಿಂದಾಗಿ ವೀಣಾ ಶಾಂತೇಶ್ವರ ಅವರು ಓದುಗರ, ವಿಮರ್ಶಕರ ಗಮನ ಸೆಳೆದು ಮೆಚ್ಚುಗೆ ಗಳಿಸಿಕೊಂಡರು. ಇದು ಕನ್ನಡದಲ್ಲಿ ಲೇಖಕಿಯರ ಸಾಹಿತ್ಯದ ಮಟ್ಟಿಗಂತೂ ಒಂದು ಮೈಲಿಗಲ್ಲು. ಇದರಿಂದಾಗಿ ಎಪ್ಪತ್ತರ ದಶಕದ ಆರಂಭದಲ್ಲಿಯೇ ಮುಕ್ತವಾಗಿ ಬರೆಯಬಯಸುವ ಲೇಖಕಿಯರಿಗೆ ನವಮಾರ್ಗವೊಂದು ದೊರೆತಿತ್ತು. ವೀಣಾ ಅವರು ತೋರಿದ 'ಈ ದಾರಿಯಲ್ಲಿ ನಮ್ಮ ಅಭಿವ್ಯಕ್ತಿ ಸರಾಗವಾಯಿತು' ಎಂದು ಗೆಳತಿ, ಲೇಖಕಿ –ಕವಿ ಶಶಿಕಲಾ ವೀರಯ್ಯಸ್ವಾಮಿ ನೆನೆಸಿಕೊಳ್ಳುತ್ತಾರೆ. ಹೀಗೆ ವೀಣಾ ಶಾಂತೇಶ್ವರ ಪರಂಪರೆಯನ್ನು ಹುಟ್ಟುಹಾಕಿದ ಲೇಖಕಿಯರಲ್ಲಿ ಒಬ್ಬರು. ಎಪ್ಪತ್ತರ ದಶಕದ ಉತ್ತರಾರ್ಧದಲ್ಲಿ ಕಥಾ ಸಂಕಲನ ಪ್ರಕಟಿಸಿದ ವೈದೇಹಿ ತಮ್ಮದೇ ಅಭಿವ್ಯಕ್ತಿಯ ರೀತಿಯನ್ನು ಸಾಧಿಸಿದ್ದಾರೆ. ಹಾಗೆಯೇ ನೇಮಿಚಂದ್ರ ಅವರದು ಇನ್ನೊಂದು ಶೈಲಿ. ಈಗ ಇಪ್ಪತ್ತೊಂದನೇ ಶತಮಾನದ ಲೇಖಕಿಯರ ಎದುರು ಹಲವಾರು ಮಾದರಿಗಳಿವೆ.

ವೀಣಾ ಅವರ ಕಥೆ ಕಾದಂಬರಿಗಳಲ್ಲಿ ಸ್ತ್ರೀ ಪುರುಷರ ಆಕರ್ಷಣೆ, ದ್ವಿಸ್ತರ ಮೌಲ್ಯಗಳ ಕಾರಣದಿಂದ, ವ್ಯಕ್ತಿವಿಶಿಷ್ಟ ಸಮಸ್ಯೆಗಳಿಂದ ಹುಟ್ಟಿಕೊಳ್ಳುವ ಸಂಘರ್ಷಗಳು, ಇವುಗಳನ್ನು ಧೈರ್ಯದಿಂದ ಎದುರಿಸುವ ಸ್ತ್ರೀಯರು, ಹೀಗೆ ವೈವಿಧ್ಯಮಯ ವಸ್ತುಗಳಿವೆ. ಗಂಡು ಹೆಣ್ಣಿನ ಬದುಕಿನ ಹಲವು ಮುಖಗಳನ್ನು ವೀಣಾ

ಕಲಾತ್ಮಕವಾಗಿ ಪರಿಣಾಮಕಾರಿಯಾಗಿ ತಮ್ಮ ಕೃತಿಗಳಲ್ಲಿ ಮೂಡಿಸಿದ್ದಾರೆ. ವೀಣಾ ಅವರ ಕಥೆಗಳು ಸಮಾಜದ ತರತಮ ವ್ಯವಸ್ಥೆಯನ್ನು ನಿಷ್ಠುರವಾಗಿ ನೋಡುತ್ತವೆ. ಇಲ್ಲಿ ಆರೋಗ್ಯಕರ ದೃಷ್ಟಿಕೋನವಿದೆಯೇ ಹೊರತು ಪುರುಷ ದ್ವೇಷವಿಲ್ಲ.

‘ಹೊರಟು ಹೋದವನು’ ಮತ್ತು ‘ಮರೀಚಿಕೆ’ ಕಥೆಗಳನ್ನು ನಿದರ್ಶನಕ್ಕೆ ನೋಡಿದರೆ ವಸ್ತು ಮತ್ತು ಅಭಿವ್ಯಕ್ತಿ ತಂತ್ರಗಳ ದೃಷ್ಟಿಯಿಂದ ನವೀನವಾದ, ಭಿನ್ನವಾದ ಕಥೆಗಳಿವು. ‘ಹೊರಟು ಹೋದವನು’ ಕಥೆಯಲ್ಲಿ ಲೋಂಡಾ ಸ್ಟೇಷನ್‌ನಲ್ಲಿ ಮಿಠಾಯಿವಾಲಾನನ್ನು ನೋಡಿದಾಗ ‘ಅಪರಿಚಿತನಾದ ಈ ಮಿಠಾಯಿವಾಲನ ಕಣ್ಣಲ್ಲಿ ತನಗೆ ಹಿಂದೊಮ್ಮೆ ಪರಿಚಿತವಾಗಿದ್ದ ಬೆಳಕು. ತಾನು ಪ್ರಯತ್ನಪಟ್ಟು ಮರೆತಿದ್ದ, ಅವ್ವ ಅಪ್ಪ ಜಗತ್ತು ಸೇರಿ ಜುಲುಮೆಯಿಂದ ಮರೆಸಿದ ಬೆಳಕು .....’’ ಕಾಣಿಸಿದಾಗ ಅವಳು ವರ್ಷದಲ್ಲಿ ಒಂದೆರಡು ಸಲ ಆ ದಾರಿಯಲ್ಲಿ ಆ ಬೆಳಕನ್ನರಸಿ ಬರುತ್ತಾಳೆ. ‘ಜಗತ್ತು ತನಗೆ ಬಹಳ ಅನ್ಯಾಯ ಮಾಡಿತ್ತು. ತನ್ನ ಬೆಳಕನ್ನು ಕಸಿದುಕೊಂಡಿತ್ತು. ತನ್ನನ್ನು ಕೊನೆಯಿಲ್ಲದ ಕತ್ತಲ ಕೂಪದಲ್ಲಿ ನೂಕಿತ್ತು. ಅಂದಿನಿಂದ ಸುರುವಾಗಿತ್ತು ತನ್ನಲ್ಲಿ ಈ ದಾಹ. ಈ ಸೇಡು.....’’ ಹೀಗೆ ಯೋಚಿಸುವ ಕಥಾನಾಯಕಿ ಹನ್ನೆರಡು ವರ್ಷಗಳ ನಂತರ ಆ ಮಿಠಾಯಿವಾಲಾ ಇನ್ನು ನೋಡಲು ಸಿಗುವುದಿಲ್ಲ ಎಂದು ಖಚಿತವಾದಾಗ ‘‘ಬಹಳ ಕಾಲದಿಂದ ಬೆನ್ನ ಮೇಲಿದ್ದುದೊಂದು ಭಾರ ತಟ್ಟನೆ ಕಳಚಿಬಿದ್ದು ಬೆನ್ನು ನೇರವಾದಾಗ ಒಂದು ಕ್ಷಣ ನಡೆಯಲಾಗದೆ ಮುಗ್ಗರಿಸಿದಂತಹ ಅನುಭವ, ಶೈಲಿ ಕಲಿಸಿದ ಪ್ರೊಫೆಸರ ಮತ್ತೊಮ್ಮೆ ಸತ್ತು ಹೋದ ಅನುಭವ.....’’ (ಹೊರಟು ಹೋದವನು ಪುಟ ೬೪ ಕೊನೆಯ ದಾರಿ) ಕಥೆಯ ಅಂತರಂಗ ಕೊನೆಯಲ್ಲಿ ತೆರೆದುಕೊಳ್ಳುತ್ತದೆ.

‘ಮರೀಚಿಕೆ’ ವೀಣಾ ಅವರ ಕಥನ ಶೈಲಿಯ ಇತ್ಯಾತ್ಮಕ ಅಂಶಗಳನ್ನೆಲ್ಲ ಒಳಗೊಂಡ ಕಥೆ. ಏಕತಾನತೆಯ ಬದುಕಿನಿಂದ ಬೇಸತ್ತ ಗೃಹಿಣಿ ‘ಮಿನಿ’ – ‘‘ಒಮ್ಮೆ ಹೋಗಬೇಕು ರೆಕ್ಕೆ ಬಿಚ್ಚಿಕೊಂಡು ಈ ಎಲ್ಲ ಗೋಡೆ ದಾಟಿ, ಆಚೆ ಏನಿದೆಯೆಂದು ನೋಡಬೇಕು. ಒಂದು ಸಲವಾದರೂ ಹೀಗೆ ಮಾಡಿದರೆ ಹೇಗೆ, ಹಾಗೆ ಮಾಡಿದರೆ ಹೇಗೆ ಎಂದು ವಿಚಾರಿಸದೆ ಮನಸಿಗೆ ಬಂದದ್ದು ಮಾಡಬೇಕು. ಸಿಕ್ಕೀತು ತನಗೂ ಒಂದು ಫೇರಿಲ್ಯಾಂಡ್, ಆದೀತು ಕುದುರೆಯೊಂದಿಗಿನ ರಾಜಕುಮಾರನ ಬೆಟ್ಟಿ..... ಏನಾದರೂ ಇಲ್ಲಿಯ ತನಕ ಆಗದೇ ಇದ್ದದ್ದು ಆಗಬೇಕು....’’ ಈ ನಿರೀಕ್ಷೆಯಲ್ಲೇ ಬಸ್ಸಿನಲ್ಲಿ 'Waiting for Godot' ಓದುವ ಸಹಪ್ರಯಾಣಿಕ ದೊರೆತದ್ದು – ‘‘ನಾವು ಏನೇನೋ ಆಗ್ಲಿ ಅಂತ ಕಾಯ್ತಿರತೀವಿ, ಆದರ ಎಲ್ಲಿ ಆಗತಾವ ಜೀವನದಾಗ.....’’ ಎಂದ ಅವನಿಗೆ ತನ್ನ ಸ್ನೇಹದ ಸೂಚನೆಯಾಗಿ ಆ ಪುಸ್ತಕದಲ್ಲೇ ವಿಳಾಸದ ಚೀಟಿಯನ್ನಿಟ್ಟು ಬಸ್ಸಿಳಿದು

ಹೋಗುತ್ತಾಳೆ. ಪ್ರೀತಿಸುವ ಪತಿಗೆ ಮೋಸ ಮಾಡುತ್ತಿದ್ದೇನೆಯೇ ಎಂಬ ಗೊಂದಲಕ್ಕೆ ಬೀಳುತ್ತಾಳೆ. ಅವಳ ಪುಸ್ತಕ ವಿಳಾಸದ ಚೀಟಿಯೊಡನೆ ಸುರಕ್ಷಿತ ಮರಳಿ ಬರುತ್ತದೆ. 'Waiting for Godot' ನ ಸಂಕೇತ ಈ ಕತೆಯಲ್ಲಿ ಶಕ್ತಿಯುತವಾಗಿ ಬಳಕೆಯಾಗಿದೆ. ನಮ್ಮ ಸಮಾಜದಲ್ಲಿ ಮಿನಿಯಂತೆಯೇ ಅನೇಕ ಸ್ತ್ರೀಯರಿಗೆ ವ್ಯರ್ಥ ಕಾಯುವುದರಲ್ಲೇ, ನಿರೀಕ್ಷೆಯಲ್ಲೇ ಬದುಕು ಕಳೆದುಹೋಗುತ್ತದೆ.

'ಒಂದು ಗಿಡ ಒಂದು ಬಾವಿ'ಯಂತಹ ಪರಿಸರ ಕಾಳಜಿಯ ಕಥೆ, ದಲಿತ ಮಹಿಳೆ 'ರಾಧವ್ವ'ನ ಕತೆ, ವ್ಯವಸ್ಥೆಯ ವಿಪರ್ಯಾಸವನ್ನು ಚಿತ್ರಿಸುವ 'ದರಿದ್ರ ಬ್ರಾಹ್ಮಣ ಕ್ರಿಷ್ಟಪ್ಪನ ಕಥೆ', ಸ್ವಾಭಿಮಾನಿ ಹೆಣ್ಣೊಬ್ಬಳು ತನಗೆ ಬೇಕಾದಂತೆ ಬದುಕು ರೂಪಿಸಿಕೊಳ್ಳುವ 'ಹೀಗೊಂದು ಕಥೆ' ಹೀಗೆ ವೈವಿಧ್ಯಮಯವಾದ ಕಥೆಗಳು ವೀಣಾ ಅವರ ಲೇಖನಿಯಿಂದ ಮೂಡಿವೆ.

ವೀಣಾ ಶಾಂತೇಶ್ವರ ಅವರ ಕತೆಗಳನ್ನು ಕುರಿತು ವಿಮರ್ಶಕ ಜಿ. ಎಸ್. ಆಮೂರರ ಮಾತನ್ನಿಲ್ಲಿ ಉಲ್ಲೇಖಿಸಬಹುದೆನಿಸುತ್ತದೆ. "ವೀಣಾರ ಕತೆಗಳಲ್ಲಿ ನಾವು ನೋಡುವ ಅಂತರ್ಮುಖತೆ ಆತ್ಮಪ್ರಜ್ಞೆ, ದ್ವಂದ್ವಗಳ ಅರಿವು ನವ್ಯ ಮನೋಧರ್ಮದ ಆವಿಷ್ಕಾರಗಳು. ಕತೆಯನ್ನು ಕೇವಲ ಮನೋರಂಜನೆಗಾಗಲೀ, ಸಾಮಾಜಿಕ ಜಾಗೃತಿಗಾಗಲೀ ಬಳಸದೆ ಇವರು ಅದನ್ನು ಸತ್ಯದ ಶೋಧದಂತಹ ಗಂಭೀರ ಪ್ರಯತ್ನದಲ್ಲಿ ತೊಡಗಿಸಿದರು ಹಾಗೂ ಅದನ್ನು ಪ್ರಬುದ್ಧ ಸಾಹಿತ್ಯ ಮಾಧ್ಯಮವಾಗಿ ಬಳಸಿಕೊಂಡರು." (ಪುಟ ೧೧ ಅವಳ ಕತೆಗಳು)

ವೀಣಾ ತಮ್ಮ ಕಥೆ-ಕಾದಂಬರಿಗಳಲ್ಲಿ ಮಾನವೀಯ ಗುಣಕ್ಕೆ ಒತ್ತು ಕೊಟ್ಟು ಅರ್ಥಹೀನ ಸಂಪ್ರದಾಯದ ಸಂಕೋಲೆಗಳನ್ನು ಮುರಿಯುವ ಮೂಲಕ ಒಂದು ಬಗೆಯ ವಿಗ್ರಹಭಂಜಕ ಕೆಲಸವನ್ನು ಮಾಡುತ್ತಾರೆ. ಸಮಾಜದ ಸ್ವಾಸ್ಥ್ಯ ಕಾಪಾಡುವ ಹೊಣೆ ಬರೀ ಹೆಣ್ಣಿನದಾಗಿದ್ದರೆ ಸಾಲದು, ಅದು ಗಂಡಿನದೂ ಜವಾಬ್ದಾರಿ ಎಂಬುದು ವೀಣಾ ಅವರ ಕತೆಗಳ ಆಶಯಗಳಲ್ಲೊಂದು. ತನ್ನ ಬದುಕನ್ನೇ ಮರೆತು ತನಗೆ ವ್ಯಕ್ತಿತ್ವ, ಆಸೆಗಳು ಇಲ್ಲವೇ ಇಲ್ಲವೆನ್ನುವಂತೆ ಬದುಕುವ ಭಾರತೀಯ ಸ್ತ್ರೀ ಮಾದರಿಗಳ ಪ್ರಸ್ತುತತೆಯನ್ನು ವೀಣಾ ಪ್ರಶ್ನಿಸುತ್ತಾರೆ.

ತಮ್ಮ ಪಿಹೆಚ್.ಡಿ ಪ್ರಬಂಧಕ್ಕೆ ವೀಣಾ ಅವರ ಕತೆಗಳನ್ನೂ ಅಧ್ಯಯನ ಮಾಡಿದ ಡಾ. ಎಲ್. ಜಿ. ಮೀರಾ ಸ್ಥಾಪಿತ ಮೌಲ್ಯಗಳ ಬಗೆಗೆ ಬೆಂಕಿಯಂತೆ ಉರಿಯುವ ಸಿಟ್ಟು ವೀಣಾ ಅವರ ಕಥನ ಪ್ರಜ್ಞೆಯ ಪ್ರಧಾನ ಗುಣ ಎಂದು ಗುರುತಿಸುತ್ತಾರೆ. "ಗಂಡಿಗೊಂದು ಹೆಣ್ಣಿಗೊಂದು ಮೌಲ್ಯಗಳನ್ನು ಮಾಡಿ, ತಪ್ಪಾದಾಗಲೆಲ್ಲ ಅವಳನ್ನೇ ದೂಷಿಸುವ ಆತ್ಮವಂಚಕ ಸಮಾಜದತ್ತ ಈ ಕಥನ ಪ್ರಜ್ಞೆ ಬೆಳಕು ಬೀರುತ್ತದೆ.

ಸಂಪ್ರದಾಯ, ಬೌದ್ಧಿಕತೆ, ಧರ್ಮ ಎಲ್ಲದರ ಹೆಸರಿನಲ್ಲಿಯೂ ಮನುಷ್ಯನು ಚಲಾಯಿಸುವ ಅಧಿಕಾರದ ಬಗ್ಗೆ ಈ ಪ್ರಕ್ರಿಯೆಯಲ್ಲಿ ಕೆಲಸ ಮಾಡುವ ಢೋಂಗಿತನದ ಬಗ್ಗೆ ನಮ್ಮ ಅರಿವನ್ನು ಹೆಚ್ಚಿಸುತ್ತದೆ," (ಪು. ೧೫೫, ಸ್ತ್ರೀ ಸಂವೇದನೆಯಲ್ಲಿ ಕನ್ನಡ ಕಥನ) ಎಂದು ಸರಿಯಾಗಿಯೇ ಗುರುತಿಸಿದ್ದಾರೆ.

೧೯೭೫ ರಲ್ಲಿ ವೀಣಾ ಅವರ 'ಗಂಡಸರು' ಕಾದಂಬರಿ ಪ್ರಜಾವಾಣಿ ವಿಶೇಷಾಂಕದಲ್ಲಿ ಪ್ರಕಟವಾದಾಗ, ತನ್ನ ವಸ್ತುವಿನ ಹೊಸತನ ಮತ್ತು ನಿರೂಪಣೆಯ ನಾವೀನ್ಯತೆಯಿಂದ ಸಾಕಷ್ಟು ಸುದ್ದಿ ಮಾಡಿ, ಲೇಖಕಿಯರ ಬರವಣಿಗೆಯನ್ನು ಎಲ್ಲರೂ ನಿರೀಕ್ಷೆ ಕುತೂಹಲಗಳಿಂದ ನೋಡುವಂತಾಯಿತು. ಈ ಕಾದಂಬರಿಯ ಶಾಂತಿ ಸ್ವಾಭಿಮಾನಿ, ಸೂಕ್ಷ್ಮ ಸ್ವಭಾವದ ಸಾಹಸಿ ಹುಡುಗಿ. ಅವಳ ಸ್ವಾಭಿಮಾನದ ವ್ಯಕ್ತಿತ್ವವನ್ನು ಇಷ್ಟಪಡದ, ಅವಳ ಬಾಲ್ಯದ ಗೆಳೆಯ ಶಂಕರ ಮತ್ತು ಅವನ ತಂದೆ ತಾಯಿ ಶಂಕರನ ಜೊತೆಗಿನ ಶಾಂತಿಯ ಮದುವೆ ಪ್ರಸ್ತಾಪವನ್ನು ತಿರಸ್ಕರಿಸುತ್ತಾರೆ. ಕೆಲಸ ಹುಡುಕಿ ಮುಂಬಯಿಗೆ ಹೋದ ಶಾಂತಿಗೆ ಗಂಡಿನ ವಿವಿಧ ಮುಖಗಳು ಅನಾವರಣಗೊಳ್ಳುತ್ತವೆ. ಗಂಡು ಎಂತಹವನಾದರೂ ಹೆಣ್ಣನ್ನು ಸಂಶಯಿಸುವುದು, ಅವಳಿಂದ ಮಾತ್ರ ನಿಷ್ಠೆಯನ್ನು ನಿರೀಕ್ಷಿಸುವುದು, ಶಾಂತಿ ವ್ಯವಸ್ಥೆಯ ವಿರುದ್ಧ ತಿರುಗಿ ಬೀಳಲು ಕಾರಣವಾಗುತ್ತವೆ. ರಮಾಕಾಂತ ಶಿಂಧೆಯಂತಹವರು ತಾವು ಹೇಗಿದ್ದರೂ ಪರವಾಗಿಲ್ಲ, ಜೊತೆಗಿರುವ ಹೆಣ್ಣು ಸಂಪ್ರದಾಯದ ಲಕ್ಷ್ಮಣ ರೇಖೆಯೊಳಗೆ ಇರಬೇಕೆನ್ನುವವರು, ಮಠದನಂತಹ ಪ್ರೊಫೆಸರುಗಳು ವಿದ್ಯಾರ್ಥಿನಿಯರ ಜೊತೆ flirt ಮಾಡುವ ಸ್ವಭಾವದವರು, ಹೆಂಡತಿಯಾಗುವ ಮೊದಲೇ ಅಧಿಕಾರ ಸ್ಥಾಪಿಸುವ, ಹೊಡೆಯುವ ಜಾನ್ (ಪುಟ ೧೪೯) ಹೀಗೆ ಇವರೆಲ್ಲರನ್ನೂ ಮೀರಬಯಸುವ ಶಾಂತಿ ಅವರಂತಾಗುವ ಅನಿವಾರ್ಯತೆ ಉಂಟಾಗುತ್ತದೆ. ಶಾಂತಿ ಲಕ್ಷ್ಮಣ ರೇಖೆಯನ್ನು ದಾಟುತ್ತಾಳೆ. ಮೂರು ದಶಕದ ಹಿಂದೆ ವೀಣಾ ಇಂತಹ ಕಥೆಯನ್ನು ಬರೆದಾಗ ಸಾಂಪ್ರದಾಯಿಕ ಮನೋಭಾವದ ಓದುಗರು ಬೆಚ್ಚಿಬಿದ್ದರು.

'ಶೋಷಣೆ ಬಂಡಾಯ ಇತ್ಯಾದಿ' ವೀಣಾ ಅವರ ಎರಡನೆಯ ಕಾದಂಬರಿ. ವಿವಾಹಿತನನ್ನು ಪ್ರೀತಿಸಿ, ಪ್ರೀತಿಸಲ್ಪಟ್ಟು, ಮದುವೆಯ ನಂತರ ನಿರಾಶೆಯಿಂದ ದುಃಖಿತಳಾದ ಕಮಲಾ, ಸ್ವಂತಿಕೆಗಾಗಿ ಪರಿತಪಿಸುವ ಡಾ. ಶಶಿ, ಗಂಡನಿಂದ ಶೋಷಣೆಗೊಳಗಾದ ಮನೆಗೆಲಸದ ರೋಷನ್‌ಬಿ, ಸತತವಾಗಿ ಮಕ್ಕಳನ್ನು ಹೆತ್ತು ರೋಗಿಯಾದ ಶ್ರೀಮಂತ ಗೃಹಿಣಿ ಪೂರ್ಣಿಮಾ ಸಿಂಗ್, ಹೀಗೆ ಬೇರೆ ಬೇರೆ ಸ್ತರದ ಹೆಣ್ಣುಗಳು ಪುರುಷ ಪ್ರಧಾನತೆಯಿಂದಾಗಿಯೇ ನವೆಯುವ, ನೋಯುವ ಹೆಣ್ಣಿನ ಚಿತ್ರಗಳು ಮನ ಕಲಕುವಂತಿವೆ.

ಐದು ಕಥಾಸಂಗ್ರಹಗಳು, ಎರಡು ಕಾದಂಬರಿಗಳು, ಅನುವಾದಗಳು, ಸಂಪಾದಿತ ಕೃತಿಗಳು ಅಲ್ಲದೆ ಇಂಗ್ಲಿಷ್‌ನಲ್ಲೂ ಬರವಣಿಗೆ ಮಾಡಿರುವ ವೀಣಾ ಶಾಂತೇಶ್ವರ ಅವರ ಕೃತಿಗಳ ಕುರಿತು ಕನ್ನಡದಲ್ಲಿ ಒಳ್ಳೆಯ ವಿಮರ್ಶೆ ಬಂದಿದೆ. ಓದುಗರ ಪ್ರತಿಕ್ರಿಯೆ, ಪ್ರಶಂಸೆ, ಪ್ರಶಸ್ತಿಗಳೂ ಸಿಕ್ಕಿವೆ. ಇಪ್ಪತ್ತನೇ ಶತಮಾನದಲ್ಲಿ ಮೂರುವರೆ ದಶಕಗಳಷ್ಟು ಅವಧಿಯಲ್ಲಿ ಅವರ ಈ ಸಾಹಿತ್ಯ ರಚಿತವಾಗಿದೆಯಾದರೂ ಇಪ್ಪತ್ತನೇ ಶತಮಾನದ ವಿಮರ್ಶೆಯ ಪ್ರಾತಿನಿಧಿಕ ಕೃತಿಯಾದ ಕರ್ನಾಟಕ ಸಾಹಿತ್ಯ ಅಕ್ಯಾಡೆಮಿಯವರು ಪ್ರಕಟಿಸಿದ 'ಶತಮಾನದ ವಿಮರ್ಶೆ' ಕೃತಿಯಲ್ಲಿ ವೀಣಾ ಅವರ ಸಾಹಿತ್ಯ ಕುರಿತು ಒಂದು ಸಾಲೂ ಇಲ್ಲದಿರುವುದು ವಿಪರ್ಯಾಸ. ಇನ್ನೊಬ್ಬ ಮೌಲಿಕ ಲೇಖಕಿ ವೈದೇಹಿ ಕುರಿತೂ ಶತಮಾನದ ವಿಮರ್ಶೆ ಮೌನ ತಾಳಿದೆ. ಸಾಹಿತ್ಯ ಅಕ್ಯಾಡೆಮಿಯವರು ಪ್ರಕಟಿಸಿರುವ ಶತಮಾನದ ಕಥೆಗಳು ಮುನ್ನುಡಿಯಲ್ಲೂ ೨೦ನೇ ಶತಮಾನದ ಎಲ್ಲ ಚಳುವಳಿಗಳ ಬಗ್ಗೆ ಪ್ರಸ್ತಾಪಿಸಿರುವ ಸಂಪಾದಕರು 'ಸ್ತ್ರೀವಾದ' ಎಂಬ ಪದವನ್ನೇ ಗುರುತಿಸಿಲ್ಲ. ನೇಮಿಚಂದ್ರರಂತಹ ಮುಖ್ಯ ಲೇಖಕಿಯನ್ನೆ ಕೈಬಿಟ್ಟಿರುವ ಸಂಪಾದಕರು ಕೇವಲ ಆರು ಜನ ಕಥೆಗಾರ್ತಿಯರ ಕತೆಗಳನ್ನು ಸೇರಿಸಿದ್ದಾರೆ. ಇದನ್ನೆಲ್ಲ ಗಮನಿಸಿದಾಗ ವೀಣಾ ಅವರ ಕಥಾನಾಯಕಿಯರಿಗೆ ಬರುವ ಕೋಪ ನಮಗೂ ಬಂದರೆ ಆಶ್ಚರ್ಯವಿಲ್ಲ.

ಇಷ್ಟೆಲ್ಲ ಮೌಲಿಕ ಕೃತಿಗಳನ್ನು ರಚಿಸಿರುವ ವೀಣಾ ಶಾಂತೇಶ್ವರ ಅವರ ಲೇಖನಿ ಇನ್ನೂ ದೀರ್ಘಕಾಲ ಒಳ್ಳೆಯ ಕೃತಿಗಳನ್ನು ರಚಿಸಲಿ ಎಂಬ ಸದಾಶಯದೊಂದಿಗೆ.

ಪ್ರೀತಿಯಿಂದ

ತಾ. ೨೩-೦೨-೨೦೦೬

**ಡಾ॥ ಎಲ್.ಸಿ. ಸುಮಿತ್ರಾ**

ತುಂಗಾ ಕಾಲೇಜು, ತೀರ್ಥಹಳ್ಳಿ